ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೦

ತಾ. ೧೩—೧—೧೯೩೯.

ಸಂಪುಟ ೧೮] [ಸಂಚಿಕೆ ೩

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Sakleshpur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

Advances on GOLD & OTHER VALUABLE SECURITIES are granted at all our Branches.

DEPOSITS for varying periods are accepted at the following rates:—

3 months	2½% p. a.
6 & 9 months	3 % p. a.
12 & 24 months	3½% p. a.
SHORT TERM	2 % p. a.
SAVINGS BANK ACCOUNT	2½% p. a.

BANKING BUSINESS OF EVERY DESCRIPTION UNDERTAKEN.

52-5

ಚ್ಯವನಪ್ರಾಶ

ಚ್ಯವನ ಪ್ರಾಶವೆಂಬುದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ರಕ್ತವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಪಿತ್ತ ಬಾಧೆ, ಉಬ್ಬಸ, ಶ್ವಾಸ ರೋಗ, ಹೃದ್ರೋಗ ಇವುಗಳ ಮೇಲೆ ದಿವ್ಯವಾದದ್ದು.

ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಿತ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ರೋಗವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅಲ್ಲದೆ, ಅಗ್ನಿಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಸುಬ್ಬಯ್ಯ, ಗೋಣಿಕೊಪ್ಪಲು. [21]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ದುರಸ್ತಿಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ದುರಸ್ತಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ ಸೆಲೂಲಾಯಿಟ್ ಅಥವಾ ಚಿನ್ನದವು; ಪ್ರತಿಯೊಂದು ಕಾಲಂ [illegible]ಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-32

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್ ಸೀರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-22)

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೨೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-16

ವಿ ವಿ ಧ ವಿ ಚಾ ರ.

ಭಾರತದಲ್ಲಿ ಓಡಾಡುವ ಮೋಟಾರು ಪೋಸ್ಟಾಫೀಸ್.

ಭಾರತದಲ್ಲಿ ಓಡಾಡುವ ಮೋಟಾರು ಪೋಸ್ಟಾಫೀಸ್ ಒಂದನ್ನು ಸ್ಥಾಪಿಸಬೇಕೆಂದು ಫರ್ ಮುಕ್ತೇಸರ್ ಎಂಬಲ್ಲಿನ ಜನಗಳು ಬೇಡಿಕೊಂಡಿದ್ದರು. ಅದರಂತೆ ಭಾರತದ ಅಂಚೆ ಮತ್ತು ತಂತಿ ಇಲಾಖೆಯವರು ಈಗ ಒಂದು ಅಂಚೆ ಕಚೇರಿಯವರನ್ನು ಇದಕ್ಕಾಗಿಯೇ ತಯಾರಿಸಲ್ಪಟ್ಟ ಮೋಟಾರು ಬಸ್ಸೊಂದರ ಮೇಲೆ ಸ್ಥಾಪಿಸಲಿರುವರು. ಇಲ್ಲಿ ಟೆಲಿಗ್ರಾಫ್ ಮತ್ತು ಟೆಲಿಫೋನ್ ವ್ಯವಸ್ಥೆ ಸಹ ಇದೆ. ಇಷ್ಟೆಲ್ಲಾ ಬಂದ ಮೇಲೆ ಓಡಾಡುವ ಹೋಟೇಲುಗಳೂ ಬರುವುದರಲ್ಲಿ ಆಶ್ಚರ್ಯವೇ ಇಲ್ಲವೆನ್ನಬಹುದು.

—o0o—

ನಿಷ್ಪ್ರಯೋಜಕ ವಸ್ತುವಿನಿಂದ ಪ್ರಯೋಜಕ ವಸ್ತು

ಮರದ ಪುಡಿಗಳಿಂದಲೂ, ಗರಗಸದ ಪುಡಿಯಿಂದಲೂ, ರಸ ತೆಗೆದ ಕಬ್ಬಿನ ಸಿಪ್ಪೆಯಿಂದಲೂ ಬಹು ಉಪಯೋಗವೆನಿಸಿದ ಒಂದು ವಿಧವಾದ ಜೇಡಿ ಮಣ್ಣಿನಂಥಾ ಪದಾರ್ಥವನ್ನು ತಯಾರಿಸಬಹುದು. ಇದು ಯಾವ ಪದಾರ್ಥದೊಡನೆ ಬೇಕಾದರೂ ಸುಲಭವಾಗಿ ಸಂಯೋಜಕವಾಗುತ್ತದಂತೆ. ಈ ರೀತಿಯಾದ ಪರೀಕ್ಷೆಗಳು ಸಂಯುಕ್ತ ಸಂಸ್ಥಾನದ ವ್ಯವಸಾಯ ಖಾತೆಯ ಪರಶೋಧಕರಿಂದ ನಡೆಸಲ್ಪಟ್ಟ ಫಲಿತಾಂಶಗಳಿಂದ ಕಂಡು ಬಂದವೆ.

ಅಡಿಗೆ ಮಾಡುವ ವಿಧಾನದಲ್ಲೇ ಇದನ್ನು ತಯಾರು ಮಾಡಬಹುದಂತೆ. ನೀಲಿ ಬಣ್ಣದ ನೀರಿಗೆ ಇವುಗಳನ್ನು ಹಾಕಿ ಕುದಿಸಿದಾಗ ಒಂದು ಪದಾರ್ಥವು ಬರುವುದು. ಇದು ಗಟ್ಟಿಯಾಗಬಲ್ಲದು, ಹೊಳೆಯಬಲ್ಲದು, ಗಾಜಿನಂತೆಯೂ ಇರಬಲ್ಲದು. ಇದರಿಂದ ವಿದ್ಯುತ್ ಕೆಲಸ ಕಾರ್ಯಗಳಿಗೆ ಉಪಯೋಗಿಸುವ ಇನ್‌ಸುಲೇಟರ್‌ಗಳನ್ನೂ ಬಾಗಿಲುಗಳ ಹಿಡಿಗಳನ್ನೂ, ಇತರ ಉಪಯುಕ್ತ ವಸ್ತುಗಳನ್ನೂ ತಯಾರಿಸಬಹುದಂತೆ.

—o0o—

ನ್ಯೂಯಾರ್ಕಿನಲ್ಲಿ ಲಂಡನ್ ನಗರವನ್ನು ನೋಡಬಹುದು.

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಇದ್ದ ಕೆಲಸ ಊದಿಬಿಡುವುದೇ ನನ್ನ ಕೆಲಸ. ಅಮೇರಿಕದ ಮಹಾನಗರಿಯಾದ ನ್ಯೂಯಾರ್ಕಿನಲ್ಲಿ ಕುಳಿತು 3 ಸಾವಿರ ಮೈಲಿಗಳ ದೂರದಲ್ಲಿರುವ ಲಂಡನ್ ನಗರವನ್ನು ನೋಡಬಹುದಾಗಿದೆ. ಮೊನ್ನೆ ತಾನೇ ಲಂಡನ್ನಿನ ಅಲೆಕ್ಸಾಂಡ್ರಾ ಅರಮನೆಯಲ್ಲಿನ ಬ್ರಿಟಿಷ್ ಟೆಲಿವಿಷನ್ ಕಾರ್ಯಕ್ರಮಗಳು ನ್ಯೂಯಾರ್ಕಿನ ರಿವರ್‌ಹೆಡ್ ಸ್ಟೇಷನ್‌ನವರಿಗೆ ಕಂಡು ಕೇಳಿಸಿತು. ಈ ಸುದ್ದಿಯು ಟೆಲಿವಿಷನ್ ಸರ್ಕಲಿನಲ್ಲಿ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಹೀಗೆ ಕಂಡ ಸುದ್ದಿಯನ್ನು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಂಪೆನಿಗೆ ರೇಡಿಯೋ ಮೂಲಕ ತಿಳಿಸಲಾಯಿತು. ಬಿ. ಬಿ. ಸಿ. ಯವರು ಅಭಿಪ್ರಾಯದಂತೆ 28–30 ಮೈಲಿಗಳ ಒಳಗಿನ ದೂರ ಪ್ರದೇಶಗಳನ್ನು ಮಾತ್ರ ನೋಡಬಹುದಾಗಿತ್ತು. ಆದರೆ ಈಚೆಗೆ ನಡೆದ ಘಟನೆಯಿಂದ ಸಾವಿರಾರು ಮೈಲುಗಳ ಆಚೆಗಿನ ದೃಶ್ಯಗಳನ್ನು ಈ ಯಂತ್ರದಲ್ಲಿ ಕಾಣಬಹುದಾಗಿದೆ ಮತ್ತು ವಿಷಯವನ್ನು ಕೇಳಬಹುದಾಗಿದೆ. ಆದ್ದರಿಂದ ಅತ್ಯಲ್ಪ ಕಾಲದಲ್ಲೇ ಭಾರತದಲ್ಲಿ ಕುಳಿತು ಲಂಡನ್, ನ್ಯೂಯಾರ್ಕ್, ಮುಂತಾದ ಪ್ರದೇಶಗಳನ್ನು ನೋಡಲು ಅವಕಾಶವಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಬಹುದಾಗಿದೆ.

—o0o—

ಕೃಷಿ ಶಾಸ್ತ್ರದಲ್ಲಿ ವಿಜ್ಞಾನದ ಮುನ್ನಡೆ.

ಟೊಮೆಟೊ ಬೆಳೆಗೆ ಪ್ರಖ್ಯಾತಿಪಟ್ಟ ವೀವೆಲ್ಲೆ ಎಂಬಲ್ಲಿ ಒಂದು ಬೀಜವಿಲ್ಲದ ಟೊಮೊಟೊ ದೊರಕಿದೆ. ಬೀಜವಿಲ್ಲವೆಂದೇ ಹೇಳಬರುವುದಿಲ್ಲವಾದರೂ ಎಲ್ಲ ಬೀಜಗಳೂ ಒಂದು ಚೀಲದಲ್ಲಿ ಒಟ್ಟಾಗಿದ್ದು ಒಂದೇಯಾಗಿ ಸುಲಭವಾಗಿ ಹೊರ ತೆಗೆಯಬರುತ್ತಿತ್ತು. ಇದನ್ನು ತಿರುಗಿ ಬೆಳೆಸಲಾಗಿ ಎಲ್ಲ ಟೊಮೆಟೊಗಳೂ ಒಂದೇ ರೀತಿಯಾಗಿ ಕಂಡು ಬಂದುವಂತೆ.

ಇದರಿಂದ ವೈಜ್ಞಾನಿಕರಿಗೆ ಬೀಜವಿಲ್ಲದೆ ಟೊಮೆಟೊಗಳನ್ನು ಬೆಳೆಸುವ ವಿಚಿತ್ರ ವಿಧಾನವೊಂದು ಹೊಳೆಯಲು ಅವಕಾಶವಿದೆಯಂತೆ.

—o0o—

ರಬ್ಬರಿನ ಬೈಸಿಕಲ್.

ರಬ್ಬರಿನ ಬೈಸಿಕಲ್ ಎಂದೊಡನೆಯೇ ಆಟದ ಬೈಸಿಕಲ್ ಇರಬಹುದೆಂದು ನಿಮಗೆ ಅನಿಸಬಹುದು. ಆದರೆ ಅದು ಹಾಗಲ್ಲ. ನಿಜವಾಗಿ ಸವಾರಿ ಮಾಡಬಹುದಾಗಿದೆ. ಜಪಾನಿಯರು ಗಟ್ಟಿಯಾದ ಮತ್ತು ದಪ್ಪನಾದ ರಬ್ಬರಿನ ಕೊಳವೆಗಳಿಂದ ಸೈಕಲ್ ಫ್ರೇಮನ್ನು ತಯಾರಿಸಿ ಬೈಸಿಕಲನ್ನು ರಚಿಸಿರುವರು. ಸೀಟು (ಆಸನ) ಮತ್ತು ಮಡ್‌ಗಾರ್ಡ್ ಸಹ ರಬ್ಬರಿನವಂತೆ. ಈಗಾಗಲೇ ಇದನ್ನು ಹೆಚ್ಚು ಹೆಚ್ಚಾಗಿ ತಯಾರಿಸಲು ಜಪಾನಿನ ಒಕಾವದಲ್ಲಿ ಪ್ರಯತ್ನಗಳು ನಡೆಯುತ್ತದೆಯೆಂದೂ ಈ ಬಗ್ಗೆ ಜಗತ್ತಿನ ಬೈಸಿಕಲ್ ಕೈಗಾರಿಕೆಗೆ ಧಕ್ಕೆ ತಗಲಬಹುದೆಂದೂ ಶಂಕೆ ಹುಟ್ಟಿದೆ. ಇದರ ಬೆಲೆ 60 ಯೆನ್‌ಗಳಂತೆ! ಅಂದರೆ ಸುಮಾರು 10 ರೂಪಾಯಿಗಳು.

—o0o—

ಭೂಮಿಗೆ ಉಸಿರು ಕಟ್ಟುತ್ತಿದೆ.

ರಾಜ ಸನ್ಮಾನ್ಯರಾದ ಖಗೋಳಶಾಸ್ತ್ರಜ್ಞ ಡಾ. ಸ್ಪೆನ್ಸರ್ ಜೋನ್ಸ್ ಎಂಬ ಮಹನೀಯರೊಬ್ಬರು ಲಂಡನಿನಲ್ಲೊಂದು ಭಾಷಣ ಮಾಡಿರುವರು. ಅದರ ಸಾರಾಂಶವು ಹೀಗಿದೆ.

ಪ್ರತಿ ವರ್ಷವೂ ಭೂಮಿಯಲ್ಲಿರುವ ಪ್ರಾಣವಾಯು (Oxygen) ವು ಕಡಿಮೆಯಾಗುತ್ತಾ ಬರುತ್ತಿದೆ. ಕಾರಣ–ಭೂಮಿಯಲ್ಲಿ ಬಂಡೆಗಳು ಧೂಳಿದೂಸರವಾಗುತ್ತಾ ಬರುತ್ತಿವೆ. ಕಲ್ಲು ಮಣ್ಣುಗಳು ಮಿಶ್ರವಾಗಿ ಕಬ್ಬಿಣದ ಸತ್ವವು ಹುಂಡುತ್ತವೆ. ಸೃಷ್ಟಿಯ ಈ ವ್ಯಾಪಾರದಿಂದ ಕಡಿಮೆಯಾಗುವ ಈ ಪ್ರಾಣ ವಾಯುವಿನ ಬಹು ಅಂಶವು ಗಿಡ ಮರಗಳು ಅಂಗಾರಾಮ್ಲವನ್ನು ಸೆಳೆದುಕೊಂಡು ಕೊಡುವ ಪ್ರಾಣ ವಾಯುವಿನಿಂದ ಭರ್ತಿಯಾಗುತ್ತಿರುವುದು ನಮ್ಮ ಭಾಗ್ಯ. ಪ್ರಾಣವಾಯುವನ್ನು ಕೊಡುತ್ತಿರುವ ನಮ್ಮ ಆಚಲ ಸ್ನೇಹಿತರಾದ ಗಿಡ ಮರಗಳೂ ಒಣಗಿ ಕೊಳೆಯಲಾರಂಭಿಸಿದರೆ ಪ್ರಾಣವಾಯುವನ್ನು ಹೀರಿ ಅಂಗಾರಾಮ್ಲವನ್ನು ವಿಸರ್ಜಿಸುತ್ತಾ ತಿರಿಗಿ ನಮಗೆ ಅಪಕಾರವನ್ನೆ ಮಾಡುವವು.

ಕಲ್ಲಿದ್ದಲಿನ ಗಣಿಗಳಲ್ಲಿ ಗಿಡ ಮರಗಳು ಹೂತು ಹೋಗಿ ವಾಸ್ತಾನು ಮಾಡಿಟ್ಟ ಪ್ರಾಣ ವಾಯುವು ಇರುವುದರಿಂದ ಅಂಥಾ ಗನಿಗಳಲ್ಲಿ ಮನುಷ್ಯರಿಗೆ ಸುಮಾರು ಮಟ್ಟಿನ ಸಮಯ ಕೆಲಸ ಮಾಡ ಬರುತ್ತದೆಂದು ಅವರ ಅಂಬೋಣ.

ಮಂಗಳ ಗ್ರಹವು ಕೆಂಪಾಗಿ ಕಾಣುವ ಕಾರಣವೂ ಅಲ್ಲಿರುವ ಬಂಡಗಳ ನಾಶದಿಂದಾಗಿಯೇ ಎಂದು ಇವರ ವಾದ.

—o0o—

ಫೌಂಟನ್ ಬ್ರಶ್.

ಫೌಂಟನ್ ಪೇನಾದ ವಿಚಾರವಲ್ಲರಿಗೂ ತಿಳಿದದೆ. ಶಾಯಿ ಕುಡಿಕೆಯಲ್ಲಿ ಪೇನಾವನ್ನು ಮುಳುಗಿಸದೇನೇ ಹೇಗೆ ಬರೆಯಲು ಸಾಧ್ಯವೋ ಅದೇ ರೀತಿಯ ಬ್ರಶ್ ಒಂದು ಈಗ ಕಂಡುಹಿಡಿಯಲ್ಪಟ್ಟಿದೆ. ಈ ಬ್ರಶ್ಶಿನ ಹ್ಯಾಂಡಿನಲ್ಲಿರುವ ತೂತಿನಲ್ಲಿ ಬೇಕಾದ ನಮೂನೆಯ ಪೈಂಟ್ ತುಂಬಿಸಿದರೆ ಸರಿ, ಆ ಪೈಂಟು ಬ್ರಶ್ಶಿನಿಂದ ಬಣ್ಣ ಕೊಡಲು ಆರಂಭಿಸಿದೊಡನೆ ಪೇನಾದಿಂದ ಶಾಯಿ ಇಳಿವಂತೆ ಇಳಿಯತೊಡಗುತ್ತದೆ. ಬ್ರಶ್ಶಿನ ತುದಿಯನ್ನು ಪೈಂಟಿನ ಡಬ್ಬಿಯೊಳಗೆ ಮುಳುಗಿಸುವ ಆಗತ್ಯವಿಲ್ಲ.

—o0o—

ಐದನೆಯ ಜಾರ್ಜ್ ಪ್ರಭುಗಳು.

ಲಂಡನ್ ನಗರದಲ್ಲಿ ಮೊನ್ನೆ ಮೊನ್ನೆ ಮಾತಾಡಿದರಂತೆ! ಸತ್ತವರನ್ನು ಮಾತನಾಡಿಸಬಲ್ಲ ಚಾರ್ಲ್ಸ್ ಬಾಶಂ ಸುಮಾರು 27 ಮಂದಿಯ ಮುಂದೆ ದಿವಂಗತ ಐದನೇ ಜಾರ್ಜ್ ಪ್ರಭುಗಳನ್ನು ಮಾತನಾಡಿಸಿದ. ಅದೇ ಅರಸರ ಸ್ವರ. ಇದೀಗ ಈ ಕುಳಿತವರಿಗೆ ಕೇಳಿಸಿತು. ತನ್ನ ಸಾಮ್ರಾಜ್ಯ ರಕ್ಷಣೆಯ ವಿಚಾರವಾಗಿ ಹಲವು ಸಲಹೆಗಳನ್ನು ದಿವಂಗತರು ಇತ್ತರೆಂದೂ ತಿಳಿಯಬಂದಿದೆ. ಇವರಲ್ಲದೆ ಆ ದಿನ ಲಾರ್ಡ್ ಕಿಚ್ನರ್, ಲಾರ್ಡ್ ರೋಬರ್ಟ್ಸ್, ಜನರಲ್ ಬೂತ್ ಮುಂತಾದವರೂ ಮಾತಾಡಿದರಂತೆ. ಆರ್ಯ ಧರ್ಮದಲ್ಲಿ ಅಡಕವಾದ ಈ ವಿದ್ಯೆ ಇಂದೆಲ್ಲಿ ?

—o0o—

ಆರಡಿಯವರ ಸಂಘ.

ಅಮೇರಿಕದಲ್ಲಿ ಸಂಘ ಸಂಸ್ಥೆಗಳಿಗೆ ಬರಗಾಲವಿಲ್ಲ. ಅಲ್ಲಿ 6 ಅಡಿ ಹಾಗೂ ಅದಕ್ಕಿಂತಲೂ ಎತ್ತರ ಬೆಳೆದಿರುವವರದೊಂದು ಸಂಘ ಇದೀಗ ಸ್ಥಾಪಿತವಾಗಿದೆ. ಇವರಿಗೆ ಒದಗುವ ಹಲವು ತೆರನ ಸಂಕಷ್ಟಗಳನ್ನು ಕಡಿಮೆ ಮಾಡುವುದೇ ಈ ಸಂಘದ ಉದ್ದೇಶ. ಹೊಟೆಲುಗಳು ಇವರಿಗೆ ಬೇಕಷ್ಟು ಉದ್ದದ ಹಾಸಿಗೆ ಒದಗಿಸುವುದಿಲ್ಲ. ಎತ್ತರದ ಬಾಗಿಲುಗಳನ್ನಿರಿಸುವುದಿಲ್ಲ ಮುಂತಾದುವುಗಳು ಇವರಿಗೆ ಕಂಡಿರುವ ಹಲವು ಸಂಕಷ್ಟಗಳು. ಈ ಸಂಕಟಗಳನ್ನೆಲ್ಲ ದೂರಗೊಳಿಸಲು ಯತ್ನಿಸುವುದೇ ಈ ಸಂಘದ ಉದ್ದೇಶ. ಇನ್ನೊಂದಿದೆ. ಮೋಟಾರು ಕಾರುಗಳ ಮಾಡನ್ನು ತೆಗೆಸಬೇಕು ಇಲ್ಲವೇ ಎತ್ತರ ಮಾಡಿಸಬೇಕು ಎಂಬುದು.

—o0o—

ಇಂದಿನ ಜನಕನಿಗೆ ಇನ್ನೂ ಬಹು ಕಾಲದ ಮುಂದೆ ಸಂತಾನವಾಗಬಹುದು.

ನಿಜ ಜನಕನ ಹೆಸರು ಪತ್ರಿಗಳನ್ನು ತಿಳಿಸುವ ಸಂತಾನೋತ್ಪತ್ತಿಯ ವೈಜ್ಞಾನಿಕ ಶೋಧೆಯಲ್ಲಿ ಮುಂದುವರಿದ ಅಮೆರಿಕವು ಇಂದಿನ ಜನಕನೊರ್ವನಿಂದ ಸಾವಿರಾರು ವರ್ಷಗಳ ಮುಂದೆಯೂ ಸಂತಾನವಾಗುವ ಒಂದು ವಿಚಿತ್ರ ಶೋಧೆಯನ್ನು ಮಾಡಿ ಕೃತಾರ್ಥವಾಗಿರುವುದು.

ಯಾವುದೋ ಒಂದು ವೈಜ್ಞಾನಿಕ ಕ್ರಮದಿಂದ ಮನುಷ್ಯನ ವೀರ್ಯವನ್ನು ಹಾಳಾಗದೆ ಜೋಪಾನ ಮಾಡಬಹುದಾಗಿದೆಯೆಂದು ಡಾ. ಅಲೆಕ್ಸಾಂಡರ್ ಗೋಜ್ ಎಂಬವರು ಕಂಡುಹಿಡಿದಿರುವರು. ಇಂಥಾ ವೀರ್ಯ ಸಂಗ್ರಹವು ಭಾವಿ ಸ್ತ್ರೀಯರಲ್ಲಿ ಅಪ್ರತಿಮ ವೀರ್ಯವನ್ನು ಜನಿಸುವಂತೆ ಮಾಡಬಹುದೆಂದು ಆ ಮಹನೀಯರು ಫಿಲಡೆಲ್ಫಿಯದ ಫಿಲೊಸೊಫಿಕಲ್ ಸೊಸೈಟಿಯಲ್ಲಿ ತನ್ನ ದೃಷ್ಟಾಂತಗಳಿಂದ ಪ್ರತಿಪಾದಿಸಿರುವರು. ಇರಲಿ. ಇಂಥಾ ವೀರ್ಯದಿಂದ ಜನಿಸುವ ಭಾವೀ ಅಪ್ರತಿಮ ಮಹನೀಯರಿಗೆ ತನ್ನ ಜನನ ಧಾತನ ಭಾವ ಚಿತ್ರವನ್ನೂ ಚರಿತ್ರೆಯನ್ನೂ ತಿಳಿಯುವ ಏರ್ಪಾಡೊಂದು ಮಾಡಿದರೆ ಉತ್ತಮವಲ್ಲವೇ ?

—o0o—

ಸೆಂಟ್ರಲ್ ಸಹಕಾರಿ ಬ್ಯಾಂಕಿನ

೨೦ ನೇ ವಾರ್ಷಿಕ ಮಹಾ ಸಭೆ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

5. ಬ್ಯಾಂಕಿನ ಮೀಟಿಂಗುಗಳಿಗೆ ಹೋಗುವ ಡೈರೆಕ್ಟರುಗಳಿಗೆ ಬಸ್ ಚಾರ್ಜು ಮಾತ್ರ ಕೊಡತಕ್ಕದ್ದು ಎಂಬ ವಿಷಯ ಈ ಮೊದಲು ತೀರ್ಮಾನವಾದ್ದರಿಂದ ಮೆ ಪುಟ್ಟಿಮಾಡ ಮಾದಯ್ಯನವರು ಈ ಸಮ್ಮಂಧ ತನ್ನ ಠರಾವನ್ನು ವಾಪಸು ತೆಗೆದುಕೊಂಡರು.

6 ಜನರಲ್ ಮೀಟಿಂಗಿನಲ್ಲಿ ಮೊದಲಾಗಿ ಠರಾವುಗಳನ್ನೂ ಮತ್ತು ಬ್ಯಾಂಕಿಗೆ ಸಮ್ಮಂಧಪಟ್ಟ ಇತರ ವಿಷಯಗಳನ್ನೂ ಚರ್ಚಿಸಿ ಕಡೆಗೆ ಡೈರೆಕ್ಟರುಗಳ ಚುನಾವಣೆ ನಡಿಸತಕ್ಕದು ಎಂದು ಮೆ. ಪುಟ್ಟಿಮಾಡ ಮಾದಯ್ಯನವರು ಸೂಚಿಸಿದ್ದನ್ನು ಮೆ. ಉದಿಯಂಡ ಸೋಮಯ್ಯನವರು ಅನುಮೋದಿಸಿದರು

ಠರಾವು ಸರ್ವಸಮ್ಮತದಿಂದ ಪಾಸಾಯಿತು

7. ಬ್ಯಾಂಕಿನಿಂದ ಮಿತ ಸಂಘಗಳಿಗೆ ಕೊಡುವ ಸಾಲಕ್ಕೆ ಶೇಕಡ 5¼ ರಂತೆಯೂ ಅಮಿತ ಸಂಘಗಳಿಗೆ ಕೊಡುವ ಸಾಲಗಳಿಗೆ 6¼ ಯಂತೆಯೂ ಬಡ್ಡಿ ದರವನ್ನು ನಿಷ್ಕರ್ಷಿಸಬೇಕೆಂತ ಮೆ. ನೆಲ್ಲಮಕ್ಕಳ ಅಚ್ಚಯ್ಯನವರು ಸೂಚಿಸಿದರು.

ಕಳೆದ ವರ್ಷ ಜನರಲ್ ಬಾಡಿಯವರು ತೀರ್ಮಾನಿಸಿದಂತೆ ಮಿತಜವಾಬ್ದಾರಿ ಸಂಘಗಳ ಕ್ರಾಪ್ ಲೋನ್ ಅಂಡ್ ಸೇಲ್ ಸೊಸೈಟಿಗಳು ಮತ್ತು ಜಿನಸು ಸ್ಟೋರುಗಳಿಗೆ ಕೊಡುವ ಸಾಲಗಳಿಗೆ ಬಡ್ಡಿಯನ್ನು ಶೇಕಡ 5¼ಗೆ ಇಳಿಸಿದ್ದರಿಂದ ಅದನ್ನು ಇನ್ನು ಮುಂದೆ ಜಾರಿಗೆ ತರಲಾಗುವುದೆಂದು ಬ್ಯಾಂಕಿನ ಅಧ್ಯಕ್ಷರು ಹೇಳಿದ ಮೇರೆಗೆ ಮೆ ಅಚ್ಚಯ್ಯನವರು ತಮ್ಮ ಠರಾವನ್ನು ವಾಪಸು ತೆಗೆದುಕೊಂಡರು.

8 ಮಾಜಿ ರಿಜಿಸ್ಟ್ರಾರುಗಳು, ಮಾಜಿ ಸೆಂಟ್ರಲ್ ಬ್ಯಾಂಕು ಪ್ರೆಸಿಡೆಂಟರುಗಳ ಮಾಜಿ ಗೌರವ ಕಾರ್ಯದರ್ಶಿಗಳು ಮತ್ತು ಬ್ಯಾಂಕಿನ ಸ್ಥಾಪಕರ ಫೋಟೋಗಳನ್ನು ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದಲೋ ಇತರ ಫಂಡಿನಿಂದ ಖರ್ಚು ಮಾಡಿ ಬ್ಯಾಂಕು ಆಫೀಸಿನಲ್ಲಿ ಇಡಲು ಏರ್ಪಾಡು ಮಾಡತಕ್ಕದ್ದೆಂದು ಮೆ ಕೆ ಕೆ ಗಣಪತಿಯವರು ಸೂಚಿಸಿದ ಠರಾವನ್ನು ಮೆ. ಕೆ. ಕೆ. ಬೆಳ್ಯಪ್ಪನವರು ಅನುಮೋದಿಸಿದರು.

ಮೆ. ಐ. ಪಿ. ಕಾರ್ಯಪ್ಪನವರು ವಿರೋಧಿಸಿದರು.

ಅಧ್ಯಕ್ಷರು—ಬ್ಯಾಂಕಿನ ಉತ್ತಮವಾದ ಕೆಲಸಗಳನ್ನು ಮಾಡಿದವರ ಫೋಟೋಗಳನ್ನು ಬ್ಯಾಂಕಿನ ಆಫೀಸಿನಲ್ಲಿಡಲು ಡೈರೆಕ್ಟರುಗಳಿಗೆ ಅಧಿಕಾರ ಕೊಡುವುದು ಯುಕ್ತವಾಗಿದೆಯೆಂದು ಮೊದಲಾಗಿ ವಿವರಿಸಿ ಹೇಳಿದರು.

ಠರಾವನ್ನು ಓಟಿಗೆ ಹಾಕಲಾಗಿ 40 ಓಟುಗಳು ಪರವಾಗಿಯೂ 26 ಓಟುಗಳು ವಿರೋಧವಾಗಿಯೂ ಸಿಕ್ಕಿದ್ದರಿಂದ ಠರಾವು ಬಹುಮತದಿಂದ ಪಾಸಾಯಿತು.

9. ಬೈಲಾ ನಂಬರು 27ರ 3ನೇ ಪಂಕ್ತಿಯಲ್ಲಿ 'ಇತರ ಪೈಕಿ ಮೆಂಬರು ಸಂಘಗಳ ಪ್ರತಿನಿಧಿಗಳು ತಾವೇ ತಮ್ಮೊಳಗಿಂದ 5 ಜನರನ್ನೂ, ಇತರ ಶೇರುದಾರರು ತಮ್ಮೊಳಗಿಂದ ತಾವೇ 5 ಜನರನ್ನೂ ಆರಿಸತಕ್ಕದ್ದು' ಎಂಬದರ ಬದಲು ಮೆಂಬರು ಸಂಘದ ಪ್ರತಿನಿಧಿಗಳು ತಮ್ಮೊಳಗಿಂದ ತಾವೇ 4 ಜನರನ್ನೂ ಮತ್ತು ಹಳೇ ತಾಲೋಕುವಾರು ಒಬ್ಬರಂತೆ 5 ಜನರನ್ನೂ ಮತ್ತು ಇತರ ಶೇರುದಾರರು ತಮ್ಮೊಳಗಿಂದ ತಾವೇ 4 ಜನರನ್ನೂ ಮತ್ತು ಬ್ಯಾಂಕಿನಲ್ಲಿ ಠೇವಣಾತಿ ಇಟ್ಟವರ ಪೈಕಿ 2 ಜನರನ್ನೂ ಆರಿಸಿಕೊಳ್ಳತಕ್ಕದ್ದು' ಎಂತ ಮೆ. ಪಿ. ಸಿ. ಕರುಂಬಯ್ಯನವರು ಸೂಚಿಸಿದರು

ಮೆ. ಕೆ. ಕೆ. ಬೆಳ್ಯಪ್ಪನವರು ಡೈರೆಕ್ಟರುಗಳ ಸಂಖ್ಯೆಯನ್ನು 15ರಿಂದ 17ಕ್ಕೆ ಏರಿಸಿ 2 ಸ್ಥಳಗಳನ್ನು ಠರಾವುದಾರರ ಸೂಚನೆಯಂತೆ ಡಿಪಾಜಿಟ್ಟುದಾರರಿಗೆ ಕೊಡುವಂತೆಯೂ ಡಿಪಾಜಿಟ್ಟು ಮಾಡಿದವರ‍್ಯಾರೂ ಹಾಗೆ ಡೈರೆಕ್ಟರಾಗಲು ಅರ್ಹರಾಗಬಹುದಂತಲೂ ಉಪ ಠರಾವು ತಂದರು.

ಮೆ. ಗಳಾದ ಐ. ಪಿ. ಕಾರ್ಯಪ್ಪನವರು, ಕೀತಿಯಂಡ ಕುಟ್ಟಪ್ಪನವರು ಮತ್ತು ಪಳಂಗಂಡ ನಂಜಪ್ಪನವರು ವಿರೋಧವಾಗಿ ಮಾತಾಡಿದರು.

ರಾ. ಸಾ. ಸಿ. ಬಿ ಐಯ್ಯಣ್ಣನವರು ಮತ್ತು ಕೊಕ್ಕಲೆರ ತಿಮ್ಮಯ್ಯನವರು ಠರಾವಿಗೆ ಪರವಾಗಿ ಮಾತಾಡಿದರು.

ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಡೈರೆಕ್ಟರುಗಳ ಬೋರ್ಡಿನಲ್ಲಿ ಡಿಪಾಜಿಟ್ಟುದಾರರಿಗೆ ಪ್ರತ್ಯೇಕ 2 ಸ್ಥಳಗಳನ್ನು ಕೊಡುವ ಆವಶ್ಯಕತೆ ಇಲ್ಲವೆಂತಲೂ ಹಲವರು ಶೇರುದಾರರಾಗಿರುವುದರಿಂದ ಬಿಡು ಮೆಂಬರುಗಳ ಪರ ಡಿಪಾಜಿಟ್ಟುದಾರರೂ ಡೈರೆಕ್ಟರಾಗಿ ಬರಬಹುದಾದ ಕಾರಣ ಈಗ ಜಾರಿಯಲ್ಲಿರುವ ಹಾಗೆ ಇರುವುದು ಉತ್ತಮವೆಂತಲೂ ವಿವರಿಸಿ ಮಾತಾಡಿದರು.

ದೀರ್ಘ ಚರ್ಚೆಯಾಗಿ ಠರಾವನ್ನು ಓಟಿಗೆ ಹಾಕಲು ಪಾಸಾಗಲಿಲ್ಲ

ಬ್ಯಾಂಕಿಗೆ ಡೈರೆಕ್ಟರಾಗಿ ಬರುವವರು ಕಡಿಮೆ ಪಕ್ಷ 20 ಶೇರುಗಳನ್ನು ಕೊಂಡುಕೊಂಡುಕೊಳ್ಳದೆ ಇದ್ದರೆ 2 ಸಾವಿರ ರೂಪಾಯಿಯನ್ನಾದರೂ ಡಿಪಾಜಿಟ್ಟು ಮಾಡಿದವರಾಗಿರಬೇಕು. ಎಂಬದನ್ನು ಬೈಲಾ ನಂಬರು 29 (ಇ) ಆಗಿ ಸೇರಿಸತಕ್ಕದ್ದು ಎಂಬ ಠರಾವನ್ನು ಸೂಚಕರಾದ ರಾ. ಸಾ. ಸಿ. ಬಿ ಐಯ್ಯಣ್ಣನವರು ವಾಪಸು ತೆಗೆದುಕೊಂಡರು.

11. ಬ್ಯಾಂಕಿಗೆ ಇನ್ನು ಮುಂದೆ ಬರುವ ಗುಮಾಸ್ತರುಗಳಿಗೆ 50 ರೂ. ಗೆ ಮೇಲ್ಪಟ್ಟು ಸಂಬಳ ಕೊಡಕೂಡದೆಂದು ರಾ. ಸಾ. ಸಿ. ಬಿ. ಐಯ್ಯಣ್ಣನವರು ಸೂಚಿಸಿದ ಠರಾವನ್ನು ಮೆ. ಕೀತಿಯಂಡ ಕುಟ್ಟಪ್ಪನವರು ಅನುಮೋದಿಸಿದರು.

ಬ್ಯಾಂಕಿನ ಗೌರವ ಕಾರ್ಯದರ್ಶಿಯವರು ಈ ಠರಾವು ಈಗಿನ ಗುಮಾಸ್ತರುಗಳಿಗೆ ವ್ಯಾಪಿಸದೆ ಮುಂದೆ ಬರುವ ಗುಮಾಸ್ತರುಗಳಿಗೆ ವ್ಯಾಪಿಸುವುದರಿಂದ ಈಗ ಅದನ್ನು ಚರ್ಚಿಸುವುದು ಆವಶ್ಯವಿಲ್ಲ ವಗೈರೆಯಾಗಿ ಹೇಳಿದರು.

ಠರಾವನ್ನು ಓಟಿಗೆ ಹಾಕಿ ಪಾಕಿ ಪಾಸಾಗಲಿಲ್ಲ

12. ಟೌನ್ ಸಂಘಗಳಿಗೆ ಆಡಿಟ್ ಫೀಸ್ ಮತ್ತು ಸುಪರ್‌ವಿಜನ್ ಫೀಸು ಇವೆರಡು ಚಾರ್ಜು ಮಾಡುವುದರಿಂದ ಇವುಗಳ ಪೈಕಿ ಒಂದನ್ನು ವಜಾ ಮಾಡತಕ್ಕದ್ದು ಎಂಬ ಠರಾವನ್ನು ಸೂಚಕರಾದ ಮೆ. ಆರ್. ಯಸ್. ಸಂಜೀವರಾಯರು ಗೈರ್‌ಹಾಜರಾದ್ದರಿಂದ ಚರ್ಚಿಸಲಿಲ್ಲ.

13. ಸಂಘಗಳಿಂದ ವಸೂಲು ಮಾಡುವ ಸುಪರ್‌ವಿಜನ್ ಫೀಜಿನ ದರವನ್ನು ಶೇಕಡ 12 ಆಣೆಯಿಂದ 7 ಆಣೆಗೆ ಇಳಿಸತಕ್ಕದ್ದು ಎಂಬ ಠರಾವನ್ನು ಸೂಚಕರಾದ ಮೆ. ಆರ್. ಎಸ್. ಸಂಜೀವರಾವ್‌ರವರು ಗೈರ್‌ಹಾಜರಾದ್ದರಿಂದ ಚರ್ಚಿಸಲಿಲ್ಲ.

14. ಟೌನ್ ಸಂಘಗಳಲ್ಲಿ ಮೆಂಬರುಗಳಿಗೆ ಕಡಿಮೆ ವಾಯಿದೆಯ ಸಾಲ ಕೊಡುವುದರಿಂದ ಹಿಂದಿನ ಕೋ-ಆಪರೇಟಿವ್ ವರ್ಷದಲ್ಲಿ ಬಟವಾಡೆ ಮಾಡಿದ ಜುಮ್ಲ ಸಾಲದ ಮೊಬಲಗಿನ ಮೇಲೆ ಮಾತ್ರ ಸುಪರ್‌ವಿಜನ್ ಚಾರ್ಜು ವಿಧಿಸತಕ್ಕದ್ದು ಎಂಬ ಠರಾವನ್ನು ಸೂಚಕರಾದ ಮೆ ಆರ್. ಎಸ್. ಸಂಜೀವರಾವ್‌ರವರು ಗೈರ್‌ಹಾಜರಾದ್ದರಿಂದ ಚರ್ಚಿಸಲಿಲ್ಲ.

15. ಬ್ಯಾಂಕಿನ ಮೀಟಿಂಗುಗಳಿಗೆ ಹೋಗುವ ಡೈರೆಕ್ಟರುಗಳು ಹತ್ತಿರದ ದಾರಿಗಾಗಿ ಹೋಗದೆ ದೂರ ದಾರಿಗಾಗಿ ಹೋಗಿ ಮೈಲಿಗೆ 1 ಆಣೆಯಂತೆ ಬಸ್ ಚಾರ್ಜು ಹೊಂದಿಕೊಂಡಿರುವುದರಿಂದ ಹಾಗೆ ಹೆಚ್ಚಿಗೆ ಹೊಂದಿಕೊಂಡ ಮೊಬಲಗನ್ನು ವಾಪಸು ಕೊಡತಕ್ಕದ್ದು ಎಂದು ಮೆ. ಕೆ ಕೆ ಬೆಳ್ಯಪ್ಪನವರು ಸೂಚಿಸಿದ ಠರಾವನ್ನು ಮೆ ಉದಿಯಂಡ ಸೋಮಯ್ಯನವರು ಅನುಮೋದಿಸಿದರು.

ಬ್ಯಾಂಕಿನ ಪ್ರೆಸಿಡೆಂಟರು—ಮಳೆಗಾಲದಲ್ಲಿ ಸಮಯಕ್ಕೆ ಸರಿಯಾಗಿ ಮೀಟಿಂಗಿಗೆ ಹಾಜರಾಗಲು ಅನಾನುಕೂಲವಾದ್ದರಿಂದ ಕೆಲವು ತಿಂಗಳು ಮಾತ್ರ ಕೊಟ್ಟದ್ದೆಂತಲೂ, ಈ ರೀತಿ ಕೊಡುವ ಬಸ್ ಚಾರ್ಜು ಈಚೆಗೆ ವಜ ಮಾಡಿರುವುದೆಂಪೂ ಹೇಳಿದರು.

ಠರಾವು ದೀರ್ಘವಾಗಿ ಚರ್ಚಿಸಲ್ಪಟ್ಟು ಓಟಿಗೆ ಹಾಕಲಾಗಿ ಬಹುಮತದಿಂದ ಸೋಲಿಸಲ್ಪಟ್ಟಿತು.

ಈ ದಿನ ಮಧ್ಯರಾತ್ರಿ 1 ಗಂಟೆ ವರೆಗೂ ಮೀಟಿಂಗಿನ ಕಾರ್ಯ ಕಲಾಪಗಳು ತೀರದ್ದರಿಂದ ತಾ. 18-12-38ರಲ್ಲು ಅಂದರೆ ಕಾನ್‌ಫರೆನ್ಸ್ ತೀರಿದ ಮೇಲೆ ಬಾಕಿರುವ ಠರಾವುಗಳನ್ನು ಚರ್ಚಿಸುವ ಬಗ್ಗೆ ತೆಗೆದುಕೊಳ್ಳಬಹುದೆಂತ ಅಧ್ಯಕ್ಷರು ಸೂಚಿಸಿದ ಮೇರೆ ಮೀಟಿಂಗು ಮುಂದರಿಸಿಟ್ಟು ತಾ. 18-12-38ರಲ್ಲು ಸಾಯಂಕಾಲ 5 ಗಂಟೆಯ ಮೇಲೆ ಮುಂದರಿಸಲಾಯಿತು.

18-12-1938.

16. ಸಂಘಗಳ ಜನರಲ್ ಬಾಡಿ ಮೀಟಿಂಗಿಗೆ ಹೋಗುವ ಡೈರೆಕ್ಟರುಗಳಿಗೆ ಮೈಲಿಗೆ 1 ಆಣೆಯಂತೆ ಬಸ್ಸ್ ಚಾರ್ಜು ಹೊಂದಿಕೊಳ್ಳಬಹುದೆಂತ ಸುಪರ್‌ವಿಜನ್ ಬೋರ್ಡಿನವರು ತೀರ್ಮಾನಿಸಿದ್ದು ನ್ಯಾಯವಲ್ಲದ್ದರಿಂದ ಅಂಥಾ ತೀರ್ಮಾನವನ್ನು ವಜ ಮಾಡಿ ಎಲ್ಲಾ ಸಂಘಗಳಿಗೆ ಒಂದು ಸರ್ಕ್ಯುಲಾರು ಕಳುಹಿಸತಕ್ಕದ್ದೆಂದು ಮೆ. ಕೆ. ಕೆ. ಬೆಳ್ಯಪ್ಪನವರು ಸೂಚಿಸಿದ ಠರಾವನ್ನು ಮೆ. ಪುಟ್ಟಿಮಾಡ ಮಾದಯ್ಯನವರು ಅನುಮೋದಿಸಿದರು.

ಮೆ. ಗಳಾದ ಪಳಂಗಂಡ ನಂಜಪ್ಪನವರು, ಬಿದರೂರು ಮಾದಯ್ಯನವರು ಮತ್ತು ಬ್ಯಾಂಕಿನ ಪ್ರೆಸಿಡೆಂಟರು, ಮತ್ತು ಗೌರವ ಕಾರ್ಯದರ್ಶಿಯವರು ಠರಾವಿಗೆ ವಿರೋಧವಾಗಿ ಮಾತಾಡಿದರು.

ಠರಾವನ್ನು ಓಟಿಗೆ ಹಾಕಲಾಗಿ ಪಾಸಾಗಲಿಲ್ಲ.

17. ಹಿಂದಿನ ವರ್ಷದಲ್ಲಿ ಮಾಜಿ ಗೌರವ ಕಾರ್ಯದರ್ಶಿಯವರಿಗೆ ಕೊಟ್ಟ ಮರ್ಯಾದೆ ಧನವನ್ನು ಕೋ-ಆಪರೇಟಿವ್ ವಿದ್ಯಾಭಿವೃದ್ಧಿಗೆ ಅವರು ಉಚಿತಾರ್ಥವಾಗಿ ಕೊಟ್ಟದ್ದನ್ನು ಯಾವ ರೀತಿ ಉಪಯೋಗಿಸಲ್ಪಟ್ಟಿದೆ ಎಂತ ಮಹಾ ಸಭೆಯವರಿಗೆ ತಿಳಿಸತಕ್ಕದ್ದೆಂದು ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಬ್ಯಾಂಕಿನ ಪ್ರೆಸಿಡೆಂಟರು—ಈ ವಿಷಯದಲ್ಲಿ ಸದರಿ ಮೊಬಲಗು ಬ್ಯಾಂಕಿನ ಪ್ರೆಸಿಡೆಂಟರ ಹೆಸರಿನಲ್ಲಿ ಬ್ಯಾಂಕಿನಲ್ಲೇ ಡಿಪಾಜಿಟ್ಟು ಇಟ್ಟು ಈಗ ತಾನೇ ಒಂದು ವರ್ಷವಾದುದರಿಂದ ಅದರ ಬಡ್ಡಿಯನ್ನು ಅದಕ್ಕಾಗಿ ನೇಮಿಸಲ್ಪಟ್ಟಿರುವ ಒಂದು ಕಮಿಟಿಯವರು ಸಹಕಾರ ವಿದ್ಯಾಭ್ಯಾಸಕ್ಕೆ ಉಪಯೋಗಿಸುವ ಏರ್ಪಾಡು ಬೇಗನೇ ಮಾಡಲಾಗುವುದೆಂದು ತಿಳಿಸಿದರು

18 ತಿರುವಾಂಕೂರು ನೇಷನಲ್ ಅಂಡ್ ಕ್ವಿಲಾನ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಿದ ರೂ. 42,995-8-5 ಸದರಿ ಬ್ಯಾಂಕಿನಲ್ಲಿ ನಿಂತು ಹೋದ ಕಾರಣದಿಂದಲೂ ಮತ್ತು ಸಂಘಗಳಿಂದ ಸಾಲದ ಬಡ್ಡಿ ದರ ಇಳಿಸಬೇಕೆಂಬ ಕೂಗು ಇರುವುದರಿಂದಲೂ ಬ್ಯಾಂಕಿನ ಮತ್ತು ಸುಪರ್‌ವಿಜನ್ ಬೋರ್ಡಿನ ಸಿಬ್ಬಂದಿಗಳ ಸಂಬಳದಲ್ಲಿ ಶೇಕಡ 10ರಷ್ಟು ಕಮ್ಮಿ ಮಾಡತಕ್ಕದ್ದು ಎಂಬ ಠರಾವನ್ನು, ಆಡಿಟ್ ವರದಿಯಲ್ಲಿ ರಿಜಿಸ್ಟ್ರಾರವರು ಬ್ಯಾಂಕಿನ ಗುಮಾಸ್ತರುಗಳಿಗೆ ಕೆಲಸ ಹೆಚ್ಚಿದೆಯೆಂದು ಸೂಚಿಸಿರುವ ಕಾರಣ ಸೂಚಕರಾದ ಮೆ. ಕೆ. ಕೆ. ಬೆಳ್ಯಪ್ಪನವರು ವಾಪಸು ತೆಗೆದುಕೊಂಡರು.

19. ಬ್ಯಾಂಕು ಸಂಘಗಳಿಗೆ ಶೇಕಡ 4ರ ದರದ ಬಡ್ಡಿಯಲ್ಲೂ ಸಂಘಗಳು ಮೆಂಬರುಗಳಿಗೆ 6¼ರ ದರದ ಬಡ್ಡಿಯಲ್ಲೂ ಸಾಲ ಕೊಡಲು ಅನುಕೂಲವಾಗುವಂತೆ 3% ಬಡ್ಡಿಯಲ್ಲಿ 1 ಲಕ್ಷ ರೂ. ಸಾಲವಾಗಿ ಬ್ಯಾಂಕಿಗೆ ಕೊಡುವಂತೆ ಸ್ಥಳೀಯ ಸರ್ಕಾರದವರನ್ನು ಕೇಳತಕ್ಕದ್ದು ಎಂದು

ಮೆ. ಕೆ. ಕೆ. ಬೆಳ್ಯಪ್ಪನವರು ಸೂಚಿಸಿದ ಠರಾವನ್ನು ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು.

ಸರ್ವ ಸಮ್ಮತದಿಂದ ಪಾಸಾಯಿತು.

20. ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯು ಈಗಿನ ರೀತಿ ತೃಪ್ತಿಕರವಲ್ಲದ್ದರಿಂದ ಯೂನಿಯನ್‌ವಾರ್ ಇಲ್ಲವೇ ತಾಲೋಕುವಾರು ಸಂಘಗಳ ಪರ ಡೆಲಿಗೇಟರುಗಳು ಚುನಾಯಿಸತಕ್ಕದ್ದು ಎಂದು ಮೆ. ಕೆ. ಕೆ. ಬೆಳ್ಯಪ್ಪನವರು ಸೂಚಿಸಿದ ಠರಾವನ್ನು ಮೆ. ನೋಮೆಯಂಡ ಅಚ್ಚಯ್ಯನವರು ಅನುಮೋದಿಸಿದರು.

ಮೆ. ಗಳಾದ ಕಾಳೇಂಗಡ ಚಿಣ್ಣಪ್ಪನವರು, ಅಜ್ಜಿಕುಟ್ಟಿರ ಪೊನ್ನಪ್ಪನವರು, ನಾಯಡ ಚಿಣ್ಣಪ್ಪನವರು, ಕೊಳ್ಳಿಮಾಡ ಕರುಂಬಯ್ಯನವರು, ಐ. ಪಿ. ಕಾರ್ಯಪ್ಪನವರು, ಪಿ. ಐ. ಬೆಳ್ಯಪ್ಪನವರು, ಮತ್ತು ಪಿ. ಜಿ. ಐಯ್ಯಪ್ಪನವರು ವಿರೋಧಿಸಿ ಈ ರೀತಿಯಲ್ಲಿಯೇ ಇರಬೇಕೆಂದು ಹೇಳಿದರು.

ಮೆ. ಗಳಾದ ಬಿದರೂರು ಪೂವಯ್ಯನವರು, ಕೀತಿಯಂಡ ಕುಟ್ಟಪ್ಪನವರು, ಉದಿಯಂಡ ಪೂಚಯ್ಯನವರು, ಚಕ್ಕೆರ ಸುಬ್ಬಯ್ಯನವರು ಮತ್ತು ಬಲ್ಲಡಿಚಂಡ ಬೋಪಯ್ಯನವರು ಠರಾವಿಗೆ ಪರವಾಗಿ ಮಾತಾಡಿದರು.

ಠರಾವನ್ನು ಓಟಿಗೆ ಹಾಕಲಾಗಿ 24 ಓಟುಗಳು ಠರಾವಿನ ಪರವಾಗಿಯೂ, 48 ಓಟುಗಳು ವಿರೋಧವಾಗಿಯೂ ಕೊಡಲ್ಪಟ್ಟದ್ದರಿಂದ ಪಾಸಾಗಲಿಲ್ಲ.

21. ಬ್ಯಾಂಕಿನ ಬೈಲಾವನ್ನು ತಿದ್ದುಪಡಿ ಮಾಡಲು ಜನರಲ್ ಬಾಡಿಯವರು ಒಂದು ಸಬ್ ಕಮಿಟಿ ಏರ್ಪಡಿಸಬೇಕಾದದ್ದು ಎಂದು ಮೆ. ಪಿ. ಜಿ. ಐಯ್ಯಪ್ಪನವರು ಸೂಚಿಸಿದರು. ಮತ್ತು ಇದರ ಅವಶ್ಯಕತೆಗಳನ್ನು ಸಹ ವಿವರಿಸಿ ಹೇಳಿದರು.

ಮೆ. ಕ[illegible] ಪೂವಯ್ಯನವರು ಠರಾವಿಗೆ ತಿದ್ದುಪಡಿಯಾಗಿ ಬ್ಯಾಂಕಿನ ಡೈರೆಕ್ಟರುಗಳಿಂದಲೂ ಮತ್ತು ರಿಜಿಸ್ಟ್ರಾರವರಿಂದಲೂ ಕೂಡಿದ ಒಂದು ಸಬ್ ಕಮಿಟಿ ಏರ್ಪಡಿಸಿ ಬೈಲಾವನ್ನು ತಿದ್ದುಪಡಿ ಮಾಡಿಕೊಳ್ಳಬಹುದೆಂದು ಸೂಚಿಸಿದ ಠರಾವನ್ನು ಮೆ. ನಾಯಡ ಚಿಣ್ಣಪ್ಪನವರು ಅನುಮೋದಿಸಿದರು.

ಠರಾವು ಬಹುಮತದಿಂದ ಪಾಸಾಯಿತು.

22. ಸರ್ಕಾರದವರು ಬ್ಯಾಂಕಿಗೆ ವಿಧಿಸಿರುವ ಆಡಿಟ್ ಫೀಜನ್ನು ವಜಾ ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಿ ಕೇಳುತ್ತದೆ ಎಂದು ಮೆ. ಪಿ. ಜಿ. ಐಯ್ಯಪ್ಪನವರು ಸೂಚಿಸಿದ್ದನ್ನು ಮೆ. ಅಜ್ಜಿಕುಟ್ಟಿರ ಪೊನ್ನಪ್ಪನವರು ಅನುಮೋದಿಸಿದರು.

ಒಮ್ಮತದಿಂದ ಪಾಸಾಯಿತು.

23. ಮಾಜಿ ಸೆಕ್ರೆಟರಿಯಾಗಿದ್ದ ಮೆ. ಯಂ. ಯಂ. ಬೆಳ್ಯಪ್ಪನವರು ಹೊಂದಿಕೊಂಡ ಬೋನಸನ್ನು ವಾಪಸು ಕೊಡಲು ನಿರಾಕರಿಸಿದ್ದರಿಂದ ಅದನ್ನು ವಾಪಸು ಕೊಡುವಂತೆ ಏರ್ಪಾಡು ಮಾಡಲು ಮಹಾ ಸಭೆಯವರು ಒಂದು ಕಮಿಟಿಯನ್ನು ನೇಮಿಸತಕ್ಕದ್ದು ಎಂಬ ಸೂಚನೆಯು ಈ ಮೊದಲೇ ಚರ್ಚಿಸಲ್ಪಟ್ಟದ್ದರಿಂದಲೂ ಹಿಂದಿನ ಸಭೆಗಳ ವರೆಗೆ ಸವರಿಯುವವರು ಡೈರೆಕ್ಟರುಗಳ ಚುನಾವಣೆಗೆ ನಿಲ್ಲ[illegible]ದ್ದಾಗಿ ನಿರ್ಧರಿಸಬೇಕಾಗಿ ಸೂಚಿಸಿದ್ದನ್ನು ಜೀವಿತಾಂತ ಸೂಚಕರಾದ ಮೆ. ಕಾಳೇಂಗಡ ಚಿಣ್ಣಪ್ಪನವರು ವಾಪಸು ತೆಗೆದುಕೊಂಡರು.

24. ಬ್ಯಾಂಕಿನ ಡೈರೆಕ್ಟರುಗಳನ್ನು ಎರಡು ವರ್ಷಕ್ಕೊಮ್ಮೆ ಮಹಾ ಸಭೆಯವರು ಚುನಾಯಿಸತಕ್ಕದ್ದು, [illegible] ಬೈಲಾ ನಂಬರು 28ರಲ್ಲಿ ತಿದ್ದುಪಡಿ ಮಾಡುವುದು ಎಂಬ ಠರಾವನ್ನು ಸೂಚಕರಾದ ಮೆ. ಕಾಳೇಂಗಡ ಚಿಣ್ಣಪ್ಪನವರು ವಾಪಸು ತೆಗೆದುಕೊಂಡರು.

ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯಗಳು

25. ವಿರಾಜಪೇಟೆಯಲ್ಲಿ ವಾಸವಿರುವ ಕ್ರಿಶ್ಚಿಯನ್ ಸ್ಕೂಲ್ನ ಎಂಬವರ ಮನೆ ಬೆಂಕಿ ಹೊತ್ತಿದ್ದರಿಂದ ಅವರು ತನಗೆ ಬ್ಯಾಂಕಿನಿಂದ ಧನ ಸಹಾಯ ಕೊಡಬೇಕೆಂದು ವಿರಾಜಪೇಟೆ ಟೌನ್ ಬ್ಯಾಂಕಿನ ಪ್ರೆಸಿಡೆಂಟರ ಮೂಲಕ ಬರೆಕೊಂಡ ಅರ್ಜಿಯನ್ನು ಓದಲಾಯಿತು.

ಅರ್ಜಿದಾರನಿಗೆ 10 ರೂಪಾಯಿ ಕಾಮನ್‌ಗುಡ್ ಫಂಡಿನಿಂದ ಕೊಡುವಂತೆ ಸರ್ವಸಮ್ಮತದಿಂದ ಮಂಜೂರಾಯಿತು.

ಅಧ್ಯಕ್ಷರ ಭಾಷಣ.

ಅಧ್ಯಕ್ಷರು—ತಮ್ಮ ಅಧ್ಯರು ಭಾಷಣವನ್ನು ಪ್ರಾರಂಭಿಸಿ ಬ್ಯಾಂಕಿನ ಪರಿಸ್ಥಿತಿಯ ಕ್ರಮದಲ್ಲಿ ಡೈರೆಕ್ಟರುಗಳು ಹೆಚ್ಚಿನ ಪ್ರಯತ್ನ ತೆಗೆದುಕೊಂಡು ತೃಪ್ತಿಕರವಾದ ವಸೂಲಾತಿಯನ್ನು ನಡೆಸಿದಕ್ಕಾಗಿಯೂ, ಬ್ಯಾಂಕಿನ ಇನ್ನಿತರ ಕೆಲಸಕಾರ್ಯಗಳನ್ನು ಸಹ ಬಹು [illegible]ಯಿಂದ ನಡೆಸಿದಕ್ಕಾಗಿಯೂ [illegible] ಸಂತೋಷವನ್ನು ಸೂಚಿಸಿದರು. ಮಾತ್ರ ಸಂಸ್ಥೆಯಾದ ಬ್ಯಾಂಕಿನ ಅಗತ್ಯವನ್ನು ಪ್ರಾಥಮಿಕ ಸಂಘಗಳು ತಮ್ಮ [illegible]ಲ್ಲಿ ಇಟ್ಟುಕೊಳ್ಳಬೇಕಾಗಿದೆ. ಅದಕ್ಕಾಗಿ ಸಂಘಗಳ ಪ್ರತಿನಿಧಿಗಳಾಗಿ ಬಂದಿರುವ ಮಹನೀಯರಿಗೆ [illegible] ಕಲಸ [illegible] ವ ಬಿನಲ್ಲಿ [illegible] ಇಟ್ಟುಕೊಳ್ಳಬೇಕಾಗಿಯೂ [illegible] ಮಂಜೂರು ಮಾಡುವಾಗ್ಯ ಅರ್ಜಿದಾರರುಗಳ ಸರಿಯಾದ ಸ್ಥಿತಿಯನ್ನು ವಿಚಾರಿಸಿ ನಷ್ಟ ಸಂಭವಿಸದ ರೀತಿಯಲ್ಲಿ ಸಾಲ ಮಂಜೂರು ಮಾಡಬೇಕೆಂತಲೂ ಅದಕ್ಕಾಗಿ ಆಯಾಯ ಯೂನಿಯನ ಗಳೂ ಮತ್ತು ಸುಪರ್‌ವೈಜರುಗಳೂ ಹೆಚ್ಚು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿಯೂ, ಯೋಗ್ಯರಾದ ಡೈರೆಕ್ಟರುಗಳನ್ನು ಚುನಾಯಿಸುವ ಬಾಬಿನಲ್ಲಿ ಎಲ್ಲಾ ಮೆಂಬರುಗಳು ಗಮನಕ್ಕೆ ತೆಗೆದುಕೊಳ್ಳಬೇಕಾಗಿಯೂ, ಕೊಡಗು ದೇಶದಲ್ಲಿ ನಮಗಿರುವ ಅನುಕೂಲತೆಯನ್ನು ಇತರ ದೇಶಗಳೊಂದಿಗೆ ಹೋಲಿಸಿನಲ್ಲಿ ಹೆಚ್ಚಿನ ಸಲಕರಣೆಗಳನ್ನು ದೇವರು ನಮಗೆ ಒದಗಿಸಿದ್ದಾನೆಂತಲೂ, ಆದ್ದರಿಂದ ಎಲ್ಲರೂ ದೃಢಕಾಯರಾಗಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿ ಸಹಕಾರ ಚಳವಳಿಯ ಮಹತ್ವವನ್ನರಿತು ಅದರ ಏಳಿಗೆಗೆ ಶ್ರಮ ತೆಗೆದುಕೊಳ್ಳಬೇಕೆಂದು ಹೇಳಿ ತಮ್ಮ ಭಾಷಣವನ್ನು ಅಂತ್ಯಗೊಳಿಸಿದರು.

ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀಮಾನ್ ಪಿ. ಐ. ಬೆಳ್ಯಪ್ಪನವರು ಈ ದಿನದ ಜನರಲ್ ಬಾಡಿ ಮೀಟಿಂಗಿಗೆ ರಿಜಿಸ್ಟ್ರಾರಾದ ಮೆ. ಕೆ. ಪಿ. ಚಂಗಪ್ಪನವರು ಅಧ್ಯಕ್ಷ

ಸನ್ಯಮಂತ್ರಿ ಶ್ರೀ ರಾಮನ್ ಮೆನೋನ್‌ರವರ ನಿಧನ.

ಮದ್ರಾಸು ಸರಕಾರದ [illegible] ಮತ್ತು ಜೈಲು ಖಾತೆಯ ಮಂತ್ರಿಗಳಾದ ಶ್ರೀ ಕೆ. ರಾಮನ್ ಮೆನೋನ್‌ರವರ ನಿಧನ ವಾರ್ತೆಯು [illegible] ವಿಷಾದಿಸುತ್ತೇವೆ. ದಿನಗಳವರೆಗೆ [illegible] ಅಸೌಖ್ಯದಿಂದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದರು. ಕೆಲವು ದಿನಗಳ ಹಿಂದೆ ಅವರ ಸ್ಥಿತಿಯು ಉತ್ತಮಗೊಂಡಂತೆ ತೋರಿದ್ದರಿಂದ ಇನ್ನು ಮನೆಯ ಚಿಕಿತ್ಸೆಯಿಂದ ಗುಣವಾಗಬಹುದೆಂದು ಅವರ ನಿವಾಸ ಸ್ಥಾನವಾದ ಮದ್ರಾಸಿನ 'ಕಾಲೇಜ್ ಪಾರ್ಕಿ'ಗೆ ಬಂದರು. ಅಲ್ಲಿ ಹಠಾತ್ತಾಗಿ ಅಸೌಖ್ಯ ಹೆಚ್ಚಾಗಿ ತಾರೀಕು 3ರ ರಾತ್ರೆ 8–55 ಗಂಟೆಗೆ ತಮ್ಮ 75 ವಯಸ್ಸಿನ [illegible] ತಮ್ಮ ಪತ್ನಿ, ಆರು ಮಕ್ಕಳು ಇಬ್ಬರು ಸಹೋದರರು ಮತ್ತು ಒಬ್ಬ ಸ

ಸ್ಥಾನವನ್ನು ವಹಿಸಿಕೊಂಡದಕ್ಕಾಗಿ ಅವರನ್ನು [illegible] ಸರಕಾರ [illegible] ಮಾಡುತ್ತೇವೆ [illegible] ವಹಿಸಿ ಹೇಳಿದರು.

ಅನಂತರ [illegible] ನ್ನು [illegible] ಗೂ, [illegible] ಗಳಿಗೂ, ಡೆಲಿಗೇಟರುಗಳಿಗೂ, ಪ್ರೇಕ್ಷಕರಿಗೂ, [illegible] ಗೂ, [illegible] ಸಹಕರಿಸಿದ ಸ್ಥಾಗತ ಕಮಿಟಿಯ ಮೆಂಬರುಗಳಿಗೂ, ಮಿತ್ರರಾದ ಡೈರೆಕ್ಟರುಗಳಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅಲ್ಲದೆ ತಿರುವಾಂಕೂರು ಬ್ಯಾಂಕಿನಲ್ಲಿ ಹಣ ಡಿಪಾಜಿಟ್ಟು ಇಟ್ಟ ದೆಸೆಯಿಂದ ಗ್ರಾಮ ಸಂಘಗಳಿಗೆ ಸಾಕಷ್ಟು ಸಾಲ ಸೆಂಟ್ರಲ್ ಬ್ಯಾಂಕಿನಿಂದ ಕೊಡಲು ಸಾಧ್ಯವಾಗದ್ದಕ್ಕೆ ಜನರಲ್ಲಿ ಅತೃಪ್ತಿಯುಂಟಾಗಿದ್ದರೂ ಬಹುದಾದ ರೂ ಮಹಾಸಭೆಯವರು ಸಾವಧಾನದಿಂದ ಎಲ್ಲವನ್ನು [illegible] ಈ ವಿಷಯಗಳನ್ನು [illegible] ಅಲ್ಲದೆ ಇನ್ನು ಮುಂದಕ್ಕೂ ಕೂಡ ದೇಶದ ಕಲ್ಯಾಣಕ್ಕಾಗಿ ಈ ಬ್ಯಾಂಕಿನ ಅಭಿವೃದ್ಧಿಯನ್ನು ಸಾಧಿಸಲು ಎಲ್ಲರೂ ಒಗ್ಗಟ್ಟಾಗಿ ಸಹಕರಿಸಬೇಕೆಂತಲೂ ಬ್ಯಾಂಕು ಬಿಕ್ಕಟ್ಟಿನ ಈ ಕಾಲದಲ್ಲಿ ಜನರಿಗೆ ಅದರಿಂದ ಅವರು ನಿರೀಕ್ಷಿಸುವಷ್ಟು ಸಹಾಯ ದೊರೆಯದಿದ್ದರೂ ಕೂಡ ಬ್ಯಾಂಕನ್ನು ಉಳಿಸಿ ಅದರ ಮೂಲಕ ದೇಶದವರಿಗೆ ಮುಂದಕ್ಕೆ ತುಂಬಾ ಪ್ರಯೋಜನವಾಗುವಂತೆ ಮಾಡಲು ಎಲ್ಲರೂ ಪ್ರಯತ್ನಿಸಬೇಕೆಂತ ಸಭಿಕರಲ್ಲಿ ಅಪೀಲ ಮಾಡಿಕೊಂಡರು.

ಮ. ಬಿದರೂರು ಪೂವಯ್ಯನವರು ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದನಂತರ ಅಧ್ಯಕ್ಷರ ಮತ್ತು ಬ್ಯಾಂಕಿನ ಪ್ರೆಸಿಡೆಂಟರ ಹೆಸರಿನಲ್ಲಿ ಜಯಘೋಷ ಮಾಡಿದ ಮೇಲೆ ಸಭೆಯು ರಾತ್ರಿ 8 ಗಂಟೆಗೆ ಮುಕ್ತಾಯವಾಯಿತು.

ವೀರಾಜಪೇಟೆ, 18–12–38. ಕೆ. ಪಿ. ಚಂಗಪ್ಪ, ಅಧ್ಯಕ್ಷರು.

[illegible] ಕೃಷಿ [illegible] ಸ್ವೀಕರಿಸ[illegible]

ಅಂತ್ಯವಿಧಿ.

[illegible] ಬಹಳ [illegible] ಮಂತ್ರಿ [illegible] ಗೌರವ ಮಾಡಿ [illegible] ಇಲಾಖೆ [illegible] ಮುಟ್ಟಿಸಲಿಲ್ಲ. ಮಾನ್ಯ ಮಂತ್ರಿಯವರ ನಿಧನದಿಂದ ತನಗೆ ಅಪಾರ ದುಃಖವಾಗಿದೆಯೆಂದು ಮದ್ರಾಸಿನ ಗವರ್ನರು ಸಂದೇಶವನ್ನು ಕಳುಹಿಸಿದ್ದಲ್ಲದೆ ಒಂದು ಹೂಮಾಲೆಯನ್ನೂ ಕಳುಹಿಸಿದ್ದರು. ಹೂಮಾಲೆಯನ್ನು ಸ್ಮಶಾನ ಭೂಮಿಯಲ್ಲಿ ದಿವಂಗತರ ದೇಹಕ್ಕೆ ಹಾಕಲಾಯಿತು. ಮಾನ್ಯ ಮಂತ್ರಿಗಳ ನಿಧನದಿಂದ ಮದ್ರಾಸ್ ಸರಕಾರಕ್ಕೆ ಅಲ್ಲ, ಇಡೀ ರಾಷ್ಟ್ರಕ್ಕೆ ಅಪಾರ ಹಾನಿಯಾಗಿರುವದು. ಅವರ ನಿಧನದ ದಿನ ಮದ್ರಾಸಿನ ಸರಕಾರಿ ಆಫೀಸುಗಳೆಲ್ಲವೂ ಮುಚ್ಚಲ್ಪಟ್ಟಿದ್ದವು.

ಸಂಕ್ಷಿಪ್ತ ಜೀವನ ಚರಿತ್ರೆ.

1895ನೇ ಇಸವಿ [illegible]ಯಲ್ಲಿ ಇವರು [illegible] ನಾಟಕ [illegible] ತಮ್ಮ ವ್ಯಾಸಂಗವನ್ನು [illegible] ತಮ್ಮ 24ನೇ ವಯಸ್ಸಿನಲ್ಲಿ 1919ರಲ್ಲಿ ಬಿ. ಎಲ್. ಡಿಗ್ರಿ ಪಡೆದು ಮಾರನೇ ವರ್ಷ ಹೈಕೋರ್ಟ್ ವಕೀಲರ ಸನ್ನದನ್ನು ಪಡೆದು [illegible] ವಕೀಲ ವೃತ್ತಿಯನ್ನು ಕೈಕೊಂಡರು. ತನ್ನ ವೃತ್ತಿಯ ಜೊತೆಗೆ ರಾಷ್ಟ್ರೀಯ [illegible]ವನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿದ್ದ ಇವರು 1930–32ರಲ್ಲಿ ರಾಜಕೀಯ ರಂಗದಲ್ಲಿ ಪ್ರವೇಶಿಸಿ ಕೆಲಸ ಮಾಡಿದರು. ಕ್ರಮೇಣ ಇವರು ಕೇರಳ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. 1930–32ರ ಚಳವಳದಲ್ಲಿ ಇವರಿಗೆ ಸೆರೆಮನೆವಾಸವು ಪ್ರಾಪ್ತವಾಯಿತು. 1934ರಲ್ಲಿ ಬಿಡುಗಡೆ ಹೊಂದಿದ ಇವರು ಕೇಂದ್ರ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿ ಹರಿಜನ ಸೇವೆ, ಹಿಂದೀ ಪ್ರಚಾರದ ಬಗ್ಗೆ ಅತ್ಯಮೋಘ ಕೆಲಸ ಮಾಡಿದರು. ಕಳೆದ ಅಸಂಬ್ಲಿಯ ಚುನಾವಣೆಯಲ್ಲಿ ಶ್ರೀಯುತರು 16,660 ಓಟುಗಳನ್ನು ಪಡೆದು ಜಯಶೀಲರಾದರು. ಅಂದ ಮೇಲೆ ಅವರು ಜನತೆಯ ವಿಶ್ವಾಸಕ್ಕೆ ಎಷ್ಟು ಪಾತ್ರರಾಗಿದ್ದರೆಂಬುದು ವಿಶದವಾಗುವದು. ನಂತರ ಕಾಂಗ್ರೆಸ್ ಅಧಿಕಾರ ಸ್ವೀಕಾರ ಮಾಡಿದ ನಂತರ ಮದ್ರಾಸು ಪ್ರಾಂತದ ಜೈಲು ಮತ್ತು ಕೋರ್ಟು ಇಲಾಖೆಗಳ ಮಂತ್ರಿಯಾಗಿ ನೇಮಿಸಲ್ಪಟ್ಟು ಅನೇಕಾನೇಕ ಪ್ರಯೋಜನಕಾರಿ ಕಾರ್ಯಗಳನ್ನು ಮಾಡುತ್ತಿದ್ದರು. ಮೆನೋನರವರ ಅಕಾಲಮರಣದಿಂದ ಭಾರತ ಮಾತೆಯ ಸುಪುತ್ರರಲ್ಲೊಬ್ಬರು ಕಣ್ಮರೆಯಾದಂತಾಯಿತು.

ಕೊಡಗು

ಜನವರಿ ತಾರೀಕು ೧೩ನೇ ಶುಕ್ರವಾರ ೧೯೩೯.

ಸಿಬ್ಬಂದಿ ಖೋತೆ.

ಕಳೆದ ಕೌನ್ಸಿಲು ಮೀಟಿಂಗಿನಲ್ಲಿಯೂ, ಕೆಲವು ಕೌನ್ಸಿಲು ಮೆಂಬರುಗಳು ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದಾಗಲೂ ಸರ್ಕಾರ ಇಲಾಖೆಗಳಲ್ಲಿ ಮಾಡಲೆಳಸಿರುವ ಸಿಬ್ಬಂದಿಖೋತೆಯ ವಿಚಾರವಾಗಿ ತುಂಬಾ ಟೀಕಿಸಲಾಗಿತ್ತು. ಅಲ್ಪ ಸಂಬಳದ ಚಿಕ್ಕ ಚಿಕ್ಕ ಉದ್ಯೋಗಸ್ಥರನೇಕರನ್ನು ಮನೆಗೆ ಕಳುಹಿಸಿ, ಹಲವು ಕುಟುಂಬಗಳ ಜೀವನಕ್ಕೆ ತೊಂದರೆಯನ್ನುಂಟುಮಾಡಿ, ದೇಶದಲ್ಲಿ ನಿರುದ್ಯೋಗತನವನ್ನು ಹೆಚ್ಚಿಸುವುದರ ಬದಲು ತಲೆಭಾರದ ಆಡಳಿತವನ್ನು ಹೋಗಲಾಡಿಸಬೇಕಾದದ್ದು ಸಿಬ್ಬಂದಿ ಖೋತೆಯ ಮುಖ್ಯ ಗುರಿಯಾಗಿರಬೇಕು; ಅಲ್ಲದೆ ಅನಾವಶ್ಯದ ಹುದ್ದೆಗಳನ್ನು ವಜಮಾಡುವಾಗ್ಯೆ 25 ವರ್ಷಗಳಿಗಿಂತ ಕಮ್ಮಿ ಸರ್ವಿಸು ಮಾಡಿ ಪೂರ್ತಿ ಪೆನ್ಶನ್‌ಗಳಿಸದೆ ಇರುವವರನ್ನು ತೆಗೆಯದೆ, 25 ವರ್ಷ ಯಾ ಹೆಚ್ಚು ಸರ್ವಿಸಾಗಿ ಪೂರ್ಣ ಪೆನ್ಶನಿಗೆ ಹಕ್ಕಿರುವವರನ್ನು ಮಾತ್ರ ಕೆಲಸದಿಂದ ನಿವೃತ್ತಿಗೊಳಿಸಬೇಕು; ಮತ್ತು ಹೆಚ್ಚಿನ ಸಂಬಳದ ದೊಡ್ಡ ಹುದ್ದೆಗಳಲ್ಲಿ ಖೋತೆ ಮಾಡಿದವಿನಹ ಅನಾವಶ್ಯದ ಚಿಕ್ಕ ಹುದ್ದೆಗಳನ್ನು ತೆಗೆಯಬಾರದು ಎಂದು ಮುಂತಾಗಿ ಜನರ ಪ್ರತಿನಿಧಿಗಳು ಸರ್ಕಾರಿ ಅಧಿಕಾರಿಗಳಿಗೆ ಮನದಟ್ಟಾಗುವಂತೆ ಹೇಳಿದ್ದರು.

ಕೌನ್ಸಿಲಿನ ಆ ಮೀಟಿಂಗಿನ ಮೊದಲೂ, ನಂತರವೂ ಯಾವ ಹುದ್ದೆಗಳು ವಜಮಾಡಲ್ಪಡುವವೋ ಆ ಹುದ್ದೆಗಳಲ್ಲಿರುವವರಿಗೂ, 25 ವರ್ಷಕ್ಕಿಂತ ಹೆಚ್ಚು ಸರ್ವಿಸಾದವರಿಗೂ ಮೂರು ತಿಂಗಳಲ್ಲಿ ಕೆಲಸದಿಂದ ನಿವೃತ್ತಿಗೊಳಿಸಲ್ಪಡಬಹುದೆಂದು ನೋಟೀಸು ಕೊಡಲಾಗಿದೆಯೆಂದು ತಿಳಿಯಬರುತ್ತದೆ. ವಜವಾಗುವ ಹುದ್ದೆಗಳಲ್ಲಿರುವವರನ್ನೋ ಅಥವಾ 25 ವರ್ಷ ಸರ್ವಿಸಾದವರನ್ನೋ ತೆಗೆಯಬಹುದೆಂಬ ನಿಶ್ಚಿತ ಅಭಿಪ್ರಾಯಕ್ಕೆ ಬಾರದ್ದರಿಂದ ಹೀಗ ಎರಡು ತರದವರಿಗೂ ನೋಟೀಸು ಕೊಟ್ಟಿದ್ದಾಗಿರಬೇಕೆಂದು ತೋರುತ್ತದೆ. ಇತ್ತಲಾಗಿ ದೇಶದ ಜನರ ಟೀಕೆಯ ಮೇರೆ ಪೂರ್ತಿ ಪೆನ್ಶನ್ ಪಡೆಯುವಷ್ಟು ಸರ್ವಿಸಾದವರನ್ನು ಮಾತ್ರ ತೆಗೆಯುವಂತೆ ಅಂದರೆ 1932ನೇ ಇಸವಿಯ ಸಿಬ್ಬಂದಿ ಖೋತೆಯ ತತ್ವವನ್ನು ಅನುಸರಿಸಲು ಬಿಡಬೇಕೆಂಬು ಸ್ಥಳೀಯ ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ಬರೆದರೆಂದೂ, ಅದಕ್ಕೆ ಇಂಡಿಯಾ ಸರ್ಕಾರದವರು ಒಪ್ಪಿಗೆಯನ್ನಿತ್ತಿರುವರೆಂದೂ ಸುದ್ದಿ ಇದೆ. ಇದು ನಿಜವಾದಲ್ಲಿ, 30 ವರ್ಷಕ್ಕಿಂತಲೂ ಹೆಚ್ಚು ಸರ್ವಿಸಾದವರನ್ನು ಉದ್ಯೋಗದಲ್ಲಿಟ್ಟುಕೊಂಡು, ಪೂರ್ತಿ ಪೆನ್ಶನಿಗೂ ಕಾಡ ಸಾಕಷ್ಟು ಸರ್ವಿಸಾಗದವರನ್ನೂ, ಈಗೀಗಲುದ್ಯೋಗಕ್ಕೆ ಸೇರಿದ ಯುವಕರನ್ನೂ ಮನೆಗೆ ಕಳುಹಿಸುವುದರಿಂದಲುಂಟಾಗುತ್ತಿದ್ದ ಅನ್ಯಾಯದಿಂದ ಜನರಲ್ಲಿ ಹುಟ್ಟಿದ ಬೇಸರಿಕೆಯು ಬಹು ಮಟ್ಟಿಗೆ ಕಡಿಮೆಯಾಗುವದೆಂಬದರಲ್ಲಿ ಸಂದೇಹವಿಲ್ಲ. ಈ ವಾರ್ತೆಯು ಎಷ್ಟರ ಮಟ್ಟಿಗೆ ನಿಜವೆಂಬವುದು—ನೋಟೀಸು ಕೊಟ್ಟವರಲ್ಲಿ ಯಾರ್‍ಯಾರನ್ನು ಹುದ್ದೆಯಿಂದ ನಿವೃತ್ತಿಗೊಳಿಸುವರೆಂಬದನ್ನು ನೋಡಿದ ಮೇಲೆ ಗೊತ್ತಾಗುವುದು.

ಈ ಮೊದಲು ಸಿಬ್ಬಂದಿ ಖೋತೆಯ ವಿಚಾರವಾಗಿ ಗಜೆಟ್ಟಿನಲ್ಲಿ ಹೊರಟ ಪ್ರಕಟಣೆಯಲ್ಲಿ ವಿದ್ಯಾ ಇಲಾಖೆಯಲ್ಲಿ ಅಲ್ಪಸ್ವಲ್ಪ ಖೋತೆ ಮಾತ್ರ ಮಾಡಲ್ಪಡುವದೆಂದು ಸೂಚಿಸಲಾಗಿತ್ತು. ಆದರೆ ಇತ್ತೀಚೆಗಿನ ವರ್ತಮಾನದಲ್ಲಿ ಈ ಇಲಾಖೆಯಷ್ಟು ಪೆಟ್ಟು ಬೇರೆ ಯಾವ ಇಲಾಖೆಗೂ ತಗಲುವಂತೆ ಕಾಣುವುದಿಲ್ಲ. ಬಾಲಕೀಯರ ಶಾಲೆಗಳೆಲ್ಲವೂ ಮುಚ್ಚಲ್ಪಡುವವಂತೆ. ಸರ್ಕಾರಿ ಶಾಲೆಗಳಲ್ಲಿರುವ (ಹುಡುಗಿಯರ ಶಾಲೆಗಳನ್ನು ಸೇರಿ) ಉಪಾಧ್ಯಾಯರುಗಳಲ್ಲಿ ಸುಮಾರು ಶೇಕಡ 50ರಷ್ಟು ಜನರಿಗೆ ನೋಟೀಸು ಕೊಡಲಾಗಿದೆಯಂತೆ. ಇಬ್ಬರು ಸುಪರ್‌ವೈಜರುಗಳು ಹೋಗಿ, ಒಬ್ಬ ಅಸಿಸ್ಟೆಂಟ್ ಎಡ್ಯುಕೇಶನಲ್ ಆಫೀಸರಾಗುವರಂತೆ. ಇದರೊಂದಿಗೆ ಐದು ಮೋಡಲ್ ಸ್ಕೂಲುಗಳನ್ನು ತೆಗೆದು ಹಾಕಿ, ಅಲ್ಲಿ ಪುನಃ ಸ್ಕೂಲುಗಳನ್ನು ಸ್ಥಾಪಿಸುವಂತೆ ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿಕೊಳ್ಳುವರಂತೆ. ಇದೂ ಸಾಲದೆಂದು 1ನೇ ಫಾರಮಿನಿಂದ 6ನೇ ಫಾರಮಿನ ವರೆಗೆ ಸ್ಕೂಲು ಫೀಜನ್ನು ಶೇಕಡ 50ರಷ್ಟು ಹೆಚ್ಚಿಸುವರಂತೆ. ಈ ತರಹದ ಏರ್ಪಾಡುಗಳನ್ನು ಜಾರಿಗೆ ತಂದದ್ದೇ ಆದರೆ ಕೊಡಗಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಧಕ್ಕೆ ತಗಲುವುದೆಂಬುವದರಲ್ಲಿ ಸಂಶಯವಿಲ್ಲ. ಕೊಡಗು ಪ್ರಾಂತ್ಯವು ವಿದ್ಯಾಭ್ಯಾಸದಲ್ಲಿ, ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸದಲ್ಲಿ ಬೇರೆ ಪ್ರಾಂತ್ಯಗಳಿಗಿಂತ ಮುಂದುವರಿದಿದೆಯೆಂಬ ಕೀರ್ತಿಯನ್ನು ಗಳಿಸಿತ್ತು. ಇಲ್ಲಿಯ ಸರ್ಕಾರಕ್ಕೆ ಇದೊಂದು ಒಳ್ಳೇ ಹೆಸರುವಾಸಿಯಾಗಿತ್ತು. ಇದನ್ನು ಹೋಗಲಾಡಿಸಿಕೊಳ್ಳಲು ಸರ್ಕಾರದವರು ಮಾಡುವ ಯತ್ನಕ್ಕೆ ಎಷ್ಟು ವಿಷಾದಿಸಿದರೂ ಸಾಲದು. ಎಲ್ಲ ಕಡೆಗಳಲ್ಲೂ ದೇಶದ ಜನರ ವಿದ್ಯಾಭ್ಯಾಸವನ್ನು ಹೆಚ್ಚಿಸುವಂಥ ಪ್ರಯತ್ನಗಳು ನಡೆಯುತ್ತಿರುವಾಗ್ಯೆ ಇಲ್ಲಿಯ ಸರಕಾರದವರು ಸಿಬ್ಬಂದಿ ಖೋತೆಯ ನೆಪದಿಂದ ಮಕ್ಕಳ ವಿದ್ಯಾರ್ಜನೆಗೆ ಇರುವ ಅನುಕೂಲತೆಯನ್ನು ಕಡಿಮೆ ಮಾಡುತ್ತಿರುವುದು ಎಂದೂ ನ್ಯಾಯವಲ್ಲ ಮತ್ತು ಇದು ದೇಶೀಯರಲ್ಲಿ ತುಂಬಾ ಅತೃಪ್ತಿಯನ್ನುಂಟುಮಾಡದೆ ಇರದು.

ಕೌನ್ಸಿಲಿನಲ್ಲಿ ಚರ್ಚೆ ನಡೆಸಿದಾಗ್ಯೆ, ದೊಡ್ಡ ಉದ್ಯೋಗಗಳ ಖೋತೆಯ ವಿಚಾರ ಇಂಡಿಯಾ ಸರ್ಕಾರದವರ ಹುಕುಮು ಕಾಯಲಾಗುತ್ತಿದೆ ಎಂದು ಸರ್ಕಾರಿ ಮೆಂಬರು ತಿಳಿಸಿದರು. ನಂತರ ತಿಂಗಳುಗಳು ಕಳೆದವು. ನೋಟೀಸು ಕೊಡಬೇಕೆಂದಿದ್ದ ಕೆಳ ಉದ್ಯೋಗಸ್ಥರಿಗೆಲ್ಲಾ ನೋಟೀಸೂ ಕೊಟ್ಟಾಯಿತು. ಆದರೂ ಇನ್ನೂ ಇಂಡಿಯಾ ಸರ್ಕಾರದ ಹುಕುಮು ಬಾರದಿರಲು ಕಾರಣವೇನೆಂದು ಗೊತ್ತಾಗುವುದಿಲ್ಲ. ಸಾವಿರಗಟ್ಲೆ ರೂಪಾಯಿ ಸಂಬಳ ರೂಪದಲ್ಲಿ ಖರ್ಚಾಗುತ್ತಿರುವ ಫಾರೆಸ್ಟು ಇಲಾಖೆಯ ಇಬ್ಬರು ಆಫೀಸರುಗಳು, ಕಮಿಷನರವರು, ಇಂಜಿನಿಯರವರು, ಸಿವಿಲ್ ಸರ್ಜನರು, ಶಾಲಾ ಇನ್ಸ್‌ಪೆಕ್ಟರರೇ ಮೊದಲಾದ ದೊಡ್ಡ ಉದ್ಯೋಗಗಳ ಖೋತೆಯನ್ನು ಕುರಿತು ಇಂಡಿಯಾ ಸರಕಾರದ ತೀರ್ಮಾನವು ಬರುವ ಮುಂಚೆ ಚಿಕ್ಕ ಹುದ್ದೆಗಳನ್ನು ತೆಗೆಯಲು ಸ್ಥಳೀಯ ಸರ್ಕಾರದವರು ಯಾಕೆ ಆತುರಪಡುತ್ತಿರುವರೋ ತಿಳಿಯದು. ಬರುವ ವರ್ಷದ ಬಡ್ಜೆಟ್ಟನ್ನು ಸರಿಪಡಿಸಬೇಕೆಂಬುವುದೇ ಈ ಆತುರತೆಗೆ ಕಾರಣವಾಗಿದ್ದರೆ, ಇದೇ ಕಾರಣದಿಂದ ದೊಡ್ಡ ಹುದ್ದೆಗಳ ಖೋತೆಯನ್ನೂ ಕೂಡ ಕೂಡಲೇ ಮಾಡಬೇಕಲ್ಲವೇ? ಯಾಕೆ, ಹೆಚ್ಚಿನ ಉಳಿಕೆಯನ್ನು ಕೊಡುವ ಗಜೆಟೆಡ್ ಉದ್ಯೋಗಗಳ ಖೋತೆಯನ್ನೇ ಪ್ರಥಮತಃ ಮಾಡಬೇಕಾಗಿದೆ. ಸರಕಾರದ ಆರ್ಥಿಕ ಬಿಕ್ಕಟ್ಟಿನ ಈ ಸಮಯದಲ್ಲಿ ಸಾವಿರಗಟ್ಲೆ ಸಂಬಳದವರ ಖೋತೆಯ ಕಡೆಗೆ ಗಮನ ಕೊಡದೆ ಹತ್ತುಗಟ್ಲೆ ಸಂಬಳದ ಬಡ ಹುದ್ದೇದಾರರನ್ನು ಗೋಳಿಗೀಡುಮಾಡಿಸುವಂಥಾ ಸರ್ಕಾರದವರ ಅವಸರದ ವರ್ತನೆಯೇ ಈ ವಿಚಾರವಾಗಿ ದೇಶದಲ್ಲಿ ತುಂಬಾ ಅಸಮಾಧಾನಕ್ಕೆ ಎಡೆ ಕೊಟ್ಟಿರುವುದಾಗಿದೆ. ಆದುದರಿಂದ ದೊಡ್ಡ ಉದ್ಯೋಗಗಳ ಖೋತೆಯ ಸಂಬಂಧ ಇಂಡಿಯಾ ಸರ್ಕಾರದ ಹುಕುಮು ಬಂದ ವಿನಹ ಕೆಳ ಉದ್ಯೋಗಸ್ಥರಲ್ಲಿ ಖೋತೆ ಮಾಡುವುದು ನ್ಯಾಯವೂ ಅಲ್ಲ, ವಿವೇಕತನವೂ ಅಲ್ಲ.

ಕೊಡಗಿನ ಖಾದೀ ಬಜಾರ್ ಪ್ರವಾಸ ಕ್ರಮ

ಬೆಂಗಳೂರಿನ ಕರ್ನಾಟಕ ಚರಕಾ ಸಂಘ, ಖಾದಿ ವಸ್ತ್ರಾಲಯದವರು ಕೊಡಗಿನಲ್ಲಿ ಖಾದಿ ಮಾರಾಟ ಮಾಡಲು ಈ ಕೆಳಗಿನಂತೆ ಕಾರ್ಯಕ್ರಮವನ್ನು ರಚಿಸಿರುವರು ಅಲ್ಲಲ್ಲಿಯ ಕಾಂಗ್ರೆಸ್ ಹಿತೈಷಿಗಳು ಅವರಿಗೆ ತಕ್ಕ ಸಹಾಯ ನೀಡುವರಾಗಿ ನಂಬಲಾಗಿದೆ

26–1–39 ಗುರುವಾರ ಬೆಂಗಳೂರಿಂದ ಹೊರಟು ಪಿರಿಯಾಪಟ್ಟಣಕ್ಕೆ.

27–1–39, 28–1–39, 29–1–39 } ಪಿರಿಯಾಪಟ್ಟಣದಲ್ಲಿ ಖಾದೀ ಮಾರಾಟ.

30–1–39 ಪಿರಿಯಾಪಟ್ಟಣದಿಂದ ಹೊರಟು ಫ್ರೇಜರ್‌ಪೇಟೆ.

31–1–39 ಮಂಗಳವಾರ–ಫ್ರೇಜರ್‌ಪೇಟೆ ಸಂತೆಯಲ್ಲಿ ಖಾದೀ ಮಾರಾಟ.

1–2–39 ಬುಧವಾರ–ಫ್ರೇಜರ್‌ಪೇಟೆಯಿಂದ ಮಡಿಕೇರಿಗೆ.

2–2–39, 3–2–39 } ಮಡಿಕೇರಿ ಮೊಖಾಂ. ಶುಕ್ರವಾರ ಮಡಿಕೇರಿ ಸಂತೆಯಲ್ಲಿ ಖಾದೀ ಮಾರಾಟ.

4–2–39 ಶನಿವಾರ–ಸುಂಟಿಕೊಪ್ಪಕ್ಕೆ.

5–2–39 ಭಾನುವಾರ–ಸುಂಟಿಕೊಪ್ಪ ಸಂತೆಯಲ್ಲಿ ಖಾದೀ ಮಾರಾಟ.

6–2–39 ಸೋಮವಾರ–ವಾಪಾಸು ಮಡಿಕೇರಿಗೆ.

7–2–39 ಮಡಿಕೇರಿ ಮೊಖಾಂ.

8–2–39, 9–2–39 } ಮೂರ್ನಾಡು. ಗುರುವಾರ–ಸಂತೆಯಲ್ಲಿ ಖಾದೀ ಮಾರಾಟ.

10–2–39 ಶುಕ್ರವಾರ–ಶನಿವಾರಸಂತೆಗೆ.

11–2–39 ಶನಿವಾರ–ಸಂತೆಯಲ್ಲಿ ಖಾದೀ ಮಾರಾಟ.

12–2–39 ಭಾನುವಾರ–ಸೋಮವಾರಪೇಟೆಗೆ.

13–2–39 ಸೋಮವಾರ–ಸಂತೆಯಲ್ಲಿ ಖಾದೀ ಮಾರಾಟ.

14–2–39, 15–2–39, 16–2–39, 17–2–39 } ವೀರರಾಜೇಂದ್ರಪೇಟೆ.

18–2–39, 19–2–39 } ಗೋಣಿಕೊಪ್ಪಲು. ಭಾನುವಾರ–ಸಂತೆಯಲ್ಲಿ ಖಾದೀ ಮಾರಾಟ.

20–2–39, 21–2–39 } ಸೋಮವಾರ–ಹುದಿಕೇರಿ ಸಂತೆ. ಮಂಗಳವಾರ–ಮೊಖಾಂ.

22–2–39, 23–2–39, 24–2–39 } ವೀರರಾಜೇಂದ್ರಪೇಟೆ.

25–2–39 ಶನಿವಾರ–ಗೋಣಿಕೊಪ್ಪಲು.

26–2–39 ಭಾನುವಾರ–ಗೋಣಿಕೊಪ್ಪಲು ಸಂತೆಯಲ್ಲಿ ಖಾದೀ ಮಾರಾಟ.

27–2–39 ರಿಂದ 3–3–39 } ಮಡಿಕೇರಿ ಮೊಖಾಂ.

ಅಖಿಲ ಕೊಡಗು ಸಹಕಾರಿ ಪರಿಷತ್ತು.

ಅಖಿಲ ಕೊಡಗು 10 ನೇ ಸಹಕಾರಿ ಪರಿಷತ್ತು ವೀರರಾಜೇಂದ್ರಪೇಟೆ ಬೋರ್ಡ್ ಶಾಲೆಯಲ್ಲಿ ಅದಕ್ಕಾಗಿ ಹಾಕಿದ್ದ ಚಪ್ಪರವಡಿಯಲ್ಲು 1938 ನೇ ಇಸವಿ ಡಿಸೆಂಬರು ತಾರೀಕು 18 ನೇ ಆದಿತ್ಯವಾರ ಪೂರ್ವಾಹ್ನ 10 ಗಂಟೆಗೆ ಮೈಸೂರಿನ ವ್ಯವಸಾಯ ಇಲಾಖೆಯ ರಿಟೈರ್ಡ್ ಡೈರೆಕ್ಟರಾದ ಮತ್ತು ಕೊಡಗಿನ ವ್ಯವಸಾಯ ಮತ್ತು ಜಾನುವಾರುಗಳ ವಿಚಾರಣೆಯ ಸಲುವಾಗಿ ಸ್ಪೆಷಿಯಲ್ ಆಫೀಸರಾಗಿ ಬಂದ ಶ್ರೀಮಾನ್ ಎ. ಕೆ. ಯಜ್ಞನಾರಾಯಣ ಅಯ್ಯರ್, ಯಂ ಎ ಡಿಪ್ಲೊಮ, ಎಗ್ರಿಕಲ್ಚರ್, (ಕೇಂಬ್ರಿಜ್) ಎನ್ ಡಿ. ಡಿ (ಇಂಗ್ಲೆಂಡ್) ರವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದ ನಡವಳಿಕೆಗಳು

ಕೊಡಗಿನ ಎಲ್ಲಾ ಸಹಕಾರಿ ಸಂಘಗಳ ಪ್ರತಿನಿಧಿಗಳೂ ಅನೇಕ ಪ್ರೇಕ್ಷಕರೂ ಮತ್ತು ಈ ಕೆಳಗಿನ ಆಫೀಸರುಗಳೂ, ಮಹನೀಯರೂ, ಮಹಿಳೆಯರು ಹಾಜರಿದ್ದರು.

1 ದಿವಾನ್ ಬಹದೂರ್ ಕೆ ಚಂಗಪ್ಪ ಬಿ. ಎ. ಕೊಡಗಿನ ರಿಟೈರ್ಡ್ ಕಮಿಶನರವರು.

2 ಮೆ. ಕೆ ಜೆ ಚಂಗಪ್ಪ ಸಹಕಾರಿ ಸಂಘಗಳ ರಿಜಿಸ್ಟ್ರಾರವರು

3 ಬಿ. ಯಸ್ ಕುಶಾಲಪ್ಪ ಬಿ ಎ ಇ ಇ ಶಾಲಾ ಡೆಪ್ಯುಟಿ ಇನ್ಸ್ಪೆಕ್ಟರವರು.

4. ಯನ್ ಸಿ ಸುಬ್ಬಯ್ಯ ಬಿ ಎ. ದಕ್ಷಿಣ ಕೊಡಗು ಸುಭೇದಾರರವರು

ಅಲ್ಲದೆ ಇತರ ಪ್ರೇಕ್ಷಕರಿಂದ ಕೂಡಿ ಸುಮಾರು 1000 ಜನರು ಸೇರಿದ್ದರು.

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮು. ಐ ಪಿ ಕಾರ್ಯಪ್ಪ ಯಂ. ಯಲ್ ಸಿ. ಯವರು ದಿವಾನ್ ಬಹದ್ದೂರ್ ಕೆ ಚಂಗಪ್ಪ ಬಿ. ಎ ಯವರು ಈ ಸಮ್ಮೇಳನವನ್ನು ತೆರೆಯಲು ಒಪ್ಪಿಕೊಂಡದ್ದಕ್ಕೆ ತಮ್ಮ ತುಂಬ ಕೃತಜ್ಞತೆಯನ್ನು ಸೂಚಿಸಿ ಮತ್ತು ಅವರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟ ನಂತರ ಅವರನ್ನು ಸಮ್ಮೇಳನವನ್ನು ತೆರೆಯಬೇಕೆಂದು ಕೇಳಿಕೊಂಡರು

ಅದರಂತೆ ದಿವಾನ್ ಬಹದ್ದೂರ್ ಕೆ. ಚಂಗಪ್ಪನವರು ಸದರಿ ಸ್ಥಾನವನ್ನು ವಹಿಸಿ, ಅವರು ತನಗೆ ಈ ದಿನದ ಸಮ್ಮೇಳನವನ್ನು ತೆರೆಯಲು ಕೊಟ್ಟ ಸುಸಂದರ್ಭಕ್ಕೆ ತುಂಬ ವಂದಿಸಿ, ತಮ್ಮ ಸ್ವಾರಸ್ಯವಾದ ಭಾಷಣವನ್ನಿತ್ತು ಸಮ್ಮೇಳನವನ್ನು ತೆರೆದರು.

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮು. ಐ ಪಿ. ಕಾರ್ಯಪ್ಪನವರು ಮು ಎ. ಕೆ. ಯಜ್ಞನಾರಾಯಣ ಐಯ್ಯರ್‌ರವರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟು ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡರು.

ಅಧ್ಯಕ್ಷಪದವಿಗೆ ಚುನಾಯಿತರಾದ ಮು. ಎ. ಕೆ. ಯಜ್ಞನಾರಾಯಣ ಐಯ್ಯರ್‌ರವರು ಅವರಿಗೆ ಈ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಕೊಟ್ಟ ಸುಸಂದರ್ಭಕ್ಕೆ ಸಭಿಕರಿಗೆ ತುಂಬ ವಂದಿಸಿ ಸದರಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ತಮ್ಮ ಅಮೋಘವಾದ ಭಾಷಣವನ್ನಿತ್ತರು ಇವರ ಭಾಷಣವನ್ನು ಈ ಮೊದಲೇ ಇದೇ ಪತ್ರಿಕೆಯಲ್ಲಿ ಪಬ್ಲಿಷ್ ಮಾಡಲಾಗಿತ್ತು

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮು. ಐ. ಪಿ ಕಾರ್ಯಪ್ಪನವರು ಅನೇಕ ಸಹಕಾರಿ ಸಂಸ್ಥೆಗಳಿಂದಲೂ ಇತರ ಮಹನೀಯರುಗಳಿಂದಲೂ ಬಂದ ಸಂದೇಶ ಪತ್ರಗಳನ್ನೂ, ತಾರೀಕು 28-2-37 ರಲ್ಲಿ ನಡೆದ ಕೊಡಗು ಪ್ರಾಂತೀಕ 9 ನೇ ಸಮ್ಮೇಳನದ ನಡವಳಿಕೆಗಳನ್ನೂ ಓದಿದರು

ಕಳೆದ 9 ನೇ ಸಮ್ಮೇಳನದ ಠರಾವುಗಳ ಮೇಲೆ ಸರಕಾರದವರು ಯಾವ ಹುಕುಂ ಮಾಡಿರುವುದಿಲ್ಲ ಆದರೆ ಕೆಲವು ಠರಾವುಗಳನ್ನು ಕಾರ್ಯತಃ ಜಾರಿಗೆ ತಂದಿರುವರು ಎಂದು ಸ್ವಾಗತಾಧ್ಯಕ್ಷರು ಸಭೆ ಮುಂದೆ ಹೇಳಿದರು

ಸಮ್ಮೇಳನದ ಅಧ್ಯಕ್ಷರು ಹಾಗೆ ಪಾಸುಮಾಡಿದ ಠರಾವುಗಳ ಮೇಲೆ ಏನು ಆರ್ಡರು ಪಾಸುಮಾಡಿರುವರೆಂಬುದನ್ನು ಆದಷ್ಟು ಬೇಗನೆ ತಿಳಿದುಕೊಂಡು ಸದರಿ ಹುಕುಂನ್ನು ಮುಂದಿನ ಸಮ್ಮೇಳನದ ಸಭೆಯ ಮುಂದೆ ಇಡಬೇಕೆಂದು ಸೂಚಿಸಿದ ನಂತರ ಮು ಕೆ. ಸಿ ಕರುಂಬಯ್ಯ ಯಂ ಯಲ್ ಸಿ ಯವರು ಕಳೆದ ಸಮ್ಮೇಳನದ ನಡವಳಿಕೆಯನ್ನು ಅಂಗೀಕಾರ ಮಾಡಬೇಕೆಂದು ಸೂಚಿಸಿದರು ಸರ್ವರು ಸಮ್ಮತಿಸಿದರು.

ನಾನ ಕ್ರೆಡಿಟ್ ಸೊಸೈಟಿ ಇನ್ಸ್ಪೆಕ್ಟರಾದ ಮು. ಸಿ ಯಂ. ಚಂಗಪ್ಪನವರು, ಸ್ವರ್ಗಸ್ಥ ... ರಿಜಿಸ್ಟ್ರಾರ್ ಮು. ಕೆ ಯನ್ ... ಮತ್ತು ರಾವ್ ಬಹದ್ದೂರ್ ... ಚಂಗಪ್ಪನವರ ... ಕಲ್ಯಾಣಕ್ಕಾಗಿ ಈ ಸಮ್ಮೇಳನದಲ್ಲಿ ಸರಿಯಾದ ... ಸೂಚನೆಗಳನ್ನು ಠರಾವು ... ಬೇಕೆಂದು ಸೂಚಿಸಿದ್ದಲ್ಲದೆ ಅವರು ಪ್ರಜೆಯ ಕಲ್ಯಾಣಕ್ಕಾಗಿ ಮಾಡಿದ ಒಳ್ಳೆ ಕಾರ್ಯಗಳನ್ನು ಸ್ಮರಿಸಿ ಅವರುಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಠರಾವು ತಂದರು ಮು ಪಿ ಸಿ ಉತ್ತಯ್ಯನವರು ದಿವಂಗತರಾದ ರಾವ್ ಬಹದ್ದೂರ್ ಎ ಬಿ. ಚಂಗಪ್ಪನವರು ದೇಶಾಭಿವೃದ್ಧಿಗಾಗಿಯೂ, ಸಹಕಾರಿ ಚಳವಳಿಕ್ಕಾಗಿಯೂ ಮಾಡಿದ ಒಳ್ಳೆ ಕೆಲಸಗಳನ್ನು ವಿವರಿಸಿದ್ದಲ್ಲದೆ ಮು. ಕೆ. ಯನ್. ಸುಬ್ಬಾಯರವರ ಸ್ತೋತ್ರಾರ್ಹವಾದ ಕೆಲಸವನ್ನು ವಿವರಿಸಿ ಹೇಳಿ ಅವರುಗಳ ಆತ್ಮಕ್ಕೆ ದೇವರು ಶಾಂತಿಯನ್ನೀಯಲೆಂದೂ, ಅದಕ್ಕಾಗಿ ಎಲ್ಲರೂ ಎದ್ದು ನಿಂತು ಸಂತಾಪ ಸೂಚಕದ ಠರಾವನ್ನು ಪಾಸುಮಾಡಿದರು

ಠರಾವುಗಳು.

1 ಸಹಕಾರಿ ಸಂಘಗಳ ರಿಜರ್ವ್ ಫಂಡನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಮಿತಿಯಿಲ್ಲದ ಅವಧಿಯ ಠೇವಣಾತಿಯಾಗಿಡುವುದು ಆರ್ಥಿಕ ವ್ಯವಹಾರದ ಮೂಲ ತತ್ವಗಳಿಗೆ ವಿರೋಧವಾಗಿಯೂ ಮತ್ತು ಅಪಾಯಕರವೂ ಆಗಿರುವುದರಿಂದ ಸಂಘಗಳು ಸುರಕ್ಷಿತವಾಗಿರಬೇಕಾದರೆ ಈ ವ್ಯವಸ್ಥೆಯನ್ನು ಬಿಟ್ಟುಬಿಡಬೇಕೆಂದು ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸೂಚಕರು—ಮೆ ಆರ್. ಎಸ್. ಸಂಜೀವರಾವ್‌ರವರು. ಅನುಮೋದಕರು—ಮೆ ಉದಿಯಂಡ ಮಾಚಯ್ಯನವರು.

ಮೆ ಪಿ. ಜಿ, ಮುದ್ದಮ್ಮಯ್ಯನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಮೆ. ಗಳಂದ ಕೆ ಸಿ ಕರುಂಬಯ್ಯನವರು, ನಾಯಡ ಬಿಣ್ಣಪ್ಪನವರು ಮತ್ತು ಪಿ ಐ ಬೆಳ್ಯಪ್ಪನವರು ಠರಾವಿಗೆ ವಿರೋಧವಾಗಿ ಮಾತಾಡಿದರು

ಠರಾವು ತಂದವರು ಮಿತಿ ಇಲ್ಲದ ಅವಧಿಗೆ ಇಟ್ಟಿರುವ ರಿಜರ್ವ್ ಫಂಡನ್ನು ರಿಜಿಸ್ಟ್ರಾರ್ ಸಾಹೇಬರು ಹುಕುಂ ಮಾಡುವಾಗ್ಗೆ ಅದನ್ನು ವಾಪಸು ಕೊಡುವ ಭರವಸೆ ಕೊಟ್ಟರೆ ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆಂದು ಸೂಚಿಸಿದರು ಈಗ ಜಾರಿಯಲ್ಲಿರುವುದು ಹಾಗೆಯೇ ಎಂದೂ ರಿಜಿಸ್ಟ್ರಾರವರು ಹುಕುಂ ಮಾಡಿದರೆ ಆ ಹಣವನ್ನು ವಾಪಸು ಮಾಡುವುದರಲ್ಲಿ ಸಂಶಯವಿಲ್ಲವೆಂತಲೂ ಬ್ಯಾಂಕಿನ ಪ್ರೆಸಿಡೆಂಟರು ಹೇಳಿದ ಮೇಲೆ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು

2 ಅಮೀನರುಗಳಿಗೆ ಮತ್ತು ಫಾರೆಸ್ಟ್ ಗಾರ್ಡುಗಳಿಗೆ ಸರಕಾರದವರು ಎಲೋವೆನ್ಸ್ ಕೊಡಬೇಕೇ ಹೊರತು ಸಂಘದಿಂದ ಮಂಜೂರಿನ ಪರವಾಗಿ ಭತ್ಯ ಕೊಡಿಸುವುದನ್ನು ನಿಲ್ಲಿಸಬೇಕೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ

ಸೂಚಕರು— ಮು ಪಟ್ಟ್ಯಾಡ್ ಬೊಡನರವರು. ಅನುಮೋದಕರು—ಮು. ಬಿದ್ದಂಡ ಮಾದಯ್ಯನವರು.

ಮು ಗಳಂದ ಅಲ್ಲಡಿಚಂಡ ಬೋಪಯ್ಯನವರು ಮತ್ತು ಕೇಳಿಯಂಡ ಕುಟ್ಟಪ್ಪನವರು ಠರಾವಿಗೆ ಪರವಾಗಿ ಮಾತಾಡಿದರು

ಸರ್ಕಾರದವರು ಅಮೀನರುಗಳಿಗೂ ಮತ್ತು ಫಾರೆಸ್ಟ್ ಗಾರ್ಡುಗಳಿಗೂ ಸಂಘಗಳಿಂದ ಭತ್ಯ ಕೊಡಿಸುವದನ್ನು ರದ್ದು ಮಾಡಬೇಕೆಂದು ಸೂಚಕರು ಠರಾವನ್ನು ತಿದ್ದುಪಡಿ ಮಾಡಿದರು

ಮು. ಕೆ ಸಿ. ಕರುಂಬಯ್ಯನವರು ಅನುಮೋದಿಸಿದರು. ಸರ್ವ ಸಮ್ಮತದಿಂದ ಈ ಠರಾವು ಪಾಸಾಯಿತು.

3. ಆಡಿಟ್ ಮಾಡಲು ದರಬೇತು ಹೊಂದದ ಸುಪರ್‌ವೈಜರುಗಳು ಬ್ಯಾಂಕಿನಲ್ಲಿರುವುದರಿಂದ ಬ್ಯಾಂಕಿನ ಬೈಲಾಕ್ಕೆ ಆಡಿಟ್ ಯಾಸಿಯನ್ನಿನ ಬೈಲಾದಲ್ಲಿ ಅವಶ್ಯವಿರುವ ಭಾಗಗಳನ್ನು ಸೇರಿಸಿ ಇನ್ನು ಮುಂದೆ ಮಿತ ಜವಾಬ್ದಾರಿ ಸಂಘಗಳ ಆಡಿಟನ್ನು ಬ್ಯಾಂಕೇ ನಡಿಸುವಂತೆ ಏರ್ಪಾಡು ಮಾಡಬೇಕೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸೂಚಕರು—ಮೆ ಕಾಕಮಾಡ ಗಣಪತಿಯವರು. ಅನುಮೋದಕರು—ಯಂ. ಯಂ. ಸಿದ್ದೀಕ್‌ರವರು.

ಸರ್ಕಾರದವರೇ ಆಡಿಟ್ ಮಾಡಬೇಕೆಂದೂ, ಆದರೆ ಆಡಿಟ್ ಫೀಜನ್ನು ಸಂಘದಿಂದ ವಸೂಲು ಮಾಡಬಾರದೆಂದೂ ಸರ್ಕಾರವನ್ನು ಕೇಳಿಕೊಳ್ಳುವಂತೆ ಸರ್ವ ಸಮ್ಮತದಿಂದ ಪಾಸಾಯಿತು

4 ಈಗ ಸಹಕಾರ ಸಂಘಗಳು ಸರಕಾರಕ್ಕೆ ಕೊಡುವ ಸ್ಟಾಂಪು ಚಾರ್ಜು ಅಂದರೆ ರಿಜಿಸ್ಟ್ರೇಷನ್ ಫೀಜು, ದಾವಕ್ಕೆ ಸ್ಟಾಂಪು ಖರ್ಚು ಮತ್ತು ಅನುಲ್ಲಾರಿ ಸ್ಟಾಂಪು ಖರ್ಚುಗಳನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು—ಮೆ. ಕಾಕಮಾಡ ಗಣಪತಿಯವರು. ಅನುಮೋದಕರು—ಮೆ ಯಂ ಯಂ ಸಿದ್ದೀಕ್‌ರವರು. ಸರ್ವಸಮ್ಮತದಿಂದ ಠರಾವು ಪಾಸಾಯಿತು.

5. ಕೊಡಗಿನ ಗ್ರಾಮಗಳಲ್ಲಿ ಗ್ರಾಮ ಮುಂದಾಳುಗಳನ್ನು (Rural Guides) ತರಬೇತು ಮಾಡಲು ಕೊಡಗಿನಲ್ಲಿ ಒಂದು ಶಾಲೆಯನ್ನು ತೆರೆಯಬೇಕಾಗಿಯೂ ಮತ್ತು ಇದಕ್ಕಾಗಿ ಗ್ರಾಮಾಭಿವೃದ್ಧಿ ಫಂಡಿನಿಂದ ಧನ ಸಹಾಯ ಕೊಡಬೇಕೆಂದೂ ಈ ಸಮ್ಮೇಳನವು ಸರ್ಕಾರವನ್ನು ಕೇಳಿಕೊಳ್ಳುತ್ತದೆ

ಸೂಚಕರು—ಮೆ. ಚೆಕ್ಕೆರ ಪೊನ್ನಪ್ಪನವರು. ಅನುಮೋದಕರು—ಮೆ. ಪಿ ಸಿ. ಮಾದಯ್ಯನವರು ಠರಾವು ಪಾಸಾಯಿತು.

ಇಷ್ಟರಲ್ಲಿ ಊಟಕ್ಕಾಗಿ ಸಭೆಯು ಒಡರಾವನ್ನಾಗಿ 3 ಗಂಟೆಗೆ ಪುನಹ ಸಭೆ ಸೇರಿ ಈ ಕೆಳಗಿನ ಠರಾವುಗಳನ್ನು ತೆಗೆದುಕೊಂಡರು

ಸಭೆ ಸೇರಿದ ಒಡನೆಯೇ ಕಳೆದ ಸಮ್ಮೇಳನದಲ್ಲಿ ಸೂಚಿಸಿದಂತೆ ಅತ್ಯುತ್ತಮವಾಗಿ ಕೆಲಸಮಾಡಿದ ಸಂಘಗಳಿಗೂ ಮತ್ತು ಅತ್ಯುತ್ತಮ ಕಾರ್ಯದರ್ಶಿಗಳಿಗೂ, ಈ ಸಮ್ಮೇಳನದಲ್ಲಿ ಪ್ರದರ್ಶಿಸಿದ ಉತ್ತಮವಾದ ವಸ್ತುಗಳಿಗೂ ಬಹುಮಾನಗಳನ್ನು ಅಧ್ಯಕ್ಷರು ಹಂಚಿ 1937-38ರಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿದ ಸಂಘಗಳ ಮತ್ತು ಕಾರ್ಯದರ್ಶಿಗಳ ಹೆಸರುಗಳನ್ನು ಬರುವ ಸಮ್ಮೇಳನದಲ್ಲಿ ಬಹುಮಾನ ಕೊಡಲು ಓದಲಾಯಿತು.

6 (a) ಸರ್ಕಾರವು ಕೆಲವು ಕಾಲದ ಹಿಂದ ಹುಕುಂ ಕೊಟ್ಟ ನೋರ ಖರಾರುಗಳನ್ನು ರಿಜಿಸ್ಟರು ಮಾಡುವಾಗ ಅರ್ಧ ರಿಜಿಸ್ಟ್ರೇಷನ್ ಫೀಜು ಮತ್ತು ಸ್ಟಾಂಪು ಡ್ಯೂಟಿ ತೆಗೆದುಕೊಳ್ಳುವುದನ್ನು ನಿಲ್ಲಿಸಿ ಕೊಡಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು—ಮು. ಕೆ. ಕೆ. ಬೆಳ್ಯಪ್ಪನವರು.

ಈ ಠರಾವು ಮೊದಲೇ ಪಾಸಾದುದರಿಂದ ಅದನ್ನು ಪುನಹ ಚರ್ಚಿಸುವುದು ಅವಶ್ಯವಿಲ್ಲವೆಂದು ಸೂಚಕರು ವಾಪಸು ತೆಗೆದುಕೊಂಡರು.

(b) ಪ್ರಾಥಮಿಕ ಗ್ರಾಮ ಸಂಘಗಳ ಬೈಲಾದಲ್ಲಿ ನ್ಯೂನ್ಯತೆಗಳಿರುವುದರಿಂದದೇಶದ ಈಗಿನ ಸ್ಥಿತಿಗತಿಗಳಿಗನುಸಾರವಾಗಿ ತಿದ್ದುಪಡಿ ಮಾಡಿ ಮಾದರಿ ಬೈಲಾವನ್ನು

ತಯಾರಿಸಬೇಕೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸೂಚಕರು-ಮೆ. ಕೆ. ಕೆ. ಬೆಳ್ಯಪ್ಪನವರು ಅನುಮೋದಕರು-ಮೆ. ನಾಯಡ ಚೆಣ್ಣಪ್ಪನವರು.

ಸಹಕಾರಿ ಸಂಘಗಳ ರಿಜಸ್ಟ್ರಾರವರು ಸದರಿ ಮಾದರಿ ಬೈಲಾವನ್ನು ರಚಿಸಿಕೊಡಬೇಕೆಂದು ಅವರನ್ನು ಸರ್ವಸಮ್ಮತದಿಂದ ಕೇಳಿಕೊಳ್ಳಲಾಯಿತು.

6. (c) ತಿಂಗಳ ಸಂಬಳ ಪಡೆದು ಈಗ ಸೆಕ್ರೆಟರಿಗಳೆಂದು ಕರೆಯಲ್ಪಡುವವರನ್ನು ಇನ್ನು ಮುಂದೆ ಸಂಘಗಳ ಗುಮಾಸ್ತರೆಂದು ಕರೆಯಬೇಕೆಂದು ಎಲ್ಲ ಸಂಘಗಳಿಗೆ ಇಸ್ತಿಹಾರು ಕಳುಹಿಸಬೇಕೆಂದು ಈ ಸಮ್ಮೇಳನವು ಅಭಿಪ್ರಾಯ ಪಡುತ್ತದೆ

ಸೂಚಕರು-ಮೆ. ಕೆ. ಕೆ. ಬೆಳ್ಯಪ್ಪನವರು

ಸಹಕಾರಿ ಸಂಘಗಳ ರಿಜಸ್ಟ್ರಾರವರು ಸದರಿ ವಿಷಯವು ಬೈಲಾದಲ್ಲಿ ಸರಿಯಾಗಿದೆ ಎಂದು ತಪಶೀಲು ವಿವರಿಸಿದರಿಂದ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು

7. ರೆವಿನ್ಯೂ ಇಲಾಖೆಯವರು ಸಂಘಕ್ಕೆ ಗಿರ್ವಿಯಾದ ಸೊತ್ತಿಗೆ ಮಾತ್ರ ಕಂದಾಯವನ್ನು ತೆಗೆದುಕೊಳ್ಳದೆ, ಬಾಕಿದಾರನ ಕಂದಾಯವೆಲ್ಲವನ್ನು ಸಂಘದಿಂದಲೇ ವಸೂಲ್ಮಾಡುತ್ತಿರುವುದು ನ್ಯಾಯವಲ್ಲವಾದುದರಿಂದ ರೆವಿನ್ಯೂ ಇಲಾಖೆಯವರು ಸಂಘಗಳಿಗೆ ಗಿರ್ವಿಯಾದ ಸೊತ್ತುಗಳ ಕಂದಾಯವನ್ನು ಮಾತ್ರ ಸಂಘಗಳಿಂದ ಹೊಂದಿಕೊಳ್ಳುವಂತೆ ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ

ಸೂಚಕರು-ಮೆ. ಬಿದರೂರು ಪೂವಯ್ಯನವರು, ಅನುಮೋದಕರು-ಬಿ ಯಂ ಸುಬ್ಬಯ್ಯನವರು, ಸರ್ವಸಮ್ಮತದಿಂದ ಪಾಸಾಯಿತು

8 ಕೊಡಗು ದೇಶದಲ್ಲಿ ಸಹಕಾರಿ ಸಂಘಗಳ ಏಳಿಗೆಯ ವಿಷಯ ತನಿಕೆ ನಡೆಸಲು ಬಂದ ರಾವ್ ಬಹದ್ದೂರ್ ಯಂ ಗಿರಿಯಪ್ಪನವರ ಸಲಹೆ ಮೇರೆ ಸಹಕಾರಿ ಇನ್ಸ್ಪೆಕ್ಟರುಗಳ ಸಂಖ್ಯೆಗನ್ನು ಏರಿಸುವುದಕ್ಕಾಗಿ ಸಂಘಗಳ ಮೇಲೆ ಆಡಿಟ್ ಫೀಜು ಹಾಕಲಾಗಿದೆ. ಆದರೆ ಈಗ ಇನ್ಸ್ಪೆಕ್ಟರುಗಳ ಸಂಖ್ಯೆಯನ್ನು ಕಡಿಮೆ ಮಾಡುವುದಾಗಿ ವರ್ತಮಾನವಿರುವುದರಿಂದ ಸದರಿ ಆಡಿಟ್ ಫೀಜನ್ನು ರದ್ದು ಮಾಡುವಂತೆ ಸರಕಾರವನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು-ಮೆ. ಪಿ. ಜಿ. ಐಯ್ಯಪ್ಪ ಬಿ. ಎ. ಬಿ ಯಲ್ ರವರು. ಠರಾವನ್ನು ಈ ಮೊದಲೇ ಚರ್ಚಿಸಿರುವುದರಿಂದ ವಾಪಾಸು ತೆಗೆಯಲಾಯಿತು.

9. ಬಿನ್ ಸರಕಾರಿ ಸಹಕಾರಿ ಉದ್ಯೋಗಸ್ಥರನ್ನು ಹೆಚ್ಚಿಸುವುದಕ್ಕಾಗಿ ಈಗ ಸರಕಾರದಿಂದ ಸೆಂಟ್ರಲ್ ಬ್ಯಾಂಕಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆ ರೂಪಾಯಿ 1000 ವನ್ನು ಕಡಿಮೆ ಪಕ್ಷ 3000 ಕ್ಕೆ ಏರಿಸಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು-ಮೆ. ಪಿ. ಜಿ ಐಯ್ಯಪ್ಪನವರು, ಅನುಮೋದಕರು-ಮೆ. ಐ. ಪಿ. ಕಾರ್ಯಪ್ಪನವರು, ಸರ್ವಸಮ್ಮತದಿಂದ ಪಾಸಾಯಿತು.

ರಾಜಕೋಟೆ ಸಂಸ್ಥಾನ.

ಸುಸಂಘಟಿತ ಪ್ರಜೆಗಳು ಎಂಥ ಬಲಾಢ್ಯರನ್ನೂ ಮಣಿಸಬಲ್ಲರು.

ಲೇಖಕ:—ಮಹಾತ್ಮ ಗಾಂಧಿ.

ರಾಜಕೋಟೆ ಸಂಸ್ಥಾನದ ಸತ್ಯಾಗ್ರಹವು ಹುರುಪಿನಿಂದ ಪ್ರಾರಂಭವಾಗಿ ಜಯಪ್ರದವಾಗಿ ಕೊನೆಗಂಡಿತು. ಆದರೆ ಆ ಸತ್ಯಾಗ್ರಹದ ಬಗ್ಗೆ ಈ ವರೆಗೆ ನಾನೇನನ್ನೂ ಬರೆಯಲಿಲ್ಲ. ಇದರಿಂದ ಅದರ ಬಗ್ಗೆ ನನಗೆ ಅಷ್ಟೊಂದು ಉತ್ಸಾಹವಿಲ್ಲವೆಂದೂ ಯಾರೂ ಭಾವಿಸಕೂಡದು, ರಾಜಕೋಟೆಯೊಡನೆ ನನಗೆ ಚಿರಸಂಬಂಧವಿರುವದು, ನಮ್ಮ ತಂದೆಯವರು ರಾಜಕೋಟೆಯ ದಿವಾನರಿದ್ದದ್ದೇ ಅಲ್ಲ, ಠಾಕೂರ ಸಾಹೇಬರು ನನ್ನನ್ನು ತಂದೆಯಂತೆಯೇ ಭಾವಿಸುತ್ತಿದ್ದರು. ಸರದಾರ ವಲ್ಲಭಬಾಯಿಯವರು ಈ ಸತ್ಯಾಗ್ರಹದ ಜೀವತಂತುವಾಗಿದ್ದದರಿಂದ ನಾನು ಮೌನವನ್ನು ತಳೆದಿದ್ದೆನು. ಅವರನ್ನು ಪ್ರಶಂಸಿಸುವದು, ಇಲ್ಲವೇ ಅವರ ಕಾರ್ಯಕಲಾಪಗಳನ್ನು ಹೊಗಳುವದೆಂದರೆ ಆತ್ಮಶ್ಲಾಘನೀಯ ಮಾಡಿಕೊಂಡಂತೆಯೇ ಸರಿ.

ಜನತೆಯು ಸಾಕಷ್ಟು ಸಹಕಾರ ಸಹಾಯಗಳನ್ನು ನೀಡಿದರೆ ಅಹಿಂಸಾತ್ಮಕ ಅಸಹಕಾರವು ಯಾವ ಬಗೆಯ ಯಶಸ್ಸನ್ನೂ ಪ್ರಾಪ್ತಮಾಡಿಕೊಡಬಹುದೆಂದು ಈ ಹೋರಾಟದಿಂದ ಪ್ರಕಟವಾಯಿತು. ರಾಜಕೋಟೆ ಪ್ರಜೆಗಳಲ್ಲಿ ಇಷ್ಟೊಂದು ಮನೋಧೈರ್ಯ, ಸ್ವಾರ್ಥತ್ಯಾಗ ಸಿದ್ಧತೆ ಇದ್ದಿತೆಂಬುದು ನನಗೆ ತಿಳಿದಿರಲಿಲ್ಲ. ತಮ್ಮ ಅರಸರಿಗಿಂತ ತಾವು ಶ್ರೇಷ್ಠರಿರುವೆವೆಂಬುದನ್ನು ಪ್ರಜೆಗಳು ಸಿದ್ಧಮಾಡಿ ತೋರಿಸಿದರಲ್ಲದೆ ಐಕ್ಯದಿಂದ ಅಹಿಂಸಾತ್ಮಕ ಹೋರಾಟ ನಡೆಸಿದ ಜನತೆಯ ಮುಂದೆ ಇಂಗ್ಲಿಷ್ ದಿವಾನರಂತವರ ಶಕ್ತಿಯೂ ಕುಂಠಿತವಾಗುವದೆಂಬುದನ್ನು ವಿಶದಪಡಿಸಿದರು.

ಠಾಕೂರ ಸಾಹೇಬರು ಅಧಿಕಾರ ಸೂತ್ರಗಳನ್ನೆಲ್ಲ ತಾವೇ ವಹಿಸಿ ಇಂಗ್ಲಿಷ್ ದಿವಾನರ ಸಲಹೆಗಳನ್ನು ತಿರಸ್ಕರಿಸಿ, ರೆಸಿಡೆಂಟರ ಮನದಿಚ್ಛೆಯನ್ನು ತೃಣೀಕರಿಸಿ ಜನತೆಯ ಕೂಗಿಗೆ ಕಿವಿಯಿಟ್ಟು ಕಾರ್ಯಸಾಧಿಸಿದುದಕ್ಕಾಗಿ ಧನ್ಯವಾದಕ್ಕೆ ಪಾತ್ರರಿರುವರು.

ರೆಸಿಡೆಂಟರ ಬೆಂಬಲವಿತ್ತೆಂದು ತಿಳಿದು ದಿವಾನರಾದ ಸರ್ ಪೆಟ್ರಿಕರು ಠಾಕೂರ ಸಾಹೇಬರ ಸೇವಕರು ತಾವೆಂಬುದನ್ನು ಮರೆತು ತಾವೇ ಯಜಮಾನರಂತೆ ವರ್ತಿಸಿದರು. ಸಾಮ್ರಾಜ್ಯ ಸರ್ಕಾರದ ಜನಾಂಗದವರೆಂದು ಭಾವಿಸಿ ತಮ್ಮನ್ನು ನೇಮಿಸಲು ಮಧ್ಯವರ್ತಿ ಸರಕಾರದ ಅಪ್ಪಣೆ [illegible] ಕಾರ್ಯಕಲಾಪಗಳನ್ನು ತಮ್ಮಿಚ್ಛೆಯಂತೆ ನಡೆಸಿದರು. ನನ್ನೆಡೆಗೆ ಬಂದ ಕಾಗದ ಪತ್ರಗಳ ಮೇಲಿಂದ ಈ ರೀತಿ ನಾನು ಹೇಳಬಲ್ಲೆನು. ಅವರು ಜಾಣತನದಿಂದ ತಾವಾಗಿಯೇ ಸ್ವದೇಶದ ಮೇಲೆ ಹೋದರೋ ಇಲ್ಲವೆ ಯಾವ ಪರಿಸ್ಥಿತಿಯುಂಟಾಗಿದೆಯೋ ಎಂಬುದು ಈ ಲೇಖ ಬರೆವಾಗ ನನಗೆ ತಿಳಿದಿರಲಿಲ್ಲ. ಯೂರೋಪಿಯನ್ನರನ್ನು ತಮ್ಮ ದಿವಾನರನ್ನಾಗಿ ನೇಮಿಸಿಕೊಳ್ಳುವದು ಜಾಣತನದ್ದಾಗುವದೋ ಎಂಬ ಬಗ್ಗೆ ನರಪತಿಗಳು ಗಂಭೀರ ರೀತಿಯಿಂದ ವಿಚಾರಮಾಡುತ್ತಿರುವರೆಂದು ನನ್ನಲ್ಲಿದ್ದ ಕಾಗದ ಪತ್ರಗಳಿಂದ ಗೊತ್ತಾಗುತ್ತದೆ. ತಮ್ಮ ಕರಾರು ಸಂಬಂಧವಾದವುಗಳು ಯೋಗ್ಯರೀತಿಯಿಂದ ಪಾಲಿಸಲ್ಪಡುವವೋ, ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಮಧ್ಯವರ್ತಿ ಸರಕಾರದವರು ರೆಸಿಡೆಂಟರನ್ನವಲಂಬಿಸಬೇಕಾಗುತ್ತದೆ.

ತಾವು ಸನ್ಮಾರ್ಗಾವಲಂಬಿಗಳಾಗಿದ್ದರೆ ಮತ್ತು ಜನತೆಯ ಬೆಂಬಲವು ಅವರಿಗಿದ್ದರೆ ರೆಸಿಡೆಂಟರ ಬಗ್ಗೆ ಅವರು ಯಾವ ರೀತಿಯಿಂದಲೂ ಭಯಭೀತರಾಗುವ ಕಾರಣವಿಲ್ಲೆಂಬುದನ್ನು ರಾಜಕೋಟೆಯ ಘಟನೆಗಳ ಮೇಲಿಂದ ಎಲ್ಲ ಸಂಸ್ಥಾನಾಧಿಪತಿಗಳಿಗೂ ಮನವರಿಕೆಯಾಗಬಹುದಾಗಿದೆ. ಸಾಮ್ರಾಜ್ಯಸತ್ತೆಯು ಸಿಮ್ಲಾದಲ್ಲಿರುವದಿಲ್ಲ, ಇಲ್ಲವೆ ಇಂಗ್ಲಂಡದಲ್ಲಿ ನೆಲಸುವದಿಲ್ಲ. ಅವರ ತಮ್ಮ ಪ್ರಜೆಗಳಲ್ಲಿಯೇ ಆ ಅಧಿಕಾರವಿದೆಂಬುದಾಗಿ ಅವರು ತಿಳಿಯಬೇಕು. ಅಹಿಂಸಾತ್ಮಕ ಬಲವನ್ನವಲಂಬಿಸುವ ಎಚ್ಚತ್ತ ಪ್ರಜೆಗಳು ಬೇಕಾದಂತಹ ಶಸ್ತ್ರಸನ್ನದ್ಧ ಸರಕಾರದಿಂದ ಸ್ವತಂತ್ರರಿರುವರು. ರಾಜಕೋಟೆ ಪ್ರಜೆಗಳು ತೋರ್ಪಡಿಸಿದ ಧೈರ್ಯ, ಸ್ವಾರ್ಥತ್ಯಾಗಗಳ ಐಕ್ಯ ಸಂಘಟನೆಗಳನ್ನು ಉಳಿದ ಪ್ರಜೆಗಳೂ ವ್ಯಕ್ತಪಡಿಸಿದರೆ ರಾಜಕೋಟೆ ಸಂಸ್ಥಾನವು ಮೂರು ತಿಂಗಳಲ್ಲಿ ಕೊಟ್ಟಿದ್ದನ್ನು ಉಳಿದ ಸಂಸ್ಥಾನ ಸರಕಾರಗಳು ಕೊಡಬಲ್ಲವೆಂದು ನಾನು ಹೇಳುವೆ.

ಬೇಕಾದಂತಹ ಅಡ್ಡಿ ಅಡಚಣಿಗಳು ಬಂದರೂ ಅವುಗಳನ್ನೆದುರಿಸಲು ಶಕ್ತವಾಗುವಂತಹ ಅಹಿಂಸಾ ಗುಣವನ್ನು ತೋರ್ಪಡಿಸಿದರೆಂದು ಮಾತ್ರ ನಾನು ಹೇಳಲಾರೆ. ಆದರೆ ಯಾವುದೊಂದು ಸಂಸ್ಥೆಯಲ್ಲಿಯ ಎಲ್ಲ ಜನರು ಅವಶ್ಯವಾಗಿ ತೋರಿಸುವ ಸರ್ವಸಾಧಾರಣ ಅಹಿಂಸೆಯನ್ನು ಅವರು ತೋರಿಸಿದರೆಂದು ಮಾತ್ರ ನಾನು ಸ್ಪಷ್ಟವಾಗಿ ಹೇಳಬಲ್ಲೆ.

ರಾಜಕೋಟೆ ಜನತೆಯು ಈ ವರೆಗೆ ಮಾಡಿದ ಕಾರ್ಯವು ಪ್ರಶಂಸಾರ್ಹವಾಗಿದ್ದರೂ ನಿಜವಾದ ಸತ್ಯಾಗ್ರಹಿಗಳ ಪರೀಕ್ಷೆಯ ಕಾಲವು ಇನ್ನು ಮುಂದದೆ. ವಿಜಯ ಸಂಪಾದಿಸುವಾಗ ಅವರು ತೋರಿಸಿದ ಸದ್ಗುಣಗಳನ್ನು ಮುಂದೆಯೂ ಶಾಶ್ವತವಾಗಿ ಇಟ್ಟುಕೊಳ್ಳದಿದ್ದರೆ 'ಅಜ್ಜಿ ನೂತದ್ದೆಲ್ಲ ಮೊಮ್ಮಗನ ಉಡುದಾರಕ್ಕೆ ಹೋಯಿತ'ಂಬಂತೆ ಎಲ್ಲವೂ ನಿರರ್ಥವೆಂದು ಸಿದ್ಧವಾಗಬಹುದು. ಕಾಂಗ್ರೆಸ್ಸಿಗಳು ಹಲವು ದಿನಗಳ ಶಿಕ್ಷಣದಿಂದ ಸವಿನಯ ಕಾಯಿದೆಭಂಗ ಮಾಡಲು ತಮ್ಮ ಯೋಗ್ಯತೆಯನ್ನು ಸಿದ್ಧಮಾಡಿತೋರಿಸುವರು. ಆದರೆ ವಿಧಾಯಕ ಅಹಿಂಸೆಯನ್ನಾಚರಿಸುವಲ್ಲಿಯೂ ತಾವು ಶಕ್ತಿಸಂಪನ್ನರಿರುವೆವೆಂಬದನ್ನು ಇನ್ನೂ ಸಿದ್ಧಮಾಡಿ ತೋರಿಸಿಲ್ಲ. ಸವಿನಯ ಕಾಯದೇಭಂಗದಲ್ಲಿ ಕೆಲವೊಟ್ಟಿಗೆ ಹಿಂಸೆಯಾದರೂ ಸಾಗಬಹುದು. ಆದರೆ ವಿಧಾಯಕ ಕಾರ್ಯವು ಮಾತ್ರ ಬಹಳ ಕಠಿಣ. ಅದರಲ್ಲಿ ಹಿಂಸೆಯಾದರ ಬಲು ಬೇಗ ಪತ್ತೆಯಾಗುವದು ಮತ್ತು ಸಂಪಾದಿತವಾದ ವಿಜಯವೂ ಈ ಹಿಂಸೆಯಿಂದ ಒಲಿಯಾಗಿ ಪರಿಣಮಿಸಿ ಒಳ್ಳೇ ಮೋಸಗೊಳಿಸುವದು. ಅಂಥ ಸ್ವಾರ್ಥತ್ಯಾಗ ಮತ್ತು ನಿರಪೇಕ್ಷ ಮನೋವೃತ್ತಿಯನ್ನು ಜನರು ತೋರಿಸುವರೋ? ತಾವು ಮತ್ತು ತಮ್ಮ ಹಿತಸಂಬಂಧಿಗಳ ಸೇವೆ ಮಾಡಬೇಕೆಂಬ ಮೋಹವನ್ನು ಅವರು ತಡೆಯುವರೋ?

ಕೇವಲ ಅಧಿಕಾರ ಲಾಲಸೆಯಿಂದ ಕೆಲಸ ಮಾಡುತ್ತಿದ್ದರೆ ಜನಸಾಮಾನ್ಯರಿಗೆ ಸಿಕ್ಕತಕ್ಕ ಲಾಭ ದೊರೆಯಲಾರದು. ಅಧಿಕಾರಕಾಂಕ್ಷೆ ಅನುಯಾಯಿಗಳುಳ್ಳ ಜಾಣ ಮತ್ತು ವೃಥಾಲಕ್ಷ್ಯಯುಗಳಾದ ಮುಖಂಡರು ಯಾವದೊಂದು ಕಾರ್ಯವನ್ನು ಕೈಕೊಂಡರೆ ಜನಸಾಮಾನ್ಯರಿಗೆ ಹೆಚ್ಚು ಲಾಭ ದೊರೆಯುವದು. ಕಾಠೇವಾಡದಲ್ಲಿ ಒಳಜಗಳ ಒಡಕೇನು ಪ್ರಸಿದ್ಧವಿಯದೆ, ಸ್ವಪ್ರತಿಷ್ಠೆಯನ್ನೇ ಧ್ಯೇಯವಾಗಿಟ್ಟುಕೊಂಡ ರಾಜಕೀಯ ಜನರ ಗುಂಪು ಇಲ್ಲದ್ದರೆ ಶೂರರನ್ನು ಸಿದ್ಧಪಡಿಸುವ ಶಕ್ತಿಯುಳ್ಳ ಜನರೂ ಇಲ್ಲದಿರುವರು. ರಾಜಕೀಯರು ಮೇಲುಗೈಯನ್ನು ಪಡೆದರೆ ರಾಜಕೋಟೆಯಲ್ಲಿ ರಾಮರಾಜ್ಯವು ಪ್ರಸ್ಥಾಪಿಸಲ್ಪಡಬಾರದು, ರಾಮರಾಜ್ಯದಲ್ಲಿ ಜನರು ತಾವಾಗಿಯೇ ಶಿಸ್ತು ಪಾಲಿಸಲು ಸಿದ್ಧರಾಗುವರು, ವಿಧಾಯಕ ಅಹಿಂಸಾವೃತ್ತಿಯನ್ನು ಜನರು ತಳೆದರೆ ಉಳಿದ ಸಂಸ್ಥಾನಗಳಿಗೆ ಮಾದರಿಯಾಗಿ ತನ್ನ ಜ್ಯೋತಿಕಿರಣಗಳನ್ನು ಎರಡನೇ ಸಂಸ್ಥಾನಗಳಲ್ಲಿ ಹಬ್ಬಿಸಲು ಅದು ಶಕ್ತವಾಗಬಹುದು.

ಆದುದರಿಂದ ರಾಜಕೋಟೆ ಪ್ರಜೆಗಳು ವಿಜಯೋನ್ಮತ್ತರಾಗಿ ಆತ್ಮ ಸಮಾಧಾನ ಹೊಂದಿ ಸ್ವಸ್ಥವಾಗಿ ಕೂಡ್ರದೆ ದೇವರಲ್ಲಿ ಶರಣು ಹೋಗಿ ಆತ್ಮ ನಿರೀಕ್ಷಣೆ ಮಾಡಿಕೊಂಡು ಕಾರ್ಯಮಾಡತಕ್ಕಬೇಕು. ರಾಜಕೋಟೆ ಜನರು ಯಾವ ಮಾರ್ಗವನ್ನು ಅನುಸರಿಸುವರೆಂಬದನ್ನು ನಾನು ನಿರೀಕ್ಷಿಸುವೆ.

ಕೊಡಗಿನಲ್ಲಿ ಗ್ರಾಮೋದ್ಧಾರ ಕಾರ್ಯಕ್ರಮ.

ಲೇಖಕ:- ಬಿ. ಎಂ. ಅಪ್ಪಯ್ಯ.

ಕೊಡಗಿನಲ್ಲಿ ಗ್ರಾಮೋದ್ಧಾರ ಕ್ರಮವನ್ನು ಅತ್ಯಾವಶ್ಯಕವಾಗಿ ಕೈಗೊಳ್ಳಬೇಕಾಗಿದೆ. ವ್ಯವಸಾಯ ಕ್ರಮವೂ, ಜಾನುವಾರುಗಳ ಏಳಿಗೆಯೂ ಸಮರ್ಪಕವಾಗಿಲ್ಲ. ವ್ಯವಸಾಯ ಕ್ರಮವನ್ನು ಮತ್ತು ಗ್ರಾಮಾಭಿವೃದ್ಧಿಯ ವಿಚಾರವಾಗಿ ಕೆಲಸ ಮಾಡಲು ಪ್ರತಿ ಗ್ರಾಮದಲ್ಲೂ ಮಾತುಭಾರಿಗಳಾದವರು ಮುತುವರ್ಜಿವಹಿಸಬೇಕು. ಗ್ರಾಮೋದ್ಧಾರ ಕ್ರಮವನ್ನು ಕೈಗೊಳ್ಳುವವರಲ್ಲಿ ಸ್ವಾಭಿಲಾಷೆಯೂ, ಸ್ವಪ್ರತಿಷ್ಠೆಯೂ ಮಾಯವಾಗಿರಬೇಕು. ರೈತನ ಅಭಿವೃದ್ಧಿ ವಿಷಯದಲ್ಲಿ ಹೆಚ್ಚಾಗಿ ಪರಿಶ್ರಮವಿರಬೇಕು. ವ್ಯವಸಾಯ, ಪಶುವೈದ್ಯ, ಆರೋಗ್ಯ, ಮತ್ತು ಸಹಕಾರ ಈ ಇಲಾಖೆಯವರ ಬೋಧನೆಗಳು ಪದೇ ಪದೇ ದೊರೆಯುತ್ತಿರಬೇಕು. ಪ್ರತಿ ಗ್ರಾಮದಲ್ಲೂ ಗ್ರಾಮಾಭಿವೃದ್ಧಿ ಸಮಿತಿಯೊಂದು ಅತ್ಯಾವಶ್ಯಕ. ಗ್ರಾಮಾಭಿವೃದ್ಧಿ ಕಾರ್ಯಕ್ರಮ ಆಚರಣೆ ಬಗ್ಗೆ ಬೈಲಾ ಇರಬೇಕು.

ಸದ್ಯಕ್ಕೆ ರೈತನ ಏಳಿಗೆಗೆ ಆರೋಗ್ಯ, ವ್ಯವಸಾಯ, ಜಾನುವಾರುಗಳ ಅಭಿವೃದ್ಧಿ, ಕೈಗಾರಿಕೆ, ಮಿತವ್ಯಯ ಇವುಗಳು ಅತ್ಯಾವಶ್ಯಕ.

ಆರೋಗ್ಯ.

ಆರೋಗ್ಯವೇಭಾಗ್ಯವೆಂಬುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ. ಆರೋಗ್ಯವಿಲ್ಲದೆ ಉಪ್ಪರಿಗೆಯಲ್ಲಿ ವಾಸಮಾಡುವ ಧನಿಕನಿಗಿಂತಲೂ, ಆರೋಗ್ಯದಿಂದ ದೃಢಕಾಯನಾಗಿ ದಿನ ಕೂಲಿಯಿಂದ ಜೀವಿಸುವ ಕಡು ಬಡವನೇ ಮೇಲು. ಆರೋಗ್ಯಕ್ಕೆ ಶುಚಿತ್ವವೆಂಬುದು ನೆರಹೊರೆಯ ಸ್ನೇಹಿತ. ಶುಚಿತ್ವವು ಸರ್ವರ ಹಕ್ಕು. ಕೊಡಗಿನಲ್ಲಿ ನೀರಿಗೇನೂ ಕಡಿಮೆ ಇಲ್ಲ. ಪ್ರತಿಯೊಬ್ಬ ರೈತನೂ ಪ್ರತಿ ದಿನವೂ ರಾತ್ರಿ ಕೆಲಸ ಮಾಡಿ ಬಂದ ಕೂಡಲೆ ಸ್ನಾನ ಮಾಡುವುದು ಬಹು ಸುಗಮ. ಸ್ನಾನ ಮಾಡಿದರೆ ಸಾಲದು ಮಡಿಯಾದ ಬಟ್ಟೆಯೂ ಎಂದರೆ ಕೊಳೆ ಇಲ್ಲದನ್ನು; ಅದನ್ನೇ ತೊಟ್ಟುಕೊಳ್ಳಬೇಕು.

ಕೊಡಗಿನಲ್ಲಿ ಹೆಚ್ಚಾಗಿ ರೈತನನ್ನು ಕಾಡುತ್ತಿರುವುದು ಮಲೇರಿಯಾ ಮಹಾಮಾರಿ. ಇದಕ್ಕೆ ಕ್ವಿನಾವೇ ಬಡವನ ಆಧಾರ, ಮಲೇರಿಯಾದ ಶತ್ರು ಕ್ವಿನಾನಲ್ಲದೆ ಬೇರೆ ಇಲ್ಲ. ಮನೆ ಸುತ್ತಲೂ ಚೊಕ್ಕಟವಾಗಿಡುವುದು ಅತ್ಯಾವಶ್ಯಕ. ಮನೆಯವರು ಉಪಯೋಗಿಸಿದ ನೀರು ಹರಿದು ಹೋಗದೆ ಒಂದೇ ಕಡೆ ನಿಂತಲ್ಲಿ ಕೊಳೆತು ನಾಥ ಬರಲು ಅವಕಾಶಕೊಟ್ಟಲ್ಲಿ ಮಲೇರಿಯಾ ಕೀಟಕಗಳ ಜನ್ಮಸ್ಥಾನವಾಗುವುದು. ಆದ ಕಾರಣ ಅಂಥಾ ಕಡೆಗಳಲ್ಲಿ ಇವರು ಗುಂಡಿ (Soakaway pits) ಗಳನ್ನು ಹಾಕುವುದು ಅತ್ಯಾವಶ್ಯಕ.

ಹಿಂದಿನವರು ಅತಿ ದೃಢಕಾಯರಾಗಿದ್ದರು. ಈಗಿನವರಿಗೂ ಹಿಂದಿನವರಿಗೂ ಹೋಲಿಕೆಯೇ ಇರುವುದಿಲ್ಲ. ಇದಕ್ಕೆ ಆಹಾರವು ಮುಖ್ಯ ಕಾರಣ. ತರಕಾರಿಯನ್ನು ಯಥೇಚ್ಛವಾಗಿ ಉಪಯೋಗಿಸಬೇಕು. ಪ್ರತಿಯೊಬ್ಬರ ಮನೆಯಲ್ಲೂ ಕೈತೋಟವೊಂದು ಅತ್ಯಾವಶ್ಯಕ. ಕೊಡಗಿನಲ್ಲಿ ತರಕಾರಿ ಬೆಳೆಯುವುದೆಂದರೆ ಕಷ್ಟವಿಲ್ಲ. ಪ್ರತಿಯೊಂದು ಮನೆಯ ಹಿತ್ತಲಲ್ಲೂ ತರಕಾರಿಯು ಯಥೇಚ್ಛವಾಗಿ ಬೆಳೆಸಬೇಕು. ಪಟ್ಟಣವಾಸಿಗಳೂ ಕೂಡ ಇದೇ ರೀತಿ ಮನೆಯ ಹಿತ್ತಲಿನಲ್ಲಿ ಚಿಕ್ಕ ಕೈತೋಟವೊಂದನ್ನು ಮಾಡಿ ಅದರಲ್ಲಿ ಅನೇಕ ವಿಧದ ಕಾಯಿಪಲ್ಯಗಳನ್ನು ಬೆಳೆಯಬೇಕು.

ಕೊಡಗಿನಲ್ಲಿ ತರಕಾರಿಯ ಅಭಾವವಾಗಿದೆ. ಬೆಳೆಯುವಿಕೆಗೆ ಆಸಕ್ತಿ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ. ಕೊಡಗಿನ ಪಟ್ಟಣವಾಸಿಗಳಿಗೆ ಪ್ರತಿ ನಿತ್ಯವೂ ಮಾರ್ಕೆಟಿನಲ್ಲಿ ತರಕಾರಿ ದೊರೆಯುವುದಿಲ್ಲ. ಸಂತೆ ದಿವಸಗಳಲ್ಲಿ ಮಾತ್ರ ಅಲ್ಪ ಸ್ವಲ್ಪ ತರಕಾರಿ ದೊರೆಯುವುದು. ಬೇರೆ ದೇಶದಲ್ಲಿ ಹೀಗಿಲ್ಲ. ಅತಿ ಚಿಕ್ಕ ಪಟ್ಟಣಗಳಲ್ಲಿಯೂ ಕೂಡ ಪ್ರತಿ ನಿತ್ಯವೂ ತರಕಾರಿ ಮಾರುವ ಮಾರ್ಕೆಟಿನಲ್ಲಿ ತರಕಾರಿಗಳು ಮಾರಲ್ಪಡುವುವು.

ಮನುಷ್ಯನ ಕಾಯಪುಷ್ಟಿಗೆ ಹಾಲು ಅತ್ಯಾವಶ್ಯಕ. ಜಾನುವಾರುಗಳು ಕ್ಷೀಣಸ್ಥಿತಿಯನ್ನು ಹೊಂದುತ್ತಿರುವ ಕಾರಣ ಹಾಲು ಸಮೃದ್ಧಿಯಾಗಿ ದೊರೆಯುವುದಿಲ್ಲ. ಕೊಡಗಿನ ರೈತನಿಗಿರುವಷ್ಟು ಸೌಲಭ್ಯಗಳು ಇತರ ದೇಶದವರಿಗಿಲ್ಲ. (ಇದನ್ನು ಮುಂದೆ ವ್ಯವಸಾಯದಲ್ಲಿ ವಿವರಿಸಲಾಗುವುದು.)

ಗ್ರಾಮಾಂತರಗಳಲ್ಲಿ ಅಂಗಸಾಧನೆಯ ಏರ್ಪಾಟು ಇಟ್ಟುಕೊಳ್ಳಬೇಕು. ಗರಡಿಗಳನ್ನೇರ್ಪಡಿಸಿ ಬಾಲಕರು ಯುವಕರಾದಿಯಾಗಿ ಅಂಗಸಾಧನೆಯ ತರಬೇತನ್ನು ಹೊಂದಲು ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ಪ್ರತಿನಿತ್ಯವೂ ಮಾಡುವ ಅಂಗಸಾಧನೆಯು ಆರೋಗ್ಯವನ್ನು ಕಾಪಾಡುವುದಲ್ಲದೆ ಆಯುಸ್ಸನ್ನು ಸಹ ಹೆಚ್ಚಿಸುವುದು.

ಸೋಮಾರಿತನವು ಆರೋಗ್ಯವನ್ನೇ ಅಲ್ಲ ಆಯುಸ್ಸನ್ನು ಸಹ ಕಡಿಮೆ ಮಾಡುವುದು. ಆದುದರಿಂದ ಸೋಮಾರಿಗಳಾಗಿ ತಮ್ಮ ಜೀವನವನ್ನು ವ್ಯರ್ಥಗೊಳಿಸುವುದು ಸರಿಯಲ್ಲ.

ದೇಶದ ಅಭಿವೃದ್ಧಿಗೆ ವ್ಯವಸಾಯವೇ ಮುಖ್ಯ ಕಾರಣ. ವ್ಯವಸಾಯವನ್ನು ಒಬ್ಬ ರೈತನು ಎಷ್ಟು ಮುತುವರ್ಜಿಯಿಂದ ಮಾಡುವನೋ ಅಷ್ಟು ಪ್ರಯೋಜನ ಇದ್ದೇ ಇರುವುದು. 'ಕೃಷಿತೋ ನಾಸ್ತಿ ದುರ್ಭಿಕ್ಷಂ| ಜಪತೋ ನಾಸ್ತಿ ಪಾತಕಂ||' ಎಂಬಂತೆ ವ್ಯವಸಾಯ ಮಾಡುವವನಿಗೆ ದುರ್ಭಿಕ್ಷವೇ ಇಲ್ಲವೆಂದು ಶಾಸ್ತ್ರವೇ ಹೇಳುತ್ತೆ. ಇದೆಂದೂ ಅಪಕೃತವಾಗಲಾರದು.

ಕೊಡಗಿನ ವ್ಯವಸಾಯಗಾರರ ಸ್ಥಿತಿಯು ಅತಿ ಶೋಚನೀಯಾವಸ್ಥೆಯಲ್ಲಿದೆಯೆಂದರೆ ಯಾರೂ ತಪ್ಪೆಣಿಸಲಾಗದು. ನೂರು ಭಟ್ಟಿ ಎಂದು ಕರೆಯುವ ಗದ್ದೆಯಲ್ಲಿಂದು ಇಪ್ಪತ್ತು ಯಾ ಮೂವತ್ತು ಭಟ್ಟಿ ಭತ್ತ ಬೆಳೆಯುವ ಸ್ಥಿತಿಗಿಳಿದಿದೆ. ಇದಕ್ಕೆ ಕಾರಣವೇನು? ಕೊಡಗಿನ ಮಣ್ಣು ಉತ್ಕೃಷ್ಟವಾದುದೆಂಬುದನ್ನು ಯಾರೂ ಇಲ್ಲವೆನ್ನಲಾರರು. ಗದ್ದೆಯಲ್ಲಿ ಪ್ರತಿ ವರ್ಷವೂ ಬೆಳೆ ಬೆಳೆಯುತ್ತಿರುವ ಕಾರಣ ಸಾರವು ಕಡಿಮೆಯಾಗಿ ಫಸಲು ವರ್ಷೇ ವರ್ಷೇ ಕನಿಷ್ಠಾವಸ್ಥೆಗೆ ಬರುತ್ತಿದೆಯೆಂದು ರೈತನು ಸಮಾಧಾನವನ್ನು ಕೊಡಬಹುದು. ಆದರೆ ಒಂದು ಹಸುವು ಮೇವು ಹಾಕಿದಷ್ಟು ಹಾಲು ಹೆಚ್ಚು ಕೊಡುವುದೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಇದೇ ರೀತಿ ಸಾರವು ಕಡಿಮೆಯಾದ ಭೂಮಿಗೆ ಸರಿಯಾದ ಗೊಬ್ಬರವನ್ನು ಸಕಾಲದಲ್ಲಿ ಹಾಕಿ ಹೆಚ್ಚಾದ ಫಸಲನ್ನು ಪಡೆಯಬೇಕಾದದ್ದು ವ್ಯವಸಾಯಗಾರರ ಕೆಲಸವಾಗಿದೆ. ನಾನು ಅನೇಕ ಸ್ಥಳಗಳನ್ನು ಪರಾಮರ್ಶಿಸಿದಲ್ಲಿ ಗೊಬ್ಬರ ಶೇಖರಿಸುವ ವಿಧಾನವು ಸಮರ್ಪಕವಾಗಿಲ್ಲವೆಂದು ಕಂಡುಬಂತು. ಭತ್ತದ ಧಾರಣೆಯು ಕಮ್ಮಿಯಾದುದು ಅತ್ಯಗಾಧವಾದುದೆಂದು ಯಾರೊಬ್ಬರೂ ಊಹಿಸಬಾರದು. ನಮ್ಮ ತಾತನವರ ಕಾಲದಲ್ಲಿ ಒಂದು ರೂಪಾಯಿಗೆ ಇಪ್ಪತ್ತನಾಲ್ಕು ಸೇರು ಅಕ್ಕಿ ಸಿಕ್ಕುತ್ತಿತ್ತು. ದೇಶವು ಸುಭಿಕ್ಷವಾಗಿತ್ತು. ಭತ್ತದ ಬೆಲೆಯು ಏರಿತು. ಬಡತನವು ಹೆಚ್ಚಾಯಿತು.

ಇಂದು ರೈತನಿಗೆ ಬೇಕಾದುದು ಮುಖ್ಯವಾಗಿ ಹೊಟ್ಟೆ ತುಂಬ ಊಟ ಮಾಡಲು ಭತ್ತ. ಅರೆ ಹೊಟ್ಟೆಯಾಗಿ ಊಟ ಮಾಡುವವರು ಎಷ್ಟು ಜನರಿಲ್ಲ. ಕರಾಪ್ರಕಾಲ ಬರುವುದಕ್ಕಿಂತ ಮೊದಲೇ ದವಸ ತೀರಿ ಅಲೆಯುವ ಎಷ್ಟು ಕುಟುಂಬವಿಲ್ಲ. ಇದನ್ನು ನಿವಾರಿಸಲು ದಾರಿಯು ಒಂದೇ. ನೂರು ಬಟ್ಟಿ ಗದ್ದೆಗೆ ನೂರು ಬಟ್ಟಿ ಭತ್ತವನ್ನು ಬೆಳೆಯಲು ಪ್ರಯತ್ನಿಸಬೇಕು. ಇದಕ್ಕೆ ಮಾಡಬೇಕಾದುದೇನು? ವ್ಯವಸಾಯ ಕ್ರಮವನ್ನು ಉತ್ತಮಗೊಳಿಸುವುದು ಮತ್ತು ಗೊಬ್ಬರವನ್ನು ಹೇರಳವಾಗಿ ಅತಿ ಜಾಗ್ರತೆಯಿಂದ ಶೇಖರಿಸುವುದು. ಅನೇಕರಿಗೆ ಗೊಬ್ಬರ ಶೇಖರಿಸುವ ವಿಧಾನ ತಿಳಿಯದು. 'ಹೆಡ್ಡನ ಆರಂಭ ಗೊಬ್ಬರದಲ್ಲಿ' ಎಂಬ ನಾಣ್ಣುಡಿ ಅನೇಕರಿಗೆ ತಿಳಿದದ್ದಾಗಿದೆ. ಕೊಡಗು ದೇಶವು ಒಂದು ಚಿನ್ನದ ಗಣಿ ಎಂದು ಹೇಳಬಹುದು. ಅಲ್ಲಿಯ ಸೌಕರ್ಯಗಳು ಬೇರೆ ದೇಶದಲ್ಲಿ ದೊರೆಯಲಾರವು. ಹೆಚ್ಚೇಕೆ, ಪಕ್ಕದ ದೇಶವಾದ ಮೈಸೂರು ದೇಶದ ರೈತರು ಮತ್ತು ಜಮೀನನ್ನು ಉದಾಹರಣೆಗೆ ತೆಗೆದುಕೊಂಡರೆ ವ್ಯವಸಾಯಗಾರನು ಬೆಂಗಾಡು ಪ್ರದೇಶವನ್ನು ಅಭಿವೃದ್ಧಿಪಡಿಸಿ, ವ್ಯವಸಾಯಕ್ಕೆ ನಾಜೂಕಾಗಿ ಮಾಡಿ, ಒಳ್ಳೆ ಬೆಳೆ, ಬೆಳೆದು ಸುಖಸಂತೋಷದಿಂದ ಹಿಗ್ಗುತ್ತಾನೆ. ಇದಕ್ಕೆ ಅವನ ಉತ್ಸಾಹ, ಶ್ರಮವೇ ಕಾರಣ.

ಕೊಡಗು ದೇಶದ ರೈತರನ್ನು ಇತರ ದೇಶಗಳಿಗೆ ಹೋಲಿಸಲಾಗುವುದಿಲ್ಲ. ಬೇರೆ ದೇಶದ ರೈತರು ವ್ಯವಸಾಯಕ್ಕಾಗಿ ಹನ್ನೆರಡು ತಿಂಗಳು ಶ್ರಮಪಡುತ್ತಾರೆ. ನೀರಾವರಿ ಇಲ್ಲದ ಕಡೆ ಬಾವಿ ತೋಡಿ ಏತಗಳಿಂದ ನೀರೆತ್ತಿ ವ್ಯವಸಾಯ ಮಾಡುತ್ತಾರೆ. ಗಂಡನು ತೋಟದ ಕೆಲಸ ಮಾಡಿದಲ್ಲಿ ಹೆಂಡತಿಯು ತೋಟದಲ್ಲಿ ಬೆಳೆದ ತರಕಾರಿಗಳನ್ನು ಮಾರ್ಕೆಟಿನಲ್ಲಿಟ್ಟು ವ್ಯಾಪಾರ ನಡಿಸುತ್ತಾಳೆ.

ಮಡಿಕೇರಿಯಲ್ಲಿ ಪ್ರಜಾಸಂಖ್ಯೆಯು ಐದು ಸಾವಿರಕ್ಕೆ ಮೇಲ್ಪಟ್ಟಿದ್ದು ಪಟ್ಟಣದಂತಿದ್ದರೂ ಪ್ರತಿ ನಿತ್ಯವೂ ತರಕಾರಿ ದೊರೆಯುವುದಿಲ್ಲ. ಬೇರೆ ದೇಶಗಳಲ್ಲಿ ಹತ್ತು ಸೆಂಟು ಜಾಗದಲ್ಲಿ ಬರೇ ಸೊಪ್ಪು ತರಕಾರಿ ಬೆಳೆಸಿ ಜೀವಿಸುತ್ತಾರೆ. ಟವುನಿನಲ್ಲಿನ ಕಕ್ಕಸದ ಗೊಬ್ಬರವನ್ನು ಖರೀದಿಗೆ ಕೊಂಡುಕೊಂಡು ತನ್ನ ಜಮೀನನ್ನು ರಸಭರಿತವನ್ನಾಗಿ ಮಾಡಿ ಅದರಲ್ಲಿ ಸಂಬಾರ ಸೊಪ್ಪು (ಇದು ಸರ್ವರಿಗೂ ದಿನವಹಿ ಬೇಕಾದುದಾಗಿದೆ) ಮೆಂತೆ ವಗೈರೆ ಸೊಪ್ಪುಗಳನ್ನೂ ಅನೇಕ ವಿಧದ ತರಕಾರಿ ವಗೈರೆಗಳನ್ನೂ ಬೆಳೆಯುತ್ತಾನೆ. ಹೆಂಡತಿ ಯಾ ಮಗನು ಬೆಳೆದ ತರಕಾರಿಯನ್ನು ಮಾರ್ಕೆಟ್ಟಿನಲ್ಲಿ ಮಾರಿ ದಿನ ಒಂದಕ್ಕೆ ಐದು ರೂಪಾಯಿಗಳನ್ನು ಸಂಪಾದಿಸುವರು. ಅವನ ಖರ್ಚಾದರೂ ಏನು? ಜೀವನಕ್ಕೆ ಸಂಸಾರದಲ್ಲಿ ಗಂಡ, ಹೆಂಡತಿ ಮತ್ತು ಇಬ್ಬರು ಮಕ್ಕಳು. ಇವರಿಗೆ ಖರ್ಚಿಗೆ ಎರಡು ರೂಪಾಯಿ ಅಕ್ಕಿ, ಎರಡು ರೂಪಾಯಿ ರಾಗಿ ಎಣ್ಣೆ, ಮಾಂಸ ವಗೈರೆಯಾಗಿ ಆರು ರೂಪಾಯಿ, ಕಂದಾಯ, ಬಟ್ಟೆ ಮತ್ತು ಇತರ ಖರ್ಚಿಗಾಗಿ ಹತ್ತು ರೂಪಾಯಿ, ಜುಮ್ಲ ಇಪ್ಪತ್ತು ರೂಪಾಯಿ ಒಂದು ತಿಂಗಳ ಖರ್ಚಿಗೆ ಸಾಕು. ಉತ್ಪತ್ತಿ ದಿನ ಒಂದರ ಸರಾಸರಿ ಎರಡು ರೂಪಾಯಿಯಂತೆ ಎಣಿಸಿದರೂ ತಿಂಗಳಿಗೆ ಅರವತ್ತು ರೂಪಾಯಿ; ಇದರಲ್ಲಿ ಖರ್ಚು ಕಳೆದು ತಿಂಗಳಿಗೆ ನಲವತ್ತು ರೂಪಾಯಿ ಉಳಿಸಲಾಪನು. ಅವನಾದರೋ ಚೆನ್ನಾಗಿ ಕೆಲಸ ಮಾಡುವವನಾದ ಕಾರಣ ದೃಢಾಂಗನಾಗಿರುವನು.

(ಮುಂದುವರಿಯುವುದು.)

ದೇವದತ್ತ.

ಸಾಮಾಜಿಕ ಕಾದಂಬರಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಒಂದು ವಿಶಾಲವಾದ ಬೈಲಿನ ಮಧ್ಯಕ್ಕಾಗಿ ರಾಜರಸ್ತೆಯೊಂದು ಸರ್ಪಗಮನದೋಪಾದಿಯಲ್ಲಿ ಹಾದಿತ್ತು. ಅನಿಲ ಸಂಚಾರ ಒಂದನಿತು ಇಲ್ಲದೆ ನಿಂದುರಿವ ಈ ಕಡು ಬೇಸಗೆಯಲ್ಲಿ, ಬಳಲಿ ಬೇಸತ್ತು ಬರುವ ಪಥಿಕರಿಗೆ ತಂಪೀವ ಮರಗಳೇನೂ ಆ ರಸ್ತೆಯ ಇಕ್ಕಡೆಗಳಲ್ಲಿರಲಿಲ್ಲ. ಬಹುದೂರದಲ್ಲಿ ಒಂದು ನದಿಯು, ಈ ರಸ್ತೆಯನ್ನು ಅಡ್ಡವಾಗಿ ಒಡೆದು, ಸಮುದ್ರಾಭಿಮುಖವಾಗಿ ಹರಿಯುತಿತ್ತು. ಈ ನದಿಯ ಮೇಲೆ ಎತ್ತರವಾದ ಒಂದು ಸೇತುವೆಯು ನಿರ್ಮಿಸಲ್ಪಟ್ಟಿತ್ತು. ಆ ಸೇತುವೆಯ ಎರಡಂತ್ಯದ ಇಕ್ಕಡೆಗಳಲ್ಲಿಯೂ, ಒಂದೊಂದು ಕಲ್ಲಿನ ಕಂಬಗಳಿದ್ದವು. ಒಂದಾನೊಂದು ಕಂಬದ ತುದಿಯಲ್ಲಿ ಒಂದು ವ್ಯಕ್ತಿಯು ಕುಳಿತು ಯಾರೋ ಒಬ್ಬರ ಆಗಮನವನ್ನು ಎದುರು ನೋಡುವಂತಿತ್ತು.

ನಿರ್ಜನವಾಗಿದ್ದ ರಸ್ತೆಗಾಗಿ ವೃದ್ಧನೊಬ್ಬನು, ಎಡವಿತಡವಿ, ಸೇತುವೆಯ ಕಡೆಗೆ ಬರುತ್ತಿದ್ದನು. ಬಿಸಿಲಿನ ತಾಪವನ್ನು ತಡೆಯಲು ಆತನ ಕೈಯಲ್ಲಿ ಕೊಡೆಯಾಗಲೀ ಪಾದಗಳಿಗೆ ಪಾದರಕ್ಷೆಗಳಾಗಲೀ ಇರಲಿಲ್ಲ. ಅವನ ಬಾಡಿದ ಮುಖವನ್ನೂ, ಬಿಸಿಲೆನ್ನದೆ, ಬೆಕೆಯನ್ನದೆ, ಅವನು ಅತೀ ವೇಗದಿಂದ ನಡೆಯುತಿದ್ದುದನ್ನೂ ನೋಡಿದರೆ, ಅವನ ಅಂತರ್ಯದಲ್ಲಿ ಏನೋ ಒಂದು ಅವ್ಯಕ್ತವಾದ ವ್ಯಸನವು ಕುದಿಯುತ್ತಿತ್ತೆಂಬುದು ಪ್ರೇಕ್ಷಕರಿಗೆ ತಿಳಿಯುತ್ತಿತ್ತು. ಅವನು ತನ್ನಲ್ಲಿ ತಾನೇ "ಓ ಭಗವಂತಾ! ಕರುಣಾಕರ! ಅವನನ್ನೊಮ್ಮೆ ನನ್ನ ಕೈಗೆ ಕೊಡು. ಆ ಮೇಲೆ ನಾನೆಂದೂ ಅವನನ್ನು ಹೊರಹೋಗಲು ಬಿಡೆನು?" ಎನ್ನುತ್ತಾ ಬಲವಾದ ನಿಟ್ಟುಸಿರು ಬಿಡುತ್ತಿದ್ದನು.

ಸ್ವಲ್ಪ ಹೊತ್ತಿನಲ್ಲೇ ಮುದುಕನು ಹೊಳೆಯನ್ನು ಸಮೀಪಿಸಿದನು. ಸಮುದ್ರವು ಹತ್ತಿರವಿದ್ದುದರಿಂದ ನದಿಯ ನೀರು ಅಚಲವಾಗಿರದೆ ಅಲೆಗಳಿಂದ ತುಂಬಿದ್ದಿತು. ನೆತ್ತಿಯ ಮೇಲೆ ಥಳಥಳಿಸುತ್ತಿದ್ದ ಸೂರ್ಯನ ಸಹಸ್ರ ಕಿರಣಗಳು, ನದೀ ಜಲದಲ್ಲಿ ಪ್ರತಿಬಿಂಬಿಸಿ, ಆ ಹೊಳೆಯನ್ನೆಲ್ಲಾ ಒಂದು ರತ್ನದ ರಾಶಿಯಂತೆ ಮಾಡಿದ್ದಿತು. ಬಿಸಿಲಿನ ಝಳವು ಮುದುಕನ ದೃಷ್ಟಿಯನ್ನು ಮಂದವಾಗಿ ಮಾಡಿತು. ಅವನು ಮುಖ ತೊಳೆಯಲು ಹೊಳೆಯ ದಂಡೆಗೆ ಹೋದನು.

ಕಲ್ಲಿನ ಕಂಬದ ಮೇಲ್ಭಾಗದಲ್ಲಿ ನಿಂತು, ಆ ವೃದ್ಧನ ಚಲನೆಯನ್ನೇ ನೋಡುತ್ತಾ ನಿಂತಿದ್ದ ವ್ಯಕ್ತಿಯು, ಕಣ್ಣೀರು ಸುರಿಸುತ್ತಾ ತನ್ನ ಕಿಸೆಯೊಳಗಿನಿಂದ ಒಂದು ಕಾಗದವನ್ನು ತೆಗೆದು, ತಾನು ಕೂತಿದ್ದ ಕಲ್ಲಿನ ಮೇಲಿಟ್ಟು ಅದು ಗಾಳಿಗೆ ಹಾರಿಹೋಗದಂತೆ ಅದರ ಮೇಲೆ ಒಂದು ಕಲ್ಲನ್ನಿಟ್ಟು ಕೈಗಳನ್ನು ಮುಂದಕ್ಕೆ ಚಾಚಿ ಕೆಳಗೆ ಮುಖತೊಳೆಯುತ್ತಿದ್ದ ವೃದ್ಧನನ್ನು ಕುರಿತು, 'ಅಪ್ಪಾ! ಅಪ್ಪಾ' ಎಂದು ಸಂಬೋಧಿಸಿದನು.

ಬಗ್ಗಿ ಮುಖತೊಳೆಯುತ್ತಿದ್ದ ವೃದ್ಧನು ಹಟತ್ತಾಗಿ, 'ಅಪ್ಪಾ' ಎಂಬ ಶಬ್ದವನ್ನು ಕೇಳಿದೊಡನೆ ತಲೆಯೆತ್ತಿ ನೋಡಿದನು. ಸೇತುವೆಯ ಕಂಬದ ಮೇಲೆ ಯುವಕನೊಬ್ಬನು ಕೈಗಳನ್ನು ಮುಂದಕ್ಕೆ ನೀಡಿ, ಸಿದ್ಧನಾಗಿ ನಿಂತು, 'ತಂದೆಯೇ! ದುಷ್ಟನಾದ ನನ್ನ ಅಪರಾಧಗಳನ್ನು ಮನ್ನಿಸು, ನನ್ನಿಂದ ನಿನಗೆ ಇಂದಿನ ವರೆಗೆ ಸಹಸ್ರ ದುಃಖಗಳಿಗೆ ಎಡೆ ಸಿಕ್ಕಿತೇ ಅಲ್ಲದೆ, ಎಳ್ಳಿನಷ್ಟು ಸಹ ಸುಖದೊರೆಯಲಿಲ್ಲ. ಇನ್ನು ಮುಂದಕ್ಕೂ ಸಹ, ನಿನಗೆ ಸಂತೋಷವನ್ನುಂಟುಮಾಡುವ ದಾರಿಯು ತೋರದ್ದರಿಂದ ನಿನಗೆ ದುಃಖವನ್ನುಂಟುಮಾಡುವದಾದರೂ ಕೊನೆಗಾಣಿಸಲು ನಾನೀಗ ಆತ್ಮಹತ್ಯಮಾಡಿಕೊಳ್ಳುತ್ತೇನೆ, ಇಗೋ ಈ ಕಾಗದವನ್ನು ನನ್ನ ತಾಯಿಗೆ ತೋರಿಸು' ಎಂದು ಹೇಳಿ ಕಾಗದವನ್ನು ತೋರಿಸಿ, ಮರಳಿ ಅದೇ ಸ್ಥಳದಲ್ಲಿಟ್ಟು ತಲೆ ಕೆಳಗಾಗಿ ನದಿಯೊಳಗೆ ಧುಮುಕಿದನು.

ಬೀಸುತ್ತಿದ್ದ ಗಾಳಿಯಲ್ಲಿ ಆ ಯುವಕನ ಮಾತುಗಳು ಸ್ಪಷ್ಟವಾಗಿ ಕೇಳಿಸಲಿಲ್ಲ. ಬಿಸಿಲಿನ ರಭಸದಿಂದಲೂ, ಮಾರ್ಪೊಳೆಯುತ್ತಿದ್ದ ಸೂರ್ಯಕಿರಣಗಳ ರಶ್ಮಿಯಿಂದಲೂ ದೃಷ್ಟಿಯು ಮಂಕಾಗಿದ್ದ ಮುದುಕನಿಗೆ, ಹುಡುಗನನ್ನು ಒಡನೆ ಗುರುತಿಸಲು ಆಗಲಿಲ್ಲ. ನದಿಯೊಳಗೆ ಹಾರಿದೊಡನೆ, ಅವನು ಬೆಚ್ಚಿಬಿದ್ದನು. ಧುಮುಕಿದವನು ಒಮ್ಮೆಮ್ಮೆ ಮೇಲೆ ಬಂದನು, ಕೂಡಲೇ ಅದೃಶ್ಯನಾದನು. ಮುದುಕನು ದಡಬಡ ತನ್ನ ಎದೆಯನ್ನು ಬಡಿದುಕೊಳ್ಳುತ್ತಾ ಸ್ಮೃತಿತಪ್ಪಿ ಬಿದ್ದನು.

ಸ್ವಲ್ಪ ಹೊತ್ತಿನಲ್ಲೇ ಎಚ್ಚರವಾಯಿತು. ದುಃಖಿಸುತ್ತಾ ಸೇತುವೆಯ ಮೇಲೆ ಬಂದು, ಪತ್ರವನ್ನು ತೆಗೆದು ಓದಲಾರಂಭಿಸಿದನು.

'ಅಪ್ಪಯ್ಯಾ ನನ್ನ ಸಹಸ್ರ ತಪ್ಪುಗಳನ್ನು ಮನ್ನಿಸು ನಾನು ಸತ್ಯವನ್ನೇ ನುಡಿದುದೇನಾದರೆ, ಅದು ನಿನ್ನನ್ನು ವ್ಯಸನಕ್ಕೆ ಗುರಿಮಾಡಿದುದರಿಂದ, ಅದಲ್ಲದೆ ಇನ್ನು ಬರುವ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿಯೂ, ಇತರ ತಂದೆ ತಾಯಿಗಳ ಪ್ರಯೋಜನಾರ್ಥವಾಗಿಯೂ ನನ್ನೀ ಪಾಪದರಿತವಾದ ಜೀವನ ಚರಿತ್ರೆಯನ್ನು ಬರೆದಿರುತ್ತೇನೆ. ದಯವಿಟ್ಟು ಇದನ್ನು ಮರೆಯದೆ ಪ್ರಕಟಿಸು. ಲೋಕದಲ್ಲಿ ಎಷ್ಟೋ ಸಜ್ಜನರ ಜೀವನ ಚರಿತ್ರೆಗಳು ಇತರರಿಗೆ ದಾರಿತೋರುವದಾಗಿದೆ. ಆದರೆ ಅವುಗಳಲ್ಲಿ ಸದ್ಮಾರ್ಗದಲ್ಲಿ ನಡೆದರೆ ಏನಾಗುತ್ತದೆ ಎಂಬ ಅಂಶವು ಮಾತ್ರ ಬರೆಯಲ್ಪಟ್ಟಿದೆ. ನನ್ನ ಈ ಚರಿತ್ರೆಯು ದುರ್ಮಾರ್ಗಗಳು ಯಾವವು, ಅವುಗಳನ್ನು ಅನುಸರಿಸಿದರೆ ನಮ್ಮ ಪಾಡೇನಾಗುವುದು ಎಂಬ ಅಸಹ್ಯವಾದ ವಿಷಯಗಳನ್ನು ತೋರಿಸುತ್ತದೆ. ಆದುದರಿಂದ ದಯವಿಟ್ಟು ಹಿಂಜರಿಯದೆ ನನ್ನ ಚರಿತ್ರೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸು. ಇಂದಿನಿಂದ ನನಗೆ ಸುಖವಿಲ್ಲದಿದ್ದರೂ, ದುಃಖಕ್ಕೆ ಅಸ್ಪದವಿರಲಾರದು.

ಇತೀ ಆನಂದ ಪ್ರಸಾದ,

ಧನವಂತ ಪ್ರಸಾದನು ದುಃಖಿಸುತ್ತಾ ಅಲ್ಲೆ ಕುಳಿತನು.

೧೮ ನೇ ಅಧ್ಯಾಯ.

'ಟಣ ಟಣ' ಎಂದು ಘಂಟಾಘೋಷವಾಯಿತು. ಪ್ಲಾಟ್ ಫಾರಂಮಿನಲ್ಲಿ ಅತ್ತಿತ್ತ ಓಡಾಡುತ್ತಿದ್ದವರೆಲ್ಲಾ ಪ್ಲಾಟ್ ಫಾರಂಮಿನ ಎದುರಿಗೆ ಬಂದು ಹೊಗೆ ಬಂಡಿಯ ಆಗಮನವನ್ನೇ ಎದುರು ನೋಡತೊಡಗಿದರು. ಹೊರಗೆ ರಿಕ್ಷಾ, ಜಟ್ಕಾ, ಟ್ಯಾಕ್ಸಿಯವರುಗಳು ತಮ್ಮ ತಮ್ಮ ವಾಹನಗಳನ್ನು ಸರಿಮಾಡಿ ದ್ವಾರದ ಹತ್ತಿರ ಸರಿದರು. ಮರುಕ್ಷಣದಲ್ಲೆ 'ಜಗ್ ಜಗ್' ಎನ್ನುತ್ತಾ ಬಂಡಿಯು ಬಂದು ಸ್ಟೇಶನ್ನಿನ ಉದ್ದಕ್ಕೂ ನಿಂತಿತು.

ಮಿತ್ರರ ಆಗಮನವನ್ನೆಳಸಿ ಬಂದಿದ್ದ ಹಸನ್ಮುಖರಾದ ಶಾಲಾಯುವಕರು, ಅವರನ್ನು ಕಂಡೊಡನೆ, ಸಂತೋಷದಿಂದ ಕೈಯಲ್ಲಾಡಿಸಿ, ಮಾತಾಡುತ್ತಿದ್ದರು. ಒಂದೆಡೆ ಶಾಲಾ ಯುವತಿಯರು ತಮ್ಮ ಗೆಳತಿಯರನ್ನು ಎದುರುಗೊಳ್ಳುತ್ತಿದ್ದರು. ಮತ್ತೊಂದೆಡೆ ವ್ಯಾಪಾರಸ್ಥರು ಸರಕುಗಳನ್ನು ಗುಡ್ಡೆ ಹಾಕುತ್ತಿದ್ದರು. ಅಲ್ಲಲ್ಲಿ ಟ್ರಾಲಿಗಳು, ಕಲ್ಲಿನ ನೆಲದ ಮೇಲೆ 'ಟರ, ಟರ' ಎಂದು ಉರುಳುತ್ತಿದ್ದವು. ಕೆಲವರು 'ಬೀಡಾ, ಬೀಡಿ, ಸಿಗರೇಟ' ಎಂದೂ ಕೆಲವರು 'ಬಂಡಿ, ಬಂಡಿ' ಎಂದು ಕೂಗುತ್ತಿದ್ದರು. ಅಂತು ಆ ಸ್ಥಳವೆಲ್ಲಾ ಸ್ವಲ್ಪ ಹೊತ್ತಿನಲ್ಲೇ ಕಲಕಲರವದಿಂದ ಕಿಕ್ಕಿರಿದು ಹೋಯಿತು.

ಪ್ರಯಾಣಸ್ಥರೆಲ್ಲಾ, ಸ್ಟೇಶನಿನ ಹೆಬ್ಬಾಗಿಲಿಗಾಗಿ ಒಬ್ಬೊಬ್ಬರಾಗಿ ದಾಟುತ್ತಿದ್ದರು. ಬಾಗಿಲಿನ ಹೊರಗಡೆ ಮೋಟಾರ್ ಬಂಡಿಗಳನೇಕ ನಿಂತಿದ್ದವು. ಅವುಗಳ ಪೈಕಿ ಒಂದರಲ್ಲಿ, ಒಬ್ಬ ಮುದುಕಿಯೂ, ಒಬ್ಬ ಯುವತಿಯೂ, ಕುಳಿತಿದ್ದರು. ಯಾರಾದರೂ ಸುಂದರಾಂಗರಾದ ಯುವಕರು ಹೆಬ್ಬಾಗಿಲನ್ನು ಸಮೀಪಿಸಿದರೆಂದರೆ, ಆ ಯುವತಿಯು ತನ್ನ ಕೈಯಲ್ಲಿದ್ದ ಒಂದು ಭಾವಚಿತ್ರವನ್ನು ನೋಡುತಿದ್ದಳು. ತಂಡ ತಂಡವಾಗಿ ದಾಟುತ್ತಿದ್ದ ಜನರು, ಕ್ರಮಕ್ರಮವಾಗಿ ಕಡಮೆಯಾಗಿ, ಈಗ ಒಬ್ಬೊಬ್ಬರಾಗಿ ದಾಟತೊಡಗಿದರು. ಕಡೆಗೆ ನಾಲ್ಕೈದು ಕೂಲಿಗಳು ಒಂದೊಂದು ಪೆಟ್ಟಿಗೆಗಳನ್ನು ಹೊತ್ತುಕೊಂಡು ಹೊರದಾಟಿದರು.

ಕಾರಿನಲ್ಲಿದ್ದ ಸುಂದರಿಯು ಒಂದು ಬಲವಾದ ನಿಟ್ಟುಸಿರನ್ನು ಬಿಟ್ಟಳು. ಬದಿಯಲ್ಲಿ ಕುಳಿತಿದ್ದ ಮುದುಕಿಯು ಆ ಯುವತಿಯ ಸೀಮಂತವನ್ನು ಸವರಿ, 'ವ್ಯಸನಪಡಬೇಡ. ನಾಳೆ ಬರಬಹುದು' ಎನ್ನುವಷ್ಟರಲ್ಲಿ ಸುಂದರಾಂಗನಾದ ಯುವಕನೋರ್ವನು ಹೊಸನಾದ ಉಡುಪುಗಳನ್ನು ಧರಿಸಿ ಸ್ಟೇಶನ್ ಮಾಸ್ಟರ್ ಮೊಡನೆ ಮಾತಾಡುತ್ತಾ, ದ್ವಾರದ ಹೊರಗೆ ಬಂದನು. ಅವನು ಕಣ್ಣಿಗೆ ಕನ್ನಡಕವನ್ನು ಧರಿಸಿದ್ದನು. ಅವನ ಹಣೆಯ ಎಡಭಾಗದಲ್ಲಿ ಒಂದು ಬಲವಾದ ಘಾಯದ ಗುರುತು ಕಾಣುತ್ತಿತ್ತು. ಅವನೊಡನೆ ಒಂದು ದೊಡ್ಡ ನಾಯಿಯೂ ಇತ್ತು.

ಪೂರ್ವೋಕ್ತ ಯುವಕನನ್ನು ಕಂಡೊಡನೆ ಕಾರಿನಲ್ಲಿದ್ದ ಯುವತಿಯ ಮುಖವು ಕಳೆ ಏರಿತು. ಕೈಯಲ್ಲಿದ್ದ ಭಾವಚಿತ್ರವು ಕಳಚಿ ಕಾರೊಳಗೆ ಬಿದ್ದಿತು. ಶರೀರವು ಕಂಪಿಸತೊಡಗಿತು. ಅಷ್ಟರಲ್ಲಿ ಆ ಯುವಕನು, ಬಾಗಿಲನ್ನು ದಾಟಿ, ಬದಿಯಲ್ಲಿ ನಿಂತಿದ್ದ ಕಾರನ್ನು ಲಕ್ಷಿಸದೆ ಮುಂದಡಿ ಇಟ್ಟನು. ಕೂಡಲೇ ಮುದುಕಿಯು, 'ಬಾಬು' ಎಂದು ಕೂಗಿದಳು, ಹುಡುಗನು ಹಟತ್ತಾಗಿ ತಿರುಗಿದನು.

'ತಾಯಿ' ನಮಸ್ಕಾರ' ಎನ್ನುತ್ತಾ ಯುವಕನು, ತನ್ನ ಸಂಗಾತಿಯನ್ನು ಬೀಳ್ಕೊಂಡು, ಕಾರಿನೊಳಗೆ ಹತ್ತಿ ಯುವತಿಯನ್ನು ಆಲಿಂಗಿಸಿಕೊಂಡನು. ಯುವತಿಯು ಮಂದಹಾಸ ಮಿಶ್ರಿತವಾಗಿ ನಕ್ಕಳು. ಆಳುಗಳು ಯುವಕನ ಸರಕುಗಳನ್ನು ತಂದು ಕಾರಿನಲ್ಲಿ ಹಾಕಿದರು. ಮೂವರೂ ಕಾರಿನಲ್ಲಿ ಮುಂದಾದರು.

'ಜಾನಕಿಯು' ಮುದುಕಿಯ ಕೈಗಳನ್ನು ಬಹು ಸ್ನೇಹಭಾವದಿಂದ ನೆಕ್ಕತೊಡಗಿತು. ಮೂವರೂ ಮಾತಾಡುತ್ತಾ ಮನೆ ಸೇರಿದರು.

೧೯ ನೇ ಅಧ್ಯಾಯ.

ಹೊಸ ವೈದ್ಯರ ಆಗಮನ.

ಅರಸು ಪುರದ ರಾಜಬೀದಿಯಲ್ಲಿ ವಿದೇಶೀಯರಾದ ಶ್ರೀಮಂತ ಪ್ರಯಾಣಕರು ಉಳಿದುಕೊಳ್ಳುವ ಒಂದು ಬಂಗಲೆ ಇತ್ತು. ಅದರ ಎದುರಿನಲ್ಲಿ ಒಂದು ಮನೋಹರವಾದ ಉದ್ಯಾನವನವಿರುವುದು. ಈ ಉದ್ಯಾನವನದ ಎದುರಿಗಾಗಿ, ಆ ಪಟ್ಟಣದ ಹೆದ್ದಾರಿಯು ಹರಿದು, ಸ್ವಲ್ಪ ದೂರದಲ್ಲೇ ಅನೇಕ ಶಾಖೆಗಳಾಗಿ ಒಡೆದಿತ್ತು. ಆ ದಾರಿಯೊಳ್ಳೊಂದು ರಸ್ತೆಯು, ಪೂರ್ವೋಕ್ತ ಪ್ರಯಾಣಿಕರ ಬಂಗಲೆಯನ್ನು ಸುತ್ತಿ ಹಿಂಭಾಗದ ಮೈದಾನದಲ್ಲಿ ಕಾಣಿಸುತ್ತಿದ್ದ ಸರಕಾರಿ ಧರ್ಮಾಸ್ಪತ್ರೆಯಲ್ಲಿ ಮುಕ್ತಾಯವಾಗುತ್ತಿತ್ತು.

ಸಾಯಂಕಾಲ ೬ ಗಂಟೆ ಸಮಯವಾಗಿತ್ತು. ಈ ಬಂಗಲೆಯ ಎದುರಿನಲ್ಲಿರುವ ಹೂದೋಟದಲ್ಲಿ ಒಬ್ಬ ಯುವಕನು ನಿಂತಿದ್ದನು. ರಾಜಬೀದಿಯಲ್ಲಿ ತಿರುಗಾಡುತ್ತಿದ್ದ ಜನರನ್ನೆಲ್ಲಾ ನೋಡುತ್ತಿದ್ದನು. ಪಾಶ್ಚಿಮಾತ್ಯರ ಉಡುಪನ್ನು ಧರಿಸಿ, ಬಹು ಸುಂದರಾಕಾರವಾಗಿ ಶೋಭಿಸುತ್ತಿದ್ದ ಅವನು, ಹಿಂದೂ ದೇಶೀಯನಾಗಿದ್ದುದರಿಂದ, ಪ್ರತಿಯೊಬ್ಬ ಪಥಿಕನೂ ಅವನನ್ನೊಮ್ಮೆ ಮುಖವೆತ್ತಿ ನೋಡಿಯೇ ಮುಂದಡಿ ಇಡುತ್ತಿದ್ದನು. ಅವನ ಮುಖದ ಮೇಲೆ ಆಗ ತಾನೇ ಉದ್ಭವಿಸಿ ಬರುತ್ತಿದ್ದ ಪುರುಷ ಲಕ್ಷಣದ ಕುರುಹನ್ನು ಅವನು ಕಾಲೋಚಿತ ಮರ್ಯಾದೆಗೆ ಸರಿಯಾಗಿ ಕತ್ತರಿಸಿ ಬೆಳೆಸಿದ್ದನು. ಎಲ್ಲರೂ ಅವನನ್ನು ದೃಷ್ಟಿಸುತ್ತಿದ್ದರು. ಆದರೆ ಯಾರೂ ಅವನನ್ನು ಮಾತಾಡಿಸದಿದ್ದ ಕಾರಣ, ಅವನೊಬ್ಬ ವಿದೇಶಿಯನೆಂಬುವುದು ವ್ಯಕ್ತವಾಗುತ್ತಿತ್ತು.

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತವೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–29 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ, ರಾಮಚಂದ್ರ ಕರ್ಕೆ.
ಮುನ್ನಾ ಕಂಪೆನಿ,
(52–5) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.
ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಪ್ಪನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ. ಮಾಗಪ್ಪನವರು.
ನಾಪೋಕ್ಲು—ಮ. ಚೆಕ್ಕೆಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಕೃಷ್ಣಪ್ಪನವರು.

ಸೂಚನೆ.— ಪ್ರಿಂಟಾದ ರಶೀತಿ ಹಾಜರಿಕ್ಕೊಳ್ಳದೆ ಯಾರೂ ಚಂದಾ ಕೊಡತಕ್ಕದ್ದಲ್ಲವಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರಗಳಿಗೆ ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2[illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–44

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

25 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಮದನ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಬಾಬನೂ ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಪ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅದನ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್—ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರಜರರ್—ರಾವ್ ಬಹದ್ದೂರ್ ಕೆ ದೇವಯ್ಯನವರು
ಸಕ್ರೆಟರಿ.—ಮೆ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13	„ 8
1 ತಿಂಗಳಿಗೆ—	„ 25	„ 10	„ 6	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು— ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವರುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮೆ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

82-1

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.
ತಾ. ೨೦—೧—೧೯೩೯.
ವಾರ್ಷಿಕ ಚಂದಾ ರೂ. ೩-೮-೦
ಸಂಪುಟ ೧೮] [ಸಂಚಿಕೆ ೩೩

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-6

ಚ್ಯವನಪ್ರಾಶ

ಚ್ಯವನಪ್ರಾಶವೆಂಬುದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಪಿತ್ತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ದಿವ್ಯ ಔಷಧ.

ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣಿ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ದೋಷವನ್ನು ಶೀಘ್ರದಿಂದ ಹೋಗಲಾಡಿಸಿ ಉಧರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಪೊನ್ನಂಪೇಟೆ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಮುಚ್ಚಯ್ಯ, ಗೋಣಿಕೊಪ್ಪಲು.

[22]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ಕುಂದಾಗದ ಸೆಲೂಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೌಶಲ್ಯದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

9

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–33

The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52–23) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–17

ವಿವಿಧ ವಿಚಾರ.

ಹಾರುವ ಟಪ್ಪಾಲು ಬಂಡಿ.

ಅಮೇರಿಕದಲ್ಲಿ ಹಾರುವ ಟಪ್ಪಾಲು ಬಂಡಿಯೊಂದು ರಚಿಸಲ್ಪಟ್ಟಿದೆ. ಇದು ವಿಮಾನದಂತೆ ಗಂಟೆಗೆ 90 ಮೈಲಿಗಳಷ್ಟು ವೇಗವಾಗಿ ಹಾರುತ್ತಾ ಅಲ್ಲಲ್ಲಿ ಟಪ್ಪಾಲುಗಳನ್ನು ಬಟವಾಡೆ ಮಾಡುತ್ತಲೂ, ಕೊಳ್ಳುತ್ತಲೂ ಇರುವುದು. ಪ್ರತ್ಯಕ್ಷಕ್ಕೆ ಇದು ಪೆನ್ನಿಲ್‌ವೇನಿಯಾದ 28 ಪಟ್ಟಣಗಳನ್ನು ಸುತ್ತಾಡುತ್ತಿರುವುದು.

—o0o—

ವಿವಿಧ ಫಲಗಳ ರುಚಿ ವಾಸನೆಗಳನ್ನು ಕೊಡುವ ತೃಣ.

ಹೊಲಿವುಡ್ಡಿನ ಶೋಧಕನೋರ್ವನು ವಿವಿಧ ಫಲಗಳ ರುಚಿ ವಾಸನೆಗಳನ್ನು ಕೊಡುವ ಒಂದು ವಿಜಾತಿಯ ತೃಣವನ್ನು ಸೋಡಾ ನೀರಿನಲ್ಲಿ ಮುಳುಗಿಸಿ ಅದರ ನಳಿಗೆಯಿಂದ ಆ ಪಾನೀಯವನ್ನು ಹೀರಿದಾಗ ಒಂದು ತರದ ಫಲದ ರುಚಿ ವಾಸನೆಗಳ ಅನುಭವವಾಗುತ್ತದೆ. ಬೇರೆ ಬೇರೆ ಫಲಗಳ ರುಚಿ ವಾಸನೆಗಳನ್ನು ಕೊಡುವ ತೃಣಗಳನ್ನು ಕ್ರಮಪ್ರಕಾರ ಆರಿಸಿ ಗುರುತಿಸಿಡಲಾಗಿದೆ.

—o0o—

ವಿಚಿತ್ರ ಗಡಿಯಾರ.

'ಸದ್ದು ಮಾಡದ ಅಲಾರಂ' ಗಡಿಯಾರವನ್ನು ಕೇಳಿದ್ದೀರಾ? ಇಲ್ಲದಿದ್ದರೆ ಕೇಳಿ. ಇಬ್ಬರು ಒಂದೇ ಕೊಠಡಿಯಲ್ಲಿ ಮಲಗಿರುವಾಗ ಒಬ್ಬನು ಬೇಗ ಏಳಬೇಕು. ಆದರೆ ಇನ್ನೊಬ್ಬನಿಗೆ ಏಳಲು ಇಚ್ಛೆ ಇಲ್ಲ. ಆದರೆ ಅಲಾರಂ ಮೊಳಗಿದರೆ ಇಬ್ಬರಿಗೂ ಎಚ್ಚರವಾಗುತ್ತೆ. ಆದ್ದರಿಂದ ಈಗೊಂದು ಗಡಿಯಾರ ಕಂಡು ಹಿಡಿಯಲ್ಪಟ್ಟಿದೆ. ಇದನ್ನು ಬೇಗ ಏಳುವವರು ಮೈಗೆ ಕಟ್ಟಿಕೊಂಡು ಎಷ್ಟು ಹೊತ್ತಿಗೆ ಏಳಬೇಕೋ ಅಷ್ಟು ಹೊತ್ತಿಗೆ ಸರಿಯಾಗಿ, ಒಂದು ವಿಧವಾದ ಸ್ಪ್ರಿಂಗ್ ಜೋಡಣೆಯಿಂದ ಅದು ಆತನನ್ನು ಚುಚ್ಚಿ ಎಬ್ಬಿಸುವುದಂತೆ! ಹೇಗಿದೆ ಆಧುನಿಕ ವಿಜ್ಞಾನಿಗಳ ಶೋಧೆ.

—o0o—

ರಕ್ತವನ್ನು ಭದ್ರವಾದ ಡಬ್ಬಿಗಳಲ್ಲಿ ತುಂಬಿಸಿ ದಾಸ್ತಾನು ಮಾಡುವುದು.

ಬ್ರಿಟಿಷ್ ಯುದ್ಧ ಖಾತೆಯ ತಜ್ಞರು ರಕ್ತವನ್ನು ಭದ್ರವಾಗಿ ಡಬ್ಬಿಗಳಲ್ಲಿ ತುಂಬಿಸಿ ಭಾವಿ ಯುದ್ಧ ಕಾಲಕ್ಕಾಗಿ ದಾಸ್ತಾನು ಮಾಡಿಡುವ ಒಂದು ನವೀನ ಯೋಜನೆಯನ್ನು ಕೈಗೊಂಡಿರುವರು.

ಬಹಳ ವೇಗವುಳ್ಳ ಒಂದು ಬಂಡಿಯಲ್ಲಿ ಒಂದು ರಿಫ್ರಿಜರೇಟರನ್ನು ಇರಿಸಿ ಅದರಲ್ಲಿ ರಕ್ತ ತುಂಬಿದ ಡಬ್ಬಿಗಳನ್ನು ಇಟ್ಟು ಯುದ್ಧ ಕಾಲದಲ್ಲಿ ರಕ್ತ ಸುರಿದು ಸಾಯಲಿರುವ ಸೈನಿಕರಿದ್ದಲ್ಲಿಗೆ ಈ ಬಂಡಿಯನ್ನೋಡಿಸುವುದೂ ಮತ್ತು ರಕ್ತ ಸುರಿದ ಸೈನಿಕರಲ್ಲಿ ರಕ್ತ ಭರ್ತಿ ಮಾಡುವುದೂ ಈ ಯೋಜನೆಯ ಮುಖ್ಯ ಉದ್ದೇಶ್ಯವಾಗಿದೆ.

ಸ್ಪಾನಿಷ್ ಯುದ್ಧ ಕಾಲದಲ್ಲಿ ಈ ಯೋಜನೆಯು ಅತ್ಯುಪಯುಕ್ತವಾಗಿ ಕಂಡು ಬಂದಿದ್ದು ಅವರು ಈ ಯೋಜನೆಯನ್ನನುಸರಿಸಲು ಬ್ರಿಟಿಷರಿಗೆ ಸಲಹೆಗಳನ್ನು ಕೊಟ್ಟಿರಂತೆ.

ಇಲ್ಲಿ ಇನ್ನು ಮುಂದೆ ಯುದ್ಧಕ್ಕೆ ಯೋಧರು ಹೆದರಬೇಕಾಗಿಲ್ಲವಲ್ಲ! ಯುದ್ಧವೆಂಬುವುದು ಬರೇ ಆಟವಾಗಿ ಹೋಗುವಷ್ಟು ವಿಜ್ಞಾನ ದೇವಿಯ ಕೃಪೆಯಿದ್ದರೆ ಸಾಕು.

—o0o—

ಯುದ್ಧ ಕಾಲದಲ್ಲಿ ಶುನಕ ಸೇನೆ.

ಯುದ್ಧ ಕಾಲದಲ್ಲಿ ಸಹಕಾರಿಯಾಗುವಂತೆ ನಾಯಿಗಳ ಸೈನ್ಯ ಒಂದರ ತರಬೇತಿ ಇದೀಗ ಜರ್ಮನಿಯಲ್ಲಿ ನಡೆಯುತ್ತಿದೆ. ಈ ನಾಯಿಗಳಿಂದ ತಂತಿ ಸಮಾಚಾರ, ಟೆಲಿಫೋನ್ ಸಂಬಂಧಗಳು ನಡೆಯದಾಗ ಬಹಳ ಸಹಾಯ ದೊರೆಯಬಹುದಂತೆ. ಅವುಗಳಿಗೆ ಒಂದೆಡೆಯಿಂದ ಇನ್ನೊಂದೆಡೆ ಸುದ್ದಿ ಒಯ್ಯುವ, ಗಾಯಗೊಂಡವರಿಗೆ ಸಹಾಯ ಮಾಡುವ ವಿಚಾರಗಳನ್ನೆಲ್ಲ ಕಲಿಸಲಾಗುತ್ತದೆ. ಅದೇ ರೀತಿಯಾಗಿ ಫ್ರಾನ್ಸೂ ಇದೀಗ ತನ್ನ ಸೇನೆಯ ಅಂಗವಾಗಿ ನಾಯಿಗಳ ಸೇನೆಯನ್ನು ತಯಾರಿಸಲು ಮುಂದಾಗಿದೆ.

—o0o—

ಪೋಲೀಸ್ ನಾಯಿಗಳು.

ನಮ್ಮಲ್ಲಿ ಅವು ಇಲ್ಲ. ಅದಕ್ಕಾಗಿ ಭಯಪಡಬೇಕಾಗಿಲ್ಲ! ಆಸ್ಟ್ರೇಲಿಯದ ಸಿಡ್ನಿಯಲ್ಲಿ ಒಂದು ಮಗು ಕಾಣೆಯಾಯಿತು. ಸುಮಾರು ಎರಡು ದಿನಗಳ ತನಕ 20 ಮಂದಿ ಪೋಲೀಸರೂ, ಸುಮಾರು 100 ಮಂದಿ ನಾಗರೀಕರೂ ಅದನ್ನು ಹುಡುಕಲು ಮುಂದಾಗಿ ಸೋತರು. ಕೊನೆಗೆ ಒಂದು ಪೋಲೀಸ್ ನಾಯಿಯನ್ನು ಬಿಡಲು ಅದು ಬರೇ ಅರ್ಧ ತಾಸಿನೊಳಗೆ ಮಗುವನ್ನು ಹುಡುಕಿಬಿಟ್ಟಿತು. ಇದೀಗ ನೀರಲ್ಲಿ ಬಿದ್ದವರ ಹಾಗೂ ತಪ್ಪಿ ಹೋದವರನ್ನು ಹುಡುಕಲು ನಾಯಿಗಳನ್ನು ಇಲ್ಲಿ ತರಬೇತಿ ಮಾಡುತ್ತಿದ್ದಾರೆ. ಇವುಗಳಷ್ಟು ಜಾಣ್ಮೆ ಈ ಕೆಲಸಗಳಲ್ಲಿ ಮಾನವನಿಗೆ ಬರದಂತೆ!

—o0o—

ವಿಚಿತ್ರ ವಿಶ್ವ

ಈ ವಿಚಾರ ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಒಂದು ವಿಧವಾದ ಸೌದೆ ಈಗ ಪತ್ತೆಯಾಗಿದೆ. ಒದ್ದೆಯಾದಷ್ಟೂ ಅದು ಚೆನ್ನಾಗಿ ಉರಿಯುವುದು. ಒಣಗಿದಷ್ಟು ಉರಿಯದು. ಹೇಗಿದೆ ಈ ವಿಚಿತ್ರ ಸುದ್ದಿ! ಆಸ್ಟ್ರೇಲಿಯಾದ ಜಾನ್‌ಸನ್ ಎಂಬ ನದಿಯ ಕಾಡಿನ ಮರಗಳಲ್ಲಿ ಜಾನ್‌ಸನ್ ಹಾರ್ಡ್ ಉಡ್ ಎಂಬುದೊಂದು ಈ ಮರವು ಆಸ್ಟ್ರೇಲಿಯಾದ ಕಾಡುಗಳಲ್ಲೆಲ್ಲಾ ಬಹಳ ಹೆಚ್ಚಿಯಂತೆ. ಈ ಮರವು ಪ್ರಕಾಶಮಾನವಾಗಿ ಹತ್ತಿಸಿದ ಕ್ಷಣವೇ ಉರಿಯುವುದಿಲ್ಲವೆ, ಉರಿಯುತ್ತಿರುವ ಕಡೆಯೇ ತನ್ನಲಿರತಕ್ಕ ಜಲಾಂಶವನ್ನು ಹೊರ ಹಾಕುವುದಂತೆ! ನೀರು ಆರಿದ ಕ್ಷಣವೇ ಬೆಂಕಿಯು ಪ್ರಕಾಶ ಕಡಿಮೆಯಾಗಿ ತಣ್ಣಗಾಗುವುದಂತೆ! ಇದಲ್ಲವೇ ವಿಚಿತ್ರ ವಿಶ್ವದ ಮಹಿಮೆ?

—o0o—

ಜಪಾನಿನ ಆಶೆ.

ಜಪಾನೂ ಸುಮ್ಮನೆ ಕುಳಿತಿಲ್ಲ. ತನ್ನ ಜನರಿರುವ ಪ್ರದೇಶವೆಲ್ಲ ತನಗೇ ದೊರೆಯಬೇಕೆಂದು ಆಗ್ರಹಗೊಳ್ಳುವ ಹಿಟ್ಲರನ ಸ್ನೇಹಿತರಾದ ಜಪಾನೀಯರೂ ಈ ವಿಷಯಕ್ಕೆ ಮುಂದಾಗಿದ್ದಾರೆ. ಉತ್ತರ ಅಮೇರಿಕದ ಕೆನಡಾ ದೇಶದಲ್ಲಿ ಜಪಾನೀ ಜನಸಂಖ್ಯೆಯು ವರ್ಷೇ ವರ್ಷೇ ಏರುತ್ತಾ ಇದೆ. ಏನೂ ಹಿಡಿಯಲೆಂದು ಹೊರಟ ಜಪಾನಿಯರೂ ಅಷ್ಟಿಷ್ಟೆ ವಿನಹ ಕೆನಡಾವನ್ನು ಪ್ರವೇಶಿಸಿ ಅಲ್ಲೇ ಇರಲಾರಂಭಿಸಿದ್ದಾರೆ. ಕೆನಡಾದಲ್ಲಿನ ಜಪಾನಿ ಜನಸಂಖ್ಯೆಯು ಶೇಕಡ 92ರಷ್ಟು ಭಾಗವು ಬ್ರಿಟಿಷ್ ಕೊಲಂಬಿಯಾ ಪ್ರದೇಶದಲ್ಲೇ ಇದ್ದಾರೆ. ಜಪಾನೀಯರ ಸಂಖ್ಯೆ ಏರುತ್ತಿರುವಂತೆ, ಚೀನಿಯರ ಸಂಖ್ಯೆ ಕಡಿಮೆಯಾಗುತ್ತಲೇ ಇದೆ. ಸರಾಸರಿ ವರ್ಷಕ್ಕೆ 1 ಸಾವಿರದಂತೆ ಚೀನೀಯರ ಸಂಖ್ಯೆ ಕಡಿಮೆಯಾಗುತ್ತಿದೆ. ಇದೀಗ ಬ್ರಿಟಿಷ್ ಕೊಲಂಬಿಯಾವನ್ನು ಸಂಪೂರ್ಣ ತಮ್ಮದಾಗಿ ಕಾಯೇ ಈ ಮಾಡಿಕೊಳ್ಳುವ ಜಪಾನಿನ ಯೋಚನೆ.

—o0o—

ಗಾಜಿನ ಹೃದಯಗಳು.

ಕಬ್ಬಿಣದ್ದಾಯಿತು. ಈಗ ಗಾಜಿನ ಹೃದಯಗಳು ಬಂದಿವೆ. ಶರೀರದ ಹೃದಯಕೋಶ, ಶ್ವಾಸಕೋಶ, ಮೂತ್ರ ಜನಕಾಂಗಗಳು, ಗುಲ್ಮ, ಇತರ ರಸೋತ್ಪತ್ತಿ ಅಂಗಗಳು, ನರಗಳು ಮುಂತಾದವು ಕ್ರಮತಪ್ಪಿ ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸದೇ ಇದ್ದರೆ ಈಗ ಹೊಸದಾಗಿ ಕಂಡು ಹಿಡಿಯಲ್ಪಟ್ಟಿರುವ ಗಾಜಿನ ಹೃದಯದಿಂದ ಅದನ್ನು ಸರಿಪಡಿಸಿ ಆರೋಗ್ಯವಂತರಾಗಬಹುದೆಂದು ಹೇಳಲಾಗಿದೆ. ಈ ಹೃದಯಗಳು ಕರ್ನಲ್ ಚಾರ್ಲ್ಸ್ ಲಿಂಡ್‌ಬರ್ಗರವರ ಪರಿಶೋಧನೆಯ ಫಲವೇ ಆಗಿದೆ. ಈಗಾಗಲೇ 1 ಲಕ್ಷ ಗಂಟೆಗಳ ಕಾಲದಲ್ಲಿ 900 ಸಲ ಪ್ರಯೋಗ ಪರೀಕ್ಷೆ ನಡೆಸಿ ಯಶಸ್ವಿಯಾದುದು ಕಂಡು ಬಂದಿದೆಯೆಂದು ಹೇಳಲಾಗಿದೆ. ಹೀಗೆ ಇವರಿಂದ ಅವಯವಗಳು 2ರಿಂದ 30 ದಿನಗಳ ವರೆಗೂ ಕೆಲಸ ಮಾಡುವಂತೆ ಈಗ ಸದ್ಯಕ್ಕೆ ಕಂಡು ಹಿಡಿಯಲಾಗಿದೆ. ಹೃದಯ ಕ್ರಿಯೆ ಮುಂತಾದುವು ಸಹ ಸರಿಯಾಗಿ ನಡೆಯುವದಂತೆ! ಎಲ್ಲಾ ವಿಜ್ಞಾನದ ಮಹತ್ವವಲ್ಲವೇ?

—o0o—

ರಾಜ್ಯಕ್ಕಿಂತ ವಿದ್ಯಾವಂತ ಸತಿಯೇ ಹೆಚ್ಚು!

ರಾಜ್ಯಕ್ಕಿಂತ ವಿದ್ಯಾವತಿಯಾದ ಸತಿಯೇ ಹೆಚ್ಚೆಂದು ಹೇಳುತ್ತ ರಾಜ್ಯವನ್ನೇ ತ್ಯಜಿಸಿದ ರಾಜ ಕುಮಾರನ ಸಂಗತಿಯೊಂದು ಕ್ವೆಟ್ಟಾದಿಂದ ಬಂದಿರುವ ಹಾಗೆ ನ್ಯಾಷನಲ್ ಹೆರಾಲ್ಡ್‌ನಲ್ಲಿ ಬರೆದಿದೆ.

ಖಲತ್ ಸಂಸ್ಥಾನದ ಸಹೋದರ ರಾಜ ಕುಮಾರ ಮಹ್ಮದ್ ರಹೀಮನಿಗೆ ವಿದ್ಯಾವತಿ ಯುವತಿಯನ್ನು ಕೊಟ್ಟು ಮದುವೆಯಾಗಿತ್ತು. ಆತನು ಮೈಕ್ರೋನಿನ ಗವರ್ನರಾಗಿದ್ದನು. ರಹೀಮನು ಪರದಾ ಇಲ್ಲದ ಸತಿಯೊಡನೆ ಸದಾ ತಿರುಗುತ್ತಿದ್ದುದು ಸಂಸ್ಥಾನದ ಸರದಾರನಿಗೆ ಸಂಬೇಕಲಿಲ್ಲ. ಖಲತ್ತಿನ ಖಾನನು ರಹೀಮನನ್ನು ಕುರಿತು 'ನೀನು ದಂಪತಿಯನ್ನು ತ್ಯಜಿಸಬೇಕು—ಇಲ್ಲವೇ ರಾಜ್ಯಬಿಟ್ಟು ಹೊರಡಬೇಕು' ಎಂದನಂತೆ. ರಾಜಕುಮಾರ ರಹೀಮನು ಆದರಂತೆ ರಾಜ್ಯವನ್ನು ಬಿಟ್ಟು ವಿದ್ಯಾವತಿಯಾದ ಸತಿಯೊಡನೆ ಈಗ ಈಚೆಗೆ ಬಂದಿರಲು ನಿರ್ಧರಿಸಿರುವಂತೆ.

—o0o—

ಸರೋವರದ ಕೆಳಗೆ ನಾಟ್ಯ ಶಾಲೆ!!

ಈಜಾಡುವ ಕೊಳ; ಅದರ ಕೆಳಗಡೆ ಒಂದು ದೊಡ್ಡ ನಾಟ್ಯ ಶಾಲೆ, ಈ ಶಾಲೆಯಲ್ಲೇ ಫಲಾಹಾರ ಗೃಹಗಳೂ ಇತರ ವಿಹಾರ ಮಂದಿರಗಳೂ ಇರುವವು. ಇಲ್ಲಿ ಕುಳಿತುಕೊಂಡು ಮೇಲೆ ನೋಡಿದರೆ ಸರೋವರದ ನೀರು ಕಾಣಿಸುವುದು. ಅಂದರೆ ಸರೋವರದ ನೆಲಕ್ಕೆ ಭಾರವಾದ, ಮುರಿಯದ, ದಪ್ಪವಾದ ಮತ್ತು ಗಟ್ಟಿಯಾದ ಗಾಜಿನ ಹಲಗೆಗಳನ್ನು ಹಾಕಿ ಭದ್ರಪಡಿಸಿ, ನೀರಿನೊಳಗೆಲ್ಲಾ ಕಾಣುವಂತೆ ವಿದ್ಯುಚ್ಛಕ್ತಿಯ ಪ್ರಕಾಶವಾದ ಕಿರಣಗಳನ್ನೂ ಬಿಡಲಾಗುವುದಂತೆ. ಇದರಿಂದ ಸರೋವರದಲ್ಲಿ ಈಜುವವರೂ ಮೇಲಿಂದ ಮುಳುಕಿ ನೀರಿನೊಳಗೆ 'ಡೈವ್' ಮಾಡುವ ವಿವಿಧ ರೀತಿಗಳನ್ನೂ ನೋಡಿ ಆನಂದಪಡಬಹುದಾಗಿದೆ. ಹರಿಯುವ ನದಿಯ ಕೆಳಗೇ ರೈಲುಗಳೋಡಾಡುವ ಈ ಕಾಲದಲ್ಲಿ ಇದರಿಂದಷ್ಟೇನೂ ಆಶ್ಚರ್ಯ ತೋರದು.

ಈ ಈಜುವ ಸರೋವರವನ್ನು ಉತ್ತರ ಅಮೇರಿಕದ 'ಸ್ವರ್ಣ ಕಿಂಡಿ'ಯ (ಗೋಲ್ಡನ್ ಗೇಟ್) ಪ್ರದರ್ಶನದ ವೇಳೆಯಲ್ಲಿ ಸಾನ್ ಫ್ರಾನ್‌ಸಿಸ್ಕೋ ನಗರದಲ್ಲಿ ನಿರ್ಮಿಸಲಾಗುವುದೆಂದು ಹೇಳಲಾಗಿದೆ.

—o0o—

ಅಖಿಲ ಕೊಡಗು ಸಹಕಾರಿ ಪರಿಷತ್ತು.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

10. ಮೆಂಬರುಗಳ ಉತ್ಪತ್ತಿಯನ್ನು ಸರಿಯಾದ ರೀತಿ ಮತ್ತು ಸ್ಥಳಗಳಲ್ಲಿ ಮಾರಾಟಮಾಡಲಿಕ್ಕೆ ಕೊಡಗಿನಲ್ಲಿ ಒಂದು ಸಹಕಾರ ಸಂಸ್ಥೆಯನ್ನು ಪಡ್ನೆ ತೆರೆಯಬೇಕೆಂದು ಈ ಸಮ್ಮೇಳನವು ತೀರ್ಮಾನಿಸುತ್ತದೆ.

ಸೂಚಕರು–ಮೆ. ಪಿ. ಜಿ. ಐಯ್ಯಪ್ಪನವರು. ಅನುಮೋದಕರು–ಮೆ. ಕೊಕ್ಕಲೆರ ತಿಮ್ಮಯ್ಯನವರು. ಮೆ. ಗಳಾದ ಪಿ. ಪಿ. ಮಾದೈಯ್ಯನವರೂ, ಬಿದುರೂರು ಮಾದೈಯ್ಯನವರೂ ಒತ್ತಾಸೆಯಾಗಿ ಮಾತಾಡಿದರು.

ರಿಜಿಸ್ಟ್ರಾರವರು ಕೂಡ ಈ ರೀತಿಯ ಒಂದು ಸಂಸ್ಥೆಯನ್ನು ಏರ್ಪಡಿಸುವುದು ಉತ್ತಮವೆಂದು ಸೂಚಿಸಿದರು.

ಈ ವಿಷಯದಲ್ಲಿ ಪ್ರಥಮವಾಗಿ ಸರಕಾರದ ಸಹಾಯವನ್ನು ಕೇಳಿಕೊಳ್ಳುವದು ಉತ್ತಮವೆಂದು ಅಧ್ಯಕ್ಷರು ಸೂಚಿಸಿದ ಮೇರೆ ಠರಾವು ಈ ಕೆಳಗಿನ ರೀತಿ ಮಾರ್ಪಡಿಸಲ್ಪಟ್ಟಿತು.

ಈ ದೇಶದ ಉತ್ಪತ್ತಿಗಳನ್ನು ಲಾಭಕರವಾದ ರೀತಿಯಲ್ಲಿ ಮಾರಾಟ ಮಾಡುವ ದಾರಿಗಳನ್ನು ಹುಡುಕಿ ಅದಕ್ಕೆ ತಕ್ಕ ಏರ್ಪಾಡುಗಳನ್ನು ಪಡ್ನೆ ಮಾಡುವಂತೆ ಸರಕಾರವನ್ನು ರಿಜಿಸ್ಟ್ರಾರವರ ಮೂಲಕ ಈ ಸಭೆಯು ಕೇಳಿಕೊಳ್ಳುತ್ತದೆ.

ಬದಲಾಯಿಸಿದ ಠರಾವು ಸರ್ವಸಮ್ಮತದಿಂದ ಪಾಸಾಯಿತು.

11. ಕೊಡಗಿನ ಸಹಕಾರಿ ಸಂಘಗಳಿಂದ ಸಾಲವಡಕೊಂಡ ಮೆಂಬರುಗಳಿಗೆ ಬೇರೆ ಪ್ರಾಂತ್ಯದಲ್ಲಿ ಆಸ್ತಿ ಇದ್ದ ಪಕ್ಷ ಅಂಥ ಆಸ್ತಿಗಳ ಮೇಲೆ ಅಮಲ್ಜಾರಿ ನಡಿಸಿದರೆ ಅಲ್ಲಿಯ ಸರಕಾರವು ಅದನ್ನು ಅಂಗೀಕರಿಸಿ ಜಾರಿ ನಡಿಸುವಂತೆ ಕೇಳಿಕೊಳ್ಳಬೇಕಾಗಿ ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಪಿ. ಜಿ. ಐಯ್ಯಪ್ಪನವರು ಅನುಮೋದಕರು–ಮೆ. ಪಿ. ಪಿ. ಮಾದಯ್ಯನವರು ಸರ್ವಸಮ್ಮತದಿಂದ ಪಾಸಾಯಿತು.

ಪ್ರಾಂತೀಕ ಸಮ್ಮೇಳನವನ್ನು 2 (ಎರಡು) ವರ್ಷಕೊಂದು ಸಲ ನಡಿಸುವುದರ ಬದಲು 3 (ಮೂರು) ವರ್ಷಗಳಿಗೊಂದು ಸಲ ನಡಿಸುವುದು ಒಳ್ಳೆದೆಂದು ಈ ಸಮ್ಮೇಳನವು ತೀರ್ಮಾನಿಸುತ್ತದೆ.

ಸೂಚಕರು–ಮೆ. ಕೆ. ಕೆ. ಬೆಳ್ಯಪ್ಪನವರು ಅನುಮೋದಕರು–ಮೆ. ಐ. ಪಿ. ಕಾರ್ಯಪ್ಪನವರು ಸರ್ವಸಮ್ಮತದಿಂದ ಪಾಸಾಯಿತು.

13. ಬ್ಯಾಂಕಿಗೆ ಸರ್ಕಾರಿ ಪ್ರೊನೋಟುಗಳ ಮೇಲೆ ಸಿಕ್ಕಿದ ಬಡ್ಡಿಯ ಮೇಲೆ ಇನ್‌ಕಮ್ ಟ್ಯಾಕ್ಸ್ ಹಾಕಕೂಡದೆಂದು ಸರಕಾರವನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೆ. ಕೆ. ಬೆಳ್ಯಪ್ಪನವರು,

ಇದು ಇಂಡಿಯ ಗವರ್ನ್‌ಮೆಂಟಿನವರಿಗೆ ಸಮ್ಮಂಧಪಟ್ಟದ್ದರಿಂದಲೂ ಮತ್ತು ಈ ಭಾಬಿನಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ ಎಂದೂ ಬ್ಯಾಂಕಿನ ಗೌರವ ಕಾರ್ಯದರ್ಶಿಯವರು ವಿವರಿಸಿದ ನಂತರ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

14. ಭತ್ತ ಮಾರಾಟ ಸಂಘಗಳು ತಮ್ಮ ಉದ್ಯೋಗಸ್ತರ ಸಂಬಳ ಕೊಡಲು ಮತ್ತು ಇತರ ಖರ್ಚುಗಳನ್ನು ಮಾಡಲು ಸಹಾಯವಾಗುವಂತೆ ಮೊದಲಿನ ಐದು ವರ್ಷಗಳವರೆಗೆ ಸರಕಾರವು ಸಾಕಷ್ಟು ಧನ ಸಹಾಯ ಮಾಡಬೇಕೆಂದು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೆ. ಕೆ. ಬೆಳ್ಯಪ್ಪನವರು. ಅನುಮೋದಕರು–ಮೆ. ಪುಚ್ಚಿಮಾಡ ಮಾದಯ್ಯನವರು. ಸರ್ವಸಮ್ಮತದಿಂದ ಪಾಸಾಯಿತು.

15. ಸಹಕಾರಿ ಸಂಘಗಳ ಮೆಂಬರುಗಳಿಗೆ ಕಬ್ಬಿಣದ ನೇಗಿಲುಗಳನ್ನು ಈಗಿನ ಕ್ರಯದ ಅರ್ಧಕ್ಕೆ ಸರಬರಾಯಿ ಮಾಡಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೆ. ಕೆ. ಬೆಳ್ಯಪ್ಪನವರು. ಅನುಮೋದಕರು–ಮೆ. ಬಿದುರೂರು ಮಾದಯ್ಯನವರು. ಸರ್ವಸಮ್ಮತದಿಂದ ಪಾಸಾಯಿತು

16 ಜೇನು ಗೂಡುಗಳನ್ನು ಸಂಘಗಳ ಮೆಂಬರುಗಳಿಗೆ ಈಗಿನ ಕ್ರಯದ ಅರ್ಧಕ್ಕೆ ಸರಬರಾಯಿ ಮಾಡಬೇಕೆಂದು ಸರಕಾರವನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೆ. ಕೆ. ಬೆಳ್ಯಪ್ಪನವರು. ಅನುಮೋದಕರು–ಮೆ. ಬಿದುರೂರು ಮಾದೈಯ್ಯನವರು

ಅಧ್ಯಕ್ಷರು ಕಾರಣಗಳನ್ನು ಕೊಟ್ಟು ಈ ಠರಾವನ್ನು ವಾಪಾಸು ತೆಗೆಯಬೇಕೆಂದು ಕೇಳಿಕೊಂಡ ಮೇರೆ ವಾಪಾಸು ತೆಗೆಯಲಾಯಿತು.

17. ಸರಕಾರದವರು ರೈತರ ಸಾಲ ನಿವಾರಣೆಗಾಗಿ ಮಂಜೂರ್ಮಾಡಿರುವ ದೀರ್ಘ ಕಂತಿನ ಸಾಲವನ್ನು ಸೆಂಟ್ರಲ್ ಬ್ಯಾಂಕ್ ಮತ್ತು ಸಹಕಾರಿ ಸಂಘಗಳ ಮೂಲಕ ಕೊಡಲು ಏರ್ಪಾಡು ಮಾಡುವಂತೆ ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೀತಿಯಂಡ ಕುಟ್ಟಪ್ಪನವರು. ಅನುಮೋದಕರು–ಮೆ. ಪಟ್ಟಮಾಡ ಕುಶಾಲಪ್ಪನವರು. ಸರ್ವಸಮ್ಮತದಿಂದ ಪಾಸಾಯಿತು.

18. ಪ್ರತಿ ಯೂನಿಯನ್ನಿನಲ್ಲಿಯೂ ಸಹಕಾರ ಸಾಹಿತ್ಯದ ಪುಸ್ತಕಾಲಯವನ್ನು ತೆರೆಯಲು ಸರಕಾರವು ಪ್ರತಿ ಯೂನಿಯನ್‌ಗಳಿಗೆ ನೂರು ರೂಪಾಯಿ ಮೇರೆ ಧನ ಸಹಾಯ ಮಾಡಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು–ಮೆ. ಕೀತಿಯಂಡ ಕುಟ್ಟಪ್ಪನವರು. ಠರಾವಿನಲ್ಲಿ ವ್ಯತ್ಯಾಸವಿದ್ದುದರಿಂದ ರೂ. 100 ರ ಬದಲು ರೂಪಾಯಿ 50 ರಂತೆ ಸರಕಾರವು ಸಹಾಯ ಮಾಡಬೇಕೆಂದು ಸೂಚಕರು ತಿದ್ದುಪಡಿ ತಂದರು.

ಅನುಮೋದಕರು–ಮೆ. ಪಿ. ಯಂ. ಉತ್ತಪ್ಪ ಬಿ. ಎ. ಯಲ್. ಟಿ ಯವರು ಮೆ. ಕಾಳೇಂಗಡ ಚಿಣ್ಣಪ್ಪ ಮತ್ತು ಜೀರೆರ ಕುಶಾಲಪ್ಪನವರು ಉಪಠರಾವಿಗೆ ವಿರೋಧಿಸಿ ಮಾತಾಡಿದರು.

ಮೆ. ಬಿದುರೂರು ಮಾದೈಯ್ಯನವರು ಪರವಾಗಿ ಮಾತಾಡಿದರು. ತಿದ್ದುಪಡಿಯ ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

ಕೊಡಗಿನ ಪ್ರತಿ ಯೂನಿಯನ್ ಸೆಂಟರುಗಳಲ್ಲಿ ಒಂದೊಂದು ಸಹಕಾರಿ ಸಂಘಗಳನ್ನು ಅಥವ ಗ್ರಾಮಗಳಲ್ಲಿರುವ ಸಂಘಗಳನ್ನು 'ಗ್ರಾಮ ಪುನರ್‌ಜೀವನ ಕೇಂದ್ರ, ಗಳನ್ನಾಗಿ (Rural recon struction centres) ಏರ್ಪಡಿಸಲು ಸರಕಾರವು ತಕ್ಕ ಏರ್ಪಾಡು ಮಾಡಬೇಕಾಗಿ ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು ಮೆ ಬಲ್ಲಚಿಂಡ ಬೋಪೈಯ್ಯನವರು, ಅನುಮೋದಕರು–ಮೆ. ಪಿ. ಪಿ. ಮಾದೈಯ್ಯನವರು, ಮೆ. ಪಳಂಗಂಡ ಸಂಜಪ್ಪನವರು ಠರಾವಿಗೆ ವಿರೋಧವಾಗಿ ಮಾತಾಡಿದರು.

ಮೆ. ಬಿ. ಐ ಗಣಪತ್ತಿಯವರು ಪರವಾಗಿ ಮಾತಾಡಿ ಇದಕ್ಕಾಗಿಯೇ ಒಬ್ಬ ಸುಪರ್‌ವೈಜರನ್ನು ತರಬೇತು ಮಾಡಬೇಕೆಂದು ಸೂಚಿಸಿದರು

ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

20. ಸೆಂಟ್ರಲ್ ಬ್ಯಾಂಕಿನ ಜನರಲ್ ಬಾಡಿ ಮೀಟಿಂಗಿಗೆ ಮತ್ತು ಕಾನ್ಫರೆನ್ಸಿಗೆ ಬರುವ ಡೆಲಿಗೇಟರುಗಳಿಗೆ ಊಟ ಏರ್ಪಡಿಸುವುದರ ಬದಲು ಹಣ ರೂಪದಲ್ಲಿ ಬತ್ಯ ಕೊಟ್ಟರೆ ಉತ್ತಮವೆಂದು ಈ ಸಮ್ಮೇಳನವು ಸೂಚಿಸುತ್ತದೆ. ಸೂಚಕರು– ಮೆ. ಪಿ. ಪಿ. ಮೊಣ್ಣಯ್ಯನವರು. ಠರಾವನ್ನು ಚರ್ಚಿಸಿದನಂತರ ವಾಪಾಸು ತೆಗೆದುಕೊಳ್ಳಲಾಯಿತು.

21. ವಿಷಯ ನಿಯಾಮಕ ಸಮಿತಿ ಒಂದನ್ನು ಸ್ಥಾಪಿಸಿ ಠರಾವುಗಳನ್ನು ಚರ್ಚಿಸುವುದಲ್ಲದೆ ಬ್ಯಾಂಕು ಡೈರೆಕ್ಟರುಗಳೇ ಈ ಕೆಲಸ ಮಾಡಿ ಡೆಲಿಗೇಟರುಗಳ ಠರಾವನ್ನು ರದ್ದು ಮಾಡಕೂಡದೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ. ಸೂಚಕರು– ಮೆ. ಪಿ. ಮಾದಯ್ಯನವರು, ಅನುಮೋದಕರು– ಮೆ. ಪಾಲೇಕಂಡ ಐಯ್ಯಪ್ಪನವರು.

ಇನ್ನು ಮುಂದೆ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳು ಮತ್ತು ಪ್ರತಿಯೊಂದು ಯೂನಿಯನ್ನಿನ ಒಬ್ಬ ಪ್ರತಿನಿಧಿಯು ಕೂಡಿ ಈ ವಿಷಯ ನಿಯಾಮಕ ಸಮಿತಿಯು ಆಗಬೇಕು. ಬ್ಯಾಂಕಿನ ಪ್ರೆಸಿಡೆಂಟರು ಮತ್ತು ಗೌರವ ಕಾರ್ಯದರ್ಶಿಯವರು ಈ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಆಗಿರಬೇಕೆಂದು ಮೆ. ಪಿ. ಐ. ಬೆಳ್ಯಪ್ಪನವರು ಸೂಚಿಸಿದ ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

22. ಸಮ್ಮೇಳನದಲ್ಲಿ ಪ್ರದರ್ಶನಕ್ಕೆ ಇಡುವ ವ್ಯವಸಾಯದ ಫಸಲುಗಳಿಗೆ ಇನಾಮು ಕೊಡುವ ಸಂದರ್ಭದಲ್ಲಿ ಪ್ರದರ್ಶಕರು ತಾವು ಖುದ್ದಾಗಿ ಬೆಳೆಸಿದ ಪದಾರ್ಥಗಳಿಗೆ ಮಾತ್ರ ಇನಾಮು ಹಂಚುವಂತೆ ತಕ್ಕ ಏರ್ಪಾಡು ಮಾಡಬೇಕು. ಸೂಚಕರು– ಮೆ. ಸೆಲ್ಲಮಕ್ಕಳ ಅಚ್ಚಪ್ಪನವರು, ಅನುಮೋದಕರು– ಮೆ. ಅಜ್ಜಿಕುಟ್ಟಿರ ಪೊನ್ನಪ್ಪನವರು. ಮೆ ಜಮ್ಮಡ ಮಾದಪ್ಪನವರು ಠರಾವಿಗೆ ವಿರೋಧವಾಗಿ ಮಾತಾಡಿದರು. ಅಧ್ಯಕ್ಷರು ಮತ್ತು ರಿಜಿಸ್ಟ್ರಾರವರು ಈ ವಿಷಯ ತಾವೇ ಬೆಳೆಸಿದ ವಸ್ತುಗಳನ್ನೇ ಪ್ರದರ್ಶನಕ್ಕೆ ಇಡಬೇಕೆಂದೂ, ಬೇರೆಯವರು ಬೆಳೆಸಿದ ಸಾಮಾನುಗಳನ್ನು ಕೊಂಡುಕೊಂಡು ಪ್ರದರ್ಶನಕ್ಕೆ ಇಡುವುದು ಒಳ್ಳೆಯದಲ್ಲವೆಂದೂ, ಹಾಗೆ ವಂಚನೆಯಿಂದ ಪ್ರದರ್ಶನವುದು ಪ್ರದರ್ಶಕರಿಗೆ ಗೌರವವಲ್ಲವೆಂದೂ, ಈ ವಿಷಯವನ್ನು ಆಜಮಾಯಿಸಿ ನಿರ್ಧರಿಸುವುದು ಅಸಾಧ್ಯವೆಂದೂ, ತಿಳಿಸಲು ವಿವರಿಸಿದನಂತರ ಠರಾವನ್ನು ವಾಪಾಸು ತೆಗೆದುಕೊಳ್ಳಲಾಯಿತು.

23. ಕಳೆದ ಸಹಕಾರಿ ಸಮ್ಮೇಳನದಲ್ಲಿ ಮಂಜೂರಾದ ರೈತರ ಬಾಣೆ ಜಾಗದಲ್ಲಿ ಮಂಜೂರಾತಿ ಪಡೆದು ಬೆಳೆಸಿದ ಕರ ಫಸಲುಗಳಿಗೆ ಹೇಗ ಮಾನ್ಯತೆಯ ಕೊಡುತ್ತಾರೋ ಹಾಗೆಯೇ ಮಂಜೂರಾತಿ ಪಡೆಯದ ವ್ಯವಸಾಯ ಮಾಡದ ಫಸಲಿಗೆ ಸಹ ಮಾನ್ಯತೆಯ ಕೊಡುವಂತೆ ರವಿನ್ಯೂ ರಗ್ಯುಲೇಶನ್ ತಿದ್ದುಪಡಿ ಮಾಡಬೇಕೆಂದು ಈ ಸಮ್ಮೇಳನವು ಸರಕಾರದವರನ್ನು ಕೇಳಿಕೊಳ್ಳುತ್ತದೆ. ಸೂಚಕರು– ಮೆ. ಉದಿಯಂಡ ಮಾಚಯ್ಯನವರು, ಅನುಮೋದಕರು– ಮೆ. ಕೆ. ಕಾರ್ಯಪ್ಪನವರು ಸರ್ವಸಮ್ಮತದಿಂದ ಪಾಸಾಯಿತು.

14 ಠರಾವುಗಳು ಕಾರಣಾಂತರದಿಂದ ಸೂಚಕರಿಂದ ವಾಪಾಸು ತೆಗೆದುಕೊಳ್ಳಲ್ಪಟ್ಟವು. 18 ಠರಾವುಗಳನ್ನು ವಿಷಯ ನಿಯಾಮಕ ಸಮಿತಿಯವರು ಅವರ ಒಂದು ದಿವಸದ ಮೊದಲಿನ ಮೀಟಿಂಗಿನಲ್ಲಿ ವಜಾ ಮಾಡಿದ್ದರು.

ಅಧ್ಯಕ್ಷರ ಕೊನೆಯ ಭಾಷಣ.

ರೈತರಿಗೆ ಬೆಳೆ ಬೆಳೆಯುವ ವಿಷಯದಲ್ಲಿ ಆದಷ್ಟು ಪರಿಜ್ಞಾನವನ್ನು ಕಲ್ಪಿಸಿ ಅವರು ಬೆಳೆಸಿದ ಬೆಳೆಗೆ ಒಳ್ಳೇ ಕ್ರಯ ಸಿಕ್ಕು

ವ ಹಾಗೆ ಅನುಕೂಲವನ್ನು ಕಲ್ಪಿಸಿ ಕೊಡಬೇಕೆಂದೂ, ಪ್ರತಿಯೊಬ್ಬ ಸಹಕಾರಿಯೂ ಒಗ್ಗಟ್ಟಿನ ಬಲವನ್ನು ತಿಳಿದುಕೊಳ್ಳಬೇಕಾಗಿಯೂ ಮತ್ತು ಸಹಕಾರಿ ತತ್ವಗಳ ಮೇಲೆಯೇ ಕೆಲಸ ಮಾಡಬೇಕಾಗಿಯೂ, ಸಂಘಗಳಲ್ಲಿ ಪಾರ್ಟಿ ತತ್ವವನ್ನಿಟ್ಟುಕೊಳ್ಳದೆ ತಂತಮ್ಮ ಕರ್ತವ್ಯಸಾಧನೆಯನ್ನು ಐಕ್ಯಮತ್ಯದಿಂದ ನಡಿಸಿಕೊಂಡು ಹೋಗಬೇಕಾಗಿಯೂ, ಕೋರ್ಟು ವ್ಯವಹಾರಗಳನ್ನು ಆದಷ್ಟು ಮಟ್ಟಿಗೆ ಕಮ್ಮಿ ಮಾಡಬೇಕಾಗಿಯೂ, ಗ್ರಾಮಗಳಲ್ಲಿ ಧರ್ಮದಿಂದ ವರ್ತಿಸಬೇಕಾಗಿಯೂ, ಮೆಂಬರುಗಳು ತಮ್ಮ ನಡವಳಿಕೆಯನ್ನು ಬಹು ಚೆನ್ನಾಗಿ ಇಟ್ಟುಕೊಳ್ಳಬೇಕಾಗಿಯೂ, ಋಣಮುಕ್ತಾಯ ಪಡಿಸುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕಾಗಿಯೂ, ಈಗಲೀಗ ಧರ್ಮವು ಕಡಿಮೆಯಾಗಿ ಪಡಕೊಂಡ ಸಾಲವನ್ನು ವಾಪಾಸು ಕೊಡುವ ಭಾವನೆಯು ಜನರಲ್ಲಿ ಕಡಿಮೆಯಾಗುತ್ತಾ ಬರುತ್ತಿದೆಯೆಂದೂ, ಆ ನಿಮಿತ್ತ ಮಿತವ್ಯಯವನ್ನನುಸರಿಸಿ ಸಾಲ ಪಡೆಯುವುದನ್ನು ಕಮ್ಮಿ ಮಾಡಿ ಮೆಂಬರುಗಳು ತಮ್ಮ ಆರ್ಥಿಕ ಸ್ಥಿತಿಯನ್ನುತ್ತಮಗೊಳಿಸಬೇಕಾಗಿಯೂ, ಮೆಂಬರುಗಳು ವಸ್ತು ಪ್ರದರ್ಶನವನ್ನು ಆಗಿಂದಾಗ್ಯೆ ನಡಿಸಿ ರೈತರು ಬೆಳೆಸಿದ ಮತ್ತು ತಯಾರಿಸಿದ ಕೈಗಾರಿಕೆ ವಸ್ತುಗಳಿಗೆ ಆದಷ್ಟು ಪ್ರೋತ್ಸಾಹವನ್ನು ಕೊಡಬೇಕಾಗಿಯೂ ಭಾಷಣ ಮಾಡಿ, ತನಗೆ ಈ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ದಯಪಾಲಿಸಿದ್ದಕ್ಕೆ ನಾನು ಪುನಃ ತಮ್ಮೆಲ್ಲರನ್ನು ವಂದಿಸುತ್ತೇನೆಂದೂ ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಕಡೆಗೆ ಸ್ವಾಗತ ಕಮಿಟಿಯ ಅಧ್ಯಕ್ಷರು ಸ್ವಾಗತ ಸಮಿತಿಯ ಪರವಾಗಿ, ಅಧ್ಯಕ್ಷರು ಆ ದಿನದ ಸಮ್ಮೇಳನವನ್ನು ಸಾಂಗವಾಗಿ ನಡಿಸಿಕೊಟ್ಟದಕ್ಕೂ, ಮತ್ತು ನೆರೆದ ಸಭಿಕರ ಮನಸ್ಸಿಗೆ ಮುಟ್ಟುವಂತೆ ಮಾಡಿದ ದೀರ್ಘ ಭಾಷಣಕ್ಕೂ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸೂಚಿಸಿ, ಆ ದಿನದ ಸ್ವಾಗತದಲ್ಲಿ ಏನು ಕೊರತೆಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿಕೊಳ್ಳಬೇಕಾಗಿಯೂ ಸಭಿಕರನ್ನು ಕೇಳಿಕೊಂಡರು. ಆ ಮೇಲೆ ಆ ದಿನದ ಸಮಾರಂಭದ ಸಲುವಾಗಿ ಶಾಲೆಯನ್ನು ಉಪಯೋಗಿಸಲು ಬಿಟ್ಟ ಕಮೀಷನರವರಿಗೂ, ತಾಲೂಕು ಅಧಿಕಾರಿಗಳಿಗೂ, ವಸ್ತುಪ್ರದರ್ಶನವನ್ನು ತೆರೆಯಲು ಒಪ್ಪಿಕೊಂಡ ಮ. ಎನ್. ಸಿ. ಸುಬ್ಬಯ್ಯನವರಿಗೂ, ಸಮ್ಮೇಳನವನ್ನು ತೆರೆದ ದಿವಾನ್ ಬಹದೂರ್ ಕೆ. ಚೆಂಗಪ್ಪನವರಿಗೂ, ರಿಜಿಸ್ಟ್ರಾರವರಿಗೂ, ಸಹಕಾರ ಉದ್ಯೋಗಸ್ಥರಿಗೂ, ಶಾಲೆಗಳ ಹೆಡ್ಮಾಸ್ಟರು, ಅಸಿಸ್ಟೆಂಟ್ ಮಾಸ್ಟರು ಮತ್ತು ಸ್ಕೌಟುಗಳಿಗೂ, ಸಮಾರಂಭದ ಊಟೋಪಚಾರದ ಬಗ್ಗೆ ಪಾತ್ರೆಗಳನ್ನು ಕೊಟ್ಟ ಮ. ಅಪ್ಪರಂಡ ತಿಮ್ಮಯ್ಯನವರು ಮತ್ತು ಶ್ರೀಮತಿ ಕೊಳುವಂಡ ಅಕ್ಕಮ್ಮನವರಿಗೂ, ಸಂಘಗಳಿಂದ ಬಂದ ಡೆಲಿಗೇಟುಗಳಿಗೂ, ನೆರೆದ ಪ್ರೇಕ್ಷಕರಿಗೂ, ಸೆಂಟ್ರಲ್ ಬ್ಯಾಂಕ್ ಪ್ರಸಿಡೆಂಟರು, ಗೌರವ ಕಾರ್ಯದರ್ಶಿ, ಡೈರೆಕ್ಟರು ಮತ್ತು ಸಿಬ್ಬಂದಿಗಳಿಗೂ, ಸಮಾರಂಭದಲ್ಲಿ ಯಾವ ತೊಂದರೆಯೂ ಬಾರದಂತೆ ಎಚ್ಚರಿಕೆ ತೆಗೆದುಕೊಂಡ ಪೋಲೀಸು ಆಫೀಸರರಿಗೂ, ಸ್ವಾಗತ ಸಮಿತಿಯ ಗೌರವ ಕಾರ್ಯದರ್ಶಿಯವರಿಗೂ, ಹೃತ್ಪೂರ್ವಕವಾಗಿ ವಂದಿಸಿದರು. ಅನಂತರ ಮ. ಸಿ. ಎಂ. ಚಂಗಪ್ಪನವರು ಸ್ವಾಗತ ಸಮಿತಿಯ ಅಧ್ಯಕ್ಷರಿಗೂ, ಕಮಿಟಿ ಮೆಂಬರುಗಳಿಗೂ ಸಭೆಯ ಪರವಾಗಿ ವಂದಿಸಿದರು. ಜಯಘೋಷದಿಂದ ಸಭೆಯು ಸಾಯಂಕಾಲ ಸುಮಾರು 5 ಗಂಟೆಗೆ ಮುಕ್ತಾಯವಾಯಿತು.

ಯಜ್ಞನಾರಾಯಣ ಐಯ್ಯರ್,
ಸಮ್ಮೇಳನಾಧ್ಯಕ್ಷರು.

ತಾ. 18—12—38.

ಮಾಸ ಭವಿಷ್ಯ.

ಜನವರಿ ತಾರೀಕು 15 ರ ಲಾಗಾಯಿತು ಫೆಬ್ರವರಿ ತಾರೀಕು 13 ರ ವರೆಗೆ.

(ಲೇ.—ಜ್ಯೋತಿಷ್ಯ-ಶ್ರೀ ಜಂಗಮ ಸೋಮಯ್ಯನವರು.)

ಮೇಷ ರಾಶಿಯವರಿಗೆ.

ನಿಮ್ಮ ಕೆಲಸಗಳಲ್ಲಿ ನೀವು ನಿರ್ಭಯದಿಂದ ಮುಂದುವರಿಯಬಹುದು. ಕಿರಿಯರಿಂದ ನಿಮಗೆ ಸಹಾಯವಿರುತ್ತೆ. ಹಿರಿಯರಿಂದಲೂ, ಸ್ತ್ರೀಯರಿಂದಲೂ ಮನಸ್ಸಿಗೆ ಸಮಾಧಾನವಿರುವದಿಲ್ಲ. ಲಾಭಕ್ಕಿಂತ ಖರ್ಚು ಅಧಿಕ. ಮನೋವ್ಯಸನ ದೇಹದಲ್ಲಿ ಉಷ್ಣತಾಪವಿರುತ್ತೆ. ಉದ್ಯೋಗಸ್ಥರಿಗೆ ತೊಡಕುಗಳು ಕಂಡರೂ ಹೆಚ್ಚು ತೊಂದರೆ ಇಲ್ಲ. ವ್ಯಾಪಾರಸ್ತರಿಗೆ ಸಾಧಾರಣ ಲಾಭವಿದೆ.

ವೃಶಭ ರಾಶಿಯವರಿಗೆ.

ಧನ ಲಾಭ ಯೋಗವು. ಉದ್ಯೋಗದಲ್ಲಿ ಮನ್ನಣೆ ಇರುತ್ತೆ. ಆದರೆ ಕಾರ್ಯಗಳು ಕೈಗೂಡಲಿಲ್ಲವೆಂದು ವ್ಯಸನ ತೋರೀತು. ಹಿರಿಯರಿಗೆ ಅಸುಖವೂ, ಶತ್ರುಗಳಿಗೆ ಪರಾಜಯವೂ, ತಮಗೆ ಮನ್ನಣೆಯೂ ದೊರೆಯುತ್ತೆ. ವ್ಯಾಪಾರಸ್ಥರಿಗೆ ಸಾಧಾರಣ ಲಾಭವಿದೆ.

ಮಿಥುನ ರಾಶಿಯವರಿಗೆ.

ತಮಗಳಿಗೆ ಭಾಗ್ಯವೃದ್ಧಿ. ದೇವತಾ ಗುರುಹಿರಿಯರಲ್ಲಿ ವಿಶ್ವಾಸ, ಭಕ್ತಿಯು ಇರುತ್ತೆ. ಕೊಂಚ ಮಟ್ಟಿಗೆ ವಿರೋಧವ್ಯಾಧಿ. ದೇಹಧಾರಣ ಸಹ ಉಂಟಾದೀತು. ವ್ಯಾಪಾರಸ್ಥರಿಗೆ ಲಾಭವು ಇದ್ದಾಗ್ಯೂ ತಾವು ನಾಕಷ್ಟು ತೊಂದರೆ ತೆಗೆದುಕೊಳ್ಳಲಾರಿರಿ. ನಿಮ್ಮ ಶತ್ರುಗಳು ಮುಖ್ಯ ತಗ್ಗುತ್ತಾರೆ. ವ್ಯವಸ್ಥ್ಯನಕ್ಕೆ ತಮ್ಮ ಮನಸ್ಸು ಚಂಚಲವಾಗುತ್ತೆ. ಭಯಪಡದೆ ಆರಾಧಿಸಿರಿ.

ಕರ್ಕಾಟಕ ರಾಶಿಯವರಿಗೆ.

ತಾವು ಎಚ್ಚರದಿಂದ ತಮ್ಮ ಕಾರ್ಯಕ್ರಮಗಳನ್ನು ಅನುಸರಿಸಿ ತಮಗೆ ಮಿತ್ರರೆಂದು ಕಾಣುವ ಕೆಲವು ಜನರಿಂದ ನಿಪ್ಪೂರಸ್ಪ್ರಷ್ಟವಾದೀತು. ರಾಜಸ ಗುಣ ಅಧಿಕವಾಗುತ್ತೆ. ಸುಖಕ್ಕೆ ಸ್ವಲ್ಪ ಕೊರತೆ. ತಮ್ಮ ಕಳತ್ರ ವರ್ಗಕ್ಕೆ ಕೊಂಚ ಅಸೌಖ್ಯ ತೋರುತ್ತೆ. ನೇತ್ರತಾಪ, ದೇಹಧಾರಣ ಉಂಟಾದೀತು. ನಿಮ್ಮ ಹಿರಿಯರಿಗೆ ಅಶುಭವಿರುತ್ತೆ. ಲಾಭ ಕಿಂಚಿತ್, ವ್ಯಯ ಅಧಿಕ.

ಸಿಂಹ ರಾಶಿಯವರಿಗೆ.

ನೌಕರಿ ಜನರಿಗೆ ಅತಿಶಯ ಸಹಾಯವಿರುತ್ತೆ. ಮಿತ್ರರಾದ ಜನರಿಂದ ಮನ್ನಣೆಯು ದೊರೆಯುತ್ತೆ. ಸಹೋದ್ಯೋಗಸ್ಥರಿಂದ ಸಹಾಯ ದೊರೆಯುತ್ತೆ. ವಾಣಿಜ್ಯದವರಿಗೆ ಲಾಭವಾಗುತ್ತೆ. ವ್ಯಾಪಾರಸ್ಥರು ತೊಂದರೆ ತೆಗೆದುಕೊಂಡರೆ ಲಾಭ ಹೊಂದಬಹುದು.

ಕನ್ಯಾ ರಾಶಿಯವರಿಗೆ.

ಅರ್ಜಿತ ಧನ ಹಾನಿ. ಕುಟುಂಬ ಕಲಹ. ಮನೋವ್ಯಸನ. ನಿಮ್ಮವರಿಗೆ ಆಪತ್ತುಗಳುಂಟಾಗುವ ಸಂಭವವಿದೆ. ನಿಮ್ಮ ಪ್ರತಿಕಕ್ಷಿ ಜನರಿಂದ ಬಾಧೆಯು ತಪ್ಪೀತು. ಸಹೋದರ ವರ್ಗದವರು ಪ್ರತಿಕೂಲರಾಗುವರು. ಪರಮೇಶ್ವರಿಯನ್ನು ಆರಾಧಿಸುತ್ತಾ ಬಂದರೆ ತಮ್ಮ ಮಹಿಮಾ ಹಿಂಗಳನ್ನು ನಡೆಸುತ್ತಾ ಬರಬಹುದು. ಅವಿದ್ಯಾಸಿಗಳ ಸಹವಾಸವನ್ನು ತಾವು ದೂರ ಮಾಡಿರಿ. ನಿಷ್ಕಾರಣ ಮಾತು ಕೇಳುವಿರಿ. ಧೈರ್ಯದಿಂದ ಭಗವಂತನನ್ನು ಧ್ಯಾನಿಸಿ. ಶುಭವನ್ನು ಕರುಣಿಸುತ್ತಾನೆ.

ತುಲಾ ರಾಶಿಯವರಿಗೆ.

ಶರೀರಕ್ಕೆ ಆಯಾಸ. ಅನೇಕ ವಿಧದ ಅಡಚಣೆ ಪ್ರಯತ್ನ ಕಾರ್ಯಗಳು ಭಂಗ. ದುಸ್ವಪ್ನ ಬೀಳುವಿಕೆ. ಇತ್ಯಾದಿಗಳಿದ್ದರೂ ಸುರಗುರುವಿನ ಕೃಪೆಯಿಂದ ಪರಾಭವಿರುತ್ತೆ. ಬಟ್ಟೆ ವ್ಯಾಪಾರದವರಿಗೂ, ಸರಾಫರಿಗೂ ಲಾಭವಿದೆ. ರಸ ಪದಾರ್ಥ ವ್ಯಾಪಾರದಿಂದ ನಷ್ಟ. ಉದ್ಯೋಗಸ್ಥರಿಗೆ ಉದ್ಯೋಗದಲ್ಲಿ ಅಡಚಣೆ ಇಲ್ಲದೆ ಸರಾಗವಾಗಿ ಕೆಲಸಗಳಾಗುತ್ತೆ.

ವೃಶ್ಚಿಕ ರಾಶಿಯವರಿಗೆ.

ಸ್ಪರ್ಧೆಗಳಿಗೆ ನಿಲ್ಲಬೇಡಿ. ಈ ತಿಂಗಳಲ್ಲಿ ಸ್ವಲ್ಪ ಹಿಂದೆ ನಿಲ್ಲಿ. ಬಂಧುಗಳಲ್ಲಿ ಮನಸ್ತಾಪ. ನೀಚ ಜನರಿಂದ ವಿರೋಧ. ತಮ್ಮ ಬುದ್ಧಿ ಕೊಂಚ ಮಂದವಾಗುತ್ತೆ. ಕಿರಿಯರಿಗೆ ಸ್ವಲ್ಪ ಪೀಡೆ. ಆ ಸುಖ ತೋರಿ ನಿಮಗೆ ಮನೋವ್ಯಸನ ತೋರೀತು. ಮನೆಯಲ್ಲಿ ಶುಭ ಕಲಹಗಳು ಒದಗಬಹುದು. ತಮಗೆ ಶೀಘ್ರ ಕೋಪವುಟ್ಟಬಹುದು. ಶಾಂತರಾಗಿರಿ. ಚಾಡಿ ಜನರಿಂದ ನಿಮ್ಮ ಮಿತ್ರರಾದ ಜನರಿಗೆ ನಿಮ್ಮ ಮೇಲೆ ಸ್ವಲ್ಪ ಹಗೆಯಾಗಬಹುದು. ಮಾನಸಗಾರರ ವಿಷಯ ಎಚ್ಚರ ತೆಗೆದುಕೊಳ್ಳಿ. ಲಾಭ ವ್ಯಯ ಸಮ. ಉದ್ಯೋಗಸ್ಥರು ತಮ್ಮ ಕೆಲಸಗಳಲ್ಲಿ ಎಚ್ಚರದಿಂದ ವರ್ತಿಸುವುದು ಒಳಿತು.

ಧನು ರಾಶಿಯವರಿಗೆ.

ಪ್ರಥಮ ಭಾಗದಲ್ಲಿ ಧನ ನಷ್ಟವೂ, ಹಾನಿಯೂ ಖಂಡಿತ. ದೇಹ ಸೌಖ್ಯ ಕಮ್ಮಿ. ಮಕ್ಕಳಿಗೆ ಸುಖವಿಲ್ಲ. ತಾವು ನೆನಸಿದ ಆಲೋಚನೆಗೆ ಅನೇಕ ಆತಂಕಗಳು ಒದಗಿ ಕಾರ್ಯಗಳು ಅಡಚಣೆಯೂ ಆಗುತ್ತೆ. ಸಂಚಕರಿಂದ ಭೇದಗಳುಂಟಾಗುವ ಸಂಭವವಿದೆ. ಜಾಗ್ರತರಾಗಿ. **ಲಾಭ** ವ್ಯಯ ಸಮ.

ಮಕರ ರಾಶಿಯವರಿಗೆ.

ಶರೀರದಲ್ಲಿ ಉಷ್ಣತೆ ಪಿತ್ತ ಹೆಚ್ಚುತ್ತೆ. ಬಟ್ಟೆ ವ್ಯಾಪಾರದವರೂ ಮತ್ತು ಲೋಹ ವ್ಯಾಪಾರಸ್ಥರಿಗೂ ಲಾಭವಿದೆ. ವಿದ್ಯೆಯಿಂದ ಜೀವಿಸುವವರಿಗೂ, ವಿದ್ಯಾರ್ಥಿಗಳಿಗೂ ಸುಖ ಕಮ್ಮಿ. ತಮ್ಮಲ್ಲಿ ಪ್ರಮುಖ ಕೆಲಸಗಳಿದ್ದರೆ ಪ್ರಯತ್ನಮಾಡಿದರೆ ಕ್ರಮೇಣ ಜಯವಾಗುತ್ತೆ. ವ್ಯಾಪಾರಸ್ಥರಿಗೆ ಸಾಧಾರಣ ಲಾಭವಿದೆ.

ಕುಂಭ ರಾಶಿಯವರಿಗೆ.

ದೇಹ ಸುಖವೂ ಧೈರ್ಯಶಕ್ತಿಯೂ ಕಂಡುಬರುತ್ತೆ. ಹಿರಿಯರಿಂದಲೂ, ತಮ್ಮ ವಿಶ್ವಾಸಿಗಳಿಂದಲೂ ನಿಮ್ಮ ಮನಸ್ಸಿಗೆ ವ್ಯಾಕುಲ ತೋರೀತು. ಸ್ತ್ರೀಯರಿಂದ ನಿಮ್ಮ ಕಾರ್ಯಗಳಿಗೆ ಅಡಚಣೆ ತೋರುತ್ತೆ. ಮುಂದೆ ಸಂತುಷ್ಟರಾಗುತ್ತೀರಿ. ಕೊಂಚ ಸಮಾಧಾನ ತಗೆದುಕೊಳ್ಳಿ. ವಿದ್ಯಾರ್ಥಿಗಳೇ ತಮಗೆ ವ್ಯಾಸಂಗದಲ್ಲಿ ಜುಗುಪ್ಸೆ ತೋರೀತು. ಪ್ರಯತ್ನ ಮಾಡಿರಿ. ಬಿಡಬೇಡಿ. ಲಾಭಕ್ಕಿಂತ ವ್ಯಯ ಅಧಿಕ.

ಮೀನ ರಾಶಿಯವರಿಗೆ.

ಶರೀರಕ್ಕೆ ಸುಖವಿಲ್ಲ. ತೊಂದರೆಗಳು, ಅಡಚಣೆಗಳು ಆಗಾಗ್ಯೆ ಕಾಣುವವು. ನಿಮ್ಮ ಪ್ರೀತಿ ದೈವಭಕ್ತಿಯಲ್ಲಿ ಕೊರತೆ ಉಂಟಾದೀತು, ಮರೆಯಬೇಡಿ. ವ್ಯಾಪಾರಸ್ಥರೇ ತಮ್ಮ ಬಂಡವಾಳವನ್ನು ಲಕ್ಷ್ಯಯಿಟ್ಟು ನೋಡುತ್ತಿರುವದು. ಭಗವತಿಯನ್ನು ಸಂಜೆಕಯಿಂದ ಧ್ಯಾನಿಸಿ, ಸಂಪತ್ತು ಸಾಧಿಸುತ್ತೆ. ದೇಹದಲ್ಲಿ ವಾಯುವು, ಸಿರಕ್ತವು ತೋರುತ್ತೆ. ಹಿರಿಯರಿಗೆ ಶುಭವಿದೆ. ಧರ್ಮಕ್ಕೆ ಕೈನೀಡುವಿರಿ. ಆದಾಯಕ್ಕಿಂತ ವ್ಯಯ ಹೆಚ್ಚು.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಸಹಕಾರಿ ಸಂಘಗಳ ಮೆಂಬರುಗಳ ತರಬೇತು ಫೆಬ್ರವರಿ ತಾರೀಕು 20ರಿಂದ 25ರ ವರೆಗೆ ನಡೆಯುವದು. ಹೆಚ್ಚಿನ ಮಾಹಿತಿಯನ್ನು ಬೇಡೊಂಡಿಜೆ ಕೊಡಲಾಗಿದೆ.

ಶಿರಂಗಳ್ಳಿ ಗ್ರಾಮದ ಮೂರ್ಕಂಡ ಅಪ್ಪಯ್ಯನೆಂಬವರ ಬಲ ಕಾಲಿಗೆ ಅದೇ ಗ್ರಾಮದ ಶೆಟ್ಟಿರ ಉತ್ತಯ್ಯನೆಂಬವರು ಗದ್ದಗೆ ದನ ಬಿಟ್ಟ ವಿಚಾರದಲ್ಲಿ ಜಗಳವಾಗಿ ಕತ್ತಿಯಿಂದ ಕಡಿಯು ಬಿಟ್ಟಿರುವರೆಂದೂ, ಕೇಸು ಪೋಲೀಸು ತನಿಖೆಯಲ್ಲಿರುವದಾಗಿಯೂ ವಾರ್ತೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110 ಏಲಕ್ಕಿ ಮಣಕ್ಕೆ 30 ಕ್ರಯ ವಿರುವದು.

ಕೊಡಗು ದೇವಸ್ಥಾನಗಳ ಕಮಿಟಿಯ ಅಧ್ಯಕ್ಷರಾಗಿ ಶ್ರಿ. ಪಟ್ಟಮಾಡ ದೇವಯ್ಯನವರು ಚುನಾಯಿಸಲ್ಪಟ್ಟಿರುವರು.

ಶ್ರಿ ಬಡುವಮಂಡ ಕುಶಾಲಪ್ಪನವರದೊಂದು ದನವು ಪರಾರಿಯಾಗಿದೆಯೆಂದೂ, ಪತ್ತೆ ಹಚ್ಚಿಕೊಟ್ಟವರಿಗೆ ರೂ. 3 ಬಹುಮಾನ ಕೊಡುವರೆಂದೂ ತಿಳಿಸಿರುತ್ತಾರೆ.

ಕೊಡಗು ಜಿಲ್ಲಾ ಬೋರ್ಡು ಮೀಟಿಂಗು ಇಂದಿನಿಂದ ಪ್ರಾರಂಭವಾಗಿದೆ. ಮೀಟಿಂಗಿನ ವಿಷಯಗಳು ಪ್ರಾಮುಖ್ಯವಿರುವದರಿಂದ ಈ ಸಾರಿಯ ಮೀಟಿಂಗು ಮಹತ್ವದ್ದಿದೆ.

ಈಗ ಮೂರು ನಾಲ್ಕು ದಿನದಿಂದ ಇಲ್ಲಿ ಮೋಡಕವಿದುಕೊಂಡಿದ್ದು ಈ ದಿನ 1 ಗಂಟೆಯ ವರೆಗೆ ಜೋರಾದ ಮಳೆ ಬಿತ್ತು. ಇದರಿಂದ ಕಾಫಿ ಹಾಗೂ ಭತ್ತದ ಬೆಳೆಗೆ ಹೆಚ್ಚಿನ ನಷ್ಟ ಸಂಭವಿಸಿರುವದು.

ಕಾಟೇಜ್ ಕಪ್ಪು ಹಾಕಿ ಪಂದ್ಯಾಟ ಇಲ್ಲಿ ತಾರೀಕು 18-1-39 ರಂದು ಕೊಡಗು ಎಲ್ಕ್ಟ್ರಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದು ಸೌತ್ ಕೂರ್ಗ್ ಎಸೋಸಿಯೇಶನಿನವರು ಜಯಶೀಲರಾಗಿ ಕಪ್ಪನ್ನು ಪಡೆದರು.

ಶ್ರೀಮಾನ್ ಓಡ್ಲಮನೆ ಆತ್ಮರಾಮಶಾಸ್ತ್ರಿಗಳು ಶ್ರೀಮದ್ಭಾಗವತದ ಹನ್ನೊಂದನೇ ಸ್ಕಂಧವನ್ನು ವೇದಾಂತ ಸಂಘದಲ್ಲಿ ಆದಿತ್ಯವಾರ ವಿನಹ ಬಾಕಿ ಎಲ್ಲಾ ದಿನಗಳಲ್ಲಿ ಸಾಯಂಕಾಲ 5-30 ರಿಂದ 7 ಗಂಟೆ ವರೆಗೆ ಪ್ರವಚನ ಮಾಡುತ್ತಿರುವರು, ಇಂಥಾ ಸುಸಮಯದಲ್ಲಿ ಎಲ್ಲರೂ ಭಾಗವಹಿಸಲು ಅನುಕೂಲವಿದೆಯೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸೋಮವಾರಪೇಟೆ.

ಶ್ರಿ. ಬಿದ್ದಾಟಂಡ ಯಂ. ಅಪ್ಪಚ್ಚನವರು ಪೊನ್ನಂಪೇಟೆ ಆಸ್ಪತ್ರೆಗೆ ಒಂದು ಗಡಿಯಾರವನ್ನು ಧರ್ಮಾರ್ಥ ಕೊಟ್ಟಿರುವರೆಂದು ತಿಳಿಯುತ್ತೇವೆ.

ಟಿ.

ಗಂಧದ ಮರ ಮತ್ತು ಇತರ ಜಾತಿ ಮರಗಳಿರುವ ಪೈಸರಿ ಯಾ ಸರ್ಕಾರಿ ಜಾಗಗಳನ್ನು ಕೃಷಿಗೆ ಕೊಡುವ ವಿಚಾರದ ಅರ್ಜಿಯನ್ನು ಮತ್ತು ಡಿಸ್ಟ್ರಿಕ್ಟ ರೂಲ್ಸುಗಳಿಗೆ ತಿದ್ದುಪಡಿಗಳು ತಾ. 10-1-39 ರ ಗಜೆಟಿನಲ್ಲಿ ಪ್ರಕಟವಾಗಿದೆ. ಇದಕ್ಕೆ ಆಕ್ಷೇಪ ಯಾ ಸಲಹೆಗಳನ್ನು ಮಾರ್ಚಿ ಅಖೈರು ಒಳಗೆ ತಿಳಿಸಿದರೆ ಗಮನಿಸಲಾದೀತಾಗಿಯೂ ಪ್ರಕಟಿಸಲಾಗಿದೆ.

ಹಿಂದೂದೇಶ.

ಕರ್ನಾಟಕ ಪ್ರಾಂತದ ಕಾಂಗ್ರೆಸ್ ಕಮಿಟಿಯ (ತ್ರಿಪುರ ಪ್ರತಿನಿಧಿಗಳ) ಮೀಟಿಂಗು ಈ ತಾ. 29 ನೇ ಭಾನುವಾರ ಬೆಳಿಗ್ಯೆ 8½ ಗಂಟೆಗೆ ಬೆಳಗಾಂನಲ್ಲಿ ನಡೆಯುವದು.

ರಾಜಕೋಟೆಯ ಬಿಳಿ ದಿವಾನರಾದ ಕೆಡೆಲರು ಠಾಕೂರ ಸಾಹೇಬರ ಅಪ್ಪಣೆ ಮೇರೆಗೆ ತಮ್ಮ ದೇಶಕ್ಕೆ ಮರಳಿ ಹೊರಟು ಹೋದರು.

ಇಂಡಿಯಾ ಸರ್ಕಾರದವರು 500 ರೂ. ಗಳಿಗೆ ಮೇಲ್ಪಟ್ಟ ಸಂಬಳಗಳಲ್ಲಿ ನೇಕಡ 10ರ ವರೆಗೆ ಹಿಡಿಯಲು ಯೋಜಿಸುತ್ತಿರುವರು.

ಶೀಘ್ರವಾಗಿಯೇ ಶ್ರೀ ಜಿ. ಎಸ್. ಕೃಷ್ಣರಾಯರವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ 'ಪ್ರಜಾವಾಣಿ' ಎಂಬ ಪತ್ರಿಕೆಯು ಹೊರಡುವದಾಗಿ ತಿಳಿಸುತ್ತಾರೆ.

ವೆಸ್ಟರ್ನ್ ಇಂಡಿಯಾ ಸ್ಟೇಟ್ ಏಜೆನ್ಸಿಗೆ ಸೇರಿದ ಜೇಟ್‌ಪುರ ಸಂಸ್ಥಾನದಿಂದ ಬರುವ ಬೆಂಕಿ ಕಡ್ಡಿಯನ್ನು ಮೈಸೂರು ಸಂಸ್ಥಾನಕ್ಕೆ ತರಕೂಡದೆಂದು ಸರ್ಕಾರದವರು ನಿರ್ಬಂಧಿಸಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ, ಮಹಾರಾಷ್ಟ್ರದ ಒಬ್ಬ ಮುಂದಾಳುಗಳೂ ಆಗಿರುವ ಶ್ರೀ. ಶಂಕರರಾವ್ ದೇವ್ರೋ ಇವರು ತ್ರಿಪುರಿ ಕಾಂಗ್ರೆಸ್ ಡೆಲಿಗೇಟರಾಗಿ ಆರಿಸಲ್ಪಡಲಿಲ್ಲ.

ಹೈದರಾಬಾದ ಸತ್ಯಾಗ್ರಹದಲ್ಲಿ ಸೆರೆ ಹಿಡಿಯಲ್ಪಟ್ಟ ಸತ್ಯಾಗ್ರಹಿಗಳಲ್ಲಿ ಹೈದರಾಬಾದ ಸಂಸ್ಥಾನದ ಹೊರಗಿನ ಕೈದಿಗಳನ್ನು ಬಿಟ್ಟು ಬಿಡಬೇಕೆಂದು ಹೈದರಾಬಾದ ಸರಕಾರವು ಒಂದು ಅಪ್ಪಣೆ ಹೊರಡಿಸಿದೆ.

ಮದ್ರಾಸಿನಿಂದ ತ್ರಿಪುರಿ ಕಾಂಗ್ರೆಸಕ್ಕೆ ತೆರಳಿದ ಸತ್ಯಮೂರ್ತಿ ಮತ್ತು ಬೇರೆ ಒಂಭತ್ತು ಪ್ರತಿನಿಧಿಗಳು, ಈ ವರ್ಷದ ಕಾಂಗ್ರೆಸ್ಸಿಗೆ ಅಧ್ಯಕ್ಷರು ಮೌ. ಅಬ್ದುಲ ಕಲಮ್ ಅಜಾದರು ಆಗಬೇಕೆಂದು ಒಂದು ಸೂಚನೆ ತಂದಿರುವರು.

ಬಂಗಾಳದ ಒಂದು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀ. ಜೆ. ಪಿ. ಬಾರಟ್ ಎಂಬ ಆಂಗ್ಲೋ ಇಂಡಿಯನ್ ಮಹನೀಯರೊಬ್ಬರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ ಕಾಂಗ್ರೆಸ್ ಕಮಿಟಿಗಳ ಇತಿಹಾಸದಲ್ಲಿ ಇದು ಅಪೂರ್ವ.

ಜಬಲ್ಪುರದ ಸೈನ್ಯಕ್ಕೆ, 'ಹೊರಡಲು ತಯಾರಿರಬೇಕೆಂ'ದು ಅಪ್ಪಣೆ ಬಂದಿದೆಯಾಗಿ ತಿಳಿದು ಬರುತ್ತಿದೆ. ಎಲ್ಲಿಗೆಂದು ತಿಳಿದಿಲ್ಲ. ರೈಲ್ವೆ ಅಧಿಕಾರಿಗಳಿಗೂ 'ಸ್ಪೆಶ್ಯಲ್ ಟ್ರೈನ್'ಗಳನ್ನು ಸಿದ್ಧಮಾಡಿ ಇಡಿ ಎಂದೂ ಸೂಚನೆಗಳು ಬಂದಿವೆ.

ಕನ್ನಡ ಜಿಲ್ಲೆಯ ಶ್ರೀ. ಕಮಲಾದೇವಿಯವರು, ಸಮಗ್ರ ಭಾರತ ಮಹಿಳಾ ಕಾನ್ಫರೆನ್ಸಿನ ವೈಸ್‌ಪ್ರೆಸಿಡೆಂಟರು-ಕೋಪನ್‌ಹೇಗನಿನಲ್ಲಿ ಜರುಗುವ 'ಸಮಾನ ನಾಗರಿಕತೆಯ ಮಹಿಳಾ ಅಂತರರಾಷ್ಟ್ರೀಯ ಸಂಯೋಜನಾ ಸಮ್ಮೇಳನಕ್ಕೆ ಇಂಡಿಯದ ಪ್ರತಿನಿಧಿಗಳಾಗಿ ತೆರಳುವರು.

ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಮಿ. ಸುಭಾಸ್ ಚಂದ್ರ ಬೋಸ್‌ರವರು ಫೆಬ್ರವರಿ ತಿಂಗಳಲ್ಲಿ 4 ದಿನಗಳ ವರೆಗೆ ಆಂಧ್ರ ದೇಶದಲ್ಲಿ ಸಂಚರಿಸಿ ಅನಂತರ ದಕ್ಷಿಣ ಹಿಂದೂಸ್ಥಾನದ ಇತರ ಕಡೆಗಳಲ್ಲಿ ಪ್ರವಾಸ ಬೆಳಸುವರೆಂದು ತಿಳಿಯಬಂದಿದೆ.

ಮದ್ರಾಸಿನ ಕೋರ್ಟು ಮತ್ತು ಜೈಲು ಇಲಾಖೆಯ ಮಂತ್ರಿಗಳಾಗಿದ್ದ ಶ್ರೀ. ರಾಮಮೆನೋನರವರ ನಿಧನದ ಪ್ರಯುಕ್ತ ಅವರ ಹುದ್ದೆಯ ಚಾರ್ಜನ್ನು ವಿದ್ಯಾಖಾತೆಯ ಮಂತ್ರಿಗಳಾದ ಡಾ. ಸುಬ್ಬರಾಯನ್‌ರವರಿಗೆ ಕೊಡಲಾಗಿದೆ. ವಿದ್ಯಾಖಾತೆಗೆ ಶ್ರೀ ವಾರ್ಕಿ ಇವರನ್ನು ನೇಮಿಸಲಾಗಿದೆ.

ಗುರು ನಾನಕ್ ದೇವ್ ಮತ್ತು ಗುರುಗೋವಿಂದ ಸಿಂಗ್ ಇವರ ಭಾವಚಿತ್ರಗಳೊಡನೆ, ಕೆಲವು ಸಿಗರೇಟುಗಳ ಪ್ರಚಾರದ ಉಲ್ಲೇಖಗಳನ್ನು ಮಾಡಿದುದು ಕಾನೂನಿಗೆ ವಿರೋಧವೆಂದು ಪಂಜಾಬ್ ಸರಕಾರವು ತನ್ನ ಪ್ರಾಂತದ 1939 ನೇ ಇಸ್ವಿಯ ಭಗವಾನ್ ಪ್ರೆಸ್ಸಿನ 2 ಕ್ಯಾಲಂಡರುಗಳನ್ನು ಬಹಿಷ್ಕರಿಸಿದೆ.

ಡನ್‌ಬಾದ್‌ನಿಂದ 60 ಮೈಲಿಗಳ ದೂರದಲ್ಲಿ, ರೈಲು ಬಂಡಿಯೊಂದು ಮಗುಚಿ ಬಿದ್ದು, 10 ಮಂದಿ ತೀರಿಕೊಂಡರು. 49 ಮಂದಿ ಗಾಯಗೊಂಡಿರುವರೆಂದೂ ಗೊತ್ತಾಗಿದೆ. ಇಂಜಿನ್ ಮತ್ತು 3 ನೇ ಕ್ಲಾಸ್ ಗಾಡಿಗಳು ಹೊರತು, ಉಳಿದವು ಮಾತ್ರ ಮಗುಚಿ ಬಿದ್ದು, ಪುಡಿಯಾದವುಗಳು. ಸತ್ತ ಹಾಗೂ ಗಾಯಗೊಂಡವರಲ್ಲಿ ಹೆಚ್ಚಿನವರು, ಧನಾಢ್ಯರು. ಗಾಯಗೊಂಡವರನ್ನು ಡನ್‌ಬಾದ ಆಸ್ಪತ್ರೆಗೆ ಸಾಗಿಸಲಾಗಿದೆ. ಅಪಘಡದ ಕಾರಣ ತನಿಖೆಯಾಗುತ್ತಿದೆ.

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದೂ ಪ್ರಜೆಗಳಿಗೆ ಧಾರ್ಮಿಕ, ಪೌರಿಕ ಮತ್ತು ರಾಜಕೀಯ ಸಮಾನತೆಗಳನ್ನು ಗಳಿಸಿಕೊಡುವುದಕ್ಕಾಗಿ ಯಾವ ಉಪಾಯಗಳನ್ನನುಸರಿಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕಾಗಿಯೂ ಸಹಾಯ ನಿರಾಕರಣವಂಥವನ್ನು ನಡಿಸುವುದಕ್ಕಾಗಿಯೂ ಅಖಿಲ ಹಿಂದೂಸ್ಥಾನದ ಹಿಂದೂ ಮಹಾಸಭೆಯವರು ಒಂದು ಸಮಿತಿಯನ್ನು ನೇಮಿಸಿರುತ್ತಾರೆ. ಸತ್ಯಾಗ್ರಹವನ್ನು ನಡಿಸಲು ಸ್ವಯಂ ಸೈನಿಕರುಗಳನ್ನೂ, ಧನವನ್ನೂ ಶೇಖರಿಸುತ್ತಲಿದ್ದಾರೆ. ಕಳೆದ ಶನಿವಾರ ಪೂನಾ ನಗರದಿಂದ ಐದು ಮಂದಿ ಸ್ವಯಂ ಸೇವಕರು ಸತ್ಯಾಗ್ರಹವನ್ನು ಹೂಡುವುದಕ್ಕಾಗಿ ಹೈದರಾಬಾದಿಗೆ ಪ್ರಯಾಣ ಮಾಡಿದರು.

ಮಹಾತ್ಮ ಗಾಂಧಿಯವರು ಔಂಧ್ ಸಂಸ್ಥಾನದ ರಾಜಕೀಯ ಸುಧಾರಣೆಗಳ ವಿಷಯವನ್ನು ಪ್ರಸ್ತಾಪಿಸುತ್ತಾ—ನಾನು ಇದು ವರೆಗೂ ಪ್ರಾಪ್ತವಯಸ್ಕನಾದ ಪ್ರತಿಯೊಬ್ಬ ಪ್ರಜೆಗೂ ಅವನು ವಿದ್ಯಾವಂತನಾಗಿರಲಿ ಅಥವಾ ಅವಿದ್ಯಾವಂತನಾಗಿರಲಿ ಸಮ್ಮತಿಕೊಡುವ (ವೋಟ್) ಅಧಿಕಾರವಿರಬೇಕೆಂದು ಅಭಿಪ್ರಾಯಪಡುತ್ತಿದ್ದೆನು. ಆದರೆ ಕಾಂಗ್ರೆಸ್ ಸಂಸ್ಥೆಯ ಕಾರ್ಯಕಲಾಪಗಳ ಪರಿಶೀಲನೆಯಿಂದ ಈಗ ನಾನು ನನ್ನ ಅಭಿಪ್ರಾಯವನ್ನು ಬದಲಾಯಿಸಬೇಕಾಗಿದೆ. ವೋಟು ಕೊಡತಕ್ಕವನ ವಿದ್ಯಾಸಾಮರ್ಥ್ಯಗಳ ಪರೀಕ್ಷೆ ಎರಡು ಕಾರಣಗಳಿಂದ ಅತ್ಯಾವಶ್ಯಕವೆಂದು ನಾನು ಅಭಿಪ್ರಾಯಪಡುತ್ತೇನೆ. ಮೊದಲನೆಯದು ಓಟು ಕೊಡುವದು ತಮಗಿರುವ ಹಕ್ಕೆಂಬ ಭಾವನೆಯು ಅವರಿಗೆ ಬರಬೇಕು. ಅದಕ್ಕಾಗಿ ವಿದ್ಯಾಸಾಮರ್ಥ್ಯ ಅತ್ಯಾವಶ್ಯಕ. ಎರಡನೆಯದು ವಿದ್ಯಾವಂತರಿಂದ ಚುನಾವಣೆಪಡೆದ ಮಂತ್ರಿಗಳು, ಅವಿದ್ಯಾವಂತರ ವಿಷಯದಲ್ಲಿ ಪ್ರೀತಿಸಂತಾಪ ಉಳ್ಳವರಾದರೆ ಸಾರ್ವತ್ರಿಕವಾದ ವಿದ್ಯಾ ಪ್ರಚಾರವು ಕೂಡಲೆ ಬಂದೇ ಬರುವುದು-ಹೀಗೆಂದು ಹೇಳಿರುವುದಾಗಿ ಪ್ರಕಟವಾಗಿದೆ.

ಚೀನದಿಂದ ಬ್ರಹ್ಮದೇಶದವರೆಗೆ ಹೊಸದೊಂದು ವ್ಯಾಪಾರ ಮಾರ್ಗವು ಸದ್ಯದಲ್ಲಿಯೇ ತಯಾರಾಗುವದಿದೆ. ಇದಕ್ಕೆ 1,400 ಮೈಲುಗಳಷ್ಟು ಹೊಸ ರಸ್ತೆಯನ್ನು ರಚಿಸಬೇಕಾಗುವದೆಂದು ಚೀನ ದೇಶದಲ್ಲಿ ಅಮೇರಿಕಾ ಸಂಯುಕ್ತ ಪ್ರಾಂತದ ರಾಯಭಾರಿಗಳಾದ ಮಿ. ನೆಲ್ಸನ್ ಜೋನ್ಸರು ತಿಳಿಸುತ್ತಾರೆ.

ನೋಟೀಸು.

ವೀರಾಜಪೇಟೆನಾಡು ಕಡಂಗಮರೂರು ಗ್ರಾಮದ ಬೇಡರ ದೇವಪ್ಪನವರ ಮಗ ನಿಂಗಯ್ಯನು ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ–

ನನ್ನ ಅತ್ತೆ ಬೇಡರ ಕಾಟಯ್ಯನವರ ಹೆಂಡತಿ ಸೂರಮ್ಮನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕೆಳಗೆ ಶೆಡ್ಯೂಲಿನಲ್ಲಿ ಕಾಣುವ ಆಸ್ತಿಗಳನ್ನು ಅವರು ಕ್ರಯವಿರಿಸುವ ಇರಾದೆಯಲ್ಲಿರುವರಾಗಿ ತಿಳಿಯುತ್ತೇನೆ. ಸದರಿ ಸೂರಮ್ಮನವರಿಗೆ ಖಾನೂನು ಮೇರೆ ಕ್ರಯವಿರಿಸುವ ಹಕ್ಕು ಇರುವುದಿಲ್ಲ. ಸದರಿ ಆಸ್ತಿಗಳಿಗೆ ನಾನು ಹಕ್ಕುದಾರನು.

ಆದ್ದರಿಂದ ಕ್ರಯಕ್ಕೆ ಪಡಕೊಂಡವರಿಗೆ ಸದರಿ ಆಸ್ತಿಗಳಲ್ಲಿ ಏನೊಂದು ಹಕ್ಕೂ ಸಿಕ್ಕಲಾರದು ಎಂಬ ಸಂಗತಿ ಈ ಮೂಲಕ ಬಹಿರಂಗಪಡಿಸಿದೆ.

ಶೆಡ್ಯೂಲ್.

ವೀರಾಜಪೇಟೆನಾಡು ಕೆದಮುಳ್ಳೂರು ಗ್ರಾಮದ.

1. ಸಾಗಿನ ಸ. ನಂ. 10ರ 3.66 ಏರ್ಯದ ಭೂಮಿ.

(2) ಸಾಗಿನ ಸ. ನಂ. 17ರ 3.20 ಏರ್ಯದ ಕಿತ್ತಳೆ ತೋಟ.

(3) ಸಾಗಿನ ಸ. ನಂ. 0.44ರ 1.24 ಏರ್ಯದ ಜಾಗ, ಕೊಟ್ಟಿಗೆ, ಕಣ, ಮನೆ, ಬಾವಿ ವಗೈರೆ.

(4) ಸಾಗಿನ ಸ. ನಂ. 12ರ 0.24 ಸೆಂಟಿನ ಬಾಣೆ.

(5) ಸಾಗಿನ ಸ. ನಂ. 46/2ರ 3.87 ಏರ್ಯದ ಬಾಣೆ.

2-2 **ಬೇಡರ ನಿಂಗಯ್ಯ.**

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಸಹಕಾರಿ ಸಂಘಗಳ ಮೆಂಬರುಗಳ ತರಬೇತು ಫೆಬ್ರವರಿ ತಾರೀಕು 20ರಿಂದ 25ರ ವರೆಗೆ ನಡೆಯುವದು. ಹೆಚ್ಚಿನ ಮಾಹಿತಿಯನ್ನು ಬೇರೊಂದೆಡೆ ಕೊಡಲಾಗಿದೆ.

ಶಿರಂಗಳ್ಳಿ ಗ್ರಾಮದ ಮೂರ್ಕಂಡ ತಿಮ್ಮಯ್ಯನೆಂಬವರ ಬಲ ಕಾಲಿಗೆ ಅದೇ ಗ್ರಾಮದ ಶೆಟ್ಟಿರ ಉತ್ತಯ್ಯನೆಂಬವರು ಗದ್ದೆಗೆ ದನ ಬಿಟ್ಟ ವಿಚಾರದಲ್ಲಿ ಜಗಳವಾಗಿ ಕತ್ತಿಯಿಂದ ಕಡಿದು ಬಿಟ್ಟಿರುವರೆಂದೂ, ಕೇಸು ಪೊಲೀಸು ತನಿಖೆಯಲ್ಲಿರುವದಾಗಿಯೂ ವಾರ್ತೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110 ಪಲಕ್ಕಿ ಮಣಕ್ಕೆ 30 ಕ್ರಯವಿರುವದು.

ಕೊಡಗು ದೇವಸ್ಥಾನಗಳ ಕಮಿಟಿಯ ಅಧ್ಯಕ್ಷರಾಗಿ ಶ್ರಿ. ಪಟ್ಟಮಾಡ ದೇವಯ್ಯನವರು ಚುನಾಯಿಸಲ್ಪಟ್ಟಿರುವರು.

ಶ್ರಿ ಬಡುವಮಂಡ ಕುಶಾಲಪ್ಪನವರದೊಂದು ದನವು ಪರಾರಿಯಾಗಿದೆಯೆಂದೂ, ಪತ್ತೆ ಹಚ್ಚಿಕೊಟ್ಟವರಿಗೆ ರೂ. 3 ಬಹುಮಾನ ಕೊಡುವರೆಂದೂ ತಿಳಿಸಿರುತ್ತಾರೆ.

ಕೊಡಗು ಜಿಲ್ಲಾ ಬೋರ್ಡು ಮೀಟಿಂಗು ಇಂದಿನಿಂದ ಪ್ರಾರಂಭವಾಗಿದೆ. ಮೀಟಿಂಗಿನ ವಿಷಯಗಳು ಪ್ರಾಮುಖ್ಯವಿರುವದರಿಂದ ಈ ಸಾರಿಯ ಮೀಟಿಂಗು ಮಹತ್ವದ್ದಿದೆ.

ಈಗ ಮೂರು ನಾಲ್ಕು ದಿವಸದಿಂದ ಇಲ್ಲಿ ಮೋಡಕವಿದುಕೊಂಡಿದ್ದು ಈ ದಿನ 1 ಗಂಟೆಯ ವರೆಗೆ ಜೋರಾದ ಮಳೆ ಬಿತ್ತು. ಇದರಿಂದ ಕಾಫಿ ಹಾಗೂ ಭತ್ತದ ಬೆಳೆಗೆ ವಿಪರೀತ ನಷ್ಟ ಸಂಭವಿಸಿರುವದು.

ಕಾಲೇಜ್ ಕಪ್ಪು ಹಾಕಿ ಪಂದ್ಯಾಟವು ಇಲ್ಲಿ ತಾರೀಕು 18-1-39 ರಿಂದ ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದು ಸೌತ್ ಕೂರ್ಗ ಎಸೋಸಿಯೇಶನಿನವರು ಜಯಶೀಲರಾಗಿ ಕಪ್ಪನ್ನು ಪಡೆದರು.

ಶ್ರೀಮಾನ್ ಓಡ್ಲಮನೆ ಆತ್ಮಾರಾಮ ಶಾಸ್ತ್ರಿಗಳು ಶ್ರೀಮದ್ಭಾಗವತದ ಹನ್ನೊಂದನೇ ಸ್ಕಂಧವನ್ನು ವೇದಾಂತ ಸಂಘದಲ್ಲಿ ಶುಕ್ರವಾರ ವಿನಹ ಬಾಕಿ ಎಲ್ಲಾ ದಿನಗಳಲ್ಲೂ ಸಾಯಂಕಾಲ 5-30 ರಿಂದ 7 ಗಂಟೆಯ ವರೆಗೆ ಪ್ರವಚನ ಮಾಡುತ್ತಿರುವರೆಂದೂ, ಇಂಥಾ ಸುಸಮಯದಲ್ಲಿ ಎಲ್ಲರೂ ಭಾಗವಹಿಸಲು ಅನುಕೂಲವಿದೆಯೆಂದೂ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ನಾಪೋಕ್ಲು.

ಶ್ರಿ. ಬಿದ್ದಾಟಂಡ ಯಂ. ಅಪ್ಪಚ್ಚನವರು ನಾಪೋಕ್ಲು ಆಸ್ಪತ್ರೆಗೆ ಒಂದು ಗಡಿಯಾರವನ್ನು ಧರ್ಮಾರ್ಥ ಕೊಟ್ಟಿರುವರಾಗಿ ತಿಳಿಯುತ್ತೇವೆ.

...ಟೆ.

ಗಂಧದ ಮರ ಮತ್ತು ಇತರ ಜಾತಿ ಮರಗಳಿರುವ ಪೈಸರಿ ಯಾ ಸರ್ಕಾರಿ ಜಾಗಗಳನ್ನು ಕೃಷಿಗೆ ಕೊಡುವವಿಚಾರದ ವಿನ್ಯ ಮತ್ತು ಫ. ರೆಸ್ಟು ರೂಲ್ಸುಗಳಿಗೆ ...ನ ತಿದ್ದು ಪಡಿಗಳು ತಾ. 10-1-39 ರ ಗಜೆಟಿನಲ್ಲಿ ಪ್ರಕಟವಾಗಿದೆ. ಇದಕ್ಕೆ ಆಕ್ಷೇಪ ಯಾ ಸಲಹೆಗಳನ್ನು ಮಾರ್ಚ ಅಖೈರು ಒಳಗೆ ತಿಳಿಸಿದರೆ ಗಮನಿಸಲಾದೀತಾಗಿಯೂ ಪ್ರಕಟಿಸಲಾಗಿದೆ.

ಹಿಂದೂದೇಶ.

ಕರ್ನಾಟಕ ಪ್ರಾಂತದ ಕಾಂಗ್ರೆಸ್ ಕಮಿಟಿಯ (ತ್ರಿಪುರಿ ಪ್ರತಿನಿಧಿಗಳ) ಮೀಟಿಂಗು ಈ ತಾ. 29 ನೇ ಭಾನುವಾರ ಬೆಳಿಗ್ಯೆ 8½ ಗಂಟೆಗೆ ಬೆಳಗಾಂನಲ್ಲಿ ನಡೆಯುವದು.

ರಾಜಕೋಟೆದ ಬಿಳಿ ದಿವಾನರಾದ ಕೆಡೆಲರು ಠಾಕೂರ ಸಾಹೇಬರ ಅಪ್ಪಣೆ ಮೇರೆಗೆ ತಮ್ಮ ದೇಶಕ್ಕೆ ಮರಳಿ ಹೊರಟು ಹೋದರು.

ಇಂಡಿಯಾ ಸರ್ಕಾರದವರು 500 ರೂ. ಗಳಿಗೆ ಮೇಲ್ಪಟ್ಟ ಸಂಬಳಗಳಲ್ಲಿ ಶೇಕಡ 10ರ ವರೆಗೆ ಹಿಡಿಯಲು ಯೋಚಿಸುತ್ತಿರುವರು.

ಶೀಘ್ರವಾಗಿಯೇ ಶ್ರೀ ಜಿ. ಎಸ್. ಕೃಷ್ಣರಾಯರವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ 'ಪ್ರಜಾವಾಣಿ' ಎಂಬ ಪತ್ರಿಕೆಯು ಹೊರಡುವದಾಗಿ ತಿಳಿಸುತ್ತಾರೆ.

ವೆಸ್ಟರ್ನ ಇಂಡಿಯಾ ಸ್ಟೇಟ್ ಏಜೆನ್ಸಿಗೆ ಸೇರಿದ ಜೇಟ್‌ಪುರ ಸಂಸ್ಥಾನದಿಂದ ಬರುವ ಬೆಂಕಿ ಕಡ್ಡಿಯನ್ನು ಮೈಸೂರು ಸಂಸ್ಥಾನಕ್ಕೆ ತರಕೂಡದೆಂದು ಸರ್ಕಾರದವರು ನಿರ್ಬಂಧಿಸಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ, ಮಹಾರಾಷ್ಟ್ರದ ಒಬ್ಬ ಮುಂದಾಳುಗಳೂ ಆಗಿರುವ ಶ್ರೀ. ಶಂಕರರಾವ್ ದೇವ್ರೋ ಇವರು ತ್ರಿಪುರಿ ಕಾಂಗ್ರೆಸ್ ಡೆಲಿಗೇಟರಾಗಿ ಆರಿಸಲ್ಪಡಲಿಲ್ಲ.

ಹೈದರಾಬಾದ ಸತ್ಯಾಗ್ರಹದಲ್ಲಿ ಸೆರೆ ಹಿಡಿಯಲ್ಪಟ್ಟ ಸತ್ಯಾಗ್ರಹಿಗಳಲ್ಲಿ ಹೈದರಾಬಾದ ಸಂಸ್ಥಾನದ ಹೊರಗಿನ ಕೈದಿಗಳನ್ನು ಬಿಟ್ಟು ಬಿಡಬೇಕೆಂದು ಹೈದರಾಬಾದ ಸರಕಾರವು ಒಂದು ಅಪ್ಪಣೆ ಹೊರಡಿಸಿದೆ.

ಮದ್ರಾಸಿನಿಂದ ತ್ರಿಪುರಿ ಕಾಂಗ್ರೆಸಕ್ಕೆ ತೆರಳಿದ ಸತ್ಯಮೂರ್ತಿ ಮತ್ತು ಬೇರೆ ಒಂಭತ್ತು ಪ್ರತಿನಿಧಿಗಳು, ಈ ವರ್ಷದ ಕಾಂಗ್ರೆಸ್ಸಿಗೆ ಅಧ್ಯಕ್ಷರು ಮೌ. ಅಬ್ದುಲ ಕಲಮ್ ಅಜಾದರು ಆಗಬೇಕೆಂದು ಒಂದು ಸೂಚನೆ ತಂದಿರುವರು.

ಬಂಗಾಳದ ಒಂದು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀ. ಜೆ. ಪಿ. ಬಾರೆಟ್ ಎಂಬ ಆಂಗ್ಲೋ ಇಂಡಿಯನ್ ಮಹನೀಯರೊಬ್ಬರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಕಾಂಗ್ರೆಸ್ ಕಮಿಟಿಗಳ ಇತಿಹಾಸದಲ್ಲಿ ಇದು ಅಪೂರ್ವ.

ಜಬಲ್ಪುರದ ಸೈನ್ಯಕ್ಕೆ, 'ಹೊರಡಲು ತಯಾರಿರಬೇಕೆ'ಂದು ಅಪ್ಪಣೆ ಬಂದಿದೆಯಾಗಿ ತಿಳಿದು ಬರುತ್ತಿದೆ. ಎಲ್ಲಿಗೆಂದು ತಿಳಿದಿಲ್ಲ. ರೈಲ್ವೆ ಅಧಿಕಾರಿಗಳಿಗೂ 'ಸ್ಪೆಶ್ಯಲ್ ಟ್ರೈನ್'ಗಳನ್ನು ಸಿದ್ಧಮಾಡಿ ಇಡಿ ಎಂದೂ ಸೂಚನೆಗಳು ಬಂದಿವೆ.

ಕನ್ನಡ ಜಿಲ್ಲೆಯ ಶ್ರೀ. ಕಮಲಾದೇವಿಯವರು,--ಸಮಗ್ರ ಭಾರತ ಮಹಿಳಾ ಕಾನ್ಫರೆನ್ಸಿನ ವೈಸ್‌ಪ್ರಸಿಡೆಂಟರು--ಕೋಪನ್‌ಹೇಗನಿನಲ್ಲಿ ಜರುಗುವ 'ಸಮಾನ ನಾಗರಿಕತೆಯ ಮಹಿಳಾ ಅಂತರರಾಷ್ಟ್ರೀಯ ಸಂಯೋಜನಾ ಸಮ್ಮೇಳನಕ್ಕೆ ಇಂಡಿಯದ ಪ್ರತಿನಿಧಿಗಳಾಗಿ ತೆರಳುವರು.

ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಮಿ. ಸುಭಾಸ್ ಚಂದ್ರ ಬೋಸ್‌ರವರು ಫೆಬ್ರವರಿ ತಿಂಗಳಲ್ಲಿ 4 ದಿನಗಳ ವರೆಗೆ ಆಂಧ್ರ ದೇಶದಲ್ಲಿ ಸಂಚರಿಸಿ ಅನಂತರ ದಕ್ಷಿಣ ಹಿಂದೂಸ್ಥಾನದ ಇತರ ಕಡೆಗಳಲ್ಲಿ ಪ್ರವಾಸ ಬೆಳಸುವರೆಂದು ತಿಳಿಯಬಂದಿದೆ.

ಮದ್ರಾಸಿನ ಕೋರ್ಟು ಮತ್ತು ಜೈಲು ಇಲಾಖೆಯ ಮಂತ್ರಿಗಳಾಗಿದ್ದ ಶ್ರೀ. ರಾಮಮನೋಹರವರ ನಿಧನದ ಪ್ರಯುಕ್ತ ಅವರ ಹುದ್ದೆಯ ಚಾರ್ಜನ್ನು ವಿದ್ಯಾಖಾತೆಯ ಮಂತ್ರಿಗಳಾದ ಡಾ. ಸುಬ್ಬರಾಯನ್‌ರವರಿಗೆ ಕೊಡಲಾಗಿದೆ. ವಿದ್ಯಾಖಾತೆಗೆ ಶ್ರೀ ವಾರ್ಕಿ ಇವರನ್ನು ನೇಮಿಸಲಾಗಿದೆ.

ಗುರು ನಾನಕ್ ದೇವ್ ಮತ್ತು ಗುರುಗೋವಿಂದ ಸಿಂಗ್ ಇವರ ಭಾವಚಿತ್ರಗಳೊಡನೆ, ಕೆಲವು ಸಿಗರೇಟುಗಳ ಪ್ರಚಾರದ ಉಲ್ಲೇಖಗಳನ್ನು ಮಾಡಿರುವದು ಕಾನೂನಿಗೆ ವಿರೋಧವೆಂದು ಪಂಜಾಬ್ ಸರಕಾರವು ತನ್ನ ಪ್ರಾಂತದ 1939 ನೇ ಇಸ್ವಿಯ ಭಗವಾನ್ ಪ್ರೆಸ್ಸಿನ 2 ಕ್ಯಾಲಂಡರುಗಳನ್ನು ಬಹಿಷ್ಕರಿಸಿದೆ.

ಡನ್‌ಬಾದ್‌ನಿಂದ 60 ಮೈಲಿಗಳ ದೂರದಲ್ಲಿ, ರೈಲು ಬಂಡಿಯೊಂದು ಮಗುಚಿ ಬಿದ್ದು, 10 ಮಂದಿ ತೀರಿಕೊಂಡರು. 49 ಮಂದಿ ಗಾಯಗೊಂಡಿರುವರೆಂದೂ ಗೊತ್ತಾಗಿದೆ. ಇಂಜಿನ್ ಮತ್ತು 3 ನೇ ಕ್ಲಾಸ್ ಗಾಡಿಗಳು ಹೊರತು, ಉಳಿದವು ಮಾತ್ರ ಮಗುಚಿ ಬಿದ್ದು, ಪುಡಿಯಾದವುಗಳು. ಸತ್ತ ಹಾಗೂ ಗಾಯಗೊಂಡವರಲ್ಲಿ ಹೆಚ್ಚಿನವರು, ಧನಾಢ್ಯರು. ಗಾಯಗೊಂಡವರನ್ನು ಡನ್‌ಬಾದ್ ಆಸ್ಪತ್ರೆಗೆ ಸಾಗಿಸಲಾಗಿದೆ. ಅಪಘಡದ ಕಾರಣ ತನಿಖೆಯಾಗುತ್ತಿದೆ.

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದೂ ಪ್ರಜೆಗಳಿಗೆ ಧಾರ್ಮಿಕ, ಪೌರಿಕ ಮತ್ತು ರಾಜಕೀಯ ಸಮಾನತೆಗಳನ್ನು ಗಳಿಸಿಕೊಡುವುದಕ್ಕಾಗಿ ಯಾವ ಉಪಾಯಗಳನ್ನನುಸರಿಸಬೇಕೆಂಬುವನ್ನು ಪರ್ಯಾಲೋಚಿಸುವುದಕ್ಕಾಗಿಯೂ ಸಹಾಯ ನಿರಾಕರಣವಂಧವನ್ನು ನಡಿಸುವುದಕ್ಕಾಗಿಯೂ ಅಖಿಲ ಹಿಂದೂಸ್ಥಾನದ ಹಿಂದೂ ಮಹಾಸಭೆಯವರು ಒಂದು ಸಮಿತಿಯನ್ನು ನೇಮಿಸಿರುತ್ತಾರೆ. ಸತ್ಯಾಗ್ರಹವನ್ನು ನಡಿಸಲು ಸ್ವಯಂ ಸೈನಿಕರುಗಳನ್ನೂ, ಧನವನ್ನೂ ಶೇಖರಿಸುತ್ತಲಿದ್ದಾರೆ. ಕಳೆದ ಶನಿವಾರ ಪೂನಾ ನಗರದಿಂದ ಐದು ಮಂದಿ ಸ್ವಯಂ ಸೇವಕರು ಸತ್ಯಾಗ್ರಹವನ್ನು ಹೂಡುವುದಕ್ಕಾಗಿ ಹೈದರಾಬಾದಿಗೆ ಪ್ರಯಾಣ ಮಾಡಿದರು.

ಮಹಾತ್ಮ ಗಾಂಧಿಯವರು ಟೆಂಥ್ ಸಂಸ್ಥಾನದ ರಾಜಕೀಯ ಸುಧಾರಣೆಗಳ ವಿಷಯವನ್ನು ಪ್ರಸ್ತಾಪಿಸುತ್ತಾ—ನಾನು ಇದು ವರೆಗೂ ಪ್ರಾಪ್ತವಯಸ್ಕನಾದ ಪ್ರತಿಯೊಬ್ಬ ಪ್ರಜೆಗೂ ಅವನು ವಿದ್ಯಾವಂತನಾಗಿರಲಿ ಅಥವಾ ಅವಿದ್ಯಾವಂತನಾಗಿರಲಿ ಸಮ್ಮತಿಕೊಡುವ (ವೋಟ್) ಅಧಿಕಾರವಿರಬೇಕೆಂದು ಅಭಿಪ್ರಾಯಪಡುತ್ತಿದ್ದೆನು. ಆದರೆ ಕಾಂಗ್ರೆಸ್ ಸಂಸ್ಥೆಯ ಕಾರ್ಯಕಲಾಪಗಳ ಪರಿಶೀಲನೆಯಿಂದ ಈಗ ನಾನು ನನ್ನ ಅಭಿಪ್ರಾಯವನ್ನು ಬದಲಾಯಿಸಬೇಕಾಗಿದೆ. ವೋಟು ಕೊಡತಕ್ಕವನ ವಿದ್ಯಾಸಾಮರ್ಥ್ಯಗಳ ಪರೀಕ್ಷೆ ಎರಡು ಕಾರಣಗಳಿಂದ ಅತ್ಯಾವಶ್ಯಕವೆಂದು ನಾನು ಅಭಿಪ್ರಾಯಪಡುತ್ತೇನೆ. ಮೊದಲನೆಯದು ಓಟು ಕೊಡುವದು ತಮಗಿರುವ ಹಕ್ಕೆಂಬ ಭಾವನೆಯು ಅವರಿಗೆ ಬರಬೇಕು. ಅದಕ್ಕಾಗಿ ವಿದ್ಯಾಸಾಮರ್ಥ್ಯ ಅತ್ಯಾವಶ್ಯಕ. ಎರಡನೆಯದು ವಿದ್ಯಾವಂತರಿಂದ ಚುನಾವಣೆಪಡೆದ ಮಂತ್ರಿಗಳು, ಅವಿದ್ಯಾವಂತರ ವಿಷಯದಲ್ಲಿ ಪ್ರೀತಿಸಂತಾಪ ಉಳ್ಳವರಾದರೆ ಸಾರ್ವತ್ರಿಕವಾದ ವಿದ್ಯಾ ಪ್ರಚಾರವು ಕೂಡಲೆ ಬಂದೇ ಬರುವುದು-ಹೀಗೆಂದು ಹೇಳಿರುವುದಾಗಿ ಪ್ರಕಟವಾಗಿದೆ.

ಚೀನದಿಂದ ಬ್ರಹ್ಮದೇಶದವರೆಗೆ ಹೊಸದೊಂದು ವ್ಯಾಪಾರ ಮಾರ್ಗವು ಸದ್ಯದಲ್ಲಿಯೇ ತಯಾರಾಗುವದಿದೆ. ಇದಕ್ಕೆ 1,400 ಮೈಲುಗಳಷ್ಟು ಹೊಸ ರಸ್ತೆಯನ್ನು ರಚಿಸಬೇಕಾಗುವದೆಂದು ಚೀನ ದೇಶದಲ್ಲಿ ಅಮೇರಿಕಾ ಸಂಯುಕ್ತ ಪ್ರಾಂತದ ರಾಯಭಾರಿಗಳಾದ ಮಿ. ನೆಲ್ಸನ್ ಜೋನ್ಸನರು ತಿಳಿಸುತ್ತಾರೆ.

ನೋಟೀಸು.

ವೀರಾಜಪೇಟೆನಾಡು ಕಡಂಗಮರೂರು ಗ್ರಾಮದ ಬೇಡರ ದೇವಪ್ಪನವರ ಮಗ ನಿಂಗಯ್ಯನು ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ-

ನನ್ನ ಅತ್ತೆ ಬೇಡರ ಕಾಟಯ್ಯನವರ ಹೆಂಡತಿ ಸೂರಮ್ಮನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕೆಳಗೆ ಶೆಡ್ಯೂಲಿನಲ್ಲಿ ಕಾಣುವ ಆಸ್ತಿಗಳನ್ನು ಅವರು ಕ್ರಯವರಿಸುವ ಇರಾದೆಯಲ್ಲಿರುವರಾಗಿ ತಿಳಿಯುತ್ತೇನೆ. ಸದರಿ ಸೂರಮ್ಮನವರಿಗೆ ಕಾನೂನು ಮೇರೆ ಕ್ರಯವರಿಸುವ ಹಕ್ಕು ಇರುವುದಿಲ್ಲ. ಸದರಿ ಆಸ್ತಿಗಳಿಗೆ ನಾನು ಹಕ್ಕುದಾರನು.

ಆದ್ದರಿಂದ ಕ್ರಯಕ್ಕೆ ಪಡಕೊಂಡವರಿಗೆ ಸದರಿ ಆಸ್ತಿಗಳಲ್ಲಿ ಏನೊಂದು ಹಕ್ಕೂ ಸಿಕ್ಕಲಾರದು ಎಂಬ ಸಂಗತಿ ಈ ಮೂಲಕ ಬಹಿರಂಗಪಡಿಸಿದೆ.

ಶೆಡ್ಯೂಲ್.

ವೀರಾಜಪೇಟೆನಾಡು ಕೆದಮುಳ್ಳೂರು ಗ್ರಾಮದ.

1. ಸಾಗಿನ ಸ. ನಂ. 10ರ 3.66 ಏರ್ಯದ ಭೂಮಿ.

(2) ಸಾಗಿನ ಸ. ನಂ. 17ರ 3.20 ಏರ್ಯದ ಕಿತ್ತಳೆ ತೋಟ.

(3) ಸಾಗಿನ ಸ. ನಂ. 0.44ರ 1.24 ಏರ್ಯದ ಜಾಗ, ಕೊಟ್ಟಿಗೆ, ಕಣ, ಮನೆ, ಬಾವಿ ವಗ್ಯೆರೆ.

(4) ಸಾಗಿನ ಸ. ನಂ. 12ರ 0.24 ಸೆಂಟಿನ ಬಾಣೆ.

(5) ಸಾಗಿನ ಸ. ನಂ. 46/2ರ 3.87 ಏರ್ಯದ ಬಾಣೆ.

2-2 **ಬೇಡರ ನಿಂಗಯ್ಯ.**

ವಿವರಗಳು.

ಯೋಜನೆಯಲ್ಲಿ ವಿಚಾರಿಸಲ್ಪಟ್ಟ ಮುಖ್ಯ ವಿಚಾರಗಳು:—

(1) ಮುನ್ಸಿಪಾಲ್, ಲೋಕಲ್ ಬೋರ್ಡು ಹಾಗೂ ಇತರ ಕ್ಷೇತ್ರಗಳಲ್ಲಿ ಅಲ್ಪ ಸಂಖ್ಯಾಕರ ವಿಶೇಷತಃ ಮುಸಲ್ಮಾನರ ಹಕ್ಕು ಬಾಧ್ಯತೆಗಳು.

(2) ವಿವಿಧ ನೌಕರಿಯಲ್ಲಿ ಸಾಕಷ್ಟು ಪ್ರಮಾಣದಿಂದ ಪ್ರಾತಿನಿಧ್ಯವು ದೊರೆಯುವ ವರ ಅವಶ್ಯಕತೆ.

(3) ಅಲ್ಪ ಸಂಖ್ಯಾಕರ ವಿಶೇಷತಃ ಮುಸಲ್ಮಾನರ ಶಿಕ್ಷಣಕ್ಕಾಗಿ ಸರ್ವ ವಿಧದ ಸೌಕರ್ಯಗಳು ದೊರೆಯಬೇಕೆಂಬ ಪ್ರಶ್ನೆಯ ಬಗ್ಗೆ ತಕ್ಕ ಶಿಕ್ಷಣ ಸೌಕರ್ಯಗಳಿಲ್ಲದ ಸ್ಥಳಗಳಲ್ಲಿ ಶಾಲೆಗಳನ್ನು ತೆರೆಯಬೇಕೆಂದು ಕಾಂಗ್ರೆಸ್ ಮಂತ್ರಿಗಳಿಗೆ ಆಗ್ರಹದಿಂದ ಸೂಚಿಸಲಾಗಿದೆ.

(4) ಮಸೀದಿಯ ಮುಂದೆ ವಾದ್ಯ ಬಾರಿಸುವದು ಆಕಳನ್ನು ಕೊಯ್ಯುವದು ಇವುಗಳ ಬಗ್ಗೆ ಇದ್ದ ತಕರಾರುಗಳ ವಿಷಯವಾಗಿ ಈ ಯೋಜನೆಯಲ್ಲಿ ಕಾಂಗ್ರೆಸ್ ಸರ್ಕಾರಗಳ ಸಂಪ್ರದಾಯವನ್ನು ಮನ್ನಿಸಬೇಕು. ಇದರಿಂದ ಹಿಂದೂ-ಮುಸ್ಲಿಂ ಧಾರ್ಮಿಕ ಭಾವನೆಗೆ ಎಳ್ಳಷ್ಟು ನೋವಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ರಾಷ್ಟ್ರ ಧ್ವಜದ ಪಾದ.

ರಾಷ್ಟ್ರಧ್ವಜದ ವಾದದ ಬಗ್ಗೆ ಈ ಸೂಚನಾ ಪತ್ರಿಕೆಯಲ್ಲಿ ಸರ್ವಾನುಮತ ಅಭಿಪ್ರಾಯವಿದ್ದರೆ ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜವನ್ನೇರಿಸಬೇಕೆಂದೂ, ಸರ್ವಾನುಮತ ಅಭಿಪ್ರಾಯವಿಲ್ಲದಿದ್ದರೆ ಹಚ್ಚಕೂಡದೆಂದೂ ವಿಧಿಸಲಾಗಿದೆ

'ವಂದೇ ಮಾತರಂ'

ರಾಷ್ಟ್ರಗೀತೆಯೊದ 'ವಂದೇ ಮಾತರಂ' ಪದ್ಯದ ಬಗ್ಗೆ ಇದ್ದ ಆಕ್ಷೇಪವನ್ನು ಕುರಿತು, ಕಾಂಗ್ರೆಸ್ ಈಗಾಗಲೇ ಮುಸ್ಲಿಂ ಬಾಂಧವರು ಆಪೇಕ್ಷಿಸಿದ ಪದ್ಯ ಭಾಗವನ್ನು ತೆಗೆದುಹಾಕಿದೆ. ಅದ್ದರಿಂದ ಇನ್ನು ಮುಸ್ಲಿಮರು ಈ ಬಗ್ಗೆ ಮುಂದಕ್ಕೆ ಅಸಮಂಜಸವಾದ ಧೋರಣವನ್ನು ಕೈಕೊಳ್ಳಲಿಕ್ಕಿಲ್ಲವೆಂದು ಆಶಿಸಲಾಗಿದೆ.

ಸಂಯುಕ್ತ ಘಟನೆ.

ಇಂದು ಭಾರತದ ಮುಂದಿರುವ ಪ್ರಬಲ ಪ್ರಶ್ನೆಯೊದ ಸಂಯುಕ್ತ ರಾಜ್ಯಘಟನೆಯ ವಿಷಯದಲ್ಲಿ ಕಾಂಗ್ರೆಸು ತನ್ನ ಧೋರಣೆಯನ್ನು ಈ ಮೊದಲೇ ಪ್ರಕಟಪಡಿಸಿರುವ ಪ್ರಯುಕ್ತ ಹೊಸದೇನೂ ಹೇಳುವದಕ್ಕಿಲ್ಲವೆಂದೂ ಆದರೆ ವೈಸರಾಯರು ಕೆಲವು ದಿನಗಳ ಹಿಂದೆ ಮಾಡಿದ ಭಾಷಣದಿಂದುಂಟಾದ ಪರಿಸ್ಥಿತಿಯನ್ನವಲೋಕಿಸಿ ಮುಂದಿನ ಮಾರ್ಗವನ್ನು ಯೋಜಿಸುವದು ಯುಕ್ತವೆಂದೂ ತೀರ್ಮಾನಿಸಲಾಗಿದೆ.

ತ್ರಿಪುರಿ ಅಧ್ಯಕ್ಷಪದ.

ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರನ್ನು ಆರಿಸುವ ಅಧಿಕಾರ ವರ್ಕಿಂಗ್ ಕಮಿಟಿಗಿದ್ದರೂ ಇದು ವರೆಗೆ ನಡೆದುಕೊಂಡು ಬರುತ್ತಿರುವ ಪದ್ಧತಿಯು ಬೇರೆಯಾಗಿದೆ. ರಾಷ್ಟ್ರವು ಒಮ್ಮತದಿಂದ ಸೂಚಿಸಿದವರೇ ಅಧ್ಯಕ್ಷರಾಗಿ ಆರಿಸಲ್ಪಡುವರು. ಈ ವರ್ಷ ಅಧ್ಯಕ್ಷಪದಕ್ಕೆ ಮೌಲಾನ್ ಅಬ್ದುಲ್ ಕಲಾಂ ಆಜಾದ್ ಮತ್ತು ಸುಭಾಶ ಚಂದ್ರ ಭೋಸರ ಹೆಸರುಗಳೇ ಹೆಚ್ಚಾಗಿ ಕೇಳಬರುತ್ತಿವೆ. ಸಮತಾವಾದಿಗಳು ಮತ್ತು ಯುವಕ ವರ್ಗದವರು ಸುಭಾಶ್ ಚಂದ್ರ ಭೋಸರು ಅಧ್ಯಕ್ಷರಾಗಬೇಕೆಂದೂ, ಹಿರಿಯರು ಕೆಲವರು ಆಜಾದರಾಗಬೇಕೆಂದೂ ಆಶಿಸುತ್ತಿರುವರು. ಅಂತೂ ಆಜಾದರೇ ಅಧ್ಯಕ್ಷರಾಗಬಹುದೆಂದು ಪ್ರಬಲ ವಾರ್ತೆ ಇರುವದು.

ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಆಫೀಸು ಮಡಿಕೇರಿ.
ತಾರೀಕು 16-1-1939.

ಪ್ರ ಕ ಟ ಣೆ.

ಕೊಡಗಿನ ಸಹಕಾರ ಸಂಘಗಳ ಮೆಂಬರುಗಳ ತರಬೇತು ಈ ಕೆಳಗೆ ಕಾಣಿಸಿರುವ ಕೇಂದ್ರ ಸ್ಥಳಗಳಲ್ಲಿ 1939ನೇ ಇಸವಿ ಫೆಬ್ರವರಿ ತಾ. 20ನೇ ಸೋಮವಾರ ಪ್ರಾತಃಕಾಲ 10 ಗಂಟೆಗೆ ಮೇಲ್ಕಂಡ ಇಲಾಖೆಯಿಂದ ಪ್ರಾರಂಭಿಸಲ್ಪಟ್ಟು 25ನೇ ಶನಿವಾರ ಸಾಯಂಕಾಲ 5 ಗಂಟೆಗೆ ಮುಕ್ತಾಯವಾಗುತ್ತೆ. ಪ್ರತಿ ದಿವಸವೂ ತರಗತಿಗಳು ಹಗಲು 10 ಗಂಟೆಗೆ ಪ್ರಾರಂಭವಾಗಿ ಸಾಯಂಕಾಲ 5 ಗಂಟೆಯ ವರೆಗೆ ನಡೆಯುತ್ತೆ. ಹಾಜರಾಗುವ ಪ್ರತಿ ಮೆಂಬರನಿಗೆ ಮಧ್ಯಾಹ್ನ ಊಟದ ಏರ್ಪಾಡಿಯನ್ನು ಸಮ್ಮಂಧಪಟ್ಟ ಯೂನಿಯನ್ ಮಾಡುತ್ತೆ.

ತಾ. 25-2-39ನೇ ಶನಿವಾರ ಅಪರಾಹ್ನದಲ್ಲಿ ಅಪೇಕ್ಷೆ ಪಡುವವರಿಗೆ ಪರೀಕ್ಷೆಯು ನಡಿಸಲ್ಪಡುತ್ತೆ.

ಸಹಕಾರಿಗಳೆಲ್ಲರೂ ಹಾಜರಾಗಿ ತರಬೇತಿನ ಪ್ರಯೋಜನವನ್ನು ಹೊಂದಿಕೊಳ್ಳಬೇಕಾಗಿ ವಿನಂತಿ. ತರಬೇತು ಸ್ಥಳವನ್ನು ಆಯಾಯ ಯೂನಿಯನ್ ಆಫೀಸಿನಿಂದ ತಿಳಿದುಕೊಳ್ಳುವುದು.

ಕೇಂದ್ರ ಸ್ಥಳಗಳು.

ಉತ್ತರ ಕೊಡಗು.

(1) ಮಡಿಕೇರಿ,
(2) ಮೂರ್ನಾಡು.
(3) ಕೊಟ್ಟೂರು,
(4) ಭಾಗಮಂಡ್ಲ,
(5) ಕೂಡಿಗೆ,
(6) ಸೋಮವಾರಪೇಟೆ.
(7) ಶನಿವಾರಸಂತೆ.

ದಕ್ಷಿಣ ಕೊಡಗು.

(1) ವೀರಾಜಪೇಟೆ
(2) ಅಮ್ಮತ್ತಿ.
(3) ನಾಪೋಕ್ಲು.
(4) ಪಾರಾಣೆ.
(5) ಪೊನ್ನಂಪೇಟೆ,
(6) ಹುದಿಕೇರಿ.

ಕೆ. ಚಂಗಪ್ಪ,
16-1-'39, ರಿಜಿಸ್ಟ್ರಾರವರು.

ಪರದೇಶಗಳಲ್ಲಿ ನಡೆಯುತ್ತಿರುವದೇನು?

ಚೇಂಬರ್ಲೇನರ ಪೌರೋಹಿತ್ಯ.

ಇಟಲಿಯ ಮತ್ತು ಫ್ರಾನ್ಸಿನ ಸ್ನೇಹವನ್ನು ಕುರಿತು ಚೇಂಬರ್ಲೇನ್, ಮುಸಲೋನಿ, ಲಾರ್ಡ್ ಹ್ಯಾಲಿಫಾಕ್ಸ್ ಮತ್ತು ಕೌಂಟ್ ಸಿಯಾನೊ ಇವರೊಳಗೆ ರೋಂ ನಗರದಲ್ಲಿ ನಡೆದ ಮಾತುಕತೆಗಳು ನಾವು ಈ ಮೊದಲು ಊಹಿಸಿದಂತೆಯೇ ಆಗಿದೆ. ಮುಸಲೋನಿಯು ಸ್ಪೈನಿನ ಬಂಡಾಯದ ವಿಚಾರದಲ್ಲಿ ತನ್ನ ಅಭಿಪ್ರಾಯಗಳನ್ನು ಕೊಡುವಾಗ ಬಂಡಾಯಗಾರರಿಗೆ ಯುದ್ಧದ ಹಕ್ಕುಗಳನ್ನು ಕೊಡಬೇಕೆಂದೂ, ಅದರಲ್ಲೂ ಭೂಮಧ್ಯ ಸಮುದ್ರದ ತೊಡಕು ಬಿಡಿಸಲ್ಪಡಬೇಕಾದರೆ ಬಂಡುಗಾರರಿಗೆ ಯುದ್ಧದ ಹಕ್ಕನ್ನು ಕೊಡಲೇ ಬೇಕೆಂದೂ ಹೀಗೆ ಮಾಡಿದರೆ ಸ್ಪೈನಿನಲ್ಲಿರುವ ಇಟಲಿ ಸೈನಿಕರನ್ನು ಹಿಂದಕ್ಕೆ ಕರೆಸುವ ಯೋಚನೆ ಮಾಡುವೆನೆಂದು ಹೇಳಿದನಂತೆ. ಫ್ರಾನ್ಸದ ಟ್ಯೂನಿಸಿಯವನ್ನು ಇಟಲಿಯು ಕೇಳುತ್ತಿರುವ ಸಮಸ್ಯೆಯ ಬಗ್ಗೆ ಮುಸಲೋನಿಯು ಹೆಚ್ಚು ಮಾತಾಡಲಿಲ್ಲವಂತೆ. ಆದರೂ ಬೇಡಿಕೆಗಳನ್ನು ಅರನು ಉದಾಸೀನ ಮಾಡಲಿಲ್ಲವೆಂಬುದು ಅವರ ಮಾತಿನ ಧಾಟಿಯಿಂದ ತಿಳಿದುಬರುತಿತ್ತಂತೆ. ಇದೇ ಅಲ್ಲದೆ ಇಟಲಿಯನ್ನು ಸಮಾಧಾನ ಮಾಡುವದಕ್ಕಾಗಿ ಫ್ರಾನ್ಸು ಬಲಿದಾನಕ್ಕೆ ತಯಾರಾಗಬೇಕೆಂದು ಚೇಂಬರ್ಲೇನರ ಮಾತಿನ ದಾಟಿಯಿಂದ ಮುಸಲೋನಿಗೆ ತಿಳಿದುಬಂದಿತಂತೆ. ಇದರಿಂದ ಮುಸಲೋನಿಯು ಹುರುಪುಗೊಂಡು ಮತ್ತೆ ಬಿಗಿಯಾಗಿರುವುದರಲ್ಲಿ ಸಂದೇಹವೇನು? ಭಲಾ! ಚೇಂಬರ್ಲೇನರ ಪೌರೋಹಿತ್ಯವೇ? ರಾಯಭಾರವೆಂದು ಇವಕ್ಕಿದ್ದವೇ ಅನ್ನಬೇಕಾದ್ದು. ಫ್ರಾನ್ಸು ಈ ರಾಯಭಾರನ್ನು ಮನ್ನಿಸಿದರೆ ಎಲ್ಲವೂ ಸರಿಹೋದೀತು. ಅಲ್ಲದೆ ಚೇಂಬರ್ಲೇನರಿಗೆ ತನ್ನ ಬೆನ್ನು ಚಪ್ಪರಿಸಿಕೊಳ್ಳಲಿಕ್ಕೆ ಅನುವೂ ದೊರೆತೀತು.

ಫ್ರಾನ್ಸಿನ ಧೋರಣೆ.

ಆದರೆ ಫ್ರಾನ್ಸಿನ ಧೋರಣೆ ಹೇಗಿದೆಯೆಂದು ಗೊತ್ತಿದೆಯೋ? ಕಳೆದ 25 ವರ್ಷಗಳಿಂದ ಬ್ರಿಟಿಷ್ ಸಿಂಹದ ಜೊತೆಯಲ್ಲಿ ಐಕ್ಯದಿಂದಿದ್ದು ಬ್ರಿಟಿಷರ ಮರ್ಮವನ್ನೆಲ್ಲಾ ಬೇಧಿಸಿ ತಿಳಿದಿದೆ. ಅದ್ದರಿಂದಲೇ ಅದು ತನ್ನ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದೆ. ಚೇಂಬರ್ಲೇನರ ನಯಮಾತುಗಳಿಗಾಗಿ ಈ ಸಂಧಾನಕ್ಕೆ ಒಪ್ಪಿಗೆಯನ್ನಿತ್ತಿದ್ದರೂ ತಮ್ಮ ಸ್ಥಿತಿಯ ಪರಿವೆಯು ಅದರಿಗಿದೆ. ಅದ್ದರಿಂದಲೇ ಟ್ಯೂನಿಸಿಯೊದಲ್ಲಿ ಆಪೋಷ ಹಡಗು ಪಡೆಯ ತಯಾರಿಕೆಯು ಭರದಿಂದ ಸಾಗಿದೆ. ಇಟಲಿಯೂ ಇದನ್ನರಿತಿದೆ. ಈ ಸಂಧಾನದಿಂದ ತನಗೆ ಲಾಭವಾಗಲಾರದೆಂಬ ನಂಬುಗೆ ಪೂರ್ಣ ಅದಕ್ಕಿದೆ. ಅದರೆ ದಕ್ಷಿಣೆ ಇಲ್ಲದೆ ಪೌರೋಹಿತ್ಯ ಮಾಡುವ ಪುರೋಹಿತರಿರುವಾಗ ಅದಕ್ಕೇಕೆ ಅಡ್ಡಿ ಬರಬೇಕು?

ಸ್ಪೈಯಿನ ಅಂತರ್ಯುದ್ಧ.

ಸ್ಪೈನಿನ ಭಾರಿ ಬಂದರಾದ ಬಾರ್ಸಿಲೋನವನ್ನು ವಶಪಡಿಸಿಕೊಳ್ಳಬೇಕೆಂದು ದಂಗೆಕಾರರ ಸೈನ್ಯವು ಕಳೆದ ಎಂಟು ದಿನಗಳಿಂದ ಮುಂದುವರಿಯುತ್ತಿದೆಯೆಂದು ತಿಳಿಸಿರುವೆವಷ್ಟೆ. ಈಗ ಈ ಸೈನ್ಯಗಳು ಬಾರ್ಸಿಲೋನದನ್ನು ಪ್ರವೇಶಿಸಿವೆ. ಅದಲ್ಲದ ಅದರ ಸುತ್ತು ಮುತ್ತಲಿನ ಪ್ರಾಂತಗಳನ್ನೆಲ್ಲಾ ವಶಪಡಿಸಿಕೊಂಡೂ ಬಿಟ್ಟಿವೆ. ಕಳೆದ ಮೂರು ವಾರಗಳಿಂದ ದಂಗೆಖೋರರು ಬಹಳ ಮುಂದುವರಿದಿರುವರು. ಬಾರ್ಸಿಲೋನದ ಮೇಲೆ ಬಾಂಬಿನ ಸುರಿಮಳೆಯು ಸುರಿಯುತ್ತಿದೆ. ದಂಗೆಗಾರರ ಸೈನ್ಯರದವು ಒಂದೆಡೆ, ವಿಮಾನ ಪಡೆಯು ಮತ್ತೊಂದೆಡೆ. ಹೀಗಾಗಿ ಸರ್ಕಾರ ಸೈನ್ಯವು ದಿಕ್ಕೆಟ್ಟಿದೆ. ಸ್ಪೈಯಿನಿನ ಪ್ರಾಮುಖ್ಯ ನಗರವಾದ ಬಾರ್ಸಿಲೋನವು ಇದರ ವಶವಾದರೆ ಇಡೀ ಸ್ಪೈಯಿನೇ ದಂಗೆಗಾರರ ವಶವಾದಂತೆ. ಈ ಯುದ್ಧರಂಗದಲ್ಲಿ ಸರ್ಕಾರ ಪಕ್ಷದ 50 ಸಾವಿರ ಮಂದಿ ಹತರಾದವರಲ್ಲದೆ 35 ಸಾವಿರ ಮಂದಿ ದಂಗೆಖೋರರ ಸೆರೆಯಾಳುಗಳಾಗಿರುವರು.

ಅಮೇರಿಕ.

ಜರ್ಮನಿಯು ಮಿತಿ ತಪ್ಪಿ ತನ್ನ ಸೈನಿಕ ಬಲವನ್ನು ಹೆಚ್ಚಿಸಿರುವುದರಿಂದ ಅಮೇರಿಕದ ಪ್ರಸಿಡೆಂಟರಾದ ರೂಸ್‌ವೆಲ್ಟರು ತನ್ನ ರಾಷ್ಟ್ರದ ವೈಮಾನಿಕ ಹಾಗೂ ಸೈನ್ಯಬಲವನ್ನು ನಾಲ್ಕರಷ್ಟು ಹೆಚ್ಚಿಸಬೇಕೆಂದು ನಿರ್ಧರಿಸಿರುವರು. ವೈಮಾನಿಕ ನಾಯಕರನ್ನು ಪ್ರತಿ ವರ್ಷವೂ 30 ಸಾವಿರದಂತೆ ತಯಾರು ಮಾಡಬೇಕೆಂದೂ ಸೈನ್ಯ ಖರ್ಚಿಗೆ 30 ದಶಲಕ್ಷ ಪೌಂಡುಗಳ ಮೇಲ್ಪಟ್ಟು ಖರ್ಚು ಮಾಡಬೇಕೆಂದೂ ನಿಶ್ಚಯಿಸಿರುವರು. ನೆಲ ಸೈನ್ಯಕ್ಕೆ 10 ಸಾವಿರ ವಿಮಾನಗಳ ಸಹಾಯವೂ, ಜಲ ಸೈನ್ಯಕ್ಕೆ 3 ಸಾವಿರ ವಿಮಾನಗಳ ಸಹಾಯವೂ ಇರಬೇಕೆಂದು ಇವರ ಗುರಿ. ಅಂತೂ ಈ ಯುದ್ಧ ತಯಾರಿಕೆಯಿಂದ ಪರಿಣಾಮವೇನಾಗುವದೆಂದು ನೋಡಬೇಕಿದೆ.

ಚೈನಾ ಜಪಾನು ಯುದ್ಧ.

ಚೈನಾ ಜಪಾನ್ ಯುದ್ಧವು ಬೇಗನೆ ಕೊನೆಗೊಳ್ಳುವ ಸಂದರ್ಭ ಕಾಣುವುದಿಲ್ಲ. ಒಂದು ಕಡೆ ಜಪಾನರು ಮುಂದೊತ್ತಿದ್ದರೆ ಮತ್ತೊಂದೆಡೆ ಚೀನಿಯರು ಅವರು ವಶಪಡಿಸಿಕೊಂಡಿರುವ ಪ್ರಾಂತಗಳನ್ನು ಪುನಹ ವಶಪಡಿಸಿಕೊಳ್ಳುತ್ತಿರುವರು. ಚಿಯಾಂಗ್ ಕೈಶೆಕರು ತಮ್ಮ ವೀರ ವಾಣಿಯಿಂದ ಸೈನಿಕರನ್ನು ಹುರಿದುಂಬಿಸುತ್ತಿರುವರು. ಈಗಾಗಲೇ ಚೀನವು 200 ವಿಮಾನಗರನ್ನು ಕಟ್ಟಲು ಬಾಲಾಂಕಾ ಎರ್ ಕ್ರಾಫ್ಟ್ ಕಾರ್ಪೊರೇಶನಿಗೆ ಗುತ್ತಿಗೆ ಕೊಟ್ಟಿದೆ. ಒಂದೊಂದು ವಿಮಾನದಲ್ಲಿ 5 ತೋಪುಗಳನ್ನು ಹೇರಲಾಗುವುದಂತೆ. ಇವು ಮಾರ್ಚ ತಿಂಗಳೊಳಗೆ ತಯಾರಾಗುವವಂತೆ. ಇದಕ್ಕೆ ತಗಲುವ ಖರ್ಚು 17 ಲಕ್ಷ ಪೌಂಡುಗಳು. ಈ ವ್ಯವಸ್ಥೆಗಳನ್ನು ನೋಡುವಾಗ ಚೀನವು ಎಂದೂ ಪರಾಜಿತವಾಗಲಾರದೆಂದು ನಂಬಬೇಕಾಗಿದೆ.

ಗ್ರಾಮೋದ್ಧಾರ ಕಾರ್ಯಕ್ರಮ.

ಲೇಖಕ:- ಬಿ. ಎಂ. ಅಪ್ಪಯ್ಯ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ವ್ಯವಸಾಯವು ಅಭಿವೃದ್ಧಿ ಹೊಂದಬೇಕಾದಲ್ಲಿ ಪ್ರತಿಯೊಬ್ಬ ರೈತನಲ್ಲಿಯೂ ವ್ಯವಸಾಯದಲ್ಲಿ ಅಭಿರುಚಿ, ಸಹನೆ, ವ್ಯವಸಾಯಕ್ಕೆ ತಕ್ಕ ಸಲಕರಣೆಗಳು ಇರಬೇಕು. ಒಂದು ಸಾಲು ಎರಡು ಊಳಲು ಕಬ್ಬಿಣದ ನೇಗಿಲನ್ನೇ ಉಪಯೋಗಿಸಬೇಕು. ಗರೀಬ ರೈತನಿಗೆ ಕಬ್ಬಿಣದ ನೇಗಿಲು ಕೊಂಡುಕೊಳ್ಳಲು ಚೈತನ್ಯವಿಲ್ಲದಿದ್ದಲ್ಲಿ ಸಹಕಾರಿ ಸಂಘಗಳಾಗಲೀ, ಇಲ್ಲವೇ ಗ್ರಾಮಾಭಿವೃದ್ಧಿ ಸಮಿತಿಯವರಾಗಲೀ ತಂದಿಟ್ಟುಕೊಂಡು ಬಾಡಿಗೆಗೆ ಕೊಡುವಂತೆ ಏರ್ಪಾಡು ಮಾಡಬೇಕು.

ಊಳುವ ಎತ್ತುಗಳೂ ಬಲಶಾಲಿಯಾಗಿಯೂ ಸಾಮಾನ್ಯ ಮಧ್ಯತರದವು ಆಗಿರಬೇಕು. ಆರಂಭ ಶುರುವಾಗುವ ಸಮಯದಲ್ಲಿ ಮೈಸೂರು ದೇಶದ ಕಡೆಯ ರಾಸುಗಳನ್ನು ಕೊಳ್ಳುವುದು ಅತಿ ಹಿತಕರವಲ್ಲ. ಮೈಸೂರು ದೇಶದಲ್ಲಿ ಮಳೆ ಕಡಿಮೆಯಾಗಿ ಬಯಲು ಪ್ರದೇಶವಾದ ಕಾರಣ ಅಲ್ಲಿಯ ಜಾನುವಾರುಗಳು ಹವಾ ಬದಲಾವಣೆಯನ್ನು ಸಹಿಸಲಾರದೆ ಆರಂಭಕ್ಕೂ ಅನುಕೂಲವಾಗದೆ ವ್ಯವಸಾಯಗಾರನಿಗೆ ಸಂಕಟವನ್ನುಂಟುಮಾಡುವುವು.

ಗೊಬ್ಬರ.

ವ್ಯವಸಾಯಗಾರನು ಹೆಚ್ಚಾಗಿ ನಿಗಾಕೊಡಬೇಕಾದುದು ಗೊಬ್ಬರದ ವಿಷಯದಲ್ಲಿ, ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಶೇಖರಿಸಿ, ಕಾಪಾಡಿ, ಉಪಯೋಗಿಸುವ ರೈತನಿಗೆ ಬಡತನವೆಂದೂ ಕಾಡುವುದಿಲ್ಲ. ಕೊಡಗಿನಲ್ಲಿ ಗೊಬ್ಬರ ಶೇಖರಿಸುವ ವಿಧಾನವು ಸಮರ್ಪಕವಾಗಿಲ್ಲವೆಂದು ಈ ಮೊದಲೇ ಹೇಳಿದೆ. ಪದೇ ಪದೇ ಸಮರ್ಪಕವಾಗಿಲ್ಲವೆಂದು ಹೇಳುವುದರಿಂದ ಗೊಬ್ಬರವು ಎಷ್ಟು ಪ್ರಾಮುಖ್ಯವಾದುದೆಂಬುದನ್ನು ಮನವಟ್ಟು ಪಡಿಸುವುದೇ ಈ ಲೇಖನದ ಸಾರಾಂಶವಾಗಿದೆ. ಮನೆಯ ಆಳು ಯಾ ಮನೆಯಲ್ಲಿರುವವರು, ದನದ ಕೊಟ್ಟಿಗೆಯಲ್ಲಿ ಬಿದ್ದಿರುವ ಸಗಣಿಯನ್ನು ತಮ್ಮ ಗದ್ದೆಗಳ ಒಂದು ಮೂಲೆ ಇಲ್ಲವೆ ತೆವರಿ ಅಗಲವಾಗಿದ್ದ ಪಕ್ಕದ ಒಂದು ಕಡೆ ಮೂಲೆಯಲ್ಲಿ ಸುರಿದು ಬಿಡುವರು. ಆ ಸಗಣಿಯಲ್ಲಿ ಹುಲ್ಲು ಬೆರಿಕೆಯಾಗಿರುವುದುಂಟು. ರಾತ್ರಿ ಕಾಲದಲ್ಲಿ ದನಗಳಿಗೆ ತಿನ್ನುವ ಬಗ್ಗೆ ಹುಲ್ಲು ಹಾಕಲು ಗೋದಲಿಗೆ ಏರ್ಪಡಿಸದ ಹುಲ್ಲನ್ನು ದನದ ಕೊಟ್ಟಿಗೆಯ ಒಂದು ಮೂಲೆಯಲ್ಲಿ ಇಲ್ಲದ ಕೊಕ್ಕೆಗಳನ್ನು ಕಟ್ಟಿ ಹುಲ್ಲಿನ ಕಂತೆಗಳನ್ನು ತೂಗುವುದರಿಂದ ದನಗಳು ಸಾಮಾನ್ಯವಾಗಿ ಅಲೆದಾಡಿ ಹುಲ್ಲನ್ನು ಕಚ್ಚಿ ಎಳೆಯುವುದರಲ್ಲಿ ಹಲವು ಭಾಗ, ಕೆಳಗೆ ಬಿದ್ದು ಕಾಲಿನ ತುಳಿತದಿಂದ ಸಗಣಿ ಮಿಶ್ರವಾಗಿರುವುದು. ಈ ರೀತಿ ಬಿದ್ದ ಸಗಣಿ ಮತ್ತು ಹುಲ್ಲನ್ನು ಹಾಗೆಯೇ ರಾಶಿ ಹಾಕುವುದರಿಂದ ಸಗಣಿಯಲ್ಲಿ ಸೇರಿರುವ ಹುಲ್ಲು ಕೊಳೆಯಲು ಅವಕಾಶವಾಗುವುದಿಲ್ಲ. ಮಳೆಯು ಬಿದ್ದಾಗಲಿಲ್ಲಾ ಈ ರೀತಿ ಹಾಕಿದ ಸಗಣಿ ರಾಶಿಯ ಮೇಲೆ ಹನಿಗಳು ಬಿದ್ದು ಹರಿಯಲಾರಂಭಿಸುವಾಗ್ಯೆ ರಸವತ್ತಾದ ಭಾಗವನ್ನು ಮಳೆಯ ಹನಿಗಳು ಅಪಹರಿಸಿಕೊಂಡು ಹೋಗುವವು. ಸುತ್ತಲೂ ಹರಿಯುವ ನೀರಿನ ಉಪದ್ರಕ್ಕೂ ಆ ರೀತಿ ಹಾಕಿದ ಗೊಬ್ಬರದ ರಾಶಿಯು ತುತ್ತಾಗಿ ಅನೇಕ ಭಾಗ ಗೊಬ್ಬರವು ಕಳೆದು ಹೋಗುವುದು. ಸೂರ್ಯರಶ್ಮಿಯು ಜೋರಾಗಿ ಅಂಥಾ ರಾಶಿಯ ಮೇಲೆ ಬೀಳುವುದರಿಂದ ಗೊಬ್ಬರವು ಒಣಗಿ ಸಾರಾಂಶವು ಕಡಿಮೆಯಾಗಲು ಅವಕಾಶವಾಗಿ ಈ ರೀತಿ ಹಾಕಿದ ಗೊಬ್ಬರದ ರಾಶಿಯು ಬಿಸಿಲು ಮಳೆಯ ಅನಾಹುತದಿಂದ ನಿಷ್ಪ್ರಯೋಜಕವಾಗುವದು. ಅಲ್ಲದೆ ಅನೇಕರು ಆ ರೀತಿ ಶೇಖರಿಸಿದ ಗೊಬ್ಬರವನ್ನು ಎರಡು ಸಾಲು ಯಾ ಒಂದು ಸಾಲು ಊಳುಮೆಯಾದ ಕೂಡಲೆ ಸಾಗಿಸಿ ಗದ್ದೆಗಳಲ್ಲಿ ದೂರ ದೂರ ಚೆಲ್ಲುವರು. ಆ ರೀತಿ ಹಾಕಿದ ಗೊಬ್ಬರಕ್ಕೆ ಮಳೆಯು ಬಾರದೆ ಬಿಸಿಲು ಕಾದಲ್ಲಿ ಅದರಲ್ಲಿ ಅಡಕವಾದ ಅಲ್ಪ ಸ್ವಲ್ಪ ಸಾರವೂ ಸೂರ್ಯಕಿರಣಗಳಿಂದ ಅಪಹರಿಸಲ್ಪಡುವುದು. ಈ ರೀತಿ ಹಾಕಿದ ನಿಸ್ಸಾರವಾದ ಗೊಬ್ಬರದಿಂದ ವ್ಯವಸಾಯಕ್ಕಾಗಲೀ ವ್ಯವಸಾಯಮಾಡಿದ ಯಜಮಾನನಿಗಾಗಲೀ ಯಾವ ಪ್ರಯೋಜನವೂ ದೊರೆಯಲಾರದು. ಒಳ್ಳೇ ರೀತಿಯ ಗೊಬ್ಬರ ಶೇಖರಿಸಲು ಈ ಕೆಳಗೆ ವಿವರಿಸಿರುವ ರೀತಿಯು ಅತಿ ಉಪಯುಕ್ತವಾದದ್ದಾಗಿದೆ.

ವ್ಯವಸಾಯ ಮಾಡಬೇಕೆಂದಿರುವ ಜಮೀನಿನ ಪಕ್ಕ ಯಾ ಗದ್ದೆ ಪಕ್ಕದಲ್ಲಿ 6 ಅಡಿ ಚತುರವುಳ್ಳ 5 ಅಡಿ ಆಳದ ಎರಡು ಮೂರು ಗುಂಡಿಗಳನ್ನು ತೋಡಿ ಇಟ್ಟುಕೊಳ್ಳುವುದು ಒಳ್ಳೆಯದು. ಸ್ಥಳ ಸಂಕೋಚವಾಗಿದ್ದು ಎರಡು ಮೂರು ಗುಂಡಿಗಳನ್ನು ಏರ್ಪಡಿಸಲು ಅನುಕೂಲವಿಲ್ಲದಿದ್ದಲ್ಲಿ ದೊಡ್ಡದಾದ ಒಂದೇ ಗುಂಡಿಯನ್ನು ಏರ್ಪಡಿಸಿಕೊಳ್ಳಬೇಕು. ಮುಂಜಾನೆಯಾದ ಕೂಡಲೇ ದನದ ಕೊಟ್ಟಿಗೆಯಿಂದ ದನಗಳನ್ನು ಹೊರಗಡೆ ಬಿಟ್ಟು ಒಂದು ಸಮತಳವಾದ ಜಾಗದಲ್ಲಿ ಕಟ್ಟಿಹಾಕಬೇಕು. ಕೂಡಲೆ ದನದ ಕೊಟ್ಟಿಗೆಯನ್ನು ಚೊಕ್ಕಟ ಪಡಿಸಿ ಅಲ್ಲಿ ಬಿದ್ದಿರುವ ಸಗಣಿ, ಹುಲ್ಲು, ಗಂಜಳ ಇವುಗಳನ್ನು ಈ ಗೊಬ್ಬರದ ಗುಂಡಿಗೆ ಆ ದಿವಸವೇ ಸಾಗಿಸಿಬಿಡಬೇಕು. ಮನೆಯ ಸುತ್ತ ಮುತ್ತಲು ಬಿದ್ದಿರುವ ಕಸ, ಸಗಣಿ ಚೂರುಗಳು ಸೊಪ್ಪು ಸದೆ ಇವುಗಳನ್ನೆಲ್ಲಾ ಶೇಖರಿಸಿ ಗೊಬ್ಬರದ ಗುಂಡಿಗೆ ಒಯ್ಯಬೇಕು. ಈ ರೀತಿ ಸಗಣಿಯ ಮೇಲ್ಗಡೆ ಸೊಪ್ಪು ಸದೆ ಹಾಕುವುದರಿಂದ ಮೊದಲು ಒಟ್ಟಲ್ಪಟ್ಟ ಸಗಣಿಯು ಬಿಸಿಲಿನ ತಾಪಕ್ಕೆ ಒಣಗದೆ ಸಂರಕ್ಷಿಸಲ್ಪಡುವದು. ಯಾವಾಗಲೂ ಗೊಬ್ಬರದ ಗುಂಡಿಗಳನ್ನು ಬಿಸಿಲಿನ ತಾಪ ತಗಲದಂತ ಸ್ಥಳಗಳಲ್ಲಿ ಏರ್ಪಡಿಸುವದು ಒಳಿತು.

ದನಗಳ ಗಂಜಳವು ಉತ್ಕೃಷ್ಟವಾದ ಗೊಬ್ಬರವೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿರುತ್ತೆ. ದನದ ಕೊಟ್ಟಿಗೆಯ ತಳವನ್ನು ಒಂದು ಕಡೆ ಎತ್ತರವಾಗಿಯೂ ಇನ್ನೊಂದು ಕಡೆಗೆ ಕೊಂಚ ಇಳಿಜಾರಾಗಿಯೂ ಮಾಡಿ, ಮಧ್ಯಭಾಗವನ್ನು ತಗ್ಗಿಸಿ ಚರಂಡಿಯೋಪಾದಿಯಲ್ಲಿಳಿಸಿ ಗಂಜಲವೆಲ್ಲವೂ ಈ ರೀತಿ ಏರ್ಪಡಿಸಿದ ಚರಂಡಿಯಲ್ಲಿ ಹರಿದು ಹೋಗುವಂತೆ ಮಾಡಿ, ಆ ಚರಂಡಿಯ ಕೊನೆಯ ಭಾಗದಲ್ಲಿ ಒಂದು ದಪ್ಪನಾದ ಮಡಿಕೆಯನ್ನು ಹೂಳಿಡಬೇಕು. ಕೊಟ್ಟಿಗೆಯಿಂದ ಬಂದ ದನಗಳ ಗಂಜಲವೆಲ್ಲವೂ ಆ ರೀತಿ ಹೂಳಿಟ್ಟ ಮಡಿಕೆಯಲ್ಲಿ ಬೀಳುವುದು. ಈ ರೀತಿ ಶೇಖರಿಸಿದ ಗಂಜಲವನ್ನು ಪ್ರತಿ ನಿತ್ಯವೂ ಬೇರೊಂದು ಪಾತ್ರೆಯಲ್ಲಿ ತೆಗೆದು ಗೊಬ್ಬರದ ಗುಂಡಿಗೆ ಸಾಗಿಸಿ, ಶೇಖರಿಸಿಟ್ಟ ಸಗಣಿ ಸೊಪ್ಪು ಸದೆ, ಕಾಡು ಮಣ್ಣು ಇವುಗಳ ಮೇಲೆ ಹಾಕುತ್ತಾ ಬರಬೇಕು. ಸಗಣಿಯು ಒಂದು ಭಾಗದಲ್ಲಿ ಸೊಪ್ಪುಸದೆ ಇವುಗಳನ್ನು ಎಷ್ಟು ಹೆಚ್ಚಾಗಿ ಬೇಕಾದರೂ ಹಾಕಬಹುದು.

ಮುಂಜಾನೆ ದನಗಳನ್ನು ಅವು ತಂಗುವ ಸ್ಥಳದಿಂದ ಹೊರಗೆ ಕಟ್ಟಬೇಕೆಂದು ಈ ಮೊದಲೇ ಹೇಳಿದೆ. ಆ ರೀತಿ ಹೊರಗೆ ಕಟ್ಟಿದ ಸ್ಥಳದಲ್ಲಿ ಗಂಜಳ, ಸಗಣಿ ಬೀಳುವ ಕಾರಣ ಅವುಗಳನ್ನು ಜೋಪಾನವಾಗಿ ಕಾಪಾಡಲು, ಕಾಡುಮಣ್ಣನ್ನು ಶೇಖರಿಸಿ ಕಟ್ಟುವ ಸ್ಥಳದಲ್ಲು ಕೊಂಚ ಮಂದವಾಗಿ ಹಾಕಬೇಕು. ದನದ ಗಂಜಲವು ಆ ರೀತಿ ಹಾಕಿದ ಮಣ್ಣಿನ ಮೇಲೆ ಬಿದ್ದ ಕೂಡಲೇ ಹೀರಲ್ಪಟ್ಟು ಶೇಖರವಾಗುವುದು. ಈ ರೀತಿ ಗಂಜಲವು ಹೀರಲ್ಪಟ್ಟು ಶೇಖರವಾದುದನ್ನು, ಕಟ್ಟಿದ ದನಗಳನ್ನು ಹೊರಗಡೆ ಮೇವಿಗಾಗಿ ಅಟ್ಟಿದ ಕೂಡಲೇ ಎಲ್ಲವನ್ನೂ ತೋಡಿ ಗೊಬ್ಬರದ ಗುಂಡಿಗೆ ಸಾಗಿಸಬೇಕು. ಸಗಣಿಯನ್ನೆಂದಿಗೂ ಮಳೆ ಬಿಸಿಲು ಸೋಕಲು ಬಿಡಕೂಡದು. ಪ್ರತಿನಿತ್ಯವೂ ಗೊಬ್ಬರದ ಗುಂಡಿಗೆ ಗಂಜಲವನ್ನು ಸುರಿಯುವುದರಿಂದ ಅಲ್ಲಿಯ ಸಾಮಗ್ರಿಗಳೆಲ್ಲವೂ, ಕೊಳೆತು, ಪಕ್ವವಾಗಲು ಸಹಕಾರಿಯಾಗುವುದು. ಈ ರೀತಿ ಶೇಖರಿಸಿದ ಗೊಬ್ಬರದ ಗುಂಡಿ, ಭರ್ತಿಯಾದ ಕೂಡಲೇ ಮೇಲ್ಭಾಗಕ್ಕೆ ಗೋಪುರಾಕಾರಕ್ಕೆ ಮಣ್ಣನ್ನು ತುಂಬಿ ಬಿಟ್ಟು ಬಿಡಬೇಕು. ಈ ರೀತಿ ಮಣ್ಣಿನಿಂದ ಮುಚ್ಚುವದರಿಂದ ಒಳಗಿನ ಸಗಣಿ, ಸೊಪ್ಪು ಸದೆ ಇತ್ಯಾದಿಗಳಿಗೆ ಒಳಗೆ ತಾಪವು ಹುಟ್ಟಿ ಕೊಳೆಯಲು ಪ್ರಾರಂಭವಾಗುವುದು. ಒಂದು ಗುಂಡಿಯು ಭರ್ತಿಯಾದ ನಂತರ ಇನ್ನೊಂದರಂತೆ ಹಾಕುತ್ತಾ ಹೋಗಬೇಕು. ಬೇಸಿಗೆ ಕಾಲದಲ್ಲಿ ಗೊಬ್ಬರದ ಗುಂಡಿಗಳಿಗೆ ಕೊಂಚ ನೀರು ಸುರಿಯುವದು ಒಳ್ಳೆಯದು. ಯಾಕಂದರೆ ಸೊಪ್ಪು ಸದೆ, ಹುಲ್ಲು ಮೊದಲಾದವುಗಳನ್ನು ಕೊಳೆಯಿಸಲು ದ್ರವಪದಾರ್ಥವು ಅತ್ಯಾವಶ್ಯಕ. ಗಂಜಲವು ಹೆಚ್ಚಾಗಿ ದೊರೆಯದಿದ್ದಲ್ಲಿ ನೀರು ಹಾಕಿ ದ್ರವವು ಹೆಚ್ಚಿ ಒಳಗಿನ ಪದಾರ್ಥಗಳು ಕೊಳೆಯಲು ಅನುಕೂಲಿಸುವಂತೆ ಮಾಡಬೇಕು.

ಮೇಲೆ ವಿವರಿಸಿದ ರೀತಿ ಶೇಖರಿಸಲ್ಪಟ್ಟ ಗೊಬ್ಬರವು ಪಕ್ವವಾಗಲು ಆರು ತಿಂಗಳು ಕಾಲವಾದರೂ ಬಿಡಬೇಕು. ಅನಂತರ ಮುಂಗಾರು ಮಳೆಯು ಪ್ರಾರಂಭವಾದ ಮೇಲೆ ಗೊಬ್ಬರದ ಗುಂಡಿಯ ಮೇಲಿನ ಹೊದಿಕೆಯನ್ನು ತೆಗೆದು ನೋಡಿದರೆ ಸೊಪ್ಪು, ಸಗಣಿ ಯಾವುದೆಂದು ಗುರ್ತಿಸಲಾಗದಂತೆ ಕಪ್ಪಾಗಿ, ಹೆಪ್ಪಾಗಿ ನಿಂತಿರುವುದು. ಇದು ಮೃದುವಾಗಿ ಬೆಣ್ಣೆಯಂತಿರುವುದು. ಇಲ್ಲಿಗೆ ಊಳುಮೆಯು ಎರಡು ಯಾ ಮೂರು ಸಾಲು ಆಗಿರಬೇಕು. ಜಮೀನಿನಲ್ಲಿ ನೀರು ಕೊಂಚ ಮಟ್ಟಿಗೆ ಇರಬೇಕು. ಆಗ್ಯೆ ಗೊಬ್ಬರವನ್ನು ಗುಂಡಿಗಳಿಂದ ತೆಗೆದು ಜಮೀನುಗಳಿಗೆ ಹಾಕಿಸಬೇಕು. ಗದ್ದೆಯಲ್ಲಿ ಅಲ್ಪ ನೀರು ಬೇಕು. ಮೇಲ್ಗಡೆಯಿಂದ ನೀರನ್ನು ಹಾಯಗೊಡಿಸಬಾರದು. ಈ ರೀತಿ ಗೊಬ್ಬರವನ್ನು ಗದ್ದೆಗಳಿಗೆ ಸಾಗಿಸಿದ ನಂತರ ಮಳೆಯು ನಿಂತು ಬಿಸಿಲಿನ ಕಾವು ಹೆಚ್ಚಾಗಿ ಗದ್ದೆಯಲ್ಲಿದ್ದ ಅಲ್ಪ ಸ್ವಲ್ಪ ನೀರು ಬತ್ತಿ ಹೋದಲ್ಲಿ ಹಾಕಿದ ಗೊಬ್ಬರದ ಕುಪ್ಪೆಗಳನ್ನು ಮಣ್ಣಿನಿಂದ ಮುಚ್ಚಿ ಬಿಸಿಲಿಗೆ ಒಣಗದಂತೆ ಕಾಪಾಡಬೇಕು. ಇಲ್ಲವೇ ಗೊಬ್ಬರ ಹಾಕಿದ ಕೂಡಲೆ ಗೊಬ್ಬರವು ಮಣ್ಣಿನಲ್ಲಿ ಕಲಸಿಕೊಳ್ಳುವಂತೆ ಉತ್ತುಬಿಡುವುದು ಶ್ರೇಯಸ್ಕರ.

ಕೊಡಗಿನಲ್ಲಿ ಹೊಳೆ ನೀರು ಹರಿಯುವ ಕೊಲ್ಲಿ ಹಳ್ಳ ಪ್ರದೇಶಗಳಲ್ಲಿ ಹೊಂಗೆ ಮರಗಳಿಂದ ಹಸಿ ಸೊಪ್ಪನ್ನು ತಂದು ಚಿಕ್ಕದಾಗಿ ಕತ್ತರಿಸಿ ಗದ್ದೆಗಳಲ್ಲಿ ಹಾಕಿ ತುಳಿಯಬೇಕು. ಹೊಂಗೆ ಸೊಪ್ಪಿನಲ್ಲಿ ಭತ್ತದ ಬೆಳವಣಿಗೆಗೆ ಸಹಕಾರಿಯಾಗುವ ಸಸ್ಯಾಹಾರವು ವಿಶೇಷವಾಗಿದೆ. ಕೊಡಗು ದೇಶದಲ್ಲಿ ಹೊಂಗೆ ಮರದ ಸೊಪ್ಪನ್ನು ಉಪಯೋಗಿಸುವವರು ಅತಿ ಕಡಿಮೆ. ಹೊಳೆ ದಡದಲ್ಲಿ ಹೊಂಗೆ ಮರವು ತಾನಾಗಿ ಬೆಳೆಯುವುದು. ಕಾಡಿನಲ್ಲಿ ಬೆಳೆಯುವ ಪ್ರತಿಯೊಂದು ಗಿಡ ಮರಗಳೂ ರೈತನಿಗೆ ದೇಹವನ್ನೇ ಅರ್ಪಿಸಿ, ಸಹಾಯ ಮಾಡಲು ಸಿದ್ಧವಾಗಿವೆ.

ರೈತನಿಗೆ ತನ್ನ ಗದ್ದೆಯು ಮೂರು ಸಾಲು ಊಳುಮೆಯಾದ ಕೂಡಲೇ ಗೊಬ್ಬರ ಸಾಗಿಸಬೇಕೆಂದು ಈ ಮೊದಲೇ ಹೇಳಿದೆ. ಕೊಡಗಿನಲ್ಲಿ ಕೂಲಿ ಆಳುಗಳೂ ಸಿಕ್ಕುವುದು ದುರ್ಲಭ. ಗೊಬ್ಬರವನ್ನು ಸಾಗಿಸಲು ಅಂಥಾ ಸಮಯದಲ್ಲು ಆಳುಗಳೂ ಸಿಕ್ಕದೆ ಪಶ್ಚಾತ್ತಾಪ ಪಡುವ ಕಾರಣವನ್ನು ಊಹಿಸಬಹುದು. ಈ ತೊಂದರೆಯನ್ನು ನಿವಾರಿಸಲು ಪ್ರತಿಯೊಬ್ಬ ರೈತನಲ್ಲಿಯೂ 'ವೀಲ್ ಬಾರೋಸ್' ಎಂಬ ಒಂದೇ ಚಕ್ರದ ನೂಕುವ ಬಂಡಿಯನ್ನು ಇಟ್ಟುಕೊಳ್ಳಬೇಕು. ಇದು ರೈತನಾದವನಿಗೆ ಅತೀ ಸಹಾಯಕಾರಿಯಾದುದು. ಪ್ರತಿ ನಿತ್ಯವೂ ವೀಲ್ ಬಾರೋಸ್ ಮೂಲಕ ಮನೆಯಲ್ಲಿ ಬಿದ್ದ ಕಸ ಕಡ್ಡಿಗಳನ್ನೂ, ದನದ ಸಗಣಿಯನ್ನೂ ನಿರಾಯಾಸವಾಗಿ ಗೊಬ್ಬರದ ಗುಂಡಿಗಳಿಗೆ ಸಾಗಿಸಬಹುದು. ಕಾಡು ಮಣ್ಣನ್ನು ಸಾಗಿಸುವದಕ್ಕೆ ಅದು ಅತೀ ಸಹಕಾರಿಯಾದುದು. ಈ ವೀಲ್ ಬಾರೋಸ್ ಎಂಬ ಒಂದೇ ಚಕ್ರದ ನೂಕುವ ಬಂಡಿಯನ್ನು ಹಳ್ಳಿಯ ಬಡಗಿ, ಕಮ್ಮಾರನಿಂದಾಗಲೀ ಇಲ್ಲವೇ ಪೇಟೆಯಿಂದಾಗಲೀ ಅಲ್ಪ ಬೆಲೆಗೆ ತರಿಸಿಕೊಳ್ಳಬಹುದು.

[illegible]

ಬಾತ್ಮಿ.

—೦0೦—

ಮಲೆ ದೇವರ ಭಂಡಾರ.

ಈ ಮೊದಲು ಕಡಿಯತ್ತು ನಾಡಿನ ಮಲೆ ತಂಬ್ರಾನ್ ದೇವರ ಭಂಡಾರದ ವಿಷಯದಲ್ಲು 'ಕೊಡಗು' ಪತ್ರಿಕೆ ಮತ್ತು ಮಂಗಳೂರಿನ 'ಸ್ವತಂತ್ರ ಭಾರತ' ಪತ್ರಿಕೆಯಲ್ಲು ನಾಡುತಕ್ಕ ಮತ್ತು ಊರು ಸಂಬಂಧಪಟ್ಟಂತವರು ಬಂಡಾರದ ಲೆಕ್ಕಪಕ್ಕಗಳ ವಿಷಯ ಕೊಂಚ ಮಟ್ಟಿಗೆ ವಿವರಿಸಿದ್ದರು. ಪ್ರತಿ ನಿತ್ಯ ಎಚ್ಚರ ಮಾಡುವ ಕರಡ ಊರಿನ ಒಂದೆರಡು ಕುಳಗಳು ಮತ್ತು ಊರಿನವರು ತಿಳಿದರೂ ತಿಳಿಯದೆ ಕಿವಿ ಕಣ್ಣು ಮುಚ್ಚಿಕೊಂಡು ಮೌನವ್ರತವನ್ನು ತಾಳಿಕೊಂಡು ಮೆಲ್ಲಮೆಲ್ಲಗೆ ಒಳಗಿಂದೊಳಗೆ ಭಂಡಾರದ ಹಣ ಕಾಲಿ ಮಾಡುವ ಉದ್ದಿಶ್ಯಕ್ಕೆ ಹೆಚ್ಚಿನ ನಿಗ ಮತ್ತು ಕಾರುಬಾರು ನಡಿಸುವುದು ಪೂರಾ ವ್ಯಸನಕರವಾಗಿದೆ.

ಇದೇ ರೀತಿ ಪೂರ್ವದಲ್ಲು ದೇಶಭಕ್ತರಾದ ಚೆಟ್ಟೋಳಿ ಅಪ್ಪುನ ಮನೆಯಲ್ಲು ನೆಲ ಮಾಳಿಗೆಯಲ್ಲು ಇಟ್ಟಿದ್ದ ಭಂಡಾರದ ಹಣವನ್ನು ನ್ಯಾಯವಿಲ್ಲದ ರೀತಿ ಉಪಯೋಗಿಸುತ್ತಾ ಬರುತ್ತಿದ್ದವರಿಂದ ತೆಗೆಯಲು ಹೋದ ದಿನ ನೋಡುತ್ತಾ ಇದ್ದಂತೆ ಭೂದೇವಿಯು ನುಂಗಿದನ್ನು ಕರಡ ಗ್ರಾಮದ ಈಗಿನ ಮುಂದಾಳುಗಳು ಮರೆತರೋ? ಸೆಂಟ್ರಲ್ ಬ್ಯಾಂಕಿಗೆ ಭಂಡಾರ ಹಣ ಕಳುಹಿಸುವುದಕ್ಕೆ ಮೊದಲು ನಿತ್ಯ ಬೀಗ ತೆಗೆದುಕೊಂಡಿದ್ದಂಥಾ ಭಂಡಾರದ ಪೆಟ್ಟಿಗೆಯ ಬೀಗವನ್ನು ತೆಗೆಯಲಿಕ್ಕೆ ಆಗದೆ ಮಚ್ಚಿನಿಂದ ಕಡಿದು ತೆಗೆದ ಮನುಷ್ಯನು ಮಚ್ಚಿನಿಂದ ಕಾಡಿನಲ್ಲಿ ಕೆಲಸ ಮಾಡುತ್ತಿದ್ದಾಗ್ಯೆ ಮರಣ ಹೊಂದಿದ್ದನ್ನು ಮರೆತರೋ? ಹೆಚ್ಚು ಕಡಿಮೆ ಭಂಡಾರದಲ್ಲು ಇದ್ದ 50 ಸಾವಿರ ರೂಪಾಯಿಗಳ ಲೆಕ್ಕಾಚಾರದಲ್ಲು ಹಳೆ ದಾಕಲಾತಿ ಮತ್ತು ಮುಖಂಡರ ಸೆಂಟರಿಪ್ಪರುಗಳಿಗೆ ಕೊಟ್ಟ ಹಣ ವಸೂಲಾತಿಯ ದಾಕಲನ್ನು ಬರೆಯಿಸಿದ ರೋಜಿನಾಮೆಯನ್ನು ನಾಡಿನ ಮೂವರು ತಕ್ಕರಿಗೂ ಮತ್ತು ಸೆಂಟರಿಪ್ಪರುಗಳಿಗೂ ತೋರಿಸಲು ಕರಡ ಗ್ರಾಮಸ್ಥರಿಗೆ ಮಹತ್ತಾದ ಭಾರವೇನೆಂಬುವನ್ನು ಇನ್ನಾದರೂ ತಿಳಿಸಬಾರದೇ? ಕಳೆದ ಉತ್ಸವ ಕಳೆದ ನಂತರ ಯಾರೋ ಒಬ್ಬ ಪುಣ್ಯಾತ್ಮನು ದೇವರಿಗೆಂದು ಕೊಟ್ಟ ಹಣವನ್ನು ಮೊನ್ನೆ ತಾನೇ ತರಿಸಿದ ಹೊಸ ಪೆಟ್ಟಿಗೆಗೆ ಹಾಕಲು ಇಟ್ಟುಕೊಂಡ ಮುಖಂಡನಿಗೆ ದೇವರು ಯಾಕೆ ಮನಸು ಕೊಡುವುದಿಲ್ಲ. ಸದರಿ ಹಣವನ್ನು ಬಡ್ಡಿಗೆಂದು ಕೊಟ್ಟಿದ್ದರೆ ತಾನು ಬಡ್ಡಿಯನ್ನುಪಯೋಗಿಸಿಕೊಂಡು 100 ರೂ. ಯನ್ನಾದರೂ ಭಂಡಾರಕ್ಕೆ ಹಾಕಿದರೆ ನಷ್ಟವೇನಾದೀತು. ಇದರಂತೆ ಕರಡ ಗ್ರಾಮದವರಲ್ಲಿ ಅನೇಕ ಹಣಗಳಿಂದ ದೇವರ ಹಣ ಬಡ್ಡಿಗಾಗಿ ತೆಗೆದುಕೊಂಡದನ್ನು ಮುಖಂಡರು ಕೇಳದೆ ವಸೂಲಾತಿಗೆ ತೊಂದರೆ ತೆಗೆದದೆ ಯಾಕೆ ಬಿಟ್ಟಿದ್ದಾರೆಂದು ಗೊತ್ತಾಗುವುದಿಲ್ಲ. ತಗಾದಿಸಿ ವಸೂಲು ಮಾಡಿದರೆ ಬೇರೆಯವರಿಗೆ ಹಣ ಬೇಕಾದಲ್ಲು ಸಹಾಯಕ್ಕೆ ಜನ ಸಿಕ್ಕುವುದಿಲ್ಲವೆಂಬ ಭಯವಾಗುತ್ತೋ? ಹಾಗೆ ತೆಗೆದುಕೊಂಡವರು ತಕ್ಕರಲ್ಲವಾದ ಕಾರಣ ಇನ್ನಾದರೂ ವಸೂಲು ಮಾಡಿ ಹೊಸ ಪೆಟ್ಟಿಗೆಗೆ ಹಾಕಬಾರದೇ? ಇಂದು ನಾಳೆಯೆಂದರೆ ಕೊಟ್ಟವರು ತೆಗೆದುಕೊಂಡವರು ಈ ಲೋಕವನ್ನು ಬಿಟ್ಟು ಬಿಟ್ಟರೆ ಸಲ್ಕೆ ಆಗಿದೆಯೆಂದೂ, ರೋಜಿನಾಮೆಯನ್ನು ಗೆಜ್ಜಲು ತಿಂದುಬಿಟ್ಟಿದೆಯೆಂದೂ ಬರಬಹುದೋ? ಇದೇ ಸಮ್ಮಂಧ ಕಳೆದ ವರ್ಷ ಕಡಿಯತ್ತು ನಾಡಿನ 12 ಗ್ರಾಮಸ್ಥರು ಸೇರಿ ಭಂಡಾರದ ವಿಲೆವಾರಿ ಮಾಡಲು 8 ಜನ ಕಮಿಟಿ ಮೆಂಬರರಿಂದ ತೀರಿಸಲು ಇಟ್ಟಂತ ಬೇಲಿಯೂ ಮಂದಿನಲ್ಲು ಮಾಡಿದ ತೀರ್ಮಾನವನ್ನು ಮರೆತು ನಾಡಿನ ಕೆಲವು ಗ್ರಾಮದ ಅವರ ಹೇಳಿಕೆಗೆ ಒಪ್ಪುವಂತವರಿಗೆ ಮಾತ್ರ ನೋಟೀಸ್ ಮಾಡಲು ತಾ. 16-12-38ರ 'ಕೊಡಗು' ಪತ್ರಿಕೆಯಲ್ಲು ಪ್ರಕಟಿಸಿದಂತೆ ಬಡತನ ಸಹಜವಾದರ ವಿದ್ಯಾಹೀನತೆಯೊದರೂ ಊರಲ್ಲಿ ಒಬ್ಬೊಬ್ಬರಾದರೂ ವಿದ್ಯಾವಂತರು ಇರಲಿಲ್ಲವೋ? ಹಾಗೆ ವಿದ್ಯಾಹೀನತೆಯೊದರೂ, ಊರಲ್ಲಿ ಒಬ್ಬೊಬ್ಬರಾದರೂ ವಿದ್ಯಾವಂತರು ಇರಲಿಲ್ಲವೋ, ಹಾಗೆ ವಿದ್ಯಾಹೀನರಾದ ಪಕ್ಷ ದೇವರು ಭಂಡಾರದ ಹಣ ಲೆಕ್ಕಪಕ್ಕಗಳನ್ನು ಆಗಾಗ್ಯೆ ಬರೆಸಲು ಸಿಬ್ಬಂದಿಯರನ್ನು ಇಟ್ಟಿದ್ದಾರೋ, ಆಯಾ ಮುಖಂಡರೇ, ಬರೇ ಆರು ಗ್ರಾಮದಲ್ಲು ನಿಮ್ಮ ಹೇಳಿಕೆಗೆ ಒಪ್ಪುವಂತವರಿಗೆ ನೋಟಿಸ್ ಕೊಟ್ಟು ಮೀಟಿಂಗ್ ಮಾಡುವದರ ಬದಲು ನಾಡಿನ ಹನ್ನೆರಡು ಗ್ರಾಮದವರಿಗೂ ತಕ್ಕ ಮುಖ್ಯಸ್ಥರಿಗೂ ಮೊದಲಿನ ತೀರ್ಮಾನದಂತೆ ನೋಟೀಸ್ ಕೊಟ್ಟು ತಿಳಿಸಿದ್ದರೆ ಹಿಂದಿನ ಲೆಕ್ಕಾಚಾರವನ್ನೆಲ್ಲಾ ನ್ಯಾಯವಾದ ಗವರ್ನಮೆಂಟಿನ ಸರ್ಟಿಫೈಡ್ ಆಡಿಟರುಗಳಿಂದ ಆಡಿಟ್ ಮಾಡಿಸಿ ಬೇರೆ ನಾಡು ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ನಾಡವರು ತೀರ್ಮಾನಿಸಿದ ಹಣವನ್ನು ಕೊಟ್ಟು ಉಳಿತ ಹಣ ಭಂಡಾರದ ಪೆಟ್ಟಿಗೆಗೆ ಬರುತಿತ್ತು. ಹೊಸ ಪೆಟ್ಟಿಗೆಯು ಕೀರ್ತಿಯು ಹೆಚ್ಚಾಗುತ್ತಿತ್ತು. ಹೀಗಲ್ಲದ್ದರಿಂದಲೇ ಪೂಜಾರಿಲ ಸನ್ಯಾಸಿಯು ಆಳಿಕೆಗೆ ಮನನೊಂದು ಕರಡ ಗ್ರಾಮ ಸಮ್ಮಂಧಪಟ್ಟಂಥಾ ಲೇಖನವನ್ನು 'ಕೊಡಗು' ಪತ್ರಿಕೆಯಲ್ಲು ಗ್ರಾಮದಳತವನ್ನು ವಿವರಿಸಿದ್ದ, ಭಲಾ! ಕರಡ ಗ್ರಾಮದ ಮುಖಂಡರೇ ಚೆನ್ನಾಗಿ ಸಾಧ್ಯವಾಯಿತು.

ಕಡೇ ಸಾರಿ. ಕರಡ ಗ್ರಾಮದ ಮುಂದಾಳುಗಳೇ, ಮಿಂಚಿ ಹೋದ ಕಾರ್ಯಕ್ಕೆ ಮಿಡಿಕಿ ಫಲವಿಲ್ಲ. ಇನ್ನಾದರೂ ಕಡಿಯತ್ತು ನಾಡಿನ ಹನ್ನೆರಡು ಗ್ರಾಮಸ್ಥರಿಗೂ ತಕ್ಕ ಮುಖ್ಯಸ್ಥರಿಗೂ ನೋಟೀಸು ಕೊಟ್ಟು ನೇರಿಸಿಕೊಂಡು ಹಿಂದಿನ ಲೆಕ್ಕಪಕ್ಕಗಳನ್ನು ನ್ಯಾಯವಾಗಿ ಆಡಿಟ್ ಮಾಡಿಸಿ ಮಲೆ ದೇವರ ಭಂಡಾರವು ತುಂಬಿ ಮೆರೆಯುವಂತೆ ಮಾಡಲು ಶ್ರೀ ಮಲೆ ದೇವರು ಸುಬುದ್ಧಿಯನ್ನು ಕೊಡಲೆಂದು ನಾಡವರಿಗಾಗಿ ನಾನು ವಂದಿಸುತ್ತೇನೆ.

'ನಾಡುತಕ್ಕ'

ಸಿಫಾರಸ್ಸಿನ ಪತ್ರಗಳೆಂಬ ಪಾಶದಿಂದ ಬಿಗಿಯಲ್ಪಟ್ಟ ಅಧ್ಯಾಪಕರಲ್ಲಿ ಒಂದು ವಿನಂತಿ.

ಎಂದಿನಂತೆ ಸ್ಕೂಲ್ ಫೈನಲ್ ಸೆಲೆಕ್ಷನ್ ಪರೀಕ್ಷೆಯು ನಡೆಯಿತು. ಅದರ ಫಲಿತಾಂಶವು ತಕ್ಕ ವೇಳೆಯಲ್ಲಿಯೇ ಗೊತ್ತಾಯಿತು. ಆದರೆ ಅಧ್ಯಾಪಕರು ವಿದ್ಯಾರ್ಥಿಗಳ ಕಷ್ಟ ಸುಖಗಳನ್ನರಿತು, ತಮ್ಮ ಘನತೆಯನ್ನು ನೆನೆದು ಈ ಫಲಿತಾಂಶವನ್ನು ಕೊಟ್ಟಿರುವರೆಂದು ನೆನೆಸುವುದಿಲ್ಲ. ಬರುವ ವರ್ಷ ಫೀಸು ಹೆಚ್ಚಾಗುವದರಿಂದಲೂ, ಈ ವರ್ಷ ಬೆಳೆ ಚೆನ್ನಾಗಿಲ್ಲದ್ದರಿಂದಲೂ ತಾಯಿ ತಂದೆಗಳಿಗೆ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಕಷ್ಟವಾದ ಕಾರಣ ಎಲ್ಲಾ ವಿದ್ಯಾರ್ಥಿಗಳಿಗೆ ಸಲೆಕ್ಷನ್ ಕೊಡಬಹುದಿತ್ತು. ಹಾಗೆ ಮಾಡದದ್ದು ಶೋಚನೀಯ ವಿಚಾರ. ಒಂದೇ ತರದ ರೂಲ್ಸನ್ನು ಅನುಸರಿಸಿ ಯಾರ್‍ಯಾರು ಯೋಗ್ಯರೋ ಅವರಿಗೆಲ್ಲಾ ಸಲೆಕ್ಷನ್ ಕೊಡುವದಾದರೂ ಒಂದು ಮಾರ್ಗ. ಇದು ಬಿಟ್ಟು ಸಿಫಾರಸ್ಸು ಪತ್ರಗಳ ಮೇಲೆ ತಮ್ಮ ನಿರ್ಣಯವನ್ನು ಮಾಡಿರುವರೆಂದು ವಾರ್ತೆ. ಇದು ನಿಜವಾದ್ದಲ್ಲಿ ಅದು ತುಂಬಾ ಹೃದಯದ್ರಾವಕವಾದ ಸಂಗತಿ. ಶ್ರಮ ವಹಿಸಿ ವ್ಯಾಸಂಗ ಮಾಡುವ ಮಕ್ಕಳು ಬರೇ ಒಂದೆರಡು ಮಾರ್ಕುಗಳಿಂದ ಸೆಲೆಕ್ಷನಿಗೆ ಅಯೋಗ್ಯರಾದ ಸಂದರ್ಭದಲ್ಲಿ ಅದನ್ನು ಮನ್ನಿಸಿ ಅವರಿಗೆ ಎಚ್ಚರಿಕೆಯಿತ್ತು ಸೆಲೆಕ್ಷನ್ ಕೊಡಬಹುದಿತ್ತು.

ಬಡ ವಿದ್ಯಾರ್ಥಿಗಳ ಕಷ್ಟಪರಂಪರೆಗಳ ಪರಿವೆಯು ಬೋಧಕರಿಗಿದ್ದೂ ಇಂಥಾ ಕಾಠಿಣ್ಯತೆಯನ್ನು ತಾಳಿದ್ದು ಬಡ ಹುಡುಗರ ದುರವಸ್ಥೆಯಲ್ಲದೆ ಮತ್ತೇನು? ಶಾಲಾ ಫೀಜು ಹೆಚ್ಚಾದರೆ ಎಷ್ಟೋ ಬಾಲಕರು ತಮ್ಮ ವ್ಯಾಸಂಗವನ್ನು ತೊರೆಯಬೇಕಾದ ಸಂಭವವಿಲ್ಲವೇ? ಇಂಥಾ ಸಂಧಿಗ್ಧಾವಸ್ಥೆಯಲ್ಲಿ ಬಡ ಹುಡುಗರ ಹಿತಚಿಂತನೆ ಮಾಡದ ಅಧ್ಯಾಪಕರ ಚಿತ್ತವೃತ್ತಿಗೆ ಎಷ್ಟು ವ್ಯಸನಿಸಿದರೂ ಅಲ್ಪವೇ.

ಸಿಫಾರಸಿನ ಪತ್ರಗಳಿಗೆ ವಿದ್ಯಾರ್ಥಿಗಳ ತಂದೆಗಳಂತಿರುವ ಉಪಾಧ್ಯಾಯರುಗಳು ಕಿವಿಗೊಡುತ್ತಿದ್ದಾರೆಂಬವನ್ನು ತಿಳಿಯುವಾಗ ನಾಚಿಕೆ ಪಡಬೇಕಾದ ಸಂದರ್ಭ ಒದಗಿದೆ. ಹೀಗೆ ಧನಿಗಳ ಸಿಫಾರಸಿನ ಮಾತಿಗೆ ಹೆದರಿ ನಡೆಯುವ ಅಧ್ಯಾಪಕರಿಂದ ವಿದ್ಯಾ ವ್ಯಾಸಂಗ ಪಡೆದ ವಿದ್ಯಾರ್ಥಿಗಳು ಎಷ್ಟು ತಾನೇ ತಮ್ಮ ದೇಶ ಸೇವೆ ಮಾಡಿ ಕೀರ್ತಿ ತಂದಾರೆಂದು ವಾಚಕರೇ ತಿಳಿದುಕೊಳ್ಳಬಹುದು. ಇನ್ನಾದರೂ ಸಿಫಾರಸ್ಸಿನ ಪತ್ರವೆಂಬ ಪಾಶದ ಬಿಗಿಯನ್ನು ತಮಗೆ ಅರಿತ ಮಟ್ಟಿಗಾದರೂ ಬಿಚ್ಚಿಕೊಳ್ಳಬಹುದೆಂದು ನಂಬುತ್ತೇನೆ

'ನೊಂದ ಬಾಲಕ.'

ಕೊಡಗಿನ ಖಾದೀ ಬಜಾರ್ ಪ್ರವಾಸ ಕ್ರಮ

ಬೆಂಗಳೂರಿನ ಕರ್ನಾಟಕ ಚರಕಾ ಸಂಘ, ಖಾದಿ ವಸ್ತ್ರಾಲಯದವರು ಕೊಡಗಿನಲ್ಲಿ ಖಾದಿ ಮಾರಾಟ ಮಾಡಲು ಈ ಕೆಳಗಿನಂತೆ ಕಾರ್ಯಕ್ರಮವನ್ನು ರಚಿಸಿರುವರು ಅಲ್ಲಲ್ಲಿಯ ಕಾಂಗ್ರೆಸ್ ಓಫೀಸಿಗಳು ಅವರಿಗೆ ತಕ್ಕ ಸಹಾಯ ನೀಡುವರಾಗಿ ನಂಬಲಾಗಿದೆ

26-1-39 ಗುರುವಾರ ಬೆಂಗಳೂರಿಂದ ಹೊರಟು ಪಿರಿಯಾಪಟ್ಣಕ್ಕೆ.
27-1-39, 28-1-39, 29-1-39 } ಪಿರಿಯಾಪಟ್ಣದಲ್ಲಿ ಖಾದೀ ಮಾರಾಟ.
30-1-39 ಪಿರಿಯಾಪಟ್ಣದಿಂದ ಹೊರಟು ಫ್ರೇಜರ್‌ಪೇಟೆ.
31-1-39 ಮಂಗಳವಾರ-ಫ್ರೇಜರ್‌ಪೇಟೆ ಸಂತೆಯಲ್ಲಿ ಖಾದೀ ಮಾರಾಟ
1-2-39 ಬುಧವಾರ-ಫ್ರೇಜರ್‌ಪೇಟೆಯಿಂದ ಮಡಿಕೇರಿಗೆ.
2-2-39, 3-2-39 } ಮಡಿಕೇರಿ ಮೊಕಾಂ. ಶುಕ್ರವಾರ ಮಡಿಕೇರಿ ಸಂತೆಯಲ್ಲಿ ಖಾದೀ ಮಾರಾಟ.
4-2-39 ಶನಿವಾರ-ಸುಂಟಿಕೊಪ್ಪಕ್ಕೆ.
5-2-39 ಭಾನುವಾರ-ಸುಂಟಿಕೊಪ್ಪ ಸಂತೆಯಲ್ಲಿ ಖಾದೀ ಮಾರಾಟ.
6-2-39 ಸೋಮವಾರ-ವಾಪಾಸು ಮಡಿಕೇರಿಗೆ.
7-2-39 ಮಡಿಕೇರಿ ಮೊಕಾಂ.
8-2-39, 9-2-39 } ಮೂರ್ನಾಡು. ಗುರುವಾರ-ಸಂತೆಯಲ್ಲಿ ಖಾದೀ ಮಾರಾಟ.
10-2-39 ಶುಕ್ರವಾರ-ಶನಿವಾರಸಂತೆಗೆ.
11-2-39 ಶನಿವಾರ-ಸಂತೆಯಲ್ಲಿ ಖಾದೀ ಮಾರಾಟ.
12-2-39 ಭಾನುವಾರ-ಸೋಮವಾರಪೇಟೆಗೆ.
13-2-39 ಸೋಮವಾರ-ಸಂತೆಯಲ್ಲಿ ಖಾದೀ ಮಾರಾಟ.
14-2-39, 15-2-39, 16-2-39, 17-2-39 } ವೀರರಾಜೇಂದ್ರಪೇಟೆ.
18-2-39, 19-2-39 } ಗೋಣಿಕೊಪ್ಪಲು. ಭಾನುವಾರ-ಸಂತೆಯಲ್ಲಿ ಖಾದೀ ಮಾರಾಟ.
20-2-39, 21-2-39 } ಸೋಮವಾರ-ಹುದಿಕೇರಿ ಸಂತೆ. ಮಂಗಳವಾರ-ಮೊಕಾಂ.
22-2-39, 23-2-39, 24-2-39 } ವೀರರಾಜೇಂದ್ರಪೇಟೆ.
25-2-39 ಶನಿವಾರ-ಗೋಣಿಕೊಪ್ಪಲು.
26-2-39 ಭಾನುವಾರ-ಗೋಣಿಕೊಪ್ಪಲು ಸಂತೆಯಲ್ಲಿ ಖಾದೀ ಮಾರಾಟ.
27-2-39 ರಿಂದ 3-3-39 } ಮಡಿಕೇರಿ ಮೊಕಾಂ.

ಸಂಧಿಪ್ರಿಯ ಚೇಂಬರ್‌ಲೇನ್.

ಇನ್ನಾವ ಮಿತ್ರ ರಾಷ್ಟ್ರಕ್ಕೆ ದಗೆಯೋ?

ಕಳೆದ ಯೂರೋಪಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಹಾ ಪ್ರಧಾನ ಚೇಂಬರ್ಲೇನರು ಝೆಕೊಸ್ಲೋವಾಕಿಯೊವನ್ನು ಸರ್ವಾಧಿಕಾರಿಗಳ ಇಚ್ಛೆಯಂತೆ ಬಲಿಕೊಟ್ಟು ತನ್ನ ಪೌರೋಹಿತ್ಯವನ್ನು ಸಾರ್ಥಕಪಡಿಸಿ ಯೂರೋಪಿನ ಶಾಂತಿ ಸ್ಥಾಪಕರೆಂಬ ಬಿರುದನ್ನು ಧರಿಸಿಕೊಂಡರು. ಅಂತೆಯೇ ಇಂದೂ ಸಂಧಿಗ್ಧಾವಸ್ಥೆಯು ಬಂದಿದೆ. ಫ್ರಾನ್ಸ್ ಇಟಲಿಗಳೊಳಗೆ ಮನಃಕಷಾಯವಿದೆ. ಆಗಲೇ ಚೇಂಬರ್ಲೇನರು ಪೌರೋಹಿತ್ಯವನ್ನು ವಹಿಸಿ ರೋಮಿಗೆ ಪ್ರಯಾಣ ಬೆಳೆಸಿದರು. ಹಿಟ್ಲರನನ್ನು ಮ್ಯೂನಿಕ್ ಒಪ್ಪಂದದಲ್ಲಿ ಒಲಿಸಿದಂತೆ ಇನ್ನಾವ ಮಿತ್ರರಾಷ್ಟ್ರವನ್ನು ಬಲಿಕೊಟ್ಟು ಮುಸಲೋನಿಯನ್ನು ಸಂತಯಿಸುವರೆಂಬುದು ಗಹನ ವಿಚಾರ.

ಸರ್ವಾಧಿಕಾರಿಗಳ ಕಪಟನಾಟಕ.

ಮ್ಯೂನಿಕಿನ ಒಪ್ಪಂದವಾದಾಗ ಇಟಲಿಗೂ-ಫ್ರಾನ್ಸಿಗೂ ವೈಮನಸ್ಯವಿರಲಿಲ್ಲ. ಇತ್ತಲಾಗಿ ಮುಸಲೋನಿಯು ಟ್ಯೂನಿಸಿಯಾವನ್ನು ಕೇಳಿದ್ದರಿಂದ ಇವರೊಳಗೆ ಭಿನ್ನಾಭಿಪ್ರಾಯ ತಲೆದೋರಿದೆ. ಟ್ಯೂನಿಸಿಯಾವನ್ನು ಇಟಲಿಯವರೂ ಕೇಳಿದ್ದೇಕೆ? ಅದಕ್ಕೆ ಕಾರಣ ಇಲ್ಲದೆ ಇಲ್ಲ. ಮ್ಯೂನಿಚಿನಲ್ಲಾದ ಒಪ್ಪಂದದಂತೆ ಜರ್ಮನಿಯು ಹಿಟ್ಲರನು ಒಂದೇ ಬಾಯಿ ಮಾತಿನ ರಭಸದಿಂದಲೇ ಅಲಭ್ಯ ಲಾಭಗಳನ್ನು ಹೊಂದಿಕೊಂಡನು. ಆದರೆ ಇಟಲಿಯು ಈ ಮೊದಲು ಅಬಿಸೀನಿಯಾವನ್ನು ತನ್ನ ಹತೋಟಿಯಲ್ಲಿ ತರಲು ಮಾಡಿದ ಶತ ಪ್ರಯತ್ನವೂ, ಪಟ್ಟ ಅಸಹ್ಯ ಕಷ್ಟವೂ ಅಪಾರ್ಥವಾಯಿದೆ. ಇಂದು ಸ್ಪೈನಿನಲ್ಲಿಯೂ ಇಟಲಿಯ ಸೈನಿಕರು ಜನರಲ್ ಫ್ರಾಂಕೋನಿಗೆ ಸಹಾಯ ಮಾಡಲು ಹೋಗಿ ಕಷ್ಟಪಡುತ್ತಿರುವರು. ಹಿಟ್ಲರನಿಗೆ ಬರೇ ಬಾಯಿ ಬೆದರಿಕೆಯಿಂದಾದ ಪ್ರಯೋಜನವು ಮುಸಲೋನಿಗೆ ಬದ್ಧ ಪ್ರಯೋಗದಿಂದಲೂ ಸಿಕ್ಕಲಿಲ್ಲ. ಆದ್ದರಿಂದ ಜರ್ಮನಿಯ ಅಂದರೆ ಹಿಟ್ಲರನ ಮೇಲೆ ಮುಸಲೋನಿಗೆ ಅಸೂಯೆ ಹುಟ್ಟಿರುವುದು.

ಮ್ಯೂನಿಚ್ ಒಪ್ಪಂದವಾದ ಮೇಲೆ ಮುಸಲೋನಿಯು 'ನಾವೇಕೆ ಅದನ್ನು, ಇದನ್ನು ಬಿಟ್ಟು ಕೊಡಿ ಎಂದು ಕೇಳಬೇಕು, ಕತ್ತಿ ಕಟ್ಟಿ ಹೋರಾಡಿ ನಮಗೆ ಬೇಕಾದದ್ದನ್ನು ತೆಗೆದುಕೊಳ್ಳುವ' ಎಂದು ಹಿಟ್ಲರನಿಗೆ ಹೇಳಿದನಂತೆ. ಹಿಟ್ಲರನು ಇದಕೊಪ್ಪಲಿಲ್ಲ. ತಿಂದುದನ್ನು ಜೀರ್ಣಿಸಿಕೊಳ್ಳುವವರೆಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡನು. ಆದರೂ ಜರ್ಮನಿಯ ಸ್ನೇಹದಲ್ಲಿ ಇಟಲಿಗೆ ಪೂರ್ಣ ಭರವಸೆಯಿಲ್ಲ. ಆದುದರಿಂದಲೇ ಟ್ಯೂನಿಸಿಯಾವನ್ನು ಬಿಟ್ಟು ಕೊಡಬೇಕೆಂಬ ಇಟಲಿಯ ಕೇಳಿಕೆಯನ್ನು ಫ್ರಾನ್ಸು ಅಸಾಧ್ಯವೆಂದು ಗಾಳಿಯಲ್ಲಿ ಹಾರಿಸಿ ಬಿಡುವಾಗ ಇಟಲಿಯು ಮೌನವ್ರತವನ್ನಾಚರಿಸಿ ಅವಮಾನವನ್ನು ಕಾಯ್ದುಕೊಂಡಿತು. ಇಷ್ಟು ಭಿನ್ನಾಭಿಪ್ರಾಯ ಸರ್ವಾಧಿಕಾರಿಗಳೊಳಗಿದ್ದರೂ ಅವರು ತಮ್ಮೊಳಗೆ ಒಂದು ಕಾರ್ಯಕ್ರಮ ಕೈಕೊಂಡಿರುವರಂತೆ. ಅದರಂತೆ-ಸ್ಪೈನಿನಲ್ಲಿ ದಂಗೆಕಾರರಿಗೆ ಜಯವಾಗಬೇಕು. ಭೂಮಧ್ಯ ಸಮುದ್ರದಲ್ಲಿ ಇಟಲಿಯ ಪ್ರತಿಷ್ಠೆ ಹೆಚ್ಚಿ, ಸುಯೇಜ್ ಕಾಲುವೆಯ ಹಕ್ಕು ದೊರೆಯಬೇಕು. ಇಟಲಿಯವರೇ ಬಹು ಸಂಖ್ಯಾತರಾಗಿರುವ ಟ್ಯೂನಿಸಿಯಾ ಮೊದಲಾದ ಪ್ರದೇಶ ಇಟಲಿಗೆ ಬರಬೇಕು. ಇನ್ನು ಜರ್ಮನಿಗೆ ಹಿಂದಿನ ವಸಾಹತುಗಳ ಹಕ್ಕು ಸ್ವಾಧೀನತೆಗೆ ಬರಬೇಕು. ಹೀಗೆ ಸರ್ವಾಧಿಕಾರಿಗಳು ಈ ಕಾಂಕ್ಷೆಗಳು ನೆರವೇರುವ ತನಕ ಒಂದನ್ನೊಂದು ಪ್ರೀತಿಯಿಂದ ಕಂಡು ಸಹಾಯ ಮಾಡಬೇಕೆಂದೇ ಅವರ ಕಾರ್ಯಕ್ರಮವಾಗಿದೆ.

ಇನ್ನೊಮ್ಮೆ ಸಂಧಿ.

ಪರಿಸ್ಥಿತಿ ಹೀಗಿರುವಾಗ ಬ್ರಿಟಿಷ್ ಪ್ರಧಾನ ಚೇಂಬರ್ಲೇನರು ರೋಮಿಗೆ ಮುಸಲೋನಿಗಳೊಡನೆ ಸಂಧಿ ಮಾಡಲು ಹಾರಿದ್ದಾರೆ. ರೋಮಿಗೆ ಹೋಗುವ ಮೊದಲು ಮಿತ್ರ ರಾಷ್ಟ್ರವಾದ ಫ್ರಾನ್ಸಿನ ಪ್ರಧಾನರನ್ನು ಪ್ಯಾರಿಸಿನಲ್ಲಿ ಕಂಡು ಮಾತಾಡಿರುವರು. ಚೇಂಬರ್ಲೇನರು ಈಗ ಯಾವ ವಿಚಾರ ಮಾತಾಡಬೇಕಾದರೂ ಮೊದಲು ಝೆಕೊಸ್ಲೋವಾಕಿಯಕ್ಕೆ ವಿಶ್ವಾಸಘಾತ ಮಾಡಿದಂತೆ ಮಾಡಲಾಗುವುದಿಲ್ಲ. ಮಿತ್ರ ರಾಷ್ಟ್ರವಾದ ಫ್ರಾನ್ಸಿನ ಹಿತವನ್ನು ಮರೆಯಲಾಗುವದಿಲ್ಲ. ಚೇಂಬರ್ಲೇನರ ಆಟವು ಗಹನವಾದ; ಸ್ಥಿತಿಯು ವಿಷಮವಾದುದು. ಯಾವ ಮಿತ್ರ ರಾಷ್ಟ್ರಕ್ಕೆ ದಗ ಕೊಡಬಹುದೋ ನೋಡಬೇಕಾದ ಸಂಗತಿ. ಅಂತೂ ಚೇಂಬರ್ಲೇನರ ರಾಜಕೀಯ ನೀತಿಯನ್ನು ಇಲ್ಲಿ ನೋಡಬೇಕಾಗಿದೆ.

ಏನಾಗಬಹುದು?

ಏನಾಗುವದೆಂದು ನಿರ್ಧಾರವಾಗಿ ಹೇಳಲು ಕಷ್ಟವಾಗಿದೆ. ಆದರೆ ಚೇಂಬರ್ಲೇನರ ಮನೋವೃತ್ತಿಯನ್ನು ಪರೀಕ್ಷಿಸಿದರೆ ಅವರು ಏನನ್ನೂ ಮಾಡುವಂತಿಲ್ಲವೆಂದು ಹೇಳಬಹುದು. ಸ್ಪೈನನ್ನು ದಂಗೆಕೋರರ ವಶಕೊಪ್ಪಿಸಲು ಯಾರೂ ವಿರೋಧ ಮಾಡಲಿಕ್ಕಿಲ್ಲ. ಇರುವ ಪ್ರಾಮುಖ್ಯ ಪ್ರಶ್ನೆ ಎಂದರೆ ಟ್ಯೂನಿಸಿಯಾವನ್ನಪೇಕ್ಷಿಸುವ ಮುಸಲೋನಿಯ ಕೇಳಿಕೆ. ಈ ಕೇಳಿಕೆಯೇ ಮುಂದಿನ ಯುದ್ಧದ ಮೂಲವಾಗಬಹುದು. ಸ್ವಾಭಿಮಾನಿ ರಾಷ್ಟ್ರವಾದ ಫ್ರಾನ್ಸು ತನ್ನ ಒಂದಂಗುಲ ಜಾಗವನ್ನು ಪರರಿಗೊಪ್ಪಿಸಲು ಒಪ್ಪದು. ಅಂತೂ ಚೇಂಬರ್ಲೇನರು (ಕಲಿಯುಗದ ಅಜಾತಶತ್ರುಗಳು) ಅತ್ತ ಪಕ್ಷಿಯೂ ಅಲ್ಲ; ಇತ್ತ ಮೃಗವೂ ಅಲ್ಲ ಎಂಬಂತೆ ನುಣ್ಣಗಿನ ಮಾತುಗಳನ್ನು ಹೇಳಿ ಸ್ವದೇಶಕ್ಕೆ ಮರಳಬಹುದು. ಅಂತೂ ಎಲ್ಲಾ 'ಬಹುದು' ಎಂಬ ಸಂದೇಹದಿಂದಲೇ ಮಗ್ನವಾಗಿರುವ ಪ್ರಯುಕ್ತ ಕಾಲಚಕ್ರದ ಉರುಳಾಟವನ್ನು ನಿರೀಕ್ಷಿಸುತ್ತಿರುವ. ಎಲ್ಲಾ ತನ್ನಿಂದ ತಾನೇ ಹೊರಬೀಳುವದು.

ಸೇಟ್ ಜಮ್ನಾಲಾಲ್ ಬಜಾಜರ ಮೇಲೆ ನಿಷೇಧ.

ಪರದೇಶಿ ಮಂತ್ರಿಗಳ ಕೈಯಲ್ಲಿ ರಾಜರು ಬರೇ ಬೊಂಬೆ.

(ಲೇ.-ಮಹಾತ್ಮ ಗಾಂಧಿಯವರು.)

ಜಯಪುರ ಸಂಸ್ಥಾನದ ಸರ್ಕಾರವು ಜಮ್ನಾಲಾಲ್ ಬಜಾಜರವರು ಆ ಪ್ರಾಂತದೊಳಗೆ ಹೋಗಕೂಡದೆಂದು ಕಳುಹಿಸಿದ ಅಪ್ಪಣೆ. ಹೀಗಿದೆ:—

'ವಾರ್ಧಾದ ಜಮ್ನಾಲಾಲ್ ಬಜಾಜರಿಗೆ,

ಜಯಪುರ ಸಂಸ್ಥಾನಕ್ಕೊಡನೆ ನಿಮ್ಮ ಮಿಳಿತ ಮತ್ತು ಕಾರ್ಯ ಕಲಾಪಗಳು ಸಂಸ್ಥಾನದ ಶಾಂತತಾ ಭಂಗಕ್ಕೆ ಕಾರಣವಾಗಬಹುದೆಂದು ಸರ್ಕಾರಕ್ಕೆ ಅನ್ನಿಸಿದ್ದರಿಂದ ಜನತೆಯ ಹಿತದೃಷ್ಟಿಯಿಂದಲೂ, ಮತ್ತು ಶಾಂತಿಸ್ಥಾಪನೆಗಾಗಿಯೂ ಈ ಪ್ರಾಂತ್ಯದೊಳಗಿನ ನಿಮ್ಮ ಬರುವಿಕೆಯನ್ನು ನಿಷೇಧಿಸಿದೆ. ಆದ್ದರಿಂದ ಮುಂದಿನ ಅಪ್ಪಣೆಯ ವರೆಗೆ ಜಯಪುರ ಸಂಸ್ಥಾನಕ್ಕೆ ಪ್ರವೇಶಿಸಕೂಡದು.

(ಸಂಸ್ಥಾನದ ಕೌನ್ಸಿಲಿನ ಅಪ್ಪಣೆ ಮೇರೆ.)
(ಸಹಿ) ಯಂ. ಅಟಾಫ್ ಎ. ಖೇರಿ.'

ಜಮ್ನಾಲಾಲರ ಇರುವಿಕೆಯಿಂದ ಎಲ್ಲಿಯೂ ಎಂಥಾ ಅಪಾಯವೂ ಆಗಲಿಕ್ಕಿಲ್ಲ. ಅವರು ಶಾಂತಿ ಸ್ಥಾಪಕರೆಂಬುದು ಜನ ಜನಿತವಾಗಿದೆ. ಸರ್ಕಾರದವರು ಇವರ ಅಮೂಲ್ಯ ಸಹಾಯಕ್ಕೆ 'ರಾಯಬಹದ್ದೂರ್' ಎಂಬ ಬಿರುದು ಕೊಟ್ಟಿದ್ದರು. (ಜಾಯಿದೆಭಂಗ ಚಳವಳಿಯಲ್ಲಿ ಅದನ್ನು ವಾಪಸು ಮಾಡಿದರು). ಅಲ್ಲದೆ ಅವರು ವಾಣಿಜ್ಯ ಪ್ರಪಂಚದಲ್ಲಿ ಅಗ್ರಗಣ್ಯ ವರ್ತಕರಿರುವರು. ಇದರೊಂದಿಗೆ ಅವರು ಒಬ್ಬ ಬ್ಯಾಂಕರರೂ ಹೌದು. ಈ ವರೆಗೆ ಅವರೊಬ್ಬ ಚಳವಳಿಗಾರರೆಂದೆನಿಸಿಕೊಂಡಿರುವದಿಲ್ಲ. ಅವರು ಸಾಮಾಜಿಕ ಸುಧಾರಣೆ ಮೊದಲಾದ ವಿಧಾಯಕ ಕಾರ್ಯಕ್ರಮದಲ್ಲಿ ಪ್ರಮುಖ ಭಾಗವಹಿಸುತ್ತಿದ್ದವರು. ಅವರು ಜೈಲುವಾಸಕ್ಕಾಗಲೀ ಅಥವಾ ಇನ್ನಾವ ಸರ್ಕಾರದ ಕಠಿಣ ಶಿಕ್ಷೆಗಳಿಗಾಗಲೀ ಬೆದರುವವರಲ್ಲ ನಿಜ. ಇದಕ್ಕಾಗಿಯೇ ತಮ್ಮ ಸರ್ವಸ್ವವನ್ನು ಅರ್ಪಿಸಲೂ ಸಿದ್ಧರಿರುವರು. ಇವರ ಮೇಲೆ ಜಯಪುರ ಸರ್ಕಾರವು ಹಾಕಿರುವ ನಿಷೇಧಾಜ್ಞೆಯು ತಪ್ಪು ಅಲ್ಲದೆ ಅವರಿಗೆ ಇದು ಎಂದೂ ಅನ್ವಯಿಸದು. ಈ ಆಜ್ಞೆಯು ಹಳೆ ಸಂಪ್ರದಾಯದ ಶೈಲಿ ಎಂದು ಹೇಳಿದರೂ ಸಹ ಕಾನೂನಿನಂತೆ ಈ ಆಜ್ಞೆಯನ್ನು ಅವರಿಗೆ ಕೊಡಲು ಸಾಧ್ಯವಿಲ್ಲ. ಜಮ್ನಾಲಾಲರಂತವರನ್ನು ಜಯಪುರ ಅಥವಾ ಇನ್ನಾವ ಪ್ರಾಂತ್ಯದಿಂದ ನಿಷೇಧಿಸುವದೆಂದರೆ ಅದು ಅಪ್ರಸ್ತುತ ಹಾಗೂ ಅಸಮಂಜಸವಾದ ಕಾರ್ಯ. ಅದೂ ಅಲ್ಲದೆ ಅದರಲ್ಲಿ ಜಮ್ನಾಲಾಲರು ವಾರ್ಧಾದವರೆಂದು ಸೂಚಿಸಲಾಗಿದೆ. ಇದು ಪೂರಾ ಸುಳ್ಳು. ಅವರು ಜಯಪುರದವರೇ ಆಗಿರುವರು.

ಇಂಥಾ ಒಂದು ಅಸಮಂಜಸವಾದ ನೋಟೀಸಿನ ಪ್ರಯುಕ್ತ ನನ್ನ ಹಿತವಾದವನ್ನು ಜಮ್ನಾಲಾಲರು ಕೇಳಿದರು. ನಾನು ಈ ಅಭಿಪ್ರಾಯ ಕೊಟ್ಟೆನು. ಸರ್ಕಾರದ ಆಜ್ಞೆಯ ಮಟ್ಟಿಗೆ ಅದು ಸರಕಾರದ ಹುಚ್ಚು ವರ್ತನೆಯೆಂದು ತಿಳಿಯುವೆನು. ಆದ್ದರಿಂದ ಹುಚ್ಚರ ತಲೆ ಸರಿಯಾಗುವ ವರೆಗೆ ಅವರಿಗೆ ವಿಶ್ರಾಂತಿ ಕೊಡುವದೊಳಿತು.

ಜಮ್ನಾಲಾಲರು ತಾಳ್ಮೆ ವಹಿಸಿ ಅಧಿಕಾರಿಗಳಿಗೆ ಅವರ ಮೌಢ್ಯತೆಯನ್ನು, ಆತುರತೆಯ ಕೆಲಸದ ಪರಿಣಾಮವನ್ನು ತೋರಿಸಿ ಕೊಟ್ಟಿದ್ದರಿಂದ ಅವರಿಗೇನೂ ನಷ್ಟವಾಗಲಿಲ್ಲ. ಜಯಪುರ ಸಂಸ್ಥಾನದ ಒಬ್ಬ ಹೊಣೆಗಾರ ಮನುಷ್ಯನಾಗಿ ಸರ್ಕಾರಕ್ಕೆ ತಮ್ಮ ಕರ್ತವ್ಯದ ಬಗ್ಗೆ ಪುನರಾಲೋಚಿಸಲು ಸಮಯ ಕೊಡುವದು ಕರ್ತವ್ಯವಿತ್ತು. ಸರ್ಕಾರದವರು ಈ ಸಮಯವನ್ನು ಸರಿಯಾಗಿ ವಿನಿಯೋಗಿಸದಿದ್ದರೆ ಜಮ್ನಾಲಾಲರು ಆಜ್ಞೋಲ್ಲಂಘನೆ ಮಾಡಲು ತಮ್ಮ ವಿಶಿಷ್ಟ ಶಕ್ತಿ ಪ್ರಗತಿಗಳಿಂದ ಅಹಿಂಸಾ ರೂಪದ ಕಾರ್ಯ ಕೈಕೊಳ್ಳುವರು.

ಪರದೇಶಿ ಮಂತ್ರಿಗಳ ಕೈಯ್ಯಲ್ಲಿ ಮಹಾರಾಜರು ಆಟದ ಬೊಂಬೆ ಎಂಬುದನ್ನು ಮಹಾರಾಜರು ತಿಳಿದುಕೊಳ್ಳಲಿ, ಈ ಮಂತ್ರಿಗಳು ಪ್ರಜೆಗಳ ಹಿತಾಹಿತಗಳನ್ನು ತಿಳಿದವರಲ್ಲ. ಜಯಪುರವು ಈ ಪರದೇಶೀಯರ ಅಧಿಕಾರದಿಂದ ತನ್ನ ಪ್ರಗತಿಯನ್ನು ಕಳೆದುಕೊಳ್ಳುತ್ತಿದೆ. ಪರಕೀಯರಾಗಿರುವ ಜಯಪುರ ಕೌನ್ಸಿಲಿನ ವರ್ತನೆಯು ಬೇಜವಾಬ್ದಾರಿಕೆಯ ಪ್ರದರ್ಶನವೆನ್ನಬಹುದು. ಎಂಥಾ ಒಬ್ಬ ಪ್ರಮುಖ ಮುಖಂಡನಾಗಿರಲಿ, ಅವನ ಗಡಿಪಾರು ಅಷ್ಟು ಮಹತ್ವದ್ದಲ್ಲ. ಆದರೆ ಇದರ ಪರಿಣಾಮವು ಅದು ವಿವೇಕಶೂನ್ಯವಾದ ಕಾರ್ಯವೆಂದು ವಿಶದಪಡಿಸದಿರದು.

ಕಳೆದ ಆರು ವರ್ಷಗಳಿಂದ ಜಮ್ನಾಲಾಲಜೀಯವರ ಪ್ರೇರಣೆಯಿಂದ ಜಯಪುರ ಸಂಸ್ಥಾನದಲ್ಲಿ ಕೆಲಸ ಮಾಡುತ್ತಿರುವ ಪ್ರಜಾ ಮಂಡಲಿಯೊಂದಿರುವದೆಂದು ವಾಚಕರಿಗೆ ತಿಳಿದಿರಲಿಕ್ಕಿಲ್ಲ. ಜಮ್ನಾಲಾಲಜಿಯವರು ಅದರ ಈಗಿನ ಅಧ್ಯಕ್ಷರು. ಅದು ಈ ವರೆಗೆ ತನ್ನ ವಿಧಾಯಕ ಕಾರ್ಯಕ್ರಮದಿಂದ ಜನಾನುರಾಗವನ್ನು ಪಡೆದಿದೆ. ಜಮ್ನಾಲಾಲರ ಮೇಲಿರುವ ಈ ನಿಷೇಧಾಜ್ಞೆಯು ತೆಗೆಯಲ್ಪಡದಿದ್ದರೆ ಈ ಮಂಡಳವು ತನ್ನ ಕರ್ತವ್ಯವನ್ನು ಮಾಡಬೇಕಾಗಿದೆ. ಯಾಕೆಂದರೆ ಈ ಆಜ್ಞೆಯಿಂದ ಮಂಡಳದ ವಿಧಾಯಕ ಕಾರ್ಯಕ್ರಮವನ್ನೇ ತಡೆಯುವ ಸಂಭವವಿದೆ. ಈ ಆಜ್ಞೆಯು ಇದನ್ನು ಕುಗ್ಗಿಸಬೇಕೆಂದೆನ್ನಲು ಪೂರ್ವ ಚಿಹ್ನೆಯಾಗಿದೆ. ಜಮ್ನಾಲಾಲರು ಮತ್ತು ಜಯಪುರ ಜನತೆಯು ತಮ್ಮ ಎಲ್ಲಾ ಶಕ್ತಿಯಿಂದ ಸತ್ಯ ಮತ್ತು ಅಹಿಂಸಾ ತತ್ವದ ಆಧಾರದ ಮೇಲೆ ಈ ಆಜ್ಞೆಯನ್ನು ವಿರೋಧಿಸಬೇಕಿದೆ.

ದೇವದತ್ತ.

ಸಾಮಾಜಿಕ ಕಾದಂಬರಿ.

ಕಳೆದ ವಾರದಿಂದ ಮುಂದುವರಿಯುವುದು.

ಆ ಮನುಷ್ಯನು ಹಾಗೆ ನಿಂತು ನೋಡುತ್ತಿರುವಾಗ್ಯೆ, ತನ್ನ ಎದುರಿನ ರಸ್ತೆಗಾಗಿ, ಮೋಟಾರ್ ಬಂಡಿಯೊಂದು ದಾಟಿತ್ತು. ಅವರ ಎದುರಿನ ಆಸನದಲ್ಲಿ ಓರ್ವ ಗೃಹಸ್ಥನಿದ್ದನು. ಹಿಂಭಾಗದ ಆಸನದಲ್ಲಿ ಓರ್ವ ಹೆಂಗಸು, ವೃದ್ಧಳೂ, ಕೃಶಾಂಗಿಯೂ ಆದ ಕಾಯಿಲಸ್ಥಳೊಬ್ಬಳು ತನ್ನ ಪಕ್ಕದ ಮೇಲೆ ಒರಗಿಕೊಂಡು ಕುಳಿತ್ತಿದ್ದಳು. ಆ ಮೂವರನ್ನು ಕಂಡೊಡನೆ ಆ ಯುವಕನ ಮುಖವು ವಿವರ್ಣವಾಯಿತು. ಅವನು ಆ ಬಂಡಿಯು ಅದೃಶ್ಯವಾಗುವ ವರೆಗೆ ಅದನ್ನೆ ದೃಷ್ಟಿಸುತ್ತಿದ್ದು, ಅದು ಆಸ್ಪತ್ರೆಗೆ ಹೋಯಿತ್ತೆಂದೊಡನೆ ತಾನು ಬಂಗ್ಲಯೊಳಗೆ 'ಹರೇಂದ್ರಕುಮಾರಿ! ಡ್ರೆಸ್ ಮಾಡಿ ಆಗಲಿಲ್ಲವೇ!' ಎಂದು ಹೇಳಿ ಒಳ ಹೊಕ್ಕು, ಒಂದು ಕೋಲನ್ನು ತೆಗೆದುಕೊಂಡು ಹೊರಗೆ ಬಂದನು. ಸುಂದರಿಯಾದ ಯುವತಿಯೋರ್ವಳು, ಬಹು ಅಮೂಲ್ಯವಾದ ವಸ್ತ್ರಗಳನ್ನು ಧರಿಸಿ ಹೊರ ಬಂದಳು. ಇಬ್ಬರೂ ಮಾತಾಡುತ್ತಾ ವೈದ್ಯಾಲಕ್ಕೆ ತೆರಳಿದರು.

ನಾವು ಮೊದಲೇ ನೋಡಿದ ಮೋಟಾರ್ ಬಂಡಿಯು ಆಸ್ಪತ್ರೆಯ ಎದುರಿನಲ್ಲಿ ನಿಂತಿತ್ತು. ವೈದ್ಯರು ಇನ್ನೂ ಬಂದಿರಲಿಲ್ಲವಾದ ಕಾರಣ ಬಂಡಿಯಲ್ಲಿ ಬಂದವರೆಲ್ಲಾ ಅದರೊಳಗೆ ಇದ್ದರು. ಅಷ್ಟರಲ್ಲಿ ಬಂಗಲೆಯಿಂದ ಬಂದ ವ್ಯಕ್ತಿಗಳೀರ್ವರು ಬಂಡಿಯನ್ನು ಸಮೀಪಿಸಿದರು. ಆಗಂತುಕನ ಮುಖವು ಬಹು ಮಟ್ಟಿಗೆ ಬಾಡಿ ಹೋಗಿತ್ತು. ಅವನು ಬಲು ದೈನ್ಯಸ್ವರದಿಂದ 'ಅಯ್ಯೋ ಕಾಯಿಲೆ ಏನು? ಎಂದು ಕಾರಿನೊಳಗ ಬಗ್ಗಿ ಕೇಳಿದರು.

ವ್ಯಸನಕ್ರಾಂತನಾಗಿದ್ದ ಆ ಮನುಷ್ಯನು ಆಗಂತುಕನ ಸಹಾನುಭಾವವನ್ನು ಕಂಡು, ತಾನೂ ಸ್ನೇಹಭಾವದಿಂದ 'ಕಾಯಿಲೆ ಏನೂ ಕಠಿಣವಾಗಿಲ್ಲ. ಸ್ವಲ್ಪ ದಿವಸಗಳಿಂದ ಜ್ವರ ಬರುತ್ತಿತ್ತು. ಈಗ ಎರಡು ದಿವಸಗಳಿಂದ ಸ್ವಲ್ಪ ಕೆಮ್ಮಲು ಪ್ರಾರಂಭವಾಗಿದೆ. ವೃದ್ಧರು ತ್ರಾಣವಿಲ್ಲ. ಸ್ವಲ್ಪ ಬಂದರೆ ಸಹಸ್ರವಾಗಿ ಕಾಣುತ್ತದೆ. ಎಂದನು.

ಆಗಂತುಕ—ನೀವಿದಕ್ಕೆ ಹೆದರಬೇಡಿ. ವೈದ್ಯರು ಬರುವ ವರೆಗೆ ಕಾಯುವ ಅವಶ್ಯವು ಇರುವದಲ್ಲ. ನಾನಿದಕ್ಕೆ ಔಷಧಿ ಕೊಡುತ್ತೇನೆ. ನನಗೆ ವೈದ್ಯಶಾಸ್ತ್ರದಲ್ಲಿ ತಕ್ಕ ಮಟ್ಟಿಗೆ ಪಾಂಡಿತ್ಯವಿದೆ. ವಿಲಾಯಿತಿಯಲ್ಲಿ ತರಬೇತು ಹೊಂದಿ ಈಗ ನಮ್ಮ ದೇಶದಲ್ಲಿ ಗ್ರಾಮ ಗ್ರಾಮಗಳಲ್ಲಿ ತಿರುಗಿ, ಬಡವರಿಗ ಸಹಾಯಮಾಡಬೇಕೆಂದು ಸಂಚಾರ ಮಾಡುತಿದ್ದೇನೆ. ನಿಮಗಿಷ್ಟವಿದ್ದರೆ ನಾನೇ ಈ ವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡುತ್ತೇನೆ.

ಈ ಮಾತುಗಳನ್ನು ಕೇಳಿದೊಡನೆ, ಕಾಯಿಲಸ್ಥನನ್ನು ತಂದ ಮನುಷ್ಯನಿಗೆ ಪರಮಾನಂದವಾಯಿತು. ತನ್ನ ದೈವವನ್ನು ಹೊಗಳುತ್ತಾ, ಅದೇ ಬಂಡಿಯಲ್ಲಿ ಹೊಸ ಡಾಕ್ಟರನ್ನು ಕೂರಿಸಿಕೊಂಡು ಮರಳಿ ಮನೆಗೆ ಬಂದನು. ಹರೇಂದ್ರ ಕುಮಾರಿಯು ತಿರುಗಿ ಬಂಗಲೆಗೇ ಹೋದಳು.

ರೋಗಿಯನ್ನು ಹಾಸಿಗೆಯ ಮೇಲೆ ಮಲಗಿಸಿದೊಡನೆ, ವೈದ್ಯನು ರೋಗಿಯ ಕಾಲುಗಳನ್ನು ಹಿಡಿದು ಮೊದಲು ಪರೀಕ್ಷಿಸಿದನು. ಆ ಮೇಲೆ ಕೈಯ ನಾಡಿಗಳನ್ನು ಪರೀಕ್ಷಿಸಿ, 'ತಕ್ಕ ಔಷಧಿಯನ್ನು ಈಗಲೇ ಕೊಡುತ್ತೇನೆ. ಬನ್ನಿ ಬಂಗಲೆಗೆ ಹೋಗುವ' ಎಂದನು. ಅಷ್ಟರಲ್ಲಿ ಗೃಹಿಣಿಯು ಒಂದು ಬಟ್ಟಲು ಹಾಲನ್ನು ಕಾಸಿ, ತಂದು, ಪತಿಯ ಕೈಗೆ ಕೊಟ್ಟಳು. ಕೂಡಲೆ ಅವನು ಅದನ್ನು ವೈದ್ಯರಿಗೆ ಕೊಟ್ಟನು. ವೈದ್ಯನು ಬಹು ಸಂತೋಷಪೂರ್ವಕವಾಗಿ ಅದನ್ನು ಸ್ವೀಕರಿಸಿ ತಾವು ಬಂದಿದ್ದ ಕಾರಿನಲ್ಲಿ ಗೃಹಸ್ಥನನ್ನು ಕರೆದುಕೊಂಡು, ಬಂಗಲೆಗೆ ಹೊರಟು ಹೋದನು.

ಅಲ್ಲಿ ವೈದ್ಯರು ತನ್ನ ಪೆಟ್ಟಿಗೆಯಿಂದ ನಾಲ್ಕೈದು ಪುಡಿಗಳನ್ನು ತೆಗೆದು, ಮಿಶ್ರ ಮಾಡಿ, ಅದನ್ನು ಬಂದವನ ಕೈಗೆ ಕೊಟ್ಟು, ಸೇವಿಸುವ ವಿಧಾನವನ್ನು ವಿವರಿಸಿ, ಆ ಮನುಷ್ಯನ ಚರಿತ್ರೆಯನ್ನು ಸ್ವಲ್ಪ ಮಟ್ಟಿಗ ಕೇಳಿದನು.

'ನನ್ನ ಹೆಸರು, ಸೋಮದತ್ತ' ವಾಸಿಸುತ್ತಿದ್ದ ಯುವತಿಯ ಮುಖವು ಹಠಾತ್ತಾಗಿ ರಕ್ತ ಹೀನವಾಯಿತು. ಅವನು ವೈದ್ಯನ ಮುಖವನ್ನೇ ನೋಡಿದಳು. ವೈದ್ಯನು ಮಾತ್ರ ಸಾವಧಾನವಾಗಿ ಕೇಳುತ್ತಿದ್ದನು. 'ಈಗ ನೀವು ಪರೀಕ್ಷಿಸಿದ ರೋಗಿಯು ನನ್ನ ತಾಯಿ, ಅವರಿಗ ಸುಮಾರು ಐವತ್ತು ವರ್ಷ ಪ್ರಾಯವಿರಬಹುದು. ಕಾರಿನಲ್ಲಿದ್ದ ಹೆಂಗಸೇ ನನ್ನ ಸಹ ಧರ್ಮಿಣಿ. ನನಗೆ ಮೂವರು ಮಕ್ಕಳಿರುವರು. ನನಗೆ ಓರ್ವ ತಮ್ಮನಿದ್ದನು. ಅವನು ಬಿ. ಎ. ಪಾಸಾಗಿದ್ದನು. ಕಡೆಗೆ ಏನೂ ತಿಳಿಸದ ನಾಲ್ಕು ವರ್ಷಗಳಲ್ಲಿ ಹಿಂದಿರುಗುತ್ತೇನೆಂದು ಮಾತ್ರ ಬರೆದು ಎಲ್ಲಿಯೋ ಹೊರಟು ಹೋದನು. ನಾಲ್ಕು ವರ್ಷಗಳು ಕಳೆದು ಹೋದವು ಯಾವುದೊಂದು ವರ್ತಮಾನವು ಇಲ್ಲ. ಅದೇ ನನ್ನ ತಾಯಿಯ ಕಾಯಿಲೆಯು ಹೆಚ್ಚಾಗಲು ಒಂದೇ ಕಾರಣವಾಗಿರುತ್ತೆ' ಎಂದು ಹೇಳಿ ತನ್ನ ಕಣ್ಣೀರನ್ನು ಒರಸಿಕೊಂಡನು. ಮೌನವಾಗಿ ಕೇಳುತ್ತಿದ್ದ ವೈದ್ಯನು, ಸೋಮದತ್ತನನ್ನು ಸಮಾಧಾನಪಡಿಸಿ, ಇನ್ನು ನೀವು ಹೋಗಿ, ನಾನು ಹೇಳಿದ ರೀತಿಯಲ್ಲಿಯೇ ಔಷಧಿಯನ್ನು ಕೊಡಿ ನಾನು ನಾಳೆ ಪುನಹ ನೋಡಲು ಬರುತ್ತೇನೆ' ಎಂದನು.

ಸೋಮದತ್ತನು ವೈದ್ಯನಿಂದ ಬೀಳ್ಕೊಂಡು ಹೊರಟು ಕಾಲ್ನಡಿಯಲ್ಲಿ ಮನೆಯನ್ನು ಸೇರಿದನು. ವೈದ್ಯರೂ ಹರೇಂದ್ರ ಕುಮಾರಿಯೂ ಒಳಗೆ ಹೋದರು.

೨೦ ನೇ ಅಧ್ಯಾಯ.

ಸೋಮದತ್ತನ ಮನೆಯಲ್ಲಿ ಗ್ರಾಮಸ್ಥರನೇಕರು ಸೇರಿದ್ದರು. ಹೊರಭಾಗದ ಅಂಗಳದ ಮಧ್ಯದಲ್ಲಿ ಒಂದು ಕುರ್ಚಿಯಲ್ಲಿ ಕೃಶಾಂಗಳಾದ ಗುಣವತಿಯು ಕುಳಿತ್ತಿದ್ದರು. ಮುಖವು ರಕ್ತ ಹೀನವಾದರೂ ಶರೀರದಲ್ಲಿ ರೋಗದ ಕುರುಹುಗಳೇನೂ ಕಾಣುತ್ತಿರಲಿಲ್ಲ.

'ಪೂರ್ವ ಜನ್ಮದಲ್ಲಿ ನೀವು ಮಾಡಿದ ಸುಕೃತದ ಫಲವೆಂದೇ ಭಾವಿಸಬೇಕು. ಅಲ್ಲದಿದ್ದರೆ ಇಂತಹ ಮಹಾತ್ಮರು ಈ ಆಪತ್ಕಾಲದಲ್ಲಿ ಬರುವುದೆಂದರೇನು? ಎಂತಹ ಸಾಧುತ್ವ! ಎಂತಹ ನಮ್ರತೆ! ಭಗವಂತನು ಅವರಿಗೆ ಆಯುಷ್ಯವನ್ನು ಕೊಟ್ಟು ದೀರ್ಘಕಾಲ ಇಡಲಪ್ಪ! ನಿನ್ನೆ ನಿಮ್ಮಲ್ಲಿಗೆ ಬಂದಿದ್ದರಲ್ಲವೇ ಶ್ಯಾಮಣ್ಣ ?' ಎಂದು ಓರ್ವ ಗ್ರಾಮಸ್ಥನು ಕೇಳಿದನು.

'ಮಹಾತ್ಮರು ದಯಮಾಡಿಸಿದರಪ್ಪಾ, ನಾನು ನಹ ಅದೇ ಯೋಚಿಸುತ್ತಿದ್ದೆ. ಅವರ ವಿದ್ಯೆ ಏನು? ಯೋಗ್ಯತೆ ಏನು? ಐಶ್ವರ್ಯವೇನು? ಇಷ್ಟಾದರೂ ಅವರ ನಡೆಯಲ್ಲಾಗಲೀ ಎಳ್ಳಿನಷ್ಟು ಸಹ ಅಹಂಕಾರ ತೋರುವುದಿಲ್ಲವಲ್ಲ. ಎಂತಹ ಸಾಧುತ್ವ. ನಿನ್ನೆ ಮನೆಗೆ ದಯೆ ಮಾಡಿಸಿದ್ದರು. ನೋಡಿ ಗ್ರಾಮವಾಸಿಗಳ ನಮ್ಮ ಮನೆಗಳೇನು' ಅವರ ಯೋಗ್ಯತೆಗೆ ಸರಿಯಾದುದೇ? ಅವರ ಮೇಲೂ ಕಾಡು ಜನರಂತಿರುವ ನಮ್ಮ ಶಯನ ಗೃಹಗಳೆಂತಿರುವುವು; ಅದ್ದರಿಂದ ಅವರನ್ನು ಒಳಕ್ಕೆ ಕರೆದುಕೊಂಡು ಹೋಗಲು ನಾಚಿಕೊಂಡು ನಾನು ರೋಗಿಯನ್ನು ಹೊರಗೆ ತರಲು ಪ್ರಯತ್ನಿಸಿದೆನು. ಅವರನ್ನು ಹೊರಗೆ ಬಿಟ್ಟು ತಾನು ಒಳಗೆ ಹೋದದ್ದು ಸರಿ. ಅವರೂ ನನ್ನೊಡನೆ ಒಂದೇ ಬಿಟ್ಟರು. ಅವರಿಗೆ ಕೂರಲು ಒಂದು ಕುರ್ಚಿಯನ್ನು ತರುವಷ್ಟರಲ್ಲಿ ಅವರು ರೋಗಿಯ ಬದಿಯಲ್ಲಿ ಮಂಚದ ಮೇಲೆ ಕುಳಿತೇಬಿಟ್ಟರು. ರೋಗಿಯ ಪರೀಕ್ಷೆಯು ಆಯಿತು. ಅಷ್ಟರಲ್ಲಿ ನಮ್ಮವಳು ಫಲಾಹಾರಕ್ಕೆ ಏನೋ ತಂದಿಟ್ಟಳು. ಅಷ್ಟು ಆದರಪೂರ್ವಕವಾಗಿ ಅದರಲ್ಲಿ ಸ್ವಲ್ಪವನ್ನು ಸ್ವೀಕರಿಸಿದರು. ನೋಡಿ ಅಪ್ಪಾ! ದೇವರ! ನಾನಿಂತಹ ನಾಧುವನ್ನು ಎಲ್ಲಿಯೂ ಕಾಣಲಿಲ್ಲ. ನಾನೆಷ್ಟೊ ವಿದ್ಯಾವಂತರನ್ನು ನೋಡಿರುತ್ತೇನೆ. ಅಯ್ಯೋ ಅವರ ಜಂಬವೇನು! ಲೋಕವೆನು, ನಮ್ಮಂತವರ ಮನೆಗಂತೂ ಬರುವುದಂ ಹಾಗಿರಲಿ. ಏನಾದರೂ ಆಕಸ್ಮತ್ತಾಗಿ ಎದುರಾದರೆ ಒಂದೆರಡು ಮಾತಾಡುವುದಕ್ಕೂ ಸಹ ಅವರಿಗೆಷ್ಟೋ ಅಭಿಮಾನ. **ಇವರ ವಿದ್ಯೆ ಏನು! ಐಶ್ವರ್ಯವೇನು! ಸತ್ಯವಾಗಿಯೂ ಹೇಳುತ್ತೇನೆ. ನಾನವರ ಸ್ಥಿತಿಯಲ್ಲಿದ್ದಿದ್ದರೆ ಇಷ್ಟು ನಿರಹಂಕಾರದಿಂದ ವರ್ತಿಸಲು ನನಗೂ ಸಹ ಅಸಾಧ್ಯವಾಗುತ್ತಿತ್ತು' ಎಂದು ಶ್ಯಾಮಣ್ಣನು ಹೇಳಿದನು.**

'ನಿವೇನು ಹೇಳುವುದು. ತುಂಬಿದ **ಕೊಡ ತುಳುಕುವುದಿದೆಯೇ? ಅಲ್ಪವಿದ್ಯೆಕ್ಕಲ್ಲವೇ ಮಹಾಗರ್ವ. ಇದೇ ನೋಡಿ ಮಹಾತ್ಮರ ನಡವಳಿಕೆಗೂ ಅಲ್ಪರ ನಡವಳಿಕೆಗೂ ಇರುವ ವ್ಯತ್ಯಾಸ. ಅಲ್ಪರಿಗೆ ಐಶ್ವರ್ಯವಾಗಲೀ, ಸ್ವಲ್ಪ ವಿದ್ಯೆಯಾಗಲೀ ಬಂತೆಂದರೆ, ಅವರ ತಲೆಯೇ ತಿರುಗಿ ಹೋಗುತ್ತೆ. ಬಡವರಾದ ಅವರ ನೆಂಟರಿಷ್ಟರೂ, ವಂಶಸ್ಥರೂ ಅವರಿಗೆ ತಿಳಿಯದವರಾಗುತ್ತಾರೆ. ದೂರ ಹೋಗುವದೇತಕ್ಕೆ? ಕಾಣುವದಿಲ್ಲವೇ ನಮ್ಮ ಊರ ದೊರೆಯೊಬ್ಬರು, ನನಗೇತಕ್ಕೊ ಅವರ ನಡತೆ** ಒಂದಿಷ್ಟು ಸಹ ಒಗ್ಗುವದಿಲ್ಲ. 'ಏನೋ ಸ್ವಲ್ಪ ಐಶ್ವರ್ಯವಂತ, ಅದರ ಮೇಲೂ ಸರಕಾರಿ ಉದ್ಯೋಗಸ್ಥ' ಎಂದು ಹೇಳಿ ಸ್ವಲ್ಪ ಮರ್ಯಾದೆ ಕೊಡುವದಲ್ಲದೆ, ಅವರ ನಡತೆಗಳಿಗಾದರೆ ನೀವೆಂದಾದರೂ ಅವರನ್ನು ನಮ್ಮ ಗ್ರಾಮಸ್ಥರ ಮನೆಗಳಿಗೆ ಬರುವುದು ಕಂಡಿರುವಿರಾ? ಏನಾದರೂ ಕಾರ್ಯಾರ್ಥವಾಗಿ ಬಂದದ್ದಾದರೆ, ಹಟ್ಟಿಯಿಂದ ಮನೆಯೊಳಗೆ ಬರುವಂತಿಲ್ಲ. 'ದೊಡ್ಡ ಮನುಷ್ಯರು ಬಂದರಲ್ಲಾ' ಎಂದು ಭಾವಿಸಿ, ಏನಾದರೂ ತಿಂಡಿ ತೀರ್ಥಗಳನ್ನು ತಯ್ಯಾರಿಸಿದ್ದಾದರೆ, ಅದನ್ನು ಮುಟ್ಟುವದಕ್ಕೂ ಸಹ ಅವರಿಗೆ ಅಷ್ಟು ಸಂಕೋಚ ಏನು ಜಂಭವೊ, ನಮ್ಮ ವೈದ್ಯರ ಎದುರಿನಲ್ಲಿ ನಿಲ್ಲುವಷ್ಟು ಯೋಗ್ಯತೆಯು ಸಹ ಅವರಿಗಿಲ್ಲ. ಅವರೂ ಏನು ದೊಡ್ಡಸ್ಥಿಕೆ' ಎಂದು ನಾಗೇಂದ್ರನು ಹೇಳಿ ಮುಗಿಸಿದನು.

ಅದಕ್ಕೆ ಪ್ರಾಣೇಶನು, 'ಅದರಿಂದಲೇ ನೋಡಿ, ನನ್ನ ಮನೆಗೆಲ್ಲ ಅವರು ಬಂದರೆಂದರೆ ನಾನೇನು ಅಂತಹ ವಿಚಾರನ್ನುಗಳನ್ನು ತೋರಿಸುವವನಲ್ಲ. ಅದೆಲ್ಲ ನನಗೆ ಗೊತ್ತು. ಎಷ್ಟೋ ಸಲ ಬಂದಿದ್ದಾರೆ. ಬಂದಾಗಲೆಲ್ಲಾ ಬರಿ ಬಾಯುಪಚಾರವಲ್ಲದ ಒಂದು ಬಟ್ಟಲು ಕಾಫಿ ಸಹ ನಾನು ಎಂದಾದರೂ ಕೊಟ್ಟವನಲ್ಲ. ಏತಕ್ಕೆ ಕೊಡಬೇಕು? ಕುಡಿಯುವುದೇ ದುರ್ಲಭ. ಒಂದು ವೇಳೆ ಕುಡಿದರೂ ಸಹ, ಅದು ಮನಃಪೂರ್ವಕವಾಗಿ ಅಲ್ಲ. ಅದೆಲ್ಲ ಅಲ್ಪವಿದ್ಯೆ, ಅಲ್ಪ ಐಶ್ವರ್ಯದ ಅಹಂಕಾರ್ಯ ಚಿಕ್ಕಂದಿನಿಂದಲೇ ಅವರ ಸ್ವಭಾವವೇ ಹಾಗ. ಅದರೆ ಅಜ್ಞನ್ಮನವರ ಎದುರಿನಲ್ಲಿ ಹೇಳಬಾರದು. ಇವರ ದೇವದತ್ತನಿದ್ದನಷ್ಟೆ, ಅವನಿಗೆ ಅಂತಹ ದೊಡ್ಡಸ್ತಿಕೆಗಳೇನೂ ಇರಲಿಲ್ಲ. ಅವನು ಬೊಂಬಾಯಿಯಲ್ಲಿ ಓದುತ್ತಿದ್ದಾಗ ಎಷ್ಟೊ ಸಲ ಬಂದಿದ್ದಾನೆ. ಅಂತಹ ಅಹಂಕಾರವೇನೂ ಕಾಣಲಿಲ್ಲ. ಅಷ್ಟೆ ಅಲ್ಲ, ಮುಖಚ್ಛಾಯೆಯಲ್ಲೂ ಇವರು ದೇವದತ್ತನನ್ನು ಹೋಲುತ್ತಿದ್ದಾರೆ. ಅವರ ಹಣೆಯಲ್ಲಿರ ತಕ್ಕ ಛಾಯೆ ಮತ್ತು ಮುಖದ ಮೇಲೆ ಮೀಸ ಇಲ್ಲದಿದ್ದರೆ ಅವರಿಗೂ ದೇವದತ್ತನಿಗೂ ಎಳ್ಳಿನಷ್ಟು ವ್ಯತ್ಯಾಸವು ಕಾಣುವದಿಲ್ಲ. ನೀವವರನ್ನು ಕನ್ನಡಕ ತೆಗೆದಾಗ ನೋಡಲಿಲ್ಲವೇನೊ?

ಗುಣವತಿಯ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. **ನೆರೆದವರೆಲ್ಲಾ ಪ್ರಾಣೇಶನ ಮಾತಿಗೆ ಒತ್ತಾಸೆಯನ್ನು ಶಬ್ದರೂಪದಿಂದಲೂ, ಶಿರಾಂದೋಳನದಿಂದಲೂ ಸೂಚಿಸಿದರು. ಮುದುಕಿಯು ನಿಟ್ಟುಸುರುಬಿಟ್ಟಳು.**

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-30 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ.	2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... [illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್,** ಬೆಂಗಳೂರು.

52-45

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.

ಮತ್ತು ಕಂಪೆನಿ,

(52-6) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

26 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮು. ಮಂಡೇಪಂಡ ಸೋಮಯ್ಯನವರು.

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ಧಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.

ಶಾಕೋಟ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.

(ಶಾಕೋಟ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ತೆಗೆದುಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮುತ್ತು ನಾನಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ.	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	--	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ಟ್ರಿಪ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಧವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯವರು
ಸೆಕ್ರೆಟರಿ:—ಮೆ. ಎಸ್. ಎನ್. ರಾಮುಶೆಟ್ಟಿಯವರು.

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180.	ರೂ. 55	ರೂ. 35	ರೂ. 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿಷ್ಟೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

82-2 **ಮೆ. ಪಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.**

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1007

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೭—೧—೧೯೩೯. ಸಂಪುಟ ೧೮] [ಸಂಚಿಕೆ ೩೪

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-7

ಶ್ವಾಸಸಂಹಾರ

ಶ್ವಾಸ ಪ್ರಾರಂಭದ ವೃದ್ಧ ವಯಸ್ಕರಿಗೆ ಅನೇಕ ವರ್ಷಗಳಿಂದ
ಪ್ರಯೋಗಿಸಲ್ಪಟ್ಟ ಮಹಾ ರಸ ಗುಣ

ಇದು ಜೀರ್ಣವರ್ಧಕ ... ಹೆಚ್ಚಿಸಿ, ದೇಹಪೋಷಕ ಸಾರವನ್ನು ... ಕೆಮ್ಮು, ... ಬಾಧ, ಉಬ್ಬಸ, ... ಪೌಂಡು 1ಕ್ಕೆ ರೂ 3—8—0 ಅರ್ಧ ಪೌಂಡಿಗೆ 1—5—0

ಕಸ್ತೂರಿ ಬಾಣಂತಿ ಲೇಹ್ಯ

ಪ್ರಸವಾನಂತರ ಬಾಣಂತಿಯರು ... ಶಕ್ತಿವರ್ಧಕ ರಸಾಯನ ... ರೋಗಗಳನ್ನು ... ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ... ಹಾಲು ಸಿಕ್ಕುವಂತೆ ಮಾಡುವುದು ಬಾಟ್ಲಿ 1ಕ್ಕೆ ರೂ 1—8—0

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ... ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [23]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ದಂತವೈದ್ಯ ಪರೀಕ್ಷಾ ... ವೀರರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ದಪಾರ್ಥ.

... ನಮ್ಮ ಮುಖ್ಯ ಪದ್ಧತಿ.

ಬೇನೆಯಿಲ್ಲದೆ ಹಲ್ಲು ಕೀಳುವುದು.
ನೋವಿಲ್ಲದೆ ಹಲ್ಲು ತುಂಬುವುದು
... ಶಾಶ್ವತವಾಗಿರುವಂತೆ ಹಲ್ಲು
ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ... ಸೆಲ್ಯುಲಾಯಿಡ್ ಅಥವಾ ಚಿನ್ನದವು: ಪ್ರತಿಯೊಂದು ಕೆಲಸ
10 ... ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಸಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಸಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಶೇಖರಣಾರ್ಥ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಶೇವಣಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-34

The Agricultural &
Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-24)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೪೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೪೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೨೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೪,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-18

ವಿ ವಿ ಧ ವಿ ಚಾ ರ.

ಆನೆಗಳು.

ಕೇಪ್ ಕೊಲೊನಿಯ ಪ್ರಿಡಸ್‌ಡ್ರೊಪ್ ಎಂಬಲ್ಲಿ ಎ. ಡ್ರಯರ್ ಎಂಬಾತ ಆನೆಗಳ ಪಾಳ್ಯವನ್ನು ಬೆಳೆಸಿರುವನು. 51 ಆನೆಗಳು ಈತನ ಸಾಕು ಪ್ರಾಣಿಗಳಾಗಿ ಇವೆ. ಅಲ್ಲದೆ ಈತನಿಗೆ ಬಹಳ ವಿಧೇಯವಾಗಿಯೂ ನಡೆಯುಕೊಳ್ಳುತ್ತಿವೆ. ಡ್ರಯರ್‌ನ ಕರೆ ಕೇಳಿನೊಡನೆಯೇ ಈ 51 ಪ್ರಾಣಿಗಳೂ ಸಿಧಾನವಾಗಿ ಅಟ್ಟಹಾಸದಿಂದ ಆತನಬಳಿ ಬಂದು ಆತನ ಕೈಯಿಂದಲೇ ತಿಂಡಿ ತಿಂದು ತೆರಳುತ್ತವೆ. ಇವುಗಳಿಗೆ ಕೇಳುವ ಜ್ಞಾನವು ವಿಪರೀತವಾಗಿರುವುದರಿಂದ ತಮ್ಮ ಒಡೆಯನ ಗುರುತು ಸೆಸಿನಲ್ಲಿ ರಿಸಿಕೊಳ್ಳಬಲ್ಲವು.

—:O:—

ಅಮರನೋ?

ಇಂಗ್ಲೆಂಡಿನ ಜೆಟ್‌ಸಿ ಎಂಬಲ್ಲಿ ಒಬ್ಬನಿರುವನು. ಇವನು ಕಲಿಯುಗದ ಅಮರನೋ ಏನೋ ಕಾಣೆ. ಈತನ ಹೆಸರು ಜಾರ್ಜ್ ಕಾಲಿ ಎಂದು. ಈತನು ಮೊನ್ನೆ ತಾನೇ ಒಂದು ದೊಡ್ಡ ಮರವನ್ನೇರಿ ಸುಮಾರು 70 ಅಡಿ ಎತ್ತರದಿಂದ ಕೆಳಕ್ಕೆ ಬಿದ್ದ. ಆದರೂ ಗಾಯವಾಗಲಿಲ್ಲ. ಈತನು ಕುಳಿತಿದ್ದ ಲಾರಿ ಎರಡು ಸಾರಿ ಮುಗುಚಿಕೊಂಡರೂ ಈತನು ಪ್ರಾಣಾಪಾಯದಿಂದ ಪಾರಾದ! ಸ್ಫೋಟನ ವಸ್ತು ಕೈಲಿದ್ದಾಗ ಅ ಸ್ಫೋಟನವಾಗಿ ಕೈಗಳು ಸುಟ್ಟುಹೋದರೂ ಬದುಕಿರುವನಲ್ಲ! ಎಲ್ಲಕ್ಕೂ ಮಿಗಿಲಾಗಿ ಈತನ ಮನೆಗೆ ಬೆಂಕಿ ಬಿದ್ದರೂ ಸಹ ಎಲ್ಲರೂ ಕಿಟಿಕಿಯಿಂದ ಹೊರಗೆ ಬಂದು ಪಾರಾದರಂತೆ! ಪಾಪ ಕಲಿಯುಗದ ಅಮರನೇ ಇರಬೇಕಲ್ಲವೇ?

—:O:—

ಜರ್ಮನಿಯಲ್ಲಿ ಡಾಕ್ಟರರಿಗೆ ಬರಗಾಲ.

ಯೆಹೂದಿಯರನ್ನು ಜರ್ಮನಿಯು ಇದೀಗ ಓಡಿಸಲಾರಂಭಿಸಿದ ಮೇಲೆ, ಅಲ್ಲಿ ಡಾಕ್ಟರರಿಗೆ ಬರಗಾಲ ಉಂಟಾಗಿದೆ. ಡಾಕ್ಟರ್ ವೃತ್ತಿಯಲ್ಲಿನ ಹೆಚ್ಚಿನ ಮಂದಿಯಲ್ಲಿ ಅನಾರ್ಯರೇ ಆಗಿದ್ದರು. ಇವೀಗ ಡಾಕ್ಟರರೇ ಅಲ್ಲದೆ ಮಾಸ್ತರರಲ್ಲೂ ಬರಗಾಲ ಉಂಟಾಗಿದೆ. 1935 ರಲ್ಲಿ ಜರ್ಮನಿಯಲ್ಲಿ ಮಾತ್ರ ಸುಮಾರು 4800 ಅನಾರ್ಯ ಡಾಕ್ಟರರಿದ್ದರು. ಅದೇ ಕೆಲವು ವಾರಗಳ ಹಿಂದೆ ಸುಮಾರು 3ರಿಂದ 4 ಸಾವಿರದ ವರೆಗೆ ಅನಾರ್ಯ ಡಾಕ್ಟರುಗಳ ಹೆಸರುಗಳನ್ನು ತೆಗೆದು ಹಾಕಲಾಯಿತು. ಆದರಿಂದ ಜರ್ಮನಿಯು ಡಾಕ್ಟರಿ ಪರೀಕ್ಷೆಗೆ ಓದಲು ಇದ್ದ 7 ವರ್ಷಗಳ ಅವಧಿಯನ್ನು 6ಕ್ಕೆ ಇಳಿಸಿದೆ. ಇದರಿಂದ ಆದಷ್ಟು ಬೇಗ ಡಾಕ್ಟರರನ್ನು ಪಡೆಯಬಹುದೆಂಬ ಆಶೆ.

—:O:—

ಒಂದು ಶತಮಾನದ ನಂತರ ಕುಡಿಯುವ ಟೀ.

ಒಂದುನೂರು ವರ್ಷಗಳ ನಂತರ ಈಗಿನ ಟೀಯನ್ನು ರುಚಿಯಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕುಡಿಯಬಹುದಾಗಿದೆಯಂತೆ. ಒಂದು ವಿಧವಾದ ಸಸ್ಯ ಸಂಬಂಧವಾದ ಪದಾರ್ಥದಿಂದ ಟೀಯು ಮುಚ್ಚಲ್ಪಟ್ಟು ನಂತರ ಅಲ್ಯೂಮಿನಿಯಂ ಲೋಹದ ಡಬ್ಬಿಯಲ್ಲಿಟ್ಟು ಸೀಸದ ನೀರನ್ನು ಬಳಿದು ಅದನ್ನು ಇಟ್ಟರೆ ರುಚಿಯಲ್ಲಿಯೂ ವ ವಿಧವಾದ ವ್ಯತ್ಯಾಸವೂ ಉಂಟಾಗದಂತೆ! ಈ ರೀತಿಯಾಗಿ ಬ್ರಿಟಿಷ್ ಇಂಡಿಯಾ ಟೀ ಪ್ರವೀಣರು ಟೀಯನ್ನು ಶೇಖರಿಸಿ ನೂರು ವರ್ಷಗಳ ವರೆಗೂ ಒಡೆಯಕೂಡದೆಂದು ಅದರ ಮೇಲೆ ನಮೂದಿಸಿ ಇಡುವರಂತೆ. ಇದು ಟೀಯ ಬೆಳೆಯ ಶತಮಾನೋತ್ಸವದ ಕುರುಹಾಗಿ ಕಲೆಂದು ಹೀಗೆ ಮಾಡಲಾಗುವುದಂತೆ!

—:O:—

ಈ ಬುದ್ಧಿ ನಮಗಿಲ್ಲ.

ಎಟವಾದ-ಬಾಬೆರ್‌ಪುರದಲ್ಲಿ ಒಂದು ಆಡು ಕಕ್ಕಾಬಿಕ್ಕಿಯಾಗಿ ಓಡಿ ಪಠಾಣನೊಬ್ಬನನ್ನು ಹಾಯ್ದು ಕೆಡವಿ ಹಾಕಿತು. ಸರಿ! ಪಠಾಣ ಕೂಡಲೇ ಮಡಿದ. ಇದನ್ನು ಕಂಡ ಆಡು ತನ್ನ ಕೃತ್ಯಕ್ಕಾಗಿ ನೊಂದು ಪಶ್ಚಾತ್ತಾಪಪಡಹತ್ತಿತು, ತಿಂಡಿ ನೀರನ್ನು ಬಿಟ್ಟಿತು. ಕಣ್ಣೀರು ಸುರಿಸುತ್ತಾ, ಉಪವಾಸ ಬಿದ್ದು ಸುಮಾರು ಒಂದೆರಡು ವಾರಗಳಲ್ಲಿ ದೇವರ ಸಾನಿಧ್ಯವನ್ನು ಹೊಂದಿತು. ಜಗತ್ತಿನಲ್ಲಿ ಅನ್ಯಾಯ ಮಾಡಿ ಪಶ್ಚಾತ್ತರಲ್ಲಿ ಇದೊಂದೇ ಸ್ವರ್ಗವನ್ನು ಸೇರಿರಬಹುದು!

—:O:—

ವಾನರ ಸೇನೆ.

ಕೊಲಂಬಿಯಾ ವಿಶ್ವ ವಿದ್ಯಾನಿಲಯವು ಸಾನ್‌ಜೋನ್ ಹಾರ್ಬರ್ ಬಳಿಯ 36 ಎಕ್ರೆ ವಿಸ್ತೀರ್ಣದ ದ್ವೀಪವೊಂದರಲ್ಲಿ, ವಾನರ ಸೇನೆಯನ್ನು ಸಿದ್ಧಪಡಿಸಿದೆ. ಇದು ಈ ಕಪಿಗಳ ಕಿಷ್ಕಿಂಧೆ. ಇದರಲ್ಲಿರುವ 500 ಕಪಿಗಳನ್ನು ಹಿಂದೂ ದೇಶದಿಂದಲೇ ಅಲ್ಲಿಗೆ ಒಯ್ಯಲಾಯಿತು. ಕಪಿಗಳ ನಡತೆ, ಬುದ್ಧಿಗಳ ಕುರಿತಾದ ಹಾಗೂ, 'ಗ್ಲೇಂಡ್'ಗಳ ಉಪಯೋಗಗಳನ್ನು ಪರೀಕ್ಷಿಸುವುದಕ್ಕಾಗಿ ಇವುಗಳನ್ನು ಸಾಕಲಾಗಿದೆಯಂತೆ. ಭಾರತೀಯ ಕಪಿಗಳೂ ಪರರಾಷ್ಟ್ರವನ್ನು ಸೇರಿವೆ. ಹೇಗಿದ್ದರೂ ಆ ದ್ವೀಪ ತಮಗೆ ಬರಬೇಕೆಂದು ಹಿಟ್ಲರನಾಗಿದ್ದರೆ ಕೇಳದೆ ಬಿಡುತ್ತಿರಲಿಲ್ಲ.

—:O:—

ಹುಟ್ಟು ಮಾಡಿದ ದ್ರಾಕ್ಷಾರಸ.

ಇಂಗ್ಲೆಂಡಿನಲ್ಲಿ ಹಾಲನ್ನು ಘನ ರೂಪಕ್ಕೆ ಪರಿವರ್ತಿಸುವುದುಂಟಷ್ಟೆ. ಅದೇ ರೀತಿ ದೆನ್‌ಮಾರ್ಕಿನಲ್ಲಿ ಕುಡಿಯುವ ಮಾದಕ ಪದಾರ್ಥಗಳಾದ ದ್ರಾಕ್ಷಾರಸಗಳನ್ನೂ ಸಹ ಘನ ರೂಪಕ್ಕೆ ತಂದು ಡಬ್ಬಿಗಳಲ್ಲಿ ಶೇಖರಿಸಲಾಗುವನಂತೆ! ಈ ರಸವನ್ನು ಬಾಯಿಲಿಂಗ್ ಪಾಯಿಂಟ್ ವರೆಗೆ ಸ್ವಲ್ಪ ಕಡಿಮೆಯಾಗಿ ಕಾಯಿಸಿ ಅನಂತರ ಡಬ್ಬಿಗೆ ಹಾಕಿ ತಣ್ಣಗೆ ಮಾಡುವರಂತೆ. ಇದನ್ನು ಉಪಯೋಗಿಸಲು ಒಂದು ಸ್ಥಿತಿ ಸ್ಥಾಪಕ ಶಕ್ತಿಯುಳ್ಳ ಲೋಹವನ್ನು ಉಪಯೋಗಿಸಲಾಗುವುದೆಂದೂ, ಇದರಿಂದ ರಸವು ಕಾಯುವಾಗಿದ್ದಾಗ ಇದು ಸ್ವಾಭಾವಿಕವಾಗಿ ದೊಡ್ಡದಾಗುತ್ತಲೂ ತಣ್ಣಗಾದಾಗ ಡಬ್ಬಿಯು ಸಂಕುಚಿತವಾಗುತ್ತಲೂ ಇರುತ್ತಂತೆ. ಹೀಗಿರುವಾಗ ಡಬ್ಬಿಯೊಳಗೆ ಗಾಳಿಯೇ ಇರುವುದಿಲ್ಲವಾದ್ದರಿಂದ ಮಾದಕ ಪದಾರ್ಥಗಳು ಕೆಡದೆ ಬಹು ದಿನಗಳಿರಬಲ್ಲವಂತೆ!

—:O:—

ಹಸುವಿನ ವಿಮಾನ ಸಂಚಾರ!

ಇದನ್ನು ಕೇಳಿ ಆಶ್ಚರ್ಯಪಡಬೇಕಾಗಿದ್ದಿಲ್ಲ. ನಿಜವಾಗಿಯೂ ನಡೆದದ್ದು. ದ. ಅಮೇರಿಕದ ಪೆರುದೇಶದಲ್ಲಿ. ಚಚಾಪೊಯಾಸ್ ಎಂಬಲ್ಲಿ ವಿಮಾನವೊಂದು ಜನರನ್ನು ಕೂಡಿಸಿಕೊಂಡು ಹೊರಟಿತು. ಆದರೆ ಅದು ಹತ್ತುವುದಕ್ಕೆ ಮುಂಚೆ ವಿಮಾನವು ನೆಲದ ಮೇಲೆ ವೇಗವಾಗಿ ಹೋಗುತ್ತಿದ್ದಾಗ ಮೈದಾನದಲ್ಲಿ ಮೇಯುತ್ತಿದ್ದ ಹಸುವೊಂದಕ್ಕೆ ಡಿಕ್ಕಿ ಹೊಡೆದು ಅದರ ಹಗ್ಗವು ವಿಮಾನದ ಹಿಂಭಾಗದ ಕೊಕ್ಕೆಗೆ ಸಿಕ್ಕಿಕೊಂಡಿತು. ಇದರಿಂದ ಹಸುವು ವಿಮಾನ ಜೊತೆಯಲ್ಲಿ ಹಾರಿಹೋಗಬೇಕಾಗಿ ಬಂತು. ಆದರೆ ವೈಮಾನಿಕರಿಗಾಗಲಿ ಅಥವಾ ಪ್ರಯಾಣಿಕರಿಗಾಗಲೀ ಇದರ ಸುಳಿವೇ ತಿಳಿಯದಿರಲು ವಿಮಾನವು ಮುಂದಿನ ನೂರು ಮೈಲಿ ದೂರದಲ್ಲಿದ್ದ ಮೋಯೊಬಾಂಬಾ ಎಂಬಲ್ಲಿ ಇಳಿದಾಗ ವೈಮಾನಿಕ ರಾಯ್‌ವಾರ್ನರ್ ಎಂಬಾತನಿಗೆ ತಿಳಿದುಬಂತಂತೆ!

—:O:—

ನಿರುದ್ಯೋಗವೇ?

ನಿರುದ್ಯೋಗ! ನಿರುದ್ಯೋಗವೆಂದು ಸುಮ್ಮನೆ ಏಕೆ ತಲೆ ಚಚ್ಚಿಕೊಳ್ಳಬೇಕು? ಲಂಡನಿನ ಪ್ರಾಕೃತಿಕ ಇತಿಹಾಸ ಕಚೇರಿಯ ಜಿ. ಇ. ಪರ್ಕಿನ್ಸನಂತೆ ಮಾಡಬಾರದೇಕೆ? ಆತನು ಸ್ವೀಡನ್ ದೇಶಕ್ಕೆ ಹೋಗಿ 6 ತಿಂಗಳ ಕಾಲವಿದ್ದು ವಿವಿಧ ಜಾತಿಯ ನೊಣಗಳನ್ನು ಸುಮಾರು 40 ಸಾವಿರದಷ್ಟನ್ನು ಶೇಖರಿಸಿ ತಂದಿರುವನು. ಈತನ ಉದ್ಯೋಗದಲ್ಲಿ ಈತನ ಸತಿಯು ಬಹುಸಹಾಯಕಳಾದಳಂತೆ!

—:O:—

ಗ್ಯಾಸ್.

ದಂತವೈದ್ಯರಿಗೆ ಇನ್ನು ಹಲ್ಲು ಕೀಳಿಸಲು ಬಂದವರಿಗೆ ಇಂಜಕ್ಷನ್ ಕೊಡುವ ಕಷ್ಟವಿಲ್ಲ. ಬದಲು ಗ್ಯಾಸ್ ಬಿಟ್ಟರೆ ಸರಿ! ಬಂದ ಹಲ್ಲು ನೋವಿನವನಿಗೆ ಗ್ಯಾಸ್ ಕೊಟ್ಟು ಆತನು ಮಾದಕ ದ್ರವ್ಯ ಪಾನ ಮಾಡಿದವನಂತೆ ಮತ್ತನಾದೊಡನೆ ಅಥವಾ ಮೂರ್ಛೆ ಬೀಳುವಂತೆ ಕಂಡು ಬಂದೊಡನೆ ಹಲ್ಲನ್ನು ಕಿತ್ತುಬಿಟ್ಟರೆ ಸರಿ! ಹಲ್ಲನ್ನು ಕೀಳಿಸಿಕೊಂಡವನಿಗೆ ಯಾವ ನೋವೂ ಇರುವುದಿಲ್ಲ. ಈ ಗ್ಯಾಸ್ ಬಿಡುವ ಯಂತ್ರವನ್ನು ಅಮೇರಿಕದಲ್ಲಿ ಪ್ರದರ್ಶನಕ್ಕೆ ಇರಿಸಿದ್ದಾರೆ. ಇದೊಂದು ಬಂದರೆ ನಮ್ಮ ದಂತವೈದ್ಯರು ಸ್ವತಃ ಗ್ಯಾಸ್ ಮಾತುಗಳ ದುವುದು ನಿಲ್ಲಬಹುದು.

—:O:—

ಎಲುಬಿನಿಂದ ಪೂರ್ವ ಚರಿತ್ರೆ.

ಸತ್ತವನ ಎಲುಬುಗಳು ಸಿಕ್ಕಿದರೆ ಸಾಕು. ಅವುಗಳ ಸಹಾಯದಿಂದ ಆ ಮನುಷ್ಯನು ಜೀವದಲ್ಲಿದ್ದಾಗ ಅವನ ನೋಟ ಹೇಗಿತ್ತು? ಅವನ ಪ್ರಾಯ, ಎತ್ತರ, ಭಾರ, ಜನಾಂಗ, ಅವನ ಉದ್ಯೋಗದ ವಿಷಯ ಊಹೆ, ಇವುಗಳನ್ನೆಲ್ಲ ತಿಳಿಯಬಹುದು. ಇನ್ನು ಅವಶ್ಯವಿದ್ದರೆ ಅವನ ಮುಖದ ಛಾಯಾಚಿತ್ರವನ್ನು ಸಹ ತೆಗೆಯಲು ಸಾಧ್ಯವಿದೆ ಎಂದು ಅಮೇರಿಕದ ಅಸ್ಥಿ ಪರಿಶೋಧಕರಾದ ಥಿಯೋಡರ್ ಹಿರಾಮ ಸೋಯರ್ ಎಂಬವರು ತಿಳಿಸಿದ್ದಾರೆ. ಮನುಷ್ಯನ ಗಂಡಸ ಎಲುಬಿಗಿಂತ ಅಗಲವಾಗಿದ್ದು ಮುಚ್ಚಿನ ಬಸಿ ಎತ್ತಿ ಕಾಣುತ್ತದೆ. ಕೈಕಾಲುಗಳ ಎಲುಬಿನಿಂದ ಎತ್ತರವನ್ನು ಹುಡುಕಬಹುದು; ಮುಖ್ಯವಾಗಿ ತೊಡೆಯ ಎಲುಬಿನಿಂದ. ಮುಖದ ಆಕಾರ, ನೋಟಗಳನ್ನು ಕಂಡು ಹಿಡಿಯುವದರಲ್ಲಿ 10ರಲ್ಲಿ 9 ಸಂದರ್ಭಗಳು ಸರಿಯಾಗಿವೆಯಂತೆ.

—:O:—

ಅಮೇರಿಕದಲ್ಲಿ ವೃದ್ಧ ಯುವಕರ ಶಿಕ್ಷಣಶಾಲೆ!

ಸಂಯುಕ್ತ ಸಂಸ್ಥಾನಗಳ ಕಾನ್ಸಾಸ್ ಎಂಬಲ್ಲಿ ವೃದ್ಧ ಬಾಲಕ ಶಿಕ್ಷಣ ಶಾಲೆಯೊಂದು ಸ್ಥಾಪಿತವಾಗಿದೆ. ಕಾನ್ಸಾಸಿನ ವಿಶ್ವ ವಿದ್ಯಾ ನಿಲಯದ ಪಂಡಿತರಾದ ಶ್ರೀ. ವಿಲಿಯಂ ಮ್ಯಾಕೀವರ್‌ರವರೇ ಇದರ ಸಂಸ್ಥಾಪಕರು. 'ಜನರು ವಯಸಾಗುತ್ತಾ ಆಗುತ್ತಾ ಜಗದ್ವಿಚಾರಗಳನ್ನು ಮರೆಯುತ್ತಾ ಬರುವುದನ್ನು ತಪ್ಪಿಸಬಹುದೆಂದು ಮ್ಯಾಕೀವರರು ಈ ಶಾಲೆಯನ್ನು ಸ್ಥಾಪಿಸಿರುವರು. 70 ವಯಸ್ಸಾಗದವರನ್ನು ಇಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲವಂತೆ. ಈಗಿರುವ ವಿದ್ಯಾರ್ಥಿಗಳಲ್ಲಿ ಹಿರಿಯಳೆಂದರೆ ಶ್ರೀಮತಿ ಜಾರ್ಜ್ ಎಲ್. ಗ್ರೀನ್ ಎಂಬಾಕೆಯಂತೆ. ಈಕೆಗೆ 120 ವರ್ಷ ವಯಸ್ಸು. ಈ ವಿದ್ಯಾರ್ಥಿಗಳು ಪ್ರತಿ ದಿನವೂ ಮಧ್ಯಾಹ್ನದ ವೇಳೆಯಲ್ಲಿ ಸೇರಿ ವಿಷಯಗಳನ್ನು ಚರ್ಚಿಸುವರಂತೆ. ಆಗ ಪ್ರಾಸಂಗಿಕ ವಿಷಯವಾಗಿಯೂ, ಉಪನ್ಯಾಸಗಳ ವಿಷಯವಾಗಿಯೂ ಚರ್ಚೆ ನಡೆಯುವುದಲ್ಲದೆ ತಮಾಷೆ ಕಥೆಗಳೂ ಹೇಳಲ್ಪಡುವುವಂತೆ!

—:O:—

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು.

ಮೋಡೆಲ್ ಶಾಲೆಗಳನ್ನು ಬೋರ್ಡಿಗೆ ತೆಗೆದುಕೊಳ್ಳಬೇಕಾದರೆ ಸರಕಾರದ ಗ್ರಾಂಟಿನಲ್ಲಿ ಖೋತೆ ಕೂಡದು.

25 ವರ್ಷದ ಸರ್ವಿಸಿನಲ್ಲಿರುವ ಉದ್ಯೋಗಸ್ಥರು ನಿವೃತ್ತಿಯಾಗಬೇಕು.

ರೂ. 12 ರಲ್ಲಿ ಹೊಸ ನೇಮಕಗಳಾಗಬೇಕು.

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ತಾರೀಕು 20 ಮತ್ತು 21 ರಲ್ಲಿ ಅದರ ಪ್ರೆಸಿಡೆಂಟರಾದ ಶ್ರೀಮಾನ್. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಜೆ. ಓ. ಎಫ್. ನೊರಿಸರ ವಿನಹ ಎಲ್ಲಾ ಸದಸ್ಯರೂ ಹಾಜರಿದ್ದರು. ತಾರೀಕು 20ರ 11 ಗಂಟೆಗೆ ಸರಿಯಾಗಿ ಮೀಟಿಂಗು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭವಾಯಿತು.

1. ಕಳೆದ ಮೀಟಿಂಗಿನ ನಡವಳಿಕೆಯನ್ನು ಓದಿ ಅಂಗೀಕರಿಸಲಾಯಿತು.

2. ಸರಕಾರದ ಎಲ್ಲಾ ಮೋಡೆಲ್ ಶಾಲೆಗಳನ್ನು ವಜಾಮಾಡಿ ಅವುಗಳಿರುವ ಸ್ಥಳಗಳಲ್ಲಿ ಪುನಃ ಬೋರ್ಡು ಹೊಸ ಶಾಲೆಗಳನ್ನು ತೆರೆಯಬೇಕೆಂದೂ, ಸರಕಾರವು ಇದಕ್ಕೆ ತಗಲುವ ಖರ್ಚನ್ನು ಕೊಡುವದೆಂದೂ ಕೇಳಿಕೊಂಡ ಕಮಿಷನರ ಪತ್ರ ಓದಲ್ಪಟ್ಟಿತು

ಈ ವಿಚಾರವು ಚರ್ಚಿಸಲ್ಪಟ್ಟು ಶ್ರೀ ಸಿ. ಯಂ. ಪೂಣಚ್ಚನವರು ಈ ಕೆಳಗಿನ ಠರಾವನ್ನು ತಂದರು.

'ಸರಕಾರವು ಡಿ. ಬೋರ್ಡಿಗೆ ಕೊಡುತ್ತಿರುವ ಗ್ರಾಂಟಿನಲ್ಲಿ ಖೋತೆಮಾಡಕೂಡದೆಂದು ಬೋರ್ಡಿನವರು ಒಮ್ಮತದಿಂದ ಕೇಳಿಕೊಂಡರೂ ಸಹ ರೂ. 5000 ಖೋತೆಮಾಡಲು ಸರಕಾರವು ತೀರ್ಮಾನಿಸಿರುವದರಿಂದ ಬೋರ್ಡು ಈ ಜವಾಬ್ದಾರಿಯನ್ನು ಹೊರಲಾರದು. ಆ ಗ್ರಾಂಟನ್ನು ಮುಂದರಿಸಿ ಬೋರ್ಡಿನ ಮುಂದಿನ ಕೆಲಸಕ್ಕೆ ಸಹಾಯಮಾಡಿದ ವಿನಃ ಈ ವಿಚಾರ ಬೋರ್ಡು ಆಲೋಚಿಸುವದು.'

ಶ್ರೀ ರಾಮಚೆಟ್ಟಿಯವರು ಅನುಮೋದಿಸಿದರು. ಠರಾವು ಬಹುಮತದಿಂದ ಪಾಸಾಯಿತು.

3. ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ನೌಕರರ ಸಂಬಳದ ಹೊಸ ಸ್ಕೇಲಿನ ವಿಚಾರದ ಅರ್ಜಿಗೆ ಚೀಫ್ ಕಮಿಷನರ ಸಕ್ರೆಟರಿಯವರಿಂದ ಬಂದ ಪತ್ರ ಓದಲಾಯಿತು.

ಇದನ್ನು ವಿವೇಚಿಸುವ ಬಗ್ಗೆ ಬಡ್ಜೆಟ್ ಮೀಟಿಂಗಿಗೆ ಮುಂದರಿಸಲಾಯಿತು.

4. ಡಿಸ್ಟ್ರಿಕ್ಟ್ ಬೋರ್ಡಿನ ಉದ್ಯೋಗಸ್ಥರ ರಜ ಮತ್ತು ಇತರ ಪ್ರಾಮುಖ್ಯ ರೂಲ್ಸ್‌ಗಳ ಬಗ್ಗೆ ಅರ್ಜಿಗೆ ಕಮಿಷನರಿಂದ ಬಂದ ಪತ್ರ ಓದಿ ಕೊಡಗು ಸರಕಾರದಲ್ಲಿ ತಮ್ಮ ನೌಕರರ ವಿಚಾರದಲ್ಲಿ ಜಾರಿಯಲ್ಲಿರುವ ರಜಾ ಮತ್ತು ಇತರ ಪ್ರಾಮುಖ್ಯ ರೂಲುಗಳನ್ನೇ ಅಂಗೀಕರಿಸಲು ತೀರ್ಮಾನವಾಯಿತು.

5. ಚೈನಾ ಎಂಬ್ಯೂಲೆನ್ಸ್ ಫಂಡಿಗೆ ಬೋರ್ಡಿನಿಂದ ಕೊಟ್ಟ ರೂ. 25 ರ ವಿಚಾರ ಎಕೌಂಟೆಂಟ್ ಜನರಲರವರಿಂದ ಬಂದ ತಕರಾರು ಓದಿ, ಕ್ವೆಟ್ಟಾ ಭೂಕಂಪಕ್ಕೆ ಬೋರ್ಡಿನಿಂದ ಈ ಮೊದಲು ಕೊಟ್ಟಂತೆಯೇ ಈಗಲೂ ಕೊಟ್ಟಿರುವದರಿಂದ ತಕರಾರನ್ನು ವಿಸರ್ಜಿಸಿಬಿಡುವ ಬಗ್ಗೆ ಎಕೌಂಟೆಂಟ್ ಜನರಲರಿಗೆ ತಿಳಿಸಲು ತೀರ್ಮಾನವಾಯಿತು.

6. ಅಮ್ಮತ್ತಿ ಹುಡುಗಿಯರ ಶಾಲೆಯ ಕಟ್ಟಡವನ್ನು ಬೋರ್ಡಿನ ವಶಕ್ಕೆ ತೆಗೆದುಕೊಳ್ಳುವ ವಿಚಾರ ಎಗ್ಸಿಕ್ಯೂಟಿವ್ ಇಂಜಿನೀಯರ ಪತ್ರ ಓದಿ ಅದನ್ನು ಬೋರ್ಡಿನ ವಶಕ್ಕೆ ತೆಗೆದುಕೊಳ್ಳುವಂತೆಯೂ, ಅದರ ರಿಪೇರಿಗೆ ತಗಲುವ ವಾರ್ಷಿಕ ಖರ್ಚನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರಿಗೆ ಪಾವತಿ ಮಾಡುವಂತೆಯೂ ತೀರ್ಮಾನವಾಯಿತು.

7. ಅಮ್ಮತ್ತಿ, ಪಾರಾಣೆ ಮತ್ತು ಕಾಕೋಟುಪರಂಬಿನಲ್ಲಿಯ ಮುಖ್ಯೋಪಾಧ್ಯಾಯಿನಿಯರ ವಾಸಸ್ಥಾನಗಳು, ಜೇನು ವ್ಯವಸಾಯಕ್ಕೆ ಬೋರ್ಡಿಗೆ ಬೇಕೋ ಎಂಬ ಎಕ್ಸಿಕ್ಯೂಟಿವ್ ಇಂಜಿನೀಯರರ ಪತ್ರ ಓದಿ, ಮೇಲ್ಕಂಡ ಕಟ್ಟಡಗಳನ್ನು ಡಿ. ಬೋರ್ಡಿಗೆ ವಹಿಸಿಕೊಳ್ಳುವಂತೆಯೂ, ಅದರ ವಾರ್ಷಿಕ ಖರ್ಚನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರಿಗೆ ಕೊಡುವಂತೆಯೂ ತೀರ್ಮಾನವಾಯಿತು.

8 1938-39 ನೇ ಬೋರ್ಡಿನ ಬಡ್ಜೆಟಿನಲ್ಲಿ ಬಾಳೆಲೆಯ ಆಸ್ಪತ್ರೆಗೆ ಮತ್ತು ಮಾದಾಪುರ, ಚೆಟ್ಟಳ್ಳಿ ಮತ್ತು ಕೊಡ್ಲಿಪೇಟೆಯ ಹಾಗಾಮಿ ಆಸ್ಪತ್ರೆಗಳಿಗಾಗಿ ಇಟ್ಟ ರೂ. 500 ಮಂಜೂರು ಮಾಡಕೂಡದೆಂದು ಕಮಿಷನರಿಗೆ ಚೀಫ್ ಕಮಿಷನರ ಸೆಕ್ರೆಟರಿಯವರಿಂದ ಬಂದ ಪತ್ರವನ್ನು ಓದಿ ಇತ್ತೀಚೆಗೆ ಚೀಫ್ ಕಮಿಷನರು ತಮ್ಮದೊಂದು ಪತ್ರದಲ್ಲಿ ಮೇಲ್ಕಂಡ ಹಣವನ್ನು ಮಂಜೂರು ಮಾಡಿರುವದರಿಂದ ಪತ್ರವನ್ನು ಚರ್ಚಿಸಲಿಲ್ಲ.

9. 'ಭಾಗಮಂಡಲದ ಆಯುರ್ವೇದ ಆಸ್ಪತ್ರೆಯನ್ನು ಮುಚ್ಚಿ ಒಂದು ಎಲೋಪತಿಕ್ ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಸಿವಿಲ್ ಸರ್ಜನರು ಮತ್ತು ಬೆಂಗಳೂರಿನ ರೆಸಿಡೆನ್ಸಿ ಸರ್ಜನರು ಕೊಟ್ಟ ಸಲಹೆಗೆಯೊತ ಪ್ರಕಾರ ವರ್ತಿಸಲಾಗಿದೆಯೆಂದು ಚೀಫ್ ಕಮಿಷನರು ಬೋರ್ಡನ್ನು ಕೇಳಿಕೊಂಡ ಪತ್ರ ಓದಿ ಚರ್ಚಿಸಲಾಯಿತು. ಶ್ರೀ ರಾಮಚೆಟ್ಟಿಯವರು ಈ ವಿಚಾರವನ್ನು ಬೋರ್ಡಿನ ಅಧ್ಯಕ್ಷರು ಹೊರಗಿನ ಒಬ್ಬ ಆಯುರ್ವೇದಿಕ್ ಡಾಕ್ಟರರ ಸಹಾಯದಿಂದ ಪರೀಕ್ಷಿಸಬೇಕೆಂದು ತಂದ ಠರಾವು ಶ್ರೀ ಸಿ. ಯಂ. ಪೂಣಚ್ಚನವರಿಂದ ಅನುಮೋದಿಸಲ್ಪಟ್ಟು ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಯಿತು.

10. ಗದ್ದಿಗೆಯಲ್ಲಿರುವ ಕಟ್ಟಡ (ಪೊಲೀಸ್ ಲೈನ್) ಗಳನ್ನು ಬೋರ್ಡಿನ ಉಪಯೋಗಕ್ಕಾಗಿ ವರ್ಗಾಯಿಸಿ ಕೊಟ್ಟರೆ ಅವನ್ನು ಇಟ್ಟುಕೊಳ್ಳಲಾಗುವದೇ ಎಂಬ ಎಗ್ಸಿಕ್ಯೂಟಿವ್ ಇಂಜಿನೀಯರ ಪತ್ರ ಓದಿ ಕಟ್ಟಡವನ್ನು ಬೋರ್ಡಿಗೆ ವಹಿಸಿಕೊಂಡು ಇಟ್ಟುಕೊಳ್ಳಲು ತೀರ್ಮಾನವಾಯಿತು.

11. ಬಾಲಜನಮಾ ಸಂಸ್ಥೆಯ ಗೌರವ ಕಾರ್ಯದರ್ಶಿಯವರು ತಮ್ಮ ಸಂಸ್ಥೆಗೆ ರೂ. 100 ಸಹಾಯ ಮಾಡಬೇಕೆಂದು ಬರೆಕೊಂಡ ಅರ್ಜಿಯನ್ನು ಓದಿ ಓಟಿಗೆ ಹಾಕಲಾಗಿ ನಾಪಾಸಾಯಿತು.

12. ಹೊರಗೆ ಹೋಗುವ ಗಾಡಿಗಳ ಸುಂಕವನ್ನು ನಾಲ್ಕಾಣೆಯಿಂದ ಎಂಟಾಣೆಗೆ ಏರಿಸಬೇಕೆಂಬ ಸಲಹೆಯನ್ನು ಓದಿ ಅಂಗೀಕರಿಸಲಾಯಿತು.

13. ಸಂತೆ ನಡೆಯುವ ಸ್ಥಳಗಳಲ್ಲಿ ಮಾಡು ಇರುವ ಪ್ರತಿ ಸ್ವಂತ ಮನೆಗೂ ಮತ್ತು ಮಾರಾಟಕ್ಕೆ ತರುವ ಪಕ್ಷಿ ಜಾತಿಗಳಿಗೂ ಸುಂಕದ ದರ ನಿಶ್ಚಯಿಸುವ ಯೋಜನೆಯನ್ನು ಓದಿ, ಡಿಸ್ಟ್ರಿಕ್ಟ್ ಬೋರ್ಡಿನ ಪ್ರತಿಯೊಂದು ಮಾಡು ಇರುವ ಕೋಣೆಗೆ 4 ಆಣೆಯಂತೆಯೂ, ಖಾಸಗೀ ಕೋಣೆಗಳಿಗೆ 2 ಆಣೆಯಂತೆಯೂ, ಬಟ್ಟೆ ವ್ಯಾಪಾರಿ, ಶರಾಫ್ ಮತ್ತಿತರರಿಂದ ಇಡಲ್ಪಟ್ಟ ಮಾಡು ಇಲ್ಲದ ಪ್ರತೀ ಕೋಣೆಗಳಿಗೆ 1 ಆಣೆಯಂತೆಯೂ, ಧಾನ್ಯಗಳನ್ನು ಮಾರುವ ಸಣ್ಣ ಸಣ್ಣ ಕೋಣೆಗಳಿಗೆ 6 ಕಾಸಿನಂತೆಯೂ, ಮಾರಾಟಕ್ಕೆ ಬರುವ ಪ್ರತಿಯೊಂದು ಪಕ್ಷಿಗೂ 6 ಕಾಸಿನಂತೆಯೂ, ಇಲ್ಲದೆ ಮಾರ್ಕೆಟಿಗೆ ತರುವ ಪ್ರತಿಯೊಂದು ಪಕ್ಷಿ ಜಾತಿಗೆ 3 ಕಾಸಿನಂತೆಯೂ ಫೀಸು ಹಾಕಲು ತೀರ್ಮಾನವಾಯಿತು.

14. ಹೆಬ್ಬಾಲುವಿನ ಟೋಲ್ ಗೇಟನ್ನು ವಜಾ ಮಾಡಬೇಕೆಂಬ ಪತ್ರಗಳನ್ನು ಓದಿ ಗೇಟನ್ನು ಇಡುವಂತೆಯೂ, ಗೇಟಿನ ಇಕ್ಕಡೆಗಳಲ್ಲೂ ಭೂಮಿ ಇರುವವರ ಗಾಡಿಗಳು ವ್ಯವಸಾಯ ಸರಂಜಾಮುಗಳನ್ನು ಸುಂಕವಿಲ್ಲದೆ ಆ ಕಡೆ ಈ ಕಡೆ ಸಾಗಿಸುವಂತೆ ಪಾಸುಕೊಡಬಹುದೆಂದು ತೀರ್ಮಾನವಾಯಿತು.

15. ಬಾಳೆಲೆಯಲ್ಲಿ ತತ್ಕಾಲ ಸ್ಥಾಪಿತವಾಗಿರುವ ಆಸ್ಪತ್ರೆಗೆ ಮಾಸಿಕ ರೂ. 40 ವೇತನದ ಒಬ್ಬ ಡಾಕ್ಟರನ್ನು ಮತ್ತು 15 ರೂಪಾಯಿಯ ಕಂಪೌಂಡರನ್ನು ನೇಮಿಸುವ ಸಲಹೆಗಳನ್ನು ಓದಿ, 1938 ನೇ ಡಿಸೆಂಬರಿನಿಂದ ಹಾಗೆ ಮಾಡಲು ತೀರ್ಮಾನಿಸಲಾಯಿತು.

16. ಬೋರ್ಡಿನ ಉತ್ಪತ್ತಿಯನ್ನು ಹೆಚ್ಚಿಸಲು ನೇಮಕವಾದ ರಿಟ್ರೆಂಚ್‌ಮೆಂಟ್ ಕಮಿಟಿಯ ರಿಪೋರ್ಟನ್ನು ಓದಿ ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

ರಿಟ್ರೆಂಚ್‌ಮೆಂಟ್ ಕಮಿಟಿಯ ರಿಪೋರ್ಟು.

ಜಮಾ ಬಾಬು.

1. ಈಗಿರುವ ಮನೆ ಕಂದಾಯ ಅಥವ ಉದ್ಯೋಗ ಕಂದಾಯವು ಈ ರೀತಿ ಬದಲಾಗಬೇಕು. ನೂರರಿಂದ 150ರ ವರೆಗೆ ರೂ. 1-, 150ರಿಂದ 200ರ ವರೆಗೆ ರೂ. 2-, 200ರಿಂದ 300ರ ವರೆಗೆ ರೂ. 3/4/0, 300ರಿಂದ 400ರ ವರೆಗೆ ರೂ. 4-8-0, 400ರಿಂದ 500ರ ವರೆಗೆ ರೂ. 6-8-0 500ರಿಂದ 600ರ ವರೆಗೆ ರೂ. 8-8-0, 600ರಿಂದ 700ರ ವರೆಗೆ ರೂ. 11/-, 700ರಿಂದ 800ರ ವರೆಗೆ 13/-, 800ರಿಂದ 900ರ ವರೆಗೆ 15/-, 900ರಿಂದ 1000ರ ವರೆಗೆ 17/, 1000ದಿಂದ 1250ರ ವರೆಗೆ 20/, 1250ರಿಂದ 1500ರ ವರೆಗೆ ರೂ. 22-8-0 1500ರಿಂದ 1750ರ ವರೆಗೆ ರೂ. 25/, 1750ರಿಂದ ಪ್ರತಿ ನೂರಕ್ಕೆ 1 ರೂಪಾಯಿಯಂತೆ ಹೆಚ್ಚಿಂದರೆ ರೂ 30ರ ವರೆಗೆ.

1. ವ್ಯವಸಾಯ ಉತ್ಪತ್ತಿಗಳಿಲ್ಲದ ಕಂಪನಿಗಳ ಮುಖ್ಯ ಕಚೇರಿ, ಅಥವ ಶಾಖೆಯು ಡಿಸ್ಟ್ರಿಕ್ಟ್ ಬೋರ್ಡು ವ್ಯಾಪ್ತಿಯ ಒಳಗಿದ್ದರೆ ಮೇಲ್ಕಾಣಿಸಿದಂತೆ ಕಂದಾಯ ಪಾವತಿ ಮಾಡಬೇಕು.

2. ಡಿ. ಬೋರ್ಡು ವ್ಯಾಪ್ತಿಯಲ್ಲಿರುವ ಸಂಸ್ಥೆಗಳ ಸಂಪಾದಕರು ಸಹ ಮೇಲ್ಕಂಡಂತೆ ಕಂದಾಯ ಪಾವತಿಮಾಡತಕ್ಕದ್ದು.

ಈಗ ಅಂದಾಜು ಮಾಡಿದ ಉತ್ಪತ್ತಿಯು ಬಡ್ಜೆಟಿನಲ್ಲಿ ಅಂದಾಜುಮಾಡಿದ ರೂ. 8000 ಕ್ಕಿಂತ 500 ಹೆಚ್ಚಾಗುವದು.

ಸರ್ವಸಮ್ಮತದಿಂದ ಇದನ್ನು ಅಂಗೀಕರಿಸಲಾಯಿತು.

2. ಮನೆ, ಕಟ್ಟಡ ಅಥವ ಜಾಗಗಳಿಲ್ಲದ ಮಾಲಿಕರಿಗೆ ಬರುವ ಬಾಡಿಗೆಯ ವೇಕಡ 5 ಕ್ಕೆ ಮೀರದಂತೆ. ಬೆಳಕು ನೀರು, ಮತ್ತು ವೈದ್ಯಸಹಾಯ ನಡೆಯುವ ಈ ಕೆಳಗಿನ ಪೇಟೆಗಳಲ್ಲಿಯ ಮನೆ, ಕಟ್ಟಡ, ಮತ್ತು ಜಾಗಕ್ಕೆ ಕಂದಾಯ ಹಾಕುವುದು.

1. ಮೂರ್ನಾಡು, (2) ಸುಂಟಿಕೊಪ್ಪ, (3) ರಾಮಪುರ (4) ಶನಿವಾರಸಂತೆ (5) ಮಾದಾಪುರ, (6) ಚೆಟ್ಟಳ್ಳಿ, (7) ಸಿದ್ದಾಪುರ, (8) ಅಮ್ಮತ್ತಿ, (9) ನಾಪೋಕ್ಲು, (10) ಗೋಣಿಕೊಪ್ಪ, (11) ಹುದಿಕೇರಿ, (12) ಶ್ರೀಮಂಗಲ (13) ಕುಟ್ಟ.

ಅಂದಾಜು ವಾರ್ಷಿಕ ಉತ್ಪತ್ತಿ ರೂ. 500. ಬೋರ್ಡು ಅಂಗೀಕರಿಸಿತು.

3. 1935 ರ ಮೊದಲು ಇದ್ದ ಹಾಗೆ ದೊಡ್ಡಿ ಚಾರ್ಜಿನ ದರವನ್ನು ಹೆಚ್ಚಿಸುವದು. ಅಂದಾಜು ವಾರ್ಷಿಕ ಉತ್ಪತ್ತಿ ರೂ. 300.

ಬೋರ್ಡು ಅಂಗೀಕರಿಸಿತು.

4. 8 ನೇ ತರಗತಿಯ ಶಾಲಾ ಫೀಜನ್ನು ರೂ. 5 ರಿಂದ 7-8-0 ಗೆ ಏರಿಸುವದು. ವಾರ್ಷಿಕ ಅಂದಾಜು ಉತ್ಪತ್ತಿ ರೂ. 300

ಬೋರ್ಡು ಅಂಗೀಕರಿಸಿಲ್ಲ.

(a) ಸರಕಾರದವರು ಬೋರ್ಡಿಗೆ ವಿದ್ಯಾಭಿವೃದ್ಧಿಗಾಗಿ ಕೊಡುತ್ತಿರುವ ಗ್ರಾಂಟಿನಲ್ಲಿ ಖೋತೆ ಮಾಡಕೂಡದು.

ಅಂಗೀಕರಿಸಲಾಯಿತು.

5. ಸಂತೆಸ್ಥಳದ ಅಂಗಡಿ ಮನೆಗಳಿಗೆ ಠರಾವು 12 ರಲ್ಲಿ ಸೂಚಿಸಿರುವಂತೆ ಕಂದಾಯ ಹಾಕಬೇಕೆಂಬದನ್ನು ಈ ಮೊದಲೇ ಮಂಜೂರ್ಮಾಡಿರುವದರಿಂದ ಪುನಃ ಆಲೋಚಿಸುವ ಅವಶ್ಯಕತೆ ಇಲ್ಲವೆಂದು ತೀರ್ಮಾನವಾಯಿತು.

6. ಹೊಟೇಲುಗಳ ಲೈಸನ್ಸ್ ಫೀಜನ್ನು ಈ ಕೆಳಗೆ ಕಂಡಂತೆ ಏರಿಸಬೇಕು.

1ನೇ ಕ್ಲಾಸ್ ಹೊಟೇಲಿಗೆ ರೂ. 7 ರಿಂದ 10 ರ ವರೆಗೆ. 2ನೇ ಕ್ಲಾಸ್ ರೂ. 5ರಿಂದ 7ರ ವರೆಗೆ. 3ನೇ ಕ್ಲಾಸ್ ರೂ. 2ರಿಂದ 5ರ ವರೆಗೆ. ಅಂದಾಜು ವಾರ್ಷಿಕ ಉತ್ಪತ್ತಿ ರೂ. 300.

ಅಂಗೀಕರಿಸಲಾಯಿತು.

7. ಹೊಗೆಸೊಪ್ಪು ಮಾರುವ ಲೈಸನ್ಸ್ ಫೀಜನ್ನು ಈ ಕೆಳಗಿನಂತೆ ಏರಿಸಬೇಕು. ಪ್ರತಿ ದಿನ ಮಾರುವ ಅಂಗಡಿಗಳಿಗೆ ತಿಂಗಳಿಗೆ ರೂ. 2ರಿಂದ 2½ ಯ ವರೆಗೆ. ವಾರಕ್ಕೊಂದಾವರ್ತಿಮಾರುವ ಅಂಗಡಿಗಳಿಗೆ ತಿಂಗಳಿಗೆ ರೂ. 1ರಂತೆ. ಅಂದಾಜು ವಾರ್ಷಿಕ ಉತ್ಪತ್ತಿ ರೂ. 50.

ಅಂಗೀಕರಿಸಲಾಯಿತು.

8. ಹೊರಗೆ ಹೋಗುವ ಗಾಡಿಗಳ ಸುಂಕವನ್ನು 4 ಆಣೆಯಿಂದ 8 ಆಣೆಗ ಏರಿಸುವ ವಿಷಯ. ಅಂದಾಜು ವಾರ್ಷಿಕ ಉತ್ಪತ್ತಿ ರೂ. 300. ಹಾಗಲೇ ಅಂಗೀಕರಿಸಲಾಗದು.

9. ಹಳ್ಳಿಗಳಲ್ಲಿ ಸಾಮಾನುಸಾಗಿಸಲು ಉಪಯೋಗಿಸುವ ಹೇಸರುಕತ್ತೆ, ಕತ್ತೆ ಮತ್ತು ಎತ್ತುಗಳಿಗ 0-4-0 ಯಂತೆ ಕಂದಾಯ ಹಾಕಬೇಕು.

ಬೋರ್ಡು ಇದನ್ನು ಒಪ್ಪಲಿಲ್ಲ.

10. ಈಗಿರುವ ಮೋಟಾರು ಚಾರ್ಜನ್ನು 2 ಪೈಯಿಂದ ಮೂರು ಪೈಗೆ ಏರಿಸಬೇಕು. ಈ ಬದಲಾವಣೆಯನ್ನು ಮಾಡಲು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರನ್ನು ಕೇಳಿಕೊಳ್ಳಬೇಕು.

ಅಂಗೀಕರಿಸಲಾಯಿತು.

11. ಗ್ರಾಮಗಳಲ್ಲಿರುವ ಗಾಡಿ, ಬೈಸಿಕಲ್, ಮೋಟಾರ್ ಬೈಸಿಕಲ ಗಳಿಗ ರೂ. 1ರಂತೆ ಕಂದಾಯ ಹಾಕಬೇಕು. ಅಂದಾಜು ಮಾಡಿದ ವಾರ್ಷಿಕ ಉತ್ಪತ್ತಿ ರೂ. 800. ಅಂಗೀಕರಿಸಲಾಯಿತು.

12. ಸಬ್ ಅಸಿಸ್ಟೆಂಟ್ ಸರ್ಜನರು ವಾಸಿಸುವ ಡಿ. ಬೋರ್ಡು ಕಟ್ಟಡಗಳಿಗೆ ಅವರ ಸಂಬಳದ ಶೇಕಡ 10 ರಂತೆ, ಅಥವಾ ಕಟ್ಟಡದ ಕ್ರಯದ ಶೇಕಡ 6 ರಂತೆ ಇವುಗಳಲ್ಲಿ ಯಾವದು ಕಡಿಮೆಯೋ ಹಾಗೆ ಬಾಡಿಗೆ ಹಾಕಬೇಕು. ಅಂದಾಜು ವಾರ್ಷಿಕ ಉತ್ಪತ್ತಿ ರೂ. 1000 ಅಂಗೀಕರಿಸಲಾಯಿತು.

13. ಫಾರೆಸ್ಟು ಮತ್ತು ಎಕ್ಸೈಸ್ ಉತ್ಪತ್ತಿಯ ಮೇಲೆ ಸೆಸ್ ಹಾಕುವಂತೆ ಸರಕಾರವನ್ನು ಕೇಳಿಕೊಳ್ಳಬೇಕು.

ಅಂಗೀಕರಿಸಲಾಯಿತು.

14. ಕೊಡಗಿನ ಟ್ರಾವೆಲರ್ಸ್ ಬಂಗ್ಲೆಗಳನ್ನು ಆಕ್ರಮಿಸಲು ಈಗ ಮಾಡಿರುವ ಹೊಸ ರೂಲುಗಳ ಮೇರೆ ಬೋರ್ಡಿಗೆ ವಾರ್ಷಿಕ ರೂ. 100 ಆದಾಯ ಬರಬಹುದು.

ಅಂಗೀಕರಿಸಲಾಯಿತು.

ಖರ್ಚಿನ ಬಾಬು.

ಈ ಕೆಳಗಿನ ಕ್ರಮಗಳನ್ನು ಅಂಗೀಕರಿಸಬೇಕೆಂದು ಕಮಿಟಿಯು ಶಿಫಾರಸ್ಸು ಮಾಡುತ್ತದೆ.

1. ಡಿ. ಬೋರ್ಡು ಆಫೀಸು ಸಿಬ್ಬಂದಿಗಳ ಸಂಬಳದಲ್ಲಿ ಈ ರೀತಿ ಬದಲಾವಣೆಯಾಗಬೇಕು.

ಹೆಡ್ ಗುಮಾಸ್ತ ರೂ. 50-2½/2-75·
ಎರಡನೇ ,, ರೂ. 30-2/2-50.
ಮೂರನೇ ,, ರೂ. 25-1-30-2/2-40.
ವಾರ್ಷಿಕ ಉಳಿಕೆ ರೂ. 750–ಅಂಗೀಕರಿಸಲಾಯಿತು.

2. ವಿದ್ಯಾ ಇಲಾಖೆ.

(1) ಶಾಲೆಗಳ ಸಂಖ್ಯೆಯನ್ನು ನಿಷ್ಕರ್ಷೆಯಿಸುವದು ಮತ್ತು ಡಿ. ಬೋರ್ಡಿನ ಉದ್ಯೋಗಸ್ಥರಿಗೆ ಹೊಸ ಗ್ರೇಡಿನ ಸಂಬಳ ನಿಷ್ಕರ್ಷೆಯಿಸುವದು, ಇವುಗಳ ವಿಚಾರ ಚರ್ಚೆ ನಡೆದು ಅವುಗಳನ್ನು ವಿವೇಚಿಸಲು, ಪ್ರಸಿಡೆಂಟರು, ವೈಸ್ ಪ್ರಸಿಡೆಂಟರು, ಅಸಿಸ್ಟೆಂಟ್ ಕಮಿಷನರು ಡೆಪ್ಯುಟಿ ಇನ್ಸ್‌ಪೆಕ್ಟರರು ಮತ್ತು ಅಜ್ಜಮಾಡ್ ಪೂಣ್ಣಪ್ಪನವರಿಂದ ಕೂಡಿದ ಒಂದು ಕಮಿಟಿಯನ್ನು ನಿಷ್ಕರ್ಷೆಯಿಸಿದ್ದಲ್ಲದೆ ಈ ಕಮಿಟಿಯು 1939 ನೇ ಮೇ 15 ರೊಳಗ ತನ್ನ ರಿಪೋರ್ಟನ್ನು ಒಪ್ಪಿಸುವಂತೆ ಕೇಳಿಕೊಳ್ಳಲು ತೀರ್ಮಾನವಾಯಿತು.

(2) ಬರುವ ಏಪ್ರಿಲ್ 1 ರಿಂದ ಎಲ್ಲಾ ಶಾಲಾ ಉಪಾಧ್ಯಾಯರ ಬಡ್ತಿಯನ್ನು ಎರಡು ವರ್ಷಗಳ ವರೆಗೆ ನಿಲ್ಲಿಸಬೇಕು. ಅಂದಾಜು ವಾರ್ಷಿಕ ಆದಾಯ ರೂ. 500. ಅಂಗೀಕರಿಸಲಾಯಿತು.

3. ಸರಕಾರದವರು ಜಾರಿಯಲ್ಲಿ ತರುವ ಸಿಬ್ಬಂದಿ ಖೋತೆ ರೂಲ್ಸನ್ನು ಅಂದರೆ 25 ವರ್ಷಗಳ ಸರ್ವಿಸ್ ಮಾಡುವವರನ್ನು ತೆಗೆದು ಅವರ ಬದಲಿಗೆ ತಿಂಗಳಿಗೆ ರೂ. 12 ಸಂಬಳದ ಉಪಾಧ್ಯಾಯರನ್ನು ನೇಮಕಮಾಡಬೇಕು. ಅಂದಾಜು ಮಾಡಿದ ವಾರ್ಷಿಕ ಉತ್ಪತ್ತಿರೂ 100. ಅಂಗೀಕರಿಸಲಾಯಿತು.

4. ಶಾಲೆಗ ಬೇಕಾಗುವ ಮರಮುಟ್ಟು ಸಾಮಾನುಗಳಿಗ ಟೆಂಡರ್ ಕರೆಯುವದು, ಅಂಗೀಕರಿಸಲಾಯಿತು.

5. ಪ್ರತಿ ವರ್ಷವೂ ಆಕ್ಟೋಬರ್ ಮತ್ತು ನವಂಬರು ತಿಂಗಳುಗಳಲ್ಲಿ ಸ್ಕೂಲುಗಳ ಮತ್ತು ಗ್ರಾಮ ಮಾರ್ಗಗಳ ವಾರ್ಷಿಕ ರಿಪೇರಿಯನ್ನು ಅಜಮಾಯಿಸಲು ಮಾಸಿಕ ರೂ. 20 ರ ವೇತನದಲ್ಲಿ ಪ್ರತಿ ನಾಡುವಾರು ಸುಪರ್‌ವೈಸರುಗಳನ್ನು ನೇಮಕ ಮಾಡಬೇಕು, ಇದರಿಂದ ವಾರ್ಷಿಕ ಖರ್ಚು ರೂ. 440. ಅಂಗೀಕರಿಸಲಾಯಿತು.

6. ಲೈಬ್ರೆರಿ ಪುಸ್ತಕ ಕೊಂಡುಕೊಳ್ಳಲಿಕ್ಕೆಂದು ಅಲಾಯಿದ ಇಟ್ಟ ಹಣದಿಂದ ರೂ. 100 ಕಮ್ಮಿ ಮಾಡಬೇಕು. ಅಂಗೀಕರಿಸಲಾಯಿತು.

7. ಮನಿಯಾರ್ಡರು ಕಮಿಶನಿಗಾಗಿ ಇಟ್ಟ ಹಣದಿಂದ ರೂ. 300 ಕಮ್ಮಿಮಾಡಬೇಕು. ಅಂಗೀಕರಿಸಲಾಯಿತು.

8. ಗ್ರಾಂಟ್–ಇನ್ ಏಡ್ ಶಾಲೆಗಳಿಗಾಗಿಟ್ಟ ಮೊತ್ತವನ್ನು ರೂ. 700 ರಿಂದ ಹೆಚ್ಚಿಸುವದು. ಈಗ ಇರುವ ವಾಲಂಟಿಯರ ಸಂಬಳವನ್ನು 8ರಿಂದ 12ಕ್ಕೆ ಏರಿಸುವದು. ಅಂಗೀಕರಿಸಲಾಯಿತು.

3. ವೈದ್ಯ ಇಲಾಖೆ.

1. ವೀರಾಜಪೇಟೆ ಮತ್ತು ಮಡಿಕೇರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಹೆಚ್ಚಿನ ರಿಜರ್ವ್ ಸಬ್ ಅಸಿಸ್ಟೆಂಟ್ ಸರ್ಜನರ ಸಂಬಳದ ಬಡ್ತಿಯನ್ನು ಸರಕಾರದವರು ಕೊಡಬೇಕೆಂದು ಕೇಳಿಕೊಳ್ಳುವದು. ಬಹುಮತದಿಂದ ಅಂಗೀಕರಿಸಲಾಯಿತು.

2. 1939ನೇ ಏಪ್ರಿಲ್ 1ರ ಲಾಗಾಯತು 2 ವರ್ಷಗಳ ವರೆಗೆ ಸಬ್ ಅಸಿಸ್ಟೆಂಟ್ ಸರ್ಜನರುಗಳ, ಕಂಪೌಂಡರುಗಳ ಮತ್ತು ನರ್ಸುಗಳ ಸಂಬಳದ ಬಡ್ತಿಯನ್ನು ನಿಲ್ಲಿಸಬೇಕು. ಅಂದಾಜು ವಾರ್ಷಿಕ ಉಳಿಕೆ ರೂ. 800 ಅಂಗೀಕರಿಸಲಾಯಿತು.

3. ಎಟೆಂಡರರ ಸಂಖ್ಯೆಯಿಂದ 3 ಕಮ್ಮಿ ಮಾಡುವದು. ವಾರ್ಷಿಕ ಉಳಿತಾಯ ರೂ. 432. ಅಂಗೀಕರಿಸಲಾಯಿತು.

4 ಎರಡು ನರ್ಸುಗಳ ಹುದ್ದೆಯನ್ನು ತೆಗೆದು ಹಾಕುವದು. ವಾರ್ಷಿಕ ಉಳಿತಾಯ ರೂ. 1000. ಅಂಗೀಕರಿಸಲಾಯಿತು

5 1939ನೇ ಏಪ್ರಿಲ್ ಲಾಗಾಯತು ನರ್ಸುಗಳಿಗೆ ಮನೆ ಬಾಡಿಗಗಾಗಿ ಕೊಡುವ ಮಾಸಿಕ ರೂ. 5 ನ್ನು ನಿಲ್ಲಿಸುವದು. ವಾರ್ಷಿಕ ಉಳಿತಾಯ ರೂ. 300 ಒಪ್ಪಲಾಯಿತು.

6. ಔಷಧಿಗಳನ್ನು ಮತ್ತು ಸಲಕರಣೆಗಳನ್ನು ಕೊಂಡುಕೊಳ್ಳಲು ನಿಷ್ಕರ್ಷೆಯಿಸಿದ ಹಣದಿಂದ ರೂ 1000 ಕಮ್ಮಿ ಮಾಡಲು ಸಿವಿಲ್ ಸರ್ಜನರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

7. ಸಿವಿಲ್ ಸರ್ಜನರ ಆಫೀಸಿನ ಹೆಡ್ ಗುಮಾಸ್ತರಿಗೆ ಕೊಡುತ್ತಿರುವ 'ಸ್ಪೆಶ್ಯಲ್' ಪೇ'ಯನ್ನು ಈಗಿನವರು ನಿವೃತ್ತರಾದ ಮೇಲೆ ನಿಲ್ಲಿಸುವದು. ಅಂದಾಜು ವಾರ್ಷಿಕ ಉಳಿತಾಯ ರೂ 120 ಅಂಗೀಕರಿಸಲಾಯಿತು.

8. ಮರಮುಟ್ಟು ಸಾಮಾನುಗಳನ್ನು ಕೊಂಡುಕೊಳ್ಳಲು ಮತ್ತು ರಿಪೇರಿಗಾಗಿ ವಿಭಾಗಿಸಿರುವ ಹಣದಿಂದ ರೂ. 100 ಕಮ್ಮಿ ಮಾಡುವದು. ಅಂಗೀಕರಿಸಲಾಯಿತು.

9. ಸರಕಾರದ ಆರೋಗ್ಯ ಇಲಾಖೆಗೆ ಬೋರ್ಡಿನಿಂದ ಕೊಡುತ್ತಿರುವ ವಂತಿಗೆಯಲ್ಲಿ ರೂ. 2000 ಕಮ್ಮಿ ಮಾಡಬೇಕು.

ಬೋರ್ಡು ಅಂಗೀಕರಿಸಿತು.

10. ಬಿ ಶೆಟ್ಟಿ, ಸೋಮವಾರ ಪೇಟೆ, ಚೆಟ್ಟಳ್ಳಿ, ಮತ್ತು ಕೊಡ್ಲಿಪೇಟೆ ಡಿಸ್ಪೆನ್ಸರಿ ಆಸ್ಪತ್ರೆಗಳನ್ನು ನಡೆಸಲು ರೂ. 1000 ಖರ್ಚು ಹೆಚ್ಚಿಸಬೇಕು. (ರೂ. 100 ಬರೀ ಮರಮುಟ್ಟು ಸಾಮಾನುಗಳಿಗಾಗಿ)

ಅಂಗೀಕರಿಸಲಾಯಿತು.

11. 1939ನೇ ಏಪ್ರಿಲ್ 1ರಿಂದ ಆಯುರ್ವೇದ ಡಾಕ್ಟರಿಗೆ ಕೊಡುತ್ತಿರುವ ಮನೆ ಬಾಡಿಗೆಯನ್ನು ನಿಲ್ಲಿಸುವದು. ವಾರ್ಷಿಕ ಉಳಿತಾಯ ರೂ. 101.

ಅಂಗೀಕರಿಸಲಾಯಿತು.

ಬೋರ್ಡಿನ ಕೆಲವು ನೌಕರರು ನಿವೃತ್ತರಾಗುವದರಿಂದ ಪೆನ್ಶನಿಗಾಗಿಟ್ಟ ಹಣವನ್ನು ರೂ. 500 ರಿಂದ ಹೆಚ್ಚಿಸುವದು.

ಅಂಗೀಕರಿಸಲಾಯಿತು.

5. ಇತರ ವಿಷಯ.

ಜಾಡುಮಾಲಿಗಳ ಸಂಖ್ಯೆಯಲ್ಲಿ ಇನ್ನು ಕಮ್ಮಿ ಮಾಡುವದು. ವಾರ್ಷಿಕ ಉಳಿತಾಯ ರೂ. 288. ಅಂಗೀಕರಿಸಲಾಯಿತು.

ದೀಪದ ಸಮ್ಮಂಧ ಖರ್ಚಿನಲ್ಲಿ ರೂ. 100 ಕಡಿಮೆ ಮಾಡಬೇಕು. ಅಂಗೀಕರಿಸಲ್ಪಟ್ಟಿತು.

6. ಸಿವಿಲ್ ವರ್ಕ್ಸ್.

ಗ್ರಾಮದ ಮಾರ್ಗ ಸಲಕರಣೆಗಳಿಗಾಗಿಟ್ಟ ರೂಪಾಯಿಯಲ್ಲಿ ರೂ. 500 ಕಡಿಮೆ ಮಾಡಬೇಕು. ಮೋರೆಗಳನ್ನು ತೆಗೆಯಲಿಕ್ಕಾಗಿ ಇರಿಸಿದ ಹಣದಿಂದ 300 ಕಡಿಮೆ ಮಾಡಬೇಕು.

ಅಂಗೀಕರಿಸಲಾಯಿತು.

ಜೋಡುಪಾಲದಲ್ಲಿರುವ ಕಾವಲುಗಾರನ ಕೆಲಸವನ್ನು ತೆಗೆಯಬೇಕು ವಾರ್ಷಿಕ ಉಳಿತಾಯ ರೂ. 10–

ಅಂಗೀಕರಿಸಲಾಯಿತು.

ಮುಸ್ಲಿಂ ಲೀಗಿನ ಭವಿಷ್ಯವೇನು?

ಸರ್ ವಜೀರ್ ಹುಸೇನರ ಅಭಿಪ್ರಾಯ.

'ಮುಸ್ಲಿಂ ಜನಸಂಖ್ಯೆಯು ಹೆಚ್ಚಿರುವ ಪ್ರಾಂತಗಳಲ್ಲೇ ಮುಸ್ಲಿಂ ಲೀಗಿಗೆ ಬಹುಮತದ ಬೆಂಬಲವಿಲ್ಲ. ಮುಸ್ಲಿಂ ಲೀಗು ಸಿಂಧು ಪ್ರಾಂತದಲ್ಲಿ ತನ್ನ ಮಂತ್ರಿಮಂಡಲವನ್ನು ಸ್ಥಾಪಿಸಲು ಪ್ರಯತ್ನಿಸಿತು; ನಿರಾಶೆಗೊಂಡಿತು. ಆಸಾಮಿನಲ್ಲಿ ಕೆಲವು ದಿನ ಮುಸ್ಲಿಂ ಲೀಗಿನದೆಂದು ಹೇಳಿಸಿಕೊಳ್ಳುವ ಒಂದು ಮಂತ್ರಿ ಮಂಡಲವಿತ್ತು. ಅದೂ ಅದೃಶ್ಯವಾಯಿತು. ಹೀಗೆ ಮುಸ್ಲಿಮರ ಬಹುಮತವಿರುವ ಪ್ರಾಂತಗಳಲ್ಲೇ ಅದು ಮಂತ್ರಿ ಮಂಡಲಗಳನ್ನು ಸ್ಥಾಪಿಸಿ ಭಾರತದ ಮುಸ್ಲಿಮರ ಏಕಮೇವ ಸಂಸ್ಥೆಯೆಂದು ಹೇಳಿಸಿಕೊಳ್ಳಲು ಅಸಾಧ್ಯವೆಂದಾದ ಮೇಲೆ, ಹಿಂದೂ–ಮುಸಲ್ಮಾನರ ಪರ ಹೋರಾಡಿ ಜಯಪಡೆಯಲು ಲೀಗಿಗೆ ಎಷ್ಟು ಅರ್ಹತೆ ಇರಬಹುದು. **ಮುಸ್ಲಿಮರು ಬಹುಮತದಲ್ಲಿರುವ ಪ್ರಾಂತಗಳಲ್ಲೇ ಅದಕ್ಕೆ ಬೆಂಬಲವಿಲ್ಲವೆನ್ನುವಾಗ ಭಾರತದ ಮುಸಲ್ಮಾನರಿಗೆ ಲೀಗಿನಲ್ಲಿ ವಿಶ್ವಾಸವಿಲ್ಲವೆಂದೇ ಹೇಳಬೇಕಾಗಿದೆ' ಎಂದು ಸರ್ ವಜೀರ್ ಹುಸೇನರು ಸೂಚಿಸಿದ್ದಾರೆ.**

ಕೊಡಗು

ಜನವರಿ ತಾರೀಕು ೨೭ನೇ ಶುಕ್ರವಾರ ೧೯೩೯.

ಫೈನಾನ್ಸು ಕಮಿಟಿ.

ಕೊಡಗು ನ್ಯಾಯವಿಧಾಯಕ ಸಭೆಯ ಫೈನಾನ್ಸು ಕಮಿಟಿಯ ಮೀಟಿಂಗು ಈ ವರ್ಷ ಈ ತಾರೀಕು 19ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಈ ಕಮಿಟಿಯು ಕೌನ್ಸಿಲ್ ಚುನಾಯಿತ ಮೆಂಬರುಗಳಿಂದ ಆರಿಸಲ್ಪಟ್ಟ ಮೂವರು ಸದಸ್ಯರುಗಳಿಂದಲೂ ಸರ್ಕಾರದಿಂದ ಒಬ್ಬ ನೇಮಿತ (ವಾಡಿಕೆಯಾಗಿ ಯೂರೋಪಿಯನ್ ಪ್ಲಾಂಟರು ಮೆಂಬರು) ಮೆಂಬರರಿಂದಲೂ, ಚೀಫ್ ಫಾರೆಸ್ಟ್ ಆಫೀಸರಿಂದಲೂ, ಕೂಡಿ, ಫೈನಾನ್ಸ್ ಮೆಂಬರರಾದ ಕಮಿಶನರವರ ಅಧ್ಯಕ್ಷತೆಯಲ್ಲಿ ಸೇರುವದಾಗಿದೆ. ಫೈನಾನ್ಸು ಮೆಂಬರರು ಕೊಡಗು ಸರ್ಕಾರದ ಅಂದಾಜು ಬಡ್ಜೆಟ್ಟನ್ನು ತಯಾರಿಸಿ ಮಾರ್ಚಿ ತಿಂಗಳಲ್ಲಿ ನಡೆಯುವ ಕೌನ್ಸಿಲ್ ಬಡ್ಜೆಟ್ ಮೀಟಿಂಗಿಗೆ ಮುಂಚಿತವಾಗಿ ಜನವರಿ ತಾ. 20ರೊಳಗೆ ಈ ಫೈನಾನ್ಸು ಕಮಿಟಿಯ ಮುಂದೆ ಚರ್ಚೆಗೆ ಇಡುವದು ಪದ್ಧತಿಯಾಗಿದೆ. ಬಡ್ಜೆಟ್ಟಿನಲ್ಲಿ ಕಾಣಿಸಿರುವ ವಿಷಯಗಳನ್ನು ಚರ್ಚಿಸಿ ಅವುಗಳನ್ನು ಬದಲಾಯಿಸುವ ಉದ್ದೇಶದಿಂದಲೇ ಫೈನಾನ್ಸು ಕಮಿಟಿಯನ್ನು ಎಲ್ಲೆಲ್ಲೂ ನೇಮಿಸುವದಾಗಿದೆ. ಆದರೆ ನಮ್ಮ ಇಲ್ಲಿಯ ಕಮಿಟಿಯು ಬರೀ ಹೆಸರಿಗ ಮಾತ್ರ ಫೈನಾನ್ಸು ಕಮಿಟಿಯಾಗಿರುವದಲ್ಲದೆ ಅದಕ್ಕೆ ನಿಜಕ್ಕೂ ಹೆಚ್ಚಿನ ಅಧಿಕಾರಗಳೇನಾ ಇರುವಂತೆ ಕಾಣುವುದಿಲ್ಲ.

ಕೊಡಗು ಸರ್ಕಾರದ ಬಡ್ಜೆಟ್ಟಿನಲ್ಲಿ 50,000 ರೂ ಉಳಿತಾಯವು ಮಿಗ್ತಾಯವಾಗಿಡಲ್ಪಡಬೇಕೆಂದು ನಿಬಂಧನೆ ಇದೆ. ಅಂದಾಜು ಬಡ್ಜೆಟ್ಟಿನಲ್ಲಿ ಈ ಉಳಿವರಿಗಿಂತ ಹೆಚ್ಚಾಗಿ ಹಣ ಉಳಿಕೆ ಇದ್ದರೆ ಅದನ್ನು ಹೊಸ ಕೆಲಸಗಳಿಗೆ ವಿನಿಯೋಗಿಸುವ ಹಕ್ಕು ಫೈನಾನ್ಸ್ ಕಮಿಟಿಗೆ ಇದೆಯೆಂದು ಕಳೆದ ವರ್ಷದ ಫೈನಾನ್ಸು ಕಮಿಟಿ ಮೆಂಬರುಗಳು ಕೆಲವರು ವಾದಿಸಿ ಈ ವಿಷಯವು ಚೀಫ್ ಕಮಿಷನರಿಗೆ ತಿಳಿಸಲಾಯಿತು. ಆದರೆ ಇಂಥಾ ಹಕ್ಕು ಫೈನಾನ್ಸ್ ಕಮಿಟಿ ಮೆಂಬರರಿಗೆ ಇಲ್ಲವೆಂತಲೂ, ಬಡ್ಜೆಟ್ಟಿನಲ್ಲಿ ಒಂದು ಹೊಸ ಕೆಲಸಕ್ಕೆ ಹಣವನ್ನು ಇಡಬೇಕಾದರೆ ಅಷ್ಟೇ ಖರ್ಚಿನ ಬೇರೆ ಯಾವುದಾದರೊಂದು ಕೆಲಸವನ್ನು ವಜಾ ಮಾಡಬೇಕು; ಇಲ್ಲವೇ ಅಷ್ಟೇ ಉತ್ಪತ್ತಿಯ ವಿಧಾನವನ್ನು ತೋರಿಸಬೇಕೆಂತಲೂ ಚೀಫ್ ಕಮಿಷನರವರು ತೀರ್ಮಾನ ಕೊಟ್ಟಿದ್ದರು. ಇದರಿಂದ ಫೈನಾನ್ಸು ಕಮಿಟಿಯವರ ಅಧಿಕಾರವು ಬಹು ಸಂಕುಚಿತ ಮಾಡಲ್ಪಟ್ಟಿದೆ ಎಂಬುವುದರಲ್ಲಿ ಸಂಶಯವಿಲ್ಲ.

ಸಾಧಾರಣವಾಗಿ ಆಡಳಿತೆಯ ದಿನಚರಿಯ ಖರ್ಚಿನ ಬಡ್ಜೆಟ್ಟಿನಲ್ಲಿ ಹೆಚ್ಚು ಕಮ್ಮಿ ಮಾಡುವದು ಸಾಧ್ಯವಿಲ್ಲವೆಂದೇ ಹೇಳಬೇಕು. ಅದಲ್ಲದೆ ಹೊಸ ಕೆಲಸಗಳಿಗೆ ಏನಾದರೂ ಹಣವಿಡುವದಾದರೆ ಅದನ್ನೂ ಫೈನಾನ್ಸ್ ಮೆಂಬರರು ಇಂತಿಂಥಾ ಕೆಲಸಗಳಿಗೆಂದು ವಿಭಾಗಿಸಿಯೇ ಇಟ್ಟುಬಿಡುತ್ತಾರೆ. ಅವು ಸಾಧಾರಣವಾಗಿ ಅತ್ಯವಶ್ಯವಾದ ಕೆಲಸಗಳಿಗೇ ಇಡಲ್ಪಡುವದಾಗಿದೆ. ಈ ಕಮಿಟಿ ಮೆಂಬರುಗಳು ತಮಗೆ ಆಗತ್ಯವೂ, ಉಚಿತವೂ ಎಂದು ತೋರಿದ ಕಾರ್ಯಗಳಿಗೆ ಹಣವಿಡಬೇಕಾದರೆ ಫೈನಾನ್ಸು ಮೆಂಬರು ವಿಭಾಗಿಸಿರುವ ಹೊಸ ಕೆಲಸಗಳನ್ನು ವಜಾ ಮಾಡಿ ಆ ಹಣವನ್ನು ಮಾತ್ರ ಉಪಯೋಗಿಸಲು ಸಾಧ್ಯವಿದೆ. ಆದರೆ ಫೈನಾನ್ಸ್ ಮೆಂಬರು ಸೂಚಿಸುವ ಹೊಸ ಕೆಲಸಗಳು ಬಹು ಮುಖ್ಯವಾದವಾಗಿರುವ ಕಾರಣ ಅವುಗಳಲ್ಲಿ ಯಾವುದನ್ನಾದರೂ ವಜಾ ಮಾಡುವದು ಕಷ್ಟ. ಅಂದ ಮೇಲೆ ಫೈನಾನ್ಸು ಮೆಂಬರುಗಳಿಗೆ ಹೊಸ ಕೆಲಸಗಳಿಗೆ ವಿನಿಯೋಗಿಸಲು ಹಣವೇ ಇಲ್ಲವೆಂದಾಗುತ್ತದೆ. ಇದಲ್ಲದೆ ಫೈನಾನ್ಸ್ ಮೆಂಬರು ತಯಾರಿಸಿದ ಅಂದಾಜು ಬಡ್ಜೆಟ್ಟನ್ನು ಓದಿ ತಿಳಿದುಕೊಂಡು ಅದಕ್ಕೆ ಒಪ್ಪಿಗೆಯನ್ನೀಯಲು ಮಾತ್ರ ಸೇರುವದೆಂದಾಗುತ್ತದೆ. ಇಂಥಾ ಅಧಿಕಾರವಿಲ್ಲದ ಕಮಿಟಿಯ ಮೀಟಿಂಗಿನಿಂದ ಪ್ರಯೋಜನವೇನೂ ಇಲ್ಲವೆಂಬುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ಈ ವರ್ಷದ ಕಮಿಟಿ ಮೆಂಬರುಗಳು—ಕನಿಷ್ಟ 20,000 ರೂಪಾಯಿಗಳನ್ನಾದರೂ ಫೈನಾನ್ಸು ಕಮಿಟಿಯವರು ಸೂಚಿಸುವ ಹೊಸ ಕೆಲಸಗಳಿಗಾಗಿ ವಿನಿಯೋಗಿಸಲು ಮಾತ್ರವಾಗಿ ಅಂದಾಜು ಬಡ್ಜೆಟ್ಟಿನಲ್ಲಿ ಇಡಬೇಕೆಂದು ಸಲಹೆ ಕೊಟ್ಟಿರುವರೆಂದು ತಿಳಿಯಬರುತ್ತದೆ. ಇದು ನ್ಯಾಯವಾದ ಸಲಹೆ ಎಂಬದನ್ನು ಯಾರೂ ಒಪ್ಪಿಗೊಳ್ಳಬಲ್ಲರು. ಈ ಸಲಹೆಯನ್ನಾದರೂ ಚೀಫ್ ಕಮಿಷನರವರು ಅಂಗೀಕರಿಸದೆ ಹೋದರೆ ಫೈನಾನ್ಸ್ ಕಮಿಟಿಯವರು ಸಭೆ ಸೇರುವದು ವ್ಯರ್ಥವೆಂದೇ ಹೇಳಬೇಕಾಗಿದೆ. ಇದರಿಂದ ಕಮಿಟಿ ಮೆಂಬರುಗಳು ತಮ್ಮ ಸಮಯವನ್ನು ಕಳಕೊಂಡಂತಾಗುವದು; ಮತ್ತು ಅವರ ಭತ್ಯಕ್ಕಾಗಿ ಮಾಡುವ ಖರ್ಚು ನಿಷ್ಪ್ರಯೋಜನವಾಗುವದು. ಆದ ಕಾರಣ ಸ್ಥಳೀಯ ಸರ್ಕಾರದವರು ಫೈನಾನ್ಸು ಕಮಿಟಿಯವರ ಈ ಸಲಹೆಗೆ ತಕ್ಕ ಗಮನವನ್ನೀಯುವರಾಗಿ ನಂಬುತ್ತೇವೆ.

ಅಂದಾಜು ಬಡ್ಜೆಟ್ಟಿನ ಮೇಲೆ 1939–40ರಲ್ಲಿ ಕೊಡಗಿನ ಸರ್ಕಾರದ ಆದಾಯ ವೆಚ್ಚದಲ್ಲಿ 99,000 ರೂ. ಉಳಿವರಿಯು ಕಂಡು ಬರುತ್ತೆ. 1938–39ರಲ್ಲಿ ಅಂದರೆ ಹಾಲಿ ವರ್ಷದಲ್ಲಿ 1,42,000 ರೂ ಉಳಿವರಿಯಾಗುವದೆಂದು ಅಂದಾಜು ಮಾಡಲಾಗಿದೆ. ಈ ಉಳಿವರಿಯನ್ನು ಸೇರಿಸಿದರೆ 1939–40ರ ಅಂತ್ಯದಲ್ಲಿ 2,41,000 ರೂಪಾಯಿ ಉಳಿವರಿಯಾಗುವದೆಂದು ಅಂದಾಜು ಮಾಡಬಹುದು. ಬರುವ ವರ್ಷಕ್ಕೆ ಇಂಡಿಯಾ ಸರ್ಕಾರದಿಂದ 1,62,200 ರೂ ವಂತಿಗೆಯು ದೊರೆಯುವದು. ಈ ವಂತಿಗೆಯನ್ನು ಲೆಕ್ಕಕ್ಕೆ ಸೇರಿಸದೆ 1939–40ನೇ ವರ್ಷದ ಆದಾಯ ವೆಚ್ಚವನ್ನೇ ಗಣನೆಗೆ ತೆಗೆದುಕೊಂಡರೆ ಕೊಡಗಿನ ಸರ್ಕಾರದ ವೆಚ್ಚವು ಆದಾಯಕ್ಕಿಂತ 17,200 ರೂ ಹೆಚ್ಚಾಗುವದು. ಆದಾಯವನ್ನು ಲಕ್ಷ್ಯಗಟ್ಟದೆಯಲ್ಲಿ ಮಾಡುತ್ತಿದ್ದ ಆ ಆಡಳಿತ ಕ್ರಮದಲ್ಲಿ ಬರುವ ವರ್ಷ ಇಷ್ಟೊಂದು ಚಿಕ್ಕ ವ್ಯತ್ಯಾಸವು ಕಂಡು ಬರಲು ಸಿಬ್ಬಂದಿ ಖರ್ಚೆಯೇ ಮುಖ್ಯ ಕಾರಣ. ಅಂದಾಜು ಬಡ್ಜೆಟ್ಟಿನಲ್ಲಿ ಗಜೆಟೆಡ್ ಉದ್ಯೋಗಸ್ಥರಲ್ಲದವರ ಸಿಬ್ಬಂದಿ ಖರ್ಚೆಯ ಲೆಕ್ಕ ಮಾತ್ರ ಹಾಕಲಾಗಿದೆ. ಇದರಿಂದಲೇ ಚಿಕ್ಕ ಚಿಕ್ಕ ಉದ್ಯೋಗಸ್ಥರನೇಕರನ್ನು ಕೆಲಸದಿಂದ ನಿವೃತ್ತಿಗೊಳಿಸಿದರೂ ಕೂಡ ಖರ್ಚಿನಲ್ಲಿ ದೊಡ್ಡ ಖರ್ಚೆಯನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಮತ್ತು ಕೆಳ ನೌಕರರ ಸಂಖ್ಯೆಯನ್ನು ಬಹುಮಟ್ಟಿಗೆ ಕಡಿಮೆ ಮಾಡಿರುವುದರಿಂದ ಆಡಳಿತೆಯ ಕಾರ್ಯಸಾಧಕತ್ವಕ್ಕೆ ಕುಂದುಂಟಾಗುವ ಸಂಭವ ಇದೆ. ಅದರ ಬದಲು ದೊಡ್ಡ ದೊಡ್ಡ ಸಂಬಳ ತೊಡುವ ಗಜೆಟೆಡ್ ಉದ್ಯೋಗಸ್ಥರ ಸಂಖ್ಯೆಯನ್ನೂ, ಸಂಬಳವನ್ನೂ ಕಡಿಮೆ ಮಾಡಿದ್ದ ಪಕ್ಷದಲ್ಲಿ ಆಡಳಿತದ ಖರ್ಚು ಬಹುಮಟ್ಟಿಗೆ ಕಡಿಮೆಯಾಗಿ ಆಡಳಿತವು ಸುಸೂತ್ರವಾಗಿ ನಡೆಯಲು ಅನುಕೂಲವಾಗುತ್ತಿತ್ತು. ದೊಡ್ಡ ಉದ್ಯೋಗಸ್ಥರ ಖರ್ಚೆಯ ವಿಚಾರದಲ್ಲಿ ಇಂಡಿಯಾ ಸರ್ಕಾರದವರ ಮಂಜೂರಿ ಇಲ್ಲ ಬಾರದಿರುವುದು ಆಶ್ಚರ್ಯವೇ ಸರಿ. ಈ ಸುಮಾರು ಬರುವ ಮುಂಚಿನಿಂದಲೂ ಕೆಳ ನೌಕರರನ್ನು ಮನೆಗೆ ಕಳುಹಿಸುವ ವಿಚಾರವು ಬಹು ಜರೂರಾಗಿ ನಡೆಯುತ್ತಿರುವದು ಅವಕ್ಕಿಂತಲೂ ಆಶ್ಚರ್ಯಕರವೂ, ವಿಷಾದಕರವೂ ಆಗಿದೆ. ಸಾವಿರಗಟ್ಟಲೆ ಸಂಬಳ ಪಡೆಯುವ ಉದ್ಯೋಗಸ್ಥರ ಸಂಖ್ಯೆಯಲ್ಲಿಯೂ, ವೇತನದಲ್ಲಿಯೂ ನ್ಯಾಯವಾದ ಖರ್ಚೆಯನ್ನು ಮಾಡಿದ್ದೇ ಆದರೆ ಇಲ್ಲಿಯ ಸರ್ಕಾರದ ಬಡ್ಜೆಟ್ಟನ್ನು ಸರಿಗಟ್ಟಲು ಸುಲಭ ಸಾಧ್ಯವಾಗುವದೆಂಬುದು ಬರುವ ವರ್ಷದ ಅಂದಾಜು ಬಡ್ಜೆಟ್ಟಿನಿಂದಲೇ ವೇದ್ಯವಾಗುವದು. **ಇಲ್ಲಿಯ ಆಡಳಿತದಲ್ಲಿ ತಲೆಭಾರ ಸರ್ಕಾರದ ಪದ್ಧತಿಯನ್ನು ಹೋಗಲಾಡಿಸುವ ನ್ಯಾಯವಾದ ಸಿಬ್ಬಂದಿ ಖರ್ಚೆಯು ಎಂದಿಗಾಗುವದೆಂದು ಇದಿರು ನೋಡುತ್ತಿದ್ದೇವೆ.**

ದಿವಂಗತ
ಪಂಡಿತ ಸುಬ್ಬಣ್ಣಯ್ಯನವರು.

ಪರಂಧಾಮವನ್ನೈದಿದ ಎನ್. ಆರ್. ಸುಬ್ಬಣ್ಣಯ್ಯನವರನ್ನು ಅರಿಯದ ಕೊಡಗಿನವರು ಮತ್ತು ಮೈಸೂರಿನವರು ಅತಿ ವಿರಳ. ಈಗ್ಯೆ 71 ವರ್ಷಗಳ ಹಿಂದೆ ಗೋಕುಲಾಷ್ಟಮಿ ದಿನ ಇವರು ಸಿದ್ದಗ್ರಾಮದಲ್ಲಿ ಜನಿಸಿ, ತಮ್ಮ ಜೀವನ ಯಾತ್ರೆಯಲ್ಲಿ ಖ್ಯಾತಿಯನ್ನು ಪಡೆದು ಕಳೆದ ತಾ॥ 19-1-39ನೇ ಗುರುವಾರ ರಾತ್ರಿ ಇಹಲೋಕವನ್ನು ತ್ಯಜಿಸಿದರು. ಇವರು ಧನವಂತರಿದ್ದಾಗ್ಯೂ ಕೂಡ ಸ್ವಾಭಿಮಾನವನ್ನು ತ್ಯಜಿಸಿ ಸ್ವದೇಶಾಭಿಮಾನದಿಂದಲೇ ತನ್ನ ಹೃದಯವನ್ನು ಬೆಳೆಸಿದ್ದರು. ಹೆಚ್ಚೇಕೆ, ಅವರ ಉದಾರತ್ವ ಹಾಗೂ ದೇಶಪ್ರೇಮವು ಈ ಕೆಳಗಿನ ಆದರ್ಶಗಳಿಂದಲೇ ಎಲ್ಲರಿಗೂ ವಿದಿತವಾಗುವದು

ಇವರು ಕೆಲವು ವರ್ಷಗಳ ವರೆಗೆ ಕೌನ್ಸಿಲು ಸದಸ್ಯರಾಗಿದ್ದು ದೇಶಾಭಿವೃದ್ಧಿಗೆ ಬೇಕಾದ ಅನೇಕ ಕಾರ್ಯಗಳನ್ನು ನೆರವೇರಿಸಲು ಕಾರಣಕರ್ತರಾಗಿದ್ದರು. ಘೋರವಾದ ಇಲಾಖೆಯ ಜಾರಿಗೊಳಿಸಿದ ನಿಬಂಧನೆಗಳ ಮೇಲೆ ತಮ್ಮ ಟೀಕೆಯನ್ನು ಜನರಲ್ಲಿ ಬೋಧಿಸಿ ಅವರಲ್ಲಿರುವ ನ್ಯೂನತೆಗಳನ್ನು ತೋರ್ಪಡಿಸಿ, ದೇಶಕ್ಕೆ ಹಿತವಾಗುವ ಬದಲಾವಣೆಗಳನ್ನು ತರಲು ನಿಂತದ್ದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇರುವದು. ತನ್ನ ಈ 71ನೇ ವಯಸ್ಸಿನಲ್ಲಿಯೂ ಸಹ ದೇಶಾಭ್ಯುದಯಕ್ಕೆ ಅಖಂಡವಾಗಿ ಶ್ರಮಿಸುತ್ತಿದ್ದ ಈ ಮಹನೀಯರು ತಮ್ಮ ಹಳೆಯದಲ್ಲಿ ಎಷ್ಟು ಕೆಲಸ ಮಾಡಿರಬಹುದೆಂಬದನ್ನು ವಾಚಕರೇ ತಿಳಿಯತಕ್ಕದ್ದು. ಇಂಗ್ಲಿಷ್ ಭಾಷೆಯ ಗಂಧವನ್ನೇ ಅರಿಯದ ಇವರು ಇಂಗ್ಲಿಷ್ ಭಾಷೆಯಲ್ಲಿ ಬರುವ ಎಲ್ಲಾ ಸಮಾಚಾರ ಪತ್ರಿಕೆಗಳನ್ನೂ ಅಥವ ರೂಲುಗಳನ್ನೂ ಕನ್ನಡದಲ್ಲಿ ತಮ್ಮ ಸ್ವಜನರಿಂದ ಸಂಗ್ರಹಿಸಿ, ಅವರ ಸಾಧಕಬಾಧಕಗಳನ್ನು ಕೂಲಂಕುಶವಾಗಿ ವಿಮರ್ಶಿಸಿ ಸರ್ವ ಜನರ ನಿವಾರಣೋಪಾಯವನ್ನು ಬೋಧಿಸುವ ಸಾಮರ್ಥ್ಯವು ಇವರಿಗಿದ್ದುದರಿಂದ ಅವರು ದೊರಕಿಸಲು ಹೆಸರಾದ ಸಂಗತಿಯೇ ಸರಿ.

ಇದೇ ಅಲ್ಲ ಇವರು ಜಮೀನ್ದಾರರ ಸಂಘದ ಕಾರ್ಯಕರ್ತರಲ್ಲಾ ಅಗ್ರಗಣ್ಯರಿದ್ದರು. ನಿರ್ಬಂಧನೆಯಿಂದ ತಮ್ಮ ಸೇವೆಯನ್ನು ಸಲ್ಲಿಸಿರುವರಲ್ಲದೆ ಈ ಉದ್ದೇಶಕ್ಕಾಗಿ ಮಡಿಕೇರಿಯಲ್ಲಿರುವ ಕಟ್ಟಡಕ್ಕೆ ತುಂಬಾ ಧನ ಸಹಾಯ ಮಾಡಿದರು. ಇಂಥಾ ಅಖಂಡ ಸೇವೆ ಮಾಡಿರುವ ಇವರ ಹೆಸರು ಚಿರಸ್ಮರಣೀಯವಾಗಿರತಕ್ಕದ್ದು. ಇವರುಗಳ ಗುಣ ಕಥನಗಳನ್ನು ಹೇಳಲು ಸಾಧ್ಯವಿಲ್ಲ. ಒಟ್ಟಾಗಿ ಹೇಳುವದಾದರೆ ಇವರ ದೇಶಾಭಿಮಾನ, ರಾಜಕೀಯ ಹಾಗೂ ಸಾಮಾಜಿಕ ಸಂಗತಿಗಳಲ್ಲಿ ಇವರ ವಿವೇಚನಾ ಶಕ್ತಿ, ಕಾರ್ಯಧುರಂಧರತೆ ಮೊದಲಾದವು ಇವರು ಮಾಡಿದ ಅನೇಕ ಕಾರ್ಯಗಳಲ್ಲಿ ಅಪರ್ವವಾಗಿರುತ್ತೆ. ಇಂಥಾ ನಮ್ಮ ನಾಡಿನ ಮುಂದಾಳು ನಮ್ಮನ್ನು ತೊರೆದು, ನಮ್ಮ ದೃಷ್ಟಿಪಥದಿಂದ ಜಗನ್ನಿಯಾಮಕನ ಲೀಲೆಗನುಗುಣವಾಗಿ ಅದೃಶ್ಯವಾದರೂ ನಮ್ಮ ಸ್ಮೃತಿ ಪಥದಿಂದ ಎಂದೂ ಇವರ ಸೇವೆ ಹುದುಗಿ ಹೋಗಲಿಕ್ಕಿಲ್ಲ. **ಹೇಗೂ ಮೃತರ ಆತ್ಮಕ್ಕೆ ಶಾಂತಿಯನ್ನೂ, ದುಃಖಾಂಬುಧಿಯಲ್ಲಿ ಮುಳುಗಿರುವ ಅವರ ಕುಟುಂಬಕ್ಕೆ ಸಹನ ಶಕ್ತಿಯನ್ನೂ ಜನತಾ ಜನಾರ್ದನನು ಕೊಡಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುವೆವು.**

ರಾಜಕೋಟೆ ಅರಸರ ವಚನಭಂಗ.

—:0:—

ಸತ್ಯಾಗ್ರಹ ಪ್ರಾರಂಭಿಸಲ್ಪಡುವ ಪ್ರಸಂಗ.

ಸರದಾರ ವಲ್ಲಭಾಯಿ ಪಟೇಲ್.

ಸರ್ದಾರ್ ಪಟೇಲ್ ಮತ್ತು ರಾಜಕೋಟೆಯ ಅರಸು ಠಾಕೋರ್ ಸಾಹೇಬರೊಡನೆ ನಡೆದ ಸಂಧಾನವಾಗಿ ಸಾಹೇಬರು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಕೊಡುವೆನೆಂದು ಹೇಳಿದ್ದು ಪತ್ರಿಕೆಗಳ ಮೂಲಕ ಜನಜನಿತವಾಗಿದೆ. ರಾಜಕೋಟೆ ಸಂಸ್ಥಾನದ ಅರಸರ ಧೈರ್ಯವನ್ನು ಎಲ್ಲಾ ಪತ್ರಿಕೆಗಳೂ ವರ್ಣಿಸಿ ರಾಜಕೋಟೆಯನ್ನು ಎಲ್ಲರ ಮನಸಿನಲ್ಲೂ ಚಿತ್ರಿಸಿದ್ದವು. ಆದರೆ ಇಂಥೀಗ ಸರದಾರ ಸಾಹೇಬರೊಡನೆ ನಡೆದ ಸಂಧಾನವು ವಿಫಲವಾಗಿದೆ. ಠಾಕೋರ ಸಾಹೇಬರು ತನ್ನ ವಚನವನ್ನು ಬದಲಾಯಿಸಿರುವರು. ಇದಕ್ಕೆ ಹೊರಗಿನ ಪರ ಮಂತ್ರಾಲೋಚನೆಯೇ ಕಾರಣವನ್ನಬಹುದು. ಮುಖ್ಯತ್ವದಿಂದ ತನ್ನ ಮೊದಲಿನ ನಿರ್ಧಾರಕ್ಕಾಗಿ ಆಶೀರ್ವಾದವನ್ನು ಪಡೆದ ಠಾಕೂರ ಸಾಹೇಬರು ಇಂದು ಅದಕ್ಕೆ ಪ್ರತಿಕೂಲ ಹೋಗುವದು ಶೋಚನೀಯ ವಿಚಾರ. ಅಂತು ರಾಜಕೋಟೆಯಲ್ಲಿ ಬಿಕ್ಕಟ್ಟು ತಲೆದೋರುವ ಸಂಭವವಿದೆ. ರಾಜಕೋಟೆಯ ಸರ್ಕಾರಕ್ಕೂ, ಪ್ರಜಾಮಂಡಲಕ್ಕೂ ಚರ್ಚೆ ನಡೆದು ಸರ್ಕಾರವು ಪಟೇಲರೊಂದಿಗೆ ಮಾಡಿದ ಸಂಧಾನದಂತೆ ನಡೆಯಲು ತಯಾರಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಪ್ರಜಾಮಂಡಲವು ತನ್ನ ಮುಂದಿನ ಹೋರಾಟವನ್ನು ಕೈಕೊಳ್ಳಲು ತಯಾರಿರುವದು. ಇದಕ್ಕೆ ಸಮ್ಮಂಧಪಟ್ಟು ಈವರೆಗೆ ನಡೆದ ಪತ್ರ ವ್ಯವಹಾರಗಳನ್ನೆಲ್ಲಾ ಬಹಿರಂಗಪಡಿಸಿ ಸರದಾರ ಪಟೇಲರ ನೇತೃತ್ವದಲ್ಲಿ ಅಖಂಡ ಸತ್ಯಾಗ್ರಹವನ್ನು ಕೈಕೊಳ್ಳುವ ಏರ್ಪಾಡು ನಡೆಯುತ್ತಿದೆ. ಬರುವ ವಾರದಲ್ಲೇ ಸತ್ಯಾಗ್ರಹವು ಪ್ರಾರಂಭವಾಗಬಹುದೆಂದು ನಂಬಲಾಗಿದೆ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 31-12-38 ರಲ್ಲು ಮೆ. ಪಿ. ಐ. ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ಬೆಳಿಗ್ಯೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ನಡೆಯಿತು.

ಹಾಜರಿದ್ದ ಡೈರೆಕ್ಟರುಗಳು.

1. ಮೆ. ಗಳಾದ ಪಿ. ಐ. ಬೆಳ್ಳಿಯಪ್ಪನವರು (ಪ್ರೆಸಿಡೆಂಟರು) 2. ಮಡೆಯಂಡ ದೇವೈಯ್ಯನವರು, 3. ರಾ. ಬ. ಪಟ್ಟಮಾಡ ದೇವೈಯ್ಯನವರು, 4. ಕಾಕಮಾಡ ಗಣಪತ್ತಿಯವರು, 5. ಕೆ. ಸಿ. ಕರುಂಬೈಯ್ಯನವರು, 6. ಕಂಜಿತಂಡ ಕುಶಾಲಪ್ಪನವರು, 7. ಐ. ಪಿ. ಕಾರ್ಯಪ್ಪನವರು, 8. ಪಳಂಗಂಡ ಕರುಂಬಯ್ಯನವರು 9. ಹೆಚ್. ಯಂ. ಕೃಷ್ಣಣ್ಣನವರು, 10. ಯಂ. ಯಸ್. ಸೋಮಯ್ಯನವರು, 11. ಯಸ್. ಯನ್. ರಾಮಶೆಟ್ರು, 12. ಯನ್. ಬಿ. ಸೋಮಯ್ಯನವರು.

ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಮತ್ತು ಸೀನಿಯರ್ ನಾನ್ ಕ್ರೆಡಿಟ್ ಇನ್ಸ್‌ಪೆಕ್ಟರೂ ಸಹ ಹಾಜರಿದ್ದರು.

ಗೈರಾಜರು ಆದ ಡೈರೆಕ್ಟರುಗಳು.

1. ಮೆ. ಗಳಾದ ಪಿ. ಜಿ. ಐಯ್ಯಪ್ಪನವರು, 2. ಬೆಟ್ಟೋಳಂಡ ಸಿ. ಮಾಚೈಯ್ಯನವರು, 3. ಯನ್. ಶಂಕರೈಯ್ಯನವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು

2. ಮೆ. ಯನ್. ಯಸ್. ರಾಮಶೆಟ್ರು, ಬ್ಯಾಂಕಿನ ಗೌರವ ಸೆಕ್ರೆಟರಿಯಾಗಬೇಕೆಂದ ಮೆ. ಹೆಚ್. ಯಂ. ಕೃಷ್ಣಣ್ಣನವರು ಸೂಚಿಸಿದನ್ನು ಮೆ. ಐ. ಪಿ. ಕಾರ್ಯಪ್ಪನವರು, ಅನುಮೋದಿಸಿದ ಮೇರೆ ಸರ್ವಸಮ್ಮತದಿಂದ ಅವರನ್ನು ಬ್ಯಾಂಕಿನ ಸೆಕ್ರೆಟರಿಯವರನ್ನಾಗಿ ಆರಿಸಲಾಯಿತು.

3. ರಾ. ಬ. ಪಟ್ಟಮಾಡ ದೇವೈಯ್ಯನವರು, ಬ್ಯಾಂಕಿನ ಟ್ರೆಜರರ್ (ಖಜಾನ್ಚಿ) ಆಗಬೇಕೆಂತ ಮೆ. ಯನ್. ಬಿ. ಸೋಮಯ್ಯನವರು ಸೂಚಿಸಿದ್ದನ್ನು ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದ ಮೇರೆ ಸರ್ವಸಮ್ಮತದಿಂದ ಅವರನ್ನು ಬ್ಯಾಂಕಿನ ಟ್ರೆಜರರನ್ನಾಗಿ ಆರಿಸಲಾಯಿತು.

4. ಈ ಕೆಳಗಿನ ಮಹನೀಯರನ್ನು ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳನ್ನಾಗಿ ಆರಿಸಲಾಯಿತು.

1. ರಾ. ಬ. ಪಿ. ದೇವಯ್ಯನವರು, 2. ಮೆ. ಐ. ಪಿ. ಕಾರ್ಯಪ್ಪನವರು, 3. ಕೆ. ಸಿ. ಕರುಂಬಯ್ಯನವರು, 4. ಹೆಚ್. ಯಂ. ಪುಟ್ಟಣ್ಣನವರು, 5. ಯಂ. ಯಸ್. ಸೋಮೈಯ್ಯನವರು, ಮತ್ತು 6. ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಳಿಯಪ್ಪನವರು (ಪ್ರೆಸಿಡೆಂಟರು) 7. ಸೆಕ್ರೆಟರಿಯವರಾದ ಮೆ. ಯಸ್. ಯನ್. ರಾಮಶೆಟ್ರು (ಗೌರವ ಕಾರ್ಯದರ್ಶಿ.)

5. ಈ ಕೆಳಗಿನ ಮಹನೀಯರನ್ನು ಸಾಲನಿವಾರಣೆ ಸಮಿತಿಯ ಡೈರೆಕ್ಟರುಗಳನ್ನಾಗಿ ಆರಿಸಲಾಯಿತು.

1. ಮೆ. ಗಳಾದ ಕೆ. ಸಿ. ಕರುಂಬಯ್ಯನವರು, 2. ಕೆ. ಕೆ. ಗಣಪತ್ತಿಯವರು, 3. ಕೆ. ಯಂ ಕುಶಾಲಪ್ಪನವರು, 4. ಪಿ. ಐ. ಬೆಳ್ಳಿಯಪ್ಪನವರು, 5 ಐ ಪಿ. ಕಾರ್ಯಪ್ಪನವರು, 6. ರಾ. ಬ. ಪಟ್ಟಮಾಡ ದೇವಯ್ಯನವರು, 7. ಯನ್. ಯಸ್. ರಾಮಶೆಟ್ರು (ಗೌರವ ಕಾರ್ಯದರ್ಶಿ.)

6. ಬಾಳಜಿ ಸಂಘದ ಸೆಕ್ರೆಟರಿಯವರು-ಬ್ಯಾಂಕಿಗೆ ಪಾವತಿ ಮಾಡಲು ಬಾಕಿರುವ ಸಾಲಕ್ಕೆ 10 ಕಂತುಗಳ ಬದಲು 20 ಕಂತುಗಳನ್ನು ಕೊಡಿಸಿಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ನೆರವೇರಿಸಲು ಸಾಧ್ಯವಿಲ್ಲವೆಂತ ತೀರ್ಮಾನಿಸಲಾಯಿತು.

7. ಆರ್ಜಿ ಸಂಘದ ಪ್ರೆಸಿಡೆಂಟರು-ತಮ್ಮ ಬಾಬ್ತು ಬ್ಯಾಂಕಿನಲ್ಲಿರುವ ರಿಜರ್ವ್ ಫಂಡಿನ ಹಣದ ಪೈಕಿ ನಾನೂರು ರೂಪಾಯಿ ಸಾಲ ಕೊಡಬೇಕಾಗಿ ಅರ್ಜಿ ಬರೆದುಕೊಂಡದ್ದನ್ನು ಆಲೋಚಿಸಲಾಗಿ ಸದರಿಯವರ ಅರ್ಜಿಯನ್ನು ತಿರಸ್ಕರಿಸಲಾಯಿತು.

8. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯಿಂದ ಬ್ಯಾಂಕಿನ ಶೇರು ಹಣ ವಾಪ್ಸು ಮಾಡುವ ವಿಷಯ ತಾ. 17-12-38 ರ ಪತ್ರ ಬಂದದ್ದನ್ನು ಮತ್ತು ಸೇವಿಂಗ್ಸ್ ಬ್ಯಾಂಕಿನ ದಣದ ಬಾಬಿನಲ್ಲಿ ಕೊಡಗು ಲೋಕಲ್ ಬೋರ್ಡಿಗೆ ಬಂದ ರಿಜಿಸ್ಟರ್ ನೋಟೀಸ್ ಸಹ ಓದಿ ರೆಕಾರ್ಡು ಮಾಡಲಾಯಿತು.

9. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರ ಪತ್ರದ ಮೇರೆ ರಿಜಿಸ್ಟ್ರಾರರಿಂದ ಬಂದ ನಂಬ್ರು 955 ತಾ. 22-12-38 ರ ಇಂಪಾರ್ಟಂಟಿನ ಪ್ರಕಾರ ಬ್ಯಾಂಕರುಗಳ ಇಂಡಿಯನ್ ಇನ್ಸ್ಟಿಟ್ಯೂಟಿಗೆ ಈಗಿರುವ ಬ್ಯಾಂಕಿನ ಸಿಬ್ಬಂದಿಗಳಿಗೆ ಟ್ರೈನಿಂಗ್ ಕೊಡುವ ಉದ್ದೇಶ್ಯ ಈ ಬ್ಯಾಂಕು ಮೆಂಬರಾಗಬೇಕಾಗಿ ಬರಕೊಂಡ ಪತ್ರ ಓದಲಾಯಿತು.

ಆದರೆ ಈಗ ತತ್ಕಾಲಕ್ಕೆ ಬ್ಯಾಂಕರುಗಳ ಇಂಡಿಯನ್ ಇನ್ಸ್ಟಿಟ್ಯೂಟಿಗೆ ಮೆಂಬರಾಗಲು ಆಗುವುದಿಲ್ಲವಾದ್ದರಿಂದ ಈ ಸಂಗತಿ ರಿಜಿಸ್ಟ್ರಾರವರಿಗೆ ತಿಳಿಸುವಂತೆ ತೀರ್ಮಾನವಾಯಿತು.

10. ಒಬ್ಬ ಮಹನೀಯರು ತಮ್ಮ ಬಾಬ್ತು ಠೇವಣಾತಿ ಹಣವನ್ನು ವಾಯಿದೆ ಗತಿಸುವ ಮೊದಲೇ ವಾಪ್ಸು ಕೊಡಬೇಕಾಗಿ ಪತ್ರ ಬರೆದುಕೊಂಡ ಮೇರೆ ಹಾಗೆ ವಾಪ್ಸು ಕೊಡಲು ಆಗುವುದಿಲ್ಲವೆಂತ ತೀರ್ಮಾನವಾಯಿತು.

11. ಒಬ್ಬ ಮಹನೀಯರು ತನ್ನ ಖಾತೆ ಹೆಂಡತಿ ಹೆಸರಿನಲ್ಲಿರುವ ಠೇವಣಾತಿ ಹಣವನ್ನು ತನ್ನ ಮೈನರು ಮಕ್ಕಳ ಹೆಸರಿಗೆ ವರ್ಗಾಯಿಸಬೇಕಾಗಿ ಬರಕೊಂಡ ಅರ್ಜಿಯನ್ನು ಆಲೋಚಿಸಿ, ಸದರಿ ಮೈನರುಗಳಿಗೆ ಯಾರು ಗಾರ್ಡಿಯನ್ ಆಗುತ್ತಾರೆಂತ ಅವರನ್ನು ಕೇಳಬೇಕೆಂತ ತೀರ್ಮಾನವಾಯಿತು.

12. ತಿರುವಾಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕು ಮತ್ತು ಅದರ ಠೇವಣಾತಿದಾರರು ಮತ್ತು ಪಾಲುದಾರರಿಗೂ ಏರ್ಪಡಿಸಲಿರುವ ಹೊಸ ಯೋಜನೆಯನ್ನು ಆಲೋಚಿಸುವ ಮೀಟಿಂಗಿಗೆ ಪ್ರತಿನಿಧಿಯಾಗಿ ಪ್ರಾಕ್ಸಿ ಕಳುಹಿಸುವ ವಿಷಯ ಆಲೋಚಿಸಲಾಯಿತು.

ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಳಿಯಪ್ಪನವರನ್ನು ಈ ಬ್ಯಾಂಕಿನ ಪರ ಪ್ರತಿನಿಧಿಯಾಗಿ ಮದರಾಸಿನಲ್ಲಿ ಜನವರಿ ತಾ. 28 ರಲ್ಲು ನಡೆಯುವ ಠೇವಣಾತಿದಾರರ ಮೀಟಿಂಗಿಗೆ ಕಳುಹಿಸಬೇಕೆಂತ ತೀರ್ಮಾನವಾಯಿತು.

13. ಕಿಗ್ಗಟ್ಟುನಾಡು ಕ್ರೆಡಿಟ್, ಲೋನ್, ಸೇಲ್ ಅಂಡ್ ಸಪ್ಲೈ ಸಂಘಕ್ಕೆ ರೂ. 1,500, ಮೂರ್ನಾಡು ಕ್ರೆಡಿಟ್, ಲೋನ್, ಸೇಲ್ ಅಂಡ್ ಸಪ್ಲೈ ಸಂಘಕ್ಕೆ ರೂ. 300 ಸಾಲ ಮಂಜೂರು ಮಾಡಲಾಯಿತು.

14. ಚೆಂಬೆಬೆಳಿಯೂರು ಸಂಘದವರು ತಮ್ಮ ಗ್ರಾಮದ ಬಾಬ್ತು ಮೂರು ಸಂಘಗಳನ್ನು ಒಂದಾಗಿ ಸೇರಿಸಿದ್ದರಿಂದ ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ಸಾಲಕ್ಕೆ ಹೊಸ ಕರಾರು ಬರೆಸಿಕೊಂಡು 8 ಕಂತು ಕೊಡುವ ಬಾಬಿನಲ್ಲಿ ಪುನರಾಲೋಚಿಸಬೇಕಾಗಿ ಬರಕೊಂಡ ರಿಪೋರ್ಟು ಓದಲಾಯಿತು

ಡೈರೆಕ್ಟರುಗಳಿಗೆ ತಕ್ಕ ಕಾರಣಗಳು ಕಂಡು ಬಾರದ್ದರಿಂದ ಪುನರಾಲೋಚನೆ ಮಾಡುವುದು ಅವಶ್ಯವಿಲ್ಲವಾಗಿ ತೀರ್ಮಾನಿಸಲಾಯಿತು.

15. ಹೊಸ್ಕೇರಿ ಸಂಘಕ್ಕೆ ಈ ಮೊದಲೇ ಮಂಜೂರಾದ ಸಾಲವನ್ನು ಈಗ ಕೊಡಬೇಕಾಗಿ ಬರಕೊಂಡ ಪತ್ರವನ್ನು ಇನ್ನೊಂದು ಮೀಟಿಂಗಿನಲ್ಲಿಡುವಂತೆ ತೀರ್ಮಾನವಾಯಿತು.

16. ಕೋಣಗೇರಿ ಸಂಘಕ್ಕೆ ಈ ಮೊದಲೇ ಮಂಜೂರಾದ ಸಾಲದ ಪೈಕಿ ಕೊಡಲು ಬಾಕಿ ಇರುವ ಹಣವನ್ನು ಈಗ ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿನಲ್ಲಿಡುವಂತೆ ತೀರ್ಮಾನವಾಯಿತು.

17. ಗೌರವ ಸೆಕ್ರೆಟರಿಯವರಾಗಿದ್ದ ಮೆ. ಪಿ. ಜಿ. ಐಯ್ಯಪ್ಪನವರು ಕಾಯಿಲೆಯವರಾಗಿ ಆಸ್ಪತ್ರೆಯಲ್ಲಿರುವದರಿಂದ ಖಜಾನೆ ಮತ್ತು ಲೋಕಲ್ ಬ್ಯಾಂಕುಗಳಿಂದ ಬಿಲ್ಲು, ಡ್ರಾಫ್ಟ್, ಚೆಕ್ಕುಗಳ ಮೂಲಕ ಬರುವ ಹಣವನ್ನು ಹೊಂದಿಕೊಳ್ಳಲು ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಳಿಯಪ್ಪನವರಿಗೆ ಅಧಿಕಾರ ಕೊಡಲಾಗಿದೆಯೆಂತ ತೀರ್ಮಾನವಾಯಿತು.

18. ಬ್ಯಾಂಕಿನ ಡೈರೆಕ್ಟರುಗಳ ಇನ್ನೊಂದು ಮೀಟಿಂಗನ್ನು ತಾ. 21-1-39 ಕ್ಕೆ ಇಡುವಂತೆ ತೀರ್ಮಾನವಾಯಿತು.

ಮಡಿಕೇರಿ. ತಾ. 31-12-38.

ಪಿ. ಐ. ಬೆಳ್ಳಿಯಪ್ಪ (ಅಧ್ಯಕ್ಷರು.)

ಚಾತ್ರಿ.

—o0o—

ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—o0o—

ರಾಜಿ ಪಂಚಾಯಿತಿಕೆ.

ತಾ. 1-12-38 ರಲ್ಲು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರವರು ನೂರಮ್ಮಡ ನಾಡವರನ್ನು ಮತ್ತು ಕುಲ್ಲಟ್ಟಿರ ಮನೆಯವರನ್ನು ಸಹ ಸೇರಿಸಿ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಕುಲ್ಲಟ್ಟಿ ಪೊನ್ನಣ್ಣನ ಕಥೆಯ ವಿಚಾರ ಬಂದ ವಾದವಿವಾದದ ಬಗ್ಗೆ ಮಾಡಿದ ರಾಜಿಪಂಚಾಯಿತಿಕೆಯಲ್ಲಿ ಈ ಕೆಳಗಿನಂತೆ ತೀರ್ಮಾನ ಮಾಡಲಾಯಿತು.

(1) ತಾರೀಕು 2-9-38 ಮತ್ತು 9-9-38 ರ 'ಕೊಡಗು' ಪತ್ರಿಕೆಯಲ್ಲಿ ಮೆ. ಡಿ. ಯನ್. ಕೃಷ್ಣಯ್ಯ ಯಂ. ಎ. ಬಿ. ಇಡಿ. ಯವರು ಕುಲ್ಲಟ್ಟಿ ಪೊನ್ನಣ್ಣನ ಚರಿತ್ರೆಯ ಕಥೆಗಳೆಂಬ ಲೇಖನದಲ್ಲು ಪೊನ್ನಣ್ಣನ ಮುಂದೆ ನೂರಂಬಡದಲ್ಲಿ ನಾಯಕರಿದ್ದರೆಂಬದಾಗಿ ಬರೆದದಕ್ಕೆ ಆಧಾರ ಇರುವದಿಲ್ಲ. ಈ ಸಂಗತಿ ನೂರಂಬಡ ನಾಡಿನವರ ಅವಗಾಹನೆಗೆ ಬಂದಿರುವದಿಲ್ಲ.

(2) ಪೊನ್ನಣ್ಣನು ನೂರಂಬಡ ನಾಡಿನವರನ್ನು ಸೇರಿಸಿಕೊಂಡು ಯುದ್ಧಕ್ಕೆ ಹೋಗಿದ್ದನೆಂಬದು ಸಂಶಯೊಸ್ಪದ. ಇವರು ನೂರಂಬಡ ನಾಡಿನವರ ಸಹಾಯದಿಂದ ಯುದ್ಧ ಮಾಡಿ ಗೆದ್ದರೆಂಬದು ವಾಡಿಕೆಯಾಗಿದೆ.

'ಹಾಜರಿದ್ದವ.'

ಕೊಟ್ಟಮುಡಿ ಸೇತುವೆ.

ಕಮಿಷನರ್ ಸಾಹೇಬರವರಿಗೆ,

ನಾಲ್ಕುನಾಡಿನ ರೈತರಾದ ನಾವು ಕಳೆದ ಜಮಾಬಂದಿ ಕಾಲದಲ್ಲಿ ಇತ್ಯರ್ಥ ಮಾಡಿದ ಮೇರೆ ಕದನೂರು ಸೇತುವೆಯಿಂದ 12 ನೇ ಮೈಲು ವರೆಗೆ ರಸ್ತೆಯನ್ನು ಒಂದನೇ ತರಗತಿಗೆ ದುರುಸ್ತು ಮಾಡಲು ಸಹಾಯ ಕೊಟ್ಟು ನಾಲ್ಕುನಾಡು ರೈತರ ಮುಕ್ಕಾಲು ಕಷ್ಟ ಪರಿಹಾರ ಮಾಡಿದ್ದಕ್ಕೆ ಎಷ್ಟು ವಂದಿಸಿದರೂ ಸಾಲದು. ಇನ್ನು ಇರತಕ್ಕ ರಸ್ತೆ ಅಲ್ಲಿಂದ ಬೆಟ್ಟಗೇರಿ ವರೆಗ. ಕೊಟ್ಟಮುಡಿ ಸೇತುವೆ ಕಟ್ಟಿಸಿ ತಯಾರು ಮಾಡಿದರೆ ಇಡೀ ಕೊಡಗಿನ ರೈತರಿಗೆ ಎಲ್ಲಾ ಅನುಕೂಲ ಕೊಟ್ಟಂತೆಯೇ ನಮಗೂ ಸಹಾಯ ಮಾಡಿದಂತಾಯಿತು. ಒಟ್ಟಾರೆ ಹೇಳುವದಾದರೆ ಕೊಟ್ಟಮುಡಿ ಸೇತುವೆ ಇಲ್ಲದೆ ಈ ನಾಡಿನ ರೈತರು ಬೆಳೆಸುವ ಯಾಲಕ್ಕಿ, ಕಿತ್ತಳೆ ಮಂಗಳೂರು ಬಂದರಿಗೆ ಸಾಗಿಸಲು ಅಡಚಣೆಯಾಗಿದೆ. ಈ ಬಾಬಿನಲ್ಲಿ ನಾಲ್ಕುನಾಡವರಿಗೆ ಸಾಧಾರಣ 10 ಯಾ 20 ಸಾವಿರ ರೂಪಾಯಿ ನಷ್ಟವಿದೆ. ಯಾಲಕ್ಕಿ ಮಣ ಒಂದರ 3 ಯಾ 4 ರೂಪಾಯಿ ಕಮ್ಮಿ ದರದಲ್ಲಿ ಹೆಚ್ಚು ಕಮ್ಮಿ 15,000 ಮಣ ಯಾಲಕ್ಕಿ ಪ್ರತಿ ವರ್ಷವೂ ಈ ಕಡೆಯಿಂದ ರಫ್ತಾಗುವುದು. ಆದುದರಿಂದ ವರ್ಷಂಪ್ರತಿ ಬಡ ರೈತರಿಗೆ ಬರುವ ನಷ್ಟವನ್ನು ತಪ್ಪಿಸಿ ಈ ವರ್ಷವಾದರೂ ಸದರಿ ಸೇತುವೆಯ ಕೆಲಸವನ್ನು ನೆರವೇರಿಸಬೇಕಾಗಿ ಬೇಡುತ್ತೇವೆ. ನಾಲ್ಕುನಾಡಿನ ರೈತರಿಗೆ ಇರತಕ್ಕ ಸಂಪಾದನೆ ಹೆಚ್ಚಾಗಿ ಯಾಲಕ್ಕಿ ಮತ್ತು ಕಿತ್ತಳೆ. ಭತ್ತದ ಬೆಳೆಯು ರೂಪಾಯಿಗೆ ಆರಾಣೆಯಂತೆ. ಅನೇಕ ರೈತರು ತಮ್ಮ ಜೀವನಕ್ಕೆ ಬೇರೆ ಕಡೆಯಿಂದ ಭತ್ತವನ್ನು ಕೊಂಡುಕೊಂಡು ಜೀವಿಸಬೇಕಾಗಿದೆ. ಆದ ಕಾರಣ ಕೊಟ್ಟಮುಡಿ ಸೇತುವೆ ಕಟ್ಟುವುದು ಬಹು ಮುಖ್ಯವಾಗಿದೆ.

'ನಾಲ್ಕುನಾಡು ರೈತ'

ಬೇರೆ ಸಿನಿಮಾ ಕಂಪೆನಿಗಳು ಮಡಿಕೇರಿಗೆ ಬರಬಾರದೇಕೆ?

ಮಡಿಕೇರಿಯಲ್ಲಿ ಇಲ್ಲಿಯ ನಿವಾಸಿಗಳು ಕೆಲವರಿಂದ ಸ್ಥಾಪಿತವಾಗಿರುವ 'ಕೊಹಿನೂರು ಟಾಕಿಸ್' ಎಂಬ ಸಿನೆಮಾ ಕಂಪೆನಿಯು ಕಳೆದ ಎರಡು ತಿಂಗಳಿಂದ ಚಿತ್ರಗಳನ್ನು ಪ್ರದರ್ಶಿಸುತ್ತಿರುವದು. ಈಗಾಗಲೇ ಬೇರೆ ಎರಡು ಕಂಪೆನಿಗಳೂ ಸಹ ಮಡಿಕೇರಿಗೆ ಬರಲು ಪ್ರಯತ್ನಪಟ್ಟವಂತೆ. ಆದರೆ ವಿಧಿವಶಾತ್ ಅವರಿಗೆ ತಮ್ಮ ಚಿತ್ರಗಳನ್ನು ಪ್ರದರ್ಶಿಸಲು ಮುನಿಸಿಪಾಲಿಟಿಯವರು ಅವಕಾಶ ಕೊಡಲಿಲ್ಲವಂತೆ. ಇದು ನಿಜವಾದ ಪಕ್ಷ ಕೆಲವು ವಿಚಾರಗಳನ್ನು ಟೀಕಿಸದೆ ಇರಲು ಸಾಧ್ಯವಿಲ್ಲ.

(1) ಮುನಿಸಿಪಾಲಿಟಿಯವರು ಒಂದೇ ಕಂಪೆನಿಗೆ ಲೈಸನ್ಸ್ ಕೊಟ್ಟದ್ದು ಪೂರಾ ಅಸಮಂಜಸವಾದ ಕಾರ್ಯ. ಇದರಿಂದ ಮುನ್ಸಿಪಲ್ ಸದಸ್ಯರು ತಮ್ಮ ಕರ್ತವ್ಯನ್ಯೂನತೆಯನ್ನು ತೋರಿಸಿರುವರಲ್ಲದೆ, ಜನತೆಯ ಆಗ್ರಹಕ್ಕೂ ಪಾತ್ರರಿರುವರು. ಹೆಚ್ಚಿನ ಕಂಪೆನಿಗಳಿಗೆ ಲೈಸೆನ್ಸ್ ಕೊಟ್ಟಿದ್ದರೆ ಮುನ್ಸಿಪಾಲಿಟಿಗೆ ಆದಾಯ ಹೆಚ್ಚಾಗುತಿತ್ತಲ್ಲದೆ, ಕಂಪನಿಗಳೊಳಗೆ ಸ್ಪರ್ಧೆ ಬಂದು ಉತ್ತಮ ಚಿತ್ರಗಳನ್ನು ಸುಲಭ ದರದಲ್ಲಿ ನೋಡುವ ಸಂದರ್ಭವು ಜನರಿಗೆ ಸಿಗುತ್ತಿತ್ತು. ಒಂದೇ ಕಂಪನಿಗೆ ಲೈಸನ್ಸ್ ಕೊಟ್ಟದ್ದರ ಪರಿಣಾಮವೇನು? ದುಡ್ಡು ಖರ್ಚು ಮಾಡಿದರೂ ಉತ್ತಮ ಚಿತ್ರಗಳಿಲ್ಲ, ಮುನಿಸಿಪಾಲಿಟಿಗೆ ಹಣವಿಲ್ಲ. ಗೃಹಲಕ್ಷ್ಮಿಯೇ ಮೊದಲಾದ ಇಂದಿನ ಕಾಂಗ್ರೆಸಿನ ಧ್ಯೇಯಗಳಾದ ಹರಿಜನ ಸೇವೆ, ಗ್ರಾಮೋದ್ಧಾರ ಇವೇ ಮೊದಲಾದ ವಿಷಯಗಳನ್ನೊಳಗೊಂಡ ಅತ್ಯುತ್ತಮ ಸಾರ್ವಜನಿಕ ಚಿತ್ರಗಳನ್ನು ನೋಡುವ ಸುಯೋಗವು ಜನರಿಗಿಲ್ಲ. ಸಿನಿಮಾ ಕಂಪೆನಿಗಳಿಗೆ ಹೋಗಿ ದುಡ್ಡು ಖರ್ಚು ಮಾಡುವ ಹವ್ಯಾಸವೇ ಕೆಟ್ಟದ್ದು. ಅದರಲ್ಲೂ ಖರ್ಚು ಮಾಡಿದರೂ ಒಳ್ಳೇ ಚಿತ್ರಗಳನ್ನು ನೋಡುವ ಸಲಕರಣೆಗಳಿಲ್ಲದೆ ಮಾಡಿದ ಆ ಪಾಪವು ಮುನಿಸಿಪಾಲಿಟಿಯವರ ಮೇಲೆ ಬೀಳಬೇಡವೇ?

ಮೊನ್ನೆ ಮುನ್ಸಿಪಲ್ ಮೀಟಿಂಗಿನಲ್ಲಿ ಬೇರೆ ಕಂಪೆನಿಗಳಿಗೆ ಲೈಸನ್ಸು ಕೊಡುವ ವಿಚಾರವು ಚರ್ಚಿಸಿ 7 ಪರವಾಗಿಯೂ, 9 ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತಂತೆ. ಇಲ್ಲಿ ನಡೆದ ಓಟಿಂಗು ವಿಶೇಷ ತರಹದಿಂದ ನಡೆಯಿತೆಂದು ಒಂದು ಪ್ರತೀತಿ. ಅಲ್ಲದೆ ಮತ್ತೊಂದು ವಿಚಾರ. ಸಿನೆಮಾ ಕಂಪೆನಿಯ ಡೈರೆಕ್ಟರರೂ ಮುನಿಸಿಪಲ್ ಮೆಂಬರರಿರುವರು. ಅಂಥ ಬಳಿಕ ಅವರು ಈ ಸಂದರ್ಭದಲ್ಲಿ ಓಟು ಮಾಡಿದುದು ಅನ್ಯಾಯ ಹಾಗೂ ಆಶ್ಚರ್ಯಕರವಾಗಿದೆ. ಮುನ್ಸಿಪಲ್ ಮೆಂಬರರಿಗೆ ತಮ್ಮ ಇಲಾಖೆಗೆ ಹಣ ಬರುವದೆಂದರೆ ಅಸಹ್ಯವೇನು?

(2) ದೇಶೀಯ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬೇಕು. ಆದುದರಿಂದ ಹೊರಗಿನ ಸಂಸ್ಥೆಗಳು ಇಲ್ಲಿಗೆ ಬರುವುದು ಬೇಡವೆಂದು ಒಂದು ವಾದ. ಈ ಸ್ವದೇಶಾಭಿಮಾನವು ಮೆಚ್ಚತಕ್ಕದ್ದೇ ಹೌದು. ಆದರೆ ವೀರಾಜಪೇಟೆಯ ಸಿನೆಮಾ ಸಂಸ್ಥೆಯು ಕೇವಲ ಕೊಡಗಿನವರಿಂದಲೇ ಚಂದಾ ಹಾಕಿ ಸ್ಥಾಪಿಸಲ್ಪಟ್ಟಿದೆಯೆಂದು ತಿಳಿಯಬರುತ್ತದೆ. ಹಾಗಾದ ಮೇಲೆ ಸ್ವದೇಶ ಪ್ರೇಮಿಗಳು ಅದಕ್ಕೂ ಲೈಸನ್ಸ್ ಕೊಡಬಹುದಿತ್ತಲ್ಲ? ಸ್ಥಳೀಯ ಕಂಪೆನಿಯೊದ ಆದಿ ಕಾವೇರಿ ಬಸ್ಸ್ ಸರ್ವಿಸು ಸ್ಥಾಪಿತವಾದಾಗ ಪೈಪೋಟಿಗೆ ಎಡೆ ಕೊಡಬಾರದು; ಇದರಿಂದ ಕಂಪನಿಯು ನಷ್ಟಕ್ಕೀಡಾದೀತು ಎಂದು ಒಂದು ಕಡೆಯವರು ವಾದಿಸುವಾಗ, ಖಂಡಿತಾ ಸಲ್ಲದು, ಜನತೆಯ ಉಪಯೋಗಕ್ಕಾಗಿ ಪೈಪೋಟಿ ನಡೆಯಲೇ ಬೇಕೆಂದು ಉದ್ಗರಿಸಿದ ವಿಶಾಲ ಮನಸ್ಸಿನವರಲ್ಲಿ ಕೆಲವರು ಇಂದಿನ ಸಿನಿಮಾ ಕಂಪನಿಯ ಸಂಚಾಲಕರಲ್ಲಿಲ್ಲವೇ? ಅಂದಮೇಲೆ ಅವರ ವಿಶಾಲ ದೃಷ್ಟಿ ಎಲ್ಲಡಗಿತು? ಇಂದು ಅವರು ಯಾಕೆ ಸಂಕುಚಿತ ದೃಷ್ಟಿಯನ್ನು ತಳೆದು ಬೇರೆ ಕಂಪೆನಿಗಳಿಗೆ ಎಡೆ ಕೊಡಬಾರದೆಂದು ಪ್ರತಿಪಾದಿಸುತ್ತಿರುವರು?

ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸಂಯೋಜಿಸಬೇಕು, ನಮಗೆ ವಿಶಾಲ ಭೂಮಿಬೇಕು. ಸಂಕುಚಿತಭಾವದಿಂದರಬಾರದೆಂದು ಹೇಳುವ ರಾಜಕೀಯ ರಂಗದ ಧುರೀಣರು ಇಂದು ವಾಕ್ಚಲನ ಚಿತ್ರರಂಗಕ್ಕಿಳಿದಾಗ ಸಂಕುಚಿತ ಭಾವವನ್ನು ತಾಳಿ ಬೇರೆ ಕಂಪನಿಗಳು ಬರದಂತೆಯೂ, ಉತ್ತಮ ಚಿತ್ರಗಳು ಜನರಿಗೆ ನೋಡಲವಕಾಶ ಸಿಕ್ಕದಂತೆಯೂ ಅಡ್ಡ ನಿಂತಿರುವದು ಶೋಚನೀಯ ವಿಚಾರ. ಪುರಾತನ ನಾಣ್ಣುಡಿಯಂತೆ 'ತಾನು ಮಾಡ, ಮಾಡುವವರಿಗೂ ಬಿಡ' ಎಂದು ವರ್ತಿಸುತ್ತಿರುವುದು ಎಂದೂ ಸರಿಯಲ್ಲ. ಅದರಲ್ಲೂ ಈಗ ಇಲ್ಲಿರುವ ಚಿತ್ರ ಕಂಪೆನಿಯು ಖಾಯಂ ಆದದ್ದಾಗಿದ್ದರೆ ಅದರಲ್ಲೂ ಒಂದು ಅರ್ಥ. ಅದೂ ಬೇರೆ ಕಂಪೆನಿಗಳಂತೆ 'ಟೂರಿಂಗ್' ಚಿತ್ರವೆಂದು ತಿಳಿದುಬರುತ್ತದೆ. ಘಟ್ಟದ ಆಚ್ಚುರು ವರೆಗೆ ಮಾತ್ರ ಇದಕ್ಕೆ ಲೈಸೆನ್ಸ್ ಇರುವದೆಂದೂ ವಾರ್ತೆ. ಹಾಗಾದ ಮೇಲೆ ಬೇರೆ ಕಂಪೆನಿಗಳನ್ನು ಬರಗೊಡದ ಮುನಿಸಿಪಾಲಿಟಿಯವರ ಧ್ಯೇಯದ ಅಂತರ್ಗತವೇನು? ಅಂತೂ ಕೆಲವೊಂದು ಜನರ (ಸಿನಿಮಾ ಸಂಚಾಲಕರ) ಲಾಭಕ್ಕಾಗಿ ಇಡೀ ಪಟ್ಟಣಿಗರ ಯಾಕೆ? ನಾಡಿನವರ ಸೌಲಭ್ಯವನ್ನು ಬಲಿಕೊಟ್ಟದ್ದು ಖೇದಪೂರ್ಣವಾದ ವಿಷಯವಾಗಿದೆ.

'ಪಟ್ಟಣಿಗ'

ಕರ್ನಾಟಕ ಚರಖಾ ಸಂಘ, ಖಾದಿ ವಸ್ತ್ರಾಲಯ,
ಕೋಟೆ, ಬೆಂಗಳೂರು ಸಿಟಿ.

ಕೊಡಗಿನ ಖಾದೀ ಬಜಾರ್ ಪ್ರವಾಸ ಕ್ರಮ

ಕೊಡಗಿನ ಹಳ್ಳಿಗಳಲ್ಲಿರುವ ಖಾದೀ ಪ್ರೇಮಿಗಳಿಗೆ ಖಾದೀ ಕೊಳ್ಳಲು ಅನುಕೂಲವಾಗುವಂತೆಯೂ, ಖಾದೀ ಕೈಗಾರಿಕೆಯಲ್ಲಿ ಇದು ವರೆಗೆ ನಡೆದಿರುವ ಪ್ರಗತಿಯನ್ನು ನೋಡಲು ಹಳ್ಳಿಗರಿಗೆಲ್ಲ ಸಿಗುವಂತೆಯೂ ಕೊಡಗಿನಲ್ಲಿ ಸಂತೆಗಳು ನಡೆಯುವ ಸ್ಥಳಗಳಿಗೆಲ್ಲ ಖಾದಿ ಬಟ್ಟೆಗಳನ್ನು ತಂದು ಒಂದೆರಡು ದಿನಗಳು ಪ್ರದರ್ಶಿಸಿ ಖಾದೀ ಮಾರಾಟ ಮಾಡಲು ವ್ಯವಸ್ಥೆ ಮಾಡಿದೆ. ಈ ಕೆಳಗೆ ಕೊಟ್ಟಿರುವ ಕಾರ್ಯಕ್ರಮದಲ್ಲಿ ಯಾವ ಯಾವ ತಾರೀಕುಗಳು ಖಾದಿ ಮಾರಾಟಕ್ಕೆ ಸಿಗುವವೆಂದು ನಮೂದಿಸಿದೆ. ಆಯಾ ಊರುಗಳಿಗೆ ಸಂತೆಗೆ ಬರತಕ್ಕ ಸಮಸ್ತ ಜನರು ಖಾದೀ ಪ್ರದರ್ಶನಕ್ಕೆ ಬಂದು ಖಾದಿಯನ್ನು ಕೊಂಡು ದರಿದ್ರನಾರಾಯಣನ ಸೇವೆ ಮಾಡಬೇಕೆಂದು ಈ ಮೂಲಕ ಪ್ರಾರ್ಥನೆ.

26-1-39 ಗುರುವಾರ ಬೆಂಗಳೂರಿಂದ ಹೊರಟು ಪಿರಿಯಾಪಟ್ಟಕ್ಕೆ.

27-1-39, 28-1-39, 29-1-39 } ಪಿರಿಯಾಪಟ್ಟದಲ್ಲಿ ಖಾದೀ ಮಾರಾಟ.

30-1-39 ಪಿರಿಯಾಪಟ್ಟದಿಂದ ಹೊರಟು ಫ್ರೇಜರ್‌ಪೇಟೆ.

31-1-39 ಮಂಗಳವಾರ-ಫ್ರೇಜರ್‌ಪೇಟೆ ಸಂತೆಯಲ್ಲಿ ಖಾದೀ ಮಾರಾಟ

1-2-39 ಬುಧವಾರ-ಫ್ರೇಜರ್‌ಪೇಟೆಯಿಂದ ಮಡಿಕೇರಿಗೆ.

2-2-39, 3-2-39 } ಮಡಿಕೇರಿ ಮೊಕ್ಕಾಂ. ಶುಕ್ರವಾರ ಮಡಿಕೇರಿ ಸಂತೆಯಲ್ಲಿ ಖಾದೀ ಮಾರಾಟ.

4-2-39 ಶನಿವಾರ-ಸುಂಟಿಕೊಪ್ಪಕ್ಕೆ.

5-2-39 ಭಾನುವಾರ-ಸುಂಟಿಕೊಪ್ಪ ಸಂತೆಯಲ್ಲಿ ಖಾದೀ ಮಾರಾಟ.

6-2-39 ಸೋಮವಾರ-ವಾಪಾಸು ಮಡಿಕೇರಿಗೆ.

7-2-39 ಮಡಿಕೇರಿ ಮೊಕ್ಕಾಂ.

8-2-39, 9-2-39 } ಮೂರ್ನಾಡು. ಗುರುವಾರ-ಸಂತೆಯಲ್ಲಿ ಖಾದೀ ಮಾರಾಟ.

ಖಾದೀ ಪ್ರೇಮಿಗಳು ತಮ್ಮ ಮಿತ್ರರೊಡನೆ ಬಂದು ಸಹಾಯ ಮಾಡಬೇಕೆಂದೂ, ದೇಶಾಭಿಮಾನಿಗಳು ಖಾದೀ ಅಂಗಡಿಗೆ ಬಂದು ಪ್ರೋತ್ಸಾಹಿಸಬೇಕೆಂದೂ ಪ್ರಾರ್ಥನೆ.

ಬೆಂಗಳೂರು,
ತಾ. 20-1-39.

ಶಾ. ಆ. ವೆಂಕಟರಾಮಯ್ಯ,
ವ್ಯವಸ್ಥಾಪಕ.

ಹಿಂಸಾ ಮತ್ತು ಅಹಿಂಸಾ.

ಅಹಿಂಸಾಚರಣೆಯಿಂದಲೇ ಭಾರತದ ಬಂಧವಿಮೋಚನ.

ಲೇ:—ಮಹಾತ್ಮಗಾಂಧಿ.

ಹಿಂಸಾ ಮತ್ತು ಅಹಿಂಸಾ ತತ್ವಗಳೊಳಗೆ ಭಾರತದ ಯಾವ ಕಡೆಯಲ್ಲಿ ನೋಡಿದರೂ ದ್ವಂದ್ವ ಯುದ್ಧವು ಪ್ರಾರಂಭಿಸಿದೆ. ನಿಶ್ಚಲವಾದ ಕೆರೆಯ ನೀರು ಅವಕ್ಕೆ ದಾರಿ ಸಿಕ್ಕಿದೊಡನೆ ಘೋರ್ಗರೆಯುತ್ತಾ ಹೇಗೆ ಸಿಕ್ಕಿಸಿಕ್ಕಿದ್ದನ್ನು ಧ್ವಂಸ ಮಾಡುವದೋ ಹಾಗೆಯೇ ಹಿಂಸಾ ತತ್ವವೂ ಸಹ. ಅಹಿಂಸಾಕ್ಕೆ ಈ ಹುಚ್ಚುತರದ ವರ್ತನೆಯು ಅಸಾಧ್ಯ. ಅದು ಶಿಸ್ತಿನ ಸಾರವಾಗಿದೆ. ಆದರೆ ಅದು ಕೆಲಸಮಾಡುತ್ತಿರುವಾಗ ಎಷ್ಟೇ ಹಿಂಸಾ ಸಾಮರ್ಥ್ಯವು ಸಹ ಅದನ್ನು ಕುಗ್ಗಿಸಲಾರದು. ಅದರ ಪೂರ್ಣೋಪಯೋಗಕ್ಕೆ ಅದರ ಮುಖಂಡರಲ್ಲಿ ಅಕಳಂಕವಾದ ನಿರ್ಮಲತೆಯೂ, ಮಾರ್ಪಡಿಸಲಸಾಧ್ಯವಾದ ನಂಬಿಕೆಯೂ ಇರಬೇಕು. ಆದ್ದರಿಂದ ಈಗಿನ ದ್ವಂದ್ವ ಯುದ್ಧದಲ್ಲಿ ಅಹಿಂಸೆಯು ಸೋಲುವಂತಾದರೆ ಮುಖಂಡರು ನಿರ್ಮಲ ಹಾಗೂ ನಂಬಿಕೆಯಲ್ಲಿ ಇಲ್ಲವೆಂದು ಹೇಳಬೇಕು. ಹಿಂಸೆಯ ಮೇಲೆ ಅಹಿಂಸೆಯು ತನ್ನ ಜಯಪತಾಕೆಯನ್ನು ಹಾರಿಸಬಹುದೆಂದು ನಂಬಲು ಕಾರಣಗಳಿವೆ. ಆದ್ದರಿಂದ ಕಾರ್ಯಸಾಧಕರು ಅಹಿಂಸೆಯ ನಿರರ್ಥಕತೆಯನ್ನು ಕಾಣಬಹುದು.

ಆದರೆ ಪ್ರಮುಖರಾದ ಒಬ್ಬ ಸಮಾಜ ಸುಧಾರಕರು ಈ ರೀತಿ ಬರೆಯುತ್ತಾರೆ:—"ಸತ್ಯಾಗ್ರಹವನ್ನಡಗಿಸಲು ಸಂಸ್ಥಾನಗಳಲ್ಲಿ ಕೈಕೊಂಡ ಕ್ರಮವು ಬ್ರಿಟಿಷ್ ಪ್ರಾಂತಗಳಲ್ಲಿ ಕೈಕೊಂಡವಕ್ಕಿಂತ ಭಿನ್ನವಾಗಿದೆ. ಸಂಸ್ಥಾನಗಳಲ್ಲಿ ಕೈಕೊಂಡ ರೀತಿಯು ತೀರಾ ಅಮಾನುಷ ಮತ್ತು ನಿರ್ದಯಾತ್ಮಕರವಾದವು. ಅಹಿಂಸೆಯು ಈ ಸ್ವೈರಾಚಾರ ಕ್ರಮದ ಮುಂದೆ ಜಯಪ್ರದವಾದೀತೆ? ನನ್ನ ಮತ್ತು ಹೆಂಡತಿ ಮಕ್ಕಳ ಮರ್ಯಾದೆಯನ್ನು ಕಾಪಾಡಿ ಕೊಳ್ಳಲು ನನಗೆ ಅಧಿಕಾರವಿಲ್ಲವೇ? ಈಗಿನ ಸಾಧಾರಣ ಕಾಯಿದೆಯು ನನಗೆ ಆ ಹಕ್ಕನ್ನು ಕೊಡುತ್ತದೆ. ಹಾಗಿರುವದರಿಂದ ಆ ಹಕ್ಕನ್ನು ಅಂತಾ ಅಮಾನುಷ ರೀತಿಯ ಕ್ರಮಗಳನ್ನು ಎದುರಿಸಲು ಕೈಕೊಳ್ಳಬಾರದೇಕೆ? ಈ ವಿಚಾರಗಳಲ್ಲಿ ನನಗೆ ಸೂಕ್ತ ಅಭಿಪ್ರಾಯ ಬೇಕಿದೆ.

ಒರಿಸ್ಸಾ ಪ್ರಾಂತದ ರಾಜಕೀಯ ಏಜಂಟನ ಕೊಲೆಯ ವಿಚಾರದಲ್ಲಿ ತಾವು ಬರೆದ ನಿಮ್ಮ ಅಭಿಪ್ರಾಯಗಳನ್ನು ಎಚ್ಚರಿಕೆಯಿಂದ ಪುನಃ ಪುನಃ ಓದಿದೆನು. ಒರಿಸ್ಸದ ಬಡ ಪ್ರಜೆಗಳ ಮೇಲೆ ಕೈಕೊಂಡ ಅಮಾನುಷ ಅನಾಚಾರಗಳ ವಿಚಾರ ಏನೊಂದು ಬರೆಯದ್ದಕ್ಕೆ ನನ್ನ ಮನನೊಂದಿದೆ. ಒರಿಸ್ಸಾದ ಏಜಂಟನ ಕೊಲೆಯು ಜನತೆಯ ಮೇಲೆ ಹೆಚ್ಚು ಕರುಣೆ ತೋರಿಸಬೇಕೆಂದು ಸರಕಾರಕ್ಕೆ ದೈವಿಕ ಎಚ್ಚರಿಕೆ ಕೊಟ್ಟಂತಾಗಲಿಲ್ಲವೇ? ರಾಜಕೀಯ ಇಲಾಖೆ ಮತ್ತು ಪ್ರಜೆಗಳು ಇವರಲ್ಲಿ ಯಾರಿಗೆ ನಿಮ್ಮ ಖೇದಪೂರ್ಣ ಸೂಚನೆಗಳು ಹೋಗಬೇಕಾದುದು? ಜನತೆಯು ರಾಜಕೀಯ ಏಜಂಟರೊಂದಿಗೆ ಹಿಂಸಾ ರೀತಿಯಿಂದ ವರ್ತಿಸಿದ್ದರೆ ಅವರು ಜನತೆಯ ಮೇಲೆ ಗುಂಡುಹಾರಿಸಿ ಜನತೆಯನ್ನು ಹಿಂಸಾರಂಗಕ್ಕೆ ತಂದೊಡ್ಡಿದ್ದು ನ್ಯಾಯವೋ? ರಾಜಕೀಯ ಏಜಂಟನ ಕೊಲೆಯು ವಿಷಾದಕರವಾದದ್ದು ಎಂಬುದಕ್ಕೆ ನಾನು ಒಪ್ಪುತ್ತೇನೆ. ಆದರೆ ಅದಕ್ಕೆ ಕಾರಣರಾರು? ಒರಿಸ್ಸಾ ಸರ್ಕಾರದ ಅಧಿಕಾರಿಗಳಿಗೆ ಏಜಂಟರು ಸಮಂಜಸವಾದ ಸಲಹೆಯನ್ನು ಕೊಟ್ಟು, ಜನತೆಯ ಕೇಳಿಕೆಯನ್ನು ಕುಗ್ಗಿಸುವುದರಲ್ಲಿ ಭಾಗದಾರನಾಗಿರದಿದ್ದರೆ ಖಂಡಿತವಾಗಿಯೂ ಜನತೆಯು ಹದಮೀರಿ ವರ್ತಿಸುತ್ತಿರಲಿಲ್ಲ.

ಈ ಸಂಗತಿಯು ಸಂಸ್ಥಾನದಲ್ಲಿ ಚಳವಳ ನಡೆಸುತ್ತಿರುವ ಪ್ರತಿಯೊಬ್ಬನಿಗೂ ಒಂದು ಎಚ್ಚರಿಕೆಯಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನೀವು ಸತ್ಯ ಮತ್ತು ಅಹಿಂಸೆಗಳಿಗೆ ದೊಡ್ಡ ಆಧಾರ ಸ್ತಂಭದಂತಿದ್ದು ಭಾರತದ ರಾಜಕೀಯ ಇಲಾಖೆಗೆ ಅದರಲ್ಲೂ ಪೂರ್ವ ಸಂಸ್ಥಾನಗಳ ಏಜನ್ಸಿಗೆ ಇಂಥಾ ಕ್ರೂರ ಕಾರ್ಯಕ್ರಮ ಕೈಕೊಳ್ಳಕೂಡದೆಂದು ಒಂದು ಎಚ್ಚರಿಕೆ ಕೊಡದ್ದು ತಿಳಿಯಲಶಕ್ಯವಾಗಿದೆ. ಪೂರ್ವ ಸಂಸ್ಥಾನಗಳ ರಾಜಕೀಯ ಏಜನ್ಸಿಯು ಕೈಕೊಂಡ ಈ ಅನಾಚಾರಗಳೇ ರಾಜಕೀಯ ಏಜಂಟನ ಕೊಲೆಗೆ ಕಾರಣವೆಂದು ಹೇಳಬಹುದು. ಇದು ವ್ಯಸನಪೂರಿತ ಸಂಗತಿಯೋ ನಿಜವು. ಆದರೆ ಅದಕ್ಕೆ ಆ ರಾಜಕೀಯ ಏಜಂಟನೇ ಕಾರಣ. ಈ ಏಜಂಟನ ಕೊಲೆಗಾಗಿ ನಾವು ವ್ಯಸನಪಡುವದಾದರೆ ಪೋಲೀಸಿನವರ ಅತ್ಯಾಚಾರದಿಂದಾಗಿ ಸತ್ತ ಎರಡು ಜನರ ಗತಿಯೇನು? ಏಜಂಟನ ಕೊಲೆಯು ಜನತೆಯ ಹಿಂಸಾ ಚರಣೆಯಿಂದ ಎಂದು ವ್ಯಸನಪಡತಕ್ಕದಿದ್ದರೆ ಪೋಲೀಸರ ಹಿಂಸಾಚರಣೆಯಿಂದ ಮೃತಿಯನ್ನೈದಿದ ಇಬ್ಬರ ವಿಚಾರವೇನು? ನನ್ನ ಮಟ್ಟಿಗೆ ಹೇಳುವದಾದರೆ ಈ ಕೊಲೆಯು ಮೊದಲಾಗಿ ಇಂಡಿಯಾ ಸರ್ಕಾರಕ್ಕೂ, ರಾಜಕೀಯ ಇಲಾಖೆ, ಸಂಸ್ಥಾನಿಕ ಅರಸರಿಗೂ ನಂತರ ನಮಗೂ ಎಚ್ಚರಿಕೆಯಾಗಿರುವದು."

ಹೌದು, ನಿಜವಾಗಿಯೂ ಆತ್ಮಸಂರಕ್ಷಣೆಯ ಮತ್ತು ಸುಸಜ್ಜಿತ ದಂಗೆಯ ಅಧಿಕಾರವು ನಮಗಿದೆ. ಆದರೆ ಪೂರ್ಣ ವಿವೇಚನೆಯಿಂದ ಕಾಂಗ್ರೆಸು ಒಳ್ಳೇ ಕಾರಣಗಳಿಗೋಸ್ಕರ ಎರಡನ್ನೂ ಅಂಗೀಕರಿಸಿಲ್ಲ. ಘೋರ ರಣಸಾಟದ ಎದುರು ಅಹಿಂಸಾ ತತ್ವವು ಹೆಚ್ಚಿನ ಪ್ರಯೋಜನಕಾರಿಯಾಗಲಿಕ್ಕಿಲ್ಲ. ಆದರೆ ಅದರ ಶಕ್ತಿಯು ಇಂಥಾ ರಣಸಾಟವನ್ನು ಪ್ರಾರಂಭ ಮಾಡಗೊಡಿಸದಿರುವದರಲ್ಲಿ ಇದೆ. ಹಟ ಸಂಭೋಗವೇ ಮೊದಲಾದ ಬಲಾತ್ಕಾರಗಳು ನಡೆಯುವಾಗ ಸಾಕ್ಷಿಗಳಿದ್ದು ಅಹಿಂಸಾ ತತ್ವವನ್ನುಪಯೋಗಿಸುವವರು ಬದುಕಿ ಪ್ರಯೋಜನವೇನು? ಇಂಥಾ ಬಲಾತ್ಕಾರಗಳು ಎಲ್ಲರಿಗೂ ತಿಳಿದು ಜನಜನಿತವಾದ ಮೇಲೆ ಹಿಂಸಾ ತತ್ವವನ್ನು ಕೈಕೊಂಡು ಪ್ರಯೋಜನವೇನು? ಆದರೂ ಅಹಿಂಸಾ ತತ್ವವು ಪೂರ್ತಿಯಾಗದು. ಆ ಮನುಷ್ಯನನ್ನು ವಿಚಾರಿಸಿ, ಘೋಷಣೆ ಕೊಡಬಹುದು. ಆತನನ್ನು ಸರಿಯಾದ ದಾರಿಗೆ ತರಲು ಅಹಿಂಸಾ ತತ್ವದಲ್ಲಿ ಎಡೆ ಇದೆ.

ರಾಜಕೀಯ ಏಜೆಂಟನ ಕೊಲೆಯ ವಿಚಾರದಲ್ಲಿ ಎರಡು ಪಂಗಡದವರ ಕಾರಣಗಳನ್ನು ವಿಚಾರಿಸಿ ಇತ್ಯರ್ಥ ಮಾಡಲು ನಾನು ಆಹ್ವಾನಿಸಲ್ಪಡಲಿಲ್ಲ. ಕಾಂಗ್ರೆಸ್ ತತ್ವದ ಆಧಾರದ ಮೇಲೆ ಈ ರಾಜಕೀಯ ಏಜಂಟನ ಕೊಲೆಯೂ, ಜನತೆಯ ಹಿಂಸಾ ವೃತ್ತಿಯೂ ವ್ಯಸನಪಡತಕ್ಕದ್ದು. ಇದನ್ನು ನಿಷೇಧಿಸುವುದೇ ನನ್ನ ಗುರಿಯುತ್ತು. ಆಳರಸರ ದಬ್ಬಾಳಿಕೆಯನ್ನು ಎಷ್ಟೋ ಸಾರಿ ಖಂಡಿಸಿ ಬರೆದಿರುವೆನು. ಆದರೆ ಈ ಸಂದರ್ಭದಲ್ಲಿ ಪುನಃ ಅದನ್ನು ಖಂಡಿಸಿ ಬರೆದ ಪಕ್ಷಕ್ಕೆ ಜನತೆಗೆ ಉತ್ತೇಜನಕೊಟ್ಟಂತಾಗಿ ಅಹಿಂಸಾಚರಣೆಯು ಕಠಿಣವಾಗುತ್ತಿತ್ತು. ಒರಿಸ್ಸಾದ ವಾತಾವರಣವು ಕುದ್ದುಗೊಳ್ಳುತ್ತಿದೆ. ಇದನ್ನು ಸಮರ್ಥಿಸಲು ಸಕಾರಣವಾಗಿ ವಾದಿಸಬಲ್ಲೆ. ಈ ಕೊಲೆಯು ಚಳವಳವನ್ನು ಅಲ್ಲೋಲ ಕಲ್ಲೋಲ ಮಾಡಿದೆ. ರಾಣಪುರದಲ್ಲಿ ಕೋಲಾಹಲವೆದ್ದಿದೆ. ನಿರಪರಾಧಿಯರಾದ ಜನರು ಸಹ ಸರ್ಕಾರದ ಅತ್ಯಾಚಾರವನ್ನು ತಪ್ಪಿಸಲು ಮನೆಮಾರು ಬಿಟ್ಟು ಪ್ರಯತ್ನಿಸುತ್ತಿರುವರು. ಯಾಕೆಂದರೆ ಸರಕಾರದ ಈ ಕಾರ್ಯಕ್ರಮದಿಂದ ತಪ್ಪು ಮಾಡಿದವರೇ ಶಿಕ್ಷಿಸಲ್ಪಡುವದಿಲ್ಲ. ಸರ್ಕಾರವು ಕೈಕೊಂಡಂತ ಇಂಥಾ ಭಯಂಕರ ಕಾರ್ಯಕ್ರಮವು ಭಾರತೀಯರಾದವರೆಲ್ಲರಿಗೂ ತಿಳಿದಿರುವ್ಪದು. ಅಧಿಕಾರಿಗಳಿಗೆ ಅವರ ಉದ್ಯೋಗಸ್ಥರ ಅಪರಿಲ್ಲಾ ಯಾರೋಪಿಯನರ ಕೊಲೆಗಳಲ್ಲಿ ಈ ಭಯಂಕರ ಅತ್ಯಾಚಾರದ ಕಾರ್ಯಕ್ರಮವಲ್ಲದೆ ಬೇರೇನು ವಿಧಾನಗಳೇ ಗೊತ್ತಿಲ್ಲ. ಅಹಿಂಸಾ ತತ್ವವು ಈಗ ಅವರನ್ನು ಹೊಸ ಉಪಾಯಗಳನ್ನು ಕಂಡುಹಿಡಿಯಲು ಪ್ರೇರೇಪಿಸುತ್ತಿದೆ. 'ಅಡಿಗೆಯ ರುಚಿ ಊಟ ಮಾಡುವಾಗ ಗೊತ್ತು' ಎಂಬಂತೆ ಎರಡು ತತ್ವಗಳೂ ಭಾರತದಲ್ಲಿ ಪರೀಕ್ಷಿಸಲ್ಪಡುತ್ತಿವೆ. ಕೆಲಸಗಾರರು ಅವರಿಗೆ ಬೇಕಾದ್ದನ್ನು ಆರಿಸಿಕೊಳ್ಳಬೇಕು. ಅಹಿಂಸಾ ತತ್ವದಿಂದಲೇ ಭಾರತಕ್ಕೆ ಮೋಕ್ಷ, ಭಾರತಕ್ಕೆ ಪರದಾಸ್ಯನಾಶ ಎಂಬುದನ್ನು ನಾನು ತಿಳಿದಿರುವೆನು. ಯಾವ ಕೆಲಸಗಾರರು ಯಾ ಮುಖಂಡರು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವರೋ ಅವರು ತಪ್ಪು ಮಾಡುತ್ತಿರುವರಲ್ಲದೆ ಕಾಂಗ್ರೆಸಿಗೆ ಹಾನಿತರುತ್ತಿರುವರು.

ಔಂದ್ ಸಂಸ್ಥಾನಕ್ಕೆ ಜವಾಬ್ದಾರಿ ಸರಕಾರ.

ಔಂದ್ ಸಂಸ್ಥಾನದ ರಾಜಾ ಸಾಹೇಬರು ತಮ್ಮ ಪ್ರಜೆಗಳ ಕೇಳಿಕೆಯನ್ನು ಮನ್ನಿಸಿ ಅವರಿಗೆ ಜವಾಬ್ದಾರಿ ಸರ್ಕಾರವನ್ನಿತ್ತಿರುವರು. ಈ ತಾ. 21 ರಲ್ಲಿ ಸಂಸ್ಥಾನದ ದೇವಸ್ಥಾನದ ಮುಂದುಗಡೆ ಬೊಂಬಯಿ ಪ್ರಾಂತದ ಮುಖ್ಯ ಮಂತ್ರಿ ಬಾಲ ಗಂಗಾಧರ ಖೇರರೇ ಮೊದಲಾದ ಅಖಂಡ ಧುರೀಣರ ಸಮ್ಮುಖದಲ್ಲಿ ರಾಜಸಾಹೇಬರು ಈ ರೀತಿ ಭಾಷಣವಿತ್ತರು. ಇಂದು ನಾವು ಧೈರ್ಯಪೂರಿತವಾದ ಒಂದು ಹೆಜ್ಜೆಯನ್ನು ಮುಂದಿಡುತ್ತಿರುವೆವು. 'ಇದು ಇಡೀ ಭಾರತದ ದೃಷ್ಟಿಯನ್ನೇ ನಮ್ಮೆಡೆಗೆಳೆಯುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ನಿಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ನೀವು ಒಂದು ಮಾದರಿಯಾಗಬೇಕಾಗಿದೆ. ಆದ್ದರಿಂದ ನಿಸ್ವಾರ್ಥ ದೃಷ್ಟಿಯಿಂದ ಎಲ್ಲರೂ ಮುಂದೆ ಬಂದು ಜವಾಬ್ದಾರಿಯನ್ನು ಹೊರಬೇಕಿದೆ.' ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ವಿಮರ್ಶಿಸಿ ಪ್ರಜೆಗಳಿಗೆ ಪ್ರಾಯಂ ಆಗಿ 50,000 ರೂಪಾಯಿಗಳ ಕಂದಾಯ ಮಾಫಿ ಕೊಡುವ ಬಗ್ಗೆ ರಾಜಸಾಹೇಬರು ಮೂರು ಜನರಿಂದ ಕೂಡಿದ ಕಮಿಟಿಯನ್ನು ನೇಮಕ ಮಾಡಿರುವರು. ನ್ಯಾಯಖಾತೆಯ ಪುನರ್ಘಟನೆಯು ಜುಲೈಯಲ್ಲಿ ನಡೆಯುವುದು.

ಮುಖ್ಯ ಮಂತ್ರಿ ಖೇರರವರಿಗೆ ರಾಜಸನ್ಮಾನಗಳು ಅರ್ಪಿಸಲ್ಪಟ್ಟವು. 5,000 ಜನರು ನೆರೆದಿದ್ದರು. ಮುಖ್ಯ ಮಂತ್ರಿಯವರೂ, ರಾಜಾಸಾಹೇಬರೂ ಪ್ರತ್ಯೇಕವಾಗಿ ರಾಷ್ಟ್ರ ಧ್ವಜ ಮತ್ತು ಸಂಸ್ಥಾನಗಳ ಧ್ವಜಗಳನ್ನು ಹಾರಿಸಿದ ನಂತರ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ ಶಂಕರರಾವ್ ದೇವರವರು ರಾಜಸಾಹೇಬರ ಧೈರ್ಯಪೂರಿತ ವರ್ತನೆಗೆ ಅವರನ್ನು ಹೊಗಳುತ್ತಾ ಪವಿತ್ರವಾದ ಗಂಗಾ ನದಿಯು ಹೇಗೆ ತನ್ನ ಉಗಮ ಸ್ಥಾನದಲ್ಲಿ ಸಣ್ಣದಿದ್ದು ಕ್ರಮೇಣ ವಿಶಾಲವಾದ ಹಾಗೂ ಪವಿತ್ರವಾದ ನದಿಯೆಂದೆನಿಸಿಕೊಂಡಿದೆಯೋ ಹಮೋತ್ರಾದಿಯಲ್ಲಿ ಇಂದು ಚಿಕ್ಕ ಸಂಸ್ಥಾನವಾದ ಔಂದಿನಲ್ಲಿ ಕೊಡಲ್ಪಟ್ಟ ಜವಾಬ್ದಾರಿ ಸರ್ಕಾರದ ಕುರುಹು ಬೇಗನೆ ವಿಶಾಲ ಭಾರತವನ್ನು ಆವರಿಸಲೆಂದು ಆಶಿಸಿದರು. ಮುಖ್ಯ ಮಂತ್ರಿಗಳು ರಾಜಸಾಹೇಬರು ಭಾರತದ ಆಳರಸರಲ್ಲಿ ತನ್ನ ಪ್ರಜೆಗಳ ಕೇಳಿಕೆಯನ್ನು ಮನ್ನಿಸಿ ಸರಕಾರದ ಹಂಗನ್ನು ತೊರೆದು ಹೆಸರುಗೊಂಡ ರಾಮರಾಜ್ಯ ಕಲ್ಪನೆಯನ್ನು ಮನಸ್ಸಿನಲ್ಲಿಟ್ಟು ವರ್ತಿಸಿದ್ದಕ್ಕೆ ಧನ್ಯವಾದಗಳನ್ನರ್ಪಿಸಿದರು.

ನಂತರ ಎಲ್ಲಾ ವಿದ್ಯಾಸಂಸ್ಥರೂ ಔಂದ್ ಸಂಸ್ಥಾನದಿಂದ ಅವಿದ್ಯೆಯನ್ನು 3 ತಿಂಗಳಲ್ಲಿ ಹೊಡೆದೋಡಿಸಲು ಕಂಕಣಬದ್ಧರಾಗಬೇಕೆಂದು ತೀರ್ಮಾನವಾಯಿತು. ಅಲ್ಲದೆ ಜನವರಿ 21 ನೇ ತಾರೀಕು ಇನ್ನು ಮುಂದೆ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಸಿಕ್ಕಿದ ಚಿಹ್ನೆಗಾಗಿ ಸಾರ್ವಜನಿಕ ರಜಾ ದಿನವಾಗತಕ್ಕದ್ದೆಂದೂ ನಿರ್ಣಯವಾಗಿದೆ. ಅಂತು ಔಂದ್ ಸಂಸ್ಥಾನವು ಚಿಕ್ಕದಾದರೂ ತನ್ನ ಅಮೋಘ ವರ್ತನೆಯಿಂದ ಧನ್ಯತೆಯನ್ನು ಪಡೆಯಿತು.

ದೇವದತ್ತ.

ಸಾಮಾಜಿಕ ಕಾದಂಬರಿ.

ಕಳೆದ ವಾರದಿಂದ ಮುಂದುವರಿಯುವುದು.

೨೦ನೇ ಅಧ್ಯಾಯ.

ಅಷ್ಟರಲ್ಲಿ ಮೋಟಾರ್ ಬಂಡಿಯು ಬರುವ ಶಬ್ದವು ಕೇಳಿಸಿತು. ಎಲ್ಲರೂ ಎದ್ದು ಹಟ್ಟಿಗೆ ಬಂದರು. ಕ್ಷಣದಲ್ಲೇ ಬಂಡಿಯು ಅಂಗಳಕ್ಕೆ ಬಂತು. ಭೂಷಣವಸನಾಲಂಕೃತರಾದ ವೈದ್ಯರು ಬಂಡಿಯಿಂದಿಳಿದರು. ಗ್ರಾಮಸ್ಥರೆಲ್ಲಾ ಜೋಡಿಸಿದ ಕರಗಳುಳ್ಳವರಾಗಿ, ವೈದ್ಯರನ್ನು ಎದುರುಗೊಂಡರು. ವೈದ್ಯರು ಗ್ರಾಮಸ್ಥರ ಆದರಣೆಯನ್ನು ಸ್ವೀಕರಿಸಿ, ಹಸನ್ಮುಖರಾಗಿ ಗೃಹಪ್ರವೇಶಿಸಿ, ವೃದ್ಧೆಗೆ ಪ್ರಣಾಮ ಮಾಡಿದರು

ಆ ಮೇಲೆ ಮುದುಕಿಯ ನಾಡಿ ಪರೀಕ್ಷೆ ಮಾಡಿ, 'ತಾಯಿ ಇನ್ನು ಹೆದರಿಕೆ ಇಲ್ಲ, ವ್ಯಾಧಿಯ ಚಿನ್ಹೆಗಳೇನೂ ಇಲ್ಲ. ಇನ್ನು ಬೇಕಾದದ್ದು ಸರಿಯಾದ ಉಪಚಾರ,' ಎನ್ನುತ್ತಾ ಎದುರಿನಲ್ಲಿ ಕುರ್ಚಿಗಳಲ್ಲೂ, ಬೆಂಚಿಗಳಲ್ಲೂ ಕುಳಿತಿದ್ದ ಗ್ರಾಮಸ್ಥರ ಕಡೆಗೆ ತಿರುಗಿ, 'ನಾಡುಗಳಲ್ಲಿ ಅದೊಂದು ಲೋಪ ನಿಮಗೆ ಮಕ್ಕಳನ್ನೂ ವ್ಯಾಧಿಪೀಡಿತರನ್ನೂ ಹೇಗೆ ಉಪಚರಿಸಬೇಕೆಂಬ ಅಂಶವು ಗೊತ್ತಿಲ್ಲ.'........ಎನ್ನುವಷ್ಟರಲ್ಲಿ ಗ್ರಾಮಸ್ಥನೊಬ್ಬನು 'ವೈದ್ಯರಲ್ಲಿ ನನಗೊಂದು ಮಾತು. ಶ್ರೀಮಂತರಿಗೆ ತಮ್ಮ ಶರೀರ ಪೋಷಣೆ ಮಾಡಲು ನಾನಾ ತರದ ಅನುಕೂಲತೆಗಳಿವೆ. ನಮ್ಮಂತಹ ಬಡವರು ಏನು ಮಾಡುವುದು! ಎಷ್ಟೇ ತಿಳುವಳಿಕೆ ಇದ್ದರೂ ಅವನ್ನು ನಡಿಸಲು ಶಕ್ತಿ ಸಾಲದು. ಇವಕ್ಕೆಲ್ಲಾ ಮುಖ್ಯವಾಗಿ ಬೇಕಾದದ್ದು ಹಣ. ಗ್ರಾಮಸ್ಥರಲ್ಲಿ ಮುಖ್ಯವಾಗಿ ಇಲ್ಲದಿರುವುದೇ ಅದು. ಹಣವಿಲ್ಲದಿದ್ದ ಮೇಲೆ ಎಷ್ಟು ತಿಳುವಳಿಕೆ ತಾನೇ ಇದ್ದು ಏನು ಫಲ' ಎಂದು ಹೇಳಿದನು.

ವೈದ್ಯರು—ನೀವು ಮಾಡಿರುವುದು ತಪ್ಪರ್ಥ. ದೇಹಪೋಷಣೆ ಮಾಡಿಕೊಳ್ಳಲು, ಬೇಕಾದಷ್ಟು ಐಶ್ವರ್ಯವು ನಿಮ್ಮಲ್ಲಿ ಪ್ರತಿಯೊಬ್ಬನಿಗೂ ಇದೆ. ಆದರೆ ನೀವು ತಿಳಿದಿರುವುದೇನೆಂದರೆ, 'ದೇಹಪೋಷಣೆಗೆ ಮುಖ್ಯವಾದ ಸಾಧನೆಗಳು ಅಂಗಡಿಯಲ್ಲಿ ವಿಕರಿಯಾಗುತ್ತಿರುವ ನಾನಾತರದ ವಿದೇಶಿಯ ಪದಾರ್ಥಗಳೆಂದು' ಅವು ಎಂದೂ ಅಲ್ಲ. ಶರೀರ ಪೋಷಣೆಗೆ ಮುಖ್ಯವಾಗಿ ಬೇಕಾದದ್ದು ನಿಯಮಕ್ಕೆ ಸರಿಯಾಗಿ ಊಟ ಉಪಚಾರ. ಸಮಯಕ್ಕೆ ಸರಿಯಾದ ಸ್ನಾನ ಮತ್ತು ಕೆಲಸವಿಲ್ಲದ ಸಮಯಗಳಲ್ಲಿ ಶರೀರ ಅವರುವಷ್ಟು ವ್ಯಾಯಾಮ.

ಇವರಲ್ಲಿ ನೀವು ಹೇಳಿದ ಹಾಗೆ ಐಶ್ವರ್ಯವಂತರಿಗೆ ಮಾತ್ರ ಸಾಧ್ಯವಾಗಿಯೂ, ಬಡವರಿಗೆ ಅಸಾಧ್ಯವಾಗಿಯೂ, ಇರುವ ಸಾಧನಗಳಾವುವು. ದಿನಕೊಮ್ಮೆ ಸ್ನಾನಮಾಡಬೇಕಾದರೆ ಹಣಬೇಕೆ? ತಾವು ಧರಿಸುವಂತಹ ಒಂದೆರಡು ವಸ್ತ್ರಗಳನ್ನು ನಿತ್ಯವೂ ಮಡಿಮಾಡಿಕೊಳ್ಳಲು, ಐಶ್ವರ್ಯವಂತರೇ ಆಗಬೇಕೇ? ಸರಿಯಾಗಿ ವಿಚಾರಿಸಿ ನೋಡಿದಲ್ಲಿ ಐಶ್ವರ್ಯವು ತಾವು ಧರಿಸುವ ವಸ್ತ್ರಗಳ ಶುಚಿತ್ವಕ್ಕೆ ಒಂದು ತರದ ಅಡಚಣೆಯಾಗಿದೆ. ನಾವು ಐಶ್ವರ್ಯವಂತರಾದರೆ ವಾಡಿಕೆಯಾಗಿ ಬಹು ಅಮೂಲ್ಯವಾದ ವಸ್ತ್ರಗಳನ್ನೇ ಧರಿಸುತ್ತೇವೆ. ಅಂತಹ ಬಹು ಬೆಲೆ ಬಾಳತಕ್ಕ ವಸನಗಳನ್ನು ಆಗಾಗ್ಯೆ ನೀರಿಗೆ ಹಾಕಿದರೆ, ಅವು ತಮ್ಮ ಮನೋಹರತೆಯನ್ನು ಕಳಕೊಳ್ಳುವುದರಿಂದ, ಕೆಲವು ಮಹನೀಯರು, ತಮ್ಮ ವಸ್ತ್ರಗಳನ್ನು ತಯಾರಿಸಿದ ಲಾಗಾಯಿತು ಬಿಸಾಡುವ ವರೆಗೆ ಅದನ್ನು ನೀರಿಗೆ ಕಾಣಿಸುವುದೇ ಇಲ್ಲ. ಕೆಲವು ಕಪ್ಪು ಬಣ್ಣದ ಬಟ್ಟೆಯನ್ನೇ ಧರಿಸುತ್ತಾರೆ. ಅವರ ಅಭಿಪ್ರಾಯವೇನೆಂದರೆ, 'ಕಪ್ಪು ಬಟ್ಟೆಗಳು ಮಾಸಿದರೆ ಅದು ಇತರರಿಗೆ ತಿಳಿಯುವುದಿಲ್ಲವೆಂದು ಇದರಿಂದ ಅವರಿಗೆ ಬಟ್ಟೆ ಧರಿಸುವುದರ ಮುಖ್ಯ ಉದ್ದೇಶವೇ ತಿಳಿದಿರುವುದಿಲ್ಲವೆಂಬುವುದು ಗೊತ್ತಾಗುವುದು. ನಾವು ಬಟ್ಟೆ ಧರಿಸುವುದು ನಮ್ಮ ಶರೀರ ಪೋಷಣೆಗಲ್ಲದೆ, ಇತರರ ಕಣ್ಣು ಕಟ್ಟಿ, ಅವರನ್ನು ಮೆಚ್ಚಿಸುವುದಕ್ಕಲ್ಲ. ಆದುದರಿಂದ ಪ್ರತಿಯೊಬ್ಬನೂ ಬಿಳೀ ಬಟ್ಟೆಯನ್ನೇ ಧರಿಸಬೇಕು. ಆಗ ಇತರರನ್ನು ಮೆಚ್ಚಿಸುವುದಕ್ಕಾದರೂ ತಾನು ಅವುಗಳನ್ನು ಆಗಾಗ್ಯೆ ಒಗಿಯಬೇಕಾಗುತ್ತೆ. ಆದುದರಿಂದ ಶುಚಿಯಾದ ವಸ್ತ್ರವನ್ನು ಧರಿಸಲಿಕ್ಕೆ ಬಡತನವೆಂದೂ ಅಡಚಣೆಯಲ್ಲವೆಂಬುವುದು ತಿಳಿದಂತಾಯಿತಲ್ಲವೆ.

ಎರಡನೆಯದು ಊಟ ಉಪಚಾರಗಳ ವಿಚಾರ ವಿಷಯ ಕೆಲವರ ಅಭಿಪ್ರಾಯವೇನೆಂದರೆ, 'ನಮ್ಮ ಶರೀರವು ಚೆನ್ನಾಗಿ ಬೆಳೆಯಬೇಕಾದರೆ ಬಹು ಬೆಲೆ ಬಾಳತಕ್ಕ ಪದಾರ್ಥಗಳನ್ನೇ ಸೇವಿಸುತ್ತಿರಬೇಕೆಂಬು' ಇದು ಸಹ ತಪ್ಪು ಅಭಿಪ್ರಾಯ. ಪೂರ್ವದಲ್ಲಿ ಲೋಕದಲ್ಲೆಲ್ಲಾ ಅದ್ವಿತೀಯ ಯುದ್ಧ ಭಟರೆಂದು ಪ್ರಸಿದ್ಧಿ ಹೊಂದಿರುವ ಗ್ರೀಕರು ಬಹು ಸಾಧಾರಣ ಆಹಾರ (simple food) ವನ್ನೇ ತೆಗೆದುಕೊಳ್ಳುತ್ತಿದ್ದರೆಂಬುವುದು, ಇತಿಹಾಸ ಪ್ರಸಿದ್ಧವಾಗಿದೆ. ನಾವು ದಿನಂಪ್ರತಿ, ತೆಗೆದುಕೊಳ್ಳುತ್ತಿರುವ ಆಹಾರವೇ ಸಾಕು. ಆದರೆ ನಾವು ಮುಖ್ಯವಾಗಿ ನಿಗತಿಗೆದುಕೊಳ್ಳಬೇಕಾದ ವಿಷಯವೇನೆಂದರೆ, ನಿಯಮ, ಮಿತ ಮತ್ತು ನಿರ್ಮಲತೆ ಇವು ಮೂರಕ್ಕೂ ನೀವು ಹೇಳಿದಂತೆ ಐಶ್ವರ್ಯದ ಆವಶ್ಯವಿರುವುದಿಲ್ಲ.

ನಾಡುಗಳಲ್ಲಿ ವಾಡಿಕೆಯಾಗಿ ನಡೆಯುವ ಆಚಾರವೇನೆಂದರೆ, ತನಗೆ ಬೇಕಾದುದಕ್ಕಿಂತಲೂ ಮೀರಿ ತಿನ್ನುವುದು. ಈ ತತ್ವವು ಕೇವಲ ಅರ್ಥವಿಹೀನವಾದುದಲ್ಲದದ್ದರೂ, ತಾನು ತಿಂದದನ್ನು ಕರಗಿಸುವಷ್ಟು ಕೆಲಸ ಮಾಡುವ ಮನುಷ್ಯರು ಮಾತ್ರ ಈ ತತ್ವವನ್ನನುಸರಿಸಿದರೆ ಅವರಿಗೆ ನನ್ನ (ಡಾಕ್ಟರರ) ಹಂಗು ಯಾವಾಗಲೂ ಬೇಕೇಬೇಕು. ('ಅದು ನಿಜ' ಎಂದು ಎಲ್ಲರೂ ನಕ್ಕರು.) ಆದುದರಿಂದ ಮಿತವಾಗಿ ಉಣ್ಣುವುದೇ ಉತ್ತಮ. ಎರಡನೆ ನಿಯಮ ಈ ತತ್ವವನ್ನನುಸರಿಸುವದು ನಾಡುಗಳಲ್ಲಿ ಕೆಲವರು ಅಪೂರ್ವ ಅನೇಕ ತಾಯಂದಿಯರು ತಮ್ಮ ಮಕ್ಕಳಿಗೆ ಅಳುವಾಗಲೆಲ್ಲಾ ಆಹಾರ ಕೊಡುತ್ತಾರೆ. ಕೆಲವೇಳೆ ಮಕ್ಕಳು ತಿಂದದ್ದು ಹೆಚ್ಚಾಗಿ ಹೊಟ್ಟೆ ನೋವಿನಿಂದ ಅತ್ತರೂ ಕೂಡ ಅಳುವನ್ನು ನಿಲ್ಲಿಸಲು, ಪುನಃ ತಿನ್ನಿಸುತ್ತಾರೆ. ಫಲಿತಾಂಶವೇನು, 'ಕೈಕಾಲು ಸಣ್ಣ ಹೊಟ್ಟೆ ಡುಬ್ಬಣ್ಣ'ವಾದ ಮಕ್ಕಳಾಗುತ್ತಾರೆ. ಮಕ್ಕಳಂತಿರಲಿ ಬುದ್ಧಿ ಕಲಿತ ಪ್ರಾಯಸ್ಥರೂ ಸಹ ಹೊಟ್ಟೆಯ ವಿಷಯದಲ್ಲಿ ಸರಿಯಾದ ನಿಯಮವನ್ನನುಸರಿಸುವುದು ಅತಿ ವಿರಳ. ಹಬ್ಬಗಳೋ, ಮದುವೆಗಳೋ ಆಯಿತೆಂದರೆ, ತಮಗೆ ಬೇಕಾದದಕ್ಕಿಂತಲೂ ಹೆಚ್ಚಾಗಿ, ನಿಯಮವರಿಯದೆ ತಿಂದು, ಆ ಮೇಲೆ ಪಟ್ಟಣದ ವೈದ್ಯರ ಹತ್ತಿರಕ್ಕೆ ಆಳುಗಳನ್ನು ಓಡಿಸುತ್ತಾರೆ.

ಮೂರನೆಯ ವಿಷಯವೇನೆಂದರೆ—ಭಕ್ಷ್ಯಮಾಡಿ ಉಪಯೋಗಿಸುವುದರಲ್ಲಿ ತೆಗೆದುಕೊಳ್ಳಬೇಕಾದ ಜಾಗರೂಕತೆ. ಈ ವಿಷಯದಲ್ಲೂ, ನಿಮ್ಮ ಅಭಿಪ್ರಾಯದಂತೆ, ಐಶ್ವರ್ಯದ ಆವಶ್ಯಕತೆಯು ಬೇಡ. ಕೆಲವರು ತಮ್ಮ ಆಹಾರಗಳನ್ನು ತಯಾರಿಸಿ, ತಿನ್ನುವ ರೀತಿಯು ಬಹು ಹೇಸುಗೆಯೂ, ಶೋಚನೀಯವೂ ಆದ ರೀತಿಯಲ್ಲಿರುತ್ತೆ. ಅನೇಕರು ತಮ್ಮ ಆಹಾರ ತಯಾರಿಸುವ ಪಾತ್ರೆಗಳನ್ನು ದಿನಕ್ಕೊಮ್ಮೆ ಬೆಳಗುವುದಿಲ್ಲ. ಕೆಲವರು ಮೂರು ಹೊತ್ತಿಗೆ ಬೇಕಾದಷ್ಟು ಪದಾರ್ಥಗಳನ್ನು ಒಮ್ಮೆಯೇ ತಯಾರಿಸಿ ಇಟ್ಟು ತಿನ್ನುತ್ತಾರೆ. ಕೆಲವೇಳೆ ಅಂತಹ ಪದಾರ್ಥಗಳಿಂದ ದುರ್ವಾಸನೆ ಹೊರಡುತ್ತಿದ್ದರೂ ಸಹ ತಾವು ಮರಳಿ ಒಮ್ಮೆ ತಯಾರಿಸಲು ಸೋಮಾರಿಗಳಾಗಿ, ಅದನ್ನೇ ತಿನ್ನುತ್ತಾರೆ. ಇದು ಶರೀರಕ್ಕೆ ಬಹು ಕೆಡುಕನ್ನುಂಟುಮಾಡುತ್ತದೆ. ರಾತ್ರಿ ತಯಾರಿಸಿದ ಪದಾರ್ಥಗಳನ್ನು ಕೆಲವರು ಮಾರಣೆ ದಿವಸ ರಾತ್ರಿ ಸಹ ತಿನ್ನುತ್ತಾರೆ. ಅವುಗಳನ್ನು ಸರಿಯಾಗಿ ಮುಚ್ಚಿಡುವುದಿಲ್ಲ. ಈ ಮಧ್ಯೆ ನೂರಾರು ಕ್ರಿಮಿಗಳೂ, ನೊಣಗಳೂ ಅವುಗಳಲ್ಲಿ ಬೀಳುತ್ತವೆ. ಇದು ಕೇವಲ ತಪ್ಪು. ಹೀಗೆಂಬಾ ತಯಾರಿಸಬಾರದು. ತಮಗೆಷ್ಟು ಬೇಕೋ ಅಷ್ಟೆ ಹೊತ್ತಿಗೆ ಸರಿಯಾಗಿ ತಯಾರಿಸಿಕೊಳ್ಳಬೇಕು. ಮಿಕ್ಕಿತೆಂದರೆ ಅದನ್ನು ಭದ್ರವಾಗಿ ಮುಚ್ಚಿಡಬೇಕು. ಕುಡಿಯುವ ನೀರನ್ನು ಯಾವಾಗಲೂ, ಕುದಿಸಿ, ಆ ಮೇಲೆ ತಣ್ಣಗೆ ಮಾಡಿ ಕುಡಿಯಬೇಕು. ತಣ್ಣೀರು ಕುಡಿಯುವುದು ಅನೇಕ ರೋಗಗಳಿಗೆ ಕಾರಣ, ಮುಖ್ಯವಾಗಿ ಹೊಟ್ಟೆಯಲ್ಲಿ ಜ್ವರದ ಗಡ್ಡೆಗೆ ಬೆಟ್ಟದ ತಪ್ಪಲಿನ ನೀರನ್ನು ಕುದಿಸದೆ ಕುಡಿಯುವುದೇ ಮುಖ್ಯ ಕಾರಣ ಆದುದರಿಂದ ನೀರನ್ನು ಯಾವಾಗಲೂ ಕುದಿಸಿಯೇ ಕುಡಿಯಬೇಕು.

'ಕುದಿಸಿ ತಣಿಸಿದ ನೀರಿನಷ್ಟು ಆರೋಗ್ಯಕರವಾದ ದ್ರಾವಕವು ಹಾಲಲ್ಲದೆ ಮತ್ಯಾವುದೂ ಇಲ್ಲ. ಈ ನೀರನ್ನು ಸತತ ಕುಡಿಯಲು ಹಣ ಬೇಕೆ?' ಗ್ರಾಮಸ್ಥರು ಒಪ್ಪಿಗೆ ಶಿರಂದೋಳ ಮಾಡಿದರು. ವೈದ್ಯರು ಪುನಹ ಹೇಳತೊಡಗಿದರು. 'ಕೆಲವರು ತಮ್ಮ ಆಳುಗಳಿಗೆ ಬಹು ಕೆಟ್ಟ ಆಹಾರಗಳನ್ನು ಕೊಡುತ್ತಾರೆ. ನೀವೇನೊ ನಾವು ಬೇರೆ, ನಮ್ಮ ಆಳುಗಳು ಬೇರೆ ಎಂಬ ಭಾವನೆಯನ್ನಿಟ್ಟಿರುವಿರಿ. ಆದರೆ ವ್ಯಾಧಿಯು ಅಥವಾ ರೋಗವು ಎಲ್ಲರನ್ನೂ ಏಕ ರೀತಿಯಿಂದ ಕಾಣುತ್ತದೆ. ನಿಮ್ಮ ಪಕ್ಷಪಾತವು ನಿಮ್ಮ ಆಳುಗಳಲ್ಲಿ ತಲೆದೋರಿಸುವಂಥ ಅಂಟುರೋಗವು ಕಡೆಗೆ ನಿಮ್ಮನ್ನೂ ಬಿಡುವುದಿಲ್ಲ. ಆದುದರಿಂದ ಅವರನ್ನೂ ಸಹ ನಮ್ಮ ಹಾಗೆ ಎಣಿಸಬೇಕು.

ಮನುಷ್ಯನ ದೇಹಾರೋಗ್ಯಕ್ಕೆ, ಅದರಲ್ಲೂ ಮುಖ್ಯವಾಗಿ ಮಕ್ಕಳ ಶರೀರ ಪೋಷಣೆಗೆ ಬೇಕಾದ ಪ್ರಧಾನ ವಸ್ತುವೇ, ಹಾಲು ಮತ್ತು ಬೆಣ್ಣೆ. ಅನೇಕರು ಇದನ್ನು ಕಣ್ಣಿನಿಂದಲೂ ನಹ ಕಾಣುವುದಿಲ್ಲ. ಗ್ರಾಮಗಳಲ್ಲಿ ಆಕಳುಗಳನ್ನು, ಸಾಕುವ ದಕ್ಕೇನಾದರೂ ತೊಂದರೆ ಇದೆಯೇ? ಬೇಕಾದಷ್ಟು ಮೈದಾನಗಳಿವೆ ಸಮೃದ್ಧಿಯಾಗಿ ಹುಲ್ಲು ಬೆಳೆಯುತ್ತಿದೆ.

ಗ್ರಾಮಸ್ಥ—ಏನು ಮಾಡುವುದು? ಒಂದು ವರ್ಷ ಕೊಂಡುಕೊಂಡ ಆಕಳು ಬರುವ ವರ್ಷಕ್ಕಿರುವುದಿಲ್ಲ. ಏನೇನೋ ಕಾಯಿಲೆಗಳು ಏನೇನೋ ರೋಗಗಳು.

ವೈದ್ಯರು—ಅದಕ್ಕೂ ನಹ ನೀವೇ ಕಾರಣರು. ನಾವು ಹಿಂದೂಗಳು, ಗೋವುಗಳನ್ನು ದೈವನಂತೆ ಪೂಜಿಸುತ್ತೇವೆ. ಆದರೆ ಇದು ಮಾತ್ರ ಮಾತಿನಲ್ಲಲ್ಲದೆ ಕಾರ್ಯತಃ ಅಲ್ಲ. ಸರಿಯಾಗಿ ಪರೀಕ್ಷಿಸಿದಲ್ಲಿ ನಮ್ಮಷ್ಟು ದನಕರುಗಳನ್ನು ಹಿಂಸೆಯಲ್ಲಿಡತಕ್ಕ ಜನರು ಲೋಕದಲ್ಲೇ ಇರಲಿಕ್ಕಿಲ್ಲ. ನಮ್ಮ ಕೆಲವರ ದನದ ಕೊಟ್ಟಿಗೆಗಳನ್ನು ನೋಡಿದ್ದಾದರೆ, ನಿಜವಾಗಿಯೂ ಕರುಣೆ ಇರತಕ್ಕ ಮನುಷ್ಯನು ನಮ್ಮ ಮುಖವನ್ನು ಸಹ ಆ ಮೇಲೆ ನೋಡಲಾರನು. ಆ ಸ್ಥಳಗಳು ಜೀವಜಂತುಗಳು ವಾಸಿಸತಕ್ಕ ಸ್ಥಳಗಳೆಂದು ಯಾರು ತಾನೇ ಹೇಳಲಾಪರು? ಅಷ್ಟು ಹೀನಸ್ಥಿತಿಯಲ್ಲಿ ಅವುಗಳ ವಾಸಸ್ಥಳಗಳನ್ನಿಟ್ಟದ್ದಾದರೆ, ಕಾಯಿಲೆಗಳು ಬರದಿರುವುದುಂಟೇ? ನೀವು ದನಗಳನ್ನು ಆಹಾರವಾಗಿ ಉಪಯೋಗಿಸುವ ಒಬ್ಬ ಪಾಶ್ಚಿಮಾತ್ಯನ ಕೊಟ್ಟಿಗೆಯನ್ನು ಸಂದರ್ಶಿಸಿದುದಾದರೆ, ಆ ಮೇಲೆ ತಿಳಿಯುವಿರಿ. ನೀವು ನಿಮ್ಮ ಮನೆಗಳನ್ನು ಎಷ್ಟು ರುಚಿಯಾಗಿಟ್ಟಿರುವಿರೋ ಅಷ್ಟೇ ನಿರ್ಮಲವಾಗಿ ಅವರು ತಮ್ಮ ಕೊಟ್ಟಿಗೆಗಳನ್ನು ಇಟ್ಟಿರುತ್ತಾರೆ.

ಅದರ ಮೇಲೆ, ದನಗಳಿಗೆ ಬೇಕಾದ ತಿಂಡಿಗಳನ್ನು ಕ್ರಯಕ್ಕೆ ತೆಗೆದು ಹಾಕುವುದೆಂದರೆ ಗ್ರಾಮಗಳಲ್ಲಿ ಅದು ಆಶ್ಚರ್ಯವೇ ಆಗಿ ತೋರುವುದು. ಕಾಡುಗಳಲ್ಲಿ ಬೆಳೆವ ಹುಲ್ಲನ್ನು ತಿಂದು, ಅಂತಹ ಕೊಟ್ಟಿಗೆಯಲ್ಲಿ ವಾಸಿಸತಕ್ಕ ಆಕಳುಗಳು ನಿಮಗೆ ಎಷ್ಟು ತಾನೇ ಹಾಲು ಕೊಟ್ಟೀತು. ದಯವಿಟ್ಟು ಗೋವುಗಳನ್ನು ಸರಿಯಾಗಿ ಸಾಕಿ. ಅದು ನಿಜವಾಗಿಯೂ ಕಾಮಧೇನು ನಿಮಗೆ ಎಲ್ಲವನ್ನೂ ಕೊಡುತ್ತದೆ.

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-31 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ [illegible] ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-46

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಷ್ಟಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಷ್ಟಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಜನ್ಮಕ್ಕೆ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕ.
ಮತ್ತು ಕಂಪೆನಿ,
(52-7) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ ಸೀತಜ್ವರ, ಮೋಹಾಲಸ್ಯ, ತಲೆನೋವು, ವಾಯುರುಚಿ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಸೀಸೆಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

27 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮುಂದಿನ 'ಕೊಡಗು' ಪತ್ರಿಕೆಯ [illegible] ದಾರಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ.
ಜಿ. ನಾಣಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ. ನಾಗಪ್ಪನವರು.
ನಾಪೋಕ್ಲು—ಮ. ಬೆಳ್ಳಿಯಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಕ್ರಮವಾದ ರಶೀತಿ ತೋರಿಸದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು,** ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಅ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	-	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	1:	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅದಕ್ಕೆ ಮೇಲ್ಪಟ್ಟ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1 9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

ಪ್ರಸಿಡೆಂಟ್ –ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರಜರರ್ —ರಾವ ಬಹದ್ದೂರ್ ಸಿ ಸೋಮಯ್ಯನವರು
ಸೆಕ್ರೆಟರಿ—ಮ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಬಳಿ ಇದ್ದೇ ಇರುವುದು ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಮುಖ್ಯ ಕರ್ತವ್ಯ

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪ್ರಾವಿಡೆಂಟ್" ಸಾವಿರಾರು ಜನರ ಕುಟುಂಬಗಳನ್ನು ದಾರಿದ್ರ್ಯ ಕಷ್ಟದಿಂದ ಉದ್ಧರಿಸಿದೆ

ಪ್ರಸ್ತುತ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ತಕ್ಕ ಸಮಯವಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣೆಯಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮಾ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸ್—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು

ಮ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು)

ಮ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ)

ಮ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

52-3

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩—೮—೦

ತಾ. ೩—೨—೧೯೩೯.

ಸಂಪುಟ ೧೮] [ಸಂಚಿಕೆ ೩೬

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-8

ಚ್ಯವನಪ್ರಾಶ

ಚ್ಯವನ ಪ್ರಾಶವೆಂಬುದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ದೇಹಪೋಷಕ ಸಾರವನ್ನು ವರ್ಧಿಸುವುದು ಕ್ಷಯ, ಕೆಮ್ಮು, ಪಿತ್ತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ದಿವ್ಯವಾದದ್ದು.

ಪೌಂಡು 1ರ ರೂ. 2—6—0. ಅರ್ಧಕ್ಕೆ ರೂ. 1—5—0

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಪೂರ್ವವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ರೋಗವನ್ನು ಬೇರಿನಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅಲ್ಲದೆ, ಅಗ್ನಿ ಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎಸ್. ಮುಚ್ಚಯ್ಯ, ಗೋಣಿಕೊಪ್ಪಲು.
[24]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಪರಿಶ್ರಮೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ವೇದನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕಾಲಂ ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

11

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—ಲಕ್ಷ್ಮೀನಿವಾಸ್ ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಶೀವಜಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ ೫ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಿಗಳಿಗೆ ನೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–35 The Agricultural & Industrial Bank Ltd

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

"ZANDU"
ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52–25) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೨೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೫,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ., ಆಫಿಸಿಯೇಟಿಂಗ್ ಜನರಲ್ ಮ್ಯಾನೇಜರ್, ಅಜ್ಮೀರ್.

12–19

ವಿ ವಿ ಧ ವಿ ಚಾ ರ.

ಶೋಧ.

ಶೋಧಕರೆನ್ನುವವರು ಕೆಲವು ಬಾರಿ ಮಾಡುವ ಶೋಧಗಳು ಯಾರನ್ನೂ ಸಿಟ್ಟುಗೊಳಿಸದಿರವು. ಹೇಗಿದ್ದರೂ ಅದು ಉದ್ಯೋಗವಿಲ್ಲದುದಕ್ಕಾಗಿ ಮಾಡಿದ ಶೋಧ. ವಾಶಿಂಗ್ಟನ್ನಿನ ವಿಜ್ಞಾನಿಯೊಬ್ಬನು ಕೋಳಿ ಮರಿಗೆ 1700 ಗರಿಗಳವೆಯೆಂದು ಶೋಧ ನಡೆಸಿದ. ಮಿಸ್ಸೂರಿಯ ವರ್ನನ್ ಡೇವಿಸ್ ಬೆಳೆದ ಕೋಳಿಯ ಮೇಲೆ 8537 ಗರಿಗಳವೆ ಎಂದ. ರೋಮದ ಕೋರ್ಟಿನವನೊಬ್ಬ ಚಿಕಾಗೊ ನಗರದಲ್ಲಿ—ಒಂದು ಚದರ ಇಂಚು ಚರ್ಮದಲ್ಲಿ 46,412 ರೋಮಗಳಿವೆ ಎಂದ. ಮಿನ್ನಿಯ ಪೊಲಿಸ್‌ನ ಫ್ರೇಂಕ್ ರೌಲೇಯು ಒಂದು ಚದರ ಘನ ಅಡಿಗಾಳಿಯಲ್ಲಿ 4 ಮಿಲಿಯ ಧೂಳಿನ ಕಣಗಳಿವೆ ಎಂದು ಶೋಧಿಸಿದ. ಮೆಕ್ಸಿಕೋ ದೇಶದ ಪ್ರಕೃತಿ ಶಾಸ್ತ್ರ ಪಾರಂಗತನು ಅಲ್ಲಿನ ಕಾರ್ಲ್ಸ್ ಬಾದ್ ಎಂಬಲ್ಲಿ 9 ಮಿಲಿಯ ಬಾವಲಿಗಳಿವೆ ಎಂದು ತಿಳಿಸಿದ. ಇದೆಲ್ಲ ಅಲ್ಲವೆನ್ನಲು ಬಾರದು. ಕಾರಣ ಅವರ ಸತ್ಯಾಸತ್ಯತೆಗಾಗಿ ಲೆಕ್ಕ ಮಾಡುವರಾರು?

—೦0೦—

ಕೊಲೆಗಡುಕತನಕ್ಕೆ ವಿಟಮಿನ್ ಅಭಾವವೇ ಕಾರಣ.

ಅಮೇರಿಕದ ಹೆನ್ರಿ ಬೊರ್‌ಸೂಕ್ ಎಂಬ ವೈದ್ಯರೊಬ್ಬರು ಬಹಳ ಪರಿಶ್ರಮಪಟ್ಟು ಕೊಲೆಗಡುಕತನಕ್ಕೆ ವಿಟಮಿನ್ನಿನ ಅಭಾವವೇ ಕಾರಣವೆಂದು ಕಂಡು ಹಿಡಿದಿರುವರು. 'ಒಬ್ಬ ಮನುಷ್ಯನು ಕೊಲೆಗಡುಕನಂತೆ ವರ್ತಿಸುತ್ತಾನೆಂದರೆ ದವಸಿಗಳಲ್ಲಿ ಅತಿರೇಕವಾಗಿ ಸಿರೂವಿಕ್ ಎಸಿಡಿನ ಪ್ರವಾಹವಾಗುತ್ತದೆ. ಅಥವಾ ಅವನ ರಕ್ತದಲ್ಲಿ ಕೊಕಾರ್‌ಬೊಕ್ಸಿ ಲೇಜ್‌ನಾಸ್ತಿ ಎನ್ನಬೇಕು'. ಎಂದು ಅವರ ವಾದ.

ಹೇಗೂ ಇರಲಿ, ಧನ ದೇವತೆಯು ಪ್ರಸನ್ನಳಾದರೆ ಇನ್ನು ಮುಂದೆ ಪ್ರತಿ ರಾಷ್ಟ್ರದಲ್ಲೂ ಖೂನಿ ತಸ್ಕರುಗಳನ್ನು ಸುಲಭವಾಗಿ ಚಿಕಿತ್ಸೆಗೆಯ್ಯಬಹುದೆಂದು ಭರವಸೆಯುಂಟಾಯಿತಲ್ಲ!

—೦0೦—

62 ಕೋಳಿಮೊಟ್ಟೆಯನ್ನು ತಿಂದ!

ಒಂದೇ ಸಲಕ್ಕೆ ಅಂದರೆ ಕುಳಿತುಕೊಂಡು 62 ಮೊಟ್ಟೆಗಳನ್ನು (ಬೇಯಿಸಿದ್ದು) ತಿಂದ ಬಂಗಾಳಿ ಯುವಕನ ಸಾಹಸವು ವಿಸ್ಮಯವನ್ನುಂಟುಮಾಡುವದಾಗಿದೆ. ಇಪ್ಪತ್ತೈದು ವರ್ಷ ವಯಸ್ಸಿನ ಶೈಲೇಂದ್ರನಾಥ್ ರಾಯ್ ಎಂಬ ಯುವಕನು ಅಲಿಪುರದ ಮ್ಯಾಜಿಸ್ಟ್ರೇಟರ ಕೋರ್ಟಿನ ಬಳಿ ತನ್ನ ಸ್ನೇಹಿತರ ಕೂಡ ಪಣ ಕಟ್ಟಿಕೊಂಡು ಒಂದೂ ಕಾಲೂ ರೂಪಾಯಿ ಕೊಡುವುದಾಗಿಯೂ ಅದರಂತೆ ತಾನು ತಿನ್ನುವಷ್ಟು ಬೆಂದ ಕೋಳಿಮೊಟ್ಟೆಯನ್ನು ಕೊಡಬೇಕೆಂದು ತಿಳಿಸಿದನಂತೆ. ವ್ಯಾಪಾರಿಯು ಲಾಭ ಬಂತೆಂದು ಆಶಿಸಿ ಒಪ್ಪಿದ. ಆದರೆ ಎಷ್ಟು ಹಾಕಿದರೂ ಈ ಗುದಾಣ ಭರ್ತಿಯಾಗಲೇ ಇಲ್ಲ. ವ್ಯಾಪಾರಿಗೆ ಆಶ್ಚರ್ಯದ ಜೊತೆಗೆ ವ್ಯಾಕುಲ ಜೇರೆ ಉಂಟಾಗಲು ಆರಂಭವಾಯಿತು. ಆದರೆ ಈತನು 62ನೇ ಮೊಟ್ಟೆಯನ್ನು ತಿನ್ನುತ್ತಿರುವ ವೇಳೆಗೆ ಪೊಲೀಸಿನವನು ಬಂದು ಹೆದರಿಸಿದನು.

ಇವನಿಲ್ಲದಿದ್ದರೆ ಈತನು ಇನ್ನೂ 20 ಮೊಟ್ಟೆಗಳನ್ನು ತಿನ್ನುತ್ತಿದ್ದೆನೆಂದು ಹೇಳಿದನಂತೆ. ಇಷ್ಟೇ ಸಾಲದು ಸಂಜೆ ಎರಡು ಟೀ ಪಾರ್ಟಿಗೂ ಹೋಗಿ ಪೂರ್ಣವಾಗಿ ಭಕ್ಷಿಸಿ ಬಂದ. ಈತನೇನು ಕಲಿಯುಗದ ಬಕಾಸುರನೋ ಏನೋ ತಿಳಿಯದಾಗಿದೆ. ಅಮೇರಿಕದವನೊಬ್ಬನು ಒಂದೇ ಸಲ ಕುಳಿತು 72 ಮೊಟ್ಟೆಗಳನ್ನು ತಿಂದು ವಿಶ್ವದ ರಿಕಾರ್ಡನ್ನು ಸ್ಥಾಪಿಸಿರುವನಂತೆ.

—೦0೦—

ನಿಮೋನಿಯಾ ಇಂಜಕ್ಷನ್.

ದನದ ವೈಯ ಹುಣ್ಣಿನ ಕೀವಿನಿಂದ ಹಾಗೂ ಪ್ರಾಣಿಗಳ ಹುಣ್ಣಿನ ಸಹಾಯದಿಂದ ದಾಕಿನ ಔಷಧಿಯನ್ನು ತಯಾರಿಸುವುದು ಇದುವರೆಗೆ ನಡೆದಿತ್ತು. ಆದರೆ ಈಗ ಗರಗಸದ ಪುಡಿ, ಮೊಟ್ಟೆಯ ಬಿಳಿ ಪದಾರ್ಥ ಮತ್ತು ತೌಡುಗಳಿಂದ ದಾಕಿನ ಔಷಧಿಯನ್ನು ತಯಾರಿಸಿದ್ದಾರೆ. ಈ ಔಷಧ ಪ್ರಯೋಗದಿಂದ ನಿಮೋನಿಯಾ ಜ್ವರವನ್ನು ಗುಣಪಡಿಸಲು ಸಾಧ್ಯವಿದೆಯಂತೆ. ಡಾಕ್ಟರರು ಈ ಔಷಧಿಯನ್ನು ಪ್ರಾಣಿಗಳ ಮೇಲೆ ಮಾತ್ರ ಪ್ರಯೋಗಿಸಿದ್ದಾರೆ. ಶೋಧವು ಸಾರ್ಥಕವಾದರೆ ಬಹಳ ಅಲ್ಪ ಬೆಲೆಗೇ ಈ ಔಷಧಿಯನ್ನು ತಯಾರಿಸಿ ಜನತೆಗೆ ಉಪಕಾರ ಮಾಡಬಹುದು.

—೦0೦—

ಸುರಾಪಾನಕ್ಕೆ ಮರಣ ದಂಡನೆ!

ಹುಷಾರ್ ಎಲ್ಲೆಲ್ಲೂ ಮದ್ಯಪಾನ ನಿರೋಧ ಆಚರಣೆಗೆ ಬರುತ್ತಿದೆ. ಆದರೆ ಈ ಮುಂದೆ ಹೇಳುವ ರೀತಿಯಲ್ಲಲ್ಲ. ಸೈಬೀರಿಯನ್ ರಷ್ಯದ ಪೂರ್ವ ರಾಷ್ಟ್ರಗಳಲ್ಲಿ ರೆಡ್ ಆರ್ಮಿಯೆಂಬ ಸೈನ್ಯ ದಳದವರು ಇದ್ದಾರೆ. ಇವರು ಯಾವ ವಿಧವಾದ ಮಾದಕ ಪದಾರ್ಥಗಳನ್ನು ಸ್ವೀಕರಿಸಲಾಗದೆಂದು ರಷ್ಯನ್ ಸರ್ಕಾರದವರು ವಿಧಾಯಕ ಮಾಡಿ ಪಾನ ನಿರೋಧವನ್ನು ಆಚರಣೆ ತಂದಿದ್ದಾರೆ. ಒಂದು ವೇಳೆ ಇದಕ್ಕೆ ಅತಿಕ್ರಮಿಸಿದ್ದೇ ಆದರೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಬಹುದಾದ ವಿಧಿಗಳಿವೆಯಂತೆ.

—೦0೦—

'ಜೀವಶ್ರಾದ್ಧ'.

ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಮಕ್ಕಳುಗಳಾಗಲೀ, ಸಂಬಂಧಪಟ್ಟವರಾಗಲೀ ಯಾರೂ ಇಲ್ಲದವರು ಬ್ರಹ್ಮಕಪಾಲಕ್ಕೆ ಹೋಗಿ ಆತ್ಮಪಿಂಡವನ್ನು ಬಳಿಸಿ ಶ್ರಾದ್ಧ ಜರುಗಿಸುವುದುಂಟು. ಆದರೆ ಸಿಲ್ಹೆಟಿಯ ಸಮಾಚಾರವೊಂದರಿಂದ ಹೀಗೆ ತಿಳಿದು ಬರುವುದು.

ತನ್ನ ಮಗನ ದುರ್ನಡತೆಗಳನ್ನು ನೋಡಿ ಸಹಿಸದೆ ತನ್ನ ಮರಣಾನಂತರ ತನ್ನ ಹೆಸರಿನಲ್ಲಿ ನಡೆಯತಕ್ಕ ಶ್ರಾದ್ಧ ಕರ್ಮಗಳನ್ನು ನಡಸಲು ತನ್ನ ಮಗನು ಅರ್ಹನಲ್ಲವೆಂದು ಭಾವಿಸಿ, ಸಿಲ್ಹೆಟಿಯ ಬಿ. ಸಿ. ಮುಖರ್ಜಿ ಎಂಬ ಬ್ರಾಹ್ಮಣನೋರ್ವನು ತನ್ನ ಶ್ರಾದ್ಧವನ್ನು ತಾನೇ ಮಾಡಿಕೊಂಡ. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಗಿದೆ.

—೦0೦—

ವಿಚಿತ್ರ ಸರೋವರ.

ದಕ್ಷಿಣ ಅಮೇರಿಕದ ಆಂಡೀಸ್ ಪರ್ವತದ ದಕ್ಷಿಣ ಚಿಲಿ ಪ್ರದೇಶದಲ್ಲಿ 50 ಚದರ ಮೈಲಿ ಅಗಲವುಳ್ಳ ಸರೋವರವೊಂದಿದೆ. ಇದರ ಹೆಸರು ಸಿನೊರೆಟ್ ಎಂದು. ಆದರೆ ಈ ಸರೋವರದಲ್ಲಿ ಈಗ ನೀರಿದ್ದದ್ದು ಇನ್ನೊಂದು ಕ್ಷಣಕ್ಕೆ ನೀರಿರುವುದಿಲ್ಲ. ಅಲ್ಲಿಯ ದನ ಕಾಯುವವರಿಗೆ ವಿಸ್ಮಯ ಉಂಟಾಗಿದೆ ಇದರಿಂದ; ಅಲ್ಲದೆ ಭಯವೂ ಆಗಿದೆ. ಏಕೆಂದರೆ ಇದರಿಂದ ಕೆಡಕೇನಾದರೂ ಸಂಭವಿಸಬಹುದೋ ಅಥವಾ ಭೂಕಂಪವೇನಾದರೂ ಆಗಬಹುದೋ ಎಂಬ ಶಂಕೆ ಅವರಿಗಿದೆ. ಹತ್ತಿರದಲ್ಲಿಯ ಅಗ್ನಿ ಪರ್ವತವು ಆಗಾಗ್ಯೆ ಕಾರುವುದರಿಂದ ಭೂಮಿಯೊಳಗಿನ ಜಲಾಂಶವೆಲ್ಲವೂ ಕಡಿಮೆಯಾಗುವುದಾಗಿಯೂ, ಆಗ ಈ ನೀರೆಲ್ಲವೂ ಭೂಗರ್ಭದೊಳಕ್ಕೆ ಇಳಿದು ಹೋಗುವುದಾಗಿಯೂ ಭೂಗರ್ಭ ಶಾಸ್ತ್ರಜ್ಞರು ನಂಬಿದ್ದಾರೆ.

—೦0೦—

ಪ್ರಕೃತಿಯ ಜೋಪಾನ.

ಪ್ರಕೃತಿಯು ವಸ್ತುಗಳನ್ನು ಸಂಗ್ರಹಿಸಿಡಲು ಆರಂಭಿಸಿತೆಂದರೆ ಅದು ಸಾವಿರಾರು ವರ್ಷಗಳ ಪರ್ಯಂತ ಅವುಗಳನ್ನು ಹಾಳಾಗದಂತೆ ಉಳಿಸಬಲ್ಲುದು. ಜರ್ಮನಿಯಲ್ಲಿ ಇದೀಗ ಭೂಮಿಯನ್ನು ಅಗೆದಾಗ ಸುಮಾರು 50 ಮಿಲಿಯ ವರ್ಷಗಳ ಹಿಂದಿನ ವನಸ್ಪತಿಗಳ ಹಾಗೂ ಪ್ರಾಣಿಗಳ ಅವಶಿಷ್ಟ ಭಾಗವು ಅಂದು ಇದ್ದಂಥಾ ರೀತಿಯಲ್ಲೇ ಇಂದಿಗೂ ಕಂಡು ಬಂದಿದೆ. ಪ್ರಕೃತಿಯು ತನ್ನ ಮಡಿಲಲ್ಲಿ ಅವನ್ನು ಬಂದಿಸ್ಟ್ಯೂ ವ್ಯತ್ಯಸ್ತವಾಗದ ರೀತಿಯಲ್ಲಿ ಉಳಿಸಿದೆ. ಪ್ರಾಣಿಗಳು ಇಂಥಾ ಪ್ರದೇಶಗಳ ಹೊಂಡಕ್ಕೆ ಬಿದ್ದಾಗ ಅಲ್ಲಿನ ರಸಾಯನಗಳು ಅವುಗಳನ್ನು ಇದು ವರೆಗೆ ಹಾಳಾಗದಂತೆ ಉಳಿಸಿತೆಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ.

—೦0೦—

ಅಲ್ಲಾವುದ್ದೀನನ ಗುಹೆ ಈಗೆಲ್ಲಿದೆ?

'ಅಲ್ಲಾವುದ್ದೀನನೂ ಅತನ ಮಾಯದ ದೀಪವೂ' ಎಂಬ ಕತೆಯನ್ನು ಎಲ್ಲರೂ ಸಾಧಾರಣವಾಗಿ ಕೇಳಿರುವರು. ಈ ಕತೆಗೆ ಸಂಬಂಧಪಟ್ಟ ಗುಹೆಯೊಂದು ಈಗ ಕಂಡು ಬಂದಿದೆ. ಅಲ್ಲಿ ಈ ಜಗತ್ತು ಪ್ರಾರಂಭವಾದಾಗಿನಿಂದಲೂ ಅತುಳೈಶ್ವರ್ಯವು ಶೇಖರವಾಗಿರುವುದಾಗಿ ಹೇಳಲಾಗಿದೆ. ಈಗ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರೋರ್ಟ್‌ನಾಕ್ಸ್ ಎಂಬಲ್ಲಿ ಒಂದು ಗುಹೆ ಕಂಡು ಬಂದಿದೆ. ಇದಕ್ಕೆ ಕಬ್ಬಿಣದ ಮತ್ತು ಉಕ್ಕಿನ ಕೋಟೆ ಕೊತ್ತಲುಗಳನ್ನು ನಿರ್ಮಿಸಿ ಭದ್ರಪಡಿಸಲಾಗಿದೆ. ಇದು 10 ಸಾವಿರ ಚದರಡಿ ಅಗಲವಿದೆ. ಇದರಲ್ಲಿ ಒಂದು ದೊಡ್ಡ ಜವಾಹಿರಿ ಪೆಟ್ಟಿಗೆ ಇದೆ. ಇದು 40 ಅಡಿ ಅಗಲ ಮತ್ತು 64 ಅಡಿ ಉದ್ದವಿದೆ. ಇದನ್ನು ಬಹು ಎಚ್ಚರಿಕೆಯಿಂದ, ಯುದ್ಧ ಸಾಮಗ್ರಿಗಳಿಂದ ಕಾಯುತ್ತಿರಲಾಗಿದೆ. ಏಕೆಂದರೆ 9 ಲಕ್ಷ ಕೋಟಿ (9 ಮಹಾ ಪದ್ಮ) ಡಾಲರುಗಳಷ್ಟು (ಒಂದು ಡಾಲರಿಗೆ 3 ರೂಪಾಯಿ) ಬೆಲೆ ಬಾಳುವ ಚಿನ್ನವಿದೆಯಂತೆ!

—೦0೦—

ಧೂಮಪಾನದಿಂದ ದೃಷ್ಟಿಮಾಂದ್ಯ.

ಲಿನಿಯಾರ್ಡ್ ವಿಲಿಯಮ್ಸ್ ಎಂಬ ವೈದ್ಯರೊಬ್ಬರು ಧೂಮಪಾನದಿಂದ ದೃಷ್ಟಿಮಾಂದ್ಯ ಉಂಟಾಗುತ್ತದೆಂದು ಬರೆದಿರುವರು.

ವಿಶೇಷವಾಗಿ ಧೂಮಪಾನ ಮಾಡುವುದರಿಂದ ಎಂಬ್ಲಿಯೊಪಿಯಾ ಎಂಬ ಒಂದು ರೋಗವುಂಟಾಗಿ ದೃಷ್ಟಿಯು ಮಂದವಾಗುತ್ತದೆಂದು ಇವರ ವಾದ. ಸಹಜವಾಗಿ ನಡುಪ್ರಾಯದಲ್ಲಿ ಸಾಮಾನ್ಯ ದೃಷ್ಟಿಮಾಂದ್ಯವಾಗುವುದಾದರೂ ಧೂಮಪಾನದಿಂದಾಗಿ ವಿಶೇಷವಾಗಿ ದೃಷ್ಟಿಮಂದವಾಗುವುದಂತೆ. ಇದಕ್ಕೆ ಯೋಗ್ಯವಾದ ಚಿಕಿತ್ಸೆ ಎಂದರೆ ಧೂಮಪಾನ ತ್ಯಾಗವಂತೆ. ಕೆಲವು ಜನರ ದೇಹ ಪ್ರಕೃತಿಯ ಆಧಾರದ ಮೇಲೆ ಪೂರ್ಣ ಅಂಧತ್ವವೂ ಉಂಟಾಗಬಹುದು. ಇದಕ್ಕೆ ವಿರುದ್ಧವಾಗಿ ಕಡಿಮೆ ನೈಸರ್ಗಿಕ ಶಿಕ್ಷೆಯಾಗುವುದೆಂದರೆ ದೃಷ್ಟಿಮಾಂದ್ಯ ಹೊಗೆ ಸೊಪ್ಪು ಸೇದುವ ಕೆಲವರು ಅದನ್ನು ತ್ಯಜಿಸಿದೊಡನೆಯೇ ನಡುಪ್ರಾಯದಲ್ಲೂ ದೃಷ್ಟಿಮಾಂದ್ಯದಿಂದ ಗುಣಮುಖವಾಗುತ್ತಾ ಬರುತ್ತಿರುವರಂತೆ. ಇರಲಿ, ದೃಷ್ಟಿ ಚಕ್ರವನ್ನು ಧರಿಸ ಮರೆಯಬೇಕೆಂದಿರುವವರಿಗೆ ಏನು ಮಾಡಬೇಕೆಂದು ತಿಳಿಯಿತಲ್ಲ!

—೦0೦—

ಕಾಂಗ್ರೆಸ್ಸಿನ ಅಂತರ್ಗತ ಕೊಳೆ.

ನಮ್ಮಲ್ಲಿಯ ಕೊಳೆಯನ್ನು ನಿವಾರಿಸದ ವಿನಹ ನಾವು ನಮ್ಮ ಧ್ಯೇಯವಾದ ಸ್ವಾತಂತ್ರ್ಯವನ್ನು ಮುಟ್ಟಲಾರೆವು.

ಲೇಖಕ:— ಮಹಾತ್ಮ ಗಾಂಧಿ.

ನನ್ನ ಮತ್ತು ನನ್ನ ಸಹೋದ್ಯೋಗಿಗಳ ಸಮಯದ ಹೆಚ್ಚಿನ ಭಾಗವು ಕಾಂಗ್ರೆಸ್ ಜನರೊಳಗಿರುವ ಅಶುದ್ಧತೆಯ ಬಗ್ಗೆ ಬರುವ ಪುಕಾರುಗಳಲ್ಲೇ ಕಳೆದುಹೋಗುವುದು ಈಗಿನ ಒಂದು ಕಾಗದ ಬೊಂಬಾಯಿ ಕಾಂಗ್ರೆಸ್ ಕಾರ್ಯಕರ್ತರೊಬ್ಬರಿಂದ ಬಂದಿದೆ:—

"ತ್ರಿಪುರ ಕಾಂಗ್ರೆಸ್ ಡೆಲಿಗೇಟರುಗಳ ಚುನಾವಣೆಯು ಬೊಂಬಾಯಿಯಲ್ಲಿ ತಾ 15ನೇ ಆದಿತ್ಯವಾರ ನಡಯಿತು ಓಟಿಂಗು ಬೆಳಿಗ್ಗೆ 8 ಗಂಟೆಯಿಂದ ಪ್ರಾರಂಭವಾಗಬೇಕಿತ್ತು. ನಾನು ಓಟು ಕೊಡಲು ನಿಶ್ಚಯಪಡಿಸಿದ ಸ್ಥಳಕ್ಕೆ 8 45ಕ್ಕೆ ತಲಪಿದೆನು ಈ 45 ನಿಮಿಷಗಳಲ್ಲೇ ನನ್ನ ಬದಲು ಯಾರೋ ಓಟು ಮಾಡಿರುವರೆಂದು ತಿಳಿಯಿತು. ಹೀಗೆ ಅನೇಕ ಜನರಿಗೆ ಓಟು ಕೊಡಲು ಅವಕಾಶವಾಗಲಿಲ್ಲ ಇದರ ಕಾರಣವನ್ನು ಹುಡುಕಲು ಪ್ರಯತ್ನಪಟ್ಟೆನು. ಆದರೆ ನಾನು ಯೋಚಿಸಿದಂತೆ ಸಾಧ್ಯವಾಗಲಿಲ್ಲ. ಓಟು ಪ್ರಾರಂಭವಾದೊಡನೆಯೇ ಈ ರೀತಿಯ ಅವ್ಯವಸ್ಥೆಯು ಸಾಂಗವಾಗಿ ನಡೆದಿರುವುದು.

ಈ ತೊಂದರೆಯನ್ನು ನಿವಾರಿಸಲು ನಿಮಗೆ ಅನೇಕ ಸೂಚನೆಗಳು ಮಾಡಲ್ಪಟ್ಟಿವೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ಓಟರನೂ ಓಟು ಮಾಡಬೇಕಾದರೆ ತನ್ನ ಮೆಂಬರುತನವನ್ನು ದೃಢಪಡಿಸುವ ಅಧಿಕಾರಿಗಳಿಂದ ರುಜುಪಡೆದ ಕಾರ್ಡಿನ್ನು ಪಡೆದವನಾಗಿರಬೇಕು ಈ ಕ್ರಮಗಳನ್ನು ಜಾರಿಗೆ ತರದ ವಿನಹ ಮುಂಕಂಡ ಅನಾಚಾರಗಳನ್ನು ತಡೆಯಲು ಕಷ್ಟವಾಗುವುದು. ಅಖಂಡ ಸಂಸ್ಥೆಯೆನಿಸಿದ ಕಾಂಗ್ರೆಸಿನ ಒಬ್ಬ ಮೆಂಬರನಾಗಬೇಕಾದರೆ ಅದು ತನ್ನದೊಂದು ಹಕ್ಕು ಎಂದು ಎಲ್ಲರೂ ತಿಳಿಯಬೇಕು. ಈ ಹಕ್ಕನ್ನು ಕಾಪಾಡಿಕೊಳ್ಳಲು ಪ್ರತಿಯೊಬ್ಬನೂ ತನ್ನ ಮೆಂಬರಿಕೆಯ ಕಾರ್ಡನ್ನು ಜೋಪಾನದಿಂದಿಟ್ಟುಕೊಳ್ಳಬೇಕು. ಹೀಗೆ ತನ್ನ ಮೆಂಬರುತನದ ನಿದರ್ಶನವನ್ನು ತೋರಿಸದ ಮೆಂಬರನನ್ನು ಓಟು ಮಾಡಲು ಬಿಡಬಾರದು. ಕಾಂಗ್ರೆಸಿನ ಪ್ರಗತಿಗೆ ಕುಂದಕ ತರುವಂತಹ ಈ ಅನಾಚಾರಗಳನ್ನು ನಿಲ್ಲಿಸಲು ಏನಾದರೊಂದು ಹೊಸ ವಿಧಾನವನ್ನು ಶೋಧಿಸುವುದು ವಿಹಿತವೆಂಬುದು ಎಲ್ಲರೂ ಒಪ್ಪುವಂಥಾದ್ದಾಗಿದೆ. ಆದುದರಿಂದ ನನ್ನ ಈ ಸೂಚನೆಗಳನ್ನು ಅಂಕಿತ ಮಾಡಿಕೊಂಡದ್ದಾಗಿದೆ **ಜಗತ್ತಿನ ಮಹಾ ಸಂಸ್ಥೆಗಳಲ್ಲಿ, ಉದಾಹರಣೆಗಾಗಿ ಜರ್ಮನಿಯ ನಾಜಿ ಪಂಗಡದಲ್ಲಿ ಈ ಮೇಲ್ಕಂಡ ಕ್ರಮವನ್ನೇ ಅನುಸರಿಸುತ್ತಿರುವರೆಂದು ಈ ಸಂದರ್ಭದಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದೆಂದು ನಂಬಿರುವೆನು."**

ಈ ಲೇಖಕರ ಸೂಚನೆಯು ಸರಿಯಾದುದೇ ಹೌದು. ಪ್ರತಿಯೊಬ್ಬನೂ ತನ್ನ ಓಟು ರಿಕಾರ್ಡು ಮಾಡುವ ಮೊದಲು ತನ್ನ ತನ್ನ ಮೆಂಬರಿಕೆಯ ರುಜುವಾತಿನ ಬಗ್ಗೆ ಕಾರ್ಡನ್ನು ತೋರಿಸಬೇಕೆಂದು ಯೋಚಿಸಬೇಕಿತ್ತು. ಲೇಖಕರ ಪತ್ರವನ್ನು ಇಲ್ಲಿ ಕೊಟ್ಟದ್ದು ಬರೇ ಬೊಂಬಾಯಿಯ ಈ ಅವಸ್ಥೆಯಲ್ಲಿ ಹೀಗೆ ವರ್ತಿಸಬೇಕೆಂಬ ಉದ್ದೇಶದಿಂದಲ್ಲ. ಬದಲು ಓಟು ಮಾಡುವ ಈ ಅನಾಚಾರವಲ್ಲದೆ, ಕಾಂಗ್ರೆಸು ರಿಜಿಸ್ಟರುಗಳಲ್ಲಿ ಕೃತಕ ಯಾ ಹುಸಿ ಹೆಸರುಗಳು ಎಷ್ಟೋ ಇವೆ. ರೂಪಾಯಿಯ ನಾಣ್ಯಗಳಿವೆಯೆಂದು ಹೇಳಿಸಿಕೊಳ್ಳುವ ಬರೀ ಹುಸಿ ನಾಣ್ಯಗಳಿರುವ ಪೆಟ್ಟಿಗೆಯ ಬೆಲೆಗೂ ನಮ್ಮ ಈ ಕಾಂಗ್ರೆಸು ರಿಜಿಸ್ಟರುಗಳ ಬೆಲೆಗೂ ಏನೊಂದೂ ವ್ಯತ್ಯಾಸವಿರದು. ಕಾಂಗ್ರೆಸು ಚುನಾವಣೆಗಳಲ್ಲಿ ಜಗಳವು ಸಾಮಾನ್ಯವಾಗಿಬಿಟ್ಟಿದೆ. ಕಾಂಗ್ರೆಸ್ಸಿನ ಶಿಸ್ತು ಭಂಗವು ಎಲ್ಲೆಲ್ಲೂ ನಡೆಯುತ್ತಿದೆ. ಅನೇಕರು ಬೇಜವಾಬ್ದಾರಿಕೆಯ ಹಾಗೂ ಹಿಂಸಾಮಯ ಭಾಷಣಗಳನ್ನು ಮಾಡುವರು. ಅನೇಕರು ಸೂಚನೆಗಳನ್ನು ತಿರಸ್ಕರಿಸುವರು ಬಿಹಾರು ಇದಕ್ಕೆ ಒಂದು ಉದಾಹರಣೆ ಬಿಹಾರಿನ ರೈತರು (ಕಿಸಾನರು) ಕಾಂಗ್ರೆಸಿನವರೆಂದು ಊಹಿಸಲ್ಪಟ್ಟಿದ್ದರು. ಅವರ ಮುಖಂಡರು ಕಾಂಗ್ರೆಸಿನವರು. ಈ ಕಿಸಾನರ ಗಲಭೆಗಳನ್ನೂ, ದಬ್ಬಾಳಿಕೆಗಳನ್ನೂ ಬಿಹಾರ್ ಮಂತ್ರಿಗಳು ಭಯದಿಂದ ಎದುರು ನೋಡುತ್ತಿರುವರು. ಎರಡು ದಿನಗಳಿಗೆ ಮೊದಲು ಪಾಂಡೇಸಿನ ಕಲೆಕ್ಟರರ ಬಂಗ್ಲೆಗೆ ಕಿಸಾನರ ಗುಂಪೊಂದು ಪ್ರಮುಖ ಕಾಂಗ್ರೆಸು ಮುಖಂಡರ ನೇತೃತ್ವದಲ್ಲಿ ಹೊರಟಿದೆಯೆಂದು ನನಗೆ ತಂತಿ ಬಂತು. ಇಂತಹ ಸಂದರ್ಭಗಳನೇಕ ಇವೆ.

ರೋಮ್ ಚಕ್ರಾಧಿಪತ್ಯವು ನಾಶವಾಗುವ ಎಷ್ಟೋ ಮೊದಲು ಅದರ ಅವನತಿಯು ಪ್ರಾರಂಭಿಸಿತ್ತು. ಹಾಗೆಯೇ ಕಳೆದ 50 ವರ್ಷಗಳಿಂದ ದೇಶದ ಪ್ರಮುಖ ವ್ಯಕ್ತಿಗಳ ಸಮಾಲೋಚನೆಯಿಂದ ಕಟ್ಟಲ್ಪಟ್ಟ ಕಾಂಗ್ರೆಸು ಈ ಕೊಳೆಯಿಂದಾಗಿ ತಟ್ಟನೆ ಅವನತಿಯನ್ನು ಹೊಂದಲಾರದು. ಸುಸಮಯದಲ್ಲಿ ಈ ಕೊಳೆಯನ್ನು ತೆಗೆಯಲು ಯೋಗ್ಯ ಕಾರ್ಯಕ್ರಮ ಕೈಕೊಂಡರೆ ಅದು ಅವನತಿಯನ್ನು ಹೊಂದಲು ಸಾಧ್ಯವೇ ಇಲ್ಲ.

ನನ್ನ ಅಭಿಪ್ರಾಯದಲ್ಲಿ ಕಾಂಗ್ರೆಸಿನ ಮುಂದಿರುವ ಜಟಿಲ ಪ್ರಶ್ನೆಯೆಂದರೆ ಕಾಂಗ್ರೆಸಿನ ಶುದ್ಧೀಕರಣ ಸಮಸ್ಯೆ. ನಾವು ನಮ್ಮ ಧ್ಯೇಯದಿಂದ ಇನ್ನೂ ಬಹು ದೂರದಲ್ಲಿರುವೆವು. ನಮ್ಮ ಸಲಕರಣೆಗಳನ್ನು ಸರಿಪಡಿಸಿಕೊಂಡು ಈ ಕೊಳೆಯಿಂದ ಮಾಗದ ವಿನಹ ನಾವು ನಮ್ಮ ಧ್ಯೇಯದ ಬಳಿ ಸಾರಲಾರೆವು. ನಮ್ಮ ಧ್ಯೇಯ ಸಾಧನೆಗೆ ಸಂದರ್ಭವೊದಗಿದರೂ ನಾವು ಅದನ್ನುಪಯೋಗಿಸಲು ತಯಾರಿಲ್ಲ. ಇಂದು ನಮ್ಮ ಧ್ಯೇಯ ಸಾಧನೆಗಾಗಿ ಒಂದು ಪಡೆಯನ್ನು ನಡೆಸಲು ನನ್ನನ್ನು ಕರೆದರೆ ನನಗೆ ದುಸ್ಸಾಧ್ಯವೆಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಆದರ ಅದನ್ನು ಮಾಡದಿದ್ದರೆ ನನ್ನ ಹೇಡಿತನದ ದೋಷಕ್ಕೆ ನಾನೇ ಪಾತ್ರನಹುದು. ಜನತೆಯಲ್ಲಿ ಅಹಿಂಸಾ ತತ್ವವು ಪಸರಿಸಿದ್ದರೂ ಜನತೆಯನ್ನು ನಡೆಸುವ ಮುಖಂಡರಲ್ಲಿ ಅದು ಸ್ಥಿರತೆಯನ್ನು ಪಡೆದಿಲ್ಲ. ಪೆಟ್ಟಿಗೆಯಲ್ಲಿ ಹಣವಿಲ್ಲದೆ ಹೇಗೆ ಒಬ್ಬ ಬ್ಯಾಂಕರನಿಗೆ ಬ್ಯಾಂಕನ್ನು ನಡಸಲು ಅಸಾಧ್ಯವೋ, ಹಾಗೆಯೇ ತನ್ನ ನಂಬಿಕೆಗೆ ಪಾತ್ರರಾದ ಸೈನಿಕರಿಲ್ಲದಿದ್ದರೆ ಯುದ್ಧವನ್ನು ಗೆಲ್ಲುವುದು ಯಾವ ಸೈನ್ಯಾಧಿಕಾರಿಗೂ ಅಸಾಧ್ಯ.

ಹೀಗೆ ಬಹಿರಂಗವಾಗಿ ಯೋಚನೆ ಮಾಡುವ ನನ್ನನ್ನು ಯಾವ ಕಾಂಗ್ರೆಸಿನವರೂ ಬಯ್ಯದಿರಲಿ. ನಾನು ಕಾಂಗ್ರೆಸಿನಲ್ಲಿಲ್ಲದಿದ್ದರೂ ಕಾಂಗ್ರೆಸಿನವನಲ್ಲದೆ ಇಲ್ಲ. ಕಾಂಗ್ರೆಸಿನವರು ಬಿಕ್ಕಟ್ಟಿನ ಸಂಧರ್ಭಗಳಲ್ಲಿ ನನ್ನ ಸೂಚನೆಯನ್ನು ಆಶಿಸುತ್ತಾರೆ ಹೆಚ್ಚೇನು? ದೇವರು ಹಾಗೆ ಇಚ್ಛಿಸಿದರೆ ಈ ವರೆಗೆ ನಾನು ಹೂಡಿದ ಚಳವಳಿಕ್ಕಿಂತ ಪ್ರಚಂಡ ಚಳವಳಿಯ ಮುಖಂಡತ್ವವನ್ನು ವಹಿಸಿ ಕೆಲಸ ಮಾಡಲು ನನ್ನಲ್ಲಿ ಶಕ್ತಿ ಸಾಮರ್ಥ್ಯಗಳುಂಟೆಂದು ನಾನು ಊಹಿಸುತ್ತೇನೆ, ಕಾಂಗ್ರೆಸಿನವರು ಕಾಣುವ, ಮಾಡುವ ಕಾರ್ಯಗಳನ್ನು ನಾನು ಹೇಳಿರುವೆನು. ಕಾಂಗ್ರೆಸ್ಸಿನ ಅಂತರ್ಗತ ಕೊಳೆಯನ್ನು ಅದರ ದೊಡಕೆಯನ್ನೆತ್ತಿ ಜನತೆಗೆ ತೋರಿಸಿದ್ದರಿಂದ ಕಾಂಗ್ರೆಸಿಗೇನೂ ಅಪಾಯ ಬರಲಾರದು ಸ್ಥಿತಿಯನ್ನರಿತೂ ಬಚ್ಚಿಟ್ಟದ್ದರೆ ಮಾತ್ರ ಅದಕ್ಕೆ **ತೊಂದರೆ ಬರುತ್ತಿತ್ತು.**

ಕಾಂಗ್ರೆಸಿನ ಈಗಿನ ಸ್ಥಿತಿಯ ಪರಿಣಾಮವಾಗಿ ಅನಾಯಕತ್ವ ಹಾಗೂ ಅವನತಿಯೇ ದೇಶದ ಮುಂದೆ ನನಗೆ ಕಾಣುತ್ತಿದೆ. ಈ ಕರ್ಕಶಪ್ರಾಯವಾದ ಸಂಗತಿಯನ್ನು ತ್ರಿಪುರಿಯಲ್ಲಿ ಚರ್ಚಿಸೋಣವೇ?

ಸಂಸ್ಥಾನಗಳು.

ಸ್ವರಾಜ್ಯವು ಎಚ್ಚತ್ತವರಿಗಲ್ಲದೆ ತಿಳಿಗೇಡಿ ಮತ್ತು ಆಲಸಿಗಳಿಗಲ್ಲ.

ಲೇಖಕ:— ಮಹಾತ್ಮ ಗಾಂಧಿ.

ಸಂಸ್ಥಾನಗಳಲ್ಲಿಯ ಸ್ವಾತಂತ್ರ್ಯ ಸಂಗ್ರಾಮವು ಹೊಸ ಅಂತಸ್ಥಿಗೆ ಪ್ರವೇಶಿಸುತ್ತಿದೆ. ತಾಲ್‌ಚರ್ ಮತ್ತು ಡೆಂಕನಲ್ ಸಂಸ್ಥಾನಗಳು ದಬ್ಬಾಳಿಕೆಯ ದಾರಿಯನ್ನು ತೆರೆದಿಟ್ಟವು ತಾಲ್‌ಚರಿನ 75 ಸಾವಿರ ಜನರಲ್ಲಿ 26 ಸಾವಿರ ಜನರನ್ನು ಸಂಸ್ಥಾನವಲ್ಲಿ ಸ್ಥಳಾಂತರಿಸಿ, ಬ್ರಿಟಿಷ್ ಒರಿಸ್ಸಾಕ್ಕೆ ಕಳುಹಿಸಿರುವರೆಂದರೆ ದಬ್ಬಾಳಿಕೆಯ ಪರಮಾವಧಿಯು ಗೋಚರವಾಗದಿರದು. ಪ್ರೊ. ರಂಗ, ಠಕ್ಕರ್ ಬಾಪ್ಪಾ ಇವರೇ ಮೊದಲಾದ ಧುರೀಣರು ಗಡೀಪಾರು ಮಾಡಲ್ಪಟ್ಟಿದ್ದರು ಆದರೂ ಈಗ ಸಹ ಅಲ್ಲಿ ಶಾಂತಿ ಇಲ್ಲ. ಒರಿಸ್ಸಾ ಒಂದು ಪ್ರಾಂತ್ಯಕ್ಕೆ ಈ ನಿರಾಶ್ರಿತರನ್ನು ಸಲಹಲಿಕ್ಕಾಗಲಿಕ್ಕಿಲ್ಲ. ಒರಿಸ್ಸಾ ಸರಕಾರಕ್ಕೆ ಖರ್ಚು ಮಾಡಲು ಹಣಕ್ಕೆ ಅಭಾವ. ಆದುದರಿಂದ ಅಲ್ಲಿಯ ಮಾರವಾಡೀ ಸಹಾಯಕ ಸಂಘವು ಈ ನಿರಾಶ್ರಿತರಿಗೆ ನೆರವಾಗಬೇಕಾಗಿದೆ.

ರಾಣಪುರವು ರಾಜಕೀಯ ಏಜಂಟನನ್ನು ಕೊಲೆ ಮಾಡಿತು. ಇದಕ್ಕಾಗಿ ಪೋಲೀಸರೂ, ಮಿಲಿಟರಿಯವರೂ ಬಡವಾಯಿ ಜನರ ರಕ್ತವನ್ನು ಚೆಲ್ಲಾಡಿದರು. ಒರಿಸಾ ಸರಕಾರವು ಈಗ ಅದು ಇಚ್ಛಿಸುವಂತೆ ಇದನ್ನು ಸಾಮ್ರಾಜಿಕ ಸರಕಾರಕ್ಕೆ ಒಪ್ಪಿಸದೆ ತಾನೇ ಅದನ್ನು ವಿಚಾರಿಸುವದೆಂದು ನಂಬುತ್ತೇನೆ ಸಾಮ್ರಾಜಿಕ ಸರಕಾರವು ತನ್ನ ಇಲಾಖೆಯವನೊಬ್ಬನಾದ ಬಜಲ್‌ಗೇಟನನ್ನು ಕಳಕೊಂಡುದ್ದರಿಂದ ಬಿಸಿ ತಲೆಯುಳ್ಳದ್ದಾಗುವುದು ಈ ಕೊಲೆಯು, ಜನರ ಇಂಥ ಅನಾಚಾರಗಳಿಂದ ಯಾವ ಫಲವೂ ಬರಲಿಕ್ಕಿಲ್ಲವೆಂಬುದಕ್ಕೆ ನಿದರ್ಶನವಾಗಿದೆ.

ಜಯಪುರ ಸಂಸ್ಥಾನವು ತನ್ನ ಪ್ರಜೆಗಳು ಜವಾಬ್ದಾರಿ ಸರಕಾರವನ್ನು ಕೇಳುವಷ್ಟು ಸುಶಿಕ್ಷಿತರಾಗುವುದನ್ನು ಸಹಿಸದು. ಆದ್ದರಿಂದಲೇ ಇಂದು ಅದರ ಸುಪುತ್ರರಲ್ಲೊಬ್ಬನನ್ನು ಜೀವನ್ಮೃತನನ್ನಾಗಿ ಮಾಡಲು ಯತ್ನಿಸಿದೆ.

ರಾಜಕೋಟೆ ಸಂಸ್ಥಾನದ ಠಾಕೂರಸಾಹೇಬರ ಹಿತವಾದಿಗಳು ಸಾಹೇಬರು ತನ್ನ ಬಾಯಿಂದ ತಮ್ಮ ಪ್ರಜೆಗಳಿಗೆ ಭರವಸೆಯನ್ನಿತ್ತ ಒಪ್ಪಂದದ ಮಾತುಗಳನ್ನು ಪುನಃ ಹಿಂದಕ್ಕೆ ಗಂಟಲೊಳಗೆ ತುರುಕಿಸುತ್ತಿರುವರು ಈ ವಚನ ಭಂಗಕ್ಕೆ ಪಶ್ಚಿಮ ಸಂಸ್ಥಾನಗಳ ರೆಸಿಡೆಂಟರೂ ಭಾಗಿಗಳು. ಅವರಿಗೆ ಕಾಂಗ್ರೆಸು ಮತ್ತು ಸರ್ದಾರ ಪಟೇಲರೆಂದರೆ ಅಭಿಶಪನ ವಸ್ತುಗಳಂತೆ. ರಾಜಕೋಟೆಯಲ್ಲಿ ಹಿಂದೂ ಮುಸಲ್ಮಾನರೊಳಗೆ ಘರ್ಷಣೆಯನ್ನು ತರಲು ಏರ್ಪಾಡುಗಳಾಗುತ್ತಿವೆ. ಈ ವರೆಗೆ ಇವರೊಳಗೆ ಯಾವ ಕಲಹವೂ ಬಂದಿಲ್ಲ. ಹಿಂದೂ ಮುಸಲ್ಮಾನರು ತಮ್ಮ ತಮ್ಮೊಳಗೆ ವೈಷಮ್ಯವನ್ನು ಕಟ್ಟಿಕೊಳ್ಳಲಿಕ್ಕಿಲ್ಲವೆಂದು ನಂಬುವೆನು. ಸುಧಾರಕರ ದಾರಿಯು ವಿಷಮವಾಗಿದೆ. ಅವರು ಯಾವ ವಿಧದ ಘರ್ಷಣೆಯನ್ನೂ ತಪ್ಪಿಸಬೇಕು. ಸಂದರ್ಭ ಬಂದರೆ ತಮ್ಮ ಜನರ ಕೈಯಿಂದಲೇ ಪ್ರಾಣ ತೊರೆಯಲು ಸಿದ್ಧರಾಗಿರಬೇಕು ಅವ

ಆಯುರ್ವೇದ ವೈದ್ಯಕ್ಕೆ ಪ್ರೋತ್ಸಾಹಕೊಡಿರಿ!

ಸಿವಿಲ್ ಸರ್ಜನರಲ್ಲಿ ಪ್ರಾರ್ಥನೆ.

(ಲೇಖಕ—ಕೆ. ನಾರಾಯಣ ರಾವ್.)

ಆಯುರ್ವೇದ ವೈದ್ಯವು ಒಂದು ವಿದ್ಯೆ ಅಥವಾ ವಿಜ್ಞಾನವಲ್ಲವೆಂದೂ, ಆದುದರಿಂದ ಭಾಗಮಂಡಲದ ಆಯುರ್ವೇದಿಕ್ ಆಸ್ಪತ್ರೆಯನ್ನು ತೆಗೆದುಹಾಕಿ ಎಲೊಪತಿಕ್ ಆಸ್ಪತ್ರೆಯನ್ನು ಇಡಬೇಕೆಂದೂ, ನಮ್ಮ ಸಿವಿಲ್ ಸರ್ಜನರು ಶಿಫಾರಸು ಮಾಡಿರುವದೆಂಬದನ್ನು ಕೇಳಿ ಪ್ರತಿಯೊಬ್ಬರೂ ವಿಷಾದಿಸದೆ ಇರಲಾರರೆಂದು ನಾನು ನಂಬುತ್ತೇನೆ. ಅವರ ಈ ತತ್ವಕ್ಕೆ ಏನು ಕಾರಣವೆಂದು ನನಗೆ ಗೊತ್ತಿಲ್ಲ. ಒಬ್ಬ ಲಾಯರು ವಾದ ಮಾಡುವಾಗ ವಾದಿಯ ಕಡೆ ವಾದ ಮಾಡುತ್ತಾನೋ, ಪ್ರತಿವಾದಿಯ ಕಡೆ ವಾದ ಮಾಡುತ್ತಾನೋ ಎಂಬುದೇ ಪರಿಷ್ಕಾರವಾಗದಿದ್ದರೆ 'ಲಾ'ವನ್ನೇ ಅಲ್ಲಗಳೆಯುವುದು ತಪ್ಪು. ಒಬ್ಬ ಇಂಜಿನಿಯರಿಗೆ ಕಟ್ಟಡದ ವಿಷಯವೇ ಗೊತ್ತಿಲ್ಲದಿದ್ದರೆ ಇಂಜಿನಿಯರಿಂಗ್ ವಿದ್ಯೆಯನ್ನೇ ಅಲ್ಲಗಳೆಯುವುದು ತಪ್ಪು. ಅದರಂತೆಯೇ ಒಬ್ಬ ಆಯುರ್ವೇದಿಕ್ ವೈದ್ಯನಿಗಾಗಲೀ, ಎಲೊಪತಿಕ್ ವೈದ್ಯನಿಗಾಗಲಿ—ಕಾಯಿಲೆ ಕಂಡು ಹಿಡಿಯುವುದಾಗಲೀ, ಅದರ ಔಷಧಿಯಾಗಲಿ ತಿಳಿಯದ ಮಾತ್ರಕ್ಕೆ ಆ ವೈದ್ಯ ವಿದ್ಯೆಯನ್ನೇ ದೂಷಿಸುವುದೂ ತಪ್ಪೆಂದು ನಾನು ಭಾವಿಸುತ್ತೇನೆ. ವೈದ್ಯವನ್ನು ಅರಿತು ಅದು ಅಭ್ಯಾಸಕ್ಕೆ ತರಲು ನನ್ನ ಜೀವವನ್ನೇ ಉಪಯೋಗಿಸಿರುತ್ತೇನೆ. ಈ ಸಲುವಾಗಿ ವೈದ್ಯಕೀಯ ಅನೇಕ ತತ್ವಗಳನ್ನೂ ಅಭ್ಯಸಿಸಿರುತ್ತೇನೆ. ಇದರ ಫಲವಾಗಿ ಪ್ರತಿಯೊಂದು ವೈದ್ಯದಲ್ಲೂ ಸ್ವಲ್ಪ ಮಟ್ಟಿನ ಗುಣಗಳಿವೆಯೆಂದೂ ಅವುಗಳಲ್ಲಿ ಯಾವುದೊಂದು ವಿದ್ಯೆಯೂ ಪೂರ್ಣವಾಗಿ ನಿಜತ್ವವನ್ನು ತಲಪಿಲ್ಲವೆಂದೂ, ಆದುದರಿಂದ ಒಬ್ಬ ವೈದ್ಯನು ರೋಗಗಳ ಮೂಲ ಕಾರಣವನ್ನು ತಿಳಿದು ಅದಕ್ಕೆ ಔಷಧಿ ಕೊಡಬೇಕೆ ಹೊರತು ಇದು ಎಲೊಪತಿ, ಅದು ಆಯುರ್ವೇದ, ಇದು ಯುನಾನಿ, ಅದು ಹೋಮಿಯೊಪತಿ, ಇದು ಹೈಡ್ರೋಪತಿ, ಅದು ಬಯೊ ಕೆಮಿಸ್ಟ್ರಿ ಎಂಬ ಮುಂತಾದ ಭೇದಾಭೇದ ಕಲ್ಪನೆ ಮಾಡಿ ವೈದ್ಯವಿದ್ಯೆಯನ್ನು ಅಲ್ಲವಾಗಿ ಮಾಡಕೂಡದೆಂದೂ ಅಭಿಪ್ರಾಯ ಮಾಡುತ್ತೇನೆ.

ಆಯುರ್ವೇದವು ಒಂದು ವಿದ್ಯೆಯಲ್ಲವೆಂದು ಭಾವಿಸುವುದು ಸಂಪೂರ್ಣ ತಪ್ಪು. ಇದಕ್ಕೆ ಉತ್ತೇಜನವೂ ಇದರ ವೈದ್ಯರಿಗೆ ಪ್ರೋತ್ಸಾಹವೂ ಇಲ್ಲದಿರುವುದರಿಂದ ಅದು ಈ ಸ್ಥಿತಿಯಲ್ಲಿದೆಯೇ ಹೊರತು ಎಲೊಪತಿಕ್ ವೈದ್ಯರಿಗೆ ಇರುವ ಅನುಕೂಲತೆಗಳಿಲ್ಲವೂ ನಮಗೂ ಸಿಕ್ಕಿದರೆ ಲೋಕದ ರೋಗಿಗಳಲ್ಲಿ ನೂರಕ್ಕೆ 99 ಜನರನ್ನು ಖಂಡಿತವಾಗಿಯೂ ಗುಣಮಾಡುವ ಸ್ಥಿತಿಗೆ ಆಯುರ್ವೇದವನ್ನು ತರಬಹುದೆಂಬದನ್ನು ನಾನು ನಂಬುತ್ತೇನೆ. ಏಕೆಂದರೆ ಅದನ್ನು ಬಹು ಮುಂದಕ್ಕೆ ಎಳೆದುಕೊಂಡು ಹೋಗುತ್ತಾ, ಅದು ಎಲ್ಲಿದೆಯೆಂಬುದು ಅದಕ್ಕೆ ಗೊತ್ತಿಲ್ಲದ ಸ್ಥಿತಿಯು ಈಗ ಎಲೊಪತಿಗೆ ಬಂದಿದೆ.

'ಒಬ್ಬ ವೈದ್ಯ' ಎಂಬವನ್ನು ಯಾರಿಗೆ ಹೇಳಬಹುದು? ಒಂದು ಕಾಯಿಲೆಯನ್ನು ಕಂಡು ಹಿಡಿದು, ಅದಕ್ಕೆ ಯಾವ ಔಷಧಿಯನ್ನು ಮಾಡಬೇಕೆಂದು ತಿಳಿದು ಅದನ್ನು ತಯಾರಿಸಿ ಕೊಡುವವನೇ ವೈದ್ಯನು. ತಾನು ಕೊಡುವ ಔಷಧಿಯನ್ನು ತಾನೇ ಮಾಡುವ ಅಥವಾ ಹೀಗೀಗೆ ಇಂತಿಂಥಾ ಔಷಧಿಗಳನ್ನು ಇಂತಿಂಥಾ ರೀತಿಯಲ್ಲಿ ತಯಾರಿಸಿ ಕೊಡಿರೆಂದು ಹಾಗೆ ಮಾಡಿಸಿ ಸಿಕ್ಕಿದ ಪದಾರ್ಥವನ್ನು ಉಪಯೋಗಿಸುವಂಥಾವನಾಗಿರಬೇಕು.

ಈಗ ವಾಡಿಕೆಯಲ್ಲಿರುವ 'ಎಲೊಪತಿ' ಎಂಬ ವೈದ್ಯವನ್ನು ಅರಿಯಲು ನಾನು ಪ್ರಯತ್ನಿಸುತ್ತೇನೆ. ಅದರೆ ಅದು ಯಾವುದೆಂದು ತಿಳಿಯಲು ನನ್ನಿಂದ ಸಾಧ್ಯವಾಗಿರುವುದಿಲ್ಲ. ಬ್ರಿಟಿಷ್ ಫಾರ್ಮಕೋಪಿಯಾಲ್ಲಿ ಹೇಳಿರುವ ಔಷಧ ಸಾಮಗ್ರಿಗಳ ಉಪಯೋಗ ಜ್ಞಾನವೇ ಎಲೊಪತಿಯೇ? ಹಾಗಿದ್ದರೆ ಮರ್ಕ್, ಬೇಯರ್, ಕ್ರೂಕ್ಸ್, ಲೇಬೊರೇಟರಿಸ್, ಎಲೆನ್ ಎಂಡ್ ಹ್ಯಾನ್‌ಬರೀಸ್ ಎಂಬ ಮುಂತಾದ ಅಸಂಖ್ಯಾಕ ಪರದೇಶಿಯ ಕಂಪೆನಿಗಳ ಔಷಧಗಳು ಎಲೊಪತಿಕ್ ವೈದ್ಯದ ನಿರಾಶೆಯ ಗುರುತುಗಳೇ? ಈ ಕಂಪನಿಗಳು ತಯಾರಿಸಿ ದೊಡ್ಡ ದೊಡ್ಡ ಹೆಸರುಗಳಿಂದ ಮಾರುವ ಔಷಧಿಗಳೆಲ್ಲವೂ ಎಲೊಪತಿಯೇ? ನ್ಯುಮೋನಿಯಾ, ಟೈಫೈಡ್, ಬ್ರೊಂಕ್ಯಾಟಿಸ್, ವಾತ (Rheumatism), ಮಕ್ಕಳ ಕೃತ್‌ರೋಗ (Infantile cirrhosis of the liver), ಜ್ವರಗಡ್ಡೆ, ಉಬ್ಬಸ (Asthama), ನಿದ್ರಾಭಂಗ (Insomnia). ಅಪಸ್ಮಾರ (Epilepy), ತಲೆತಿರುಗು (Vertigo), ಮೇಮೋವಾಯು (In-coordination of limbs ಉರಿವಾಯು (Poly-neurities), ಮಾಂಸಕ್ಷಯ (Muscular atrophy) ಗಂಡಮಾಲೆ (Scrofula), ಮಧು ಮೂತ್ರ ಮತ್ತು ಬಹುಮೂತ್ರ (Diabetes mallitus and diabetes insipidis) ಮುಂತಾದ ಕಾಯಿಲೆಗಳಿಗೆ ಎಲೊಪತಿಕ್ ಔಷಧಿಗಳಾವವು? ಇವುಗಳಿಗೆ ಬ್ರಿಟಿಷ್ ಫಾರ್ಮಕೋಪಿಯಾದಲ್ಲಿ ಔಷಧಿಗಳಿಲ್ಲದಿದ್ದರೆ ಎಲೊಪತಿಯು ಒಂದು ವೈದ್ಯವಾಯಿತೆ? ಕಂಪನಿಗಳ ಔಷಧಿಗಳಾವವೂ ಯಾವುವು? ಅವುಗಳನ್ನು ಕೊಟ್ಟರೆ ನೂರಕ್ಕೆ ಎಷ್ಟು ಜನರಿಗೆ ಗುಣವಾಗುತ್ತದೆ? ಆಯುರ್ವೇದವು ಇನ್ನು ನಿಸ್ಸಾಯಕವಾಗಿಲ್ಲವೆಂದು ನಾನು ಪೃಥಕ್ಕಾಗಿ ಹೇಳಬಲ್ಲೆನು. ನಾನು ಹೇಳುವುದನ್ನು ಪ್ರತ್ಯಕ್ಷ ತೋರಿಸಲೂ ಬಹುದು.

ನನ್ನ ಸ್ವಂತ ಅಭಿಪ್ರಾಯವೇನೆಂದರೆ ದೊಡ್ಡ ಹೆಸರುಗಳನ್ನು ಕೊಟ್ಟು ಅಸಾಧ್ಯ ಫೊರ್ಮ್ಯುಲಾಗಳನ್ನು ಹೇಳಿ ವೈದ್ಯಕೀಯ ಪತ್ರಿಕೆಗಳಲ್ಲಿ ಪ್ರಕಟಿಸುವುದರ ಫಲವಾಗಿ ಎಲೊಪತಿಕ್ ವೈದ್ಯರು ತಮಗೆ ತಾವೇ ತಿಳಿಯದಂತೆ ಆ ಔಷಧಿಗಳನ್ನು ತಯಾರಿಸುವ ಕಂಪೆನಿಗಳ ಏಜೆಂಟರುಗಳಾಗುತ್ತಾರೆಯೇ ಹೊರತು ಎಲೊಪತಿಯನ್ನು ಮುಂದುವರಿಸುವ ಕರ್ತೃಗಳಾಗುವದಿಲ್ಲ ಎಂಬದು ಉದಾಹರಣೆಗಾಗಿ – Ovexine Tennate ಎಂಬ ಪುಡಿ ಇದೆ. ಇದರ ವೈದ್ಯಕೀಯ ಹೆಸರು Penyl-dihydro Quinazoline Tannate, ಅಥವಾ $C_6H_5N\cdot CH_2, C_6H_4N: Ch=$ 208,116 I wts. ಎಂಬುವುದು ಇದರ ಫಾರ್ಮ್ಯುಲಾ. ಈ ಪುಡಿಯನ್ನು ಮೇಲ್ಕಂಡ ವಾಯುಗಳನ್ನು ಸೇರಿಸಿ ಮಾಡುವುದಕ್ಕಾಗುತ್ತದೆಯೇ? ಅಥವಾ ಸಾಮಾನ್ಯ ಎಲೊಪತಿಕ್ ವೈದ್ಯರು ತಿಳಿದಾರೋ ಮಾತ್ರವಲ್ಲ; ಒಬ್ಬರ ವಿವರಣೆಯ ಮೇರೆ ಅದನ್ನು ಇನ್ನೊಬ್ಬರು ಮಾಡಿದರೆ ಮೊದಲನೆಯವರು ಮಾಡಿದ್ದರ ಗುಣಗಳು ಎರಡನೆಯವರು ಮಾಡಿದ್ದಕ್ಕೆ ಇರುವುದಕ್ಕೆ ಇಲ್ಲ, ಕಾರಣವೇನು? ಒಂದಾನೊಂದು ಕಂಪೆನಿಯ A–n ಎಂಬ ಎಣ್ಣೆಯೊಂದಿದೆ. ಇದರಲ್ಲಿ A, B, C ಮತ್ತು D ವಿಟಮಿನ್‌ಗಳಿವೆಯೆಂದು ಆ ಕಂಪನಿಯವರು ಹೇಳುತ್ತಾರೆ. ಹೊತ್ತಿಗೆ ಒಂದೆರಡು ತೊಟ್ಟು ಈ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರೆ ಶಕ್ತಿಯುಂಟಾಗುತ್ತದಂತೆ. ಕಾರ್ಯತಃ ಕೊಟ್ಟು ನೋಡಿದರೆ ಪ್ರಯೋಜನವೇನೂ ಕಾಣಲಿಲ್ಲ. ಒಲಿವ್ ಆಯಿಲಿನ ವಾಸನೆ ತೆಗೆದು ಸ್ವಲ್ಪ ಲಿಕ್ವಿಡ್ ಪಾರಾಫಿನನ್ನು ಸೇರಿಸಿ ಕಳುಹಿಸಿರುವಂತೆ ಕಾಣುತ್ತದೆ. ಆದರೂ ಎಲೊಪತಿಕ್ ವೈದ್ಯರ ಶಿಫಾರಸಿನಿಂದ ಇದನ್ನು ತಯಾರಿಸುವವರಿಗೆ ಲಕ್ಷಗಟ್ಲೆ ಹಣಗಳು ಖರ್ಚಾಗುತ್ತಿವೆ. ಇದರ ಅರ್ಥವೇನು?

ಔಷಧಗಳನ್ನು ಹುಡುಕುತಿದ್ದಂತೆ ಲೋಕದಲ್ಲಿರುವ ಪ್ರತಿಯೊಂದು ಕಾಯಿಲೆಗೂ ಔಷಧಿಯಿದೆಯೆಂದೂ, ಮಾತ್ರ ಸ್ವಲ್ಪ ಹುಡುಕಬೇಕೆಂದೂ ನನಗೆ ಖಚಿತವಾಗಿದೆ. ಸರ್ಕಾರದ ಸಹಾಯವೂ ಅನುಕೂಲತೆಯು ಇದ್ದರೆ ಇದೇನೂ ಅಸಾಧ್ಯವಲ್ಲ. ಇದಕ್ಕಾಗಿಯೇ ಆಯುರ್ವೇದಕ್ಕೆ ಪ್ರೋತ್ಸಾಹ ಕೊಡಬೇಕೆಂದು ನಾನು ಸಿವಿಲ್ ಸರ್ಜನರಿಗೆ ಪ್ರಾರ್ಥಿಸುವುದು. ಇದರಿಂದ ವೈದ್ಯಕೀಯ ಇಲಾಖೆಗೇ ಬಹಳ ಪ್ರಯೋಜನವಿದೆ.

ದು ಅಹಿಂಸಾ ಅಸಹಕಾರ ಆಯುಧಗಳಿಂದ ಆಶ್ಚರ್ಯಕರ ಜಯ ಪಡೆಯಲು ಪ್ರಯತ್ನಿಸಿರುವರು. ಅದನ್ನು ಜಾರಿಗೆ ತರುವುದೇ ಉಳಿದಿದೆ. ಜನರೇ ಸಂಬಳ ಕೊಡುವವರಾದುದರಿಂದ ರಾಜರು ಹಾಗೂ ಉದ್ಯೋಗಸ್ಥರು ಅವರ ಸೇವಕರಲ್ಲದೆ ಅವರ ಇಚ್ಛೆಯಂತೆ ವರ್ತಿಸಬೇಕಾದವರಿದ್ದಾರೆ. ಒಬ್ಬ ಮಾನವನೋಪಾದಿಯಲ್ಲಿ ಯೋಚಿಸುವ ಮತ್ತು ವರ್ತಿಸುವ ಸುಧಾರಿತ ಹಾಗೂ ಸುಶಿಕ್ಷಿತ ಜನರಲ್ಲಿ ಇದು ಅಕ್ಷರಶಃ ನಿಜವಾಗಿದೆ.

ಬೇರೆ ಸಂಸ್ಥಾನದ ಜನತೆಗೆ ನಿಧಾನವಾಗಿ ಮುಂದರಿಯಲು ಹೇಳಬಯಸುತ್ತೇನೆ. ಆತ್ಮ ಸಂಯಮನ ಹಾಗೂ ಸಹನೆಯು ಇದ್ದರೆ ಸ್ವಾತಂತ್ರ್ಯವು ಅವರದೇ ಹೌದು. ಆದ್ದರಿಂದ ಅವರು ತಮ್ಮ ತಮ್ಮೊಳಗೆ ಐಕ್ಯತೆಯನ್ನು ಪಡೆದು ತಮ್ಮ ಶಕ್ತಿಯ ಪರಿಮಿತಿಯನ್ನರಿಯಲಿ. ಬೇಜವಾಬ್ದಾರಿಯನ್ನು ಹೊಡೆದೋಡಿಸಲು, ವ್ಯವಹಾರ ಪದ್ಧತಿಯ ಕ್ರಮವನ್ನು ಎದುರಿಸಲು ತಿಳಿದಿರಬೇಕು. ಸುಧಾರಿತರು ಅಹಿಂಸಾ ತತ್ವವನ್ನು ಮನನ ಮಾಡಿಕೊಂಡರೆ ಇದು ಸುಲಭ ಸಾಧ್ಯ.

ಟ್ರ್ಯಾವಂಕೂರಿನವರು ಎಚ್ಚರವಾಗಬೇಕು. ಅಲ್ಲಿಯ ಹಿಂದೂ—ಕ್ರಿಸ್ತ ಹಾಗೂ ಇಸ್ಲಾಮ್ ಜನಾಂಗಗಳೊಳಗೆ ವೈಶಮ್ಯ ತರಲು ಪ್ರಯತ್ನಗಳಾಗುತ್ತಿವೆಯೆಂದು ನನ್ನ ಪತ್ರವ್ಯವಹಾರಗಳಿಂದ ತಿಳಿದು ಬರುತ್ತದೆ. ಅವರಿಗೆ ಜವಾಬ್ದಾರಿ ಸರ್ಕಾರ ಬೇಕಾದರೆ ಅವರು ಬೇರೆ ಬೇರೆ ಕೋಮಿನವರೆಂಬ ಭಾವನೆಯನ್ನು ಬಿಡಬೇಕು. ಅವರು ತಾವೆಲ್ಲರೂ ರಾಜಕೀಯ ಏಕಮಾತ್ರ ಗುಂಪೆಂದು ತಿಳಿದು ಹಿಂಸಾ ತತ್ವವನ್ನು ತಮ್ಮ ಅಂಕೆಗೆ ತರಲು ಅರಿತರಬೇಕು. ಅಹಿಂಸಾ ತತ್ವದಿಂದ ಜವಾಬ್ದಾರಿ ಸರ್ಕಾರವನ್ನು ಪಡೆಯಬೇಕೆಂದಿದ್ದರೆ ಅವರು ಪೊಲೀಸರ ಸಹಾಯವಿಲ್ಲದೇ ಇಡೀ ಸಂಸ್ಥಾನದಲ್ಲಿ ಶಾಂತಿ ಸ್ಥಾಪಿಸಲು ಶಕ್ತಿಯುಳ್ಳವರಾಗಿರಬೇಕು. ಅಶಿಕ್ಷಿತ ಜನತೆಗೆ ಅರಿವನ್ನುಂಟುಮಾಡಲು ಮೀಟಿಂಗು, ಮೆರವಣಿಗೆ ಇವೇ ಮೊದಲಾದ ಪ್ರಚಾರ ಕಾರ್ಯಗಳು ಅಗತ್ಯ. ಶಿಕ್ಷಿತ ಜನರಿಗೆ, ನಾಗರಿಕರಿಗೆ ಈ ಕಾರ್ಯಗಳು ಅಗತ್ಯವಿಲ್ಲ. ಸ್ವರಾಜ್ಯವು ಶಿಕ್ಷಿತರಿಗಲ್ಲದ ತಿಳಿಗೇಡಿಗಳಿಗಲ್ಲ.

ಪ್ರಕಟಣೆ.

ಸುಂಟಿಕೊಪ್ಪನಾಡು ಹಟ್ಟಿಹೊಳೆ ಸೇರುವೆ ವಾಸವಾಸ ಮಾಡಿಕೊಂಡಿರುವ ಕ್ರಿಸ್ತಾನರ ಜೆಸಿಲ್ ಸಂತ ಮಾಯಿರಯೊನ ಬಜಿಲ—ಮಸ್ತ್ರಿ ಎಂಬವರು ಈಗ ಕೆಲವು ವರ್ಷಗಳಿಂದ ನನ್ನ ಬಾಬ್ತು 'ಹಟ್ಟಿ' ಕಾಫಿ ತೋಟದಲ್ಲು ಕೆಲಸ ಮಾಡಿಕೊಂಡಿರುವಾಗ್ಗೆ 'ಹಟ್ಟಿ' ತೋಟಕ್ಕೆ ಸೇರಿದ ಹಾಡೋಗೇರಿ ಗ್ರಾಮದ ಸಾಗಿನ ಸ. ನಂ. 104 ಮತ್ತು ಸ. ನಂ. 102/1 ಅಂದಾಜು 400 ಭತ್ತ ಭೂಮಿಯನ್ನು ಕೆಲವು ಕಾರಣಗಳಿಂದ ನಾನು ಅವನ ಹೆಸರಿಗೆ ಖಿರಾರು ಬರೆದು ವರ್ಗಾಯಿಸಿ ಕೊಟ್ಟಿದ್ದೆನು. ಆದರೆ ಸದರಿ ಭೂಮಿಯ ಅನುಭವ ಸ್ವಾಧೀನವು ಲಾಗಾಯಿತಿನಿಂದ ಈವರೆಗೂ ನನ್ನಲ್ಲಿಯೇ ಇದೆ. ಈಚಿಗೆ ಕೆಲವು ದಿವಸಗಳಿಂದ ಬಜಿಲನು ತೋಟವನ್ನು ಬಿಟ್ಟು ಸದರಿ ಭೂಮಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿದ್ದಾನೆಂತ ನನ್ನ ತಿಳುವಳಿಕೆಗೆ ಬಂದಿರುವದರಿಂದ, ಸದರಿ ಭೂಮಿಯನ್ನು ವಿಕ್ರಯಿಸಲು ಆತನಿಗೆ ಎಷ್ಟು ಮಾತ್ರಕ್ಕೂ ಸ್ವತಂತ್ರವಿಲ್ಲವೆಂತಲೂ, ಹಾಗೆ ಅವನಿಂದ ಭೂಮಿಯನ್ನು ಕೊಂಡುಕೊಳ್ಳುವವರಿಗೆ ಸದರಿ ಭೂಮಿಯಲ್ಲಿ ಯಾವ ಹಕ್ಕೂ ಸಿಕ್ಕಲಾರದೆಂದು ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ.

.ಇ. ಎ. ಸಿ. ಬುಷೆಲ್
20-1-1939. } ಪ್ರೊಪ್ರೈಟರ್.
ಹಟ್ಟಿ ಎಸ್ಟೇಟ್. }

ಕೊಡಗು

ಫೆಬ್ರವರಿ ತಾರೀಕು ೩ನೇ ಶುಕ್ರವಾರ ೧೯೩೯.

ಡಿಸ್ಟ್ರಿಕ್ಟ್ ಬೋರ್ಡಿನ ಆರ್ಥಿಕ ಸ್ಥಿತಿ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲವೆಂಬುದು ಕಳೆದ ಮಾರ್ಚಿ ತಿಂಗಳಲ್ಲಿ ಹಾಲಿ ವರ್ಷದ ಬಜೆಟನ್ನು ಚರ್ಚಿಸಿದಾಗಲೇ ತಿಳಿಯಬಂದದೆ. ಕೆಲವು ವರ್ಷಗಳ ಹಿಂದೆ ಉಳುಪರಿ ಇದ್ದ ದೊಡ್ಡ ಮೊಬಲಗನ್ನು ಉಪಯೋಗಿಸಿಕೊಂಡು, ಮುಂದಕ್ಕೆ ವರ್ಷಂಪ್ರತಿ ಆಗುವ ಖರ್ಚನ್ನು ಗಣನೆಗೆ ತೆಗೆದುಕೊಳ್ಳದೆ ಮೊದಲಿನ ಬೋರ್ಡಿನವರು 'ಕಂಬಳಿ ಇರುವುದಕ್ಕಿಂತ ಹೆಚ್ಚುದ್ದ ಕಾಲು ನೀಡಿ'ದರ ಫಲಿತಾಂಶವಾಗಿ ಈಗ ಬೋರ್ಡಿನ ಆದಾಯ ವೆಚ್ಚವನ್ನು ಸರಿಗಟ್ಟುವುದು ಅಸಾಧ್ಯವೆಂದೇ ತೋರಿಬಂತು. ಹಾಗೆ ಸರಿಗಟ್ಟಲು ಯತ್ನಿಸುವಲ್ಲಿ, ಒಂದೋ ಈ ಮೊದಲು ನಡಿಸುತ್ತಾ ಬಂದಿರುವ ಶಾಲೆ ಮತ್ತು ಆಸ್ಪತ್ರೆಗಳಲ್ಲಿ ಕೆಲವನ್ನು ಮುಚ್ಚಬೇಕಾಗುವುದು, ಇಲ್ಲವೇ ಜನರ ಮೇಲೆ ಹೊಸ ತೆರಿಗೆಯನ್ನು ಹೊರಿಸಬೇಕಾಗುವುದು ಎಂಬ ಪರಿಸ್ಥಿತಿ ಉಂಟಾಯಿತು. ಕಳೆದ ಮಾರ್ಚ ತಿಂಗಳಲ್ಲಿ ಚರ್ಚಿಸಿದ ಬಜೆಟ್ಟಿನಲ್ಲಿ ಹೊಸ ಮೊಂಬರುಗಳು ಖಡ್ಡಾಯವಾಗಿ ಇಡಬೇಕಾದ ಉಳುಪರಿ ರೂ. 10,000 ಬಿಟ್ಟು, ಇದ್ದ ಉಳುಪರಿ ಸುಮಾರು 26,000 ರೂಪಾಯಿಯಿಂದ ಸುಮಾರು 10,000 ರೂ. ನ್ನು ಅತ್ಯಗತ್ಯವಾದ ಕೆಲವು ಹೊಸ ಕೆಲಸಗಳಿಗೆ ಉಪಯೋಗಿಸುವಂತೆ ನಿಶ್ಚಯಿಸಿದರು. ಇದರಿಂದ ಹಾಲಿ ವರ್ಷದ ಬಜೆಟಿನಲ್ಲಿ ಖರ್ಚು ಆದಾಯವನ್ನು ಸುಮಾರು 18 ಸಾವಿರದಷ್ಟು ಮೀರಿದಂತಾಯಿತು. ಇಷ್ಟು ದೊಡ್ಡ ವ್ಯತ್ಯಾಸದ ಬಜೆಟನ್ನು ಮಂಜೂರು ಮಾಡಲಿಕ್ಕಾಗುವುದಿಲ್ಲವೆಂತಲೂ, ಸರ್ಕಾರದವರು ಮಾಡುತ್ತಿರುವ ಸಿಬ್ಬಂದಿ ಖೋತೆಯ ಫಲಿತಾಂಶವಾಗಿ ಅವರು ಬೋರ್ಡಿಗೆ ಕೊಡುತ್ತಿರುವ ವಂತಿಗೆಯಲ್ಲಿ ಏಳು ಸಾವಿರ ಕಡಿಮೆ ಮಾಡಲಾಗುವದೆಂತಲೂ, ಆದುದರಿಂದ ಹೊಸ ಕೆಲಸಗಳಿಗಿಟ್ಟ ಹಣವನ್ನೆಲ್ಲಾ ವಜಾಮಾಡಿ ಪುನಹ ಬಜೆಟನ್ನು ತಯಾರಿಸಬೇಕೆಂದು ಚೀಫ್ ಕಮಿಷನರವರು ಬೋರ್ಡಿಗೆ ತಿಳಿಸಿದರು. ಅದೇ ಮೇರೆ ಬೋರ್ಡಿನವರು ಪುನಹ ಬಜೆಟನ್ನು ಚರ್ಚಿಸಿ ಹಲವು ಹೊಸ ಕೆಲಸಗಳನ್ನು ನಿಲ್ಲಿಸಿ, ಅತ್ಯಗತ್ಯವಾದ ಆಸ್ಪತ್ರೆ ಮತ್ತು ಶಾಲೆಗಳ ಗ್ರಾಂಟನ್ನು ಮಾತ್ರ ಇಟ್ಟುಕೊಂಡು ಸುಮಾರು ಹತ್ತು ಸಾವಿರ ರೂಪಾಯಿ ಖರ್ಚು ಖೋತೆ ಮಾಡಿದರು. ನಂತರವೂ ಕೂಡ ಅತ್ಯಗತ್ಯವಾಗಿ ಕಂಡು ಬಂದು ಬೋರ್ಡಿನಿಂದ ತೆರೆಯಲ್ಪಟ್ಟ ಬಾಳಲೆ ಆಸ್ಪತ್ರೆಗೆ ಇಟ್ಟ ಹಣವನ್ನು ಮಂಜೂರು [illegible] ಚೀಫ್ ಕಮಿಷನರು ತಿರಸ್ಕರಿಸಿದ್ದರಂತೆ. ಆದರೆ ಅದರ ಆವಶ್ಯಕತೆಯನ್ನು, ಅದರ ಮುಂದಿನ ಖರ್ಚಿಗೆ ಬೇಕಾದ ಹಣವನ್ನು ಒದಗಿಸುವ ಏರ್ಪಾಡನ್ನು ಬೋರ್ಡಿನವರು ಮಾಡುತ್ತಿರುವರೆಂಬುವನ್ನು ಚೀಫ್ ಕಮಿಷನರಿಗೆ ಮುಂದಟ್ಟು ಮಾಡಿದ ಮೇಲೆ ಅವರು ಆ ಮೊಬಲಗನ್ನು ಮಂಜೂರು ಮಾಡಿದರೆಂದು ತಿಳಿಯಬರುತ್ತದೆ. ಅಲ್ಲದೆ ಮುಂದಿನ ಬಜೆಟ್ಟನ್ನು ಸರಿಪಡಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಚೀಫ್ ಕಮಿಷನರವರು ಪುನಹ ಕೇಳಿಕೊಂಡರು. ಈ ಸೂಚನೆಯನ್ನನುಸರಿಸಿ ಬೋರ್ಡಿನವರು ಒಂದು ಸಮಿತಿಯನ್ನು ನೇಮಿಸಿ, ಆ ಸಮಿತಿಯವರು—ಉತ್ಪತ್ತಿಯನ್ನು ಹೆಚ್ಚಿಸಲು ಮತ್ತು ಖರ್ಚನ್ನು ಖೋತೆ ಮಾಡಲು ಸಿಫಾರಸು ಮಾಡಿದ ಸಲಹೆಗಳು ಬೋರ್ಡಿನ ಕಳೆದ ಮೀಟಿಂಗಿನಲ್ಲಿ ಚರ್ಚಿಸಲ್ಪಟ್ಟವು. ಅದರ ವಿವರವು ಕಳೆದ ವಾರ ಪ್ರಕಟವಾಗಿತ್ತು.

ಬೋರ್ಡಿನ ಸಿಬ್ಬಂದಿಯಲ್ಲಿ ಹೆಚ್ಚಿನ ಖೋತೆ ಮಾಡಲು ಅವಕಾಶವೇ ಇಲ್ಲ. ಉಪಾಧ್ಯಾಯರುಗಳ ಮತ್ತು ಡಾಕ್ಟರು, ಕಂಪೌಂಡರುಗಳ ಸಂಖ್ಯೆ ಕಡಿಮೆ ಮಾಡುವದೆಂದರೆ ಈಗಿರುವ ಶಾಲೆ ಮತ್ತು ಆಸ್ಪತ್ರೆಗಳಲ್ಲಿ ಕೆಲವನ್ನು ಮುಚ್ಚಬೇಕಾಗುವುದು. ದೇಶದಲ್ಲಿ ವಿದ್ಯಾಭ್ಯಾಸಕ್ಕೂ, ವೈದ್ಯಚಿಕಿತ್ಸೆಗೂ ಹೆಚ್ಚುಹೆಚ್ಚು ಅನುಕೂಲ ಮಾಡಿ ಕೊಡಬೇಕಾಗಿರುವ ಈ ಕಾಲದಲ್ಲಿ ಇರುವ ಶಾಲೆಗಳನ್ನೂ, ಆಸ್ಪತ್ರೆಗಳನ್ನೂ ಮುಚ್ಚಲು ಯಾರೂ ಒಪ್ಪಲಾರರು. ಆದುದರಿಂದ ಉಪಾಧ್ಯಾಯರುಗಳ ಸಂಬಳದಲ್ಲಿ ಕಡಿತ ಮಾಡಲಾಗುವದೆಂಬ ವದಂತಿಯು ಬಲವಾಗಿ ಹರಡಿತ್ತು. ಆದರೆ ದೇಶದ ಆಡಳಿತೆಯ ಎಲ್ಲಾ ಇಲಾಖೆಗಳಿಗಿಂತಲೂ ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿರುವ ಬೋರ್ಡಿನ ಶಾಲೆಗಳ ಉಪಾಧ್ಯಾಯರುಗಳ ಸಂಬಳವನ್ನು ಕಡಿಮೆ ಮಾಡುವುದು ನ್ಯಾಯವಾಗಿ ತೋರಲಿಲ್ಲ. ಆದರೂ ಖರ್ಚು ಖೋತೆ ಮಾಡಲೇಬೇಕಾಗಿದೆ. ಆದುದರಿಂದ ವರ್ಷಂಪ್ರತಿ ಭಡ್ತಿ ಇಲ್ಲದೆ ನಿರಖು ಸಂಬಳದವರಾದ ಬಡ ಉಪಾಧ್ಯಾಯರಿಗೆ ಪೆಟ್ಟು ತಗಲದಂತೆ ಬೋರ್ಡಿನ ಎಲ್ಲಾ ನೌಕರರಿಗೂ ಎರಡು ವರ್ಷಗಳ ವರೆಗೆ ಭಡ್ತಿ ಕೊಡುವುದನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿರುವುದು ಯೋಗ್ಯವಾಗಿದೆ. ಈ ತೀರ್ಮಾನವು ಪ್ರಾರಂಭದ ಸಂಬಳವನ್ನು ಸರ್ಕಾರದಿಂದ ಪಡೆಯುತ್ತಿರುವ ಸಬ್ ಅಸಿಸ್ಟೆಂಟ್ ಸರ್ಜನರುಗಳಿಗೂ ಅನ್ವಯಿಸುವುದರಿಂದ ಸರ್ಕಾರದವರು ಈ ವಿಚಾರದಲ್ಲಿ ಏನು ಉತ್ತರ ಕೊಡುವರೆಂ[illegible] ಬೋರ್ಡಿಗೆ ಕೊಡುವ ವಂತಿಗೆಯನ್ನು ಕಡಿಮೆ ಮಾಡಲು ನಿಶ್ಚಯಿಸಿರುವ ಸರ್ಕಾರದವರು ಈ ತರಹದ ಸಿಬ್ಬಂದಿ ಖೋತೆಯಲ್ಲಿ ಬೋರ್ಡಿನವರೊಂದಿಗೆ ಸಹಕರಿಸಬೇಕಾದದ್ದು ಅವರ ಕರ್ತವ್ಯವಾಗಿದೆ.

25 ವರ್ಷ ಸರ್ವಿಸು ಮಾಡಿ ಪೂರ್ತಿ ಪೆನ್ಶನ್ ಗಳಿಸಿರುವ ಉಪಾಧ್ಯಾಯರುಗಳನ್ನು ಕೆಲಸದಿಂದ ನಿವೃತ್ತಿಗೊಳಿಸಿ ಅವರ ಬದಲು ತಿಂಗಳಿಗೆ 12 ರೂ. ಸಂಬಳದಲ್ಲಿ ಉಪಾಧ್ಯಾಯರುಗಳನ್ನು ನೇಮಿಸುವಂತೆಯೂ, 'ವಾಲಂಟೀಯರ್' ಉಪಾಧ್ಯಾಯರುಗಳಿಗೆ ಬರೇ 8 ರೂ. ಸಂಬಳ ಕೊಡುವುದರ ಬದಲು, ಅವರಿಗೂ 12 ರೂ. ಸಂಬಳ ಕೊಡುವಂತೆಯೂ ನಿಶ್ಚಯಿಸಿದ್ದು ಯುಕ್ತವಾಗಿದೆ. ಇದರಿಂದ ಯಾರಿಗೂ ಅನ್ಯಾಯವಾಗುವಂತಿಲ್ಲ. ಬದಲು 'ವಾಲಂಟೀಯರ್' ಉಪಾಧ್ಯಾಯರುಗಳ ಸರ್ವಿಸು ಪೆನ್ಶನಿಗೂ ಗಣಿಸಲ್ಪಡುವಂತಾಗುವದಲ್ಲದೆ ಅವರ ಈಗಿನ ಸ್ಥಿತಿಯೂ ಸ್ವಲ್ಪ ಉತ್ತಮಗೊಂಡಂತಾಗುವುದು. ಮುಂದಿನ ಹೆಚ್ಚಿನ ಸಂಬಳದ ಉಪಾಧ್ಯಾಯರ ಕೆಲಸವು ಖಾಲಿ ಬಿದ್ದಾಗ್ಯೆ ಇವರಿಗೇ ಕೊಡಲ್ಪಡುವಕಾರಣ, ನಿರುದ್ಯೋಗದ ಈ ಕಾಲದಲ್ಲಿ ಈ ಸಂಬಳವು ಅಲ್ಪವೆಂದು ಗಣಿಸಲಾಗುವುದಿಲ್ಲ. ಬೋರ್ಡಿನ ಆಫೀಸಿನ ಗುಮಾಸ್ತರುಗಳ ಸಂಬಳದ ದರವೂ ಕಡಿಮೆ ಮಾಡಲ್ಪಟ್ಟಿದೆ. ಖರ್ಚಿನ ಇತರ ಚಿಲ್ಲರೆ ಬಾಬುಗಳಲ್ಲಿಯೂ ತಕ್ಕಷ್ಟು ಖೋತೆ ಮಾಡಲಾಗಿದೆ. ಆದರೂ ಕೂಡ ಬಜೆಟ್ಟನ್ನು ಸರಿಗಟ್ಟಲು ಸಾಧ್ಯವಾಗದ್ದರಿಂದ ಆದಾಯವನ್ನು ಹೆಚ್ಚಿಸುವ ದಾರಿಗಳನ್ನು ಕಂಡು ಹಿಡಿಯಬೇಕಾಯಿತು.

ಬೋರ್ಡಿನ ಆದಾಯವನ್ನು ಹೆಚ್ಚಿಸುವದೆಂದರೆ ಜನರ ಮೇಲೆ ಹೊಸ ತೆರಿಗೆಯನ್ನು ಹಾಕುವುದಾಗಿದೆ. ಈಗಿನ ಆರ್ಥಿಕ ಹೀನ ಸ್ಥಿತಿಯಲ್ಲಿ ಜನರ ಮೇಲೆ ಹೊಸ ತೆರಿಗೆಗಳನ್ನು ಹೇರುವುದಕ್ಕೆ ಯಾರೂ ಸಮ್ಮತಿಸಲಾರರು. ಆದರೆ ಆಗುವಷ್ಟು ಖರ್ಚು ಖೋತೆ ಮಾಡಿಯೂ, ಸರಕಾರದವರು ವಂತಿಗೆಯನ್ನು ಕಡಿಮೆಮಾಡಕೂಡದೆಂದು ಕೇಳಿಕೊಂಡರೂ ಪ್ರಯೋಜನವಾಗದೆಯೂ ಬಜೆಟನ್ನು ಸರಿಗಟ್ಟಲು ಸಾಧ್ಯವಾಗದ ಮೇಲೆ ಜನರಿಗೆ ಬಹು ಉಪಯುಕ್ತವಾದ ಶಾಲೆ, ಆಸ್ಪತ್ರೆ ಮೊದಲಾದುವನ್ನು ಮುಚ್ಚಬೇಕಾಗುವುದು, ಇಲ್ಲವಾದರೆ ಜನರಿಂದ ಹೊಸ ತೆರಿಗೆ ಎತ್ತಬೇಕಾಗುವ ಬಿಕ್ಕಟ್ಟಿನ ಪರಿಸ್ಥಿತಿಯು ಬೋರ್ಡಿಗುಂಟಾಯಿತು. ಹೇಗೂ ಶಾಲೆ, ಆಸ್ಪತ್ರೆ ಮುಂತಾದ ಸಂಸ್ಥೆಗಳು ಜನರಿಗೆ ಅತ್ಯಾವಶ್ಯಕವಾಗಿರುವುದರಿಂದ ಅವುಗಳನ್ನು ಮುಚ್ಚುವುದರ ಬದಲು ಹೆಚ್ಚಿಸುವುದು ಉತ್ತಮವೆಂದೂ, ಅದಕ್ಕಾಗಿ ಜನರಿಂದ ಅಲ್ಪ ಸ್ವಲ್ಪ ಹೆಚ್ಚಿನ ತೆರಿಗೆಯನ್ನು ವಸೂಲು ಮಾಡುವುದು ಉಚಿತವೆಂದೂ ಬೋರ್ಡಿನವರು ನಿಶ್ಚಯಿಸಿರುವರು. ತೆರಿಗೆಯನ್ನು ಹೆಚ್ಚಿಸುವ ವಿಚಾರದಲ್ಲೂ ಬಡ ರೈತರಿಗೆ ಹೆಚ್ಚಿನ ಪೆಟ್ಟು ತಗಲದಂತೆಯೂ, ಉತ್ಪತ್ತಿ ಇರುವವರಿಂದ ಮಾತ್ರ ಸುಲಭದಲ್ಲಿ ವಸೂಲಿ ಮಾಡಬಹುದಾದಂತಹ ತೆರಿಗೆಗಳನ್ನು ಮಾತ್ರ ಹಾಕುವಂತೆಯೂ ತೀರ್ಮಾನಿಸಿರುವುದು ಯುಕ್ತವಾಗಿದೆ. ಇದು [illegible]ಬು ತೆರಿಗೆಯ ದರವು ಸ್ವಲ್ಪ ಮಟ್ಟಿಗೆ ಏರಿಸಲಾಗಿದೆ. ಇದು ಆದಾಯವಿರುವವರಿಂದ ಮಾತ್ರ ವಸೂಲು ಮಾಡುವದಾಗಿದೆ. ಮುನಿಸಿಪಾಲಿಟಿ, ನೋಟಿಫೈಡ್ ಏರಿಯಾ ಮತ್ತು ಪಂಚಾಯಿತಿ ಇರುವ ಸ್ಥಳಗಳಲ್ಲಿ ಮನೆ ಕಂದಾಯವಿದೆ ಮತ್ತು ಗಾಡಿ, ಸೈಕಲ್ ಮೊದಲಾದುವುಗಳಿಗೆ ಲೈಸನ್ಸ್ ಫೀಯೂ ಇದೆ. ಮೇಲಿನ ಸಂಸ್ಥೆಗಳವರು ಮಾಡಿರುವಂತೆಯೇ ಬೋರ್ಡಿನವರೂ ನೀರು, ಬೆಳಕು, ಶೌಚ ಮತ್ತು ವೈದ್ಯಕೀಯ ಅನುಕೂಲತೆಗಳನ್ನು ಏರ್ಪಡಿಸಿರುವ ಪೇಟೆ ಸ್ಥಳಗಳಲ್ಲಿ ಮನೆ ಕಂದಾಯವನ್ನೂ, ಬೋರ್ಡಿನ ಆಧೀನವಿರುವ ಎಲ್ಲಾ ಸ್ಥಳಗಳಲ್ಲಿಯೂ ಗಾಡಿ ಮತ್ತು ಸೈಕಲ್‌ಗಳಿಗೆ ಒಂದು ರೂಪಾಯಿಯಂತೆ ತೆರಿಗೆಯನ್ನೂ ಹಾಕಲು ಯೋಚಿಸಿರುವುದು ಅನ್ಯಾಯವೆಂದು ಹೇಳಲಾಗುವುದಿಲ್ಲ. ಹೋಟೇಲುಗಳ ಲೈಸನ್ಸು ಫೀಜನ್ನೂ ಸ್ವಲ್ಪ ಏರಿಸಿದೆ. ಬೇರೆ ಉಪಾಯವಿಲ್ಲದ್ದರಿಂದಲೇ ಈ ತರಹದ ಉತ್ಪತ್ತಿಯ ದಾರಿಯನ್ನು ಕೈಕೊಳ್ಳಬೇಕಾಯಿತೆಂದು ತೋರುತ್ತದೆ. ಸರ್ಕಾರಿ ಉದ್ಯೋಗಸ್ಥರೆಲ್ಲರೂ ಸರ್ಕಾರಿ ಕಟ್ಟಡಕ್ಕೆ ಮನೆ ಬಾಡಿಗೆ ಕೊಡಬೇಕೆಂದು ನಿಶ್ಚಯಿಸಿರುವದರಿಂದ ಸಬ್ ಅಸಿಸ್ಟೆಂಟ್ ಸರ್ಜನರುಗಳೂ ಮನೆ ಬಾಡಿಗೆ ಕೊಡಬೇಕೆಂದು ತೀರ್ಮಾನಿಸಿದ್ದು ಸಮಂಜಸವಾಗಿದೆ. ಆದರೆ 8ನೇ ತರಗತಿಯ ಶಾಲಾ ಫೀಜನ್ನು 5 ರೂ. ಯಿಂದ 7-8-0ಗೆ ಏರಿಸಬೇಕೆಂಬ ಮತ್ತು ಗ್ರಾಮಗಳಲ್ಲಿ ಹೇರುವ ಕತ್ತೆ, ಕುದುರೆ ಮತ್ತು ಎತ್ತುಗಳಿಗೆ ಕಂದಾಯ ಹಾಕಬೇಕೆಂಬ ಕಮಿಟಿಯ ಸಲಹೆಗಳನ್ನು ಬೋರ್ಡಿನವರು ತಿರಸ್ಕರಿಸಿದ್ದು ನ್ಯಾಯವೆಂದೇ ಹೇಳಬೇಕು. ಹೇಗೂ ಬೋರ್ಡಿನವರು ವಿದ್ಯಾಭಿವೃದ್ಧಿ ಮತ್ತು ವೈದ್ಯಕೀಯ ಅನುಕೂಲತೆಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಬಜೆಟ್ಟನ್ನು ಸರಿಗಟ್ಟಲು ಮಾಡುತ್ತಿರುವ ಪ್ರಯತ್ನಕ್ಕೆ ದೇಶದವರು ಮತ್ತು ಸರ್ಕಾರದವರು ನೆರವಾಗುವರಾಗಿ ನಂಬುತ್ತೇವೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ.

'ಸೋಲು ನನ್ನದು.'

ಗಾಂಧಿಯವರ ಪ್ರಕಟಣೆ.

ಶ್ರೀ. ಸುಭಾಷ ಚಂದ್ರ ಭೋಸರು ಬಹುಮತದಿಂದ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಪುನಹ ಚುನಾಯಿಸಿ ಬಂದಿರುವರು. ಅವರು ಪುನಹ ಅಧ್ಯಕ್ಷರಾಗುವುದು ನನಗೆ ಹಿತಕಾರಿಯಾಗಿ ಕಾಣಲಿಲ್ಲ. ಆದ್ದರಿಂದ ಪ್ರಾರಂಭದಿಂದಲೇ ಅದಕ್ಕೆ ವಿರೋಧವಿದ್ದೆನು. ಅವರ ಬಹಿರಂಗ ಪ್ರಕಟಣೆಗಳಲ್ಲಿ ಸೂಚಿಸಿರುವ ವಿಷಯಗಳು ನನಗೊಪ್ಪುವುದಿಲ್ಲ. ಅವರು ತಮ್ಮ ಸಹೋದ್ಯೋಗಿಗಳ ವಿಚಾರ ಬರೆದ ಸಂಗತಿಗಳು ಅಪ್ರಸ್ತುತವಾದವಾಗಿವೆ. ಆದರೂ ಅವರ ಜಯಕ್ಕೆ ನಾನು ಸಂತೋಷಪಡುತ್ತೇನೆ. ಶ್ರೀ. ಮೌಲಾನ ಅಬ್ದುಲ್ ಕಲಾಂ ಆಜಾದರು ತಮ್ಮ ಉಮೇದ್ವಾರಿಕೆಯನ್ನು ವಾಪಸು ತೆಗೆದುಕೊಂಡಾಗ ಡಾ. ಪಟ್ಟಾ[illegible]

ನಾನೇ ಕಾರಣನಾದ್ದರಿಂದ ಈ ಅಪಜಯವು ನನ್ನದೆಂದು ಹೇಳುವೆನು. ಇದರಿಂದ ನಾನು ಪ್ರತಿಪಾದಿಸುವ ತತ್ವ ಹಾಗೂ ಸಲಹೆಗಳನ್ನು ತ್ರಿಪುರಿ ಪ್ರತಿನಿಧಿಗಳು ಅಂಗೀಕರಿಸಲಿಲ್ಲವೆಂದು ವಿಶದವಾಗುತ್ತದೆ. ಈ ಸೋಲು ಸಭೆಯಲ್ಲಿ ನಾನು ಅನುಭವಪಡುತ್ತೇನೆ. ಡೆಲ್ಲಿಯ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಹೊಸ ನಡೆಸಿದ ಮೆಂಬರುಗಳ ವಿಚಾರದ ಬಗ್ಗೆ ನಾನು ಬರೆದ ಅಭಿಪ್ರಾಯವನ್ನು ಈಗ ಜಾರಿಗೆ ತರುವ ಸಂದರ್ಭ ಬಂದಿದೆ. ಸುಭಾಷ ಬಾಬುಗಳು ಅವರು ಹೇಳುವ ಬಲ ಪಕ್ಷದವರ ಪ್ರೆಸಿಡೆಂಟರಾಗುವವರ ಬದಲು ಇಂದು ಚುನಾವಣೆಯಲ್ಲಿ ಆರಿಸಿ ಬಂದಿರುವರು. ಆದ್ದರಿಂದ ಅವರಿಗೆ ಬೇಕಾದ ಕಮಿಟಿಯನ್ನು ಚುನಾಯಿಸಿಕೊಂಡು ಅವರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಯಾವ ಆತಂಕವೂ ಇಲ್ಲ.

ಕೃತಕ ಮೆಂಬರುಗಳು.

ಅಲ್ಪ ಪಕ್ಷ ಹಾಗೂ ಬಹು ಪಕ್ಷ ಇವೆರಡಕ್ಕೂ ಅನ್ವಯಿಸುವ ಒಂದು ವಿಚಾರವೆಂದರೆ ಕಾಂಗ್ರೆಸ್ ಸಂಸ್ಥೆಯಲ್ಲಿರುವ ಅಂತರ್ಗತ ಕೊಳೆ. ನಾನು 'ಹರಿಜನ'ದಲ್ಲಿ ಬರೆದ ಲೇಖನಗಳು ಕಾಂಗ್ರೆಸ್‌ನಲ್ಲಿರುವ ಕೃತಕ ಮೆಂಬರುಗಳ ವಿಚಾರ ವಿಶದಪಡಿಸಿವೆ. ಕಳೆದ ಕೆಲವು ತಿಂಗಳಿಂದ ಈ ರಿಜಿಸ್ಟರುಗಳನ್ನು ಅಜಮಾಯಿಸಿ ಸರಿಪಡಿಸಲು ಸೂಚಿಸಿದ್ದೇನೆ. ಈ ಅಜಮಾಯಿಷಿಯಿಂದ ಕೃತಕ ಸದಸ್ಯರ ಸಹಾಯದಿಂದ ಡೆಲಿಗೇಟರಾಗಿ ಬಂದವರೆಲ್ಲರೂ ತಮ್ಮ ಸ್ಥಾನ ಕಳಕೊಳ್ಳುವರೆಂಬುವುದು ಖಂಡಿತ. ಇಂಥಾ ಕಠಿಣ ಕ್ರಮವನ್ನು ನಾನು ಸೂಚಿಸುವುದಿಲ್ಲ. ಕಾಂಗ್ರೆಸ್ಸಿನ ರಿಜಿಸ್ಟರುಗಳನ್ನು ಅಜಮಾಯಿಸಿ ಕೃತಕ ಮೆಂಬರನ್ನು ತೆಗೆದು ಮುಂದಕ್ಕೆ ಕಾಂಗ್ರೆಸ್ಸಿನ ಪ್ರಗತಿಯನ್ನು ಕಾಪಾಡಬೇಕೆಂದಿಷ್ಟೇ ಕೇಳಿಕೊಳ್ಳುವೆನು.

ಅಲ್ಪ ಪಕ್ಷದವರು ಅಧೈರ್ಯಪಟ್ಟುಕೊಳ್ಳಲು ಯಾವ ಕಾರಣವೂ ಇಲ್ಲ. ಕಾಂಗ್ರೆಸ್ಸಿನ ಈ ವರೆಗಿನ ಕಾರ್ಯಕ್ರಮವನ್ನು ನಂಬುವುದಾದರೆ ಅವರು ಅಲ್ಪ ಪಕ್ಷದವರಿದ್ದರೂ ಕಾಂಗ್ರೆಸ್ಸಿನ ಹೊರಗಿದ್ದರೂ ಅದನ್ನು ಜಯಪ್ರದವಾಗಿ ನಡಿಸಬಹುದು.

ಒಟ್ಟಾರೆ ಸುಭಾಷ ಬಾಬುಗಳು ದೇಶದ ವೈರಿಯಲ್ಲ. ಅದಕ್ಕಾಗಿ ಅವರು ಆತ್ಮಬಲಿದಾನ ಮಾಡಿರುವರು. ಅವರ ಅಭಿಪ್ರಾಯದಲ್ಲಿ ಅವರೇ ಮುಂದಿರುವವರು, ಧೈರ್ಯ ಸಂಪನ್ನರು, ಹಾಗೂ ಕಾರ್ಯಕರ್ತರು. ಅಲ್ಪ ಪಕ್ಷದವರು ಇವರ ಕಾರ್ಯಕ್ರಮಕ್ಕೆ ಜಯವನ್ನಾಶಿಸಬಹುದು. ಅವರ ಜೊತೆಯಲ್ಲಿ ಕೆಲಸ ಮಾಡಲು ಮನಸ್ಸಾಕ್ಷ್ಯವಾದಾಗ ಅವರು ತಟಸ್ಥರಾಗಬೇಕು. ಆದ್ದರಿಂದ ಎಲ್ಲಾ ಕಾಂಗ್ರೆಸ್ಸಿನವರಿಗೆ ನಾನು ಹೇಳುವದೆಂದರೆ ಕಾಂಗ್ರೆಸ್ಸಿನಲ್ಲಿ ಮರುತೆಯಿದ್ದು ಕಾಂಗ್ರೆಸ್ಸಿನ ಹೊರಗಿರುವ ಕೆಲಸಗಾರರು ಕಾಂಗ್ರೆಸ್ಸಿನ ಶ್ರೇಯಸ್ಸಾಧಕರು. ಆದ್ದರಿಂದ ಕಾಂಗ್ರೆಸ್ಸಿನೊಳಗಿದ್ದು ಕೆಲಸ ಮಾಡಲು ಅನಾನುಕೂಲರಾದವರು ಹೊರಗೆ ಬರುವುದೊಳಿತು. ಕೆಟ್ಟ ಮನೋಭಾವದಿಂದ ಹೊರಗೆ ಬರುವವನಲ್ಲ; ಕಾಂಗ್ರೆಸಿಗೆ ಹೆಚ್ಚಿನ ಸೇವೆ ಸಲ್ಲಿಸುವೆನೆಂಬ ಭಾವದಿಂದ.

ತಿರುವಾಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಮುಂದಿನ ಸ್ಥಿತಿ.

ಕಳೆದ ತಾರೀಖು 28 ಮತ್ತು 29 ರಲ್ಲಿ ಮದರಾಸಿನಲ್ಲಿ ನಡೆದ ತಿರುವಾಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಠೇವಣಾತಿದಾರರ ಮತ್ತು ಷೇರುದಾರರ ಮೀಟಿಂಗಿಗೆ ನಾನು ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಪರ ಪ್ರತಿನಿಧಿಯಾಗಿ ಹೋಗಿದ್ದೆನು. ಮೀಟಿಂಗಿನಲ್ಲಿ ಸಾವಿರಕ್ಕಿಂತಲೂ ಹೆಚ್ಚು ಜನರು ಸೇರಿ ಅಂಡರ್ ಸನ್ ಹಾಲ್ ತುಂಬಿಹೋಗಿತ್ತು. ಮೀಟಿಂಗಿನ ಪ್ರಾರಂಭದಲ್ಲಿ ಬ್ಯಾಂಕನ್ನು ಕೂಡಲೆ ಒಡೆಯುವುದಕ್ಕೂ, ಪುನರ್ರಚನೆಗೂ ಅನುಕೂಲ ಅಭಿಪ್ರಾಯವಿದ್ದಂತೆ ತೋರಿತು. ಆದರೆ (ಮೈಸೂರಿನ ರಿಟೈರ್ಡ್ ಕೌನ್ಸಿಲರಾದ ರಾ. ಬ. ಪ್ರ. ಎನ್. ವಿ. ರಾಜಗೋಪಾಲಾಚಾರ್ಯರಂಥ) ದೊಡ್ಡ ದೊಡ್ಡ ಠೇವಣಾತಿದಾರರು ಪುನರ್ರಚನೆಯೇ ಠೇವಣಾತಿದಾರರಿಗೆ ಹೆಚ್ಚಿನ ಪ್ರಯೋಜನವೆಂದು ಭಾಷಣ ಮಾಡಿದ ಮೇಲೆ, ಜನರ ಮನಸು ತಿರುಗಿ ಬಹು ದೊಡ್ಡ ಬಹುಮತದವರು ಪುನರ್ರಚನೆಯ ಕಡೆಗೆ ಓಟು ಮಾಡಿದರು. ಪುನರ್ರಚನೆಯ ಸಂಬಂಧ ಹಲವು ಉಪಸೂಚನೆಗಳನ್ನು ಆಲೋಚಿಸಲು ಹತ್ತು ಮೆಂಬರುಗಳ ಒಂದು ಕಮಿಟಿ ನೇಮಿಸಲಾಯಿತು. ಅಲ್ಲದೆ ಕ್ವಿಲಾನ್ ಡಿಸ್ಟ್ರಿಕ್ಟ್ ಜಡ್ಜರ ತೀರ್ಪು ಪುನರ್ರಚನೆಗೆ ವಿರುದ್ಧವಾಗಿರುವ ಕಾರಣ ಅಲ್ಲಿಯ ಮಹಾರಾಜ, ಮಹಾರಾಣಿ ಮತ್ತು ದಿವಾನರ ಭೇಟಿ ಮಾಡಿ ಪುನರ್ರಚನೆಗೆ ಒಪ್ಪಿಗೆ ಪಡೆಯಲಿಕ್ಕಾಗಿ ಅವರಲ್ಲಿಗೆ ಒಂದು ಡೆಪ್ಯುಟೇಶನ್ ಹೋಗಲು ಐದು ಮಹನೀಯರು ನೇಮಿಸಲ್ಪಟ್ಟರು. ಇದೇ ರೀತಿ ತಾ. 29ರಲ್ಲಿ ನಡೆದ ಷೇರುದಾರರ ಮೀಟಿಂಗಿನಲ್ಲಿಯೂ ತೀರ್ಮಾನಗಳಾದುವು. ಈ ಮೀಟಿಂಗುಗಳ ತೀರ್ಮಾನಗಳನ್ನು ಸಭೆಯ ಅಧ್ಯಕ್ಷರಾಗಿದ್ದ (ಸರಕಾರಿ ಲಿಕ್ವಿಡೇಟರಾದ) ಮಿ. ಜಿಲ್ಲರವರು ಮದರಾಸು ಹೈ ಕೋರ್ಟಿಗೆ ರಿಪೋರ್ಟು ಮಾಡುವರು. ನಂತರ ಪುನರ್ರಚನೆಯಾಗಬೇಕೋ ಅಥವ ಲಿಕ್ವಿಡೇಟ್ ಮಾಡಬೇಕೋ ಎಂಬ ವಿಷಯವನ್ನು ಹೈ ಕೋರ್ಟಿನ ಜಡ್ಜರು ತೀರ್ಮಾನಿಸಲಿರುವರು. ಹೈ ಕೋರ್ಟ್ ಜಡ್ಜರೂ ಪುನರ್ರಚನೆಗೆ ಒಪ್ಪುವ ಸಂದರ್ಭ ಇದೆಯೆಂದು ಅಲ್ಲಿ ನೆರೆದಿದ್ದವರಲ್ಲಿ ಹೆಚ್ಚಿನವರ ಅಭಿಪ್ರಾಯವಾಗಿತ್ತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷ, ಸೆಂಟ್ರಲ್ ಬ್ಯಾಂಕು.
ತಾ. 1-2-'39.

ಪ್ರ ಕ ಟ ಣೆ.

ತತ್ಕಾಲಿಕ ಹತ್ತು ದಿನಗಳ ವರೆಗೆ ನಮ್ಮ ವಾಕ್ಚಲನ ಚಿತ್ರ ಕಂಪನಿಯನ್ನು ಗೋಣಿಕೊಪ್ಪಲಿಗೆ ಸಾಗಿಸುವೆವೆಂದೂ, ನಂತರ ಪುನಃ ವೀರಾಜಪೇಟೆಗೆ ಬಂದು ಯಥಾ ರೀತಿ ಚಿತ್ರ ಪ್ರದರ್ಶನವನ್ನು ಕೈಕೊಳ್ಳುವೆವೆಂದೂ ಈ ಮೂಲಕ ಮಹಾ ಜನರಿಗೆ ತಿಳಿಯಪಡಿಸುತ್ತೇವೆ.

ಯಂ. ಆರ್. ಕೃಷ್ಣ ರಾವ್,
ಶ್ರೀ ಕೃಷ್ಣ ಟೂರಿಂಗ್ ಟಾಕಿಸಿಗಾಗಿ.

Please visit :—

Hotel Kohinoor

Comfortable—Boarding & Lodging.

Opp.—Krishna Rajendra Hospital, Mysore.

ಹೋಟೆಲ್ ಕೊಹಿನೂರ್

ಶ್ರೀ ಕೃಷ್ಣ ರಾಜೇಂದ್ರ ಆಸ್ಪತ್ರೆ ಎದುರು, ಮೈಸೂರು.

ಮೇಲ್ಕಂಡ ಹೋಟೆಲು ನಗರದ ಮುಖ್ಯ ಸ್ಥಳಗಳಾದ—ಆಸ್ಪತ್ರೆ, ಅರಮನೆ, ರೈಲ್ವೆ ಸ್ಟೇಷನ್, ಬಸ್ ಸ್ಟೇಂಡ್, ಮಾರ್ಕೆಟ್ ಮತ್ತು ಸಿನೆಮ ಮಂದಿರ ಮೊದಲಾದವಕ್ಕೆಲ್ಲಾ ಕೇಂದ್ರದಲ್ಲಿದ್ದು, ಸಂಸಾರಸ್ಥರಿಗೂ, ಏಕಾಂಗಿಗಳಿಗೂ ವಾಸಕ್ಕೆ ಯೋಗ್ಯವಾಗಿದೆ. ಎಲ್ಲಾ ಜನಾಂಗ ಮತ್ತು ಎಲ್ಲಾ ತರಗತಿಯ ಜನಗಳಿಗೂ, ಖಾಯಂ ಬೋರ್ಡರುಗಳಿಗೂ ಒಪ್ಪುವಂತ ಭೋಜನ ಮತ್ತು ದರಗಳಿರುತ್ತವೆ.

ಮಹನೀಯರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬೇಕಾದ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಹೋಟೆಲ್ ಕೊಹಿನೂರ್.
1 ಮೈಸೂರು.

ಕರ್ನಾಟಕ ಚರಕಾ ಸಂಘ, ಖಾದಿ ವಸ್ತ್ರಾಲಯ,
ಕೆ. ಆರ್., ಬೆಂಗಳೂರು ಸಿಟಿ.

ಕೊಡಗಿನ ಖಾದೀ ಬಜಾರ್ ಪ್ರವಾಸ ಕ್ರಮ

ಕೊಡಗಿನ ಹಳ್ಳಿಗಳಲ್ಲಿರುವ ಖಾದೀ ಪ್ರೇಮಿಗಳಿಗೆ ಖಾದಿ ಕೊಳ್ಳಲು ಅನುಕೂಲವಾಗುವಂತೆಯೂ, ಖಾದೀ ಕೈಗಾರಿಕೆಯಲ್ಲಿ ಇದು ವರೆಗೆ ನಡೆದಿರುವ ಪ್ರಗತಿಯನ್ನು ನೋಡಲು ಹಳ್ಳಿಗರಿಗೆಲ್ಲ ಸಿಗುವಂತೆಯೂ ಕೊಡಗಿನಲ್ಲಿ ಸಂತೆಗಳು ನಡೆಯುವ ಸ್ಥಳಗಳಿಗೆಲ್ಲ ಖಾದಿ ಬಟ್ಟೆಗಳನ್ನು ತಂದು ಒಂದೆರಡು ದಿನಗಳು ಪ್ರದರ್ಶಿಸಿ ಖಾದೀ ಮಾರಾಟ ಮಾಡಲು ವ್ಯವಸ್ಥೆ ಮಾಡಿದೆ. ಈ ಕೆಳಗೆ ಕೊಟ್ಟಿರುವ ಕಾರ್ಯಕ್ರಮದಲ್ಲಿ ಯಾವ ಯಾವ ತಾರೀಕುಗಳು ಖಾದಿಯ ಮಾರಾಟಕ್ಕೆ ಸಿಗುವವೆಂದು ಸೂಚಿಸಿದೆ. ಆಯಾ ಊರುಗಳಿಗೆ ಸಂತೆಗೆ ಬರತಕ್ಕ ಮಹಾ ಜನರು ಖಾದೀ ಪ್ರದರ್ಶನಕ್ಕೆ ಬಂದು ಖಾದಿಯನ್ನು ಕೊಂಡು ದರಿದ್ರನಾರಾಯಣನ ಸೇವೆ 'ಇದರ' ... ಈ ಮೂಲಕ ಪ್ರಾರ್ಥನೆ.

6-2-39 ಸೋಮವಾರ—ವಾಪಾಸು ಮಡಿಕೇರಿಗೆ.
7-2-39 ಮಡಿಕೇರಿ ಮೊಕಾಂ.
8-2-39, 9-2-39 } ಮೂರ್ನಾಡು: ಗುರುವಾರ—ಸಂತೆಯಲ್ಲಿ ಖಾದೀ ಮಾರಾಟ.
10-2-39 ಶುಕ್ರವಾರ—ಶನಿವಾರಸಂತೆಗೆ.
11-2-39 ಶನಿವಾರ—ಸಂತೆಯಲ್ಲಿ ಖಾದೀ ಮಾರಾಟ.
12-2-39 ಭಾನುವಾರ—ಸೋಮವಾರಪೇಟೆಗೆ.
13-2-39 ಸೋಮವಾರ—ಸಂತೆಯಲ್ಲಿ ಖಾದೀ ಮಾರಾಟ.
14-2-39, 15-2-39, 16-2-39, 17-2-39 } ವೀರರಾಜೇಂದ್ರಪೇಟೆ.
18-2-39, 19-2-39 } ಗೋಣಿಕೊಪ್ಪಲು. ಭಾನುವಾರ—ಸಂತೆಯಲ್ಲಿ ಖಾದೀ ಮಾರಾಟ.
20-2-39, 21-2-39 } ಸೋಮವಾರ—ಮಡಿಕೇರಿ ಸಂತೆ. ಮಂಗಳವಾರ—ಮೊಕಾಂ.
22-2-39, 23-2-39, 24-2-39 } ವೀರರಾಜೇಂದ್ರಪೇಟೆ.
25-2-39 ಶನಿವಾರ—ಗೋಣಿಕೊಪ್ಪಲು.
26-2-39 ಭಾನುವಾರ—ಗೋಣಿಕೊಪ್ಪಲು ಸಂತೆಯಲ್ಲಿ ಖಾದೀ ಮಾರಾಟ.
27-2-39 ರಿಂದ 3-3-39 } ಮಡಿಕೇರಿ ಮೊಕಾಂ.

ಖಾದೀ ಪ್ರೇಮಿಗಳು ತಮ್ಮ ಮಿತ್ರರೊಡನೆ ಬಂದು ಸಹಾಯ ಮಾಡಬೇಕೆಂದೂ, ದೇಶಾಭಿಮಾನಿಗಳು ಖಾದೀ ಅಂಗಡಿಗೆ ಬಂದು ಪ್ರೋತ್ಸಾಹಿಸಬೇಕೆಂದೂ ಪ್ರಾರ್ಥನೆ.

ಬೆಂಗಳೂರು,
ತಾ. 20-1-39.

ಕಾ. ಅ. ವೆಂಕಟರಾಮಯ್ಯ,
ವ್ಯವಸ್ಥಾಪಕ.

ಜಮ್ನಾಲಾಲ್ ಬಜಾಜರ ಬಂಧನ ಮತ್ತು ಬಿಡುಗಡೆ!

ಒಳದೇಶ.

ಕೊಡಗು ಜಿಲ್ಲಾ ಬೋರ್ಡಿನ ಬಜೆಟ್ ಮೀಟಿಂಗು ಫೆಬ್ರವರಿ ತಾರೀಕು 14 ರಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ನಿಲಗಿರಿ ಜಿಲ್ಲೆಯ ಪೈಕಾರ ಪವರ್ ಹೌಸಿನ ಕಂಟ್ರಾಕ್ಟರ್ ಮತ್ತು ಶ್ರೀಂಗಾರ ತೋಟದ ಮೇನೇಜರಾದ ಶ್ರೀ ಸಿ. ಸಿ. ಚಂಗಪ್ಪನವರು ಗ್ರಾಮ ಜಾಗೃತಾ ಕಮಿಟಿಯ ಅಧ್ಯಕ್ಷರಾಗಿಯೂ, ಕೊಯಂಬುತ್ತೂರಿನ ಬಿಡುಗಡೆಯಾದ ಕೈದಿಗಳ ಸಹಾಯ ಸಂಘಕ್ಕೆ ಗೌರವ ಮೇಲ್ವಿಚಾರಕರಾಗಿಯೂ ಸರ್ಕಾರದಿಂದ ನೇಮಿಸಲ್ಪಟ್ಟಿದ್ದಾರೆಂದು ತಿಳಿಯಬರುತ್ತದೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110 ರಂತೆಯೂ, ಏಲಕ್ಕಿ ಮಣಕ್ಕೆ ರೂ. 28 ರಂತೆಯೂ ಕ್ರಯವಿದೆ.

ಕರ್ನಾಟಕ ಚರಖಾ ಸಂಘದ ಬೆಂಗಳೂರಿನ ಖಾದಿ ವಸ್ತ್ರಾಲಯದವರು ಈ ಮೊದಲೇ ಪ್ರಕಟಿಸಿದ್ದ ತಮ್ಮ ಕಾರ್ಯಕ್ರಮದ ಮೇರೆ ಇಲ್ಲಿ ತಮ್ಮ ಖಾದಿ ಮಾರಾಟವನ್ನು ಪ್ರಾರಂಭಿಸಿರುವರು. ತಾರೀಕು 4 ರಲ್ಲಿ ಸುಂಟಿಕೊಪ್ಪಕ್ಕೆ ಹೋಗಲಿರುವರು.

ಸಿದ್ದಾಪುರ.

ಕರಡಿಗೋಡು ಗ್ರಾಮದ ಶ್ರೀ ಕೆ. ಕೆ. ಸಂಜುಂಡನವರಲ್ಲಿಗೆ ಒಂದು ಎಮ್ಮೆಯು ಅನೇಕ ದಿನಗಳ ಹಿಂದೆ ಬಂದು ಸೇರಿ ಅದು ಈಗ ಕರಹಾಕಿರುವದಾಗಿಯೂ ಮಾಲೀಕರು ಸರಿಯಾದ ಗುರ್ತು ಕಳುಹಿಸಿ ಎಮ್ಮೆಯನ್ನು ಹೊಡಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಹುದಿಕೇರಿ.

ಶಾಲಾ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಜು ಹೆಚ್ಚಿಸಿರುವ ಸಂಬಂಧ ಜನರು ನಿಷೇಧ ಸೂಚಿಸಿ ಹರತಾಳ ಆಚರಿಸುವರಾಗಿ ಒಂದು ವಾರ್ತೆ.

ನಾಪ್ಪೋಕ್ಲು.

ಬರುವ ಮಾರ್ಚಿ ತಾರೀಕು 18 ರಲ್ಲಿ ಕೊಟ್ಟಮುಡಿಯಲ್ಲಿ ಒಂದು ದನಗಳ ಪ್ರದರ್ಶನವು ನಡೆಯುವದಾಗಿ ತಿಳಿಯುತ್ತೇವೆ.

ಶಾಗುಂಡ

ಶ್ರೀ ಪಟ್ಟಮಾಡ ಪೊನ್ನಪ್ಪ (ಕೋಪರೇಟಿವ್ ಇನ್ಸ್‌ಪೆಕ್ಟರ್) ನವರು ಕೊಟ್ಟ ಬೇಡ್‌ಮೆಂಟನ್ ಕಪ್ಪಿನ ಪಂಥದಾಟವು ಇಲ್ಲಿಯ ಶಾಲೆಯಲ್ಲಿ ನಡೆದು ಮೂರ್ನಾಡಿನ 'ಮೂನ್' ಟೀಮಿನವರು ಕಪ್ಪನ್ನು ಗೆದ್ದರು.

ಕೊಟ್ಟೂರು ಶಾಲೆಯ ಹೆ. ಮಾಸ್ಟರಾದ ಸಿ. ಬಸಪ್ಪನವರು ಕೊಟ್ಟ ಕಪ್ಪಿನ ಪಂದ್ಯಾಟದಲ್ಲಿ (ಡಬಲ್ಸ್) ಮಡಿಕೇರಿ ಟೀಮಿನ ಶ್ರೀ ಪಂಡೇಟಿ ಚಂಗಪ್ಪನವರು ಮತ್ತು ಪಾಲೇಕಂಡ ಪೊನ್ನಣ್ಣನವರನ್ನು ಶ್ರೀ ಬಡುವಮಂಡ ಉತ್ತಯ್ಯನವರು ಮತ್ತು ಅಪ್ಪಯ್ಯನವರು ಸೋಲಿಸಿ ಕಪ್ಪನ್ನು ಗೆದ್ದರು.

ಮಾದಾಪುರ.

ತಾ. 18-1-39 ರಲ್ಲಿ ಗರ್ವಾಲೆ ಗ್ರಾಮದ ಹಾರೆರ ಚಿಣ್ಣಮ್ಮನೆಂಬವಳ ಸಾಧಾರಣ ನೂರು ಭಟ್ಟಿ ಭೂಮಿಯ ಭತ್ತದ ಮೆದೆಯು ಪೂರ್ತಿಯಾಗಿ ಬೆಂದು ಹೋಗಿದೆಯಾಗಿ ತಿಳಿಯಬರುತ್ತೆ. ಈಕೆಯ ದನದ ಕೊಟ್ಟಗೆಗೆ ತಾ. 24-12-38 ರಲ್ಲಿ ಬೆಂಕಿ ಬಿದ್ದು 2 ಕರಗಳೂ ಕೆಲವು ಸಾಮಾನುಗಳೂ ಬೆಂದು ಹೋಯಿತಂತೆ.

ಫ್ರೇಜರ್‌ಪೇಟೆ.

ಈ ಮೊದಲು ಇಲ್ಲಿಯ ನೋಟಿಫೈಡ್ ಏರ್ಯಾದ ವಿಚಾರ ಕೊಡಗು ಪತ್ರಿಕೆಯಲ್ಲಿ ಶ್ರೀ ಮೋಡಕರವರು ಪ್ರಕಟಿಸಿದ್ದ ವಾರ್ತೆಯ ಮೇಲೆ ನೋಟಿಫೈಡ್ ಏರ್ಯಾದ ವೈಸ್ ಪ್ರೆಸಿಡೆಂಟರಾದ ಶ್ರೀ ಶ್ರೀನಿವಾಸರಾಯರು ಹೂಡಿದ ಮೊಖದಮ್ಮೆಯು ರಾಜಿಯಿಂದ ತೀರ್ಮಾನವಾಗಿ ವಾಪ್ಸು ತೆಗೆದುಕೊಳ್ಳಲ್ಪಡುವದೆಂದು ತಿಳಿಯುತ್ತೇವೆ.

ಹಿಂದೂ ದೇಶ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಚುನಾವಣೆಗೆ ನಿಂತ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ. ಶರತ್ ಚಂದ್ರ ಬೋಸರು ಅಪಜಯವನ್ನು ಹೊಂದಿದರು.

ರಾಜಕೋಟೆಯಲ್ಲಿ ಸತ್ಯಾಗ್ರಹವು ಭರದಿಂದ ನಡೆಯುತ್ತಿದೆ. ದಿನೇ ದಿನೇ ರಾಜಕೀಯ ಬಂಧಿಗಳು ಸೆರೆಮನೆ ಸೇರುತ್ತಿರುವರು. ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರು ಅಲ್ಲಿಯ ಚಳವಳದಲ್ಲಿ ಭಾಗವಹಿಸಲು ಹೊರಟಿರುವರು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಶ್ರೀ. ಹೊಸಮನೆ ಸಿದ್ದಪ್ಪನವರೂ, ಉಪಾಧ್ಯಕ್ಷರುಗಳಾಗಿ ಶ್ರೀ. ಕಮಲಾದೇವಿ ಮತ್ತು ಡಿ. ಸಿದ್ದಲಿಂಗಯ್ಯನವರೂ, ಖಜಾಂಚಿಯವರಾಗಿ ಶ್ರೀಮತಿ ಕೃಷ್ಣಾಬಾಯಿ ಪಂಜೀಕರರವರೂ, ಜಾಯಿಂಟ್ ಕಾರ್ಯದರ್ಶಿಗಳಾಗಿ ಎಸ್. ಎಸ್. ಹರ್ಡೀಕರ್ ಮತ್ತು ಶ್ರೀನಿವಾಸ ಮಲ್ಯರೂ ಚುನಾಯಿಸಲ್ಪಟ್ಟಿರುವರು.

ಕಾಂಗ್ರೆಸ್ಸಿನ ಅಖಂಡ ಮುಖಂಡರಲ್ಲೊಬ್ಬರೂ, ಖಜಾಂಚಿಯವರೂ ಆದ ಸೇಠ್ ಜಮ್ನಾಲಾಲ್ ಬಜಾಜರ ಮೇಲೆ ಜಯಪುರ ಸರಕಾರವು ನಿಷೇಧ ಆಜ್ಞೆಯನ್ನು ಹೊರಡಿಸಿತ್ತಷ್ಟೆ. ಅದನ್ನು ನಿರೋಧಿಸಿ ಬಜಾಜರು ತಮ್ಮ ಪ್ರಕಟಣೆಯಲ್ಲಿ ಹೇಳಿದಂತೆ ಜಯಪುರಕ್ಕೆ ಫೆಬ್ರವರಿ ತಾ. 1ರ ಸಾಯಂಕಾಲ 4-30ಕ್ಕೆ ತಲಪಿದರು. ರೈಲ್ವೆ ಸ್ಟೇಷನಿನಲ್ಲಿಯೇ ಅಂದರೆ 4-30ಕ್ಕೆ ಅವರನ್ನು ಬಂಧಿಸಿ ಎಲ್ಲಿಗೋ ಕೊಂಡೊಯ್ದಿರುವರು. ಇದರಿಂದ ಅಲ್ಲಿಯ ಜನತೆಯಲ್ಲಿ ಕ್ಷೋಭೆಯೆದ್ದಿದೆ. ಸತ್ಯಾಗ್ರಹವನ್ನು ಕೈಕೊಳ್ಳುವ ಚಿಹ್ನೆಯು ಕಂಡುಬರುತ್ತಿದೆ.

ಕಳೆದ ಶುಕ್ರವಾರ (ತಾ. 27) ಜಯಪುರದ ಜುಮ್ಮಾಮಸೀದಿಯಲ್ಲಿ ನಮಾಜ್ ಮುಗಿದ ನಂತರ ಕೆಲವು ಮಂದಿ ಮಹಮದೀಯರು ಸೇರಿ ಆ ಮಸೀದಿಗೆ ಇದ್ದ ಇಕ್ಕಟ್ಟಾದ ದ್ವಾರದ ಗೋಡೆಗಳನ್ನು ಕೆಡವಲು ಆರಂಭಿಸಿದರು. ಕೆಲವು ಮಂದಿ ನಾಯಕರು ಅವರಿಗೆ ವಿವೇಕ ಹೇಳಿದುದು ಸಾರ್ಥಕವಾಗಲಿಲ್ಲ. ಗಲಭೆಯು ಮತ್ತಷ್ಟು ಹೆಚ್ಚಿತು. ಮ್ಯಾಜಿಸ್ಟ್ರೇಟರೂ ಪೊಲೀಸಿನವರೂ ಕೂಡಲೆ ಆ ಮಸೀದಿಯ ಬಳಿಗೆ ಹೋದರು. ಉದ್ರೇಕಗೊಂಡ ಆ ಜನರು ಪೊಲೀಸಿನವರ ಮೇಲೆ ಬಿದ್ದು ಅವರನ್ನು ಲಾಠಿಗಳಿಂದಲೂ, ಕಲ್ಲುಗಳಿಂದಲೂ ಹೊಡೆದರು. ಅನಂತರ ಪೊಲೀಸಿನವರು ಗಲಭೆಯನ್ನು ಹತೋಟಿಗೆ ತರಲು ಗುಂಡು ಹಾರಿಸಬೇಕಾಯಿತು. ಇದರ ದೆಸೆಯಿಂದ ಹನ್ನೊಂದು ಮರಣಗಳೂ ಕೆಲವರಿಗೆ ಗಾಯಗಳೂ ಆದವು. ಈಗ ಪರಿಸ್ಥಿತಿಯು ಹತೋಟಿಯಲ್ಲಿರುವುದೆಂದು ಹೇಳಲಾಗಿದೆ.

ಕೊಡಗು ಡಿಸ್ಟ್ರಿಕ್ಟ್‌ಬೋರ್ಡು ಆಫೀಸು.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:—

1939–40ರ ಟೋಲ್‌ಗೇಟ್ ಮತ್ತು ಮಾರ್ಕೆಟ್‌ಗಳ ಎತ್ತಾವಳಿಯನ್ನು ಕೆಳಗೆ ನಮೂದಿಸಿರುವ ತಾರೀಕುಗಳಲ್ಲಿ ಮತ್ತು ಸ್ಥಳಗಳಲ್ಲಿ ಬಹಿರಂಗವಾಗಿ ಪಬ್ಲಿಕ್ ಹರಾಜಿನಲ್ಲಿ ವಿಕ್ರಯಿಸಲ್ಪಡುವದು.

ಟೋಲ್ ಗೇಟುಗಳ ಹೆಸರು.	ಹರಾಜು ಆಗುವ ಸ್ಥಳ.	ತಾರೀಕು.
ದಕ್ಷಿಣ ಕೊಡಗು.		
1. ಮಾವುಕೂಟ.	ವೀರಾಜಪೇಟೆ ತಾಲೋಕು ಕಚೇರಿ ಮುಂದೆ ಮಧ್ಯಾಹ್ನ 2 ಗಂಟೆಗೆ	22–2–39
2. ಸಿದ್ದೇಶ್ವರ ಗದ್ದಿಗೆ	do	22–2–39
3. ಆನೆಚೌಕೂರು	do	do
4. ಕುಟ್ಟ	do	do
ಉತ್ತರ ಕೊಡಗು.		
1. ಫ್ರೇಜರ್‌ಪೇಟೆ	ಮಡಿಕೇರಿನಾಡು ಕಚೇರಿ ಮುಂದೆ	24–2–39
2. ಶಿರಂಗಾಲ	do	do
3. ಸಂಪಾಜೆ	do	do
4. ಎಡೆಹಳ್ಳಿ	ಶನಿವಾರಸಂತೆ ನಾಡು ಕಚೇರಿ ಮುಂದೆ	11–2–39
5. ನಿಲುವಾಗಿಲು	do	do
6. ಹೆಬ್ಬಾಲುಸೆ	do	do

ಮಾರ್ಕೆಟುಗಳು.	ಸ್ಥಳ.	ತಾರೀಕು.
ಉತ್ತರ ಕೊಡಗು.		
1. ಜಂಬೂರು	ಜಂಬೂರಿನಲ್ಲಿ	18–2–39
2. ಸುಂಟಿಕೊಪ್ಪ	ಸುಂಟಿಕೊಪ್ಪ ನಾಡು ಕಚೇರಿ ಮುಂದೆ	12–2–39
3. ,, ಸ್ಲಾಟರ್ ಹೌಸ್	do	do
4. ಮೂರ್ನಾಡು	ಮೂರ್ನಾಡು ಕಚೇರಿ ಮುಂದೆ	9–2–39
5 10ನೇ ಮೈಲು ಚೆಟ್ಟಳ್ಳಿ	ಸುಂಟಿಕೊಪ್ಪ ನಾಡು ಕಚೇರಿ ಮುಂದೆ	12–2–39
6. ಶನಿವಾರಸಂತೆ	ಶನಿವಾರಸಂತೆ ನಾಡು ಕಚ್ಚೇರಿ ಮುಂದೆ	11–2–39
7. ,, ಸ್ಲಾಟರ್ ಹೌಸ್	do	do
8. ರಾಮಸ್ವಾಮಿ ಕಣಿವೆ	ರಾಮಪುರ ಪೇಟೆಯಲ್ಲಿ	1–3–39
9. ಕೊಯನಾಡ್	ಮಡಿಕೇರಿ ನಾಡು ಕಚೇರಿ ಮುಂದೆ	24–2–39
ದಕ್ಷಿಣ ಕೊಡಗು.		
1. ಸಿದ್ದಾಪುರ	ಸಿದ್ದಾಪುರ ಪೇಟೆಯಲ್ಲಿ	26–2–39
2. ,, ಸ್ಲಾಟರ್ ಹೌಸ್	do	do
3. ಅಮ್ಮತ್ತಿ	ಅಮ್ಮತ್ತಿ ಕಚೇರಿ ಮುಂದೆ	21–2–39
4. ,, ಸ್ಲಾಟರ್ ಹೌಸ್	do	do
5. ಗೋಣಿಕೊಪ್ಪಲು	ಗೋಣಿಕೊಪ್ಪಲು ಕಚೇರಿಯಲ್ಲಿ	19–2–39
6. ,, ಸ್ಲಾಟರ್ ಹೌಸ್	do	do
7. ಹುದಿಕೇರಿ	ಹುದಿಕೇರಿ ಕಚ್ಚೇರಿಯಲ್ಲಿ	20–2–39
8. ಕುಟ್ಟ	ಕುಟ್ಟದಲ್ಲಿ	5–3–39

ಪಿ. ಐ. ಬೆಳ್ಯಪ್ಪ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್‌ಬೋರ್ಡ್.

ಸುಭಾಷ ಚಂದ್ರಬೋಸರೇ ಪುನಃ ಅಧ್ಯಕ್ಷರಾಗಿ



ಆರಿಸಿ ಬಂದರು.

ಕೆಲವು ವರ್ಷಗಳಿಂದ ಒಮ್ಮತದಿಂದ ಚುನಾಯಿಲ್ಪಡುತ್ತಿದ್ದ ಕಾಂಗ್ರೆಸಿನ ಅಧ್ಯಕ್ಷತನಕ್ಕೆ ಈ ವರ್ಷವಾದರೂ ಸ್ಪರ್ಧೆ ನಡೆಯಿತೆಂಬುದು ಎಲ್ಲರಿಗೂ ವಿಧಿತವಿದೆ. ಉಮೇದ್ವಾರರಾಗಿ ಶ್ರೀ ಗಳಾದ ಅಬುಲ್ ಕಲಾಂ ಆಜಾದ್, ಸುಭಾಷ್ ಚಂದ್ರಬೋಸ್ ಮತ್ತು ಡಾ. ಪಟ್ಟಾಬಿ ಸೀತಾರಾಮಯ್ಯನವರು ನಿಂತಿದ್ದರು. ಶ್ರೀ ಅಬುಲ್ ಕಲಾಂ ಆಜಾದರು ತಮ್ಮ ದೇಹಸ್ವಾಸ್ಥ್ಯವಿಲ್ಲದ ಕಾರಣ ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡದ್ದೂ, ನಂತರ ವರ್ಕಿಂಗ್ ಕಮಿಟಿಯ ಕೆಲವು ಮುಖಂಡರು ಡಾ. ಪಟ್ಟಾಬಿಯವರ ಪರ ಪ್ರಕಟಣೆ ಹೊರಡಿಸಿದ್ದು, ಸುಭಾಷ ಬಾಬುಗಳು ಅದಕ್ಕುತ್ತ ಉತ್ತರವೂ ಕಳೆದ ವಾರದಲ್ಲಿ ಪ್ರಕಟವಾಗಿತ್ತು. ಉಮೇದ್ವಾರಿಕೆಯನ್ನು ಹಿಂತೆಗೆಯುವ ಕಡೇ ತಾರೀಕು ಜನವರಿ 26 ಆಗಿತ್ತು. ಈ ಎರಡು ಉಮೇದ್ವಾರರಲ್ಲಿ ಯಾರೂ ಅವರೊಳಗೆ ಮಾತಾಡಿ ತೆಗೆದುಕೊಳ್ಳುವ ಪ್ರಯುಕ್ತ ನಿರ್ವಾಹವಿಲ್ಲದೆ ತಾರೀಕು 29 ರಲ್ಲಿ ಓಟಿಂಗು ನಡೆಯಿತು. 2951 ತ್ರಿಪುರಿ ಪ್ರತಿನಿಧಿಗಳು ಭಾಗವಹಿಸಿದ್ದರು. ಇವರಲ್ಲಿ 1575 ಶ್ರೀ ಸುಭಾಷ ಬಾಬುಗಳಿಗೂ, 1376 ಡಾ. ಪಟ್ಟಾಬಿಯವರಿಗೂ ಸಿಕ್ಕಿದ್ದರಿಂದ ಸುಭಾಷ ಬಾಬುಗಳು 199 ಓಟುಗಳ ಬಹುಮತದಲ್ಲಿ ಚುನಾಯಿಸಿ ಬಂದರು.

ಶ್ರೀಯುತರು ಇಂದಿನ ಆಧುನಿಕ ಪ್ರಪಂಚದ ನಾಗರೀಕತೆಯ ಅತ್ಯುಚ್ಚಪದವಿಯೆನಿಸಿದ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೂ ಸಹ ತನ್ನ ಮಾತೃಭೂಮಿಯು ಪರದಾಸ್ಯದಲ್ಲಿರಲು ಸರಕಾರಿ ಉದ್ಯೋಗದ ಬೆಡಗಿಗೆ ಮರುಳಾಗುವದು ಮೌಢ್ಯತೆಯೆಂದು ತಿಳಿದು ಅಖಂಡವಾಗಿ ಮಾತೃಭೂಮಿಯ ಬಂಧವಿಮೋಚನೆಗೆ ಶ್ರಮಿಸುತ್ತಿರುವದು ಎಲ್ಲರಿಗೂ ತಿಳಿದ ವಿಷಯ. ದೇಶಸೇವೆಗಾಗಿ ತನ್ನ ಸರ್ವಸ್ವವನ್ನೇ ಧಾರೆಯೆರೆದಿರುವ ಭಾರತ ಮಾತೆಯ ಸುಪುತ್ರರಲ್ಲೊಬ್ಬರಾದ ಸುಭಾಷ ಬಾಬುಗಳನ್ನು ಪುನಃ ಅಧ್ಯಕ್ಷಪದಕ್ಕೆ ಚುನಾಯಿಸಿದ್ದು ಬಹು ಯೋಗ್ಯವಿದೆ. ಅಂತೂ ಈ ವರ್ಷ ಬರಬಹುದಾದ ಫೆಡರೇಶನ್ನೇ ಮೊದಲಾದ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಷ್ಟ್ರವನ್ನು ಸುಗಮವಾದ ಹಾದಿಯಲ್ಲಿ ನಡೆಸುವರೆಂದು ನಂಬಬಹುದಾಗಿದೆ.

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಸ್ಪೈಯಿನಿನ ಅಂತರ್ಯುದ್ಧ.

ದಂಗೆಕಾರರು ಸ್ಪೈಯಿನಿನ ಪ್ರಮುಖ ಪಟ್ಟಣಗಳಲ್ಲೊಂದಾದ ಬಾರ್ಸಿಲೋನವನ್ನು ಕೈವಶಪಡಿಸಿಕೊಂಡಿರುವರು. ಸ್ಪೈಯಿನಿನ ಜೀವಾಳವೆನಿಸಿದ ಈ ಪಟ್ಟಣವು ಭಗ್ನಾವಶೇಷವಾಗಿ ಭೀಕರ ನೋಟವನ್ನು ಪ್ರೇಕ್ಷಕರಿಗೆ ಕೊಡುತ್ತಿದೆ. ವಿಜಯೋನ್ಮತ್ತರಾದ ದಂಗೆಕಾರರು ಮೆರವಣಿಗೆಯೊಡನೆ ಬಂದು ತಮ್ಮ ವಿಜಯ ಚಿಹ್ನೆಯನ್ನು ಸಂಭ್ರಮದಿಂದ ನೆರವೇರಿಸಿದರು. ಈಗ ದಂಗೆಗಾರರು ಮೇಡ್ರಿಡ್ ಪಟ್ಟಣವನ್ನು ಹಿಡಿಯಲು ಮುಂದೆ ನುಗ್ಗುತ್ತಿದ್ದಾರೆ. ಹಾದಿಯಲ್ಲಿರುವ ಅನೇಕ ಪ್ರದೇಶಗಳನ್ನು ಆಗಲೇ ಕೈವಶಪಡಿಸಿಕೊಂಡಿದ್ದಾರೆ. ಸದ್ಯ ಮೇಡ್ರಿಡಿನಲ್ಲಿ ಬಾಂಬುಗಳ ಹಾಗೂ ಬಾರ್ಸಿಲೋನ ವಿಜಯ ಪ್ರದರ್ಶಕ ಕರಪತ್ರಗಳ ಸುರಿಮಳೆಯಾಗುತ್ತಿದೆ. ಈ ಮಧ್ಯೆ ಬ್ರಿಟಿಷರ ಹಡಗೊಂದು ದಂಗೆಗಾರರ ವಕ್ರದೃಷ್ಟಿಗೆ ಬಿದ್ದು ಆ ಫಲಿತಾಂಶವಾಗಿ ಜಲಸಮಾಧಿಯನ್ನು ಹೊಂದಿತು. ಅಂತೂ ಸ್ಪೈನಿನಲ್ಲೆಲ್ಲಾ ಗಡಿಬಿಡಿ, ಕೋಲಾಹಲವೇ ಮೂರ್ತಿಭವಿಸಿದಂತಿದೆ.

ಫ್ರಾನ್ಸ್.

ಸ್ಪೈಯಿನಿನ ಈ ಕೋಲಾಹಲವು ಫ್ರಾನ್ಸಿನ ಎದೆಯಲ್ಲಿ ವಿಚಾರ ತರಂಗಗಳನ್ನೆಬ್ಬಿಸಿದೆ. ಸ್ಪೈಯಿನಿನ ದಂಗೆಗಾರರ ನಾಯಕನಾದ ಜನರಲ್ ಫ್ರಾಂಕೋವಿನ ಜಯವನ್ನು ಕಂಡು ಫ್ರಾನ್ಸು ತಳಮಳಗೊಂಡಿದೆ. ಸ್ಪೈನನ್ನು ಪಾದಾಕ್ರಾಂತವನ್ನಾಗಿ ಮಾಡಿ ಇಟೆಲಿಯ ಒಲಿದೈಯಂತಿರುವ ಫ್ರಾಂಕೋವು ತನ್ನ ವಿಜಯೋತ್ಸಾಹದಲ್ಲಿ ಮುನಲಿನಿಯ ಪ್ರೇರಣೆಯಂತೆ ಫ್ರಾನ್ಸಿಗೆ ನುಗ್ಗಿದರೆ ಗತಿಯೇನು? ಎಂಬುವುದೇ ವಿಚಾರ. ಈ ತಳಮಳದಲ್ಲಿ ಫ್ರಾನ್ಸು ಉದ್ರೇಕಗೊಂಡು ಫ್ರಾಂಕೋವನ್ನು ಎದುರಿಸುವ ಸಂಭವವಿದೆಯೋ? ಹಾಗೆ ನಡೆದ ಪಕ್ಷದಲ್ಲಿ ಇಟೆಲಿಯ 30 ಸಾವಿರ ಸೇನೆಯು ಆಪ್ಪಣೆಗಾಗಿ ಕಾದು ನಿಂತಿದೆ. ಫೆಬ್ರವರಿ ತಾ. 1ರಿಂದ ತರಬೇತಿ ಹೊಂದಲು 60 ಸಾವಿರ ಮಂದಿ ಬೇಕಾಗಿದ್ದಾರೆಂದು ಇಟೆಲಿ ಸರ್ಕಾರಿ ಪತ್ರ ಪ್ರಕಟಿಸಿದೆ. ಆದ್ದರಿಂದ ಫ್ರಾಂಕೋವನ್ನು ತಡೆಯಲು ಫ್ರಾನ್ಸು ಮುಂದುವರೆದರೆ ಇಟೆಲಿಯು ಕೈಕಟ್ಟಿ ಕೂರದೆಂದೂ, ಅದಕ್ಕೆ ಅದರ ಕಾರ್ಯ ಮಾಡಲು ಗೊತ್ತಿದೆಯೆಂದೂ ಫ್ರಾನ್ಸಿಗೆ ಹೆದರಿಕೆ ಕೊಟ್ಟಿದೆ.

ಚೈನಾ-ಜಪಾನ್.

ಜಪಾನು ಯುದ್ಧದಲ್ಲಿ ಬೇಸತ್ತಂತೆ ತೋರುತ್ತೆ. ಆದ್ದರಿಂದ ಈಗ ಅದು ಕುತಂತ್ರದಿಂದ ತನ್ನ ಜಯವನ್ನು ಸಾಧಿಸಲು ಯತ್ನಿಸುತ್ತಿದೆ. ಅದು ಚೈನಾದೊಡನೆ ರಾಜಿಗೆ ಒಪ್ಪಿದೆಯೆಂದೂ ತೋರಿಸಿ ಚೀನಿಯರನ್ನು ಸುಮ್ಮಗಿರಿಸಿ ಅನಿರೀಕ್ಷಿತವಾಗಿ ಅವರ ಮೇಲೆ ಬಿದ್ದು ಜಯ ಪಡೆಯುವ ಯೋಚನೆ ಮಾಡತೊಡಗಿದೆ. ಆದ್ದರಿಂದಲೇ ಚೀನದ ವಿವಿಧ ರಾಷ್ಟ್ರಗಳ ರಾಯಭಾರಿಗಳು ಸಂಧಿಗೆ ಒಪ್ಪಿ ತಯಾರಿಸಿದ್ದೆಂದು ಸುಳ್ಳು ಕರಪತ್ರಗಳನ್ನು ಬರೆದು ವಿಮಾನದ ಮೂಲಕ ಹಂಚುತ್ತಿದೆ. ಆದರೆ ಚೀನೀ ಸರ್ಕಾರವು ಜಪಾನರ ಈ ಕುಟಿಲ ನೀತಿಯನ್ನು ಖಂಡಿಸಿ ತನ್ನ ಜನತೆಯಲ್ಲಿ ಪ್ರಚಾರ ಮಾಡಿರುವದಲ್ಲದೆ ಜಪಾನಿನ ಅಶಕ್ತತೆಯನ್ನು ಬಹಿರಂಗಪಡಿಸಿದೆ. ಇದರಿಂದ ಚೀನಿಯರು ಹುರುಪುಗೊಂಡು ಮುಂದರಿಯುತ್ತಿರುವರು.

ಬ್ರಿಟನ್.

'ಎಂದೂ ಮುಳುಗದ ಸೂರ್ಯನ' ಸಾಮ್ರಾಜ್ಯದಲ್ಲಿ ಒಂದಿಲ್ಲೊಂದು ದಿನ ಸೂರ್ಯನು ಅಸ್ತಂಗತನಾಗಬಹುದಾದ ಕಾಲವು ದೂರವಿಲ್ಲವೆನ್ನುವದು ಪ್ರಧಾನರಾದ ಚೇಂಬರ್ಲೇನರ ವರ್ತನೆಯಿಂದ ತಿಳಿಯುತ್ತದೆ. ಒಂದು ಕಾಲದಲ್ಲಿ ತಾನೇ ತಾನಾಗಿ ಮೆರೆಯುತ್ತಿದ್ದ ರಾಷ್ಟ್ರವು ಇಂದು ತನ್ನ ಸ್ಥಾನವನ್ನು ಭದ್ರಪಡಿಸಲು ಅನಿವಾರ್ಯವಾಗಿ ಆತ್ಮತೃಪ್ತ ಹಾರಾಟ, ಮೀಟಿಂಗುಗಳನ್ನು ನಡೆಸಿ, ಪಿರಾವುಗಳನ್ನು ಬರೆಸಿ, ಅಂತೂ ಏಕ್ಕಟ್ಟು ನೂಕುತ್ತಿದೆ. ಜಗತ್ತಿನ ಯಾವ ರಾಷ್ಟ್ರಕ್ಕಾದರೊಂದರೆ ಬರಲಿ; ಆದರೆ ತನಗೆ ಯಾವ ಧಕ್ಕೆಯು ಯಾವ ರೀತಿಯಿಂದಲೂ ಬರಬಾರದೆಂದು ಹಾರೈಸುತ್ತಿದೆ. ಅದಕ್ಕಾಗಿ ಯಾರನ್ನಾದರೂ ಏನಾದರೂ ಮಾಡಲು ಇಂದು ಅದು ಹಿಂಜರಿಯುವದಿಲ್ಲ. ಈಗ ಪ್ರಧಾನರು ತಮ್ಮ ಸಮಿತಿಯಲ್ಲಿ ಹೊಸ ನೇಮಕಗಳನ್ನು ಮಾಡುತ್ತಿರುವರು. ಡೊಮಿನಿಯನ್ ಸೆಕ್ರೆಟರಿಗಳಾಗಿ ಸರ್. ಥಾಮಸ್ ಇನ್ಸ್‌ಕೀಪರೂ, ಡಿಫೆನ್ಸ್ ಖಾತೆಯ ಮಂತ್ರಿಗಳಾಗಿ ಲಾರ್ಡ್ ಚಾಟ್‌ಫೀಲ್ಡರೂ ನೇಮಕ ಹೊಂದಿರುವರು.

ಶುದ್ಧ ಖಾದಿಯು ಯಾವುದು?

ಅ. ಭಾ. ಕಾಂಗ್ರೆಸ್ ಕಾರ್ಯಕಾರಿ ಮಂಡಲದ ನಿರ್ಣಯವು

ಅಗ್ಗವಾದ ಅಪ್ರಮಾಣಿಕ ಖಾದಿಯನ್ನು ಕೊಳ್ಳಬೇಡಿರಿ

ಇದೇ ತಿಂಗಳಲ್ಲಿ ಬಾರ್ಡೋಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಮಂಡಲದಲ್ಲಿ ಖಾದಿಯ ವಿಷಯವಾಗಿ ಕೆಳಗೆ ಕಂಡ ನಿರ್ಣಯವು ಸರ್ವಾನುಮತದಿಂದ ತೀರ್ಮಾನವಾಗಿರುವದು.

'ನೂಲುವವರು ಹಾಗೂ ಬೇರೆ ಖಾದೀ ಕೈಕೆಲಸಗಾರರಿಗೆ ಸಾಕಷ್ಟು ಕೂಲಿಯು ದೊರೆಯುವ ಬಗ್ಗೆ ಅ. ಭಾ. ಚರಕ ಸಂಘದವರು ಇಟ್ಟುಕೊಂಡಿರುವ ಧೋರಣವು ಮತ್ತು ಮಾಡುತ್ತಿರುವ ಪ್ರಯತ್ನಗಳು ಹಳ್ಳಿಯ ಕೆಲಸಗಾರರ ಕಲ್ಯಾಣದ ದೃಷ್ಟಿಯಿಂದಲೂ, ಅವರಿಗೆ ಯೋಗ್ಯ ಕೂಲಿಯು ದೊರೆಯಬೇಕೆಂಬ ದೃಷ್ಟಿಯಿಂದಲೂ ಬಹಳ ಮಹತ್ವದ್ದಾಗಿದೆ ಎಂದು ಕಾಂಗ್ರೆಸ್ ಕಾರ್ಯಕಾರೀ ಮಂಡಲದವರ ಅಭಿಪ್ರಾಯವಿದೆ. ಆದ್ದರಿಂದ ಎಲ್ಲ ಕಾಂಗ್ರೆಸು ಸಂಸ್ಥೆಗಳೂ, ಕಾಂಗ್ರೆಸ್ ಸಭಾಸದರೂ ಅ. ಭಾ. ಚರಕ ಸಂಘ ಹಾಗೂ ಅದರ ಅಧೀನ ಸಂಸ್ಥೆಗಳೊಡನೆ ಮೇಲ್ಕಂಡ ಧೋರಣವನ್ನು ಯಶಸ್ವಿಯನ್ನಾಗಿ ಮಾಡುವ ವಿಷಯದಲ್ಲಿ ಸಂಪೂರ್ಣವಾಗಿ ಸಹಕರಿಸುವದು ಅವರವರ ಪವಿತ್ರ ಕರ್ತವ್ಯವೆಂದು ಈ ಮಂಡಲವು ಭಾವಿಸುತ್ತದೆ.'

'ಅ. ಭಾ. ಚರಕ ಸಂಘದಿಂದ ಪ್ರಮಾಣ ಪತ್ರವನ್ನು ಪಡೆಯದ, ಜನರ ಖಾದೀ ಬೇಡಿಕೆಯ ಲಾಭವನ್ನು ಪಡೆದು ಕಡಿಮೆ ಕೂಲಿಯನ್ನು ಕೊಟ್ಟು ಸಿದ್ಧ ಮಾಡಿದ ಅಗ್ಗವಾದ ಖಾದಿಯ ಹುಟ್ಟುವಳಿ ಹಾಗೂ ಮಾರಾಟ ಮಾಡುವವರ ಅನಿಷ್ಟವಾದ ಚಟುವಟಿಕೆಗಳನ್ನು ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ. ಅ. ಭಾ. ಚರಕ ಸಂಘದ ಹಾಗೂ ಅದರ ಅಧೀನ ಸಂಸ್ಥೆಗಳ ಶುದ್ಧವಾದ ಖಾದಿ ಹಾಗೂ ಮೇಲ್ಕಾಣಿಸಿದ ಅಶುದ್ಧ ಖಾದಿ ಇವುಗಳಲ್ಲಿಯ ಭೇದವನ್ನು ಇನ್ನೂ ತಿಳಿಯದಿರುವ ಕಾಂಗ್ರೆಸು ಸಂಸ್ಥೆ ಅಂದವಾ ಕಾಂಗ್ರೆಸ್ ಸಭಾಸದರನ್ನು ಮೇಲ್ಕಂಡ ಮೋಸಗಾರರು ವಂಚಿಸುತ್ತಿರುವದಾದರೂ ಖಂಡಾ ಖೇದಕರವಿದೆ. ಆದ್ದರಿಂದ ಕಾಂಗ್ರೆಸು ಸಂಸ್ಥೆಗಳು, ಕಾಂಗ್ರೆಸು ಸಭಾಸದರು ಹಾಗೂ ಶುದ್ಧ ಖಾದಿಯಲ್ಲಿ ಅಭಿಮಾನವುಳ್ಳವರೆಲ್ಲರ ಅವಲಂಬನೆಗಾಗಿ ಈ ಕೆಳಗಿನ ನಿಯಮಗಳನ್ನು ಹಾಕುವದು ಅವಶ್ಯವಿದೆಯೆಂದು ಕಾಂಗ್ರೆಸ್ ಕಾರ್ಯಕಾರಿ ಮಂಡಲಕ್ಕೆ ಕಂಡು ಬಂದಿದೆ.

1. ತನ್ನ ಅಂದರೆ ಅ. ಭಾ. ಚರಕ ಸಂಘ ಅಥವಾ ಅದರ ಅಧೀನ ಸಂಸ್ಥೆಗಳು ಸಿದ್ಧಮಾಡಿದ ಬಟ್ಟೆ ಮಾತ್ರವೇ 'ಖಾದಿ' ಎಂದು ಕಾಂಗ್ರೆಸಿನ ಅಭಿಪ್ರಾಯವು. ಇಂಥ ಖಾದಿಯನ್ನೇ ಕಾಂಗ್ರೆಸ್ ಸಂಸ್ಥೆಗಳು ಹಾಗೂ ಕಾಂಗ್ರೆಸು ಸಭಾಸದರು ಉಪಯೋಗಿಸಬೇಕು; ಹಾಗೂ ಇತರರಿಗೆ ಉಪಯೋಗಿಸಲಿಕ್ಕೆ ಉಪದೇಶ ಮಾಡಬೇಕು.

2. ಅ. ಭಾ. ಚರಕ ಸಂಘದಿಂದ ಮಾನ್ಯತೆಯನ್ನು ಪಡೆಯದೇ ಇರುವ ಖಾದೀ ಮಾರಾಟದ ಅಂಗಡಿಗಳ ಉದ್ಘಾಟನ ಸಮಾರಂಭವನ್ನು ಮಾಡುವದರಲ್ಲಿ ಅಥವಾ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ರೀತಿಯಿಂದ ಇಂಥ ಅಪ್ರಮಾಣಿತ ಖಾದಿಗೆ ಪ್ರೋತ್ಸಾಹ ದೊರೆಯುವಂಥ ಯಾವದೇ ಚಟುವಟಿಕೆಗಳಲ್ಲಿ ಕಾಂಗ್ರೆಸ ಸಭಾಸದರು ಭಾಗ ತೆಗೆದುಕೊಳ್ಳಕೂಡದು.

3 ಅ. ಭಾ. ಚರಕ ಸಂಘ ಅಥವಾ ಅದರ ಪ್ರಮಾಣ ಪತ್ರವನ್ನು ಪಡೆದ ಸಂಸ್ಥೆಗಳಿಂದ ಸಿದ್ಧವಾದ ಖಾದಿಯಲ್ಲದ ಬೇರೆ ಯಾವದೇ ಬಟ್ಟೆಯ ವಿಷಯದಲ್ಲಿಯೂ ಖಾದಿ ಈ ಹೆಸರಿನಲ್ಲಿ ಯಾವ ಕಾಂಗ್ರೆಸ್ ಸಂಸ್ಥೆ ಅಥವಾ ಕಾಂಗ್ರೆಸ್ ಸಭಾಸದರೂ ವ್ಯವಹಾರ ಮಾಡತಕ್ಕದ್ದಲ್ಲ.

ಕಾಂಗ್ರೆಸದ ಎಲ್ಲ ಅಭಿಮಾನಿಗಳು ಮೇಲ್ಕಂಡ ನಿರ್ಣಯವನ್ನು ಅನುಲಕ್ಷಿಸಿ, ಅ. ಭಾ. ಚರಕ ಸಂಘ ಅದರ ಅಧೀನ ಸಂಸ್ಥೆಗಳಿಂದ ಸಿದ್ಧವಾದ ಖಾದಿಯನ್ನೇ ಮಾತ್ರ ಕೊಳ್ಳಬೇಕೆಂದೂ, ಅಪ್ರಮಾಣಿಕ ಖಾದಿಯನ್ನು ಯಾವದೇ ರೀತಿಯಿಂದ ಪ್ರೋತ್ಸಾಹಿಸಕೂಡದೆಂದೂ ಪ್ರಾರ್ಥನೆಯುಂಟು.

ಹ. ಶ್ರೀ. ಕೌಜಲಗಿ,
ಹಳೇ ಹುಬ್ಬಳ್ಳಿ, ಕಾರ್ಯಪತಿ,
ಅ. ಭಾ. ಚರಕ ಸಂಘ, ಕರ್ನಾಟಕ ಶಾಖೆ.
ತಾ. 25-1-39.

ಕೊಡಗಿನ ಭವಿಷ್ಯವೂ, ಕಾರ್ಯ ಸಾಧಿಸುವವರೂ.

(ಲೇಖಕ–ಕೆ. ಪಿ. ಮುದ್ದಪ್ಪ ಬಿ. ಎ.)

ತಾರೀಕು 20-10-38 ರಲ್ಲಿ 'ಕೊಡಗಿನ ಭವಿಷ್ಯತ್ತು ಮತ್ತು ಕಾರ್ಯಸಾಧಿಸುವವರು' ಎಂಬ ಶಿರೋಲೇಖನದಿಂದ ಬರೆದ ನನ್ನ ಲೇಖನವನ್ನು ತಾ. 16-12-38 ರಲ್ಲಿ ಪ್ರಕಾಶಕರು ಕೊಡಗು ಪತ್ರಿಕೆಯಲ್ಲಿ ಮುದ್ರಿಸಿದಕ್ಕೆ ನಾನು ತುಂಬಾ ಕೃತಜ್ಞನಾಗಿರುವೆನು. ಈಗ ಆ ಲೇಖನವನ್ನು ಮುಂವರಿಸುವುದೇ ನನ್ನ ಕರ್ತವ್ಯವು. ಈ ಬಾರಿ ಕೆಲವು ರಾಜನೀತಿಯ ನಿಯಮಗಳನ್ನು ಸಾತಕರ ಮುಂದಟ್ಟು ಮುಂದಿನ ಪ್ರಬಂಧದಲ್ಲಿ ಕೆಲವು ಮಹನೀಯರ ಟೀಕೆಗಳಿಗೆ ಉತ್ತರವೀಯಬೇಕೆಂದು ಆಲೋಚಿಸಿರುವೆನು. ಕೊಡಗಿನ ಮಹಾಜನರೆಲ್ಲರೂ ಈ ಕೆಲವು ಮಾತುಗಳನ್ನಲ್ಲದೆ ಇನ್ನಿತರ ಅಭಿಪ್ರಾಯಗಳನ್ನು ಸಹಾ ತಕ್ಕಂತೆ ವಿಮರ್ಷಿಸಿ ಕೊಡಗಿನ ಭವಿಷ್ಯತ್ತನ್ನು, ತೀರ್ಮಾನಿಸಬೇಕೆಂದು ನನ್ನ ಅತ್ಯಗ್ರಹಪೂರ್ವಕ ವಿನಂತಿ.

1935 ನೇ ಇಸವಿಯ ಹೊಸ ಇಂಡಿಯಾ ಕಾಯಿದೆಯಲ್ಲಿ ಕೊಡಗಿನಂಥ ಅತೀ ಚಿಕ್ಕ ಚೀಫ್ ಕಮಿಷನರ್ ಪ್ರಾಂತಕ್ಕೆ ಸ್ಥಳೀಯ ಸರಕಾರ ಸಿಕ್ಕುವುದು ಸಾಧ್ಯವೋ ಎಂಬ ಪ್ರಶ್ನೆಯನ್ನು ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವುದಕ್ಕೆ ಮೊದಲೇ ನಾವು ಆಲೋಚಿಸಬೇಕು. ಅದನ್ನು ನಿರ್ಧರಿಸದೆ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳುವುದಕ್ಕೆ ಪ್ರಯತ್ನಿಸಿ ಸ್ಥಳೀಯ ಸರಕಾರ ಸಹ ಕೊನೆಗೆ ಸಿಕ್ಕದಿದ್ದಲ್ಲಿ ನಾವು ಮಾಡುವ ಎಲ್ಲಾ ಚಳವಳವೂ ನೀರ ಮೇಲೆ ಮಾಡುವ ಹೋಮದಂತಾದೀತು. ಇವರ ವಿಷಯದಲ್ಲಿ ಕೆಲವು ರಾಜನೀತಿ ವಿಶಾರದರನ್ನೂ ಮತ್ತು ಹೊಸ ಇಂಡಿಯಾ ಕಾಯಿದೆಯ ಮೇಲೆ ಅತ್ಯುತ್ತಮವಾದ ಪುಸ್ತಕವನ್ನು ಬರೆದ ರಾಜಕಾರಣ ನಿಯಮದ ಪಟುಗಳನ್ನು (Constitutional lawyers) ಸಂದರ್ಶಿಸಿ ಅವರ ಅಭಿಪ್ರಾಯಗಳನ್ನು ಕೇಳುವ ಸಂದರ್ಭವು ನನಗಿತ್ತು. ಹೊಸ ಇಂಡಿಯಾ ಕಾಯಿದೆಯಲ್ಲಿ ಇಂಥಾ ಶರತುಗಳಿಗೆ ಎಡೆಕೊಡುವದಿಲ್ಲವೆಂಬುದೇ ಅವರ ಸುಲಭ ಉತ್ತರ. ಇವರ ಬದಲಿಗೆ ಇನ್ನೂ ಕೆಲವು ಬೇರೆ ಪಂಗಡವಾಗಿಟ್ಟಿರುವ (excluded & partialexcluded) ಭಾಗಗಳನ್ನು ಚೀಫ್ ಕಮಿಷನರ್‌ಗಳ ಪ್ರಾಂತವಾಗಿ ಮಾಡಲು ಸಾಧ್ಯವಿದೆ. ಮತ್ತು ಇವಲ್ಲ ಅಧಿಕಾರವು ನಮ್ಮ ಸಾರ್ವಭೌಮ ಚಕ್ರವರ್ತಿಯವರ ಮತ್ತು ಬ್ರಿಟಿಷ್ ಪಾರ್ಲಿಮೆಂಟಿನ ಉಕ್ಕಿನ ಸರಪಣಿಯ ಹಿಡಿತದಲ್ಲಿದೆ. ಹೊಸ ಇಂಡಿಯಾ ಕಾಯಿದೆಯ 48,93, ಮತ್ತು 97 ಶರತ್ತುಗಳನ್ನು ಪರೀಕ್ಷಿಸಿ ನೋಡಿದರೆ ಎಲ್ಲವೂ ವಿವರವಾಗಿ ತಿಳಿಯುವುದು. ನಾನು ಇವರ ವಿಷಯ ಹೆಚ್ಚು ಹೇಳಬೇಕಾಗಿಲ್ಲ.

ಇನ್ನೂ ವಿಚಾರಿಸಿ ನೋಡಿದರೆ ಕೊಡಗು ಚೀಫ್ ಕಮಿಷನರುಗಳ ಪ್ರಾಂತಗಳಲ್ಲಿ ಅತೀ ಚಿಕ್ಕದಾದದ್ದು. ಇದರ ಜನಸಂಖ್ಯೆಯು ಬರೀ 163 ಸಾವಿರದಾಗಿದೆ. ಅಲ್ಲದೆ ಉತ್ಪತ್ತಿಯೂ ಕೂಡ ಅತೀ ಕಡಿಮೆಯಾದ್ದರಿಂದ ಎಲ್ಲಾ ತರದ ಸಿಕ್ಕು ಬಂಧನಗಳಲ್ಲಿ ಸಿಲುಕಿ ಮೋಕ್ಷ್ಯವಾದ ಸಿಬ್ಬಂಧಿ ಮೊತ್ತೆಯನ್ನು ತಂದೊಡ್ಡಿರುವರು. ಸಂಸ್ಕೃತ ಭಾಷೆಯನ್ನು ಕಲಿಯಲಿಕ್ಕಿದ್ದ ಸಲಕರಣೆಗಳನ್ನು ನಿರ್ಮೂಲ ಮಾಡಲಿಕ್ಕಿರುವರು. ಶಾಲೆಯ ಹುಡುಗರಿಗೆ ಹೆಚ್ಚು ತರದ ಸಲಕರಣೆಗಳನ್ನು ಕೊಡುವುದರ ಬದಲು ಫೀಜು ಹೆಚ್ಚು ಮಾಡಿ ಬಡ ಬಗ್ಗರ ಮಕ್ಕಳು ವಿದ್ಯೆ ಕಲಿಯದಂತೆ ಅಡಚಣೆಯನ್ನು ತಂದೊಡ್ಡಿರುವರು. ಒಂದೆರಡು ನಾಡುಖಚೇರಿಗಳನ್ನು ತೆಗೆದು ಹಾಕಿ ಜನರಿಗೆ ತನ್ನ ಕಂದಾಯವನ್ನು ಕೊಡುವುದಕ್ಕೋ ಅಥವಾ ಇನ್ಯಾವ ಸಂಗತಿಗಳನ್ನು ತಿಳಿದುಕೊಳ್ಳಬೇಕಾದರೆ ಇಪ್ಪತ್ತೋ ಮೂವತ್ತೋ ಮೈಲಿ ದೂರ ನಡೆಯುವಂತೆ ಮಾಡಿರುವರು. ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನೂ, ಶ್ಯಾನುಭೋಗರುಗಳನ್ನೂ ಶಾಲೆಯ ಭೋದಕರನ್ನೂ, ಫಾರೆಸ್ಟ್ ಗಾರ್ಡುಗಳನ್ನೂ ಮನೆಗೆ ಕಳುಹಿಸಲಿರುವರು. ಇದೆಲ್ಲವನ್ನೂ ಗಣನೆಗೆ ತಂದುಕೊಳ್ಳಬೇಕು. ಅಲ್ಲದೆ ಒಂದೆರಡು ದೊಡ್ಡ ಹುದ್ದೆಗಳನ್ನು (Gazetted Officers) ತೆಗೆದು ಹಾಕಿದ ಮಾತ್ರಕ್ಕೆ ನಮ್ಮ ಎಲ್ಲಾ ಕಷ್ಟಗಳು ನೀಗುವುದೆಂದು ಇನ್ನು ಕೆಲವರ ಅಭಿಪ್ರಾಯ. ಇದರ ಟೊಳ್ಳುತನವನ್ನು ತಿಳಿಯಿರಿ. ಇಂಥಾ ಕಲ್ಪನೆಯಿಂದ ವರ್ಷಕ್ಕೆ ಇಪ್ಪತ್ತೋ ಇಪ್ಪತ್ತೈದೋ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉಳಿಕೆಯಾಗಲಾರದು. ಮತ್ತು ಇಷ್ಟೇ ಖರ್ಚು ಮೊತ್ತೆ ಮಾಡಿದಷ್ಟಕ್ಕೆ ಎಲ್ಲವೂ ಮುಗಿಯುವುದೋ? ಹೀಗೆ ಹೇಳುವವರು ಕೊಡಗಿನ ಜನರಿಗೆ ಯಾವ ಯಾವ ಸಲಕರಣೆಗಳನ್ನು ಮತ್ತು ರಾಷ್ಟ್ರಕಟ್ಟೋಣ ಕಾರ್ಯಗಳನ್ನು ಮಾಡಲಿಕ್ಕಿರುವರೋ ನಮಗೆ ಊಹಿಸಲವಳವು. ಅವರಂತೂ ಇವರ ವಿಷಯ ಮೌನವ್ರತವನ್ನು ತಾಳಿರುವರು. ಈಗ ನಮ್ಮಕ್ಕೆ ಇರುವ ಗವರ್ನಮೆಂಟಿನ ಬದಲಿಗೆ ಒಬ್ಬರೋ ಇಬ್ಬರೋ ಮಂತ್ರಿಯವರನ್ನೂ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನೂ ನಿರ್ಮಿಸಿದ ಮಾತ್ರಕ್ಕೆ ಸ್ಥಳೀಯ ಸರಕಾರ ಸಿಗುವುದೆಂಬ ಅಭಿಪ್ರಾಯದಿಂದ ಅವರು ಹೋರಾಡುವವರಾದರೆ ಖಂಡಿತವಾಗಿಯೂ ಜನರು ಅವರನ್ನು ವಿರೋಧಿಸಬಹುದಾಗಿ ನನ್ನ ಭಾವನೆ. ಇಂಥಾ ಕ್ರಮವು ಗವರ್ನಮೆಂಟ್ ಖರ್ಚನ್ನು ಹೆಚ್ಚು ಮಾಡುವದಲ್ಲದೆ ಅನೇಕ ಕೆಡಕುಗಳನ್ನು ತಂದೊಡ್ಡುವುದು. ಜನರನ್ನು ಅನಾಥಿಯಿಲ್ಲದ ಯುಕ್ತಿ, ದೋಷ, ವೈಶಮ್ಯಗಳಿಗುರುಳಿಸುವುದು.

ಹೊಸ ಇಂಡಿಯಾ ಕಾಯಿದೆಯಲ್ಲಿ ಮಸೂದಿಸಿರುವಂತೆ ಫೆಡರಲ್ ಗವರ್ನಮೆಂಟನ್ನು ನಿರ್ಮಿಸಿದಲ್ಲಿ ಮತ್ತು ಕೊಡಗು ಫೆಡರೇಶನ್ನಿನ ಒಂದು ಫೆಡರಲ್ ವಿಭಾಗವಾಗಿ (Federal Unit) ಮಾರ್ಪಟ್ಟರೆ ಎಷ್ಟು ಕಷ್ಟಗಳಿಗಿಡಾಗುವದು ಎಂಬುದನ್ನು ಚೆನ್ನಾಗಿ ಮನನಮಾಡತಕ್ಕದು. [illegible] ದೊಡ್ಡ ಆಶ್ರಿತ ಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯಾದ ಮದ್ರಾಸು ಬೊಂಬಾಯಿಯಂತ ದೊಡ್ಡ ದೊಡ್ಡ ಪ್ರಾಂತಗಳ ಜೊತೆಯಲ್ಲಿ ಇಷ್ಟು ಚಿಕ್ಕದಾದ ಕೊಡಗು ಹೇಗೆ ತಾನೆ ಮುಂದೆ ಬಂದು ಅವುಗಳ ಸಮಾನ ತಲೆದೋರಿಸಬಲ್ಲುದು. ಮದ್ರಾಸಿನಲ್ಲಿ ಕೊಡಗಿಗಿಂತ ದೊಡ್ಡದಾದ 24 ಜಿಲ್ಲೆಗಳಿವೆ. ಮತ್ತು ಕೊಡಗಿಗೆ ಫೆಡರಲ್ ಚೆಂಬರ್‌ಗಳಲ್ಲಿ ಒಂದೊಂದು ಸೀಟ್ ಮಾತ್ರ ಕೊಡಲ್ಪಟ್ಟಿವೆ. ಒಬ್ಬ ಮೆಂಬರನು ಕೊಡಗಿನ ಜನರ ಸಂಕಟ ಬೇಡಿಕೆಗಳನ್ನು ಹೇಗೆ ತಾನೆ ಫೆಡರಲ್ ಚೆಂಬರ್‌ಗಳ ಮುಂದಿಟ್ಟು ಅವುಗಳನ್ನು ಸಾಧಿಸಿಕೊಳ್ಳಬಹುದು? ಅಷ್ಟೇ ಅಲ್ಲ. ಫೆಡರೇಶನ್ ಬಂದ ಮೇಲೆ ಪ್ರತಿಯೊಂದು ಪ್ರಾಂತಕ್ಕೂ ಸ್ವಂತ ಅಧಿಕಾರಗಳಿವೆ ಮತ್ತು ಅವು ಹೆಚ್ಚು ಹೆಚ್ಚು ಬೇರೆಯಾಗಿ ದೂರ ಸರಿಯುವವೇ ಹೊರತು ಒಟ್ಟಾಗುವಂತಿಲ್ಲ. ಆದ್ದರಿಂದ ಸುತ್ತು ಮುತ್ತಲಿನ ಪ್ರಾಂತಗಳಿಗೆ ಸ್ಪರ್ಧೆ ಎಲ್ಲಾ ತರದಲ್ಲಿಯೂ ಬಂದೇ ಬರುವುದು. ಇಂಥಾ ಸ್ಪರ್ಧೆಯನ್ನು ಕೊಡಗು ಮತ್ತು ಕೊಡಗಿನ ಜನರು ಹೇಗೆ ತಾನೇ ಎದುರಿಸಿ ಮುಂದೆ ಸಾಗಬಲ್ಲರು? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕದೇ ಅಥವ ಹುಡುಕಲು ಸಾಧ್ಯವಿಲ್ಲದಿದ್ದರೆ, ಮೊದಲೇ ಒಬ್ಬ ಮಹನೀಯರು ಇದೇ ಪತ್ರಿಕೆಯಲ್ಲಿ ಬರೆದು ತೋರಿಸಿರುವಂತೆ ಬೆಟ್ಟಗಳಲ್ಲಿ ಬಂಡೆಯಿಂದ ಬಂಡೆಗೆ ಧುಮುಕುವ ಕೊಡಗು ಪ್ರಾಂತದ ಸ್ಥಳೀಯ ಸರಕಾರವೆಂಬ ಆತ್ಯಾಡಂಬರದ ಹೊಸದಿನ ನೀರಿನ ಬುದ್ಬುದ ಅಚ್ಚಬಿಳುಪಿನ ನೊರೆಯನ್ನು ಕಂಡು ಮರುಳಾಗಿ ಅವರೆಡೆಗೆ ದುಮುಕುವಂತಾಗಬಹುದು. ಇವನ್ನು ಕೊಡಗನ್ನು ಪ್ರತ್ಯೇಕವಾಗಿಡುವುದಕ್ಕೆ ಪ್ರಯತ್ನಿಸುವ ಮುಂದಾಳುಗಳು ಲೆಕ್ಕಿಸುವವರಾಗಿ ನನ್ನ ಊಹನೆ.

ಮಾವಲೆ ಕೊಡಗು ಸುತ್ತು ಮುತ್ತಲಿನ ಬ್ರಿಟಿಷ್ ಇಂಡಿಯಾ ಪ್ರಾಂತಗಳಿಗಿಂತ ರಾಜ್ಯಕಾರಣ ವಿಷಯದ ಜಾಗ್ರತಾಶಕ್ತಿಯಲ್ಲಿ ಬಹಳ ಹಿಂದುಳಿದಿದೆ ಎಂದೂ ಬತ್ತು ಕರ್ನಾಟಕದಿಂದಲೋ ಅಥವಾ ಇನ್ಯಾವ ಕಡೆಯಿಂದಲೋ ಮುಂದಾಳುಗಳು ಬಂದು ಈ ಧೂಮಿಸುವ ಬೆಂಕಿಗ ತಿದಿ ಹಾಕದಿದ್ದಲ್ಲಿ ಅದು ಉಜ್ವಲಿಸುವಂತಿಲ್ಲವೆಂದೂ ಎಲ್ಲರಿಗೂ ತಿಳಿದಿದೆ. ಈ ಸ್ಥಿತಿಯಲ್ಲಿ ಕೊಡಗು ಪ್ರತ್ಯೇಕವಾಗಿಟ್ಟಿಲ್ಲ, ಪೂರಾ ಹಿಂದುಳಿಯಬೇಕೆಂದು ಖಂಡಿತವಾಗಿಯೂ ಹೇಳಬಲ್ಲೆನು. ಇನ್ನು ಕೊಡಗನ್ನು ಕೆಲವು ಸಣ್ಣ ಸಣ್ಣ ಆಶ್ರಿತ ಸಂಸ್ಥಾನಗಳಿಗೆ ಹೋಲಿಸುವರು. ಪರಿಶೀಲಿಸಿ ನೋಡಿದಲ್ಲಿ ಇದರಲ್ಲಿ ರವಷ್ಟು ತಿರುಳಿಲ್ಲವೆಂದು ಆದರ್ಶವಾಗುವುದು. ಇಂಥಾ ಸಣ್ಣ ಸಣ್ಣ ಆಶ್ರಿತ ಸಂಸ್ಥಾನಗಳು ಆಲ್ ಇಂಡಿಯಾ ಫೆಡರೇಶನ್ನಿಗೆ ಸೇರಬೇಕೆಂದಿಲ್ಲ. ಸೇರಿದರೂ ಸಹಾ ಅವುಗಳು ಗುಂಪು ಗುಂಪಾಗಿ ಸೇರುವವು. ಏರಡನೇಯದಾಗಿ ಅಲ್ಲಿಯ ಆಳ್ವಿಕೆಯ ಹೀನ ಸ್ಥಿತಿಯನ್ನು ಪುನಃ ಹೇಳಬೇಕಾಗಿಲ್ಲ. "Federal Government is the most litigious government" [illegible] ಯದ ಮತ್ತು ವ್ಯಾಜ್ಯದಾವೆಗಳ ಸರಕಾರವಾಗಿದೆ' ಎಂದ ಮೇಲೆ ಕೊಡಗಿನಂತ [illegible]ಕ್ಕ ಪ್ರಾಂತಗಳಿಗೆ ಆಲ್ ಇಂಡಿಯಾ ಫೆ[illegible]ರೇಷನ್ ಇಂಡಿಯಾಕ್ಕೆ ಕಾಲಿಟ್ಟ ಕೂ[illegible]ಲೇ ಎಷ್ಟು ಕಷ್ಟವಾಗಬಹುದೆಂದು ಹೇ[illegible]ಲು ಅಸಾಧ್ಯವೇ. ಕೊಡಗು ನಮ್ಮ [illegible]ಕವೆಂದೂ ನಾವೇ ಆಳಬೇಕೆಂದು ಹೇಳು[illegible] ತತ್ವವಾದ ಪ್ರಾಂತಿಯತ್ವದ ಯುಕ್ತಿ, ದೋ[illegible]ಷ, ವೈಷಮ್ಯಗಳಿಗೀಡಾಗದೆಂದು ನ[illegible] ವ್ಯಥ ನಂಬಿಕೆ. ಇದನ್ನು ತುಂಬಾ [illegible] ಮರ್ಷಿಸಿ ನೋಡಬೇಕಾದ್ದು ಅತ್ಯವಶ್ಯ[illegible]

(ಸಶೇಷ)

ನೋಟೀಸು.

ವೀರಾಜಪೇಟೆನಾಡು ಕಡಂಗಮ[illegible]ರೂರು ಗ್ರಾಮದ ಬೇಡರ ಕಾಟಿಯ[illegible]ನವರ ಹೆಂಡತಿ ಸೂರಮ್ಮನು [illegible] ಮೂಲಕ ತಿಳಿಯಪಡಿಸುವುದೇನದರೆ–

ಕಡಂಗಮೂರು ಗ್ರಾಮದ ಬೇಡ ಸಿಂಗಯ್ಯನು ತಾ. 13-1-39ರ 'ಕೊಡಗು' ಪತ್ರಿಕೆಯ 8ನೇ ಪೇಜಿನಲ್ಲಿ ಬರೆದ ಪ್ರಕಟಣೆಗೆ ಜವಾಬು.

ಸದರಿ ಸಿಂಗಯ್ಯನ ತಂದೆ ದೇವಪ್ಪನು ನಿರಾಧಾರಿಯಾಗಿ ಬಂದವನಿಗೆ ನನ್ನ ಗಂಡ ಕಾಟಿಯನವರು ಕರುಣಿಸಿ [illegible] ಗ್ರಾಮದ ಕೊಲ್ಲಿರಮ್ಮನ ಭೂಮಿಯನ್ನು ಧರ್ಮಾರ್ಥವಾಗಿ ತೆಗೆದುಕೊಟ್ಟು ಕುಳಿ ಸ್ಥಾಪನೆ ಮಾಡಿ, ನಮ್ಮ ಗ್ರಾಮದಲ್ಲಿ ಇರಿಸಿದ್ದರಿಂದ ನನ್ನ ಚರ ಸ್ಥಿರ ವಗೈರೆಯಾವುದೊಂದು ಆಸ್ತಿಯ ಮೇಲೆ ಎಷ್ಟು ಮಾತ್ರವೂ ಹಕ್ಕಿರುವುದಿಲ್ಲ. ಈ ಸಿಂಗಯ್ಯನು ನಮಗೆ ಹೆಚ್ಚು ವಿಧೇಯನಾಗಿದ್ದುದರಿಂದ ಇವನಿಂದ ನಮಗೆ ಮೋಸ ಬರಲಾರದೆಂದು ನಂಬಿ ಇವನ ಹೇಳಿಕೆ ಮೇರೆ ನಮಗೆ ಬರತಕ್ಕ ಉತ್ಪತ್ತಿಗಳನ್ನು ವಸೂಲು ಮಾಡಿ ನನಗೆ ಕೊಡುವಂತೆ ಪ್ರತಿಫಲವಿಲ್ಲದೆ ಸರ್ವ ಅಧಿಕಾರಗಳನ್ನು ನನ್ನಿಂದ ಮೋಸದಿಂದ ಪಡೆದುಕೊಂಡವನು ಕೋರ್ಟು ಖರ್ಚಿಗೆ ಸಹ ನಾನೇ ಹಣ ಕೊಟ್ಟಿರುತ್ತೇನೆ. ಈಚೆಗೆ ದಾವೆ ಅಮಲ್ದಾರಿ ವಗೈರೆ ಮಾಡಿ ವಸೂಲು ಆದಹಣವನ್ನು ನನಗೆ ಕೊಡದೆ ತಾನೇ ಇಟ್ಟುಕೊಂಡದ್ದಲ್ಲದೆ ನನ್ನ ಪೆಟ್ಟಿಗೆಯಲ್ಲಿದ್ದ 4 ಸಾವಿರ ರೂ. ಕ್ರಯ ಬಾಳುವ ಚಿನ್ನ, ಬೆಳ್ಳಿ, ಕೆಂಪು, ರತ್ನದ ಒಡವೆಗಳನ್ನೂ, ಪಾತ್ರೆ ವಗೈರೆ ಚರವಸ್ತುಗಳನ್ನೂ ಸಹ ಕದ್ದುಕೊಂಡು ಹೋದವನು ವಾಪಸು ಕೊಡದೆ ಕೇಳಿದಲ್ಲಿ ಕಾಲಹರಣ ಮಾಡುವವನ ಮೇಲೆ ದಾವೆ ಮಾಡುವ (ತರ್ಮಾತಿ)ಗೋಸ್ಕರ ಸುಳ್ಳು ಸುಳ್ಳಾದ ಪ್ರಕಟಣೆ ಬರೆಸಿದ್ದಾಗಿದೆ. ಇವನು ನನ್ನ ಮನೆಯವನಲ್ಲ; ಸಂತಾನವಲ್ಲ; ಅನ್ಯ ಕುಳ. ಇವನಿಗೆ ನನ್ನ ಆಸ್ತಿಗಳ ಮೇಲೆ ಯಾವ ಹಕ್ಕೂ ಇರುವದಿಲ್ಲ. ಈ ಕಾರಣ ಇವನ ಪ್ರಕಟಣೆಯನ್ನು ತಿರಸ್ಕರಿಸಿದ್ದೇನೆ. ಮೇಲಿನ ಸ್ವತ್ತುಗಳನ್ನು ಬರ ಮಾಡಿಸಲು ದಾವೆ ಮಾಡುತ್ತೇನೆ. ಈ ಸಂಗತಿ ಸರ್ವರಿಗೂ ತಿಳಿದಿರಲಿ.

ಬೇಡರ ಸೂರಮ್ಮ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 21-1-1939 ರಲ್ಲು ಬೆಳಗ್ಗೆ 11 ಘಂಟೆಗೆ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು-ಮೆ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ರಾ. ಬ. ಪಿ. ದೇವಯ್ಯನವರು (ಟ್ರೆಜರರ್) (3) ಯಂ. ಸಿ. ದೇವಯ್ಯನವರು, (4) ಕೆ. ಕೆ. ಗಣಪತಿಯವರು, (5) ಕೆ. ಯಂ. ಕುಶಾಲಪ್ಪನವರು, (6) ಕೆ. ಸಿ. ಕರುಂಬಯ್ಯನವರು, (7) ಐ. ಪಿ. ಕಾರ್ಯಪ್ಪನವರು, (8) ಪಿ. ಸಿ. ಕರುಂಬಯ್ಯನವರು, (9) ಬಿ. ಪಿ. ಮಾಚೈಯ್ಯನವರು, (10) ಹೆಚ್. ಯಂ. ಪುಟ್ಟಣ್ಣನವರು, (11) ಯಂ. ಎಸ್. ಸೋಮಯ್ಯನವರು, (12) ಎನ್. ಬಿ. ಸೋಮಯ್ಯನವರು, (13) ಎನ್. ಶಂಕರಯ್ಯನವರು ಮತ್ತು (14) ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ.)

ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ ಸೀನಿಯರ್ ನಾನ್‌ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

ಡೈರೆಕ್ಟರು ಮೆ. ಪಿ. ಜಿ. ಐಯ್ಯಪ್ಪನವರು ಗೈರಾಜರಾಗಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಡಿಸೆಂಬರ್ ತಿಂಗಳ ಜಮಾ ಮತ್ತು ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು.

ಹಿಂದಳ ಶಿಲ್ಕು	18,171	8	1
ಸದರಿ ತಿಂಗಳ ವಸೂಲಿ	5,946	12	10
ಜುಮ್ಲ	24,118	4	11
ಆ ತಿಂಗಳಲ್ಲಿ ಖರ್ಚು	11,238	3	0
ಬಾಕಿ ಶಿಲ್ಕು	12,880	1	11

3. ಒಬ್ಬ ಮಹನೀಯರು ದೈವಾಧೀನರಾದ ತನ್ನ ಪತ್ನಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಮೊಬಲಗನ್ನು ಅವರ ನಾಲ್ಕು ಮಂದಿ ಮಕ್ಕಳ ಹೆಸರಿಗೆ ವರ್ಗಾಯಿಸಿ ತನ್ನನ್ನು ಗಾರ್ಡಿಯನ್ನಾಗಿ ನೇಮಿಸಬೇಕೆಂದು ಬರಕೊಂಡ ಪತ್ರವನ್ನು ಓದಲಾಗಿ ಅವರ ಕೋರಿಕೆಯನ್ನು ನೆರವೇರಿಸಬಹುದೆಂದು ತೀರ್ಮಾನವಾಯಿತು.

4. ಹೊದ್ದೂರು ಸೊಸೈಟಿಯವರು ತಮಗೆ ಕಳೆದ ಮೇ ತಿಂಗಳಲ್ಲಿಯೇ ಬ್ಯಾಂಕಿನಿಂದ ಮಂಜೂರಾದ ಸಾಲ 1300 ರೂಪಾಯಿಗಳನ್ನು ಈಗಲಾದರೂ ಬಟವಾಡೆ ಮಾಡಬೇಕೆಂದು ಬರಕೊಂಡ ಅರ್ಜಿ ಪ್ರಕಾರ ಸದರಿ ಮಂಜೂರಾದ ಸಾಲವನ್ನು ಕೊಡಬಹುದೆಂದು ತೀರ್ಮಾನವಾಯಿತು.

5. **ಕೋಣಗೇರಿ ಸೊಸೈಟಿಯವರು ತಮಗೆ ಈ ಮೊದಲೇ ಬ್ಯಾಂಕಿನಿಂದ ಮಂಜೂರ್ಮಾಡಿದ ಸಾಲದ ಪೈಕಿ ಬಾಕಿ ಕೊಡಲಿಕ್ಕಿರುವ 600 ರೂಪಾಯಿಗಳನ್ನು ಕೊಡಬೇಕೆಂದು ಬರಕೊಂಡ ಅರ್ಜಿ ಮೇರೆ** ಸದರಿ ಮೊಬಲಗಳನ್ನು ಬಟವಾಡೆ ಮಾಡುವಂತೆ ತೀರ್ಮಾನವಾಯಿತು.

6. ಒಬ್ಬ ಮಹನೀಯರು ತನ್ನ ಹೆಸರನ್ನು ಪುನರಾವರ್ತಿ ಸೇವಿಂಗ್ಸುಬ್ಯಾಂಕ್ ಎಕೌಂಟು ನಂಬ್ರು 57ಕ್ಕೆ ಜಂಟಿಯಾಗಿ ಸೇರಿಸಬೇಕಾಗಿಯೂ ಮತ್ತು ಬ್ಯಾಂಕಿನಲ್ಲಿರುವ ನಿರಖು ಠೇವಣಾತಿಯಲ್ಲಿಯೂ ಸಹ ಇದಕ್ಕೆ ಸಮ್ಬಂಧಪಟ್ಟ ಮಹನೀಯರೊಬ್ಬಳ ಹೆಸರಿಗೆ ವರ್ಗಾಯಿಸಬೇಕಾಗಿ ಸದರಿಯವರು ಬರಕೊಂಡ ಪತ್ರದ ಮೇರೆ ತಾನು ಕಬೂಲ್ ಪಡುವುದಿಲ್ಲವಾಗಿಯೂ, ಮೊದಲಿದ್ದ ಹಾಗೆ ಜಂಟಿಯಾಗಿ ಇರುವಂತೆಯೂ, ಬರಕೊಂಡ ಪತ್ರವನ್ನು ಓದಲಾಯಿತು. ಸದರಿ ಮಹನೀಯರ ಮೊದಲನೇ ಕೋರಿಕೆಯ ಮೇರೆ, ಡೈರೆಕ್ಟರುಗಳ ತಾ. 3-12-38 ರ ತೀರ್ಮಾನವನ್ನು ಈಗ ಬದಲಾಯಿಸಲು ಆಗುವುದಿಲ್ಲವೆಂತ ಅವರಿಗೆ ತಿಳಿಸುವಂತೆಯೂ, ಎರಡನೇ ಕೋರಿಕೆಯ ಮೇರೆ ಸದರಿ ಮಹನೀಯರು ಒಪ್ಪದ್ದರಿಂದ ವರ್ಗಾಯಿಸಲು ಆಗುವುದಿಲ್ಲವಾಗಿ ಸದರಿ ಮಹನೀಯಳಿಗೆ ತಿಳಿಸುವಂತೆಯೂ ತೀರ್ಮಾನವಾಯಿತು.

7. ಸಹಕಾರ ಜಿನಸು ಸ್ಟೋರುಗಳಿಂದ ಬ್ಯಾಂಕಿಗೆ ಬರಬೇಕಾದ ವಾಯಿದೆ ಮೀರಿದ ಸಾಲಗಳ ವಿಷಯ ಪರಿಶೀಲಿಸಲಾಯಿತು. ಈ ವಿಷಯವಲ್ಲಿ ಸ್ಟೋರು ಸುಪರ್‌ವೈಜರುಗಳು ಅವುಗಳ ಸ್ಥಿತಿಗತಿಯ ಬಗ್ಗೆ ಬರೆದಿರುವ ರಿಪೋರ್ಟನ್ನು ರಿಜಿಸ್ಟ್ರಾರವರಿಗೆ ಕಳುಹಿಸಬೇಕಾಗಿಯೂ ಸದರಿ ಸ್ಟೋರುಗಳ ಪೈಕಿ ಅನೇಕ ಸ್ಟೋರುಗಳು ನಷ್ಟದಲ್ಲಿ ಕೆಲಸ ಮಾಡುವುದರಿಂದ ಸದರಿ ಸ್ಟೋರು ಸಂಘಗಳ ಮುಂದಿನ ಕೆಲಸ ಕಾರ್ಯಗಳ ವಿಷಯ ರಿಜಿಸ್ಟ್ರಾರವರ ಅಭಿಪ್ರಾಯವನ್ನು ಬೇಗನೆ ಕೇಳುವಂತೆಯೂ ತೀರ್ಮಾನವಾಯಿತು.

8. ಸುಪರ್‌ವಿಜನ್ ಬೋರ್ಡಿನಲ್ಲಿ ಹಂಗಾಮಿಯಾಗಿ ಕೆಲಸ ಮಾಡಿಕೊಂಡಿರುವ ಸುಪರ್‌ವೈಜರುಗಳು ತಮಗೆ ಮದ್ರಾಸಿನಲ್ಲಿ ಸಹಕಾರಿ ತರಬೇತಿಗೋಸ್ಕರ ಒಬ್ಬೊಬ್ಬನಿಗೆ ತಿಂಗಳು ಒಂದರ 5 ರೂಪಾಯಿಯಂತೆ 1 ವರ್ಷದ ವರೆಗೆ ಬ್ಯಾಂಕಿನ ಕಾಮನ್‌ಗುಡ್ ಫಂಡಿನಿಂದ ಧನಸಹಾಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

9. ಬ್ಯಾಂಕಿನ ಗೌರವ ಕಾರ್ಯದರ್ಶಿಯವರ ಹೆಸರಿನಲ್ಲಿ ಕೆನರಾಬ್ಯಾಂಕಿಂಗ್ ಕಾರ್ಪೊರೇಶನಿನ ಮಡಿಕೇರಿ ಶಾಖೆಯಲ್ಲಿರುವ ಕರೆಂಟ್ ಎಕೌಂಟನ್ನು ಪ್ರೆಸಿಡೆಂಟರ ಹೆಸರಿಗೆ ವರ್ಗಾಯಿಸುವ ವಿಷಯ ಆಲೋಚಿಸಲಾಯಿತು. ಬ್ಯಾಂಕಿನ ಹೆಸರಿನಲ್ಲಿ ಸದರಿ ಕೆನರಾಬ್ಯಾಂಕಿನಲ್ಲಿ ಒಂದು ಕರೆಂಟ್ ಎಕೌಂಟನ್ನು ತೆರೆದು ಬ್ಯಾಂಕಿನ ಪ್ರೆಸಿಡೆಂಟರೇ ಅದನ್ನು ಅಪರೇಟ್ ಮಾಡಲು ಅಧಿಕಾರ ಕೊಡುವಂತೆ ತೀರ್ಮಾನವಾಯಿತು.

10. ಬ್ಯಾಂಕು ನೌಕರರುಗಳ ... ನ್ಸ್‌ಪೆಕ್ಟರುಗಳ ಮತ್ತು ಸುಪರ್‌ವೈಜರುಗಳ ಮೇಲೆ, ಫಾರೆಸ್ಟ್ ಉದ್ಯೋಗಸ್ಥರುಗಳ ಸಹಕಾರ ಸಂಘದ ಜನರಲ್ ಮೀಟಿಂಗಿನಲ್ಲಿ ಮೆ. ಗಳಾದ ಎನ್. ಸಿ. ಮೇದಯ್ಯನವರು ಮತ್ತು ಎನ್. ಎಸ್. ಪೂಣಚ್ಚನವರು ಹೊರಿಸಿದ ಕೆಲವು ಆರೋಪಣೆಗಳ ವಿಷಯ ಮಡಿಕೇರಿ ಸುಪರ್‌ವೈಜರು ಬರಕೊಂಡ ರಿಪೋರ್ಟನ್ನು ಓದಲಾಯಿತು.

ಈ ರಿಪೋರ್ಟನ್ನು ರಿಜಿಸ್ಟ್ರಾರವರ ಮೂಲಕ ಕಮಿಷನರವರಿಗೆ ಕಳುಹಿಸುವಂತೆಯೂ ಅಕಾರಣವಾಗಿ ಆರೋಪಣೆ ಹೊರಿಸಿದಂಥ ಆ ಮಹನೀಯರುಗಳು ಸದರಿ ಆರೋಪಣೆಗಳನ್ನು ವಾಪ್ಸು ತೆಗೆದು ಡೈರೆಕ್ಟರುಗಳು ಒಪ್ಪುವ ರೀತಿಯಲ್ಲಿ ಮನ್ನಣೆ ಕೇಳಿಕೊಂಡು ಅದನ್ನು ಸ್ಥಳೀಕ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಪಡಿಸದಿದ್ದಲ್ಲಿ ಬ್ಯಾಂಕು ಅವರ ಮೇಲೆ ಕಾನೂನು ಪ್ರಕಾರ ಕ್ರಮತೆಗೆದುಕೊಳ್ಳಬೇಕಾಗುತ್ತದೆಂತಲೂ ತೀರ್ಮಾನಿಸಲಾಯಿತು.

11. ತಾ. 28-8-37ರ ಡೈರೆಕ್ಟರುಗಳ ಮೀಟಿಂಗು ರೆಸೊಲ್ಯೂಶನ್ ನಂಬರು 4347ರ ಮೇರೆ ಮೆ. ಯಂ. ಯಂ. ಬೆಳ್ಯಪ್ಪನವರು ಸಹಕಾರ ವಿದ್ಯಾಭ್ಯಾಸಕ್ಕಾಗಿ ಕೊಟ್ಟ ಬೋನಸು ಮೊಬಲಗನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂದು ತೀರ್ಮಾನಿಸಲು ಸಬ್ ಕಮಿಟಿ ಮೆಂಬರರಾಗಿ ರಾ. ಬಾ. ಪಿ. ದೇವಯ್ಯನವರನ್ನು ನೇಮಕ ಮಾಡಲಾಯಿತು.

12. ಚೆಂಬೆಬೆಳಿಯೂರು ಗ್ರಾಮದ ಸಂಯೋಜಿತವಾದ 3 ಸಂಘಗಳು ಬ್ಯಾಂಕಿಗೆ ಪಾವತಿ ಮಾಡಬೇಕಾದ ಜುಮ್ಲ ಸಾಲಗಳಿಗೆ ಹೊಸದಾಗಿ 8 ಕಂತುಗಳನ್ನು ಕೊಡಬೇಕೆಂದು ಚೆಂಬೆಬೆಳಿಯೂರು ಸೊಸೈಟಿಯವರು ಬರಕೊಂಡ ಅರ್ಜಿಯನ್ನು ಆಲೋಚಿಸಲಾಗಿ ಬ್ಯಾಂಕಿಗೆ 500 ರೂ. ಅಸಲು ಮತ್ತು ಪೂರ್ತಿ ಸಾಲಗಳ ಮೇಲೆ ಪಾವತಿ ತಾರೀಕಿನ ವರೆಗೆ ಬರಬೇಕಾದ ಬಡ್ಡಿಯನ್ನು ಮೊದಲಾಗಿ ಪಾವತಿ ಮಾಡಿದಲ್ಲಿ ಅವರು ಕೇಳುವ 8 ಕಂತುಗಳನ್ನು ಕೊಡುವ ವಿಷಯ ಆಲೋಚಿಸಬಹುದೆಂತ ತೀರ್ಮಾನವಾಯಿತು.

13. ಗೋಣಿಕೊಪ್ಪಲಿನ ದನಗಳ ಪ್ರದರ್ಶನ ಸಮಿತಿಯ ಪ್ರೆಸಿಡೆಂಟರು ಪ್ರದರ್ಶನದ ಸಮಯದಲ್ಲಿ ಬಹುಮಾನ ವಗೈರೆ ಹಂಚಲು ಸಹಾಯಾರ್ಥವಾಗಿ ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ 50 ರೂಪಾಯಿಗಳನ್ನು ಕೊಡಿಸಬೇಕೆಂದು ಬರಕೊಂಡ ಅರ್ಜಿಯನ್ನು ಆಲೋಚಿಸಲಾಗಿ ಹಾಗೆ ಧನ ಸಹಾಯ ಕೊಡಲು ಸಾಧ್ಯವಿಲ್ಲವೆಂದು ತೀರ್ಮಾನವಾಯಿತು.

14. ಕಾಫಿ ಪ್ಲಾಂಟರುಗಳ ಸೊಸೈಟಿಯಿಂದ ಬ್ಯಾಂಕಿಗೆ ಬರಬೇಕಾದ ವಾಯಿದೆ ಮೀರಿದ ಸಾಲ ರೂ. 10,969-8-0 ಮತ್ತು ಅದರ ಪೂರ್ತಿ ಬಡ್ಡಿ ಸಮೇತ ತಕ್ಷಣ ... ಟಿಗೆ ರಿಜಿಸ್ಟರ್ ನೋಟೀಸ್ ಕಳುಹಿಸುವಂತೆ ತೀರ್ಮಾನವಾಯಿತು.

15. ಬ್ಯಾಂಕಿಗೆ ಕೊಡಬೇಕಾದ ವಾಯಿದೆ ಮೀರಿದ ಸಾಲಗಳಿಗೆ ಬಡ್ಡಿ ಇಲ್ಲದೆ 10 ಕಂತುಗಳನ್ನು ಕೊಡಬೇಕೆಂದು ಮಡಿಕೇರಿ ಟೌನ್ ಸಂಘದವರು ಕಳುಹಿಸಿದ ಅರ್ಜಿ ಮತ್ತು ಶ್ರೀಮಂಗಲ ನಾಡು ಯೂನಿಯನ್ ಪ್ರೆಸಿಡೆಂಟರು ಬರೆದ ರಿಪೋರ್ಟನ್ನು ಸಹ ಆಲೋಚಿಸಲಾಯಿತು.

ಸದರಿ ಸೊಸೈಟಿಯವರು ಅಸಲಿಗಾಗಿ 100 ರೂ. ಗಳನ್ನು ಪಾವತಿ ಮಾಡಿದರೆ ಮಾತ್ರ ಅವರ ಕೋರಿಕೆಯನ್ನು ಆಲೋಚಿಸಲಾದೀತೆಂತ ತೀರ್ಮಾನವಾಯಿತು.

16 ಸರ್ಕಾರದವರನ್ನು ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿಗೆ ಈಗ ಕೊಡುತ್ತಿರುವ ಹಾಗೆ ವರ್ಷ ವರ್ಷವೂ 1000 ರೂಪಾಯಿ ವಂತಿಗೆ ಕೊಡಬೇಕೆಂದು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

17. ಕೊಳತಡಬೈಗೋಡು ಮತ್ತು ಫ್ರೇಜರ್‌ಪೇಟೆ ಸೊಸೈಟಿಗಳು ಬ್ಯಾಂಕಿಗೆ ಬರಕೊಂಡ ಸಾಲದ ಅರ್ಜಿಗಳನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

18. ಈ ಕೆಳಗಿನ ಸಂಘಗಳಿಗೆ ಸಾಲಗಳು ಮಂಜೂರಾಯಿತು. (1) ಕೈಕೇರಿ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 1000, (2) ಅಮ್ಮತ್ತಿ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 2500, (3) ಕಿಗ್ಗಟ್ಟು ನಾಡು ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 2000, (4) ವೀರಾಜಪೇಟೆ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 2000. ಆದರೆ ಕೈಕೇರಿ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಯು ಪೊನ್ನಂಪೇಟೆನಾಡು ಯೂನಿಯನಿಗೆ ಸಂಯೋಜಿತವಾದ ವಿನಹ ಮಂಜೂರಾದ ಹಣವನ್ನು ಕೊಡಕೂಡದಾಗಿಯೂ ತೀರ್ಮಾನಿಸಲಾಯಿತು.

19. ಕಳೆದ ಸಹಕಾರ ಸಮ್ಮೇಳನಕ್ಕೆ ಕೊಡಬೇಕಾಗಿದ್ದ ವಂತಿಗೆ ರೂ. 3ನ್ನು ಮಾಫಿ ಬಿಡಬೇಕೆಂದು ಕೈಕೇರಿ ಹರಿಜನ ಸಂಘದವರು ಪೊನ್ನಂಪೇಟೆ ನಾಡು ಯೂನಿಯನ್ ಪ್ರೆಸಿಡೆಂಟರ ಶಿಫಾರಸು ಸಮೇತ ಕಳುಹಿಸಿದ ಅರ್ಜಿ ಮೇರೆ ಸದರಿ ಸಂಘಕ್ಕೆ 3 ರೂ. ಮಾಫಿ ಬಿಡಲಾಯಿತು.

20. ಸರ್ಕಾರಿ ಉದ್ಯೋಗಸ್ಥರುಗಳು ರಿಜಿಸ್ಟ್ರಾದ ಸಹಕಾರಿ ಸಂಸ್ಥೆಗಳಲ್ಲಿ ಹಣ ಡಿಪಾಜಿಟ್ಟು ಮಾಡುವ ವಿಷಯದಲ್ಲಿ ಮತ್ತು ಅವುಗಳ ಆಡಳಿತ ನಡಿಸುವುದರಲ್ಲಿಯೂ ಉದ್ಯೋಗಗಳನ್ನು ಕೈಕೊಳ್ಳುವ ವಗೈರೆ ಬಾಬಿನಲ್ಲಿ ಭಾಗ ವಹಿಸಕೂಡದೆಂದು ಕೊಡಗು ಚೀಫ್ ಕಮಿಷನರವರಿಂದ ಬಂದ ತಾ. 10-1-39ರ ಹುಕುಂ ನಂಬರು 78,321-38ನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು.

ದೇವದತ್ತ.

ಸಾಮಾಜಿಕ ಕಾದಂಬರಿ.

ಕಳೆದ ವಾರದಿಂದ ಮುಂದುವರಿದುದು.

'ಇನ್ನಿರುವುದು ವ್ಯಾಯಾಮ. ಗ್ರಾಮಗಳಲ್ಲಿ ನಾವು ವಾಡಿಕೆಯಾಗಿ ಶ್ರಮಪಟ್ಟು ಕೆಲಸ ಮಾಡುತ್ತೇವೆ. ಇದರಿಂದಲೇ ನಾವು ಇಷ್ಟಾದರೂ ಸುಖಿಗಳಾಗಿದ್ದೇವೆ. ಕೆಲಸವಿರುವಾಗ ನಮಗೆ ಸರಿಯಾದ ಹಸಿವು ಇರುತ್ತದೆ. ರೋಗಗಳು ಇರುವುದಿಲ್ಲ. ಕೆಲಸವಿಲ್ಲದ ಸಮಯಗಳಲ್ಲಿ ನಾವೇನಾದರೂ ಸ್ವಲ್ಪ ವ್ಯಾಯಾಮವನ್ನು ಕೈಕೊಳ್ಳಲೇ ಬೇಕು. ಮುದುಕರಿಗಿದರವಶ್ಯವಿಲ್ಲದಿದ್ದರೂ, ಯುವಕರು ಖಂಡಿತವಾಗಿಯೂ ಅಂಗಸಾಧನೆ ಮಾಡಲೇ ಬೇಕು. ವ್ಯಾಯಾಮ ಮಾಡುವವನು ಯಾವಾಗಲೂ, ಸುಖಿಯೂ, ಶಕ್ತಿಯುಳ್ಳವನೂ, ಅನಾರೋಗಿಯೂ ಆಗುತ್ತಾನೆಂಬುವುದಕ್ಕೆ ಅನವರತವೂ ಕೆಲಸ ಮಾಡುವ ಕೂಲಿಯಾಳುಗಳ ಮೈಸಿರಿಯೇ ನಿದರ್ಶನ. ವ್ಯಾಯಾಮ ನಮ್ಮ ಪುರಾಣೇತಿಹಾಸಗಳಲ್ಲಿ ಪ್ರಸಿದ್ಧವಾದಂತ ಸಿದ್ಧಾಂತವಾಗಿದೆ.'

ಗ್ರಾಮಸ್ಥರೆಲ್ಲರೂ ಸರಿ ಎಂದು ತಲೆದೂಗಿದರು. ಕೆಲವರು, ಅದೆಲ್ಲ ಅವರವರ ಅದೃಷ್ಟವೆಂದು ಗುಪ್ತವಾಗಿ ಹೇಳಿ ಕಣ್ಣು ಮುಚ್ಚುತ್ತಿದ್ದರು. ಅಷ್ಟರಲ್ಲಿ ಸೇವಕನೊಬ್ಬನು ಒಂದು ಪತ್ರವನ್ನು ತಂದು, ವೈದ್ಯರಿಗೊಪ್ಪಿಸಿದನು. ವೈದ್ಯರು ಹೊರಡಲು ಸಿದ್ಧರಾದರು.

ಅಷ್ಟರಲ್ಲಿ ಸೋಮದತ್ತನು, ಎದುರು ಬಂದು, ಕೈಜೋಡಿಸಿ, 'ವೈದ್ಯರಲ್ಲಿ ನನ್ನದೊಂದು ಬಿನ್ನಪ. ನೀವಿಷ್ಟು ಶ್ರಮತೆಗೆದುಕೊಂಡು ನಮ್ಮ ಮನೆಗೆ ಅನೇಕ ಸಲ ಬಂದು, ನನ್ನ ಮಾತೋಶ್ರೀ ತಾಯಮ್ಮನವರನ್ನು ಚಿಕಿತ್ಸೆ ಹೊಂದಿಸಿದುದರಿಂದ ನಾನು, ನನ್ನ ಮಾತಾಶ್ರೀಯವರ ಕೋರಿಕೆ ಮೇರೆ ಕುಟುಂಬ ಸಹಿತ ನಿಮಗೂ, ಗ್ರಾಮಸ್ಥರಿಗೂ ಒಂದು ಔತಣವನ್ನು ನಾಳೆ ನನ್ನ ಈ ಮನೆಯಲ್ಲಿ ಕೊಡಬೇಕೆಂದಿರುತ್ತೇನೆ. ನನ್ನ ಬಡಾನುಭಕ್ತಿಯನ್ನು ನಿರಾಕರಿಸದೆ ಸ್ವೀಕರಿಸಬೇಕಾಗಿ ಕೋರುತ್ತೇನೆ.

ವೈದ್ಯರು—ಹರ್ಷಯುಕ್ತರಾಗಿ, 'ಔತಣವನ್ನು ನಿರಾಕರಿಸುವುದದೆಯೇ! ಖಂಡಿತವಾಗಿಯೂ ಬರುತ್ತೇನೆ. ಇಷ್ಟೆಲ್ಲಾ ಮಾತಿನಲ್ಲೇ ಆಯಿತು ನಿಮ್ಮ ಕಾಯಿಲಸ್ಥನು ಹೇಗಿರುವನು' ಎಂದು ಶ್ಯಾಮಣ್ಣನನ್ನು ಕೇಳಿದರು.

ಶ್ಯಾಮಣ್ಣನು ಕೈಮುಗಿದು, 'ನಿನ್ನೆಯಿಂದ ಜ್ವರವಿಲ್ಲ. ವಾಂತಿಯೂ ಇಲ್ಲ. ಎಂದನು.

ಆ ಮೇಲೆ ವೈದ್ಯರು ಅವರಿಂದ ಬೀಳ್ಕೊಂಡು ಹೊರಟು ಹೋದರು. ಗ್ರಾಮಸ್ಥರು ವೈದ್ಯರ ಬುದ್ಧಿವಾದವನ್ನೂ, ತಮ್ಮ ತಮ್ಮ ಬುದ್ಧಿ ಹೀನತೆಗಳನ್ನೂ ವಿವರಿಸುತ್ತಾ ತಂತಮ್ಮ ಮನೆಗಳಿಗೆ ನಡೆದರು.

21 ನೇ ಅಧ್ಯಾಯ.

'ನಮಸ್ಕಾರ ಪ್ರಿಯ ಸ್ನೇಹಿತರೇ' ಎನ್ನುತ್ತಾ ಹಸನ್ಮುಖನಾದ ಎಳೆ ವಯಸ್ಸಿನ ಗೃಹಸ್ಥನೊಬ್ಬನು ಕೈಗಳನ್ನು ನೀಡಿ ಮುಂದಕ್ಕೆ ಬಂದನು. 'ತಡವಾದದಕ್ಕೆ ಕ್ಷಮಿಸಿ' ಎನ್ನುತ್ತಾ ನಮ್ಮ ಪೂರ್ವೋಕ್ತ ವೈದ್ಯರು ಮೋಟಾರಿಂದ ಇಳಿದು, ಬಹು ಮರ್ಯಾದೆ ಪೂರ್ವಕವಾಗಿ, ಗೃಹಸ್ಥನೊಡನೆ ಕೈಯಲ್ಲಾಡಿಸಿದರು. ಆ ಮೇಲೆ ಇಬ್ಬರೂ ಹತ್ತಿರದಲ್ಲಿದ್ದ ಗೃಹಸ್ಥನ ಮನೆಗೆ ನಡೆದರು.

ವೈದ್ಯರು— 'ಮೊನ್ನೆ ಹೆಚ್ಚು ಮಾತಾಡಲು ಸಮಯವಾಗಲಿಲ್ಲ. ಆದುದರಿಂದ ನಾವು ಒಬ್ಬರೊಬ್ಬರ ಪರಿಚಯವನ್ನು ಆಗುವಷ್ಟು ಬೇಗ ಮಾಡಿಕೊಳ್ಳುವುದು ಉಚಿತವಾಗಿ ತೋರುತ್ತದೆ. ನನ್ನ ಹೆಸರು ಡಿ. ಜಿ. ದೇವಿ. ಬೊಂಬಾಯಿಯಲ್ಲಿ ಬಿ. ಎ. ಪಾಸಾಗಿ ವಿಲಾಯಿತಿಗೆ ಹೋಗಿ ವೈದ್ಯ ವಿದ್ಯೆಯಲ್ಲಿ ತರಬೇತು ಹೊಂದಿ, ಈ ಊರಿಗೆ ಬಂದು ಕೆಲವು ದಿವಸಗಳಾಯಿತು. ನಿನ್ನ ಗೆಳೆತನವಾದುದಕ್ಕೆ ಬಹಳ ಸಂತೋಷ.

'ಇಬ್ಬರೂ ಇಷ್ಟರಲ್ಲಿ ಮನೆ ಸೇರಿದರು. ಗೃಹಸ್ಥನು ವೈದ್ಯನನ್ನು ಒಂದು ಉಚಿತಾಸನದಲ್ಲಿ ಕುಳ್ಳಿರಿಸಿ, ತಾನು ಒಳಗೆ ಹೋದನು. ಮರುಕ್ಷಣದಲ್ಲೇ ಹಸನ್ಮುಖನಾಗಿ ಹೊರಗೆ ಬಂದು ಮತ್ತೊಂದಾಸನದಲ್ಲಿ ಕುಳಿತನು. ಒಡನೆ ಬಹು ಅಮೂಲ್ಯವಾದ ಉಡುಪನ್ನು ಧರಿಸಿದ ಮಹಿಳೆಯೊಬ್ಬಳು ಹೊರಗೆ ಬಂದಳು. ಗೃಹಸ್ಥನು 'ಇವಳೇ ನನ್ನ ಸಹಧರ್ಮಿಣಿ. ಮದುವೆಯಾಗಿ ಎರಡು ವರ್ಷಗಳಾದವು' ಎಂದನು. ವೈದ್ಯರು ಎದ್ದು ನಿಂತು ಕಾಲೋಚಿತ ನಡೆಗನುಸಾರವಾಗಿ ಗೃಹಿಣಿಯನ್ನು ವಂದಿಸಿದರು. ಹೆಂಗಸು ಆಗಂತುಕನ ಅಭಿವಂದನೆಯನ್ನು ಸ್ವೀಕರಿಸಿ, ಒಳ ಹೋಗಲು ಉದ್ಯುಕ್ತಳಾದಳು. ಗೃಹಸ್ಥನು ಮಾತ್ರ ಕಣ್ಣುಗಳಿಂದಲೂ, ಕೈಸನ್ನೆಯಿಂದಲೂ ವೈದ್ಯನಿಗೆ ಕೈಕೊಡೆಂದು ಸನ್ನೆ ಮಾಡಿದನು. ಆದರೆ ಆಕೆಯು ಅವನ ಸಂಜ್ಞೆಗಳಾವುದನ್ನೂ ಗಣಿಸದೆ, ಒಳ ಹೋದಳು. ಗೃಹಸ್ಥನ ಮುಖವು ಸಿಟ್ಟಿನಿಂದ ಕೆಂಪೇರಿತು. ಆದರೂ ಈ ಸಂಗತಿಯನ್ನು ವೈದ್ಯನಿಂದ ಬಚ್ಚಿಡಲು, ಒಂದು ಬಲಾತ್ಕಾರದ ಮುಗುಳ್ನಗೆಯಿಂದ 'ವೈದ್ಯರಿಗೆ ನನ್ನ ಹೆಚ್ಚಿನ ಪರಿಚಯವು ತಿಳಿಯಲಿಲ್ಲವಷ್ಟೆ? ನಾನು ರಾಜಧಾನಿಯಲ್ಲಿ ಮೆಟ್ರಿಕ್ಯುಲೇಶನಿನಲ್ಲಿ ಓದುತ್ತಿದ್ದಾಗ ನನ್ನ ತಂದೆಯವರು ಸ್ವರ್ಗಸ್ಥರಾದರು. ಮನೆಯಲ್ಲಿ ತಾಯಿಯೊಬ್ಬಳೇ ಇದ್ದು, ವಿಸ್ತಾರವಾದ ನಮ್ಮ ಜಮೀನನ್ನು ನಡಸಲು ಅವರಿಗೆ ಅಸಾಧ್ಯವಾದುದರಿಂದ ನಾನು ಶಾಲೆ ಬಿಡಬೇಕಾಗಿ ಬಂತು. ಈಗ ನಾನು ಇದೇ ತಾಲೋಕಿನಲ್ಲಿ ರೆವಿನ್ಯೂ ಇನ್ಸ್ಪೆಕ್ಟರನಾಗಿದ್ದೇನೆ. ನನಗೆ ಗ್ರಾಮದಲ್ಲಿ ವಿದ್ಯಾಹೀನರಾದ ಮೂಢರೊಡನೆ ವಾಸಿಸುವುದು ಬಹು ಕಷ್ಟವಾಗಿದೆ. ಜಮೀನನ್ನು ಬಿಟ್ಟು ಪಟ್ಟಣಗಳಿಗೆ ಹೋಗಲಿಕ್ಕೂ ಆಗುವುದಿಲ್ಲ. ನೀವೀಗ ಒಂದೆರಡು ವಾರಗಳಿಂದ ಗ್ರಾಮಗಳಲ್ಲೇ ತಿರುಗಾಡುತ್ತಿರುವಿರಷ್ಟೆ? ಆ ಪರಿಚಿತಿಯಿಂದಲೇ, ವಿದ್ಯಾಹೀನರಾದ ಈ ಮೂಢ ಅಲ್ಪ ಜನರೊಡನೆ ವಿದ್ಯಾವಂತರಾದ ನಮಗೆ ಕೂಡಿಯಾಡುವುದು, ಎಷ್ಟು ದುಸ್ಸಾಧ್ಯವಾದ ಕೆಲಸವೆಂಬುವುದು ನಿಮಗೆ ತಿಳಿದಿರಬಹುದು. ಅವರ ನಡತೆಯೂ, ಅವರ ಮಾತೂ, ಅವರ ಮನೆಮಠಗಳೂ, ಅವರ ಉಡಿಗೆ ತೊಡಿಗೆ ಊಟ ಉಪಚಾರಗಳೂ, ಅಯ್ಯೋ ನಮಗೆಲ್ಲ ಬಹು ಹೇಸಿಗೆಯಾಗಿ ಕಾಣುತ್ತದೆ. ನಾನೊಬ್ಬರ ಮನೆಗೂ ಹೋಗಲಾರೆ. ಏನಾದರೂ ಅವರಿಂದ ಕಾರ್ಯವಾಗಬೇಕಾದರೆ ಅವರ ಹಟ್ಟಿಗಳಿಗೆ ಹೋಗುವುದುಂಟು. (ನಗುಮುಖಮಾಡಿ) ಹಾಗೇನಾದರೂ ಅವರ ಅಂಗಳಕ್ಕೆ ಕಾಲಿಟ್ಟರೆ ಸಾಕು. ಅವರಿಗೆ ಭಾಗ್ಯಬಂದಂತಾಗಿಬಿಡುತ್ತೆ. ನಾನೇನಾದರೂ ಬಾಯಿಬಿಟ್ಟು ಕೇಳಿಬಿಟ್ಟೇನೆಂದರೆ, ವಿಶ್ವಪ್ರಯತ್ನಮಾಡಿ, ಅದನ್ನು ಒದಗಿಸಿಕೊಡುತ್ತಾರೆ. ಆದರೆ ಈ ಮಧ್ಯೆ ಮತ್ತೊಂದು ಸಂಗತಿ. ಅವರೊಡನೆ ನೀವು ಸ್ವಲ್ಪ ಮಟ್ಟಿಗೆ ಸರಳವಾಗಿ ವರ್ತಿಸತೊಡಗಿದರೆ, ಆ ಮೇಲೆ ಅವರು ಸರಿಯಾದ ಮರ್ಯಾದೆಯನ್ನೇ ಕೊಡುವುದಿಲ್ಲ. ಹೀಗೆ ನೋಡಿ ನಾನೇನಾದರೂ ಗ್ರಾಮಗಳಿಗೆ ಹೋದದ್ದಾದರೆ, ನನ್ನ ಹಿಂದೆ ಎಷ್ಟೋ ಜನರು ನನ್ನ ಮನೆಯ ಓಣಿಯ ವರೆಗೆ ಹಿಂಬಾಲಿಸುತ್ತಾ ಬರುತ್ತಾರೆ. ಮನೆಗೆ ಮಾತ್ರ ನಾನು ಅವರನ್ನು ಸುಳಿಯಗೊಳಿಸುವುದಿಲ್ಲ. ಆದರೆ ಈಗ ಕೆಲವು ಗ್ರಾಮಸ್ಥರ ಮಕ್ಕಳು ನೋಡಿ, ಅಲ್ಲಿ ಇಲ್ಲಿ ಶಾಲೆಗಳಿಗೆ ಹೋಗಿ ಸ್ವಲ್ಪ ಓದು ಬರಹ ಕಲಿಯತೊಡಗಿದ್ದಾರೆ. ಅವರು ಮಾತ್ರ ನಮಗೆ ಸರಿಯಾದ ಮರ್ಯಾದೆ ತೋರಿಸುವುದಿಲ್ಲ. ಅಷ್ಟೇ ಅಲ್ಲ, ಅವರ ತಂದೆಗಳನ್ನು ನೆಂಟರಿಷ್ಟರನ್ನೂ 'ಏತಕ್ಕೆ ಅವರ ಹಿಂದೆ ಜವಾನರಂತೆ ತಿರುಗುತ್ತೀರಿ? ನಿಮಗೇನು ಆತ್ಮಗೌರವವಿಲ್ಲವೇ!' ಎಂದು ಅಣಕಿಸತೊಡಗಿದ್ದಾರಂತೆ. ಹೀಗಾದರೆ ಇನ್ನು ಕೆಲವು ವರ್ಷಗಳಲ್ಲಿ ನಮ್ಮಂತವರಿಗೆಲ್ಲಾ ಬದುಕುವುದೇ ಕಷ್ಟತರವಾಗುತ್ತದೆಂದು ಕಾಣುತ್ತೆ. ನಮ್ಮ ತಂದೆಯವರ ಕಾಲದಲ್ಲೆಲ್ಲಾ, ನಮ್ಮ ಮನೆಯ ಎಷ್ಟೋ ಕೆಲಸಗಳನ್ನು ಊರವರೇ ಮಾಡಿಬಿಡುತ್ತಿದ್ದರು. ಇದೇ ಈ ಮನೆ ಕಟ್ಟುವುದಕ್ಕೆ ಮೊದಲು, ನಮ್ಮ ಮನೆಗೆ ಹುಲ್ಲು ಹೊದಿಸುತ್ತಿದ್ದರು. ಆಗ ನೋಡಿ, ಗ್ರಾಮಸ್ಥರಿಗೆ ತಿಳಿಸಿಬಿಟ್ಟರೆ ಸಾಕು. ಎಷ್ಟೋ ಜನರು ಬಂದು ಹುಲ್ಲು ಹಾಕಿ ಹೋಗುತ್ತಿದ್ದರು. ಬರೀ ಒಂದು ಊಟ ಮಾತ್ರ ಕೊಡುತ್ತಿದ್ದೆವು. ಈ ಮನೆ ಕಟ್ಟುವಾಗಲೂ ಅಷ್ಟೆ. ಎಷ್ಟೆಷ್ಟೋ ದೂರದಿಂದ, ಸೀಳಿಸಿದ ಮರಗಳನ್ನೂ, ಪೇಟೆಯಿಂದ ಹಂಚುಗಳನ್ನೂ ತಮ್ಮ ತಲೆಗಳಲ್ಲಿ ಹೊತ್ತು ತಂದಿದ್ದಾರೆ ನೋಡಿ. ಆಗ ಅವರಿಗೆ ವಿದ್ಯೆಯೂ ಗೊತ್ತಿರಲಿಲ್ಲ. ಕಾನೂನು ಕಾಯಿದೆಗಳೇನೂ ತಿಳಿದಿರಲಿಲ್ಲ. ನಮ್ಮಂತಹ ವಿದ್ಯಾವಂತರು ಹೇಳಿದ್ದೆ ಕಾನೂನಾಗಿತ್ತು. ಈಗ ನಮ್ಮ ತಂದೆಯವರು ನಡೆಸುತ್ತಿದ್ದದರ ಅರ್ಧ ಕಾನೂನು ಸಹ ನನ್ನಿಂದ ನಡೆಸಲಾಗುವುದಿಲ್ಲಲ್ಲ. ಪ್ರಾಯಶಃ ನನ್ನ ಮಗನು ಇನ್ನು ಈ ಹಳ್ಳಿ ಗೌಡರ ಮಕ್ಕಳಿಗೆ ನಮಸ್ಕಾರ ಮಾಡಬೇಕಾಗಿ ಬರುತ್ತದೋ ಏನೋ? ಏನು ಹೇಳುತ್ತೀರಿ' ಎಂದು ಮುಗಿಸಿದನು.

ವೈದ್ಯರು—ಚಾರುದತ್ತನ ಉದ್ದವಾದ ಮಾತನ್ನು ಸಾವಧಾನವಾಗಿ ಮುಗುಳುನಗೆಯಿಂದ ಕೇಳುತ್ತಿದ್ದು, ಈಗ ಜವಾಬು ಕೊಡಲು ಉದ್ಯುಕ್ತರಾದರು. 'ದತ್ತರೇ, ನೀವು ಹೇಳಿದ ಸಂಗತಿಗಳೇನೋ ನಿಜ. ಆದರೆ ಯೋಚಿಸಿ ನೋಡಿ, ಹಾಗಲ್ಲವೇ ಆಗಬೇಕಾದದ್ದು..........ಚಾರುದತ್ತನು ಮಧ್ಯಬಾಯಿಹಾಕಿ 'ಹೌದೌದು, ಎಲ್ಲರೂ ವಿದ್ಯಾವಂತರೇ ಆಗಬೇಕು' ಎಂದನು.

ವೈದ್ಯರು—ಎಲ್ಲರೂ ವಿದ್ಯಾವಂತರಾದರೇನೇ ಆ ದೇಶವು ಮುಂದಕ್ಕೆ ಬರುತ್ತದೆ. ಪ್ರತಿಯೊಬ್ಬ ಮನುಷ್ಯನೂ ಇನ್ನೊಬ್ಬನಿಗೆ ಸರಿಸಮಾನನು ಅಲ್ಲವೇ?

'ಹೌದು' ಎಂದು ಚಾರುದತ್ತನು ತಲೆಯಲ್ಲಾಡಿಸಿದನು.

'ಆದರೆ, ಅವರವರ ಬುದ್ಧಿ ಚಾತುರ್ಯದ ವ್ಯತ್ಯಾಸಕ್ಕನುಸಾರವಾಗಿ, ಒಬ್ಬನು ಹಿಂದಾಳು ಮತ್ತೊಬ್ಬನು ಮುಂದಾಳು, ಒಬ್ಬನು ಯಜಮಾನ ಮತ್ತೊಬ್ಬನು ಆಳಿಗವನು ಆಗುತ್ತಾನೆ. ಮನುಷ್ಯರೊಳಗಿರತಕ್ಕ ಸರಿಸಮಾನತ್ವವನ್ನು ವಿದ್ಯೆಯು ಬಹಿರಂಗಪಡಿಸುತ್ತದೆ. ಐಶ್ವರ್ಯವೂ, ವಿದ್ಯೆಯೂ ಒಬ್ಬೊಬ್ಬರ ಸ್ವತಂತ್ರವಲ್ಲ, ಯಾರೇ ಆಗಲೀ ತನ್ನ ಬುದ್ಧಿ ಬಲದಿಂದ ಅರ್ಜಿಸತಕ್ಕ ವಸ್ತುಗಳಾಗಿರುತ್ತವೆ. ಇವುಗಳು ಎಂದೆಂದೂ ನಮ್ಮ ಸ್ವಂತ ಹಕ್ಕೆಂದು ಯಾರೂ ತಿಳಿಯಬಾರದು. ಶ್ರೀಮಂತರ ಮಕ್ಕಳು ಭಿಕ್ಷಾಪತ್ರಿಗಳಾಗುತ್ತಾರೆ. ಬಡವನು ಶ್ರೀಮಂತನಾಗುತ್ತಾನೆ. ಪಂಡಿತನ ಮಗ ಮೂಢನಾಗುತ್ತಾನೆ. ಮೂಢನ ಮಗನು ಪಂಡಿತನಾಗುತ್ತಾನೆ. ಇವೇನು ಒಬ್ಬೊಬ್ಬರ ಮನೆತನದ ಹಕ್ಕುಗಳೇ? ಯಾವನೊಬ್ಬನೂ ಮತ್ತೊಬ್ಬನು ಮುಂದುವರಿಯುವುದನ್ನು ನೋಡಿ ಮತ್ಸರಪಡಬಾರದು. ('ಚಾರುದತ್ತನ ಮುಖವು ಕಪ್ಪಾಯಿತು) 'ಕೋಪಿಸಬೇಡಿ ನೀವೀಗ ಈ ಗ್ರಾಮದಲ್ಲಿ ವಿದ್ಯಾವಂತರು ಮತ್ತು ಐಶ್ವರ್ಯವಂತರು, ನಾನು ನೋಡಿದ ರೀತಿಯಲ್ಲಿ ನಿಮ್ಮ ಗ್ರಾಮಸ್ಥರು ಬಹು ಸಾಧುಗಳು. ಹೀಗಿರುವಾಗ್ಯ ನಿಮ್ಮ ಕರ್ತವ್ಯವೇನಿರಬೇಕೆಂದರೆ, ಹಿಂದುಳಿದಿರುವ ಈ ಬಡ ರೈತರನ್ನು ನಿಮ್ಮ ಸ್ಥಿತಿಗೆ ತರುವುದು. ಎಂದರೆ ಅವರಿಗೆ ನೂರಾರು ಕೊಟ್ಟಿಲ್ಲ, ಅವರಿಗೆ ಜ್ಞಾನವಿಲ್ಲ, ಆದುದರಿಂದ ನಿಮ್ಮಂತವರು ಅವರಿಗೆ ಬುದ್ಧಿ ಕಲಿಸಬೇಕು. ಎಂದೆಂದೂ ಅವರನ್ನು ನಿಮ್ಮ ಆಳಿಗದವರನ್ನಾಗಿಟ್ಟುಕೊಳ್ಳಬೇಕೆಂದು ಯೋಚಿಸಬಾರದು. ಆದರೆ ನೀವು, ನಿಮ್ಮ ಯೋಗ್ಯತೆ ಮರ್ಯಾದೆ, ಗೌರವಗಳನ್ನೂ ಕಾಪಾಡಿಕೊಳ್ಳಬೇಕು. ಇವನ್ನು ಮನುಷ್ಯನು ಎಂದೂ ಕಳಕೊಳ್ಳಬಾರದು.'

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-32 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ. 2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರಿ... 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52-47

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,

(52-8) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು– ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:–ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

28 **ಸಿ. ಹೆಚ್. ರಾಮಣ್ಣ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ–ಮೆ. ಮಂಡೇಪಂಡ ಸೋಮಪ್ಪನವರು,
ಮೆ. ಕೆ. ಯಂ. ಸುಬ್ಬಯ್ಯನವರು.
ಅಮ್ಮತ್ತಿ–ಸಿದ್ದಾಪುರ– ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು–ಮೆ ಪಿ. ಕೆ. ಮುದ್ದಮ್ಮಯ್ಯನವರು.
ಮಡಿಕೇರಿ–ಮೆ. ಅಜ್ಜಮಾಡ ಮಾಚಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.
ಕುಂಬೆಕೊಪ್ಪ–ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ–ಮೆ ಕೆ. ಮೊಗಪ್ಪನವರು.
ನಾಪೋಕ್ಲು–ಮೆ. ಚೆಟ್ಟಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ–ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ವೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಪ್ಪುಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅನುಲ್ಲಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	--	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್. ಸಿ
ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.
ಸೆಕ್ರೆಟರಿ:—ಮ ಎಸ್. ಎನ್ ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ. 55	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60.	,, 20	,, 13.	,, 8.
1 ತಿಂಗಳಿಗೆ—	,, 25	,, 10	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಅಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರ ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಪಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

82-4

Printed & Published by P. I. Bellıappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1590 ೨

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩–೮–೦

ತಾ. ೧೦—೨—೧೯೩೯.

ಸಂಪುಟ ೧೮] [ಸಂಚಿಕೆ ೬೬

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

$3\frac{1}{2}$ % per annum

Repayable after 6 months.

For Particulars Call at or Apply to any of its Branches.

52-9

ಚ್ಯವನಪ್ರಾಶ

ಚ್ಯವನ ಪ್ರಾಶವೆಂಬದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಶೀತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ದಿವ್ಯವಾದದ್ದು.

ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣೆ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉಧರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿ ಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಅಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಪುಚ್ಚಯ್ಯ, ಗೋಣಿಕೊಪ್ಪಲು.

[25]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಶೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕಾಲಂ

12 ಕುಶವಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ನೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾನದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-36 The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಪೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತ ತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-26) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮—೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦—೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೪೯,೨೪೫—೦—೦
ಭವನದ ಆಸ್ತಿಗಳು	೧೦,೩೭,೧೯೬—೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮—೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭—೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್. ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್). ಆಫಿಸಿಯೇಟಿಂಗ್ ಜನರಲ್ ಮ್ಯಾನೇಜರ್, ಅಜ್ಮೀರ್.

12-20

ವಿ ವಿ ಧ — ವಿ ಚಾ ರ.

ಜರ್ಮನ್ ಸನ್ಯಾಸಿಗಳಿಗೆ ಬಲಾತ್ಕಾರ ವಿವಾಹ.

ಜರ್ಮನಿಯಲ್ಲಿನ ಎಲ್ಲಾ ಕ್ಯಾಥಲಿಕ್ ಸನ್ಯಾಸಾಶ್ರಮಗಳೂ ಸರ್ಕಾರಕ್ಕೆ ಸೇರಿಸಲ್ಪಡುವವೆಂದೂ 28 ವರ್ಷಗಳಿಗೆ ಕಡಿಮೆಯೊಗಿರುವ ಸನ್ಯಾಸಿಗಳನ್ನು ಮಿಲಿಟರಿಗೆ ಸೇರಿಸಲ್ಪಡುವವೆಂದೂ, ಸನ್ಯಾಸಿನಿಯರುಗಳೆಲ್ಲಾ ಬಿಡ್ಡಾಯದ ಮದುವೆಗೆ ಒಳಪಡಿಸಲ್ಪಡುವರೆಂದೂ ಹೇಳಲ್ಪಟ್ಟಿದೆ. ರಣರಂಗದಲ್ಲಿ ಸನ್ಯಾಸಿಗಳಿಗೆ ಪರಮಾತ್ಮನ ದರ್ಶನವಾಗಬಹುದಲ್ಲವೇ?

—೦()೦—

ಪಂಚ ರಥಿಕರ ಬೈಸಿಕಲ್.

ಏಳ ಕಾಲವಲ್ಲಿ 5 ಜನರು ಕುಳಿತುಕೊಂಡು ಹೋಗಬಹುದಾದ ಬೈಸಿಕಲ್ ಬಂದಿದೆ. ಇದರ ಮೇಲೆ ಐವರು ಒಬ್ಬರಿಂದೊಬ್ಬರು ಕುಳಿತು ಏಕಕಾಲದಲ್ಲಿ ಪೆಡಲ್ ಮಾಡಿದರೆ 35 ಮೈಲಿ ವೇಗದಲ್ಲಿ ಹೋಗಬಹುದಾಗಿದೆ. 12½ ಅಡಿ ಉದ್ದ ಮತ್ತು 154 ಪೌಂಡು ತೂಕವಿದೆ. ಲಿಂಕನ್ ಶೈರಿನ ಜಾನ್ ಸಾರ್ಜೆಂಟನೇ ಇದರ ನಿರ್ಮಾಪಕನು.

—೦()೦—

ಭಾರತೀಯನ ಯುಕ್ತಿ ಶಕ್ತಿ.

ಲಕ್ನೋ ವಿಶ್ವ ವಿದ್ಯಾಲಯದ ಒಬ್ಬ 19 ವರ್ಷ ವಯಸಿನ ವಿದ್ಯಾರ್ಥಿಯು 50 ರೂ. ಬೆಲೆ ಬಾಳುವ ಒಂದು ರೇಡಿಯೋ ಸೆಟ್ಟನ್ನು ತಯಾರಿಸಿರುವನು. ಅದರಿಂದ ಭಾರತದ ಎಲ್ಲಾ ಸ್ಟೇಷನುಗಳ ಕಾರ್ಯಕ್ರಮವು ಕೇಳಿಬರುತ್ತದೆ. ಕೆಲವು ವಿದೇಶೀ ಸ್ಟೇಷನುಗಳ ಕಾರ್ಯಕ್ರಮವೂ ಕೇಳಿ ಬರುತ್ತವೆ. ಈ ವಿದ್ಯಾರ್ಥಿಯ ಹೆಸರು ವೀರೇಂದ್ರ ಕುಮಾರ್ ಸಕ್ಸೇನಾ ಎಂದು. ಈತನು ವೈಜ್ಞಾನಿಕ ಅನುಸಂಧಾನದಲ್ಲಿಯೂ, ದೇಶವಿದೇಶಗಳಲ್ಲಿಯೂ ಸನ್ಮಾನವನ್ನು ಹೊಂದಿರುವನು.

—೦()೦—

ಸಮುದ್ರದೊಳಗಿನ ಭೂ ಮಾರ್ಗ.

ಸಮುದ್ರದೊಳಗೆ ಈಗ ಒಂದು ದೊಡ್ಡ ಭೂ ಸುರಂಗ ಮಾರ್ಗವನ್ನು ನಿರ್ಮಿಸುವ ಯೋಚನೆಯಲ್ಲಿದೆ ಜಪಾನು. ಈ ಸುರಂಗ ಮಾರ್ಗವು ಜಪಾನನ್ನೂ, ಕೊರಿಯಾವನ್ನೂ ಸೇರಿಸುವುದಾಗಿರುವುದಲ್ಲದೆ ಗೋಪ್ಯವಾಗಿ ಶಸ್ತ್ರ ಸಾಮಗ್ರಿಗಳನ್ನು ರವಾನಿಸಬಹುದಾಗಿದೆ. ಈಗಾಗಲೇ ಸರ್ವೆ ಸಹ ನಡೆದಿವೆ. ನಿಮೊನೊಸೆಕಿ ಎಂಬ ಜಪಾನ್ ಪಟ್ಟಣವನ್ನೂ ಫ್ಯೂಸ್ಯಾನ್ ಎಂಬ ಕೊರಿಯಾದಲ್ಲಿನ ಪಟ್ಟಣವನ್ನೂ 150 ಮೈಲಿಯ ಈ ಸುರಂಗವು ಸೇರಿಸುವುದಾಗಿದೆ.

—೦()೦—

ವಿಷದ ಹಾವಿನ ಬೆಲೆ.

ಮರುಭೂಮಿಯಂತಿರುವ ಕಾಸ್ಪಿಯ ಪ್ರದೇಶದ ಮಂದಿ ಹೊಸ ಜೀವನೋಪಾಯವನ್ನು ಹುಡುಕಿದ್ದಾರೆ. ಭಯಂಕರವಾದ ವಿಷವುಳ್ಳ ಹಾವುಗಳನ್ನಿವರು ಜೀವ ಸಹಿತ ಹಿಡಿದು ಜರ್ಮನಿಗೆ ಕಳುಹಿಸುವರು. ಈ 'ಫೋಸ್ಕಾ' ಎಂಬ ಹಾವುಗಳನ್ನು ಹಿಡಿಯುವುದು ಅತೀವ ಕಷ್ಟತರ ಕೆಲಸವಾದರೂ ಅನುಭವದಿಂದ ಅಲ್ಲಿನ ಕೂಲಿಗಳು ಇವನ್ನು ಹಿಡಿದುಬಿಡುವರು. ಸಿರೋಕಿ ಬ್ರಿಜೆಗ್‌ನಲ್ಲಿರುವ ಜರ್ಮನಿ ರಸಾಯನ ಶಾಲೆಯೊಂದು ಹೀಗೆ ಜೀವ ಸಹಿತ ಹಿಡಿದು ತರುವ ಪ್ರತಿಯೊಂದು ಹಾವಿಗೂ ಸುಮಾರು 5 ಶಿಲಿಂಗ್ (ರೂ. 3-4-0) ಕೊಡುತ್ತದೆ. ಇಲ್ಲಿನ ವಿಜ್ಞಾನಿಗಳು ಈ ಹಾವುಗಳ ವಿಷದ ಚೀಲಗಳನ್ನು ತೆಗೆದು ಹಾವು ಕಚ್ಚಲ್ಪಟ್ಟವರಿಗೆ ಇಂಜಕ್ಷನ್ ಕೊಡಲು ಬೇಕಾದ ಔಷಧಿ ತಯಾರಿಸುವರು.

—೦()೦—

ಶೀಮೆ ಸುಣ್ಣ.

ಈಗೊಂದು ತರದ ಶೀಮೆ ಸುಣ್ಣ ಬಂದಿದೆ. ಸಾಧಾರಣ ಶೀಮೆ ಸುಣ್ಣದಂತೆಯೇ ಇದು ಇದ್ದರೂ ಕತ್ತಲಿನಲ್ಲಿ ಕಪ್ಪು ಹಲಗೆ ಮೇಲೆ ಬರೆದರೆ ಬೆಳಕನ್ನು ಕೊಡುವದಂತೆ. ಇದರಿಂದ 'ಮಾಯಾ ದೀಪ'ದ ಮೂಲಕ ಪಾಠ ಹೇಳುವ ಉಪಾಧ್ಯಾಯರಿಗೆ ಅಲ್ಲದೆ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿರುವುದು.

—೦()೦—

ಕುಜ್ಜಿಗೆ ಅಕ್ಕಿ.

ಕುಜ್ಜಿಗೆ ಅಕ್ಕಿ ಅಹಿತ; ಅದು ಒಮ್ಮೆ ಬೇಯಿಸಲ್ಪಡುವದರಿಂದ ಅದರ ಸಾರವೆಲ್ಲಾ ಹೋಗುತ್ತದೆ ಎನ್ನುವವರು ಇದನ್ನು ಓದಲಿ! ಕುಜ್ಜಿಗೆ ಅಕ್ಕಿಗಾಗಿ ಭತ್ತವನ್ನು ಮೊದಲು ಅರ್ಧ ಬೇಯಿಸುತ್ತಾರೆ. ಹೀಗೆ ಬೇಯಿಸುವಾಗ ದೇಹಕ್ಕೆ ಆಹಿತಕರವಾದ ಕೆಲವು ವಸ್ತುಗಳು ಆದರಿಂದ ತೊಲಗುತ್ತವೆ. ಅಲ್ಲದೆ ದೇಹದ ಬೆಳವಣಿಗೆಗೆ ಸಾಧಕವಾದ ತೌಡು ಇದರಲ್ಲೇ ಉಳಿಯುತ್ತದೆ. ಆ ವಿಭಾಗವು ಭತ್ತ ಕುಟ್ಟುವಾಗ ಉಳಿದುಕೊಳ್ಳುತ್ತದೆ. ಆದರೆ ಯಂತ್ರದಿಂದ ತಯಾರಿಸಲ್ಪಟ್ಟ ಅಕ್ಕಿಯಿಂದ ದೇಹಕ್ಕೆ ಬೇಕಾದ ಪದಾರ್ಥಗಳೆಲ್ಲ ತೊಲಗಿಸಲ್ಪಟ್ಟು ಬರೇ ಅಕ್ಕಿ ಮಾತ್ರ ಉಳಿಯುತ್ತದೆ.

—೦()೦—

ಆಶ್ಚರ್ಯ ವಿಚಾರ.

ಜಗತ್ತಿನಲ್ಲಿ ದಿನೇ ದಿನೇ ವೈಚಿತ್ರ್ಯಗಳು ತಮ್ಮ ಮೇರೆ ಮೀರಿ ನಡೆಯುತ್ತಿವೆ. ವಿಜ್ಞಾನ ಪ್ರಪಂಚದಲ್ಲಿ ನಡೆಯುತ್ತಿರುವ ಚಮತ್ಕಾರಗಳೆಂತೂ ಅಸಂಖ್ಯಾತ. ಜಾನ್ ಗ್ರಿಂಡಾ ಜಿಲ್ಲಾಂಡರ್ ಎಂಬವನು ಒಬ್ಬ ಔಷಧಿ ಶಾಸ್ತ್ರಜ್ಞನು. ತನ್ನ 24ನೇ ವಯಸಿನಲ್ಲಿ ತನ್ನ ಎರಡು ಕಣ್ಣುಗಳನ್ನು ಕಳೆದುಕೊಂಡು ಅಂಧನಾದ. ಈಗ ಈತನು ಕಣ್ಣುಗಳ ಸಹಾಯವಿಲ್ಲದೇನೇ ಅವನಿಗೆ ಕೊಡುವ ಹೂಗಳನ್ನು ಇಂಥಾ ಹೂವೆಂದೇ ಗುರ್ತಿಸಬಲ್ಲನು. ಪುಷ್ಪಗಳನ್ನು ನಾಲಗೆಯ ತುದಿಗೆ ಸೋಕಿಸಿ ಅವನ್ನು ಗುರ್ತು ಹಚ್ಚಬಲ್ಲನಂತೆ. ಒಂದಾದ ಮೇಲೆ ಒಂದರಂತೆ ಎಷ್ಟು ಹೂಗಳನ್ನು ಕೊಟ್ಟರೂ ಇಂತಿಂಥಾ ಹೂವೆಂದೇ ಗುರ್ತಿಸಬಲ್ಲನು. ಏನು ಹೇಳುವಿರಿ! ಈ ವಿಚಿತ್ರಕ್ಕೆ.

—೦()೦—

ಕಳ್ಳನ ಜನನ.

ಕಳ್ಳತನ ನಡೆಸಿ, ಪೊಲೀಸ್ಗಳಿಂದ ಅದನ್ನೆಲ್ಲ ಬಚ್ಚಿಹೆಕ್ಟರ್, ಮುರಿಯೆಲ್ ಎಂಬಾಕೆಯನ್ನು ವಿವಾಹವಾದ. ಕೊನೆಗೆ ನೋಡುವಾಗ ಮುರಿಯೆಲ್ ಕೂಡ ದೊಡ್ಡ ವರೋಡೆಗಾರ್ತಿಯೆಂದು ತಿಳಿದು ಬಂತು. ಅಂತೂ ಕೆಲ ಕಾಲದಲ್ಲಿ ಮುರಿಯೆಲ್ ಗಂಡು ಮಗುವನ್ನು ಹೆತ್ತಳು. ಮಗು ಹುಟ್ಟಿದಾಗ ಅದು ತನ್ನ ಬಲಗೈ ಮುಷ್ಟಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿತ್ತು. ಏನೇನು ಮಾಡಿದರೂ ಅದು ಆ ಮುಷ್ಟಿಯನ್ನು ಬಿಡಿಸಲಿಲ್ಲ. ಕೊನೆಗೆ ತಂದೆ ತಾಯಿಯಂದಿರು ಮಗುವನ್ನು ಡಾಕ್ಟರೊಬ್ಬರ ಬಳಿ ಒಯ್ದರು. "ಗುಟ್ಟು ರಟ್ಟು ಮಾಡುವುದಿಲ್ಲವೆಂದು 'ಆಣೆ' ಮಾಡಿಸಿಕೊಂಡು ಡಾಕ್ಟರರಿಗೆ ಇಬ್ಬರೂ ತಮ್ಮ ಸ್ವಂತ ಜೀವನ ಕಥೆಯನ್ನು ತಿಳಿಸಿದರು. ಡಾಕ್ಟರರು ಕೂಡಲೇ ತನ್ನ ಚಿನ್ನದ ಗಡಿಯಾರವನ್ನು ಮಗುವಿನ ಕಣ್ಣೆದುರು ಕುಣಿಸಿದರು. ಸ್ವಲ್ಪ ಹೊತ್ತಿನಲ್ಲಿ ತನ್ನ ಮುಷ್ಟಿಯನ್ನು ಬಿಡಿಸಿ, ಆ ಗಡಿಯಾರವನ್ನು ಹಿಡಿಯಲು ಮುಂದಾಯಿತು. ಮಗುವಿನ ಮುಚ್ಚಿದ್ದ ಮುಷ್ಟಿಯೊಳಗೆ ಹೆರಿಸಲು ಬಂದ ಸೂಲಗಿತ್ತಿಯ ವಿವಾಹದ ಉಂಗುರವಿದ್ದಿತು. ಇದಕ್ಕೆನ್ನುವೇಕು ಹುಟ್ಟುಗುಣ!

—೦()೦—

ಸೂಜಿಗೆ ಮುತ್ತು; ಸರ್ವೆಯರ್ ಗಾಂಧಿ.

ಸರ್ವೆಯರ್ ಲಿವಿಂಟೋನ್ ವೆಸ್ಟ್ರೋವಿಚ್ ಎಂಬಾತನು ಅನೇಕ ಸಾರಿ ಮೌನವಾಗಿಯೇ ಇರುವನು. ಅದಕ್ಕಾಗಿ ಇವನನ್ನು ಗಾಂಧಿ ಎಂದು ಕರೆಯುವರು. ಇವನು ಐದು ನಿಮಿಷ ಸಂಭಾಷಣೆ ಕೊಟ್ಟರೆ ಎರಡಾಣೆ ಕೊಡಬೇಕು. ಬಡವರ, ಅಂಗಹೀನರ ಮತ್ತು ನಿರುದ್ಯೋಗಿಗಳ ಸಲುವಾಗಿ ಹೀಗೆ ಮಾಡುವನಂತೆ.

—೦()೦—

ಸೀಸದಿಂದ ಚಿನ್ನ.

ನಮ್ಮ ಹಿರಿಯರ ಪುರಾತನದ ಅಜ್ಜಿಕಥೆ ಸತ್ಯವಾಗಿದೆ. ಸಾಧುಗಳು ಬೇಕಷ್ಟೇ ಭಂಗಾರ ತಯಾರಿಸಿ ಭಂಗಿ ಕೊಂಡು ಸೇದುವ ವಿಚಾರ ನಿಜವೆಂದು ಕೆಲವರಿಗೆ ಹೊಳೆದಿದೆ. ಪ್ರೊಲೆಂಡಿನ ಲೋಡ್ಜ್ ಎಂಬಲ್ಲಿನ ತರುಣನೊಬ್ಬನು ಇದೀಗ ಸೀಸದಿಂದ ಚಿನ್ನ ತಯಾರಿಸುವುದನ್ನು ಕಂಡುಹಿಡಿದಿದ್ದಾನೆ. ತಾನು ಮಾಡಿದ ಭಂಗಾರದ ಮಾದರಿ ತುಂಡನ್ನು ಶೋಧಕ ಸಂಸ್ಥೆಗೆ ಕಳುಹಿಸಿದ್ದಾನೆ.

—೦()೦—

ನಿಮ್ಮಲ್ಲಾ ಇದೆ?

ರತುನಗನನ್ನು ಸಂಚರಿಸುವರು ಬಹಳ ಮಂದಿ. 'ಹಣೆ ಬರಹ', 'ಶಕುನ' ಎಂಬಿವುಗಳ ರೂಢಿ ನಮ್ಮಲ್ಲಿ ತುಂಬ. ಅದು ಯೂರೋಪಿಯನರಲ್ಲಿ ಇದ್ದೇ ಇದೆ. ನಾಗರೀಕತೆ ಬಂದುದರಿಂದಲೇ ಅದು ಅಡಗಿಲ್ಲ. ಇವರ ಕೆಲವು ಶಕುನಗಳ ನಂಬುಗೆ ಇದು ... ಉಪ್ಪನ್ನ ಚೆಲ್ಲಿದರೆ ಜಗಳ; ಚೂರಿಯನ್ನು ಒಬ್ಬರು ಇನ್ನೊಬ್ಬರಿಗೆ ಕೊಟ್ಟರೆ ಸ್ನೇಹಿತರ ಅಗಲಿಕೆ. ಕೈ ತುರಿಸಿದರೆ ಧನಲಾಭ. ಸರಿಯಾದ ನಾಡಿ ಹೆತ್ತವನೆ ಶುಭ. ಅಂಗಿ ಒಳಗಿನ ಭಾಗ ಹೊರಗೆ ಹಾಕಿಕೊಂಡರೆ ಶುಭ. ಶಿದುರನೋ ಬಿದ್ದರೆ ... ಮೊತ್ತಲು ... ವೇಟ್ಟಿನ್ನವು ಅಧವಾ ... ಅದು ಭ ಎಂದು ನಂಬಿದ್ದ. ವಾಲ್ಟರ್ ಸ್ಕಾಟ್ ಚಕ್ರವರ್ತಿ ನೆಪೋಲಿಯನ್ ತನ್ನ ... ಇಟ್ಟುಕೊಂಡಿದ್ದಾನೆ. ... ನೂರಾರು ಮೆಡಲುಗಳನ್ನು ಧರಿಸಿದ್ದ. ಜೋನ್ ಚಾರ್ಲ್ಸ್ ಸದಾ ನಾಣ್ಯವನ್ನು ಹಾರಿಸಿ, 'ಚಾನ್ಸ್' ನೋಡಿ ಕೆಲಸ ಮಾಡುವನು. ಇವು ಕೆಲವು ಕೆಲವರಲ್ಲಿವೆ. ನಿಮ್ಮಲ್ಲಿ ಇದೆ?

—೦()೦—

ದೇವಳಗಳು.

ಪೈಗಂಬರರ ಉತ್ತರಾಧಿಗಳ ದೇವವಾಕ್ಯವನ್ನು ಕೇಳುವುದು ಮಹಮ್ಮದೀಯರ ಧರ್ಮ. ಮಿನರೆಟ್‌ನಲ್ಲಿ ನಿಂತುಕೊಂಡು ಶತಮಾನಗಳಿಂದ ಮ್ಯಾಜಿನ್‌ರವರುಗಳು ಧರ್ಮವನ್ನು ಸಾರುತ್ತಿದ್ದರು. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಗಳ ದೆಸೆಯಿಂದಾದ ಪೂಪಾರ್ಟಿಯಿಂದ, ಮ್ಯಾಜಿನ್‌ರವರ ಸ್ವರ ಎಲ್ಲರಿಗೂ ಕೇಳದಾಯಿತು. ಹೇಟೆ ಪಟ್ಟಣಗಳ ಗಲಭೆ ಇವಕ್ಕೆ ಅಡ್ಡಿ ತಂದಿತು. ಇದೀಗ ಈ ಮಹಮ್ಮದೀಯರ ಧರ್ಮಸ್ಥಳದಲ್ಲಿ 'ಲೌಡ್ ಸ್ಪೀಕರ್' ಇರಿಸಲಾಗಿದೆ. ಅದರ ಸಹಾಯದಿಂದ ಮ್ಯಾಜಿನ್‌ರವರ ದೇವವಾಕ್ಯಗಳನ್ನು ಎಲ್ಲರೂ ಕೇಳಿ ಪ್ರಾರ್ಥನೆ ಪೂರೈಸುವಂತಾಗಿದೆ. ನಾವೂ ಹಿಂದಾಗಿಲ್ಲ; ವಿದ್ಯುದ್ದೀಪ, ದೇವಸ್ಥಾನಗಳ ನಂದಾದೀಪವನ್ನೋಡಿಸಿದೆ. ವಾಲಗ ಮೊತ್ತಗಳ ಬದಲು ಗ್ರಾಮೊಫೋನ್ ಪ್ಲೇಟುಗಳೂ, ಅಭಿಷೇಕಕ್ಕ ಸಂಪಿನ ವ್ಯವಸ್ಥೆಯೂ ಗಂಟಾಮಣಿಗೆ ಎಲೆಕ್ಟ್ರಿಕ್ ಬೆಲ್ ಮತ್ತು ಆರತಿಗೆ ವಿದ್ಯುದ್ದೀಪ. (ಬಲ್ಬ್) ಮುಂತಾದವು ಬಂದಿವೆ!

—೦()೦—

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿ ಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ!　　　　**ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–36　　　　The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ ಮತ್ತು ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಕ್ಕಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52–26)　　　　ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೭೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೯೫— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ——————— ೩,೨೫,೧೩೩ ರೂಗಳು

೧೯೨೭ ——————— ೨೧,೩೫,೨೩೪ ರೂಗಳು.

೧೯೩೭ ——————— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–20

ವಿ ವಿ ಧ ವಿ ಚಾ ರ.

ಜರ್ಮನ್ ಸನ್ಯಾಸಿಗಳಿಗೆ ಬಲಾತ್ಕಾರ ವಿವಾಹ.

ಜರ್ಮನಿಯಲ್ಲಿನ ಎಲ್ಲಾ ಕ್ಯಾಥಲಿಕ್ ಸನ್ಯಾಸಾಶ್ರಮಗಳೂ ಸರ್ಕಾರಕ್ಕೆ ಸೇರಿಸಲ್ಪಡುವವೆಂದೂ 28 ವರ್ಷಗಳಿಗೆ ಕಡಿಮೆಯಾಗಿರುವ ಸನ್ಯಾಸಿಗಳನ್ನು ಮಿಲಿಟರಿಗೆ ಸೇರಿಸಲ್ಪಡುವರೆಂದೂ, ಸನ್ಯಾಸಿನಿಯರುಗಳೆಲ್ಲಾ ಖಡ್ಡಾಯದ ಮದುವೆಗೆ ಒಳಪಡಿಸಲ್ಪಡುವರೆಂದೂ ಹೇಳಲ್ಪಟ್ಟಿದೆ. ರಣರಂಗದಲ್ಲಿ ಸನ್ಯಾಸಿಗಳಿಗೆ ಪರಮಾತ್ಮನ ದರ್ಶನವಾಗಬಹುದಲ್ಲವೇ?

—oOo—

ಪಂಚ ರಥಿಕರ ಬೈಸಿಕಲ್.

ಏಕ ಕಾಲದಲ್ಲಿ 5 ಜನರು ಕುಳಿತುಕೊಂಡು ಹೋಗಬಹುದಾದ ಬೈಸಿಕಲ್ ಬಂದಿದೆ. ಇದರ ಮೇಲೆ ಐವರು ಒಬ್ಬರಿಂದೊಬ್ಬರು ಕುಳಿತು ಏಕಕಾಲದಲ್ಲಿ ಪೆಡಲ್ ಮಾಡಿದರೆ 35 ಮೈಲಿ ವೇಗದಲ್ಲಿ ಹೋಗಬಹುದಾಗಿದೆ. 12½ ಅಡಿ ಉದ್ದ ಮತ್ತು 151 ಪೌಂಡು ತೂಕವಿದೆ. ಲಿಂಕನ್ ಷೈರಿನ ಜಾನ್ ಸಾರ್ಜೆಂಟನೇ ಇದರ ನಿರ್ಮಾಪಕನು.

—oOo—

ಭಾರತೀಯನ ಯುಕ್ತಿ ಶಕ್ತಿ.

ಲಕ್ನೋ ವಿಶ್ವ ವಿದ್ಯಾಲಯದ ಒಬ್ಬ 19 ವರ್ಷ ವಯಸಿನ ವಿದ್ಯಾರ್ಥಿಯು 50 ರೂ. ಬೆಲೆ ಬಾಳುವ ಒಂದು ರೇಡಿಯೋ ಸೆಟ್ಟನ್ನು ತಯಾರಿಸಿರುವನು. ಅದರಿಂದ ಭಾರತದ ಎಲ್ಲಾ ಸ್ಟೇಷನುಗಳ ಕಾರ್ಯಕ್ರಮವು ಕೇಳಿಬರುತ್ತದೆ. ಕೆಲವು ವಿದೇಶೀ ಸ್ಟೇಷನುಗಳ ಕಾರ್ಯಕ್ರಮವೂ ಕೇಳಿ ಬರುತ್ತವೆ. ಈ ವಿದ್ಯಾರ್ಥಿಯ ಹೆಸರು ವೀರೇಂದ್ರ ಕುಮಾರ್ ಸಕ್ಸೇನಾ ಎಂದು. ಈತನು ವೈಜ್ಞಾನಿಕ ಅನುಸಂಧಾನದಲ್ಲಿಯೂ, [illegible]ಗಳಲ್ಲಿಯೂ ಸನ್ಮಾನವನ್ನು ಹೊಂದಿರುವನು.

—oOo—

ಸಮುದ್ರದೊಳಗಿನ ಭೂ ಮಾರ್ಗ.

ಸಮುದ್ರದೊಳಗೆ ಈಗ ಒಂದು ದೊಡ್ಡ ಭೂ ಸುರಂಗ ಮಾರ್ಗವನ್ನು ಏರ್ಪಡಿಸುವ ಯೋಚನೆಯಲ್ಲಿದೆ ಜಪಾನು. ಈ ಸುರಂಗ ಮಾರ್ಗವು ಜಪಾನನ್ನೂ, ಕೊರಿಯಾವನ್ನೂ ಸೇರಿಸುವುದಾಗಿರುವುದಲ್ಲದೆ ಗೋಪ್ಯವಾಗಿ ಶಸ್ತ್ರ ಸಾಮಗ್ರಿಗಳನ್ನು ರವಾನಿಸಬಹುದಾಗಿದೆ. ಈಗಾಗಲೇ ಸರ್ವೆ ಸಹ ನಡೆದಿದೆ. ಸಿಮೊನೊಸೆಕಿ ಎಂಬ ಜಪಾನ್ ಪಟ್ಟಣವನ್ನೂ ಫ್ಯೂಸ್ಯಾನ್ ಎಂಬ ಕೊರಿಯಾದಲ್ಲಿನ ಪಟ್ಟಣವನ್ನೂ 150 ಮೈಲಿಯ ಈ ಸುರಂಗವು ಸೇರಿಸುವುದಾಗಿದೆ.

—oOo—

ವಿಷದ ಹಾವಿನ ಬೆಲೆ.

ಮರುಭೂಮಿಯಂತಿರುವ ಕಾಸ್ಪಿಯ ಪ್ರದೇಶದ ಮಂದಿ ಹೊಸ ಜೀವನೋಪಾಯವನ್ನು ಹುಡುಕಿದ್ದಾರೆ. ಭಯಂಕರವಾದ ವಿಷವುಳ್ಳ ಹಾವುಗಳನ್ನವರು ಜೀವ ಸಹಿತ ಹಿಡಿದು ಜರ್ಮನಿಗೆ ಕಳುಹಿಸುವರು. ಈ 'ಪೋಸ್ಕೊತ್' ಎಂಬ ಹಾವುಗಳನ್ನು ಹಿಡಿಯುವುದು ಅತೀವ ಕಷ್ಟತರ ಕೆಲಸವಾದರೂ ಅನುಭವದಿಂದ ಅಲ್ಲಿನ ಕೂಲಿಗಳು ಇವನ್ನು ಹಿಡಿದುಬಿಡುವರು. ಸಿರೋಕಿ ಬ್ರಿಜೆಗ್‌ನಲ್ಲಿರುವ ಜರ್ಮನಿ ರಸಾಯನ ಶಾಲೆಯೊಂದು ಹೀಗೆ ಜೀವ ಸಹಿತ ಹಿಡಿದು ತರುವ ಪ್ರತಿಯೊಂದು ಹಾವಿಗೂ ಸುಮಾರು 5 ಶಿಲಿಂಗ್ (ರೂ. 3-4-0) ಕೊಡುತ್ತದೆ. ಇಲ್ಲಿನ ವಿಜ್ಞಾನಿಗಳು ಈ ಹಾವುಗಳ ವಿಷದ ಚೀಲಗಳನ್ನು ತೆಗೆದು ಹಾವು ಕಚ್ಚಲ್ಪಟ್ಟವರಿಗೆ ಇಂಜಕ್ಷನ್ ಕೊಡಲು ಬೇಕಾದ ಔಷಧ ತಯಾರಿಸುವರು.

—oOo—

ಶೀಮೆ ಸುಣ್ಣ.

ಈಗೊಂದು ತರದ ಶೀಮೆ ಸುಣ್ಣ ಬಂದಿದೆ. ಸಾಧಾರಣ ಶೀಮೆ ಸುಣ್ಣದಂತೆಯೇ ಇದು ಇದ್ದರೂ ಕತ್ತಲಿನಲ್ಲಿ ಕಪ್ಪು ಹಲಗೆ ಮೇಲೆ ಬರೆದರೆ ಬೆಳಕನ್ನು ಕೊಡುವದಂತೆ. ಇದರಿಂದ 'ಮಾಯಾ ದೀಪ'ದ ಮೂಲಕ ಪಾಠ ಹೇಳುವ ಉಪಾಧ್ಯಾಯರಿಗೆ ಅಲ್ಲದೆ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿರುವುದು.

—oOo—

ಕುಚ್ಚಿಗೆ ಅಕ್ಕಿ.

ಕುಚ್ಚಿಗೆ ಅಕ್ಕಿ ಅಹಿತ; ಅದು ಒಮ್ಮೆ ಬೇಯಿಸಲ್ಪಡುವದರಿಂದ ಅದರ ಸಾರವೆಲ್ಲಾ ಹೋಗುತ್ತದೆ ಎನ್ನುವವರು ಇದನ್ನು ಓದಲಿ! ಕುಚ್ಚಿಗೆ ಅಕ್ಕಿಗಾಗಿ ಭತ್ತವನ್ನು ಮೊದಲು ಅರ್ಧ ಬೇಯಿಸುತ್ತಾರೆ. ಹೀಗೆ ಬೇಯಿಸುವಾಗ ದೇಹಕ್ಕೆ ಅಹಿತಕರವಾದ ಕೆಲವು ವಸ್ತುಗಳು ಅದರಿಂದ ತೊಲಗುತ್ತವೆ. ಅಲ್ಲದೆ ದೇಹದ ಬೆಳವಣಿಗೆಗೆ ಸಾಧಕವಾದ ತೌಡು ಇದರಲ್ಲೇ ಉಳಿಯುತ್ತದೆ. ಆ ವಿಭಾಗವು ಭತ್ತ ಕುಟ್ಟುವಾಗ ಉಳಿದುಕೊಳ್ಳುತ್ತದೆ. ಆದರೆ ಯಂತ್ರದಿಂದ ತಯಾರಿಸಲ್ಪಟ್ಟ ಅಕ್ಕಿಯಿಂದ ದೇಹಕ್ಕೆ ಬೇಕಾದ ಪದಾರ್ಥಗಳೆಲ್ಲ ತೊಲಗಿಸಲ್ಪಟ್ಟು ಬರೇ ಅಕ್ಕಿ ಮಾತ್ರ ಉಳಿಯುತ್ತದೆ.

—oOo—

ಆಶ್ಚರ್ಯ ವಿಚಾರ.

ಜಗತ್ತಿನಲ್ಲಿ ದಿನೇ ದಿನೇ ವೈಚಿತ್ರ್ಯಗಳು ತಮ್ಮ ಮೇರೆ ಮೀರಿ ನಡೆಯುತ್ತಿವೆ. ವಿಜ್ಞಾನ ಪ್ರಪಂಚದಲ್ಲಿ ನಡೆಯುತ್ತಿರುವ [illegible] ಜಾನ್ ಗ್ರಿಂಡ್ [illegible] ಈತನು ಒಬ್ಬ [illegible]. ತನ್ನ 24ನೇ ವಯಸಿನಲ್ಲಿ ತನ್ನ ಎರಡು ಕಣ್ಣುಗಳನ್ನೂ ಕಳೆದುಕೊಂಡು ಅಂಧನಾದ. ಈಗ ಈತನು ಕಣ್ಣುಗಳ ಸಹಾಯವಿಲ್ಲದೇನೇ ತನಗೆ ಕೊಡುವ ಹೂಗಳನ್ನು ಇಂಥ ಹೂವೆಂದೇ ಗುರ್ತಿಸಬಲ್ಲನು. ಪುಷ್ಪಗಳನ್ನು ನಾಲಗೆಯ ತುದಿಗೆ ಸೋಕಿಸಿ ಅವನ್ನು ಗುರ್ತು ಹಚ್ಚಬಲ್ಲನಂತೆ. ಒಂದಾದ ಮೇಲೆ ಒಂದರಂತೆ ಎಷ್ಟು ಹೂಗಳನ್ನು ಕೊಟ್ಟರೂ ಇಂತಿಂಥಾ ಹೂವೆಂದೇ ಗುರ್ತಿಸಬಲ್ಲನು. ಏನು ಹೇಳುವಿ! ಈ ವಿಚಿತ್ರಕ್ಕೆ.

—oOo—

ಕಳ್ಳನ ಜನನ.

ಕಳ್ಳತನ ನಡಸಿ, ಸೌಭಾಗ್ಯದಿಂದ ಅದನ್ನೆಲ್ಲ ಬಿಟ್ಟ ಹೆಕ್ಟರ್, ಮುರಿಯೆಲ್ ಎಂಬಾಕೆಯನ್ನು ವಿವಾಹವಾದ. ಕೊನೆಗೆ ನೋಡುವಾಗ ಮುರಿಯೆಲ್ ಕೂಡ ದೊಡ್ಡ ದರೋಡೆಗಾರ್ತಿಯೆಂದು ತಿಳಿದು ಬಂತು. ಅಂತೂ ಕೆಲ ಕಾಲದಲ್ಲಿ ಮುರಿಯೆಲ್ ಗಂಡು ಮಗುವನ್ನು ಹೆತ್ತಳು. ಮಗು ಹುಟ್ಟಿದಾಗ ಅದು ತನ್ನ ಬಲಗೈ ಮುಷ್ಟಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿತ್ತು. ಏನೇನು ಮಾಡಿದರೂ ಅದು ಆ ಮುಷ್ಟಿಯನ್ನು ಬಿಡಿಸಲಿಲ್ಲ. ಕೊನೆಗೆ ತಂದೆ ತಾಯಿಂದಿರು ಮಗುವನ್ನು ಡಾಕ್ಟರೊಬ್ಬರ ಬಳಿ ಒಯ್ದರು. "ಗುಟ್ಟು ರಟ್ಟು ಮಾಡುವುದಿಲ್ಲ"ವೆಂದು '[illegible]' ಮಾಡಿಸಿಕೊಂಡು ಡಾಕ್ಟರಿಗೆ ಇಬ್ಬರೂ ತಮ್ಮ ಪೂರ್ವ ಜೀವನ ಕಥೆಯನ್ನು ತಿಳಿಸಿದರು. ಡಾಕ್ಟರರು ಕೂಡಲೇ ತನ್ನ ಚಿನ್ನದ ಗಡಿಯಾರವನ್ನು ಮಗುವಿನ ಕಣ್ಣೆದುರು ಕುಣಿಸಿದರು. ಸ್ವಲ್ಪ ಹೊತ್ತಿನಲ್ಲಿ ತನ್ನ ಮುಷ್ಟಿಯನ್ನು ಬಿಡಿಸಿ, ಆ ಗಡಿಯಾರವನ್ನು ಹಿಡಿಯಲು ಮುಂದಾಯಿತು. ಮಗುವಿನ ಮುಚ್ಚಿದ್ದ ಮುಷ್ಟಿಯೊಳಗ ಹೆರಿಸಲು ಬಂದ ಸೂಲಗಿತ್ತಿಯ ಮದುವೆಯ ಉಂಗುರವಿತ್ತು. ಇದಕ್ಕೇನೆನ್ನೋಣ ಪಟ್ಟುಗಾರ!

—oOo—

ಮೂತಿಗೆ ಮುಷ್ಟಿ; ಸರ್ವಿಯದ ಗಾಂಧಿ.

ಸರ್ವಿಯದ ಲಿಮೀಲವಾಸ್ ಪೆಸ್ಟ್ರೋವಿಚ್ ಎಂಬಾತನು ಅನೇಕ ಸಾರಿ ಮೌನವ್ರತನಾಗಿಯೇ ಇರುವನು. ಅದಕ್ಕಾಗಿ ಇವನನ್ನು ಗಾಂಧಿ ಎಂದು ಕರೆಯುವರು. ಇವನು ಐದು ನಿಮಿಷ ಸಂಭಾಷಣೆ ಕೊಟ್ಟರೆ ಎರಡು ಸೆ ಕೊಡಬೇಕು. ಬಡವರ, ಅಂಗಹೀನರ ಮತ್ತು ನಿರುದ್ಯೋಗಿಗಳ ಸಲುವಾಗಿ ಹೀಗೆ ಮಾಡುವನಂತೆ.

—oOo—

ಸೀಸದಿಂದ ಚಿನ್ನ.

ನಮ್ಮ ಹಿರಿಯರ ಪುರಾತನದ ಅಜ್ಜಿ ಕಥೆ ಸತ್ಯವಾಗಿದೆ. ಸಾಧುಗಳು ಬೇಕಷ್ಟೇ ಬಂಗಾರ ತಯಾರಿಸಿ ಭಂಗಿ ಕೊಂಡು ಸೇದುವ ವಿಚಾರ ನಿಜವೆಂದು ಕೆಲವರಿಗೆ ಹೊಳೆದಿದೆ. ಪೋಲೆಂಡಿನ ಲೋವಿಟ್ಜ್ ಎಂಬಲ್ಲಿನ [illegible]ನೊಬ್ಬನು ಇಲ್ಲಿಗ ಸೀಸದಿಂದ ಚಿನ್ನ ತಯಾರಿಸುವುದನ್ನು ಕಂಡುಹಿಡಿದಿದ್ದಾನೆ. ತಾನು ಮಾಡಿದ ಬಂಗಾರದ ಮಾದರಿ ಒಂದನ್ನು ಲೋಹ ಪರೀಕ್ಷಕ ಸಂಸ್ಥೆಗೆ ಕಳುಹಿಸಿದ್ದಾನೆ.

—oOo—

ನಿಮ್ಮಲ್ಲುಂಟಿವೆ?

ಶಕುನಗಳನ್ನು ನಂಬುವವರು [illegible]. 'ಹಣೆ ಬರಹ', 'ಶಕುನ' ಎಂಬಿವುಗಳು [illegible] ನಮ್ಮಲ್ಲಿ ತುಂಬ. ಅವು ಯೂರೋಪಿಯನರಲ್ಲೂ ಇದ್ದೇ ಇವೆ. ನಾಗರೀಕತೆ ಬಂದುದರಿಂದಲೇ ಅವು [illegible] ಅವರ ಕೆಲವು ಶಕುನಗಳ [illegible] ಗ ಬಿಷ್ಟ [illegible] ಹೊರಗಿನ [illegible] ಕೊಟ್ಟವನು ಅಥವಾ [illegible] ಎಂದು ನಂಬಿದ್ದ. [illegible] ಸಂಬರಿನ ಜಪಾನ್ ನಾಣ್ಯ [illegible] ಕೊಂಡಿದ್ದಾನೆ [illegible] ನೂರಾರು ಮೊದಲುಗಳನ್ನು [illegible] ನ್ ಚಾರ್ಲ್ಸ್ ಸದಾ ನಾಣ್ಯವನ್ನು [illegible] ನೋಡಿ ಕೆಲಸ ಮಾಡುವರು. ಇಷ್ಟು ಕೆಲವು ಕೆಲವರಲ್ಲಿದೆ. ನಿಮ್ಮಲ್ಲುಂಟವೆ?

—oOo—

ದೇವತೆಗಳು.

ಪೈಗಂಬರರ ಪುತ್ರರಾದಿಗಳ ವೇದವಾಕ್ಯವನ್ನು ಕೇಳುವುದು ಮಹಮ್ಮದೀಯರ ಧರ್ಮ. ಮಿನರೆಟ್‌ನಲ್ಲಿ ನಿಂತುಕೊಂಡು ಎತ್ತರದ ಸ್ವರಗಳಿಂದ ಮ್ಯೂಜಿನ್‌ರವರುಗಳು ಧರ್ಮವನ್ನು ಸಾರುತ್ತಿದ್ದರು. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಗಳ ದೆಸೆಯಿಂದಾದ [illegible], ಮ್ಯೂಜಿನ್‌ರವರ ಸ್ವರ ಎಲ್ಲರಿಗೂ ಕೇಳದಾಯಿತು. ಪೇಟೆ ಪಟ್ಟಣಗಳ ಗಲಭೆ ಇದಕ್ಕೆ ಅಡ್ಡಿ ತಂದಿತು. ಇದೀಗ ಈ ಮಹಮ್ಮದೀಯರ ಧರ್ಮ ಸ್ಥಳದಲ್ಲಿ 'ಲೌಡ ಸ್ಪೀಕರ್' ಇರಿಸಲಾಗಿದೆ. ಅದರ ಸಹಾಯದಿಂದ ಮ್ಯೂಜಿನ್‌ರವರ ವೇದವಾಕ್ಯಗಳನ್ನು ಎಲ್ಲರೂ ಕೇಳಿ ಪ್ರಾರ್ಥನೆ ಪೂರೈಸುವಂತಾಗಿದೆ. ನಾವೂ ಹಿಂದಾಗಿಲ್ಲ; ವಿದ್ಯುದ್ದೀಪ, ದೇವಸ್ಥಾನಗಳ ನಂದಾದೀಪವನ್ನೇ [illegible]ಸಿದೆ. ಮೇಳಗ ಮಂತ್ರಗಳ ಬದಲು ಗ್ರಾಮೊಫೋನ್ ಪ್ಲೇಟುಗಳೂ, ಅಭಿಷೇಕಕ್ಕೆ ಪಂಪಿನ ವ್ಯವಸ್ಥೆಯೂ ಗಂಟಾಮಣಿಗೆ ಎಲೆಕ್ಟ್ರಿಕ್ ಬೆಲ್ ಮತ್ತು ಆರತಿಗೆ ವಿದ್ಯುದ್ದೀ. (ಬಲ್ಪು) ಮಾತ್ರ ಬಾಕಿ ಇದೆ!

—oOo—

ಗಾಂಧಿ ಟೊಪ್ಪಿ ಬಡವನ ಕಿರೀಟ!

ಗಾಂಧಿ ಟೊಪ್ಪಿಧಾರಿಗಳಾದವರಿಗೆ ಸರಕಾರಿ ಆಫೀಸುಗಳೊಳಗೆ ಪ್ರವೇಶಸಿಗದ ದಿನಗಳಿದ್ದುವು. ಆದರೆ ಕಾಲಕಳೆಯುತ್ತ ಸ್ಥಿತಿಗತಿಗಳು ಬದಲಾಗುತ್ತಿವೆ. ಇದು ಸರ್ವಸಾಮಾನ್ಯನಾಗಿ ಸಮಗ್ರಭಾರತದ ಆಡಳಿತವು ಗಾಂಧಿ ಟೊಪ್ಪಿಧಾರಿಗಳಾದವರ ಕೈಯೊಳಗಿರುವುದು. ಈ ಕೆಳಗಿನ ಪ್ರಬಂಧದಲ್ಲಿ ಗಾಂಧಿಟೊಪ್ಪಿಯ ಸಂಕ್ಷಿಪ್ತ ಚರಿತ್ರೆಯನ್ನು ಕೊಡಲಾಗಿದೆ. ಅತ್ಯಲ್ಪ ಬೆಲೆಬಾಳುವ ಈ ಟೊಪ್ಪಿಯು ಭಾರತಕ್ಕೆ ಏನನ್ನು ಒದಗಿಸಿ ಕೊಟ್ಟಿರುತ್ತದೆ, ಮುಂದೆ ಏನನ್ನು ಕೊಡಲಿದೆಯೆಂದು ಈ ಪ್ರಬಂಧದಲ್ಲಿ ಪ್ರತಿಪಾದಿಸಲಾಗಿದೆ.

ಭಾರತದ ಅನೇಕ ಬಗೆಯ ಶಿರೋಭೂಷಣಗಳೊಳಗೆ ಗಾಂಧಿಟೊಪ್ಪಿಗೆ ಅಗ್ರಸ್ಥಾನವು ದೊರಕುವುದು. ಟೊಪ್ಪಿಯ ವ್ಯಾಪಾರಿಗಳ ವ್ಯಾಪಾರವನ್ನು ನಾಶಗೊಳಿಸಿದ ಕಾರಣಗಳಲ್ಲಿ ಇದೊಂದೆನ್ನಬಹುದು.

ಇದು ಹುಟ್ಟಿ ಅನೇಕ ವರ್ಷಗಳಾದವು. ಈಗದು ಯೌವನದಲ್ಲಿ ಪದಾರ್ಪಣಗೈದಿರುವುದೆನ್ನಬಹುದು. ಅದರ ಹೆಸರೇ ಅದರ ನಿರ್ಮಾತನಾರೆಂಬುದನ್ನು ಸೂಚಿಸುತ್ತದೆ. ಭಾರತದ ಸೆರೆಮನೆಗಳಲ್ಲಿರುವ ಕೈದಿಗಳು ಧರಿಸುವ ಟೊಪ್ಪಿಗಳಂತೆ ಅದರ ಆಕಾರವಿರುವುದು.

ಗಾಂಧಿ ಟೊಪ್ಪಿಯ ಜೀವನವು ಅಸಾಮಾನ್ಯವಾದುದು. ಪ್ರಪಂಚದ ಇತರ ವಸ್ತುಗಳಂತೆ ಅದರ ಜೀವನದಲ್ಲಿಯೂ ಏರಿಳಿತಗಳು ತುಂಬಾ ಇದ್ದುವು. ಒಂದಾನೊಂದು ಕಾಲದಲ್ಲಿ ಜನರ ರಾಜಕೀಯ ಜಾಗ್ರತಿಸೂಚಕವಾಗಿತ್ತದು. ಈಗ ಅನೇಕ ವರ್ಷಗಳಿಂದ ಖಾದಿಧಾರಿಗಳಾಗಿದ್ದವರಲ್ಲದೆ ಇತರರಾರೂ ಅದನ್ನು ಧರಿಸುತ್ತಿಲ್ಲವೆನ್ನಬಹುದು.

1920 ಮತ್ತು 1930 ರಲ್ಲಿ ಹೂಡಲ್ಪಟ್ಟ ಸತ್ಯಾಗ್ರಹ ಚಳವಳಿ ಸಮಯದಲ್ಲಿ ಜನರಿಗದರ ಮೇಲಿರುವ ಪ್ರೇಮಾದರಗಳು ಪೂರ್ಣ ವ್ಯಕ್ತವಾಗಿದ್ದುವು. ಆ ಸಂದರ್ಭದಲ್ಲಿ ಜಪಾನಿನಲ್ಲಿ ತಯಾರಿಸಲ್ಪಟ್ಟ ಖಾದಿ ಟೊಪ್ಪಿಗಳೂ ಇಲ್ಲಿ ಮಾರಾಟ ಮಾಡಲ್ಪಡುತಿದ್ದುವೆಂದೆನ್ನುವ ಕಾಂಗ್ರೆಸ್ ಟೀಕಾಕಾರರು ಹಲವರಿದ್ದರೆ. ವರಂತು ಜಪಾನಿನವರು ಅವುಗಳನ್ನು ತಯಾರಿಸಿ ಇಲ್ಲಿಗೆ ಕಳುಹಿಸುತಿದ್ದರೆಂದ ಮೇಲೆ ಅವುಗಳು ಎಷ್ಟು ಪ್ರಶಸ್ತಿಯನ್ನು ಪಡೆದಿದ್ದುವೆಂಬುದಕ್ಕೆ ಬೇರೆ ನಿದರ್ಶನ ಬೇಕೆ?

ಆದರೆ ಅದರ ಬಾಲ್ಯದಲ್ಲಿ ಅನುಭವಿಸಿದುದಕ್ಕಿಂತ ಹೆಚ್ಚಿನ ಕಷ್ಟಗಳನ್ನು ಅದರ ತಾರುಣ್ಯದಲ್ಲಿ ಅದನ್ನು ಧರಿಸುವವರು ಅನುಭವಿಸಬೇಕಾಯಿತು. 1930 ರಲ್ಲಿ ಪ್ರತಿಯೊಬ್ಬ ಗಾಂಧಿ ಟೊಪ್ಪಿಧಾರಿಯನ್ನು ಸರ್ಕಾರದವರು ಸಂಶಯಾತ್ಮಕ ದೃಷ್ಟಿಯಿಂದ ನೋಡುತಿದ್ದರು. ಪೊಲೀಸು ಅಧಿಕಾರಿಗಳು ಅವನನ್ನು ಕಂಡೊಡನೆ ರೇಗುತಿದ್ದರು. ಅವನು ಹೋದಲ್ಲಿ ಆತನನ್ನು ಹಿಂಬಾಲಿಸಿಕೊಂಡು ಹೋಗಿ, ಇಲ್ಲದ ತೊಂದರೆಗಳನ್ನು ಕೊಡುತಿದ್ದರು. ರಾಜಕೀಯ ವಾತಾವರಣದ ಗಂಧವಿಲ್ಲದ ಪೊಲೀಸಿನವನು ಕೂಡ ಬಿಳಿ ಟೊಪ್ಪಿಯನ್ನು ನೋಡಿದೊಡನೆ ಎಳೆದುಕೊಳ್ಳುತಿದ್ದನು. ಅದನ್ನು ಧರಿಸಿದವನ ಹೆಸರು ಊರು ಇತ್ಯಾದಿಗಳನ್ನು ಬರೆದುಕೊಳ್ಳುತ್ತಿದ್ದನು. **ಗಡಿಪಾರು ಮಾಡಲ್ಪಟ್ಟವರನ್ನೂ, ಕೆ. ಡಿ. ಗಳನ್ನೂ ಈ ರೀತಿಯಲ್ಲಿ ತಡೆಗಟ್ಟಿ ಅವರ ಪೂರ್ವಾಪರ ವಿಚಾರಗಳನ್ನು ಬರೆಕೊಳ್ಳುವುದಿಲ್ಲ. ಸರಕಾರಿ ಆಫೀಸುಗಳ ಬಳಿಗೆ ಹೋಗಬೇಕಾದರೆ ಆತನು ಪಡಬೇಕಾದ ಕಷ್ಟಗಳೆಷ್ಟು? ಆಂಗ್ಲೇಯ ವ್ಯಾಪಾರಿಗಳಲ್ಲಿ ಆತನಿಗೆ ಸ್ವಾಗತವಿಲ್ಲ. ತಾವು ಈ ದಂಗೆಕೋರನೊಡನೆ ಏನೋ ಒಳಸಂಚನ್ನು ನಡೆಸುತ್ತಿರುವೆವೆಂಬ ಅಪಾ**ದನೆಗೆ ಗುರಿಯಾಗಬೇಕಾದೀತೆಂದು ತಮ್ಮ ಮಾಲೀಕನ ದೃಷ್ಟಿಗೆ ಆತನು ಬೀಳದಂತೆ ನೌಕರರೆಲ್ಲರೂ ಬಹಳ ಪ್ರಯತ್ನ ನಡೆಸುತ್ತಿದ್ದರು.

ಆಗಿನ ಕಾಲದಲ್ಲಿ ಖಾದಿಧಾರಿಗಳು ಪಟ್ಟಣಗಳಿಂದ ಗ್ರಾಮಗಳಿಗೆ ಹೋಗದಂತೆ ನೋಡಿಕೊಳ್ಳತಕ್ಕದೆಂಬ ಆಜ್ಞೆಯು ಸಂಯುಕ್ತ ಪ್ರಾಂತಗಳಲ್ಲಿ ಜಾರಿಯಲ್ಲಿತ್ತು. ಪ್ರಯಾಣಿಕರಲ್ಲಿ ಬಹುಮಂದಿ ಖಾದಿಧಾರಿಗಳಾಗಿದ್ದರು. ಆದುದರಿಂದ ಬಸ್ಸಿನ ಮಾಲೀಕರು ಪೊಲೀಸರನ್ನು ಅಲಕ್ಷಿಸಿ ಗಾಂಧಿ ಟೊಪ್ಪಿಗೇ ಹೆಚ್ಚಿನ ಮನ್ನಣೆಯನ್ನು ಕೊಟ್ಟರು. ಇಲ್ಲದಿದ್ದರೆ ಅವರಿಗುಂಟಾಗುವ ನಷ್ಟವನ್ನು ಭರ್ತಿಮಾಡುವವರಾರು?

ಜನರಲ್ಲಿ ರಾಜಕೀಯ ಜಾಗ್ರತಿಯು ಕೆರಳುತ್ತಿದ್ದಂತೆ ಗಾಂಧಿ ಟೊಪ್ಪಿಗಳ ಸಂಖ್ಯೆಯು ಹೆಚ್ಚಿತು. 1932 ರಲ್ಲಿ ಹೊಸ ಕಾನೂನುಗಳು ಪ್ರಕಟವಾದೊಡನೆ ಬಣ್ಣದ ಖಾದಿ ಟೊಪ್ಪಿಗಳು ಬಳಕೆಯಲ್ಲಿ ಬಂದವು. ಆದರೆ ಅನೇಕ ಮಂದಿ ಬಿಳಿ ಟೊಪ್ಪಿಗಳನ್ನು ಧರಿಸಿಯೇ ತಮ್ಮ ಕಾರ್ಯಕಲಾಪಗಳನ್ನು ನಿರ್ವಹಿಸತೊಡಗಿದರು.

ಗುಂಟೂರಿನಲ್ಲಿ ಗಾಂಧಿ ಟೊಪ್ಪಿಯ ಭೀತಿಯು ಎಷ್ಟಿತ್ತೆಂದರೆ, ಅದನ್ನು ಧರಿಸುವುದೇ ಅಪರಾಧವೆಂಬುದಾಗಿ ಓರ್ವ ಕಲೆಕ್ಟರರು ಸಾರಿಯೇ ಬಿಟ್ಟರು. ಆದರೆ ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್ ಗಂಡಲೆಯವರು ಈ ಕಾನೂನನ್ನು ರದ್ದುಗೊಳಿಸಿದರು. ಇದರ ಪರಿಣಾಮವೆಂದರೆ, ಭಾರತದಲ್ಲಿ ಬಿಳಿ ಟೊಪ್ಪಿಯನ್ನು ಧರಿಸುವುದು ಅಪರಾಧವೆಂದು ಪರಿಗಣಿಸಲ್ಪಡುವುದೆಂದು ಆಗಿನ ಇಂಡಿಯಾ ಸೆಕ್ರೆಟರಿಗಳ ಅವಗಾಹನೆಗೆ ಬರುವುದಕ್ಕಾಗಿ ಮಿ. ಫೆನರ್ ಬ್ರೊಕ್ವೆ ಎಂಬವರು ಒಂದು ಗಾಂಧಿ ಟೊಪ್ಪಿಯನ್ನು ಧರಿಸಿ ಪಾರ್ಲಿಮೆಂಟಿನ ಸಭಾ ಮಂದಿರವನ್ನು ಪ್ರವೇಶಿಸಿದರು.

ಗಾಂಧಿ ಟೊಪ್ಪಿಯ ನಿರ್ಮಾತರು ಮಹಾತ್ಮ ಗಾಂಧಿಯವರಾಗಿದ್ದರೂ ಅವರ **ಪ್ರಮುಖ ಅನುಯಾಯಿಗಳಾದ ಶ್ರೀ. ಪಟೇಲರೂ, ರಾಜಾಜಿಯವರೂ ಈ ತನಕ ಅದನ್ನು ಧರಿಸಿದಂತೆ ತಿಳಿದು ಬರುವುದಿಲ್ಲ. ಮಹಾತ್ಮರೂ ದಂಡಿಯಾತ್ರೆಯ ದಿನದಿಂದಲೋ, ಅದಕ್ಕಿಂತ ಮುಂಚಿತವಾಗಿಯೋ ಈ ಟೊಪ್ಪಿಯನ್ನು ಧರಿಸಿದ್ದಿಲ್ಲ. ಗಾಂಧಿ ಟೊಪ್ಪಿಯನ್ನು ಧರಿಸಿದ ಪ್ರಥಮ ಕಾಂಗ್ರೆಸ್ ಅಧ್ಯಕ್ಷರೆಂದರೆ ಪಂಡಿತ ಮೋತಿಲಾಲ್ ನೆಹರುಗಳು. 1919**ನೇ ಅಮೃತಸರ ಕಾಂಗ್ರೆಸ್ ಅಧಿವೇಶನದಂದು ಅವರದನ್ನು ಧರಿಸಿದಂದಿನಿಂದ ಕಾಂಗ್ರೆಸ್ ಧ್ವಜದಷ್ಟೇ ಪ್ರಾಮುಖ್ಯತೆಯು ದೊರೆತಿರುವುದೆನ್ನಬಹುದು. ಅದು ಅಗ್ಗವೆಂಬ ಕಾರಣದಿಂದ ಅನೇಕರದನ್ನು ಧರಿಸುತ್ತಿರುವರೆಂಬುದೇನೋ ನಿಜ. ಏನೂ ಅರಿಯದ ಭಾರತದ ಹಳ್ಳಿಗರು ಕೂಡ ಈ ಬಿಳಿ ಟೊಪ್ಪಿಯನ್ನು ಪೂಜ್ಯಭಾವದಿಂದ, ಪ್ರೀತಿಯಿಂದ ಕಾಣುತ್ತಿರುವರು. ಅದು ಭಾರತೀಯ ಜನಾಂಗದ ಐಕ್ಯತೆಯ ಚಿಹ್ನೆಯಾಗಿರುವುದು. ಯಾವ ಜಾತಿಯವರಾದರೂ ಯಾವ ಬಗೆಯ ಉಡುಪನ್ನು ಧರಿಸುವವರಾದರೂ ಇದನ್ನು ಬಹಳ ಹೆಮ್ಮೆಯಿಂದ ಧರಿಸಿಕೊಳ್ಳುತ್ತಿರುವರು. ಬಂಗಾಳದ ತಲೆಯನ್ನು ಖಾಲಿಬಿಡುವವರು ಕೂಡಾ ತಾನು ಜನಾಂಗದ ಮುಖಂಡನೆಂಬ ಕುರುಹಿಗೋಸ್ಕರವಾಗಿ ಅದನ್ನು ಧರಿಸಿಕೊಳ್ಳುತ್ತಿರುವರು.

ಮಹಾತ್ಮರು ಖಾದಿಯ ಮಹತ್ವವನ್ನು ಸಾರಿದಂದಿನಿಂದ ಈ ಟೊಪ್ಪಿಯು ಜನ್ಮವೆತ್ತಿತೆನ್ನಬಹುದು. ಟೊಪ್ಪಿಯೊಡನೆ ಜನರು ಸರಳವಾದ ಉಡುಪನ್ನು ಧರಿಸಿಕೊಳ್ಳತೊಡಗಿದರು. ಈ ಟೊಪ್ಪಿಯು ಭಾರತದ ಬಡಬಗ್ಗರಲ್ಲಿ ಸ್ಫೂರ್ತಿಯನ್ನು ಊದಿಬಿಟ್ಟಿತು. ಧೈರ್ಯ, ಸ್ಥೈರ್ಯ ಮತ್ತು ಸತ್ಯಕ್ಕಾಗಿ ಎಂಥಾ ಕಷ್ಟಗಳನ್ನೂ ಅನುಭವಿಸುವಂಥ ತ್ಯಾಗ ಬುದ್ಧಿಯನ್ನದು ಜನರಲ್ಲಿ ಉಂಟುಮಾಡಿತು.

ಗಾಂಧಿ ಟೊಪ್ಪಿಯು ಜನತೆಯಲ್ಲಿ ತಂದೊಡ್ಡಿದ ಸಮಾನತೆ ಬುದ್ಧಿ ಅಷ್ಟಿಷ್ಟೆಂದು ಹೇಳಲಳವಲ್ಲ. ಮುಖ್ಯ ಮಂತ್ರಿಯೂ, ಹಳ್ಳಿಗನೂ ಒಂದೇ ರೀತಿಯ ಉಡುಪನ್ನು ಧರಿಸತೊಡಗಿದರು. ಕಾಂಗ್ರೆಸಿನವರು ಪ್ರಾಂತಾಡಳಿತ ವಹಿಸಿದ ಸ್ವಲ್ಪ ಸಮಯದ ತನಕ ಅಧಿಕಾರಿ ಮತ್ತು ಅತಿಥಿಗಳನ್ನು ಗೊತ್ತು ಹಚ್ಚಲಾಗದೆ ಎದ್ದ ಗೊಂದಲಗಳು ಎಷ್ಟೋ ಇವೆ. ಒಮ್ಮೆ ಕಟಕ್ಕಿನಲ್ಲೂ ಇದೇ ಬಗೆಯದೊಂದು ದೃಶ್ಯ ನಡೆಯಿತು. ಕಂದಾಯ ಖಾತೆ ಮಂತ್ರಿಗಳನ್ನು ಮೇಸ್ತ್ರಿಯೆಂದು ಓರ್ವ ಪೊಲೀಸು ಅಧಿಕಾರಿಯು ತಪ್ಪು ಗ್ರಹಿಸಿದುದೂ ಇದೆ.

ಶುಭ್ರವಾದ ಖಾದಿಯ ಉಡುಪನ್ನು ಧರಿಸಿ, ಗಾಂಧಿ ಟೊಪ್ಪಿಯನ್ನು ಧರಿಸಿ, **ನ್ಯಾಯವಿಧಾಯಕ ಸಭೆಗಳೇ ಮೊದಲಾದ ಸಭೆಗಳಲ್ಲಿ ಜನರು ಕೂತುಕೊಳ್ಳುವುದನ್ನು ನೋಡಿದರೆ ಪರಮಾನಂದವಾಗುವುದು; ಕಾಂಗ್ರೆಸ್ಸಿನ ಕಾರ್ಯಕಲಾಪಗಳಿಂದ ತಾವು ಹೊರಗೆ ನಿಂತಿರುವೆವೆಂದು ಹೇಳುತ್ತಿದ್ದರೂ ಇಬ್ಬರು ಮುಖಂಡರು ಇನ್ನೂ** ಗಾಂಧಿ ಟೊಪ್ಪಿಯನ್ನು ಧರಿಸುತ್ತಿರುವರು. ಅದರೆ ಮಧ್ಯ ಪ್ರಾಂತದ ಮಾಜಿ ಗವರ್ನರರಾದ ಶ್ರೀ. ಇ. ರಾಘವೇಂದ್ರರಾಯರು ಮತ್ತು ಬೊಂಬಾಯಿಯ ಮಾಜಿ ಆರ್ಥಿಕ ಸಚಿವರಾದ ಶ್ರೀ. ಜಮುನದಾಸ ಮೇಥಾರವರು ಈ ಟೊಪ್ಪಿಯನ್ನು ಧರಿಸಿಕೊಳ್ಳುತ್ತಿದ್ದರೂ ಅವರು ಕಾಂಗ್ರೆಸನ್ನು ಉಗ್ರವಾಗಿ ಟೀಕಿಸುತ್ತಿರುವರು.

ತನ್ನ 20 ವರ್ಷಗಳ ಬಾಳುವೆಯಲ್ಲಿ ಈ ಗಾಂಧಿ ಟೊಪ್ಪಿಯು ಬಹಳ ಮಾರ್ಪಾಟುಗಳನ್ನು ಹೊಂದಿರುವುದು. ಕೈದಿಯ ಶಿರೋಭೂಷಣವಾಗಿದ್ದ ಅದು ಇಂದು ಮಂತ್ರಿಗಳ ಶಿರವನ್ನು ಭೂಷಿಸುತ್ತಿರುವುದು. ಭಾರತದ ಏಳು ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಅದನ್ನು ಧರಿಸುತ್ತಿರುವರು.

ಇಷ್ಟು ಪ್ರಶಸ್ತಿಯನ್ನು ಈ ಟೊಪ್ಪಿಯು ಪಡೆದಿರುವುದಾದರೂ, ಅದರ ಧಾರಿಗಳ ಸತ್ವಪರೀಕ್ಷೆಯ ಕಾಲವು ಇನ್ನೂ ಬಂದಿಲ್ಲ. ಭಾರತವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದು, ಸ್ವತಂತ್ರ ಭಾರತದ ಪ್ರಥಮ ಅಧ್ಯಕ್ಷರ ಕಿರೀಟವಾಗಿ ಅದೆಂದು ಭೂಷಿಸುವುದೋ ಅಂದದು ತನ್ನ ಪ್ರಶಸ್ತಿಯ ಪರಮಾವಧಿಯನ್ನು ಮುಟ್ಟುವುದೆನ್ನಬಹುದು. ಅಂದೇ ಅದು ಭಾರತದ ದೀನದಲಿತರಿಗೂ ಸುಖ, ಸಂತೋಷ, ತೃಪ್ತಿ, ಹಾಗೂ ವಿದ್ಯೆಯನ್ನು ಒದಗಿಸಿಕೊಟ್ಟ ಅಜರಾಮರವಾದ ಕೀರ್ತಿಯನ್ನು ಸಂಪಾದಿಸಲಿ!

ಕಾಂಗ್ರೆಸ್ ಮಂತ್ರಿ ಮಂಡಳದ ರಾಜಿನಾಮೆ?

ಡಾ. ಪಟ್ಟಾಭಿ ಸೀತಾರಾಮಯ್ಯನವರು ಬೊಂಬಾಯಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ ಇಂಡಿಯಾ ಸರ್ಕಾರವು ರಾಜಕೋಟೆಯ ಮತ್ತು ಇತರ ಸಂಸ್ಥಾನಗಳ ಬಗ್ಗೆ ತನ್ನ ಧೋರಣೆಯನ್ನು ಮುಂದುವರಿಸಿದ್ದೇ ಆದರೆ ಬೊಂಬಾಯಿ ಕಾಂಗ್ರೆಸ್ ಮಂತ್ರಿ ಮಂಡಳವು ಇದನ್ನು ನಿಷೇಧಿಸಿ ತನ್ನ ಅಧಿಕಾರಕ್ಕೆ ತಿಲಾಂಜಲಿಯನ್ನೀಯಬೇಕೆಂದೂ, ಕೆಲವು ದಿನಗಳ ಹಿಂದೆ ನಡೆದ ಆಳರಸರ ಮತ್ತವರ ಮಂತ್ರಿಗಳ ಸಭೆಯಲ್ಲಿ ಸತತ ಪ್ರಯತ್ನ ಮಾಡಿ ಜನತೆಯು ಸಂಸ್ಥಾನಗಳಲ್ಲಿ ಈಗ ಕೇಳುತ್ತಿರುವ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಸಮೂಲ ನಾಶಪಡಿಸಲು ಕ್ರಮಗಳನ್ನು ವಿವೇಚಿಸಿ, ಅಂತೆಯೇ ರಾಜಕೋಟೆಗೆ ಕೆಲವು ಸಂಸ್ಥಾನಾಧೀಶರು ಸಹಾಯ ಮಾಡುತ್ತಿರುವರೆಂದೂ, ಆದಪ್ರಯುಕ್ತ **ಇಂದಿನ ಸಂಸ್ಥಾನಗಳ ಹಾಗೂ ಇಂಡಿಯಾ ಸರ್ಕಾರದ ಧೋರಣೆಯು ಅಖಿಲ ಭಾರತ ಬಿಕ್ಕಟ್ಟಾಗಿ ಪರಿಣಮಿಸುವದೆಂದೂ, ಇದು ಅಪ್ರತ್ಯಕ್ಷವಾಗಿ ಬ್ರಿಟಿಷ್ ಸರ್ಕಾರಕ್ಕೂ, ಕಾಂಗ್ರೆಸಿಗೂ ನಡೆಯಬಹುದಾದ ಘರ್ಷಣೆಯ ತಳಹದಿ ಎಂದೂ ಹೇಳಿದರು**

ಜಮ್ನಾಲಾಲ್ ಬಜಾಜರ ಬಂಧನ ಮತ್ತು ಬಿಡುಗಡೆ.

ಕಾಂಗ್ರೆಸಿನ ಖಜಾಂಚಿಯವರಾದ ಜಮ್ನಾಲಾಲ್ ಬಜಾಜರನ್ನು ತಾ. 1 ರಲ್ಲಿ ಬಂಧಿಸಿ ಜಯಪುರದಿಂದ ಹೊರಗೆ ತೆಗೆದುಕೊಂಡು ಹೋಗಿ ಬಿಟ್ಟಿದ್ದರಷ್ಟೆ. ಆದರೆ ತನ್ನ ಸ್ವಂತ ಸಂಸ್ಥಾನವಾದ ಜಯಪುರಕ್ಕೆ ತನ್ನ ಪ್ರವೇಶವು ಹಾನಿಕಾರಕವೆಂದು ಘೋಷಿಸಿದ ಸರಕಾರದವರ ಉದ್ಗಾರವನ್ನು ಮುರಿಯಲು ಶ್ರೀಯುತರು ತಾರೀಕು ೮ ರಲ್ಲಿ ಜಯಪುರಕ್ಕೆ ಹೋದರು. ಅವರನ್ನು ಪೊಲೀಸರು ರೈಲಿನಲ್ಲೇ ಬಂಧಿಸಿ ಕರದೊಯ್ದಿರುವರು. ಸೇಟ್ ಜಮ್ನಾಲಾಲ್ ಬಜಾಜರು ಸಂಸ್ಥಾನವನ್ನು ಪ್ರವೇಶಿಸುವ ಮೊದಲು, ಮೊದಲನೇ ಬಾರಿ ತನ್ನನ್ನು ಹೊರಗೆ ಹಾಕಿದಂತೆ ಈ ಸಾರಿ ಯಾವರೂ ತನ್ನನ್ನು ಗಡೀಪಾರು ಮಾಡಲಿಕ್ಕಾಗದೆಂದೂ, ತನ್ನನ್ನು ವಿಚಾರಿಸಿ ತಪ್ಪಿಗೆ ಸರಿಯಾದ ಶಿಕ್ಷೆ ಮಾಡಬೇಕೆಂದೂ ಅಧಿಕಾರಿಗಳನ್ನು ಕೇಳಿಕೊಂಡಿದ್ದರು. ಅಧಿಕಾರಿ ವರ್ಗದವರಾದರೂ ಅದಕ್ಕೆ ಒಪ್ಪಿ ಅವರನ್ನು ಸೆರೆಹಿಡಿದು ಜಯಪುರದಿಂದ ಪುನಃ ತಮ್ಮ ಮೊದಲಿನ ಕಾರ್ಯಕ್ರಮದಂತೆ ಭಾರತಪುರಕ್ಕೆ ಗಡೀಪಾರು ಮಾಡಿರುವರು. ಬಜಾಜರು ತಾರೀಕು 7 ರಲ್ಲಿ ಆಗ್ರಾಕ್ಕೆ ಬಂದಿರುವರು.

ಬಜಾಜರ ಪ್ರಕಟಣೆ.

ಜಮ್ನಾಲಾಲ್ ಬಜಾಜರನ್ನು ಸೆರೆಹಿಡಿಯುವಾಗ ಅವರು ಈ ಹೇಳಿಕೆಯನ್ನು ಕೊಟ್ಟರು.

'ನನ್ನ ಜನ್ಮಭೂಮಿಯಲ್ಲಿ ಈಗಿರುವೆನು, ನನ್ನ ಈಗಿನ ಮತ್ತು ಮೊದಲಿನ ಪ್ರಯಾಣದಲ್ಲಿ ನನ್ನ ದೇಶಸ್ಥರು ನನಗೆ ತೋರಿಸಿದ ಪ್ರೀತಿಯು ನನ್ನನ್ನು ತಲ್ಲೀನನನ್ನಾಗಿ ಮಾಡಿದೆ. ಅವರು ಶಿಸ್ತು ಮತ್ತು ಶಾಂತಿಯನ್ನು ಸರಿಯಾಗಿ ಪಾಲಿಸಿರುವವರಿಂದ ಮುಂದೆ ಚಳವಳವನ್ನು ಜಯಪ್ರದವಾಗಿ ಅಹಿಂಸಾರೀತಿಯಿಂದ ಮುಂದರಿಸುವರೆಂಬ ಭರವಸೆ ನನಗಿದೆ. ನನ್ನ ಮೇಲೆ ಈ ನಿಷೇಧಾಜ್ಞೆಯನ್ನು ಪ್ರಯೋಗಿಸಿದ ಕಾರಣವಾದರೂ ನನ್ನಿಂದ ಸಂಸ್ಥಾನದ ಶಾಂತತಾ ಭಂಗವಾಗುವದೆಂದು. ಆದರೆ ಜನವರಿ 1 ರಲ್ಲಿ ಸಂಸ್ಥಾನದೊಳಗೆ ನಾನು ಅನೇಕ ಅಖಂಡ ಸಭೆಗಳಲ್ಲಿ ವ್ಯಾಖ್ಯಾನಕೊಟ್ಟದ್ದುಂಟು. ಇದರಿಂದ ಶಾಂತಿ ಭಂಗದ ಕುರುಹುಗಳೇನೂ ಕಂಡು ಬರಲಿಲ್ಲ. ಬದಲು ದೇಶದ ಉದ್ದಗಲಕ್ಕೂ ಶಿಸ್ತಿನ ಹಾಗೂ ಶಾಂತಿಯುಕ್ತರಾದ ಜನಸಂದಣಿಯು ಕಂಡು ಬಂತು. ನನಗೆ ಜನ್ಮದಾಯಿನಿಯಾದ ಈ ಸಂಸ್ಥಾನದಲ್ಲಿರುವದು ನನ್ನ ಜನ್ಮಸಿದ್ಧ ಹಕ್ಕು. ಆ ವಿಚಾರ ಪ್ರಶ್ನೆ ಕೇಳುವದು ಅಸಮಂಜಸ. ಅಧಿಕಾರಿಗಳು ಅಲ್ಲಸಲ್ಲದ ಆರೋಪಣೆಯಿಂದ ಕೈಕೊಂಡ ಈ ಧೋರಣೆಯು ಅವರಿಗೆಂದೂ ಶುಭವೆನಿಸದು. ಇಂದು ಮುಂದಿರುವ ಸಮಸ್ಯೆಯಾದರೂ ಜಟಿಲಪ್ರಶ್ನೆಯಲ್ಲ. ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಲು ಜನತೆಯು ತನ್ನೊಳಗೆ ತಮ್ಮ ಸಹವಾಸಿಗಳ ಹಿತಕ್ಕಾಗಿ ಅವರಿಗೆ ತಕ್ಕ ಶಿಕ್ಷಣ ಕೊಟ್ಟು ಮಹಾರಾಜರವರ ಆಶ್ರಯದಲ್ಲಿ ಜವಾಬ್ದಾರಿ ಸರಕಾರ ಪಡೆಯಲು ಪ್ರಯತ್ನಿಸುವ ಹಕ್ಕು ಜನತೆಗಿದೆಯೇ? ಇದೇ ಇಂದಿನ ಪ್ರಶ್ನೆ. ಸಂಸ್ಥಾನಾಧಿಕಾರಿಗಳು ನಾಗರೀಕರ ಈ ಮೂಲಭೂತ ಹಕ್ಕನ್ನು ಅಲ್ಲಗಳೆಯುತ್ತಿರುವರು. ಆದರೆ ಜನತೆಯು ಅದನ್ನು ಪಡೆಯಲು ನಿರ್ಧಾರ ಮಾಡಿದೆ. ಸಂಸ್ಥಾನದ ಆಳುವ ಅತ್ಯಾಚಾರಯುಕ್ತವಾದ ಅಧಿಕಾರಿವರ್ಗಕ್ಕೂ, ತ್ಯಾಗ, ಅಹಿಂಸೆ ಹಾಗೂ ಸತ್ಯದಿಂದೊಡಗೂಡಿ ತಮ್ಮ ಮೂಲಭೂತ ಹಕ್ಕು ಹಾಗೂ ಗೌರವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಪ್ರಜಾವರ್ಗಕ್ಕೂ ಘರ್ಷಣೆ ನಡೆಯುವ ಈ ಸಮರದಲ್ಲಿ ಸತ್ಯಕ್ಕೆ ಅಂತಿಮ ಜಯ ಜನರ ಬೇಡಿಕೆಗೆ ಜಯವಾಗುವದರಲ್ಲಿ ಲವಲೇಶ ಅನುಮಾನವಿಲ್ಲ.

ಆದರೂ ಸಂಸ್ಥಾನಾಧಿಕಾರಿಗಳಿಗೆ ನಾನು ಒಂದು ಎಚ್ಚರಿಕೆ ಕೊಡಬೇಕಾಗಿದೆ. ಸಂಸ್ಥಾನದ ನೌಕರರು ಜನತೆಯಲ್ಲಿ ಅವ್ಯವಸ್ಥೆ ಹಾಗೂ ತೊಂದರೆಯನ್ನು ಬಿತ್ತಲು ಪ್ರಯತ್ನಿಸುತ್ತಿರುವರೆಂದು ನನಗೆ ವರದಿಗಳು ಬರುತ್ತಿವೆ. ಇದರ ಪರಿಣಾಮವಾಗಿ ಜಯಪುರದಲ್ಲಿ ಕಲಹ ಹಾಗೂ ಹಿಂಸಾತತ್ವವು ಮುಂಬರುವದಾದರೆ ಅದಕ್ಕೆ ಸಂಸ್ಥಾನಾಧೀಶರೇ ಕಾರಣಕರ್ತರೆನ್ನದೆ ಗತ್ಯಂತರವಿಲ್ಲ. ಎಂಥಾ ಕ್ರೂರ ಹಾಗೂ ಅಮಾನುಷ ಕಟ್ಟಳೆಗಳು ವಿಧಿಸಲ್ಪಟ್ಟರೂ ಜನತೆಯು ಅಹಿಂಸಾತತ್ವವನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.'

ಜಯಪುರದಲ್ಲಿ ಶಾಂತವಾತಾವರಣವಿದೆ. ಜನರೆಲ್ಲರೂ ಸೇರಿ ಸಭೆ ನೆರೆಯಿತು. ಬಜಾಜರ ಕೈಸೆರೆಗೆ ನಿಷೇಧ ಸೂಚಿಸಲಾಯಿತು. ಅಂತೂ ಅಲ್ಲಿ ಶಿಸ್ತಿನಿಂದ ಕಾರ್ಯಕ್ರಮಗಳು ನಡೆಯುತ್ತಿವೆ. ಅಲ್ಲಿ ಸತ್ಯಾಗ್ರಹವು ಅನಿವಾರ್ಯವೆಂದೇ ಹೇಳಬೇಕಾಗಿದೆ.

ಹಳ್ಳಿಗಳ ಸ್ಥಿತಿ.

ಮಾತಿನಿಂದ ಹಳ್ಳಿಯು ಉದ್ಧಾರವಾಗದು.

ಮುಖಂಡರು ಗ್ರಾಮಕ್ಕೆ ತಿರುಗಬೇಕು, ಸರಕಾರವು ಸಹಾಯ ಮಾಡಬೇಕು, ಜನತೆಯು ಎಚ್ಚರವಾಗಬೇಕು.

ಈಗಿನ ಕಾಲದಲ್ಲಿ ಎಲ್ಲಿಗೆ ಹೋದರೂ, ಯಾವ ಸಭೆಯಲ್ಲಿಯ ಭಾಷಣವನ್ನು ಲಾಲಿಸಿದರೂ, 'ಹಳ್ಳಿಯ ಉದ್ಧಾರವಾಗಬೇಕು; ಬಡವರ ಏಳಿಗೆಯಾಗಬೇಕು; ಆದ ಪ್ರಯುಕ್ತ ರಾಜಕೀಯ ಮುಖಂಡರ ದೃಷ್ಟಿಯು ಹಳ್ಳಿಯ ಕಡೆ ತಿರುಗಬೇಕು' ಎಂಬ ಕೂಗು ಕೇಳಿಸುತ್ತಲೇ ಇದೆ. ಆದರೆ ಕಾರ್ಯತಃ ಪರಿಶೀಲಿಸಿ ನೋಡಿದರೆ ಪಟ್ಟಣಿಗರ ಸೌಕರ್ಯಗಳೇ ಹೆಚ್ಚುತ್ತಿದೆಯಲ್ಲದೆ ಹಳ್ಳಿಗರ ಸೌಲಭ್ಯಗಳು ಅಭಿವೃದ್ಧಿಯಾಗುವ ಚಿಹ್ನೆಯು ಕಾಣುವದಿಲ್ಲ.

ಹಳ್ಳಿಗಳಲ್ಲಿ ಹೆಚ್ಚಾಗಿ ಕೃಷಿಕರೇ ಇರುವದು ವಾಸ್ತವ, ಆದರಲ್ಲೂ ಕೊಡಗಿನಲ್ಲಿ ಹಳ್ಳಿಗರೆಲ್ಲಾ ಕೃಷಿಕರೆಂದರೆ ತಪ್ಪಾಗಲಿಕ್ಕಿಲ್ಲ. ಅಂತಾಗ್ದರಲ್ಲಿ ಹಳ್ಳಿಗರ ಅರ್ಥಾತ್ ಕೃಷಿಕರ ಪುರೋಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಇಲಾಖೆಗಳು ಅವರ ಏಳಿಗೆಗಾಗಿ ಶ್ರಮವಹಿಸಿ ಕಾರ್ಯನಿರ್ವಹಿಸುವದು ಕರ್ತವ್ಯವಾಗಿದೆ.

ಕೃಷಿ ಇಲಾಖೆ.

ಕೃಷಿಕರಾದ ಹಳ್ಳಿಗರಿಗೆ ಆಧುನಿಕ ಕ್ರಮದ ಕೃಷಿಯ ಉಪದೇಶವು ದೊರಕಬೇಕು. ಕೃಷಿ ಇಲಾಖೆಯವರು ಗ್ರಾಮಾಂತರಗಳಿಗೆ ಹೋಗಿ, ರೈತರೊಡನೆ ಒಡನಾಡಿ, ಅವರ ಕಷ್ಟ ಪರಂಪರೆಗಳನ್ನು ಸಹನೆಯಿಂದ ಕೇಳಿ, ಸಾಧ್ಯವಿದ್ದ ಮಟ್ಟಿಗೆ ಅವರನ್ನು ಸಮಾಧಾನಪಡಿಸಿ, ತಾವು ಅವರ ಹಿತಚಿಂತಕರೆಂಬುದನ್ನು ಖಚಿತಪಡಿಸಿ, ಅವರ ಸ್ಥಿತಿಗತಿಗಳಿಗೆ ತಕ್ಕುದಾದ ಕೃಷಿ ಸುಧಾರಣೆಗಳನ್ನು ಬೋಧಿಸಿ, ಶಾಸ್ತ್ರೀಯ ರೀತಿಯ ಕೃಷಿಸುಧಾರಣೆಯಿಂದಾಗುವ ಪ್ರಯೋಜನವನ್ನು ಮನವಟ್ಟು ಮಾಡಿಸಬೇಕು. ತಮ್ಮ ಪ್ರಯಾಣ ಸೌಕರ್ಯವಿರುವಲ್ಲಿ ಸರಿಗ ಪ್ರಯಾಣ ಮಾಡಿ ಅಂಥಾ ಪ್ರದೇಶಗಳಲ್ಲಿ ಪರೀಕ್ಷಾಕ್ಷೇತ್ರಗಳನ್ನು ತೆರೆದರೆ ರೈತರ ಒಡನಾಡಿದಂತಾಗಲಿಲ್ಲ. ರೈತರ ಕಷ್ಟವನ್ನರಿತು ಅವರ ಹಿತಸಾಧನೆ ಮಾಡಿದರೇನೆ ಈ ಇಲಾಖೆಯವರು ತಮ್ಮ ಕರ್ತವ್ಯವನ್ನು ಮಾಡಿದಂತಾಗುವದು.

ಟಪಾಲು ಇಲಾಖೆ.

ಈಗಿನ ಕಾಲಕ್ಕೆ ಅತ್ಯಗತ್ಯವೆಂದೆನಿಸುವ ಟಪಾಲು ಇಲಾಖೆಯ ಕರ್ತವ್ಯವಾದರೂ ಹಳ್ಳಿಗಳಲ್ಲಿ ಹೇಗೆಂದು ನೋಡಿದರೆ ಪಟ್ಟಣಗಳಲ್ಲಿ ದಿನಕ್ಕೆರಡಾವರ್ತಿ ಪತ್ರಗಳನ್ನು ಬಟವಾಡೆ ಮಾಡುವಾಗ ಹಳ್ಳಿಗಳಲ್ಲಿ ವಾರಕ್ಕೊಂದಾವೃತ್ತಿಯಾದರೂ ದುರ್ಲಭ. 'ಮೂರವ ಕಾಗದ ಹತ್ತಿರದ ಕೋಡಿಗೆ' ಎಂಬ ನಾಣ್ಣುಡಿಯಂತೆ ಇಲ್ಲಿಯ ಸ್ಥಿತಿ. ವಾರ್ತಾಪತ್ರಿಕೆಗಳು ಹಳ್ಳಿಯಲ್ಲಿ ಪ್ರಚಾರವಾಗದಿರಲು ಇದೊಂದು ಕಾರಣ. ಹೀಗಾಗಿ ಹಳ್ಳಿಯವರು ಕೂಪಮಂಡೂಕದಂತೆ ಹೊರಗಿನ ಪ್ರಪಂಚವನ್ನೇ ಅರಿಯದವರಾಗಿರುವರು. ಒಬ್ಬ ಗ್ರಾಮದ ಬಟವಾಡೆ ಪೇದೆಯು ವಾರದಲ್ಲಿ 20,25 ಗ್ರಾಮಗಳಿಗೆ ಕಾಗದಗಳನ್ನು ಬಟವಾಡೆ ಮಾಡಬೇಕಂತೆ! ಎಂಥಾ ಸೌಕರ್ಯವಿದು!! ಜನತೆಯ ಹಿತಕ್ಕಾಗಿ ಶ್ರಮಿಸುತ್ತಿರುವ ಒಂದು ಸರಕಾರ, ಜನತೆಯ ಉದ್ಧಾರವೇ ತಮ್ಮ ಮೂಲೋದ್ದೇಶವೆಂದು ಹೇಳುವ ಸರಕಾರ, ತಮ್ಮ ಈ ಹೇಳಿಕೆಯನ್ನು ನಿಜಪಡಿಸುವ ಉದ್ದೇಶದಿಂದಿದ್ದುದಾದರೆ ಹಳ್ಳಿಗರ ಸ್ಥಿತಿಯು ಇಂಥಾ ಶೋಚನೀಯ ಪರಿಸ್ಥಿತಿಗೆ ಬಂದಿಳಿಯುತ್ತಿರಲಿಲ್ಲ.

ವೈದ್ಯಕೀಯ.

ಹಳ್ಳಿಯ ವೈದ್ಯಕೀಯ ಸ್ಥಿತಿಯು ಹೃದಯವಿದ್ರಾವಕವಿದೆ. ಹಳ್ಳಿಯವರು ಹರದಾರಿ ದೂರಕ್ಕೆ ಔಷಧಿಗಾಗಿ ಹೋಗಬೇಕು, ಮಳೆಗಾಲದಲ್ಲಿ ಇದೂ ಸಾಧ್ಯವಿಲ್ಲ. ಹೀಗಾದ ಮೇಲೆ, 'ಔಷಧಂ ಜಾಹ್ನವೀತೋಯಂ! ವೈದ್ಯೋ ನಾರಾಯಣೋ ಹರಿ' ಎಂದು ಜಪಮಾಡುತ್ತಾ ಕುಳಿತುಕೊಳ್ಳಬೇಕಷ್ಟೆ. ಆದ್ದರಿಂದ ದೇಶದ ಬೆನ್ನೆಲುಬಿನಂತಿರುವ ಹಳ್ಳಿಗರ ಆರೋಗ್ಯವನ್ನು ಸುಧಾರಿಸುವ ಕ್ರಮವನ್ನು ಕೈಕೊಳ್ಳಬೇಕು. ಇಲ್ಲವಾದರೆ ರಾಷ್ಟ್ರದ ಬೆನ್ನೆಲುಬು ಮುರಿದಂತಾಗಿ ದೇಶವು ಪ್ರಗತಿ ಹೊಂದಲಾರದೆಂಬುದು ನಿಶ್ಚಯ.

ವಿದ್ಯಾ ಇಲಾಖೆ.

ಗ್ರಾಮಗಳಲ್ಲಿ ಅಲ್ಲಲ್ಲಿ ಪ್ರಾಥಮಿಕ ಶಾಲೆಗಳಿದ್ದು ಸ್ವಲ್ಪ ಮಟ್ಟಿಗೆ ಪ್ರಯೋಜನವಾಗಿದೆ. ಆದರೆ ಆಗಬೇಕಾದಷ್ಟು ಆಗಿಲ್ಲ. ಅನೇಕ ಗ್ರಾಮಗಳಲ್ಲಿ ಹುಡುಗರು ಶಾಲೆಗೆ ಹೋಗಲನುಕೂಲವಿರುವದಿಲ್ಲ. ಆದ್ದರಿಂದ ಶಾಲೆಗಳನ್ನು ಹೆಚ್ಚಿಸಬೇಕು. ಪ್ರತಿಯೊಂದು ಗ್ರಾಮಗಳಲ್ಲಿಯೂ ವಾಚನಾಲಯಗಳನ್ನು ಹೆಚ್ಚಿಸಿ ಹಳ್ಳಿಯವರಲ್ಲಿ ಓದುಗಾರಿಕೆಯ ಅಭಿರುಚಿಯನ್ನು ಹೆಚ್ಚಿಸಬೇಕು. ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಜಾರಿಯಲ್ಲಿ ಬರಬೇಕು. ಈಗಾಗಲೇ ಮೈಸೂರಿನಲ್ಲಿ ಈ ಕ್ರಮವು ಜಾರಿಗೆ ಬಂದಿರುವದು. ಆದ್ದರಿಂದ ಸರಕಾರದವರು ಶಾಸನಗಳನ್ನು ಮಾಡಬೇಕು.

ರಾಷ್ಟ್ರಪ್ರೇಮಿಗಳು, ಹಳ್ಳಿಗಳ ಉದ್ಧಾರ ಬಯಸುವವರು ಹಳ್ಳಿಗಳ ಒಳ ನುಗ್ಗಿ ಹಳ್ಳಿಯವರೊಂದಿಗೆ ಒಡನಾಡಿ ವಿಚಾರಗಳನ್ನು ತಿಳಿಯಬೇಕು. ಮೇಲಿಂದ ಮೇಲೆ ನೋಡಿದರೆ 'ಮೂರವ ಬೆಟ್ಟ ನುಣ್ಣಗೆ' ಎಂಬಂತೆ ಆಗುವದು. ಆದ ಪ್ರಯುಕ್ತ ರಾಜಕೀಯ ಮುಖಂಡರಾಗಲೀ, ಅಥವಾ ಪ್ರಜಾಹಿತವನ್ನು ಬಯಸುವ ಸರಕಾರವಾಗಲೀ, ಜನತೆಯ ಸ್ಥಿತಿಯನ್ನರಿಯಬೇಕು. ಅರಿತು ಯಥೋಚಿತ ವರ್ತಿಸಬೇಕು. ಆಂದರೇನೇ ಸರಕಾರಕ್ಕೂ ಶ್ರೇಯಸ್ಸು! ಜನತೆಗೂ ತೇಜಸ್ಸು!! ಮುಖಂಡರಿಗೂ ಯಶಸ್ಸು!!!

ಕೊಡಗು

ಫೆಬ್ರವರಿ ತಾರೀಕು ೧೦ನೇ ಶುಕ್ರವಾರ ೧೯೩೯.

ಡಿಸ್ಟ್ರಿಕ್ಟ್ ಬೋರ್ಡಿಗೆ ಸರಕಾರದ ವಂತಿಗೆಯ ಖೋತೆ.

ಕೊಡಗು ಸರ್ಕಾರದವರು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿಗೆ ಇಷ್ಟರ ವರೆಗೆ ಮೋಟಾರು ವಾಹನಗಳ ಸುಂಕದ ಬಾಬಿಗಾಗಿ ರೂ. 20,000 ವಿದ್ಯಾ ಇಲಾಖೆಗಾಗಿ ರೂ. 22,720 ಮತ್ತು ಪಿ. ಡಬ್ಲ್ಯು. ಡಿ. ಇಲಾಖೆಗಾಗಿ ರೂ. 7,000 ಒಟ್ಟು ರೂ 49,720 ವಾರ್ಷಿಕ ವಂತಿಗೆ ಕೊಡುತ್ತಾ ಬರುತ್ತಿರುವರು. ಈಗ ಸರ್ಕಾರದ ಆದಾಯ ವೆಚ್ಚವನ್ನು ಸರಿಪಡಿಸಲು ಮಾಡುತ್ತಿರುವ ಖರ್ಚು ಖೋತೆಯ ಏರ್ಪಾಡಿನಲ್ಲಿ ಬೋರ್ಡಿಗೆ ಕೊಡುತ್ತಿರುವ ವಿದ್ಯಾ ಇಲಾಖೆಯ ವಂತಿಗೆಯಲ್ಲಿ ರೂ. 5,000 ಮತ್ತು ಮೋಟಾರು ವಾಹನಗಳ ಸುಂಕದ ಬಾಬಿನ ವಂತಿಗೆಯಲ್ಲಿ ರೂ. 2,000, ಅಂತು ಜುಮ್ಲ ರೂ. 7,000 ಕಡಿಮೆ ಮಾಡಲು ನಿಶ್ಚಯಿಸಿರುವುದು ಅನ್ಯಾಯವೂ, ಶೋಚನೀಯವೂ ಆಗಿದೆ.

ಇಡೀ ಪ್ರಾಂತ್ಯದ ಪ್ರೈಮರಿ ವಿದ್ಯಾಭ್ಯಾಸದ ಬಹು ದೊಡ್ಡ ಭಾಗವೂ, ಗ್ರಾಮಾಂತರಗಳ ವಿದ್ಯಾಭ್ಯಾಸದ ಸಂಪೂರ್ಣ ಹೊರೆಯೂ ಜಿಲ್ಲಾ ಬೋರ್ಡಿನ ಮೇಲಿದೆ. ಈಗ ಸರ್ಕಾರದವರು ಹುಡುಗಿಯರ ಶಾಲೆಗಳನ್ನೆಲ್ಲಾ ವಜ ಮಾಡಲು ನಿಶ್ಚಯಿಸಿರುವುದರಿಂದ ಐದು ಮೋಡೆಲ್ ಸ್ಕೂಲುಗಳು ಮಾತ್ರ ಸರ್ಕಾರದ ತಾಬೆಯಲ್ಲಿ ನಡಿಸಲ್ಪಡುವ ಕಾರಣ ಪ್ರೈಮರಿ ವಿದ್ಯಾಭ್ಯಾಸದ ಹೊರೆಯು ಮತ್ತಷ್ಟು ಬೋರ್ಡಿನ ಮೇಲೆ ಹೆಚ್ಚುವುದು. ಹುಡುಗಿಯರ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳು ಇನ್ನು ಮುಂದೆ ಸಮೀಪದ ಹುಡುಗರ ಶಾಲೆಗಳಿಗೆ ಹೋಗುವರು. ಆಗ್ಯೆ ಬೋರ್ಡಿನವರು ಆ ಶಾಲೆಗಳನ್ನು ಬಡಾವಣೆ ಮಾಡಿ, ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಬೇಕಾಗುವುದು. ಈ ಕಾರಣದಿಂದ ಸರ್ಕಾರದವರು ಬೋರ್ಡಿಗೆ ಕೊಡುತ್ತಿರುವ ವಂತಿಗೆಯನ್ನು ಹೆಚ್ಚಿಸಬೇಕಿತ್ತು. ಅಲ್ಲದೆ ಬೋರ್ಡಿನವರು ರೂ. 15,000 ಖರ್ಚು ಮಾಡುತ್ತಿದ್ದಾಗ್ಯೆ ಸರ್ಕಾರದವರು ರೂ. 12,000 ವಂತಿಗೆ ಕೊಡುತ್ತಿದ್ದರು. ನಂತರ ರೂ. 10,720 ಹೆಚ್ಚಿಸಿದರು. ಈಗ ಬೋರ್ಡು ಈ ಬಗ್ಗೆ ಸುಮಾರು 80,000 ಖರ್ಚು ಮಾಡುತ್ತಿರುವಾಗ್ಯೆ ಸರ್ಕಾರದವರು ಕೊಡುವ ವಂತಿಗೆಯನ್ನು ರೂ. 60,000ಕ್ಕೆ ಏರಿಸಬೇಕಾದದ್ದು ಅವರ ಕರ್ತವ್ಯವಾಗಿತ್ತು. ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸಿನ ಬೋರ್ಡಿನವರು ಈ ಬಾಬಿಗಾಗಿ ಮಾಡುವ ಖರ್ಚಿನಲ್ಲಿ ಶೇಕಡ 50ರಷ್ಟು ಸರ್ಕಾರದವರು ಕೊಡುತ್ತಿರುವರು. ಈ ದರದ ಮೇಲೆ ಇಲ್ಲಿಯ ಬೋರ್ಡಿಗೆ ಸರ್ಕಾರದಿಂದ ರೂ 40,000 ವಂತಿಗೆ ದೊರೆಯಬೇಕಾಗಿದೆ. ಸರ್ಕಾರದವರು ಮೇಲಿನ ನ್ಯಾಯವಾದ ಕಾರಣಗಳನ್ನೆಲ್ಲಾ ಬದಿಗೊತ್ತಿ, ಗ್ರಾಂಟನ್ನು ಹೆಚ್ಚಿಸುವ ಬದಲು ಕಣ್ಣು ಮುಚ್ಚಿಕೊಂಡು ಕಡಿಮೆ ಮಾಡಲು ತೀರ್ಮಾನಿಸಿರುವುದು ದೊಡ್ಡ ಅನ್ಯಾಯವಾಗಿದೆ. ಇದರೊಂದಿಗೆ ಉಳಿದ ಐದು ಮೋಡೆಲ್ ಶಾಲೆಗಳನ್ನೂ ಸರ್ಕಾರದವರು ವಜ ಮಾಡುವರೆಂದೂ, ಅಲ್ಲಿ ಬೋರ್ಡಿನವರು ಹೊಸ ಶಾಲೆಗಳನ್ನು ಸ್ಥಾಪಿಸಿ ಬೋರ್ಡಿನ ದರದ ಕಡಿಮೆ ಸಂಬಳದ ಖರ್ಚಿನಲ್ಲಿ ನಡಿಸುವದಾದರೆ ಅವುಗಳಿಗೆ ತಗಲುವ ಖರ್ಚಷ್ಟನ್ನು ಮಾತ್ರ ಸರ್ಕಾರದವರು ಕೊಡಲು ತಯಾರಿರುವರೆಂದೂ ಬೋರ್ಡಿನವರನ್ನು ಕೇಳಿಕೊಂಡಿದ್ದರು. ವಿದ್ಯಾ ಇಲಾಖೆಗಾಗಿ ಸರ್ಕಾರದವರು ಕೊಡುವ ವಂತಿಗೆಯನ್ನು ಕಡಿಮೆ ಮಾಡದೆ ಈಗಿನಂತೆಯೇ ಮುಂದುವರಿಸುತ್ತಾ ಬಂದರೆ ಮಾತ್ರ ಬೋರ್ಡಿನವರು ಈ ವಿಚಾರ ಆಲೋಚನೆ ಮಾಡುವರೆಂದು ತೀರ್ಮಾನಿಸಿರುವುದು ಯೋಗ್ಯವಾಗಿದೆ. ಇತರ ಎಲ್ಲಾ ಭಾಗಗಳಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಪೋಷಣೆ ಮಾಡುವುದು ಮಾತ್ರವಲ್ಲ, ಖಡ್ಡಾಯವಾಗಿ ಮಾಡುವ ಯತ್ನಗಳು ನಡೆಯುತ್ತಿರುವಾಗ್ಯೆ, ಇಲ್ಲಿ ಖಡ್ಡಾಯ ಮಾಡುವ ಮಾತಂತಿರಲಿ; ಗ್ರಾಮಸ್ಥರು ತಾವಾಗಿ ಮಕ್ಕಳನ್ನು ಸೇರಿಸಿ ಖಾಸಗಿ ಶಾಲೆಗಳನ್ನಿಟ್ಟು ಅವುಗಳಿಗೆ ಉಪಾಧ್ಯಾಯರುಗಳನ್ನಾಗಲೀ, ಗ್ರಾಂಟನ್ನಾಗಲೀ ಕೊಡಿರೆಂದು ಕೇಳುತ್ತಿರುವಲ್ಲಿ ಬೋರ್ಡಿನವರು ಅವರಿಗೆ ನೆರವಾಗಲು ಮಾಡುತ್ತಿರುವ ಪ್ರಯತ್ನಕ್ಕೆ ಸರ್ಕಾರದವರು ಸಹಾಯವನ್ನು ಕೊಡುವುದರ ಬದಲು ಈಗ ಕೊಡುತ್ತಿರುವ ವಂತಿಗೆಯನ್ನೂ ಕಡಿಮೆ ಮಾಡುವುದು ನಾಚಿಗೆಗೇಡಿನ ವಿಷಯವಾಗಿದೆ.

ಮೋಟಾರು ವಾಹನಗಳ ತೆರಿಗೆಯ ಆಕ್ಟು ಜಾರಿಗೆ ಬರುವ ಮುಂಚೆ ಬೋರ್ಡಿಗೆ ಮೋಟಾರುಗಳ ಮೇಲಿನ ಸುಂಕದಿಂದ ರೂ. 36,000 ಆದಾಯ ಬರುತ್ತಿತ್ತು. ಈ ಆಕ್ಟು ಜಾರಿಗೆ ಬಂದ ಮೇಲೆ ಈ ಬಾಬಿನಲ್ಲಿ ಬೋರ್ಡಿಗೆ ಉಂಟಾದ ನಷ್ಟವನ್ನು ಭರ್ತಿ ಮಾಡಲು ಸರ್ಕಾರದವರು ಬೋರ್ಡಿಗೆ ರೂ. 18,000 ವಂತಿಗೆ ಕೊಡುತ್ತಾ ಬಂದರು. ಸರ್ಕಾರಕ್ಕೆ ಈ ಬಾಬಿನ ಉತ್ಪತ್ತಿಯು ಹೆಚ್ಚಿದ ಕಾರಣ ಅದನ್ನು ಇತ್ತೀಚೆಗೆ ರೂ. 20,000 ಏರಿಸಿದರು. ಆದರೆ ಈಗ ಸರ್ಕಾರಕ್ಕೆ ಈ ತೆರಿಗೆಯಿಂದ ರೂ. 99,000 ಆದಾಯವಿದೆ. ಅಂದ ಮೇಲೆ ಸರ್ಕಾರದವರು ಬೋರ್ಡಿಗೆ ಕೊಡುವ ಗ್ರಾಂಟನ್ನು ರೂ. 50,000ಕ್ಕೆ ಏರಿಸಬೇಕಾದದ್ದು ಸಾಧಾರಣವಾಗಿದೆ. ಅದರ ಬದಲು ಅದನ್ನು ರೂ. 2,000ದಷ್ಟು ಇಳಿಸಲು ನಿಶ್ಚಯಿಸಿರುವುದರಲ್ಲಿ ಅರ್ಥವೇ ಇಲ್ಲ. ಬೇರೆ ಪ್ರಾಂತೀಕ ಸರ್ಕಾರಗಳು ಇದಕ್ಕಿಂತ ಹೆಚ್ಚಿನ ದರದ ಗ್ರಾಂಟನ್ನು ಜಿಲ್ಲಾ ಬೋರ್ಡುಗಳಿಗೆ ಕೊಡುತ್ತಿವೆ. ನಮ್ಮ ಇಲ್ಲಿಯ ಸರ್ಕಾರದ ವರ್ತನೆ ಬಹು ವಿಶೇಷ ತರವಾಗಿದೆ

ಇಲ್ಲಿಯ ಸರ್ಕಾರದವರು ಮಾಡುವ ಸಿಬ್ಬಂದಿ ಖೋತೆಗೂ, ಬೋರ್ಡಿನವರು ಖರ್ಚು ಖೋತೆ ಮಾಡುವುದಕ್ಕೂ ದೊಡ್ಡ ವ್ಯತ್ಯಾಸವಿದೆ. ತಲೆಭಾರದ ಆಡಳಿತ ಕ್ರಮದ ದುಂದುಗಾರಿಗೆಯ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರದವರು ಸಿಬ್ಬಂದಿ ಖೋತೆ ಮಾಡುವುದಾಗಿದೆ. ಆದರೆ ಬೋರ್ಡಿನಲ್ಲಿ ಅಂಥಾ ದುಂದುಗಾರಿಕೆಯ ವೆಚ್ಚವೇನೂ ಇಲ್ಲ. ಇರುವ ಅತಿ ಕಡಿಮೆ ತರಹದ ವೆಚ್ಚದ ಸಿಬ್ಬಂದಿಯಲ್ಲಿಯೂ ಸಾಧ್ಯವಾದಷ್ಟು ಖೋತೆ ಮಾಡಿರುವರು. ಇದಕ್ಕಿಂತ ಹೆಚ್ಚು ಖೋತೆ ಮಾಡಿದ್ದೇ ಆದರೆ ಜನಸಮುದಾಯಕ್ಕೆ ಅತ್ಯವಶ್ಯ ಬೇಕಾಗಿರುವ ಆಸ್ಪತ್ರೆ, ಶಾಲೆ ಮೊದಲಾದವುಗಳನ್ನು ಮುಚ್ಚಬೇಕಾಗುವುದು. ಆದುದರಿಂದ ಸರ್ಕಾರದವರು ಸಿಬ್ಬಂದಿ ಖೋತೆಯ ದೆಸೆಯಿಂದ ಬೋರ್ಡಿಗೆ ಕೊಡುತ್ತಿರುವ ಧನ ಸಹಾಯವನ್ನು ಕಡಿಮೆ ಮಾಡಬೇಕಾಗಿ ಬಂದಿದೆ ಎನ್ನುವುದು 'ಹುಚ್ಚಪ್ಪನ ಸಮಜಾಯಿಷಿ' ಯಾಗಿದೆಯೆಂದರೆ ತಪ್ಪಾಗಲಾರದು.

ಸರ್ಕಾರದವರ ಈ ತರದ ಕಾರಣವನ್ನೇ ಆರೋಗ್ಯ ಇಲಾಖೆಗೂ ಹಚ್ಚದೆ ಇರುವುದು ಆಶ್ಚರ್ಯವೇ ಸರಿ. ಬೋರ್ಡಿನವರು ಆರೋಗ್ಯ ಇಲಾಖೆಯನ್ನು ನಡಿಸುತ್ತಿದ್ದಾಗ್ಯೆ ಆಗುವಷ್ಟು ಕಡಿಮೆ ಖರ್ಚು ಮಾಡುತ್ತಿದ್ದರು. ಈ ಇಲಾಖೆಯನ್ನು ಸರ್ಕಾರದವರು ವಹಿಸಿಕೊಂಡಾಗ್ಯೆ ಅದರಲ್ಲಿ ಕಡಿಮೆ ಸಂಬಳದ ಉದ್ಯೋಗಸ್ಥರು ಕೆಲವರನ್ನು ಮನೆಗೆ ಕಳುಹಿಸಿ, ದೊಡ್ಡ ಹುದ್ದೆದಾರರ ಸಂಬಳವನ್ನು ಏರಿಸಿ, ಖರ್ಚನ್ನು ಹೆಚ್ಚಿಸಿದರು. ಆಗ್ಯೆ ಬೋರ್ಡಿನವರು ಈ ಇಲಾಖೆಗೆ ರೂ. 5,000 ವಂತಿಗೆ ಕೊಡಬೇಕೆಂದು ನಿಶ್ಚಿತವಾಯಿತು. ಈಗ ಆಡಳಿತ ಖರ್ಚಿಗೆ ಹಣ ಸಾಲದೆಂದು ಸಿಬ್ಬಂದಿ ಖೋತೆ ಮಾಡುತ್ತಿರುವಲ್ಲಿ ಈ ಇಲಾಖೆಗೂ ಅದು ಅನ್ವಯಿಸಬೇಕಾಗಿದೆ. ಈ ಕಾರಣದಿಂದ ಬೋರ್ಡಿನವರು ಈ ಇಲಾಖೆಗೆ ಕೊಡುತ್ತಿರುವ ಗ್ರಾಂಟಿನಲ್ಲಿ 2,000 ರೂಪಾಯಿ ಕಡಿಮೆಮಾಡುವಂತೆ ತೀರ್ಮಾನಿಸಿರುವುದು ಯುಕ್ತವಾಗಿದೆ. ಆರೋಗ್ಯ ಇಲಾಖೆಯು ದೇಶದ ಏಳಿಗೆಗೆ ಅತ್ಯವಶ್ಯವಾದುದರಿಂದ ಅದರಲ್ಲಿ ಖೋತೆ ಮಾಡುವುದು ಉಚಿತವಲ್ಲವೆಂದು ಸರ್ಕಾರದವರು ವಾದಿಸುವದಾದರೆ, ಈಗಿನ ಸ್ಥಿತಿಯಲ್ಲಿ ಈ ಇಲಾಖೆಗಿಂತ ಡಿ. ಬೋರ್ಡಿನ ವೈದ್ಯ ಮತ್ತು ವಿದ್ಯಾ ಇಲಾಖೆಗಳು ಹೆಚ್ಚಿನ ದೇಶಾಭಿವೃದ್ಧಿಯ ಕೆಲಸಗಳನ್ನು ಮಾಡುತ್ತಿರುವದರಿಂದ ಇವೆರಡು ಇಲಾಖೆಗಳಲ್ಲಿಯೂ ಖೋತೆಯನ್ನು ಖಂಡಿತವಾಗಿಯೂ ಮಾಡಕೂಡದೆಂದಾಯಿತು. ಅಂದ ಮೇಲೆ ಸರ್ಕಾರದವರು ವಿದ್ಯಾ ಇಲಾಖೆಗೆ ಕೊಡುವ ವಂತಿಗೆಯನ್ನು ಕಡಿಮೆ ಮಾಡುವದಾದರೂ ಹೇಗೆ?

ಯಾವ ರೀತಿಯಿಂದ ಆಲೋಚಿಸಿದರೂ ಕೂಡ ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡುವುದರಲ್ಲಿ ಒಂದಿಷ್ಟು ನ್ಯಾಯವೂ ಕಂಡುಬರುವುದಿಲ್ಲ. ದೇಶದಲ್ಲಿ ವಿದ್ಯಾಭ್ಯಾಸದ ಮತ್ತು ವೈದ್ಯ ಚಿಕಿತ್ಸೆಯ ಅನುಕೂಲತೆಗಳನ್ನು ಹೆಚ್ಚಿಸಲು ಜನರ ಈಗಿನ ಆರ್ಥಿಕ ಹೀನಸ್ಥಿತಿಯಲ್ಲೂ ಕೂಡ ಅವರಿಂದ ಹೊಸ ತೆರಿಗೆಯನ್ನು ಎತ್ತುವಷ್ಟು ಬಲತ್ಕರಿಸಲ್ಪಟ್ಟಿರುವ ಡಿ. ಬೋರ್ಡಿಗೆ ಸರ್ಕಾರದವರು ಹೆಚ್ಚಿನ ಧನ ಸಹಾಯ ಕೊಡಬೇಕಾದದ್ದು ಅವರ ಧರ್ಮವಾಗಿದೆ. ಅದರ ಬದಲು ಕೊಡುತ್ತಿರುವ ಸಹಾಯವನ್ನೂ ಕಡಿಮೆ ಮಾಡಲು ಯೋಚಿಸಿರುವರೆಂದರೆ ದೇಶದ ಹಿತವನ್ನು ಎಷ್ಟರ ಮಟ್ಟಿಗೆ ತೃಣೀಕರಿಸುತ್ತಿರುವರೆಂಬುದು ವಿಶದವಾಗುತ್ತದೆ. ಇನ್ನಾದರೂ ಸರ್ಕಾರದವರು ಈ ಆಲೋಚನೆಗಳಿಗೆ ಅವಕಾಶವಿಲ್ಲದಂತೆ ಮಾಡುವರಾಗಿ ನಂಬುತ್ತೇವೆ.

ಬೊಂಬಾಯಿ ಕೊಡಗು ಸಂಘ.

ಹದಿನೆಂಟನೇ ವಾರ್ಷಿಕ ಜನರಲ್ ಮೀಟಿಂಗು.

ಬೊಂಬಾಯಿ ಕೊಡಗು ಸಂಘದ ಹದಿನೆಂಟನೆಯ ವಾರ್ಷಿಕ ಜನರಲ್ ಮೀಟಿಂಗು ಇದೇ ಜನವರಿ ತಾರೀಕು 29ರಲ್ಲು ಮಿ. ಎಂ. ಎಸ್. ಮುತ್ತಣ್ಣನವರ ಭವನದಲ್ಲಿ ಜರುಗಿತು. ಸಂಘದ ಅನೇಕ ಮೆಂಬರುಗಳು ಹಾಜರಿದ್ದರು.

ಪ್ರಥಮದಲ್ಲಿ ತಿಂಡಿ ತೀರ್ಥಗಳಾದ ನಂತರ ಮಿ. ಯಂ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯಕ್ರಮವು ಆರಂಭವಾಯಿತು. ಗೌರವ ಕಾರ್ಯದರ್ಶಿ ಮಿ. ಎ. ಕೆ. ಎಸ್. ದೇವಯ್ಯನವರು ಕಳೆದ ವರ್ಷದ ರಿಪ್ರೋರ್ಟನ್ನು ಓದಿದರು. ಈ ವಾರ್ಷಿಕ ವರದಿಯು ಸರ್ವ ಸಮ್ಮತದಿಂದ ಪಾಸಾಯಿತು.

ಆನಂತರ ಗತ ವರ್ಷದ ಪ್ರೆಸಿಡೆಂಟರು ತಮ್ಮ ಕೆಲಸದಿಂದ ನಿವೃತ್ತರಾದ್ದರಿಂದ 1939ನೇ ವರ್ಷದ ವ್ಯವಹಾರಗಳನ್ನು ನಡೆಸಲು ಸಂಘದ ಹೊಸ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ ಚುನಾವಣೆಯಾಯಿತು. ಮಿ. ಗಳಾದ ಯಂ. ಕಾರ್ಯಪ್ಪನವರು ಸಂಘದ ಅಧ್ಯಕ್ಷರಾಗಿಯೂ, ಯಂ. ಯಂ. ಅಚ್ಚಯ್ಯನವರು ಗೌರವ ಕಾರ್ಯದರ್ಶಿಯಾಗಿಯೂ, ಪಿ. ಜಿ. ಐಯ್ಯಪ್ಪನವರು ಟ್ರೆಜರರಾಗಿಯೂ ಚುನಾಯಿಸಲ್ಪಟ್ಟರು. ಅಲ್ಲದೆ ಇವರೊಡನೆ ಸಹಕರಿಸಲು ಮೂರು ಜನ ಸದಸ್ಯರುಗಳ ಕಮಿಟಿಯೊಂದು ನೇಮಿಸಲಾಯಿತು. ಈ ಕಮಿಟಿ ಮೆಂಬರುಗಳು ಮಿಸೆಸ್. ಯಂ. ಯಸ್. ಮುತ್ತಣ್ಣನವರು, ಮಿ. ಗಳಾದ ಎ. ಸಿ. ಗಣಪತ್ತಿಯವರು ಮತ್ತು ಬಿ. ಕೆ. ಮಾಚಯ್ಯನವರು.

ಕೊನೆಯಲ್ಲಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

ಯಂ. ಯಂ. ಅಚ್ಚಯ್ಯ,
ಗೌರವ ಕಾರ್ಯದರ್ಶಿ.

ವರ್ತಮಾನ ಸಂಗ್ರಹ.

ಒಳ ದೇಶ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 111 ರಂತಲೂ, ಸುಣ್ಣಕ್ಕೆ ರೂ. 30 ಕ್ರಯವಿರುತ್ತೆ.

ತಾರೀಕು 10 ಮತ್ತು 11 ರಲ್ಲಿ 'ಕನ್ನಡ ನುಡಿ' ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ. ಅ. ನ. ಕೃಷ್ಣರಾಯರು ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ಉಪನ್ಯಾಸಗಳನ್ನು ಮಾಡಲಿರುವರು.

ತಾರೀಕು 12 ನೇ ಆದಿತ್ಯವಾರ ದಿನ ಇಲ್ಲಿಯ ಕಾನ್ವೆಂಟ್ ಹೈಸ್ಕೂಲಿನಲ್ಲಿ 11 ಗಂಟೆಯಿಂದ ಹಿಂದೀ ಪ್ರಾಥಮಿಕ, ಮಾಧ್ಯಮಿಕ ಹಾಗೂ ರಾಷ್ಟ್ರೀಯ ಪರೀಕ್ಷೆಗಳು ನಡೆಯುವವೆಂದು ತಿಳಿದುಬರುತ್ತದೆ.

ಗಾನ ಸರಸ್ವತಿ, ಕೋಕಿಲವಾಣಿ, ಭಕ್ತಿಮಾರ್ಗ ಪ್ರದರ್ಶನ ಪ್ರವೀಣೆ ಇತ್ಯಾದಿ ಬಿರುದುಗಳನ್ನು ಪಡೆದಿರುವ ಶ್ರೀಮತಿ ಭಾಗೀರಥಿ ಬಾಯಿಯವರು ಹೈಸ್ಕೂಲ್ ಹಾಲ್‌ನಲ್ಲಿ 'ಸೈರೇಂಧ್ರಿ ಪಾತಿವ್ರತ್ಯ ಪ್ರಭಾವ'ವೆಂಬ ಹರಿಕಥೆಯನ್ನು ತಾ. 9 ರಲ್ಲಿ ಮಾಡಿದರು.

ಇಲ್ಲಿಯ ವೇದಾಂತ ಸಂಘದ ಮಂದಿರದಲ್ಲಿ 1938ನೇ ಇಸವಿ ಜನವರಿ ತಿಂಗಳಿಂದ ನಡೆಯುತ್ತಿದ್ದ ಶ್ರೀ ಮದ್ಭಾಗವತ ಪ್ರವಚನವನ್ನು ಈ ತಾರೀಕು 14 ರ ಸಾಯಂಕಾಲ 5-30 ಕ್ಕೆ ಸಮಾಪ್ತಿಗೊಳಿಸುವ ವ್ಯಾಸಪೂಜೆಯು ನಡೆಯುವದೆಂದೂ, ಅದಕ್ಕೆ ಎಲ್ಲರಿಗೂ ಆಹ್ವಾನವಿದೆಯೆಂದೂ ತಿಳಿಯುತ್ತೇವೆ.

ವೀರಾಜಪೇಟೆ.

ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಶ್ರೀ. ಜಿನ್ನಾರವರ ಸೂಚನೆಯಂತೆ ಇಲ್ಲಿಯ ಮುಸ್ಲಿಂ ಲೀಗಿನ ಸಭೆಯೊಂದು ತಾ. 8ರಲ್ಲಿ ಇಲ್ಲಿಯ ಟೌನು ಹಾಲ್‌ನಲ್ಲಿ ನಡೆದು ಪೇಲಸ್ತೀನದ ಅರಬರ ಕೇಳಿಕೆಯನ್ನು ಸಲ್ಲಿಸಬೇಕೆಂದೂ, ಈಗ ನಡೆಯುತ್ತಿರುವ ಸಮ್ಮೇಳನವು ಫಲಕಾರಿಯಾಗದಿದ್ದರೆ ಜಗತ್ತಿನ ಮುಸ್ಲಿಮರಲ್ಲಿ ತುಂಬಾ ಅಸಮಾಧಾನವನ್ನು ಹರಡುವದೆಂದೂ ಬ್ರಿಟಿಷ್ ಮುಖ್ಯ ಪ್ರಧಾನರಿಗೆ ತಂತಿ ಮೂಲಕ ತಿಳಿಸಲು ತೀರ್ಮಾನವಾಯಿತು.

ಗೋಣಿಕೊಪ್ಪಲು.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಇಲ್ಲಿ ನೆರೆದು ದಿವಂಗತ ನಿಡತ ಸುಬ್ಬಣ್ಣಯ್ಯನವರ ನಿಧನಕ್ಕೆ ಸಂತಾಪ ಸೂಚಿಸಿ ಠರಾವು ಮಂಜೂರು ಮಾಡಿತು.

ಮೂರ್ನಾಡು.

ಕೊಡಂದೇರ ತಿಮ್ಮಯ್ಯನವರ ತೋಟದಲ್ಲಿ ರೈಟರಾಗಿದ್ದ ಹೊದ್ದೂರು ಗ್ರಾಮದ ಶ್ರೀ. ನೆರವಂಡ ಸೋಮಯ್ಯನವರು ಈ ತಾರೀಕು 6 ರಲ್ಲಿ ತನ್ನ ಮನೆ ಬಳಿ ತೋಟದಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದೂ, ಕಾರಣವಿನ್ನೂ ತಿಳಿದಿಲ್ಲವೆಂದೂ ವರ್ತಮಾನ.

ಸುಂಟಿಕೊಪ್ಪ.

ಕಳೆದ ತಾರೀಕು 29-1-39 ರಲ್ಲಿ ಶ್ರೀ ಕುಟ್ಟಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ ದಿನಾಚರಣೆಯು ಅತೀ ವಿಜೃಂಭಣೆಯಿಂದ ನಡೆಯಿತು.

ಶನಿವಾರಸಂತೆ.

ತಾರೀಕು 5-2-39 ರಲ್ಲಿ ಶನಿವಾರಸಂತೆ ಹೋಬಳಿ ಸಹಕಾರ ಯೂನಿಯನ್ ಕಾನ್ಫರೆನ್ಸು, ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಪಿ. ಬಿ. ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ನಿಡತ ಸುಬ್ಬಣ್ಣಯ್ಯನವರ ನಿಧನದ ಬಗ್ಗೆ ವ್ಯಸನ ಸೂಚಿಸಿ ಒಂದು ಠರಾವೂ ಇಲ್ಲಿ ಅಂಗೀಕೃತವಾಯಿತು.

ನಿಧನ ವಾರ್ತೆ.

ಕಾಕೋಟುಪರಂಬು ಸ್ಕೂಲ್ ಹೆ. ಮಾಸ್ಟರಾದ ಶ್ರೀ. ಐಚೆಟ್ಟಿರ ದೇವಯ್ಯನವರೂ, ಕುಕ್ಲೂರು ಗ್ರಾಮದ ಶ್ರೀ. ತಾತಂಡ ಕಾಳಪ್ಪನವರೂ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಗಜೆಟ್ ವರ್ತಮಾನ.

ಕಳೆದ ಡಿಸೆಂಬರು ತಿಂಗಳಲ್ಲಿ ಕೊಡಗಿನಲ್ಲಿ 290 ಜನನಗಳೂ, 283 ಮರಣಗಳೂ ಸಂಭವಿಸಿದವೆಂದು ತಿಳಿಯಬರುತ್ತದೆ.

ಸೌದೆ, ಕಲ್ಲು, ಮಳಲು, ಬಿದಿರು ಮೊದಲಾದ ಸಾಮಾನುಗಳ ಕ್ರಯದ ದರವನ್ನು ಅಗಿಂದಾಗ್ಯೆ ನಿಶ್ಚಯಿಸುವ ಹಕ್ಕು ಚೀಫ್ ಫಾರೆಸ್ಟ್ ಆಫೀಸರವರಿಗೆ ಕೊಡಲಾಗಿದೆ.

ಕೊಡಗು ಸರ್ಕಾರಿ ರಜೆಗಳ ಪಟ್ಟಿಯಲ್ಲಿ 1939 ನೇ ಡಿಸೆಂಬರ್ ತಾ. 2 ರಲ್ಲಿ 'ಸುಬ್ರಹ್ಮಣ್ಯ ಷಷ್ಟಿ' ಎಂಬುದರ ಬದಲು 'ಕೊಡಗು ಹುತ್ತರಿ' ಎಂದು ತಿದ್ದುಪಡಿ ಮಾಡಬೇಕೆಂದು ಪ್ರಕಟವಾಗಿದೆ.

ಪಟೇಲರುಗಳ ಸಂಬಳವು ಈ ಮೊದಲು ಪ್ರಕಟವಾಗಿದ್ದ ದರದಲ್ಲಿ ಬರುವ ಏಪ್ರಿಲ್ ತಾ. 1 ರಿಂದ ಕಡಿಮೆ ಮಾಡಲ್ಪಡುವದೆಂದು ಗಜೆಟಿನಲ್ಲಿ ಬಹಿರಂಗಪಡಿಸಲಾಗಿದೆ.

ಕೊಡಗಿನಿಂದ ಹೊರಗೆ ಹೋಗುವ ಅಥವಾ ಹೊರಗಿನಿಂದ ಬರುವ ಪ್ರತಿಯೊಂದು ಗಾಡಿಗೂ ಬರುವ ಏಪ್ರಿಲ್ 1 ರಿಂದ 8 ಆಣೆ ಸುಂಕ ಕೊಡತಕ್ಕದ್ದೆಂದು ಚೀಫ್ ಕಮಿಷನರವರು ಪ್ರಕಟಿಸಿರುವರು.

ರಾಜಿನಾಮೆ ಕೊಟ್ಟಿದ್ದ ಮಿ. ನಿಕಲ್ಸ್‌ರವರ ಬದಲು ಮಿ. ಐವರ್ ಬುಲ್‌ರವರು ಕೊಡಗು ಕೌನ್ಸಿಲಿನ ಮೆಂಬರುಗಳಾಗಿ ಯೂರೋಪಿಯನ್ ಪ್ಲಾಂಟರುಗಳಿಂದ ಆರಿಸಲ್ಪಟ್ಟಿರುವರು.

ಬರುವ ಏಪ್ರಿಲ್ 1 ರಿಂದ 21 ವರ್ಷಗಳ ವರೆಗಿನ ಯೊಲಕ್ಕಿ ಮಲೆಗಳ ಗೇಣಿಗೆ ದರಖಾಸ್ತುಗಳನ್ನು ಬರುವ ಮಾರ್ಚಿ ತಾರೀಕು 14 ರೊಳಗೆ ಕಮಿಷನರವರಿಗೆ ಫಾರಂನಂತೆ ಕಳುಹಿಸಬಹುದೆಂದು ಪ್ರಕಟವಾಗಿದೆ.

ಮಡಿಕೇರಿ ಮುನ್ಸಿಪಾಲಿಟಿಯೊಳಗಿರುವ ಮನೆಗಳಲ್ಲಿ ಮಲ, ಮೂತ್ರ ಮನೆಯ ಗುಂಡಿಗಳನ್ನು ಖುಲ್ಲಾಯಾಗಿ ಇಡುವುದನ್ನು ಕುರಿತು ಕರಡು ನಿಬಂಧನೆಗಳನ್ನು ಈ ತಿಂಗಳ ಅಂತ್ಯದೊಳಗೆ ತಿದ್ದುಪಡಿ ಯಾ ಆಕ್ಷೇಪಣೆಗಳನ್ನು ಮುನ್ಸಿಪಲ್ ಪ್ರೆಸಿಡೆಂಟರಿಗೆ ಕಳುಹಿಸಬಹುದಾಗಿದೆ.

ಕೊಡಗು ಸರ್ಕಾರದ ಸ್ಟೇಂಡಿಂಗ್ ಜನರಲ್ ಪರ್ಪಸಸ್ ಕಮಿಟಿಯ ಮೀಟಿಂಗು ಈ ತಾ. 28ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದೂ, ಅಗ್ಯೆ ಯೊಲಕ್ಕಿ ಮಲೆಗಳ ಗೇಣಿಯ ರೀತಿ ಬದಲಾವಣೆ, ಕಂದಾಯ ಕಂತುಗಳ ಬದಲಾವಣೆ, ಜೋಡಿ ಸೇತುವೆ ಮೊದಲಾದ ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಡುವವೆಂದೂ ತಿಳಿಯಬರುತ್ತದೆ.

'ಮುನ್ಸಿಪಾಲಿಟಿಗಳೊಳಗೆ ಕಟ್ಟುವ ಮನೆ ಯಾ ಸ್ಥಳ ಮತ್ತು ಸಕ್ಷಿಗೆ ಆರೋಗ್ಯ ಇಲಾಖೆಯವರ ಒಪ್ಪಿಗೆ ಪಡೆಯತಕ್ಕದ್ದು' ಎಂಬ ಕರಡು ನಿಬಂಧನೆಗೆ ಆಕ್ಷೇಪ ಯಾ ತಿದ್ದುಪಡಿಗಳನ್ನು ಈ ತಿಂಗಳು ಅಂತ್ಯದೊಳಗೆ ಸಂಬಂಧಪಟ್ಟ ಮುನಿಸಿಪಲ್ ಪ್ರೆಸಿಡೆಂಟರುಗಳಿಗೆ ಕಳುಹಿಸಬಹುದೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಫ್ರೇಜರ್‌ಪೇಟೆ ಬೆಂಚು ಮೇಜಿಸ್ಟ್ರೇಟರುಗಳು ಮಿ. ಗಳಾದ ಎಸ್. ಎನ್. ರಾಮಶೆಟ್ಟಿಯವರು, ವಿ. ನ್ಯೆಲಾರ ಶೆಟ್ಟಿಯವರು, ಹೆಬ್ಬಾಲೆ ಹೊನ್ನಪ್ಪನವರು ಮತ್ತು ನಲ್ಲೂರು ಕಾಳೇಗೌಡರವರ ಅವಧಿಯು ಕಳೆದ ತಾ. 25 ರಿಂದ 5 ವರ್ಷಗಳ ವರೆಗೆ ಮುಂದುವರಿಸಲ್ಪಟ್ಟಿರುವದಲ್ಲದೆ ಮಿ. ಮುರುಗಪ್ಪನವರ ಬದಲು ಮಿ. ಕಾವೇರಿ ಪಾಚಾರವರು ನೇಮಿಸಲ್ಪಟ್ಟಿರುವರು.

ವೀರಾಜಪೇಟೆಯ ಬೆಂಚ್ ಮೇಜಿಸ್ಟ್ರೇಟರುಗಳ ಕೋರ್ಟಿನಲ್ಲಿ ಖಾಲಿಯಾಗಿದ್ದ ಸ್ಥಳಗಳಿಗೆ ರಾ. ಬಾ. ಅಪ್ಪಾರಂಡ ಚಂಗಪ್ಪನವರ ಬದಲು ಅವರ ಮಗ ತಿಮ್ಮಯ್ಯನವರೂ, ಮಿ. ಕಂಬೀರಂಡ ಗಣಪತಿಯವರ ಬದಲು ಮಿ. ಪಾಲೇಕಂಡ ಬಿಯ್ಯಮ್ಮನವರೂ ಬೆಂಚು ಮೇಜಿಸ್ಟ್ರೇಟರುಗಳಾಗಿಯೂ, ಮಿ. ಮಡಿಕೇರಿಯಂಡ ಸೋಮಯ್ಯನವರು ಸದರಿ ಕೋರ್ಟಿನ ಅಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿರುವರು.

ಹಿಂದೂ ದೇಶ.

ಬರುವ ವರ್ಷದ ಕಾಂಗ್ರೆಸ್ ಅಧಿವೇಶನವು ಪಂಜಾಬಿನಲ್ಲಿ ನಡೆಯಬೇಕೆಂದು ಪಂಜಾಬ್ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ತ್ರಿಪುರಿಯಲ್ಲಿ ಆಹ್ವಾನಿಸಿಯುವದೆಂದು ವಾರ್ತೆ. 1929 ರಲ್ಲಿ ಕಾಂಗ್ರೆಸ್ ಅಧಿವೇಶನವು ಪಂಜಾಬಿನಲ್ಲಿ ಜರುಗಿತ್ತು.

ಬರೋಡ ಸಂಸ್ಥಾನದ ಶ್ರೀಮನ್ಮಹಾರಾಜ ಸರ್ ಸಯ್ಯಾಜಿರಾವ್ ಗಾಯಕ್‌ವಾಡರವರು ಕಳೆದ ಸೋಮವಾರ ದಿನ ಬೊಂಬಾಯಿ ನಗರದಲ್ಲಿ ನಿಧನಹೊಂದಿದರೆಂದೂ, ಅವರು 1881 ರಿಂದ ರಾಜ್ಯಾಧಿಪತ್ಯರಾಗಿ ಯಶಃ ಕೀರ್ತಿಗಳಿಂದ ರಾಜ್ಯಭಾರ ಮಾಡಿ ಜನಾನುರಾಗಿಯಾಗಿದ್ದರೆಂದೂ ತಿಳಿಯುತ್ತೇವೆ.

ಭಾರತ ದೇಶದ ಅರಸರಿಗೂ, ಧನಾಢ್ಯರಿಗೂ ರೊಮೇನಿಯ ದೇಶದ ಅರಸರಾದ ಕಿಂಗ್ ಕೆರೊಲ್‌ರವರು ಆದರ್ಶರಾಗಿದ್ದಾರೆ. ಕ್ರಿಸ್ ಮಸ್ ಹಬ್ಬದ ಕಾಲ ಇವರು ಒಂದು ಸಾವಿರ ನೇಗಿಲುಗಳನ್ನು ದೇಶದ ರೈತರಿಗೆ ದಾನವಿತ್ತರು.

ಒರಿಸ್ಸಾದಲ್ಲಿ ಹೊಸ ಬಿಕ್ಕಟ್ಟು.

ನೀಲಗಿರಿ ಪ್ರಜಾಮಂಡಲಕ್ಕೆ ನಿಶೇಧಾಜ್ಞೆ.

ನೀಲಗಿರಿ ಸಂಸ್ಥಾನದ ಪ್ರಜಾಮಂಡಲವು ಕಾಯಿದೆ ಬಾಹಿರ ಸಂಸ್ಥೆಯೆಂದೂ, ಅದರಿಂದ ದೇಶಕ್ಕೆ ಅಹಿತವಾಗುವದೆಂದೂ ಅಲ್ಲಿಯ ಸರಕಾರದವರು ಸಾರಿರುವರು. ಕಳೆದ ನೆವ್ಹಂಬರಿನಲ್ಲಿ ಈ ಪ್ರಜಾಮಂಡಲ ಹಾಗೂ ಸಂಸ್ಥಾನಾಧಿಕಾರಿಗಳೊಳಗೆ ಶ್ರೀ ಎಚ್. ಕೆ. ಮಹತಾಬ್‌ರವರ ಮಧ್ಯಸ್ಥಿಕೆಯಿಂದ ರಾಜಿಯಾಗಿತ್ತು. ಈ ರಾಜಿ ಪತ್ರವು ಕೊಲೆಮಾಡಲ್ಪಟ್ಟ ಮೇಜರ್ ರಾಜಕೀಯ ಏಜಂಟನಾದ ಬಜಲ್‌ಗೆಟರಿಂದ ರುಜು ಹಾಕಲ್ಪಟ್ಟಿತ್ತು. ಅದರ ಮೇಲೆ ಈ ರಾಜಿ ತೀರ್ಮಾನವು ಅಲ್ಲಿಯ ಅರಸರ ಹಾಗೂ ಬ್ರಿಟಿಷ್ ಪ್ರತಿನಿಧಿಯ ಸಮ್ಮುಖದಲ್ಲಿ ನಡೆದದ್ದೆಂದು ಖಚಿತವಾಗುತ್ತದೆ. ಇಂದು ಈ ಸಂಧಾನವನ್ನು ಅಲ್ಲಗಳೆದು ಪ್ರಜಾಮಂಡಲವು ನ್ಯಾಯಬಾಹಿರವಾದ ಸಂಸ್ಥೆಯೆಂದು ಉದ್ಘೋಷಿಸಿದ ರಾಜರ ಈ ನಡತೆಯು ಅಲ್ಲಿ, ರಾಜಕೋಟೆಯಲ್ಲಿ ಆದ ಬಿಕ್ಕಟ್ಟಿಗಿಂತ ತೀವ್ರ ಅನಾಂತರವನ್ನು ತಂದೊಡ್ಡಿದೆ. ರಾಜಕೋಟೆಯ ಸಂಧಾನವು ಬರೇ ರಾಜರ ಒಪ್ಪಿಗೆಯಿಂದ ನಡೆದಿರುವದು. ಅದ್ದರಿಂದ ನೀಲಗಿರಿ ಸಂಸ್ಥಾನದ ಪ್ರಶ್ನೆಯು ಬಹು ಕಠಿಣ ತರದ್ದಿರುವದು. ರಾಜಕೋಟೆ ಅವ್ಯವಸ್ಥೆಯನ್ನು ನಿರೋಧಿಸಿ ಬೊಂಬಾಯಿ ಮಂತ್ರಿಮಂಡಲವು ರಾಜೀನಾಮೆಯನ್ನಿತ್ತದ್ದೇ ಅದರಿ ಒರಿಸ್ಸಾ ಮಂತ್ರಿಮಂಡಲವೂ ನೀಲಗಿರಿ ಸಂಸ್ಥಾನದ ಅವ್ಯವಸ್ಥೆಯನ್ನು ನಿರೋಧಿಸಿ ತಮ್ಮ ಅಧಿಕಾರಕ್ಕೆ ತಿಲಾರ್ಪಣ ಗೈಯಲು ಸಿದ್ಧವಿರುವದು. ಸಂಸ್ಥಾನದ ವಾತಾವರಣ ದಿನೇ ದಿನೇ ಭೀಕರ ಸ್ವರೂಪವನ್ನು ತಾಳುತ್ತಿದೆ. ರಾಜಕೀಯ ಧುರೀಣರು ಮಹಾತ್ಮ ಗಾಂಧೀಯವರ ಅಭಿಪ್ರಾಯವನ್ನು ಕಾಯುತ್ತಿರುವರು.

ಹಿಂಡೋಲ್ ಸಂಸ್ಥಾನದ ಅವ್ಯವಸ್ಥೆ.

ಹಿಂಡೋಲ್ ಸಂಸ್ಥಾನದ ಪ್ರಜಾಮಂಡಲವನ್ನು ನೀತಿ ಬಾಹಿರ ಸಂಸ್ಥೆಯೆಂದು ನಿಷೇಧಿಸಿದರು. ಸಂಸ್ಥಾನದ ಪೋಲೀಸರು ಪ್ರಜಾಮಂಡಳದ ಕಚೇರಿಯಲ್ಲಿ ಶೋಧನೆ ನಡೆಸಿ ಪ್ರಜಾಮಂಡಲದ ಉಪಾಧ್ಯಕ್ಷರನ್ನು ಸೆರೆಹಿಡಿದಿರುವರು.

ಹೀಗೆ ದೇಶೀಯ ಸಂಸ್ಥಾನಗಳಲ್ಲಿ ಕೋಲಾಹಲವು ಮೇರೆ ಮೀರಿ ನಡೆಯುತ್ತಿದೆ. ಅರಸರು ಸಾರ್ವಭೌಮ ಸರ್ಕಾರದ ಹಾಗೂ ತಮ್ಮ ಸ್ವಾರ್ಥ ದೃಷ್ಟಿಯಿಂದ ಜನತೆಯ ಮೂಲಭೂತ ಹಕ್ಕುಗಳನ್ನು ತೃಣೀಕರಿಸಿ ತಮ್ಮ ನಿರಂಕುಶ ವರ್ತನೆಯನ್ನು ನಿರಪರಾಧಿ ಜನರ ಮೇಲೆ ತೋರಿ ಈ ರೀತಿಯ ಅವ್ಯವಸ್ಥೆಗೆ ಕಾರಣವಾಗಿರುತ್ತಾರೆ. ಸಂಸ್ಥಾನಾಧೀಶರು ತಮ್ಮ ಬಾಯಿಂದಾಡಿದ ಹಾಗೂ ಕೈಯ್ಯಲ್ಲಿ ರುಜು ಮಾಡಿದ ಸಂಧಾನ ಶರತುಗಳನ್ನು ತಮ್ಮ ಹಿತ ಚಿಂತಕರೆಂದು ತಾವು ನಂಬಿಕೊಂಡಿರುವ ಸ್ವಾರ್ಥ ಸಾಧಕರ ಮಾತಿಗೆ ಮರು

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಬ್ರಿಟನ್ ಮತ್ತು ಫ್ರಾನ್ಸ್ ಒಪ್ಪಂದ.

ಯುದ್ಧ ಸಂಭವಿಸಿದ ಪಕ್ಷ ಬ್ರಿಟನ್ ಮತ್ತು ಫ್ರಾನ್ಸಿನ ಧೋರಣೆಯು ಹೇಗಿರಬೇಕೆಂಬ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದು ಯುದ್ಧ ಸಂಭವಿಸಿದ್ದೇ ಆದರೆ ಬ್ರಿಟನಿನ ಸರ್ವ ಸೇನೆಯೂ ಫ್ರಾನ್ಸಿನ ಸಹಾಯಕ್ಕೂ, ಫ್ರಾನ್ಸಿನ ಸೇನೆಯು ಬ್ರಿಟನಿಗೂ ಪರಸ್ಪರ ಸಹಾಯ ಮಾಡಬೇಕೆಂಬ ಫ್ರಾನ್ಸಿನ ಮಂತ್ರಿಗಳಾದ ಮಿ. ಬೊನೆಟರ ಅಭಿಪ್ರಾಯವನ್ನು ಅಂಗೀಕರಿಸಿತು. ಈ ಎರಡು ರಾಷ್ಟ್ರಗಳ ಪ್ರಗತಿಗೆ ಕುಂದು ತರುವಂತಹ ಯಾವುದೊಂದು ಕಾರ್ಯವು ಇತರ ಯಾವ ರಾಷ್ಟ್ರದಿಂದ ಮಾಡಲ್ಪಟ್ಟರೂ ಅದನ್ನು ಇದುರಿಸಲು ಈ ಎರಡು ರಾಷ್ಟ್ರಗಳು ಒಂದಾಗಬೇಕು. ಈ ನಿರ್ಣಯವು ಅಂಗೀಕರಿಸಲ್ಪಟ್ಟಿರುವುದರಿಂದ ಈ ಎರಡು ಪ್ರಜಾ ಸತ್ತಾತ್ಮಕ ರಾಷ್ಟ್ರಗಳಲ್ಲಿಯ ಐಕ್ಯತೆಯು ಬೆಳೆದು ಅಖಂಡವಾದ ಅಭಿವೃದ್ಧಿಯನ್ನು ಈ ರಾಷ್ಟ್ರಗಳು ಪಡೆಯುವವೆಂದು ಚೇಂಬರ್ಲೇನರು ಉದ್ಗರಿಸಿರುವರು. ಅಲ್ಲದೆ ಫ್ರಾನ್ಸ್-ಇಟೆಲಿಗಳೊಡನಾದ ಸಂಧಾನದಲ್ಲಿ ತನಗೆ ನಂಬಿಕೆ ಇಲ್ಲವೆಂದೂ ಜರ್ಮನಿಯು ಫ್ರಾನ್ಸನ್ನು ಮುತ್ತಿದರೆ ಆ ನಿವಾರ್ಯವಾಗಿ ಬ್ರಿಟನು ಫ್ರಾನ್ಸಿಗೆ ಸಹಾಯ ಮಾಡುವದೆಂದೂ ಹೇಳಿರುವರು.

ಇದರಿಂದ ಬ್ರಿಟನು ಮಾತಿನ ಮಲ್ಲತನದಲ್ಲಿ ಫ್ರಾನ್ಸನ್ನು ತನ್ನ ಸ್ನೇಹಿತನನ್ನಾಗಿ ಇಟ್ಟುಕೊಳ್ಳುವನೆಂದು ನಂಬಿದ್ದ ಇಟೆಲಿಯ ಆಶೆಯು ನಿರಾಶೆಯಾಗಿದೆ. ಅಂತೂ ಫ್ರಾನ್ಸ್-ಬ್ರಿಟನ್‌ಗಳ ಬಾಂಧವ್ಯವು ಈ ಒಪ್ಪಂದದಿಂದ ಬಲಪಟ್ಟಿರುವದು ಝೆಕೊಸ್ಲೊವಾಕಿಯಾವನ್ನು ಬಲಿ ಕೊಡುವಾಗ ಚೇಂಬರ್ಲೇನರು ಫ್ರಾನ್ಸಿಗೆ ಧೈರ್ಯ ಹೇಳಿದಂತೆ ಈ ಒಪ್ಪಂದವಾಗುವದೆಂಬದು ಮುಂದೆ ನೋಡತಕ್ಕ ವಿಚಾರ

ಜರ್ಮನಿ

ಪ್ರಪಂಚವೇ ಎದುರು ನೋಡುತ್ತಿದ್ದ ಹಿಟ್ಲರನ ಭಾಷಣವು ಬಿರು ನುಡಿಗಳ ಜರ್ಝರಿತ ಕೋಲಾಹಲದಿಂದ ತುಂಬಿರಬಹುದು. ಕ್ರಾಂತಿಯ ಮೂರ್ತಿಯೇ ಭಾಷಣದಿಂದ ಉದ್ಘಾತವಾಗಬಹುದೆಂದು ನಂಬಿದ್ದರು. ಆದರೆ ಮೊದಲೊಮ್ಮೆ ಮಾಡಿದ ಭಾಷಣದಂತೆ ಈ ನಾರಿಯೊದರೂ ನಯ ನುಡಿಗಳಿಂದಲೇ ತುಂಬಿತ್ತು. ಈ ನಯ ನುಡಿಗಳಿಂದಲೇ ಇಟೆಲಿ ಮತ್ತು ಜರ್ಮನಿಯು ಸಹಾಯಕ ರಾಷ್ಟ್ರಗಳೆನ್ನುತ್ತ ಇವೆರಡು ಸೇರಿ ಯೂರೋಪಿನ ನಾಗರೀಕತೆಯನ್ನು ಉದ್ಧರಿಸುವೆವೆಂಬದ್ದಾನೆ. ಇಷ್ಟು ಬಹಿರಂಗವಾಗಿ ಈ ಮೊದಲು ಜರ್ಮನಿಯು ಇಟೆಲಿಯೊಡನಿರುವ ಮೈತ್ರಿಯನ್ನು ಹೊರಪಡಿಸಿದ್ದಿಲ್ಲ. ಇಂದಿನ ಅವರ ಭಾಷಣದಿಂದ ಭೂಮಧ್ಯ ಸಮುದ್ರದಲ್ಲಿ ಇಟೆಲಿಯ ಸ್ಥಾನವನ್ನು ಬಲಪಡಿಸುವೆನೆಂದರ್ಥ. ಫ್ರಾನ್ಸಿನಿಂದ ಜರ್ಮನಿಯ ವಸಾಹತುಗಳನ್ನು ಕಿತ್ತುಕೊಳ್ಳಲು ಪೌರೋಹಿತ್ಯವೆಂದರ್ಥ. ಅಷ್ಟೇ ಅಲ್ಲ; ಜರ್ಮನಿಯ ಆರ್ಥಿಕ ಸ್ಥಿತಿ, ವಾಸಸ್ಥಳಾಡಚಣೆ ಇವನ್ನು ಮುಂದು ಮಾಡಿಕೊಂಡು ಆ ಕಾಲನಿಗಳಲ್ಲಿ ತಾವು ಸೈನ್ಯವಿರಿಸುವದಿಲ್ಲವೆಂದೂ ಆರ್ಥಿಕ ದೃಷ್ಟಿಯಿಂದ ವಸಾಹತುಗಳನ್ನು ಜರ್ಮನಿಗೆ ಹಿಂತಿರುಗಿಸುವದೇ ಲೇಸೆಂದೂ, ವಸಾಹತುಗಳಿಂದ ಪ್ರಯೋಜನವಿಲ್ಲವೆಂದಾದರೆ ಬ್ರಿಟನ್ ಮತ್ತು ಫ್ರಾನ್ಸಿಗೆ ಅವನ್ನು ಹಿಂತಿರುಗಿ ಕೊಡಲು ಹೊಟ್ಟೆಯುರಿಯೇನೆಂದೂ ಹಿಟ್ಲರನು ಪ್ರಶ್ನಿಸಿರುವನು. ಇದನ್ನು ನೋಡಿದರೆ ಇದರ ಪರಿಣಾಮ ಯಲವಾಗ, ಹೇಗೆ ಬರುವದೆಂದು ತಿಳಿಯಸಾಧ್ಯವಾಗಿದೆ. ಜರ್ಮನಿಯು ತನಗೆ ವಸಾಹತುಗಳು ಅಗತ್ಯ ಬೇಕೆನ್ನುವಾಗ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಕೌರವನಂತೆ ಒಂದು ಸೂಜಿ ಮೊನೆಯಷ್ಟು ಜಾಗವನ್ನೂ ಸಹ ಬಿಟ್ಟು ಕೊಡೆನೆಂದು ಉದ್ಗರಿಸುತ್ತವೆ. ಹಾಗಿರುವಾಗ ಹಿಟ್ಲರ್, ಚೇಂಬರ್ಲೇನ್ ಮತ್ತು ಫ್ರಾನ್ಸಿನ ಮುಖ್ಯ ಮಂತ್ರಿ ಡಾಲ್ಡಿಯವರೊಡನಾದ ಮೈತ್ರಿಯು ಹೇಗೆ ಉಳಿದೀತು? ಇದೀಗ ನಿರೀಕ್ಷಣೀಯ.

ಳಾಗಿ ತೃಣೀಕರಿಸಿ ಪ್ರಜೆಗಳ ಹಾಗೂ ತಮ್ಮ ಪ್ರಗತಿಗೆ ಕುಂದನ್ನು ತರುವದು ಖೇದಾಸ್ಪದದ ವಿಚಾರ. ಇದರಿಂದ ವ್ಯಕ್ತವಾಗುವ ಒಂದು ವಿಚಾರವೆಂದರೆ, ಪೂಜ್ಯ ಗಾಂಧಿಜಿಯವರು 'ಹರಿಜನ' ಪತ್ರಿಕೆಯಲ್ಲಿ ಹೇಳಿರುವಂತೆ ಸಂಸ್ಥಾನಾಧೀಶ್ವರರು ಅಲ್ಲಿಯ ಯುರೋಪ್ಯ ರೆಸಿಡೆಂಟರುಗಳ ಕೈಗೊಂಬೆಗಳು. ಆಳರಸರು ಆಡಿದ ಸಂಧಾನ ಶರತುಗಳನ್ನು ಅವರು ಪುನಹ ಅವರ ಗಂಟಲಲ್ಲೇ ತುರುಕಿಸುತ್ತಿರುವರು. ಅರಸರು ತಮ್ಮ ಸ್ವಹಿತ ಚಿಂತನೆಯಿಂದ ತಮ್ಮ ಜನತೆಗೆ ಎರಡೆಣಿಸುವದು ಎಂದೂ ಶೋಭಿಸದು.

ಭಾರತದ ಆಶ್ರಿತ ಸಂಸ್ಥಾನಗಳಲ್ಲೆಲ್ಲಾ ಒಂದಿಲ್ಲೊಂದು ಪಥದಲ್ಲಿ ಜವಾಬ್ದಾರಿ ಸರ್ಕಾರವನ್ನು ಪಡೆಯಬೇಕೆಂಬ ಕಾಂಕ್ಷೆಯು ಜನತೆಯಲ್ಲಿ ಮೂಡಿದೆ. ಇಂದು ಈ ದೇಶೀಯ ಚಳವಳವು ಅಲ್ಲಿಯ ಪ್ರಜೆಗಳ ಮತ್ತು ಸರ್ಕಾರದೊಡನೆ ನಡೆಯುತ್ತಿರುವದು. ಆದರೆ ಒಂದು ಮಾತನ್ನು ನಾವು ಮರೆಯಲಾಗದು. ಇಂದಿನ ಸಂಸ್ಥಾನಗಳ ಜಗಳವು ಮುಂದೆ ಸಾರ್ವಭೌಮ ಸರ್ಕಾರ ಹಾಗೂ ಕಾಂಗ್ರೆಸಿನೊಡನೆ ಸಂಭವಿಸಬಹುದಾದ ಘರ್ಷಣೆಯ ತಳಹದಿಯಾಗಿರುವದು. ಒಂದಿಲ್ಲೊಂದು ದಿನ ಸಂಸ್ಥಾನಗಳು ತಮ್ಮ ಇಚ್ಛೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಅಂದು ಆಳರಸರ ಸ್ಥಿತಿಯು ಯಾವ ಅಂತಸ್ಥಿಗಿಳಿಯಬಹುದೆಂಬವನ್ನು ನಿರೀಕ್ಷಿಸಿ ಸಂಸ್ಥಾನಾಧೀಶರು ತಮ್ಮ ಪ್ರಜೆಗಳ ಕೇಳಿಕೆಯನ್ನು ಸಲ್ಲಿಸಿ ಕೃತಾರ್ಥರಾಗಬೇಕಿದೆ.

ಚೈನಾ-ಜಪಾನ್.

ಜಪಾನಿನಲ್ಲಿ ತಾವು ಚೈನಾದವರ ಮೇಲೆ ಹೂಡಿರುವ ಯುದ್ಧದ ವಿಚಾರವಾಗಿ ಮತಭೇಧ ಬಂದಿದೆ. ಕೆಲವರು ಯುದ್ಧ ಹೂಡುವ ಮೊದಲು ಅದು ಇಷ್ಟು ದಿನ ನಡೆಯಬಹುದೆಂದು ಕಂಡು ಹಿಡಿದು ಅದಕ್ಕೆ ಸರಿಯಾದ ಸರಂಜಾಮುಗಳನ್ನು ಮಾಡಿಕೊಳ್ಳದ್ದು ತಪ್ಪೆಂದೂ, ಮತ್ತೆ ಕೆಲವರು ಈ ಧೀರ್ಘ ಯುದ್ಧದಿಂದ ಬೇಸತ್ತಿರುವೆವೆಂದೂ ಅನ್ನುತ್ತಿರುವರು. ಇದರಿಂದ ಅವರವರೊಳಗೆ ಮತಭೇಧ ಬಂದಿದೆ ಪ್ರಸಿದ್ಧ ಭವಿಷ್ಯವಾದಿ ಎಡ್ವರ್ಡ್ F ಲಿಂಡೋರರವರೆಂದಂತೆ 1939 ಜಪಾನಿನಲ್ಲಿ ಅಂತರ್ಯುದ್ಧವು ಪ್ರಾರಂಭಿಸಲ್ಪಡುವ ಸಂಭವವು ಕಂಡು ಬರುತ್ತದೆ. ಆದರೆ ಇತ್ತ ಚೀನಾದ ಸರ್ವಸೇನಾಧಿಕಾರಿಯಾದ ಚಿಯಾಂಗ್ ಕೈಶೇಕರವರು ತಮ್ಮಗೊಂದು ಭಾಷಣದಲ್ಲಿ ಜಪಾನಿನವರು ತಾವು ನಿರೀಕ್ಷಿಸಿದ್ದಕ್ಕಿಂತಲೂ ಎರಡು ಪಾಲು ಸೈನ್ಯವನ್ನು ಚೀನಾದವರ ಮೇಲೆ ತಂದು ನಿಲ್ಲಿಸಬೇಕಾಯಿತೆಂತಲೂ, ಯುದ್ಧವು ಒಂದೂವರೆ ವರ್ಷದಿಂದ ನಡೆಯುತ್ತಾ ಬಂದಿದ್ದರೂ ಚೀನಾದೇಶದ ಅಪಾರ ವ್ಯಪನಾಯದ ಹುಟ್ಟುವಳಿಯಿಂದ ತಮಗೆ ಬೇಕಾದಷ್ಟು ದ್ರವ್ಯಸಹಾಯವು ಇನ್ನೂ ಒದಗುತ್ತಾ ಇದೆಯೆಂದೂ, ಚೀನಾದವರ ಆರ್ಥಿಕ ಬಲವು ಅಪಾರವಾಗಿರುವದಲ್ಲದೆ ಅವರಿಗೆ ಅಪಜಯವಾದೀತೆಂಬ ಭಯವು ಇಲ್ಲನೇ ಇಲ್ಲವೆಂದೂ ಹೇಳಿದರು. ಚೀನಾ ಸರಕಾರದವರು ಬರ್ಮಾದಿಂದ ಚೀನಾದ ನೈರುತ್ಯದಿಕ್ಕಿನಲ್ಲಿರುವ ಯುನ್ನಾನಿಗೆ ಸೈನ್ಯಸರಂಜಾಮು ಕಳುಹಿಸಲು ಈಗಾಗಲೇ 1900 ಲಾರಿಗಳನ್ನು ಬ್ರಿಟನ್ನಿನವರಿಂದ ತರಿಸುವವರಿದ್ದಾರೆ.

ಮಾಂಚೂಕ್ವೊ.

ಮೊದಲೊಮ್ಮೆ ಇಲ್ಲಿ ರಶ್ಯಾಕ್ಕೂ, ಜಪಾನಿಗೂ ಘರ್ಷಣೆ ನಡೆದಿತ್ತು. ಈಗ ಪುನಃ ಈ ಗಡೀ ಸರಹದ್ದಿನಲ್ಲಿ ತೊಂದರೆಯುಂಟಾಗಿದೆ. ಮಾಂಚುಕ್ವೊ ಸಿಪಾಯಿಗಳು ರಷ್ಯಾದ ಗಡಿಯನ್ನು ಕಾಯುವ ಸಿಪಾಯಿಗಳ ಮೇಲೆ ಗುಂಡು ಹಾರಿಸಿದರೆಂದೂ ಅನಂತರ ನಡೆದ ಕದನದಲ್ಲಿ 7 ಮಂದಿ ಗಾಯಗೊಂಡಿರುವರಾಗಿಯೂ ವಾರ್ತೆ. ಜಪಾನಿನವರು ಆ ಕಡೆ ಇರುವ ತಮ್ಮ ಗಡಿಯನ್ನು ಸರಿಪಡಿಸಿಕೊಳ್ಳುತ್ತಿರುವರು.

ಸ್ಪೈಯಿನ್ ಅಂತರ್ಯುದ್ಧ.

ಸ್ಪೈಯಿನ್ ದೇಶದ ಕೇವಲ ಉತ್ತರ ರಾಂತ್ಯದಲ್ಲಿರುವ ಆಧಿಪತ್ಯವೆಂದರೆ ಗೆರೋನವೆಂಬುದು. ದಂಗೆಯೋರರು ಬಾರ್ಸಿಲೋನವನ್ನು ವಶಪಡಿಸಿಕೊಂಡ ಮೇಲೆ ಈಶಾನ್ಯದ ಸಮುದ್ರ ತೀರದಲ್ಲಿಯೇ ಸುಮಾರು 40 ಮೈಲು ಮುಂದೆ ನುಗ್ಗಿರುವರು. ಬ್ಲೇನ್ಸ್ ಎಂಬ ಊರು ಅವರ ಕೈವಶವಾಗಿದ. ಈಗ ಈ ಊರಿಗೆ 60 ಮೈಲು ದೂರದಲ್ಲಿರುವ ಗೆರೋನವನ್ನು ಸಹ ವಶಪಡಿಸಿಕೊಂಡಿರುವರು. ಸರಕಾರದವರು ದಂಗೆಖೋರರನ್ನು ಎದುರಿಸಲಾರದೆ ಅವರ ಸಿಡಿಮದ್ದಿನ ಹಾಗೂ ಬಾಂಬುಗಳ ಹಾವಳಿಯಿಂದ ತಪ್ಪಿಸಿಕೊಳ್ಳಲು ನೆಲಮಾಳಿಗೆಗಳಲ್ಲಿ ಕೆಲಸ ಮಾಡುತ್ತಿರುವರು. ದಂಗೆಖೋರರು ಈಗ ಫಿಗರೇಸ್ ನಗರವನ್ನು ಮುತ್ತುತ್ತಿರುವರು. ಇದರ ಮೇಲೆ ಬಾಂಬಿನ ಮಳೆ ಸುರಿಸಿದಾಗ 150 ಮಂದಿ ಹತರಾದರು. 200 ಮಂದಿಗೆ ವಿಶೇಷ ಗಾಯಗಳಾದವು. ಹೀಗೆ ದಂಗೆಖೋರರು ಯಾವ ತಡೆಯೂ ಇಲ್ಲದೆ ಮುಂದರಿಯುತ್ತಿರುವರು.

ನೋಟೀಸು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್, ಉಡುಪಿ ಲಿಮಿಟೆಡ್ ಮಡಿಕೇರಿ ಬ್ರಾಂಚ್.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಹೊಂದಿಕೊಂಡ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ಪಾವತಿ ಮಾಡದೆ ಇರುವದರಿಂದ ಅವರಿಗೆ ರಿಜಿಸ್ಟ್ರಿ ನೋಟೀಸುಗಳನ್ನು ಬಿಟ್ಟಲ್ಲಿ ಅವು ಜಾರಿ ಆಗದೆ ಹಿಂದೆ ಬಂದಿರುವ ಕಾರಣ ಸದ್ರಿಯವರ ವಾಯಿದೆ ತೀರಿ ವಾರೀಸುದಾರರು ಸದರಿ ಸಾಲದ ಅಸಲು ಬಡ್ಡಿ ಮತ್ತು ಈ ನೋಟೀಸು ಪ್ರಕಟಣೆ ಚಾರ್ಜು ವಗೈರೆ ಬ್ಯಾಂಕಿಗೆ ಪಾವತಿ ಮಾಡಿ ಸದರಿ ನಗಗಳನ್ನು ತಾ. 10 3-1939 ರ ಒಳಗೆ ಬಿಡಿಸಿಕೊಂಡು ಹೋಗತಕ್ಕದ್ದು. ತಪ್ಪಿದರೆ ತಾ. 11-3-1939 ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ಯಾ ತದನಂತರ ಬ್ಯಾಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ ಎಂತ ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂ.	ಸಾಲಗಾರನ ಹೆಸರು ವಿಳಾಸ	ಮೊಬಲಗು
700/36	K. ಮುಂದಣ್ಣ, ಸೋಮಯ್ಯನವರ ಮಗ, ಮೋಟರ್ ಡ್ರೈವರ್, ಗಣಪತಿ ಬೀದಿ, ಮಡಿಕೇರಿ.	35-0-0 ಮತ್ತು ಅದರ ಮೇಲಣ ಬಡ್ಡಿ ವಗೈರೆ.
674/37	ಕೊರಗಪ್ಪ, ತಿಮ್ಮಪ್ಪನವರ ಮಗ, ಕಂಡಕ್ಟರು, ಪಿ ವಿ. ಮೋಟಾರ್ ಸರ್ವಿಸು, ಮಡಿಕೇರಿ.	10-0-0 ಮತ್ತು ಅದರ ಮೇಲಣ ಬಡ್ಡಿ ವಗೈರೆ.

ಬ್ಯಾಂಕ್ ಆಫೀಸು:-ಮಡಿಕೇರಿ.
ತಾ. 9-2-1939.

ಪಿ. ಪಿ. ಶೆಣೈ
ಏಜಂಟ್.

ದೇಶೀಯ ಸಂಸ್ಥಾನಗಳು.

ಪಂಡಿತ ಜವಾಹರಲಾಲ್ ನೆಹರೂರವರ ಅಭಿಪ್ರಾಯ.



ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ದೇಶದ ಎಲ್ಲಾ ಮುಖಂಡರ ದೃಷ್ಟಿಯನ್ನು ತನ್ನೆಡೆಗೆಳೆಯಿತು. ಎಲ್ಲಾ ಪತ್ರಿಕೆಗಳೂ ಮುಖಂಡರ ಪ್ರಕಟಣೆಗಳಿಂದ ತುಂಬಿ ಹೋದವು. ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂಬ ಶಬ್ದಗಳನ್ನು ಅವುಗಳ ಅರ್ಥವಿವೇಚನೆ ಇಲ್ಲದೆ ಉಪಯೋಗಿಸಿಯೂ ಆಯಿತು. ಇದರಿಂದ ಏನಿಲ್ಲದಿದ್ದರೂ ಒಂದು ಪ್ರಯೋಜನವಾಗಿದೆ. ಭಾರತದ ಸ್ಥಿತಿಯನ್ನು ಕೂಲಂಕುಶವಾಗಿ ಯೋಚಿಸಿ ಕಾರ್ಯಕ್ರಮವನ್ನು ಕೈಕೊಳ್ಳಲು ಇದರಿಂದ ಅನುವಾಯಿತು. ನಮ್ಮ ಮುಂದಿರುವ ಸಮಸ್ಯೆಯೆಂದರೆ ಭಾರತದ ಪೂರ್ಣ ಸ್ವಾತಂತ್ರ್ಯ. ಭಾರತದಲ್ಲಿ ಸ್ವತಂತ್ರ ಹಾಗೂ ಪ್ರಜಾಸತ್ತಾತ್ಮಕ ರಾಜನೀತಿಯ ಸ್ಥಾಪನೆ. ಈ ಮೂಲ ಧ್ಯೇಯದಂತೆಯೇ ಎಲ್ಲಾ ಕಾರ್ಯಕಲಾಪಗಳೂ ಉದ್ದೇಶವಾಗಬೇಕಾಗಿದೆ. ಆದರೆ ನಾವು ಕ್ಷುಲ್ಲಕ ಕಾರಣಗಳಿಗಾಗಿ, ಆ ಆಫೀಸು, ಈ ಕಚೇರಿ ಎಂಬ ಅಧಿಕಾರ ಲಾಲಸೆಗಾಗಿ ಪ್ರಯತ್ನಿಸುವದು ಶೋಚನೀಯ ವಿಚಾರ.

ಈ ಮಧ್ಯೆ ಜಗತ್ತಿನ ರಾಷ್ಟ್ರಗಳು ರಾಜ್ಯ ವಿಸ್ತರಣಾ ಲಾಲಸೆಯಿಂದ ತಮ್ಮ ರಕ್ತವನ್ನು ಚೆಲ್ಲಲು ಮುಂದರಿಯುತ್ತಿರುವವು. ಈ ಮಧ್ಯೆ ಭಾರತ ಭೂಮಿಯು ಅಮೋಘ ಚಳವಳದಿಂದ ಅಲ್ಲೋಲಕಲ್ಲೋಲವಾಗಿದೆ. ಮಧ್ಯೆ ಮಧ್ಯೆ ಅಧಿಕಾರ ಲಾಲಸೆಯಿಂದ ಪೀಡಿತರಾದವರ ಹಾವಳಿಯು ತಮ್ಮ ಉಚ್ಚ ಧ್ಯೇಯವನ್ನು ಮರೆಮಾಡುತ್ತಿದೆ. ಇಂಥಾ ಕಠಿಣ ಸಮಸ್ಯೆಗಳನ್ನು ನಾವು ಎದುರಿಸುವದಾದರೂ ಹೇಗೆ?

ಮುಂದಿನ ಸಮರಕ್ಕೆ ಗಾಂಧೀಜೀಯವರು ಸನ್ನದ್ಧರಾಗುತ್ತಿರುವರು.

ಇಂದು ನಮ್ಮೆದುರಿರುವ ಸಮಸ್ಯೆಗಳಲ್ಲಿ ಅತ್ಯಂತ ಜಟಿಲ ಪ್ರಶ್ನೆಯೆಂದರೆ ಸಂಸ್ಥಾನಗಳಲ್ಲಿ ಜನತೆಯ ಹಾಗೂ ಅಧಿಕಾರಿಗಳ ಚಳವಳ. ಸಂಸ್ಥಾನದ ಪ್ರಜೆಗಳು ನಾಕಷ್ಟು ದಿನ ಅಳರವರ ಅನ್ಯಾಯದ ಅತ್ಯಾಚಾರಗಳನ್ನು ಸಹಿಸಿರುವರು. ಇನ್ನು ಮುಂದೆ ಅವರು ಈ ಅನ್ಯಾಯತ್ವವನ್ನು ಸಹಿಸಲಾರರು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿನ ಆವರಲ್ಲಿಯ ಲಕ್ಷೋಪಲಕ್ಷ ಜನರು ಎಚ್ಚೆತ್ತು ತಮ್ಮಿಂದ ಅಪಹರಿಸಲ್ಪಟ್ಟ ಮೂಲಭೂತ ಹಕ್ಕುಗಳನ್ನು ಪಡೆಯಲು ಕಂಕಣಬದ್ಧರಾಗಿರುವರು. ಇಂದು ನಾವು ಸಂಸ್ಥಾನಗಳಲ್ಲಿ ಅನ್ಯಾಯತ್ವವನ್ನು ಪ್ರೋತ್ಸಾಹಿಸುವ ಬ್ರಿಟಿಷ್ ಸಾರ್ವಭೌಮತ್ವವನ್ನು ಅದರ ಕರಾಳ ಸ್ವರೂಪದಲ್ಲಿ ಎದುರಿಸುತ್ತೇವೆ. ಎಂದಿಗಿಂತ ಇಂದು ಈ ಸಾರ್ವಭೌಮತ್ವವನ್ನು ನಯ ಹಾಗೂ ಕಠಿಣೋಕ್ತಿಗಳಿಂದ ಎದುರಿಸುವ ವ್ಯಕ್ತಿಯೆಂದರೆ ಪೂಜ್ಯ ಗಾಂಧಿಜಿಯವರು. ನಮ್ಮ ಫೆಡರೇಶನ್, ಪ್ರಾಂತೀಕ ಸ್ವಾತಂತ್ರ್ಯ, ಇವು ನಮ್ಮ ಮೂಲ ಧ್ಯೇಯದ ನಂತರಬರುವಂತಹವು.

ರಾಜಕೋಟೆ ಸಂಸ್ಥಾನವು ಇಂದು ಈ ಚಳವಳದಲ್ಲಿ ಸಿಕ್ಕಿದೆ. ಆ ಸಾಧ್ವಿಮಣಿಯಾದ ಕಸ್ತೂರಿಬಾಯಿ ಗಾಂಧಿಯವರು ತಮ್ಮ ಈ ಮುಪ್ಪಿನ ಕಾಲದಲ್ಲಿ ಸೆರೆ ಸೇರಿಸುವುದಕ್ಕೆ ತೆರಳಿರುವರು. ಜಯಪುರದ ಜನರ ಬೇಳಿಕೆಯು ಎದುರು ಸ್ಪರ್ಧೆ ನಡೆಸುತ್ತಿದೆ. ಭಾರತದ ನವ್ಯ ನೇತಾರ ... ... [illegible] ... ತಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸಲು ಸೈನ್ಯ ಸಂಗ್ರಹಿಸುತ್ತಿರುವರು. ಬ್ರಿಟಿಷ್ ಸಂಕೂಲಿನ ಅತ್ಯಾಚಾರವು ಇಂದು ಧೀರಿಸ್ಥ ತಕ್ಕವಾಗಿ ಪರಿಣಮಿಸಿದೆ. ಮೈಸೂರಿನಲ್ಲಿ ಚಳವಳವು ತನ್ನ ತೈಲದಲ್ಲಿದೆ. ಮಹಾ ಸಂಸ್ಥಾನಗಳಾದ ಹೈದರಾಬಾದ್ ಮತ್ತು ಕಾಶ್ಮೀರಗಳಲ್ಲಿ ಚಳವಳವು ಪ್ರಾರಂಭಿಸಲ್ಪಟ್ಟಿದೆ.

ತನ್ಮಧ್ಯೆ ನಾವು ನಮ್ಮ ಅಲ್ಪ ವಿಷಯಗಳಿಗಾಗಿ ಸ್ಪರ್ಧೆಯಿಂದ ನಮ್ಮ ಪೂರ್ಣ ಧ್ಯೇಯವನ್ನು ಮರೆತಿರುವೆವು. ಸಂಸ್ಥಾನಗಳ ಈ ವಾತಾವರಣವು ನಮ್ಮನ್ನು ಎಚ್ಚರಿಸುತ್ತದೆ. ಮಾತೆಯ ಕರೆಯು ಕಿವಿಗೆ ಕೇಳಿಸುತ್ತಿದೆ. ಆದುದರಿಂದ ಸ್ತ್ರೀ ಪುರುಷರಾದಿಯಾಗಿ ಎಲ್ಲರೂ ಎಚ್ಚೇಳಿರಿ! ಮಾತೆಯ ಕೂಗನ್ನು ಲಾಲಿಸಿ ಮುನ್ನಡೆಯಲು ಸಿದ್ಧರಾಗಿರಿ! ಪಾರತಂತ್ರ್ಯದ ಪಾಶವನ್ನು ವಿನಾಶ ಮಾಡಿ ಮಾತೆಯ ಬಂಧ ವಿಮೋಚನೆ ಮಾಡಿರಿ!! ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸಿ ಜೇಡಿ ರಾಷ್ಟ್ರಗಳಿಗೆ ಸರಿಯೆನಿಸಿ ನಿಲ್ಲಿರಿ!!!

WANTED

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for samples.

For Terms apply :—

1 **Majestic House, Ludhiana.**

Please visit :—

Hotel Kohinoor

Comfortable-Coorg Boarding & Lodging.

Opp.—Krishna Rajendra Hospital, Mysore.

ಹೋಟೆಲ್ ಕೋಹಿನೂರ್

ಶ್ರೀ ಕೃಷ್ಣ ರಾಜೇಂದ್ರ ಆಸ್ಪತ್ರೆ ಎದುರು. ಮೈಸೂರು.

ಕೊಡಗರ ಈ ಹೋಟೆಲು ನಗರದ ಮುಖ್ಯ ಸ್ಥಳಗಳಾದ—ಆಸ್ಪತ್ರೆ, ಅರಮನೆ, ರೈಲ್ವೆ ಸ್ಟೇಷನ, ಬಸ್ ಸ್ಟ್ಯಾಂಡ್, ಮಾರ್ಕೆಟ್ ಮತ್ತು ಇನ್ನು ಮುಂತಾದ ಆವಶ್ಯಕ್ಕೆಲ್ಲಾ ಕೇಂದ್ರದಲ್ಲಿದ್ದು, ಸಂಸಾರಸ್ಥರಿಗೂ, ವಿದ್ಯಾರ್ಥಿಗಳಿಗೂ ವಾಸಕ್ಕೆ ಯೋಗ್ಯವಾಗಿದೆ. ಎಲ್ಲಾ ಜನಾಂಗ ಮತ್ತು ಎಲ್ಲಾ ತರಗತಿಯ ಜನಗಳಿಗೂ, ವಾಯಂ ಭೋಜನಾರ್ಥಿಗಳಿಗೂ ಒಪ್ಪುವಂತ ಭೋಜನ ದೊರಕುತ್ತದೆ.

ಮಹನೀಯರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬೇಕಾದ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಹೋಟೆಲ್ ಕೋಹಿನೂರ್,
2 ಮೈಸೂರು

THE

TROPICAL INSURANCE Co. Ltd., NEW DELHI.

Chairman Sjt. SUBHAS CHANDRA BOSE.

(President, Indian National Congress.)

A 100% Swadeshi Concern founded by such eminent Leaders as

PANDIT MOTHILAL NEHRU. Dr. M. A. ANSARI. HAKIM AJMAL KHAN. S. SRINIVASA IYENGAR and others

Wanted an Organiser for Coorg on Salary and commission immediately.

Apply to :—

M. Sunder Ram Shetty,		**K. S. Ramamurthi, M. A.**
Branch Manager,	or	Secretary,
Hampankatta,		160, Mount Road,
MANGALORE.		MADRAS.

11

ಬಾತ್ಮಿ.

—೦()೦—

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦()೦—

ರಾಜಿ ತೀರ್ಮಾನ.

ನಾನು ಈ ಮೊದಲು ತಾರೀಕು 15-7-1938 ರ 'ಕೊಡಗು' ಪತ್ರಿಕೆಯಲ್ಲಿ 'ಫ್ರೇಜರ್‌ಪೇಟೆ ನೋಟಿಫೈಡ್ ಏರಿಯ' ಎಂಬ ನಾಮಾಂಕಿತದಿಂದ ಬರೆದ ಬಾತ್ಮಿಯಲ್ಲಿ 'ಮತ್ತು ಒಂದು ಕಡೆಗೆ ಸ್ಯಾಂಕ್ಷನ್ ಆದ ಹಣವನ್ನು ಹೇಳದೆ ಕೇಳದೆ ಮತ್ತೊಂದು ಕಡೆಗೆ ಸ್ವೇಚ್ಛೆಯಾಗಿ ಉಪಯೋಗಿಸಲು' ಎಂಬುದಾಗಿ ಬರೆದುದನ್ನೂ ಮತ್ತು ಇನ್ನೊಂದು ಕಡೆ 'ಖರ್ಚು ಮಾಡಿದ ಹಣಕ್ಕೆ ಯಾವ ದಾಖಲೆಗಳೂ ಬಯಲಿಗೆ ಬರುವಂತಿಲ್ಲ' ವಗೈರೆಯಾಗಿಯೂ ಮತ್ತು ತಾ. 31-8-38 ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಪೇಟೆ ಬೀದಿಗೆ ತಾರು ಹಾಕುವ ಕೆಲಸವನ್ನು ಕಂಟ್ರಾಕ್ಟು ಕೊಟ್ಟಿದ್ದನ್ನು ವೈಸ್‌ಪ್ರೆಸಿಡೆಂಟರು ಮರೆತೋ, ಇಲ್ಲವೇ ಕಂಟ್ರಾಕ್ಟುದಾರನಿಂದ, ಇಲ್ಲವೇ ಪೇಟೆಯ ಜನರಿಂದ ಮೆಚ್ಚಿಗೆ ಪಡೆಯುವುದಕ್ಕೋ ಅಂತು ಹೇಗೋ ನೋಟಿಫೈಡ್ ಏರ್‍ಯದ ಕೆಲಸಗಾರರಾದ ಝಾಡ ಮಾಲಿಗಳನ್ನೂ, ಕ್ಲೀನರವರನ್ನೂ ಸಹ ಕಟ್ಟಿಕೊಂಡು ಕಂಟ್ರಾಕ್ಟುದಾರನಿಗೆ ಬೆಳಗಿನಿಂದ ಸಾಯಂಕಾಲದ ವರೆಗೆ ಬೇರೆ ಕಡೆಯ ಎಲ್ಲಾ ಕೆಲಸಗಳನ್ನು ಬಿಟ್ಟು ಸಹಾಯ ಕೊಡುವುದಕ್ಕೆ ಬದಲಾಗಿ ಈ ಕೆಲಸಗಳನ್ನು ಕಂಟ್ರಾಕ್ಟುದಾರನಿಗೆ ಬಿಟ್ಟು ತಾನು ಮಹಮ್ಮದೀಯ ಬೀದಿಯ ಕೆಲಸವನ್ನು ಅದೇ ಕೆಲಸಗಾರರಿಂದ ಅದೇ ಸಮಯದಲ್ಲಿ ಮಾಡಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತೆಂದು ನೀವೇ ಯೋಚಿಸಿ ನೋಡಿ, ಅಲ್ಲದೆ ಈ ಸಂಬಂಧದಲ್ಲಿ ನೋಟಿಫೈಡ್ ಏರ್‍ಯಕ್ಕೆ ಆದ ನಷ್ಟವನ್ನು ಕೊಡುವವರಾರೆಂದು ಯೋಚಿಸಿ. ಇದೂ ಅಲ್ಲದೆ ಇದರಿಂದ ಯಾರಿಗೆ ಲಾಭವಾಯಿತೆಂದು ಊಹಿಸಿ ನೋಡಿ' ಎಂಬದಾಗಿ ಬರೆದ ಹೇಳಿಕೆಗಳು ತಪ್ಪು ಎಂಬುದಾಗಿ ನನಗೆ ಈಚೆಗೆ ತಿಳಿದುಬಂದಿರುವುದರಿಂದ ಈ ಮೇಲ್ಕಂಡ ಹೇಳಿಕೆಗಳು ತಪ್ಪೆಂದೂ, ಈ ಮೂಲಕ ವೈಸ್‌ಪ್ರೆಸಿಡೆಂಟರಾದ ಮ. ಶ್ರೀನಿವಾಸರಾಯರ ಮನಸ್ಸಿಗೆ ನೋವುಂಟಾಗಿದೆಯಾದಕಾರಣ ಈ ಮೂಲಕ ನಾನು ಸದರಿ ಹೇಳಿಕೆಗಳನ್ನು ಹಿಂದಕ್ಕೆ ತೆಗೆದುಕೊಂಡಿರುತ್ತೇನೆ. ಮತ್ತು ಮ. ಶ್ರೀನಿವಾಸರಾಯರಿಗೆ ಈ ಬಾತ್ಮಿಗಳಿಂದ ಅವರ ಹೆಸರಿಗೆ ಕುಂದುಕತರಬೇಕೆಂಬ ಉದ್ದೇಶ್ಯವು ನನಗೆ ಏನೂ ಇರಲಿಲ್ಲವೆಂದೂ, ಈ ಹೇಳಿಕೆಗಳಿಂದ ಅವರ ಮನಸ್ಸಿಗೆ ನೋವುಂಟಾಗಿರುವ ಕಾರಣ ಅದಕ್ಕೆ ವ್ಯಸನಪಡುತ್ತೇನೆಂದೂ ಈ ಮೂಲಕ ಪ್ರಚುರಪಡಿಸುತ್ತೇನೆ.

ಎ. ಸಿ. ಮೇದಕ್.

ರಿಟ್ರೆಂಚ್ ಮೆಂಟ್.

ಕೊಡಗು ದೇಶಕ್ಕೂ, ಕೊಡಗಿನ ಜನರಿಗೂ ಒದಗಿದ ಗಂಡಾಂತರಗಳಲ್ಲಿ ಇದೊಂದು. ಕೊಡಗು ಸರಕಾರವು ಆದಿಯಿಂದಲೂ ಹಲವು ತಪ್ಪು ಹೆಜ್ಜೆಗಳನ್ನು ಇಟ್ಟಿರುವದು. ಅವುಗಳಲ್ಲಿ ಇದೊಂದು. ಆದರೆ ಇದು ಅವಕ್ಕೆಲ್ಲದಕ್ಕೂ ಭೀಕರವಾದುದು. ಮತ್ತು ಹೆಚ್ಚು ಪ್ರಾಮುಖ್ಯವಾದುದು ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಕೊಡಗು ಸರ್ಕಾರವು ಕಳೆದ ಒಂದು ಶತಮಾನದ ಉದ್ದಕ್ಕೂ ಭೂವ್ಯವಸಾಯದ ಕಡೆಗೆ ನಿಗವಿಡದೆ, ರೈತರಿಗೆ ತಕ್ಕ ಸಲಹೆ, ಸಹಾಯಗಳನ್ನು ಕೊಡದೆ ಭೂಕಂದಾಯದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡದೆ ಹೋದರು. ಬರೇ ಹೆಸರಿಗೆ ಮಾತ್ರ ತೆರೆದಿರುವ ಸರಕಾರಿ ವ್ಯವಸಾಯ ಶೋಧನಾ ಕ್ಷೇತ್ರಗಳಿಂದ ರೈತರಿಗೆ ಯಾವ ಉಪಕಾರವೂ ಆಗಲಿಲ್ಲ. ರೈತರು ಬೆಳೆಸಿದ ಉತ್ಪತ್ತಿಗೆ ನ್ಯಾಯವಾದ ಬೆಲೆ ಸಿಕ್ಕುವ ಏರ್ಪಾಡನ್ನು ಈ ವರೆಗೂ ಮಾಡದೆ ಹೋದರು. ಇನ್ನಾದರೂ ರೈತಾವಳಿಯ ಮತ್ತು ಭೂ ಉತ್ಪತ್ತಿಯ ಕಡೆಗೆ ನಿಗವಿಡದಿದ್ದರೆ ಕೊಡಗು ಸರ್ಕಾರವು ತನ್ನ ಆದಾಯ ವ್ಯಯವನ್ನು ಸಮ ಮಾಡುವ ದಾರಿಯೇ ಇಲ್ಲ. ಕೊಡಗಿನಲ್ಲಿ ಕೈಗಾರಿಕೆ ಮತ್ತು ವ್ಯಾಪಾರದಿಂದ ಉತ್ಪತ್ತಿ ಬಹಳ ಕಡಿಮೆ. ಅಬ್ಕಾರಿ ಮತ್ತು ಫಾರೆಸ್ಟ್ ಉತ್ಪತ್ತಿಗಳು ಇಳಿಯುತ್ತಿವೆ. ಹೀಗಿರಲು ಭೂಕಂದಾಯ ಒಂದರಿಂದಲೇ ದೇಶದ ಶ್ರೇಯೋಭಿವೃದ್ಧಿ ಆಗಬೇಕಾಗಿದೆ. ಅದು ವರ್ಷಂಪ್ರತಿ ಇಳಿಯುತ್ತಿದೆ ಎಂದು ಕಾಣುವದು ಶೋಚನೀಯ ಸಂಗತಿ. ಇಳಿಯದೆ ಮತ್ತೆ ಹೇಗೆ? ರೈತರಿಗೆ ಯಾವ್ಯಾವ ರೀತಿಯ ತಿಳುವಳಿಕೆಯನ್ನು ಹರಡಿದೆ. ಯಾವ್ಯಾವ ಅನುಕೂಲತೆಗಳನ್ನು ಕಲ್ಪಿಸಿದೆ? ಯಾವುದೂ ಇಲ್ಲ. ಭೂವ್ಯವಸಾಯದ ಭಾಗದಿಂದ ಸರಕಾರದ ಆದಾಯವು ಹೆಚ್ಚಬೇಕೇ ವಿನಹ ಬೇರೆ ವಿಧದಿಂದ ಸಾಧ್ಯವಿಲ್ಲ ಎಂಬದನ್ನು ಇನ್ನಾದರೂ ಸರ್ಕಾರದವರು ನೆನಪಿಡಲಿ.

ಆದಾಯವು ಕಡಿಮೆ ಎಂದು ಸಿಬ್ಬಂದಿಯ ಸಂಬಳವನ್ನು ಕಡಿಮೆ ಮಾಡಿ ಈಗಿನ ಕಾಲಕ್ಕೆ ಅನ್ವಯಿಸುವಂತೆ ಸರಿಪಡಿಸುವುದನ್ನು ಬಿಟ್ಟು ತೋಚಿದಂತೆ ಸಿಬ್ಬಂದಿ ಖೋತೆ ಮಾಡುವ, ಸ್ಕೂಲುಗಳನ್ನು ಮುಚ್ಚುವ ಮತ್ತು ಸ್ಕೂಲ್ ಫೀಜನ್ನು ಏರಿಸುವ ಮನಸು ಮಾಡಿರುವದು ಅನ್ಯಾಯ. ಸಂಬಳ ಕಡಿಮೆ ಮಾಡಿದರೆ ತಮಗೂ ಅದರ ಪೆಟ್ಟು ತಾಗುವದೆಂದು ಅಧಿಕಾರಿಗಳು ತಿಳಿದು ಚಿಕ್ಕ ಚಿಕ್ಕ ಉದ್ಯೋಗಸ್ಥರ ಸಂಖ್ಯೆಯನ್ನು ಕಡಿಮೆಮಾಡುತ್ತಿರುವರು. ಇದರಿಂದ ಏನು ಹಾನಿ ಆಗುವದು? ಹಲವು ಚಿಕ್ಕ ಉದ್ಯೋಗಸ್ಥರು ಮನೆಗೆ ಸೇರಿ ಆ ಕುಟುಂಬಗಳ ಬಾಳು ಗೋಳಿನ ಬಾಳಾಗುವುದು. ಮಕ್ಕಳಿಗೆ ವಿದ್ಯೆ ಕಮ್ಮಿ ಆಗುತ್ತಾ ಬಂದು ದೇಶವು ಷಂಡರಿಂದಲೂ ಮತ್ತು ಕುಂಟರಿಂದಲೂ ತುಂಬುವದು. ಅಷ್ಟೇ ಅಲ್ಲದೆ ದೇಶವು ನಿಜವಾಗಿಯೂ ಉದ್ಧಾರವಾಗದು. 'ಬಡವನಿಗೆ ಆಸೆಯೇ ಮೂದೇವಿ' ಎಂಬಂತೆ ಈ ಬಡ ಪ್ರಾಂತ್ಯಕ್ಕೆ ಭಾರಿ ಸಂಬಳದ ದೊಡ್ಡ ಉದ್ಯೋಗಸ್ಥರು ಅನಾವಶ್ಯ. ಅವರು ತಾವೇ ಹೇಗೆ ತಿಳಿದುಕೊಳ್ಳುವರು? ಪಾಪ! ಅವರಿಗೆ ಹೇಳಿ ತೋರುವವರು? ಇಲ್ಲ. ಜನರಿಗೆ ಅಷ್ಟೊಂದು ಕರ್ತವ್ಯಸಾಧನೆಯಾದರೂ ಇದೆಯೇ? 'ಊರ ಮೇಲೆ ಊರು ಬಿದ್ದರೆ ನನಗೇನು' ಎಂಬ ತತ್ವದವರೇ ಕೊಡಗಿನಲ್ಲಿ ಹೆಚ್ಚು. ಇಡೀ ದೇಶದ ಪರವಾಗಿ ಆಲೋಚಿಸುವ ಮತ್ತು ಕೆಲಸ ನಡೆಸುವ ಜನರಾಗಲೀ, ಸಂಘವಾಗಲೀ ಬಹಳ ವಿರಳ. ಇದ್ದರೂ ಅವರಿಗೆ ಬೆಂಬಲವೆಲ್ಲಿ? ದೇಶದ ಸಂಸ್ಥೆ ಎಂದು ಹೇಳುತ್ತಿರುವ ಜಮಾನ್ದಾರರ ಸಂಘವನ್ನು ಮೂಲೆಗೊತ್ತಲು ಅನೇಕ ಸ್ವಾರ್ಥಪರರು ಪೇಚಾಡುತ್ತಿರುವರು. ಹೀಗಿರಲು ಸರ್ಕಾರದ ತಪ್ಪು ಹೆಜ್ಜೆಗಳನ್ನು ತಿಳಿಸುವವರಾರು? ಅಧಿಕಾರಿಗಳು ಭ್ರಮೆಯಿಂದ ಓಡಿದ್ದೇ ಓಟ.

ಸರಕಾರಿ ಉದ್ಯೋಗದಲ್ಲಿ ಒಂದು ರೀತಿಯ ಸ್ಥಿರತ್ವವಿದೆ. ಕಾನೂನುಬದ್ಧವಾದ್ದರಿಂದ ಸಂರಕ್ಷಣೆಯಿದೆ ಎಂದು ಜನರು ನಂಬುತ್ತಿದ್ದರು. ಆದರೆ ಅದು ಈಗ ಬರಿಯ ಭ್ರಮೆ ಎಂದು ರುಜುವಾತು ಆಯಿತು. 20 ಯಾ 25 ವರ್ಷಗಳಿಂದ ಅಧಿಕಾರಿಗಳ ಕಟ್ಟಪ್ಪಣೆಗೆ ಒಳಗಾಗಿ ತಮ್ಮ ತಮ್ಮ ಕರ್ತವ್ಯಗಳನ್ನು ಕ್ರಮದಿಂದ ನಡೆಸಿದ ಹಲವು ಉದ್ಯೋಗಸ್ಥರಿಗೆ ಈ ಫೆಬ್ರವರಿ ಅಂತ್ಯಕ್ಕೆ ಏನು ಮಾನ ದೊರೆಯುವದೋ ತಿಳಿಯದು. 25 ವರ್ಷದ ಮೇಲಿನ ಸರ್ವಿಸ್‌ನವರಿಗೆ ತಕ್ಕಂತೆ ಶೇಕಡ 50 ರ ದರದ ಪೆನ್ಶನ್ ದೊರೆಯುವದೆಂದು ಕೇಳುತ್ತೇನೆ. ಅದೇ ರೀತಿ 25 ವರ್ಷದ ಒಳಗಿನ ಸರ್ವಿಸ್‌ನವರಿಗೆ ಹಕ್ಕಿನ ಎಲ್ಲಾ ರಜಗಳನ್ನು ಕೊಡಿಸಿ ಸವ್ಯ 25 ವರ್ಷದ ಸರ್ವಿಸಿಗೆ ಸರಿಪಡಿಸಿ ಅರ್ಧ ಪೆನ್ಶನ್ ಬರುವಂತಾದರೂ ಕಡೇ ಕಾಲದ ದಯೆ ಸರ್ಕಾರದವರಿಂದ ತೋರಿಸಲ್ಪಡಬೇಕಾಗಿ ಹಲವರು ಕೋರುತ್ತಿದ್ದಾರೆ. ಮುಳುಗಲಿರುವವನು ಹುಲ್ಲು ಕಡ್ಡಿಯನ್ನೂ ಹಿಡಿಯುವಂತೆ ಸಾಧ್ಯವಾದಷ್ಟು ಅನುಕೂಲ ರೀತಿಯ ರಿಯಾಯಿತಿಗಳನ್ನು ತೋರಿ ಸರ್ಕಾರದವರು ಕಳುಹಿಸುವರೆಂದು ಭಾವಿಸಬೇಕಾಗಿದೆ.

ದೇಶದ ಸ್ಥಿತಿಗತಿಗಳನ್ನು ಅರಿಯದೆ ಸ್ಕೂಲುಗಳನ್ನು ಮುಚ್ಚುವ ಮತ್ತು ಸ್ಕೂಲ್ ಫೀಜನ್ನು ಹೆಚ್ಚಿಸುವ ಏರ್ಪಾಡನ್ನು ಮನ್ನಾ ಮಾಡಿ ದೇಶದ ಜನರನ್ನು ಉದ್ಧರಿಸಲು ಸರ್ಕಾರದವರು ಪ್ರಯತ್ನಪಡುವರೆಂದು ಭಾವಿಸಬೇಕಾಗಿದೆ.

'ಮನನೊಂದವ'

ಕರ್ನಾಟಕ ಚರಕಾ ಸಂಘ, ಖಾದಿ ವಸ್ತ್ರಾಲಯ,

ಕೋಟೆ, ಬೆಂಗಳೂರು ಸಿಟಿ.

ಕೊಡಗಿನ ಖಾದೀ ಬಜಾರ್ ಪ್ರವಾಸ ಕ್ರಮ

ಕೊಡಗಿನ ಹಳ್ಳಿಗಳಲ್ಲಿರುವ ಖಾದೀ ಪ್ರೇಮಿಗಳಿಗೆ ಖಾದೀ ಕೊಳ್ಳಲು ಅನುಕೂಲವಾಗುವಂತೆಯೂ, ಖಾದೀ ಕೈಗಾರಿಕೆಯಲ್ಲಿ ಇದು ವರೆಗೆ ನಡೆದಿರುವ ಪ್ರಗತಿಯನ್ನು ನೋಡಲು ಹಳ್ಳಿಗರಿಗೆಲ್ಲ ಸಿಗುವಂತೆಯೂ ಕೊಡಗಿನಲ್ಲಿ ಸಂತೆಗಳು ನಡೆಯುವ ಸ್ಥಳಗಳಿಗೆಲ್ಲ ಖಾದಿ ಬಟ್ಟೆಗಳನ್ನು ತಂದು ಒಂದೆರಡು ದಿನಗಳು ಪ್ರದರ್ಶಿಸಿ ಖಾದೀ ಮಾರಾಟ ಮಾಡಲು ವ್ಯವಸ್ಥೆ ಮಾಡಿದೆ. ಈ ಕೆಳಗೆ ಕೊಟ್ಟಿರುವ ಕಾರ್ಯಕ್ರಮದಲ್ಲಿ ಯಾವ ಯಾವ ತಾರೀಕುಗಳು ಖಾದಿಯ ಮಾರಾಟಕ್ಕೆ ಸಿಗುವವೆಂದು ನಮೂದಿಸಿದೆ. ಆಯಾ ಊರುಗಳಿಗೆ ಸಂತೆಗೆ ಬರತಕ್ಕ ಮಹಾ ಜನರು ಖಾದೀ ಪ್ರದರ್ಶನಕ್ಕೆ ಬಂದು ಖಾದಿಯನ್ನು ಕೊಂಡು ದರಿದ್ರನಾರಾಯಣನ ಸೇವೆ ಮಾಡಬೇಕೆಂದು ಈ ಮೂಲಕ ಪ್ರಾರ್ಥನೆ.

11-2-39 ಶನಿವಾರ–ಸಂತೆಯಲ್ಲಿ ಖಾದೀ ಮಾರಾಟ.

12-2-39 ಭಾನುವಾರ–ಸೋಮವಾರಪೇಟೆಗೆ.

13-2-39 ಸೋಮವಾರ–ಸಂತೆಯಲ್ಲಿ ಖಾದೀ ಮಾರಾಟ.

14-2-39, 15-2-39, 16-2-39, 17-2-39 } ವೀರರಾಜೇಂದ್ರಪೇಟೆ.

18-2-39, 19-2-39 } ಗೋಣಿಕೊಪ್ಪಲು. ಭಾನುವಾರ–ಸಂತೆಯಲ್ಲಿ ಖಾದೀ ಮಾರಾಟ.

20-2-39, 21-2-39 } ಸೋಮವಾರ–ಹುದಿಕೇರಿ ಸಂತೆ. ಮಂಗಳವಾರ–ಮೊಕಾಂ.

22-2-39, 23-2-39, 24-2-39 } ವೀರರಾಜೇಂದ್ರಪೇಟೆ.

25-2-39 ಶನಿವಾರ–ಗೋಣಿಕೊಪ್ಪಲು.

26-2-39 ಭಾನುವಾರ–ಗೋಣಿಕೊಪ್ಪಲು ಸಂತೆಯಲ್ಲಿ ಖಾದೀ ಮಾರಾಟ.

27-2-39 ರಿಂದ 3-3-39 } ಮಡಿಕೇರಿ ಮೊಕಾಂ.

ಖಾದೀ ಪ್ರೇಮಿಗಳು ತಮ್ಮ ಮಿತ್ರರೊಡನೆ ಬಂದು ಸಹಾಯ ಮಾಡಬೇಕೆಂದೂ, ದೇಶಾಭಿಮಾನಿಗಳು ಖಾದೀ ಅಂಗಡಿಗೆ ಬಂದು ಪ್ರೋತ್ಸಾಹಿಸಬೇಕೆಂದೂ ಪ್ರಾರ್ಥನೆ.

ಬೆಂಗಳೂರು,
ತಾ. 20-1-39.

ಶಾ. ಅ. ವೆಂಕಟರಾಮಯ್ಯ,
ವ್ಯವಸ್ಥಾಪಕ.

ಚಾರುದತ್ತ-ನನ್ನದೂ ಸಹ ಅದೇ ಅಭಿಪ್ರಾಯ. ಆದರೆ ಒಂದು ನೋಡಿ, ಅವರಿಗೆ ಬುದ್ಧಿ ಕಲಿಸಲು, ಪ್ರಯತ್ನಪಡುವದರಿಂದ ಏನೊಂದೂ ಪ್ರಯೋಜನವುಂಟಾಗುವ ಹಾಗೆ ಕಾಣುವುದಿಲ್ಲ. ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ಅವರೇ ಮೂಢರು, ಹೇಳಿದ್ದೇನು ತಿಳಿಯುವಂತಿಲ್ಲ. ಇದರಿಂದ ಕಡೆಗೆ ನಿಮ್ಮ ಗೌರವವೇ ಹಾಳಲ್ಲದೆ ಏನೊಂದು ಗೌರವವೂ ಸಲ್ಪವೂ ದೊರೆಯಲಾರದು. ಆದುದರಿಂದ, ನಾನವರನ್ನು ಕಂಡ ಕಂಡಲೆಲ್ಲಾ ಆಗುವಷ್ಟು ಬುದ್ಧಿವಾದಗಳನ್ನು ಹೇಳುತ್ತೇನೆ. ಆದರೆ ನನ್ನ ಗೌರವವನ್ನುಳಿಸಿದಕೋಸ್ಕರ ನಾನೆಂದೂ ಅವರ ಮನೆಗೆ ಹೋಗುವುದಿಲ್ಲ. ಅವರ ಗ್ರಾಮದ ಆಟ ಕೂಟಗಳಿಗಾಗಲೀ, ಉತ್ಸವಗಳಿಗಾಗಲೀ ನಾನು ಸರಿಯಾಗಿ ಸೇರುವದಿಲ್ಲ. ಸ್ವಲ್ಪ ಸೇರಿ ಸಹಕರಿಸತೊಡಗಿದೇನೆಂದರೆ ಅವರು ಆ ಮೇಲೆ ನನಗೆ ಸರಿಯಾದ ಗೌರವನ್ನು ತೋರಿಸುವದೇ ಇಲ್ಲ. ಹಾಗೆ ಸಹಕರಿಸುವುದರಿಂದಲೇ ನೋಡಿ ಅವರು ನನಗೆ ಎಷ್ಟೋ ಮರ್ಯಾದೆ ಕೊಡುತ್ತಿದ್ದಾರೆ.

ವೈದ್ಯರು-ನಾನಾ ಮಾತಿಗೆ ಪ್ರೀತಿ ಸಮ್ಮತಿಸಲಾರೆ. ನೀವು ಈಗ ಅವರೊಡನೆ ಸಹಕರಿಸದೆ ಸಿಕ್ಕುತಿರುವ ಮರ್ಯಾದೆಗಿಂತಲೂ ಎರಡರಷ್ಟು ಹೆಚ್ಚಾದ ಮರ್ಯಾದೆಯು ಅವರೊಡನೆ ಸರಿಯಾಗಿ ಸಹಕರಿಸಿದುದಾದರೆ ಸಿಕ್ಕುತ್ತದೆ. ಬೇಕಾದರೆ ಇದನ್ನು ಪರೀಕ್ಷಿಸಿ ನೋಡಿ ನೀವೇ ಹೇಳಿದ್ದರಷ್ಟೇ. ನಿಮ್ಮ ತಂದೆಯವರ ಕಾಲದಲ್ಲಿ ಗ್ರಾಮಸ್ಥರು ನಿಮ್ಮ ಮನೆಯ ಅನೇಕ ಕೆಲಸಗಳನ್ನು ಮಾಡಿಬಿಡುತ್ತಿದ್ದರೆಂಬುದನ್ನು, ಅದಕ್ಕೆ ಮುಖ್ಯ ಕಾರಣವೇನೆಂದರೆ, ನಿಮ್ಮ ತಂದೆಯವರು ಅವರ ಮನೆಗಳಿಗೆ ಹೋಗಿ ಕೆಲಸ ಮಾಡುತ್ತಿರಲಿಲ್ಲವಾದರೂ ಅವರನ್ನು ಕಂಡಲ್ಲೆಲ್ಲಾ ಅವರೊಡನೆ ಸಲಿಗೆಯಿಂದ ಮಾತಾಡುತಿದ್ದರು. ಹಬ್ಬ ಹುಣ್ಣಿಮೆಗಳಲ್ಲಿ ಅವರ ಮನೆಗಳಿಗೆ ಹೋಗಿ ಬಹು ಸರಳವಾಗಿ ಕೂಡಿಯಾಡುತ್ತಿದ್ದರಲ್ಲದೆ, ಅವರ ಊಟ ಉಪಚಾರಗಳಲ್ಲಿಯೂ ಏನೊಂದು ಸಂಕೋಚವಿಲ್ಲದೆ ಭಾಗಿಗಳಾಗುತ್ತಿದ್ದರು. ಆದರೆ ಈಗ ನಾವೇನು ಮಾತಾಡುತ್ತೇವೆ. ಅವರೊಡನೆ ಕೂಡಿಯಾಡುವುದಾಗಲೀ, ಮಾತಾಡುವುದಾಗಲೀ ಇಲ್ಲ. ಅವರನ್ನು ಒಂದು ಬಗೆಯ ಕೀಳು ವರ್ಗದವರಂತೆ ಭಾವಿಸುತ್ತೇವೆ. ಆ ಬಡ ಜನರೇನೋ ಇದನ್ನು ಸಹಿಸಿಕೊಳ್ಳುತ್ತಾರೆ. ಆದರೆ ಆಧುನಿಕ ವಿದ್ಯೆ ಕಲಿತ ಮಕ್ಕಳು ಈ ತರಹದ ನಡವಳಿಕೆಗಳನ್ನು ಸಹಿಸುವುದಿದೆಯೇ? ಆದುದರಿಂದ ವಿದ್ಯಾವಂತರು ಮತ್ತು ಐಶ್ವರ್ಯವಂತರು ತಮ್ಮ ಅಹಂಕಾರದಿಂದಲೂ ಗರ್ವದಿಂದಲೂ ನಮ್ಮ ದೇಶದ ಗ್ರಾಮಗಳ ಒಗ್ಗಟ್ಟನ್ನೂ, ಸಹಕಾರವನ್ನೂ ಹಾಳುಮಾಡಿದವರಲ್ಲದೆ ಮತ್ತಾರು ಅಲ್ಲ. ಆದರೆ ನಾವಿಂತಹ ದುಷ್ಕೃತ್ಯಗಳನ್ನು ಮಾಡುತ್ತಿದ್ದೇವೆಂಬುವುದು ಅನೇಕರಿಗೆ ಗೊತ್ತಿಲ್ಲ. ಗೊತ್ತಿಲ್ಲದ್ದಿದರೂ ಅದರ ಫಲಿತಾಂಶವೇದಾದರೂ ಬೇರೆಯಾಗುವುದಿದೆಯೇ? ಎಂದೂ ಇಲ್ಲ. ಆದುದರಿಂದ ವಿದ್ಯಾವಂತರೇ ಗ್ರಾಮಗಳ ಸರ್ವನಾಶಕ್ಕೆ ಕಾರಣರು.

ದೇವದತ್ತ.

ಸಾಮಾಜಿಕ ಕಾದಂಬರಿ.

ಕಳೆದ ವಾರದಿಂದ ಮುಂದುವರಿದುದು.

ಚಾರುದತ್ತನು — ನಗುಮುಖದಿಂದ ಕೂಡಿ, 'ಹಾಗಾದರೆ ವಿದ್ಯೆಯು ಮನುಷ್ಯನನ್ನೂ ಅಯೋಗ್ಯನಾರಿಗೆ ಕೂಡಿಸತಕ್ಕ ಸಾಧನವೆಂದರ್ಥವಾಗುವುದಲ್ಲ' ಎಂದು ನಕ್ಕನು.

ವೈದ್ಯರು-ಎಂದೂ ಅಲ್ಲ, ಆದರೆ ನಮ್ಮ ದೇಶದಲ್ಲಿ ಜನರು ವಿದ್ಯೆ ಕಲಿಯುವುದೆಂದರೆ ಏನಾದರೊಂದು ಉದ್ಯೋಗವನ್ನು ಕೈಕೊಳ್ಳುವುದರ ಸಲುವಾಗಿ ಅಂತಹ ವಿದ್ಯಾವಂತರಿಗೆ ವಿದ್ಯಾಹೀನರಾದ ಗ್ರಾಮಸ್ಥರೊಡನೆ ಕೂಡಿಯಾಡುವುದು ಕೇವಲ ಅಸಾಧ್ಯವಾಗಿ ಕಾಣುತ್ತದೆ. ಏತಕ್ಕೆಂದರೆ ಸರಿಯಾದ ವಿದ್ಯೆಯು, ಮನುಷ್ಯರೊಳಗಿರತಕ್ಕ ಸರಿಸಮಾನತ್ವವನ್ನು ತೋರಿಸುತ್ತದೆ. ಆದರೆ ಸರಕಾರಿ ಉದ್ಯೋಗ ದರಬೇತು ಮಾಡುವ ವಿದ್ಯೆಯು ಸರಕಾರಿ ಉದ್ಯೋಗಸ್ಥನು ಊರ ಸ್ವತಂತ್ರಿಗಳಾದ ಜನರಿಗಿಂತ ಮೇಲಾದವನೆಂಬ ತಪ್ಪು ತತ್ವವನ್ನು ತಿಳಿಸುತ್ತದೆ. ಆದುದರಿಂದ ಅಂತಹ ವಿದ್ಯಾವಂತರು ಗ್ರಾಮಗಳಲ್ಲಿ ಜಮೀನುದಾರರಾಗಿ ಸ್ವತಂತ್ರಿಗಳಾಗಿರತಕ್ಕ ತಮ್ಮ ಮಿತ್ರಬಾಂಧವರೊಡನೆ ಸಹ ಕಲೆತಿರಲು ಇಷ್ಟಪಡದೆ, ಅವರನ್ನು ತ್ಯಜಿಸಿ, ಪಟ್ಟಣಗಳಲ್ಲಿ ತಮ್ಮಂತಹ ಜನರೊಡನೆ ವಾಸಿಸಲು ಹೋಗುತ್ತಾರೆ. ಇವರಿಗೆ, ಇವರು ಕಲಿತ ವಿದ್ಯೆಯು ಸಲುವಾಗಿ, ದೇಹರಕ್ಷಣೆ, ಶಿಶುಪೋಷಣೆ, ನಿರ್ಮಲತೆ, ವ್ಯವಸಾಯ ಮುಂತಾದ ವಿಷಯಗಳಲ್ಲಿ ತಕ್ಕ ಮಟ್ಟಿಗೆ ಜ್ಞಾನವಿರುತ್ತದೆ. ಆದರೆ ಈ ಜ್ಞಾನವನ್ನು ಅವರು ತಮ್ಮ ಗ್ರಾಮಗಳಲ್ಲಿರತಕ್ಕ ತಮ್ಮ ಕೇವಲ ಆಪ್ತರಿಗೂ ಸಹ ತಿಳಿಸುವುದಿಲ್ಲ. ಅವರನ್ನೆಲ್ಲಾ ಅವರ ಹೀನಸ್ಥಿತಿಯಲ್ಲೇ ತೊರೆದು ತಾವು ಪಟ್ಟಣಗಳಲ್ಲಿ ವಾಸಿಸಲು ಹೊರಡುತ್ತಾರೆ. ರಜಾದಿವಸಗಳಲ್ಲಿ ತಮ್ಮ ಗ್ರಾಮ ಮನೆಗಳಿಗೆ ಬಂದರೂ ಸಹ, ಅವರನ್ನು ಒಳ್ಳೆ ಸ್ಥಿತಿಗೆ ತರುವ ಪ್ರಯತ್ನವೆಂದೂ ಮಾಡುವುದಿಲ್ಲ. ಅದರ ಬದಲು ಬಹು ಕಷ್ಟದಿಂದ ಒಂದೆರಡು ದಿನವಿದ್ದು ತಮ್ಮ ಪಟ್ಟಣದ ಬಾಡಿಗೆ ಮನೆಗಳಿಗೆ ಹೊರಟು ಹೋಗುತ್ತಾರೆ. ಇದೀಗ ವಿದ್ಯಾವಂತರು ನಮ್ಮ ದೇಶದಲ್ಲಿ ಮಾಡುವ ಕೆಲಸಗಳು. ಹೀಗಾದರೆ ಗ್ರಾಮಗಳು ಮುಂದಕ್ಕೆ ಬರುವುದಿದೆಯೇ? ನಾವೀಗ ಮಾಡುವುದೇನು. ಗ್ರಾಮಗಳಲ್ಲಿರತಕ್ಕ ನಮ್ಮ ಬಡ ಜನರಿಗೆ ಯಾವುದೊಂದು ನವೀನ ಸಂಗತಿಯನ್ನೂ ಕಲಿಸುವುದಿಲ್ಲ. ಅದರ ಬದಲು "We call fathers fools so wise we grow" ಅಥವಾ "Our wiser sons will no doubt think us so" ನಮ್ಮ ಪೂರ್ವಜನರು, ಬಹು ಕಾಲದ ಶೋಧನೆಯಿಂದಲೂ, ಮಹತ್ತಾದ ವಿದ್ಯೆಯ ಬಲದಿಂದಲೂ ಕಂಡು ಹಿಡಿದು, ಏರ್ಪಡಿಸಿಟ್ಟಿರುವ ಕೆಲವು ಕಟ್ಟು ಕಟ್ಟಳೆಗಳಲ್ಲೂ, ಆಚಾರ ಪದ್ಧತಿಗಳಲ್ಲೂ ತಪ್ಪು ಕಂಡು ಹಿಡಿದು, ಅವರನ್ನು ಹುಚ್ಚರೆಂದು ಕರೆಯುತ್ತೇವೆ.

ಕೆಲವರಿಗೆ ನಿಜವಾದ ಗೌರವ ಯಾವುದೆಂಬುವುದು ಗೊತ್ತೇ ಇಲ್ಲ. ಅವೊಂದು ತರಹದ ತಪ್ಪು ಗೌರವ (Fales dignity) ವನ್ನು ಕಾಪಾಡಿಕೊಳ್ಳುವ ಪ್ರಯುಕ್ತ ತಮ್ಮ ಹೆತ್ತ ತಂದೆ ತಾಯಿಗಳ ಸಂಗವನ್ನೂ ಸಹ ತೊರೆದು ಬಿಡುತ್ತಾರೆ. ಅವರೆಂದೂ, 'ನಾವು ಅವರ ಸ್ಥಿತಿಯಲ್ಲಿ ಇದ್ದಿದ್ದರೆ' ಎಂಬ ಯೋಚನೆಯನ್ನು ಮನಸ್ಸಿಗೆ ತೆಗೆದುಕೊಳ್ಳುವುದೇ ಇಲ್ಲ. ಪ್ರತಿಯೊಬ್ಬ ಮನುಷ್ಯನೂ 'ನಾನು ಜನ್ಮವೆತ್ತಿರುವುದು ಇತರರಿಗಾಗಿ, ಇತರರು ಜನಿಸಿರುವುದು ನನಗಾಗಿ' ಎಂಬ ತತ್ವವನ್ನು ಮನಸ್ಸಿನಲ್ಲಿಟ್ಟು ನಡೆದರೆ, ಲೋಕದಲ್ಲಿ ಶಾಶ್ವತವಾದ ಸುಖವೂ, ಶಾಂತಿಯೂ ನೆಲೆಗೊಳ್ಳುವುದರಲ್ಲಿ ಏನೊಂದು ಸಂಶಯವೂ ಇರಲಾರದು.'

ಚಾರುದತ್ತನು ವೈದ್ಯರ ಮುಖವನ್ನೇ ನೋಡುತ್ತಾ ತಲೆಯಲ್ಲಾಡಿಸಿದನು.

'ನೀವೀಗ ವಿದ್ಯಾವಂತರು ಮತ್ತು ಐಶ್ವರ್ಯವಂತರು, ನಿಮ್ಮ ಮಾತಿಗೆ ಗ್ರಾಮಸ್ಥರು ಸರಿಯಾದ ಬೆಲೆ ಕೊಡುತ್ತಾರೆ. ನೀವವರನ್ನು ಕಂಡ ಕಂಡ ಸ್ಥಳಗಳಲ್ಲಿ ವಿದ್ಯೆಯ ಮಹಿಮೆಯನ್ನೂ, ಶುಚಿತ್ವದ ಅವಶ್ಯಕತೆಯನ್ನೂ, ಸಹಕಾರದ ಪ್ರಯೋಜನಗಳನ್ನೂ ಸೋಮಾರಿತನದ ಅನಾಹುತಗಳನ್ನೂ, ಕುಡಕತನದ ಕಷ್ಟ ನಷ್ಟಗಳನ್ನೂ, ಉದ್ಯೋಗದ ಲಾಭ (Dignity of labour) ಗಳನ್ನೂ, ಅಂತರ್ಯದಲ್ಲಿ ಏನೊಂದು ತರದ ಸ್ವಹಾಭಿಲಾಷೆಯಿಲ್ಲದೆ ಬೋಧಿಸುತ್ತಾ ನಡೆದದ್ದಾದರೆ, ನಿಮ್ಮನ್ನು ನಿಮ್ಮ ಗ್ರಾಮಸ್ಥರು. ಅವರ ಆರಾಧ್ಯ ದೇವತೆಯಂತೆಯೇ ಕಾಣುವುದರಲ್ಲಿ ಏನೊಂದು ಸಂಶಯವೂ ಇರಲಾರದು. ಆದುದರಿಂದ ಅವರನ್ನು ಹೇಗಾದರೂ ಮಾಡಿ ಮುಂದಕ್ಕೆ ತರುವ ಪ್ರಯತ್ನವನ್ನು ನಾವೆಲ್ಲಾ ಮಾಡಬೇಕು.'

ಚಾರುದತ್ತನ ಮನಸ್ಸು ಮಾತಾಡುವ ವಿಷಯದಲ್ಲೇ ಇರಲಿಲ್ಲ. ಆದರೂ ವೈದ್ಯನನ್ನು ಮೆಚ್ಚಿಸುವುದರ ಸಲುವಾಗಿ, ಅವರ ಮುಖವನ್ನೇ ನೋಡುತ್ತಾ, ತಲೆಯಲ್ಲಾಡಿಸುತ್ತಿದ್ದನು. ಅಷ್ಟರಲ್ಲಿ ಹುಡುಗನೊಬ್ಬನು ಹೊರಗೆ ಬಂದು, ಏನೋ ಸಂಜ್ಞೆ ಮಾಡಿದನು. ಚಾರುದತ್ತನು ವೈದ್ಯನ ಕ್ಷಮಾಪಣೆಯನ್ನು ಬೇಡಿ ಒಳಗೆ ಹೋದನು.

ಮರುಕ್ಷಣದಲ್ಲೇ ಹೊರಗೆ ಬಂದು ವೈದ್ಯನನ್ನು ಕರೆದುಕೊಂಡು ಒಳಗೆ ಹೋದನು. ನಡುಮನೆಯಲ್ಲಿ ಚತುಷ್ಕಾರದ ಒಂದು ಮೇಜವಿತ್ತು. ಅದರ ಮೇಲೆ ಶುಚಿಯಾದ ಟೇಬಲ್ ಕ್ಲಾತ್ ಹಾಸಲ್ಪಟ್ಟಿತ್ತು. ಅದರ ಸುತ್ತಲೂ ನಾಲ್ಕೈದು ಕುರ್ಚಿಗಳಿದ್ದವು.

ಚಚೌಕವಾಗಿದ್ದ ಆ ಕೋಣೆಯ ಗೋಡೆಗಳಲ್ಲಿ ಅನೇಕ ಚಿತ್ರಪಟಗಳು ನೇತು ಹಾಕಲ್ಪಟ್ಟಿದ್ದವು. ಅಲ್ಲಲ್ಲಿ ಅನೇಕ ಭಾವಚಿತ್ರಗಳು ಕಾಣುವುತ್ತಿದ್ದವು.

ಮಧ್ಯದಲ್ಲಿದ್ದ ಮೇಜಿನ ಮೇಲೆ ನಾನಾತರಹದ ಭಕ್ಷ್ಯ ಪದಾರ್ಥಗಳು ಇಡಲ್ಪಟ್ಟಿದ್ದವು ಇಬ್ಬರೂ ಕೈ ತೊಳೆದು ಫಲಹಾರಕ್ಕೆ ಕುಳಿತರು. ಗೃಹಿಣಿಯೂ, ಬಂದು ಫಲಾಹಾರದಲ್ಲಿ ಭಾಗಿಯಾದಳು. ಸ್ವಲ್ಪ ಹೊತ್ತಿನಲ್ಲಿ ಚಾರುದತ್ತನು 'ವೈದ್ಯರಿಗೆ ಸೋಮದತ್ತನ ಪರಿಚಯವಾದುದು ಹೇಗೆ? ಎಂದು ಪ್ರಶ್ನೆ ಮಾಡಿದನು.

ವೈದ್ಯರು-ನಾನು ಈ ಊರಿಗೆ ಬಂದ ಮೂರನೆ ದಿವಸ ಆಸ್ಪತ್ರೆಗೆ ಹೋಗಿದ್ದೇನು. ಅಲ್ಲಿ ಸೋಮದತ್ತನು ತಾಯಿಯನ್ನು ಕರೆತಂದಿದ್ದನು. ವೈದ್ಯರು ಬಂದಿರಲಿಲ್ಲ. ಅದರ ಮೇಲೂ ನನಗೆ ವೈದ್ಯ ವಿದ್ಯೆಯಲ್ಲಿರುವ ಪಾಂಡಿತ್ಯವನ್ನೂ ಈ ಊರವರಿಗೆ ತೋರಿಸಿ ಅವರ ಸೇವೆಯನ್ನು ಕೈಕೊಳ್ಳಬೇಕೆಂಬ ಕಾಂಕ್ಷೆಯಿಂದ ಆ ವೃದ್ಧೆಗೆ ಚಿಕಿತ್ಸೆ ಮಾಡಲು ಒಪ್ಪಿ ನಾನೇ ಅವರ ಮನೆಗೆ ಬಂದೆನು. ಅದೇ ಈಗ ತತ್ಕಾಲಕ್ಕೆ ಆದ ಪರಿಚಯ (ನಗುಮುಖದಿಂದ) ಸೋಮದತ್ತನ ತಾಯಿಯು ಮಾತ್ರ ನನ್ನನ್ನು ಕಂಡಾಗಲೆಲ್ಲಾ 'ನನ್ನ ಕಂದನ ಮನೆಗೆ [illegible]' ಎನ್ನುತ್ತಾ ಕಣ್ಣೀರು ಸುರಿಸುತ್ತಾರೆ.

ಚಾರು-[illegible]! ಆ ಸೋಮದತ್ತನಿಗೊಬ್ಬ ಸಹೋದರನಿದ್ದನು. ಆತನು ಬಿ. ಎ. ಪಾಸಾಗಿ, ಯಾರೋ ಒಬ್ಬ ಯುವತಿಯೊಡನೆ ಓಡಿ ಹೋದನು. ಅವಳು ಕಲ್ಲಿಕೋಟೆಯಲ್ಲಿ ಒಬ್ಬ ಐಶ್ವರ್ಯವಂತನ ಮಗಳಂತೆ.

ವೈದ್ಯರು-ಎಂತಹ ಪಾಪಿಯಾಗಿರಬಹುದು. ವಿದ್ಯೆ ಕಲಿತೂ ಸಹ ಅವನಂತಹ ಪೋಲಿಯಾದನೇ? ಇದೆಲ್ಲಾ ಸಂಘದೋಷದ ಫಲಿತಾಂಶ. ಆದುದರಿಂದಲೇ ಎಳೇ ಮಕ್ಕಳನ್ನು ದೂರದ ಶಾಲೆಗಳಿಗೆ ವಿದ್ಯಾರ್ಜನೆಗೆ ಕಳುಹಿಸಬಾರದು. ದುರ್ಗುಣಿಗಳ ಸಂಘಕ್ಕೆ ಎಳೆ ವಯಸ್ಸಿನಲ್ಲಿ ಸೇರಿದರೆ ಎಂತಹವನಾದರೂ ಹಾಳಾಗುತ್ತಾನೆ.

ಚಾರುದತ್ತ-(ಹಸನ್ಮುಖನಾಗಿ) ಮನುಷ್ಯನ ನಡೆನುಡಿಗಳನ್ನೂ, ಬಹಿರಂಗ ಚೇಷ್ಟೆಗಳನ್ನೂ ನೋಡಿ ನಾವೆಂದೂ ಅವರ ಅಂತರಂಗದ ಆಳವನ್ನು ಕಂಡು ಹಿಡಿಯಲು ಆಗುವುದಿಲ್ಲ. ಅವರಲ್ಲೂ ಯಾವಾಗಲೂ ಮೌನಿಗಳಾಗಿರುತ್ತಾರಲ್ಲ; ನೋಡಿ, ಅವರನ್ನೆಂದೂ ನಂಬಬಾರದು. ಅವರ್ಯಾವಾಗಲೂ ಬಾಡಿದ ಮುಖದಿಂದ ಕೂಡಿ ಏನೂ ತಿಳಿಯದ ಸಜ್ಜನರಂತೆ ಪ್ರವರ್ತಿಸುತ್ತಾರೆ. ಅಂತವರು ಕೇವಲ ಕಪಟನಾಟ್ಯದ ಮಾರ್ಜಾಲ ಸನ್ಯಾಸಿಗಳೆಂದೇ ತಿಳಿಯಬೇಕು. ಈ ಕಂಡದ್ದನ್ನು ಕಂಡ ಹಾಗೆ, ಮನಸ್ಸಿನಲ್ಲಿ ಹುಟ್ಟಿದ ಯೋಚನೆಯನ್ನು ಸಂಕೋಚವಿಲ್ಲದೆ, ಬಡಬಡ ಹೇಳುತ್ತಾರೆ ನೋಡಿ ಅವರೇ ಯೋಗ್ಯರು. ನಮ್ಮದೆಲ್ಲಾ ಬಾಯಲ್ಲೇ ಕಾರ್ಯತಃ ಏನೂ ಇಲ್ಲ. ಇದೇ ಈ ದೇವದತ್ತನು ವಿದ್ಯಾರ್ಥಿಯಾಗಿರುವಾಗ್ಯೆ ಬಹು ಯೋಗ್ಯನೆಂದೂ ಸಾಧು ಸಜ್ಜನನೆಂದೂ ಪ್ರತೀತಿ

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಬಂಧನ!

ಸ್ಟೇಶನಿನಲ್ಲಿ 30 ಸಾವಿರ ಜನಸಮುದಾಯ.

ಸೌ. ಕಸ್ತೂರಿಬಾಯಿ ಗಾಂಧಿಯವರ ದರ್ಶನಾಪೇಕ್ಷಿಗಳಾಗಿ ಸುಮಾರು 30 ಸಾವಿರ ಜನರು ಅವರ ಗಾಡಿ ಬರುವ ಸಮಯಕ್ಕೆ ಸ್ಟೇಶನಿನ ಹೊರಗೆ ಕೂಡಿದ್ದರು. ಜನಸಂದಣಿಯು ಸ್ಟೇಶನಿನೊಳಗೆ ಕಾಲಿಡದಂತೆ ನೋಡಿಕೊಳ್ಳಲು ಪೋಲೀಸರೂ, ಮಿಲಿಟರಿಯವರೂ ಸ್ಟೇಶನಿನಲ್ಲಿ ಸಜ್ಜಾಗಿ ನಿಲ್ಲಿಸಲ್ಪಟ್ಟಿದ್ದರು. ಸೌ. ಕಸ್ತೂರಿಬಾಯಿ ಗಾಂಧಿ ಮತ್ತು ಕುಮಾರಿ ಮಣಿಬೇನ ಪಟೇಲರು ಗಾಡಿಯಿಂದ ಇಳಿದ ಕೂಡಲೇ ಪೋಲೀಸ್ ಕಮಿಷನರ ಛತ್ರಿ ಮಹಮ್ಮದ್ ಖಾನರು ಅವರ ಹತ್ತಿರ ಹೋಗಿ ಅವರಿಗೆ ನಿಮ್ಮನ್ನು ಸೆರೆಹಿಡಿಯಲಾಗಿದೆಯೆಂದು ತಿಳಿಸಿದರು.

ಕೂಡಲೇ ಅವರು ಸ್ಟೇಶನಿನ ಹೊರಗೆ ಕರೆತರಲ್ಪಟ್ಟು ಕಾರಿನಲ್ಲಿ ವರ್ಧಮಾನ ಶಿಬಿರದ ಕಡೆಗೆ ಒಯ್ಯಲ್ಪಟ್ಟರು. ಕಾರಿನ ಹಿಂದೆ ಅಶ್ವಾರೋಹಿಗಳೂ ಹೊರಟರು. ಸೌ. ಕಸ್ತೂರಿಬಾಯಿ ಗಾಂಧಿ ಮತ್ತು ಮಣಿಬೇನರು ಗಾಡಿಯಿಂದ ಇಳಿದ ಕೂಡಲೇ ಹೊರಗೆ ನಿಂತ ಜನಸಮುದಾಯವು 'ಮಹಾತ್ಮ ಗಾಂಧಿಕೀ ಜೈ, ಕಸ್ತೂರಿಬಾಯಿಕೀ ಜೈ' ಎಂಬ ಜಯಜಯಕಾರಗಳಿಂದ ಆಕಾಶವನ್ನು ಗದುಗಿಸಿತು.

26 ಜನರ ಬಂಧನ.

ಸೌ. ಕಸ್ತೂರಿಬಾಯಿ ಗಾಂಧಿ ಮತ್ತು ಕುಮಾರಿ ಮಣಿಬೇನ ಪಟೇಲರು ಕಾರಿನಲ್ಲಿ ಅನಿಶ್ಚಿತ ಸ್ಥಳಕ್ಕೆ ಕರೆದೊಯ್ಯಲ್ಪಟ್ಟ ಬಳಿಕ ಸ್ಟೇಶನಿನಲ್ಲಿ ಕೂಡಿದ ಪ್ರಚಂಡ ಜನಸಮುದಾಯವು ಮೆರವಣಿಗೆಯಿಂದ ಆಜಾದ ಮತ್ತು ಗಾಂಧಿ ಚೌಕಿಗೆ ಸಾಗಿ ಅಲ್ಲಿ ಸಭೆಗಳನ್ನು ಜರುಗಿಸಲು ಪ್ರಯತ್ನ ಮಾಡಿತು. ಆದರೆ ಪೋಲೀಸರು ಬಂದು 26 ಜನರನ್ನು ಸೆರೆಹಿಡಿದರು.

ಸೌ. ಕಸ್ತೂರಿಬಾಯಿ ಗಾಂಧಿ ಮತ್ತು ಕುಮಾರಿ ಮಣಿಬೇನ ಪಟೇಲರು ರಾಜಕೋಟೆಯಿಂದ 20 ಮೈಲಿನಲ್ಲಿರುವ ರಾಜಕೋಟೆ–ಸಂಕಾನೇರ ಸಂಸ್ಥಾನಗಳ ಗಡಿಯಲ್ಲಿ ಒಂದು ಖಾಸಗಿ ಬಂಗಲೆಯಲ್ಲಿ ಇಡಲ್ಪಟ್ಟಿರುವರೆಂದೂ ಬಂಗಲೆಯ ಸುತ್ತಲೂ ಪೋಲೀಸಿನವರ ಕಾವಲಿಡಲಾಗಿದೆಯೆಂದೂ ತಿಳಿಯುತ್ತದೆ. ಇವರ ಬಂಧನದ ಬಗ್ಗೆ ನಿಷೇಧ ಸೂಚಿಸಿ ತಾ. 4 ರಲ್ಲಿ ಮೀಟಿಂಗು ನಡೆಯಿತು. ಈ ತಾ. 5 ನ್ನು 'ರಾಜಕೋಟೆ ದಿನ' ವನ್ನಾಗಿ ಆಚರಿಸಲಾಯಿತು. ಜನರು ಮೀಟಿಂಗು ಏರ್ಪಡಿಸಕೂಡದೆಂದೂ, ಬಹಿರಂಗ ಭಾಷಣಗಳನ್ನು ಮಾಡಲಾಗದೆಂದೂ ಹೊರಡಿಸಿದ ಕಟ್ಟಪ್ಪಣೆಯನ್ನು ಉಲ್ಲಂಘಿಸಿದುದಕ್ಕಾಗಿ ತಾ. 4 ರಲ್ಲಿ 12 ಜನರ ಕೈಸೆರೆಯಾಯಿತು. ತಾರೀಕು 5 ರಲ್ಲಿ 25 ಜನರನ್ನು ಸೆರೆಹಿಡಿಯಲಾಗಿದೆ. ರಾಜಕೋಟೆ ಚಳವಳವು ಕರಾಳ ರೂಪವನ್ನು ತಾಳಿದೆ. ಜನರು ಸತ್ಯಾಗ್ರಹವನ್ನು ವಹನೆ ಕೈಕೊಳ್ಳಬಹುದೆಂದು ತಿಳಿದು ಬಂದಿದೆ.

...ಟ್ಟ ಉಪಾಧ್ಯಾಯನಿಂದಲೂ ಹೊಗಳಲ್ಪಟ್ಟಿದ್ದನು. ಒಂದು ದಿವಸವಾದರೂ ಒಂದು ಕೆಟ್ಟ ಮಾತನ್ನಾಡುತ್ತಿರಲಿಲ್ಲ. ನಾವೇನಾದರೂ ಕೂಡಿದ ಸ್ಥಳಗಳಲ್ಲಿ ಹುಡುಗಿಯರ ಮಾತೆತ್ತಿದೆವೆಂದರೆ ಕೂಡಲೆ ಆ ಸ್ಥಳದಿಂದ ಎದ್ದು ಹೊರಟು ಹೋಗುತ್ತಿದ್ದನು. ಆದರೆ ನನಗೆ ಮಾತ್ರ ಅವನ ನಡತೆಯಲ್ಲಿ ಕೇವಲ ಸಂಶಯವಿತ್ತು. ಅವನ ಗುಟ್ಟು ರಟ್ಟಾದ ಮೇಲೆ, ಈಗ ಅವನೆಂತವನೆಂಬುವುದು ಸರಿಯಾಗಿ ಎಲ್ಲರಿಗೂ ತಿಳಿಯಿತು. ಅವನು ಅಷ್ಟು ಸಜ್ಜನನಂತೆ ವರ್ತಿಸುತ್ತಿದ್ದರೂ ಸಹ, ಅವನು ಮೊದಲಿನಿಂದಲೇ ದುರ್ನಡತೆಯಲ್ಲಿ ಮಗ್ನನಾಗಿರಬೇಕು. ಇಲ್ಲದಿದ್ದರೆ, ಇಂತಹ ಮಹತ್ಕಾರ್ಯವನ್ನು ಒಮ್ಮೆಯೇ ನಡೆಸಲು ಅವನಿಂದ ಸಾಧ್ಯವಾಗುತ್ತಿರಲಿಲ್ಲ.

[ಸಶೇಷ.]

ಕೊಡಗಿನ ಭವಿಷ್ಯವೂ, ಕಾರ್ಯ ಸಾಧಿಸುವವರೂ.

(ಲೇಖಕ–ಕೆ. ಪಿ. ಮುದ್ದಪ್ಪ ಬಿ. ಎ.)

ಇನ್ನೊಂದು ಪ್ರಶ್ನೆಯನ್ನು ತಮ್ಮೆಲ್ಲರ ಮುಂದಿಡಬೇಕಾಗಿ ನನ್ನ ಹಾರೈಕೆ. ಕೌನ್ಸಿಲು ಚುನಾವಣೆಯಲ್ಲಿ ಕಾಂಗ್ರೆಸ್ ಮೆಂಬರುಗಳೂ ಮತ್ತು ಇನ್ನಿತರ ಮೆಂಬರುಗಳೂ ವಹ ತಮ್ಮ ಚುನಾವಣೆ ಪತ್ರದ (ಇಲೆಕ್ಷನ್ ಮ್ಯಾನಿಫೆಸ್ಟೊ) ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಸ್ಥಳೀಯ ಸರಕಾರವನ್ನು ಪಡೆಯಲಿಕ್ಕೆ ಪ್ರಯತ್ನಿಸುವೆವೆಂದೂ ಅಥವಾ ಬೇರೆ ದೊಡ್ಡ ಪ್ರಾಂತ್ಯಗಳಿಗೆ ಸೇರಿಸಲು ಮುತುವರ್ಜಿ ತೆಗೆದುಕೊಳ್ಳುವೆವೆಂದೂ ಯಾರೂ ಹೇಳಿರುವ ವಿಷಯ ಕಂಡು ಬರುವುದಿಲ್ಲ. ಹಾಗೆಂದ ಮೇಲೆ ಸದ್ಯದ ಕೌನ್ಸಿಲು ಮೆಂಬರುಗಳಿಗೆ ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವುದಕ್ಕೆ ಅಧಿಕಾರವಿಲ್ಲವೆಂದೇ ನನಗೆ ಕಂಡು ಬರುವುದು. ಅವರಿಗೆ ಜನತೆಯ ಬೆಂಬಲವಿರುವುದಿಲ್ಲ. ಹಾಗೆ ಮಾಡಬೇಕಾದಲ್ಲಿ ಅವರು ಪುನರಾವೃತ್ತಿ ಚುನಾವಣೆಯನ್ನು ತಂದು ಅವರವರ ಕಾರ್ಯಕ್ರಮಗಳನ್ನು ಕಂಡು ಜನರಿಗೆ ತಿಳಿಸಿ ಆ ಮೇಲೆ ಜನರು ಯಾವ ಪಕ್ಷದವರನ್ನು ಬಹುಮತದಿಂದ ಕೌನ್ಸಿಲಿಗೆ ಕಳುಹಿಸುತ್ತಾರೋ ಅವರ ಕಾರ್ಯಕ್ರಮವನ್ನು ಸಾಧಿಸಬೇಕಲ್ಲದೆ, ಮುಂಬಿನ ಎಲ್ಲಾ ಕಾಲಕ್ಕೂ ಕೊಡಗಿನ ಭವಿಷ್ಯತ್ತನ್ನು ಕಟ್ಟಿ ಹಾಕುವಂಥಾ ಅತೀ ಮಹತ್ವದ ಪ್ರಶ್ನೆಯನ್ನು ಜನರ ತಿಳುವಳಿಕೆಯಿಲ್ಲದೆ ತೀರ್ಮಾನಿಸುವುದು ಸರಿಯಲ್ಲ. ಇಂಥಾ ಹೆಚ್ಚು ಬಾಧ್ಯತೆಗಳನ್ನು ಜನರೇ ಹೊತ್ತುಕೊಳ್ಳಬೇಕಲ್ಲದೆ ಸ್ವಾರ್ಥಕ್ಕಾಗಿ ಹೊಡೆದಾಡುವ ಮುಂದಾಳುಗಳಿಗೆ ಬಿಡುವುದು ರಾಜಕಾರಣದ ನಿಯಮಗಳಿಗೆ ವಿರೋಧವಾಗಿದೆ. ಆದ್ದರಿಂದ ಕೊಡಗು ಕೌನ್ಸಿಲಿನ ಕಾಂಗ್ರೆಸ್ ಪಕ್ಷದವರು ಕೊಡಗನ್ನು ಪ್ರತ್ಯೇಕವಾಗಿಡುವ ಮೊದಲು ಪುನರಾವೃತ್ತಿ ಚುನಾವಣೆಯನ್ನು ಹೂಡಿ ದೇಶದ ಎಲ್ಲಾ ಕಡೆಗಳಲ್ಲಿ ಸಭೆ ಸಮೂಹಗಳನ್ನು ಕೂಡಿಸಿ ಅವರಿಗೆ ಕೊಡಗಿನ ಬಿಕ್ಕಟ್ಟಿನ ಪರಿಸ್ಥಿತಿಯನ್ನೂ, ಹೊಸ ಇಂಡಿಯಾ ಕಾಯಿದೆಗೂ ಮತ್ತು ಕೊಡಗಿನ ಭವಿಷ್ಯತ್ತಿಗೂ ಇರುವ ಸಂಬಂಧವನ್ನು ಬಿಚ್ಚಿ ಸಂಪೂರ್ಣ ಹೇಳಿ, ಆ ನಂತರ ಚುನಾವಣೆಯಲ್ಲಿ ಅವರಿಗೆ ಬಹುಮತ ಸಿಕ್ಕಿದಲ್ಲಿ ತಮ್ಮ ಕಾರ್ಯವನ್ನು ಸಾಧಿಸಬಹುದು. ಇದನ್ನು ಕೊಡಗಿನ ಜನರೆಲ್ಲರೂ ಗಮನಕ್ಕೆ ತಂದುಕೊಳ್ಳಬೇಕಾಗಿ ನನ್ನ ಪ್ರಾರ್ಥನಾಪೂರ್ವಕ ವಿನಂತಿ.

ಇನ್ನು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಗೌರವ ಕಾರ್ಯದರ್ಶಿಯವರು ಕೊಡಗು ಕಾಂಗ್ರೆಸ್ ಪ್ರೆಸಿಡೆಂಟರವರಿಗೆ ಮತ್ತು ಕಮಿಟಿಗೆ ಬರೆದ ಉತ್ತರವನ್ನು ನೀವೆಲ್ಲರೂ ಕೇಳಿರಬಹುದು. ಅದರಲ್ಲಿ ಕಾಣುವುದೇನೆಂದರೆ ಕೊಡಗು ಕಾಂಗ್ರೆಸ್ಸಿನವರು ಯಾವ ಕಾರ್ಯವನ್ನು ಮಾಡಬೇಕಾದರೂ ಕೆ. ಪಿ. ಸಿ. ಸಿ. ಯನ್ನು ಕೇಳಿ ಅದರ ಅಪ್ಪಣೆಯಂತೆ ನಡೆಯಬೇಕಲ್ಲದೆ ತಮ್ಮ ಸ್ವಂತ ಅಭಿಪ್ರಾಯದಂತೆ ಮಾಡುವುದು ತಪ್ಪೆಂದೂ ಕಂಡು ಬರುವುದು. ಈ ಉತ್ತರವು ಕೊಡಗಿನ ಕಾಂಗ್ರೆಸ್ಸಿನವರ ಉದ್ದೇಶವನ್ನೂ ಅವರು ಕಾಂಗ್ರೆಸ್ ನಿಯಮಕ್ಕೆ ವಿರೋಧವಾಗಿಹೋಗಿರುವ ಆಡಂಬರವನ್ನೂ ಎತ್ತಿ ತೋರಿಸುವುದು. ಇದಲ್ಲದೆ ಬೇರೆ ಯಾವ ಸಂಗತಿಯೂ ಈ ಪತ್ರದಿಂದ ಗಣನೀಯವಾಗುವುದಿಲ್ಲ. ಮತ್ತು ಕೊಡಗಿನ ಜನರುಕೊಡಗಿನ ಭವಿಷ್ಯತ್ತನ್ನು ಗುರ್ತಿಸಲು ಚಳವಳ ಹೂಡಬಹುದು ಎಂದೂ ಹೇಳಬಹುದು. ಆದರೆ ಕೊಡಗಿನ ಜನರೆಲ್ಲರೂ ಕಾಂಗ್ರೆಸ್ ಸದಸ್ಯರೆಂದೋ ಅಥವಾ ಕಾಂಗ್ರೆಸ್ ಮುಂದಾಳುಗಳೆಂದೊ ತಿಳಿದುಕೊಳ್ಳುವುದು ತಪ್ಪಭಿಪ್ರಾಯ. ಇನ್ನೊಂದು ಸಮಾಚಾರದಿಂದ ಕೊಡಗಿನಿಂದ ಡೆಪ್ಯುಟೇಶನ್ ಹೋದವರಿಗೂ ಕೊ. ಕಾ. ಕ. ಅಧ್ಯಕ್ಷರಿಗೂ ಮತ್ತು ಮೆಂಬರುಗಳಿಗೂ ಸಿಕ್ಕಿರುವ ಅವ್ವಾಹನ ಪತ್ರವಾವುದೂ ಗೋಚರವಾಗುವುದಿಲ್ಲ. ಅವರನ್ನು ಎಚ್ಚರಿಸಿದುದು ಮಾತ್ರವಾಗಿದೆ.

ಇಡೀ ದೇಶವನ್ನು ಒಂದುಗೂಡಿಸಿ ಮೇಲೆತ್ತುವುದರ ಬದಲು, ಬೇರೆ ಬೇರೆ ವಿಭಾಗಿಸಿ ಹರಿದು ಹಂಚಿ ಚುಚ್ಚು ಚೂರಾಗಿ ಸಿಡಿದೆಳೆಯುವುದು ಕಾಂಗ್ರೆಸ್ಸಿನ ತತ್ವವಲ್ಲ. ಕೊಡಗಿನ ಕಾಂಗ್ರೆಸ್ಸು ಮುಂದಾಳುಗಳೆಂದು ಹೇಳಿಕೊಳ್ಳುವವರಿಗೆ ಇದು ಒಂದು ಅಪೂರ್ವವಾದ ಸಂಗತಿಯಾಗಿದೆ. ಹೇಗೆ ಪ್ರತ್ಯೇಕವಿಡುವುದಾಗಿದ್ದರೆ ಶ್ರೀಮತಿ ಕಮಲಾದೇವಿಯವರೋ, ಶ್ರೀಯುತ ಮುದವೀಡು ಕೃಷ್ಣರಾಯರೋ, ಡಾ. ಹರ್ಡೀಕರರೋ, ಕಿಲ್ಲೆಯವರೋ ಕೊಡಗಿಗೆ ತೆರಳಿ ಕೊಡಗಿನ ಕಾಂಗ್ರೆಸ್ಸಿನವರ ಕಾರ್ಯ ಸಾಧಿಸಲು ಉದ್ದೇಶದ ಭಾಷಣ ಉದ್ಘಾಟನೆಗಳನ್ನು ಏನೂ ಮಾಡುತ್ತಿರಲಿಲ್ಲವಾಗಿ ನನಗೆ ತೋರುವುದು. ಇದನ್ನು ಕೊಡಗಿನವರು ಇನ್ನೂ ಮರೆತಿಲ್ಲವಾಗಿ ನಂಬುತ್ತೇನೆ.

ಇಷ್ಟು ಹೇಳಿ ಜನರು ತುಂಬಾ ಶ್ರದ್ಧೆಯಿಂದ ಇವುಗಳೆಲ್ಲವನ್ನು ಅಭ್ಯಸಿಸಿ ಸಂಪೂರ್ಣ ದೂರದೃಷ್ಟಿಯಿಂದ ಅವಲೋಕಿಸಿ ಇನ್ನೊಂದು ಮಹತ್ವವಾಗಿರುವ ನಿರ್ಣಯವಲ್ಲದೆ ಇನ್ನು ಮುಂದಿನವರ ಅಭಿವೃದ್ಧಿ ಅವನತಿಗಳನ್ನೂ ನಿರ್ಧರಿಸುವ ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸಬೇಕು ಮುನ್ನದಯಲ್ಲಿ ಮುಂದಿನ ವೃತ್ತಿಯನ್ನು ದಯವಿಟ್ಟು ವಿವೇಚಿಸಿಕೊಳ್ಳುವನಾಗಿದ್ದೇನೆ. ಅಲ್ಲದೆ ಕೊಡಗಿನ ಜನರೆಲ್ಲರೂ ಒಗ್ಗಟ್ಟಿನಿಂದ ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದು ಘನ ಸರಕಾರವನ್ನು ಹಠತೊಟ್ಟು ಕೇಳಿಕೊಂಡಲ್ಲಿ ಘನ ಸರಕಾರವು ನಿಜವಾಗಿಯೂ ನಮ್ಮ ಅನೇಕ ಸಂತಾಪಗಳನ್ನು ನೀಗುವುದರಲ್ಲಿ ಯಾವ ಸಂದೇಹವಿಲ್ಲ. ಹೀಗೆ ಮಾಡದಿದ್ದ ಪಕ್ಷದಲ್ಲಿ ಸಂಪೂರ್ಣ ಸ್ವರಾಜ್ಯ ಸಿಕ್ಕುವ ಗಳಿಗೆ ಇಲ್ಲವೇ ಅದಕ್ಕೆ ಮುಂದಾಗಿಯೋ ಕರ್ನಾಟಕ ಪ್ರಾಂತವನ್ನು ನಿರ್ಮಿಸುವ [illegible] ಕಾಲಕ್ಕೆ ಜೊತೆಯ ಅವಿಧೇಯತೆಯಲ್ಲಿ [illegible], ಬಡ್ಡಿ ರೂ ಆಗುತ್ತೀವ. ಕನ್ನಡ ನಾಡು ಭಾಷಾ ದೇವಿಯ ಮಡಿಲಿನಲ್ಲಿ ಸೇರಿ ನಮ್ಮ ನೀತಿ, ನಡತೆ, ಧರ್ಮ, ವ್ಯವಹಾರ ಇತ್ಯಾದಿಗಳೇ ಮೊದಲಾದವುಗಳು ಅಭಿವೃದ್ಧಿಯಾಗುವುದೇ ಹೊರತು ನಮ್ಮ ಅಧೀನದ ಸರ್ಕಾರದ ಹಾಗೂ ಜನತೆಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಹಾರಗಳ ಮೇಲ್ಗತಿಯನ್ನು ಹೊಂದುವದೆಂಬದಕ್ಕೆ ಯಾವ ಶಂಕಾಸಂದೇಹಗಳು ತೋರ್ಪಡುವುದಿಲ್ಲ. ಮತ್ತು ಮೈಸೂರಿನೊಡನೆ ಸೇರಿದೊಡನೆಯೇ ಈಗ ಅಸಾಧ್ಯವೆಂದು ಕಂಡುಬರುವ ಸ್ಥಳೀಯ ಸರ್ಕಾರವು ತಾನಾಗಿಯೇ ಬೆಟ್ಟಗುಡ್ಡಗಳನ್ನೆಲ್ಲಾ ಹುಡುಕಿ, ಬೇಸತ್ತು ಹಿಂತಿರುಗಿ ಬರುವಾಗ ದಾರಿಯಲ್ಲೇ ಎದುರಿಗೆ ಎದ್ದು ನಿಂತಿರುವ ಆಂಜನೇಯ ಸಂಜೀವಿನಿ ಔಷಧಿಯಂತೆ ನಮ್ಮನ್ನೆಲ್ಲಾ ಅಗಾಧವಾದ ಸಂತೋಷ ಸಾಗರದಲ್ಲಿ ಮುಳುಗಿಸಬಹುದಾಗಿ ಮಿಂಚಿನಂತೆ ಹೊಳೆಯುತ್ತದೆ. ಸ್ವಾತಂತ್ರ್ಯವನ್ನು ಜನರೇ ಹೋರಾಡಿ ಸಾಹಸದಿಂದ ಪಡೆಕೊಳ್ಳಬೇಕು. ತಾನಾಗಿಯೇ ಬಹುಮಾನವಾಗಿ ದೊರಕುವುದೇ ಇಲ್ಲ.

'Freedom is an achievement and not a gift'

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,
52-33 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಪೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪಡೆದವರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-48

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ

ಗಣೇಶ. ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52-9) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ತರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

29 ಸಿ. ಹೆಚ್. ರಾಮುಣ್ಣಿ ವೈದ್ಯರ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ತಂಡೇಪಂಡ ಸೋಮಯ್ಯನವರು,
ಮೆ ಕೆ ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಪನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ. ನಾಗಪ್ಪನವರು.
ನಾಪೋಕ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು

ಸೂಚನೆ.— ಪ್ರಿಂಟಾಗಿರುವ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಫೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಆಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	--	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ತ್ರಿಫ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟ್:-ಕುಂಬ್ಯಂಡ ಐ. ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯವರು.
ಸೆಕ್ರೆಟರಿ:—ಮೆ. ಎಸ. ಎನ್. ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗಿನ ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55	ರೂ 35	ರೂ 2[illegible]
6 ತಿಂಗಳಿಗೆ—	„ 100.	„ 35	„ 22	„ 1[illegible]
3 ತಿಂಗಳಿಗೆ—	„ 60.	„ 20	„ 13.	„ 8
1 ತಿಂಗಳಿಗೆ—	„ 25.	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಜೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ಡಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗ.

62-5

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1909

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೧೭—೨—೧೯೪೯.

ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೮] [ಸಂಚಿಕೆ ೩೭

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-10

ಚ್ಯವನಪ್ರಾಶ

ಚ್ಯವನ ಪ್ರಾಶವೆಂಬದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಶೀತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ರಾಮಬಾಣವು.

ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉಧರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಕುಟ್ಟಯ್ಯ, ಗೋಣಿಕೊಪ್ಪಲು. [26]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಕುಳಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ ಹಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

13

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ಶಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾನದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-37

The Agricultural &
Industrial Bank Ltd

"ZANDU"
ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-21) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೨
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೫೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು
೧೯೨೭ ———— ೨೧,೩೫,೨೩೮ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಚಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೮೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-21

ವಿವಿಧ ವಿಚಾರ.

ದ್ವಿನಳಿಗೆಯ ಫೌನ್‌ಟೆನ್‌ಪೆನ್.

ಎರಡು ಕೊಳವೆಗಳನ್ನುಳ್ಳ ಫೌನ್‌ಟೆನ್‌ಪೆನ್ ಒಂದು ಕಂಡುಹಿಡಿಯಲ್ಪಟ್ಟಿದೆ. ಇದರಿಂದ ಎರಡು ಶಾಯಿಯಲ್ಲಿ ಬರೆಯಬಹುದು. ಕಪ್ಪು ಮಸಿಯಲ್ಲಿ ಬರೆಯುತ್ತಿದ್ದಾಗ ಮುಖ್ಯ ವಿಚಾರವನ್ನು ಗುರುತು ಮಾಡಬೇಕಾದಾಗ ಈ ಪೆನ್‌ಗೆ ಅಲ್ಲೇ ಸೇರಿಸಿರುವ ಒಂದು ಗುಂಡಿಯನ್ನು ಒತ್ತುವುದರಿಂದ ಕೆಂಪು ಶಾಯಿಯು ಬರುವುದಂತೆ.

—೦()೦—

ಮೋಟಾರುಗಳಿಲ್ಲದ ವಿಮಾನಗಳು.

ಇಟಲಿ ಸರ್ಕಾರವು ಮೋಟಾರುಗಳಿಲ್ಲದ ವಿಮಾನಗಳನ್ನು ಸಂಗ್ರಹಿಸಲು ತೊಡಗಿದೆ. ಮೋಟಾರಿದ್ದರೆ ಅವಕ್ಕೆ ಪೆಟ್ರೋಲು ಬೇಕಾಗುವದು. ಒಂದು ವೇಳೆ ಪೆಟ್ರೋಲ್ ಸಿಕ್ಕದೆ ಹೋದರೆ ಹಾಗೆಯೇ ಬೇರೆ ವಿಧದಲ್ಲಿ ನಡೆಸಲನುವಾಗಲೆಂದು ಈ ರೀತಿ ಮಾಡಲಾಗಿದೆ. ದೋಣಿಯ ಹುಟ್ಟನ್ನು ಬಗೆಯುವಂತೆಯೇ ಇವರ ಬೀಸಣಿಗೆಗಳನ್ನು ಸುಲಭವಾಗಿ ತಿರುಗಿಸಬಹುದಂತೆ. ಇದರೀತಿ ಗಂಟೆಗೆ 25 ಮೈಲಿ ವೇಗವನ್ನು ಮುಟ್ಟಬಹುದಂತೆ.

—೦()೦—

ಜಪಾನಿನ ಇತ್ತೀಚಿನ ಸಾಧನೆ.

ಸದಾ ಬಿರುಗಾಳಿಗೆ ತುತ್ತಾಗಿರುವ (ಜಪಾನಿನ) ಈಶಾನ್ಯ ಸಮುದ್ರ ತೀರದಲ್ಲಿ ಸಹಸ್ರಾರು ಪೌಂಡುಗಳ ತೂಕದಷ್ಟು ಸಮುದ್ರ ಪಾಚಿಯು ಬಂದು ಬೀಳುವುದು. ಇದು ಜಪಾನಿಯರ ಅತ್ಯಂತ ಪ್ರಿಯ ಭೋಜನದ ಒಂದಂಶವೂ ಹೌದು. ಈಗ ಜಪಾನೀಯರು ಇದರಿಂದ ಉಣ್ಣೆಯನ್ನು ತಯಾರಿಸುವುದರಲ್ಲಿ ಕೃತಕೃತ್ಯರಾಗಿರುವರು.

ಟೋಕಿಯೋಗೆ ಸೇರಿದ 'ಎ ಟೊಹೊ ಆರ್ಟಿಫಿಷಿಯಲ್ ಫೈಬರ್ ಕಂಪೆನಿ'ಯವರು ದಿನವೊಂದಕ್ಕೆ ಈ ಪಾಚಿಗಳಿಂದ 3 ಟನ್ ಉಣ್ಣೆಯನ್ನು ತಯಾರಿಸಬಲ್ಲ ಒಂದು ಕಾರ್ಖಾನೆಯನ್ನೀಗ ಕಟ್ಟಿರುವರು.

—೦()೦—

ವಾರ್ತೆಗಾರರ ಭಾವನಾ ಕೌಶಲ್ಯ.

ಜೇಗ್ ಫೆಲ್ಡ್ ಪ್ರೆಸ್ಸಿನ ಚತುರ ವಾರ್ತೆಗಾರನು ಒಮ್ಮೆ ತನ್ನ ಭಾವನಾ ಕೌಶಲ್ಯದಿಂದ ಒಂದು ವಾರ್ತೆಯನ್ನು ಹೊರಡಿಸಿದನು. ಅದಾವುದೆಂದರೆ—ಶತಮಾನದಲ್ಲೇ ಸುಮಾರು 10 ವರ್ಷಗಳ ಮೊದಲು ಒಬ್ಬ ಗೌಳಿಗನು ಫ್ಲೊರೆಂಜ್ ಜೇಗ್ ಫೆಲ್ಡ ಎಂಬೊಬ್ಬನ ಮೇಲೆ 10 ಡಬ್ಬಿ ಹಾಲಿನ ಹಣಕ್ಕೆ ದಾವೆ ಹೂಡಿರುವನು. ಆ ಗೌಳಿಗನು ಜೇಗ್ ಫೆಲ್ಡ ಮಹಾಶಯನಿಗೆ ದಿನಾಲೂ ಎರಡು ಡಬ್ಬಿ ಹಾಲನ್ನೊದಗಿಸಲು ಒಪ್ಪಿದನು. ಈ ವಾರ್ತೆಯನ್ನು ಕೇಳಿ ಜನರು ಆಶ್ಚರ್ಯಚಕಿತರಾಗಿ ಆ ಮಹಾಶಯನಿಗೆ ಅಷ್ಟು ಹಾಲೇಕೆ ಬೇಕಾಯಿತೆಂದು ತಿಳಿಯಬಯಸಿದರು. ಕೊನೆಗೆ ಸೌಂದರ್ಯ ಕುಶಲಗಾರನೊಬ್ಬನು ಒಂದು ವಿಶೇಷ ಸಂಗತಿಯನ್ನು ಬಯಲಿಗೆ ತಂದನು. ಆ ಮಹಾಶಯನು ಅಷ್ಟು ಹಾಲನ್ನು ಕುಡಿಯಲಿಕ್ಕೆ ಉಪಯೋಗಿಸುತ್ತಿದ್ದಿಲ್ಲ. ತನ್ನ ಪತ್ನಿಯ ಸೌಂದರ್ಯ ವರ್ಧನೆಗಾಗಿ ಆಕೆಯ ಸ್ನಾನಕ್ಕಾಗಿ ಉಪಯೋಗಿಸುತ್ತಿದ್ದನೆಂಬುದೇ ಆ ಸಂಗತಿ. ಈ ವಾರ್ತೆಯು ಕೇವಲ ಭಾವನಾತ್ಮಕವೆಂದು ಇತ್ತೀಚೆಗೆ ತಿಳಿದು ಬಂದರೂ ಸೌಂದರ್ಯವರ್ಧನೆಗಾಗಿ ಹೆಣಗಾಡುವ ಹೆಂಗಸರು ಹಾಲಿನ ಸ್ನಾನ ಮಾಡಿ ಮೈ ಜಿಗಟುಮಾಡಿಕೊಳ್ಳುವದನ್ನು ಬಿಟ್ಟುಬಿಡಲಿಲ್ಲ. ಅದರ ಪ್ರಯೋಜನ ಅವರಿಗೆ ಹಿತ ಕಂಡಿರಬಹುದೆಂದು ಊಹಿಸೋಣ.

—೦()೦—

ಜಪಾನ್—ಚೀನಾ.

ಈ ಸಂಗ್ರಾಮದಿಂದ ತನಗೆ ನಷ್ಟವೇನೂ ಆಗಿಲ್ಲ, ಬದಲು ಚೀನಾ ಸೈನಿಕರ ಅನೇಕಾನೇಕ ಶಸ್ತ್ರಾಸ್ತ್ರಗಳು ದೊರೆತಿವೆ ಎಂದು ಡಂಗುರ ಸಾರುವ ಜಪಾನು ಈಗ ಕೊಂಚ ಖರ್ಚಿಗೆ ಹಣಬೇಕು ಎನ್ನುತ್ತಿದೆ. ಆರ್ಥಿಕ ಸಚಿವರು ಮುಂದಿನ ಒಂದು ವರ್ಷದಲ್ಲಿ ಬೇಕಾದಂತೆ ತೆರಿಗೆ ಹೊರಿಸಿ, 300 ಮಿಲಿಯ ಯೆನ್ ಹೆಚ್ಚಿಗೆ ಕೂಡಿಸಲು ಯೋಚಿಸಿದ್ದಾರೆ. ಈ ಹೆಚ್ಚಿನ ಹಣ ಚೀನದ ಯುದ್ಧಕ್ಕಾಗಿ. ಇವುಗಳಲ್ಲಿ ಆದಾಯ ತೆರಿಗೆಯಿಂದ ಸುಮಾರು 80 ಮಿಲಿಯ ಯೆನ್, ಉಪಯುಕ್ತ ಜಿನಸಿನ ಮೇಲೆ ಹೊರಿಸಲಾಗುವ ತೆರಿಗೆಯಿಂದ 60 ಮಿಲಿಯ ಯೆನ್ ದೊರೆಯುವುದಲ್ಲದೆ; ಉಳಿದುದು ಕಾಫಿ, ಚಾ, ಹಣ್ಣು ಮುಂತಾದುವುಗಳ ಮೇಲಿನ ಕರದಿಂದ ತುಂಬುವುದು. ದೊಡ್ಡ ಟೀ ಪಾರ್ಟಿ ಕಟ್ಟಡಗಳ ಮೇಲೂ ತೆರಿಗೆ ಇದೆ. ಸಕ್ಕರೆ ಮೇಲಿನ ತೆರಿಗೆಯಿಂದ 10 ಮಿಲಿಯ ಯೆನ್ ಬರಬಹುದು. ಇದರೊಂದಿಗೆ ಜಪಾನಿನ ಜನರ ಬಳಿ ಇರಬಹುದಾದ ಚಿನ್ನಾಭರಣಗಳ ಲೆಕ್ಕ ತೆಗೆಯಲಾಗುವುದು. ಇದು ಜಪಾನಿಗಾದ ಲಾಭ!

—೦()೦—

ಮುದುಕರ ಸಂತೆ.

ಜಪಾನಿನಲ್ಲಿ ಆರೋಗ್ಯದ ಕಡೆ ಲಕ್ಷ್ಯ ಕಡಿಮೆ. ಆರೋಗ್ಯದ ನಿಯಮಾವಳಿಗಳನ್ನು ಅಲ್ಲಗಳೆದವರೇ ಅಧಿಕ. ಕೊಂಚ ಕುಡಿಯೋಣ ಅಂದಲ್ಲಿ ಹಾಲಿನ ವಿಚಾರದಲ್ಲಿ ಮಾತ್ರ. ಅಲ್ಪ ಕಾಯಿಪಲ್ಯಗಳನ್ನಷ್ಟೇ ತಿನ್ನುವರು. ಬಿರಿಯರಾದವರು ಮದ್ಯ ಕುಡಿಯುವುದಕ್ಕೂ, ಸೇದುವದಕ್ಕೂ ಲೆಕ್ಕವೇ ಇಲ್ಲ. ಆದಲು, ಜಪಾನಿನಲ್ಲಿ ನಮ್ಮಲ್ಲಿನಂತೆ ಪಾಪಕರವಲ್ಲ. ಬದಲು ಕೊಂಚ ಹಾಳು ಅಭ್ಯಾಸ. ಆದರೆ ಇಲ್ಲಿ ನೂರು ವರ್ಷ ಪ್ರಾಯ ಮೀರಿದವರಿಗೆ ಕೊರತೆ ಇಲ್ಲ. ಇದಾಗಲೇ ಸುಮಾರು ಒಂದು ನೂರು ಮಂದಿ ಇಂತವರು ಸರ್ಕಾರದ ಪುರಸ್ಕಾರ ಹೊಂದಿದ್ದಾರೆ. ಇವರೆಲ್ಲ 100ರಿಂದ 114ರ ವರ್ಷದೊಳಗಿನವರು! ಪುರಸ್ಕಾರ ಹೊಂದಿದವರಲ್ಲಿ ಅತೀ ಕಿರಿಯವನಾದ 100 ವರ್ಷದ ತರುಣ. ಈಗಲೂ ಒಬ್ಬ ಉಪಾಧ್ಯಾಯ.

—೦()೦—

ಸಿನಿಮಾದಲ್ಲಿಯೂ ಬಾಧೆ.

ನೀವು ಸಿನೆಮಾ ನೋಡುವ ವೇಳೆ ತೊಂದರೆ ಕೊಡುವವರು ಯಾರು ಗೊತ್ತೇ? ಅಚೆ ಈಚೆಗಿನ ಮಂದಿಯಲ್ಲ. ಬದಲು ಆ ನಿಮ್ಮ ಮುಂದೆ ಕುಳಿತ ಮಹಾತ್ಮನ 'ಟೊಪ್ಪಿ' ಅಥವಾ 'ಹ್ಯಾಟು'. ಇದರ ಜೊತೆಗೆ ಸಾಹುಕಾರ ಜಾತಿಯವರ ವ್ಯವಹಾರದ ಮಾತು ಇರಬಹುದೆನ್ನಿ. ಆದರೆ ಅದಷ್ಟು ತೊಡಕಾಗದು. ಅದೇ ಪ್ಯಾರಿಸ್ ಹಾಗೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ತ್ರೀಯರಿಗೆ ದೇವರ ದಯೆಯಿಂದ ಪ್ರತ್ಯೇಕ ಸ್ಥಳ ಏರ್ಪಡಿಸಲ್ಪಡಲಿಲ್ಲ. ದಿನ ದಿನ ಹೆಚ್ಚುವ ಫ್ಯಾಶನ್ ತೊಡಕಿನಿಂದ ಉದ್ದದ ಹ್ಯಾಟುಗಳನ್ನಿಡುವ ಈ ಸ್ತ್ರೀಯರು ಗಂಡಸರ ಕೇಳಿಕೆಗೆ 'ಕ್ಯಾರ್' ಮಾಡದೆ ಹ್ಯಾಟ್ ತೆಗೆಯದೆ ತೊಂದರೆ ಕೊಡುವದರಿಂದ ಅಲ್ಲಿನ ಸಿನಿಮಾ ಕಂಪೆನಿಗಳ ಅಧಿಕಾರಿಗಳೇ ಚಿತ್ರ ಆರಂಭವಾಗುವ ಮೊದಲು ಒಂದು 'ನೋಟಿಸು ಪ್ರದರ್ಶಿಸುವರು. 'ಇದರಲ್ಲಿ 'ನಿಮ್ಮ ನಿಮ್ಮ ಹ್ಯಾಟುಗಳು ಹಾರಿಬಿಡಬಹುದು ಕಾಪಾಡಿಕೊಳ್ಳಿ' ಎಂದಿರುವುದರಿಂದ ಕೂಡಲೇ ಎಲ್ಲರೂ ಹ್ಯಾಟುಗಳನ್ನು ತೆಗೆದು ಕೆಳಗಿರಿಸಿಕೊಳ್ಳುವರಂತೆ. ನಮ್ಮ ಪ್ರೊಪ್ರೈಟರುಗಳು ಇದು ಮನೆಯಲ್ಲ ನಾಟಕಶಾಲೆ' ಎಂಬ ನೋಟೀಸನ್ನೇಕೆ ಪ್ರದರ್ಶಿಸಬಾರದು?

—೦()೦—

ಜರ್ಮನಿಗೆ ರಬ್ಬರ್.

ಜರ್ಮನಿಗೆ ಹೊರ ದೇಶದಿಂದ ರಬ್ಬರ್ ಬರಬೇಕಾಗಿದೆ. ಆದರೆ ಅದನ್ನು ತಡೆದು ಕೃತಕ ರಬ್ಬರು ತಯಾರಿಸಲು ಇದೀಗ ಜರ್ಮನಿಯು ಮುಂದಾಗಿದೆ. ತಿಂಡಿತೀರ್ಥ ಬಟ್ಟೆ ಬರೆ ಮನೆ ಮಠಗಳೊಡನೆ ಮಕ್ಕಳು ಮರಿಗಳನ್ನು ಕೃತಕ ರೀತಿಯಿಂದ ತಯಾರಿಸುತ್ತಿರಲು ರಬ್ಬರೊಂದೇ ಏನು ಮಹಾ? ಪಲ್ಲಿಯ ಬಳಿ ಸ್ಕೊಪೌನಲ್ಲೊಂದು ಕಾರ್ಖಾನೆ ತಯಾರಾಗುತ್ತಿದೆ. ಇದರಲ್ಲೀಗ ಬೇರೆ ಬೇರೆ ತೆರನ ಟಯರುಗಳನ್ನು ತಯಾರಿಸಲಾಗುವುದು ಈ ಒಂದು ಕಾರ್ಖಾನೆ ತಯಾರಾದೊಡನೆ ಬೇರೆ ಇಂಥ ಅನೇಕ ಕಾರ್ಖಾನೆಗಳು ಸಿದ್ಧವಾಗಲಿವೆಯಂತೆ. ಸರಿ ಕೃತಕ ಟಯರು ಇಲ್ಲಿಗೆ ಬರುವುದೇ ನೋಡೋಣ!

—೦()೦—

ತಾರೀಕು ಪಟ್ಟಿ.

ಹೊಸ ವರ್ಷದ ಶುಭ ದಿನದಲ್ಲೇ ಇಸ್ಪೀಟು ಆಡುವವರಿಗೆಲ್ಲ ಧರ್ಮಾರ್ಥವಾಗಿ ಒಂದು ತಾರೀಕು ಪಟ್ಟಿ (ಕೆಲೆಂಡರ್) ಕೊಡುವೆ; ಕೊಳ್ಳಿರಿ! ಇಸ್ಪೀಟು ಪಿಡಿಯಲ್ಲಿ 52 ಎಲೆಗಳಿವೆ. ಅಷ್ಟೇ ವಾರಗಳು ಒಂದು ವರ್ಷಕ್ಕೆ. ಅದರಲ್ಲಿ ಹನ್ನೆರಡು ಚಿತ್ರದ ಎಲೆಗಳಿವೆ (ರಾಜ, ರಾಣಿ, ಗುಲಾಮ) ವರ್ಷಕ್ಕೆ ಹನ್ನೆರಡು ತಿಂಗಳಿವೆ ಪಿಡಿಯಲ್ಲಿ ನಾಲ್ಕು ಜಾತಿಯ ಎಲೆಗಳಿವೆ; ವರ್ಷದಲ್ಲಿ ಇಂಗ್ಲಿಷ್ ಪದ್ಧತಿಯಂತೆ ನಾಲ್ಕು ಕಾಲಗಳಿವೆ. ಅದರಲ್ಲಿ ಹದಿಮೂರು ವಾರಗಳು ಒಂದು ಕಾಲ (ಮೂರು ತಿಂಗಳು)ಕ್ಕೆ ಇವೆ. ಕಾರ್ಡಿನಲಿನ ಅಂಕೆಗಳು ಒಟ್ಟು 365. ಅಷ್ಟೇ ದಿನ ಒಂದು ವರ್ಷಕ್ಕೆ. ನಿಮಗೇಕೆ ಇನ್ನು ಕೆಲೆಂಡರು?

—೦()೦—

ಮಿತಮಿತ ತಿನ್ನುವುದರಿಂದ ದೇಹದಾರ್ಢ್ಯ ಬರಲಾರದೇನು?

ಒಮ್ಮೆ ಸರ್ ಲಿಯೊನಾರ್ಡ್ ಹಿಲ್ ಎಂಬ ವಿಜ್ಞಾನಿಯೋರ್ವನು ಒಂದು ಕೋತಿಗೆ ಬೇಕಾಗುವಷ್ಟು ಅಲ್ಪ ಆಹಾರದಿಂದ ಪರಿಪುಷ್ಟನಾಗಿ ಬೆಳೆದಿರುವ ಬಾಲಕನನ್ನು ನಾನು ಕಂಡಿರುವೆನೆಂದು ಸಾರಿದಾಗ ಆತನ ಮಾತುಗಳು ವೈದ್ಯರಿಗೊಂದು 'ಚಟ'ಯಾಗಿ ಕಂಡವು. ಈಗ ಅವು ನಿಜವೆಂದು ಜನರ ತಿಳುವಳಿಕೆಗೆ ಬಂದಿದೆ.

ಎಮರ್‌ಶಾಮ್ ಬಾಸ್‌ಫಂಟ್ ಪಾರ್ಕಿನಲ್ಲಿ ಕ್ರಿಸ್ಟೋಫರ್ ಬೊಸಂಕ್ವೆಟ್ ಎಂಬ 9 ವರ್ಷದ ಒಬ್ಬ ಬಾಲಕನಿರುವನು. ಈತನ ದಿನ ನಿತ್ಯದ ಆಹಾರವಿದು— ಒಂದು ಸೀಬೆ ಹಣ್ಣು, ಒಂದು ಚಾ ಚಮಚೆಯಷ್ಟು ಜೇನು, ಒಂದು ಚಾ ಚಮಚೆಯಷ್ಟು ಪಲ್ಯ ಮತ್ತು ಒಂದು ಕಪ್ ತಿಳಿನೀರು. ಇಷ್ಟು ಅಲ್ಪವಾದ ಆಹಾರದಿಂದ ಬೆಳೆದ ಒಂಬತ್ತು ವರ್ಷ ಪ್ರಾಯದ ಈ ಅಪ್ರತಿಮ ಬಾಲಕನು ಗಟ್ಟಿಮುಟ್ಟಾದ ಒಬ್ಬ ಮನುಷ್ಯನಷ್ಟು ಗಾತ್ರವಿದ್ದಾನೆ. ಮಾತ್ರವಲ್ಲ; ಒಂದು ಹಂಡ್ರಡ್ವೆಟ್ ಭಾರದ ಹೊರೆಯನ್ನು ನಿರಾಯಾಸವಾಗಿ ಹೊರಬಲ್ಲನು.

ಇಂಗ್ಲಾಂಡಿನ ಮಕ್ಕಳ ಪೋಷಣಾ ಸಮಿತಿಯವರು ಈ ಬಾಲಕನು ತನ್ನ ಹೆತ್ತವರಿಂದ ಬಹಳ ಕಠಿಣವಾಗಿ ಪೋಷಿಸಲ್ಪಡುತ್ತಾನೆಂಬ ವಾರ್ತೆಯನ್ನು ಕೇಳಿ ತಮ್ಮಿಂದ ಅಧಿಕೃತನಾದ ಒಬ್ಬ ವೈದ್ಯ ಮಹಾಶಯನನ್ನು ಆ ಬಾಲಕನ ಪರಿಸ್ಥಿತಿಯನ್ನು ವಿಚಾರಿಸಿ ತಿಳಿಯಲು ಕಳುಹಿಸಿದರು. ವೈದ್ಯ ಮಹಾಶಯರು ಅಲ್ಲಿಗೆ ತೆರಳಿ ಕಂಡದ್ದೇನನ್ನು? ಈ ಅಪ್ರತಿಮ ಬಾಲಕನನ್ನು. ಅವನನ್ನು ಕಂಡು ಆತನ ಹೆತ್ತವರು ಅವನನ್ನು ಪಾಲಿಸುವ ನೈಸರ್ಗಿಕ ಕ್ರಮವನ್ನು ಕಂಡು ಸಂತೃಪ್ತರಾಗಿ ಹಿಂತೆರಳಿದರು.

—:0:—

ಯುದ್ಧದ ಕಾರ್ಮೋಡಗಳು ಆಕಾಶವನ್ನು ಮುಚ್ಚಿವೆ.

ಭಾರತವು ಏನು ಮಾಡುವುದು?

ಇಂಗ್ಲೆಂಡು ಮ್ಯೂನಿಚ್ ಒಪ್ಪಂದವನ್ನು ಮಾಡಿ ಜೆಕೊಸ್ಲೊವೇಕಿಯದ ಬಲಿದಾನ ಮಾಡಿದವರ ಅಂತರಂಗದ ಉದ್ದೇಶವೇನಿರಬಹುದೆಂಬ ಕುರಿತು ಮತಭೇದವು ಇರಬಹುದು. ಆದರೆ ಮ್ಯೂನಿಚ್ ಒಪ್ಪಂದದಿಂದ ಯೂರೋಪಿನ ರಾಜನೈತಿಕ ಸಮಸ್ಯೆಯು ಮತ್ತಷ್ಟು ಜಟಿಲವಾಗಿದೆ ಎಂಬ ಕುರಿತು ಯಾವ ಸಂದೇಹವೂ ಇರುವುದಿಲ್ಲ. ಆದ್ದರಿಂದ ಯುದ್ಧ ಸಂಭವವು ದಿನೇ ದಿನೇ ನಿಟ್ಟತರವಾಗುತ್ತ ಬಂದಿದೆ. ಯಾಕೆಂದರೆ ಯಾವ ಇಂಗ್ಲೆಂಡು ಲೋಕ ಶಾಂತಿಗಾಗಿ ಜೆಕೊಸ್ಲೊವೇಕಿಯವನ್ನು ಬಲಿಕೊಟ್ಟು ಮ್ಯುನಿಚ್ ಒಪ್ಪಂದವನ್ನು ಮಾಡಿತೋ ಅದೇ ಇಂಗ್ಲೆಂಡು ಆ ಒಪ್ಪಂದವು ಆದ ಬಳಿಕ ಮೊದಲಿಗಿಂತಲೂ ದ್ವಿಗುಣಿತ ಉತ್ಸಾಹದಿಂದ ಶಸ್ತ್ರಾಸ್ತ್ರಗಳನ್ನು ಕೂಡಿಸಲಾರಂಭಿಸಿದೆ. ಮ್ಯೂನಿಚ್ ಒಪ್ಪಂದದಲ್ಲಿ ಅದಕ್ಕೇ ಶ್ರದ್ಧೆ ಇರುವುದಿಲ್ಲವೆಂಬದು ಇದರಿಂದ ಸ್ಪಷ್ಟವಾಗುತ್ತದೆ. ಮತ್ತೆ ಜರ್ಮನಿ ಇಟಲಿಗಳ ಮಾತು ಹೇಳುವದೇನು? ಅವು ಮೊದಲಿನಿಂದಲೂ ಈ ಕಾರ್ಯದಲ್ಲಿ ಪ್ರವೃತ್ತವಾಗಿಯೇ ಇವೆ. ಈಗ ಜರ್ಮನಿಯು ಕಳೆದ ಮಹಾಯುದ್ಧದಲ್ಲಿ ತಾನು ಕಳೆದುಕೊಂಡ ವಸಾಹತುಗಳನ್ನು ಪುನಃ ಕೇಳುತ್ತಿರುವುದು ಮಾತ್ರವಲ್ಲದೆ-ಯುದ್ಧ ನಷ್ಟದ ಪರಿಹಾರವೆಂದು ಮಿತ್ರ ರಾಷ್ಟ್ರಗಳಿಗೆ ಕೊಟ್ಟಿದ್ದ ಹಣವನ್ನು ಕೂಡ ಹಿಂದಕ್ಕೆ ಕೊಡಬೇಕೆಂದು ಹೇಳತೊಡಗಿದೆ. ಮುಸಲೋನಿಯ ವ್ಯವಹಾರದಿಂದ ಫ್ರೆಂಚರ ಮುಂದ ಒಂದು ವಿಕಟ ಸಮಸ್ಯೆಯು ಉಪಸ್ಥಿತವಾಗಿದೆ. ಅತ್ತ ಯುಕ್ರೈನ್, ಸಿನ್ರಸ್ಸಗಳಲ್ಲಿ ಕೂಡ ನಾಜಿಗಳ ಪ್ರಬಲ ಪ್ರಚಾರ ಕಾರ್ಯವು ಆರಂಭವಾಗಿದೆ. ಆದ್ದರಿಂದ ಒಂದಲ್ಲ ಒಂದು ದಿನ-ಸಂಭವತಃ ಬಹು ಶೀಘ್ರದಲ್ಲಿಯೇ-ಇನ್ನೊಂದು ಪ್ರಳಯಂಕಾರಿ ಮಹಾ ಯುದ್ಧವು ಆರಂಭವಾಗುವುದೆಂಬುದು ಖಂಡಿತ.

ಹಿಂದೂಸ್ಥಾನವು ಈ ಘಟನೆಗಳ ಕಡೆಗೆ ಉದಾಸೀನವಾಗಿ ಇರಲಿಕ್ಕೆ ಬರುವುದಿಲ್ಲ. ಇಷ್ಟರ ತನಕ ಹಿಂದೂಸ್ಥಾನದ ಸಂಬಂಧವು ಬ್ರಿಟನಿನೊಡನೆ ಇದೆ. ತನ್ನ ವಿದೇಶ ನೀತಿಯನ್ನು ರೂಪಿಸುವ ಸ್ವಾತಂತ್ರ್ಯ ಅಥವಾ ಅಧಿಕಾರವು ಅದಕ್ಕೆ ಪ್ರಾಪ್ತವಾಗಿರುವದಿಲ್ಲ. ಬ್ರಿಟನು ಇಟ್ಟ ಹೆಜ್ಜೆಯಲ್ಲಿಯೇ ಹೆಜ್ಜೆ ಇಟ್ಟು ಅದೂ ನಡೆದು ಬಂದಿದೆ. ಹಿಂದೂಸ್ಥಾನದ ಶಕ್ತಿ ಸಾಮರ್ಥ್ಯಗಳೆಲ್ಲ ಇಂಗ್ಲೆಂಡಿನ ಸ್ವಾರ್ಥದ ಬಲಿ ವೇದಿಯಲ್ಲಿ ದುರುಪಯೋಗವಾಗುತ್ತಿರುವದರಿಂದ, ಯಾರ ಸಹಾನುಭೂತಿಯು ಹಿಂದೂಸ್ಥಾನಕ್ಕೆ ಅಗತ್ಯವೋ ಅಂಥಾ ರಾಷ್ಟ್ರಗಳ ಸಹಾನುಭೂತಿಯಿಂದ ಅದು ವಂಚಿತವಾಗಿದೆ. ಆ ರಾಷ್ಟ್ರಗಳ ದೃಷ್ಟಿಯಲ್ಲಿ ಹಿಂದೂಸ್ಥಾನವು ಅವುಗಳ ಶತ್ರುವಾಗಿದೆ. ತನ್ನ ವಿದೇಶ ನೀತಿಯನ್ನು ರೂಪಿಸುವುದರಲ್ಲಿ ಹಿಂದೂಸ್ಥಾನವು ಸ್ವತಂತ್ರವಾಗಿರುತಿದ್ದುದಾದರೆ, ಇವತ್ತು ಅದು ಜಗತ್ತಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ತನ್ನ ನೀತಿಯಿಂದ ತುಂಬಾ ಪ್ರಭಾವನ್ನು ಹಾಕುತ್ತಿತ್ತು. ಶೋಷಿತ ಮತ್ತು ಶೋಷಕ ಜಾತಿಗಳೊಳಗೆ ಆಗುತ್ತಿರುವ ಯುದ್ಧಗಳಲ್ಲಿ ಅದರ ಸಹಾನುಭೂತಿಯು ಶೋಷಿತ ಜಾತಿಗಳ ಕಡೆಗೆ ಇರುತ್ತದೆಂಬುವನ್ನು ಹಿಂದೂಸ್ಥಾನದ ಲೋಕಮತವು ಮೊದಲೇ ಸ್ಪಷ್ಟಮಾಡಿದೆ. ಅದೇ ರೀತಿ ಪ್ರಜಾಸತ್ತೆ ಮತ್ತು ನಿರಂಕುಶ ಅಧಿಕಾರ ಸತ್ತೆಗಳೊಳಗೆ ನಡೆಯುವ ಸಂಘರ್ಷಣದಲ್ಲಿ ಅದರ ಸಹಾನುಭೂತಿಯು ಪ್ರಜಾಸತ್ತೆಯ ಕಡೆಗೆ ಇರುವುದು. ಆದ್ದರಿಂದಲೇ ಚೈನಾ ಜಪಾನು ಯುದ್ಧದಲ್ಲಿ ಅದು ತನ್ನ ಸಹಾನುಭೂತಿಯನ್ನು ಚೈನಕ್ಕೂ, ಸ್ಪೈನಿನ ಅಂತಃಕಲಹದಲ್ಲಿ ಅಲ್ಲಿಯ ಪ್ರಜಾತಂತ್ರವಾಗಿ ಸರಕಾರದ ಕಡೆಗೂ ತೋರಿಸಿರುವುದು.

ಯೂರೋಪಿನಲ್ಲಿ ಮತ್ತೊಂದು ಮಹಾ ಯುದ್ಧವು ಆರಂಭವಾದರೆ, ಹಿಂದೂಸ್ಥಾನದ ನೀತಿಯು ಯಾವದಿರಬೇಕೆಂಬುದನ್ನು ನಮ್ಮ ರಾಷ್ಟ್ರೀಯ ಮಹಾ ಸಭೆಯು ಮೊದಲೇ ಹೇಳಿಕೊಟ್ಟಿದೆ. ಮೊದಲಿನ ಮಹಾ ಯುದ್ಧ ಕಾಲದಲ್ಲಿ ಮಾಡಿರುವಂಥ ತಪ್ಪನ್ನು ಹಿಂದುಸ್ಥಾನವು ಇನ್ನೊಂದು ಯುದ್ಧ ಕಾಲದಲ್ಲಿ ಸರ್ವಥಾ ಮಾಡಲಾರದು. ಸಾಮ್ರಾಜ್ಯಶಾಹಿ ಯುದ್ಧಗಳಿಂದ ಅದು ಸಂಪೂರ್ಣ ದೂರವಾಗಿಯೇ ಇರುವುದು. ಆದರೆ ಹೀಗೆ ದೂರ ಸರಿದು ಇರುವಾಗ ನಮ್ಮ ಕರ್ತವ್ಯ ಜವಾಬುದಾರಿಯು ಮತ್ತಷ್ಟು ಹೆಚ್ಚುವುದು. ಕಾಂಗ್ರೆಸು ದಿನೇ ದಿನೇ ಹೆಚ್ಚೆಚ್ಚು ಬಲವಾಗುತ್ತ ನಡೆದಿದೆ ಎಂಬುದರಲ್ಲಿ ಸಂದೇಹವಿಲ್ಲ. ಅದು ಎಂಟು ಪ್ರಾಂತ್ಯಗಳಲ್ಲಿ ಆಡಳಿತ ಜವಾಬುದಾರಿಯನ್ನು ಹೊತ್ತುಕೊಂಡಿದೆ. ಅದು ಯಾವ ಪ್ರಕಾರ ತನ್ನ ಕಾರ್ಯನಿರ್ವಹಣವನ್ನು ಮಾಡುತ್ತಿರುವದೋ ಅದನ್ನು ನೋಡಿ ನಮ್ಮ ವಿರೋಧಿಗಳು ಕೂಡ ಬೆರಳು ಕಚ್ಚಿದ್ದಾರೆ. ಆದರೆ ಯುದ್ಧ ಸಂಭವದ ವಿಷಮ ಪರಿಸ್ಥಿತಿಯು ಬಂದಾಗ ಶಾಸನದ ಜವಾಬುದಾರಿಯನ್ನು ಹೊರಲಿಕ್ಕೆ ಕಾಂಗ್ರೆಸು ಈಗಿನಕ್ಕಿಂತ ಹೆಚ್ಚು ಬಲಿಷ್ಠವಾಗಬೇಕಾಗುವುದು. ಆದ್ದರಿಂದ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಧ್ಯಾನದಲ್ಲಿಟ್ಟುಕೊಂಡು ಕೂಲೇಶ ಈಗಿನಿಂದಲೇ ನಾವು ಒಬ್ಬರೂ ಬಿಡದೆ ಎಲ್ಲರೂ ಕಾಂಗ್ರೆಸ್ಸಿಗೆ ಸೇರಿಕೊಂಡು ಅದರ ಶಕ್ತಿಯನ್ನು ಅಜೇಯ ಮಾಡುವ ಯತ್ನದಲ್ಲಿ ತೊಡಗುವುದು ನಮ್ಮೆಲ್ಲರ ಪರಮ ಕರ್ತವ್ಯವಾಗಿರುವುದು. ಕಾಂಗ್ರೆಸಿನ ಶಕ್ತಿಯು ಹ್ರಾಸವಾಗುವಂಥ ಯಾವ ಕೆಲಸವನ್ನೂ ನಾವು ಮಾಡತಕ್ಕದ್ದಲ್ಲ.

'ಸ್ವ. ಮಾ.'

ಶ್ರೀಮತಿ ಕಸ್ತೂರಿ ಬಾಯಿ ಗಾಂಧಿ.

ಪೂಜ್ಯ ಗಾಂಧಿಜೀಯವರು 'ಹರಿಜನ್' ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ:-

'ರಾಜಕೋಟೆ ಚಳವಳದಲ್ಲಿ ಭಾಗವಹಿಸಿರುವ ನನ್ನ ಪತ್ನಿಯ ವಿಚಾರ ಏನೊಂದೂ ಹೇಳಲು ನನಗೆ ಅಪೇಕ್ಷೆ ಇರಲಿಲ್ಲ. ಆದರೆ ಆಕೆಯ ಈ ವರ್ತನೆಯ ಬಗ್ಗೆ ಕೆಲವು ಕಠೋರ ಟೀಕೆಗಳು ಬಂದಿರುವದರಿಂದ ನಿರ್ವಾಹವಿಲ್ಲದೆ ಈ ವಿವರಣೆಯನ್ನು ಕೊಡಬೇಕಾಯಿತು. ಅವಳು ಈ ಚಳವಳದಲ್ಲಿ ಭಾಗವಹಿಸಬಹುದೆಂದು ನನಗೆ ತಿಳಿದಿರಲಿಲ್ಲ. ಕಾರಣವೆಂದರೆ ಒಂದು, ಆಕೆಯು ತುಂಬಾ ಮುದುಕಿ. ಜೊತೆಗೆ ಪ್ರಕೃತಿಯ ಅವ್ಯವಸ್ಥೆ. ಆಕೆಯು ವಿದ್ಯಾಹೀನೆಯಾದರೂ ಅನೇಕ ವರ್ಷಗಳಿಂದ ತನ್ನ ಮನಸ್ಸಿಗೆ ಸರಿತೋರಿದ್ದನ್ನು ರಾಜಕೀಯ ರಂಗದಲ್ಲಿ ಬಂದಿರುವಳೆಂದರೆ ಟೀಕಾಕಾರರಿಗೆ ಆಶ್ಚರ್ಯವಾಗದಿರದು. ದಕ್ಷಿಣ ಆಫ್ರಿಕದ ಚಳವಳಕ್ಕೆ ಕಾಲಿಕ್ಕುವಾಗ ಅವಳ ಸ್ವತಃ ಇಚ್ಛೆಯಿಂದ ಮುಂದುವರಿದದ್ದು. ಹಾಗೆಯೇ ಈ ಸಲವಾದರೂ ತನ್ನ ಸ್ವಪ್ರೇರಣೆಯಿಂದ ರಾಜಕೋಟೆ ಚಳವಳದಲ್ಲಿ ಭಾಗವಹಿಸಿರುವಳು. ಮಣಿಬೆನ್ ಪಟೇಲರ ಕೈಸೆರೆಯ ವಿಚಾರ ಅವಳಿಗೆ ತಿಳಿದೊಡನೇ ಸುಮ್ಮನಿರುವದು ಅಸಾಧ್ಯವಾಗಿ ನನ್ನ ಅಪ್ಪಣೆಯನ್ನು ಕೇಳಿದಳು. ಆಕೆಯು ತುಂಬಾ ಅಶಕ್ತಳೆಂದು ನಾನು ಹೇಳಿದೆನು. ದಿಲ್ಲಿಯಲ್ಲಿ ಸ್ನಾನದ ಕೋಣೆಯಲ್ಲಿ ನಿಶ್ಚೇಷ್ಟಿತಳಾದ ಆಕೆಯು ಪ್ರಜ್ಞಾಹೀನಳಾಗಿದ್ದಳು; ದೇವದಾಸ ಗಾಂಧಿಯ ಮುಂದಾಲೋಚನೆ ಹಾಗೂ ಚತುರತೆಯಿಂದ ಆಕೆಯು ಅಲ್ಲಿ ಮೃತ್ಯುವಿನ ಬಾಯಿಂದ ಪಾರಾದದ್ದು. ಆದರೆ ಆಕೆಯು ರಾಜಕೋಟೆ ಚಳವಳದಲ್ಲಿ ಭಾಗವಹಿಸದಿರುವದು ತನ್ನಿಂದ ಅಸಾಧ್ಯವೆಂದು ಹೇಳಿದ್ದರಿಂದ ಇದರ ತೀರ್ಮಾನವನ್ನು ಪಟೇಲರಿಗೆ ಬಿಟ್ಟೆನು. ಈ ಸಾರಿ ಪಟೇಲರು ಠಾಕೂರ ಸಾಹೇಬರ ವಚನ ಭಂಗದ ಬಗ್ಗೆ ನನಗಾದ ದುಃಖ ಪ್ರಯುಕ್ತ ಆಕೆಗೆ ಅನುಮತಿಯನ್ನಿತ್ತರು. ನಮ್ಮ ವಂಶಪರಂಪರೆಯಿಂದಲೇ ನಮಗೂ ರಾಜಕೋಟೆಗೂ ಸಂಬಂಧವಿದೆ. ಕಸ್ತೂರಿಬಾಯಿಯು ರಾಜಕೋಟೆ ಸಂಸ್ಥಾನದ ಪುತ್ರಿ. ರಾಜಕೋಟೆಯ ಪುತ್ರಿಗಳಾದ ಬೇರೆ ಸಹೋದರಿಯರು ಸೆರೆಮನೆಗೆ ನಡೆಯುತ್ತಿರುವಾಗ ತನಗೆ ಸುಮ್ಮನಿರಲು ಆಗಲಿಲ್ಲ. ಭಾರತದ ಚಿತ್ರಪಟದಲ್ಲಿ ರಾಜಕೋಟೆಯು ಅಲ್ಪವಿರಬಹುದು. ಆದರೆ ನಮಗೆ ಅದು ಪ್ರಾಮುಖ್ಯ ಕ್ಷೇತ್ರ ಹೌದು. ಆಕೆಯು ಪೋರಬಂದರದಲ್ಲಿ ಜನಿಸಿದರೂ ರಾಜಕೋಟೆಯಲ್ಲಿ ಬೆಳೆದದ್ದು. ಆದ್ದರಿಂದ ರಾಜಕೋಟೆಯಲ್ಲಾಗುವ ಅಹಿಂಸಾಪೂರಿತ ಚಳವಳ ಯಾ ಸಂಸ್ಥೆಯಲ್ಲಿ ನಾವು ಭಾಗವಹಿಸುವದು ಕರ್ತವ್ಯ.

ರಾಜಕೋಟೆ ಚಳವಳದ ಜಯವು ಸ್ವಾತಂತ್ರ್ಯ ಪಥದಲ್ಲಿ ಒಂದು ಹೆಜ್ಜೆ ಮುಂದಿಟ್ಟಂತೆ. ಅದು ಜಯವನ್ನು ಹೊಂದಿದರೆ (ಹೊಂದಲೇ ಬೇಕು.) ಕಸ್ತೂರಿಬಾಯಿಯ ಸೇವೆಯು ಅದರಲ್ಲಿ ಪರಿಗಣಿಸಲ್ಪಡುವದೆಂದು ಆಶಿಸುತ್ತೇನೆ. ಸತ್ಯಾಗ್ರಹವೆಂಬ ಚಳವಳವು ಮುದುಕರ ಹಾಗೂ ಬಾಲಕರಿಂದ ಕೈಕೊಳ್ಳಲನುಕೂಲವಾದಂತಾದ್ದು. ಇದಕ್ಕೆ ದೇಹದಾರ್ಢ್ಯತೆ ಯಾ ಯೌವನ ಬೇಕಿಲ್ಲ; ಬರೇ ಹೃಷ್ಟ ಪುಷ್ಟವಾದ ಮನಸ್ಥೈರ್ಯ ಬೇಕಾದದ್ದು.

ಪೈಶಾಚಿಕ ನಡವಳಿಕೆ.

ಜಮ್ನಾಲಾಲ್ ಬಜಾಜರ ಎರಡನೇ ಕೈಸೆರೆಯ ವಿಚಾರ ಪೂಜ್ಯ ಗಾಂಧಿಜೀಯವರು ಈ ಕೆಳಗಿನ ಟೆಲಿಫೋನ್ ವರದಿಯನ್ನು ಕೊಟ್ಟಿದ್ದಾರೆ.

'ಜಮ್ನಾಲಾಲ್‌ಜೀಯವರನ್ನು ಜಯಪುರದಿಂದ 50 ಮೈಲು ದೂರದ ಅಜಮೀರ ರೋಡ್ ಸ್ಟೇಶನಿನಲ್ಲಿ ಕಾವಲಿಡಲಾಗಿತ್ತು. ಬ್ರಿಟಿಷ್ ಇನ್ಸ್‌ಪೆಕ್ಟರ್ ಜನರಲರಾದ ಮಿ. ಯಂಗ್‌ರವರು ಅವರಲ್ಲಿಗೆ ಸ್ವತಃ ಹೋಗಿ ತಮ್ಮ ಕಾರಿನಲ್ಲಿ ಕೂತುಕೊಳ್ಳುವಂತೆ ಜಮ್ನಾಲಾಲ್ ಬಜಾಜರಿಗೆ ಹೇಳಿದರಂತೆ. ಅವರು, 'ನೀವು ಪುನಃ ನನ್ನನ್ನು ಜಯಪುರದಿಂದ ಹೊರಗೆ ಬಿಡುವವರಿರುವದರಿಂದ ನಿಮ್ಮೊಡನೆ ಬರಲು ಸಾಧ್ಯವಿಲ್ಲವೆಂದು ತಿರಸ್ಕರಿಸಿದರಂತೆ. ಆದ್ದರಿಂದ ಮಿ. ಯಂಗ್‌ರವರು ನಿಮ್ಮನ್ನು ಜಯಪುರಕ್ಕೇನೇ ತೆಗದುಕೊಂಡು ಹೋಗುತ್ತೇವೆ. ಆದ್ದರಿಂದ ನಮ್ಮೊಡನೆ ಬನ್ನಿರೆಂದರಂತೆ. ಜಮ್ನಾಲಾಲಜೀಯವರು ನಿಮ್ಮ ಮಾತನ್ನು ನನಗೆ ನಂಬಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಮಿ. ಯಂಗರವರು ತನ್ನೊಡನೆ ಸರ್ಕಾರದ ಆರ್ಡರು ಇದೆಯೆಂದೂ, ಆದ್ದರಿಂದ ತನ್ನೊಡನೆ ಬರಲೇ ಬೇಕಾಗುವದೆಂದೂ ಅಂದರಂತೆ. ಆದಪ್ರಯುಕ್ತ ಜಮ್ನಾಲಾಲಜೀಯವರು ಆ ಆರ್ಡರನ್ನು ತೋರಿಸಬೇಕೆಂದು ಕೇಳಲು ಅವರ ಹತ್ತಿರ ಅಂಥಾ ಆರ್ಡರೇನೂ ಇರಲಿಲ್ಲವೆಂದೂ, ಜಯಪುರಕ್ಕೆ ಅವರನ್ನು ತೆಗದುಕೊಂಡು ಹೋಗಲಾಗುವದೆಂದೂ, ಹಾಗೆ ನಾವು ಜಯಪುರಕ್ಕೆ ನಿಮ್ಮನ್ನು ತೆಗದುಕೊಂಡು ಹೋಗದಿದ್ದರೆ ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟಿಸಬಹುದೆಂದೂ ಹೇಳಿದರಂತೆ. ಜಮ್ನಾಲಾಲಜೀಯವರು ಅವರ ಯಾವ ಮಾತನ್ನೂ ನಂಬುವವರಿರಲಿಲ್ಲ. ಆದ್ದರಿಂದ ಅವರು ತನ್ನ ಇಚ್ಛೆಯಿಂದ ಅವರೊಡನೆ ಹೋಗುವದಿಲ್ಲವೆಂದೂ, ಹಾಗೆ ಬೇಕಾದರೆ ಬಲಾತ್ಕಾರದಿಂದ ತೆಗೆದುಕೊಂಡು ಹೋಗಬಹುದೆಂದೂ ಹೇಳಿದರಂತೆ. ಹೀಗೆ ಈ ಸಂಭಾಷಣೆಯು ಒಂದು ಗಂಟೆಯ ವರೆಗೆ ನಡೆಯಿತು. ಕಡೆಗೆ ಐದು ಜನರು ಜಮ್ನಾಲಾಲಜೀಯವರನ್ನು ಬಲಾತ್ಕಾರದಿಂದ ಹಿಡಿದು ಕಾರಿನಲ್ಲಿ ಹಾಕಿ ತೆಗೆದುಕೊಂಡು ಹೋದರಂತೆ. ಈ ಬಲಾತ್ಕಾರದಿಂದಾಗಿ ಜಮ್ನಾಲಾಲಜೀಯವರ ಎಡಗೆನ್ನೆಯ ಮೇಲೆ ಗಾಯವಾಯಿತೆಂದೂ ತಿ

ಯುದ್ಧದ ಕಾರ್ಮೋಡಗಳು ಆಕಾಶವನ್ನು ಮುಚ್ಚಿವೆ.

ಭಾರತವು ಏನು ಮಾಡುವುದು?

ಇಂಗ್ಲೆಂಡು ಮ್ಯೂನಿಚ್ ಒಪ್ಪಂದವನ್ನು ಮಾಡಿ ಜೆಕೊಸ್ಲೊವೇಕಿಯದ ಬಲಿದಾನ ಮಾಡಿದವರ ಅಂತರಂಗದ ಉದ್ದೇಶವೇನಿರಬಹುದೆಂಬ ಕುರಿತು ಮತಭೇದವು ಇರಬಹುದು. ಆದರೆ ಮ್ಯೂನಿಚ್ ಒಪ್ಪಂದದಿಂದ ಯೂರೋಪಿನ ರಾಜನೈತಿಕ ಸಮಸ್ಯೆಯು ಮತ್ತಷ್ಟು ಜಟಿಲವಾಗಿದೆ ಎಂಬ ಕುರಿತು ಯಾವ ಸಂದೇಹವೂ ಇರುವುದಿಲ್ಲ. ಆದ್ದರಿಂದ ಯುದ್ಧ ಸಂಭವವು ದಿನೇ ದಿನೇ ನಿಕಟತರವಾಗುತ್ತ ಬಂದಿದೆ. ಯಾಕೆಂದರೆ ಯಾವ ಇಂಗ್ಲೆಂಡು ಲೋಕ ಶಾಂತಿಗಾಗಿ ಜೆಕೊಸ್ಲೊವೇಕಿಯವನ್ನು ಬಲಿಕೊಟ್ಟು ಮ್ಯುನಿಚ್ ಒಪ್ಪಂದವನ್ನು ಮಾಡಿತೋ ಅದೇ ಇಂಗ್ಲೆಂಡು ಆ ಒಪ್ಪಂದವು ಆದ ಬಳಿಕ ಮೊದಲಿಗಿಂತಲೂ ದ್ವಿಗುಣಿತ ಉತ್ಸಾಹದಿಂದ ಶಸ್ತ್ರಾಸ್ತ್ರಗಳನ್ನು ಕೂಡಿಸಲಾರಂಭಿಸಿದೆ. ಮ್ಯೂನಿಚ್ ಒಪ್ಪಂದದಲ್ಲಿ ಅದಕ್ಕೇ ಶ್ರದ್ಧೆ ಇರುವುದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮತ್ತೆ ಜರ್ಮನಿ ಇಟಲಿಗಳ ಮಾತು ಹೇಳುವುದೇನು? ಅವು ಮೊದಲಿನಿಂದಲೂ ಈ ಕಾರ್ಯದಲ್ಲಿ ಪ್ರವೃತ್ತವಾಗಿಯೇ ಇವೆ. ಈಗ ಜರ್ಮನಿಯು ಕಳೆದ ಮಹಾಯುದ್ಧದಲ್ಲಿ ತಾನು ಕಳೆದುಕೊಂಡ ವಸಾಹತುಗಳನ್ನು ಪುನಃ ಕೇಳುತ್ತಿರುವುದು ಮಾತ್ರವಲ್ಲದೆ-ಯುದ್ಧ ನಷ್ಟದ ಪರಿಹಾರವೆಂದು ಮಿತ್ರ ರಾಷ್ಟ್ರಗಳಿಗೆ ಕೊಟ್ಟಿದ್ದ ಹಣವನ್ನು ಕೂಡ ಹಿಂದಕ್ಕೆ ಕೊಡಬೇಕೆಂದು ಹೇಳತೊಡಗಿದೆ. ಮುಸಲೋನಿಯ ವ್ಯವಹಾರದಿಂದ ಫ್ರೆಂಚರ ಮುಂದೆ ಒಂದು ವಿಕಟ ಸಮಸ್ಯೆಯು ಉಪಸ್ಥಿತವಾಗಿದೆ. ಅತ್ತ ಉಕ್ರೈನ್, ಸಿಪ್ರಸ್ಸುಗಳಲ್ಲಿ ಕೂಡ ನಾಜಿಗಳ ಪ್ರಬಲ ಪ್ರಚಾರ ಕಾರ್ಯವು ಆರಂಭವಾಗಿದೆ. ಆದ್ದರಿಂದ ಒಂದಲ್ಲ ಒಂದು ದಿನ-ಸಂಭವತಃ ಬಹು ಶೀಘ್ರದಲ್ಲಿಯೇ-ಇನ್ನೊಂದು ಪ್ರಳಯಂಕಾರಿ ಮಹಾ ಯುದ್ಧವು ಆರಂಭವಾಗುವುದೆಂಬುದು ಖಂಡಿತ.

ಹಿಂದೂಸ್ಥಾನವು ಈ ಘಟನೆಗಳ ಕಡೆಗೆ ಉದಾಶೀನವಾಗಿ ಇರಲಿಕ್ಕೆ ಬರುವುದಿಲ್ಲ. ಇಷ್ಟರ ತನಕ ಹಿಂದೂಸ್ಥಾನದ ಸಂಬಂಧವು ಬ್ರಿಟನಿನೊಡನೆ ಇದೆ. ತನ್ನ ವಿದೇಶ ನೀತಿಯನ್ನು ರೂಪಿಸುವ ಸ್ವಾತಂತ್ರ್ಯ ಅಥವಾ ಅಧಿಕಾರವು ಅದಕ್ಕೆ ಪ್ರಾಪ್ತವಾಗಿರುವದಿಲ್ಲ. ಬ್ರಿಟನು ಇಟ್ಟ ಹೆಜ್ಜೆಯಲ್ಲಿಯೇ ಹೆಜ್ಜೆ ಇಟ್ಟು ಅದೂ ನಡೆದು ಬಂದಿದೆ. ಹಿಂದೂಸ್ಥಾನದ ಶಕ್ತಿ ಸಾಮರ್ಥ್ಯಗಳೆಲ್ಲ ಇಂಗ್ಲೆಂಡಿನ ಸ್ವಾರ್ಥದ ಬಲಿ ವೇದಿಯಲ್ಲಿ ದುರುಪಯೋಗವಾಗುತ್ತಿರುವದರಿಂದ, ಯಾರ ಸಹಾನುಭೂತಿಯು ಹಿಂದೂಸ್ಥಾನಕ್ಕೆ ಆಗತ್ಯವೋ ಅಂಥಾ ರಾಷ್ಟ್ರಗಳ ಸಹಾನುಭೂತಿಯಿಂದ ಅದು ವಂಚಿತವಾಗಿದೆ. ಆ ರಾಷ್ಟ್ರಗಳ ದೃಷ್ಟಿಯಲ್ಲಿ ಹಿಂದೂಸ್ಥಾನವು ಅವುಗಳ ಶತ್ರುವಾಗಿದೆ. ತನ್ನ ವಿದೇಶ ನೀತಿಯನ್ನು ರೂಪಿಸುವುದರಲ್ಲಿ ಹಿಂದೂಸ್ಥಾನವು ಸ್ವತಂತ್ರವಾಗಿರುತಿದ್ದುದಾದರೆ, ಇವತ್ತು ಅದು ಜಗತ್ತಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ತನ್ನ ನೀತಿಯಿಂದ ತುಂಬಾ ಪ್ರಭಾವವನ್ನು ಹಾಕುತ್ತಿತ್ತು. ಶೋಷಿತ ಮತ್ತು ಶೋಷಕ ಜಾತಿಗಳೊಳಗೆ ಆಗುತ್ತಿರುವ ಯುದ್ಧಗಳಲ್ಲಿ ಅದರ ಸಹಾನುಭೂತಿಯು ಶೋಷಿತ ಜಾತಿಗಳ ಕಡೆಗೆ ಇರುತ್ತದೆಂಬುವನ್ನು ಹಿಂದೂಸ್ಥಾನದ ಲೋಕಮತವು ಮೊದಲೇ ಸ್ಪಷ್ಟಮಾಡಿದೆ. ಅದೇ ರೀತಿ ಪ್ರಜಾಸತ್ತೆ ಮತ್ತು ನಿರಂಕುಶ ಅಧಿಕಾರ ಸತ್ತೆಗಳೊಳಗೆ ನಡೆಯುವ ಸಂಘರ್ಷಣದಲ್ಲಿ ಅದರ ಸಹಾನುಭೂತಿಯು ಪ್ರಜಾಸತ್ತೆಯ ಕಡೆಗೆ ಇರುವುದು. ಆದ್ದರಿಂದಲೇ ಚೈನಾ ಜಪಾನು ಯುದ್ಧದಲ್ಲಿ ಅದು ತನ್ನ ಸಹಾನುಭೂತಿಯನ್ನು ಚೈನಕ್ಕೂ, ಸ್ಪೈನಿನ ಅಂತಃಕಲಹದಲ್ಲಿ ಅಲ್ಲಿಯ ಪ್ರಜಾತಂತ್ರವಾಗಿ ಸರಕಾರದ ಕಡೆಗೂ ತೋರಿಸಿರುವುದು.

ಯೂರೋಪಿನಲ್ಲಿ ಮತ್ತೊಂದು ಮಹಾ ಯುದ್ಧವು ಆರಂಭವಾದರೆ, ಹಿಂದೂಸ್ಥಾನದ ನೀತಿಯು ಯಾವದಿರಬೇಕೆಂಬುವನ್ನು ನಮ್ಮ ರಾಷ್ಟ್ರೀಯ ಮಹಾ ಸಭೆಯು ಮೊದಲೇ ಹೇಳಿಕೊಟ್ಟಿದೆ. ಮೊದಲಿನ ಮಹಾ ಯುದ್ಧ ಕಾಲದಲ್ಲಿ ಮಾಡಿರುವಂಥ ತಪ್ಪನ್ನು ಹಿಂದೂಸ್ಥಾನವು ಇನ್ನೊಂದು ಯುದ್ಧ ಕಾಲದಲ್ಲಿ ಸರ್ವಥಾ ಮಾಡಲಾರದು. ಸಾಮ್ರಾಜ್ಯಶಾಹಿ ಯುದ್ಧಗಳಿಂದ ಅದು ಸಂಪೂರ್ಣ ದೂರವಾಗಿಯೇ ಇರುವುದು. ಆದರೆ ಹೀಗೆ ದೂರ ಸರಿದು ಇರುವಾಗ ನಮ್ಮ ಕರ್ತವ್ಯ ಜವಾಬುದಾರಿಯು ಮತ್ತಷ್ಟು ಹೆಚ್ಚುವುದು. ಕಾಂಗ್ರೆಸು ದಿನೇ ದಿನೇ ಹೆಚ್ಚೆಚ್ಚು ಬಲವಾಗುತ್ತ ನಡೆದಿದೆ ಎಂಬುದರಲ್ಲಿ ಸಂದೇಹವಿಲ್ಲ. ಅದು ಎಂಟು ಪ್ರಾಂತ್ಯಗಳಲ್ಲಿ ಆಡಳಿತ ಜವಾಬುದಾರಿಯನ್ನು ಹೊತ್ತುಕೊಂಡಿದೆ. ಅದು ಯಾವ ಪ್ರಕಾರ ತನ್ನ ಕಾರ್ಯನಿರ್ವಹಣವನ್ನು ಮಾಡುತ್ತಿರುವದೋ ಅದನ್ನು ನೋಡಿ ನಮ್ಮ ವಿರೋಧಿಗಳು ಕೂಡ ಬೆರಳು ಕಚ್ಚಿದ್ದಾರೆ. ಆದರೆ ಯುದ್ಧ ಸಂಭವದ ವಿಷಮ ಪರಿಸ್ಥಿತಿಯು ಬಂದಾಗ ಶಾಸನದ ಜವಾಬುದಾರಿಯನ್ನು ಹೊರಲಿಕ್ಕೆ ಕಾಂಗ್ರೆಸು ಈಗಿನಕ್ಕಿಂತ ಹೆಚ್ಚು ಬಲಿಷ್ಠವಾಗಬೇಕಾಗುವುದು. ಆದ್ದರಿಂದ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಧ್ಯಾನದಲ್ಲಿಟ್ಟುಕೊಂಡು ಕೂಡಲೇ ಈಗಿನಿಂದಲೇ ನಾವು ಒಬ್ಬರೂ ಬಿಡದೆ ಎಲ್ಲರೂ ಕಾಂಗ್ರೆಸ್ಸಿಗೆ ಸೇರಿಕೊಂಡು ಅದರ ಶಕ್ತಿಯನ್ನು ಅಜೇಯ ಮಾಡುವ ಯತ್ನದಲ್ಲಿ ತೊಡಗುವುದು ನಮ್ಮೆಲ್ಲರ ಪರಮ ಕರ್ತವ್ಯವಾಗಿರುವುದು. ಕಾಂಗ್ರೆಸಿನ ಶಕ್ತಿಯು ಹ್ರಾಸವಾಗುವಂಥ ಯಾವ ಕೆಲಸವನ್ನೂ ನಾವು ಮಾಡತಕ್ಕದ್ದಲ್ಲ.

'ಸ್ವ. ಮಾ.'

ಶ್ರೀಮತಿ ಕಸ್ತೂರಿ ಬಾಯಿ ಗಾಂಧಿ.

ಪೂಜ್ಯ ಗಾಂಧಿಜೀಯವರು 'ಹರಿಜನ್' ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ:-

'ರಾಜಕೋಟೆ ಚಳವಳದಲ್ಲಿ ಭಾಗವಹಿಸಿರುವ ನನ್ನ ಪತ್ನಿಯ ವಿಚಾರ ಏನೊಂದೂ ಹೇಳಲು ನನಗೆ ಅಪೇಕ್ಷೆ ಇರಲಿಲ್ಲ. ಆದರೆ ಆಕೆಯ ಈ ವರ್ತನೆಯ ಬಗ್ಗೆ ಕೆಲವು ಕಠೋರ ಟೀಕೆಗಳು ಬಂದಿರುವದರಿಂದ ನಿರ್ವಾಹವಿಲ್ಲದೆ ಈ ವಿವರಣೆಯನ್ನು ಕೊಡಬೇಕಾಯಿತು. ಅವಳು ಈ ಚಳವಳದಲ್ಲಿ ಭಾಗವಹಿಸಬಹುದೆಂದು ನನಗೆ ತಿಳಿದಿರಲಿಲ್ಲ. ಕಾರಣವೆಂದರೆ ಒಂದು, ಆಕೆಯು ತುಂಬಾ ಮುದುಕಿ. ಜೊತೆಗೆ ಪ್ರಕೃತಿಯ ಅಸ್ವಸ್ಥ. ಆಕೆಯು ವಿದ್ಯಾಹೀನೆಯಾದರೂ ಅನೇಕ ವರ್ಷಗಳಿಂದ ತನ್ನ ಮನಸ್ಸಿಗೆ ಸರಿತೋರಿದ್ದನ್ನು ರಾಜಕೀಯ ರಂಗದಲ್ಲಿ ಬಂದಿರುವಳೆಂದರೆ ಟೀಕಾಕಾರರಿಗೆ ಆಶ್ಚರ್ಯವಾಗದಿರದು. ದಕ್ಷಿಣ ಆಫ್ರಿಕದ ಚಳವಳಕ್ಕೆ ಕಾಲಿಕ್ಕುವಾಗ ಅವಳ ಸ್ವತಃ ಇಚ್ಛೆಯಿಂದ ಮುಂದುವರಿದದ್ದು. ಹಾಗೆಯೇ ಈ ಸಲವಾದರೂ ತನ್ನ ಸ್ವಪ್ರೇರಣೆಯಿಂದ ರಾಜಕೋಟೆ ಚಳವಳದಲ್ಲಿ ಭಾಗವಹಿಸಿರುವಳು. ಮಣಿಬೆನ್ ಪಟೇಲರ ಕೈಸೆರೆಯ ವಿಚಾರ ಅವಳಿಗೆ ತಿಳಿದೊಡನೇ ಸುಮ್ಮನಿರುವದು ಅಸಾಧ್ಯವಾಗಿ ನನ್ನ ಅಪ್ಪಣೆಯನ್ನು ಕೇಳಿದಳು. ಆಕೆಯು ತುಂಬಾ ಅಶಕ್ತಳೆಂದು ನಾನು ಹೇಳಿದೆನು. ಡೆಲ್ಲಿಯಲ್ಲಿ ಸ್ನಾನದ ಕೋಣೆಯಲ್ಲಿ ನಿಶ್ಚೇಷ್ಟಿತಳಾದ ಆಕೆಯು ಪ್ರಜ್ಞಾಹೀನಳಾಗಿದ್ದಳು: ದೇವದಾಸ ಗಾಂಧಿಯ ಮುಂದಾಲೋಚನೆ ಹಾಗೂ ಚತುರತೆಯಿಂದ ಆಕೆಯು ಅಲ್ಲಿ ಮೃತ್ಯುವಿನ ಬಾಯಿಂದ ಪಾರಾದದ್ದು. ಆದರೆ ಆಕೆಯು ರಾಜಕೋಟೆ ಚಳವಳದಲ್ಲಿ ಭಾಗವಹಿಸದಿರುವದು ತನ್ನಿಂದ ಅಸಾಧ್ಯವೆಂದು ಹೇಳಿದ್ದರಿಂದ ಇದರ ತೀರ್ಮಾನವನ್ನು ಪಟೇಲರಿಗೆ ಬಿಟ್ಟೆನು. ಈ ಸಾರಿ ಪಟೇಲರು ಠಾಕೂರ ಸಾಹೇಬರ ವಚನ ಭಂಗದ ಬಗ್ಗೆ ನನಗಾದ ದುಃಖ ಪ್ರಯುಕ್ತ ಆಕೆಗೆ ಅನುಮತಿಯನ್ನಿತ್ತರು. ನಮ್ಮ ವಂಶಪರಂಪರೆಯಿಂದಲೇ ನಮಗೂ ರಾಜಕೋಟೆಗೂ ಸಂಬಂಧವಿದೆ. ಕಸ್ತೂರಿಬಾಯಿಯು ರಾಜಕೋಟೆ ಸಂಸ್ಥಾನದ ಪುತ್ರಿ. ರಾಜಕೋಟೆಯ ಪುತ್ರಿಗಳಾದ ಬೇರೆ ಸಹೋದರಿಯರು ಸೆರೆಮನೆಗೆ ನಡೆಯುತ್ತಿರುವಾಗ ತನಗೆ ಸುಮ್ಮನಿರಲು ಆಗಲಿಲ್ಲ. ಭಾರತದ ಚಿತ್ರಪಟದಲ್ಲಿ ರಾಜಕೋಟೆಯು ಅಲ್ಪವಿರಬಹುದು. ಆದರೆ ನಮಗೆ ಅದು ಪ್ರಾಮುಖ್ಯ ಕ್ಷೇತ್ರ ಹೌದು. ಆಕೆಯು ಪೋರಬಂದರದಲ್ಲಿ ಜನಿಸಿದರೂ ರಾಜಕೋಟೆಯಲ್ಲಿ ಬೆಳೆದದ್ದು. ಆದ್ದರಿಂದ ರಾಜಕೋಟೆಯಲ್ಲಾಗುವ ಅಹಿಂಸಾಪೂರ್ತಿಕ ಚಳವಳ ಯಾ ಸಂಸ್ಥೆಯಲ್ಲಿ ನಾವು ಭಾಗವಹಿಸುವದು ಕರ್ತವ್ಯ.

ರಾಜಕೋಟೆ ಚಳವಳದ ಜಯವು ಸ್ವಾತಂತ್ರ್ಯ ಪಥದಲ್ಲಿ ಒಂದು ಹೆಜ್ಜೆ ಮುಂದಿಟ್ಟಂತೆ. ಅದು ಜಯವನ್ನು ಹೊಂದಿದರೆ (ಹೊಂದಲೇ ಬೇಕು.) ಕಸ್ತೂರಿಬಾಯಿಯ ಸೇವೆಯು ಅದರಲ್ಲಿ ಪರಿಗಣಿಸಲ್ಪಡುವದೆಂದು ಆಶಿಸುತ್ತೇನೆ. ಸತ್ಯಾಗ್ರಹವೆಂಬ ಚಳವಳವು ಮುದುಕರ ಹಾಗೂ ಬಾಲಕರಿಂದ ಕೈಕೊಳ್ಳಲನುಕೂಲವಾದಂತಾದ್ದು. ಇದಕ್ಕೆ ದೇಹದಾರ್ಢ್ಯತೆ ಯಾ ಯೌವನ ಬೇಕಿಲ್ಲ; ಬರೇ ಹೃಷ್ಟ ಪುಷ್ಟವಾದ ಮನಸ್ಥೈರ್ಯ ಬೇಕಾದದ್ದು.

ಪೈಶಾಚಿಕ ನಡವಳಿಕೆ.

ಜಮ್ನಾಲಾಲ್ ಬಜಾಜರ ಎರಡನೆ ಕೈಸೆರೆಯ ವಿಚಾರ ಪೂಜ್ಯ ಗಾಂಧಿಜೀಯವರು ಈ ಕೆಳಗಿನ ಟೆಲಿಫೋನ್ ವರದಿಯನ್ನು ಕೊಟ್ಟಿದ್ದಾರೆ.

'ಜಮ್ನಾಲಾಲ್‌ಜೀಯವರನ್ನು ಜಯಪುರದಿಂದ 50 ಮೈಲು ದೂರದ ಅಜಮೀರ ರೋಡ್ ಸ್ಟೇಶನಿನಲ್ಲಿ ಕಾವಲಿಡಲಾಗಿತ್ತು. ಬ್ರಿಟಿಷ್ ಇನ್ಸ್‌ಪೆಕ್ಟರ್ ಜನರಲರಾದ ಮಿ. ಯಂಗ್‌ರವರು ಅದರಲ್ಲಿಗೆ ಸ್ವತಃ ಹೋಗಿ ತಮ್ಮ ಕಾರಿನಲ್ಲಿ ಕೂತುಕೊಳ್ಳುವಂತೆ ಜಮ್ನಾಲಾಲ್ ಬಜಾಜರಿಗೆ ಹೇಳಿದರಂತೆ. ಅವರು, 'ನೀವು ಪುನಃ ನನ್ನನ್ನು ಜಯಪುರದಿಂದ ಹೊರಗೆ ಬಿಡುವವರಿರುವದರಿಂದ ನಿಮ್ಮೊಡನೆ ಬರಲು ಸಾಧ್ಯವಿಲ್ಲವೆಂದು ತಿರಸ್ಕರಿಸಿದರಂತೆ. ಆದ್ದರಿಂದ ಮಿ. ಯಂಗ್‌ರವರು ನಿಮ್ಮನ್ನು ಜಯಪುರಕ್ಕೇನೇ ತೆಗೆದುಕೊಂಡು ಹೋಗುತ್ತೇವೆ. ಆದ್ದರಿಂದ ನಮ್ಮೊಡನೆ ಬನ್ನಿ ಅಂದರಂತೆ. ಜಮ್ನಾಲಾಲಜೀಯವರು ನಿಮ್ಮ ಮಾತನ್ನು ನನಗೆ ನಂಬಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಮಿ. ಯಂಗರವರು ತಮ್ಮೊಡನೆ ಸರ್ಕಾರದ ಆರ್ಡರು ಇದಯೆಂದೂ, ಆದ್ದರಿಂದ ತಮ್ಮೊಡನೆ ಬರಲೇ ಬೇಕಾಗುವದೆಂದೂ ಅಂದರಂತೆ. ಆದಪ್ರಯುಕ್ತ ಜಮ್ನಾಲಾಲಜೀಯವರು ಆ ಆರ್ಡರನ್ನು ತೋರಿಸಬೇಕೆಂದು ಕೇಳಲು ಅವರ ಹತ್ತಿರ ಅಂಥಾ ಆರ್ಡರೇನೂ ಇರಲಿಲ್ಲವೆಂದೂ, ಜಯಪುರಕ್ಕೆ ಅವರನ್ನು ತೆಗೆದುಕೊಂಡು ಹೋಗಲಾಗುವದೆಂದೂ, ಹಾಗೆ ನಾವು ಜಯಪುರಕ್ಕೆ ನಿಮ್ಮನ್ನು ತೆಗೆದುಕೊಂಡು ಹೋಗದಿದ್ದರೆ ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟಿಸಬಹುದೆಂದೂ ಹೇಳಿದರಂತೆ. ಜಮ್ನಾಲಾಲಜೀಯವರು ಅವರ ಯಾವ ಮಾತನ್ನೂ ನಂಬುವವರಿರಲಿಲ್ಲ. ಆದ್ದರಿಂದ ಅವರು ತಮ್ಮ ಇಚ್ಛೆಯಿಂದ ಅವರೊಡನೆ ಹೋಗುವದಿಲ್ಲವೆಂದೂ, ಹಾಗೆ ಬೇಕಾದರೆ ಬಲಾತ್ಕಾರದಿಂದ ತೆಗೆದುಕೊಂಡು ಹೋಗಬಹುದೆಂದೂ ಹೇಳಿದರಂತೆ. ಹೀಗೆ ಈ ಸಂಭಾಷಣೆಯು ಒಂದು ಗಂಟೆಯ ವರೆಗೆ ನಡೆಯಿತು. ಕಡೆಗೆ ಐದು ಜನರು ಜಮ್ನಾಲಾಲಜೀಯವರನ್ನು ಬಲಾತ್ಕಾರದಿಂದ ಹಿಡಿದು ಕಾರಿನಲ್ಲಿ ಹಾಕಿ ತೆಗೆದುಕೊಂಡು ಹೋದರಂತೆ. ಈ ಬಲಾತ್ಕಾರದಿಂದಾಗಿ ಜಮ್ನಾಲಾಲಜೀಯವರ ಎಡಗೆನ್ನೆಯ ಮೇಲೆ ಘಾಯವಾಯಿತೆಂದೂ ತಿ

ಕೊಡಗು ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು.

ಕೊಡಗು ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು ಬೋರ್ಡಿನ ಪ್ರೆಸಿಡೆಂಟರಾದ ಶ್ರೀ. ಪಂದ್ಯಂಡ ಐ. ಬೆಳ್ಯಪ್ಪ ಯಂ. ಯಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ತಾರೀಕು 14ರಲ್ಲಿ ನಡೆಯಿತು. ಎಕ್ಸಿಕ್ಯೂಟಿವ್ ಇಂಜಿನೀಯರ್, ಯೂರೋಪಿಯನ್ ಸದಸ್ಯರಾದ ಜಿ. ಯಂ. ಬ್ರಮೂಲ್ಡ್ ಮತ್ತು ಜೆ. ಓ. ಎಫ್. ಮೊರಿಸರ ವಿನಹ ಎಲ್ಲಾ ಮೆಂಬರುಗಳು ಹಾಜರಿದ್ದರು.

ಮೀಟಿಂಗಿನ ಕಾರ್ಯ ಕಲಾಪಗಳು ಪ್ರಾರಂಭವಾಗುವ ಮೊದಲು ಕಾಂಗ್ರೆಸ್ ಪಾರ್ಟಿ ಮೆಂಬರುಗಳು 'ವಂದೇ ಮಾತರಂ' ರಾಷ್ಟ್ರೀಯ ಗೀತೆಯನ್ನು ಹಾಡಿದರು.

1. ಕಳೆದ ಮೀಟಿಂಗಿನ ನಡವಳಿಕೆಯನ್ನು ಓದಿ ಅಂಗೀಕರಿಸಲಾಯಿತು.

2. 1939–40ನೇ ವರ್ಷದ ಅಂದಾಜು ಬಡ್ಜೆಟ್ಟನ್ನು ಓದಿ ಈ ಕೆಳಗಿನ ತಿದ್ದುಪಡಿಗಳಿಂದ ಪಾಸು ಮಾಡಲಾಯಿತು.

ಜಮಾ.

20 ವೈದ್ಯಕೀಯ–ಸಬ್ ಅಸಿಸ್ಟೆಂಟ್ ಸರ್ಜನರು ಈಗ ಮುಫತ್ತಾಗಿ ಉಪಯೋಗಿಸುತ್ತಿರುವ ಮನೆಗಳ ಬಾಬ್ತು ಬಾಡಿಗೆಗಾಗಿ ಜಮಾ ಬರುವ ರೂ. 1000 ಹೆಚ್ಚಿಸುವದು.

ಖರ್ಚು.

22 ವಿದ್ಯಾ– 25 ವರ್ಷಗಳ ಮೇಲಿನ ಸರ್ವಿಸಿನವರನ್ನು ತೆಗೆದು ಅವರ ಬದಲು ಹೊಸ ಸ್ಕೇಲಿನ ಉಪಾಧ್ಯಾಯರನ್ನು ನೇಮಿಸುವ ಪ್ರಯುಕ್ತ ಉಪಾಧ್ಯಾಯರ ಸಂಬಳಕ್ಕಾಗಿ ಇಟ್ಟ ಹಣದಿಂದ ರೂ. 600 ಕಮ್ಮಿ ಮಾಡುವದು. ರಜ ವೇತನಕ್ಕಾಗಿ ಇಟ್ಟಿರುವ ಹಣದಿಂದ ರೂ. 200 ಕಮ್ಮಿ ಮಾಡುವದು. ಸಾದಿಲ್ವಾರು ಖರ್ಚಿನಲ್ಲಿ ಬೆಟ್ಟಗಿನ ಬಟ್ಟೆಗೆ ರೂ. 20 ಹೆಚ್ಚಿಸುವದು ಗ್ರಾಂಟ್–ಇನ್–ಏಯಿಡ್ ಶಾಲೆಗಳಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ರೂ. 20 ಹೆಚ್ಚಿಸುವದು.

24 ವೈದ್ಯಕೀಯ–ಭಾಗಮಂಡ್ಲ ಆಯುರ್ವೇದ ಔಷಧ ಶಾಲೆಯ ಡಾಕ್ಟರರ ಪ್ರಯಾಣ ಭತ್ಯಕ್ಕಾಗಿ ಇಟ್ಟಿರುವ ಹಣದಿಂದ ರೂ. 100 ಕಮ್ಮಿ ಮಾಡುವದು.

45 ಸಿವಿಲ್ ವರ್ಕ್ಸ್–ಪಾಲ ಹಾಕಲಿಕ್ಕೆ ಎಂಬುವುದರಲ್ಲಿ ರೂ. 300 ಹೆಚ್ಚಿಸಿ ಇತರ ಸಾರ್ವಜನಿಕ ಅಭಿವೃದ್ಧಿಗೆಂದು ಇಟ್ಟಿರುವ ರೂಪಾಯಿಯಲ್ಲಿ 300 ಕಮ್ಮಿ ಮಾಡುವದು.

ಪಿ. ಡಬ್ಲ್ಯು. ಡಿ. ಇಲಾಖೆಯ ಗ್ರಾಂಟಿನಿಂದ ರೂ. 4370 ಕಮ್ಮಿ ಮಾಡುವದು.

ಈ ಕೆಳಗಿನ ಖರ್ಚಿನ ಬಾಬಿನ ವಿಷಯಗಳು ಅಂಗೀಕೃತವಾದವು.

ಮೂರ್ನಾಡು ಮತ್ತು ಶನಿವಾರಸಂತೆ ಆಸ್ಪತ್ರೆಗಳಿಗೆ ರೂ. 20 ರಲ್ಲಿ ನರ್ಸುಗಳನ್ನು ನೇಮಿಸುವುದು. ಖರ್ಚು ರೂ 480, ಹೆಬ್ಬಾಲೆ ನೀರಿನ ಯೋಜನೆಗೆ ರೂ.1400, ನೆಲಜಿ ಶಾಲೆಯ ಮುಖಮಂಟಪವನ್ನು ಕಟ್ಟಲು ರೂ. 140, ತ್ಯಾಗತ್ತೂರು ಬಾವಿಗೆ ರೂ. 50, ಮಾಯಮುಡಿ ಶಾಲಾ ಬಾವಿಗೆ ರೂ. 100, ಬೋಯಿಕೇರಿ ಬಾವಿಗೆ ರೂ. 100, ಕುಂಬಳದಾಳು ಸ್ಕೂಲ್ ಬಾವಿಗೆ ರೂ. 100, ಭಾಗಮಂಡ್ಲ–ನಾಪೋಕ್ಲು ರಸ್ತೆಗೆ ರೂ. 200, ನಿಮ್ಮಲೆ–ತೆರಾಲು ರಸ್ತೆಗೆ ರೂ. 300, ಬೆಳ್ಳುಮಾಡು ರಸ್ತೆಗೆ ರೂ. 600, ಹಾತೂರು ರಸ್ತೆಯಲ್ಲಿಯ ಸೇತುವೆಗೆ ರೂ. 100, ಹೊನ್ನಿಕೊಪ್ಪ–ಮಾಯಮುಡಿ ರಸ್ತೆಗೆ ರೂ. 100, ಶೆಟ್ಟಿಗೇರಿ ಪಾಲಕ್ಕೆ ರೂ. 250, ಅಮ್ಮತ್ತಿ ಬಾವಿಗೆ ರೂ. 300.

3. ಶನಿವಾರಸಂತೆ ಆಸ್ಪತ್ರೆಗೆ ಒಂದು ಶವ ಪರೀಕ್ಷಾಲಯವನ್ನು ಕಟ್ಟುವುದಗತ್ಯವೆಂದೂ, ಅದಕ್ಕೆ ರೂ. 760 ಖರ್ಚಾಗಬಹುದೆಂದೂ ಎಕ್ಸಿಕ್ಯೂಟಿವ್ ಇಂಜನಿಯರರು ಬರೆದ ಪತ್ರವನ್ನು ಓದಿ ಮುಂದಿನ ಮೀಟಿಂಗಿಗಿಡಲಾಯಿತು.

4. ಮಸ್ಸದಕ್ಲೆ–ಬೆಟ್ಟದಳ್ಳಿ ರಸ್ತೆಯನ್ನು ಬೋರ್ಡು ವಹಿಸಿಕೊಂಡು ಅದರ ಉಸ್ತುವಾರಿ ಬಗ್ಗೆ ವಾರ್ಷಿಕ ರೂ. 20 ಕೊಡಬೇಕೆಂಬ ಅಸಿಸ್ಟೆಂಟ್ ಕಮಿಶನರ ಶಿಫಾರಸು ಪತ್ರವನ್ನು ಓದಿ, ಆ ರಸ್ತೆಯನ್ನು ಬೋರ್ಡಿಗೆ ವಹಿಸಿಕೊಳ್ಳಲು ತೀರ್ಮಾನಿಸಲಾಯಿತು.

5. ಶನಿವಾರಸಂತೆ–ಬಾಣವಾರ ರಸ್ತೆಯಲ್ಲಿ ಆಲೂರು ಹೊಳೆಗೆ ಸೇತುವೆ ಕಟ್ಟುವ ವಿಚಾರ ಮತ್ತು ಅದರ ಅಂದಾಜು ಖರ್ಚು ರೂ. 3150 ಆಗುತ್ತದೆಂದು ಬರೆದ ಎಗ್ಸಿಕ್ಯೂಟಿವ್ ಇಂಜಿನೀಯರವರ ಪತ್ರ ಓದಲಾಯಿತು. ಈ ವಿಚಾರವನ್ನು ಮುಂದರಿಸಿಡಲಾಯಿತು.

6. ಜನಾರ್ದನ ಹಳ್ಳಿಯ ಖಾಸಗಿ ಶಾಲೆಗೆ ಗ್ರಾಂಟು ಕೊಡುವ ಬಗ್ಗೆ ಶಾಲಾ ಇನ್ಸ್‌ಪೆಕ್ಟರರವರ ಶಿಫಾರಸು ಪತ್ರವನ್ನು ಓದಲಾಯಿತು. ಪ್ರೆಸಿಡೆಂಟರು ಈ ಕೆಳಗಿನ ಶಾಲೆಗಳನ್ನು ಸಂದರ್ಶಿಸಿ ಅವುಗಳ ಸರಾಸರಿ ಹಾಜರಾತಿಯು ಇಪ್ಪತ್ತರಂತೆ ಇದ್ದು ಅವುಗಳ ಕೆಲಸವು ತೃಪ್ತಿಕರವಾಗಿ ಕಂಡು ಬಂದ ಪಕ್ಷ ಅವುಗಳಿಗೆ ಗ್ರಾಂಟು ಕೊಡಲು ತೀರ್ಮಾನವಾಯಿತು. (1) ಜನಾರ್ದನ ಹಳ್ಳಿ, (2) ಹೇರೂರು, (3) ಅರೆಕಾಡು, (4) ನಾಲ್ಕೇರಿ, (5) ಹೊದವಾಡ.

7. ಅಮ್ಮತ್ತಿ ಕಾರಿ ಕಾಯ್ವುವ ಮನೆಯ ರಿಪೇರಿಗಾಗಿ ರೂ. 30 ಕೊಡುವ ಬಗ್ಗೆ ಎಗ್ಸಿಕ್ಯೂಟಿವ್ ಇಂಜನಿಯರಿಂದ ಬಂದ ಶಿಫಾರಸ್ಸಿನ ಪತ್ರ ಓದಿ ಮಂಜೂರು ಮಾಡಲಾಯಿತು.

8. ಕಿರುಗೂರು ಗ್ರ್ಯಾಂಟ್ ಶಾಲೆಯ ಬಡಾವಣೆಗಾಗಿ ರೂ. 100 ಕೊಡಬೇಕೆಂಬ ಶಾಲಾ ಪಂಚಾಯಿತದಾರರ ಅರ್ಜಿಯನ್ನು ಓದಿ ಮಂಜೂರು ಮಾಡಲಾಯಿತು.

9. ಫ್ರೇಜರ್‌ಪೇಟೆ ಆಸ್ಪತ್ರೆಯ ಹಿತ್ತಲಿಗೆ ಪುನಹ ಬೇಲಿ ಹಾಕಿಸುವ ಬಗ್ಗೆ, ಅದಕ್ಕಾಗಿ ರೂ. 113 ಖರ್ಚಾಗಬಹುದೆಂದೂ ಎಗ್ಸಿಕ್ಯೂಟಿವ್ ಇಂಜಿನಿಯರರ ಶಿಫಾರಸು ಪತ್ರ ಓದಿ ರೂ. 70 ಮಂಜೂರು ಮಾಡಲಾಯಿತು.

10. ಬೋರ್ಡಿನ ಅಧೀನದಲ್ಲಿರುವ ಕುಂದಳ್ಳಿ–ಕುಮಾರಳ್ಳಿ ರೋಡು ಗ್ರಾಮಾಭಿವೃದ್ಧಿ ಯೋಜನೆಯಿಂದ ತೆರೆಯಲ್ಪಟ್ಟರೆ ಅದನ್ನು ಬೋರ್ಡು ಅಂಗೀಕರಿಸುವದೋ ಎಂಬ ಅಸಿಸ್ಟೆಂಟ್ ಕಮಿಶನರ ಶಿಫಾರಸ್ಸು ಪತ್ರವನ್ನು ಓದಿ ಅಂಗೀಕರಿಸಲಾಯಿತು.

11. ಕಾಯಿಲಸ್ಥರಿಗೆ ರಕ್ತ ಕೊಡುವವರಿಗೆ ಇನಾಮಿಗಾಗಿ ರೂಪಾಯಿ 100 ಮಂಜೂರು ಮಾಡಬೇಕೆಂಬ ಸಿವಿಲ್ ಸರ್ಜನರ ಶಿಫಾರಸ್ಸು ಪತ್ರವನ್ನು ಓದಿ ಅದಕ್ಕಾಗಿ ರೂ. 50 ಮಂಜೂರು ಮಾಡಲಾಯಿತು.

12. ಸಂಪಾಜೆಯ ಟೋಲ್‌ಗೇಟ್ ಕಂಟ್ರಾಕ್ಟರಿಗೆ 1938–39ನೇ ವರ್ಷದಲ್ಲಿ ಮಡಿಕೇರಿ–ಮಂಗಳೂರು ರಸ್ತೆಯಲ್ಲಿಯ ಸೇತುವೆಯು ಮುರಿದು ಹೋಗಿ 20 ದಿನಗಳ ಮಟ್ಟಿಗೆ ವಹಿವಾಟು ನಿಂತದ್ದರಿಂದ ರೂ. 50 ಮಾಫಿ ಬಿಡಬೇಕೆಂದು ಉತ್ತರ ಕೊಡಗಿನ ಸುಭೇದಾರರು ಬರೆದ ಶಿಫಾರಸ್ಸು ಪತ್ರವನ್ನು ಓದಿ ರೂ 20 ಬಿಟ್ಟುಕೊಡಲು ತೀರ್ಮಾನವಾಯಿತು.

13. ಹರಿಹರ ಶಾಲೆಗೆ ಒಬ್ಬ ಹೆಚ್ಚಿನ ಉಪಾಧ್ಯಾಯರನ್ನು ಕೊಡಬೇಕೆಂಬ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರ ಶಿಫಾರಸ್ಸು ಪತ್ರ ಓದಲಾಯಿತು. ಇದನ್ನು ಕಳೆದ ಮೀಟಿಂಗಿನಲ್ಲಿ ನೇಮಿಸಿದ ಸಿಲೆಕ್ಟ್ ಕಮಿಟಿಗೆ ವಿಚಾರಿಸಲು ವಹಿಸುವಂತೆ ತೀರ್ಮಾನವಾಯಿತು.

14. ಬಾಡಗ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನ ಅಧೀನಕ್ಕೆ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಓದಿ, ತಿರಸ್ಕರಿಸಲಾಯಿತು.

15. ಪೊನ್ನಂಪೇಟೆ–ಕಾನೂರು ರಸ್ತೆಯ ರಿಪೇರಿಗಾಗಿ (2 ಮೈಲುಗಳ ದೂರ) ರೂ. 50 ಕೊಡಬೇಕೆಂಬ ಸೂಚನೆಯನ್ನು ಓದಿ ರೂ. 20 ಮಂಜೂರು ಮಾಡಲಾಯಿತು.

16. ಪೊನ್ನಂಪೇಟೆ–ಬೇಗೂರು–ಚೀಣಿವಾಡ ರಸ್ತೆ ರಿಪೇರಿ ಮಾಡಬೇಕೆಂಬ ಸೂಚನೆಯನ್ನು ಓದಿ ಇದಕ್ಕೆ ಗ್ರಾಂಟು ಕೊಡುವ ಮೊದಲು ಇದನ್ನು ಪರಿಶೀಲಿಸಲು ತೀರ್ಮಾನವಾಯಿತು.

17. ಕೆಲವು ಶಾಲೆಗಳಿಗೆ ಕಕ್ಕುಸುಗಳನ್ನು ಕಟ್ಟಿಸುವ ಬಗ್ಗೆ ಖರ್ಚಾಗುವ ಅಂದಾಜು ರೂ. 681–8–0ನ್ನು ಮಂಜೂರು ಮಾಡಬೇಕೆಂದು ಶಾಲಾ ಇನ್ಸ್‌ಪೆಕ್ಟರವರು ಬರೆದ ಪತ್ರವನ್ನು ಓದಿ ರೂ. 100 ಮಂಜೂರು ಮಾಡಲು ತೀರ್ಮಾನವಾಯಿತು.

18. ಕುತ್ತುನಾಡು ಹೊಳೆಗೆ ಒಂದು ತಂತಿ ಹಗ್ಗವನ್ನು ಕೊಡಬೇಕೆಂಬ ಸೂಚನೆಯನ್ನು ಅಂಗೀಕರಿಸಿ ರೂ. 50 ಮಂಜೂರು ಮಾಡಲಾಯಿತು.

19. ಮಡಿಕೇರಿಯಿಂದ ಹೈಸೊಡ್ಲೂರಿಗಾಗಿ ಮರೆನಾಡಿಗೆ ಹೋಗುವ ರಸ್ತೆ ರಿಪೇರಿಯ ಖರ್ಚಿನಲ್ಲಿ 1/3 ಅಂಶವನ್ನು ಬೋರ್ಡು ಕೊಡಬೇಕೆಂಬ ದಕ್ಷಿಣ ಕೊಡಗು ಸುಬೇದಾರರ ಶಿಫಾರಸ್ಸು ಪತ್ರವನ್ನು ಓದಲಾಯಿತು. (1/3 ಅಂಶ ಅಂದರೆ ರೂ. 225) ರೂ. 200 ಮಂಜೂರುಮಾಡಲಾಯಿತು.

20. ಭಾಗಮಂಡ್ಲನಾಡಿನ ಮುಪ್ಪಗುಮಿ ಹೊಳೆಗೆ ಸೇತುವೆ ಕಟ್ಟುವ ಖರ್ಚಿನ 1/3 ಅಂಶ ಅಂದರೆ ರೂ. 666–10–8 ಬೋರ್ಡಿನಿಂದ ಕೊಡಲಿಕ್ಕಾಗುತ್ತದೋ ಎಂಬ ಕಮಿಶನರ ಪತ್ರವನ್ನು ಓದಿ ರೂ. 500 ಮಂಜೂರು ಮಾಡಲಾಯಿತು.

21. ಕೊಟ್ಟೂರು ಪ್ರೈಮರ್ ಎಲಿಮೆಂಟರಿ ಶಾಲೆಯಲ್ಲಿ ಚಿತ್ರದ ಕೆಲಸದ ಕ್ಲಾಸನ್ನು ತೆರೆಯಬೇಕೆಂಬ ಸೂಚನೆಯು ವಾಪಸು ತೆಗೆದುಕೊಳ್ಳಲ್ಪಟ್ಟಿತು.

22. ಕರಡ ಶಾಲೆಯಿಂದ ಬೊಳಿಯನಕಡು ಮಾರ್ಗವಾಗಿ ಬಾವಲಿ–ಕೈಕಾಡು ರಸ್ತೆಗೆ ಮುಟ್ಟುವಂತೆ 2 ಮೈಲು ರಸ್ತೆ ತೆರೆಯಲು ರೂ. 50, ವಾರ್ಷಿಕ ಖರ್ಚು ರೂ. 15 ರಂತೆಯೂ ಮಂಜೂರುಮಾಡಬೇಕಾಗಿ ಬಂದ ಸೂಚನೆಯನ್ನು ಓದಿ ರೂ. 20 ಮಂಜೂರುಮಾಡಲಾಯಿತು.

23. ಕೊಳಕೇರಿ ಗ್ರಾಮಕ್ಕೆ ಹೋಗುವ ರಸ್ತೆಯ ರಿಪೇರಿಗಾಗಿ ರೂ. 50 ಮಂಜೂರುಮಾಡಬೇಕೆಂಬ ಸೂಚನೆಯನ್ನು ಓದಿ ರೂ. 20 ಮಂಜೂರು ಮಾಡಲಾಯಿತು.

24. ಹೆಬ್ಬಾಲೆ ಶಾಲೆಯ VI ನೇ ತರಗತಿಯನ್ನು ಮುಚ್ಚಬೇಕೆಂಬ ಶಾಲಾ ಇನ್ಸ್‌ಪೆಕ್ಟರವರ ಶಿಫಾರಸ್ಸನ್ನು ಓದಿ ಈ ವಿಚಾರವನ್ನು 1939ನೇ ಜೂನಿಗೆ ಮುಂದರಿಸಿಡಲು ತೀರ್ಮಾನವಾಯಿತು.

(ಮುಂದುವರಿಯುವುದು.)

ದುಬಂದಿದೆ. ಅಲ್ಲಿಂದ ಅವರನ್ನು ಆಲ್ವಾರ್ ಸಂಸ್ಥಾನಕ್ಕೆ ಸಾಗಿಸಲಾಗಿದೆಯೆಂದೂ, ಜಮ್ನಾಲಾಲಜೀಯವರು ಅಧಿಕಾರಿಗಳ ಅಸಭ್ಯ ವರ್ತನೆಯನ್ನು ಖಂಡಿಸಿ, ಅವರಿಗೆ ತನ್ನನ್ನು ಬೇರೆ ಸಂಸ್ಥಾನದಲ್ಲಿ ತೆಗೆದುಕೊಂಡು ಹೋಗಿ ಹಾಕುವ ಅಧಿಕಾರವಿಲ್ಲೆಂದೂ, ಹಾಗೆ ಮಾಡಿದ್ದೇ ಆದರೆ ಅವರ ಮೇಲೆ ಮೊಖದಮ್ಮೆ ಹೂಡಲಾಗುವದೆಂದೂ ಹೇಳಿದರಂತೆ. ಆದ್ದರಿಂದ ಮಿ. ಯಂಗ್‌ರವರು ಪುನಃ ಅವರನ್ನು ಜಯಪುರಕ್ಕೆ ತಂದರುವರು. ಆದರೆ ಅವರೆಲ್ಲಿರುವದೆಂದು ಈಗ ತಿಳಿದುಬರುವದಿಲ್ಲ.

ಈ ವಿಚಾರದಲ್ಲಿ ಅಧಿಕಾರಿಗಳ ವರ್ತನೆಯು ಪೈಶಾಚಿಕವೆಂದಷ್ಟೇ ಟೀಕಿಸಬಲ್ಲೆನು. ಮಾನವನ ವ್ಯಕ್ತಿ ಸ್ವಾತಂತ್ರ್ಯ ನ್ಯಾಯವಿಮರ್ಶೆ ಇವೇ ಮೊದಲಾದುವು ಇವರ ಈ ಅಡನಾಡಿತನದ ವರ್ತನೆಯಿಂದ ಧೂಳೀಧೂಸರವಾಗಿರುವವು. ಒಬ್ಬ ಬ್ರಿಟಿಷ್ ಪೊಲೀಸ್ ಇನ್ಸ್‌ಪೆಕ್ಟರ್ ಜನರಲರವರು ಹೀಗೆ ಅತ್ಯಾಚಾರವನ್ನು ನಡೆಸುವದೆಂದರೆ ಅನ್ಯಾಯಕತ್ವದ ಹೆಗ್ಗುರುತ್ತೆಂದೇ ಹೇಳಬೇಕು. ಆದರೆ ಜಮ್ನಾಲಾಲಜಿಯವರ ಚಿತ್ತಸ್ಥೈರ್ಯಗಳನ್ನು ಯಾವ ವರ್ತನೆಯೂ ಕುಗ್ಗಿಸಲಾರದೆಂದು ನನಗೆ ತಿಳಿದಿದೆ. ಅವರು ಜಯಪುರವನ್ನು ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಇಲ್ಲವೇ ಸೆರೆಯಾಳಾಗಿ ಪ್ರವೇಶಿಸದಿರರು.

ಕೊಡಗು

ಫೆಬ್ರವರಿ ತಾರೀಕು ೧೭ನೇ ಶುಕ್ರವಾರ ೧೯೩೯.

ಇದೆಂಥಾ ಸಿಬ್ಬಂದಿ ಖೋತೆ?

ಕೊಡಗಿನ ಸರ್ಕಾರದ ಆದಾಯ ವೆಚ್ಚವನ್ನು ಸರಿಪಡಿಸುವ ಉದ್ದೇಶದಿಂದ ಮಾಡುತ್ತಿರುವ ಸಿಬ್ಬಂದಿ ಖೋತೆಯ ವಿಧಾನದಲ್ಲಿ ಆಗುತ್ತಿರುವ ಅನ್ಯಾಯವನ್ನು ಎಷ್ಟು ಖಂಡಿಸಿದರೂ ಸಾಲದು. ಬಡ್ಜಟಿನಲ್ಲಿ ಖರ್ಚು ಆದಾಯವನ್ನು ಮೀರಲು ತಲೆಭಾರ ಸರ್ಕಾರದ ದುಂದುಗಾರಿಕೆಯ ವೆಚ್ಚವೇ ಮುಖ್ಯ ಕಾರಣವೆಂದು ಕೌನ್ಸಿಲಿನ ಒಳಗೂ, ಹೊರಗೂ ಸಾರಿಸಾರಿ ಹೇಳಲ್ಪಟ್ಟಾಗ್ಯೂ ಕೂಡ ದೊಡ್ಡ ಸಂಬಳದ ಗಜಿಟೆಡ್ ಉದ್ಯೋಗಸ್ಥರಲ್ಲಿ ಖೋತೆ ಮಾಡುವ ಮೊದಲು ಚಿಕ್ಕ ಚಿಕ್ಕ ಉದ್ಯೋಗಸ್ಥರನ್ನೂ, ಗಾರ್ಡು, ಕಾನ್‌ಸ್ಟೇಬಲ್, ಜವಾನರುಗಳನ್ನೂ ತೆಗೆಯುತ್ತಿರುವ ಸರ್ಕಾರದ ವರ್ತನೆಯು ದೇಶದವರಲ್ಲಿ ತುಂಬಾ ಅಸಮಾಧಾನವನ್ನುಂಟುಮಾಡಿದೆ.

ಸಿಬ್ಬಂದಿಖೋತೆ ಪ್ರಾರಂಭಿಸುವ ಮೊದಲೇ ದೇಶದ ಪ್ರತಿನಿಧಿಗಳು ಕೌನ್ಸಿಲಿನಲ್ಲಿಯೂ, ಚೀಫ್ ಕಮಿಷನರವರಲ್ಲಿಗೆ ಡಿಪ್ಯುಟೇಶನ್ ಹೋಗಿಯೂ ಒಂದು ನಿರ್ಧಿಷ್ಟ ತತ್ವದ ಮೇರೆ, ಅನ್ಯಾಯಕ್ಕೆ ಎಡೆಕೊಡದೆ ಇವನ್ನು ಜಾರಿಗೆ ತರಬೇಕೆಂದು ಒತ್ತಿ ಹೇಳಿದರು. ಆ ಸಮಯದಲ್ಲಿ 1931 ನೇ ಇಸವಿಯ ಸಿಬ್ಬಂದಿ ಖೋತೆಯ ತತ್ವವನ್ನೇ ಈ ಸಾರಿಯೂ ಅನುಸರಿಸಲಾಗುವದೆಂದು ಸರ್ಕಾರದವರು ಭರವಸ ಕೊಟ್ಟರು. ಮಾತ್ರವಲ್ಲ; ದೊಡ್ಡ ಹುದ್ದೆಗಳ ಖೋತೆಯ ವಿಚಾರದಲ್ಲಿ ಇಂಡಿಯಾ ಸರ್ಕಾರದ ಹುಕುಮನ್ನು ನಿರೀಕ್ಷಣೆ ಮಾಡುತ್ತಿದ್ದೇವೆಂದೂ ಹೇಳಿದರು. ಆದರೆ ನಂತರ ತಿಂಗಳುಗಳು ಕಳೆದವು; ಕೊಡಗು ಸರ್ಕಾರದ ಫೈನಾನ್ಸ್ ಕಮಿಟಿಯ ಮೀಟಿಂಗು ಮುಗಿಯಿತು; ಕೌನ್ಸಿಲು ಸಭೆಯು ಬಡ್ಜೆಟ್ ಮೀಟಿಂಗು ಸಮೀಪಿಸುತ್ತಿದೆ. ಆದರೂ ಕೂಡ ಇಂಡಿಯಾ ಸರ್ಕಾರದ ಹುಕುಂ ಬಾರದೆ ಇರುವುದು ಆಶ್ಚರ್ಯವೇ ಸರಿ. ಈ ಅನಾವಶ್ಯದ ತಡಕ್ಕೆ ಕಾರಣವೇನೆಂದು ತಿಳಿಯದು. ಇಂಡಿಯಾ ಸರ್ಕಾರದ ತೀರ್ಮಾನವು ಸ್ಥಳೀಯ ಸರ್ಕಾರದ ಅಧಿಕಾರಿಗಳಿಗೆ ಒಪ್ಪಿಗೆಯಾಗದ್ದರಿಂದ ಪತ್ರವ್ಯವಹಾರವು ಮುಂದರಿಯುತ್ತಿದೆಯೋ ಅಥವಾ ಇಂಡಿಯಾ ಸರ್ಕಾರದವರೇ ತೀರ್ಮಾನ ಮಾಡಲು ತಡಮಾಡುತ್ತಿರುವರೋ ಎಂಬದನ್ನು ತಿಳಿಯುವುದು ಕಷ್ಟವಾಗಿದೆ. ಹೇಗೂ ಬರುವ ಕೌನ್ಸಿಲು ಮೀಟಿಂಗಿನೊಳಗೆ ಈ ಹುಕುಮು ಹೊರಬೀಳದಿದ್ದರೆ, ಕೌನ್ಸಿಲು ಮೆಂಬರುಗಳು ಸರ್ಕಾರದ ಈ ತರಹದ ಉದಾಸೀನದ ವರ್ತನೆಯನ್ನು ತೀವ್ರವಾಗಿ ಖಂಡಿಸದೆ ಇರಲಾರರಾಗಿ ನಂಬುತ್ತೇವೆ.

ಅತ್ಯವಶ್ಯವಾಗಿ ಮಾಡಬೇಕಾದ ದೊಡ್ಡ ಉದ್ಯೋಗಸ್ಥರ ಖೋತೆಯನ್ನು ಕುರಿತು ಇಂಡಿಯಾ ಸರ್ಕಾರದ ಹುಕುಂ ಬರುವ ಮುಂಚೆ ಚಿಕ್ಕ ಹುದ್ದೇದಾರರನ್ನು ಮನೆಗೆ ಕಳುಹಿಸುವ ಅವಸರಕ್ಕೆ ಕೈ ಹಚ್ಚಬಾರದೆಂದು ಈ ಮೊದಲು ಎಷ್ಟು ಒತ್ತಿ ಹೇಳಿದರೂ ಕೂಡ ಈ ತಿಂಗಳ ಅಂತ್ಯದಲ್ಲಿ ಉದ್ಯೋಗದಿಂದ ಬಿಡುಗಡೆ ಮಾಡುವ ಆಖೈರು ನೋಟೀಸುಗಳನ್ನು ಹಲವು ಚಿಕ್ಕ ಹುದ್ದೇದಾರರಿಗೆ ಸರ್ಕಾರದವರು ಭರದಿಂದ ಕಳುಹಿಸುತ್ತಿರುವುದು ಶೋಚನೀಯವಾಗಿದೆ. ಈ ವಿಚಾರದಲ್ಲಿಯೂ ಕೂಡ ಒಂದು ತತ್ವವನ್ನು ಅನುಸರಿಸಿ ನಡೆಯುವಂತೆ ಕಾಣುವುದಿಲ್ಲ. ಈ ಮೊದಲು ಸರ್ಕಾರದವರು ಭರವಸೆ ಕೊಟ್ಟಂತೆ, 1931 ರ ಸಿಬ್ಬಂದಿ ಖೋತೆಯ ತತ್ವವನ್ನೇ ಅನುಸರಿಸುವದಾದರೆ, ಕೆಲವು ಗ್ರೇಡುಗಳ ಉದ್ಯೋಗಸ್ಥರುಗಳ ಒಂದೊಂದು ಗುಂಪನ್ನು ಮಾಡಿ, ಪ್ರತಿಯೊಂದು ಗುಂಪಿನಲ್ಲಿ ಅವಶ್ಯವಿರುವಷ್ಟು ಸಂಖ್ಯೆಯನ್ನು ಖೋತೆ ಮಾಡಲು ಪ್ರಥಮತಃ 30 ವರ್ಷ ಸರ್ವಿಸಾದವರನ್ನೂ, ಅದು ಸಾಲದೆ ಹೋದರೆ 25 ವರ್ಷ ಸರ್ವಿಸ್ಸಾದವರನ್ನೂ ತೆಗೆಯುವ ಏರ್ಪಾಡು ಮಾಡಬೇಕಾಗಿತ್ತು. ಅದರ ಬದಲು 25 ಮಾತ್ರವಲ್ಲ, 30 ವರ್ಷಕ್ಕಿಂತ ಹೆಚ್ಚು ಸರ್ವಿಸ್ಸಾದ ಕೆಲವರಿಗೆ ನೋಟೀಸು ಕೊಡದೆ ಅದೇ ಗುಂಪಿನಲ್ಲಿ ಅವರಿಗಿಂತ ಕಡಿಮೆ ಸರ್ವಿಸ್ಸಾದವರಿಗೆ ನೋಟೀಸು ಕೊಟ್ಟಿರುವರೆಂದು ತಿಳಿಯಬರುತ್ತದೆ. ಪೂರ್ತಿ ಪೆನ್ಶನಿಗೆ ತಕ್ಕಷ್ಟು ಸರ್ವಿಸ್ಸಾಗದಿದ್ದರೂ, ಅದನ್ನು ಭರ್ತಿ ಮಾಡಲು ರಜೆ ಕೊಟ್ಟು ಅವರನ್ನು ಉದ್ಯೋಗದಿಂದ ನಿವೃತ್ತಿಗೊಳಿಸುವ ಏರ್ಪಾಡೂ ನಡೆದಿದೆಯೆಂದೂ ವರ್ತಮಾನ. ಇದನ್ನು ನೋಡಿದರೆ ಇಲಾಖಾ ಮೇಲಧಿಕಾರಿಗಳ ವರ್ತನೆಯು ಸಂಶಯಕ್ಕೂ, ಟೀಕೆಗೂ ಎಡೆ ಕೊಡುತ್ತದೆ. ಒಂದು ತತ್ವವನ್ನು ಜಾರಿಗೆ ತರುವಲ್ಲಿ ಅದು ಎಲ್ಲರಿಗೂ ಏಕರೀತಿ ಅನ್ವಯಿಸುವಂತೆ ಮಾಡುವುದು ಅಧಿಕಾರಿಗಳ ಧರ್ಮವಾಗಿದೆ. ಅದರ ಬದಲು ತಮಗೆ ಬೇಕಾದವರಿಗೆ ಒಂದು ರೀತಿ, ಬೇಡದವರಿಗೆ ಇನ್ನೊಂದು ರೀತಿ ಉಪಯೋಗಿಸಿದರೆ ಅದು ಪಕ್ಷಪಾತವಾಗುವುದು. ಅಧಿಕಾರಿಗಳ ಈಗಿನ ವರ್ತನೆಯಿಂದ ಇಂಥಾ ಪಕ್ಷಪಾತಕ್ಕೆ ಎಡೆಕೊಡಲಾಗಿದೆಯೆಂಬ ಸಂಶಯವು ಹಲವರಲ್ಲಿ ಹುಟ್ಟಿದೆ. ಇಂಥಾ ಪಕ್ಷಪಾತಕ್ಕೆ ಎಡೆಕೊಟ್ಟಿಲ್ಲವೆಂದಾದರೆ 25 ವರ್ಷಕ್ಕಿಂತ ಹೆಚ್ಚು ಸರ್ವಿಸ್ಸಾದವರಿಗೆ ನೋಟೀಸು ಕೊಡದೆ ಅವರಿಗಿಂತ ಕಮ್ಮಿ ಸರ್ವಿಸಿನವರಿಗೆ ನೋಟೀಸು ಕೊಟ್ಟದ್ದರ ಕಾರಣವನ್ನು ಸಂಬಂಧಪಟ್ಟ ಅಧಿಕಾರಿಗಳು ಬಹಿರಂಗಪಡಿಸುವುದು ಉತ್ತಮ. ಹಾಗೆ ಮಾಡಿದಲ್ಲಿ ಜನರಲ್ಲಿ ಉಂಟಾಗಿರುವ ಸಂಶಯವು ನೀಗುವುದು. ಹಾಗೆ ಬಹಿರಂಗಪಡಿಸದೆ ಇದ್ದರೆ ಪಕ್ಷಪಾತಮಾಡಲಾಗಿದೆಯೆಂಬುದು ಧೃಢವಾಗುವುದು. ಇದು ನಿಜವಾದರೆ ಅಧಿಕಾರಿಗಳ ವರ್ತನೆಯನ್ನು ಎಷ್ಟು ಖಂಡಿಸಿದರೂ ಸ್ವಲ್ಪವೇ. ದೇಶದ ಆಡಳಿತೆಯನ್ನು ನಡಿಸುತ್ತಾ ಖಾನೂನು ಕಾಯಿದೆಗಳನ್ನು ಜಾರಿಗೆ ತಂದು, ದೇಶದಲ್ಲಿ ಶಾಂತಿಯನ್ನೂ, ನೆಮ್ಮದಿಯನ್ನೂ ಕಾಪಾಡುವಂಥ ಮೇಲಧಿಕಾರಿಗಳೇ ಪಕ್ಷಪಾತದ ಅಪವಾದಕ್ಕೆ ಗುರಿಯಾದರೆ ದೇಶದ ಜನರು ನಿಷ್ಪಕ್ಷಪಾತದಿಂದ ವರ್ತಿಸಬೇಕೆಂದು ಅವರು ನಿರೀಕ್ಷಿಸುವದಾದರೂ ಹೇಗೆ? ಆದುದರಿಂದ ಬಹು ತಡವಾಗುವುದಕ್ಕಿಂತ ಮುಂಚಿತವಾಗಿ ಅಧಿಕಾರಿಗಳು ತಮ್ಮ ವರ್ತನೆಯಿಂದ ಜನರಲ್ಲಿ ಉಂಟಾಗಿರುವ ಸಂಶಯವನ್ನು ಪರಿಹರಿಸಿ, ಜನರಿಗೆ ಸರಕಾರದ ನ್ಯಾಯಶೀಲತೆಯ ಮೇಲಿರುವ ವಿಶ್ವಾಸವನ್ನು ಕಳಕೊಳ್ಳದಿರುವರಾಗಿ ನಂಬುತ್ತೇವೆ.

ಜಯಪುರದಲ್ಲಿ ಸತ್ಯಾಗ್ರಹ.

ನಗರದಲ್ಲಿ ಅಂಗಡಿಗಳ ಬಂಧನ.

ತಾರೀಕು 12 ರಲ್ಲಿ ಜಯಪುರದಲ್ಲೆಲ್ಲಾ ಹರತಾಳವು ಆಚರಿಸಲ್ಪಟ್ಟಿತು. ಜನರು ಕಿಕ್ಕಿರಿದು ನೆರೆದಿದ್ದರು. ನಗರದಲ್ಲಿ ಯಾವುದೊಂದು ಅಂಗಡಿಯೂ ತೆರೆದಿರಲಿಲ್ಲ. ಎಲ್ಲಾ ಜನರು ಜಹುರಿ ಬಜಾರಿನಲ್ಲಿ ಹುರುಪಿನಿಂದ ನೆರೆದಿದ್ದರು. ನಗರವನ್ನು ಮಿಲಿಟರಿ ಹಾಗೂ ಪೊಲೀಸರು ಕಾಯುತ್ತಿದ್ದರು. ಅನೇಕ ಚಿಕ್ಕ ಚಿಕ್ಕ ತಂಡಗಳು ನಗರವನ್ನೆಲ್ಲಾ ಸುತ್ತಿ ಜಯಘೋಷ ಮಾಡಿದರು. ಇದರಿಂದ ಉತ್ತೇಜಿತರಾದ ಕಾಲೇಜು ಬಾಲಕರು ಶಾಲೆಯಿಂದ ಹೊರಬಂದರು. ಆದರೆ ಪೋಲೀಸು ಸುಪರಿಂಟೆಂಡೆಂಟರ ಸಹಾಯದಿಂದ ಗಲಭೆಗಳಾಗಲಿಲ್ಲ. ಪ್ರಜಾಮಂಡಳದವರ ಪ್ರಕಟಣೆ ಮೇರೆ ಸತ್ಯಾಗ್ರಹವನ್ನು ಕೈಕೊಳ್ಳಲು ಒಂದು ತಂಡವು ಹೊರಟಿತು. ಆದರೆ ಪೋಲೀಸು ಸುಪರಿಂಟೆಂಡೆಂಟರು ಅವರನ್ನು ಮುಂದುವರಿಯದಂತೆ ತಡೆದು ಈ ತಂಡದಲ್ಲಿದ್ದ ಐದು ಜನರನ್ನು ಕೈಸೆರೆ ಹಿಡಿದರು. ಈ ಸಂದರ್ಭದಲ್ಲಿ ಜನತೆಯು ಉದ್ರೇಕಗೊಂಡು ಹಿಂಸಾವೃತ್ತಿಯನ್ನು ಕೈಕೊಳ್ಳುವ ಪರಿಸ್ಥಿತಿಯಲ್ಲಿತ್ತು. ಆದರೆ ನಾಯಕರಾದ ಶ್ರೀ ಶೋಭಾನಿಯವರು ಅವರಿಗೆ ಅಹಿಂಸಾ ರೀತಿಯಿಂದ ವರ್ತಿಸಬೇಕೆಂದೂ, ಸಭೆಯು ಚೆದರಬೇಕೆಂದೂ ವಿನಂತಿಸಿದ ಮೇರೆ ಜನತೆಯು ನಗರದ ಹೊರಗೆ ಹೋಗಿ ಅಲ್ಲಿ ಒಂದು ಸಭೆ ಸೇರಿತು. ಅಲ್ಲಿ ಪೋಲೀಸರು ಬಂದು ಲಾಠಿ ಪ್ರಯೋಗ ಮಾಡಿದ್ದರಿಂದ ಜನತೆಯು ಚೆದರಬೇಕಾಯಿತು.

ಮೂರನೇ ಸಾರಿ ಬಂಧಿಸಲ್ಪಟ್ಟಿರುವ ಸೇಟ್ ಜಮ್ನಾಲಾಲ್ ಬಜಾಜರು ಜಯಪುರ ನಗರದಿಂದ 74 ಮೈಲು ದೂರವಿರುವ ಮೊರಾನ್ ಸಾಗರವೆಂಬಲ್ಲಿ ಪೋಲೀಸರ ಮೇಲ್ವಿಚಾರಣೆಯಲ್ಲಿದ್ದಾರೆ. ಪ್ರಜಾಮಂಡಳವು ಸತ್ಯಾಗ್ರಹವನ್ನು ಕೈಗೊಂಡು ತನ್ನ ಧ್ಯೇಯಸಾಧನೆಗೆ ಪ್ರಯತ್ನಿಸುತ್ತಿದೆ. ಈಗಾಗಲೇ ಪೋಲೀಸರು ತಮ್ಮ ಕರಾಳ ಸ್ವರೂಪವನ್ನು ಜನರಲ್ಲಿ ತೋರಿಸುತ್ತಿರುವರು. ಜಯಪುರದ ಪ್ರಜಾಮಂಡಳವು ಹುರುಪಿನಿಂದ ಹೋರಾಡಿ ತನ್ನ ಧ್ಯೇಯವಾದ ಜವಾಬ್ದಾರಿ ಸರಕಾರವನ್ನು ಕರಗತಮಾಡಿಕೊಂಡು ಉಳಿದ ಸಂಸ್ಥಾನಗಳಿಗೆ ಆದರ್ಶವಾಗಲೆಂದೇ ನಮ್ಮ ಬಯಕೆ.

ತ್ರಿಪುರಿ ಕಾಂಗ್ರೆಸಿನ ವ್ಯವಸ್ಥೆ.

ಬರುವ ಮಾರ್ಚಿ ತಾರೀಕು 10,11 ಮತ್ತು 12 ರಲ್ಲಿ ನಡೆಯುವ ತ್ರಿಪುರಿ ಕಾಂಗ್ರೆಸ್ ಮಹಾಧಿವೇಶನದ ಸಿದ್ಧತೆಗಳು ಪೂರೈಸುತ್ತಾ ಬಂದಿವೆ. ವಿಷ್ಣುದತ್ತ ನಗರವು ಶೋಭಾಯಮಾನವಾಗಿದೆ. 10 ದ್ವಾರಗಳಿಂದ ಕೂಡಿದ ಈ ನಗರವು ಬ್ರಹ್ಮಸೃಷ್ಟಿಯಂತೆ ಒಮ್ಮಿಂದೊಮ್ಮೆ ಹಳ್ಳಿಯೆಂದು ಕರೆಯಲ್ಪಡುತ್ತಿದ್ದ ತ್ರಿಪುರಿಯಲ್ಲಿ ಕಂಗೊಳಿಸುತ್ತಿದೆ. ಇದರ 10 ದ್ವಾರಗಳಿಗೂ ಸಹ ಭಾರತ ಮಾತೆಯ ಬಂಧವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದು ಪರಂಧಾಮವನ್ನೈದಿದವ್ರೀಗಳಾದ ಮಾಧವರಾವ್ ಸಪ್ರೆ, ನಾಥೂರಾಮ್ ಮೋತಿ, ಕೃಷ್ಣದೇವ ಭಟ್, ಬ್ರಿಜ್ ಮೋಹನ್ ಶರ್ಮ, ದಾಮೋದರರಾವ್ ಶ್ರೀಖಂಡೆ, ವಿಶ್ವನಾಥರಾವ್ ಗೆಜ್ಜೆಕರ್, ನಾರಾಯಣರಾವ್ ಸುಫನಾಲೆ, ಗಯೊವರ್, ಗುಲಜಾರ್ ಸಿಂಗ್ ಮತ್ತು ಬಾಲಮುಕುಂದ ತ್ರಿಪತಿ ಇವರುಗಳ ಹೆಸರನ್ನು ಅನುಕ್ರಮವಾಗಿಡಲಾಗಿದೆ. ವಿಷ್ಣುದತ್ತ ನಗರಕ್ಕೆ ಹೋಗುವ ರಸ್ತೆಗಳಿಗೆ ತಮ್ಮ ಅಮೋಘ ಸೇವೆಯನ್ನು ಮಾತೆಯ ಅಡಿದಾವರೆಗಳಲ್ಲಿ ಸಮರ್ಪಿಸಿ ಕಣ್ಮರೆಯಾಗಿರುವ ತಿಲಕ್, ಲಜಪತರಾಯಿ, ದಾಸ್, ನೆಹರೂ, ಅನ್ಸಾರಿ ಮತ್ತು ಅಬ್ದುಲ್ ಬಾನ್ ಎಂಬ ಹೆಸರುಗಳನ್ನಿಡಲಾಗಿದೆ. ವಿಷ್ಣುದತ್ತ ನಗರದಲ್ಲಿ ಪೂಜ್ಯ ಗಾಂಧೀಜಿಯವರ 72 ಅಡಿ ಎತ್ತರದ ಒಂದು ಪ್ರತಿಮೆಯನ್ನು 25000 ರೂಪಾಯಿ ಖರ್ಚು ಮಾಡಿ ಇಡುವ ಏರ್ಪಾಡು ನಡೆದಿತ್ತು. ಆದರೆ ಗಾಂಧಿಯವರು ಇದನ್ನು ನಿರಾಕರಿಸಿ ಇಡಲಿಕ್ಕಾಗದೆಂದು ಹೇಳಿದ ಪ್ರಕಾರ ಅದು ನಿಲ್ಲಿಸಲ್ಪಟ್ಟಿತು. ಅಂತು ಅಧಿವೇಶನವು ಜಯಪ್ರದವಾಗಿ ನಡೆದು ದೇಶದ ಬಂಧವಿಮೋಚನೆಗೆ ಸಹಾಕಾರಿಯಾಗಲೆಂದು ಆಶಿಸುವೆವು.

ವರ್ತಮಾನ ಸಂಗ್ರಹ.

ಒಳದೇಶ.

ಈ ವರ್ಷ ಉತ್ತರ ಕೊಡಗಿನ ಸಾರಾಯಿ. ಮತ್ತು ನೇಂದಿ ಅಂಗಡಿಗಳ ಹರಾಜಿನಲ್ಲಿ ಕಳೆದ ವರ್ಷಕ್ಕಿಂತ ರೂ. 15 ಸಾವಿರ ಕಮ್ಮಿಯಾಗಿರುವುದೆಂದು ತಿಳಿಯುತ್ತೇವೆ.

ಬೆಂಗಳೂರು ರೆಸಿಡೆನ್ಸಿ ಸರ್ಜನರಾದ ಕರ್ನಲ್ ಹ್ಯಾನ್ಸ್ನರವರು ಈ ತಾ. 15 ರಲ್ಲಿ ಕೊಡಗಿಗೆ ಬಂದಿರುವರು. ಅವರು ತಾ. 21 ರ ವರೆಗೆ ಕೊಡಗಿನ ಆಸ್ಪತ್ರೆಗಳನ್ನು ಇನ್‌ಸ್ಪೆಕ್ಟ್ ಮಾಡಿ ಹಿಂತಿರುಗುವರೆಂದು ತಿಳಿಯಬರುತ್ತದೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110 ಏಲಕ್ಕಿ ಮಣಕ್ಕೆ ರೂ. 28 ಕ್ರಯವಿರುತ್ತೆ.

ಡಿ. ಬೋರ್ಡಿನ ಬಜೆಟ್ ಮೀಟಿಂಗು ತಾರೀಕು 14 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಇಲ್ಲಿಯ ಸ್ಕೌಟ್ ಎಸೋಸಿಯೇಷನಿನ ಮಹಾಸಭೆಯು ಕಮಿಷನರ ಅಧ್ಯಕ್ಷತೆಯಲ್ಲಿ ತಾ. 16 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಶ್ರೀ ಕೇತಿಯಂಡ ಬಿ. ಮಾದಯ್ಯನವರು ಕಳೆದ ಅಕ್ಟೋಬರ್ 8 ರಲ್ಲಿ ನಡೆದ ಇಂಡಿಯನ್ ಪೋಸ್ಟ್ ಮತ್ತು ಟೆಲಿಗ್ರಾಫ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ತಾರೀಕು 24 ರಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಮುಂದುಗಡೆ 8 ಒಂಟಿ ಹೊಳವಿನ ತುಂಬುವ ಕೋವಿಗಳೂ, 2 ಜೋಡು ಹೊಳವಿನ ತುಂಬುವ ಕೋವಿಗಳೂ ಬಹಿರಂಗವಾಗಿ ಹರಾಜು ಮಾಡಲ್ಪಡುವವಾಗಿ ತಿಳಿಯುತ್ತೇವೆ.

ನಿವೃತ್ತರಾಗಿ ಇಂಗ್ಲೆಂಡಿಗೆ ಹೋಗುವ ವಿ. ಎ. ಈ. ಜೆ. ನಿಕೊಲ್ಸ ಸಿ. ಬಿ. ಈ. ಯಂ. ಸಿ. ಯವರಿಗೆ ಇಲ್ಲಿಯ ಹೈಸ್ಕೂಲ್ ಕ್ರಿಕೆಟ್ ಆಟದ ಮೈದಾನದಲ್ಲಿ ಟೀ ಪಾರ್ಟಿಯನ್ನು ತಾರೀಕು 26 ನೇ ಆದಿತ್ಯವಾರ ಕೊಡುವರಾಗಿ ತಿಳಿಯುತ್ತೇವೆ.

ಇಲ್ಲಿಯ ವೇದಾಂತ ಸಂಘದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವವನ್ನು ಈ ತಾರೀಕು 21 ರಿಂದ ಏಳು ದಿನಗಳ ವರೆಗೆ ಹೃದಯಂಗಮವಾದ ಭಾಷಣಗಳಿಂದಲೂ, ಭಕ್ತಿಬೋಧಕ ಹರಿಕಥೆಗಳಿಂದಲೂ ವಿಜೃಂಭಣೆಯಿಂದ ನಡೆಸುವರಾಗಿಯೂ, ಎಲ್ಲರಿಗೂ ಸುಸ್ವಾಗತವಿದೆಯಾಗಿಯೂ ತಿಳಿಯುತ್ತೇವೆ.

ಪೊನ್ನಂಪೇಟೆ.

ಪೊನ್ನಪ್ಪಸಂತೆಯಲ್ಲಿ ಜಾನುವಾರಗಳ ಪ್ರದರ್ಶನವು ಬರುವ ಮಾರ್ಚಿ ತಿಂಗಳಲ್ಲಿ ನಡೆಯುವದೆಂದೂ, ಆ ಸಮಯದಲ್ಲಿ ಅಲ್ಲಿ ಒಂದು ಛತ್ರದ ಮತ್ತು ಒಂದು ಜನಸಿ ಸ್ಟೋರು ತೆರೆಯಲ್ಪಡುವದೆಂದೂ ತಿಳಿಯುತ್ತೇವೆ.

ನಾಪೋಕ್ಲು.

ಬೇತುಗ್ರಾಮದ ಜನರು ತಮ್ಮ ಜನರಲ್ ಮೀಟಿಂಗಿನಲ್ಲಿ ಸಧ್ಯದಲ್ಲೇ ಮುಚ್ಚಲ್ಪಡುವ ನಾಪೋಕ್ಲು ಬಾಲಕಿಯರ ಶಾಲೆಯ ಕಟ್ಟೋಣವನ್ನು ಸರಕಾರದವರು ನಾಪೋಕ್ಲು ಆಸ್ಪತ್ರೆಯ ವಾರ್ಡನ್ನಾಗಿ ಮಾರ್ಪಡಿಸಬೇಕೆಂದೂ, ಅದರ ಖರ್ಚಿಗಾಗಿ ಪಾಕ್ಕಿ ದೇವರ ಭಂಡಾರದಿಂದ ವಾರ್ಷಿಕ ವಂತಿಗೆಯಾಗಿ ಐದು ರೂಪಾಯಿಗಳನ್ನು ಕೊಡುವುದಾಗಿಯೂ, ಈ ವಿಚಾರವನ್ನು ಡಿಸ್ಟ್ರಿಕ್ಟು ಬೋರ್ಡಿನವರು ಗಮನಕ್ಕೆ ತೆಗೆದುಕೊಳ್ಳಬೇಕೆಂದೂ ತೀರ್ಮಾನಿಸಿರುವರು.

ತಾ. 12 ರಲ್ಲು ನಡೆದ ಹಿಂದೀ ಪರೀಕ್ಷೆಗೆ ನಾಪೋಕ್ಲಿನಿಂದ ಮೂರು ಜನರು ಪ್ರಾಥಮಿಕ ಪರೀಕ್ಷೆಗೂ ಒಬ್ಬರು ರಾಷ್ಟ್ರ ಭಾಷಾ ಪರೀಕ್ಷೆಗೂ ಕುಳಿತಿರುವರು. ಪರೀಕ್ಷೆಯು ನಾಪೋಕ್ಲು ಸ್ಟೋರ್ ಮಹಡಿಯಲ್ಲಿ ನಡೆಯಿತು.

ನಾಪೋಕ್ಲು ಜುಬಿಲಿ ಕ್ಲಬ್ಬಿನ ಆಶ್ರಯದಲ್ಲಿ ಅಖಿಳ ಕೊಡಗು ಬ್ಯಾಡ್‌ಮಿಂಟನ್ ಪಂದ್ಯಾಟವು ಈ ತಾ. 10 ರಿಂದ ಪ್ರಾರಂಭವಾಗಿದೆ. ಮುಂದಿನ ವಾರವೂ ನಡೆಯುವುದು. ಮಡಿಕೇರಿ ಮೂರ್ನಾಡು ಮೊದಲಾದ ಸ್ಥಳಗಳಿಂದ ಸ್ಪರ್ಧಿಗಳು ಬಂದಿರುವರು.

ಸುಪರ್‌ವೈಜರುಗಳ ವರ್ಗಾವರ್ಗಿ.

ಇಷ್ಟರ ವರೆಗೆ ಹಂಗಾಮಿಯಾಗಿದ್ದ ಸುಪರ್‌ವೈಜರುಗಳು—ಮುರುವಂಡ ಮಾಚಯ್ಯ, ಜೋಡುಮಾಡ ಪೊನ್ನಪ್ಪ, ಕುಂಬೆರ ಅಪ್ಪಣ್ಣ, ಮಾಟೇರಿರ ಭೀಮಯ್ಯ, ನೆರವಂಡ ಅಪ್ಪಯ್ಯ, ಪುಲಿಯಂಡ ಸೋಮಯ್ಯ, ಟಿ.ಪಿ.ಕೃಷ್ಣಪ್ಪ, ಕಲಿಯಂಡ ಪೂವಯ್ಯ ಹಂಗಾಮಿ ಇನ್‌ಸ್ಪೆಕ್ಟರುಗಳಾಗಿದ್ದ ಬಿ. ದೇವಯ್ಯ ಮತ್ತು ಮಸ್ಟಂಡ ಸುಬ್ಬಯ್ಯ ಮತ್ತು ರಿಜಿಸ್ಟ್ರಾರ ಆಫೀಸಿನ ಗುಮಾಸ್ಥರು—ಕನ್ನಂಡ ಪೊನ್ನಪ್ಪ—ಮದ್ರಾಸು ಸಹಕಾರಿ ಟ್ರೈನಿಂಗ್—

ನೇಮಕ (ಸುಪರ್‌ವೈಜರುಗಳು) ಶ್ರೀಮಂಗಲನಾಡು—ತೆಕ್ಕಡ ಗಣಪತಿ, ಪೊನ್ನಂಪೇಟೆ—ಜಿ.ಎನ್. ರಾಮಚಂದ್ರಯ್ಯ, ವೀರಾಜಪೇಟೆ—ತೆಕ್ಕಡಮುತ್ತಪ್ಪ, ಅಮ್ಮತ್ತಿ—ಎಚ್. ಕೆ. ಚಿಂತಾಮಣಿ, ನಾಪೋಕ್ಲು—ಕಡೇಮಾಡ ಅಪ್ಪಯ್ಯ, ಮೂರ್ನಾಡು—ಬೊಪ್ಪಂಡ ಕುಶಾಲಪ್ಪ, ಬೇಂಗುನಾಡು—ಮೂವೆರ ಚಿಣ್ಣಪ್ಪ, ಫ್ರೇಜರ್‌ಪೇಟೆ—ಶಾಂತಮಲ್ಲಪ್ಪ ಮತ್ತು ಶನಿವಾರಸಂತೆ—ಕೇತಿಯಂಡ ಸೋಮಯ್ಯ.

ಕೊಕ್ಕೇಂಗಡ ಮೊಣ್ಣಪ್ಪ ಹಂಗಾಮಿ ಇನ್‌ಸ್ಪೆಕ್ಟರ್.

ಹಿಂದೂದೇಶ.

ಇದೇ ಬರುವ ಮಾರ್ಚಿ ತಾ. 3 ರಲ್ಲಿ ಮಹಾತ್ಮರು ತ್ರಿಪುರಿಗೆ ದಯೆಮಾಡಿಸಿ, ಅಂದು ಸಂಜೆ ಪ್ರದರ್ಶನವನ್ನು ತೆರೆಯುವರು.

ಬರುವ ವರ್ಷದ ಕಾಂಗ್ರೆಸ್ ಮಹಾಧಿವೇಶನವು ಕರ್ನಾಟಕದಲ್ಲಿ ನಡೆಯಬೇಕೆಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯು ತ್ರಿಪುರದಲ್ಲಿ ಆಹ್ವಾನಿಸುವದು.

ಬೀಹಾರಿನ ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರು ತಮ್ಮ ಪತ್ರವ್ಯವಹಾರವನ್ನು ಹಿಂದೂಸ್ಥಾನಿ ಭಾಷೆಯಲ್ಲಿ ನಡೆಸಲು ತೀರ್ಮಾನಿಸಿರುವರು.

6 ವರ್ಷಗಳ ಹಿಂದೆ ಕ್ರೈಸ್ತ ಧರ್ಮವನ್ನು ಅವಲಂಬಿಸಿದ್ದ 100 ಹಿಂದೂ ಕುಟುಂಬಗಳು, ದೇವೀ ಕೋಟೆಯಲ್ಲಿ, ಅಲ್ಲಿನ ಗಾಂಧಿ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ. ಕನುಲಾತಿನ ಸುಬ್ರಹ್ಮಣ್ಯಂರವರ ಸಾಹಸದಿಂದ ಪುನಃ ಹಿಂದೂ ಮತಾನುಯಾಯಿಗಳಾದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಈ ತಾರೀಕು 22 ರಲ್ಲಿ ವಾರ್ಧಾದಲ್ಲಿ ನಡೆಯುವದು. ಮುಂದಗಾಮಿಗಳು ಹಾಗು ತೀವ್ರಗಾಮಿಗಳೆಂಬ ಮತಭೇದ ಬಂದ ನಂತರ ಸೇರುವ ಪ್ರಥಮ ಮೀಟಿಂಗು ಇದಾಗಿದೆ. ಇದರಲ್ಲಿ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿವೇಚಿಸಲಾಗುವದೆಂದು ತಿಳಿದು ಬರುತ್ತದೆ.

ಜನಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ, ರೈತರಿಗೆ ಸಾಲ ಸುಲಭವಾಗಿ ದೊರೆಯುವ, ಸಹಕಾರ ಸಂಸ್ಥೆ ಹಾಗೂ ಅಡಮಾನದ ಬ್ಯಾಂಕುಗಳ ಅಧಿಕ ಪ್ರಯೋಜನ ಜನತೆಗೆ ದೊರಕುವ ಉಪಾಯಗಳನ್ನು—ವಿಮರ್ಶೆ, ವಿಚಾರಗಳ ಬಳಿಕ—ಸೂಚಿಸಲು ಮದ್ರಾಸ್ ಸರಕಾರವು ಒಂದು 'ಸಹಕಾರ ಸಮಿತಿ'ಯನ್ನು ಸ್ಥಾಪಿಸಿದೆ. ಸರ್. ಟಿ. ವಿಜಯ ರಾಘವಾಚಾರ್ಯರ್ ಇವರು ಇದರ ಅಧ್ಯಕ್ಷರು. ಶ್ರೀ. ಟಿ. ಎ. ರಾಮಲಿಂಗಂ ಚೆಟ್ಟಿಯಾರರು ವೈಸ್‌ಚೆಯರ್‌ಮ್ಯಾನರು; ಸಹಕಾರ ಸಂಘಗಳ ಡೆ|| ರಿಜಿಸ್ಟ್ರಾರ್ ಶ್ರೀ. ಕೆ. ಸುಬ್ರಹ್ಮಣ್ಯಂ ಇವರು ಕಮಿಟಿಯ ಕಾರ್ಯದರ್ಶಿ. ಮೆಂಬರುಗಳಲ್ಲಿ ಕರ್ನಾಟಕದ ಶ್ರೀ. ಯಂ. ಶಿವರಾಯರೂ ಒಬ್ಬರು.

ವಿದೇಶ

ಈಜಿಪ್ಟಿನ ಮಾಜಿ ಪ್ರಧಾನ ಸಚಿವರಾದ ನಹಾಸ್ ಪಾಷಾರವರಿಗೂ ಅವರ ವಾಫ್ಡ್ ಪಕ್ಷದ ಸದಸ್ಯರುಗಳಿಗೂ ಅಖಿಲ ಹಿಂದೂಸ್ಥಾನದ ರಾಷ್ಟ್ರಪತಿಗಳಾದ ಸುಭಾಸ್ ಚಂದ್ರಬೋಸ್‌ರವರು, ಮುಂದಿನ ತ್ರಿಪುರಿ ಕಾಂಗ್ರೆಸ್ ಮಹಾಸಭೆಗೆ ದಯಮಾಡಿಸಬೇಕೆಂದು ಆಹ್ವಾನವನ್ನು ಕಳುಹಿಸಿದ್ದರು. ನಹಾಸ್ ಪಾಷಾರವರು ಈ ಆಹ್ವಾನವನ್ನು ಸ್ವೀಕರಿಸಿರುತ್ತಾರೆ. ತಮ್ಮ ಪಕ್ಷದ ಇತರ ಪ್ರತಿನಿಧಿಗಳೊಡನೆ ಹೊರಟು ತಾವು ಕಾಂಗ್ರೆಸ್ ಮಹಾ ಸಭೆಗೆ ಬರುವುದಾಗಿ ಅವರು ತಿಳಿಸಿರುತ್ತಾರೆ.

ಪರದೇಶದಲ್ಲೇನು ನಡೆದಿದೆ?

ಫ್ರಾನ್ಸು ಮತ್ತು ಸ್ಪೈಯಿನ್.

ಇಂದು ಅದು ಸ್ಪೈಯಿನ ನಿರಾಶ್ರಿತರ ಆಶ್ರಯ ಸ್ಥಾನವಾಗಿದೆ. ಸ್ಪೈಯಿನಿನ ದಂಗೆಖೋರರ ಹಾವಳಿಯಿಂದ ಬಳಲಿ ಬೆಂಡಾಗಿರುವ ಅನೇಕರು ಫ್ರಾನ್ಸಿನಲ್ಲಿ ಬಂದು ತುಂಬುತ್ತಿದ್ದಾರೆ. ಇವರ ಯುದ್ಧೋಪಕರಣಗಳೆಲ್ಲಾ ಫ್ರಾನ್ಸಿನ ಗಡಿಯಲ್ಲಿ ರಾಶಿ ಬಿದ್ದಿವೆ. ಫ್ರಾಂಕೋನು ದಿನಕ್ಕೊಂದರಂತೆ ಪಟ್ಟಣಗಳನ್ನು ವಶಪಡಿಸಿಕೊಂಡು ಮುಂದು ವರಿಯುತ್ತಿರುವನು. ಸ್ಪೈಯಿನು ದಂಗೆಖೋರರ ವಶವಾಗುವುದರಲ್ಲಿ ಸಂದೇಹವಿಲ್ಲ. ಫ್ರಾನ್ಸು ಈ ನಿರಾಶ್ರಿತರಿಗೆ ಆಶ್ರಯಧಾತೃವಾಗಿದ್ದರೂ ತನ್ನೊಳಗೆ ತಾನೇ ಕುದಿಯುತ್ತದೆ. ಫ್ರಾಂಕೋವಿನ ವಿಜಯವು ಯಾವ ಪರಿಣಾಮವನ್ನು ತಂದು ತಮಗೊಡ್ಡುವದೆಂಬುವದೇ ಯೋಚನೆ. ಸ್ಪೈಯಿನಿನಲ್ಲಿ ದಂಗೆಖೋರರು ಇಷ್ಟು ಮುಂದರಿಯುತ್ತಿದ್ದರೂ ಸರ್ಕಾರದವರು ಯುದ್ಧ ಸರಂಜಾಮುಗಳನ್ನು ಕೂಡಿಸುತ್ತಲೇ ಇರುವರು. 40 ವರ್ಷದೊಳಗಿನ ಪರಿಲ್ಲಿ ಸೈನ್ಯಕ್ಕೆ ಸೇರಬೇಕೆಂದು ಬಾನೊನು ಹೊರಡಿಸಿರುವರು. ಅಲ್ಲದೆ ಸರ್ಕಾರದ ಒಬ್ಬನೇಒಬ್ಬ ಯೋಧನು ಜೀವಂತವಿರುವ ವರೆಗೂ ಸಂಗ್ರಾಮವೆ ಎಂದು ಸಾರಿದೆ.

ಜರ್ಮನಿ.

ಇದು ಈಗ ರಷ್ಯಾದೊಡನೆ ಸ್ನೇಹ ಬೆಳೆಸುವ ಹವಣಿಕೆಯಲ್ಲಿದೆ. ರಷ್ಯಾದ ಒಂದು ಪತ್ರಿಕೆಯು 'ಜರ್ಮನಿಯು ರಷ್ಯ ಸರ್ಕಾರಕ್ಕೆ ತನ್ನ ಕೈಕೊಟ್ಟರೆ ಕೂಡಲೇ ಅದನ್ನು ರಷ್ಯವು ಹಿಡಿಯದಿರದು ಎಂದು ಪ್ರಕಟಿಸಿದೆ. ಅಲ್ಲದೆ ಚೇಂಬರ್ಲೇನರ ಶಾಂತಿ ಸಾಧನೆಯೇ ಸ್ಪೈಯಿನ್ ಫ್ರಾನ್ಸಿಗೆ ಸಹಾಯ ಮಾಡದೆ ಮಾಡಿತೆಂದೂ ಬ್ರಿಟನಿನ ಧೋರಣೆಯನ್ನು ಖಂಡಿಸಿದೆ. ಯೂರೋಪಿನ ರಾಜಕೀಯ ಬಿಕ್ಕಟ್ಟು ಪರಿಹಾರವಾಗುವುದಕ್ಕೂ, ಅದರ ಪ್ರಗತಿಗೂ ರಷ್ಯಾದ ಕೈ ಅಗತ್ಯವೆಂದಿದೆ. ಈಗ ಜಪಾನಿನದ್ದೊಂದು ವಿಮಾನ ಕಂಪನಿಯೊಡನೆ ಜರ್ಮನಿಯು ಮೈತ್ರಿ ಬೆಳಸಿ ಬರ್ಲಿನಿನಿಂದ ಜಪಾನಿನ ಟೋಕಿಯೋ ನಗರಕ್ಕೆ ವಿಮಾನ ಲೈನು ಇಡುವ ಯೋಜನೆಯನ್ನು ಮಾಡಿದೆ. ಈ ವಿಮಾನ ಮಾರ್ಗವು ಅನೇಕ ದೇಶಗಳನ್ನು ಹಾದು ಇಂಡಿಯಾಕ್ಕಾಗಿ ಟೋಕಿಯೋಗೆ ಹೋಗುವದು. ಈ ವಿಮಾನ ಮಾರ್ಗದಿಂದ ಯಾವ ಹಂಚಿಕೆಯನ್ನು ಜಪಾನ್ ಮತ್ತು ಜರ್ಮನರು ಯೋಚಿಸಿರುವರೋ ತಿಳಿಯದು.

ಚೈನಾ.

ಜಪಾನು ತನ್ನ ಪಾಶವೀ ಶಕ್ತಿಯಿಂದ ಕೋರಿಕೆಗೆ ಕರಗತ ಮಾಡಿಕೊಂಡಿರುವ ಪ್ರಾಂತಗಳಲ್ಲಿ ಅವರ ಅಧಿಕಾರ ನಡೆಯುವ ಹಾಗಿಲ್ಲ. ಒಂದು ಕಡೆಯಲ್ಲಿ ಜಪಾನೀ ಸೈನಿಕರೊಡನೆ ಯುದ್ಧ ಮಾಡುತ್ತಿದ್ದರೆ ಜಪಾನರ ಅತ್ಯಾಚಾರಗಳನ್ನು ಸಹಿಸದ ಜಪಾನಿನ ಸೈನಿಕರೇ ಜನರಲ್ ಛ

ಯಾಂಗ್ ಕೈಶೇಕರ ಅಧೀನದಲ್ಲಿ ಜಪಾನರೊಡನೆ ಯುದ್ಧ ಮಾಡುತ್ತಿರುವರು. ಹೀಗೆ ಜಪಾನರನ್ನು ತ್ಯಜಿಸಿ ಚೀನಿಯರ ಪರವಾಗಿರುವ ಜಪಾನೀ ದಳವು 10 ಸಾವಿರ ಜನಸಂಖ್ಯೆಯಿಂದ ಕೂಡಿದೆ. ಆದ್ದರಿಂದ ಜಪಾನರು ನಿರಾಶರಾಗುವ ಕಾಲ ಬಂದಿದೆ.

ಬ್ರಿಟನ್.

ಬ್ರಿಟನು ತನ್ನ ರಕ್ಷಣಾ ಕಾರ್ಯವನ್ನು ಭರದಿಂದ ಸಾಗಿಸುತ್ತಿದೆ. ಇಂದಿನ ಯುಗದಲ್ಲಿ ತನ್ನ ರಕ್ಷಣಾ ಕಾರ್ಯವೆಂದರೆ ಅದೇನು ಸುಲಭದ ಕಾರ್ಯವೇನು? ಬಾಂಬುಗಳ ಮಳೆ, ವಿಷಗಾಳಿ ಪ್ರಯೋಗ, ಮಷಿನ್‌ಗನ್‌ಗಳ ಗುಂಡು ಇವೇ ಮೊದಲಾದವುಗಳಿಂದ ರಕ್ಷಿಸಿಕೊಳ್ಳಬೇಡವೇ? ಆದ್ದರಿಂದಲೇ ಇಂದು ಬ್ರಿಟನು ವಿಷಗಾಳಿ ಮುಖವಾಡ, ಬಾಂಬಿನ ಸುರಿಮಳೆಗೆ ಕಿಲನೆಳೆಗೆ ಇವೇ ಮೊದಲಾದ ಸವಲತ್ತುಗಳನ್ನು ಮಾಡಿಕೊಳ್ಳುತ್ತಿದೆ. ಅಲ್ಲದೆ ಬೇರೆ ಯುದ್ಧ ಸಾಮಗ್ರಿಗಳನ್ನು ಜೇರಿ ವೈರಿಗಳ ಮೇಲೆ ಧಾಳಿ ನಡೆಸುವದಕ್ಕಲ್ಲದಿದ್ದರೂ ತಮ್ಮ ಕೈಗಾರಿಕೋದ್ಯಮ ಕೇಂದ್ರಗಳ ರಕ್ಷಣೆಗೆಂದು ತಯಾರಿಸುತ್ತಿದೆ. ಹೀಗೆ ತನ್ನ ಬಾಯಲ್ಲಿ ತನ್ನ ಹಿತರಕ್ಷಣೆಗೆಂದು ಅಮೋಘ ಸೈನ್ಯ ಸಂಗ್ರಹ ಮಾಡುತ್ತಿರುವ ಬ್ರಿಟನಿನ ಧ್ಯೇಯವಾದರೂ ಏನಿರಬಹುದೋ ತಿಳಿಯದು.

ಇಷ್ಟೆಲ್ಲಾ ಸರಂಜಾಮುಗಳನ್ನು ಜೋಡಿಸುತ್ತಿದ್ದರೂ ಹೊರಗೆ ತನ್ನ ಶಾಂತಿ ಸ್ಥಾಪನೆಯ ಪೌರೋಹಿತ್ಯವನ್ನು ಬ್ರಿಟನು ಬಿಟ್ಟಿಲ್ಲ. ಜಗತ್ತಿಗೆ ಉಪದೇಶ ಮಾಡುತ್ತಿದ್ದರೂ ಬ್ರಿಟನಿಗೆ ಅನ್ಯಾಯ ಅಕ್ರಮಗಳನ್ನು ಮಾಡಲು ತಿಳಿಯದೆ ಇಲ್ಲ. ಪಲಿಸ್ಟೈನದಲ್ಲಿ ಅದು ಕರಾಳ ರೂಪವನ್ನು ತಾಳಿದೆ. ಹಿಂದೂಸ್ಥಾನದಲ್ಲಿ ತನ್ನ ಸಾಳವಿಘೋರಣೆಯ ಕೈ ತೋರಿಸಿದೆ. ಅಂತೂ ಜಗತ್ತಿಗೆ ಪ್ರಜಾಸತ್ತಾತ್ಮಕ ಹಾಗೂ ಶಾಂತಿ ಸ್ಥಾಪನೆ ಬಗ್ಗೆ ಭೋದನೆ ಮಾಡುತ್ತಿದೆ. ಇರಲಿ, ಸರ್ವಾಧಿಕಾರಿಗಳ ವಸಾಹತುಗಳ ಕೇಳಿಕೆ, ಭಾರತ ಸ್ವಾತಂತ್ರ್ಯ ಸಂಗ್ರಾಮದ ಹೆಚ್ಚಳ, ಅಫ್ರಿಕ-ಫ್ರಾನ್ಸುಗಳ ಆಂದೋಲನ ಇದರಿಂದ ಬ್ರಿಟನಿಗೆ ಹುಚ್ಚು ಹಿಡಿಯದಿದ್ದರೆ ಸಾಕು.

ಬಾತ್ಮಿ.

ಸಿಬ್ಬಂದಿಖೋತೆ ಏನಾಗಿದೆ?

ಸಿಬ್ಬಂದಿ ಖೋತೆಯ ಕೋಲಾಹಲವು ಈ ಕಳೆದ ಎರಡು ಮೂರು ತಿಂಗಳುಗಳಿಂದ ನಡೆಯುತ್ತಿದ್ದು ಈಗ ಅದು ಕಾರ್ಯರೂಪಕ್ಕೆ ಬರುತ್ತಿದೆ. ದೇಶದಲ್ಲಿ ಆಯವು ಕಮ್ಮಿಯಾಗಿ ವ್ಯಯವು ಮಿತಿಮೀರಿ ನಡೆದರೆ ಅದು ಶುಭ ಚಿನ್ಹೆಯಲ್ಲವೆಂದು ಈ ಮೊದಲು ಎಷ್ಟೋ ಸಾರಿ ಪತ್ರಿಕೆಗಳಲ್ಲೂ ಸಭೆಗಳಲ್ಲೂ ಜನಜನಿತವಾಗಿದೆ. ಆದ್ದರಿಂದ ನ್ಯಾಯವಾದ ಸಿಬ್ಬಂದಿಖೋತೆಯು ಜನತೆಯ ಹಾಗೂ ದೇಶದ ಅಭಿವೃದ್ಧಿ ದೃಷ್ಟಿಯಿಂದ ಹಿತಕರವೆಂದು ಒಮ್ಮತವಿದ್ದತು ಅಂತೆಯೇ 'ಸಿಬ್ಬಂದಿಖೋತೆಯು ನ್ಯಾಯ ಸಮರ್ಪಕವಾಗಿ ಮಾಡಲ್ಪಡುವದೆಂದೂ ಚೀಫ್ ಕಮಿಷನರು ನ್ಯಾಯವಿಧಾಯಕ ಸಭೆಯಲ್ಲಿ ಹೇಳಿಯೂ ಆಯಿತು. ಇದೆಲ್ಲಾ ದೇಶ ಹಿತದೃಷ್ಟಿಯ ಶುಭ ಚಿನ್ಹೆಗಳೆಂದು ದೃಢಪಟ್ಟಿತು. ಆದರೆ ಇತ್ತೀಚೆಗೆ ಸಿಬ್ಬಂದಿ ಖೋತೆಯು ಜಾರಿಯಲ್ಲಿ ಬರುವಾಗ ಮೇಲಿನ ಉದ್ಗಾರಗಳಿಲ್ಲ ಮಾಯವಾಗಿರುವುದನ್ನು ನೋಡಿದರೆ ವಿಷಾದವೆನಿಸುತ್ತದೆ. 1931ನೇ ವರ್ಷದ ಸಿಬ್ಬಂದಿ ಖೋತೆಯ ಮಾದರಿಯನ್ನನುಸರಿಸುವೆವೆಂದು ಭರವಸೆ ಕೊಟ್ಟ ಸರ್ಕಾರವು ಇಂದು ತನ್ನ ಹೇಳಿಕೆಯನ್ನು ಅಲ್ಲಗಳೆದು 25 ವರ್ಷಕ್ಕೆ ಮೇಲ್ಪಟ್ಟ ಸರ್ವಿಸಿನವರನ್ನಿಟ್ಟುಕೊಂಡು ಕಮ್ಮಿ ಸರ್ವಿಸಿನವರನ್ನು ತೆಗೆಯುವ ಯೋಚನೆ ಮಾಡಿರುವುದಂತೆ. ಅದು ನಿಜವಾದ ಪಕ್ಷ ಸರ್ಕಾರಕ್ಕೆ ಇದೆಂದೂ ಶೋಭಿಸುವ ವಿಚಾರವಲ್ಲ. ತನ್ನ ಈ ಧೋರಣೆಯಿಂದ ಜನತೆಯು ತೃಪ್ತಿಗೊಳ್ಳಲಾರದೆಂಬದನ್ನು ಸರ್ಕಾರವು ಯೋಚಿಸಿ ಯಥೋಚಿತ ವರ್ತಿಸಬೇಕಿದೆ.

ಸರ್ಕಾರದ ಸಿಬ್ಬಂದಿಖೋತೆಯ ಪರಿಣಾಮವಾಗಿ ಡಿ. ಬೋರ್ಡಿಗೆ ಕೊಡುತ್ತಿರುವ ಗ್ರಾಂಟಿನಲ್ಲಿ ರೂ. 7000 ಕಡಿಮೆ ಮಾಡಲ್ಪಡುವದರಿಂದ ಬೋರ್ಡಿನವರಾದರೂ ವಿಧಿಯಿಲ್ಲದೆ ತಮ್ಮ ಸಂಸ್ಥೆಯಲ್ಲೂ ಖೋತೆ ಮಾಡಬೇಕಾಯಿತು. ಆ ಪ್ರಯುಕ್ತವೇ ಹಲವು ನೌಕರರ ಸಂಬಳದಲ್ಲಿ ಖೋತೆ, ನರ್ಸುಗಳ ಸಂಖ್ಯೆಯಲ್ಲಿ ಖೋತೆ, ಎರಡು ವರ್ಷಗಳ ವರೆಗೆ ನೌಕರರ ಸಂಬಳದ ಬಡ್ತಿಯಲ್ಲಿ ಖೋತೆ ಮೊದಲಾದ ಖೋತೆಗಳು ನಡೆದವು. ಆದರೆ ಇತ್ತೀಚೆಗೆ ನೋಡಿದರೆ ಇವರ ಖೋತೆಗಳು ಫಲಕಾರಿಯಾಗಿ ಕಾಣುವುದಿಲ್ಲ. ಉದಾಹರಣೆಗೆ ಸಿವಿಲ್ ಸರ್ಜನರ ಆಫೀಸಿನ ಹೆಡ್ ಗುಮಾಸ್ತರಿಗೆ ಕೆಲವು ವರ್ಷಗಳಿಂದ ಕೊಡುತ್ತಿದ್ದ ತಿಂಗಳ ಭತ್ಯವನ್ನು ಅವರು ಒಡನೆ ಸರ್ಕಾರದ ಸಿಬ್ಬಂದಿಖೋತೆಯ ಪರಿಣಾಮವಾಗಿ ನಿವೃತ್ತರಾಗಬಹುದೆಂಬ ಭರವಸೆಯಿಂದ ಅವರು ನಿವೃತ್ತಿಯಾಗುವವರೆಗೆ ಕೊಟ್ಟು ನಂತರ ನಿಲ್ಲಿಸಬಹುದೆಂದು ತೀರ್ಮಾನಿಸಿದರು. ಆದರೆ ಅವರ ಸರ್ವಿಸಿನ ಅವಧಿಯು ಹನುಮನ ಬಾಲದಂತೆ ಮುಂದರಿಯುತ್ತಿದೆ. ಅಂದ ಬಳಿಕ ಬೋರ್ಡಿನವರು ಮಾಡಿದ ಖೋತೆಯ ಪರಿಣಾಮವೇನು? ಸರ್ಕಾರದಿಂದ ಹಿಡಿಯಲ್ಪಡುವ ರೂ. 7000ವನ್ನು ಸಮಗಟ್ಟುವ ವಿಧಾನವಾದರೂ ಯಾವುದು? ಸರ್ಕಾರದ ಖೋತೆಯ ಮೇಲೆ ಆಧರಿಸಿ ನಿಂತಿರುವ ಡಿ. ಬೋರ್ಡಿನ ಖೋತೆಯಾದರೂ ಈ ರೀತಿಯ ಅವ್ಯವಸ್ಥೆಯಿಂದ ಅಸ್ತವ್ಯಸ್ತವಾಗದಿರದು. ಸರ್ಕಾರದ ಈ ಧೋರಣೆಯಿಂದ ಬೋರ್ಡಿನ ಸ್ಥಿತಿಯಾದರೂ ಕಂಗಾಲಾಗಿದೆ. ಸರ್ಕಾರದವರು ಬೋರ್ಡಿಗೆ ಕೊಡುವ ವಂತಿಗೆಯಿಂದ ಕಮ್ಮಿ ಮಾಡುವ ಹಣವನ್ನು ಸಮಗಟ್ಟಲು ಯಾವ ವಿಧಾನವೂ ಇರುವುದಿಲ್ಲ. ಬೋರ್ಡು ದೇಶದ ಮುಖ್ಯ ಸಂಸ್ಥೆಯಾಗಿರುವಾಗ ಪ್ರಜಾಹಿತವನ್ನು ಬಯಸುವ ಸರ್ಕಾರದವರು ಅದಕ್ಕೆ ತಕ್ಕ ಪ್ರೋತ್ಸಾಹವನ್ನೀಯುವುದು ರಾಜಧರ್ಮ. ಬದಲು ಬೋರ್ಡಿನಿಂದಲೇ ಆರೋಗ್ಯ ಇಲಾಖೆಯ ಬಗ್ಗೆ ರೂ. 5000 ಪಡೆದುಕೊಳ್ಳುತ್ತಿರುವದು ಸರಿಯಲ್ಲ. ಸರ್ಕಾರವು ಖೋತೆ ಮಾಡುವ ರೂ. 7000ವನ್ನು ಕಳೆದು ಬಡ್ಜೆಟ್ಟನ್ನು ಸರಿಗಟ್ಟಲು ಈ 5000 ರೂ. ವಂತಿಗೆಯನ್ನು ಸರ್ಕಾರವು ಮಾಫಿ ಬಿಡಬೇಕು, ಈ ಬಾಬಿನಲ್ಲಿ ಸರ್ಕಾರದ ಆಡಳಿತೆಗೆ ತೊಂದರೆ ಬರುವದಾದರೆ, ನ್ಯಾಯವಾದ ಸಿಬ್ಬಂದಿಖೋತೆಯನ್ನು ಆರೋಗ್ಯ ಇಲಾಖೆಯಲ್ಲಿಯೂ ಜಾರಿಗೆ ತರುವದು ಸಾಧ್ಯವಿದೆ.

'ವಿಮರ್ಶಕ.'

ನಾಂಗಾಲ ಸಂಘದ ಮೀಟಿಂಗಿನಲ್ಲಿ ಕೊಡಗು ವಿದ್ಯಾಭಿವೃದ್ಧಿ ಫಂಡಿಗೆ ಧನ ಸಹಾಯ.

ತಾ. 14-2-39 ರಲ್ಲು ನಾಂಗಾಲ ಗ್ರಾಮದ ಪೊನ್ನಕಚ್ಚಿರ ಕಣದಲ್ಲಿ ನಾಂಗಾಲ ಕೋಪರೇಟಿವ್ ಕ್ರೆಡಿಟ್ ಸೊಸೈಟಿಯ ಒಂದು ಜನರಲ್ ಮೀಟಿಂಗು ನಡೆಯಿತು. ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಸದರಿ ಮೀಟಿಂಗಿನಲ್ಲಿ ನೆರೆದ ಮೆಂಬರುಗಳಲ್ಲಿ ಕೊಡಗು ವಿದ್ಯಾಭಿವೃದ್ಧಿ ಸಂಘದ ಪರವಾಗಿ ಹೊಸದಾಗಿ ಮೆಂಬರುಗಳನ್ನು ಸೇರಿಸಲು ಮತ್ತು ಚಂದಾ ಹಣ ವಸೂಲು ಮಾಡುವಂತೆ ಮಹನೀಯರನ್ನು ಕೇಳುವ ಸಲುವಾಗಿ ಸದರಿ ಸಂಘದ ಪ್ರಚಾರಕಕಮಿಟಿ ಮೆಂಬರುಗಳಲ್ಲಿ ಕೆಲವರಾದ ಮೆ. ಕೀತಿಯಂಡ ಕಾಳಪ್ಪನವರು ಮತ್ತು ಮೆ. ಮೇರಿಯಂಡ ಮಾದಪ್ಪನವರು ಅಲ್ಲಿಗೆ ಹೋಗಿದ್ದರು.

ವಿದ್ಯಾಭಿವೃದ್ಧಿ ಫಂಡಿನ ಚರಿತ್ರೆಯನ್ನೂ, ಅದರಿಂದ ಪ್ರೌಢ ವಿದ್ಯಾಭ್ಯಾಸ ಮಾಡಿದ ಅನೇಕ ಮಹನೀಯರಿಗೆ ಉಂಟಾದ ಸಹಾಯವನ್ನೂ ವಿವರಿಸಿದ ನಂತರ ನಾಂಗಾಲ ಗ್ರಾಮದಲ್ಲಿ ಈ ಫಂಡಿಗೆ ಹಣ ಜಮಾಯಿಸುವದಕ್ಕಾಗಿ ಒಂದು ಸಬ್ ಕಮಿಟಿ ಮಾಡಬೇಕೆಂಬುದಾಗಿಯೂ, ಅಂಥಾ ಸಬ್ ಕಮಿಟಿ ಮೆಂಬರುಗಳು ಮನೆ ಒಂದಕ್ಕೆ (ಅಂದರೆ ಒಲೆ ಒಂದಕ್ಕೆ) ವರ್ಷಕ್ಕೆ ಒಂದು ರೂಪಾಯಿ ಮೇರೆ ಚಂದಾ ಎತ್ತಿ ಫಂಡಿನ ಹೆಡ್ಡಾಫೀಸಿಗೆ ತಲಪಿಸುವುದಕ್ಕೆ ಸಹಾಯ ಮಾಡಬೇಕೆಂದೂ ಅಲ್ಲಿ ನೆರೆದಿದ್ದ ಮಹನೀಯರಲ್ಲಿ ವಿಜ್ಞಾಪಿಸಿದ್ದಾಯಿತು.

ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಒಂದು ಸಬ್ ಕಮಿಟಿ ಮಾಡಲಾಯಿತು.

ಮೆ. ಗಳಾದ 1. ಕಂಬೀರಂಡ ಕೆ. ಬೆಳ್ಯಪ್ಪನವರು—ಚೇರ್‌ಮೇನ್, 2. ಚೇಂದ್ರಿಮಾಡ ಭೀಮಯ್ಯನವರು, 3. ಚೇಂದ್ರಿಮಾಡ ನಂಜಪ್ಪನವರು, 4. ಬಿಟ್ಟಿಯಂಡ ಡಿ. ಗಣಪತಿಯವರು, 5. ಕುಪ್ಪಂಡ ಬೆಳ್ಯಪ್ಪನವರು, 6. ಗುಡ್ಡಾಂಡ ತಮ್ಮಯ್ಯನವರು ಮತ್ತು 7. ಚೊಟ್ಟೆಮಂಡ ಕಾರ್ಯಪ್ಪನವರು.

ಸದರಿ ಸಭೆಯಲ್ಲಿ ಮಾತನಾಡುತ್ತಿದ್ದಾಗಲೇ ಈ ಕೆಳಗಿನ ಮಹನೀಯರುಗಳು ವಿದ್ಯಾಭಿವೃದ್ಧಿ ಫಂಡಿಗೆ ತಮ್ಮ ಜೀವಮಾನದ ವರೆಗೆ ಮೆಂಬರುಗಳಾಗಿ ಕೆಳಗಿನ ರೀತಿ ವರ್ಷಾವಧಿ ಹಣ ಕೊಡುವಂತೆ ತಮ್ಮ ಉದಾರ ಮನಸ್ಸಿನಿಂದ ವಾಗ್ದಾನವಿತ್ತರು.

ಶ್ರೀ. ಗಳಾದ ಪೊನ್ನಕಚ್ಚಿರ ಕುಟ್ಟಪ್ಪನವರು ಮತ್ತು ಚೇಂದ್ರಿಮಾಡ ಚಿಣ್ಣಪ್ಪನವರು ವರ್ಷಕ್ಕೆ 5 ರೂಪಾಯಿ ಮೇರೆಯೂ, ಬೊಪ್ಪಂಡ ಕುಟ್ಟಯ್ಯನವರು (ನೈನಾಡು) ವರ್ಷಕ್ಕೆ 10 ರೂಪಾಯಿ ಮೇರೆಯೂ, ಮತ್ತು ಶ್ರೀ ಕುಟ್ಟಯ್ಯನವರ ಪತ್ನಿ ಶ್ರೀಮತಿ ನೀಲಮ್ಮ ಕುಟ್ಟಯ್ಯನವರ ಪರವಾಗಿ ವರ್ಷಕ್ಕೆ 2 ರೂಪಾಯಿ ಮೇರೆಯೂ, ಬಿಟ್ಟಿಯಂಡ ಡಿ. ಬೋಪಯ್ಯನವರು ವರ್ಷಕ್ಕೆ 2 ರೂಪಾಯಿ ಮೇರೆಯೂ ಮತ್ತು ಕಂಬೀರಂಡ ಬೆಳ್ಯಪ್ಪನವರು ವರ್ಷಕ್ಕೆ 1 ಬಟ್ಟಿ ಭತ್ತದ ಮೇರೆಯೂ ಲೈಫ್ ಮೆಂಬರುಗಳಾಗಿ ಕೊಡುವಂತೆ ವಾಗ್ದಾನವಿತ್ತರು.

ಈ ಮಹನೀಯರುಗಳಲ್ಲಿ ಮೆ. ಗಳಾದ ಪೊನ್ನಕಚ್ಚಿರ ಕುಟ್ಟಪ್ಪನವರು ರೂ. 5, ಚೇಂದ್ರಿಮಾಡ ಚಿಣ್ಣಪ್ಪನವರು ರೂ. 5, ಕಂಬೀರಂಡ ಬೆಳ್ಯಪ್ಪನವರು ರೂ. 1, ಕುಪ್ಪಂಡ ಪಿ. ಬೆಳ್ಯಪ್ಪನವರು ರೂ. 1, ಮತ್ತು ಬಿಟ್ಟಿಯಂಡ ಡಿ. ಗಣಪತಿಯವರು ರೂ. 1 ಆಗಲೇ ಪಾವತಿ ಮಾಡಿದರು. ಮತ್ತು ಅದೇ ದಿವಸ ಅಲ್ಲಿ ನಡೆದ ತರಕಾರಿ ವಸ್ತು ಪ್ರದರ್ಶನದಲ್ಲಿ ಇನಾಂ ಪಡೆದ ಮಹನೀಯರುಗಳು ತಮಗೆ ದೊರೆತ ಇನಾಂ ಹಣದಲ್ಲಿ ¼ ಭಾಗವನ್ನು ಫಂಡಿಗಾಗಿ ಕೊಟ್ಟರು. ಈ ರೀತಿ ಅಲ್ಲಿಯೇ ಒಟ್ಟಾರೆ ರೂ. 14-1-4 ಜಮೆಯಾಯಿತು.

ನಾಂಗಾಲ ಗ್ರಾಮದ ಮಹನೀಯರು ವಿದ್ಯಾಭಿವೃದ್ಧಿ ಫಂಡಿನ ವಿಷಯವಾಗಿ ತೋರಿಸಿದ ಪ್ರೀತಿ ಮತ್ತು ವಿಶ್ವಾಸವು ಬಹಳ ಶ್ಲಾಘನೀಯವಾದದ್ದು. ಇವರುಗಳು ವಿದ್ಯಾಭ್ಯಾಸಕ್ಕಾಗಿ ಮಾಡಿದ ದಾನವು ಬಹಳ ಹೆಚ್ಚಾದದ್ದು. ಈ ಮಹನೀಯರುಗಳನ್ನು ವಿದ್ಯಾಭಿವೃದ್ಧಿ ಫಂಡಿನವರೇ ಅಲ್ಲ; ಇಡೀ ಜನಾಂಗದವರು ಆದರ್ಶವಾಗಿ ಇಟ್ಟುಕೊಂಡು ಕೆಲಸ ಮಾಡಿದರೆ ಈಗ ಬಿಕ್ಕಟ್ಟಿನಲ್ಲಿರುವ ಈ ಫಂಡು ಕ್ಷಣಮಾತ್ರದಲ್ಲೇ ಅಭಿವೃದ್ಧಿ ಹೊಂದಿ, ನಮ್ಮ ಯುವಕರಿಗೆ ಕಾಲೇಜ್ ವಿದ್ಯಾಭ್ಯಾಸವೇ ಅಲ್ಲ—ಇಂಗ್ಲೆಂಡ್ ಮತ್ತು ಇತರ ದೇಶಗಳಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುವ ಸುಯೋಗವು ನಮ್ಮ ಪಾಲಿಗೆ ಶೀಘ್ರದಲ್ಲಿಯೇ ಲಭಿಸುವುದು. ನಾವು ಆ ದಿವಸ ನಾಂಗಾಲ ಸಂಘದವರ ಕುತೂಹಲವನ್ನು ನೋಡಿದಲ್ಲು ಪರಸ್ಪರ ಸಹಾಯವೆಂಬ ತತ್ವವು ಇವರಲ್ಲಿ ದೃಢಮೂಲವಾಗಿದೆಯೆಂದಾಗಿ ದೃಢವಾಗಿ ತಿಳಿದುಕೊಂಡೆವು.

ನಾಂಗಾಲ ಸಂಘದ ಪ್ರತಿಯೊಬ್ಬ ಮೆಂಬರನನ್ನೂ ಫಂಡಿನ ಪರವಾಗಿ ವಂದಿಸುವದಲ್ಲದೆ ಅವರು ಫಂಡಿಗೆ ಮಾಡಿದ ಸಹಾಯದಿಂದ ಅವರ ಮಕ್ಕಳೂ ಕೂಡ ಬಹಳ ಬೇಗನೆಯೇ ಪ್ರಯೋಜನ ಪಡೆಯಲೆಂದು ಹಾರೈಸುವವರಾಗಿದ್ದೇವೆ.

ಕೆ. ಚಂಗಪ್ಪ,
ಮಡಿಕೇರಿ, ಕೆ. ಕಾಳಪ್ಪ,
ತಾ. 16-2-39. ಎಂ. ಬಿ. ಮಾದಪ್ಪ
(ಕೊಡಗು ವಿದ್ಯಾಭಿವೃದ್ಧಿ ಸಂಘದ ಮೆಂಬರುಗಳು)

ಮತಗಳು ಸಮುದಾಯ ಜೀವನಕ್ಕೆ ಸಹಕಾರಿಗಳೇ?

ಲೇಖಕ:—ನೊಳೆಯಾರ ವಿಶ್ವಾಮಿತ್ರ.

ಅನೇಕಾನೇಕ ಮತಗಳು ನಮ್ಮ ಭಾರತದಲ್ಲಿವೆ ಎಂಬುದು ಪ್ರತಿಯೊಬ್ಬನಿಗೂ ಗೊತ್ತಿದೆ. ಆದರೆ ಮತೀಯರ ಆತ್ಮೀಯ ಇಲ್ಲವೇ ಪರಕೀಯತಾ ಭಾವನೆಯು ಹೇಗಿದೆ ಎಂದು ವಿಚಾರಿಸುವುದು ಇಲ್ಲಿ ಇಂದು ಅವಶ್ಯವಾಗಿದೆ. ಏಕೆಂದರೆ ನಾವಿಂದು ಸ್ವರ್ಣ ಭೂಮಿಯಲ್ಲಿ, ಪುಣ್ಯ ಭೂಮಿಯಲ್ಲಿ, ಆದರ್ಶ ಭೂಮಿಯಲ್ಲಿ. ಕರ್ಮ ಭೂಮಿಯಲ್ಲಿ ಹುಟ್ಟಿ ನಿರುದ್ಯೋಗಿಗಳಾಗಿ, ನಿರ್ಬಲ ನಿಸ್ತೇಜರಾಗಿ, ದರಿದ್ರರಾಗಿ ಸ್ವಾತಂತ್ರ ಹೀನರಾಗಿದ್ದೇವೆ. ಪಾಶ್ಚಿಮಾತ್ಯರ ಸಾಮ್ರಾಜ್ಯ ಶಾಹಿಶಕ್ತಿಯ ಅಡಿಯಲ್ಲಿ ನಡೆದು ಬಡವಾಗಿ ನೊಂದುಬೆಂದಿದ್ದೇವೆ. ನಮಗೆ ಇಂತಹ ಅವಸ್ಥೆ ಬರಲು ಹಲವು ಕಾರಣಗಳಿವೆ. ಕೆಲವರ ಅವಕಾಶ ಸೊತ್ತುಗಳಾಗಿದ್ದು ಮಾನವ ಹೃದಯವನ್ನು ಹಿಂಸಿಸತಕ್ಕ ಆಯುಧೋಪಕರಣಗಳಾದ ಈ ಮತಗಳೂ ಅಧೋಗತಿಯನ್ನು ತಂದುವೆಂದು ಹೇಳುವುದಕ್ಕೆ ಹೆದರಬೇಕಿಲ್ಲ. ಈ ರೀತಿಯ ಮತಾಭಿಮಾನ ಮತದ್ವೇಷಗಳಿಂದಲೇ ನಾವು ಒಗ್ಗಟ್ಟಿಲ್ಲದೆ ಬಿಕ್ಕಟ್ಟಿನಲ್ಲಿ ಸಿಲುಕಿ ಬೆಂಡಾದೆವು. ಹಿಂದುಗಳು ತಮ್ಮ ಮತವೇ ಮೇಲು. ಇತರ ಮತಗಳು ಅಧರ್ಮವನ್ನು ಬೋಧಿಸುವವುಗಳೆಂದು ಪರಮತೀಯರನ್ನು ಜುಗುಪ್ಸೆಯಿಂದ ನೋಡುವರು. ಮುಸಲ್ಮಾನರು ನಮ್ಮ ಮತವೇ ಉತ್ತಮವಾದ ಮತ, ಇನ್ನುಳಿದವುಗಳು ಕ್ಷುದ್ರ ಮತಗಳೆಂದು ಇತರರನ್ನು ತಿರಸ್ಕಾರ ಮಾಡುತ್ತಿರುವರು. ಕ್ರೈಸ್ತರು ನಮ್ಮ ಮತಕ್ಕೆ ಸರಿಯಾದ ಮತವಿನ್ನೊಂದಿಲ್ಲವೆಂದು ಹೇಳಿ ಪರರನ್ನು ಹಾಸ್ಯ ಮಾಡುವರು. ಇನ್ನೊಂದು ಮತದವರು ಇನ್ನೊಂದು ಮತದವರನ್ನು ಬೇರೊಂದು ರೀತಿಯಿಂದ ಗೇಲಿ ಮಾಡುವರು. ಭಾರತ ಮಾತೆಯ ಸ್ವಾತಂತ್ರ್ಯ ಸೌಖ್ಯ ಸಾಧನೆಗಾಗಿ ಹೋರಾಡಬೇಕಾದ ವೀರ ಪುತ್ರರಾದ ನಾವುಗಳು ನಮ್ಮೊಳಗಿನ ಐಕ್ಯತೆಯನ್ನು ಮುರಿದು ಭೇದವನ್ನು ಬೆಳೆಸಿ ಕೆಡಿಸುವ ಇಂಥಾ ಮತಗಳನ್ನಾದರೂ ಕಟ್ಟಿಕೊಂಡು ಮಾಡುವದೇನು?

ಒಂದೆಡೆ ನಮ್ಮ ಸ್ವರ್ಣವೆಲ್ಲವನ್ನೂ ಸೆಳೆಯುತ್ತಿದ್ದಾರೆ. ಇನ್ನೊಂದೆಡೆ ಕಲಹ ಬೀಜವನ್ನು ಬಿತ್ತುತ್ತಿದ್ದಾರೆ. ನಮ್ಮ ಕಾರ್ಯಗಳಿಗೆ ಎಡರನ್ನು ತಂದೊಡ್ಡುತ್ತಿದ್ದಾರೆ. ಇದು ಯಾವುದರಿಂದ? ಇದಕ್ಕೆ ಉಪಕರಣವಾದರೂ ಯಾವುದು. ಹೂಣರ ಜಾಣ್ಮೆಯೇ ಅಲ್ಲ, ಎಂದಿಗೂ ಅಲ್ಲ. ನಮ್ಮ ಈ ಮತ, ಮತವೆಂದು ಕರೆಯಲ್ಪಡುವ ಮತವೇ ಆಗಿದೆ. ನಮ್ಮಲ್ಲಿ ಈ ತರಹದ ಮತಾಭಿಮಾನವಿದ್ದುದನ್ನು ತಿಳಿದೇ ಇಂಥಾ ದುರಾಭಿಮಾನವನ್ನು ವರ್ಧಿಸಿ ಐಕ್ಯತೆಯು ಮುಂದುಹೋಗುವುದಕ್ಕಾಗಿಯೇ ಮತ ಸಭೆಗಳಲ್ಲಿ ಹಿಂದೂ ಸೀಟ್, ಮುಸಲ್ಮಾನ್ ಸೀಟ್ ಇತ್ಯಾದಿಯಾಗಿ ಬೇರೆ ಬೇರೆಯಾಗಿ ಮಾಡಿರುವರು. ಈ ವಿಷವು ಇನ್ನೂ ವರ್ಧಿಸುವಂತೆ ಮಾಡಿದರು.

ಭಾರತ ಮಾತೆಯ ವೀರ ಪುತ್ರರಾಗಿದ್ದು ಪರದಾಸ್ಯತೆಯನ್ನು ಕೈಕೊಳ್ಳುವುದು ನಮಗೆ ಮಾನ್ಯತೆಯೇ? ಗುಲಾಮಗಿರಿಗೆ ಕೊಂಡೊಯ್ಯುವ ದುರಾಭಿಮಾನವನ್ನು ನಾವು ಕಟ್ಟಿಕೊಳ್ಳುವುದು ಯೋಗ್ಯವೇ? ಭೌತಿಕಾಭೌತಿಕವೆಂದು ಇಬ್ಬಗೆಯ ವಿಚಾರಗಳು ಮತಗಳಲ್ಲಿವೆ. ಭೌತಿಕವೆಂದರೆ ಇಲ್ಲಿನ ವಿಚಾರವು, ಅಭೌತಿಕವೆಂದರೆ ಸತ್ತಮೇಲಿನ ವಿಜ್ಞಾನವು. ಅದರಲ್ಲೂ ಈ ಪೌರೋಹಿತ್ಯ ಇದೆಯಲ್ಲ; ಅದು ಮಾನವ ಜೀವನದ ಅಂಧವಿಶ್ವಾಸದ ದುಷ್ಟ ಕೂಪವಾಗಿದೆ.

ಇರಲಿ, ಇಂಥಾ ಮತಗಳು ಇಷ್ಟು ಕೆಡುಕನ್ನು ತಂದೊಡ್ಡುವುದಿದ್ದರೆ ಅವುಗಳನ್ನು ಮತೋಪದೇಶಕರು ಯಾಕೆ ಸೃಷ್ಟಿಸಿದರು ಎಂಬೊಂದು ಪ್ರಶ್ನೆಯು ಬರಬಹುದು. ಅಂದಿನ ಮೃಗ ಹಿಂಸೆಯನ್ನೂ, ಪಶುವೃತ್ತಿಯನ್ನೂ ತೊಲಗಿಸಿ ಪ್ರಾಣಿದಯೆ, ಲೋಕ ಪ್ರೇಮಗಳನ್ನು ಜನರಲ್ಲಿ ನೆಲೆಸುವಂತೆ ಬೌದ್ಧ ಮತವು ಮಾಡಿಲ್ಲವೇ? ಯೆಹೂದ್ಯರ ಅಜ್ಞಾನಾಂಧಕಾರವನ್ನು ತೊಲಗಿಸಿ ಅವರನ್ನು ಬೆಳಕಿಗೆ ತಂದ ಮತವಾವುದು? ಅದಲ್ಲವೇ ಕ್ರೈಸ್ತ ಮತ. ಅರಬಿ ಜನರಲ್ಲಿ ನೆಲಸಿದ ಪಾಶವೃತ್ತಿ, ಹಿಂಸಾವೃತ್ತಿ, ಪಶುವೃತ್ತಿಗಳನ್ನು ಹೋಗಲಾಡಿಸಿ ಆದರ್ಶರನ್ನಾಗಿ ಮಾಡಿದುದು ಮಹಮ್ಮದ ಮತವಲ್ಲವೇ? ಜಗತ್ತಿನ ಜನಾಂಗದ ಉದ್ಧಾರಕ್ಕಾಗಿ ಹುಟ್ಟಿದ ಆ ಮತಗಳನ್ನು ಈ ರೀತಿಯಾಗಿ ದುರ್ವರ್ತಿಸಿ ದುರಭಿಮಾನಿಗಳಾಗಿದ್ದೇವೆ. ಈ ಮತಗಳಿಂದಾಗಿ ನಾವು ಒಮ್ಮನ, ಒಕ್ಕೊರಳುಳ್ಳವರಾಗುವುದು ಕಷ್ಟವಾಗಿದೆ.

ಇಂದಿನ ರಷ್ಯಾವಾದರೂ ನಾರುತ್ತಿರುವುದೇನು? ಸಮುದಾಯ ಜೀವನಕ್ಕೆ, ಸ್ವಾತಂತ್ರ್ಯ ಜೀವನಕ್ಕೆ ಈ ಮತವಾಗಲೀ, ಮತ್ತೊಂದಾಗಲೀ ಬೇಡವೆಂದಲ್ಲವೆ? ವ್ಯಕ್ತಿ ಸ್ವಾತಂತ್ರ್ಯವನ್ನಲ್ಲದೆ ಆತ್ಮವನ್ನೂ ಮಾರಿಗೊಯ್ಯುವ ಈ ಮತಗಳು ಇನ್ನು ಮುಂದೆ ಈ ರೀತಿಯಲ್ಲಿ ನಾರಿದರೆ ಲೋಕವನ್ನು ಹಾಳುಮಾಡಿದಂಥಾ ಮಹಾಪರಾಧವನ್ನು ಅವು ಮಾಡಿದಂತಾಗುವುದು.

ನಾವು ನಮ್ಮ ಸ್ವಾತಂತ್ರ್ಯ ಸಾಧನೆಗಾಗಿ ಕೈಕೊಂಡ ಸಮರವು ನಮ್ಮ ಭಾರತೀಯ ತತ್ವವನ್ನು ಇಲ್ಲವೇ ಮಾನವೀಯ ತತ್ವವನ್ನು ತೋರ್ಪಡಿಸುವುದು ಹೇಗೆಂದರೆ—ಮನುಷ್ಯನು ಕಾರ್ಯಾಕಾರ್ಯ ವಿವೇಚನಾರೂಪವಾದ ಜ್ಞಾನವುಳ್ಳವನು. ಇತರ ಪ್ರಾಣಿಗಳಂತೆ ಹಲ್ಲು ಮತ್ತು ಉಗುರುಗಳಿಂದ ಬದುಕುವವನಲ್ಲ. ಪರಪೀಡಕನಲ್ಲ. ಸುಧಾರಿತನಾಗಿರುವನು. ಇಪ್ಪತ್ತನೇ ಶತಮಾನದವರಾದ ನಾವು ಸುಧಾರಿತರೆಂದುಕೊಂಡು ಜಿನೇವದ ಜನಾಂಗ ಸಂಘವನ್ನು ಸ್ಥಾಪಿಸಿ ಪರ ರಾಷ್ಟ್ರಗಳನ್ನು ಬಲಾತ್ಕರಿಸುವ ಪಾಶ್ಚಿಮಾತ್ಯ ರಾಷ್ಟ್ರೀಯರಂತೆ ಭಾರತೀಯರು ಆಗುವುದಿಲ್ಲ. ಅದಕ್ಕಾಗಿ ನಾವು ಪರರು ಎಷ್ಟು ಹಿಂಸೆ ಮಾಡಿದರೂ ಪ್ರತಿ ಹಿಂಸೆ ಮಾಡಬಾರದು. ಈ ಸತ್ಯ ಸಂಗ್ರಾಮದಲ್ಲಿ ಹೋರಾಡಲು ತನ್ನ ಸರ್ವಸ್ವವನ್ನು ಅರ್ಪಿಸುವುದು ಭರತಖಂಡದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬನ ಕರ್ತವ್ಯವಾಗಿದೆ. ನಮ್ಮ ಸ್ವಾತಂತ್ರ್ಯ ಸಾಧನೆಗೆ ಇಲ್ಲವೇ ಏಳ್ಗೆಗೆ ನಮ್ಮ ಒಗ್ಗಟ್ಟು ಅವಶ್ಯವಿದೆ. ಒಗ್ಗಟ್ಟನ್ನು ಮುರಿದು ಬಿಕ್ಕಟ್ಟಿನಲ್ಲಿ ಬೀಳಿಸಿ ನಮ್ಮನ್ನು ಅಧೋಗತಿಗಿಳಿಸುವ ಈ ಮತಗಳು ಸಮತಾ ಜೀವನಕ್ಕೆ ಸಹಕಾರಿಗಳಾಗಲಾರವು. ಇನ್ನು ಮುಂದೆ ಯಾವಾತನು ಮತವನ್ನು ಬೋಧಿಸುವನೋ ಅವನು ಶತ್ರುವೆಂದೆಣಿಸಬೇಕು. ಎಲ್ಲರದೂ ಒಂದೇ ಮತ. ಎಲ್ಲರೂ ಒಬ್ಬಳೇ ತಾಯ ಹೊಟ್ಟೆಯಲ್ಲಿ ಹುಟ್ಟಿ ಬಂದವರು.

ಬಾತ್ಮಿ.

—o()o—

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—o()o—

ಸಿನಿಮಾ ಕಂಪೆನಿಗಳ ಬಗ್ಗೆ 'ಹಳ್ಳಿವಾಸಿ' ಹಾಗೂ 'ಪಟ್ಟಣವಾಸಿಗಳ' ಲೇಖನ.

ತಾರೀಕು 27-1-39 ರ 'ಕೊಡಗು' ಪತ್ರಿಕೆಯಲ್ಲೂ, ತಾ. 1-2-39 ರ 'ಜನ್ಮಭೂಮಿ' ಪತ್ರಿಕೆಯಲ್ಲೂ 'ಬೇರೆ ಸಿನೆಮಾ ಕಂಪನಿಗಳು ಮಡಿಕೇರಿಗೆ ಬರಬಾರದೇಕೆ?' ಎಂಬ ಶಿರೋನಾಮೆಯಿಂದ ವ್ಯಕ್ತಿಕವಾಗಿ 'ಪಟ್ಟಣವಾಸಿ' ಮತ್ತು 'ಹಳ್ಳಿಯವ' ಎಂಬ ಗುಪ್ತನಾಮಧಾರಿಗಳು ಬರೆದ ಲೇಖನವನ್ನು 'ಪಟ್ಟಣ-ಹಳ್ಳಿವಾಸಿ'ಯಾದ ನಾನು ಆದರದಿಂದ ಓದಿದೆನು. ಇವುಗಳ ಪಠನ ಪ್ರಭಾವದಿಂದ ನನ್ನ ಮನಸ್ಸಿನಲ್ಲುಂಟಾದ ಅನುಭವ ಅಭಿಪ್ರಾಯಗಳನ್ನು ವಾಚಕರ ಮುಂದಿಡಲು ಕುತೂಹಲಿಯಾಗಿರುವೆನು.

ಹಳ್ಳಿಯವರು ಪಟ್ಟಣವಾಸಿಯ ಲೇಖನವನ್ನು ಕಂಡೊಡನೆಯೇ ವಿಸ್ಮಯಗೊಂಡರಂತೆ. ಇವರಲ್ಲಿ ವಿಚಿತ್ರವಾದರೂ ಏನು? ಇಂದಿನ ನವನಾಗರೀಕತೆಯ ಅಗ್ರಸ್ಥಾನದಲ್ಲಿ ಕುಳಿತಿರುವ ಪಟ್ಟಣಿಗನ ಒಡೆಹ ಪ್ರೈಬರಿಯ ಮುಂದೆ ನಾಗರೀಕತೆಯ ಬೆಳಕನ್ನೇ ಕಾಣದ ಹಳ್ಳಿಯವನು ಸೋಜಿಗ ಪಡದೆ ಮಾಡುವುದಾದರೂ ಏನು? ಇಂಥಾ ಆಶ್ಚರ್ಯದಿಂದ ಪ್ರಜ್ಞಾಶೂನ್ಯರಾದುದರಿಂದಲೇ ಹಳ್ಳೀ ಲೇಖಕರು ತಿರುಳಿಲ್ಲದ ತಮ್ಮ ಉದ್ಗಾರವನ್ನು ವಿವೇಚನೆಯಿಲ್ಲದೆ ಪ್ರಕಟಿಸಿರಬಹುದಲ್ಲವೇ? ಪಟ್ಟಣಿಗನು ಬರೆದ ಲೇಖನವು ಪಟ್ಟಣಿಗರ ಸ್ವಂತ ಅಭಿಪ್ರಾಯವಂದು ಬರೆಯುವಲ್ಲವೆಂದು ಬರೆಯುತ್ತಾರೆ. ಹಾಗಾದ ಪಕ್ಷ ಅವಕ್ಕೆ ಹಳ್ಳಿಗರ ಸಹಾಯವೂ ದೊರೆತಿರಬೇಕೆಂದು ಅರ್ಥವಾಗುತ್ತೆ. ಅಂತಾದ ಪಕ್ಷ ಹಳ್ಳಿಯವರೇಕೆ ತಮ್ಮ ಹೇಳಿಕೆಯನ್ನೇ ಖಂಡಿಸುವ ಹವ್ಯಾಸಕ್ಕೆ ತೊಡಗಬೇಕು? ಇದರಿಂದ ನಮ್ಮ ಹಳ್ಳಿಯ ಲೇಖಕರೆಂದೆನಿಸಿಕೊಂಡವರು ಹಳ್ಳಿಯವರ ಸೋಗನ್ನು ಹಾಕಿಕೊಂಡು ಈ ಲೇಖನರಂಗಕ್ಕಿಳಿದಿರುವರೆಂಬುದು ವಿಶದವಾಗುವುದಿಲ್ಲವೇ? ಇರಲಿ; ಇನ್ನು, ಲೇಖನದ ವಿಚಾರವನ್ನು ತೆಗೆದುಕೊಳ್ಳುವ. ಮುನ್ಸಿಪಾಲಿಟಿಯವರು 'ರೈತಾಪಿ ಮತ್ತು ದೇಶದ ಜನರ ಅಹಿತದಿಂದಲೂ, ಆರೋಗ್ಯ ಹಾನಿಯಿಂದಲೂ ಸಿಕ್ಕುವ ಲಾಭಕ್ಕಿಂತಲೂ ಸಿಕ್ಕದಿರುವದು ಲೇಸೆಂದು ತಿಳಿದು ತೀರ್ಮಾನ ಕೊಟ್ಟಿರುವರು' ಎಂದು ನಮ್ಮ ಹಳ್ಳಿಯ ಮಹಾನುಭಾವರ ಘೋಷಣೆ. ಹಳ್ಳಿಯ ಲೇಖಕರೇ, ಸಿನೆಮಾಕಂಪೆನಿಯಿಂದ ಜನತೆಯ ಆರೋಗ್ಯ ಹಾನಿ ಹೇಗಾಗುವುದೆಂದೂ, ಹಾಗಾದ ಪಕ್ಷ ಇಷ್ಟರ ವರೆಗೆ ಮುನ್ಸಿಪಾಲಿಟಿಯವರ ಚಿತ್ತಭಿತ್ತಿಯಲ್ಲಿ ಈ ಜನಹಿತ ದೃಷ್ಟಿಯು ಬಾರದೆ, ಒಂದಕ್ಕಿಂತ ಮೇಲ್ಪಟ್ಟು ಕಂಪನಿಗಳಿಗೆ ಈ ಮೊದಲು ರಹದಾರಿ ಕೊಟ್ಟಿದ್ದಾದರೂ ಹೇಗೆ ಎಂಬುದನ್ನು ಮುನ್ಸಿಪಾಲಿಟಿಯ ಪರ ವಾದಿಸುವ ನೀವು ವಿಶದಪಡಿಸುವುದು ನಿಮ್ಮ ಕರ್ತವ್ಯವಲ್ಲವೇ? ಒಂದಕ್ಕಿಂತ ಹೆಚ್ಚು ಕಂಪೆನಿಗಳು ಬಂದಲ್ಲಿ ದೇಶದ ಹಾಗೂ ರೈತಾಪಿ ಜನರಿಗೆ ಬರುವ ಅಹಿತವೇನೆಂಬುದನ್ನು ತಿಳಿಸುವಿರಾ? ಹೆಚ್ಚು ಕಂಪೆನಿಗಳು ಬಂದು ಸ್ಪರ್ಧೋಟಿ ನಡೆದು ಉತ್ತಮ ಚಿತ್ರಗಳು ಸುಲಭ ದರದಲ್ಲಿ ಜನರಿಗೆ ನೋಡಲು ಸಿಕ್ಕುವದರಿಂದ ದೇಶದ ಹಾಗೂ ರೈತಾಪಿ ಜನರಿಗೆ ಅಹಿತವೆಂದು ಭಾವಿಸುವಿರೇನು? ಇದೂ ನಿಮ್ಮದೊಂದು ಬುದ್ಧಿಮಂತಿಕೆಯ ಪ್ರದರ್ಶನವಲ್ಲವೇ?

ಸಾರ್ವಜನಿಕ ಪ್ರಯಾಣ ಸೌಕರ್ಯವಾದ ಬಸ್ ಸರ್ವಿಸಿಗೂ, ವಿನೋದ ವಿಹಾರ ಕೂಟವಾದ ಸಿನೆಮಾ ಕಂಪೆನಿಗೂ ಹೋಲಿಸಿದ ಪಟ್ಟಣವಾಸಿಯ ಲೇಖನವನ್ನು ಟೀಕಿಸಬೇಕೆಂದು ಬರೆದಿರುವಿರೇ ವಿನಹ ನಿಮ್ಮ ನಿಜವಾದ ಟೀಕೆ ಎಲ್ಲಿ? ಟೀಕಾಕಾರಣಗಳಿಲ್ಲವೆಂಬುದು ಅಷ್ಟು ಬರೆದ ಮೇಲೆ ನಿಮಗೆ ತಿಳಿದಿರುವುದಿಲ್ಲವೇ? 'ಪಟ್ಟಣಿಗರಂತಹ ಮಹಾನುಭಾವರಿಂದಲ್ಲವೇ ಆದಿ ಶ್ರೀಕಾವೇರಿ ಬಸ್ಸು ಮಾಲಕನೊಬ್ಬನ ಹಸ್ತಗತವಾದದ್ದು' ಎಂದು ವ್ಯಸನದಿಂದ ಹೇಳಿರುವಿರಿ. ನಿಮ್ಮ ಉದ್ಗಾರಕ್ಕೆ ಆಧಾರಗಳನ್ನು ಕೊಟ್ಟು ಪುಷ್ಟೀಕರಿಸಿರುವಿರೇನು? ಅಂದ ಬಳಿಕ ನಿಮ್ಮ ಆಧಾರರಹಿತ ವ್ಯರ್ಥಾಲಾಪವನ್ನು ನಂಬುವವರಾರು? ಮತ್ತೊಂದು ವಿಚಾರ, 'ಇಲ್ಲದ ಹೊಸ ಉದ್ಯಮವನ್ನು ಕಂಡು ಹಿಡಿದು ನಿರುದ್ಯೋಗದ ಹಾವಳಿಯಿಂದ ಕಷ್ಟಪಡುತ್ತಿದ್ದವರಲ್ಲಿ ಕೆಲವರಿಗಾದರೂ ಉದ್ಯೋಗ ಒದಗಿಸಿಕೊಟ್ಟದ್ದು 'ಪಟ್ಟಣಿಗರ' ವಿಶಾಲ ದೃಷ್ಟಿಗೆ ಬಾರದ್ದು ಸೋಜಿಗವೆಂದು ನಮ್ಮ ಹಳ್ಳಿ ಲೇಖಕರು ಬರೆಯುತ್ತಾರೆ. ವಿಮರ್ಶೆಯಲ್ಲೂ ಹಳ್ಳಿಯ ಲೇಖಕರ ಸಂಕುಚಿತ ದೃಷ್ಟಿಯ ಪ್ರದರ್ಶನವೇ ಎದ್ದು ಕಾಣುತ್ತಿದೆ. ನಿರುದ್ಯೋಗ ನಿವಾರಣೆಗಾಗಿ ಒಂದು ಸಿನೆಮಾ ಕಂಪೆನಿ ಇಟ್ಟದ್ದು ಸರಿ ಎಂದು ವಾದಿಸುವ ಮಹಾನುಭಾವರಿಗೆ ಹೆಚ್ಚಿಗೆ

ಸಿನೆಮಾ ಕಂಪೆನಿಗಳು ಬಂದಲ್ಲಿ ನಿರುದ್ಯೋಗ ಹೆಚ್ಚುವುದೆಂದು ಖಚಿತವಾಯಿತೇ? ಅಥವಾ, ಇನ್ನಾವುದಾದರೂ ಸ್ವಾರ್ಥದೃಷ್ಟಿಯು ಅದಕ್ಕೆ ಅಡ್ಡವಿದೆಯೇ? ವಿವರಿಸುವಿರಾ?

ದುಡ್ಡು ಖರ್ಚುಮಾಡಿ ಸಿನೆಮಾಕ್ಕೆ ಹೋಗುವುದು ತಪ್ಪೆಂದು ವಾದಿಸುವ 'ಪಟ್ಟಣವಾಸಿ'ಯು ಸಿನೆಮಾ ಸಂಚಾಲಕರ ವಕಾಲತ್ತು ವಹಿಸಿರುವ ನಿಮ್ಮ ಕೃಪಾಛತ್ರ ಛಾಯೆಯಡಿಯಲ್ಲಿ ಸಿನೆಮಾ ನೋಡಲು ಪುಕ್ಕಟೆ ಹೋಗುವ ಅನುವು ದೊರೆಕೀತೆಂದು ಊಹಿಸಿರಬಹುದೇನೋ? ಹಾಗಾದರೆ, ದಯಮಾಡಿ ಅವರ ಕಾಂಕ್ಷೆಯನ್ನು ಸಲ್ಲಿಸಿ ಕೊಟ್ಟರೆ ಒಳಿತಾಗಬಹುದು.

ವೀರಾಜಪೇಟೆಯ ಸಿನೆಮಾ ಕಂಪೆನಿಯು ಕೊಡಗಿನವರದ್ದಲ್ಲವಾಗಿ ನೀವು ತಿಳಿದುಕೊಂಡಿದ್ದರೆ, ತಪ್ಪು 'ಪಟ್ಟಣಿಗರ'ದ್ದಾಗಲಿಕ್ಕಿಲ್ಲ. ನಾನು ತಿಳಿದ ಮಟ್ಟಿಗೆ ಅದರಲ್ಲಿ ದೇಶೀಯರ ಚಂದಾ ಮೊಬಲಗೇ ಹೆಚ್ಚೆಂದು ಕಂಡು ಬರುತ್ತದೆ. ಹಾಗಿರುವಾಗ ಅದು ದೇಶೀಯರದಲ್ಲವೆಂದು ನಿರಾಕರಿಸುವ ಮಾರ್ಗವಾದರೂ ಹೇಗೆ ಎಂದು ನನಗೆ ತಿಳಿಯದು. ಅಂತೂ ಇಲ್ಲಿಯ ಸಿನೆಮಾ ಕಂಪನಿಯವರು ಹೆದರದೆ ನಿಂತಿರುವುದು ವಂದನೀಯವೇ. ಅದರಲ್ಲೂ ಹಳ್ಳಿಯವರಾದ ನೀವು ಸಿನೆಮಾ ಕಂಪನಿಯ ಸಂಚಾಲಕರ ಬೆಂಬಲ ನಿಂತದ್ದು ಅಭಿನಂದನೀಯವೆ. ಇದನ್ನು ಕಂಡೂ ನಾವು ನಮ್ಮ ಮನಸಿಗೆ ಬೋಧೆಯಾದುದನ್ನು ಬಹಿರಂಗಪಡಿಸದೆ ಹಿಂದೆ ನಿಂತಿದ್ದರೆ ಅದೂ ನಿಂದನೀಯವೇ. ಹಳ್ಳಿಯ ನಮ್ಮ ಲೇಖಕರೇ, ಲೇಖನವನ್ನು ನೋಡಿದೊಡನೆಯೇ ವಿಸ್ಮಯಗೊಳ್ಳುವುದು ಅನುಚಿತ. ವಿಚಾರಗಳನ್ನು ವಿವೇಚಿಸಬೇಕು. ವಿವೇಚಿಸಿದ್ದನ್ನು ಸಕಾರಣವಾಗಿ ಪ್ರತಿಪಾದಿಸಬೇಕು. ಪ್ರತಿಪಾದಿಸಿದ್ದನ್ನು ಕೃತಿಯಲ್ಲಿ ತರಬೇಕು. ಇದೊಂದೂ ಅಲ್ಲದೆ. ಮಾತಿನ ಮಲ್ಲತನದಲ್ಲಿ ಮರುಳುಗೊಳಿಸಲೆತ್ನಿಸುವ ನಿಮ್ಮ ಪ್ರಯತ್ನವು ಅಸ್ತಿಭಾರವಿಲ್ಲದ ಮಹಡಿಯ ಮನೆಯಂತಾಗಲಿಕ್ಕಿಲ್ಲವೇ?

'ಪಟ್ಟಣವಾಸಿ.'

ಗೋಣಿಕೊಪ್ಪಲು ದನಗಳ ಪ್ರದರ್ಶನ.

ನಾನು ಪ್ರದರ್ಶನವನ್ನು ನೋಡುವ ಉದ್ದಿಶ್ಯ ಹೋಗಿದ್ದೆನು. ಪ್ರದರ್ಶನವು ನಿರ್ವಿಘ್ನವಾಗಿ ನಡೆಯಿತು. ಆದರೆ ಪ್ರದರ್ಶನ ಪ್ರೇಮಿಗಳು ಪ್ರದರ್ಶನದಲ್ಲಿ ತಾವು ಮಾಡಬೇಕಿದ್ದ ಕಾರ್ಯವನ್ನು ಯಶಸ್ವಿಯಾಗಿ ಮಾಡಿಲ್ಲವೆಂದು ನನ್ನ ದೃಷ್ಟಿಗೆ ತೋರಿತು. ಪ್ರದರ್ಶನವು ಕೃಷಿಕರನ್ನು ಉತ್ತೇಜನಗೊಳಿಸುವ ಒಂದು ದಾರಿ; ಹಳ್ಳಿ ಹಳ್ಳಿಗಳಲ್ಲಿ ಕೈಗಾರಿಕೆ ಹಾಗೂ ಇತರ ನವನಾಗರೀಕತೆಯ ಲವಲವಿಕೆಯನ್ನು ಹೆಚ್ಚಿಸುವ ಸಾಧನ. ನವೀನ ತರದ ವ್ಯವಸಾಯ ಸಲಕರಣೆಗಳು, ಕಲಾ ಕೌಶಲ್ಯಗಳನ್ನು ಮನದಟ್ಟುಪಡಿಸಿಕೊಳ್ಳುವ ಒಂದು ಸನ್ನಿವೇಶ. ಇಂಥಾ ಜನಹಿತ ಅರ್ಥಾತ್ ಗ್ರಾಮಾಭಿವೃದ್ಧಿಯ ಹೆಗ್ಗುರುತೆಂದೆನಿಸುವ ಈ ಪ್ರದರ್ಶನಗಳಲ್ಲಿ ಉತ್ತಮ ಸಾಮಾನುಗಳಿಗೆ ಆಶಾಜನಕ ಬಹುಮಾನ ಕೊಟ್ಟರೆ ಜನರಲ್ಲಿ ಹುರುಪು ಹುಟ್ಟಿ ಅವರವರೊಳಗೆ ಸ್ಪರ್ಧೆ ಬಂದು ಉತ್ತಮ ಸರಕುಗಳನ್ನು ಹೊರಡಿಸಲು ಅನುಕೂಲವಾಗುವದು. ಆದ್ದರಿಂದ ಪ್ರದರ್ಶನ ಪ್ರೇಮಿಗಳು ಇನಾಂ ಕೊಡಲು ಚುನಾಯಿಸುವಾಗ ಬಹಳ ಜಾಗರೂಕತೆಯನ್ನು ವಹಿಸುವದು ಆದ್ಯ ಕರ್ತವ್ಯ. ಅಲ್ಲಿ ನಡೆದ ಪ್ರದರ್ಶನಗಳ ಹೆಚ್ಚಳದ ವಿಚಾರ ಹೇಳುವದಾದರೆ ಪ್ರತಿವಾರ ಸಂತೆಗೆ ಬರುವ ದನಗಳಿಗಿಂತ ಹೆಚ್ಚೇನು ದನಗಳು ಬಂದಂತೆ ಕಾಣಲಿಲ್ಲ. ದಕ್ಷಿಣ ಕೊಡಗಿನ ಕೆಲವು ರಾಸುಗಳ ವಿನಹ ನೆರೆ ರಾಜ್ಯವಾದ ಮೈಸೂರಿನಿಂದಾಗಲೀ, ಉತ್ತರ ಕೊಡಗಿನಿಂದಾಗಲೀ ಹೆಚ್ಚು ದನಗಳು ಬಂದಿಲ್ಲವೆಂದು ಹೇಳಬಹುದು. ಪ್ರದರ್ಶನ ರಂಗವೇನೋ ಪ್ರದರ್ಶನ ಪ್ರೇಮಿಗಳ ಉತ್ಸಾಹದಿಂದ ಮನರಂಜಕ ಚಪ್ಪರ ಮುಂತಾದ ಸಲಕರಣೆಗಳಿಂದ ಸುಸಜ್ಜಿತವಾಗಿತ್ತೇ ವಿನಹ ಅದಕ್ಕನುಗುಣವಾಗಿ ಪ್ರದರ್ಶನ ವಸ್ತುಗಳು ಬಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಬಂದ ಸಾಮಗ್ರಿಗಳಿಗಾದರೂ ಯೋಗ್ಯತೆಯರಿತು ಬಹುಮಾನ ಹಂಚಲ್ಪಡಲಿಲ್ಲವೆಂದು ನನ್ನ ಊಹೆ. ಇದು ಯಾವ ವ್ಯಕ್ತಿಗಳಿಗೂ ಅನ್ವಯಿಸುವಂತೆ ಬರೆದದ್ದಲ್ಲ. ಇದರಿಂದ ಮನ ನೋಯುವಂಥಾ ಸಂದರ್ಭ ಒದಗಿದರೆ ಅಂಥವರು ನನ್ನನ್ನು ಮನಸಾ ಕ್ಷಮಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಬಹುಮಾನ ಹಂಚುವಾಗ ಮುಂದಕ್ಕಾದರೂ ಸಂಬಂಧಪಟ್ಟವರು ಕೂಲಂಕುಷ ವಿಮರ್ಶಿಸಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವರೆಂದು ನಂಬಿರುವೆನು. ಸಾಮಗ್ರಿಗಳನ್ನು ಪ್ರದರ್ಶನಕ್ಕಾಗಿ ತಂದವರಲ್ಲಿ ಕೆಲವರು ಬಹುಮಾನಕಾಂಕ್ಷಿಗಳಾಗಿ ಅನೇಕ ವಿಧದ ಯುಕ್ತಿಗಳನ್ನು ಹೂಡುವರೆಂಬುದೂ ತಿಳಿಯದ್ದಲ್ಲ. ಪರಿಸ್ಥಿತಿ ಇಂತಿರುವಾಗ ಸಾಧನಗಳನ್ನು ತರುವವರೂ ಸಹ ತಮ್ಮ ಜವಾಬ್ದಾರಿಯನ್ನರಿತೂ ಬಹುಮಾನ ಅರ್ಜನೆಗಾಗಿ ಹೀಗೆ ಮಾಡುವದು ಸರ್ವಥಾ ನ್ಯಾಯವಲ್ಲ. ಪ್ರದರ್ಶನದಲ್ಲಿ ಬಹುಮಾನಗಳು ಸಾಧನವರಿತು ಹಂಚಲ್ಪಡಲಿಲ್ಲವೆಂಬ ಉದ್ಗಾರಗಳೂ ಸಭೆಯಲ್ಲಿ ಬಂದದ್ದವು. ಆದ್ದರಿಂದ ಪ್ರದರ್ಶನ ಪ್ರೇಮಿಗಳಲ್ಲೊಬ್ಬನಾದ ನಾನು ಹೇಳುವದಿಷ್ಟೆ. ಮುಂದಕ್ಕಾದರೂ ಜವಾಬ್ದಾರಿಯನ್ನು ಹೊತ್ತವರು ಈ ಮೇಲಿನ ಕುಂದುಕೊರತೆಗಳಿಗೆ ಗಮನವಿತ್ತು ಹೊಸ ಹೊಸ ಮಾದರಿಯ ಕೈಗಾರಿಕೆಗಳ ಉತ್ಪನ್ನಕ್ಕೂ ವ್ಯವಸಾಯ ಸಲಕರಣೆಗಳ ಅಭಿವೃದ್ಧಿಗೂ, ಅಲ್ಲದೆ ಪ್ರದರ್ಶನವು ವಿಜೃಂಭಣೆಯಿಂದ ನಡೆಯುವಂತೆ ಬೇರೆ ಸ್ಥಳಗಳಲ್ಲಿ ಪ್ರದರ್ಶನಗಳಿರುವಾಗ ತಾರೀಕು ನಿಶ್ಚಯಿಸದೆ ಸಮಯವರಿತು ಎಲ್ಲರೂ ಅವರಲ್ಲಿ ಭಾಗಿಗಳಾಗುವುದಕ್ಕೆ ಅನುಕೂಲ ಕಲ್ಪಿಸುವ ಬಗ್ಗೆ ಸ್ವಲ್ಪ ಶ್ರಮವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ.

'ಪ್ರದರ್ಶನ ಪ್ರೇಮಿ.'

WANTED

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for samples.

For Terms apply.—

2 **Majestic House, Ludhiana.**

Please visit :—

Hotel Kohinoor

Comfortable-**Coorg Boarding & Lodging.**

Opp.—Krishna Rajendra Hospital, Mysore.

ಹೊಟೆಲ್ ಕೊಹಿನೂರ್

ಶ್ರೀ ಕೃಷ್ಣ ರಾಜೇಂದ್ರ ಆಸ್ಪತ್ರೆ ಎದುರು, ಮೈಸೂರು.

ಕೊಡಗರ ಈ ಹೊಟೆಲು ನಗರದ ಮುಖ್ಯ ಸ್ಥಳಗಳಾದ–ಆಸ್ಪತ್ರೆ, ಅರಮನೆ, ರೈಲ್ವೆ ಸ್ಟೇಸನ್, ಬಸ್ ಸ್ಟೇಂಡ್, ಮಾರ್ಕೆಟ್ ಮತ್ತು ಸಿನೆಮ ಮಂದಿರ ಮೊದಲಾದದ್ದಕ್ಕೆಲ್ಲಾ ಕೇಂದ್ರದಲ್ಲಿದ್ದು, ಸಂಸಾರಸ್ಥರಿಗೂ, ಏಕಾಂಗಿಗಳಿಗೂ ವಾಸಕ್ಕೆ ಯೋಗ್ಯವಾಗಿದೆ. ಎಲ್ಲಾ ಜನಾಂಗ ಮತ್ತು ಎಲ್ಲಾ ತರಗತಿಯ ಜನಗಳಿಗೂ, ಖಾಯಂ ಬೋರ್ಡರುಗಳಿಗೂ ಒಪ್ಪುವಂತ ಭೋಜನ ಮತ್ತು ದರಗಳಿರುತ್ತವೆ.

ಮಹನೀಯರು ಪ್ರೋತ್ಸಹಿಸಬೇಕಾಗಿ ಪ್ರಾರ್ಥನೆ

ಬೇಕಾದ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಹೊಟೆಲ್ ಕೊಹಿನೂರ್.

3 ಮೈಸೂರು.

THE

TROPICAL INSURANCE Co. Ltd.,

NEW DELHI.

Chairman Sjt. SUBHAS CHANDRA BOSE.

(President, Indian National Congress.)

A 100% Swadeshi Concern founded by such eminent Leaders as

PANDIT MOTHILAL NEHRU. Dr. M. A. ANSARI.

HAKIM AJMAL KHAN. S. SRINIVASA IYENGAR.

and others.

Wanted an Organiser for Coorg on Salary and commission immediately.

Apply to.—

M. Sunder Ram Shetty,		**K. S. Ramamurthi, M. A.,**
Branch Manager,	**or**	**Secretary,**
Hampankatta,		**160, Mount Road,**
MANGALORE.		**MADRAS.**

4-2

ಕೊಡಗಿನ ಭವಿಷ್ಯತ್ತೂ ಮತ್ತು ಕಾರ್ಯಸಾಧಿಸುವವರೂ.

[ಲೇಖಕ :—ಕೆ. (ಕಡಂಬಾಡಿ) ಪಿ. ಮುದ್ದಪ್ಪ ಬಿ. ಎ.]

ತಾ. 16-12-38 ರಲ್ಲಿ 'ಕೊಡಗಿನ ಭವಿಷ್ಯತ್ತು ಕಾರ್ಯಸಾಧಿಸುವವರೂ' ಎಂಬ ಶಿರೋಲೇಖನದಿಂದ ಬರೆದ ನನ್ನ ಬರಹವನ್ನು 'ಮನಸ್ಸಿಗೆ ಬಂದಂತೆ' ಟೀಕಿಸಿದ್ದನ್ನು ಅದಕ್ಕೆ ಸಲ್ಲಬೇಕಾದಕ್ಕಿಂತ ಹೆಚ್ಚು ದೃಷ್ಟಿ ನಿಟ್ಟೆಯನ್ನಿಟ್ಟು ಮನನ ಮಾಡಿದೆನು. ಟೀಕಾಕಾರರು ಮನಸ್ಸಿಗೆ ಬಂದದ್ದನ್ನು ಬರೆಯದೆ ಸ್ವಲ್ಪ ಆಲೋಚಿಸಿ ಬರೆದಿದ್ದರೆ ಅವರು ಕೇಳಿರುವಂಥಾ ಅನೇಕ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಅಥವಾ ನನ್ನ ಅದೇ ಲೇಖನವನ್ನು ಪುನಃ ಚೆನ್ನಾಗಿ ವಿಮರ್ಶೆಯಿಂದ ಓದಿದ್ದರೆ ಅವರ ಹೆಚ್ಚಿನ ಪ್ರಶ್ನೆಗಳಿಗೆ ಅದರಲ್ಲಿಯೇ ಪಂಕ್ತಿ ಗಳೆಡೆಯಲ್ಲಿ ಉತ್ತರವು ದೊರೆಯುತ್ತಿತ್ತು. ಇನ್ನಾದರೂ 'ಮನಸ್ಸಿಗೆ ಬಂದಂತೆ ಬರೆಯದೆ' ತುಂಬಾ ಆಲೋಚಿಸಿ ಬರೆಯಬೇಕೆಂದು ನನ್ನ ಸವಿನಯ ವಿನಂತಿ. ನಾನು ಕೇಳಿರುವ ಹಲವರು ಪ್ರಶ್ನೆಗಳೇನೆಂದರೆ ಶಾಸನಿರೋಧನದಿಂದ ಖೋತೆಯಾಗುವ ತೆರಿಗೆಯನ್ನು ಯಾವ ರೀತಿಯಿಂದ ಭರ್ತಿ ಮಾಡುವರು, ಜನರಿಗೆ ವೈದ್ಯ ಮತ್ತು ಒಳ್ಳೇ ನಮೂನೆಯ ಬೇಸಾಯಕ್ಕೆ ಸಹಾಯ ಮಾಡುವುದು, ಕೊಡಗಿನ ಜನರ ನಿರಕ್ಷರತೆಯನ್ನು ಹೋಗಲಾಡಿಸುವುದು, ರೈಲ್ವೆ ತರುವದು, ವ್ಯಾಪಾರಕ್ಕೆ ಹೆಚ್ಚಿನ ಸಲಕರಣೆಗಳೊನ್ನೊದಗಿಸುವುದೇ ಆಗಿವೆ. ಇವು ಅವರ ಮುಂದಿದ್ದರೂ ಗೋಚರವಾಗದಂತೆ ನಟಿಸಿದ್ದಕ್ಕೆ ಪಾಠಕರೇ ಸಾಕ್ಷಿ. ಹೇಗೂ ನನ್ನ ಉತ್ತರವು ಮನವರಿಯದೆ ಟೀಕೆಯ ಹದ್ದನ್ನು ದಾಟಿ ಹೋದರೂ ಕ್ಷಮಿಸಿ ಟೀಕೆಯನ್ನು ಟೀಕೆಯೆಂದೇ ಭಾವಿಸಬೇಕಾಗಿ ಅವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಅವರು ಕೇಳಿರುವ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರವನ್ನೀಯುವೆನು.

ಸರಿ, ಆ ಲೇಖನದಲ್ಲಿ ಕೊಡಗಿನ ಭವಿಷ್ಯತ್ತಿನ ವಿಷಯ ನನ್ನ ಸ್ವಂತ ಅಭಿಪ್ರಾಯವನ್ನು ಕುರಿತಾಗಿ ಕೊಡಲಿಲ್ಲ. ಇದನ್ನು ಕೊಡಬಾರದೆಂದೇ ನನ್ನ ಭಾವನೆಯಲ್ಲದೆ ನಾನು ಕೊಡಗಿನ ಭವಿಷ್ಯತ್ತಿನ ವಿಷಯ 'ಒಂದು ನಿರ್ಣಯಕ್ಕೆ' ಬಂದಿಲ್ಲವೆಂದಲ್ಲ. ಅಥವಾ ಕೊಡಗಿನಲ್ಲಿರುವ ಎಲ್ಲಾ ಪಂಗಡಗಳನ್ನು ಸಂತೋಷಗೊಳಿಸಿ ತೆಗಳಿಕೆಗೊಳಪಡಬೇಕೆಂದೂ ಅಲ್ಲ. ನಾನು ಪಂಗಡವೆಂಬ ಹೋರಾಟದ ಹೊಲಸನ್ನು ದೂರ ಸರಿಸಿ ಬರೇ ಒಬ್ಬ ಟೀಕಾಕರ್ತನ ಮನೋದೃಷ್ಟಿಯಿಂದ ಈ ಮೇಲಿನ ಬರಹವನ್ನು ಬರೆದದ್ದೇ ಇದಕ್ಕೆ ಕಾರಣ. ಅದುವರಿಂದಲೇ ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಅಥವಾ ಮೈಸೂರಿಗೆ ಸೇರಿಸಿದರೆ ಅಥವಾ ಇನ್ನು ಕೊಡಗನ್ನು ತಕ್ಕ 'ಸಮಂಜಸವಾದ ಕಾರಣಗಳಿಂದ' ಪ್ರತ್ಯೇಕವಾಗಿಟ್ಟುಕೊಂಡರೆ ಕೊಡಗಿನ ಮತ್ತು ಅದರ ಜನರಿಗೆ ಆಗುವ ಕೆಡಕು ಒಳ್ಳಿತಗಳನ್ನೂ, ತಂಟೆ ತೊಡಕುಗಳನ್ನು ಸೋಗು ಸೊಂಪುಗಳನ್ನು ವಿವರವಾಗಿ ಜನರಿಗೆ ಎತ್ತಿ ತೋರಿಸುವದೇ ನನ್ನ ಕರ್ತವ್ಯವೆಂದು ತಿಳಿದೆನಲ್ಲದೆ, ನನ್ನ ಸ್ವಂತ ಅಭಿಪ್ರಾಯಗಳನ್ನು ಜನರೆಲ್ಲರಲ್ಲಿ ಪ್ರಚುರಪಡಿಸಬೇಕೆಂದಲ್ಲ. ಕೊಡಗಿನ ಭವಿಷ್ಯತ್ತೆಂಬ ಇದು, ಮಹತ್ತರವಾದ ಭಿನ್ನರಾಶಿ, ಕೆ.ರಾ ತಿಗಳ ಗಣಿಕೆಯನ್ನು ನಿರ್ಮಾಣಿಸುವುದಕ್ಕೆ ಜನರೇ ಹಕ್ಕು ಬಾಧ್ಯರಲ್ಲದೆ ಸ್ವಾರ್ಥಕ್ಕಾಗಿ ಕೆಲಸ ಮಾಡುವ ಮುಂದಾಳುಗಳಲ್ಲ. ಮುಂದಾಳುಗಳೆಲ್ಲರೂ ಜನರ ಜವಾನರಾಗಿ ಅವರನ್ನು ಜಾಗ್ರತೆಗೊಳಿಸುವುದೇ ಅವರ ಕರ್ತವ್ಯವಲ್ಲದೇ ತಮ್ಮ ತಮ್ಮ ಸ್ವಂತ ಅಭಿಪ್ರಾಯಗಳಂತೆ ನಟಿಸುವುದು ಉಚಿತವಲ್ಲವೆಂದು ನನ್ನ ತಿಳುವಳಿಕೆ. ಹೀಗೆ ಯಾವ ಪಕ್ಷವನ್ನೂ ವಹಿಸದೆ ಪ್ರಜೆಗಳ ಹಿತದೃಷ್ಟಿಯಿಂದ ಬರೆದದ್ದಕ್ಕೆ ಎಲ್ಲಾ ಪಕ್ಷಗಳನ್ನೂ, ಸಂತೈಸುವುದಕ್ಕೆನ್ನುವರು. ಇದನ್ನು ಜನರೇ ತಿಳುಕೊಳ್ಳುವರಲ್ಲವೆ! ಅಂತೂ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಲು ಪ್ರಯತ್ನಿಸುವವರು ಕೊಡಗಿನ ಭವಿಷ್ಯತ್ತಿನ ಏಳಿಗೆಗೂ ಮತ್ತು ಕೊಡಗಿನ ಜನರ ಮುಂದಿನ ಅಭಿವೃದ್ಧಿ ಹಿತದೃಷ್ಟಿಗಳಿಂದ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳುವರೇ ಮೇಲೆಂದು 'ಸಮಂಜಸವಾದ ಹೇತುಗಳಿಂದ' ಅವರನ್ನು ಸಂತೈಸಿ ಕೊಡಗನ್ನು ಪ್ರತ್ಯೇಕವಾಗಿಟ್ಟರೂ ನಾನು ತುಂಬಾ ಸಂತೋಷಪಡುವೆನಲ್ಲದೆ ಅದರಲ್ಲಿ ನನಗಾಗಬೇಕಾದ್ದು ಏನೂ ಇಲ್ಲ. ಯಾಕೆಂದರೆ ಜನರ ಏಳಿಗೆ ಇಳಿತಗಳನ್ನು ಜನರೇ ತೀರ್ಮಾನಿಸಬೇಕಾಯಿತು. ಇನ್ನು ಟೀಕಾಕರ್ತರಿಗೆ ನನ್ನ ಸ್ವಂತ ಅಭಿಪ್ರಾಯವನ್ನು ತಿಳಿಯಬೇಕಾಗಿದ್ದರೆ, ಕೊಡಗನ್ನು, ಸಧ್ಯ ಮದ್ರಾಸಿಗೆ ಸೇರಿಸಿ ತದನಂತರ ಕರ್ನಾಟಕ ಪ್ರಾಂತ ಮಾರ್ಪಾಟಾದಾಗ ನಾವೂ ಸಹಾ ಕರ್ನಾಟಕ ಮಾತೆಯನ್ನು ಪೂಜಿಸಲರ್ಹರಾಗುವವು. ಮತ್ತು ಹಿಂದುಳಿದ ನಮ್ಮ ಪದ್ಧತಿ, ಸಾಹಿತ್ಯ, ಸಂಘಟನೆ, ಐಕ್ಯತೆ ಮೊದಲಾದುವುಗಳನ್ನು ಉಳಿಸಿ ಊರ್ಜಿತಗೊಳಿಸಬಹುದು.

ಇನ್ನು ಅವರು 2 ನೇ ಪ್ಯಾರಾದಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರವನ್ನು ನಾನು ವಿಸ್ತಾರವಾಗಿ ಮೊದಲು ಬರೆಯಲಿಲ್ಲ. ಯಾಕೆಂದರೆ ಹೆಚ್ಚಾಗಿ ಪತ್ರಿಕೆಗೆ ಬರೆಯುವಾಗ ಬರಹವು ಬಹಳ ವಿಸ್ತಾರವಾಗಬಾರದು. ಮತ್ತು ರೂಢಿಯಾಗಿ ಎಲ್ಲರಿಗೂ ತಿಳಿದಿರುವ ಸಂಗತಿಗಳು ಯಾರಿಗೂ ರುಚಿಸದು. ಹಾಗೆಯೇ ಕೊಡಗಿನ ಕಾಂಗ್ರೆಸಿನ ಮುಂದಾಳುಗಳನ್ನು ಉಚ್ಚ ಬೆಳಕಿಗೆ ಎತ್ತಿ ಹಿಡಿದರೆ ಅದು ಸ್ವಲ್ಪ ಆತ್ಮೀಯ ತರದ ಅಸಹ್ಯ ಟೀಕೆಯಾಗುವುದು. ಮಾತ್ರವಲ್ಲದೆ 'ಕೊಡಗು' ಪತ್ರಿಕೆಯಂಥ ವೃತ್ತ ಪತ್ರಿಕೆಗಳಲ್ಲಿ ಅಂಥಾ ಪ್ರಬಂಧಗಳು ಅಚ್ಚಿನ ಬೆಳಕನ್ನು ಎಂದೂ ಕಾಣುವುದು ಸಾಧ್ಯವಿಲ್ಲವೆಂಬ ಭಯವು ನನಗಿತ್ತು. ನನ್ನ ಮೊದಲಿನ ಲೇಖನವನ್ನು ಬರೆದು ಕಳುಹಿಸಿ ಸುಮಾರು ಎರಡು ತಿಂಗಳ ನಂತರ ಅದು ಮುದ್ರಿತವಾಯಿತು ಎಂಬುದನ್ನು ತಿಳಿದರೆ ನನ್ನ ಭಯವು ನೇರವಾಗಿ ರುಪದಹರಿಸಲ್ಪಡುವುದು. ಅಂತೂ ಅವರೇ ಕೇಳುವುದರಿಂದ ನಾನು ಬಲಾತ್ಕಾರದಿಂದ ಹೇಳಲುದ್ಯುಕ್ತನಾಗುವೆನು. ಮೊನ್ನೆ ತಾನೆ ಕೊಡಗನ್ನು ದೊಡ್ಡ ಪ್ರಾಂತಕ್ಕೆ ಸೇರಿಸಬೇಕೆಂದು ಕೊಡಗು ಕೌನ್ಸಿಲಿನಲ್ಲಿ ಮಿ. ಯಸ್. ಸೋಮಣ್ಣನವರು ತಂದ ಠರಾವನ್ನು ಬೀಳಿಸಲು ಕಾಂಗ್ರೆಸ್ಸಿನವರು ಯಾರ ಸಹಾಯವನ್ನು ಹವಣಿಸಿ ಹೊಂದಿಕೊಂಡರು. ಎರಡು ಯೂರೋಪಿಯನ್ ಮೆಂಬರುಗಳಿಂದಲ್ಲವೇ? ಹೀಗಾದ್ದರಿಂದ ಠರಾವಿನ ಪರವಾಗಿ ಐದೂ, ವಿರೋಧವಾಗಿ ಏಳೂ ಓಟುಗಳಾದುವು. ಹೀಗೆ ಕಾಂಗ್ರೆಸ್ಸಿನವರು ಯೂರೋಪಿಯನರ ನೈತ್ರ್ಯವನ್ನು ಬೆಳೆಸಲು ಉಚಿತ ಕಾರಣವೇನು? ಕಾಫಿ ತೋಟದ ತೆರಿಗೆ ಎಕ್ರೆಗೆ ರೂ. 2 ಆಗಿರುವುದರಿಂದಲ್ಲವೇ? ಅಥವಾ ಕಾಂಗ್ರೆಸ್ಸಿನವರು ಎಕ್ರೆಗೆ ರೂ. 1,8 ಮಾಡುವೆನೆಂಥ ವಾಗ್ದಾನ ಕೊಟ್ಟಿರಬಹುದೇನೊ? ಬಂಗಾಳ ಮತ್ತು ಅಸ್ಸಾಂಗಳಲ್ಲಿ ಯೂರೋಪಿಯನ್ನರು ಕಾಂಗ್ರೆಸ್ಸಿಗೆ ಏನು ಮಾಡಿರುತ್ತಾರೆಂಬುದನ್ನು ಜನರೆಲ್ಲರೂ ತಿಳಿದಿರುವರು. ಅತ್ಯಲ್ಪ ಸಂಖ್ಯೆಯ ಯೂರೋಪಿಯನ್ನರಿಗೆ ಕೊಡಗಿನ ಹದಿಮೂರು ಚುನಾಯಿತ ಮೆಂಬರುಗಳಿರುವ ಕೌನ್ಸಿಲಿನಲ್ಲಿ ಎರಡು ಪದವಿಗಳನ್ನು ಯಾತಕ್ಕಾಗಿ ಕೊಟ್ಟಿರುವರೆಂದು ಕಾಂಗ್ರೆಸ್ಸಿನವರು ತಿಳಿಯಲಿಲ್ಲವೇ? ಇದು ಸಹ ಜನರ ಹಿತದೃಷ್ಟಿಯಿಂದಲೋ? ಅಥವಾ ಯೂರೋಪಿಯನ್ನರಿಗಿರುವ ಆಸ್ತಿಪಾಸ್ತಿ ಧನಕಾಣಿಕೆಗಳನ್ನು ಸಾಂಗವಾಗಿಡಲಿಕ್ಕಾಗಿಯೋ? ನನ್ನ ಟೀಕಾಕಾರರು ಕಾಫಿ ತೋಟವಿದ್ದ ಜಮೀನ್ದಾರರಾಗಿದ್ದರೆ ಅವರಿಗೆ ತಿಳಿಯುತ್ತಿತ್ತು. ನಿರಕ್ಷರ ಕುಕ್ಷಿಗಳಾದ ಜನರಿಗೆ ತಾನೆ ಮತ್ತೆ ಹೇಗೆ ಗೊತ್ತಾಗಬೇಕು?

ಇನ್ನು 1929,'30,'31 ರಲ್ಲಿ ಇದೇ ಕಾಂಗ್ರೆಸ್ ಮುಂದಾಳುಗಳೆಂದೆನ್ನಿಸಿಕೊಳ್ಳುವವರು, ದೇಶದ ಎಲ್ಲಾ ಕಡೆಗಳಲ್ಲಿ ಜನ ಸಂದಣಿಯನ್ನು ಸೇರಿಸಿ ಸಭೆ ಸಮೂಹಗಳಲ್ಲಿ ಕೊಡಗನ್ನು ಕರ್ನಾಟಕಕ್ಕೆ ಸೇರಿಸಬೇಕು, ಮದ್ರಾಸಿಗೆ ಸೇರಿಸಬೇಕೆಂಬದೇ ಉದ್ದುಪ್ಪದ ಸೋಗು ಸೊಂಪಿನಿಂದ ಮಾಡಿದ ಮನವಣಿಯುವ ಭಾಷಣಗಳನ್ನು ಟೀಕಾಕಾರರು ಮರೆತ್ತಿದ್ದರೂ ಜನರು ಮರೆಯಲಿಲ್ಲವಾಗಿ ನನ್ನ ಊಹನೆ. ರಾಜಾಸೀಟಿನಂಥಾ ಸ್ಥಳಗಳಲ್ಲಿ ಮಾಡಿದ ಉಪ್ಪರಿಕೆಗಳನ್ನು ಮರೆತು ಕೌನ್ಸಿಲು ಹಾಲಿನಲ್ಲಿ ಇದಕ್ಕೆ ಶುದ್ಧ ವಿರೋಧವಾಗಿ ಅಕ್ಕರೆಯಿಂದ ಭಾಷಣ ಮಾಡಿ ಮುದಡುವರು. ಇದು ಕೊಡಗು ಕಾಂಗ್ರೆಸ್ ಮುಂದಾಳುಗಳ ಅಪವಾದವೋ ಅಥವಾ ಅನರ್ಥ ಸಟೆಯತ್ನವೋ? ಇಂಡಿಯನ್ ನೇಶನಲ್ ಕಾಂಗ್ರೆಸ್ ದೇಶದ ಎಲ್ಲಾ ಭಾಗಗಳನ್ನು ಒಂದು ಗೂಡಿಸಿ ಮೇಲ್ತರಗತಿಗೆ ಎತ್ತುವವರ ಬದಲು ಹರಿದು ಹಂಚಿ ಸಿಡಿದೆಳೆದು ಆಂಗ್ಲೇಯರ ದಬ್ಬಾಳಿಕೆಯ ಪಾಲಿಗೆ ಪಂಚಾಮೃತವನ್ನೆರೆದುದುದಿಲ್ಲ. ಯೂರೋಪಿಯನ್ನರ ಸಹಾಯವನ್ನು ಬೇಡುವುದೂ ಇಲ್ಲ. ಕೊಡಗು ಕಾಂಗ್ರೆಸ್ಸಿನವರ ನಿಲುವು ವಿಪರೀತವಿದ್ದು ಇದನ್ನು ಟೀಕಾಕಾರರು ಮರೆತಿರುವರೋ?

ಇನ್ನು ಅನೇಕ ಸಂದರ್ಭಗಳನ್ನು ಎತ್ತಿ ತೋರಿಸಬಲ್ಲೆನು. ಆದರೆ ಅದು ಎಲ್ಲರಿಗೂ ಸವಿಯಾಗಲಾರದು. ಇನ್ನೊಂದು ಉದಾಹರಣೆಯನ್ನು ತೋರಿಸಿ ಕೊಡಗನ್ನು ಪ್ರತ್ಯೇಕವಾಗಿಟ್ಟರೆ ಯೂರೋಪಿಯರಿಗೂ ಮತ್ತು ಕಾಫಿತೋಟವನ್ನೊಳಗೊಂಡ ಇನ್ನೂ ದೊಡ್ಡ ದೊಡ್ಡ ಜಮೀನ್ದಾರರಿಗೆ ಮಾತ್ರ ಒಳ್ಳೆಯದೇ ಹೊರತು ಕೊಡಗಿನ ಜನರಿಗೆ ಯಾವ ತರಹದಿಂದಲೂ ಪ್ರಯೋಜಕವಲ್ಲವೆಂದು ಉಲ್ಲೇಖಿಸುವೆನು. 1919 ರಲ್ಲಿ ಇಂಡಿಯಕ್ಕೆ 'ಮೊಂಟ್‌ಫೊರ್ಡ್' ಮಸೂದೆಯು ಸಿಕ್ಕಿದಾಗ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೋ ಅಥವಾ ಪ್ರತ್ಯೇಕವಾಗಿಡಬೇಕೋ ಎಂದು ಬ್ರಿಟಿಷ್ ಗವರ್ನಮೆಂಟಿನವರು ಕೇಳಿದಕ್ಕೆ ಬೇರೆಯಾಗಿಡುವಂತೆ ಕೊಡಗಿನ ಯೂರೋಪಿಯನ್ನರೂ, ದೊಡ್ಡ ದೊಡ್ಡ ಜಮೀನ್ದಾರರೂ ಮತ್ತು ಉದ್ಯೋಗಸ್ಥರೂ ಮಾಡಿದರಲ್ಲದೆ, 163 ಸಾವಿರ ಜನರ ಒಪ್ಪಂದದಿಂದಲ್ಲವೆಂದು ನಾನು ಖಂಡಿತಾ ಹೇಳಬಲ್ಲೆನು. ಇದು ಯಾರಿಗೂ ಗೊತ್ತಿರದಿರದು. ಇದನ್ನೆಲ್ಲಾ ಬದಿಗಿಟ್ಟು ಟೀಕಾಕಾರರ ಪ್ರಶ್ನೆಯನ್ನು ಯೋಚಿಸಿದರೆ, ಬಹಳ ವ್ಯಸನವಾಗುವದಲ್ಲದೆ, ಅವರು ಹೇಳಿರುವಂತೆ ಅವರ ದಿನಚರ್ಯೆಯು 'ಅನುಭವದ ಉಚ್ಚಸ್ಥಿತಿಯನ್ನೂ' ಸಹ ಕೆಳಕ್ಕಿಳಿಸುವುದು. ಇನ್ನು ಕೊಡಗು ಕಾಂಗ್ರೆಸ್ಸಿನವರು ಯಾವ ಯಾವ ಜನಹಿತಕರವಾದ ಕೆಲಸವನ್ನು ಕೈಕೊಂಡಿರುವರೋ? ನನ್ನ 'ಗೋಚರಕ್ಕಂತೂ ಬಂದಿಲ್ಲ' ಎಷ್ಟು ರಾಷ್ಟ್ರಕಟ್ಟೋಣ ಕೆಲಸವನ್ನು ಮಾಡಿರುವರು? ಎಷ್ಟು ನಿರಕ್ಷರಕುಕ್ಷಿಗಳಿಗೆ ಅಕ್ಷರಾಭ್ಯಾಸ ಮಾಡಿಸಿರುವರು? ಹಿಂದೀ ಪ್ರಚಾರವನ್ನೆಷ್ಟು ಮಾಡಿರುವರು? ಊರೂರುಗಳಿಗೆ ಹೋಗಿ ನಾಡಿನ ಏಳಿಗೆಯನ್ನೆಷ್ಟು ಮಾಡಿರುವರು? ಖಾದಿ ಪ್ರಚಾರವನ್ನೆಷ್ಟು ಮಾಡಿರುವರು? ಕೊಡಗಿನಲ್ಲಿ ಕಾಂಗ್ರೆಸ್ಸಿನ ಖಾದಿ ಸ್ಟೋರುಗಳೆಷ್ಟಿವೆ? ನೀವೇ ಯೋಚಿಸಿ ಉತ್ತರವೀಯಿರಿ.

ಇನ್ನು ಅವರು 3 ನೇ ಮತ್ತು 4 ನೇ ಪ್ಯಾರಾದಲ್ಲಿ ಕೇಳಿದ ಪ್ರಶ್ನೆಯನ್ನು ನೋಡಿ ನೊಂದಿರುವೆನು. ಯಾಕೆಂದರೆ ಅವರ 3ನೇ ಪ್ರಶ್ನೆಗೆ ಅವರೇ ನನ್ನ ಬರಹದಿಂದ ಎತ್ತಿ ಉಲ್ಲೇಖಿಸಿ ಹೇಳಿರುವುದರಲ್ಲಿ ಉತ್ತರವು ಮನವರಿಯುವಾಗುವುದು. ಅಥವಾ ದೊಡ್ಡ ದೊಡ್ಡ ಶಬ್ದಗಳ ಅವನಿಯಲ್ಲಿ ಸ್ಮೃತಿ ಪತನದ 'ಮೈಸೂರಿನ ವಿಧುರಾಶ್ವತ್ಥದ ಘಟನೆ'ಯನ್ನು 'ಮನಸಿಗೆ ಬಂದಂತೆ' ಸಡಗರದಿಂದ ಮುಂದೆ ಸಾಗುವಾಗ ಅವರ ಮನಸು ಅಡಂಬರವೆಂಬ ಪಾಣಿಯು ಕಡೆ ಹರಿದು ಹವಣಿಸಿ ಮನ ನೋಯಿಸಬಹುದಾಗಿ ನಂಬುತ್ತೇನೆ. ಅಂತೂ ನಾ

ನು ಈಗಿನ ಮೈಸೂರಿನ ಪ್ರಭುತ್ವದೊಳಗೆ ಕೊಡಗನ್ನು ಸೇರಿಸಬೇಕೆಂದು ಹೇಳಿರುವುದಿಲ್ಲ. 1935ನೇ ಸಂಯುಕ್ತ ರಾಜ್ಯಘಟನೆಯಂತೆ ಮೈಸೂರು ಸಹ ಫೆಡರಲ ವಿಭಾಗವಾಗಿ ಸೇರ್ಪಟ್ಟಲ್ಲಿ, ಪ್ರಜಾ ಸತ್ತಾತ್ಮಕ ಸರ್ಕಾರವಾಗುವುದು. ಈಗಾಗಲೇ ಮೈಸೂರಿನಲ್ಲಿ ರಾಜಕಾರಣ ಕಮಿಟಿಯನ್ನು ತೀರ್ಮಾನಿಸಿರುವರು. ಹೀಗಿರುವಾಗ ಕೊಡಗನ್ನು ಸೇರಿಸಿದರೂ ತಪ್ಪಾಗದೆಂದು ಹೇಳಿರುವೆನಲ್ಲದೆ ಕೊಡಗಿನ ತಲೆಭಾರದ ಸರ್ಕಾರವನ್ನು ಕಿತ್ತೊಗೆದು, ಮೈಸೂರಿನ ದಬ್ಬಾಳಿಕೆಗೊಳಗಾಗಬೇಕೆಂದು ನಾನು ಹವಣಿಸಲಿಲ್ಲ, ಹಾಡಲೂ ಇಲ್ಲ. ಕನ್ನಂಬಾಡಿ ಕಟ್ಟೆಯಿಂದ ನೀರಾವರಿಯೂ ದ, ಶಿವಸಮುದ್ರದ ವಿದ್ಯುಚ್ಛಕ್ತಿಯ ಸೊಂಪಿನ, ತನ್ನದೇ ಯೂನಿವರ್ಸಿಟಿ, ಕಾಲೇಜುಗಳಿರುವ ರೈಲ್ವೆ ಮತ್ತು ಇನ್ನಿತರ ವೈವಾಟಗಳಿಗೆ ಸಲಕರಣೆಗಳನ್ನೀಯುವ ಸಕ್ಕರೆ, ಕಬ್ಬಿಣ, ಗ್ಲಾಸ್ ಮತ್ತು ನೇಯಿಗೆ ಮೊದಲಾದ ಕಾರ್ಖಾನೆಗಳಿಂದ ಹಾತೊರೆಯುತ್ತಿರುವ ಮೈಸೂರು ನಮ್ಮ ದೇಶದಲ್ಲಿಯೂ ಇದೇ ರೀತಿಯಿಂದ ಇಂಡಸ್ಟ್ರಿಯಲ್ ಮತ್ತು ಕೈಗಾರಿಕೆಗಳನ್ನು ಹೆಚ್ಚಿಸಿ, ಖಿಡ್ಕಾಯದಿಂದ ಸಿಬ್ಬಂದಿ ಖೋತೆ ಮಾಡುವದರ ಬದಲು ತರುಣರಿಗೆ ಉದ್ಯೋಗಗಳನ್ನುಂಟುಮಾಡುವದಲ್ಲದೆ, ದೇಶದ ವ್ಯಾಪಾರ ವಾಣಿಜ್ಯವನ್ನು ಹೆಚ್ಚಿಸಿ ದೇಶದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವುದರಿಂದ ಜನರಿಗೆ ತುಂಬಾ ಸುಖ ಸಂತೋಷವು ದೊರೆಯಬಹುದೆಂದು ಈ ಅಭಿಪ್ರಾಯವನ್ನು ಜನರ ಮುಂದಿಟ್ಟಿದ್ದಾಗಿದೆ. ಆದೂ ಸಂಯುಕ್ತ ರಾಜ್ಯಘಟನೆಯು ಬೇರೂರಿದ ಮೇಲೆ ಮ[illegible] ಮೈಸೂರು ಪ್ರಜಾ ಸತ್ತಾತ್ಮಕ ಫೆಡರಲ್ ವಿಭಾಗಗಳಲ್ಲೊಂದಾದ ಮೇಲೆ. ಮತ್ತು ಇದನ್ನು ಜನರೇ ತೀರ್ಮಾನಿಸುವಂತೆ ಹವಣಿಸಿರುವೆನು.

ಟೀಕಾಕಾರರು ಸಂಯುಕ್ತ ಸರ್ಕಾರವು ಮತ್ತು ಅದಕ್ಕೊಳಪಟ್ಟ ಫೆಡರಲ್ ವಿಭಾಗವಾದ ಸ್ಥಳೀಯ ಸರ್ಕಾರವು ಅತಿ ವ್ಯಯದ ಸರ್ಕಾರವೆಂದು ಹೇಳಿದ್ದನ್ನು ಟೀಕಿಸಿರುವರು. ಅವರನ್ನು ಸಂಯುಕ್ತ ರಾಜ್ಯಘಟನೆಯ ಮತ್ತೂ ಇನ್ನಿತರ ರಾಜ್ಯಕಾರಣಗಳ ನಿಯಮಗಳನ್ನು ಓದಲು ಕೇಳಿಕೊಳ್ಳುವೆನು. ಅಷ್ಟಲ್ಲದೆ ಇನ್ಸ್ಟ್ರುಮೆಂಟ್ಸ್ ಆಪ್ ಎಕ್ಷನ್, ಇನ್ಸ್ಟ್ರುಮೆಂಟ್ ಆಫ್ ಇನ್ಸ್ಟ್ರಕ್ಷನ್ಸ್, ಫೆಡರಲ್ ಲಿಸ್ಟ್, ಪ್ರಾಂತೀಕ ಲಿಸ್ಟ್, ಕನ್ಕರೆಂಟ್ ಲಿಸ್ಟ್, ರೆಸೂಡಿಯರಿ ಲಿಸ್ಟ್ ಮತ್ತು ನಾನಾ ನಮೂನೆಯ ಸಂಯುಕ್ತ ವಿಭಾಗಗಳಿಂದ ಒಳಗೊಂಡ ಮತ್ತು ಪ್ರಪಂಚಕ್ಕೆ ಹೊಸ ನಮೂನೆ ಎಂದೆನಿಸುವ 1935ನೇ ಇಸವಿಯ ಇಂಡಿಯಾ ಸಂಯುಕ್ತ ಘಟನೆಯನ್ನು ಸಾವಕಾಶದಿಂದ ಓದುವಂತೆ ಟೀಕಾಕಾರರನ್ನು ಕೇಳಿಕೊಳ್ಳುವೆನು. ಇದರ ಹೊರತು ಅವರಿಗೆ (Fedral Government is a litigious Government) ಎಂದರೆ ಸಂಯುಕ್ತ ರಾಜ್ಯಘಟನೆಯು ಅತೀ ವ್ಯಯದ ಮತ್ತು ವ್ಯಾಜ್ಯ ದಾವೆಗಳ ಸರ್ಕಾರವೆಂದು ಅವರ ಪುಟ್ಟ 'ದಿನಚರ್ಯೆಯ ಅನುಭವದಿಂದ' ಕಲಿತುಕೊಳ್ಳಲು ಸಾಧ್ಯವಿಲ್ಲ. ಅದನ್ನು ಓದಿ 'ಹಿಂದಕ್ಕೂ ಮುಂದಕ್ಕೂ ಡಿಗ್ರಿಗಳನ್ನು ಪಡೆದುಕೊಂಡು' ಆ ಮೇಲೆ ದಿನಚರ್ಯೆಯ ಅನುಭವದಿಂದ ಹೆಚ್ಚಾಗಿ ತಿಳಿಯಬಹುದಲ್ಲದೆ ಅನ್ಯಥಾ ಅಲ್ಲ. ಇಂಥಾ ಪ್ರಶ್ನೆಗಳನ್ನು ಕೇಳುವ ಮೊದಲೇ ಆಲೋಚಿಸದಿದ್ದಲ್ಲಿ ಹೀಗೇನೇ ತಮ್ಮ ತಮ್ಮ ತಿಳುವಳಿಕೆಯ ನಿಜ ರೂಪವನ್ನು ತೋರಿಸುವುದು. ಇದು ಯಾರ ತಪ್ಪು. ಆ ಮೇಲೆ ಕೊಡಗನ್ನು ಬೇರೆಯಾಗಿಟ್ಟು, ತಲೆ ಭಾರ ಸರ್ಕಾರವನ್ನು ಬದಿಗೆ ಸರಿಸಿ ಪಾರತಂತ್ರ್ಯಕ್ಕೆ ಮಳಲು ಮುಸುಕಿ ಸ್ಥಳೀಯ ಸರ್ಕಾರಕ್ಕೆ ಹೊಡೆದಾಡುವರಂತೆ. ಕೊಡಗಿನಂಥಾ ಸಣ್ಣ ಪ್ರಾಂತ್ಯವು ಸಂಯುಕ್ತ ಘಟನೆಯ ದೊಡ್ಡ ದೊಡ್ಡ ಪ್ರಾಂತಗಳಾದ ಮದ್ರಾಸು, ಬೊಂಬಾಯಿ, ಮೈಸೂರು ಮತ್ತು ಹೈದರಾಬಾದಿನಂಥಾ ಪ್ರಾಂತಗಳೊಡನೆ ಯಾಗೆ ತಾನೆ ಸ್ಪರ್ಧೆ ಪೈಪೋಟಿಯನ್ನು ನಡೆಯಿಸಬಹುದು. ಸಂಯುಕ್ತ ರಾಜ್ಯಘಟನೆಯು ಬರುವ ಮೊದಲೇ ಫೆಡರಲ್ ಕೋರ್ಟಿಗೆ ಎರಡು ಮೂರು ಶಾಲೆಗಳು ತೀರ್ಮಾನಕ್ಕೆ ಬಂದಿವೆ. ಇನ್ನೂ ಸಂಯುಕ್ತ ರಾಜ್ಯ ಘಟನೆಯು ಬಂದ ಮೇಲೆ ಪ್ರಾಂತೀಯತ್ವವು ಹೆಚ್ಚುತ್ತಾ ಬಂದು ಒಂದನ್ನೊಂದು ತುಳಿಯುತ್ತಾ ಬೇರೆ ಬೇರೆಯಾಗಿ ಸ್ವಂತ ಅಧಿಕಾರವನ್ನು ಪಡೆಯಲಿಕ್ಕಿವೆ. 13 ಮತ್ತು 7 ಮಿಲಿಯ ಜನಸಂಖ್ಯೆಯ ಝೆಕೋಸ್ಲೊವಾಕಿಯ ಮತ್ತು ಆಸ್ಟ್ರಿಯಾ ದೇಶಗಳ ಗತಿಯನ್ನು ನಾನು ಪುನಹ ಹೇಳಬೇಕಾಗಿಲ್ಲ. ಡಿಗ್ರಿ ತೆಗೆದುಕೊಂಡವರಿಗಾಗಿ ಬಿಟ್ಟು ಪ್ರಾಂತೀಯತ್ವವೆಂಬ ಮುಸುಕಿನಲ್ಲಿ ಕವಿದುಕೊಂಡಿದ್ದುದರಿಂದ ಗೋಚರವಾಗಲಾರದು. ಇನ್ನು ದಿನಚರ್ಯೆಯಿಂದ ಕಲಿತುಕೊಂಡ ಅನುಭವದಿಂದ ಹೊಸ ಮಾದರಿಯ ಸರ್ಕಾರವನ್ನು ಇವರೇ ನಡೆಸುವವರಲ್ಲವೇ. 'ಅನುಭವವಂತೆ' ಕೊಡಗಿನ ಭವಿಷ್ಯದ ಐಶ್ವರ್ಯ! ಭವಿತವ್ಯದ ಭರವು! ಇವರ ಸೊಗಸು ಸೊಂಪನ್ನು ನೋಡಿರಿ! ಅನುಭವದಿಂದಲ್ಲವೇ ಸ್ಕೂಲ್ ಹುಡುಗರಿಗೆ ಶೇಕಡ 50ರಷ್ಟು ಫೀಜು ಹೆಚ್ಚು ಮಾಡಲಿಕ್ಕಿರುವರು. ಶೇಕಡ 50ರಷ್ಟು ಸ್ಕೂಲ್ ಉಪಾಧ್ಯಾಯರನ್ನು ಮನೆಗೆ ಕಳುಹಿಸುವುದು. ಇನ್ನು ಕಾನ್ಸ್ಟೇಂಟ್‌ಗಳನ್ನು ನಿರ್ಮೂಲ ಮಾಡುವದು. ಇದೇ ಅನುಭವದಿಂದ ಜನತೆಯ ಅಕ್ಷರತೆಯನ್ನು ಹೆಚ್ಚಿಸುವ ವಿಧಾನ. ಇನ್ನು ನಾಡು ಖಚೇರಿಗಳನ್ನು ತೆಗೆದು ಹಾಕಿ ಜನರನ್ನು ಕಂದಾಯ ಕಟ್ಟಲಿಕ್ಕಾಗಿ ಇಪ್ಪತ್ತೋ ಮೂವತ್ತೋ ಮೈಲುಗಳನ್ನು ನಡೆಯಿಸಲು ಮಾಡಿರುವರು. ಇವೆಲ್ಲಾ ಅನುಭವದಿಂದಲೇ ತಲೆದೋರಿರಬೇಕು. ಇನ್ನು ಕಾಂಗ್ರೆಸ್ಸಿನವರು ಮಂತ್ರಿಮಂಡಲವನ್ನು ನಿರ್ಮಿಸಿ ಅವರ ಅನುಭವವನ್ನು ಹೊರಹೊಮ್ಮಿಸಬೇಕು. ಕಾಂಗ್ರೆಸ್ಸಿನವರು ಜನರಿಗೆ ಊರೂರುಗಳಲ್ಲಿ ಎಷ್ಟು ಔಷಧೋಪಚಾರವನ್ನು ಸಲ್ಲಿಸಿರುವರು? ಕಾಫಿ ತೋಟದ ಸಂಬಳವು ಮೂರು ಆಣೆ ಮತ್ತು ನಾಲ್ಕಾಣೆ ಮಾತ್ರ. ಇದೆಲ್ಲವೂ ಕೊಡಗಿ ಕಾಂಗ್ರೆಸ್ಸಿನವರ ತತ್ವವು. ಇನ್ನು ಪ್ರತ್ಯೇಕ ಸರ್ಕಾರ, ಸ್ಥಳೀಯ ಸರ್ಕಾರ ಸಿಬ್ಬಂದಿ ಖೋತೆ! ಮಂತ್ರಿಮಂಡಲವನ್ನು ಸಂಪಾದಿಸುವ ಸಾಧನೆ. ಪ್ರಧಾನ ಸಚಿವರಾಗಿ ದಿನ ಚರ್ಯೆಯಿಂದ ಅನುಭವವನ್ನು ಪಡೆಯಬಹುದಲ್ಲವೇ?

ಪಾನನಿರೋಧನೆಯನ್ನು ಕಾಂಗ್ರೆಸ್ಸಿನವರು ತರಲಿಕ್ಕಿರುವರಂತೆ. ಇದರಿಂದ ಖೋತೆಯಾಗುವ ಮುನ್ನೂರು ಮೂರು ಲಕ್ಷ ರೂಪಾಯಿಯನ್ನು ಶಾಲೆಗಳನ್ನು ನಿರ್ಮೂಲ ಮಾಡಿಯೋ, ಶಾಲೆ ಹುಡುಗರ ಫೀಜನ್ನು ಹೆಚ್ಚು ಮಾಡಿಯೋ ಭರ್ತಿಮಾಡುವ ಆಲೋಚನೆ ಇದ್ದರೂ ಇರಬಹುದು. ಫಾರೆಸ್ಟು ಆದಾಯವಂತೂ ವರ್ಷ ವರ್ಷಕ್ಕೆ ಕಡಿಮೆಯಾಗುತ್ತದೆ. ಯೂರೋಪಿಯನರಿಗೂ ದೊಡ್ಡ ದೊಡ್ಡ ಜಮೀನ್ದಾರರಿಗೂ ತೆರಿಗೆಯನ್ನು ಹೆಚ್ಚು ಮಾಡಿದರೆ ಕಾಂಗ್ರೆಸ್ಸಿನವರ ಕಾರ್ಯಸಾಧಿಸುವುದಿಲ್ಲ. ಇನ್ನು ಬೊಂಬಾಯಿ ಮದ್ರಾಸು ಪ್ರಾಂತಗಳಲ್ಲಿರುವಂತೆ ವ್ಯಾಪಾರ ವಾಣಿಜ್ಯಗಳ ಮೇಲೆಯೋ ಅಥವಾ ಕೈಗಾರಿಕೆ ಗಿರಣಿ ಕಾರ್ಖಾನೆಗಳ ಮೇಲೆ ತೆರಿಗೆ ಹಾಕುವರೇ ಕೊಡಗಿನಲ್ಲಿ ಇವೇನೂ ಇರುವುದಿಲ್ಲ. ಅಂದ ಮೇಲೆ ಬಡ ರೈತರ ನಾಯಿಗಳ ಅಥವಾ ದನ ಕರುಗಳ ಮೇಲೆಯೋ ಅಥವಾ ಜನನ ಮರಣ, ಮದುವೆ ಹಬ್ಬಗಳಿಗೆ ತೆರಿಗೆ ಹಾಕಿ ಬಡ ರೈತರ ಬೆನ್ನ ಮೇಲೆ ಹೊಡೆದು ಇನ್ನೂ ಬಡಪಾಯಿಗಳನ್ನಾಗಿ ಮಾಡಲಿಚ್ಛಿಸಲೂ ಬಹುದು. ಇವೆಲ್ಲವೂ ಟೀಕಾಕಾರರ ಗೋಚರಕ್ಕೆ ಬಂದಿದ್ದರೆ ನನಗೆ ಗೋಚರಗೊಳಿಸುತ್ತಿದ್ದರು.

ಇನ್ನು ಕೊಡಗು ಸೀಮೆಯ ಫಲವತ್ತಿನ ಕುರಿತು ಒಂದು ಮಾತು. ಬೆಟ್ಟ ಗುಡ್ಡಗಳಿಂದಲೂ ಹೊದರು ಪಚ್ಚೆಗಳಿಂದಲೂ ಕೂಡಿದ ರಮಣೀಯವಾದ ಕೊಡಗು ಗಂಗಾನದಿಯ ದದಪಂಪೆಯೂ ಅಥವಾ ಕನ್ನಂಬಾಡಿ ಕಟ್ಟೆಯಿಂದ ನೀರು ಹಾಯಿಸಲ್ಪಟ್ಟ ನೀರಾವರಿಯೂ ಮೈಸೂರಿನ ವಿಶಾಲ ಮೈದಾನದಂತೆಯೂ ಫಲಭರಿತವಾಗಿಲ್ಲವೆಂದು ನನ್ನ ಊಹನೆ. ಇದನ್ನು ಒಪ್ಪಿಕೊಳ್ಳದವರಿದ್ದರೆ ಮೊದಲಿಗೆ ಅಂಕಿ ಸಂಖ್ಯೆಗಳನ್ನು ತೋರಿಸಿ ಮನನೀಯ ಮಾಡಬೇಕಾಗುವುದು. ದೂರ ದೇಶದಿಂದ ಬಂದವರು ಕೊಡಗಿನ ಹಸುರು ಪಚ್ಚೆಯ ಜಿಡಗು ಹೆಚ್ಚಳವನ್ನು ನೋಡಿ ಕೊಡಗಿನ ಮನೋಹರವನ್ನು ಹಾಕರಿಸಿ ಹೊಗಳಿದಲ್ಲದೆ ಫಲಭರಿತವಾದ ಸ್ಥಳವೆಂದು ಹೇಳಿದ ನೆನಪು ನನಗಿರುವುದಿಲ್ಲ; ಹೇಳುವರೆ ಸಾಧ್ಯವಿಲ್ಲವೆಂದೂ ನನಗೆ ಕಾಣುತ್ತದೆ. ಕೊಡಗಿನ ವಿಸ್ತೀರ್ಣಕ್ಕಿಂತ ಚಿಕ್ಕದಾದ ಅಂದರೆ 1500 ಚದರ ಮೈಲು ವಿಸ್ತೀರ್ಣವುಳ್ಳ ಕೊಚ್ಚಿನ್ ಅತ್ರೀತ ಸಂಸ್ಥಾನದ ಉತ್ಪತ್ತಿಯು ಒಂದು ಕೋಟಿ ರೂಪಾಯಿಗೆ ಮೀರಿದೆ. ಅದರ ಜನ ಸಂಖ್ಯೆಯೂ ಸಹಿತ ಕೊಡಗಿನಿಂದ ಎರಡರಷ್ಟಕ್ಕಿಂತ ಹೆಚ್ಚಿದೆ. ಕೊಡಗಿನ ವಿಸ್ತೀರ್ಣ 1600 ಚ. ಮೈಲಿ ಮತ್ತು ಅದರ ಉತ್ಪತ್ತಿ ಹನ್ನೆರಡು ಲಕ್ಷ ರೂಪಾಯಿ ಎಷ್ಟು ಅಜಗಜಾಂತರ ವ್ಯತ್ಯಾಸ. ಇನ್ನು ಕೊಡಗನ್ನು ಅತೀ ಫಲಭರಿತವಾದ ದೇಶವೆಂದು ಕರೆಯಲು ಸಾಧ್ಯವೇ? ತತ್ಪರಿಯಂತರ ಕೊಡಗಿನ ಉತ್ಪತ್ತಿಯನ್ನು ಮೇಲೆ ಹೇಳುವಂತೆ ಯಾವ ರೀತಿಯಲ್ಲಿ ಹೆಚ್ಚಿಸುವರೋ ಜನಗಳಿಸುವುದಿಲ್ಲ. ಟೀಕಾಕಾರರು ಇದೆಲ್ಲವನ್ನೂ ತಿಳಿದು ನನಗೆ 'ಗೋಚರಿಸುವರಾಗಿ' ನನ್ನ ದೃಢ ನಂಬಿಕೆ.

ಇವೆಲ್ಲಗಳ ವಿಷಯ ಇನ್ನೂ ಹೆಚ್ಚಿನ ರೀತಿಯಿಂದ ಬರೆದು ಟೀಕಾಕಾರರನ್ನು ಸಂತೈಸಬಲ್ಲೆನು. ತಕ್ಕ ಮಟ್ಟಿಗೆ 'ವಿಮರ್ಶೆ ಮಾಡಬಹುದಾಗಿಯೂ' ತೋರುತ್ತದೆ. ಆದರೆ ಸ್ಥಳಸಂಕೋಚದಿಂದ ಹಿಂದಿಟ್ಟಬೇಕಾಗುವುದು. ಇನ್ನೊಂದು ಮಾತನ್ನು ಹೇಳಿ ಈ ಉತ್ತರವನ್ನು ಮುಕ್ತಾಯಗೊಳಿಸುವೆನು. ಹರಿಪುರದ ರಂಪಿನಲ್ಲಿ ಕೊಡಗನ್ನು ಮದ್ರಾಸಿಗೂ, ಅಜಮೀರ್ ಮಾರವಾರವನ್ನು ಸಂಯುಕ್ತ ಪ್ರದೇಶಕ್ಕೂ, ಸೇರಿಸಿದ ಮೇಲೆ ಡಿಲ್ಲಿಯನ್ನು ಪಂಜಾಬಿಗೂ ಮತ್ತು ಬಲೂಚಿಸ್ತಾನವನ್ನು ಸಿಂಧು ಪ್ರಾಂತಕ್ಕೂ ಸೇರಿಸಬಹುದಾಗಿ ಹೇಳಿರುವರು. ಇದೆಲ್ಲವನ್ನೂ ನಾನು ಮೊದಲಿನ ಲೇಖನದಲ್ಲಿ ಕೊಟ್ಟಿದ್ದರೂ ಕೊನೆಯ ಎರಡು ಪ್ರಾಂತಗಳ ವಿಷಯ ಪ್ರಶ್ನಿಸಿರುವರು. ಟೀಕಾಕಾರರು ಹೇಳಿರುವಂತೆ ಶ್ರೀಯುತ ಕೃಪಾಲಿನಿಯವರು ಕೊ. ಕಾ. ಕ. ಕಾರ್ಯದರ್ಶಿಯವರಿಗಿತ್ತ ಉತ್ತರವನ್ನು ನೋಡಿರುವೆನು. ಅದರಲ್ಲಿ ಒಂದೆರಡು ಮಾತುಗಳು ಎದ್ದು ಕಾಣುವುದೆಂದರೆ 'ಕೊಡಗಿನ ಕಾಂಗ್ರೆಸ್ಸಿನವರು ಯಾವದೊಂದು ತರದ ಚಳವಳವನ್ನು ಮಾಡುವ ಅಗತ್ಯವಿಲ್ಲವೆಂದೂ ಸ್ವಾತಂತ್ರ್ಯ ಸಿಕ್ಕ ಮೊದಲನೆಯೇ ಪ್ರಾಂತಗಳ ಪುನಾರಚನೆ ಸಮಸ್ಯೆಗೆ ಜನಾಂಗದ ದೃಷ್ಟಿಯ ಬೀಳುವದೆಂದೂ' ಮತ್ತು 'ಕಾಂಗ್ರೆಸ್ ತತ್ವಕ್ಕನುಗುಣವಾಗಿ ಒಂದು ಅಧೀನ ಕಮಿಟಿಯು ಪ್ರಾಂತೀಕ ಕಮಿಟಿಯೊಡನೆ ಸಹಕಾರದಿಂದ ವರ್ತಿಸಬೇಕೆಂದು ನೀವು ತಿಳಿಯಿರಿ. ಆದ್ದರಿಂದ ನೀವು ಮಾಡುವ ಇನ್ನಾವ ಕಾರ್ಯದಲ್ಲಿಯೂ ದಯವಿಟ್ಟು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಆಲೋಚನೆಯನ್ನು ತೆಗೆದುಕೊಳ್ಳಿ' ಆಗಿವೆ. ಇದನ್ನು ನಾನು ವಿವರಿಸುವ ಅಗತ್ಯವಿಲ್ಲ. ಇದರಿಂದ ಕೊಡಗಿನ ಕಾಂಗ್ರೆಸ್ ಕಮಿಟಿಯವರು ಕೆ. ಪಿ. ಸಿ. ಸಿ. ಯ ಆಲೋಚನೆ ಇಲ್ಲದೆ ಇಷ್ಟರ ವರೆಗೆ ವರ್ತಿಸಿರುವರೆಂದೂ, ಇನ್ನಾದರೂ ಹಾಗೆ ಮಾಡದೆ ಅದರ ಧೋರಣೆಯಂತೆ ನಡೆಯಬೇಕೆಂದು ಭಾಸವಾಗುವುದು. ಆದುದರಿಂದ ಇನ್ನಾದರೂ ಕೊಡಗಿನ ಕಾಂಗ್ರೆಸ್ಸಿನವರು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಧ್ಯೇಯ-ಧೋರಣೆಗಳನ್ನು ತಿಳಿದುಕೊಂಡು ಕೆ. ಪಿ. ಸಿ. ಸಿ. ಯ ಹೇಳಿಕೆಯಂತೆ ವರ್ತಿಸುವರಾಗಿ ನನ್ನ ಭಾವನೆ. ಇಷ್ಟು ಹೇಳಿ ನನ್ನ ಟೀಕೆಯನ್ನು ಮುಗಿಸುವೆನು. ಅಂತೂ ಟೀಕೆಯ ಬಯಲಿನ ಬದಿಯನ್ನು ಮನವರಿಯದೆ ದಾಟಿದಲ್ಲಿ ಕ್ಷಮಿಸಬೇಕಾಗಿ ಟೀಕಾಕಾರರಲ್ಲಿ ನನ್ನ ವಿನಂತಿ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ..

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-34 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-49

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪೆನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ, ರಾಮಚಂದ್ರ ಕರ್ಕಿ.

ಮತ್ತು ಕಂಪೆನಿ,

(52-10) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

30 ಸಿ. ಹೆಚ್. ರಾಮುಣ್ಣಿ ವೈದ್ಯರ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಹಿ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಚಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,

ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಕೆ. ಮುದ್ದಮ್ಮಯ್ಯನವರು.

ಕುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ನಾಗಪ್ಪನವರು.

ನಾಪೋಕ್ಲು—ಮ. ಚೆಕ್ಕೆರಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಾಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ದಿ ಸೆಂಟ್ರಲ್ -ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ

(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ.
ಬಂಡವಾಳ	-	50,000	0	0
ಶ್ರೈ ಶೇರ್ ಮೊಬಲಗು	-	45,930	0	0
ಜಮಾಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ತ್ರಿಫ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟ್:-ಕುಂದ್ಯಂಡ ಐ ಬೆಳ್ಳಿಯಪ್ಪನವರು ಎಂ ಎಲ್ ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ:—ಮೆ. ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

" ಕೊಡಗು "

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13	„ 8.
1 ತಿಂಗಳಿಗೆ—	„ 25.	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು ?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು)

ಮೆ. ಎಲ್. ಎಫ್. ಸಿ. ಪಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

32-6

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೪—೨—೧೯೩೯.

ಸಂಪುಟ ೧೮] [ಸಂಚಿಕೆ ೩೮

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-11

ಚ್ಯವನಪ್ರಾಶ

ಚ್ಯವನಪ್ರಾಶವೆಂಬುದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ
ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಪಿತ್ತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ದಿವ್ಯವಾದದ್ದು.

ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿಮಾಂದ್ಯ ಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [27]

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಕಿರಿ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

14

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೆಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–38

The Agricultural & Industrial Bank Ltd

ಝಂಡೂರವರ	"ZANDU" ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ರಕ್ತವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟಾಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್ ಎ ಎಂ ಎಸ್

(52–22) ಮತ್ತು ಆಯುರ್ವೇದ ವಿದ್ವಾನ್

ವೀರರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರರಾಜಪೇಟೆ (ದ ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ'

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೪೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್. **ಚಾಮರಾಜಪೇಟೆ, ಬೆಂಗಳೂರು ಸಿಟಿ.**

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್). ಆಫಿಸಿಯೇಟಿಂಗ್ ಜನರಲ್ ಮ್ಯಾನೇಜರ್, **ಅಜ್ಮೀರ್.**

12–22

ವಿವಿಧ ವಿಚಾರ.

ವಿಚಿತ್ರ ಹಸುಗಳು.

ಹೆಚ್ಚಾಗಿ ತಿಂದು ಜೀರ್ಣಿಸಿಕೊಂಡು ಪುಷ್ಟಿಕರವಾಗಿಯೂ, ಹೆಚ್ಚಾಗಿಯೂ ಹಾಲನ್ನು ಹಸುಗಳು ಸಾಧಾರಣವಾಗಿ ಕೊಡುತವೆ. ಆದರೆ ರಷ್ಯಾದಲ್ಲಿ ಒಂದು ವಿಜಾತೀಯವಾದ ಹಸುಗಳಿವೆ. ಇವು ಸಾಧಾರಣ ಹಸುಗಳು ತಿನ್ನುವುದಕ್ಕಿಂತ ಅರ್ಧದಷ್ಟು ಮಾತ್ರವನ್ನು ತಿಂದು ಅವಕ್ಕಿಂತ ಎರಡರಷ್ಟು ಹಾಲನ್ನು ಕೊಡುವವಂತೆ. ಈ ಹಸುಗಳು ಎತ್ತರ ಅತಿಯೆಂದ್ದು ಎಂದರೆ 2½ ಅಡಿ ಅಷ್ಟೆ.

—oOo—

ಆಧುನಿಕ ಮೋಟಾರು.

ಬ್ರಿಟಿಷ್ ವಸ್ತು ಪ್ರದರ್ಶನಾಲಯದಲ್ಲಿ ಒಂದು ಕಾರಿಗೆ ಬಹುಮಾನವು ಕೊಡಲ್ಪಟ್ಟಿತು. ಯಾಕೆಂದರೆ ಬಂದಿದ್ದ ನೂರು ವಿವಿಧ ವಿಧಗಳಲ್ಲಿ ಇದೇ ಅತ್ಯುತ್ತಮವಾಗಿದ್ದಿತಂತೆ. ಈ ಕಾರಿನಲ್ಲಿ ಮಲಗಬಹುದು, ಊಟ ಮಾಡಬಹುದು, ಮೈ ತೊಳೆಯಬಹುದು ಇಷ್ಟೇ ಅಲ್ಲದೆ ಜೊತೆಗೆ ಮೋಟಾರು ವೇಗವಾಗಿ ಹೋಗುತ್ತಿದ್ದಾಗಲೂ ಕ್ಷೌರ ಸಹ ಮಾಡಿಸಿಕೊಳ್ಳಬಹುದಂತೆ!

ಒಂದು ದೊಡ್ಡ ಹಾಸಿಗೆಯೂ, ಸದಾ ಕಾಲದಲ್ಲೂ ಒದಗಿಸುವಂಥಾ ಬಿಸಿ ನೀರಿನ ಟ್ಯಾಂಕೂ, ಇನ್ನಿತರ ಶೃಂಗಾರ ಸಲಕರಣ ವಸ್ತುಗಳೂ ಈ ಕಾರಿನಲ್ಲಿವೆಯಂತೆ!

—oOo—

ಹುಳಿಯನ್ನು ಸಿಹಿ ಮಾಡುವ ವಿಚಿತ್ರ ಹಣ್ಣು.

ಯಾವ ಹುಳಿಯ ಪದಾರ್ಥವನ್ನೇ ಆಗಲಿ, ಸಿಹಿಯನ್ನಾಗಿ ಮಾಡಬಲ್ಲ ಹಣ್ಣು ಆಫ್ರಿಕದ ಉಷ್ಣವಲಯದ ಕಾಡುಗಳಲ್ಲಿ ದೊರೆಯುವುದು. ಇದರ ಹೆಸರು 'ರೆಡ್ ಬೆರಿ' ಎಂದು. ವಿಜ್ಞಾನ ಸಂಶೋಧಕರಿಗೆ ಇದು ಒಂದು ಸಮಸ್ಯೆಯಾಗಿಬಿಟ್ಟಿದೆ. ಎಷ್ಟೇ ಹುಳಿಯಾದ ನಿಂಬೆ ಹಣ್ಣಾಗಿದ್ದರೂ ಅದನ್ನು ಈ 'ರೆಡ್ ಬೆರಿ' ಎಂಬ ಸಣ್ಣಹಣ್ಣಿನ ಜೊತೆಯಲ್ಲಿ ಸೇವಿಸಿದರೆ ಸಿಹಿಯಾಗಿಬಿಡುವುದಂತೆ. ವಿಜ್ಞಾನ ಸಂಶೋಧಕರ ಅಭಿಪ್ರಾಯದಲ್ಲಿ ಆರ್ಥಿಕ ಮುಗ್ಗಟ್ಟು ಬಗೆಹರಿಸಲು ಇದು ಸಹಕಾರಿಯಾಗಬಹುದೆಂದು ಹೇಳಲಾಗಿದೆ.

—oOo—

ಭೂವಲಯದ ಪರಿಸ್ಥಿತಿಯು ತಿರುಗುಮುರುಗಾದೀತು.

ವಾಷಿಂಗ್‌ಟನ್ನಿನ 'ಕಾರ್ನೆಗಿ ಇನ್ಸ್ಟಿಟ್ಯೂಟಿನ ಟೆರೆಸ್ಟ್ರಿಯಲ್ ಮ್ಯಾಗ್ನೆಟಿಸಮಿನ ತಾಲೆಯ ಇಬ್ಬರು ಪ್ರಸಿದ್ಧ ವೈಜ್ಞಾನಿಕರು ಕ್ರಮೇಣ ಶೀತವಲಯಗಳು ಉಷ್ಣವಲಯಗಳಾಗಿಯೂ, ಉಷ್ಣವಲಯಗಳು ಶೀತವಲಯಗಳಾಗಿಯೂ ಮಾರ್ಪಡುವುದೆಂಬ ಒಂದು ವಿಚಿತ್ರ ತತ್ವವನ್ನು ಕಂಡುಹಿಡಿದಿರುವರು. ಅವರ ಈ ತತ್ವನುಸಾರವಾಗಿ ಶೀತವಲಯಗಳಲ್ಲಿನ ಹಿಮವು ಪ್ರವಹಿಸಿ ಆಫ್ರಿಕ ಮತ್ತು ದಕ್ಷಿಣ ಅಮೇರಿಕದಲ್ಲಿ ಒಟ್ಟಲ್ಪಟ್ಟು ಈ ಪ್ರದೇಶಗಳು ಶೀತ ಪ್ರದೇಶಗಳಾಗಿ ಮಾರ್ಪಡುವವಂತೆ.

ಕ್ರಮೇಣ ಉಷ್ಣವಲಯದ ನಿಗ್ರೋಗಳು ನಾಲ್ಕು ಕೋಟುಗಳನ್ನು ಧರಿಸಬೇಕಾಗಿಯೂ, ಶೀತ ಪ್ರದೇಶದ ನಿವಾಸಿಗಳಾದ ಎಸ್ಕಿಮೋ ಜನರು ಲಂಗೋಟಿಯನ್ನು ಧರಿಸಬೇಕಾಗಿಯೂ ಬರುವ ಸ್ಥಿತಿಯು ಕೇವಲ ಕಾಲ್ಪನಿಕವಾಗಿ ತೋರಿಬಂದರೂ ಹಲವು ವರ್ಷಗಳ ವೃಷ್ಟ್ಯನುಭವದ ದಾಖಲೆಗಳನ್ನು ಇವರು ಸಾಕ್ಷ್ಯವಾಗಿ ಸಂಗ್ರಹಿಸಿಟ್ಟಿರುವರು. ಕಾರ್ನೆಗಿ ಇನ್ಸ್ಟಿಟ್ಯೂಟಿನ ಒಂದು ಪುಟ್ಟ ಸಮುದ್ರಯಾನವು ಅನೇಕ ವರ್ಷಗಳಿಂದೀಚೆಗೆ ಅನೇಕ ಸಾಗರಗಳನ್ನು ಸುತ್ತಾಡಿ ಈ ದಾಖಲೆಗಳನ್ನು ಮಾಡಿದೆ.

—oOo—

'ಸಂಸ್ಥಾನಗಳ ಪ್ರಜೆಗಳು ಇನ್ನು ಗುಲಾಮಗಿರಿಗೆ ತಲೆಬಾಗಲು ಸಾಧ್ಯವಿಲ್ಲ. ಈಗಿನ ಸಂಸ್ಥಾನಗಳ ಹೋರಾಟವು ನರೇಂದ್ರರ ವಿರುದ್ಧವಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗೂ ಕಾಂಗ್ರೆಸಿಗೂ ನಡೆಯಬಹುದಾದ ಘರ್ಷಣೆಯ ಪೂರ್ವ ಚಿಹ್ನೆಯಿದು. ಗಾಂಧೀಜೀಯವರು ಚಳವಳದ ನಾಯಕತ್ವ ವಹಿಸಲಿರುವರು' ಎಂದು ಸಂಸ್ಥಾನ ಪ್ರಜಾ ಸಮ್ಮೇಳನದಲ್ಲಿ ಉದ್ಗರಿಸಿದ ಜವಾಹರಲಾಲರು.

—oOo—

ಬೇರುಗಳ ಉದ್ದಳತೆ 50 ಮೈಲುಗಳು.

ಓಟ್ಸ್, ಗೋಧಿ, ರೈ ಮುಂತಾದ ಧಾನ್ಯ ಗಿಡಗಳ ಬೇರುಗಳನ್ನು ಒಂದೊಂದಾಗಿ ಸಂಚಯಿಸಿಟ್ಟರೆ ಒಂದೇ ಒಂದು ಗಿಡದಲ್ಲಿರುವ ಬೇರುಗಳು 50 ಮೈಲುಗಳಷ್ಟು ಉದ್ದವಾಗುತ್ತವೆ. ಆರು ಅಂಗುಲ ಅಂತರದಲ್ಲಿ ನೆಡಲ್ಪಟ್ಟ ಗಿಡದ ಬೇರುಗಳೂ ಕೂಡ 49½ ಮೈಲುಗಳಿಗಿಂತ ಕಡಿಮೆ ಉದ್ದವಾಗಲಾರವು. ಹೀಗೆಂದು ರಾಯಲ್ ಹಾರ್ಟಿಕಲ್ಚರ್ ಸೊಸೈಟಿಯ ಮಾಸಿಕ ಪತ್ರಿಕೆಯಲ್ಲಿ ಒಬ್ಬ ಸಸ್ಯ ವಿಜ್ಞಾನಿಯು ಒಂದು ಲೇಖನವನ್ನು ಬರೆದಿರುವನು. ಸರಿ, 'ಗಿಡ ಸಣ್ಣದಾದರೂ, ಬೇರು ನೀಳ'ವೆಂದು ತಿಳಿಯಿತಲ್ಲವೇ?

—oOo—

ಮೂಗುದ್ದ.

ಇದೊಂದು ಹೆಸರಲ್ಲ. ಬದಲು ಉದ್ದ ಮೂಗಿನವನನ್ನು ನೀವು ಹೇಗೆ ಕರೆಯಬಹುದೆಂಬ ಸಲಹೆ. ಥಾಮಸ್ ವೆದ್ದರ್ಸ್ ಎಂಬಾತ ಯಾರ್ಕ್‌ಷಯರಿನವ. 18ನೇ ಶತಮಾನದಲ್ಲಿ ಜೀವಿಸಿದ್ದ. ಆತನ ಮೂಗೆಂದರೆ ಆಗ ಸುಪ್ರಖ್ಯಾತವಾಗಿದ್ದೆಂದು ಹೇಳುವುದೇನೂ ಇರದಷ್ಟು ವಸ್ತುವಾಗಿತ್ತು. ಅವರ ತುದಿ ಕೆಳ ತುಟಿಯನ್ನೂ ಮೀರಿ ಕೆಳಗಿಳಿದಿತ್ತೆಂದರೆ ಅವರ ಉದ್ದ ಎಷ್ಟೆಂದು ಬೇರೆ ಹೇಳಬೇಕಾಗಿಲ್ಲ. ಜಾತ್ರೆಗಳಲ್ಲಿ, ಸಂತೆಗಳಲ್ಲಿ, ಉತ್ಸವಗಳಲ್ಲಿ ಈ ಮೂರ್ತಿ ಈ ಮೂಗನ್ನು ಪ್ರದರ್ಶಿಸಿಯೇ ಜೀವನ ಸಾಗಿಸುತ್ತಿದ್ದ. ನಮ್ಮಲ್ಲಿ ನಾಲಗೆ ಉದ್ದದ ಕೆಲವು ಗಂಡಸರೂ ಹೆಂಗಸರೂ ಏಕೆ ಪ್ರದರ್ಶನಕ್ಕೆ ಮುಂದಾಗಬಾರದು?

—oOo—

ಶ್ವಾನ ಜಗತ್ತು.

ಶೂನ್ಯ ಜಗವೆಂದಲ್ಲವಾದುದರಿಂದ ಸಿಟ್ಟಾಗಬೇಕಿಲ್ಲ. ಸಂಯುಕ್ತ ಅಮೇರಿಕದಲ್ಲಿ ಲೈಸನ್ಸ್ ಹೊಂದಿ ನಾಯಿ ಸಾಕುವವರು ಮೂರು ಮಿಲಿಯ ಮಂದಿ. ಅಲ್ಲಿನ ಜನಸಂಖ್ಯೆ 45 ಮಿಲಿಯ. ಅಂದಲ್ಲಿ ಪ್ರತಿ 15 ಮಂದಿಗೊಂದರಂತೆ ನಾಯಿ ಸಾಕಲ್ಪಡುತ್ತಿದೆ. ಒಂದು ನಾಯಿಯನ್ನು ಸಲಹಲು ಕಡಿಮೆಯೆಂದರೆ ಒಟ್ಟಿನಲ್ಲಿ ಒಂದು ವರ್ಷಕ್ಕೆ 8 ಪವನು ಬೇಕು. 24 ಮಿಲಿಯ ಪವನು ಒಂದು ವರ್ಷಕ್ಕೆ ಎಂದಲ್ಲಿ ಸುಮಾರು 5 ಸಾವಿರ ಮಿಲಿಯ ಪವನಿನ ಬಡ್ಡಿಯಾಯಿತು. ಅದೇ 5 ಸಾವಿರ ಮಿಲಿಯ ಪವನಿನಿಂದ ಸಂಯುಕ್ತ ಅಮೇರಿಕದಲ್ಲಿನ ಸರ್ವ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೂ, ಸರ್ಕಾರಗಳೂ ಹೊಸದಾಗಿ ಕಟ್ಟಿಸಲು ಎಣಿಸಿದ ಕಟ್ಟಡಗಳನ್ನೂ, ಶುಚಿಪಡಿಸಲೆಳಸಿದ ಸ್ಥಳಗಳನ್ನೂ ಪೂರೈಸಬಹುದು. ಆದರೆ ಅದರ ಬದಲು ಶ್ವಾನಮಯ ಜಗತ್ತಾಗಿದೆ. ಅಲ್ಲಿ!

ಕಟ್ಟಿರುವೆಗಳ ಮದ್ಯಪಾನ.

ಇರುವೆಗಳ ಉದ್ಯೋಗ ಪ್ರಿಯತೆಯನ್ನು ಮನುಷ್ಯರಿಗೆಲ್ಲ ಆದರ್ಶವಾಗಿ ಎತ್ತಿ ತೋರಿಸುವುದು ವಾಡಿಕೆಯಾಗಿದ್ದಿತು. ಈ ಆದರ್ಶ ಜೀವಿಗಳೂ ಕೂಡ ಸ್ವಲ್ಪ ಖರ್ಚಿನ ಪ್ರಿಯರೇ ಎಂಬುವುದು ಈಗ ಬಯಲಿಗೆ ಬಂತು. ಡಾರ್ವಿನ್‌ನಲ್ಲಿ ಸಹಸ್ರಾರು ಬಿಳಿಯ ಕಟ್ಟಿರುವೆಗಳು ಒಂದು ಭವ್ಯವಾದ 'ಪಾನಕೂಟ'ವನ್ನೇ ಏರ್ಪಡಿಸಿಕೊಂಡು ಬಿಟ್ಟು, ಒಂದು ನೆಲಮಾಳಿಗೆಗೆ ಮುತ್ತಿಗೆ ಹಾಕಿ ಅಲ್ಲಿ 80 ಪೀಪಾಯಿಗಳಲ್ಲಿ ಭರ್ತಿಯಾಗಿದ್ದ ಮದ್ಯವನ್ನು ವಶಪಡಿಸಿಕೊಂಡು ಒಂದು ತೊಟ್ಟೂ ಬಿಡದ ಹೀರಿಯೇಬಿಟ್ಟವು. ಈ ಸಂತೋಷಕೂಟಕ್ಕೆ ತಗಲಿದ ವೆಚ್ಚ 250 ಪೌಂಡು.

—oOo—

70 ಟನ್ ತಿಂಡಿ!

ನಾವು ತಿಂದ ವಿಚಾರವಲ್ಲ. ಬ್ರಿಟಿಷರು ತಿನ್ನುವುದನ್ನು ಲೆಕ್ಕ ಹಾಕೋಣ. ಒಬ್ಬ ಬಿಳಿ ಮನುಷ್ಯ 70 ವರ್ಷ ಬದುಕಿದನೆಂದಾದರೆ ಆ ಕಾಲದಲ್ಲಿ ಆತನು ಈ ರೀತಿಯಾಗಿ ತಿಂದುಬಿಡುವ. ಒಟ್ಟು ಆತ 70 ವರ್ಷಗಳಲ್ಲಿ ತಿನ್ನುವ ರೊಟ್ಟಿ 3 ಟನ್, ಬ್ರೆಡ್ 6 ಟನ್, ಮಾಂಸ 6 ಟನ್, ಹಾಲು 6 ಟನ್, ಮಾದಕ ದ್ರವ್ಯ ಬೀರ್ ಇತ್ಯಾದಿ 8 ಟನ್, ಬೆಣ್ಣೆ 1½ ಟನ್, ಜಾಮ್ (ಹಣ್ಣಿನ ಹಲ್ವ) 1 ಟನ್, ನೀರು 27 ಟನ್, ಚಹಾ ½ ಟನ್, ಕಾಫಿ ½ ಟನ್, ಬಟಾಟೆ 4½ ಟನ್, ಕಾಯಿಪಲ್ಯಗಳು 3½ ಟನ್, ಹಂದಿ ಮಾಂಸ ½ ಟನ್, ಸಕ್ಕರೆ 1½ ಟನ್, ಉಪ್ಪು ¼ ಟನ್ ಮತ್ತು ಇತರ ತಿಂಡಿಗಳು ಹಾಗೂ ಸಿಹಿ ಪದಾರ್ಥಗಳು 1½ ಟನ್, ಒಟ್ಟು 70 ಟನ್. ಇವುಗಳಲ್ಲದೆ ಆತ 650 ಬೆಂಕಿ ಪೆಟ್ಟಿಗೆಗಳು, 2 ಲಕ್ಷ ಸಿಗರೇಟುಗಳು, 210 ಡಜನ್ ಬ್ಲೇಡುಗಳು ಮತ್ತು ರಾಶಿ ಮುಟ್ಟಿನ ಚರ್ಮ ಉಪಯೋಗಿಸುತ್ತಾನೆ. ನೀವು ತಿನ್ನುವ ವಸ್ತುವೆಷ್ಟೆಂದು ಜೋಯಿಸರನ್ನು ಕೇಳಿ ಲೆಕ್ಕ ಹಾಕಿ!

—oOo—

ಹಿಟ್ಲರನೊಡತಿ.

ಹಿಟ್ಲರನಿಗೆ ವಿವಾಹವಾಗಿಲ್ಲ. ಆದ್ದರಿಂದ ಸರ್ವಾಧಿಕಾರಿ ಇರಲು ಆತನು ಆದಾರ ಅಂತಹ ಭಾಗಿಲ್ಲ. ಹಾಗಿರಲು ಆತನ ಒಡತಿ ಯಾರೆಂದು ನೀವು ಆಶ್ಚರ್ಯಗೊಳ್ಳಬಹುದು. ಆತ ಹೀಗಿದ್ದರೂ ತನ್ನ ಪ್ರತಿಯೊಂದು ಕಾರ್ಯಕ್ಕೂ ಒಬ್ಬಳ ಸಲಹೆ ಕೇಳುತ್ತಿದ್ದಾನೆ. ಆಕೆ ಭವಿಷ್ಯವಾದಿ ಫ್ರಾ. ಎಕ್ಸ್. ಆಕೆ ನುಡಿದ ಭವಿಷ್ಯದಂತೆ ನಡೆಯುವುದೇ ಹಿಟ್ಲರನ ನಡತೆಯಾಗಿದೆ. 1932ರಲ್ಲಿ ಆಕೆ ಹಿಟ್ಲರನಿಗೆ ಚುನಾವಣೆಯಲ್ಲಿ ಜಯವಿದೆ ಎಂದಳು. ಜಯ ಉಂಟಾಯಿತು. ಆತ ಸರ್ವಾಧಿಕಾರಿಯಾದ. ಕಳೆದ ಸೆಪ್ಟೆಂಬರ್ 28ರಲ್ಲಿ ನಡೆದ ಜೆಕೊಸ್ಲೋವಾಕಿಯದ ಆಂದೋಲವನ್ನು ಆಕೆ ಆತನಿಗರುಹಿ ಜಯ ಸಿದ್ಧವೆಂದಳು. ಇಂದು 1939ರ ವಿಚಾರದಲ್ಲೂ ಅದೇ. 'ಜಗಳವಾಗದೆ ಇರದು. ಆದರೆ ಸೈನ್ಯದ ಸಹಾಯ ಅಧಿಕ. ಹಿಟ್ಲರನಿಗೆ ಅತೀ ದೊಡ್ಡ ಗೆಲವು ಉಂಟಾಗುವದು. ಏಪ್ರಿಲ್ 20 ಮಹತ್ವವಾದ ದಿನ! ಯುದ್ಧವಿದೆಯಾದರೂ ಜರ್ಮನಿ ಸೇರಿಕೊಳ್ಳದು. ಏಪ್ರಿಲ್ 20ಕ್ಕೆ ಮೊದಲು ಜಗತ್ಪ್ರಖ್ಯಾತ ವ್ಯಕ್ತಿಯೊಬ್ಬನ ಮರಣದಿಂದ ಹಿಟ್ಲರನ ಸಾಹಸ ಅಜರಾಮರವಾಗುವುದು' ಎಂದು ಆಕೆ ನುಡಿದಿದ್ದಾಳೆ. ಯುದ್ಧ ಬರುವುದನ್ನು, ಯಾವುದೇ ಒಂದು ರಾಷ್ಟ್ರ ಹಿಟ್ಲರನ ಅಂಕೆಗೆ ಸೇರುವುದನ್ನು ನಾವು ನೋಡಬಹುದು!

—oOo—

ಕೊಡಗಿನ ಚರಿತ್ರೆಯ ಕಥೆಗಳು.

ನಾಲ್ಕುನಾಡು ಅರಮನೆ.

ಲೇಖಾಂಕ 16.

(ಡಿ. ಎನ್. ಕೃಷ್ಣಯ್ಯ ಯಂ. ಎ., ಬಿ. ಇ. ಡಿ.)

(ಎಲ್ಲಾ ಹಕ್ಕುಗಳೂ ಕಾಯ್ದಿಡಲ್ಪಟ್ಟಿವೆ.)

ಕ್ರಿಸ್ತಶಕ 1792 ನೆಯ ಇಸವಿ. ವೀರರಾಜೇಂದ್ರನು ಶ್ರೀರಂಗಪಟ್ಟಣದ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದು ಮೂರು ನಾಲ್ಕು ವರ್ಷಗಳಾಗಿದ್ದವು. ಆದರೂ ಅವನಿಗೆ ವಾಸಿಸುವುದಕ್ಕೆ ಸುರಕ್ಷಿತವಾದ ಸ್ಥಳವೊಂದೂ ಈ ವರೆಗಿರಲಿಲ್ಲ. ವೀರರಾಜನು ಸೆರೆಮನೆಯಲ್ಲಿದ್ದಾಗ ಮುಸಲ್ಮಾನರ ಸ್ವಾಧೀನದಲ್ಲಿದ್ದ ದೇಶವು ಇನ್ನೂ ಪೂರ್ತಿಯಾಗಿ ಅವರ ಕೈತಪ್ಪಿರಲಿಲ್ಲ. ವೀರರಾಜನು ಕೊಡಗಿಗೆ ಬಂದಂದಿನಿಂದ ಅವರೊಡನೆ ಯುದ್ಧ ಮಾಡುತ್ತಲೇ ಇದ್ದನು. ಅವರೊಡನೆ ನಿಶ್ಚಿಂತೆಯಿಂದ ಕಾದಬೇಕಾದರೆ ಅವನಿಗೆ ತನ್ನ ಕುಟುಂಬದ ಜನರನ್ನು ಎಲ್ಲಿಯಾದರೂ ಭದ್ರವಾದ ಸ್ಥಳದಲ್ಲಿಡಬೇಕಾಗಿದ್ದಿತು. ಈ ಸಮಯದಲ್ಲಿ ಅವನ ಕುಟುಂಬದ ಕೆಲವು ಜನರು ಕುರ್ಚಿ ಗ್ರಾಮದ ಅರಮನೆಯಲ್ಲಿಯೂ, ಕೆಲವರು ಬಿರುನಾಣಿಯ ಹತ್ತಿರದ ಅರಮನೆಯಲ್ಲಿಯೂ ಇರುತ್ತಿದ್ದರು. ಇವೆರಡು ಸ್ಥಳಗಳಿಗೂ ಶತ್ರುಗಳಿಗೆ ಬರುವುದಕ್ಕೆ ಕಷ್ಟವಾಗಿರಲಿಲ್ಲ. ಆದುದರಿಂದ ವೀರರಾಜನಿಗೆ ಹೊಸದೊಂದು ಶತ್ರುಗಳಿಗೆ ದುರ್ಗಮವಾದ ಸ್ಥಳವನ್ನು ಅರಮನೆ ಕಟ್ಟುವುದಕ್ಕೆ ಕಂಡು ಹಿಡಿಯಬೇಕಾಗಿದ್ದಿತು. ಆದಕ್ಕಾಗಿ ಆತನು ಬಹಳ ಆಲೋಚನೆ ಮಾಡುತ್ತಿದ್ದನು.

ಹೀಗೆ ಯೋಚಿಸುತ್ತಾ ರಾಜನು ಬಿರುನಾಣಿಯ ಹತ್ತಿರದ ಅರಮನೆಯಲ್ಲಿರುವಾಗ ರಾಜನ ಒಬ್ಬ ಆಪ್ತ ಕಾರ್ಯಕಾರನಾದ ಕೇಟೋಳಿರ ಅಚ್ಚುವಣ್ಣನು 'ಪಾಡಿನಾಲ್ಕುನಾಡಿನ ಯವಕಪಾಡಿ ಗ್ರಾಮದಲ್ಲಿ ತಮ್ಮ ಮನೆಯ ಮೇಲೆ ಒಂದು ಗುಡ್ಡದಲ್ಲಿ ಅರಮನೆಯನ್ನು ಕಟ್ಟಬಹುದು. ಆ ಸ್ಥಳವು ಶತ್ರುಗಳಿಗೆ ಸುಲಭವಾಗಿ ಹಿಡಿಯುವುದಕ್ಕೆ ಸಾಧ್ಯವು' ಎಂದು ಹೇಳಿದನು. ಈ ಮಾತನ್ನು ಕೇಳಿ ರಾಜನು ಸಂತೋಷಪಟ್ಟು ಅವನ ಮಾತಿನಂತೆಯೇ ಯವಕಪಾಡಿ ಗ್ರಾಮಕ್ಕೆ ಬಂದು ಆ ಸ್ಥಳವನ್ನು ನೋಡಿದನು. ಅಚ್ಚುವಣ್ಣನು ಹೇಳಿದ ಹಾಗೆ ಆ ಸ್ಥಳವು ಶತ್ರುಗಳಿಗೆ ದುರ್ಭೇದ್ಯವಾಗಿತ್ತು. ಕಾಡುಗಳ ಮಧ್ಯೆ ಒಂದೊಂದು ಚಿಕ್ಕ ದೊಡ್ಡ ಗುಡ್ಡಗಳು, ಗುಡ್ಡಗಳ ನಡುವೆ ಆಳವಾದ ಜರಿಗಳು, ಕೊಲ್ಲಿಗಳು, ಆ ಸ್ಥಳಕ್ಕೆ ಪ್ರಕೃತಿನಿರ್ಮಿತವಾದ ಅಗಳು ಕಂದಕಗಳ ಹಾಗೆ ತೋರುತಲಿದ್ದವು, ಅಲ್ಲಲ್ಲಿ ಚಿಕ್ಕ ದೊಡ್ಡ ಹೊಳೆಗಳೂ ಹರಿಯುತ್ತಲಿದ್ದವು. ಈ ಕಾಡುಗಳೂ, ಗುಡ್ಡಗಳೂ ಎಷ್ಟೋ ಮೈಲುಗಳ ವರೆಗೆ ವಿಸ್ತರಿಸಿದ್ದು ಅಲ್ಲಿಗೆಬರೇ ಒಂದೆರಡು ಕಾಲುದಾರಿಗಳಿದ್ದವು. ಈ ಕಾಲುದಾರಿಯು ತಿಳಿಯದವರಿಗೆ ಆ ಕಾಡಿನಲ್ಲಿ ಎಷ್ಟು ಸುತ್ತಿದರೂ ಆ ಸ್ಥಳವು ಸಿಕ್ಕುವಂತಿರಲಿಲ್ಲ. ಅಲ್ಲಿನ ಸೃಷ್ಟಿಸೌಂದರ್ಯವು ಬಹು ರಮಣೀಯವಾಗಿದ್ದಿತು, ದೂರದಲ್ಲಿ ನೀಲ ಬಣ್ಣದಿಂದ ಶೋಭಿಸುತ್ತಲಿದ್ದ ಬೆಟ್ಟಸಾಲುಗಳೂ, ಹತ್ತಿರದಲ್ಲಿ ಹಸುರು ಹೆಚ್ಚುಗಳಿಂದ ನಯನಮನೋಹರವಾದ ಗಿರಿಕಂದರಗಳೂ ನೋಟಕರ ಮನಸ್ಸನ್ನಾಕರ್ಷಿಸುತಲಿದ್ದವು. ಇಂಥಾ ಸ್ಥಳವನ್ನು ನೋಡಿ ವೀರರಾಜನಿಗೆ ಬಹಳ ಸಂತೋಷವಾಯಿತು. ಆತನು ಅಲ್ಲಿಯೇ ತನ್ನ ಅರಮನೆಯನ್ನು ಸ್ಥಾಪಿಸುವುದೆಂದು ನಿಶ್ಚೈಯಿಸಿದನು.

ಆದರೆ ಸ್ಥಳವೂ ಅದರ ಸುತ್ತು ಮುತ್ತಲು ಸ್ವಲ್ಪ ಬೈಲು ಮತ್ತು ಕಾಡುಗಳು ಪುಲಿಯಂಡ ಮನೆಯವರಿಗೆ ಸೇರಿದ್ದಿತು. ವೀರರಾಜನು ಪುಲಿಯಂಡ ಮನೆಯ ಪಟ್ಟೆದಾರನಾದ ಪೊನ್ನಪ್ಪನನ್ನು ಕರೆದು ಆ ಸ್ಥಳವನ್ನು ಅರಮನೆ ಕಟ್ಟುವುದಕ್ಕೋಸ್ಕರ ಕೊಡಬೇಕೆಂತಲೂ ಅವನಿಗೂ ಅವನ ಕುಟುಂಬದವರಿಗೂ ಯವಕಪಾಡಿಯಲ್ಲಿರುವ ಆಸ್ತಿಯ ಬದಲಾಗಿ ಎಡೆನಾಲ್ಕುನಾಡು ಮಗ್ಗುಲ ಗ್ರಾಮದಲ್ಲಿ ಭೂಮಿ ಕೊಡುವುದಾಗಿಯೂ ಹೇಳಿದನು. ಪೊನ್ನಪ್ಪನು ಮಾಡುವುದೇನು? ರಾಜಾಜ್ಞೆಯನ್ನು ಮೀರಿದರೆ ಏನು ಕೇಡುಕು ಸಂಭವಿಸುವುದೋ ತಿಳಿಯದು. ಆದುದರಿಂದ ಪೊನ್ನಪ್ಪನು ರಾಜನ ಮಾತಿನಂತೆ ಯವಕಪಾಡಿಯ ತಮ್ಮ ಆಸ್ತಿಯನ್ನು ಬಿಟ್ಟು ಕೊಟ್ಟನು. ರಾಜನು ಅವನಿಗೆ ಮಗ್ಗುಲ ಗ್ರಾಮದಲ್ಲಿ ಭೂಮಿ ಕೊಟ್ಟು ಪುಲಿಯಂಡ ಮನೆ ಜನರನ್ನು ಅಲ್ಲಿಗೆ ಕಳುಹಿಸಿದನು.

ಆದರೆ ಇವರಲ್ಲಿ ಒಬ್ಬನಿಗೆ ಮಾತ್ರ ತನ್ನ ಹಿರಿಯರು ಮಾಡಿಟ್ಟ ಭೂಮಿ ಮನೆಗಳನ್ನು ಬಿಟ್ಟು ಹೋಗುವುದಕ್ಕೆ ಮನಸ್ಸು ಬರಲಿಲ್ಲ. ಈತನು ಪೊನ್ನಪ್ಪನ ತಮ್ಮ ಕಾರ್ಯಪ್ಪನು. ಇವನನ್ನು ಚಿಕ್ಕಂದಿನಿಂದ ಜನರೆಲ್ಲರೂ ಕಾರಿಚ್ಚನೆಂದು ಕರೆಯುತ್ತಿದ್ದರು. ಕಾರಿಚ್ಚನಿಗೆ ರಾಜನು ತಮ್ಮ ಹಿರಿಯರ ಮಣ್ಣು ಮನೆಗಳಿಂದ ತಮ್ಮನ್ನು ಮಗ್ಗುಲಕ್ಕೆ ಕಳುಹಿಸಿದನಲ್ಲಾ ಎಂಬ ಚಿಂತೆಯೂ ಕೋಪವೂ ಬಾಧಿಸುತ್ತಿದ್ದವು. ಆದುದರಿಂದ ಆತನು ತನ್ನ ಕುಟುಂಬದವರೆಲ್ಲಾ ನಾಲ್ಕುನಾಡನ್ನು ಬಿಟ್ಟು ಹೋದರೂ ತಾನು ಮಾತ್ರ ಅಲ್ಲಿಂದ ಹೊರಡಲಿಲ್ಲ. ಈ ಸಮಯದಲ್ಲಿ ಅರಮನೆಯ ಕೆಲಸವು ಪ್ರಾರಂಭವಾಗಿದ್ದಿತು. ಕಾರಿಚ್ಚನು ಹಗಲೆಲ್ಲಾ ಕಾಡಿನಲ್ಲಿ ಅಡಗಿಕೊಂಡಿದ್ದು ರಾತ್ರಿ ಹೊತ್ತು ಹೊರಕ್ಕೆ ಬರುತ್ತಿದ್ದನು. ರಾತ್ರಿ ತನ್ನ ಆತಿ ಆಪ್ತರ ಮನೆಯಲ್ಲಿ ಊಟ ತೀರಿಸಿಕೊಂಡು ಸುಮಾರು ಮಧ್ಯ ರಾತ್ರಿಗೆ ಸರಿಯಾಗಿ ಅರಮನೆ ಕಟ್ಟಡದ ಮುಂಭಾಗಕ್ಕೆ ಹೋಗುತ್ತಿದ್ದನು. ಅರಮನೆ ಕಟ್ಟಡದ ಎದುರಿನಲ್ಲಿ ಒಂದು ದೊಡ್ಡ ಮಾವಿನ ಮರವು ಬೆಳೆದಿತ್ತು. ಈ ಮರವು ಬಹಳ ಎತ್ತರ ಬೆಳೆದು ತುಂಬಾ ಕೊಂಬೆಗಳಿಂದಲೂ ಕೂಡಿತ್ತು. ಈ ಮರದ ಸಮೀಪದಲ್ಲಿಯೇ ಒಂದೆರಡು ಚಿಕ್ಕ ಮರಗಳು ಬೆಳೆದಿದ್ದು ಇದರ ಕೆಲವು ಕೊಂಬೆಗಳು ಆ ಮರಗಳ ತುದಿಯನ್ನು ಮುಟ್ಟಿಕೊಂಡಿದ್ದವು. ಕಾರಿಚ್ಚನು ಮಧ್ಯ ರಾತ್ರಿಯಲ್ಲಿ ಈ ಮರವನ್ನು ಹತ್ತಿ ಕುಳಿತುಕೊಂಡು ಗಟ್ಟಿಯಾಗಿ 'ಈ ಹಾಳು ರಾಜನು ನಮ್ಮ ಹಿರಿಯರ ಭೂಮಿ ಮನೆಗಳಿಂದ ನಮ್ಮನ್ನು ಓಡಿಸಿದನಲ್ಲಾ, ಅವನಿಗೆ ಒಳ್ಳೆಯದು ಆಗದೇ ಹೋಗಲಿ, ಅವನ ಕುಟುಂಬವು ಉದ್ಧಾರವಾಗದೇ ಹೋಗಲಿ,' ಎಂದು ಮನಂತಾಗಿ ಬಯ್ಯುತ್ತಾ ಇದ್ದನು. ಹೀಗೆ ಕಾರಿಚ್ಚನು ಬಹಳ ದಿವಸಗಳ ವರೆಗೆ ಬಯ್ಯುತ್ತಾ ಇದ್ದನು. ಮೊದಲು ಮೊದಲು ಅರಮನೆ ಕೆಲಸ ಮಾಡುತ್ತಿದ್ದವರು ಇದಕ್ಕೆ ಏನೂ ಲಕ್ಷ್ಯ ಕೊಡಲಿಲ್ಲ. ರಾತ್ರಿ ಯಾರೋ ಜಗಳವಾಡುವುದೇನು ಆಲೋಚನೆ ಮಾಡಿದರು. ಎರಡು ಮೂರು ದಿವಸಗಳಾದ ನಂತರ ಒಬ್ಬೊಬ್ಬರಿಗೆ ಕಾರಿಚ್ಚನು ರಾಜನನ್ನು ಬಯ್ಯುವುದು ಸ್ಪಷ್ಟವಾಗಿ ತಿಳಿಯ ಬಂತು. ಆಗ ಅವರು ಈ ವಿಷಯವನ್ನು ರಾಜನಿಗೆ ತಿಳುಹಿಸಿದರು. ರಾಜನು ಆ ಕೆಲಸಗಾರರಿಗೆ ತನ್ನನ್ನು ಬಯ್ಯುತ್ತಿರುವ ಆ ಮನುಷ್ಯನನ್ನು ಹಿಡಿದು ತರುವಂತೆ ಅಪ್ಪಣೆಮಾಡಿ ಬಿಟ್ಟು ತಾನು ಟಿಪ್ಪುವಿನ ಸೈನಿಕರೊಡನೆ ಯುದ್ಧ ಮಾಡುವುದಕ್ಕೆ ಹೊರಟು ಹೋದನು. ಈ ಸಮಯದಲ್ಲಿ ಆ ಕೆಲಸಗಾರರು ಕಾರಿಚ್ಚನನ್ನು ಹಿಡಿಯುವುದಕ್ಕೆ ಬಹಳ ಸಾಹಸಪಟ್ಟರು. ಸಾಯಂಕಾಲವಾಗುತ್ತಲೇ ಕೆಲಸಗಾರರು ಎರಡು ಮೂರು ಜನರು ಆ ಮರದ ಬುಡದಲ್ಲಿ ಕುಳಿತು ಕಾರಿಚ್ಚನು ಬರುವುದನ್ನೇ ಕಾಯುತ್ತಿದ್ದರು. ಅಂಥಾ ರಾತ್ರಿಗಳಲ್ಲಿ ಕಾರಿಚ್ಚನ ಸುಳಿವೇ ಇರುತ್ತಿರಲಿಲ್ಲ. ಕೆಲವು ರಾತ್ರಿ ಪಹರೆಯವರು ಬಹಳ ಹೊತ್ತು ಕಾದಿದ್ದು ಇನ್ನು ಕಾರಿಚ್ಚನು ಬರುವುದಿಲ್ಲವೆಂದು ನಿಶ್ಚಯಮಾಡಿ ಹೋಗಿ ಮಲಗಿದ ನಂತರ ಅವನು ಮರವನ್ನು ಹತ್ತಿ ಎಂದಿನಂತೆ ರಾಜನನ್ನು ಬಯ್ಯುವುದಕ್ಕೆ ತೊಡಗುತ್ತಿದ್ದನು. ಇವನು ಮರದಿಂದ ಎಷ್ಟು ಹೊತ್ತಿಗೆ ಇಳಿದು ಹೋಗುತ್ತಾನೆಂದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಇವನು ಮರದಿಂದ ಇಳಿಯುವಾಗ ತಮಗೆ ಸಿಕ್ಕದೆ ಎಲ್ಲಿ ತಪ್ಪಿಸಿಕೊಂಡು ಹೋಗುವನು ಎಂದು ಕಾವಲಿನವರು ನಿರೀಕ್ಷಣೆಯಲ್ಲಿದ್ದಾಗ ಕಾರಿಚ್ಚನು ಬೇರೆ ಮರಗಳ ಕೊಂಬೆಗಳಿಗೆ ದಾಟಿಕೊಂಡು ಇಳಿದು ಹೋಗಿ ಬಿಡುತ್ತಿದ್ದನು.

ಹೀಗೆಯೇ ಅನೇಕ ದಿವಸಗಳು ಕಳೆದವು. ಇಷ್ಟರಲ್ಲಿ ವೀರರಾಜನು ಹಿಂತಿರುಗಿ ನಾಲ್ಕುನಾಡು ಅರಮನೆಗೆ ಬಂದನು. ಆಗ ಕಾರಿಚ್ಚನು ಬಯ್ಯುವುದು ಇನ್ನೂ ಹೆಚ್ಚಾಯಿತು. ಕೆಲಸಗಾರರು ತಮಗೆ ಕಾರಿಚ್ಚನನ್ನು ಹಿಡಿಯಲು ಸಾಧ್ಯವಿಲ್ಲವೆಂದು ಹೇಳಿದರು. ಆಗ ವೀರರಾಜನು ತನ್ನ ಸುತ್ತ ಮುತ್ತಲಿದ್ದ ಕಾರ್ಯಕಾರರನ್ನು ನೋಡಿ 'ಆತನನ್ನು ಹಿಡಿಯುವುದಕ್ಕೆ ಏನು ಉಪಾಯ ಮಾಡುವುದು' ಎಂದು ಕೇಳಿದನು. ಆಗ ಒಬ್ಬ ಕಾರ್ಯಕಾರನು, ಮಹಾಸ್ವಾಮಿ, ಅದೇನು ಅಷ್ಟು ಕಷ್ಟದ ಕೆಲಸವಲ್ಲ. ಈಗ ಹೊಸದಾಗಿ ಇಲ್ಲಿಗೆ ಮಲೆಯಾಳದಿಂದ ಕಾಪಾಳರೆಂಬ ಹೊಸ ಜನರು ಬಂದಿದ್ದಾರೆ. ಅವರು ಎಂಥಾ ಮರವನ್ನಾದರೂ ಸುಲಭವಾಗಿ ಹತ್ತುವರು. ಅವರಿಗೆ ಈ ಕೆಲಸವನ್ನು ಒಪ್ಪಿಸಿದರೆ ಅವರು ಕಾರಿಚ್ಚನನ್ನು ಒಂದೆರಡು ದಿವಸಗಳಲ್ಲಿ ಹಿಡಿದು ಮಹಾಸ್ವಾಮಿಯವರ ಪಾದಗಳ ಮೇಲೆ ಬೀಳಿಸುವರು ಎಂದನು.

ವೀರರಾಜ—ಅವರು ಎಲ್ಲಿರುವರು?

ಕಾರ್ಯಕಾರ—ಅವರು ನಾಲಡಿಯಲ್ಲಿ ಪರದಂಡ [illegible] ಹತ್ತಿರವಿದ್ದಾರೆ. ಅವರು ಮಲೆಯಾಳದಿಂದ ಬಂದು ಒಂದು ತಿಂಗಳಾಯಿತು.

ವೀರರಾಜ—[illegible] ಹಾಗಾದರೆ ಅವರನ್ನು ಕರೆಸಿ ಆ [illegible]ನನ್ನು ಹಿಡಿಸಬೇಕು' ಎಂದು [illegible] ಕೂಡಲೇ ಪರದಂಡ ಮನೆಯ ಕಾರ್ಯಕಾರನಿಗೆ ಅಜ್ಞೆ ಮಾಡಿದನು. [illegible] ಮನೆಯ ಕಾರ್ಯಕಾರನು ತತ್‌ಕ್ಷಣವೇ ಆಳುಗಳನ್ನು ಕಳುಹಿಸಿ ಇಬ್ಬರು ಕಾಪಾಳರನ್ನು ಕರೆಸಿದನು. ಆಗ ರಾಜನು ಅವರಿಗೆ ಕಾರಿಚ್ಚನ ವಿಷಯವನ್ನು ಹೇಳಿ ಅವನನ್ನು ಹಿಡಿಯುವುದಕ್ಕೆ ಅಪ್ಪಣೆ [illegible]. ಅವರು ಆ ಮರವನ್ನು ಅದರ ಸುತ್ತು ಮುತ್ತಲಿನ ಮರಗಳನ್ನೂ ನೋಡಿಕೊಂಡು ಬಂದು ರಾಜನೊಡನೆ ತಮಗೆ ಎರಡು ಕರಿಕಂಬಳಿಗಳನ್ನು ಕೊಡಿಸಬೇಕೆಂದು ಕೇಳಿದರು. ಹಾಗೆಯೇ ರಾಜನು ಅವರಿಗೆ ಕರಿಕಂಬಳಿಗಳನ್ನು ಕೊಡಿಸಿದನು.

ಆ ದಿವಸ ರಾತ್ರಿ ಈ ಕಾಪಾಳರು ಕರಿಕಂಬಳಿಗಳನ್ನು ಹೊದೆದುಕೊಂಡು ಆ ಮಾವಿನ ಮರದ ಹತ್ತಿರ ಒಂದು ಪೊದೆಯಲ್ಲಿ ಅಡಗಿಕೊಂಡರು. ಆದರೆ ಆ ರಾತ್ರಿ ಕಾರಿಚ್ಚನು ಯಾವ ಕಾರಣದಿಂದಲೋ ಅಲ್ಲಿಗೆ ಬರಲಿಲ್ಲ. ಮಾರನೆ ದಿವಸ ಕೃಷ್ಣಪಕ್ಷದ ಚತುರ್ದಶಿ ರಾತ್ರಿಯಾಗಿತ್ತು. ಎಲ್ಲಿ ನೋಡಿದರೂ ಗಾಢಾಂಧಕಾರ, ಸುಮಾರು ಹತ್ತು ಗಂಟೆ ಹೊತ್ತಿನಲ್ಲಿ ಒಬ್ಬ ಕಾಪಾಳನು ಕರಿಕಂಬಳಿಯನ್ನು ಮೈತುಂಬಾ ಮುಚ್ಚಿಕೊಂಡು ಮೃಗದ ಹಾಗೆ ಕಾಲು ಮತ್ತು ಕೈಗಳ ಸಹಾಯದಿಂದ ನಡೆಯುತ್ತಾ ಆ ಮರದ ಸಮೀಪದ ಒಂದು ಪೊದೆಯ ಬಳಿ ಹೋಗಿ ಕುಳಿತುಕೊಂಡನು, ಸುಮಾರು ಅರ್ಧ ಗಂಟೆಯು ಕಳೆದ ಮೇಲೆ ಇನ್ನೊಬ್ಬನು ಹಾಗೆಯೇ ನಡೆದುಕೊಂಡು ಬಂದು ಆ ಮರದ ಇನ್ನೊಂದು ಭಾಗದಲ್ಲಿದ್ದ ಒಂದು ಮರದ ಬುಡದಲ್ಲಿ ಶಬ್ದ ಮಾಡದೆ ಕುಳಿತುಕೊಂಡನು, ಈ ಎರಡನೆಯವನು ಕುಳಿತುಕೊಂಡು ಸಾಧಾರಣ ಒಂದೂವರೆ ಘಂಟೆಯ ನಂತರ ಎಂದರೆ ಮಧ್ಯ ರಾತ್ರಿಯ ಸಮಯದಲ್ಲಿ ಕಾರಿಚ್ಚನು ಮೆಲ್ಲಗೆ ಆ ಮಾವಿನ ಮರದ ಬುಡಕ್ಕೆ ಬಂದು ಅದನ್ನು ಹತ್ತ ತೊಡಗಿದನು. ಸುಮಾರು ಐದು ಆರು ಅಡಿ ಮೇಲಕ್ಕೇರುವಷ್ಟರಲ್ಲಿ ವೇಗವಾಗಿ ಯಾರೋ ಒಬ್ಬಿಬ್ಬರು ಓಡಿ ಬರುವ ಶಬ್ದ ಕೇಳಿಸಿತು, ಮರುಕ್ಷಣದಲ್ಲಿ ಕಾರಿಚ್ಚನು ತಪ್ಪಿಸಿಕೊಂಡು ಹೋಗಬೇಕೆಂದು ಹಾರುವಷ್ಟರ

ಲ್ಲಿ ಒಬ್ಬ ಕಾವಾಳನು ಅವನ ಬಲಗಾಲನ್ನು ಹಿಡಿದುಬಿಟ್ಟನು. ಆಗ ಕಾರಿಚ್ಚನು ಕೆಳಕ್ಕೆ ಬಿದ್ದು ಬಿಟ್ಟನು. ಆ ಕೂಡಲೇ ಇನ್ನೊಬ್ಬ ಕಾವಾಳನು ಅವನ ಮೇಲೆ ತನ್ನ ಕರಿಕಂಬಳಿಯನ್ನು ಹಾಕಿ ಬಲವಾಗಿ ಒತ್ತಿ ಹಿಡಿದನು. ಆ ಮೇಲೆ ಇವರಿಬ್ಬರೂ ಸೇರಿ ಕಾರಿಚ್ಚನನ್ನು ಕಂಬಳಿಯನ್ನು ಮುಚ್ಚಿದ್ದ ಹಾಗೆಯೇ ಅಲುಗಾಡದ ಹಾಗೆ ಹಗ್ಗಗಳಿಂದ ಬಿಗಿದೂಗಿ ಕಟ್ಟಿದರು. ಅನಂತರ ಅವನನ್ನು ಹೊತ್ತುಕೊಂಡು ಹೋಗಿ ಅರಮನೆಯಲ್ಲಿ ಒಂದು ಕತ್ತಲೆ ಕೋಣೆಯಲ್ಲಿ ಹಾಕಿ ಬಾಗಿಲು ಭದ್ರಪಡಿಸಿ ತಾವು ಹೊರಗೆ ಮಲಗಿಕೊಂಡರು. ಕಾರಿಚ್ಚನಿಗೆ ಕಂಬಳಿಯೊಳಗೆ ಉಸಿರು ಕಟ್ಟಿದಂತಾಯಿತು. ತಾನು ಇಷ್ಟು ದಿವಸ ರಾಜನ ಕೆಲಸಗಾರರಿಗೆ ಸಿಕ್ಕದೆ ಇನತ್ತು ಸಿಕ್ಕಿಹೋದನಲ್ಲಾ, ಇನ್ನು ಹೇಗೂ ನನಗೆ ಮರಣವು ತಪ್ಪುವುದಿಲ್ಲ. ಸಾಯುವಾಗಲೂ ರಾಜನನ್ನು ಚೆನ್ನಾಗಿ ಬಯ್ದು ಸಾಯುವೆನು ಎಂದು ಮನಸ್ಸಿನಲ್ಲಿ ಆಲೋಚಿಸಿಕೊಂಡನು.

ಮರುದಿವಸ ಪ್ರಾತಃಕಾಲವಾಯಿತು. ಕಾರಿಚ್ಚನನ್ನು ಹಿಡಿದ ವರ್ತಮಾನವು ರಾಜನಿಗೂ, ಇತರ ಕಾರ್ಯಕಾರರಿಗೂ ತಿಳಿಯಿತು. ರಾಜನು ಬಳಿಯ್ಯ ಹತ್ತು ಘಂಟೆಗೆ ಎಲ್ಲಾ ಕಾರ್ಯಕಾರರೊಡನೆ ದರ್ಬಾರಿನಲ್ಲಿರುವಾಗ ಕಾರಿಚ್ಚನನ್ನು ತನ್ನ ಮುಂದೆ ಎಳೆದು ತರುವಂತೆ ಕಾವಾಳರಿಗೆ ಆಜ್ಞಾಪಿಸಿದನು. ಅವರು ಕಾರಿಚ್ಚನನ್ನು ಕಟ್ಟಿದ್ದ ಹಾಗೆಯೇ ಎಳೆದು ತಂದರು. ರಾಜನು ಕಾರಿಚ್ಚನನ್ನು ನೋಡಿ ಕೋಪದಿಂದ 'ಏನೋ, ನಮ್ಮಕ್ ಹರಾಮ್, ನಮ್ಮನ್ನು ಯಾವಾಗಲೂ ಬಯ್ಯುವುದಕ್ಕೆ ನಿನಗೆ ಏನು ಧೈರ್ಯ, ನಾವು ಯಾರೆಂದು ತಿಳಿದಿರುವೆ?' ಎಂದು ಕೇಳಿದನು. ಆಗ ಕಾರಿಚ್ಚನು ತಿರುಗಿ ರಾಜನಿಗೆ ಮನಸ್ಸು ಬಂದಂತೆ ಕೆಟ್ಟ ಮಾತುಗಳನ್ನಾಡತೊಡಗಿದನು. ಇದನ್ನು ಕೇಳಿ ರಾಜನಿಗೆ ಅತಿರೇಕವಾಗಿ ಸಿಟ್ಟು ಬಂದು ಅವನನ್ನು ಆ ಕ್ಷಣವೇ ಆನೆಯ ಕಾಲಿಗೆ ಕಟ್ಟಿ ಅರಮನೆಯ ಸುತ್ತಲೂ ಮೂರು ಸುತ್ತು ಎಳೆಸುವುದಕ್ಕೆ ಚೌಡಿಕಾರರಿಗೆ ಅಪ್ಪಣೆ ಮಾಡಿದನು. ಅವರು ಹಾಗೆ ಕಾರಿಚ್ಚನನ್ನು ಆನೆಯ ಕಾಲಿಗೆ ಕಟ್ಟಿ ಎಳೆದರು. ಕಾರಿಚ್ಚನು ಆಗಲೂ ರಾಜನನ್ನು ಬಯ್ಯುತ್ತಲೇ ಇದ್ದನು. ಆನೆಯು ಅರಮನೆಗೆ ಎರಡು ಸುತ್ತು ಬಂದು ಮೂರನೆಯ ಸುತ್ತು ತಿರುಗುವಾಗ ಕಾರಿಚ್ಚನ ಪ್ರಾಣವು ಹೋಯಿತು. ಅಂದಿನಿಂದ ರಾಜನಿಗೆ ಸಮಾಧಾನವಾಯಿತು. ಆದರೆ ಭಾವಿಕ ಜನರು ಕಾರಿಚ್ಚನು ಭೂತನಾಗಿರುವನೆಂದೂ ಅರಮನೆಯ ಸುತ್ತಲೂ ರಾತ್ರಿ ಹೊತ್ತು ತಿರುಗಾಡುತ್ತಿರುವನೆಂದೂ ನಂಬಿದರು. ಆದುದರಿಂದ ಅವರು ಅರಮನೆಯ ಹತ್ತಿರ ಮುಸ್ಸಂಜೆಯಾದ ಮೇಲೆ ಹೋಗುತ್ತಿರಲಿಲ್ಲ ಮತ್ತು ಶುಕ್ರವಾರ ಮಂಗಳವಾರ ಮಧ್ಯಾಹ್ನ ಅಲ್ಲಿಗೆ ಹೋಗುವುದಕ್ಕೂ ಹೆದರುತ್ತಿದ್ದರು. ಮಧ್ಯಾಹ್ನ ಅಲ್ಲಿಗೆ ಹೋದರೆ ಕಾರಿಚ್ಚನ ಕಾಟ ತಗುಲುತ್ತದೆಂದೂ ಅವರ ನಂಬಿಕೆಯು. ಆ ನಂಬಿಕೆಯು ಇವತ್ತಿನ ವರೆಗೂ ಅಲ್ಲಿ ಸುತ್ತುಮುತ್ತಲಿನ ಜನರಲ್ಲೆಲ್ಲಾ ಇದೆ. ಇವತ್ತಿಗೂ ಪುಲಿಯಂಡ ಕಾರಿಚ್ಚನ ನೋಕು ತಗಲಿದರೆ ತಗಲಿದವರು ಬದುಕುವುದಿಲ್ಲವೆಂದು ಅಲ್ಲಿನ ಜನರು ಹೇಳುವರು.

ಇದಾದ ನಂತರ ಒಂದೆರಡು ವರ್ಷಗಳಲ್ಲಿ ನಾಲ್ಕುನಾಡು ಅರಮನೆ ಕಟ್ಟಡದ ಕೆಲಸವು ತೀರಿತು. ರಾಜನು ಕ್ರಿ. ಶ. 1795 ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಅರಮನೆ ಪ್ರವೇಶ ಮಾಡಿದನು. ಅದರ ಮಾರಣೆ ವರ್ಷ ಡಿಸೆಂಬರ್ ತಿಂಗಳಲ್ಲಿ ವೀರರಾಜನು ಆ ಅರಮನೆಯಲ್ಲಿಯೇ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡನು. ಅದೇ ದಿವಸವೇ ರಾಜನು ಮಹದೇವಮ್ಮಾಜಿಯೆಂಬ ಕನ್ಯೆಯನ್ನು ವಿವಾಹ ಮಾಡಿಕೊಂಡನು. ಆತನಿಗೆ ಮೊದಲನೆಯ ಹೆಂಡತಿಯಲ್ಲಿ ಗಂಡು ಮಕ್ಕಳಿರಲಿಲ್ಲ. ಇದಲ್ಲದೆ ಕೊಡಗು ರಾಜರು ಪ್ರತಿ ಹನ್ನೆರಡು ವರ್ಷಗಳಿಗೊಂದು ಸಾರಿ ಪುನಹ ವಿವಾಹ ಮಾಡಿಕೊಳ್ಳುವ ಪದ್ಧತಿಯೂ ಇತ್ತು. ಈ ವಿವಾಹ ಮಹೋತ್ಸವದಲ್ಲಿ ವಧೂವರರು ಹಸೆಯ ಮೇಲೆ ಕುಳಿತುಕೊಳ್ಳುವುದಕ್ಕಾಗಿ ವೀರರಾಜನು ಅರಮನೆಯ ಮುಂಭಾಗದಲ್ಲಿ ಒಂದು ಸುಂದರವಾದ ವಿವಾಹ ಮಂಟಪವನ್ನು ಕಟ್ಟಿಸಿದನು. ಆ ಮಂಟಪವು ಈಗಲೂ ಅಲ್ಲಿದೆ. ಈ ವಿವಾಹ ಮಹೋತ್ಸವಕ್ಕೆ ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಗಳಾಗಿ ಅಲೆಕ್ಸಾಂಡರ್ ಬೀಲ್ ಸಾಹೇಬನೂ, ಒಬ್ಬ ಕ್ಯಾಪ್ಟನ್ನನೂ, ಒಂದು ತುಕಡಿ ಕಂಪೆನಿ ಸಿಪಾಯಿಗಳೂ ನಾಲ್ಕುನಾಡು ಅರಮನೆಗೆ ಮಲೆಯಾಳದಿಂದ ಬಂದಿದ್ದರು. ಇವರಲ್ಲದೆ ಮೈಸೂರು, ದಕ್ಷಿಣ ಕನ್ನಡ, ಮಲೆಯಾಳಗಳಿಂದಲೂ ಬಹಳ ಜನರು ಬಂದಿದ್ದರು.

ಇದೇ ಅರಮನೆಯಲ್ಲಿ 1801 ನೇ ಇಸವಿಯಲ್ಲಿ ವೀರರಾಜನ ಪುತ್ರಿ ರಾಜಮ್ಮಾಜಿಗೂ, ಗೋವಾ ಪ್ರಾಂತ್ಯದಲ್ಲಿದ್ದ ಸೋದೆ ಬಸವಲಿಂಗರಾಜನಿಗೂ ವಿವಾಹವು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಮಾರಂಭಕ್ಕೂ ಈಸ್ಟ್ ಇಂಡಿಯಾ ಕಂಪೆನಿಯ ಪ್ರತಿನಿಧಿಗಳಾಗಿ ಶ್ರೀರಂಗಪಟ್ಟಣದಿಂದ ಕ್ಯಾಪ್ಟನ್ ತೋಮಸ್ ಮೇರಿಯಟ್ ಸಾಹೇಬನೂ, ಮಲಬಾರಿನಿಂದ ಕ್ಯಾಪ್ಟನ್ ಡೇವಿಡ್ ಫೌಲಿಸ್ ಸಾಹೇಬನೂ, ಕ್ಯಾಪ್ಟನ್ ಆಸ್‌ಬೋರ್ನ್ ಸಾಹೇಬನೂ ಬಂದಿದ್ದರು.

ಈ ಅರಮನೆಯಲ್ಲಿ ರಾಜನು ಒಂದೆರಡು ವರ್ಷಗಳಿದ್ದು ನಂತರ ಮಡಿಕೇರಿ ಅರಮನೆಯಲ್ಲಿ ತನ್ನ ಕೊನೆಯ ದಿವಸಗಳನ್ನು ಕಳೆದನು. ಲಿಂಗರಾಜನು ಮಡಿಕೇರಿಯಲ್ಲಿಯೇ ವಾಸವಿರುತ್ತಿದ್ದನು. ಈತನ ಪುತ್ರ ಚಿಕ್ಕ ವೀರರಾಜನು ಕಂಪೆನಿಯವರು ಕೊಡಗಿಗೆ ದಂಡು ತೆಗೆದುಕೊಂಡು ಬರುವ ಸಂದರ್ಭದಲ್ಲಿ ಎಂದರೆ 1834 ನೇ ಇಸವಿ ಮಾರ್ಚಿ ತಿಂಗಳಲ್ಲಿ, ನಾಲ್ಕುನಾಡು ಅರಮನೆಯು ಸುರಕ್ಷಿತ ಸ್ಥಳವೆಂದು ಅಲ್ಲಿಗೆ ಕುಟುಂಬ ಸಮೇತ ವಾಸಕ್ಕೆ ಬಂದನು. ಆಗ ತನ್ನ ಸಂಗಡ ದೊಡ್ಡ ವೀರರಾಜನ ಮಗಳು ದೇವಮ್ಮಾಜಿಯು ಮೂರು ಮಕ್ಕಳನ್ನೂ ತನ್ನ ತಂದೆ ಲಿಂಗರಾಜ, ದೊಡ್ಡ ತಂದೆ ಅಪ್ಪಾಜಿರಾಜ ಇವರ ಕುಟುಂಬದ ಇತರ ಹೆಂಗಸರು ಮಕ್ಕಳನ್ನೂ ಕರೆತಂದನು. ಕೊಡಗಿನ ಸಿಂಹಾಸನಕ್ಕೆ ತಾನಲ್ಲದೆ ಬೇರೆ ಯಾರೂ ಹಕ್ಕುದಾರರು ಇರಬಾರದೆಂಬ ಉದ್ದೇಶದಿಂದ ಇವರನ್ನೆಲ್ಲಾ ಅಲ್ಲಿ ಕೊಲ್ಲಿಸಲು ವೀರರಾಜನು ಕುಂಟೆ ಬಸವನಿಗೆ ಅಪ್ಪಣೆ ಮಾಡಿದನು. ಕುಂಟೆ ಬಸವನು ಎಡವನಾಡಿನ ತನ್ನ ಕಡೆ ಜನರನ್ನೂ, ಕಾವಾಳರನ್ನೂ ಕರೆದುಕೊಂಡು ಇವರ ಕುತ್ತಿಗೆಗಳಿಗೆ ಹಗ್ಗಗಳನ್ನು ಬಿಗಿದು ಕೊಲ್ಲಿಸಿದನು. ಅನಂತರ ಅವನು ಒಂದು ದೊಡ್ಡ ಗುಂಡಿಯನ್ನು ತೆಗೆಸಿ ಕಾವಾಳರಿಂದ ಅವರೆಲ್ಲರ ಮೃತಶರೀರಗಳನ್ನು ಆ ಗುಂಡಿಯಲ್ಲಿ ಹಾಕಿಸಿ ಮಣ್ಣು ಮುಚ್ಚಿಸಿದನು. ಮೃತಶರೀರಗಳನ್ನು 1869 ರಲ್ಲಿ ಆ ಗುಂಡಿಯಿಂದ ಸರಕಾರದವರು ತಿರುಗಿ ಅಗೆಸಿ ತೆಗೆಸಿದರು.

ಈ ಸಮಯದಲ್ಲಿ ಇಂಗ್ಲಿಷರು ಸೈನ್ಯಸಮೇತ ಕೊಡಗಿಗೆ ಬಂದರು. ಆಗ ವೀರರಾಜನು ಯುದ್ಧವನ್ನು ಮಾಡದೆ ಇಂಗ್ಲಿಷರ ಶರಣಾಗತನಾದರೆ ತನ್ನ ರಾಜ್ಯವು ಉಳಿಯಬಹುದೆಂಬ ನಿರೀಕ್ಷಣೆಯಿಂದ ತನ್ನ ಜನರಿಗೆ ಯುದ್ಧವನ್ನು ನಿಲ್ಲಿಸಬೇಕಾಗಿ ಅಪ್ಪಣೆ ಮಾಡಿದನು. ಅನಂತರ ಜನರಲ್ ಫ್ರೇಸರನ ಹೇಳಿಕೆ ಮೇರೆ ರಾಜನು ಏಪ್ರಿಲ್ 10 ನೇ ತಾರೀಕಿನಲ್ಲಿ ನಾಲ್ಕುನಾಡು ಅರಮನೆಯಿಂದ ಹೊರಟು ಮಡಿಕೇರಿಗೆ ಬಂದನು. ಏಪ್ರಿಲ್ 13 ನೇ ತಾರೀಕಿನಲ್ಲಿ ತಲಚೇರಿಯಿಂದ ಹೆಗ್ಗಳದ ದಾರಿಗಾಗಿ ಬಂದ ಮೇಜರ್ ಟ್ವೀಡಿಯೆಂಬ ಸೈನ್ಯಾಧಿಕಾರಿಯು ತನ್ನ ಸೈನಿಕರೊಡನೆ ನಾಲ್ಕುನಾಡು ಅರಮನೆಗೆ ಹೋಗಿ ಅಲ್ಲಿ ಕಂಪನಿಯ ಬಾವುಟವನ್ನು ಏರಿಸಿದನು.

ಕಂಪನಿಯವರು ಕೊಡಗನ್ನು ಆಳುವುದಕ್ಕೆ ಪ್ರಾರಂಭಿಸಿದ ನಂತರ ಚಿನ್ನಬಸವನು ಕೆಲಸ ವಾಸಕ್ಕೆ ಮಡಿಕೇರಿ, ನಾಲ್ಕುನಾಡು, ಹಾಲೇರಿ ಅರಮನೆಗಳಲ್ಲಿ ಒಂದನ್ನು ಕೊಡಬೇಕೆಂದು ಕೇಳಿದನು. ಆದರೆ ಅವನಿಗೆ ಯಾವ ಅರಮನೆಯೂ ಸಿಕ್ಕಲಿಲ್ಲ. ನಾಲ್ಕುನಾಡು ಅರಮನೆಯಲ್ಲಿ ದೊಡ್ಡ ವೀರರಾಜನ ಬಲಿಕಂಗಿಯರಿಬ್ಬರು ವಾಸವಾಗಿದ್ದರು. ಇವರು ದೊಡ್ಡ ವೀರರಾಜನೊಡನೆ ಮೈಸೂರ ಬೆಟ್ಟದಲ್ಲಿದ್ದು ಅರಮನೆಯಲ್ಲಿರುವಾಗ ಟಿಪ್ಪುಸುಲ್ತಾನನು ಬಲಾತ್ಕಾರದಿಂದ ಇವರನ್ನು ಮದುವೆಯಾಗಿದ್ದನು. ಟಿಪ್ಪುಸುಲ್ತಾನನ ಮರಣಾನಂತರ ಇವರಿಬ್ಬರೂ ಕೊಡಗಿಗೆ ಬಂದರು. ಇವರಲ್ಲಿ ದೇವಮ್ಮಾಜಿಯು 1852 ನೆ ಇಸವಿಯಲ್ಲಿಯೂ, ನೀಲಮ್ಮಾಜಿಯು 1865 ನೆ ಇಸವಿಯಲ್ಲಿಯೂ ಮರಣವನ್ನು ಹೊಂದಿದರು. ಅಂದಿನಿಂದ ನಾಲ್ಕುನಾಡು ಅರಮನೆಯಲ್ಲಿ ಯಾರೂ ವಾಸವಿಲ್ಲ. ಕೊಡಗಿನ ಸರಕಾರಿ ಉದ್ಯೋಗಸ್ಥರು ಮಾತ್ರ ತಾವು ತಮ್ಮ ಪ್ರವಾಸದಲ್ಲಿ ಅಲ್ಲಿ ಒಂದೆರಡು ದಿವಸ ವಾಸವಿರುವರು. ಆ ಅರಮನೆಯನ್ನು ಸರಕಾರದವರು ಈಗ ಜೀರ್ಣೋದ್ಧಾರ ಮಾಡುವರೆಂದು ವರ್ತಮಾನವಿದೆ. ಹಾಗೆ ಮಾಡಿದರೆ ಕೊಡಗಿನ ಚರಿತ್ರೆಯ ಒಂದು ಮುಖ್ಯ ಗುರುತು ಉಳಿದಂತಾಗುತ್ತದೆ.

THE
TROPICAL INSURANCE Co. Ltd.,
NEW DELHI.

Chairman Sjt. SUBHAS CHANDRA BOSE.

(President, Indian National Congress.)

A 100% Swadeshi Concern founded by such eminent Leaders as

PANDIT MOTHILAL NEHRU. Dr. M. A. ANSARI. HAKIM AJMAL KHAN. S. SRINIVASA IYENGAR. and others.

Wanted an Organiser for Coorg on Salary and commission immediately.

Apply to:—

M. Sunder Ram Shetty, Branch Manager, Hampankatta, MANGALORE. or **K. S. Ramamurthi, M. A.** Secretary, 160, Mount Road, MADRAS.

4—3

"ಕೊಡಗು" ಪತ್ರಿಕೆಯ ಬಿಂದು ದಾರರೇ, ತಮ್ಮ ಪತ್ರಿಕೆಯ ಚಂದಾ ಹಣವನ್ನು ಪಠನೆ ದಯವಿಟ್ಟು ಕಳಿಸಿ.

ಕೊಡಗು

ಫೆಬ್ರವರಿ ತಾರೀಕು ೨೪ನೇ ಶುಕ್ರವಾರ ೧೯೩೯.

ಕಾಂಗ್ರೆಸ್ಸಿನ ಅಧ್ಯಕ್ಷರ ಚುನಾವಣೆ.

ಬರುವ ತ್ರಿಪುರಿ ಕಾಂಗ್ರೆಸ್ ಮಹಾ ಸಭೆಯ ಅಧ್ಯಕ್ಷರಾಗಿ ಶ್ರೀ ಸುಭಾಷ್‌ಚಂದ್ರ ಬೋಸರನ್ನು ಆರಿಸಿ ಕೆಲವು ದಿವಸಗಳಾದವು. ಆದರೂ ಅದರ ಪರಿಣಾಮವು ಇನ್ನೂ ಅಂತ್ಯವಾಗಿರುವುದಿಲ್ಲ. ಚುನಾವಣೆಯ ಕಾಲದಲ್ಲಿ ಕಾಂಗ್ರೆಸಿನ ಎಡಪಕ್ಷದವರು ಅಂದರೆ ಸಮತಾವಾದಿಗಳು ಸುಭಾಷ್‌ಬೋಸರವರ, ಮತ್ತು ಬಲಪಕ್ಷದವರು ಅಂದರೆ ಗಾಂಧಿ ತತ್ವದವರು ಡಾ. ಪಟ್ಟಾಭಿ ಸೀತರಾಮಯ್ಯನವರ ಉಮೇದ್ವಾರಿಕೆಗೆ ಒತ್ತಾಸೆಯನ್ನಿತ್ತರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸರ್ದಾರ್ ವಲ್ಲಭಭಾಯಿ ಪಟೇಲರೇ ಮೊದಲಾದ ಹಲವು ಮೆಂಬರುಗಳು ಡಾ. ಪಟ್ಟಾಭಿ ಸೀತರಾಮಯ್ಯನವರನ್ನೇ ಅಧ್ಯಕ್ಷರಾಗಿ ಆರಿಸಬೇಕೆಂದು ಕಾರಣಗಳನ್ನು ಕೊಟ್ಟು ಪ್ರಕಟಣೆಯನ್ನು ಹೊರಡಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಸುಭಾಷ್‌ಚಂದ್ರ ಬೋಸರು ಬಹಿರಂಗಪಡಿಸಿದ ಪ್ರಕಟಣೆಯಲ್ಲಿ ವರ್ಕಿಂಗ್ ಕಮಿಟಿಯ ಮೇಲಿನ ಮೆಂಬರುಗಳು ಬ್ರಿಟಿಷ್ ಸರ್ಕಾರದವರು ಕೊಡಲೆಳಸಿರುವ ಸಂಯುಕ್ತ ರಾಜ್ಯಘಟನೆಯನ್ನು ಅಲ್ಪ ಸ್ವಲ್ಪ ಬದಲಾವಣೆಗಳಿಂದ ಒಪ್ಪಿಕೊಳ್ಳುವವರಾಗಿದ್ದಾರೆ; ಕಾಂಗ್ರೆಸ್ಸಿನ ತೀರ್ಮಾನದಂತೆ ಅವರು ಫೆಡರಲ್ ರಚನೆಯನ್ನು ಪೂರ್ಣ ವಿರೋಧಿಸುವವರಾಗಿಲ್ಲವೆಂತಲೂ, ಈ ದೆಸೆಯಿಂದ ಫೆಡರಲ್ ರಚನೆಯನ್ನು ಸಂಪೂರ್ಣ ವಿರೋಧಿಸಲು ತಯಾರಿರುವ ತನ್ನನ್ನೇ ಅಧ್ಯಕ್ಷನಾಗಿ ಆರಿಸಬೇಕೆಂತಲೂ ಸೂಚಿಸಿ ಅವರ ಮೇಲೆ ಆರೋಪಣೆಯನ್ನು ಹೊರಿಸಿದ್ದರು. ಚುನಾವಣೆಗೆ ಮುಂಚಿತವಾಗಿ ಮಹಾತ್ಮಗಾಂಧಿಯವರು ಈ ವಿಚಾರವಾಗಿ ಯಾವುದೊಂದು ಅಭಿಪ್ರಾಯವನ್ನು ಹೊರಗೆಡಹಿರಲಿಲ್ಲ. ಆದ್ದರಿಂದ ತ್ರಿಪುರಿ ಕಾಂಗ್ರೆಸ್ಸಿನ ಡೆಲಿಗೇಟರುಗಳು ತಮ್ಮ ಮನ ಬಂದಂತೆ ಓಟುಗಳನ್ನು ಕೊಟ್ಟರು. ಇದರಿಂದ ಸುಭಾಷ್ ಬೋಸರಿಗೆ ಓಟು ಮಾಡಿದವರು ಅವರ ಸಮತಾವಾದ ತತ್ವವನ್ನು ಮೆಚ್ಚಿಯೇ ಓಟು ಮಾಡಿದರೆಂದು ಹೇಳಲಿಕ್ಕಾಗುವದಿಲ್ಲ. ಇತರ ಹಲವು ಕಾರಣಗಳಿಂದ ಸುಭಾಷರೇ ಪುನಹ ಒಂದು ಸಾರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗುವದು ಉಚಿತವೆಂದು ಡೆಲಿಗೇಟರುಗಳಿಗೆ ಅನ್ನಿಸಿರಬಹುದು. ಆದರೆ ಸುಭಾಷ್ ಬೋಸರ ಜಯವು ಸಮತಾವಾದಿಗಳಿಗೆ ಹಿಗ್ಗಲಿಕೆಗೆ ಅವಕಾಶವನ್ನುಂಟುಮಾಡಿತು. ಕಾಂಗ್ರೆಸ್ಸಿನ ಬಲಪಕ್ಷದವರ ಶಕ್ತಿಯು ಕಡಿಮೆಯಾಯಿತೆಂದು ತೋರಿತು. ತತ್ವದ ಮೇಲೆ ಈ ಚುನಾವಣೆಯು ನಡೆಯದಿದ್ದರೂ ಕೂಡ ಜಯಶೀಲರಾದ ವ್ಯಕ್ತಿಯು ಹಿಡಿದಿರುವ ತತ್ವಕ್ಕೆ ಪ್ರಾಬಲ್ಯವು ದೊರೆಯಿತೆಂಬುವುದರಲ್ಲಿ ಸಂದೇಹವಿಲ್ಲ. ಆದ್ದರಿಂದಲೇ ಮಹಾತ್ಮ ಗಾಂಧಿಯವರು 'ಪಟ್ಟಾಭಿ ಸೀತರಾಮಯ್ಯನವರ ಸೋಲು ತನ್ನ ಸೋಲೆ'ಂದು ಹೇಳಿದ್ದಾಗಿದೆ.

ಡಾ. ಪಟ್ಟಾಭಿ ಸೀತಾರಾಮಯ್ಯನವರು ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಬೇಕೆಂದು ಮಹಾತ್ಮಗಾಂಧಿಯವರೇ ಕೇಳಿಕೊಂಡಿದ್ದರೆಂತಲೂ, ಅಲ್ಲದೆ ಮಹಾತ್ಮರ ತತ್ವವನ್ನು ಎಡೆಬಿಡದೆ ಪಾಲಿಸುವವರಲ್ಲಿ ಡಾ. ಪಟ್ಟಾಭಿಯವರೊಬ್ಬರೆಂತಲೂ, ಈ ಕಾರಣ ಪಟ್ಟಾಭಿಯವರ ಸೋಲುವಿಕೆಯಿಂದ ಮಹಾತ್ಮರ ತತ್ವಕ್ಕೆ ಅಪಜಯ ಉಂಟಾಯಿತೆಂದೂ ಗಾಂಧಿಯವರ ಅಭಿಪ್ರಾಯವಾಗಿದೆ. ಅಲ್ಲದೆ ಸುಭಾಷ್‌ಚಂದ್ರಬೋಸರು ಈ ಚುನಾವಣೆಯಿಂದ ಹಿಂತೆಗೆಯಬೇಕೆಂದು ಮಹಾತ್ಮರು ಅವರಿಗೆ ತಂತಿ ಕಳುಹಿಸಿದ್ದರೆಂತಲೂ ಇತ್ತೀಚೆಗೆ ತಿಳಿಯಬರುತ್ತದೆ. ಹೇಗೂ ಸುಭಾಷ್ ಬೋಸರಿಗೆ ಬಹುಮತದ ಬೆಂಬಲವು ಸಿಕ್ಕಿದ ಕಾರಣ ಅವರು ತಮ್ಮ ತತ್ವ ಮತ್ತು ಕಾರ್ಯಕ್ರಮಗಳನ್ನು ಸರಾಗವಾಗಿ ನಡೆಸಲು ಅವರ ಅಭಿಪ್ರಾಯಕ್ಕೆ ಸರಿಹೋಲುವವರನ್ನೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರುಗಳಾಗಿ ನೇಮಿಸಿಕೊಳ್ಳುವದು ಉತ್ತಮವೆಂತಲೂ, ಈಗಿನ ಚುನಾವಣೆ ಮೇರೆ ಕಮ್ಮಿ ಸಂಖ್ಯೆಯಲ್ಲಿರುವ ಕಾಂಗ್ರೆಸ್ಸಿನ ಬಲ ಪಕ್ಷದವರಿಗೆ ಈ ಕಾರ್ಯಕ್ರಮವು ಒಪ್ಪಿದರೆ ಅದಕ್ಕವರು ಸಹಕರಿಸಿ ವರ್ತಿಸಬಹುದೆಂದಲೂ, ಇಲ್ಲವಾದರೆ ಅವರು ಕಾಂಗ್ರೆಸ್ಸಿನ ಹೊರಬಂದು ಬಹುಮತದಲ್ಲಿರುವ ಎಡಪಕ್ಷದವರ ಕಾರ್ಯಕ್ರಮಕ್ಕೆ ಏನೊಂದೂ ಅಡಚಣೆ ತಾರದೆ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ಜಾರಿಗೆ ತರುವದು ಉಚಿತವೆಂತಲೂ ಗಾಂಧೀಜೀಯವರು ಪ್ರಕಟನೆಯನ್ನು ಹೊರಡಿಸಿದ್ದರು. ಈ ಪ್ರಕಟನೆಯನ್ನು ನೋಡಿದ ಕೂಡಲೇ ಹಿಂದೂ ದೇಶದಲ್ಲಿ ಒಂದು ವಿಶೇಷ ಪರಿಣಾಮ ಉಂಟಾಗಿದೆ.

ಕಾಂಗ್ರೆಸಿನಲ್ಲಿ ಯಾವ ಪಕ್ಷವೇ ಬಹುಮತವನ್ನು ಪಡೆಯಲಿ, ಅದು ತನ್ನ ಕಾರ್ಯಕ್ರಮವನ್ನು ಜಯಪ್ರದವಾಗಿ ಜಾರಿಗೆ ತರಬೇಕಾದರೆ ಮಹಾತ್ಮ ಗಾಂಧಿಯವರ ಸಹಾಯವು ಅತ್ಯಾವಶ್ಯವೆಂಬದನ್ನು ಎಲ್ಲರೂ ಒಪ್ಪಬೇಕಾದ ವಿಷಯವಾಗಿದೆ. ಇದಕ್ಕೆ ಸುಭಾಷ್ ಬೋಸರೂ ಒಪ್ಪಿಗೆಯನ್ನು ಸೂಚಿಸಿರುವರು. ಆದರೆ ಅವರು ಕೂಡಲೇ ಮಹಾತ್ಮರ ಬೆಂಬಲವನ್ನು ಪಡೆಯಲು ವಾರ್ಧಾಕ್ಕೆ ಹೋಗಿ ಪ್ರಯತ್ನ ನಡೆಸುವದರ ಬದಲು ಕಾಂಗ್ರೆಸ್ಸಿನ ಎಡ ಪಕ್ಷದ ಮುಂದಾಳುಗಳನೇಕರನ್ನು ಹಲವು ಪ್ರಾಂತಗಳಿಂದ ಕರೆಸಿಕೊಂಡು ಮುಂದಿನ ವಿಚಾರ ಆಲೋಚನೆ ತೆಗೆದರು. ಪಂಡಿತ ಜವಾಹರಲಾಲರನ್ನು ಭೇಟಿಯಾಗಿ ಅಭಿಪ್ರಾಯ ಕೇಳಿದರು. ಇಷ್ಟರಲ್ಲಿ ಡಾ. ಪಟ್ಟಾಭಿಯವರ ಉಮೇದ್ವಾರಿಕೆಯನ್ನು ಸಮರ್ಥಿಸಿ ಪ್ರಕಟಣೆ ಹೊರಡಿಸಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರುಗಳು ಸುಭಾಷ್ ಬೋಸರ ಕಾರ್ಯಕ್ರಮಕ್ಕೆ ತಾವು ಅಡ್ಡ ಬರುವದಕ್ಕಿಂತ ತಮ್ಮ ಪದವಿಗೆ ರಾಜಿನಾಮೆ ಕೊಡುವೆವೆಂದು ಕಾಂಗ್ರೆಸ್ ಅಧ್ಯಕ್ಷರಾದ ಸುಭಾಷರಿಗೆ ತಿಳಿಸಿದರು. ಕಾಂಗ್ರೆಸ್ ಮಹಾಸಭೆಯು ಜರಗುವದಕ್ಕೆ ಕೆಲವು ದಿವಸಗಳಿಗೆ ಮುಂಚಿತವಾಗಿ ವರ್ಕಿಂಗ್ ಕಮಿಟಿಯವರು ಸೇರಿ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮವನ್ನು ರೂಪಿತಗೊಳಿಸುವದು ವಾಡಿಕೆಯಾಗಿತ್ತು. ಅದೇ ಮೇರ ಈ ಸಾರಿಯೂ ವರ್ಕಿಂಗ್ ಕಮಿಟಿಯು ಇಷ್ಟರಲ್ಲಿ ಸೇರಿ ತಮ್ಮ ಈ ಕೆಲಸವನ್ನು ನಡೆಸಬೇಕಿತ್ತು. ಆದರೆ ಈಗಿನ ವರ್ಕಿಂಗ್ ಕಮಿಟಿಯವರಿಗೂ, ಕಾಂಗ್ರೆಸಿನ ಅಧ್ಯಕ್ಷರಿಗೂ ಮುಂದಿನ ಕಾರ್ಯಕ್ರಮದ ವಿಚಾರದಲ್ಲಿ ಸರಿಬೀಳದೆ ಹೋಗುವ ದೆಸೆಯಿಂದ ಅಧ್ಯಕ್ಷರೇ ಈ ಕಾರ್ಯವನ್ನು ನಡೆಸಿಕೊಳ್ಳಲು ಅನುಕೂಲವಾಗುವಂತೆ ಈಗಿನ ವರ್ಕಿಂಗ್ ಕಮಿಟಿ ಮೆಂಬರುಗಳು ರಾಜಿನಾಮೆಯನ್ನೀಯಲು ತಯಾರಾದರು. ಇಷ್ಟರೊಳಗೆ ಸುಭಾಷ್ ಬೋಸರು ಮಹಾತ್ಮ ಗಾಂಧಿಯವರ ಭೇಟಿಯಾಗಿ ಈ ಸಂಬಂಧ ಚರ್ಚೆಯನ್ನು ಮಾಡಿದರು. ಮಹಾತ್ಮರು ತಾನು ಮೊದಲು ಹೊರಡಿಸಿದ ಪ್ರಕಟಣೆಯ ಅಭಿಪ್ರಾಯವನ್ನೇ ಸಮರ್ಥಿಸಿ ಅದನ್ನು ಕೂಲಂಕುಷವಾಗಿ ವಿಚಾರ ಮಾಡಲು ತಾರೀಕು 22 ರಲ್ಲಿ ವರ್ಕಿಂಗ್ ಕಮಿಟಿ ಮೀಟಿಂಗನ್ನು ವಾರ್ಧಾದಲ್ಲಿ ನಡೆಸಲು ಒಪ್ಪಿಗೆಯನ್ನಿತ್ತರು. ಈ ಮೀಟಿಂಗಿಗೆ ಒಂದೆರಡು ದಿನ ಮುಂಚಿತವಾಗಿ ಕಾಂಗ್ರೆಸ್ ಕಮಿಟಿಯ ಮೆಂಬರುಗಳು ಹಲವರು ವಾರ್ಧಾದಲ್ಲಿ ಸೇರಿ ಮಹಾತ್ಮರೊಂದಿಗ ದೀರ್ಘ ಚರ್ಚೆಯನ್ನು ನಡೆಸಿದರು. ಪಂಡಿತ ಜವಾಹರಲಾಲ್ ನೆಹರೂರವರು ಈ ಚರ್ಚೆಯಲ್ಲಿ ಭಾಗವಹಿಸಿದರು.

'ಈಗಿರುವ ಸ್ಥಿತಿಯಲ್ಲಿ ಎಡಪಕ್ಷದವರಿಗೆ ಕಾಂಗ್ರೆಸಿನ ಇಡೀ ಜವಾಬ್ದಾರಿಯನ್ನು ವಹಿಸಿಕೊಂಡು ಮುಂದಿನ ಕಾರ್ಯಕ್ರಮವನ್ನು ಜಯಪ್ರದವಾಗಿ ನಡೆಸಲು ಸಾಧ್ಯವಿಲ್ಲವೆಂತಲೂ, ಹೇಗಾದರೂ ಬಲಪಕ್ಷದವರ ಸಹಕಾರದಿಂದ ಕೂಡಿದ ವರ್ಕಿಂಗ್ ಕಮಿಟಿಯನ್ನು ರಚಿಸುವದು ಉಚಿತವೆಂತಲೂ, ಈಗಿನ ವರ್ಕಿಂಗ್ ಕಮಿಟಿಯ ಮೆಂಬರುಗಳ ಮೇಲೆ ಸುಭಾಷ್‌ಚಂದ್ರಬೋಸರು ಆರೋಪಣೆಯನ್ನು ಹೊರಿಸಿದ್ದು ಯೋಗ್ಯವಲ್ಲವೆಂದು ಮಹಾತ್ಮರು ಹೇಳಿದ್ದು ಸರಿಯೆಂತಲೂ, ಆ ಆರೋಪಣೆಗಳನ್ನು ಬೋಸರವರು ಹಿಂತೆಗೆಯದಿದ್ದರೆ ತಾನೂ ಕೂಡ ವರ್ಕಿಂಗ್ ಕಮಿಟಿಯಲ್ಲಿರಲು ಇಚ್ಛಿಸುವದಿಲ್ಲವೆಂತಲೂ, ಪಂಡಿತ ಜವಾಹಿರ್‌ಲಾಲ್ ನೆಹರೂರವರು ಅಭಿಪ್ರಾಯ ಸೂಚಿಸಿರುವರು. ಹೇಗೂ ಒಗ್ಗಟ್ಟನ್ನು ಕಾಪಾಡಲು ಕಾಂಗ್ರೆಸಿನ ಬಲ ಮತ್ತು ಎಡ ಪಕ್ಷಗಳ ಭಿನ್ನಾಭಿಪ್ರಾಯವು ಹೆಚ್ಚಾಗದಂತೆ ನೋಡಿಕೊಳ್ಳಲು ಪಂಡಿತ ನೆಹರೂರವರು ಬಹು ಕುತೂಹಲದಿಂದ ಶ್ರಮಿಸುತ್ತಿರುವರು. ಆದರೆ ದುರ್ದೈವದಿಂದ ಸುಭಾಷರಿಗೆ ಅಸ್ವಸ್ಥತೆಯಾದ ಕಾರಣ ಈ ತಾ. 22ರ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಅವರು ಬರಲು ಅಶಕ್ತರಾದರು. ಮತ್ತು ಈ ಮೀಟಿಂಗನ್ನು ತ್ರಿಪುರಿ ಮಹಾಸಭೆಗೆ ಮುಂಚಿತವಾಗಿ ಅಲ್ಲಿಯೇ ನಡಿಸುವಂತೆ ಮುಂದರಿಸಬೇಕೆಂದು ಮಹಾತ್ಮರಿಗೆ ತಂತೀ ಕೊಟ್ಟರು. ಆದ್ದರಿಂದ ವರ್ಕಿಂಗ್ ಕಮಿಟಿಯವರು ವಾಡಿಕೆಯ ಕೆಲಸಗಳನ್ನೂ ಕೂಡ ಮಾಡದೆ ಮೀಟಿಂಗನ್ನು ಮುಂದಕ್ಕಿಡಬೇಕಾಯಿತು. ಮೀಟಿಂಗಿನ ಉದ್ದೇಶವಾದ ಈ ಮುಖ್ಯ ವಿಚಾರವನ್ನು ಚರ್ಚಿಸಲು ಸಾಧ್ಯವಾಗಲಿಲ್ಲ. ವರ್ಕಿಂಗ್ ಕಮಿಟಿಯ 15 ಮೆಂಬರುಗಳ ಪೈಕಿ ಸುಭಾಷ್ ಬೋಸರು ಮತ್ತು ಅವರ ಸಹೋದರ ಶರತ್‌ಚಂದ್ರ ಬೋಸರ ವಿನಹ ಉಳಿದ 13 ಜನರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡಲು ನಿಶ್ಚಯಿಸಿರುವರು. ಮುಂದಕ್ಕೆ ಈ ವಿಷಯವು ಹೇಗೆ ಬಗೆಹರಿಯುವದೋ ತಿಳಿಯದು. ಮಹಾತ್ಮರು ಇದನ್ನು ಕುರಿತು ಬೇಗನೆ ಒಂದು ಪ್ರಕಟಣೆಯನ್ನು ಹೊರಡಿಸಲಿರುವರು. ಈ ಬಿಕ್ಕಟ್ಟಿನ ಸಮಯದಲ್ಲಿ ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸಲು ಒಗ್ಗಟ್ಟನ್ನು ಕಾಪಾಡುವದು ಅಗತ್ಯವೆಂಬುದರಲ್ಲಿ ಸಂದೇಹವಿಲ್ಲ. ಹೇಗೂ ಕಾಂಗ್ರೆಸಿನ ಹಾಗೂ ದೇಶದ ಹಿತವು ಮಹಾತ್ಮರ ಕೈಯಲ್ಲಿ ಸುರಕ್ಷಿತವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಅವರು ದೇಶಕ್ಕೆ ಸರಿಯಾದ ದಾರಿಯನ್ನು ತೋರಿಸಿ ಈ ಬಿಕ್ಕಟ್ಟಿನ ಸ್ಥಿತಿಯಿಂದ ಪಾರುಮಾಡುವರೆಂದು ನಮಗೆ ಸಂಪೂರ್ಣ ವಿಶ್ವಾಸವಿದೆ.

ಸಂಸ್ಥಾನಗಳಲ್ಲಿ ಸತ್ಯಾಗ್ರಹ.

ರಾಜಕೋಟೆ.

ರಾಜಕೋಟೆಯ ಸತ್ಯಾಗ್ರಹವು ಪ್ರಬಲವಾಗಿ ನಡೆಯುತ್ತಿದೆ. ರಾಜಕೀಯ ಕೈದಿಗಳ ಪ್ರವಾಹವೇ ಸೆರೆಮನೆಗಳಿಗೆ ಹರಿಯುತ್ತಿದೆ. ಕೈದು ಮಾಡಲ್ಪಟ್ಟ ಸ್ತ್ರೀ ಕೈದಿಗಳಿಗೆ ಸರಿಯಾದ ಉಪಚಾರ ಕೊಡದ್ದರಿಂದ ಅನೇಕ ರಾಜಕೀಯ ಕೈದಿಗಳು ಅನ್ನ ಸತ್ಯಾಗ್ರಹ ಕೈಕೊಂಡಿದ್ದಾರೆ. ತಾ. 20ರಲ್ಲಿ ನಡೆದ ಒಂದು 'ಪ್ರಭಾತಫೇರಿ' ಯಲ್ಲಿ 13 ಜನರನ್ನು ಸೆರೆ ಹಿಡಿಯಲಾಯಿತಲ್ಲದೆ ಅಂದೇ ಸಾಯಂಕಾಲ ಸೇರಿದ ಸಾರ್ವಜನಿಕ ಸಭೆಯಲ್ಲಿ 12 ಜನರನ್ನು ಕೈಸೆರೆ ಹಿಡಿದಿರುವರು. ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ಮಂತ್ರಿಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ರಾಜಕೋಟೆ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿಶ್ಚಯಿಸಿರುವರು. ಅವರು ಹೇಳಿರುವುದೇನೆಂದರೆ–'ರಾಜಕೋಟೆಯು ನನ್ನ ಪತಿಗಳ ಊರು. ಅಲ್ಲಿ ನಡೆಯುವ ಚಳವಳದಲ್ಲಿ ನಾನು ಭಾಗ ವಹಿಸುವದು ನನ್ನ ಕರ್ತವ್ಯ. ಆದ್ದರಿಂದ ಚಳವಳದಲ್ಲಿ ನನ್ನ ಅವಶ್ಯಕತೆ ಕಂಡು ಬಂದಾಗ ಸತ್ಯಾಗ್ರಹದಲ್ಲಿ ಭಾಗ ವಹಿಸುವೆನು.' ಹೀಗೆ ಕಾಂಗ್ರೆಸ್ಸಿನ ಅಖಂಡ ಮುಖಂಡರು ಒಬ್ಬೊಬ್ಬ

ರಿಟ್ರೆಂಚ್‌ಮೆಂಟಿನ ಪರಿಣಾಮ.

ಶಾನುಭೋಗರುಗಳು.

ಶ್ರೀ ಕೆ. ಜಿ. ಸುಬ್ರಾಯನವರನ್ನು ಶನಿವಾರಸಂತೆಯಿಂದ ಪೊನ್ನಂಪೇಟೆಗೂ, ಶ್ರೀ ಚೆಪಿಯಪಂಡ ತಿಮ್ಮಯ್ಯನವರನ್ನು ಸುಂಟಿಕೊಪ್ಪಲಿನಿಂದ ಶ್ರೀಮಂಗಲಕ್ಕೂ, ಶ್ರೀ ಪಾಲೇಕಂಡ ಮುತ್ತಪ್ಪನವರನ್ನು ಭಾಗಮಂಡ್ಲದಿಂದ ಶನಿವಾರಸಂತೆಗೂ, ಶ್ರೀ ಮನೆಯಪಂಡ ತಿಮ್ಮಯ್ಯನವರನ್ನು ವೀರಾಜಪೇಟೆಯಿಂದ ನಾಪೋಕ್ಲಿಗೂ, ಶ್ರೀ ನೋರಿಯಂಡ ಕುಂಞಪ್ಪನವರನ್ನು ಅಮ್ಮತ್ತಿಯಿಂದ ವೀರಾಜಪೇಟೆಗೂ, ಶ್ರೀ ನೆರವಂಡ ಕಟ್ಟಪ್ಪನವರನ್ನು ಪೊನ್ನಂಪೇಟೆಯಿಂದ ಮಡಿಕೇರಿ ಖಜಾನೆ ಆಫೀಸಿನಲ್ಲಿರುವ ಶ್ರೀ. ಚೇಂಪಂಡ ಪೂಚಯ್ಯನವರ ಬದಲಿಗೂ, ಶ್ರೀ ಗುಡ್ಡಂಡ ಕಾರ್ಯಪ್ಪನವರನ್ನು ಶ್ರೀಮಂಗಲದಿಂದ ಅಮ್ಮತ್ತಿಗೂ, ಶ್ರೀ ಮುನ್‌ಸ್ವಾಮಿಯವರನ್ನು ಟ್ರೆಜರಿ ಆಫೀಸಿನಿಂದ ಇಂಗ್ಲಿಷ್ ಆಫೀಸಿನ ನಿವೃತ್ತಿಗೊಳಿಸಲ್ಪಡುವ ಶ್ರೀ. ಗುಡ್ಡಂಡ ಸುಬ್ಬಯ್ಯನವರ ಬದಲಿಗೂ, ವರ್ಗಾಯಿಸಲಾಗುವ ಜಿಲ್ಲಾ ಡಸ್ಟ್ರೀ ಗಳಾದ ಪಟ್ಟಮಾಡ ಮಂದಪ್ಪನವರು, ಕೊರವಂಡ ಚಿರ್ಮಣನವರು (ಸರ್ವೇಯರ್) ಕೂಪದರ ತಿಮ್ಮಯ್ಯನವರು ಮತ್ತು ಬಿ. ಚಂಗಪ್ಪನವರು (ಪಿ. ಡಬ್ಲ್ಯು. ಡಿ.) ನಿವೃತ್ತಿಗೊಳಿಸಲ್ಪಡುವರು. ಶ್ರೀ. ಮೂಕಂಡ ಪೊನ್ನಪ್ಪನವರು ಉತ್ತರಕೊಡಗು ಸುಬೇದಾರರ, ಶ್ರೀ ಎನ್. ಬಿ. ಮುತ್ತಣ್ಣನವರು ದಕ್ಷಿಣ ಕೊಡಗು ಸುಬೆದಾರರ ಕೈಕೆಳಗೆ ಸರ್ವೇಯರುಗಳಾಗಿಯೂ, ಶ್ರೀ ಶೇಷಗಿರಿರಾಯರನ್ನು ಇಂಗ್ಲಿಷ್ ಆಫೀಸಿನಿಂದ ಸಬ್ ಜಡ್ಜರ ಆಫೀಸಿಗೂ, ಯಂ. ಕೃಷ್ಣಯ್ಯನವರನ್ನು ಇಂಗ್ಲಿಷ್ ಆಫೀಸಿಗೂ ಮತ್ತು ಶ್ರೀ ಪಟ್ಟಮಾಡ ನಂಜಪ್ಪನವರನ್ನು ವೀರಾಜಪೇಟೆಯಿಂದ ಸೋಮವಾರಪೇಟೆ ಶಿರಸ್ತೆದಾರರಾಗಿಯೂ ನೇಮಿಸಲಾಗಿದೆಯೆಂದು ತಿಳಿಯುತ್ತೇವೆ.

ನಾಡುಕ್ಲಾರ್ಕರುಗಳು.

ಶ್ರೀ ಉದಯಂಡ ಪೂವಯ್ಯನವರ ಭಾಗಮಂಡ್ಲದಿಂದ ಶ್ರೀಮಂಗಲಕ್ಕೂ, ಶ್ರೀ ಕಟ್ಟೆರ ಮುದ್ದಯ್ಯನವರನ್ನು ವೀರಾಜಪೇಟೆಯಿಂದ ಅಮ್ಮತ್ತಿಗೂ, ಶ್ರೀ ಮೂವೆರ ಮುದ್ದಪ್ಪನವರನ್ನು ಸೋಮವಾರಪೇಟೆಯಿಂದ ಭಾಗಮಂಡ್ಲಕ್ಕೂ, ಶ್ರೀ ಮ್ಯಾಸ್ಕರೇನಿಯಸ್‌ರವರನ್ನು ಸುಂಟಿಕೊಪ್ಪದಿಂದ ಸೋಮವಾರಪೇಟೆಗೂ, ಶ್ರೀ ಕೊಂಗಂಡ ಕರುಂಬಯ್ಯನವನ್ನು ಮಡಿಕೇರಿಯಿಂದ ವೀರಾಜಪೇಟೆಗೂ, ಶ್ರೀ ಪಾಲೇಕಂಡ ಮಂದಣ್ಣನವರ್ನು ಮಡಿಕೇರಿ ನಾಡ್‌ಕ್ಲಾರ್ಕರನ್ನಾಗಿಯೂ, ಶ್ರೀ ಕಂಗಾಂಡ ಕುಶಾಲಪ್ಪನವರನ್ನು ಶ್ರೀಮಂಗಲದಿಂದ ಪೊನ್ನಂಪೇಟೆಗೂ, ಶ್ಯಾನುಬೋಗ ಶ್ರೀ ಸಿ. ರಾಮರಾವ್‌ರವರನ್ನು ಫ್ರೇಜರ್‌ಪೇಟೆಯ ನಾಡು ಕ್ಲಾರ್ಕರನ್ನಾಗಿಯೂ, ವರ್ಗಾಯಿಸಲಾಗುವದು.

ಶ್ಯಾನುಬೋಗರುಗಳು.

ಶ್ರೀ ಜೈಮನೆ ಪೊನ್ನಪ್ಪನವರನ್ನು ಮಡಿಕೇರಿಯಿಂದ ಸುಂಟಿಕೊಪ್ಪಕ್ಕೂ, ಶ್ರೀ ಬಿ. ಪಿ. ಕುಮಾರಪ್ಪನವರನ್ನು ಶನಿವಾರಸಂತೆಯಿಂದ ಸೋಮವಾರಪೇಟೆಗೂ, ಶ್ರೀ ಕೋಡಿರ ಬೆಳ್ಯಪ್ಪನವರನ್ನು ಶನಿವಾರಸಂತೆಯಿಂದ ಫ್ರೇಜರ್‌ಪೇಟೆಗೂ, ಶ್ರೀ ತಿ ರೋಡಿರ ಉತ್ತಯ್ಯನವರನ್ನು ಫ್ರೇಜರ್‌ಪೇಟೆಯಿಂದ ನಾಪೋಕ್ಲಿಗೂ, ಶ್ರೀ ಕುಟ್ಟಂಡ ಚಂಗಪ್ಪನವರನ್ನು ಅಮ್ಮತ್ತಿಯಿಂದ ವೀರಾಜಪೇಟೆಗೂ, ಶ್ರೀ ಅಜ್ಜಿಕಂಡ ಸೋಮಪ್ಪನವರನ್ನು ಅಮ್ಮತ್ತಿಯಿಂದ ವೀರಾಜಪೇಟೆಗೂ, ಶ್ರೀ ನಾಳಿಯಂಡ ಪೊಣ್ಣಪ್ಪನವರನ್ನು ವೀರಾಜಪೇಟೆಯಿಂದ ಅಮ್ಮತ್ತಿಗೂ, ಶ್ರೀ ಮತ್ರಂಡ ಸುಬ್ಬಯ್ಯನವರನ್ನು ಮಡಿಕೇರಿಗೂ, ಶ್ರೀ ಸುಬ್ಬಣ್ಣಗೌಡರನ್ನು ಶ್ರೀಮಂಗಲದಿಂದ ಪೊನ್ನಂಪೇಟೆಗೂ, ಶ್ರೀ ಮಲಚಿರ ಕುಶಾಲಪ್ಪನವರನ್ನು ಸೋಮವಾರಪೇಟೆಯಿಂದ ಶನಿವಾರಸಂತೆಗೂ, ಶ್ರೀ ಚಾರಿಮಂಡ ಗಣಪತಿಯವರನ್ನು ಪೊನ್ನಂಪೇಟೆಯಿಂದ ಮೂದಾಪುರಕ್ಕೂ, ಮತ್ತು ಶ್ರೀ ಪಟ್ರಪಂಡ ಉತ್ತಪ್ಪನವರನ್ನು ನಾಪೋಕ್ಲಿನಿಂದ ಭಾಗಮಂಡ್ಲಕ್ಕೂ ಶ್ರೀ ಬಾಳೆಯಡ ಸೋಮಯ್ಯನವರನ್ನು ಮೂದಾಪುರದಿಂದ ಮಡಿಕೇರಿಗೂ, ಶ್ರೀ ಪಾಲೇಕಂಡ ಪೂಣಚ್ಚನವರನ್ನು ವೀರಾಜಪೇಟೆಯಿಂದ ನಾಪೋಕ್ಲಿಗೂ, ಶ್ರೀ ಬಳಕರಂಡ ನಂಜಪ್ಪನವರನ್ನು ನಾಪೋಕ್ಲಿನಿಂದ ಅಮ್ಮತ್ತಿಗೂ, ವರ್ಗಾಯಿಸಲಾಗುವದಲ್ಲದೆ ಶ್ರೀ ಗಳಾದ ಮುಂಡೇಪಂಡ ಪೊನ್ನಪ್ಪನವರು (ಅಮ್ಮತ್ತಿ,) ಮನೆಯಪಂಡ ಪೊನ್ನಪ್ಪನವರು (ಪೊನ್ನಂಪೇಟೆ), ಮುಕ್ಕಾಟಿರ ತಿಮ್ಮಯ್ಯನವರು (ನಾಪೋಕ್ಲು), ಚೊಳಪಂಡ ಭೀಮಯ್ಯನವರು (ಭಾಗಮಂಡ್ಲ), ಮಂಡಿರ ಅಪ್ಪಚನವರು (ನಾಪೋಕ್ಲು), ಪಾಲೇಕಂಡ ಪೊನ್ನಪ್ಪನವರು (ಸುಂಟಿಕೊಪ್ಪ), ಕುಲ್ಲಟ್ಟಿರ ನಂಜಪ್ಪನವರು (ಸುಂಟಿಕೊಪ್ಪ, ಪ್ರತ್ಯೇಕರಾದರು), ಅಮ್ಮಣಿಚಂಡ ಚಿಣ್ಣಪ್ಪನವರು (ವೀರಾಜಪೇಟೆ) ಮತ್ತು ಕಾಕಮಾಡ ಅಯ್ಯಯನವರು (ಶ್ರೀಮಂಗಲ) ನಿವೃತ್ತಿಗೊಳಿಸಲ್ಪಟ್ಟರೆಂದೂ ತಿಳಿದು ಬರುತ್ತದೆ.

ಎಕ್ಸೈಸ್ ಇನ್ಸ್‌ಪೆಕ್ಟರಾದ ಶ್ರೀ. ಕೇಳಪಂಡ ಐಯ್ಯಣ್ಣನವರು ಪೋಲೀಸ್ ಆಫೀಸಿನ ಹೆಡ್ ಕ್ಲಾರ್ಕರಾಗಿಯೂ, ಶ್ರೀ. ಎಂ. ಎಸ್. ಅನಂತಪದ್ಮನಾಭರಾಯರು ನಿವೃತ್ತಿಗೊಳಿಸಲ್ಪಡುವ ಶ್ರೀ. ಸಿ. ಬಿ. ನಾಣಯ್ಯನವರ ಬದಲು ಮಡಿಕೇರಿ ಎಕ್ಸೈಸ್ ಇನ್ಸ್‌ಪೆಕ್ಟರಾಗಿಯೂ, ನಾಪೋಕ್ಲು ಎಕ್ಸೈಸ್ ಇನ್ಸ್‌ಪೆಕ್ಟರಾಗಿ ಶ್ರೀ. ಚೇಂದ್ರಿಮಾಡ ಗಣಪತಿಯವರೂ ನೇಮಿಸಲ್ಪಡುವರು.

ಉಪಾಧ್ಯಾಯಿನಿಯರು.

ಶ್ರೀಮತಿ ಎ. ಕೆ. ನಂಜಮ್ಮನವರನ್ನು ಮತ್ತು ಶ್ರೀಮತಿ ಟಕ್ಸಿರಾರವರನ್ನು ವೀರಾಜಪೇಟೆ ಮೋಡೆಲ್ ಶಾಲೆಗೂ, ಶ್ರೀಮತಿ ಮೂನಕ್ಕನ್ನು ಹಾಗೂ ಶ್ರೀಮತಿ ಪಿ. ಸೇಲಿನ್ಸ್‌ರವನ್ನು ಮಡಿಕೇರಿ ಮೋಡೆಲ್ ಶಾಲೆಯಲ್ಲಿಯೂ ಇಟ್ಟುಕೊಂಡು ಬಾಕಿ ಉಳಿದವರನ್ನು ನಿವೃತ್ತಿಗೊಳಿಸಲಾಗುವದು.

ಉಪಾಧ್ಯಾಯರು.

ಮಡಿಕೇರಿ ಹೈಸ್ಕೂಲಿನ ಅಧ್ಯಾಪಕರಾಗಿರುವ ಶ್ರೀ ಡಿ. ಯಂ. ಸಿದ್ದಲಿಂಗಯ್ಯನವರು, ಶ್ರೀ ಕೆ. ಪಿ. ಸುಬ್ರಾಯನವರು, ಶ್ರೀ. ಶ್ರೀನಿವಾಸ ಮೂರ್ತಿಯವರು, ಶ್ರೀ ಮತ್ರಂಡ ಬಿದ್ದಯ್ಯನವರು ಮತ್ತು ಶ್ರೀ ಓಡ್ಲುಮನೆ ಆತ್ಮರಾಮ ಶಾಸ್ತ್ರಿಗಳು ನಿವೃತ್ತಗೊಳಿಸಲ್ಪಡುವರು. ವೀರಾಜಪೇಟೆ ಹೈಸ್ಕೂಲಿನ ಶ್ರೀ ಪಾರ್ವಂಗಳ ದೇವಯ್ಯನವರನ್ನು ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರಾಗಿಯೂ, ಸಂಸ್ಕೃತ ಪಂಡಿತ ಶ್ರೀ ನಾರಾಯಣಾಚಾರ್ಯರು ಮಡಿಕೇರಿ ಹೈಸ್ಕೂಲಿಗೂ ವರ್ಗಾಯಿಸಲ್ಪಡುವರು. ಶ್ರೀ ಪಿ. ಶ್ರೀನಿವಾಸ ಮೂರ್ತಿಯವರು ನಿವೃತ್ತಿಗೊಳಿಸಲ್ಪಡುವರು.

ಮೋಡೆಲ್ ಶಾಲೆಗಳಲ್ಲಿ ಮಡಿಕೇರಿಯ ಶ್ರೀ. ಗಳಾದ ಚಿನ್ನವೀರಪ್ಪನವರೂ, ಸೋಮವಾರಪೇಟೆಯ ಮುಕ್ತಿರಾವ್‌ರವರೂ, ಪೊನ್ನಂಪೇಟೆಯ ಕೆ. ಕೃಷ್ಣಯ್ಯನವರೂ, ವೀರಾಜಪೇಟೆಯ ಯಂ. ಬಿ. ಮಾದಪ್ಪನವರು ಮತ್ತು ಬಿ. ಯಂ. ಮಂದಣ್ಣನವರೂ, ಮತ್ತು ನಾಪೋಕ್ಲಿನ ಯಂ. ಆರ್. ಸುಬ್ರಾಯನವರೂ ನಿವೃತ್ತಿಗೊಳಿಸಲ್ಪಡುವರು.

ಉತ್ತರ ಕೊಡಗು ಹಾಗೂ ದಕ್ಷಿಣ ಕೊಡಗು ಶಾಲಾ ಸುಪರ್‌ವೈಜರುಗಳಾದ ಶ್ರೀ. ಯು. ಯಂ. ಕೃಷ್ಣರಾಯರು ಮತ್ತು ನಾಯಡ ಚಿಣ್ಣಪ್ಪನವರು ನಿವೃತ್ತಿಗೊಳಿಸಲ್ಪಡುವರು.

ಡಾಕ್ಟರುಗಳು.

ಬರುವ ಮಾರ್ಚಿ ತಾ. 1 ರಿಂದ ಸಬ್ ಅಸಿಸ್ಟೆಂಟ್ ಸರ್ಜನರುಗಳಾದ ಮೆ. ಮಂದಿಕುತ್ತಿರ ಗಣಪತಿಯವರು ಗೋಣಿಕೊಪ್ಪಲಿಂದ ಸಿದ್ದಾಪುರಕ್ಕೂ, ಮೆ. ರುದ್ರಪ್ಪನವರು ಸಿದ್ದಾಪುರದಿಂದ ಗೋಣಿಕೊಪ್ಪಲಿಗೂ, ಮೆ. ನೆಲ್ಲಮಕ್ಕಳ ದೇವಯ್ಯನವರು ನಾಪೋಕ್ಲಿನಿಂದ ಶ್ರೀಮಂಗಲಕ್ಕೂ, ಮೆ. ಬಟ್ಟಿಯಂಡ ಸುಬ್ಬಯ್ಯನವರು ಶ್ರೀಮಂಗಲದಿಂದ ನಾಪೋಕ್ಲಿಗೂ, ಮೆ. ವೆಂಕಟಸುಬ್ಬಯ್ಯನವರು ಮೂರ್ನಾಡಿನಿಂದ ವೀರಾಜಪೇಟೆಗೂ, ಮೆ. ಚೇಂದ್ರಿಮಾಡ ಅಪ್ಪಯ್ಯನವರು ಬಾಳೆಲೆಯಿಂದ ಮೂರ್ನಾಡಿಗೂ, ವರ್ಗಾಯಿಸಲ್ಪಟ್ಟಿರುವರೆಂದೂ ಮತ್ತು ಮೈಸೂರಿನ ಮೆ. ಡೇನಿಯಲ್ ಡಿಸೋಜರವರು ಮಾರ್ಚಿ ಆಖೈರು ವರೆಗೆ ಬಾಳೆಲೆ ಆಸ್ಪತ್ರೆಗೆ ಹಂಗಾಮಿಯಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿಯಬರುತ್ತದೆ.

ಒಳದೇಶ.

ಕೊಡಗಿನ ಸಾರಾಯಿ ಮತ್ತು ಸೇಂದಿ ಅಂಗಡಿಗಳ ಲೈಸೆನ್ಸು ಹರಾಜಿನಲ್ಲಿ ಈ ವರ್ಷ ಕಳೆದ ವರ್ಷಕ್ಕಿಂತ ರೂ. 20,375 ಕಡಿಮೆ ಆದಾಯವಾಗಿದೆಯೆಂದು ತಿಳಿಯಬರುತ್ತದೆ.

ಕೊಡಗಿನ ಎಡಿಷನಲ್ ಜುಡಿಷಿಯಲ್ ಕಮಿಷನರ ಚಾರ್ಜನ್ನು ಮಿ. ಎಲ್. ಸಿ. ಹಾರ್‌ವಿಲ್ ಐ. ಸಿ. ಎಸ್. ರವರು ತಾ. 21ರಿಂದ ಬೆಂಗಳೂರಿನಲ್ಲಿ ವಹಿಸಿಕೊಂಡಿರುವರು.

ಮೈಸೂರು ವಿದ್ಯಾ ಸರ್ವಿಸಿನಲ್ಲಿರುವ ಶ್ರೀ. ಪುಲಿಯಂಡ ಜಿ. ಮುತ್ತಪ್ಪ ಬಿ. ಎ. ಯವರು ಕಳೆದ ರಿಜಿಸ್ಟೇಷನ್ ಮತ್ತು ಸ್ಟ್ಯಾಂಪ್ ಆಕ್ಟ್ ಪರೀಕ್ಷೆಯಲ್ಲಿ 1ನೇ ತರಗತಿಯಲ್ಲಿ ಪಾಸಾಗಿರುವರೆಂದೂ, ಇಡೀ ಸಂಸ್ಥಾನದಲ್ಲಿ 6ನೇ ಬಂದಿರುವದಾಗಿಯೂ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110, ಯೊಲಕ್ಕಿ ಮಣಕ್ಕೆ ರೂ. 25 ಕ್ರಯವಿರುತ್ತೆ.

ಇಲ್ಲಿಯ ತಾಲೋಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಈ ತಾರೀಕು 27ನೇ ಸೋಮವಾರ ಮಧ್ಯಾಹ್ನ 3 ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುವದು.

ಮೈಸೂರಿನ ದಿವಾನರಾದ ಸರ್. ಮಿರ್ಜಾ ಇಸ್ಮೆಯಿಲ್ ಕೆ. ಸಿ. ಐ. ಈ. ಓ. ಬಿ. ಈ. ಯವರು ಮಂಗಳೂರಿಗೆ ಹೋಗುವ ಸಂದರ್ಭದಲ್ಲಿ ಇಲ್ಲಿಯ ಕೆಲವು ಪುರನಿವಾಸಿಗಳು ಅವರಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು.

ಇಲ್ಲಿಯ ಸಬ್ ಮೇಜಿಸ್ಟ್ರೇಟ್ ಕೋರ್ಟು, ರಿಟ್ರೆಂಚ್‌ಮೆಂಟಿನ ದೆಸೆಯಿಂದ ಈ ಮಾರ್ಚಿ 1ರಿಂದ ಮುಚ್ಚಲ್ಪಡುವದೆಂದೂ ಎರಡನೇ ಕ್ಲಾಸ್ ಪವರ್ ಕೊಡಲ್ಪಟ್ಟಿರುವ ಇಲ್ಲಿಯ ಮುನ್ಸೀಫರು ತಾರೀಕು 1 ರಿಂದ ಎರಡನೇ ಕ್ಲಾಸ್ ಕೇಸುಗಳನ್ನು ವಿಚಾರಿಸುವರೆಂದೂ ಪ್ರಕಟವಾಗಿದೆ.

ವೀರಾಜಪೇಟೆ.

ಇಲ್ಲಿ ಬತ್ತ ಗಾಡಿಗೆ ರೂ. 40 ಕ್ರಯವಿರುತ್ತೆ.

ಇಲ್ಲಿಯ ಸಿನಿಮಾ ಕಂಪೆನಿಯ ಪ್ರೊಪ್ರೈಟರಾದ ಶ್ರೀ. ಬಿ. ಎ. ಮಂದಣ್ಣನವರು ಇಲ್ಲಿಯ ಹೈಸ್ಕೂಲಿಗೆ ರೂ. 100 ಬಾಲಚಮೂ ಸಂಸ್ಥೆಗಾಗಿ ಕೊಟ್ಟಿರುವರೆಂದು ತಿಳಿಯುತ್ತೇವೆ.

ಪೊನ್ನಂಪೇಟೆ.

ಕಿಗ್ಗಟ್ಟುನಾಡು ತಾಲೋಕು ಕಾಂಗ್ರೆಸ್ ಕಮಿಟಿಯ ಮಹಾ ಸಭೆಯು ಮಾರ್ಚಿ ತಾ. 11ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಪೊನ್ನಂಪೇಟೆಯಲ್ಲಿ ಜರಗುವದು.

ಹುದಿಕೇರಿ.

ಇರ್ಪು ಜಾತ್ರೆಗೆ ಹೋಗುವ ಯಾತ್ರಿಕರ ಒಂದು ತಂಡದಲ್ಲಿಯ, ತಾಯಿ ಮತ್ತು ಮಗಳಿಬ್ಬರಿಗೆ ಮಾತ್ರ ಹುದಿಕೇರಿಯ ಸ್ವಲ್ಪ ದೂರದಲ್ಲಿ ಜೇನು ಹುಳಗಳು ಮುತ್ತಿ ಕಚ್ಚಿದವೆಂದೂ, ಅವರ ಮೈಯೆಲ್ಲಾ ಬಾತು ಹೋಗಿ ಅವರಿಗೆ ಜಾತ್ರೆಗೆ ಹೋಗಲಾಗದೆ ಬಸ್ಸಿನವರು ಅವರನ್ನು ಅವರ ನಿವಾಸ ಸ್ಥಾನವಾದ ಬಿಟ್ಟಂಗಾಲಕ್ಕೆ ತಂದು ಬಿಟ್ಟರೆಂದೂ ವರ್ತಮಾನ.

ಶೆಟ್ಟಿಗೇರಿ.

ಶೆಟ್ಟಿಗೇರಿಯಿಂದ ಮರೆನಾಡಿಗೆ ನೆಂಟರ ಮನೆಗೆ ಹೋಗುತ್ತಿದ್ದ ಒಬ್ಬ ಗಂಡಸು ಮತ್ತು ಹೆಂಗಸನ್ನು ಹಗಲು ಹೊತ್ತಿನಲ್ಲಿ ಒಂದು ಹುಲಿಯು ಕಚ್ಚಿ, ಗಾಯಪಡಿಸಿತೆಂತಲೂ ಹೆಂಗಸಿಗೆ ತುಂಬಾ ಜಖಂ ಆಗಿ ಇಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದು ತಿಳಿಯಬರುತ್ತದೆ.

ರಾಗಿ ಸಂಸ್ಥಾನಗಳ ಚಳವಳದಲ್ಲಿ ಪ್ರವೇಶಿಸುತ್ತಿರುವದು ಮುಂದಿನ ಕಾಂಗ್ರೆಸ್ ಹಾಗೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಳಗೆ ನಡೆಯತಕ್ಕ ಟಕ್ಕರಿಕ್ಕೆ ಕುರುಹುಗಳಾಗಿವೆ. ಕಾಂಗ್ರೆಸ್ ಮುಖಂಡರೆಲ್ಲರೂ ಒಂದಿಲ್ಲೊಂದು ಸಂಸ್ಥಾನದ ಸಂಪರ್ಕವಿದೆ. ಅಂದ ಬಳಿಕ ಸಂಸ್ಥಾನಗಳ ಚಳವಳವು ಭಾರತ ಸ್ವಾತಂತ್ರ್ಯ ಸಾಧನೆಯ ಚಳವಳವಾಗಿ ಶೀಘ್ರವೇ ಪರಿವರ್ತನೆ ಹೊಂದುವುದರಲ್ಲಿ ಆಶ್ಚರ್ಯವೇನಿದೆ?

ಜಯಪುರ.

ಈ ಸಂಸ್ಥಾನದ ಸತ್ಯಾಗ್ರಹವು ಒಳ್ಳೆ ಹುರುಪಿನಿಂದ ನಡೆಯುತ್ತಿದೆ. ಈ ವರೆಗೆ 40 ಜನರು ಸೆರೆಮನೆಗೆ ನಡೆದಿರುವರು. ತಾರೀಕು 10ರಲ್ಲಿ 6 ಕೈಸೆರೆಗಳಾಮನ್ನು ಸೆರೆಮನೆಯಲ್ಲಿರುವ ರಾಜಕೀಯ ಬಂಧಿಗಳು ತಮಗೆ ಕೊಡುತ್ತಿರುವ ಆಹಾರವು ಅಸಾಧ್ಯ ಖಾದ್ಯವೆಂದು ಅನ್ನ ಸತ್ಯಾಗ್ರಹವನ್ನು ಕೈಕೊಂಡಿರುವರು. ಪ್ರಜಾ ಮಂಡಳದ ಅನೇಕ ಧುರೀಣರು ಸೆರೆಮನೆವಾಸಿಗಳಾಗಿರುವರು. ಬಂಧಿಗಳೆಲ್ಲ ಮೋಹನಪುರ ಜೈಲಿನಲ್ಲಿಟ್ಟಿರುವರು. ಈ ಸತ್ಯಾಗ್ರಹಕ್ಕೆ ಬೆಂಬಲವನ್ನೀಯಲು ಇತರ ಪ್ರಾಂತಗಳಿಂದ ಸತ್ಯಾಗ್ರಹಿಗಳ ತಂಡಗಳು ಬರುತ್ತಿವೆ. ಹೀಗೆ ಇಲ್ಲಿಯೂ ಸಂಸ್ಥಾನ ಕಾಂಗ್ರೆಸ್ಸಿನೊಡನೆ ಹೊರಗಿನ ಪ್ರಾಂತ್ಯದವರು ಸಹಕರಿಸಿ ಸಂಸ್ಥಾನಾಧೀಶರ ಅರ್ಥಾತ್ ಬ್ರಿಟಿಷ್ ಧೋರಣೆಯನ್ನು ಖಂಡಿಸಲು ಮುಂದಾಗುತ್ತಿರುವರು. ನಾಗಪುರ ಕಾಂಗ್ರೆಸ್ಸಿನ ಸಭೆ ಸೇರಿ ಜಯಪುರ ಸಂಸ್ಥಾನದ ಚಳವಳವನ್ನು ಸಮರ್ಥಿಸಿಯೂ, ಸೇಟ್ ಜಮ್ನಾಲಾಲ್ ಬಜಾಜರ ಕೈಸೆರೆಯನ್ನು ಖಂಡಿಸಿಯೂ ಮತ್ತು ಸುಸಮಯದಲ್ಲಿ ತಮ್ಮ ಸಹಾಯವನ್ನು ಈ ಚಳವಳಕ್ಕೆ ನೀಡುವೆವೆಂದು ಘೋಷಿಸಿಯೂ ಠರಾವುಗಳನ್ನು ಮಾಡಿರುವರು.

ಹೈದರಾಬಾದು

ಗಾಂಧೀಜೀ ಹಾಗೂ ಇತರ ಕಾಂಗ್ರೆಸ್ ಮುಖಂಡರ ಪ್ರೇರಣೆಯಂತೆ ಹೈದರಾಬಾದು ಕಾಂಗ್ರೆಸಿನ ಸತ್ಯಾಗ್ರಹ ಚಳವಳವು ನಿಲ್ಲಿಸಲ್ಪಟ್ಟಿರುವದು. ಆದರೆ ಕಾಂಗ್ರೆಸಿನಂತೆಯೇ ಚಳವಳ ನಡೆಸುತ್ತಿದ್ದ ಆರ್ಯಸಮಾಜದವರ ಚಳವಳವು ಕಠೋರವಾಗಿ ನಡೆಯುತ್ತಿದೆ. ಇಂದು ಭಾರತದ ಆರ್ಯಸಮಾಜ ಸಂಸ್ಥೆಯ ವ್ಯಕ್ತಿಯು ಹೈದರಾಬಾದಿನಲ್ಲಿ ಕೇಂದ್ರೀಕೃತವಾಗಿದೆ. ಜೋಧಪುರದ ಆರ್ಯಸಮಾಜ ಸಂಸ್ಥೆಯವರು ತಮ್ಮದೊಂದು ಪಥಕವನ್ನು ಹೈದರಾಬಾದಿಗೆ ಕಳುಹಿಸಿರುವರು. ಲಾಹೋರಿನಿಂದ 50 ಜನರಿಂದ ಕೂಡಿದ ಮತ್ತೊಂದು ಪಥಕವು ಹೈದರಾಬಾದಿಗೆ ಬರುತ್ತಿದೆ. ಪರಿಸ್ಥಿತಿಯೇನಾಗುವದೆಂಬುದು ನಿರೀಕ್ಷಣೀಯ ವಿಚಾರ.

ಮೈಸೂರು.

ಮೈಸೂರಿನಲ್ಲಿ ಪೋಲೀಸ್ ಸ್ಟೇಷನ್ ಒಂದನ್ನು ಕಟ್ಟಿಸಿರುವರು. ಅದಕ್ಕೆ ಈ ಮೊದಲು ಪೋಲೀಸ್ ಜನರಲರಾಗಿದ್ದ ಹ್ಯಾಮಿಲ್ಟನ್‌ರವರ ಹೆಸರನ್ನಿಡಬೇಕೆಂಬ ಯೋಜನೆಯು ನಡೆದಿತ್ತು. ಅದನ್ನು ಆಕ್ಷೇಪಿಸಿಯೇ ಇಲ್ಲಿ ಸತ್ಯಾಗ್ರಹ ಹೂಡಿರುವದಾಗಿದೆ. ಸಂಸ್ಥಾನ ಕಾಂಗ್ರೆಸಿನ ಪರ ಈ ಸತ್ಯಾಗ್ರಹ ಹೂಡಲ್ಪಡದಿದ್ದರೂ ವೈಯಕ್ತಿಕವಾಗಿ ಕಾಂಗ್ರೆಸಿನವರು ಈ ಸತ್ಯಾಗ್ರಹ ಹೂಡಿರುವರು. ದಿವಾನರು ತಾವೇ ಕಟ್ಟಡಕ್ಕೆ ಈ ಹೆಸರನ್ನಿಡಲು ನಿರ್ಧರಿಸಿದ್ದು ಎಂದು ಕೌನ್ಸಿಲು ಸಭೆಯಲ್ಲಿ ವ್ಯಕ್ತಪಡಿಸಿರುವರು. ತಮ್ಮ ಸಂಸ್ಥಾನದ ಒಂದು ಕಟ್ಟಡಕ್ಕೆ ಪಾಶ್ಚಿಮಾತ್ಯರ ಹೆಸರನ್ನಿಡುವದರಲ್ಲಿ ಅರ್ಥವಿಲ್ಲವೆಂದೇ ಸತ್ಯಾಗ್ರಹಿಗಳ ವಾದ. ಅಂತೂ ಕಟ್ಟಡದ ಮೇಲಿರುವ ಹೆಸರನ್ನು ಅಳಿಸಿ ಬಿಡಲು ಸತ್ಯಾಗ್ರಹಿಗಳು ಸುಣ್ಣ ಮೊದಲಾದ ಸಾಮಗ್ರಿಗಳೊಡನೆ ಹೊರಟಿರುವರು. ಈ ಸತ್ಯಾಗ್ರಹದ ಕಾರಣವು ಕ್ಷುಲ್ಲಕವೆಂದು ಕೆಲವರಿಗನಿಸಿದರೂ ಇದರ ಒಳ ಅರ್ಥವು ಮಹತ್ವದ್ದಿರುವದು. ಈ ಸತ್ಯಾಗ್ರಹವೇ ಕ್ರಮೇಣ ಮುಂದುವರಿದು ಜವಾಬ್ದಾರಿ ಸರಕಾರದ ಚಳವಳವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ.

ನೋಟೀಸು.

ಕಡಿಯತ್ತುನಾಡು ಮಲೆ ದೇವರ ಬಂಡಾರದ ಲೆಕ್ಕ ಮತ್ತು ಆಡಳಿತದ ಕುಂದು ಕೊರತೆಗಳು 'ಕೊಡಗು' ಮತ್ತು 'ಸ್ವತಂತ್ರ ಭಾರತ' ಪತ್ರಿಕೆಗಳಲ್ಲಿ ಈ ಮೊದಲೇ ವಿವರಿಸಿರುವದನ್ನು ಅಜಮಾಯಿಸಲು ಬರುವ ಮಾರ್ಚಿ ತಾ. 5ನೇ ಆದಿತ್ಯವಾರ ದಿನ ಹಗಲು 11 ಗಂಟೆಗೆ ಕಡಿಯತ್ತುನಾಡು ಪಾಣಾಣೆಯಲ್ಲು ಒಂದು ಜನರಲ್ ಮೀಟಿಂಗು ಏರ್ಪಡಿಸಿರುವದರಿಂದ ನಾಡಿನ ಸರ್ವ ಜನರು ದೇವರ ಕಾರ್ಯವನ್ನು ಉದ್ಧಾರ ಮಾಡುವ ಬಗ್ಗೆ ಸದರಿ ದಿನ ಹಾಜರಾಗಬೇಕಾಗಿ ವಿನಂತಿ. ಆ ದಿನ ಮಧ್ಯಾಹ್ನದ ಊಟ ಉಪಚಾರಕ್ಕೆ ತಕ್ಕ ಏರ್ಪಾಡು ಮಾಡಲಾಗಿದೆ. ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ತಿಳಿಸಲು ಅಸಾಧ್ಯವಾದ ಕಾರಣ ಈ ಸಂಗತಿ ಈ ಪತ್ರಿಕೆಯ ಮೂಲಕ ತಿಳಿಸಿದ್ದಾಗಿದೆ.

ಪಾಲಂದಿರ ಮೊಣ್ಣಪ್ಪ,
ಪಟ್ಟಚೆರವಂಡ ಪೊನ್ನಪ್ಪ,
ಅಪ್ಪನೆರವಂಡ ಮಂದಪ್ಪ,
ನಾಡು ತಕ್ಕರು.

ಮಾರಾಟಕ್ಕಿದೆ.

ಉತ್ತರ ಕೊಡಗು ತಾಲೋಕು ಶ್ರೀಮಂಗಲ ನಾಡು ... ಜರ್‌ಪೇಟೆ ಹೋಬಳಿ ತೊರೆನೂರು ಮಣಜೂರು ಗ್ರಾಮದ ಮಾತಂಡ ನಂಜಪ್ಪನವರ ಹೆಸರಿನಲ್ಲು ಜಮಾಬಂದಿ ನಡೆದು ಬರುವ ಸರ್ವೆ ನಂಬರು 78, 79, 80, 81 ರ ಒಟ್ಟು 18 ಏಕರು ಹೊಲ ಮಾರಾಟಕ್ಕೆ ಇದೆ. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ಇದರ ತಪಶೀಲನ್ನು ತಿಳಿದುಕೊಳ್ಳಬಹುದು.

ಯಂ. ಬಿ. ನಂಜಪ್ಪ,
ಯಂ. ಎ. ಪೂವಯ್ಯ,
2–1. ಬೆಳ್ಳುಮಾಡು ಗ್ರಾಮ,
ಮೂರ್ನಾಡು.

ಹಿಂದೂದೇಶ.

ಬಂಗಾಳ ಪ್ರಾಂತ್ಯದ ಗವರ್ನರಾದ ಲಾರ್ಡ್ ಬ್ರೆಬೋರ್ನ್‌ರವರು ಈ ತಾ. 23 ರಲ್ಲಿ ಶಿವಾಧೀನರಾದರೆಂದು ತಿಳಿಯ ಬರುತ್ತದೆ.

ಸಿಂಧ್ ಸರ್ಕಾರವು ಸರಕಾರೀ ಆಫೀಸರರು ಖಾದಿ ಉಡಿಗೆಯನ್ನಲ್ಲದೆ ಖಾದಿ ಟೋಪಿಯನ್ನೂ ಆಫೀಸು ಸಮಯದಲ್ಲಿ ಧರಿಸಲು ಅಡ್ಡಿಯಿಲ್ಲವೆಂದಿದೆ.

ತ್ರಿಪುರಿ ಕಾಂಗ್ರೆಸ್ಸಿಗೆ ಬರುವ ನಾಯಕರ ಶಾಂತಿಗೆ ಭಂಗವು ಬಾರದಿರಲು, ತ್ರಿಪುರಿ ಕಾಂಗ್ರೆಸ್ ಆವರಣದೊಳಗೆ ಬಾಪೂಜಿ ಮತ್ತು ಬೋಸರ ಕಾರುಗಳು ವಿನಹಾ ಮಿಕ್ಕ ಕಾರುಗಳು ಪ್ರವೇಶಿಸದಂತೆ ಏರ್ಪಾಟು ಮಾಡಿರುವರು.

ಮೈಸೂರಿನಿಂದ ಗಡೀಪಾರು ಮಾಡಲ್ಪಟ್ಟಿದ್ದ 'ಪ್ರಜಾಮತ' ಪತ್ರಿಕೆಯ ಸಂಪಾದಕರಾದ ಶ್ರೀ ಬಿ. ಎನ್. ಗುಪ್ತರವರ ಮೇಲಿನ ಪ್ರತಿಬಂಧಕಾಜ್ಞೆಯನ್ನು ರದ್ದುಗೊಳಿಸಿರುವರು. ಆದರೆ ಅವರು ಮೈಸೂರಿನಲ್ಲಿರುವಾಗ ಯಾವ ರಾಜಕೀಯ ವಿಚಾರದಲ್ಲೂ ಕೈಹಾಕಬಾರದಂತೆ.

ರಾಷ್ಟ್ರಪತಿಗಳಾದ ಶ್ರೀ ಸುಭಾಷ ಚಂದ್ರಬೋಸರು ನಿಮೋನಿಯಾ ಕಾಯಿಲೆಯಿಂದ ನರಳುತ್ತಿರುವರು. ಅವರು ತುಂಬಾ ನಿಶ್ಶಕ್ತರಾದ ಕಾರಣ ಡಾಕ್ಟರುಗಳ ಅಭಿಪ್ರಾಯದಂತೆ ಕಳೆದ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಹೋಗಲಿಲ್ಲ. ಈಗ ಅವರ ಪ್ರಕೃತಿಯು ಗುಣಮುಖವಾಗುತ್ತಿರುವದು.

ಖಾಲ್ಸಾ ಸಂಸ್ಥಾನದಲ್ಲಿ ಸರ್ಕಾರದವರು ರೈತರ ಸಾಲಗಳನ್ನೆಲ್ಲಾ ತಾವೇ ಸಂಪೂರ್ಣವಾಗಿ ವಹಿಸಿಕೊಂಡು ತೀರಿಸುವುದಾಗಿಯೂ, ರೈತರಿಂದ ದೀರ್ಘ ಕಾಲದಲ್ಲಿ ಆ ಹಣವನ್ನು ಕಿಸ್ತುಗಳ ಮೂಲಕ ಸರ್ಕಾರದವರು ವಸೂಲು ಮಾಡಿಕೊಳ್ಳುವುದಾಗಿಯೂ ಆ ಸಂಸ್ಥಾನದ ದಿವಾನರಾದ ಸರ್ದಾರ್ ರಣವೀರ ಸಿಂಗ್‌ರವರು ರೈತರ ಸಭೆಯಲ್ಲಿ ಅಪ್ಪಣೆ ಕೊಡಿಸಿದರು.

ಕಳೆದ ವಾರ ಲೂಧಿಯಾನದಲ್ಲಿ ಸಂಸ್ಥಾನಗಳ ಪರಿಷತ್ತು, ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಅತಿ ಯಶಸ್ವಿಯಾಗಿ ನಡೆಯಿತು. ಹಿಂದೂಸ್ಥಾನದ ಅನೇಕ ಸಂಸ್ಥಾನಗಳಲ್ಲಿ ಉದ್ಭವಿಸಿದ ರಾಜಕೀಯ ಹೋರಾಟದ ಬಗ್ಗೆ ಅವರನ್ನು ಅಭಿನಂದಿಸುವ ಮತ್ತು ಸಂಸ್ಥಾನದ ಜನರಲ್ಲಿ ಅವರ ರಾಜಕೀಯ ಹಕ್ಕುಗಳ ಅರಿವನ್ನುಂಟುಮಾಡಿದ ಬಗ್ಗೆ ಸಾರ್ವಜನಿಕ ಕಾರ್ಯಕರ್ತರನ್ನು ಅಭಿನಂದಿಸುವ ಠರಾವು ಪಾಸಾದುದಲ್ಲದೆ, ಈ ಕಾರ್ಯಕರ್ತರು, ಜನರಲ್ಲಿ ಖಾದಿ ಪ್ರಚಾರ, ಮದ್ಯಪಾನ ನಿರೋಧ ಜಾತಿಜಾತಿಗಳಲ್ಲಿ ಐಕ್ಯತೆ ಸಂಘಟನೆ ಮುಂತಾದ ವಿಧಾಯಕ ಕಾರ್ಯಗಳನ್ನು ಪ್ರಸಾರ ಮಾಡಬೇಕೆಂದು ಕಾರ್ಯಕರ್ತರಿಗೆ ಬಿನ್ನವಿಸಿಕೊಳ್ಳುವ ಠರಾವೂ ಪಾಸಾಯಿತು.

ಮುಂಬಾಯಿ ಸಂಸ್ಥಾನವು 3 ವರ್ಷಗಳೊಗೆ ಸಂಪೂರ್ಣ ಪಾನನಿರೋಧ ಕಾನೂನನ್ನು ಜಾರಿಯಲ್ಲಿ ತರಲು ಮುಂಬಯಿ ನಗರ ಮತ್ತು ಅದರ ಸುತ್ತಮುತ್ತಲು ಮುಂದಿನ ಆಗೋಸ್ತು 1 ರಿಂದ ಸಂಪೂರ್ಣ ಪಾನನಿರೋಧ ಕಾನೂನು ಜಾರಿಯಲ್ಲಿ ತರಲು ಅಲ್ಲಿಯ ಮಂತ್ರಿ ಮಂಡಲ ಯೋಚಿಸಿದೆ. ಇದರಿಂದಾಗಿ ಮುಂಬಾಯಿ ನಗರದ ಯೂರೋಪಿಯನರಲ್ಲಿ ಕೊಂಚ ಬೇಸರವೂ ಉಂಟಾಗಿದೆ. ಕಳೆದ ಒಂದು ವರ್ಷದಲ್ಲಿ ಈ ನಗರದಲ್ಲಿ ಖರ್ಚಾದ ಬೀರ್–ವೈನ್–ಬಾಟ್ಲಿಗಳು ಸುಮಾರು 50,96,000 ಇವುಗಳ ಬೆಲೆ ರೂ. 7,75,3000. ರೂ. 73,7000 14,7000 ಬಾಟ್ಲಿ ವೈನ್, 3700000 ರೂಪಾಯಿ ಕ್ರಯದ 52,8000 ಬಾಟ್ಲಿ ಜಿನ್ ಮತ್ತು ರೂ. 33,16,000 ಕ್ರಯದ 44,21,000 ಬಾಟ್ಲಿ ಬೀರ್!

ನಿಧನ ವಾರ್ತೆ.

ತಾರೀಕು 18ರಲ್ಲಿ ಶ್ರೀ ಕೊಂಗೆಟ್ಟಿರ ಬೋಪಯ್ಯನವರು ಮೈಸೂರು ಆಸ್ಪತ್ರೆಯಲ್ಲಿ ಮೃತರಾದರೆಂದೂ, ಅವರ ಶವವನ್ನು ಕೊಡಗಿಗೆ ತಂದು ದಫನ ಮಾಡಲಾಯಿತೆಂದೂ ತಿಳಿಸಲು ವ್ಯಸನಪಡುತ್ತೇವೆ.

ನೆಲಜಿ ಶಾಲಾ ಉಪಾಧ್ಯಾಯರಾಗಿದ್ದ ಶ್ರೀ. ಮುಚ್ಚಮಣಿಯಂಡ ಅಚ್ಚಮ್ಮನವರು ಈ ದಿನ ಮಡಿಕೇರಿ ಆಸ್ಪತ್ರೆಯಲ್ಲಿ ಕಾಲಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

Please visit :—

Hotel Kohinoor

Comfortable–**Coorg Boarding & Lodging.**

Opp.—Krishna Rajendra Hospital, Mysore.

ಹೊಟೆಲ್ ಕೊಹಿನೂರ್

ಶ್ರೀ ಕೃಷ್ಣ ರಾಜೇಂದ್ರ ಆಸ್ಪತ್ರೆ ಎದುರು, ಮೈಸೂರು.

ಕೊಡಗರ ಈ ಹೊಟೆಲು ನಗರದ ಮುಖ್ಯ ಸ್ಥಳಗಳಾದ–ಆಸ್ಪತ್ರೆ, ಅರಮನೆ, ರೈಲ್ವೆ ಸ್ಟೇಷನ್, ಬಸ್ ಸ್ಟೇಂಡ್, ಮಾರ್ಕೆಟ್ ಮತ್ತು ಸಿನೆಮ ಮಂದಿರ ಮೊದಲಾದವುಗಳಿಗೆಲ್ಲಾ ಕೇಂದ್ರದಲ್ಲಿದ್ದು, ಸಂಸಾರಸ್ಥರಿಗೂ, ಏಕಾಂಗಿಗಳಿಗೂ ವಾಸಕ್ಕೆ ಯೋಗ್ಯವಾಗಿದೆ. ಎಲ್ಲಾ ಜನಾಂಗ ಮತ್ತು ಎಲ್ಲಾ ತರಗತಿಯ ಜನಗಳಿಗೂ, ಖಾಯಂ ಬೋರ್ಡರುಗಳಿಗೂ ಒಪ್ಪುವಂತ ಭೋಜನ ಮತ್ತು ದರಗಳಿರುತ್ತವೆ.

ಮಹನೀಯರು ಪ್ರೋತ್ಸಹಿಸಬೇಕಾಗಿ ಪ್ರಾರ್ಥನೆ.

ಬೇಕಾದ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಹೊಟೆಲ್ ಕೊಹಿನೂರ್.
ಮೈಸೂರು.

3

ಈ ಸಾರಿಯ ಕಾಂಗ್ರೆಸ್ ಅಧಿವೇಶನ ನಡೆಯುವ

ತ್ರಿಪುರಿಯ ಗತವೈಭವ.

ತ್ರಿಪುರಿಯು ಸಿಂಹಿಣಿಯರ ನೆಲೆವೀದು. ಕೆಳಕ್ಕೆ ಧುಮುಕುವನು. ಈ ನೋಟವು ...ಅಸ ಪ್ರಸಿದ್ಧಳಾದ ದ್ಘೋಂ ... ಟು ...ಂಡವನ್ನ

ಬರೋಡ ಸಂಸ್ಥಾನಕ್ಕೆ ಸುಧಾರಣೆಗಳು.

ಚುನಾಯಿತ ಮೆಂಬರರ ಬಹುಮತ ವಿರುವ ಧಾರಾಸಭೆ.

—:0:—

ಬಾತ್ಮಿ.

ಮಡಿಕೇರಿಯಲ್ಲಿ ಮೈಸೂರು ದಿವಾನರಿಗೆ ಮೈಸೂರು ಲೀಗಿನವರ ಬಿನ್ನಹ ಪತ್ರ.

ಮೈಸೂರು ಲೀಗಿನವರೇ,

ತಾರೀಕು 18-2-39 ರಲ್ಲಿ ಮೈಸೂರು ದಿವಾನರು ಮಂಗಳೂರಿಗೆ ಹೋಗುವಾಗ ಮಡಿಕೇರಿಯಲ್ಲಿ ತಾವು ಅತೀ ಭ
ಸ್ನೆಹಪತ್ರ
ಕದೆ ಸಂ
ಯಿಸ್ತು ಆ
ಮನೇಸೋ
ಷವೇಕೆಂ
ಜು 6000
ಜನರಾದ
ನ್ನು ಒಪ್ಪಿಸ
ಮಾನವನ್ನು
ರಿಗೆ ಕೊಟ್ಟಂ
ನವರಿಗೆ ಸರಿ
ಪಟ್ಟಣದಲ್ಲಿ
ಸ್ವಾಪ ಸ್ವಿಗ
. ಮಡಿಕೇರಿ
ಬರುವಿಕೆ ತಿಳಿ
ನೋಡುವಾ
ಮ ನಂಬಿಕೆ
ಗಾದರೆ ಬಿನ್ನ
ಹೂವಿನ ಹಾ
ಮಯವಿತ್ತಲ್ಲಿ
ಕ್ಕೆ ಮಾತ್ರ ಸ
ಗುಟ್ಟು ನ
ಲ್ಲಿ ಮುಖ್ಯಸ್ಥ
ಗುಟ್ಟು ಹೊರ
ಒಂದು ಕಡೆ,
ಂತೆಯೇ ಹ
ಂದೀತು ಎಂಬ
ಕಿ. ನಾಳೆ ಮೈ
ರಿವರೆ (ನೇರುವ
ಬಿರುದು ಸಿಕ್ಕು
ಮತ್ತೊಂದು
ಕದ ಉಪಾಯ
ರಿಕ್ಕಲ್ಲ. ದಿವಾ
ತಿಯು ತಿಳಿದಿರಬ
ಬರೇ ಒಂದು
ತಾವು ಸಾರಿಸಿದ
ಕ್ಕೆ ಮಡಿಕೇರಿಯ
ತೆಗೆದ ಹಾಗೆ
ಹದಿನೈದು ಜನ
ವನ್ನು ಕೊಡಲು
ಪುರ ನಿವಾಸಿಗಳ
ರೆಯಬು ನಿಮಗ
ರು? ಪುರನಿವಾಸಿ
ನಾದರೂ ಆಫಿ
ತಂತು ದಿವಾನರ ನ
ಟೀಪಾರ್ಟಿಯೂ
ನಮಗೆ ಅಂದರೆ ಪ
ಸರಕ್ಕೆ 'ರಾಜಭೂ
ಬರಬಹುದಲ್ಲವೇ?
ವರೂ ಈ ತರದ ಉ
ಗರ ಹೆಸರನ್ನು ಮ
ಡಿ.

ಮೈಸೂರು ದಿವಾನರಿಗೆ ಮರ್ಯಾದೆಯನ್ನು ತೋರಿಸುವ ನಿಮ್ಮ ಆತುರದಲ್ಲಿ ಮಡಿಕೇರಿ ಪಟ್ಟಣಿಗರಲ್ಲಿ ಅತೃಪ್ತಿ ಹುಟ್ಟಿಸಿದ್ದು ವ್ಯಸನಕರ. 'ಮಡಿಕೇರಿ ನಿವಾಸಿ'

—

Supplement to this issue.

ನಾಪೋಕ್ಲಿನಲ್ಲಿ ನಡಿಯುವ

ದಕ್ಷಿಣ ಕೊಡಗಿನ ದನಗಳ ಜಾತ್ರೆ.

ಇಲ್ಲಿ ಹಣ್ಣುಹಂಪಲು, ತರಕಾರಿ, ಹೆಣಿಗೆ, ಕೈ ಹೊಲಿಗೆ, ಮಗ್ಗದ ಬಟ್ಟೆಗಳು, ಕೈಗಾರಿಕೆ, (ಚಿತ್ರ, ನಾಟಿ, ಮರದ ಸಾಮಾನುಗಳು) ಪ್ರದರ್ಶನವು ನಡೆಯುತ್ತವೆ,

ಈ ಜಾತ್ರೆಯು 1939ನೇ ಇಸವಿ ಮಾರ್ಚಿ ತಿಂಗಳಲ್ಲಿ 18 ಮತ್ತು 19ನೇ ತಾರೀಕುಗಳಲ್ಲಿ ನಡೆಯುವುದು.

ವಸ್ತು ಪ್ರದರ್ಶನದ ಸಾಹಿತ್ಯವು ಈ ತಾರೀಕು 19ನೇ ಮಧ್ಯಾಹ್ನದೊಳಗೆ ಕಳುಹಿಸಿಕೊಡಬೇಕಾಗಿದೆ.

ಮಹಾಜನರು, ದೇಶಹಿತೈಷಿಗಳು, ಪ್ರದರ್ಶನ ಪ್ರೇಮಿಗಳೂ ಧನ ಸಹಾಯಮಾಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಈ ಜಾತ್ರೆಯು ಕಾವೇರಿ ಹೊಳೆ ಕೊಟ್ಟಂಬಾಡಿ ಪರಂಬಿನಲ್ಲು ನಡೆಯುವುದು.

ಈ ಪ್ರದರ್ಶನದ ಸ್ಥಳವು ದೊಡ್ಡ ಹುಲ್ಲು ಮೈದಾನ ಮತ್ತು ಆಜುಬಾಜಿನಲ್ಲಿ ದನಗಳಿಗೆ ಬೇಕಾದ ಹುಲ್ಲಿಗೂ, ನೀರಿಗೂ ಧಾರಾಳವಾದ ಅನುಕೂಲವಿದೆ. ವ್ಯಾಪಾರಸ್ಥರಿಗೆ ಬೇಕಾದ ಸೌಕರ್ಯಗಳೆಲ್ಲವೂ ನಾಪೋಕ್ಲಿನಲ್ಲಿ ಸುಲಭವಾಗಿ ದೊರೆಯುತ್ತದೆ.

ಜಾತ್ರೆಯನ್ನು ನಡೆಸಿ ದನಗಳನ್ನು ಮಾರುವವರಿಗೂ, ಕೊಂಡುಕೊಳ್ಳುವವರಿಗೂ ಅತ್ಯಂತ ಪ್ರಯೋಜನವನ್ನು ಮಾಡುವುದೇ ಈ ಪ್ರದರ್ಶನದ ಮುಖ್ಯೋದ್ದೇಶವಾಗಿದೆ.

ದವಸ ಧಾನ್ಯಗಳನ್ನು ಮಾರಿ ರೈತರಲ್ಲಿ ಹಣವು ಕೈಗೂಡಿರುವ ಮಾರ್ಚಿ ತಿಂಗಳ 18 ಮತ್ತು 19ನೇ ತಾರೀಕಿನ **ವರೆಗೆ** ಈ ದನಗಳ ಪ್ರದರ್ಶನವನ್ನು ಏರ್ಪಡಿಸಿರುವದರಿಂದಲೂ, ಸುತ್ತು ಮುತ್ತಲಿನ ಪ್ರಾಂತ್ಯಗಳ ವರ್ತಮಾನ ಪತ್ರಿಕೆಗಳಲ್ಲಿ ವಿಸ್ತಾರವಾಗಿ ಪ್ರಕಟಣೆ ಮಾಡಿರುವದರಿಂದಲೂ ಪ್ರದರ್ಶನಕ್ಕೆ ಬರುವ ರಾಸುಗಳ ವ್ಯಾಪಾರವು ಹೇರಳವಾಗಿ ನಡೆಯುವ **ದೆಂದು** ನಿರೀಕ್ಷಿಸಲಾಗಿದೆ. ಪ್ರದರ್ಶನದ ಸಮಯದಲ್ಲಿ ವ್ಯಾಪಾರವು ಚೆನ್ನಾಗಿ ನಡೆಯಲಿಕ್ಕೆ ಪ್ರದರ್ಶನದ ಕಮಿಟಿಯವರು **ಸರ್ವ ಪ್ರಯತ್ನ**ವನ್ನು ಮಾಡುತ್ತಾರೆ. ವ್ಯಾಪಾರಿಗಳಿಗೆ ಸರ್ವ ಸಹಾಯವನ್ನು **ಕೊಡುತ್ತಾರೆ.**

ಜಾತ್ರೆಯಲ್ಲಿ ಜನರ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಅನೇಕ ತರದ ಆಟಗಳನ್ನು ಆಡುವ ಮತ್ತು ಕೃಷಿ, **ಕೈಗಾರಿಕೆ,** ಪಶುವೈದ್ಯ, ಗ್ರಾಮನೈರ್ಮಲ್ಯ ಇವೇ ಮೊದಲಾದ ವಿಷಯ ಬೋಧಪ್ರದವಾದ ಭಾಷಣಗಳನ್ನು ಮಾಡುವ ಏರ್ಪಾಡು ಮಾಡಲಾಗಿದೆ. ಇಂತಹ ಸುಸಮಯವನ್ನು ಯಾರೂ ಕಳೆದುಕೊಳ್ಳಬೇಡಿರಿ. ಬಂದು ಸಂದರ್ಶಿಸಿ ಪ್ರೋತ್ಸಾಹಿಸಿ!

ಪ್ರದರ್ಶನದಲ್ಲಿ ಅತ್ಯುತ್ತಮವಾದ ಕರೆಯುವ ಹಸುಗಳು, ಗಾಡಿ ಎತ್ತುಗಳು, ಉಳುವ ಎತ್ತುಗಳು, ದೊಡ್ಡ ಜಾತಿಯ, **ಸಣ್ಣ ಜಾತಿಯ** ಗೂಳಿಗಳು, ನಲಿಪಿ ಅಯ್ಯಂಗೇರಿ ವರಸೆ ಹೋರಿಗಳು, **ಕೋಣಗಳು,** ಎಮ್ಮೆಗಳು, ಚೆನ್ನಾಗಿ ಸಾಕಲ್ಪಟ್ಟ **ದೊಡ್ಡ** ಜಾತಿ, ಸಣ್ಣ ಜಾತಿ ಹಸುಗಳು, ಹಸುವಿನ ಕರುಗಳು ಇವೇ ಮೊದಲಾದವುಗಳನ್ನು ತಂದಲ್ಲಿ ಪ್ರವೇಶಿಸಿದೆ ಮತ್ತು **ಅವುಗಳಿಗೆ ಬಹುಮಾನವು ಕೊಡಲ್ಪಡುತ್ತೆ.**

ತರಕಾರಿ:— ಅತ್ಯುತ್ತಮವಾದ ಕುಂಬಳ, ಸೋರೆ, ಸೌತೆ, ಹಾಗಲಕಾಯಿ, ಪಡವಲಕಾಯಿ, ಬೆಂಡೆಕಾಯಿ, ಅರಸಿನ, **ಶುಂಠಿ, ಹುತ್ತರಿ ಗೆಣಸು,** ಬೆಲ್ಲದ ಗೆಣಸು, **ಚೀನ ಗೆಡ್ಡೆ ಇತ್ಯಾದಿ.**

ಹಣ್ಣುಹಂಪಲು:—ಬಾಳೆ, ಕಿತ್ತಳೆ, ನಿಂಬೆ, ಅನನಾಸು, ಪಪ್ಪಾಯಿ, ಸೀಬೆ, ರಾಮಫಲ, ಬೆಳೆಸಿದ ಹಣ್ಣುಗಳು ಇತ್ಯಾದಿ.

ಸರ್ವರೂ ಪ್ರದರ್ಶನವನ್ನು ಜಯಪ್ರದವಾಗಿ ನಡೆಯುವಂತೆ ಧನ ಸಹಾಯಮಾಡಬೇಕಾಗಿ ಕೋರಲಾಗಿದೆ.

ಬಿದ್ದಂಡ ಯಂ. ಸುಬ್ಬಯ್ಯ,
ಪ್ರೆಸಿಡೆಂಟರು,
ದಕ್ಷಿಣ ಕೊಡಗು ದನಗಳ ಪ್ರದರ್ಶನ ಕಮಿಟಿ.

ಹಾಗೂ 29 ಡಿಗ್ರಿ ಪೂರ್ವಕ್ಕಿರುವ ಒಂದು ಹಳ್ಳಿ. ಬೊಂಬಾಯಿಂದ ಇಲ್ಲಿಗೆ 612 ಮೈಲಿ ಕಲ್ಕತ್ತೆಯಿಂದ 786 ಮೈಲಿಗಳಷ್ಟು ದೂರವಿದೆ. ಇಲ್ಲಿಂದ 7 ಮೈಲಿಗಳಷ್ಟು ದೂರದಲ್ಲಿ ಅಮೃತ ತಿಲೆಯ ಸಾನು ಪ್ರದೇಶದಿಂದ ನರ್ಮದೆಯು

ತ್ರಿಪುರ ಎಂಬ ಎರಡು ... ಉತ್ತರ, ದಕ್ಷಿಣ ದಿಕ್ಕಿನಲ್ಲಿವೆ.

ನಂತರ ಕಳಚೂರಿಯರು ಇದನ್ನು ಆಳಿದರು. ಆಗ್ಗೆ ಅವರ ಶಕವು (ಕ್ರಿ. ಪೂ. 248ಕ್ಕೆ) ಆರಂಭವಾಯಿತು. ಇವನ್ನು ಚೇದಿ ಶಕವೆನ್ನುವರು. ಚಿತ್ರ

ಪಕ್ಷಿಯ ಹೆಸರಿನಂತಿದೆ. ನರ್ಮದೆಯ ಮೇಲೆ ಉದಯಿಸುವ ಸೂರ್ಯನ ದೃಶ್ಯವು ನಯನ ಮನೋಹರವಾಗಿದೆ.

'ಸ. ಕ.'

— —

ರಾಗಿ ಸಂಸ್ಥಾನಗಳ ಚಳವಳವಲ್ಲಿ ಪ್ರವೇಶಿಸುತ್ತಿರುವದು ಮುಂದಿನ ಕಾಂಗ್ರೆಸ್ ಹಾಗೂ ಬ್ರಿಟಿಷ್ ಸಾಮ್ರಾಜ್ಯ ... ಯೋ... ನಡೆಯತಕ್ಕ ... ಕು ರುಹುಗಳಾಗಿವೆ. ಕಾಂಗ್ರೆಸ್ ಮುಖಂಡ ... ಒಂದಿಲ್ಲೊಂದು ಸಂಸ್ಥಾನದ ಸಂಪರ್ಕವಿದೆ.

ಗಳ ...

ಯ ...

ನೆ ಹೋಮವು

ಈ ಸಂಸ

ಹರುಪಿನಿಂದ

ಗೆ 40 ಜನರು

ತಾರೀಕು 10

ನೆರಿಮನೆಯಲ್ಲಿ

ಗಳು ತಮಗೆ

ಅಸಾಧ್ಯವಾದ

ವನ್ನು ಕೈಕೊ

ಡಳದ ಅನೇಕ

ಗಳಾಗಿರುವರು

ಹನಪುರ ಜೈ

ತ್ಯಾಗ್ರಹಕ್ಕೆ

ಪ್ರಾಂತಗಳಿಂದ

ಬರುತ್ತಿವೆ.

ಕಾಂಗ್ರೆಸ್ಸಿನೊ

ವರು ಸಹಕರಿ

ತ್ ಬ್ರಿಟಿಷ್

ಲು ...

ಕಾಂಗ್ರೆಸ್ಸಿನಸ

ನದ ಚಳವಳ

ಟ್ ... ಸ್ನೋಲ

ಖಂಡಿ ... ಯೂ

ಮ್ಮಸನಾಯ

ಡುವೆಂದು

ಳನ್ನು ... ಡಿರು

ಹೈ

ಗಾಂಧಿಜಿ

ಸ್ ಮುಖಂಡ

ಜಾದು ಕಾಂಗ್

ವು ನಿಲ್ಲಿಸಲ್ಪ

ಗ್ರೆಸಿನಂತೆಯೇ

ರ್ಯಸಮಾಜ

ವಾಗಿ ನಡೆಯು

ಆರ್ಯಸಮಾ

ದರಾಬಾದಿನಲ್ಲಿ

ಜೋಧಪುರದ

ವರು ತಮ್ಮಡೆ

ಬಾದಿಗೆ ಕಳು

ನಿಂದ 50 ಜ

ದು ಪಥಕವು

ವರಿಸ್ಥಿತಿಯೇ

ಣೀಯ ವಿಚಾ

ಮೈ

ಮೈಸೂರಿ

ಒಂದನ್ನು ಕಟ್ಟ ... ಮೊದಲು ಪೊಲೀಸ್ ಜನರಲರಾಗಿದ್ದ ಹ್ಯಾಮಿಲ್ಟನ್‌ರವರ ಹೆಸರನ್ನಿಡಬೇಕೆಂಬ ಯೋಜನೆಯು ನಡೆದಿತ್ತು. ಅದನ್ನು ಆಕ್ಷೇಪಿಸಿಯೇ ಇಲ್ಲಿ ಸತ್ಯಾಗ್ರಹ ಹೂಡಿರುವದಾಗಿದೆ. ಸಂಸ್ಥಾನ ಕಾಂಗ್ರೆಸಿನ ಪರ

ಈ ಸತ್ಯಾಗ್ರಹ ಹೂಡಲ್ಪಡದಿದ್ದರೂ ವೈಯಕ್ತಿಕವಾಗಿ ಕಾಂಗ್ರೆಸಿನವರು ಈ ಸತ್ಯಾಗ್ರಹ ಹೂಡಿರುವರು. ದಿವಾನರು ತಾವೇ ಕಟ್ಟಡಕ್ಕೆ ಈ ಹೆಸರನ್ನಿಡಲು ನಿರ್ಧರಿಸಿಲ್ಲ ಎಂದು ಕೌನ್ಸಿಲು ಸಭೆಯಲ್ಲಿ ವ್ಯಕ್ತಪಡಿಸಿರುವರು. ತಮ್ಮ ಸಂಸ್ಥಾನದ ಒಂದು ಕಟ್ಟಡಕ್ಕೆ ಪಾಶ್ಚಿಮಾತ್ಯರ ಹೆಸರ

ಮೊರಾಟೋರಿಯಂ ದ.

ಉತ್ತರ ಕೊಡಗು ತಾಲೋಕು ಫ್ರೇಜರ್‌ಪೇಟೆ ಹೋಬಳಿ ತೊರೆನೂರು ಮಣಜೂರು ಗ್ರಾಮದ ಮಾತಂಡ ನಂಜಪ್ಪನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಸರ್ವೆ ನಂಬರು 78, 79, 80, 81

ಯಿಂದ ನರಳುತ್ತಿರುವರು. ಅವರು ಕುಂಬಾ ನಿಶ್ಶಕ್ತರಾದ ಕಾರಣ ಡಾಕ್ಟರುಗಳ ಅಭಿಪ್ರಾಯದಂತೆ ಕಳೆದ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಹೋಗಲಿಲ್ಲ. ಈಗ ಅವರ ಪ್ರಕೃತಿಯು ಗುಣಮುಖವಾಗುತ್ತಿರುವದು.

... ಸಂಸ್ಥಾನದಲ್ಲಿ ಸರ್ಕಾರದ ಕಾಲಗಳನ್ನೆಲಾ ...

ಮಾಹನೀಯರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬೇಕಾದ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಹೊಟೆಲ್ ಕೊಹಿನೂರ್.

ಮೈಸೂರು.

3

...

ನೆಲಜಿ ಶಾಲಾ ಉಪಾಧ್ಯಾಯರಾಗಿದ್ದ ಶ್ರೀ. ನುಚ್ಚಿಮಣಿಯಂಡ ಅಚ್ಚಮ್ಮನವರು ಈ ದಿನ ಮಡಿಕೇರಿ ಆಸ್ಪತ್ರೆಯಲ್ಲಿ ಕಾಲಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಈ ಸಾರಿಯ ಕಾಂಗ್ರೆಸ್ ಅಧಿವೇಶನ ನಡೆಯುವ

ತ್ರಿಪುರಿಯ ಗತವೈಭವ.

ತ್ರಿಪುರಿಯು ಸಿಂಹಿಣಿಯರ ನೆಲೆವೀಡು. ಇತಿಹಾಸ ಪ್ರಸಿದ್ಧಳಾದ ಝಾಂಸಿ ಲಕ್ಷ್ಮೀಬಾಯಿ ಹಾಗೂ ಗೋಂಡವನದ ರಾಣೀ ದುರ್ಗಾವತಿ ಮೊದಲ ವೀರ ರಾಣಿಯರು ತಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವ ಬಗ್ಗೆ ತಮ್ಮ ದೇಹವನ್ನರ್ಪಿಸಿದ ಪವಿತ್ರ ಪುಣ್ಯಭೂಮಿ ಇದು. ಮೊಗಲ ಸಾಮ್ರಾಟನಾದ ಅಕಬರನ ಪ್ರತಿನಿಧಿಗೆ ಸೊಪ್ಪು ಹಾಕದೆ, 'ಕತ್ತಿ ಕಟ್ಟಿ ಯುದ್ಧಮಾಡಿ ನಿನ್ನ ಶೌರ್ಯವನ್ನು ತೋರು' ಎಂದು ಹೇಳಿದ ದುರ್ಗಾವತಿಯ ಜನ್ಮಭೂಮಿ ಇದು. ಸ್ವಾತಂತ್ರ್ಯ ರಕ್ಷಣೆಗೆಂದು ಸತಿಯರು ಹೋರಾಟದ ಉಜ್ವಲ ಸ್ವಾರ್ಥತ್ಯಾಗದ ಕ್ಷೇತ್ರದಲ್ಲಿ ಈ ಸಾರಿಯ ಕಾಂಗ್ರೆಸ್ ಅಧಿವೇಶನವು ಜರಗುವುದು ಅತ್ಯಂತ ಮಹತ್ವದ ವಿಷಯ.

ಸೃಷ್ಟಿ ಸೌಂದರ್ಯ.

ತ್ರಿಪುರಿಯು ನಿಸರ್ಗ ಸೌಂದರ್ಯದಿಂದ ಕವಿಗಳನ್ನು, ಯೋಗಿಗಳನ್ನು ಹಾಗೂ ಮಾನವ ಹೃದಯವನ್ನು ಸೆರೆಗೊಳಿಸುವಂತಿದೆ. ದೊಡ್ಡ ಕಾಡು ಪ್ರದೇಶದ ಮೇಲಿದ್ದು ಅಲ್ಲಲ್ಲಿ ಅಗಲಕಿರಿದಾದ ತಪ್ಪಲುಗಳನ್ನೊಳಗೊಂಡು ಸಮೃದ್ಧವಾದ ಕ್ಷೇತ್ರವಾಗಿದೆ. ಇದನ್ನೇ ರಾಮಾಯಣದ ಕಾಲದಲ್ಲಿ ಕೋಸಲನಾಡು ಕರೆಯುತ್ತಿದ್ದರು. ಶ್ರೀರಾಮನ ತಾಯಿಯಾದ ಕೌಸಲ್ಯೆಯು ಕೋಸಲೇಂದ್ರನ ಮಗಳು. ಆ ರಾಜನಿಗೆ ಗಂಡು ಮಕ್ಕಳಿರಲಿಲ್ಲವಾದ್ದರಿಂದ ಆ ದೇಶವು ಅಳಿಯನಾದ ದಶರಥನಿಗೆ ಕೊಡಲ್ಪಟ್ಟು ಸೂರ್ಯವಂಶದ ಗದ್ದುಗೆಗೆ ಸೇರಿಕೊಂಡಿತು. ಮುಂತಾಗಿ ಪುರಾಣ ಕಥೆಯಿದೆ. ವಿಂಧ್ಯ ಪರ್ವತದ ಸಾಲು ಅಲ್ಲಲ್ಲಿ ಈ ಪುಣ್ಯ ಭೂಮಿಯನ್ನು ಆವರಿಸಿ ಅವರ್ಣನೀಯವಾದ ಶೋಭೆಯನ್ನು ಕೊಟ್ಟು ಈ ಪ್ರದೇಶವನ್ನು ಮತ್ತಷ್ಟು ಸಿಂಗರಿಸಿದೆ. ಇಲ್ಲಿ ಉತ್ತಮವಾದ ಸಂಗಮರ ಕರಿಕಲ್ಲಿನ ಗುಡ್ಡವಿದ್ದು ಇಂದ್ರನ ಐರಾವತದಂತೆ ತಲೆಯೆತ್ತಿಕೊಂಡು ನಿಂತಿದೆ. ಇಲ್ಲಿ ಹರಿಯುವ ಮಹಾನದಿಯೆಂದರೆ ನರ್ಮದೆಯು. ಇದಕ್ಕೆ ಅನೇಕ ಉಪಶಾಖೆಗಳಿವೆ. ಇಲ್ಲಿಯ ಕಾಡಿನಲ್ಲಿ ವಿವಿಧ ಬಣ್ಣವನ್ನೊಳಗೊಂಡ ಕಾಡು ಮೃಗಗಳಿವೆ. ಅನೇಕರು ಬೇಟೆಯ ವಿನೋದಕ್ಕಾಗಿ ಇಲ್ಲಿಗೆ ಆಗಾಗ ಬರುವದುಂಟು. ಇಲ್ಲಿಯ ನದಿಗಳು ಮಹಾ ಸೆಳೆತದಿಂದ ತಗ್ಗಿಗೆ ಹರಿಯುವುದರಿಂದ ಕೃಷಿಕರಿಗೆ ಹೆಚ್ಚು ಪ್ರಯೋಜನವಿಲ್ಲ.

ತ್ರಿಪುರಿಯೆಲ್ಲಿದೆ?

ಇಂಥ ಇತಿಹಾಸ ಮಹತ್ವವುಳ್ಳ ಪುರಾಣ ಪ್ರಸಿದ್ಧವಾದ ತ್ರಿಪುರಿಯು ಜಬ್ಬಲ್ಪುರ ಜಿಲ್ಲೆಯಲ್ಲಿ 23 ಡಿಗ್ರಿ ಉತ್ತರ ಹಾಗೂ 29 ಡಿಗ್ರಿ ಪೂರ್ವಕ್ಕಿರುವ ಒಂದು ಹಳ್ಳಿ. ಬೊಂಬಾಯಿಂದ ಇಲ್ಲಿಗೆ 612 ಮೈಲಿ. ಕಲ್ಕತ್ತೆಯಿಂದ 786 ಮೈಲಿಗಳಷ್ಟು ದೂರವಿದೆ. ಇಲ್ಲಿಂದ 7 ಮೈಲಿಗಳಷ್ಟು ದೂರದಲ್ಲಿ ಅಮೃತ ಶಿಲೆಯ ಸಾನು ಪ್ರದೇಶದಿಂದ ನರ್ಮದೆಯು ಕೆಳಕ್ಕೆ ಧುಮುಕುವಳು. ಈ ನೋಟವು ದಿವ್ಯ ಸೌಂದರ್ಯದ ಅನುಭವವನ್ನುಂಟು ಮಾಡುತ್ತದೆ.

ಇಲ್ಲಿಗೆ ಹೋಗಬೇಕಾದರೆ ರೈಲ್ವೆ ಪ್ರವಾಸಿಗಳು ಮದನ ಮಹಲ ಸ್ಟೇಶನದಲ್ಲಿ ಇಳಿಯಬೇಕಾಗುವದು. ಇದು ಒಂದು ಕಾಲದಲ್ಲಿ ಗೊಂಡ ಮನೆತನದವರ ರಾಜಧಾನಿ. ಇಲ್ಲಿ ವೈಭವದ ಪಟ್ಟಣವೊಂದನ್ನು 1100 ವರ್ಷಗಳಿಗೆ ಹಿಂದೆ ಗೊಂಡ ರಾಜರಲ್ಲೊಬ್ಬನಾದ ಮದನಸಿಂಗನು ರಚಿಸಿದನು. 16ನೆಯ ಶತಮಾನದಲ್ಲಿ ಮಾತ್ರ ರಾಜಧಾನಿಯು ಇಲ್ಲಿಂದ ಮಂಡಲಕ್ಕೆ ಸ್ಥಳಾಂತರಿಸಲ್ಪಟ್ಟಿತು.

ಕಾಂಗ್ರೆಸ್ ಜರಗುವ ಸ್ಥಳ.

ತ್ರಿಪುರಿಯಿಂದ ಒಂದು ಮೈಲು ದೂರಕ್ಕಿರುವ ತಿಲವಾರ ಘಾಟದಲ್ಲಿ ಈ ಸಾರಿಯ ಅಧಿವೇಶನವು ಜರಗುವದು. ಮದನಮಹಲವು ಇಲ್ಲಿಗೆ ಅತಿ ಹತ್ತಿರವೆಂದರೆ 6 ಮೈಲುಗಳಷ್ಟು ದೂರವಿರುವ ರೈಲ್ವೆ ಸ್ಟೇಶನವು. ಜಬ್ಬಲ್‌ಪುರವು 8 ಮೈಲುಗಳಷ್ಟು ದೂರದಲ್ಲಿದೆ. ಇಲ್ಲಿ ವರ್ಷಕ್ಕೆ 50 ಇಂಚುಗಳಷ್ಟು ಸರಾಸರಿ ಮಳೆ ಬೀಳುತ್ತದೆ. ಬಗೆ ಬಗೆಯ ಧಾನ್ಯಗಳು ಹಾಗು ಗೋಧಿ ಮುಖ್ಯವಾಗಿ ಬೆಳೆಯುತ್ತದೆ. ಜಬ್ಬಲ್‌ಪುರವು ಪುಣೆ ನಾಗಪುರಗಳಂತಿದ್ದು ಉತ್ತಮ ವ್ಯಾಪಾರಿ ಕೇಂದ್ರವಾಗಿದೆ.

ಹೈಹಯರ ರಾಜಧಾನಿ.

ಇದು ಕೃತಯುಗದಲ್ಲಿ ಹೈಹಯರ ರಾಜಧಾನಿ. ಸಹಸ್ರಾರ್ಜುನನು ಇಲ್ಲಿಯೇ ಆಳಿದನು. ಇಲ್ಲಿ ಹಲವು ವಂಶಗಳ ರಾಜರು ಕೃತಯುಗದ ಆದಿಯಿಂದಲೂ ಆಳಿಕೊಂಡು ಬಂದು ಪುರಾಣೇತಿಹಾಸಗಳಿಂದ ಸ್ಪಷ್ಟವಾಗುತ್ತದೆ. ಹೈಹಯರು ಚಂದ್ರವಂಶದವರು.

ಶ್ರೀರಾಮನ ನಂತರ ಕೋಸಲವು ಕುಶನ ಆಳ್ವಿಕೆಗೆ ಒಳಪಟ್ಟಿತು. ಕುಶನಿಂದಲೇ ಕೋಸಲವೆಂದು ಕರೆಯಲ್ಪಟ್ಟಿತೆಂದು ಹಲವರ ಅಭಿಪ್ರಾಯವಿದೆ. ಆದರೆ ಶ್ರೀರಾಮನ ಜನ್ಮದ ಪೂರ್ವದಲ್ಲಿಯೇ ಕೌಸಲ್ಯೆಯು ಕೋಸಲ ರಾಜನ ಮಗಳೆಂದೂ ಮೊದಲೇ ಕೋಸಲವೆಂಬ ದೇಶವಿತ್ತೆಂದೂ ಮುಂತಾಗಿ ಪುರಾಣಗಳಿಂದ ಸ್ಪಷ್ಟವಾಗುತ್ತದೆ. ಹ್ಯೂವೆನ್‌ತ್ಸಂಗನ ಕಾಲದಲ್ಲಿ ತ್ರಿಪುರಿಯ ಗತ ವೈಭವವನ್ನು ಈ ಕೆಳಗಿನಂತೆ ವರ್ಣಿಸಬಹುದು.

'ಕೋಸಲವು ನದಿ ಹಾಗೂ ಪರ್ವತಾವಳಿಗಳಿಂದ ಆವರಿಸಲ್ಪಟ್ಟಿದೆ. ಇದು ಕಳಿಂಗ ರಾಜ್ಯಕ್ಕೆ ನೈರುತ್ಯ ಭಾಗದಲ್ಲಿದೆ. ಹೈಹಯರು ವೀರ ಕ್ಷತ್ರಿಯರಿದ್ದು ನಸುಗಪ್ಪು ಬಣ್ಣದವರಿದ್ದಾರೆ. ಅವರು ಆರ್ಯ ವಂಶಸ್ಥರು. ಇದಕ್ಕೆ ಮಣಿಪುರ ಮತ್ತು ತ್ರಿಪುರ ಎಂಬ ಎರಡು ರಾಜಧಾನಿಗಳು ಉತ್ತರ, ದಕ್ಷಿಣ ದಿಕ್ಕಿನಲ್ಲಿವೆ.

ನಂತರ ಕಳಚೂರಿಯರು ಇದನ್ನು ಆಳಿದರು. ಆಗ್ಗೆ ಅವರ ಶಕವು (ಕ್ರಿ. ಪೂ. 248ಕ್ಕೆ) ಆರಂಭವಾಯಿತು. ಇದನ್ನು ಚೇದಿ ಶಕವೆನ್ನುವರು. ಚರಿತ್ರಕಾರರು ಇದನ್ನು ಗೊಂಡವನವೆಂದು ಕರೆಯುತ್ತಿರುವರು. ಕ್ರಿ. ಪೂ. 700ರಿಂದ ಕ್ರಿ. ಶ. 700ರ ವರೆಗೆ ಸುಮಾರು 14 ಶತಮಾನಗಳ ವರೆಗೆ ಈ ರಾಜ್ಯವು ಬಾಳಿತು. ಇತ್ತೀಚೆಯ ವರೆಗೂ ಛತ್ತೀಸಗಡ, ರಾಯಪುರ, ಜಬ್ಬಲ್‌ಪುರ ಮತ್ತು ಸಾಂಬಲಪುರ ಮುಂತಾದ ಭಾಗಗಳು ಕೋಸಲಕ್ಕೆ ಸೇರಿದ್ದವು. ಕೊನೆಗೆ ಇದು ಪೇಶ್ವೆಯವರ ಕೈವಶವಾಗಿ 1817ರಲ್ಲಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ರಾಣಿ ದುರ್ಗಾವತಿ ಮತ್ತು ರಾಣಿ ಝಾಂಸಿ ಲಕ್ಷ್ಮೀಬಾಯಿಯ ಹೆಸರು ಇಲ್ಲಿಯ ಜನರಿಗೆ ಇಷ್ಟದೇವತೆಯ ಹೆಸರಿನಂತಿದೆ. ನರ್ಮದೆಯ ಮೇಲೆ ಉದಯಿಸುವ ಸೂರ್ಯನ ದೃಶ್ಯವು ನಯನ ಮನೋಹರವಾಗಿದೆ.

'ಸ. ಕ.'

ಬರೋಡ ಸಂಸ್ಥಾನಕ್ಕೆ ಸುಧಾರಣೆಗಳು.

ಚುನಾಯಿತ ಮೆಂಬರರ ಬಹುಮತವಿರುವ ಧಾರಾಸಭೆ.

—:0:—

ಈ ಮೊದಲು ಬರೋಡಾ ಸಂಸ್ಥಾನದ ಆಡಳಿತ ಅಭಿವೃದ್ಧಿಯನ್ನು ವಿಚಾರಿಸಲು ಒಂದು ಕಮಿಟಿಯು ನೇಮಿಸಲ್ಪಟ್ಟಿತ್ತು. ಆ ಕಮಿಟಿಯ ಸಿಫಾರಸ್ಸುಗಳು ಸಂಸ್ಥಾನಾಧೀಶ್ವರರಿಂದ ಅಂಗೀಕೃತವಾಗಿವೆ. ಅಲ್ಲದೆ 55 ಸದಸ್ಯರಿಂದ ಕೂಡಿದ ಒಂದು ಧಾರಾಸಭೆಯನ್ನು ನಿರ್ಮಿಸುವದಾಗಿ ನಿರ್ಣಯಿಸಲ್ಪಟ್ಟಿದೆ. ಅದರಲ್ಲಿ 37 ಜನ ಚುನಾಯಿತ ಮೆಂಬರುಗಳು, 9 ನೇಮಿತ ಮತ್ತು 9 ಅಧಿಕಾರಿ ವರ್ಗದ ಮೆಂಬರುಗಳೂ ಇರುವರು. ಈ ಸಭೆಗೆ ಸಂಸ್ಥಾನದ ಬಜೆಟನ್ನು ವಿಮರ್ಶಿಸುವ ಅಧಿಕಾರ ಕೊಡಲ್ಪಟ್ಟಿದೆ. ಅಲ್ಲದೆ ಇವರಿಂದ ಒಬ್ಬ ಉದ್ಯೋಗಸ್ಥನಲ್ಲದ ಸದಸ್ಯನನ್ನು ಎಗ್ಸಿಕ್ಯೂಟಿವ್ ಕಮಿಟಿಗೆ ಚುನಾಯಿಸಲಾಗುವದೆಂದೂ, ಎರಡು ಜನರನ್ನು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಆರಿಸಲ್ಪಡಲಾಗುವದೆಂದೂ ತಾ. 20 ರಲ್ಲಿ ಹೊರಡಿಸಿದ ಪ್ರಕಟಣೆಯಿಂದ ವಿಶದವಾಗುತ್ತದೆ. ಚುನಾಯಿತ ಮೆಂಬರುಗಳಿಂದ ಹೆಕ್ಕಲ್ಪಡುವ ಎಗ್ಸಿಕ್ಯೂಟಿವ್ ಕೌನ್ಸಿಲರ ಮೇಲ್ವಿಚಾರಣೆಗೆ ವಿದ್ಯಾ, ಆರೋಗ್ಯ, ಗ್ರಾಮಾಭಿವೃದ್ಧಿ, ಸಹಕಾರ, ಸಂಸ್ಥೆಗಳನ್ನು ಒಪ್ಪಿಸಲಾಗುವದೆಂದೂ ತಿಳಿದುಬಂದಿದೆ. ಈ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸಲು 'ಬರೋಡ ಗವರ್ನ್‌ಮೆಂಟ್ ಆಕ್ಟ್' ಎಂಬ ಮಸೂದೆಯು ಸುಧಾರಣಾ ಕಮಿಟಿಯ ಸೂಚನೆಗನುಸಾರ ಪ್ರಕಟವಾಗಲಿರುವದು. ಸಂಸ್ಥಾನಾಧೀಶರು ತಮ್ಮ ಪ್ರಜೆಗಳ ಮೂಲಭೂತ ಹಕ್ಕನ್ನು ಲಕ್ಷಿಸಿ ಮುಂದೆ ಬಂದಿರುವುದು ಅಭಿನಂದನೀಯ. ಅಂತೆಯೇ ಇತರ ಸಂಸ್ಥಾನಗಳೂ ಒಂದನ್ನೊಂದು ಅನುಸರಿಸಿ ತಮ್ಮ ಪ್ರಜೆಗಳ ಆಕಾಂಕ್ಷೆಯನ್ನು ಸಲ್ಲಿಸುವದಕ್ಕೆ ಮುಂಬರುವದರಿಂದ ತಮ್ಮ ಹಾಗೂ ಪ್ರಜೆಗಳ ಹಿತವನ್ನು ಅವರು ಬಯಸಿದಂತಾಗುವುದು.

ಬಾತ್ಮಿ.

ಮಡಿಕೇರಿಯಲ್ಲಿ ಮೈಸೂರು ದಿವಾನರಿಗೆ ಮೈಸೂರು ಲೀಗಿನವರ ಬಿನ್ನಹ ಪತ್ರ.

ಮೈಸೂರು ಲೀಗಿನವರೇ,

ತಾರೀಕು 18-2-39 ರಲ್ಲಿ ಮೈಸೂರು ದಿವಾನರು ಮಂಗಳೂರಿಗೆ ಹೋಗುವಾಗ ಮಡಿಕೇರಿಯಲ್ಲಿ ತಾವು ಅತೀ ಭಕ್ತಿಯಿಂದ ಅವರಿಗೆ ಒಪ್ಪಿಸಿದ ಬಿನ್ನಹಪತ್ರವನ್ನು ನೋಡುವಾಗ ಒಂದು ಕಡೆ ಸಂತೋಷವು ಇನ್ನೊಂದು ಕಡೆ ದುಃಖವೂ ಆಗುತ್ತದೆ. ತಮಗಳ ಉಪಾಯವೇನೋ ಬಹಳ ಚೆನ್ನಾಗಿದೆ. ಸಂತೋಷವೇಕೆಂದರೆ ಮಡಿಕೇರಿಯಲ್ಲಿ ಅಂದಾಜು 6000 ಜನರಲ್ಲಿ ನೀವು ಬರೀ ಹತ್ತು ಜನರಾದರೂ ಅವರಿಗೆ ಬಿನ್ನಹ ಪತ್ರವನ್ನು ಒಪ್ಪಿಸಲು ತೀರ್ಮಾನಿಸಿ ನಮಗಳ ಮಾನವನ್ನು ಕಾಪಾಡಿದಿರಿ. ಆದರೆ ಅವರಿಗೆ ಕೊಟ್ಟಂಥ ಸ್ವಾಗತವು ಅವರ ದಿವಾನ ಪದವಿಗೆ ಸರಿಯಾಗಿತ್ತೆಂದು ತೋರಲಿಲ್ಲ. ಪಟ್ಟಣದಲ್ಲಿ ತೋರಣವಾಗಲೀ ಅಥವ ಇನ್ನಾವ ಸ್ವಾಗತ ಚಿಹ್ನೆಯಾಗಲೀ ಕಾಣಲಿಲ್ಲ. ಮಡಿಕೇರಿ ಪುರಜನರನೇಕರಿಗೆ ಅವರ ಬರುವಿಕೆ ತಿಳಿದಿರಲೇ ಇಲ್ಲ. ಕಡೆಗೆ ಕೇಳಿ ನೋಡುವಾಗ್ಯೆ ನಿಮಗೇ ಅವರು ಬರುವುದು ನಂಬಿಕೆ ಇರಲಿಲ್ಲವೆಂದು ಪ್ರತೀತ. ಹಾಗಾದರೆ ಬಿನ್ನಹಪತ್ರ ಅಚ್ಚು ಹಾಕಲಿಕ್ಕೂ, ಹೂವಿನ ಹಾರವನ್ನು ತರಿಸುವುದಕ್ಕೂ ಸಮಯವಿತ್ತಲ್ಲವೇ? ಪುರಜನರಿಗೆ ತಿಳಿಸಲಿಕ್ಕೆ ಮಾತ್ರ ಸಮಯವಿರಲಿಲ್ಲವೇ? ನಿಮ್ಮ ಗುಟ್ಟು ನಮಗೆ ಹೊಳೆಯಿತು. ಎಲ್ಲಾ ಮುಖ್ಯಸ್ಥರು ಬಂದರೆ ತಮಗಳ ಒಳಗುಟ್ಟು ಹೊರಬಿದ್ದೀತೋ ಎಂಬ ಹೆದರಿಕೆ ಒಂದು ಕಡೆ, ಮೈಸೂರು ದಸರಕ್ಕೆ ನಿಮ್ಮಂತೆಯೇ ಹಲವರಿಗೆ ಆಮಂತ್ರಣವು ಬಂದೀತು ಎಂಬ ವ್ಯಸನವು ಇನ್ನೊಂದು ಕಡೆ. ನಾಳೆ ಮೈಸೂರಿನ ಜೊತೆಯಲ್ಲಿ ಸೇರಿದರೆ (ಸೇರುವದಾಗಿಲ್ಲ) ಬೇರೆಯವರಿಗೆ ಬಿರುದು ಸಿಕ್ಕುವುದು ಎಂಬ ಹೊಟ್ಟೆಕಿಚ್ಚು ಮತ್ತೊಂದು ಕಡೆ. ಅಂತೂ ಈ ತರಹದ ಉಪಾಯವು ಜನರಿಗೆ ತಿಳಿಯದಿರಲಿಕ್ಕಿಲ್ಲ. ಎಷ್ಟೋ ಸರಿಗೆ ನಿಮಗಳ ನಿಜಸ್ಥಿತಿಯು ತಿಳಿದಿರಬಹುದಾಗಿ ನಂಬುತ್ತೇನೆ. ಒಟ್ಟಿಗೆ ಒಂದು ಗಂಟೆಗೆ ಮುಂಚಿತವಾಗಿ ತಾವು ಬರೆದಿದ್ದ ಮಾತ್ರಕ್ಕೆ ಬಿನ್ನಹ ಪತ್ರಕ್ಕೆ ಮಡಿಕೇರಿಯ ಜನರ ಅಭಿಪ್ರಾಯವನ್ನು ತೆಗೆದ ಹಾಗಾಯಿತೇ? ಬರೀ ಹತ್ತು ಹದಿನೈದು ಜನರು ಸೇರಿ ಬಿನ್ನಹ ಪತ್ರವನ್ನು ಕೊಡಲು ತೀರ್ಮಾನಿಸಿದ್ದರೂ ಪುರ ನಿವಾಸಿಗಳ ಬಿನ್ನಹ ಪತ್ರವೆಂದು ಕರೆಯಲು ನಿಮಗೆ ಅಧಿಕಾರ ಕೊಟ್ಟವರ್ಯಾರು? ಪುರನಿವಾಸಿಗಳ ಸಭೆ ಸೇರಿಸಿ ನೀವೇನಾದರೂ ಅಭಿಪ್ರಾಯ ತೆಗೆದಿರೋ? ಅಂತು ದಿವಾನರ ಸಭೆಯಲ್ಲಿ ಸ್ವಲ್ಪ ಜನರಿಗೆ ಟೀಪಾರ್ಟಿಯೂ ದೊರೆಯಿತಲ್ಲವೇ? ತಮಗೆ ಅಂದರೆ ಹತ್ತು ಜನರಿಗೆ ಬರುವ ದಸರಕ್ಕೆ 'ರಾಜಭೂಷಣ' ಬಿರುದು ಬಂದೇ ಬರಬಹುದಲ್ಲವೇ? ಆದುದರಿಂದ ಇನ್ನಾದರೂ ಈ ತರದ ಉಪಾಯದಿಂದ ಪಟ್ಟಣಿಗರ ಹೆಸರನ್ನು ದುರುಪಯೋಗಪಡಿಸಬೇಡಿ.

ಮೈಸೂರು ದಿವಾನರಿಗೆ ದುರ್ಯಾಶೆಯನ್ನು ತೋರಿಸುವ ನಿಮ್ಮ ಆತುರದಲ್ಲಿ ಮಡಿಕೇರಿ ಪಟ್ಟಣಿಗರನ್ನು ಅವಮಾನಿಸಿದ್ದು ನಿಮ್ಮ ದುರ್ವ್ಯಸನಕರ. 'ಮಡಿಕೇರಿ ನಿವಾಸಿ.'

ಮಾಸ ಭವಿಷ್ಯ.

ಫೆಬ್ರವರಿ ತಾ. ೧೪ ರಿಂದ ಮಾರ್ಚಿ ತಾ. ೧೬ ರ ವರೆಗೆ.

ಜೋತಿಷ್ಯ-ಜಂಗಮ ಸೋಮಯ್ಯ.

[ವಾಚಕ ಮಹಾಶಯರಿಗೆ ತಮ್ಮ ರಾಶಿಯಾವುದೆಂದು ತಿಳಿದುಕೊಳ್ಳಲು ಅನುಕೂಲವಾಗುವಂತೆ ಬರುವವಾರ ರಾಶಿಗಳ ವಿವರವನ್ನು ಕೊಡಲಾಗುವದು. ಸಂ.]

ಮೇಷ.

ಅಕಸ್ಮಾತ್ ಪ್ರಯಾಣ ಉಂಟಾದೀತು. ಆದರೂ ಪ್ರವಾಸದಲ್ಲಿ ಎಚ್ಚರಿಕೆ ತೆಗೆದುಕೊಳ್ಳಿರಿ. ಮನಸಿನಲ್ಲಿ ಭೀತಿ, ಅಪಯಶಸ್ಸು, ವಿರೋಧವೃದ್ಧಿ, ಭೋಜನ ಸೌಖ್ಯ, ಬಂಧು ಬಾಂಧವರಿಂದಲೂ, ಮಿತ್ರರಿಂದಲೂ ಸುಖವು. ನೌಕರಿಯಲ್ಲಿ ತ್ರಾಸವಿದ್ದರೂ ಮರ್ಯಾದೆ ಮನ್ನಣೆಗೆ ಕೊರತೆ ಇಲ್ಲ. ಸಜ್ಜನ ಸಹವಾಸ ತಾನಾಗಿಯೇ ಲಭಿಸುತ್ತೆ. ಆರ್ಥಿಕ ಅಡಚಣೆಯು ಸ್ವಲ್ಪ ಮಟ್ಟಿಗೆ ಉತ್ತಮವಿರುತ್ತೆ. ವಿದ್ಯಾರ್ಥಿಗಳಿಗೆ ಮಧ್ಯಮ ಯೋಗವಿರುತ್ತೆ. ಧರ್ಮ ಸಂಬಂಧ ಪುಣ್ಯ ಕಾರ್ಯಗಳಿಗೆ ಮನಸು ಉತ್ಸುಕಗೊಳ್ಳುತ್ತೆ. ವ್ಯಾಪಾರಿಗಳಿಗೆ ವ್ಯಾಪಾರದಿಂದ ಲಾಭವಿರುತ್ತೆ.

ವೃಷಭ.

ಸಮೂಹಿಕರಿಂದ, ಸೇವಕ ಜನರಿಂದ ಮನ್ನಣೆ. ನಿಮ್ಮ ಪ್ರಕೃತಿಗೆ ಸುಖವಿರಲಾರದು. ಈ ಮಾಸದಲ್ಲಿ ಗಾಢವಾದ ಆಲೋಚನೆಯು ನಿಮ್ಮ ತಲೆಯಲ್ಲಿ ಕೆಲಸ ಮಾಡುತ್ತದೆ. ಸ್ವ ಸ್ತ್ರೀಯರಿಂದ ಸುಖವು. ನೀವು ಮಾಡಬೇಕಾದ ಕೆಲಸಗಳು ನಿಮ್ಮ ಅಭಿಪ್ರಾಯದಂತೆ ನಡೆಯುತ್ತವೆ. ಕಲಹಕಾರಣಗಳು ಬರಬಹುದು; ಆದರೂ ಮಧ್ಯಮ ಜನರಿಂದ ಶಾಂತವಾದೀತು. ವಿದ್ಯಾರ್ಥಿಗಳಿಗೆ ದೋಷವಿಲ್ಲ. ವ್ಯಯಕ್ಕಿಂತ ಲಾಭ ಅಧಿಕ. ವ್ಯಾಪಾರಸ್ಥರಿಗೆ ಪ್ರಯತ್ನಿಸಿದರೆ ಲಾಭ ಉಂಟಾಗಬಹುದು. ಸಂದೇಹವಿಲ್ಲ.

ಮಿಥುನ.

ಸ್ವ ಸ್ತ್ರೀ ಅಥವಾ ಪೂಜ್ಯ ಸ್ತ್ರೀಯರಲ್ಲಿ ಮನಸ್ತಾಪವಾದೀತು. ಮನಸು ನಿಧಾನವಿರಲಾರದು. ಅವಿಶ್ವಾಸ ಜನರು ನಿಮ್ಮನ್ನು ಮೋಸಗೊಳಿಸಲು ಯತ್ನಿಸುತ್ತಾರೆ. ಈ ವಿಷಯ ಎಚ್ಚರ ತೆಗೆದುಕೊಳ್ಳಬೇಕು. ಮಾಸದ ಪ್ರಥಮ ಸಮಯದಲ್ಲಿ ಅಕಸ್ಮಾತ್ ಪ್ರಯಾಣ ಪ್ರಸಂಗ ಬಂದೀತು. ವ್ಯಾಪಾರದಲ್ಲಿ ಮಧ್ಯಮ ಲಾಭವಿದ್ದೀತು. ಗುರು ಹಿರಿಯರ ಭೇಟಿಯಾದೀತು. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಕುಶಲತೆಯು ಚುರುಕು ಬುದ್ಧಿಯು ಉಂಟಾಗುತ್ತೆ. ಉದ್ಯೋಗಸ್ಥರಿಗೆ ವಿಶೇಷ ತ್ರಾಸವಾದರೂ ಹೆಚ್ಚಿನ ತೊಂದರೆ ಇಲ್ಲ. ಆದಾಯವು ಅಧಿಕವಿರುತ್ತೆ.

ಕರ್ಕಾಟಕ.

ನಿಮಗೆ ವಿರೋಧಿಗಳ ಕೃತ್ರಿಮಗಳು ಬಹು ತಿಂಗಳುಗಳಿಂದಲೂ ಇದ್ದವು. ಈಗ್ಗೆ ಬರ ಬರುತ್ತ ನಿಧಾನವಾಗುತ್ತೆ. ನಿಮ್ಮನ್ನು ಆಶ್ರಯ ಮಾಡಲು ಯೋಚಿಸುತ್ತಿದ್ದಾರೆ ಆದಾಗ್ಯೂ ವಿವೇಕಶೂನ್ಯರಾಗಬೇಡಿ. ಯೋಚಿಸಿ ಸಮೀಪಗತರನ್ನಾಗಿ ಮಾಡಿಕೊಳ್ಳಿರಿ. ನಿಮ್ಮ ಕೆಲಸ ಕಾರ್ಯಗಳು ನಿಮ್ಮಿಂದ ಸಾಧಿಸಲಾಗದೆ ನಿಮ್ಮ ಮನಸಿಗೆ ಬಹಳ ವ್ಯಥೆಯಾಯಿತು. ಆದರೆ ಇನ್ನು ಮುಂದೆ ಆಪ್ತರ ವಿಶ್ವಾಸಗಳಿಂದಲೂ, ಪ್ರೇಮದ ಹಿರಿಯರಿಂದಲೂ ಸಾಧ್ಯವಾದೀತು. ನೀವು ಮಾಡತಕ್ಕ ಕಾರ್ಯಗಳು ಬಹಳ ವಿಶೇಷ ಇರುವುದರಿಂದ ನಿಧಾನ ಮನಸಿನಿಂದ ಪ್ರಾರಂಭಿಸಿರಿ. ದುಡುಕಿ ಕೆಡಲು ಯೋಚಿಸಬೇಡಿರಿ. ನಿಮ್ಮ ಕಾರ್ಯಗಳು ನಿಧಾನವಾದರೂ ಯಶಸ್ಸು ದೊರೆಯುತ್ತೆ. ಲಾಭ ಉಂಟು. ಉದ್ಯೋಗ ವ್ಯವಹಾರ ಇವುಗಳಲ್ಲಿ ಯಶಸ್ಸುಂಟು. ಆರ್ಥಿಕ ಅಡಚಣೆಗಳು ಸ್ವಲ್ಪ ಅಧಿಕವಾದೀತು. ಮಿತ್ರ ಬಾಂಧವರಿಂದ ಸುಖವಿರುತ್ತೆ. ಧರ್ಮ ಕಾರ್ಯ ಮೊದಲಾದ ಸತ್ಕರ್ಮಗಳ ಕಡೆಗೆ ನಿಮ್ಮ ಮನಸು ತಿರುಗುತ್ತೆ. ಹಿರಿಯರ ಕೋಪಕ್ಕೆ ಒಳಗಾಗಬೇಡಿರಿ. ವಿದ್ಯಾರ್ಥಿಗಳೇ ಅಭ್ಯಾಸದ ಕಡೆಗೆ ನಿಗವಿಡಿರಿ. ಮುಂದೆ ಇದರ ಫಲವು ನಿಮಗೆ ದೊರಕುತ್ತೆ. ವ್ಯಾಪಾರಿಗಳೇ, ನಿಮಗೆ ತೊಂದರೆಗಳು ಅಧಿಕವಿರುತ್ತೆ. ಪದಾರ್ಥ ಶೇಖರಕ್ಕೆ ಈ ಮಾಸದಲ್ಲಿ ನೀವು ಮನಸು ಕೊಡಬೇಡಿರಿ.

ಸಿಂಹ.

ನೀವು ಮಾಡಬೇಕಾದ ಕಾರ್ಯಗಳು ಈ ಮಾಸದ ಪ್ರಾರಂಭದಲ್ಲಿ ಸುಲಭವಾಗಿ ನೆರವೇರುವವು. ನಿಮ್ಮ ಸಹೋದರ ವರ್ಗದವರಿಂದ ಸುಖವಾದೀತು. ಸ್ತ್ರೀ ಪುತ್ರ ವರ್ಗದವರಿಂದ ಶರೀರ ಸುಖವು ಪ್ರಥಮದಲ್ಲಿ ಚೆನ್ನಾಗಿರುತ್ತೆ. ಅಂತ್ಯದಲ್ಲಿ ಸ್ವಲ್ಪ ಮಟ್ಟಿಗೆ ಆರೋಗ್ಯ ಭಾಗ್ಯಕ್ಕೆ ಕೊರತೆ ತಟ್ಟುತ್ತೆ. ನಿಮಗೆ ನಿಮ್ಮ ಶತ್ರುಗಳಿಂದ ಸ್ವಲ್ಪ ವ್ಯಥೆ ಪಡಬಹುದು. ಮನಸಿಗೆ ಸಾಧಾರಣ ದುಃಖವಾಗಬಹುದು. ನಿಮ್ಮ ಆದಾಯ ಸಾಧಾರಣ ಮಟ್ಟಿಗೆ ಸುಧಾರಿಸುತ್ತದೆ. ನಿಮ್ಮ ಇಷ್ಟ ಮಿತ್ರರಿಂದ ಮನ್ನಣೆ ದೊರೆಯುತ್ತದೆ. ಮಾಸಾಂತ್ಯದಲ್ಲಿ ಜನರೊಡನೆ ನಿಮಗೆ ಮನಸ್ತಾಪ ಉಂಟಾದೀತು. ಆದರೂ ದೋಷವಿಲ್ಲ. ಅಶುಭ ಫಲಗಳಿಗಿಂತ ಶುಭ ಫಲವೇ ಅಧಿಕವಿರುತ್ತೆ. ವಿದ್ಯಾರ್ಥಿಗಳಿಗೆ ಅಷ್ಟೇನೂ ಹಿತಕರವಲ್ಲ. ವ್ಯಾಪಾರದವರಿಗೆ ಆದಿಯಲ್ಲಿ ಲಾಭ ಕಂಡಾಗ್ಯೂ ಅಂತ್ಯದಲ್ಲಿ ನಷ್ಟ ಉಂಟಾಗುವಂತಿದೆ. ಆದ್ದರಿಂದ ಯೋಚಿಸಿ ವ್ಯವಹಾರ ನಡೆಸಿ.

ಕನ್ಯಾ.

ನಿಮಗೆ ಇದುವರೆಗೆ ಎಷ್ಟೋ ತೊಂದರೆಗಳು ಸಂಭವಿಸಿದವು. ನಿಮ್ಮ ಸ್ತ್ರೀ ವರ್ಗದ ಶಾರೀರಕಾಲಸ್ಯಗಳಿಂದ ನಿಮ್ಮ ಮನಸ್ಸಿಗೆ ಎಷ್ಟೋ ವ್ಯಸನಗಳು ಹತ್ತಿದ್ದವು. ಆದರೆ ಇನ್ನು ಅಂಜಲು ಕಾರಣವಿಲ್ಲ. ಪ್ರಾಪಂಚಿಕ ಸುಖವು ಸುಧಾರಿಸುತ್ತದೆ. ತಮಗೆ ವ್ಯಾಪಾರ ಉದ್ಯೋಗಗಳಲ್ಲಿ ಹಾನಿ ತಟ್ಟುತ್ತೆ. ಮನೆಯಲ್ಲಿ ತಮ್ಮ ಮನಸ್ಸಿಗೆ ಜಿಗುಪ್ಸೆ ತೋರುತ್ತೆ. ಯತ್ನ ಕಾರ್ಯಗಳು ನಿಧಾನವಾಗಿ ಕೈಗೂಡಿಯಾವು. ನಿಮ್ಮ ಸಹಪಾಠಿಗಳೊಡನೆಯೂ, ನಿಮ್ಮ ವಿಶ್ವಾಸಿಗಳೊಡನೆಯೂ ವೃಥಾ ಕಲಹ ಉಂಟಾದೀತು. ಎಚ್ಚರಿಕೆಯಿಂದ ವರ್ತಿಸಿರಿ. ವಿದ್ಯಾರ್ಥಿಗಳೇ ನಿಮಗೆ ಈ ತಿಂಗಳು ಚೆನ್ನಾಗಿದೆ. ಪ್ರಯತ್ನಿಸಿರಿ. ವ್ಯಾಪಾರಿಗಳೇ ತಮಗೆ ಅಂತ್ಯದಲ್ಲಿ ಲಾಭವಿದೆ.

ತುಲಾ.

ನಿಮ್ಮ ಪ್ರಕೃತಿಯು ಸ್ವಲ್ಪ ಕೆಡುತ್ತೆ, ಪಿತ್ತಾಧಿಕವಾಗುತ್ತೆ. ಅಜೀರ್ಣಾದಿಗಳು ನಿಮ್ಮನ್ನು ಬಾಧಿಸಿಯಾವು. ದೇಹಾರೋಗ್ಯದ ಕಡೆ ನಿಗವಿಡಿರಿ. ಗುರುವಿನ ಕೃಪೆಯು ನಿಮಗಳಿಗಿದೆ. ಲಾಭಕ್ಕಿಂತ ವ್ಯಯಾಧಿಕವಾಗಿರುತ್ತೆ. ಶತ್ರುಗಳಿಂದ ತೊಂದರೆ. ಮನಸ್ಸಿಗೆ ಅಧಿಕ ಚಿಂತೆ ತೋರುತ್ತೆ. ಆದರೂ ಅವರು ಏನೂ ಮಾಡಲಾರರು. ನಿಮ್ಮ ಸಹೋದರ ವರ್ಗದವರಿಗೆ ದೇಹಾಲಸ್ಯ ತೋರುತ್ತೆ. ವಿದ್ಯಾರ್ಥಿಗಳೇ ಅಭ್ಯಾಸದ ಕಡೆಗೆ ಹೆಚ್ಚು ನಿಗವಿಡಿರಿ. ನಿಮ್ಮ ಪ್ರಯತ್ನಕ್ಕೆ ಸಾಫಲ್ಯ ದೊರೆತೀತು. ವ್ಯಾಪಾರದವರಿಗೆ ಮಧ್ಯಮ ಲಾಭ.

ವೃಶ್ಚಿಕ.

ನಿಮಗೆ ಬಂಧುಗಳಲ್ಲಿ ಮನಸ್ತಾಪವಾದೀತು. ಶತ್ರುಗಳ ಭಯ ತಪ್ಪೀತು. ಸರ್ಕಾರಿ ಕಾರ್ಯಗಳಲ್ಲಿ ಎಚ್ಚರಿಕೆಯಿಂದ ವರ್ತಿಸಿರಿ. ನೀಚ ಜನರೊಡನೆ ಕಲಹ ಪ್ರಾಪ್ತವಾದೀತು. ಶಾಂತತೆಯಿಂದ ವರ್ತಿಸಿರಿ. ನಿಮ್ಮ ಮನಸಿನಲ್ಲಿ ವ್ಯಸನವು ಬಾಧಿಸುತ್ತದೆ. ಸರ್ವ ಪ್ರಕಾರದಲ್ಲೂ ಸುಧಾರಣೆ ಬರುವ ಕಾಲವಾಗಿರುತ್ತದೆ. ನಿಮ್ಮ ತೊಂದರೆಗಳು ಕಳೆದವು. ಬಂಧು ವರ್ಗದವರಿಂದಲೂ ತಮ್ಮ ವಿಶ್ವಾಸ ಜನರಿಂದಲೂ ಮನ್ನಣೆ ದೊರೆಯುತ್ತೆ. ಮುಂದೆ ಧನಲಾಭ ಉಂಟಾದೀತು. ನೀವು ಏನಾದರೂ ಉದ್ಯೋಗವೂ ವ್ಯವಸಾಯವನ್ನು ಅವಲಂಬಿಸುವ ಇಷ್ಟವು ತಮಗಿದ್ದರೆ ಯತ್ನಿಸಿರಿ. ಸಿದ್ಧಿಯಾಗುತ್ತೆ. ವಿದ್ಯಾರ್ಥಿಯರಿಗೆ ಸುಖವಿದೆ. ವ್ಯಾಪಾರಿಗಳಿಗೆ ಅಷ್ಟೇನು ಲಾಭವಿರಲಾರದು. ಹೆಚ್ಚು ನಷ್ಟವೂ ಇಲ್ಲ.

ಧನು

ಈ ಹಿಂದೆ ನಿಮಗೆ ಆರೋಗ್ಯವು ಸ್ವಲ್ಪ ಕೆಟ್ಟಿರಬೇಕು. ಮನಸಿಗೆ ವಿಶೇಷ ವ್ಯಥೆಯುಂಟಾದೀತು. ಇನ್ನು ಮುಂದೆ ಸ್ವಲ್ಪ ಸುಧಾರಿತವಾಗುತ್ತೆ. ತಮ್ಮ ಕಾರ್ಯಗಳಲ್ಲಿ ಸ್ವಲ್ಪ ಎಚ್ಚರದಿಂದ ವರ್ತಿಸಿರಿ. ಖರ್ಚಿನ ಪ್ರಸಂಗ ಬಂದೀತು. ಬಂಧು ಮಿತ್ರರಿಂದ ಮರ್ಯಾದೆ ದೊರೆತೀತು. ಮನೆಯಲ್ಲಿ ಏನಾದರೂ ಶುಭ ಕಾರ್ಯಗಳು ಜರಗುತ್ತವೆ. ಆಪ್ತ ಜನರ ದರ್ಶನ ದೊರೆಯುತ್ತೆ. ವಿದ್ಯಾರ್ಥಿಗಳಿಗೆ ಮಧ್ಯಮ ಯೋಗ. ವ್ಯಾಪಾರಿಗಳಿಗೆ ಅಲ್ಪ ಲಾಭ. ಆತುರ ಬುದ್ಧಿ.

ಮಕರ.

ವ್ಯವಹಾರದಲ್ಲಿ ಜಯ. ಹಿರಿಯರಿಂದ ಮರ್ಯಾದೆ ಪಡೆಯುತ್ತೀರಿ. ನಿಮ್ಮ ದೇಹದಲ್ಲಿ ಸ್ವಲ್ಪ ಆಲಸ್ಯ ತೋರುತ್ತೆ. ಪ್ರಾಪಂಚಿಕ ಸುಖವು ಸ್ವಲ್ಪ ಚೆನ್ನಾಗಿದೆ. ನಿಮ್ಮ ವಾಕ್ಯಗಳು ವ್ಯರ್ಥವಾಗಲಾರವು. ಸ್ತ್ರೀ ಪುರುಷರ ಸುಖಕ್ಕೆ ಹಿಂದೆ ಸ್ವಲ್ಪ ತೊಂದರೆ ತೋರಿತ್ತು. ಇನ್ನು ಮುಂದೆ ಸುಧಾರಿಸುತ್ತೆ. ನಿಮ್ಮ ಮನಸಿನಂತೆ ನೀವುಗಳು ಪ್ರಯತ್ನಿಸಿದರೆ ನಿಮ್ಮ ಕಾರ್ಯಗಳು ಕೈಗೂಡಿಯಾವು. ವಿದ್ಯಾರ್ಥಿಗಳಿಗೆ ಭಾಷಣದಲ್ಲಿ ಗೌರವವಿದೆ. ಸಾಧಾರಣ ಸುಖವು ದೊರೆಯುತ್ತೆ. ವ್ಯಾಪಾರಿಗಳಿಗೆ ಆದಾಯಕ್ಕಿಂತ ವ್ಯಯಾಧಿಕ.

ಕುಂಭ.

ನಿಮಗೆ ಅಕಸ್ಮಾತ್ ಪ್ರಯಾಣ ಪ್ರವಾಸದಲ್ಲಿ ಇಷ್ಟ. ಗುರುಹಿರಿಯರೊಡನೆ ಮನಸ್ತಾಪ ಬಂದೀತು. ಆರ್ಥಿಕ ಸ್ಥಿತಿ ಸ್ವಲ್ಪ ಕೆಡುತ್ತೆ. ವ್ಯಾಪಾರ ಉದ್ಯೋಗದವರಿಗೆ ಸಾಧಾರಣ ಲಾಭ. ಅಕಸ್ಮಾತ್ ಭಯಪ್ರಾಪ್ತಿ. ಆದರೂ ವ್ಯಥ ಇಲ್ಲ. ನಿಮ್ಮ ಮನಸ್ಸಿನಂತೆ ಕೆಲಸಗಳು ಆಗದ್ದರಿಂದ ತಮಗೆ ಕೊಂಚ ವ್ಯಥೆಯುಂಟಾದೀತು. ಸ್ವಲ್ಪ ಸಾವಕಾಶ ಮಾಡಿರಿ. ಗುರುನಾಥನು ದಯತೋರಿಸುವ ಕಾಲವು ಸಮೀಪಿಸಿದೆ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಬೇಸರವಾದೀತು. ಪ್ರಯತ್ನವನ್ನು ಬಿಡಬಾರದು.

ಮೀನ.

ನೀವು ಧೈರ್ಯವನ್ನು ಅವಲಂಬಿಸಿ. ಶತ್ರುಭಯವುಂಟಾದರೂ ಅದರಿಂದ ಭಯಪಡುವ ಅವಶ್ಯಕತೆ ಇಲ್ಲ. ಸಾಮಾನ್ಯ ನಿಮ್ಮ ಕಾರ್ಯಗಳು ಕೈಗೂಡುತ್ತವೆ. ನಿಮ್ಮ ಕೆಲಸಗಳಲ್ಲಿ ನೀವು ಲಾಭ ಹೊಂದುವಿರಿ. ಶರೀರದಲ್ಲಿ ವಾತಬಾಧೆಯು ತಲೆದೋರೀತು. ನಿಮ್ಮ ಬಂಧು ಮಿತ್ರರಿಂದಾಗಲೀ, ನಿಮ್ಮ ಸಹಪಾಠಿಗಳಿಂದಾಗಲೀ ಕಠಿಣ ಪ್ರಸಂಗ ಒದಗಿ ನಿಮ್ಮ ಮನಸ್ಸಿಗೆ ವ್ಯಸನತಟ್ಟೀತು. ವಿದ್ಯಾರ್ಥಿಗಳಿಗೆ ಸುಖದಾಯಕ ಯೋಗವಿದೆ. ಶೀಘ್ರ ಕೋಪ ಉಂಟಾಗಬಹುದು. ಶಾಂತಿಯನ್ನವಲಂಬಿಸಿರಿ. ವ್ಯಾಪಾರದವರಿಗೆ ಅಷ್ಟೇನು ಲಾಭದಾಯಕವಲ್ಲ. ಅಂತು ಹೆಚ್ಚು ನಷ್ಟವೂ ಆಗುವ ಸಂಭವವಿಲ್ಲ. ಮಧ್ಯಮ ಲಾಭವಿದೆ.

WANTED

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for samples.

For Terms apply :—

3 **Majestic House, Ludhiana.**

ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು.

ಕಳೆದ ವಾರದಿಂದ ಮುಂದುವರಿಯುವುದು.

25. ಟಿ. ಶೆಟ್ಟಿಗೇರಿಯಲ್ಲಿರುವ ಶಾಲೆಯನ್ನು ಮುಚ್ಚಿ ಸೋಮವಾರಪೇಟೆಯ ಕೂತಿ ಗ್ರಾಮದಲ್ಲಿ ಒಂದು ಶಾಲೆಯನ್ನು ತೆರೆಯಬೇಕೆಂದು ಕಮಿಷನರ ಮುಖಾಂತರ ಬಂದ ಪತ್ರವನ್ನು ಓದಿ, ಉಪಾಧ್ಯಾಯರ ವರ್ಗಾವರ್ಗಿಯಾಗಿ 3 ತಿಂಗಳ ನಂತರ ಇವರ ಕೆಲಸವನ್ನು ಪರಿಶೀಲಿಸಿ ಯೋಚಿಸಲು ತೀರ್ಮಾನವಾಯಿತು.

26. ಸುಂಟಿಕೊಪ್ಪಲಿನ ಮಾರ್ಕೆಟ್ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ ಅಂದಾಜು ರೂ. 90 ಮಂಜೂರು ಮಾಡಬೇಕೆಂಬ ಸುಂಟಿಕೊಪ್ಪ ಪಾರುಪತ್ಯಗಾರರ ಶಿಫಾರಸ್ಸನ್ನು ಓದಿ ರೂ. 50 ಮಂಜೂರು ಮಾಡಲಾಯಿತು. (ಕಳೆದ ಅಕ್ಟೋಬರಿನ ಬೋರ್ಡು ಮೀಟಿಂಗಿನಲ್ಲಿ ಈ ವಿಚಾರ ಕಮ್ಮಿ ತಗಹದ ರೀತಿಯಲ್ಲಿ ಅಂದಾಜು ಕೊಡಬೇಕೆಂದು ಎಗ್ಸಿಕ್ಯೂಟಿವ್ ಇಂಜನೀಯರನ್ನು ಕೇಳಿಕೊಳ್ಳಲಾಗಿದೆ.)

27. ಸಿದ್ದಾಪುರ ಆಸ್ಪತ್ರೆಯನ್ನು ಅಲ್ಲಿಯ ಪ್ರಯಾಣಸ್ಥರ ಬಂಗ್ಲೆಗೆ ವರ್ಗಾಯಿಸಬೇಕೆಂಬ ಸೂಚನೆಯನ್ನು ಓದಿ ಹಾಗೆ ವರ್ಗಾಯಿಸಬಹುದೆಂದು ತೀರ್ಮಾನಿಸಿ, ರೂ. 300 ಮಂಜೂರು ಮಾಡಲಾಯಿತು.

28. ಡಿಸ್ಟ್ರಿಕ್ಟ್ ಬೋರ್ಡಿನ ವಿವಿಧ ಇಲಾಖೆಯ ನೌಕರರಿಗೆ ಹೊಸ ರೀತಿಯ ವೇತನ ದರವನ್ನು ಕೊಡುವ ಬಗ್ಗೆ ಬರೆದ ಅರ್ಜಿಗೆ ಚೀಫ್ ಕಮಿಷನರ ಸೆಕ್ರೆಟರಿಯವರಿಂದ ಬಂದ ಪತ್ರವನ್ನು ಓದಿ ಆ ನೇರೆ ಮಾಡುವಂತೆ ಅಂಗೀಕರಿಸಲಾಯಿತು.

29. ಆಲೂರು ಶಾಲೆಯನ್ನು ಮುಚ್ಚಬೇಕೆಂಬ ಪತ್ರಗಳನ್ನು ಓದಲಾಯಿತು. ಅಲ್ಲಿಯ ಶಾಲಾ ಉಪಾಧ್ಯಾಯರ ವರ್ಗಾವರ್ಗಿಯಾದ ಮೂರು ತಿಂಗಳ ನಂತರ ಇದನ್ನು ಯೋಚಿಸಲು ತೀರ್ಮಾನವಾಯಿತು.

30. ಸಿದ್ದಾಪುರ ಮಾರ್ಕೆಟ್ ಕಂಟ್ರಾಕ್ಟರಿಂದ 1938-39 ಕ್ಕೆ ಬರತಕ್ಕದ್ದಿರುವ ಬಾಕಿಯನ್ನು ಮಾಫಿ ಬಿಡಬೇಕೆಂಬ ಸೂಚನೆಯನ್ನು ಓದಿ ಹಾಗೆ ಮಾಡಲು ತೀರ್ಮಾನವಾಯಿತು.

ಠರಾವುಗಳು.

ಶ್ರೀ. ಸಿ. ಯಂ. ಪೂಣಚ್ಚನವರ ಸೂಚನೆಗಳು.

31. (1) ಗಾಳಿಬೀಡು ಶಾಲೆಯ ಬಳಿಯಲ್ಲಿ ಒಂದು ಖಾಯಂ ಆದ ಕಲ್ಲಿನ ಸೇತುವೆ (ಶಾಲಾ ರೋಡಿನ ಹತ್ತರ) ಯನ್ನು ಕಟ್ಟಿಸಬೇಕೆಂದೂ, ಅದಕ್ಕೆ ತಗಲುವ ಅಂದಾಜು ಖರ್ಚು ರೂ. 600 ರಲ್ಲಿ ರೂ. 300 ನ್ನು ಮೊಣ್ಣಂಗೇರಿ, ಗಾಳಿಬೀಡು ಮತ್ತು ಕಾಲೂರು ಗ್ರಾಮಸ್ಥರು ಹಾಕುವರೆಂದೂ, ಬೋರ್ಡಿನಿಂದ ಬಾಕಿ ರೂ. 300 ಮಾತ್ರ ಕೊಡತಕ್ಕದೆಂದೂ ತಂದ ಸೂಚನೆಯನ್ನು ವಾಪಸು ತೆಗೆದುಕೊಳ್ಳಲಾಯಿತು.

(2) ಕಡಗದಾಳು ಶಾಲೆಗೆ ಒಬ್ಬ ಹೆಚ್ಚಿನ ಉಪಾಧ್ಯಾಯನನ್ನು ಕೊಡಬೇಕು. ಸಿಲೆಕ್ಟ್ ಕಮಿಟಿಯವರ ತೀರ್ಮಾನಕ್ಕೆ ಬಿಡಲಾಯಿತು.

(3) ಸೂರ್ಲಬಿ ಶಾಲೆಯ ರಿಪೇರಿ ಬಗ್ಗೆ ರೂ. 75 ಮಂಜೂರು ಮಾಡಬೇಕು. (ಶಾಲಾ ಕಟ್ಟಡದ ಮಾಡು ಪೂರ ಅಬದ್ಧವಾಗಿದೆ.) ಈ ವಿಚಾರ ಪರಿಶೀಲಿಸಲು ತೀರ್ಮಾನವಾಯಿತು.

(4) ಹೊದ್ದೂರು ಶಾಲೆಯ ರಿಪೇರಿ, ಸುಣ್ಣ ಹಾಗೂ ತಾರು ಹಾಕಿಸಲಿಕ್ಕಾಗಿ ರೂ. 30 ಮಂಜೂರು ಮಾಡಬೇಕು. ಮಂಜೂರಾಯಿತು.

(5) ಮೂರ್ನಾಡು ಹೈಯರ್ ಎಲಿಮೆಂಟರಿ ಶಾಲೆಯ ನೆಲವನ್ನು ದುರಸ್ತು ಮಾಡಿಸಲು ರೂ. 800 ಕೊಡಬೇಕು. (ಬೋರ್ಡಿಗೆ ಆರ್ಥಿಕ ತೊಂದರೆಯೊಗದಂತೆ ಇದನ್ನು ವಾರ್ಷಿಕ ರೂ. 200 ರಂತೆ 4 ವರ್ಷ ಕೊಡಬಹುದು.) ರೂ. 100 ಮಂಜೂರು ಮಾಡಲಾಯಿತು.

(6) ದಕ್ಷಿಣ ಕೊಡಗಿನ ಹಾತೂರು ಶಾಲೆಗೆ ಒಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇಕು. ಸಿಲೆಕ್ಟ್ ಕಮಿಟಿಗೆ ಈ ವಿಚಾರ ವಿಚಾರಿಸಲು ಬಿಡಲಾಯಿತು.

(7) ಮೂರ್ನಾಡಿನ ಬಾವಿಗಳ ರಿಪೇರಿ ಬಗ್ಗೆ ರೂ. 25 ಮಂಜೂರು ಮಾಡಬೇಕು. ರೂ. 25 ಮಂಜೂರು ಮಾಡಲಾಯಿತು.

ಶ್ರೀ ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆಗಳು.

32. (1) ಶೆಟ್ಟಿಗೇರಿ ದೊಡ್ಡ ರಸ್ತೆಯಿಂದ ಕೊಂಗಣ ಗ್ರಾಮಕ್ಕೆ ಹೋಗುವ ರಸ್ತೆ ರಿಪೇರಿಗೆ ರೂ. 25 ಮಂಜೂರು ಮಾಡಬೇಕೆಂಬ ಶಿಫಾರಸ್ಸನ್ನು ಓದಿ ಮಂಜೂರು ಮಾಡಲಾಯಿತು.

(2) ತಿತಿಮತಿ ಕಾನೂರು ರಸ್ತೆಯಿಂದ ಬಿಳೂರಿಗೆ ಹೋಗುವ ರಸ್ತೆ ರಿಪೇರಿಗಾಗಿ ರೂ. 15 ಮಂಜೂರು ಮಾಡಬೇಕೆಂಬ ಶಿಫಾರಸ್ಸನ್ನು ಓದಿ ಹಿಂತೆಗೆದುಕೊಳ್ಳಲಾಯಿತು.

(3) ಪೊನ್ನಂಪೇಟೆ ಶೆಟ್ಟಿಗೇರಿ ರಸ್ತೆಯಿಂದ ಹೊದ್ದೂರು ಗ್ರಾಮಕ್ಕೆ ಹೋಗುವ ರಸ್ತೆ ರಿಪೇರಿಗಾಗಿ ರೂ. 75 ಕೊಡಬೇಕೆಂಬ ಸೂಚನೆಯನ್ನು ಓದಿ ರೂ. 25 ಮಂಜೂರು ಮಾಡಲಾಯಿತು.

(4) ತಿತಿಮತಿ ಆರಮನೆ ಬಾಣೆ ರಸ್ತೆಯಿಂದ ಮಲ್ಲೂರಿಗೆ ಹೋಗುವ ರಸ್ತೆ ರಿಪೇರಿಗಾಗಿ ರೂ. 100 ಕೊಡಬೇಕೆಂಬ ಶಿಫಾರಸ್ಸನ್ನು ಓದಿ ರೂ. 50 ಮಂಜೂರು ಮಾಡಲಾಯಿತು.

(5) ಪೊನ್ನಂಪೇಟೆ ಕಾನೂರು ರಸ್ತೆಯ 4 ನೇ ಮೈಲುಕಲ್ಲಿನಿಂದ ಕೋತೂರಿಗೆ ಹೋಗುವ ರಸ್ತೆ ರಿಪೇರಿಗೆ ರೂ. 25 ಕೊಡಬೇಕೆಂಬ ಠರಾವನ್ನು ಓದಿ ರೂ. 15 ಮಂಜೂರು ಮಾಡಲಾಯಿತು.

(6) ಬೋರ್ಡಿನ ಪ್ರೆಸಿಡೆಂಟರ ಮತ್ತು ವೈಸ್ ಪ್ರೆಸಿಡೆಂಟರ ಬತ್ಯವು 1000 ರೂಪಾಯಿಗೆ ಮೀರಕೂಡದೆಂಬ ಸೂಚನೆಯನ್ನು ಓದಿ ವಾಪಸು ತೆಗೆದುಕೊಳ್ಳಲಾಯಿತು.

(7) ಬೋರ್ಡು ಮೀಟಿಂಗಿಗೆ ಬರಲು ಬಸ್ ಸೌಕರ್ಯವಿಲ್ಲದೆ ನಡೆದು ಬರುವ ಮೆಂಬರುಗಳಿಗೆ ಮೈಲಿಗೆ 4 ಆಣೆಯಂತೆ ಬತ್ಯ ಕೊಡಬೇಕೆಂಬ ಠರಾವು ಓದಲ್ಪಟ್ಟಿತು. ಆ ವ ರ ವ ರ ಮ ನೆ ಯಿಂ ದ ಬ ಸ್ಸ್ ಸ್ಟೇಶನಿಗೆ ಬ ರು ವ ಪ್ರ ತಿ ಯೊಬ್ಬ ಮೆಂಬರನಿಗೂ ಮೈಲಿಗೆ 3 ಆಣೆಯಂತೆ ಬತ್ಯ ಕೊಡಬೇಕೆಂದು ಅ. ಕಮಿಷನರು ಸೂಚಿಸಿದ್ದನ್ನು ಶ್ರೀ ಕೆ. ಕೆ. ಗಣಪತಿಯವರು ಅನುಮೋದಿಸಿದರು.

ಪ್ರತಿಯೊಬ್ಬ ಮೆಂಬರನೂ ನಡೆದು ಬರುವ ಪ್ರತಿ ಮೈಲಿಗೆ 3 ಆಣೆಯಂತೆ ಕೊಡಲು ತೀರ್ಮಾನವಾಯಿತು.

(8) ಮದ್ರಾಸಿನ ಶ್ರೀ ರಾಮಕೃಷ್ಣ ಆಟೋಮೊಬೈಲ್ ಇಂಜನೀಯರಿಂಗ್ ಕಾಲೇಜಿನಲ್ಲಿ ಅಭ್ಯಸಿಸುತ್ತಿರುವ ಕೊಡಗಿನ ವಿದ್ಯಾರ್ಥಿಗಳಿಗಾಗಿ ರೂ. 200 ಬಡ್ಜೆಟಿನಲ್ಲಿಡಬೇಕೆಂಬ ಸೂಚನೆಯನ್ನು ಓದಿ ರೂ. 100 ಮಂಜೂರು ಮಾಡಲಾಯಿತು.

(9) ಚಿಕ್ಕಮಂಡೂರು ಗ್ರಾಮದಲ್ಲಿ ಒಂದು ಬಾವಿ ತೋಡಿಸಲಿಕ್ಕಾಗಿ 400 ರೂ. ಮಂಜೂರು ಮಾಡಬೇಕೆಂಬ ಸೂಚನೆಯನ್ನು ಓದಿ ವಾಪಸು ತೆಗೆದುಕೊಳ್ಳಲಾಯಿತು.

(10) ಕಿರುಗೂರು ಖಾಸಗಿ ಶಾಲೆಯನ್ನು ಬೋರ್ಡು ವಹಿಸಿಕೊಳ್ಳಬೇಕೆಂಬ ಶಿಫಾರಸ್ಸನ್ನು ಓದಿ ಈ ವಿಚಾರವನ್ನು ಸಿಲೆಕ್ಟ್ ಕಮಿಟಿಗೆ ಬಿಡಲಾಯಿತು.

(11) ಹೇವನೂರು-ನಿಟ್ಟೂರು- ಕಾರ್ಮಾಡು ಫಾರೆಸ್ಟು ರಸ್ತೆಯನ್ನು ಸಾರ್ವಜನಿಕ ವಹಿವಾಟಿಗಾಗಿ ಯಾವ ತಡೆ ಯಾ ತೊಂದರೆ ಇಲ್ಲದೆ ವರ್ಷ ಪೂರ್ತಿ ತೆರೆದಿಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳಬೇಕೆಂಬ ಸೂಚನೆಯನ್ನು ಓದಿ ಈ ವಿಚಾರ ಅವರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

ಶ್ರೀ. ಕೆದಂಬಾಡಿ ಗಣಪತಿಯವರ ಸೂಚನೆಗಳು.

33. (1) ಮಡಿಕೇರಿ ಭಾಗಮಂಡಲ ರಸ್ತೆಯ 8,4 ನೇ ಫರ್ಲಾಂಗಿನ ಚೆಟ್ಟಿತ್ತೂರು ರಸ್ತೆಯನ್ನು ಬೋರ್ಡು ವಹಿಸಿಕೊಳ್ಳಬೇಕು. (ಈಗಿನ ಅದರ ಅಂದಾಜು ಖರ್ಚು ರೂ. 100. ರಸ್ತೆಯು 4 ಮೈಲು. ವಾರ್ಷಿಕ ರಿಪೇರಿ ಖರ್ಚು ರೂ. 25 ಆಗಬಹುದು.) ಮುಂದಿನ ಮೀಟಿಂಗಿಗಿಡಲಾಯಿತು.

(2) ಕಾವೇರಿ ಹೊಳೆಗೆ ಕುಂದಚೇರಿ ಗ್ರಾಮದ 'ಬಂಡಿ ಕಡು' ವಿನಲ್ಲಿ ಒಂದು ಪಾಲ ಹಾಕಬೇಕೆಂದೂ, ಅಂದಾಜು ರೂ. 20 ಖರ್ಚಾಗಬಹುದೆಂದೂ ಸೂಚಿಸಿದ್ದನ್ನು ಓದಿ ಮುಂದರಿಸಿಡಲಾಯಿತು.

ಶ್ರೀ. ಕೆ. ಕೆ. ಗಣಪತಿಯವರ ಸೂಚನೆಗಳು.

34. (1) ನಾಲ್ಕೇರಿ ಖಾಸಗಿ ಶಾಲೆಯನ್ನು ಬೋರ್ಡು ವಹಿಸಿಕೊಂಡು ಅದನ್ನು ನಡಿಸಲು ಒಬ್ಬ ವಾಲಂಟಿಯರನ್ನು ನೇಮಕಮಾಡಬೇಕೆಂಬ ಸೂಚನೆಯನ್ನು ಓದಿ ಮುಂದರಿಸಿಡಲಾಯಿತು.

(2) ಬೀರುಗ ಖಾಸಗಿ ಶಾಲೆಯನ್ನು ಬೋರ್ಡು ವಹಿಸಿಕೊಂಡು ಅದಕ್ಕೆ ಒಬ್ಬ ವಾಲಂಟಿಯರ್ ಉಪಾಧ್ಯಾಯನನ್ನು ನೇಮಿಸಬೇಕೆಂಬ ಸೂಚನೆಯನ್ನು ಓದಿ ಮುಂದರಿಸಿಡಲಾಯಿತು.

(3) ಹುದಿಕೇರಿಯಲ್ಲಿ ತೆಗೆಸಲ್ಪಡುವ ಬಾವಿಗೆ ಗ್ರಾಮಾಭಿವೃದ್ಧಿ ಫಂಡಿನಿಂದ ಕೊಡಲ್ಪಡುವ ಹಣದ ಜೊತೆಗೆ ರೂ. 100 ಕೊಡಬೇಕೆಂಬ ಸೂಚನೆಯನ್ನು ಓದಿ ಮಂಜೂರು ಮಾಡಲಾಯಿತು.

ಶ್ರೀ ಬಿ. ಸಿ. ಮಾಚಯ್ಯನವರ ಸೂಚನೆಗಳು.

35. (1) ನಾಪೋಕ್ಲು ಆಸ್ಪತ್ರೆಗೆ ವಾರ್ಡು ಕಟ್ಟಿಸಲು ರೂ. 2,000 ಮಂಜೂರು ಮಾಡಬೇಕೆಂಬ ಸೂಚನೆಯನ್ನು ಓದಿ ರೂ. 1000 ಮಂಜೂರು ಮಾಡಿದ್ದಲ್ಲದೆ, ನಾಪೋಕ್ಲು ನಾಡಿನ ಜನರು ಅಂದಾಜಿನ ಬಾಕಿ ಹಣವನ್ನು ಶೇಖರಿಸದ ವಿನಹ ಈ ಹಣವನ್ನು ಕೊಡಕೂಡದೆಂದೂ ತೀರ್ಮಾನವಾಯಿತು.

(2) ಐಯ್ಯಂಗೇರಿ ಖಾಸಗಿ ಶಾಲೆಗೆ ಮಾಸಿಕ ರೂ. 10 ರಂತೆ ಗ್ರಾಂಟು ಕೊಡಬೇಕೆಂಬ ಠರಾವನ್ನು ಓದಿ ಮುಂದರಿಸಿಡಲಾಯಿತು.

(3) ನೆಲಜಿಯಲ್ಲಿ ಶಾಲಾ ಮಕ್ಕಳ ಉಪಯೋಗಕ್ಕಾಗಿ ಒಂದು ಬಾವಿ ತೆಗೆಸಲು ರೂ. 100 ಮಂಜೂರು ಮಾಡಬೇಕೆಂಬ ಠರಾವನ್ನು ಓದಿ ಮುಂದರಿಸಿಡಲಾಯಿತು.

(4) ಚೈಯ್ಯಂಡಾಣೆ ಶಾಲೆಯ 6 ನೇ ತರಗತಿಯ ಹುಡುಗರಿಗೆ 1937-38 ನೇ ಸಾಲಿನ ಫೀಜನ್ನು ಮಾಫಿ ಬಿಡಬೇಕೆಂದೂ, ವಸೂಲಿ ಮಾಡಿದ್ದನ್ನು ವಾಪಸು ಮಾಡಬೇಕೆಂದೂ ತಂದ ಸೂಚನೆಯನ್ನು ಓದಿ ಮುಂಗಡವಾಗಿ ವಸೂಲಿ ಮಾಡಿದ ಬಾಲಕರು 1939 ನೇ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಫೀ ಕೊಡುವದನ್ನು ವಿನಾಯಿಸಲಾಯಿತು.

(5) ಚೈಯ್ಯಂಡಾಣೆ ಶಾಲೆಯಲ್ಲಿ 7 ನೇ ತರಗತಿಯನ್ನು ತೆರೆಯಬೇಕೆಂಬ ಸೂಚನೆಯನ್ನು ಓದಿ ವಾಪಸು ಮಾಡಲಾಯಿತು.

(6) ನಾಪೋಕ್ಲಿನಲ್ಲಿರುವ ಹುಡುಗಿಯರ ಶಾಲಾ ಕಟ್ಟಡವನ್ನು ಬೋರ್ಡು ವಹಿಸಿಕೊಳ್ಳಬೇಕೆಂಬದನ್ನು ಓದಿ ಮುಂದರಿಸಿಡಲಾಯಿತು.

ಶ್ರೀ. ಎ. ಯಸ್. ಮಾಚಯ್ಯನವರ ಸೂಚನೆಗಳು.

36. (1) ಚೆಟ್ಟಳ್ಳಿ ಮತ್ತು ಮಾದಾಪುರ ಪೇಟೆಗಳಿಗೆ ದೀಪ ಕಂಬಗಳನ್ನು ಕೊಡಬೇಕೆಂಬದನ್ನು ಓದಿ ಮುಂದರಿಸಿಡಲಾಯಿತು.

(2) ಕೆದಕಲ್ಲಿನಲ್ಲಿ ಒಂದು ಬಾವಿ ತೋಡಿಸಬೇಕೆಂಬದನ್ನು ಓದಿ ಮುಂದರಿಸಿಡಲಾಯಿತು.

(3) ಹಾಲೇರಿ ಗ್ರಾಮದಲ್ಲಿರುವ ಕುಪ್ಪಿ ಹೊಳೆಗೆ ಒಂದು ಕಟ್ಟೆ ಕಟ್ಟಬೇಕು. (ಅಂದಾಜು ಖರ್ಚು ರೂ. 150) ಓದಿ ಮುಂದರಿಸಿಡಲಾಯಿತು.

ಟ್ರಾವಂಕೂರು—ಹೈದರಾಬಾದು.

ಭಾರತವನ್ನು ಇಂದು ಕ್ರಿಸ್ತಿಯನರು ಆಳುತ್ತಿರುವರೆಂದ ಮಾತ್ರಕ್ಕೆ ಅದು ಕ್ರಿಶ್ಚಿಯನ್ ಸಂಸ್ಥಾನವಲ್ಲ. ಬ್ರಿಟಿಷರಿಗೆ ಸ್ವತಂತ್ರ ಭಾರತದಲ್ಲಿ ಭಾರತೀಯರ ಸಹೋದ್ಯೋಗಿಗಳಂತೆ ಸ್ಥಳವಿದೆಯೋ ವಿನಹ ಅವರ ಮೇಲಧಿಕಾರಿಗಳಾಗಿ ಇಲ್ಲ.

(ಮಹಾತ್ಮ ಗಾಂಧಿಯವರ ಅಭಿಪ್ರಾಯ.)

ಟ್ರಾವಂಕೂರು ಸಂಸ್ಥಾನದ ವಿಚಾರ ನಾನು ಈ ವರೆಗೆ ಯಾವ ಹೇಳಿಕೆ ಹೊರಡಿಸದಿದ್ದರೂ ಕೆಲಸಗಾರರು, ಅದರ ಬಗ್ಗೆ ನಾನು ಯೋಚಿಸುತ್ತಿಲ್ಲವೆಂದು ತಿಳಿಯಲಾಗದು. ಕೆಲವು ವೇಳೆ ಮೌನವೊಂದರಿಂದ ಹಿತವಾಗುವದುಂಟು. ನನ್ನ ಈಗಿನ ಈ ಮೌನದಿಂದ ಉಪಕಾರವೇ ಆಯಿತೆಂದು ಹೇಳಬಹುದು. ಏನಾದರ ಮೇಲಿನ ಆಲೋಚನೆಗಳನ್ನು ಸಂಸ್ಥಾನ ಕಾಂಗ್ರೆಸಿನವರು ವಾಪಾಸು ತೆಗೆದುಕೊಂಡ ಮೇಲೆ ದಿವಾನ್ ಸರಕಾರದ ಬಗ್ಗೆ ಚಳವಳಿ ಸ್ವತಂತ್ರವಾಗಿ ನಡೆಯಲು ಅನುಮಾನವಿಲ್ಲವೆಂದು ತಿಳಿಸಿದ್ದೆನು. ಆದರೆ ಟ್ರಾವಂಕೂರಿನವರಿಗೆ ಅಂಥಾ ಅವಕಾಶವಿಲ್ಲವೆಂದು ಈಗಿನ ಪ್ರಚಾರದಿಂದ ತಿಳಿದು ಬರುತ್ತದೆ. ಟ್ರಾವಂಕೂರ್ ಎಸೆಂಬ್ಲಿಯ ೩೪ ಜನರನ್ನು ಪದಚ್ಯುತರನ್ನಾಗಿ ಮಾಡಿದ್ದು ವ್ಯಂಗ್ಯಾರ್ಥಕವಾಗಿದೆ. ಅವರು ಯಾವದಾದರೂ ತಪ್ಪನ್ನಾದರೂ ಮಾಡಿದ್ದಾರೆಯೇ? ಅಂಥಾ ವಿಚಾರದ ಅರಿವು ನನಗಿಲ್ಲ.

ರಾಜಕೀಯ ಕೈದಿಯಾದ ಶ್ರೀಮತಿ ಅಕ್ಕಮ್ಮ ಚೆರಿಯಾನರಿಗೆ ಮಾಡಿದ ಕಟುಪಚಾರವನ್ನು ವರ್ಣಿಸುವ ಪತ್ರವೊಂದು ನನ್ನಲ್ಲಿದೆ. ಅವಳು ಕೋರ್ಟಿನಲ್ಲಿ ಉಚ್ಚರಿಸಿದ ಮಾತುಗಳು ನಿಜವಾದ ಪಕ್ಷ ಖಂಡಿತವಾಗಿಯೂ ಅವಳ ಉಪಚಾರವು ನಾಚಿಕೆಗೇಡಿನದು. ಅವಳು ನಾಗರಿಕ ಹೆಂಗಸು. ಅವಳು ತನ್ನ ಮುಖ್ಯೋಪಾಧ್ಯಾಯಿನೀ ವೃತ್ತಿಯನ್ನು ಸ್ವಾತಂತ್ರ ಸಂಗ್ರಾಮಕ್ಕೆ ಸೇರಲಿಕ್ಕೋಸ್ಕರ ತ್ಯಜಿಸಿ ಕರಿಸಿದಳು. ಪ್ರಗತಿಯನ್ನು ಹೊಂದಿದ ಒಂದು ಸಂಸ್ಥಾನ, ಜಾಣಾಕ್ಷರಾಜ, ಅಷ್ಟೇ ಜಾಣಾಕ್ಷಿ ರಾಣಿಯಿಂದ ಮತ್ತು ಅನುಭವಶಾಲಿಯಾದ ದಿವಾನನಿಂದೊಡಗೂಡಿದ್ದೆಂದು ಹೆಮ್ಮೆಕೊಚ್ಚಿಕೊಳ್ಳುವ ಒಂದು ಸಂಸ್ಥಾನ, ಹೀಗೆ ಸ್ವಾತಂತ್ರ್ಯದ ಗಂಟಲು ಹಿಸುಕಿ ಹಿಮ್ಮೆಟ್ಟಿಸುತ್ತಿರುವದು ನಿಜವಾಗಿಯೂ ಚಿತ್ತವೇದಕ ವಿಚಾರ. ಆದರೆ ಈ ಅಮಾನುಷ ಅತ್ಯಾಚಾರಗಳು ಅವರ ಜನತೆಯಾದ ಹಿಂದುಗಳನ್ನು ಕ್ರಿಸ್ತಿಯನರಿಂದ ಉಳಿಸುವ ಹಿತದೃಷ್ಟಿಯಿಂದ ಮಾಡಲ್ಪಡುತ್ತಿರುವದೆಂದು ನಿರೂಪಿಸುವ ಪತ್ರವೊಂದು ನನ್ನೊಡನಿದೆ. ಆದರೆ ಇದು ಹಿಂದೂ, ಹಾಗೂ ಮುಸ್ಲಿಂ ಸಂಸ್ಥಾನಗಳ ವಿಚಾರ ಮಾತಾಡಿ ದಿನ ಕಳೆಯುವ ಕಾಲವಲ್ಲ. ಈಗ ಮುಂದಿರುವ ಸಮಸ್ಯೆಯಾವದೂ ಏನು? ಕಾಶ್ಮೀರ್ ಸಂಸ್ಥಾನದಲ್ಲಿ ಮುಖ್ಯರು ಮುಸ್ಲಿಮರೇ ಇದ್ದರೂ, ಅದನ್ನು ಹಿಂದೂ ರಾಜನು ಆಳುತ್ತಿರುವನೆಂದ ಮಾತ್ರಕ್ಕೆ ಅದನ್ನು ಹಿಂದೂ ಸಂಸ್ಥಾನವೆಂದು ಹೇಳಲಿಕ್ಕೆ ಬರುತ್ತದೆಯೇ? ಅಲ್ಲದೇ, ಹೈದರಾಬಾದಿನಲ್ಲಿ ಹಿಂದೂಗಳೇ ಬಹುಮತದಲ್ಲಿದ್ದು ಮುಸ್ಲಿಂ ರಾಜರು ಆಳುವರೆಂಬ ಮಾತ್ರಕ್ಕೆ ಅದು ಮುಸ್ಲಿಂ ಸಂಸ್ಥಾನವಾದೀತೇ? ಈ ವಿಚಾರದ ಮಾತುಗಳು ರಾಷ್ಟ್ರೀಯತಾ ಭಾವನೆಗೆ ಅಪಭಾಷಣಗಳೆಂದು ನಾನೆಣಿಸುತ್ತೇನೆ. ಭಾರತದಲ್ಲಿ ಕ್ರಿಶ್ಚಿಯನರು ಆಳುತ್ತಿರುವರೆಂದ ಮಾತ್ರಕ್ಕೆ ಅದು ಕ್ರಿಶ್ಚಿಯನರ ಸಂಸ್ಥಾನವೆಂದು ಹೇಳುವದಕ್ಕಾಗುತ್ತದೆಯೇ? ಭಾರತವು ಭಾರತೀಯರದ್ದಾದರೆ ಯಾರು ಆಳಬರೇನು? ಸಂಸ್ಥಾನಗಳು ಸಹ ಭಾರತದ್ದಾದರೆ ಅದನ್ನು ಯಾರು ಆಳಿದರೂ ಏನೂ ಆಗಲಿಕ್ಕಿಲ್ಲ. ಈಗಿನ ರಾಜರುಗಳೂ, ಕ್ರಮಾಗತವಾಗಿ ಆ ಸ್ಥಳಕ್ಕೆ ಬರುವವರೂ ರಾಜ್ಯಭಾರ ಮಾಡುವದು ಎಚ್ಚತ್ತ ಪ್ರಜೆಗಳ ಕೃಪೆಯಿಂದ. ಈ ಎಚ್ಚತ್ತ ಪ್ರಜೆಗಳ ಚಳವಳವು ತೀವ್ರವಾಗಿ ಮುಂದರಿಯುತ್ತಿದೆ. ಜನತೆಯ ಈ ಚಳವಳವನ್ನು ರಾಜರು ಹಾಗೂ ಅವರ ಅನುಯಾಯಿಗಳು ತತ್ಕಾಲ ತಮ್ಮ ಕ್ರೂರಾಚಾರದಿಂದ ತಡೆದು ನಿಲ್ಲಿಸಬಹುದು. ಆದರೆ ಆ ಸಮುದಾಯಿಕ ಶಕ್ತಿಯನ್ನು ಮುರಿದು ನಾಶಪಡಿಸಲು ಸರ್ವಥಾ ಸಾಧ್ಯವಾಗದು. ಈ ಚಳವಳದಲ್ಲಿ ಅಧಿಕಾರಿಗಳು ಜಯಶೀಲರಾಗುವದೆಂದರೆ ಇಡೀ ಭಾರತದ ಜನತೆಯ ಚೈತನ್ಯವನ್ನು ನಾಶಪಡಿಸಿದಂತೆಯೇ.

ಸ್ವರಾಜ್ಯವು ಬೇಗ ಕರಗತವಾಗಲಿಕ್ಕಿಲ್ಲವೆಂದು ಹೇಳುವ ಸಂಕುಚಿತ ದೃಷ್ಟಿಯವರು ಭಾರತದಲ್ಲಿ ಒಬ್ಬರಾದರೂ ಇದ್ದಾರೆಯೇ? ಅಂದ ಬಳಿಕ ಸ್ವತಂತ್ರ ಭಾರತವು, ಯಾವದೊಂದು ಸ್ಥಳದಲ್ಲಿ ದೊಡ್ಡದೇ ಇರಲಿ, ಅಥವ ಸಣ್ಣದಿರಲಿ, ಅಮಾನುಷ ಅತ್ಯಾಚಾರಗಳನ್ನು ಕ್ಷಣಮಾತ್ರ ಸಹಿಸುವದು ಸಾಧ್ಯವೇ? ಯಾವ ಸಂಸ್ಥಾನಗಳಲ್ಲಿ ಬೆಂಧಿನ ರಾಜರಂತಹ ಅರಸುಗಳು ಇರುವರೋ ಅಂಥಾ ಸಂಸ್ಥಾನಗಳಿಗೆ ಸ್ವತಂತ್ರ ಭಾರತದಲ್ಲಿ ನನ್ನ ಊಹೆಯ ಮಟ್ಟಿಗೆ ಮುಂದೆ ನಿಲ್ಲಲು ಅವಕಾಶವಿದೆ. ಇಂಗ್ಲಿಷರಿಗೆ ಸ್ವತಂತ್ರ ಭಾರತದಲ್ಲಿ ಭಾರತೀಯರೊಡನೆ ಸಹೋದ್ಯೋಗಿಗಳಂತೆ ಸ್ಥಳವಿದೆಯೋ ವಿನಹ ಅಧಿಕಾರಿಗಳಾಗಿ ಇಲ್ಲ. ಆದ್ದರಿಂದ ಸಂಸ್ಥಾನಾಧೀಶ್ವರರು ಸ್ವತಂತ್ರ ಭಾರತದಲ್ಲಿ ಬದುಕಿ ಬಾಳಬೇಕಾದರೆ ಕಾಲದ ವಾತಾವರಣವನ್ನನುಸರಿಸಿ ನಡೆಯುವದು ಹಿತವಿದೆ. ಕ್ರಿಶ್ಚಿಯನ್ ನಾಗರೀಕರಿಗೆ ಹೆದರಬೇಕಾದ್ದಿಲ್ಲವೆಂದು ಹಿಂದೂ ರಾಜರೂ, ದಿವಾನರೂ, ಹೇಳುವದು ಹೆಮ್ಮೆಯ ಮಾತಾಗಿರಲಿ, ಟ್ರಾವಂಕೂರಿನಲ್ಲಿ ಜವಾಬ್ದಾರಿ ಸರಕಾರ ಇತ್ತೆಂದು ಊಹಿಸಿ. ಆಗ ಕ್ರಿಶ್ಚಿಯನರಾಗಲೀ, ಹಿಂದೂಗಳಾಗಲೀ ಅಥವ ಮುಸ್ಲಿಮರಾಗಲೀ ಏನು ಮಾಡುತ್ತಿದ್ದರು? ಕೌನ್ಸಿಲು ಸದಸ್ಯರ್ಯಾರಾಗಿದ್ದರೂ ಅವರು ಓಟರುಗಳಿಗೆ ಜವಾಬ್ದಾರರಿರಬೇಕು, ಅಲ್ಲಿ ಹೆದರಿಕೆಗೆ ದಾರಿ ಇಲ್ಲ. ಯಾ ಪ್ರವೃತ್ತಿಯಲ್ಲಿ ಯಾವ ತೊಡಕೂ ಇಲ್ಲ. ಆದರೆ ಇಂದಿನ ಅನಾಚಾರಗಳಲ್ಲಿ ಹೆಂಬಾ ಹೆದರಿಕೆಯೂ, ಪ್ರವೃತ್ತಿ ಭ್ರಷ್ಟತೆಯೂ ಇದೆ.

ಹೈದರಾಬಾದು.

ಹೈದರಾಬಾದು ಸಂಸ್ಥಾನ ಕಾಂಗ್ರೆಸು ಅಶಾಂತಿಗೊಂಡಿದೆ. ಅದರು ನನ್ನ ಪ್ರೇರಣೆಯಂತೆ ಕಾರ್ಯಕ್ರಮ ನಡೆಸುತ್ತಿದ್ದದರಿಂದ ಕೆಲವರು ನನ್ನಲ್ಲಿಗೆ ಬಂದು ಈ ರೀತಿ ಹೇಳಿದರು. 'ಕಾಯಿದೆ ಭಂಗ ಚಳವಳವನ್ನು ನಿಮ್ಮ ಹಾಗೂ ಇತರ ಮುಖಂಡರ ಅಪ್ಪಣೆಯಂತೆ ತತ್ಕಾಲ ನಿಲ್ಲಿಸಿರುವೆವು. ನಾವು ಚಳವಳವನ್ನು ನಿಲ್ಲಿಸಿದರೆ ರಾಜಕೀಯ ಕೈದಿಗಳನ್ನು ಬಿಡಬಹುದೆಂದೂ, ಸಂಸ್ಥಾನ ಕಾಂಗ್ರೆಸು ನ್ಯಾಯಸಮ್ಮತ ಸಂಸ್ಥೆಯೆಂದು ಅಂಗೀಕರಿಸಲ್ಪಡುವದೆಂದೂ ನೀವು ಊಹಿಸಿದ್ದಿರಿ. ಆದರೆ ಇವೆರಡರಲ್ಲಿ ಯಾವುದೂ ನಡೆಯಲಿಲ್ಲ. ನಮ್ಮ ಸಹೋದ್ಯೋಗಿಗಳು ಜೈಲಿನಲ್ಲಿ ಯಾತನೆಯನ್ನನುಭವಿಸುತ್ತಿರುವಾಗ ನಾವು ಹೊರಗೆ ಎಷ್ಟು ದಿನ ಹೀಗೆ ಸುಮ್ಮನಿರುವದಕ್ಕಾಗುತ್ತದೆ?'

ಅವರಿಗೆ ನಾನು ಕೊಟ್ಟ ಉತ್ತರವಾದರೂ ಇಷ್ಟೆ. 'ನಿಮ್ಮೊಡನೆ ನಾನೂ ಸಹ ವ್ಯಸನಪಡುತ್ತೇನೆ. ಆದರೆ ಸತ್ಯಾಗ್ರಹವೆಂಬುದು ಚಿಕ್ಕ ಕಾರ್ಯವೇನೂ ಅಲ್ಲ. ಅದು ಜೀವನ ಮಾರ್ಗ. ಅದಕ್ಕೆ ಶಿಸ್ತು, ಶಾಂತಿ, ಹಾಗೂ ಆತ್ಮಸಮರ್ಪಣೆಯು ಬೇಕು. ಸತ್ಯಾಗ್ರಹದ ಒಂದು ಅಂಕವಾದ ಕಾಯಿದೆ ಭಂಗ ಚಳವಳವನ್ನು ಸಂದರ್ಭ ಒದಗಿದಂತೆ ನಮ್ಮ ಸ್ನೇಹಿತರು ಜೈಲಿನಲ್ಲಿ ನರಳುತ್ತಿದರೂ ನಿಲ್ಲಿಸಬೇಕಾಗುತ್ತದೆ. ಅವರೂ ಸಹ ಸಂತೋಷದಿಂದ ಹೊರಗಿನವರೊಡನೆ ಕ್ರೋಧವನ್ನು ತಾಳದೆ ವರ್ತಿಸುವದು ಅವರ ಕರ್ತವ್ಯ. ಸೆರೆಮನೆಯೊಳಗಿರುವ ಸತ್ಯಾಗ್ರಹಿಗಿಂತ ಹೊರಗಿರುವ ಸತ್ಯಾಗ್ರಹಿಯೇ ಕಷ್ಟಗಳನ್ನು ಪಡೆಯಬೇಕೆಂಬುವುದು ಜ್ಞಾಪಕವಿರಲಿ. ಸೆರೆಮನೆಯೊಳಗಿರುವವರು ಅವರ ಪಾಲಿನ ಕರ್ತವ್ಯ ಮಾಡಿ ಸೆರೆಮನೆಯಲ್ಲಿ ಯೋಚನಾ ತರಂಗಗಳಿಂದ ವಿಸರ್ಜಿತರಾಗಿರುವರು. ಅವರು ಜೈಲಿನ ಕ್ರೂರ ಕಟ್ಟಳೆಗಳನ್ನು ಸಂತೋಷದಿಂದ ಅನುಭವಿಸಲು ತಯಾರಾಗುವರು. ಆದರೆ ಹೊರಗಿರುವ ಸತ್ಯಾಗ್ರಹಿಯು ಚಳವಳವನ್ನು ಸುಸೂತ್ರವಾಗಿ ನಡೆಸುವ, ದಿನದಿನದ ಕಾರ್ಯಕ್ರಮಗಳ ವಿಚಾರ ಯೋಚಿಸುವ ಅನಿರೀಕ್ಷಿತ ಬರಬಹುದಾದ ತೊಂದರೆಗಳನ್ನು ನೀಗುವ ಯೋಜನೆ ಮಾಡಬೇಕಿದೆ.

ನಿಮ್ಮ ಸಂಸ್ಥಾನದ ಎರಡು ಸಂಸ್ಥೆಗಳು ಒಂದೇ ಧ್ಯೇಯದಿಂದ ಕಾಯಿದೆ ಭಂಗ ಚಳವಳ ಹೂಡದ ಕಾರಣ ನಾನು ನಿಮ್ಮೊಳಗೆ ಐಕ್ಯತೆ ಬರುವ ವರೆಗೆ ಚಳವಳವನ್ನು ನಿಲ್ಲಿಸಬೇಕೆಂದು ಅಭಿಪ್ರಾಯಪಟ್ಟೆನು. ಆರ್ಯ ಸಮಾಜದವರು ತಮ್ಮ ಮತದ ಹೆಚ್ಚಳಕ್ಕಾಗಿ ಚಳವಳ ನಡೆಸುತ್ತಿರುವರು. ಹಿಂದೂ ಮಹಾ ಸಭೆಯು ಅವರಿಗೆ ಸಹಾಯ ನೀಡುತ್ತಿದೆ. ಆದ್ದರಿಂದ ಚಳವಳವು ಕೋಮುವಾರು ಜಗಳವಾಗಿ ಪರಿಣಮಿಸಬಹುದಾಗಿದೆ. ನೀವು ಈಗ ಕಾಯಿದೆ ಭಂಗ ಚಳವಳ ಪ್ರಾರಂಭಿಸಿದರೆ ನಿಮ್ಮ ರಾಷ್ಟ್ರೀಯತಾ ಭಾವನೆಯನ್ನಿಟ್ಟುಕೊಳ್ಳಲು ದುಃಸಾಧ್ಯವಾಗುವುದು. ನಿಮ್ಮ ಧ್ಯೇಯವನ್ನು ಸಾಧಿಸಲಾರದೆ ನಿಮ್ಮ ನಿಮ್ಮೊಳಗೇ ಒಡಕು ಬರುವ ಪ್ರಸಂಗವಾಗದು. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಜಾಗರೂಕತೆಯಿಂದ ವರ್ತಿಸುವದು ಹಿತವಿದೆ. ನನ್ನ ಈ ಮಾತುಗಳಿಂದ ನೀವು ತೃಪ್ತರಾದ್ದ ಪಕ್ಷ ಆ ರೀತಿ ವರ್ತಿಸಿರಿ. ಆದರೆ ನಾನು ನಿಮಗೆ ಮೇಲೆ ಹೇಳಿದಂಥಾ ರಚನಾ ಕಾರ್ಯಕ್ರಮಗಳಿಗೆ ಎಲ್ಲರೂ ಒಪ್ಪಿ ಮುಂದರಿಯಬೇಕೆಂಬುದನ್ನು ಮರೆಯದಿರಿ. ಅದು ನಿಮಗೆ ಸಮಂಜಸವಾಗಿ ಕಾಣದಿದ್ದರೆ ಅದನ್ನು ತಿರಸ್ಕರಿಸಿ.

---

(೪) ಕೆದಕಲ್—ಹೊರೂರು—ಉರುಳಿ ಅಂಬಲ ರಸ್ತೆಯ ರಿಪೇರಿ ಬಗ್ಗೆ ರೂ. 150 ಕೊಡಬೇಕೆಂಬ ಠರಾವನ್ನು ಓದಿ ಮುಂದರಿಸಿಡಲಾಯಿತು.

(5) ಬೋಯಿಕೇರಿ ದೊಡ್ಡ ಹಟ್ಟಿ ರಸ್ತೆಯನ್ನು ರಿಪೇರಿ ಮಾಡಬೇಕೆಂಬದನ್ನು ಓದಿ ಮುಂದರಿಸಿಡಲಾಯಿತು.

(6) ಸುಂಟಿಕೊಪ್ಪ ಮಾರ್ಕೆಟ್ ರಸ್ತೆಯ ಬದಿಯಲ್ಲಿ ಒಂದು ಹೊಸ ಕಟ್ಟಡ ಕಟ್ಟಬೇಕೆಂಬ ಠರಾವನ್ನು ಓದಿ ಮುಂದರಿಸಿಡಲಾಯಿತು.

ಶ್ರೀ. ಎಚ್. ಎಸ್. ರಾಮಶೆಟ್ಟಿಯವರ ಸೂಚನೆಗಳು.

37. (1) ಕೆರೂರು ಖಾಸಗಿ ಶಾಲೆಗೆ ರೂ. 10 ಗ್ರಾಂಟು ಕೊಡಬೇಕೆಂಬ ಠರಾವನ್ನು ಓದಿ ಮುಂದರಿಸಿಡಲಾಯಿತು.

(2) ಫ್ರೇಜರ್‌ಪೇಟೆ ಹೋಬಳಿಯ ಫಲ್ಲಾಡಿನ 2 ಮೈಲು ರಸ್ತೆಯ ದುರಸ್ತಿಯ ಬಗ್ಗೆ ವಾರ್ಷಿಕ ರೂ. 30 ಗ್ರಾಂಟು ಕೊಡಬೇಕೆಂಬ ಸೂಚನೆಯನ್ನು ಓದಿ, ರಸ್ತೆಯನ್ನು ಬೋರ್ಡಿನವಶಕ್ಕೆ ತೆಗೆದುಕೊಳ್ಳಲು ತೀರ್ಮಾನವಾಯಿತು.

38. ತಿಂಗಳಿಗೆ ರೂ. 20 ಹೆಚ್ಚಿಗೆ ಗ್ರಾಂಟು ಕೊಡಬೇಕೆಂಬ ಕಿರುಗೂರು ಪಂಚಾಯತರ ಅರ್ಜಿಯನ್ನು ಓದಿ ಮುಂದರಿಸಿಡಲಾಯಿತು.

39. ಪೊನ್ನಂಪೇಟೆ ರಸ್ತೆಯ 3/2ನೇ ಫರ್ಲಾಂಗಿನಿಂದ ಕೊಟ್ಟೂರು ಹೊಳೆಗೆ ಒಂದು ರಸ್ತೆ ಮಾಡಲಿಕ್ಕಾಗಿ ರೂ. 60 ಮಂಜೂರು ಮಾಡಬೇಕೆಂಬ ಅಸಿಸ್ಟೆಂಟ್ ಕಮಿಶನರ ಶಿಫಾರಸನ್ನು ಓದಿ ಮುಂದರಿಸಿಡಲಾಯಿತು.

40. ಅರಿಕಾಡು ಮತ್ತು ಕರಿಕೇರಿ ಶಾಲೆಗಳಿಗೆ ಮಾಸಿಕ ರೂ. 10ರಂತೆ ಗ್ರಾಂಟು ಕೊಡಬೇಕೆಂಬ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರವರ ಶಿಫಾರಸು ಪತ್ರವನ್ನು ಓದಲಾಯಿತು. ಅರಿಕಾಡು ಶಾಲೆಯ ವಿಚಾರ ಈ ಮೊದಲೇ ಬೇರೆ ಠರಾವಿನಲ್ಲಿ ಬಂದಿದೆ. ಕರಿಕೆ ಶಾಲೆಯನ್ನು ಬಿಡಲಾಗಿದೆ.

ಪಿ. ಐ. ಬೆಳ್ಯಪ್ಪ,
ಪ್ರೆಸಿಡೆಂಟ್, ಡಿ. ಬೋರ್ಡ್.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಕುಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೂದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-36 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ ... ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ 1... ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-50

೮೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.

ಮತ್ತು ಕಂಪೆನಿ,

(52-11) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ–ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ: ಮಾದಮ್ಮಯ್ಯನವರು.
ಶ್ರೀಮಂಗಲ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ ಕೆ ಮೊಗಪ್ಪನವರು.
ನಾಪೋಕ್ಲು—ಮ: ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈಯಾಲಸ್ಯ, ತಲೆನೋವು, ಬಾಯರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನುನೋವು, ಸೊಂಟ, ಮಂಡಿ, ಪಕ್ಕಗಳು- ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:-ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಸೀಸೆಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

31 ಸಿ. ಹೆಚ್. ರಾಮಣ್ಣ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಮಮ್ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್-ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ರೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1–9–1937ರಿಂದ ಬಡ್ಡಿ ದೊರೆಯುತ್ತೆ

ತಾ 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ ಇದರ ವಿಷಯ ಹೆಚ್ಚಿನ ವಿವರಗಳಿಗ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1–8–1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮೊಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್:–ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್. ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯವರು
ಸೆಕ್ರೆಟರಿ—ಮೆ ಎಸ್ ಎನ್ ರಾಮಶೆಟ್ಟಿಯವರು

ತಾ 1–1–1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ. 55	ರೂ. 35	ರೂ 22
6 ತಿಂಗಳಿಗೆ—	„ 100.	„ 35	„ 22	„ 13
3 ತಿಂಗಳಿಗೆ—	„ 60	„ 20	„ 13.	„ 8.
1 ತಿಂಗಳಿಗೆ—	„ 25	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಜ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

62–7

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೩—೩—೧೯೩೯.

ಸಂಪುಟ ೧೮] [ಸಂಚಿಕೆ ೩೯

THE CANARA BANKING CORPORATION, UDIPI, Ltd.

WILL NOW RECEIVE

SEASON DEPOSITS

AT ALL BRANCHES

AT

3½ % per annum

Repayable after 6 months.

For Particulars Call at or Apply to any of its Branches.

52-12

ಚ್ಯವನಪ್ರಾಶ

ಚ್ಯವನ ಪ್ರಾಶವೆಂಬುದು ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ
ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ; ದೇಹಪೋಷಕ ಸಾರವನ್ನು ವರ್ಧಿಸುತ್ತದೆ. ಕ್ಷಯ, ಕೆಮ್ಮು, ಶೀತ ಬಾಧೆ, ಉಬ್ಬಸ, ಖಾಸ ಶ್ವಾಸ, ಹೃದ್ರೋಗ ಇವುಗಳ ಮೇಲೆ ವಿಶ್ವಾಸವಸ್ತು.
ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅದುಚೆ, ಅಗ್ನಿಮಾಂದ್ಯಮುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಣಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಪುಟ್ಟಯ್ಯ, ಗೋಣಿಕೊಪ್ಪಲು.
[28]

ಡಾ. ಕೆ. ಕೆ. ನಂಬಿಯಾರ್,
ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ದುರಸ್ತಿಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕನೈಟ್, ಎಂದೂ ತುಂಡಾಗದ ಡೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

15

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-39 The Agricultural & Industrial Bank Ltd

ಝಂಡೂರವರ

ದ್ರಾಕ್ಷಾಸವ ಮತ್ತು ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

"ZANDU"
ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-23) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೧೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಜಪ್ತಿ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ಸ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಆಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-23

ವಿ ವಿ ಧ ವಿ ಚಾ ರ.

ಜೇನು ಹಕ್ಕಿ.

ನಮ್ಮಲ್ಲಿನ ಮಂದಿಗೆ ಇರುವ ನಿಸ್ವಾರ್ಥತೆ ಅಬಿಸೀನಿಯದ ಒಂದು ಹಕ್ಕಿಗೆ ಇದೆ. ಇದು ಜೇನು ಕುಡಿದೇ ಇರುವ ರೂಢಿ. ಜೇನು ಗೂಡುಗಳನ್ನು ಕಂಡೊಡನೆಯೇ ಇದು ಹಳ್ಳಿಯ ಜನರನ್ನು ಕರೆದು ಅವರನ್ನು ಗೂಡಿನ ಬಳಿ ಒಯ್ದು ತರುವದು. ಒಡನೆಯೇ ಅಬಿಸೀನಿಯನರು ಗೂಡಿನಿಂದ ಜೇನನ್ನು ತೆಗೆದುಬಿಡುವರು ಹಕ್ಕಿ ನಮ್ಮ ಸಾಹುಕಾರರಂತೆ ಕಮೀಶನು ಹಾಗೂ ಅದರ ಎರಡು ಪಾಲನ್ನು ಬೇರೆ ಲಾಭಗಳನ್ನು ಅಪೇಕ್ಷಿಸದೆ ಹಳ್ಳಿಗರಿಂದ ಜೇನಿನ ಮೂಲಕ ಬರುವ ಕಮೀಶನಿನಲ್ಲಿ ಮಾತ್ರ ತೃಪ್ತಿಗೊಂಡು ತೆರಳುವದು.

—೦೦—

ಮಗನ ಬದಲು ತಂದೆ ಪರೀಕ್ಷೆಗೆ ಕುಳಿತ.

ಒಂದು ಪರೀಕ್ಷೆಯಲ್ಲಿ ಮಗನ ಬದಲು ತಂದೆಯು ಕುಳಿತದ್ದು ಪತ್ತೆಯಾಗಿದೆಯೆಂದು ಘೋರಪುರದಿಂದ ವರ್ತಮಾನ ಬಂದಿದೆ. ಸ್ಥಳೀಯ ವಿದ್ಯಾರ್ಥಿಯೊಬ್ಬನು 'ಕಾವ್ಯ' ಪರೀಕ್ಷೆಗೆ ಚಿತ್ತಗಾಂಗ್ ಕೇಂದ್ರದಿಂದ ಕುಳಿತಿದ್ದ. ಪರೀಕ್ಷೆಯ ದಿವಸ ಅವನ ತಂದೆಯು ಮಗನ ಬದಲು ಪರೀಕ್ಷಾ ಪತ್ರಕ್ಕೆ ಉತ್ತರ ಬರೆಯಲು ಆರಂಭಿಸಿದ. ಆದರೆ ಇಬ್ಬರು ವಿದ್ಯಾರ್ಥಿಗಳು ಇದನ್ನು ಕಂಡು ಹಿಡಿದು ಅಧಿಕಾರಿಗಳ ಗಮನಕ್ಕೆ ತಂದರು. ತಂದೆಯು ಪರೀಕ್ಷಾ ಗೃಹದಿಂದಲೇ ಮೋರೆ ಒಣಗಿಸಿಕೊಂಡು ಹೋಗಬೇಕಾಯಿತು.

—೦೦—

ನಿಮ್ಮ ಭಾರ.

ಬೇಸಿಗೆಯಲ್ಲಿ ಚಳಿಗಾಲಕ್ಕಿಂತ ಮನುಷ್ಯನ ಭಾರ ಹೆಚ್ಚೆಂದು ಒಬ್ಬ ವಿಜ್ಞಾನಿಯ ಮತ. 150 ರಾತಲು ಭಾರದ ಮನುಷ್ಯನನ್ನು ಬೇಸಿಗೆ ಕಾಲದಲ್ಲಿ ತೂಕ ಮಾಡಿದರೆ ಆತ ಚಳಿಗಾಲದಲ್ಲಿ ಒಂದು ಔನ್ಸಾದರೂ ಹೆಚ್ಚು ಭಾರವಿರಬಹುದಂತೆ. ಇದಕ್ಕೆ ಕಾರಣ ಮನುಷ್ಯನಲ್ಲ. ಬದಲು ಸುತ್ತಲು ಹಬ್ಬಿರುವ ಗಾಳಿ. ಚಳಿಗಾಲದಲ್ಲಿ ಗಾಳಿಯು ದಪ್ಪವಾಗಿದ್ದು ಭಾರವಾಗಿರುತ್ತದೆ. ಅದೇ ಬೇಸಿಗೆಯಲ್ಲಿ ಬಿಸಿಯಾಗಿರುವುದರಿಂದ ತೆಳ್ಳಗಾಗಿ ಭಾರ ಕಡಿಮೆ ಇರುತ್ತದೆ. ಮನುಷ್ಯನನ್ನು ತೂಕ ಮಾಡುತ್ತಿದ್ದಾಗ ದಪ್ಪ ಗಾಳಿಯಾದರೆ ಅದು ಅವನ್ನು ಕೊಂಚ ಆದರಿಸುವುದಂತೆ. ತೆಳುವಾಗಿದ್ದರೆ ಆದರಿಸಲಾಗದೆ ಬಿಡುವುದರಿಂದ ಭಾರ ಹೆಚ್ಚಾಗುವುದಂತೆ. ಹೇಗಿದೆ ಸ್ವಾರಸ್ಯ?

—೦೦—

ಔಷಧದ ನೊಟ್ಟು.

ಅನೇಕರಿಗೆ ಔಷಧ ತೆಗೆದುಕೊಳ್ಳುವುದೆಂದರೆ ಬಲು ಪೇಚಾಟ. ಅದೇ ರೀತಿ ಮಕ್ಕಳಿಗೂ ಕೂಡ ಔಷಧ ಕುಡಿವ ಇಚ್ಛೆ ಸೊನ್ನೆ. ಇದರಿಂದ ಡಾಕ್ಟರರೊಬ್ಬರು ಹೊಸ ಉಪಾಯ ಮಾಡಿದ್ದಾರೆ. ನಿಮಗೂ ಹಾಗೂ ನಿಮ್ಮ ದೇಹಕ್ಕೆ ಅಗತ್ಯವಿರುವ ಔಷಧವನ್ನು ತಿಂಡಿಯಲ್ಲಿ ಬೆರೆಸಿ ನಮ್ಮ ಮನೆಯ ಹೇಟೆಗಳಿಗೆ ಸದಾ ಕೊಟ್ಟರೆ ಸರಿ. ಅವರ ನೊಟ್ಟಿಯಲ್ಲಿ ಔಷಧಿ ಶಕ್ತಿ ಬಂದು ಅದನ್ನು ನೀವು ತಿನ್ನಲು ನಿಮ್ಮ ರೋಗ ವಾಸಿಯಾಗುವುದು. ಕಬ್ಬಿಣದ ಸತ್ವ, ಮೀನಿನ ಎಣ್ಣೆ, ಅಂಟಿಮನೀಮಿಯಾ ಔಷಧಿಗಳನ್ನು ಈ ರೀತಿಯಿಂದ ಉಪಯೋಗಿಸಿಕೊಳ್ಳಬಹುದಂತೆ. ಔಷಧಕ್ಕಿಂತ ನೊಟ್ಟೆ ಹಿತವಸ್ತು! ಮುಂದೆ ಇದು ಕಾಯಿಪಲ್ಯಗಳ ಜಾತಿಗೆ ಸೇರಿದ್ದೆಂದು ತಿಳಿದುಬರಬಹುದು!

—೦೦—

ಸೌಂದರ್ಯ!

1938-ಈ ಒಂದು ವರ್ಷದಲ್ಲಿ ಅಮೇರಿಕೆಯ ಸ್ತ್ರೀಯರು ಸೌಂದರ್ಯಕ್ಕಾಗಿ ವ್ಯಯಿಸಿದ ಹಣ 35 ಮಿಲಿಯ ಪವನುಗಳು. ಸೌಂದರ್ಯದ ವಸ್ತುಗಳು, ಅಮೇರಿಕ ದೇಶದ 6ನೇ ಕೈಗಾರಿಕೆಯಾಗಿದೆ. ಸೌಂದರ್ಯ ಸಾಧನಗಳನ್ನು ಉಪಯೋಗಿಸಿ, ಸ್ತ್ರೀಯರು ಹೋಗಿ ಕುಳಿತೊಡನೆ ಅವರ ಮುಖ, ಮೂಗು, ಕಿವಿ, ಕಣ್ಣು ತುಟಿಗಳನ್ನು ತಿದ್ದಿ ಸರಿಮಾಡಿ ಸೌಂದರ್ಯವನ್ನು ಒದಗಿಸುವದಕ್ಕಾಗಿ ಇಲ್ಲಿ 70 ಸಾವಿರ ಅಂಗಡಿಗಳಿವೆ. ಇದರಲ್ಲೆಲ್ಲಾ ಕೆಲಸ ಮಾಡುವ ಸ್ತ್ರೀ ಪುರುಷ ಕೇಶಗಾರರ ವಾರ್ಷಿಕ ವೇತನವೇ ಸುಮಾರು 13 ಮಿಲಿಯ ಪವನುಗಳಾಗುತ್ತವೆ. ಈ ಅಂಗಡಿಗಳಿಗೆ 16ರಿಂದ 60 ವರ್ಷ ಒಳಗಣ ಸುಮಾರು 39 ಮಿಲಿಯ ಸ್ತ್ರೀಯರು ಸೌಂದರ್ಯ ಹೆಚ್ಚಿಸಿಕೊಳ್ಳಲು ಬರುವ ಗಿರಾಕಿಗಳು!

—೦೦—

ವರ್ಣದ್ವೇಷ.

ಲೋರ್ಡ್ ಹೆನ್ರಿ ಫಿಜ್‌ರಾಲ್ಡರ ಪುತ್ರನಾದ ಕೆಪ್ಟನ್ ಡರ್‌ಮೋಟ್ ಫಿಜ್‌ರಾಲ್ಡರು ಕರಿಜನರ ಉದ್ಧಾರದಲ್ಲೇ ತಲ್ಲೀನರಾಗಿ ಕೆನಿಯಾದಲ್ಲಿ ವಾಸಿಸುತ್ತಿದ್ದರು. ಇವರು ತಮ್ಮ ಧವಳ ಬಂಧುಗಳ ಸಂಪರ್ಕವನ್ನೇ ತ್ಯಜಿಸಿ ಕರಿಬಂಧುಗಳೆಡೆಯಲ್ಲೇ ವಾಸಿಸಿದ್ದರು. ಇವರು ಆಫ್ರಿಕದವರೊಡನೆಯೂ ಹಿಂದೀಯರೊಡನೆಯೂ ಸ್ನೇಹ ಸಂಬಂಧಗಳನ್ನು ಬಳೆಸಿಕೊಂಡಿದ್ದರು. ಆಗಾಗ್ಗೆ ಕರಿಯರ ಉತ್ಕರ್ಷಕ್ಕಾಗಿ ಹಲಕೆಲವು ಲೇಖನಗಳನ್ನು ಬರೆದು ಪ್ರಮುಖ ಪತ್ರಿಕೆಗಳ ಮೂಲಕ ಅವರ ಹಿತಸಾಧನೆ ಮಾಡುತ್ತಿದ್ದರು. ಈ ವರ್ಷ ದುರ್ದೈವವಶಾತ್ ಇವರು ಪರಂಧಾಮವನ್ನೈದಿದರು. ಕರಿ ಬಂಧುಗಳ ಏಳಿಗೆಯನ್ನು ನೋಡಲು ಸಹಿಸಲಾರದೆ ಇವರ ಬಿಳಿ ಬಂಧುಗಳು ಇವರ ಅಂತಿಮ ಕ್ರಿಯೆಗಳಲ್ಲೂ ಭಾಗವಹಿಸಲಿಲ್ಲ. ವರ್ಣದ್ವೇಷವು ಇಷ್ಟು ಪ್ರಬಲ ಬಲವುಳ್ಳದಲ್ಲವೇ?

—೦೦—

ಭಾರತ ಮಹಿಳೆಯರ ಉಡುಪು.

ಜಗತ್ತಿಗೇ ಆದರ್ಶವಾದದು.

"ಭಾರತೀಯರ ಉಡುಪು ಸಹಜವಾದ ಸ್ತ್ರೀತ್ವವನ್ನು ಸೂಚಿಸುವದಾಗಿದೆ. ಅಚ್ಚುಮೆಚ್ಚಾದ, ಆಚಾರ, ವ್ಯವಹಾರ ಮತ್ತು ನಡೆನುಡಿಗಳನ್ನು ಅರ್ಥಗರ್ಭಿತವಾಗಿ ಸೂಚಿಸುವಂಥಾದ್ದು. ಅಂಥಾದ್ದು ಇದು ವರೆಗೂ ಭಾರತದಲ್ಲಿ ವಿನಹ ಮತ್ತೆಲ್ಲಿಯೂ ಕಂಡು ಹಿಡಿಯಲ್ಪಟ್ಟಿಲ್ಲ. ಮಹಿಳೆಯರನ್ನು ಅವರ ಉಡುಪಿನ ಧಾರಣೆಗಳಿಂದ ಗಂಡು ಬೀದಿಯರೋ ಎಂಬಂತೆ ಶಂಕೆ ಉಂಟುಮಾಡುವ ಒಂದು ವಿಧದಲ್ಲಿ ಸಾಂಕ್ರಾಮಿಕ ರೋಗದಂತಿರುವ ಪಾಶ್ಚಿಮಾತ್ಯ ಪದ್ಧತಿಯು ಸಮಗ್ರ ಭಾರತಕ್ಕೆ ಕಾಲಿಡದಿದ್ದರೆ ಸರಿ. ಭಾರತ ಮಹಿಳೆಯರು ತಮ್ಮ ಸಹಜವಾದ ಸರಳವಾದ ಉಡುಪುಗಳನ್ನು ಧರಿಸದೆ ಇದ್ದರೆ ಇಡೀ ಜಗತ್ತಿಗೆ ಅದರಿಂದ ದೊಡ್ಡ ನಷ್ಟ ಉಂಟಾಗುವುದರಲ್ಲಿ ಸಂದೇಹವಿಲ್ಲ. ಜಗತ್ತಿನಲ್ಲಿ ಸ್ತ್ರೀಯರು ಯಾವ ರೀತಿ ಉಡುಪು ಧರಿಸಬಲ್ಲರು ಮತ್ತು ಧರಿಸಬೇಕು ಎಂಬುದನ್ನು ಅರಿತಿರುವ ನಾಗರಿಕರ ರಾಷ್ಟ್ರವೆಂದರೆ ಭಾರತವಲ್ಲದೆ ಮತ್ತೆ ಬೇರೆ ಇಲ್ಲ. ಅಲ್ಲಿಯ ಉಡುಪಿನಲ್ಲಿ ಮತ್ತೆಲ್ಲಿಯೂ ಕಾಣದ ಒಂದು ವಿಧವಾದ ಜೀವಕಳೆಯು ಎದ್ದು ಕಾಣುತ್ತದೆ.' ಹೀಗೆಂಬುದಾಗಿ ಶ್ರೀ. ಸಿ. ಜಿ. ಜಂಗ್‌ರವರು 'ವಿಶ್ವ' ಎಂಬ ಪತ್ರಿಕೆಯಲ್ಲಿ ಬರೆದಿರುವರು.

—೦೦—

ಅಕ್ಷರಗಳ ಗಡ್ಡದ!

ಅಮೇರಿಕದಲ್ಲಿ ಓರ್ವನಿರುವನು. ಈತನು ತನ್ನ ಗಡ್ಡವನ್ನು ಅಕ್ಷರಗಳಂತೆ ಬಿಟ್ಟು ಮಿಕ್ಕವನ್ನು ಬೋಳಿಸಿರುತ್ತಾನೆ. ಒಂದು ದಿನ 'ಸೆಂಟಿನಿಲಾ' ಸಮಾರಂಭ. ಅದಕ್ಕಾಗಿ ಕ್ಯಾಲಿಫೋರ್ನಿಯಾದ ಇಂಗಲ್‌ವುಡ್ಡಿನ ಜಾನ್ಸೈಲರ್ ಎಂಬ ಒಬ್ಬ ಕಮ್ಮಾರನು 'Centinela Day' ಎಂಬದಾಗಿ ಅಕ್ಷರಗಳು ಕಾಣುವಂತೆ ಗಡ್ಡದಲ್ಲಿನ ಕೂದಲನ್ನು ಬಿಟ್ಟು ಬಾಕಿಯನ್ನು ಬೋಳಿಸಿದ್ದನಂತೆ. ಈತನ ಸತಿಯೇ ಹಾಗೆ ಮಾಡಿದವಳು. ಇದಕ್ಕೆ 8 ಗಂಟೆಗಳ ಕಾಲ ಬೇಕಾಯಿತಂತೆ.

—೦೦—

ಉಪಾಧ್ಯಾಯರೂ ಮದ್ಯಪಾನವನ್ನು ಬಿಟ್ಟುಬಿಡಬೇಕು.

ಹೀಗೆಂದು ಸೂರತ್ ಜಿಲ್ಲೆಯ ಶಾಲಾ ಸಮಿತಿಯವರು ಒಂದು ಠರಾವನ್ನು ಮಂಜೂರು ಮಾಡಿರುವರು. ಈ ಸಂಸ್ಥೆಯು ತನ್ನ ಅಧೀನದಲ್ಲಿರುವ ಎಲ್ಲ ಉಪಾಧ್ಯಾಯರೂ ಮದ್ಯಪಾನವನ್ನು ಬಿಟ್ಟುಬಿಡಬೇಕೆಂದು ಎಚ್ಚರಿಸಿರುವರು.

ಈ ಸಂಸ್ಥೆಯ ಕೈಕೆಳಗಿರುವ ಹಲವು ಉಪಾಧ್ಯಾಯರು ಮದ್ಯಪಾನಕ್ಕೆ ಬಲಿಬಿದ್ದಿರುವರಂತೆ. ಮದ್ಯಪಾಯಿಗಳಾದ ಉಪಾಧ್ಯಾಯರಿಗೆ ಭಾವೀ ಜನಾಂಗದ ಶಿಕ್ಷಣ ಕಾರ್ಯಭಾರವನ್ನು ವಹಿಸಿಕೊಡುವದು ಅಪಾಯಕರವೆಂದು ಸಂಸ್ಥೆಯ ಭಾವನೆ.

ಸರಿ, ಮದ್ಯಪಾನದಂಥ ಒಂದೆಡೆ ಕಡಿಮೆ ತಲಬಿನ ಉಪಾಧ್ಯಾಯನ ಮನೆವಾರ್ತೆಯ ಸುಖಕ್ಕೆ ಬಹಳ ತೊಂದರೆ, ಇನ್ನೊಂದೆಡೆಯಿಂದ ಅವನ ಆರೋಗ್ಯವೇ ಕೆಟ್ಟು ಕರ್ತವ್ಯದಲ್ಲಿ ಅಡ್ಡೆ ಮುಂತಾದ ವಿಘ್ನ ವಿದ್ರೋಹಗಳು ತಲೆದೋರಲು ಕಾರಣವಿದೆ.

—೦೦—

—೦೦—

ಕಳ್ಳಾಟಿಕೆಯಲ್ಲಿ, ಚಾರಿತ್ರಿಕ ಸೇಡಿಗಾಗಿ.

ಲೂಧಿಯಾನ ಜಿಲ್ಲೆಯ ಕೊಟ್ಲೆಕಲನ್ ಎಂಬಲ್ಲಿ ನಡೆದ ಒಂದು ವಿಚಿತ್ರ ಢಕಾಯಿತಿಯ ಕಥೆಯಿದು.

ಒಂದು ದಿನ ಸೂರ್ಯಾಸ್ತವಾದೊಡನೆಯೇ ಶಸ್ತ್ರಧಾರಿಗಳಾದ ಆರು ಮಂದಿ ಢಕಾಯಿತರು ರಾಮಲಾಲ್ ಎಂಬ ಒಬ್ಬ ಧನಿಕ ಬ್ರಾಹ್ಮಣನ ಮನೆಗೆ ಮುತ್ತಿಗೆ ಹಾಕಿದರು. ಒಬ್ಬ ಢಕಾಯಿತನು ಮುಖ್ಯ ದ್ವಾರದಲ್ಲಿ ನಿಂತನು. ಮತ್ತೊಬ್ಬನು ಮನೆಯ ಮಾಡಿಗೇರಿ ಒಂದು ಗುಂಡನ್ನು ಹಾರಿಸಿದನು. ಗುಂಡಿನ ಶಬ್ದವನ್ನು ಕೇಳಿದೊಡನೆಯೇ ನೆರೆ ಹೊರೆಯವರೆಲ್ಲರೂ ಅಲ್ಲಿಗೆ ಬಂದರು. ಆಗ ಮಾಡಿನ ಮೇಲೆ ನಿಂತ ಢಕಾಯಿತನು 'ಗೆಳೆಯರೇ, ನಾವು ಕಳ್ಳಾಟಿಕೆಗಾಗಿ ಇಲ್ಲಿ ಬಂದಿಲ್ಲ. ಈ ಬ್ರಾಹ್ಮಣನು ನಮ್ಮ ಸಿಕ್ ಗುರು ಗೋವಿಂದರ ನಾಲ್ವರೂ ಮಕ್ಕಳನ್ನು ವಧಿಸಿದ ಗಂಗುವಿನ ವಂಶಸ್ಥನು. ಆದುದರಿಂದ ನಾವು ಆ ಸೇಡನ್ನು ತೀರಿಸಲು ಈಗ ಈತನನ್ನು ಸುಲಿಗೆ ಮಾಡಲು ಬಂದಿರುವೆವು' ಎಂದು ಭಾಷಣ ಮಾಡುತ್ತಾ ಪಂಜಾಬಿ ಜನಪದವೊಂದನ್ನು ರಾಗದಿಂದ ಹಾಡಲಾರಂಭಿಸಿದನು. ತನ್ಮಧ್ಯೆ ಉಳಿದ ನಾಲ್ಕು ಮಂದಿ ಢಕಾಯಿತರು ಆ ಬ್ರಾಹ್ಮಣನ ಇದ್ದುಬದ್ದುಗಳನ್ನೆಲ್ಲಾ ಗಂಟು ಮೂಟೆ ಕಟ್ಟಿಕೊಂಡು ನಡೆದೇ ಬಿಟ್ಟರು. ಈಗ ಪೋಲೀಸರ ತನಿಖೆ ನಡೆಯುತ್ತಾ ಇದೆ. ಕಳ್ಳಾಟಿಕೆಗೆ ಚಾರಿತ್ರಿಕ ಬಲವನ್ನು ಸಂಯೋಗಿಸಬಹುದಲ್ಲವೇ?

—೦೦—

ತಮ್ಮ ರಾಶಿಯನ್ನು ತಿಳಿಯುವ ಬಗೆ.

ಜೋತಿಷ್ಯ-ಜಂಗಮ ಸೋಮಯ್ಯ.

"ಕೊಡಗು" ಪತ್ರಿಕೆಯ ಚಂದಾದಾರಲ್ಲನೇಕರು ತಮ್ಮ ರಾಶಿ ತಮಗೇ ಗೊತ್ತಿರುವುದಿಲ್ಲವೆಂದೂ, ಅದನ್ನು ತಿಳಿಸಬೇಕೆಂದೂ ನನಗೆ ಹೇಳಿದ್ದರಿಂದ ಸಾಂಗವಾಗಿ ತಿಳಿದುಕೊಳ್ಳುವಂತೆ ಇವರಡಿ ವಿವರವಾಗಿ ಬರೆದಿರುತ್ತೆ.

ಪ್ರತಿಯೊಂದು ನಕ್ಷತ್ರಕ್ಕೆ 4 ಪಾದಗಳು. 27 ನಕ್ಷತ್ರಕ್ಕೆ 108 ಪಾದಗಳು. ಪ್ರತಿಯೊಂದು ನಕ್ಷತ್ರದ ನಾಮ ಅಕ್ಷರಗಳು ಮತ್ತು ರಾಶಿಗಳು. ಇದರಿಂದ ಇಂಥವರಿಗೆ ಇಂಥಾ ನಕ್ಷತ್ರ, ಇಷ್ಟನೇ ಪಾದ, ಇಷ್ಟನೇ ರಾಶಿಯೆಂದು ತಿಳಿದುಕೊಳ್ಳಬಹುದು.

ನಕ್ಷತ್ರ.	1ನೇ ಪಾದ	2ನೇ ಪಾದ	3ನೇ ಪಾದ	4ನೇ ಪಾದ.	ರಾಶಿ
ಅಶ್ವಿನಿ	ಚು	ಚೆ	ಚೊ	ಲ	
ಭರಣಿ	ಲಿ	ಲು	ಲೆ	ಲೊ	ಮೇಷ.
ಕೃತಿಕಾ	ಅ	"	"	"	
ಕೃತಿಕಾ	"	ಇ	ಉ	ಎ	
ರೋಹಿಣಿ	ಓ	ವಾ	ವಿ	ವು	ವೃಷಭ.
ಮೃಗಶಿರ	ವೆ	ವೊ	"	"	
ಮೃಗಶಿರ	"	"	ಕಾ	ಕಿ	
ಆರಿದ್ರ	ಕು	ಘ	ಙ	ಛ	ಮಿಥುನ.
ಪುನರ್ವಸು	ಕೆ	ಕೊ	ಹ	"	
ಪುನರ್ವಸು	"	"	"	ಹಿ	
ಪುಷ್ಯ	ಹು	ಹೆ	ಹೊ	ಡ	ಕರ್ಕಾಟಕ.
ಆಶ್ಲೇಷ	ಡಿ	ಡು	ಡೆ	ಡೊ	
ಮಖ	ಮ	ಮಿ	ಮು	ಮೆ	
ಪುಬ್ಬ	ಮೊ	ಟ	ಟಿ	ಟು	ಸಿಂಹ.
ಉತ್ತರ	ಟೆ	"	"	"	
ಉತ್ತರ	"	ಟೊ	ಪಾ	ಪಿ	
ಹಸ್ತ	ಪು	ಷ	ಣ	ಠ	ಕನ್ಯಾ.
ಚಿತ್ರಾ	ಪೆ	ಪೊ	"	"	
ಚಿತ್ರಾ	"	"	ರಾ	ರಿ	
ಸ್ವಾತಿ	ರು	ರೆ	ರೋ	ತ	ತುಲಾ.
ವಿಶಾಖ	ತಿ	ತು	ತೆ	"	
ವಿಶಾಖ	"	"	"	ತೊ	
ಅನುರಾಧ	ನಾ	ನಿ	ನು	ನೆ	ವೃಶ್ಚಿಕ.
ಜ್ಯೇಷ್ಠ	ನೋ	ಯ	ಯಿ	ಯು	
ಮೂಲ	ಯೆ	ಯೋ	ಬಾ	ಬಿ	ಧನಸ್ಸು.
ಪೂರ್ವಾಷಾಢ	ಬು	ಧ	ಭ	ಢ	
ಉತ್ತರಾಷಾಢ	ಬೆ	"	"	"	
ಉತ್ತರಾಷಾಢ	"	ಬೊ	ಜ	ಜಿ	ಮಕರ.
ಶ್ರಾವಣ	ಜು	ಜೆ	ಜೊ	ಖ	
ಧನಿಷ್ಠ	ಗ	ಗಿ	"	"	
ಶತಭಿಷಾಬ	ಗೊ	ಸ	ಸಿ	ಸು	ಕುಂಭ.
ಪೂರ್ವ ಭಾದ್ರ	ಸೇ	ಸೊ	ದಾ	"	
ಪೂರ್ವ ಭಾದ್ರ	"	"	"	ದಿ	
ಉತ್ತರ ಭಾದ್ರ	ದು	ಶ್ರಂ	ಝ	ಥ	ಮೀನ.
ರೇವತಿ	ದೆ	ದೊ	ಚಾ	ಚಿ	

ಉದಾಹರಣೆ:-'ರಾ' ಎಂಬುದು ಚಿತ್ರಾ ನಕ್ಷತ್ರದ 3ನೇ ಪಾದ. ಆದ್ದರಿಂದ ರಾಮಪ್ಪ ಎಂಬವರಿಗೆ 'ತುಲಾ' ರಾಶಿ. ಇದರಂತೆಯೇ ಎಲ್ಲವನ್ನೂ ತಿಳಿಯತಕ್ಕದ್ದು.

ಸಂಯುಕ್ತಾಕ್ಷರಗಳ ನಕ್ಷತ್ರ:-ಕೃಷ್ಣ, ಮೃಗಶಿರ 3ನೇ ಪಾದ. ಮಿಥುನ ರಾಶಿ. ಶ್ರೀಧರ, ಚಿತ್ರಾ ನಕ್ಷತ್ರದ 4ನೇ ಪಾದ. ಬ್ರಹ್ಮ. ಪ್ರಭಾಕರ, ಚಿತ್ರಾನಕ್ಷತ್ರದ 3ನೇ ಪಾದ.

ಜಾತಕವಿದ್ದವರಿಗೆ ಜಾತಕದ ರಾಶಿ ಚಿತ್ರದಲ್ಲಿ ಚಂದ್ರ ಯಾವ ರಾಶಿಯಲ್ಲಿರುತ್ತಾನೋ ಅದೇ ರಾಶಿಯೆಂದು ಸುಲಭವಾಗಿ ತಿಳಿದುಕೊಳ್ಳಬಹುದು.

ವರ್ಕಿಂಗ್ ಕಮಿಟಿಗೆ ರಾಜಿನಾಮೆ ಇತ್ತದ್ದೇಕೆ?

ಪ. ಜವಾಹರಲಾಲರ ಪ್ರಕಟಣೆ.

"ಅಂತರರಾಷ್ಟ್ರೀಯ ಬಿಕ್ಕಟ್ಟು ಈಗ ನಮ್ಮ ಮುಂದೆ ಬಂದಿರುವದರಿಂದ, ನಾವು ನಿರ್ವಿಕಾರದಿಂದ ಪರಿಸ್ಥಿತಿಯನ್ನು ಪರಿಶೀಲಿಸಿ ನಮ್ಮ ಧ್ಯೇಯಸಾಧನೆಗಾಗಿ ಹೋರಾಡಬೇಕು. ಅಸ್ಪಷ್ಟ ಶಬ್ದಗಳ ಪ್ರಯೋಗವು ಇನ್ನು ಸಾಕು. ಮುಂದೇನು ಎಂದು ನಾವು ಚಿಂತಾಕ್ರಾಂತರಾಗಬೇಕಾದುದಿಲ್ಲ. ಸಧ್ಯದ ಪರಿಸ್ಥಿತಿಯಿಂದ ಎಲ್ಲರೂ ಪಾಠ ಕಲಿಯೋಣ ನಮ್ಮ ಮೇಲೆ ಪ್ರಸಂಗ ಬಂದರೆ ಎಲ್ಲರೂ ಕೂಡಿಯೇ ಎದುರಿಸುವೆವು."

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ 15 ಸದಸ್ಯರಲ್ಲಿ ಕಾಂಗ್ರೆಸ್ ಪ್ರಸಿಡೆಂಟರ ಚುನಾವಣೆಯಿಂದಾಗಿ ಉಪಸ್ಥಿತವಾದ ಪರಿಸ್ಥಿತಿಯಿಂದ ಹದಿಮೂರು ಜನರು ತಮ್ಮ ಅಧಿಕಾರಕ್ಕೆ ರಾಜಿನಾಮೆ ಕೊಟ್ಟಿರುವರು. ಈಗ ಕಮಿಟಿಯಲ್ಲಿ ಸುಭಾಷ್ ಬಾಬು ಹಾಗೂ ಅವರ ಸಹೋದರ ಶರತ್‌ಚಂದ್ರ ಬೋಸರು ಮಾತ್ರವಿರುವರು. ಗಾಂಧಿವಾದಿಗಳಾದ ಬಲಪಕ್ಷದ ಹನ್ನೆರಡು ಮಂದಿಯು ತಮ್ಮ ರಾಜಿನಾಮೆಯನ್ನು ಒಟ್ಟಿಗೆ ಕಳುಹಿಸಿದ್ದರು. ಪಂಡಿತ ಜವಾಹಿರ್ ಲಾಲರು ತಮ್ಮ ರಾಜಿನಾಮೆಯನ್ನು ಪ್ರತ್ಯೇಕ ಕಳುಹಿಸಿ ಮನನೀಯವಾದ ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ-ಅದನ್ನೇ ಇಲ್ಲಿ ಕೊಡಲಾಗಿದೆ.

'ಈ ವರೆಗೆ ನಾನು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಿಂದಾಗಿ ಬಂದ ಪರಿಸ್ಥಿತಿಯ ಬಗ್ಗೆ ಯಾವ ಪ್ರಕಟನೆಯನ್ನೂ ಹೊರಡಿಸಿಲ್ಲ. ಯಾಕೆಂದರೆ ಮೊದಲೇ ಪ್ರಕ್ಷುಬ್ಧವಾಗಿರುವ ವಾತಾವರಣವು ಅದರಿಂದ ಮತ್ತಷ್ಟು ತಳಮಳಗೊಳ್ಳುವದೆಂದು ನಾನು ಅರಿತಿದ್ದೆನು. ಅವರೆ ಸರ್ವಸಾಮಾನ್ಯವಾಗಿ ಇಂತಹ ಚುನಾವಣೆಯೇ ಮೊದಲಾದ್ದರಿಂದ ಉಂಟಾಗುವ ಪರಿಣಾಮವು ಅಷ್ಟು ಮಹತ್ವದಲ್ಲ. ಯಾಕೆಂದರೆ ಪ್ರತಿಯೊಂದು ಪ್ರಜಾಪ್ರಭುತ್ವ ಸಂಸ್ಥೆಯಲ್ಲಿಯೂ ಇಂಥಾ ಘಟನೆಗಳು ಸ್ವಾಭಾವಿಕ. ಆದರೆ ಅಂತರ ರಾಷ್ಟ್ರೀಯ ಪರಿಸ್ಥಿತಿಯು ದಿನೇ ದಿನೇ ಬಿಕ್ಕಟ್ಟಾನಸ್ಥೆಗೆ ಬರುತ್ತಿರುವದರಿಂದ ನಾವು ಸದ್ಯಕ್ಕೆ ಬೇರೆ ವಿಧದಲ್ಲಿ ವಿಚಾರಮಾಡಬೇಕಾಗುವದು. ಚುನಾವಣೆಗೆ ಮೊದಲೇ, ಸುಭಾಷ ಬಾಬುಗಳ ಆಯ್ಕೆಯು ಯಾವ ಪರಿಣಾಮವನ್ನುಂಟುಮಾಡುವದೆಂಬುದನ್ನು ನಾನು ತಿಳಿದಿದ್ದೆ. ಆದ್ದರಿಂದಲೇ ಅವರ ಚುನಾವಣೆಗೆ ನಾನು ವಿರೋಧ ಮಾಡಿದ್ದು.'

ಚುನಾವಣೆ ಪ್ರಚಾರ ಕಾಲದಲ್ಲಿ ಬಾಬೂ ಸುಭಾಷ್‌ಚಂದ್ರಬೋಸರು ವರ್ಕಿಂಗ್ ಕಮಿಟಿಯ ತನ್ನ ಸಹೋದ್ಯೋಗಿಗಳ ಸಂಬಂಧವಾಗಿ ಕೆಲವು ಮಾತುಗಳನ್ನಾಡಿದರು. ಅದು ನನ್ನ ಮನಸಿಗೆ ಆಶ್ಚರ್ಯ ಹಾಗೂ ಖೇದವನ್ನುಂಟುಮಾಡಿತು. ಅದು ನಿರಾಧಾರದ ಮಾತುಗಳು, ಒಂದು ವೇಳೆ ಅವುಗಳು ನಿಜವಾದರೆ ಅಂತಹ ಅಪರಾಧಗಳನ್ನು ಮಾಡಿದವರು ಯಾ ಅದಕ್ಕೆ ಬೆಂಬಲವಿತ್ತವರು ಕಾಂಗ್ರೆಸ್ ಸಂಸ್ಥೆಯ ಸೂತ್ರಗಳನ್ನು ಹಿಡಿಯಲು ಅಯೋಗ್ಯರಾಗಿದ್ದಾರು. ಈ ಆರೋಪಗಳು ನಿರಾಧಾರವೆಂದು ಕಂಡು ಬಂದರೆ ಅವರು ಸಾರ್ವಜನಿಕ ರೀತಿಯಲ್ಲಿ ಹಿಂತೆಗೆದುಕೊಳ್ಳುವುದೇ ಯೋಗ್ಯ ಮಾರ್ಗವಿದ್ದು.

ನನಗೂ ಮತ್ತು ಸುಭಾಷ್ ಬೋಸರಿಗೂ ಕೆಲವು ಮಹತ್ವದ ವಿಚಾರದಲ್ಲಿ ಭಿನ್ನಾಭಿಪ್ರಾಯವಿತ್ತು. ಇದನ್ನು ಸ್ಪಷ್ಟೀಕರಿಸುವ ಬಗ್ಗೆ ಈ ವರೆಗೆ ನನಗೆ ಅವಕಾಶ ಸಿಗಲಿಲ್ಲ. ಅವರು ದುರ್ದೈವದಿಂದ ಕಾಯಿಲೆಯಿಂದ ನರಳುತ್ತಿರುವುದು ವಿಷಾದಕರ. ಜನತೆಯಲ್ಲಿ ತಪ್ಪು ತಿಳುವಳಿಕೆಯು ಹೆಚ್ಚಾಗುತ್ತಿದೆ. ತ್ರಿಪುರಿ ಕಾಂಗ್ರೆಸ್ ಅಧಿವೇಶನವು ಸಮೀಪಿಸುತ್ತಿದೆ. ವರ್ಕಿಂಗ್ ಕಮಿಟಿ ಮೀಟಿಂಗು ಕೂಡದ್ದರಿಂದ ನಾನು ಈ ಪ್ರಕಟಣೆ ಹೊರಡಿಸಬೇಕಾಯಿತು. ಇನ್ನು ಅಧ್ಯಕ್ಷರು ಇಚ್ಛಿಸುವಂತೆ ಬೇಕಾದ ಕಾರ್ಯಕ್ರಮ ಕೈಕೊಳ್ಳುವುದರಲ್ಲಿ ಅಡ್ಡಿ ಇಲ್ಲ. ಈ ಕಾರಣಗಳಿಂದ ಸುಭಾಷ್ ಬೋಸರಿಗೆ ನನ್ನಿಂದ ಸಹಾಯಸಿಗದು. ವೈಯಕ್ತಿಕವಾಗಿಯಾದರೂ ಬೋಸರಿಗೆ ನಾನು ಸಹಾಯ ಮಾಡಲಾರೆನು. ನಾವು ಅಂತರಿಕ್ಷದಲ್ಲಿ ಅರಮನೆಗಳನ್ನು ಕಟ್ಟಲಾರೆವು. ನಾವಿರುವ ಸ್ಥಿತಿ ಏನೆಂದು ಅರಿಯಬೇಕು. ಇವನ್ನೆಲ್ಲಾ ನೋಡಲಾಗಿ ಲಕ್ಷಣಗಳು ಶುಭದಾಯಕವಿಲ್ಲವೆಂದು ನನಗನಿಸುತ್ತದೆ. ಕಾಂಗ್ರೆಸಿನ ಅಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ನಾನು ಕೆಲಸ ಮಾಡಿದ್ದೇನೆ. ಆ ಕಚೇರಿಯ ಕೆಲಸದ ಸಂಪೂರ್ಣ ಅರಿವು ನನಗಿದೆ. ಕಾಂಗ್ರೆಸ್ ಸಂಸ್ಥೆಯ ಹೃದಯದಂತಿರುವಲ್ಲಿ ಕಲಹ ಅಂತಃಕಲಹಗಳಿಗೆ ಅವಕಾಶಸಿಗುವಂಥ ಹೊಸ ಹೊಸ ಪದ್ಧತಿಯನ್ನನುಸರಿಸ ಲಾಗುತ್ತಿರುವುದನ್ನು ನೋಡಿ ನನಗೆ ತುಂಬಾ ವ್ಯಥೆಯುಂಟಾಗಿದೆ.

ಕಾಂಗ್ರೆಸಿನಲ್ಲಿ ನಾನು ಬಹು ದಿವಸಗಳಿಂದ ಇದ್ದರೂ ಯಾವ ಪಕ್ಷ, ಪಂಗಡಕ್ಕೂ ಅಂಟಿಕೊಳ್ಳಲಿಲ್ಲ. ಎಲ್ಲ ಬಗೆಯ ಜನರೊಡನೆಯೂ ಸಹಕರಿಸುವ ಸುಯೋಗವು ನನಗೆ ಸಿಕ್ಕಿತ್ತು. ಈ ಮಹಾ ಸಂಸ್ಥೆಯಲ್ಲಿ ನಾನೊಬ್ಬ ವ್ಯಕ್ತಿಯಾಗಿದ್ದನು. ನಾನು ಅಧಿಕಾರದಲ್ಲಿದ್ದಾಗ ರಾಜಿನಾಮೆ ಕೊಡುವಂಥ ಪ್ರಸಂಗಗಳು ಎಷ್ಟೋ ಸಲ ಬರುತ್ತಿದ್ದವು. ಅಧಿಕಾರದ ಹೊಣೆಗಾರಿಕೆಯು ನನ್ನ ತಲೆಯ ಮೇಲಿರದಿದ್ದರೆ ನಾನು ಕಾಂಗ್ರೆಸಿನ ಕೆಲಸವನ್ನು ಹೆಚ್ಚು ಮಾಡಬಲ್ಲೆನೆಂದು ಅನಿಸುತ್ತಿತ್ತು. ಅದ

ನಾವು ವಿಷಮಪರಿಸ್ಥಿತಿಯಲ್ಲಿರುವದರಿಂದ ಕೆಲವು ಪ್ರಸಂಗಗಳಲ್ಲಿ ನಮ್ಮ ವೈಯಕ್ತಿಕ

ಪಂ ಜವಾಹರಲಾಲರು

ಅಭಿಪ್ರಾಯಗಳನ್ನು ಬದಿಗಿಟ್ಟಾದರೂ ಒಗ್ಗಟ್ಟಿನಿಂದ ಕೆಲಸ ಮಾಡಲೇ ಬೇಕೆಂದು ನನಗನಿಸುತ್ತಿದ್ದಿತಾದ್ದರಿಂದ ನಾನು ರಾಜಿನಾಮೆ ಕೊಡುತ್ತಿರಲಿಲ್ಲ

ನಾನು ಸಮತಾವಾದಿಯಾಗಿದ್ದೆನು ಮುಂದೆಯೂ ಇರುವೆನು ಪ್ರಜಾಪ್ರಭುತ್ವದಲ್ಲಿ ನನಗೆ ಸಂಪೂರ್ಣ ನಂಬಿಕೆ ಇರುವುದು ಇದರ ಜೊತೆಗೆ ನಾನು ಮ ಗಾಂಧಿಯವರು ಕಳೆದ 20 ವರ್ಷಗಳಿಂದ ಯಶಸ್ವಿಯಾಗಿ ನಡಸಿಕೊಂಡು ಬಂದ ಅಹಿಂಸಾತ್ಮಕ ಯೋಜನೆಯನ್ನು ಪೂರ್ಣ ಒಪ್ಪಿರುವೆನು ಜನತೆಯಿಂದಲೇ ನಮ್ಮ ಶಕ್ತಿಯು ಹೆಚ್ಚುವದೆಂದು ನನ್ನ ಅಭಿಪ್ರಾಯವು ಹೊರ ಟಕ್ಕಾಗಲೀ, ಹೊಸ ರಾಷ್ಟ್ರವನ್ನು ಕಟ್ಟುವುದಕ್ಕಾಗಲೀ ಬೇಕಾಗುವ ಆ ಶಕ್ತಿಯು ಏಕ್ಯತೆಯಿಂದ ಕೂಡಿರಬೇಕು [illegible] ಸ್ಥಿಯ ಶಕ್ತಿಗಳಿಗೆ ಬಲಿಕೊಡುವದರಿಂದ ನಾವೆಂದಿಗೂ ಹೊಸ ಹಿಂದೂಸ್ಥಾನವನ್ನು ಕಟ್ಟಲರಿವು

ಇಂದು ನಮ್ಮಲ್ಲಿ ಶಕ್ತಿಯಿದೆ ಆದರೆ ಅದನ್ನು ಹೇಗೆ ಉಪಯೋಗಿಸಬೇಕೆಂಬ ಬುದ್ಧಿ ಮಾತ್ರ ಬೇಕು. ಸ್ವಾತಂತ್ರ್ಯದ ಗುರಿಯನ್ನು ಸೇರಲು ಹೇಗೆ ಹೋಗಬೇಕೆಂಬ ತಿಳುವಳಿಕೆ ಬೇಕು ನಾವೇನೂ ಇಂದು ದುರ್ಬಲರಿಲ್ಲ, ದುರ್ದೈವಿಯ ಅಧೀನವಿಲ್ಲ ಅಂದ ಮೇಲೆ ಆ ರೀತಿ ಆಚರಿಸುವದೇಕೆ ?

ವರ್ಕಿಂಗ್ ಕಮಿಟಿಯಲ್ಲಿ ನಾನು ಇರಕೂಡದೆಂದು ಹಿಂದೆ ಎಷ್ಟೋ ಸಲ ಯೋಚಿಸಿದ್ದೆನು ಈಗಂತೂ ಈ ನನ್ನ ವಿಚಾರವು ಹೆಚ್ಚು ಬಲವಾಗಿದೆ ಇಂದಿನ ಪರಿಸ್ಥಿತಿಯಲ್ಲಿ ಮತ್ತು ಅಧ್ಯಕ್ಷರ ಆಯ್ಕೆಯ ನಂತರದ ಉಂಟಾಗಿರುವ ವಾತಾವರಣದಲ್ಲಿ ನಾನು ಈ ಅಧಿಕಾರವನ್ನು ಸ್ವೀಕರಿಸಲಾರೆ. ನಮ್ಮ ಧೋರಣವನ್ನು ನಿಶ್ಚಯಿಸಿಕೊಳ್ಳಲು ಅಧ್ಯಕ್ಷರಿಗೆ ಅವಕಾಶ ಕೊಡಬೇಕೆಂದು ಮತ್ತು ಆ ಧೋರಣಕ್ಕೆ ಒಪ್ಪುವವರನ್ನೇ ಅಧ್ಯಕ್ಷರು ಆರಿಸಿಕೊಳ್ಳಬೇಕೆಂದು ಅಭಿಪ್ರಾಯಪಡುವವನಿಗೆ ನಾನು ಬೆಂಬಲಕೊಡುತ್ತೇನೆ."

ವರ್ಕಿಂಗ್ ಕಮಿಟಿಯ 13 ಜನ ಸದಸ್ಯರ ರಾಜಿನಾಮೆ.

ಬೂಲಾಭಾಯಿ ದೇಸಾಯಿಯವರು

ಶ್ರೀ ಸರ್ದಾರ ವಲ್ಲಭಭಾಯಿ ಪಟೇಲರು

ಶ್ರೀಮತಿ ಸರೋಜಿನಿ ನಾಯ್ಡುರವರು

ಇವರ ಜೊತೆಗೆ, ಹಿತವಾದಿಗಳಾದ ಮೌಲಾನಾ ಅಬುಲ್ ಕಲಾಂ ಅಜಾದರು, ಡಾ. ಪಟ್ಟಾಭಿಯವರು, ಶಂಕರ ರಾವ ದೇವ್, ಎಚ್ ಕೆ ಮೆಹತಾಬ್ ಇವರು, ಆಚಾರ್ಯ ಕೃಪಾಲಿನಿಯವರು, ಅಬ್ದುಲ್ ಗಫೂರ್ ಖಾನರವರು, ಜಯರಾಮ್‌ದಾಸ್ ದೌಲತ್ ರಾಮರವರು, ಮಿ ಜಮ್ನಾಲಾಲ್ ಬಜಾಜರವರು, ಬಾಬು ರಾಜೇಂದ್ರ ಪ್ರಸಾದರೂ ಸಹ ರಾಜೀನಾಮೆ ಕೊಟ್ಟಿರುತ್ತಾರೆ

ತ್ರಿಪುರಿ ಅಧಿವೇಶನವು ಮುಂದುಹಾಕಲ್ಪಡುವುದಿಲ್ಲ.

ರಾಷ್ಟ್ರಪತಿಗಳ ಅಸ್ವಸ್ಥತೆಯಲ್ಲಿದ್ದರೂ ಮಹಾ ಸಭೆಗೆ ಹೋಗುವರು.

ವಿಷ್ಣುದತ್ತ ನಗರದಲ್ಲಿ ಬಿರುಗಾಳಿ.

ರಾಷ್ಟ್ರಪತಿಗಳಾದ ಸುಭಾಷ್ ಬಾಬುಗಳು ಕಾಯಿಲೆಯಲ್ಲಿರುವದರಿಂದ ಅವರಿಗೆ ಕಳೆದ ತಾರೀಕು 22 ರಲ್ಲಿ ನಿಶ್ಚಿತವಾಗಿದ್ದ ವರ್ಕಿಂಗ್ ಕಮಿಟಿ ಮೀಟಿಂಗಿಗ ಹೋಗಲಾಗಲಿಲ್ಲ ಆದ್ದರಿಂದ ವರ್ಕಿಂಗ್ ಕಮಿಟಿ ಮೀಟಿಂಗನ್ನು ತ್ರಿಪುರಿ ಅಧಿವೇಶನಕ್ಕೆ ಮುಂದುವರಿಸಲಾಯಿತು ಆದರೂ ಈ ವರೆಗೆ ಸುಭಾಷ ಬಾಬುಗಳ ಅಸ್ವಸ್ಥತೆಯು ಗುಣವಾಗಿರುವದಿಲ್ಲ ಅವರ ಶುಶ್ರೂಷೆ ಮಾಡುತ್ತಿರುವ ಡಾ ನೀಲರತ್ನ ಸರ್ಕಾರರು ಒಂದು ಪಕ್ಷದ ವರೆಗೆ ಬೋಸರು ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ಅವರ ಸ್ಥಿತಿಗೆ ಅಪಾಯ ಬರುವದೆಂದು ಹೇಳಿರುವರು ಈ ಮಧ್ಯೆ ವರ್ಕಿಂಗ್ ಕಮಿಟಿಯ ಸದಸ್ಯರ ರಾಜಿನಾಮೆಯಿಂದಾಗಿ ಉಪಸ್ಥಿತವಾದ ಕೋಲಾಹಲದಲ್ಲಿ ಶ್ರೀ ಬೋಸರು ತಮ್ಮ ರಾಷ್ಟ್ರಪತಿತ್ವಕ್ಕೆ ರಾಜಿನಾಮೆಯನ್ನೀಯುವರೆಂದೂ, ತ್ರಿಪುರಿ ಅಧಿವೇಶನವು ಮುಂದುವರಿಸಲ್ಪಡುವದೆಂದೂ, ಪೂಜ್ಯ ಗಾಂಧಿಜೀಯವರು ತ್ರಿಪುರಿಗೆ ಹೋಗುವದಿಲ್ಲವೆಂದೂ ಪತ್ರಿಕಾ ಪ್ರಪಂಚದಲ್ಲಿ ಊಹಾಪೋಹ ವಿಚಾರಗಳು ಜನಜನಿತವಾದವು ಆದರೆ ಇತ್ತಲಾಗಿ ಇವುಗಳು ನಿರಾಧಾರವ ಸುದ್ದಿಗಳೆಂದು ತಿಳಿದುಬಂದಿದೆ ಸುಭಾಷ್ ಬಾಬುಗಳು ಡಾಕ್ಟರರ ಅಭಿಪ್ರಾಯವನ್ನು ಬದಿಗೊತ್ತಿ ತ್ರಿಪುರಕ್ಕೆ ತಾರೀಕು 5 ರಲ್ಲಿ ಹೊರಡಲು ತಯಾರಿರುವರು ಅಧಿವೇಶನವು ಮುಂ

ದು ಹಾಕಲ್ಪಟ್ಟರೆ ಭಾರತದ ಇಡೀ ಜನತೆಗೇ ಅನಾನುಕೂಲವಾಗುವದೆಂದೂ, ಮುಂದುವರಿಸಲ್ಪಟ್ಟ ಅಧಿವೇಶನವು ಹೆಚ್ಚಿನ ಉತ್ಸಾಹದಿಂದ ನಡೆಯದೆಂದೂ, ಆದ್ದರಿಂದ ದೇಶಕ್ಕಾಗಿ, ಅಧಿವೇಶನವು ಜಯಪ್ರದವಾಗಿ ನಡೆಯಲಿಕ್ಕಾಗಿ ತಾವು ಕಷ್ಟವನ್ನು ವಹಿಸುವವರಲ್ಲಿ [illegible] ವೆಂದೂ ಅವರು ಅಂದಿರುವರು ಬೋಸರು ಹೊರಡುವಾಗ ತಮ್ಮೊಡನೆ ಕೆಲವು ಸಹಾಯಕ ಜನರನ್ನೂ ಕರಕೊಂಡು ಹೋಗುವರೆಂದು ತಿಳಿದುಬರುತ್ತದೆ

ಪೂಜ್ಯ ಗಾಂಧಿಜೀಯವರು ಈಗ ರಾಜಕೋಟಿಗೆ ಹೋಗಿರುವದರಿಂದ ಮೊದಲು ನಿಶ್ಚಯಿಸಿದಂತೆ ತಾರೀಕು 3 ರಲ್ಲಿ ತ್ರಿಪುರಿಗೆ ಹೋಗಿ ಪ್ರದರ್ಶನವನ್ನು ತೆರೆ[illegible] ಗಾಂಧಿ[illegible] ರಾಜಕೋಟಿಯಿಂದ [illegible] ಹೋಗುವರೆ [illegible] ಕಾಂಗ್ರೆಸ್ ಕಮಿಟಿಯ ಮೀಟಿಂಗಿಗೆ ಮೊದಲೇ ಬಂದು ಪ್ರದರ್ಶನವನ್ನು ತೆರೆಯುವರೆಂದು ನಂಬಲಾಗಿದೆ

ಸುಭಾಷ ಬಾಬುಗಳ ಅಸ್ವಸ್ಥತೆಯು ದರಿಂದಾಗಿ ತ್ರಿಪುರಿಯಲ್ಲಿ ಅವರ ಮೆರವಣಿಗೆಯು ನಡೆಯಲಾರದಾಗಿ ತಿಳಿಯಬರುತ್ತದೆ ಬೋಸರು ಅಲ್ಲಿಯ ಸ್ವಾಗತ ಮಂಡಳಿಯವರಿಗೆ ತಮ್ಮ 52 ಆನೆಗಳ ವಿಜೃಂಭಣೆಯ ಮೆರವಣಿಗೆಯನ್ನು ರದ್ದು ಮಾಡಬೇಕೆಂದೂ, ತಾನು ನಿತ್ರಾಣನಾದರಿಂದ ಅದು ಶಕ್ಯವಾಗಲಾರದೆಂದೂ ತಂತಿ ಕೊಟ್ಟಿರುವರು

ಹೊಸ ವರ್ಕಿಂಗ್ ಕಮಿಟಿಯ ನೇಮಕದ ಬಗ್ಗೆ ಬೋಸರು ಶ್ರೀ ನರೇಂದ್ರ ದೇವರವರ ಅಭಿಪ್ರಾಯ ಕೇಳಿರುವರೆಂದೂ ಹೊಸ ನೇಮಕಗಳು ತ್ರಿಪುರಿಯಲ್ಲೇ ಸಾಧ್ಯವೆಂದೂ ತಿಳಿಯಬರುವದು

ತಾರೀಕು 26 ರಿಂದ ತ್ರಿಪುರಿಯ ವಿಷ್ಣುದತ್ತ ನಗರದಲ್ಲಿ ಮಳೆ ಮತ್ತು ಬಿರುಗಾಳಿಯಿಂದಾಗಿ ಕೆಲವು ಕಟ್ಟಡಗಳು ಬಿದ್ದು ಹೋದವೆಂದು ತಿಳಿಯಬರುತ್ತದೆ. ಸ್ವಾಗತ ಕಮಿಟಿಯವರು ಪುನಹ ಸರಿಪಡಿಸುತ್ತಿದ್ದಾರೆ ಅಂತೂ ತ್ರಿಪುರಿ ಅಧಿವೇಶನದ ಸಿದ್ಧತೆಗಳೂ ಪೂರ್ಣವಾದಂತೆಯೇ. ಈಗ ವಿಷ್ಣುದತ್ತ ನಗರದ ವಾತಾವರಣ ಪ್ರಶಾಂತವಾಗಿದೆ

ಕೊಡಗು

ಮಾರ್ಚಿ ತಾರೀಕು ೩ ನೇ ಶುಕ್ರವಾರ ೧೯೩೯.

ಕಾಂಗ್ರೆಸಿನ ಮುಂದಿನ ಕಾರ್ಯಕ್ರಮ.

ಕಾಂಗ್ರೆಸಿನ ಮುಂದಿನ ವರ್ಷದ ಕಾರ್ಯಕ್ರಮವನ್ನು ವಾಡಿಕೆಯಾಗಿ ಕಾಂಗ್ರೆಸ್ ಮಹಾ ಸಭೆಯ ಒಂದೆರಡು ವಾರಗಳಿಗೆ ಮುಂಚಿತವಾಗಿ ಕಾಂಗ್ರೆಸು ವರ್ಕಿಂಗ್ ಕಮಿಟಿ ಸೇರಿ ರೂಪಿತಗೊಳಿಸಿ ಠರಾವುಗಳ ಮೂಲಕ ಮಹಾ ಸಭೆಗೆ ಮುಂಚಿತವಾಗಿ ನೆರೆಯುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಹಾಗೂ ವಿಷಯನಿಯಾಮಕ ಸಮಿತಿಯ ಮುಂದೆ ಇಟ್ಟು ಅವರ ಒಪ್ಪಿಗೆಯನ್ನು ಪಡೆದು ಮಹಾ ಸಭೆಯ ಮುಂದೆ ಇಡಲಾಗುತ್ತಿತ್ತು. ಆದರೆ ಈ ಸಾರಿ ಈ ಪದ್ಧತಿಯು ಬದಲಾಗೊಳ್ಳುವಂತಿದೆ. ಕಳೆದ ವಾರ 'ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯ ಪರಿಣಾಮ'ವನ್ನು ಕುರಿತು ನಾವು ಬರೆದ ಮೇಲೆ ಸದರಿ ಪರಿಣಾಮವು ಮತ್ತಷ್ಟು ಮುಂದುವರಿದಿದೆ. ಕಾಂಗ್ರೆಸಿನ ಅಧ್ಯಕ್ಷರಾದ ಸುಭಾಷ್ ಬೋಸರವರು ಜಂಟಿಯಾಗಿ ಪತ್ರ ಬರೆದಿದ್ದ ವರ್ಕಿಂಗ್ ಕಮಿಟಿಯ 12 ಸದಸ್ಯರುಗಳ ರಾಜಿನಾಮೆಯನ್ನು ಅಂಗೀಕರಿಸಿರುವರು. ಈ ಸಂದರ್ಭದಲ್ಲಿ ಅಧ್ಯಕ್ಷರು ಹೇಳಿರುವಂತೆ-ಈ ಪತ್ರವು ದೀರ್ಘಾಲೋಚನೆಯಿಂದ ಬರೆಯಲ್ಪಟ್ಟ ಕಾರಣ ರಾಜಿನಾಮೆಯನ್ನು ಹಿಂತೆಗೆಯುವಂತೆ ಪುನಹ ಅವರನ್ನು ಕೇಳಿಕೊಳ್ಳುವುದರಲ್ಲಿ ಪ್ರಯೋಜನವಿರಲಿಲ್ಲ. ಪಂಡಿತ ಜವಾಹಿರ್‌ಲಾಲ್ ನೆಹರೂರವರು ಪ್ರತ್ಯೇಕವಾಗಿ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ, ತನಗೂ ವರ್ಕಿಂಗ್ ಕಮಿಟಿಯಲ್ಲಿರಲು ಸಾಧ್ಯವಾಗಲಾರದೆಂಬ ಅರ್ಥವನ್ನು ಸೂಚಿಸಿದ್ದರು. ಆದರೆ ಆ ಉತ್ತರದಲ್ಲಿ ತನ್ನ ರಾಜಿನಾಮೆಯನ್ನು ವಿಶದಪಡಿಸಿರಲಿಲ್ಲವೆಂದೂ, ಅದನ್ನು ವಿವರವಾಗಿ ತಿಳಿಸಬೇಕೆಂದೂ ಅಧ್ಯಕ್ಷರು ಅವರನ್ನು ಕೇಳಿಕೊಂಡರು. ತನ್ನ ಅಭಿಪ್ರಾಯವು ತಾನು ಬರೆದ ಪತ್ರದಲ್ಲಿ ಸ್ಪಷ್ಟವಾಗಿದೆಯೆಂತಲೂ, ಅದರ ಮೇಲೂ ರಾಜಿನಾಮೆ ಪತ್ರವನ್ನು ಪ್ರತ್ಯೇಕ ಬರೆಯಬೇಕೆಂದು ಹೇಳುವದಾದರೆ ಹಾಗೆ ಬರೆದು ಕಳುಹಿಸಲು ತಾನು ತಯಾರಿರುವೆನೆಂದೂ ನೆಹರೂರವರೂ ಜವಾಬಿತ್ತಿರುವರು. ಇದರಿಂದ ನೆಹರೂರವರೂ ರಾಜಿನಾಮೆ ಇತ್ತಂತಾಯಿತು. ವರ್ಕಿಂಗ್ ಕಮಿಟಿಯ ಉಳಿಯ ಮೆಂಬರುಗಳ ಮೇಲೆ ಹೊರಿಸಿದ ಆರೋಪಣೆಗಳನ್ನು ಅಧ್ಯಕ್ಷರು ಹಿಂತೆಗೆಯುವದು ಉಚಿತವೆಂದೂ, ಹಾಗೆ ಮಾಡಿದರೆ ವರ್ಕಿಂಗ್ ಕಮಿಟಿಯು ಒಗ್ಗಟ್ಟನ್ನು ಕಾಪಾಡಲು ಸಾಧ್ಯವಾಗುವದೆಂದೂ ಪಂಡಿತ ನೆಹರೂರವರು ಸುಭಾಷ್ ಬೋಸರಿಗೆ ಕೊಟ್ಟ ಸಲಹೆಯನ್ನು ಅವರು ಅಂಗೀಕರಿಸದೆ ... ... ವಾಡಿಕೆಯಾಗಿ ಅಲ್ಪ ಪಕ್ಷದವರ ಅಭಿಪ್ರಾಯವು ಬಹುಮತದವರಿಗೆ ಒಪ್ಪಿಗೆಯಾಗದಿದ್ದರೆ ಅವರು ರಾಜಿನಾಮೆ ಕೊಡುವ ಪದ್ಧತಿ ಇದೆ. ಈಗಿನ ಸಂದರ್ಭದಲ್ಲಿ ಅಷ್ಟೇ ಅಲ್ಲ, ವರ್ಕಿಂಗ್ ಕಮಿಟಿಯ ಬಹುಮತ ಪಕ್ಷದವರ ಮೇಲೆ ಅಧ್ಯಕ್ಷರೇ ಆರೋಪಗಳನ್ನು ಹೊರಿಸಿದ್ದು ಮಾತ್ರವಲ್ಲ, ಅಧ್ಯಕ್ಷರ ಗೈರ್‌ಹಾಜರಿನಲ್ಲಿ ಅವರು ಕಮಿಟಿಯ ವಾಡಿಕೆಯ ಕೆಲಸಗಳನ್ನೂ ಕೂಡ ಮಾಡಕೂಡದೆಂದೂ, ಅಧ್ಯಕ್ಷರು ತಂತೀ ಕಳುಹಿಸಿದ ಮೇಲೆ ಬಹುಮತ ಪಕ್ಷದವರು ರಾಜಿನಾಮೆಯನ್ನು ಕೊಡದೆ ಇರುವುದು ತಾನೇ ಹೇಗೆ? ಆದ್ದರಿಂದ ವರ್ಕಿಂಗ್ ಕಮಿಟಿಯ 13 ಮೆಂಬರುಗಳು ತುರಿತವಾಗಿ ರಾಜಿನಾಮೆ ಇತ್ತದ್ದು ಉಚಿತವಲ್ಲವೆಂತಲೂ, ಇದರಿಂದ ಅಧ್ಯಕ್ಷರಿಗೆ ಅನ್ಯಾಯಮಾಡಿದಂತಾಗಿದೆಯೆಂತಲೂ ಕೆಲವರು ಮಾಡುತ್ತಿರುವ ಟೀಕೆಯಲ್ಲಿ ಅರ್ಥವಿಲ್ಲ. ಬೋಸರ ವರ್ತನೆಯಿಂದ ಹದಿಮೂರು ಮೆಂಬರುಗಳ ಮೇಲೆ ಅವಿಶ್ವಾಸ ಸೂಚಿಸಿದ್ದು ಮಾತ್ರವಲ್ಲ, ಈ ಮೆಂಬರುಗಳಿಗೆ ಆಗಿಂದಾಗ್ಯೆ ಮಾರ್ಗದರ್ಶಕರಾಗಿ ವರ್ತಿಸುತ್ತಿದ್ದ ಮಹಾತ್ಮರ ಸಲಹೆ ಮೇಲೆ ಟೀಕಿಸಿದಂತಾಗಿದೆ. ಆದ್ದರಿಂದಲೇ ಅಧ್ಯಕ್ಷ ಚುನಾವಣೆಯಲ್ಲಿ ಬಹುಮತದ ಬೆಂಬಲವನ್ನು ಪಡೆದಿರುವ ಬೋಸರವರು ತಮ್ಮ ಕಾರ್ಯಕ್ರಮವನ್ನು ನಿರಾತಂಕವಾಗಿ ನಡಿಸಲು ಅನುಕೂಲಿಸುವಂತೆ ಅವರ ತತ್ವಕ್ಕೆ ಒಪ್ಪುವಂತವರನ್ನೇ ವರ್ಕಿಂಗ್ ಕಮಿಟಿಯ ಮೆಂಬರುಗಳಾಗಿ ಆರಿಸಿಕೊಳ್ಳುವದು ಯುಕ್ತವೆಂದು ಗಾಂಧಿಜೀಯವರು ಸೂಚಿಸಿದ್ದಾಗಿದೆ. ಇದರಲ್ಲಿ ವ್ಯಕ್ತಿಪೂಜೆಯೂ ಇಲ್ಲ, ಮುಂದುವರಿದು ಹೋಗುವವರನ್ನು ತಡೆಯುವ ಅಭಿಪ್ರಾಯವೂ ಇಲ್ಲ.

ಇನ್ನೀಗ ಸುಭಾಷ್ ಬೋಸರು ಯಾವ ತರಹದ ಹೊಸ ಕಾರ್ಯಕ್ರಮವನ್ನು ಕಾಂಗ್ರೆಸ್ ಮಹಾಸಭೆಯ ಮುಂದಿಡುವರೆಂದು ದೇಶದವರು ಎದುರು ನೋಡುತ್ತಿರುವರು. ಆದರೆ ಇಷ್ಟರ ವರೆಗೆ ಬಂದಿರುವ ವರ್ತಮಾನದಿಂದ ಬೋಸರವರು ಯಾವದೊಂದು ಹೊಸ ಕಾರ್ಯಕ್ರಮವನ್ನು ಕಾಂಗ್ರೆಸಿನ ಮುಂದಿಡುವಂತೆ ಕಾಣುಬರುವದಿಲ್ಲ. ಈ ಮೊದಲಿನಂತೆ ವರ್ಕಿಂಗ್ ಕಮಿಟಿಯವರು ತಯಾರಿಸಿದ ಕಾರ್ಯಕ್ರಮವು ಮಹಾಸಭೆಯ ಮುಂದಿಲ್ಲದಿರುವುದಿಲ್ಲವೆಂತಲೂ, ಕಾಂಗ್ರೆಸ್ ಪ್ರತಿನಿಧಿಗಳು ಕಳುಹಿಸುವ ಠರಾವುಗಳು ಮಾತ್ರ ಚರ್ಚಿಸಲ್ಪಡುವವೆಂತಲೂ ಅಧ್ಯಕ್ಷರು ಅಭಿಪ್ರಾಯ ಸೂಚಿಸಿರುವರು. ಇದೊಂದು ಹೊಸ ರೀತಿಯೇ ಸರಿ. ಅಧ್ಯಕ್ಷರು ಹೊಸ ಕಾರ್ಯಕ್ರಮವನ್ನು ಸೂಚಿಸುವದರ ಬದಲು ಹೊಸ ರೀತಿಯನ್ನು ಕೈಕೊಂಡಂತೆ ತೋರುತ್ತೆ. ಅಧ್ಯಕ್ಷರು ಕೈಕೊಳ್ಳಬಹುದೆಂದು ಈ ಮೊದಲು ವಾರ್ತೆ ಹೊರಟಿದ್ದ ವಿಷಯಗಳನ್ನು ಒಳಗೊಂಡ ಅಂದರೆ ಆರು ತಿಂಗಳೊಳಗೆ ಬ್ರಿಟಿಷರು ಹಿಂದೀಯರಿಗೆ ಸ್ವರಾಜ್ಯ ಕೊಡದಿದ್ದರೆ ಉಗ್ರ ತರಹದ ಚಳವಳವನ್ನು ಹೂಡಬೇಕೆಂತಲೂ, ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸು ಭಾಗ ವಹಿಸಬೇಕೆಂತಲೂ ಮತ್ತು ಭಾರತ ಭೂಮಿಗೆ 10 ಲಕ್ಷ ಮೆಂಬರುಗಳ ಒಂದು ಸೇವಾದಳವನ್ನು ತಯಾರಿಸಬೇಕೆಂತಲೂ ಅಧ್ಯಕ್ಷರ ಸಹೋದರರೂ, ವರ್ಕಿಂಗ್ ಕಮಿಟಿಯ ಉಳಿದ ಒಬ್ಬ ಮೆಂಬರರೂ ಆದ ಶರತ್‌ಚಂದ್ರಬೋಸರವರು ಠರಾವುಗಳನ್ನು ಕಳುಹಿಸಿರುವರು. ಇದಲ್ಲದೆ ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸುವ ಠರಾವೊಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮಹಾ ಕೋಸಲದ ಮೆಂಬರೊಬ್ಬರಿಂದ ಕಳುಹಿಸಲ್ಪಟ್ಟಿದೆ. ಅಧ್ಯಕ್ಷರು ತಮ್ಮ ಕಾರ್ಯಕ್ರಮವನ್ನು ಮಹಾ ಸಭೆಯ ಮುಂದಿಟ್ಟರೆ ಅದು ಬಹುಮತದವರ ಬೆಂಬಲ ಪಡೆಯದಿದ್ದ ಪಕ್ಷದಲ್ಲಿ ಅಧ್ಯಕ್ಷರ ಮೇಲೆ ವಿಶ್ವಾಸವಿಲ್ಲವೆಂಬ ಪರಿಣಾಮ ಉಂಟಾಗುವದೆಂಬ ಕಾರಣದಿಂದ ಬೋಸರವರು ಹಾಗೆ ಮಾಡಲು ಇಚ್ಛಿಸುವುದಿಲ್ಲವೋ ತಿಳಿಯದು.

ಯಾವುದಕ್ಕೂ ಅಧ್ಯಕ್ಷರ ಆರೋಗ್ಯವು ಚೆನ್ನಾಗಿಲ್ಲದಿರುವದು ವ್ಯಸನಕರ. ಕಳೆದ ವರ್ಷವೂ ಕೂಡ ಅನಾರೋಗ್ಯದ ದೆಸೆಯಿಂದ ಇವರಿಗೆ ಕುತೂಹಲವಿದ್ದಷ್ಟು ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಈಗಲೂ ಇವರ ಈ ಸ್ಥಿತಿಯಲ್ಲಿ ಎರಡು ವಾರಗಳ ವರೆಗಾದರೂ ವಿಶ್ರಾಂತಿ ಹೊಂದಬೇಕೆಂದು ಚಿಕಿತ್ಸೆ ಮಾಡುತ್ತಿರುವ ಡಾಕ್ಟರವರ ಅಭಿಪ್ರಾಯವಾಗಿದೆ. ಆದರೆ ಇವರು ಅದನ್ನು ಲೆಕ್ಕಿಸದೆ ತಾ. 5ರಲ್ಲಿಯೇ ತ್ರಿಪುರಿ ಕಾಂಗ್ರೆಸಿಗೆ ಹೊರಡುವರೆಂದು ನಿಶ್ಚಯಿಸಿರುವರು. ಈ ದೃಢ ನಿಶ್ಚಯಕ್ಕೆ ಇವರ ಮನಸ್ಥೈರ್ಯವೇ ಕಾರಣವಾಗಿದ್ದರೂ ಕೂಡ ಇವರ ದೇಹ ಸ್ಥಿತಿಯು ಇದಕ್ಕೆ ಅನುಕೂಲವಾಗುವದೋ ಎಂಬ ಸಂಶಯವು ಇವರ ಸಹವಾಸಿಗಳಲ್ಲಿ ಹುಟ್ಟಿದೆ. ಹೇಗೂ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮವು ಹೇಗಾಗುವದೆಂಬುವುದೂ, ಈಗ ಕಾಂಗ್ರೆಸ್ಸಿನ ಪ್ರಮುಖ್ಯ ಮುಂದಾಳುಗಳಿಗೂ ಅಧ್ಯಕ್ಷರಿಗೂ ತೋರುತ್ತಿರುವ ಭಿನ್ನಭೇದಗಳು ಹೇಗೆ ಸರಿಪಡಿಸಲ್ಪಡುವವೆಂಬದೂ ತ್ರಿಪುರಿ ಮಹಾಸಭೆಯಲ್ಲಿ ಗೊತ್ತಾಗುವದು. ಯಾವ ತೀರ್ಮಾನವೇ ಆಗಲಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಬಲವನ್ನುಂಟುಮಾಡುವಂಥಾದ್ದೇ ಆಗಲಿ ಎಂದು ಹಾರೈಸುತ್ತೇವೆ.

ರಾಜಕೋಟೆಯಲ್ಲಿ ಗಾಂಧಿಯವರು.

ಪೂಜ್ಯ ಗಾಂಧಿಜೀಯವರು ರಾಜಕೋಟೆಗೆ ದಯಮಾಡಿಸಿರುವರು. ಅಲ್ಲಿಯ ಸಂಸ್ಥಾನ ಅಧಿಕಾರಿಗಳು ಅವರಿಗೆ ಭೇಟಿಯನ್ನಿತ್ತಿದ್ದರು. ಅಧಿಕಾರಿಗಳು ಸಂಸ್ಥಾನದ ಇಡೀ ಕಾರ್ಯಕಲಾಪಗಳನ್ನು ಪರಿಶೀಲಿಸಲು ಗಾಂಧಿಜೀಯವರಿಗೆ ಅನುಮತಿ ಕೊಟ್ಟಿರುವರು. ಸಂಸ್ಥಾನ ಕೌನ್ಸಿಲಿನ ಫಸ್ಟ್ ಮೆಂಬರರಾದ ಮಿ. ವೀರವಾಲರು ಸಂಸ್ಥಾನದ ಪರಿಸ್ಥಿತಿಯನ್ನು ವಿವೇಚಿಸಿ ಸರಕಾರದ ಧೋರಣೆಯನ್ನೂ, ಪ್ರಜಾ ಮಂಡಳದ ಕಾರ್ಯವನ್ನೂ ತುಲನೆ ಮಾಡಿ, ಸರಕಾರವು ತಪ್ಪು ಧೋರಣೆಯನ್ನನುಸರಿಸಿರುವದೆಂದು ಪ್ರಕಟಣೆ ಕೊಟ್ಟರೆ ಅದನ್ನು ಸರಿಪಡಿಸಲು ಸರಕಾರವು ತಯಾರಿರುವರೆಂದೂ, ಪ್ರಜಾಮಂಡಲವು ತಪ್ಪಿ ನಡೆದಿರುವರೆಂದು ಪ್ರಕಟಿಸಿದರೆ ಸಂಸ್ಥಾನಾಧಿಕಾರಿಗಳು ಈ ವಿಚಾರವನ್ನು ಗಾಂಧಿಯವರ ಕೈಗೇ ಒಪ್ಪಿಸುವರೆಂದೂ ಹೇಳಿದರು. ಅಲ್ಲದೆ ಕಳೆದ ಸಂಧಾನದ ವಿಚಾರದಲ್ಲಿ ಅದನ್ನು ಮುರಿದವರು ಸರಕಾರದವರಲ್ಲವೆಂದೂ, ಸುಧಾರಣಾ ಕಮಿಟಿಯಲ್ಲಿ ಭಾಗ ವಹಿಸಲು ಪ್ರಜಾಮಂಡಲದವರು ನಿರಾಕರಿಸಿದರೆಂದೂ ಹೇಳಿದರು. ಈ ವಿಚಾರಗಳನ್ನು ಕೂಲಂಕುಶವಾಗಿ ವಿವೇಚಿಸಲು ಒಂದು ಕಮಿಟಿಯು ವಹಿಸಿ ನೇಮಕವಾಗಬಹುದೆಂದು ನಂಬಲಾಗಿದೆ. ಸರಕಾರ ಹಾಗೂ ಪ್ರಜಾ ಮಂಡಲವು ಗಾಂಧಿಜೀಯವರ ಆಗಮನವನ್ನು ಮನ್ನಿಸಿರುವರು. ರಾಜಕೋಟೆಯಲ್ಲಿಯ ಜನತೆಯು ಅವರ ಆಗಮನದಿಂದ ಉತ್ಸಾಹಭರಿತರಾಗಿರುವರು. ರಸ್ತೆಗಳಿಂದ ಮಹಾತ್ಮರ ನಿವಾಸಸ್ಥಾನದ ವರೆಗೆ ಜನರು ಕಿಕ್ಕಿರಿದು ನಿಂತಿರುವರು. ಅವರ ದರ್ಶನಕ್ಕಾಗಿ ಸಾವಿರಾರು ಜನರು ಪ್ರತೀ ಸ್ಟೇಶನುಗಳಲ್ಲಿ ಹಂಬಲಿಸುತ್ತಿರುವರು.

ರೆಸಿಡೆಂಟ್ ಗಿಬ್ಸನ್ ಮತ್ತು ಗಾಂಧಿಯವರ ಭೇಟಿ.

ತಾ. 28 ರಲ್ಲಿ ಗಾಂಧಿಜೀಯವರು ರೆಸಿಡೆಂಟರಾದ ಗಿಬ್ಸನ್ನರನ್ನು ಬೆಳಿಗ್ಗೆ 10 ಗಂಟೆಗೆ ಕಂಡರು. ಗಿಬ್ಸನ್ನರು ಗಾಂಧಿಜೀಯವರನ್ನು ಆದರ ಪೂರ್ವಕ ಬರಮಾಡಿಕೊಂಡರು. ಅವರೊಳಗೆ ರಾಜಕೋಟೆ ಸತ್ಯಾಗ್ರಹ ಚಳವಳದ ವಿಚಾರ ಒಂದೂವರೆ ಗಂಟೆಯ ವರೆಗೆ ಸಂಭಾಷಣೆ ನಡೆಯಿತು. ಸುಧಾರಣಾ ಕಮಿಟಿಯ ವಿಚಾರ ಸರಕಾರವು ಪ್ರಕಟಿಸಿದ ನೋಟಿಫಿಕೇಶನಿನಲ್ಲಿ ಕಮಿಟಿಯ ಕೆಲಸದ ವಿಚಾರ ಬಹಿರಂಗಪಡಿಸಬೇಕೆಂದು ಪ್ರಜಾಮಂಡಲದವರ ಸೂಚನೆ ಮೊದಲಾದ ಈಗಿನ ವಿಚಾರಗಳ ಚರ್ಚೆ ನಡೆಯಿತು. ಗಾಂಧಿಯವರು ಹೋಗುವಾಗ ಗಿಬ್ಸನರವರು ಅವರನ್ನು ಅವರ ಕಾರಿನ ವರೆಗೆ ಹಿಂಬಾಲಿಸಿ ಹಸ್ತಲಾಘವದಿಂದ ಬೀಳ್ಕೊಟ್ಟರು. ಗಾಂಧೀಜಿಯವರು ರಾಜಕೀಯ ಕೈದಿಗಳನ್ನು ಸಂದರ್ಶಿಸಿದರು. ಜೈಲಿನಲ್ಲಿರುವ ಶ್ರೀ ಢೇಬಾರರವರು ತನ್ನನ್ನು ತನ್ನ ನಿವಾಸಸ್ಥಾನದಲ್ಲಿ ಕಾಣುವಂತೆ ಅನುಮಾಡಿಕೊಡಬೇಕೆಂಬ ಗಾಂಧಿಯವರ ಅಭಿಪ್ರಾಯದಂತೆ ಅವರನ್ನು ಜೈಲಿನಿಂದ ಬಿಟ್ಟಿದ್ದರು. ಅವರು ಗಾಂಧಿಯವರೊಡನೆ 2 ಗಂಟೆಗಳ ಕಾಲ ಮಾತಾಡಿ ಪುನಃ ಜೈಲಿಗೆ ಹೋದರು. ರಾಜಕೋಟೆಯ ವಿಚಾರಗಳನ್ನು ವಿಮರ್ಶಿಸಿ ಗಾಂಧೀಜಿಯವರು ಒಡನೆ ಒಂದು ಪ್ರಕಟಣೆಯನ್ನು ಹೊರಡಿಸಬಹುದೆಂದು ಊಹಿಸಲಾಗಿದೆ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಈ ವಾರ ಇಲ್ಲಿ ಏಲಕ್ಕಿ ಮಣಕ್ಕೆ ರೂ. 25 ಕಾಫಿ ಖಂಡಿಗೆ ರೂ. 110 ಕ್ರಯವಿದೆ.

ಇಲ್ಲಿಯ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ತಾರೀಕು 8ನೇ ಬುಧವಾರ ನಡೆಯುವದು.

ಎಜ್ಯುಕೇಷನಲ್ ಆಫೀಸರಾದ ಶ್ರೀ ಸಿ. ಯಂ. ರಾಮರಾಯರು ವಿದ್ಯಾ ಇಲಾಖೆಯ ಮೆಂಬರಾಗಿ ಕೌನ್ಸಿಲಿಗೆ ನೇಮಕ ಮಾಡಲ್ಪಟ್ಟಿರುವರು.

ತಾರೀಕು 7ನೇ ಆದಿತ್ಯವಾರ ಸಾಯಂಕಾಲ 5-30 ಗಂಟೆಗೆ ಇಲ್ಲಿಯ ವೇದಾಂತ ಸಂಘದಲ್ಲಿ ಶ್ರೀಕೃಷ್ಣ ಚೈತನ್ಯ ಜಯಂತ್ಯುತ್ಸವವು ನಡೆಸಲ್ಪಡುವದೆಂದೂ, ಎಲ್ಲರಿಗೂ ಆಹ್ವಾನವಿದೆಯೆಂದೂ ತಿಳಿಯುತ್ತೇವೆ.

ಕೊಡಗು ಟೆರಿಟೋರಿಯಲ್ ಪಟಲಾಮಿನ ರಿಕ್ರೂಟುಗಳ ತರಬೇತು ಈ ತಾ. 6 ರಿಂದಲೂ, ಹಳಬರ ತರಬೇತು ಬರುವ ತಾ. 6 ರಿಂದಲೂ ಇಲ್ಲಿ ಪ್ರಾರಂಭಿಸಲ್ಪಡುವದು.

ಇಲ್ಲಿಯ ಹೈಸ್ಕೂಲಿನ ಹೆಡ್ಮಾಸ್ಟರಾಗಿದ್ದ ಶ್ರೀ ಸಿ. ಯಂ. ರಾಮರಾಯ ಬಿ. ಎ. ಯವರು ಕೊಡಗಿನ ಎಜ್ಯುಕೇಷನಲ್ ಆಫೀಸರಾಗಿ ನೇಮಿಸಲ್ಪಟ್ಟಿರುವದರಿಂದ ವೀರಾಜಪೇಟೆ ಹೈಸ್ಕೂಲಿನ ಹೆಡ್ಮಾಸ್ಟರು ಶ್ರೀ ಪಟ್ಟಡ ಉತ್ತಪ್ಪ ಬಿ. ಎ. ಯವರನ್ನು ಇಲ್ಲಿಯ ಹೆಡ್ಮಾಸ್ಟರನ್ನಾಗಿಯೂ, ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರಾಗಿದ್ದ ಶ್ರೀ ಬಿದ್ದಂಡ ಕುಶಾಲಪ್ಪ ಬಿ. ಎ. ಡಿ. ಈ, ಇವರನ್ನು ವೀರಾಜಪೇಟೆ ಹೈಸ್ಕೂಲಿನ ಹೆಡ್ಮಾಸ್ಟರಾಗಿಯೂ ವರ್ಗಾಯಿಸಲಾಗಿದೆ.

ಮಾಲ್ದಾರೆ.

ಕಳೆದ ತಾ. 2ರಲ್ಲಿ ಶ್ರೀ. ಪಾಲೇಕಂಡ ಬೆಳ್ಯಪ್ಪನವರು ಇಲ್ಲಿ ಒಂದು ಹುಲಿಗೆ ಗುಂಡು ಹೊಡೆದು ಕೊಂದರು. ಅದರ ಉದ್ದ ತಲೆಯಿಂದ ಬಾಲದ ವರೆಗೆ 12 ಅಡಿ ಇತ್ತು. ಇಂಥಾ ದೊಡ್ಡ ಗಾತ್ರದ ಹುಲಿಯು ಕೊಡಗಿನಲ್ಲಿ ಕಾಣಲಿಕ್ಕೆ ಸಿಗುವದು ಅಪರೂಪವೆಂದು ತಿಳಿಯುತ್ತೇವೆ.

ವೀರಾಜಪೇಟೆ.

ಇಲ್ಲಿ ಈ ವಾರ ಭತ್ತ ಗಾಡಿಗೆ ರೂ. 40 ಕ್ರಯವಿರುವದಾಗಿ ತಿಳಿಯುತ್ತೇವೆ.

ಶನಿವಾರಸಂತೆ.

ಇಲ್ಲಿಯ ತಾಲೋಕು ಕಾಂಗ್ರೆಸ್ ಸದಸ್ಯರ ಮಹಾ ಸಭೆಯು ನಡೆದು ಶ್ರೀ ಗಳಾದ ಎಚ್. ಯಂ. ಪುಷ್ಪಣ್ಣ, ಕೆ. ಆರ್. ವೀರಪ್ಪ, ನಿಡ್ತ ಕೃಷ್ಣಮೂರ್ತಿ, ಯು. ಬಿ. ಮಲ್ಲಪ್ಪ, ಮುಳ್ಳೂರು ಪುಟ್ಟಪ್ಪ, ಎಚ್. ಸಿ. ರಾಜಾರಾವ್ ಮತ್ತು ಸಿಂಗೂರು ಮಾದಪ್ಪನವರುಗಳನ್ನೂ ತಾಲೋಕು ಕಾಂಗ್ರೆಸ್ ಕಮಿಟಿಗೂ, ಶ್ರೀ ಗಳಾದ ಎಚ್. ಯಂ. ಪುಷ್ಪಣ್ಣ, ನಿಡ್ತ ಕೃಷ್ಣಮೂರ್ತಿ ಮತ್ತು ಸಿಂಗೂರು ಮಾದಪ್ಪನವರನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ಆರಿಸಲಾಗಿದೆ.

ನಾಪೋಕ್ಲು.

ಬಲ್ಲಮಾವಟಿ ಗ್ರಾಮದ ಮೂದೇರಂಡ ಕರುಂಬಯ್ಯನವರ ಮಗಳೊಬ್ಬಳು ಕಳೆದ ತಾರೀಕು 24 ರಲ್ಲು ಕಾವೇರಿ ನದಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಳೆಂದು ತಿಳಿಯಬರುತ್ತದೆ.

ನಾಪೋಕ್ಲು ಜ್ಯುಬಿಲಿ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಬ್ಯಾಡ್ಮಿಂಟನ್ ಪಂದ್ಯಾಟದ ಫೈನಲಿನಲ್ಲಿ (ಐದು ಜನರ ಆಟದಲ್ಲಿ) ಮಡಿಕೇರಿಯ ಫ್ರೆಂಡ್ಸ್ ಟೀಮಿನವರು ಜ್ಯುಬಿಲಿ ಕ್ಲಬ್ಬಿನವರನ್ನು ಸೋಲಿಸಿ ಬೆಳ್ಳಿಯ ಬಟ್ಟಲನ್ನೂ, ಡಬ್ಬಲ್ಸ್ ಆಟದಲ್ಲಿ ಈ ಕ್ಲಬ್ಬಿನ ಮೆಂಬರುಗಳಾದ ಮೆ. ಗಳಾದ ಡಾ. ದೇವಯ್ಯನವರೂ ಮತ್ತು ಕೆ. ಯಂ. ಮಂದಣ್ಣನವರೂ, ಸಿಂಗಲ್ಸ್‌ನಲ್ಲಿ ಡಾ. ದೇವಯ್ಯನವರೂ ಗೆದ್ದು ಮೆಡಲುಗಳನ್ನು ಪಡೆದರು. ತಾ. 25 ರಲ್ಲು ಇನಾಮು ಹಂಚುವ ಸಮಾರಂಭವು ಮೆ. ಪಿ. ಯಂ. ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜ್ಯುಬಿಲಿ ಕ್ಲಬ್ಬಿನ ವಾರ್ಷಿಕ ಔತಣವೂ ಮಹಾ ಸಭೆಯೂ, ಕಳೆದ ತಾ. 27 ರಲ್ಲಿ ನಡೆಯಿತು. ಮುಂದಿನ ವರ್ಷಕ್ಕೆ ಡಾ. ಎ. ಪಿ. ಐಯ್ಯಪ್ಪನವರನ್ನು ಅಧ್ಯಕ್ಷರಾಗಿ ಆರಿಸಲಾಗಿದೆಯೆಂದು ಸುದ್ದಿ.

ಗಜೆಟ್ ವರ್ತಮಾನ.

ಉತ್ತರ ಕೊಡಗಿನ ಸುಬೇದಾರರಾದ ಮೆ. ಕೊಡಂದೇರ ಸುಬ್ಬಯ್ಯನವರು ರಿಟಯರಾಗುವ ಮುಂದೆ ಮಾರ್ಚಿ ತಾ. 1ರಿಂದ ರಜೆಯಲ್ಲಿ ಹೋಗುವದರಿಂದ ಬದಲು ಸುಬೇದಾರರಾಗಿ ಎಗ್ರಿಕಲ್ಚರಲ್ ಇನ್ಸ್‌ಪೆಕ್ಟರಾದ ಮೆ. ಕಂಡ್ರತಂಡ ಪೊನ್ನಪ್ಪನವರು ನೇಮಿಸಲ್ಪಟ್ಟಿರುವರು.

ಪದಾರ್ಥಗಳನ್ನು ಅಳೆಯುವಾಗ ಪದಾರ್ಥವನ್ನು ಪಾತ್ರೆಯ ಮೇಲೆ ಗುಡ್ಡೆಯಾಗಿ ತುಂಬಿ ಅಳೆಯಲಿಕ್ಕೆ ಕೂಡದೆಂದೂ, ತಲೆ ಸವರಿ ಅಳೆಯಬೇಕೆಂದೂ, ಪರೆಯ ವಿಷಯದಲ್ಲಿ 1½ ಇಂಚು ಚೌಕವಾಗಿರುವ ದೊಣ್ಣೆಯನ್ನು ಉಪಯೋಗಿಸಬೇಕೆಂದೂ ಪ್ರಕಟವಾಗಿದೆ. ಇದಕ್ಕೆ ತಕರಾರುಗಳಿದ್ದರೆ ಎರಡು ತಿಂಗಳ ಒಳಗೆ ಕಳುಹಿಸಿದರೆ ಪರ್ಯಾಲೋಚಿಸಲಾಗುವದೆಂದೂ ಪ್ರಕಟವಾಗಿದೆ.

ಸಿಬ್ಬಂದಿಕೋತಿಯ ನಿಮಿತ್ಯವಾಗಿ ದಕ್ಷಿಣ ಕೊಡಗು ಫಾರೆಸ್ಟು ಡಿವಿಜನಲ್ ಆಫೀಸು, ಉತ್ತರ ಕೊಡಗು ಡಿವಿಜನಲ್ ಫಾರೆಸ್ಟ್ ಆಫೀಸಿನೊಂದಿಗೆ ಸಂಯೋಜಿಸಲ್ಪಟ್ಟು 'ಕೊಡಗು ಫಾರೆಸ್ಟು ಡಿವಿಜನ್' ಎಂದು ಇನ್ನು ಮುಂದೆ ಕರೆಯಲ್ಪಡುವದು. ಡಿವಿಜನಲ್ ಆಫೀಸರ ಪತ್ರವ್ಯವಹಾರಗಳೆಲ್ಲಾ ಇನ್ನು ಮುಂದೆ ಚೀಫ್ ಫಾರೆಸ್ಟ್ ಆಫೀಸರ ಅಡ್ರೆಸಿಗೆ ಬರಾಯಿಸಲ್ಪಡಬೇಕೆಂದು ಪ್ರಕಟವಾಗಿದೆ.

ಜನವರಿ ತಿಂಗಳಲ್ಲಿ ಕೊಡಗಿನಲ್ಲಿ 314 ಜನನಗಳೂ, 302 ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ಉತ್ತರ ಕೊಡಗಿನ ಹಾರಂಗಿ, ಹರದೂರು ಮತ್ತು ಬೇತರಿಕಡು ದೋಣಿ ಹರಾಜು ಎಪ್ರಿಲ್ ತಾರೀಕು 21ರಲ್ಲಿ ಮಡಿಕೇರಿಯಲ್ಲೂ, ರಾಮಪುರ, ಶಿರಂಗಾಲ ದೋಣಿ ಹರಾಜು ಎಪ್ರಿಲ್ ತಾ. 25ರಲ್ಲಿ ಫ್ರೇಜರ್‌ಪೇಟೆಯಲ್ಲೂ, ಇಪ್ಪುಗಳಲೆ ಕೆಲಕೊಡ್ಲಿ ದೋಣಿ ಹರಾಜು ಎಪ್ರಿಲ್ 24ರಲ್ಲಿ ಸೋಮವಾರಪೇಟೆಯಲ್ಲೂ, ದಕ್ಷಿಣಕೊಡಗಿನ ದೋಣಿ ಹರಾಜು ಎಪ್ರಿಲ್ ತಾರೀಕು 26ರಲ್ಲು ದಕ್ಷಿಣ ಕೊಡ ತಾಲೋಕು ಕಚೇರಿಯ ಮುಂದೆಯೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಹರಾಜು ಮಾಡಿಸಲ್ಪಡುವದು.

ರಿಟ್ರೆಂಚ್‌ಮೆಂಟಿನ ವರ್ಗಾವರ್ಗಿ.

ಫಾರೆಸ್ಟು ಇಲಾಖೆ.

ಚೀಫ್ ಫಾರೆಸ್ಟು ಆಫೀಸರ ಆಫೀಸಿನ ಮೇನೇಜರಾಗಿದ್ದ ಮೆ. ನೆಲ್ಲಮಕ್ಕಳ ಮೇದಯ್ಯನವರನ್ನು ತತ್ಕಾಲ ಕೆಲಸದಿಂದ ನಿವೃತ್ತಿಗೊಳಿಸಿ, ಮೆ. ಸಂಜೀವರಾಯರು, ಮೇನೇಜರಾಗಿಯೂ, ಮೆ. ಕೆ. ಕುಂದರವರು ಎಕೌಂಟೆಂಟರಾಗಿಯೂ ಹಂಗಾಮಿಯಾಗಿ ನೇಮಿಸಲ್ಪಟ್ಟಿರುವರು. ಸದರಿ ಆಫೀಸಿನ ಮೆ. ಡಿ. ತಮ್ಮಯ್ಯನವರು ಸೋಮವಾರಪೇಟೆ ರೇಂಜ್ ಆಫೀಸಿಗೆ ವರ್ಗಾಯಿಸಲ್ಪಟ್ಟಿರುವರು.

ಪೋಲೀಸು ಇಲಾಖೆ.

ಪೋಲೀಸು ಸಬ್ ಇನ್ಸ್‌ಪೆಕ್ಟರುಗಳಾದ ಮೆ. ಕೋದಂಡ ಮುದ್ದಪ್ಪನವರು, ಮೆ. ಮಂಡೇಪಂಡ ಗಣಪತಿಯವರು, ಮೆ. ಬಿ. ಯಸ್. ಈರಪ್ಪನವರು ಮತ್ತು ಮೆ. ಕುಂಬೆರ ಪೊನ್ನಪ್ಪನವರು ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟಿರುವರು. ಮಡಿಕೇರಿ ಟವುನ್ ಮತ್ತು ಸಿದ್ದಾಪುರ ಪೋಲೀಸು ಸ್ಟೇಶನುಗಳು ವಜಮಾಡಲ್ಪಟ್ಟಿವೆ. ಪೋಲೀಸು ಸುಪರಿಂಟೆಂಡೆಂಟರವರ ಆಫೀಸಿನ ಹೆಡ್ ಗುಮಾಸ್ತರಾದ ಮೆ. ಕೇಳಪಂಡ ಐಯ್ಯಣ್ಣನವರು 4 ತಿಂಗಳು ರಜೆ ತೆಗೆದುಕೊಂಡ ಕಾರಣ ಮೆ. ಅನಂತ ಪದ್ಮನಾಭನವರು ಹೆಡ್ ಗುಮಾಸ್ತರಾಗಿಯೂ, ರಾ. ಸಾ. ಬಿಟ್ಟಿಯಂಡ ಮುತ್ತಣ್ಣನವರು ಮಡಿಕೇರಿ ಸರ್ಕಲಿನ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ ನೇಮಿಸಲ್ಪಟ್ಟಿರುವರು.

ಪೋಲೀಸು ಹೆಡ್ ಕಾನ್ಸ್‌ಟೇಬಲ್ ಶ್ರೀ ಪಿ. ಆರ್. ಗಣಪಯ್ಯನವರು ಸುಂಟಿಕೊಪ್ಪದಿಂದ ಸೋಮವಾರಪೇಟೆಗೂ, ಶ್ರೀ ದೇವಜನ ಅಪ್ಪಚ್ಚನವರು ಸೋಮವಾರಪೇಟೆಯಿಂದ ಸಂಪಾಜೆಗೂ, ಶ್ರೀ ಕೊಟ್ಟುಗತ್ತಿರ ಕಾಳಪ್ಪನವರು ಸರ್ಕಲ್ ಇನ್ಸ್‌ಪೆಕ್ಟರರ ಆಫೀಸಿನಿಂದ ಸುಂಟಿಕೊಪ್ಪಕ್ಕೂ, ಶ್ರೀ ಎ. ತಮ್ಮಯ್ಯನವರು ವೀರಾಜಪೇಟೆಯಿಂದ ಪೊನ್ನಂಪೇಟೆಗೂ, ಶ್ರೀ ಯಂ. ಜೋಯಪ್ಪನವರು ಸಿದ್ದಾಪುರದಿಂದ ಪೊನ್ನಂಪೇಟೆಗೂ, ಶ್ರೀ ಪಿ. ಅಪ್ಪಯ್ಯನವರು ಪೊನ್ನಂಪೇಟೆಯಿಂದ ಸಿದ್ದಾಪುರಕ್ಕೂ, ಶ್ರೀ. ಕೆ. ನಂಜುಂಡನವರು ಗೋಣಿಕೊಪ್ಪಲಿಂದ ಶ್ರೀಮಂಗಲಕ್ಕೂ, ಶ್ರೀ ಬಾಚಮಂಡ ಕರುಂಬಯ್ಯನವರು ಶ್ರೀಮಂಗಲದಿಂದ ಮಡಿಕೇರಿಗೂ ವರ್ಗಾಯಿಸಲ್ಪಟ್ಟಿರುವರು.

ಗುಮಾಸ್ತರುಗಳು.

ಅಸಿಸ್ಟೆಂಟ್ ಕಮಿಷನರ ಆಫೀಸಿನ ಮೆ. ಮಂಡೇಟಿರ ಸೋಮಯ್ಯನವರು ಇಂಗ್ಲಿಷ್ ಆಫೀಸಿಗೂ, ಮೆ. ಕೋಟೇರ ನಂಜುಂಡನವರು ಪೋಲೀಸು ಆಫೀಸಿಗೂ, ಕೌನ್ಸಿಲು ಆಫೀಸಿನ ಮೆ. ಮಾಳೇಟ್ಟಿರ ಚಿಟ್ಟಿಯಣ್ಣನವರು ಮಡಿಕೇರಿ ಮುನ್ಸಿಫ್ ಕೋರ್ಟಿಗೂ, ಲ್ಯಾಂಡ್ ರಿಕಾರ್ಡ್ ಆಫೀಸಿನ ಮೆ. ಕುಮಾರಪ್ಪನವರು ಸೋಮವಾರಪೇಟೆ ಸಬ್ ರಿಜಿಸ್ಟ್ರಿ ಗುಮಾಸ್ತರಾಗಿಯೂ, ಇಂಗ್ಲಿಷ್ ಆಫೀಸಿನ ಮೆ. ನೆಲ್ಲಮಕ್ಕಳ ದೇವಯ್ಯನವರು ವೀರಾಜಪೇಟೆ ಮುನ್ಸೀಫ್ ಕೋರ್ಟಿನ ಹೆಡ್ ಗುಮಾಸ್ತರಾಗಿಯೂ, ಕೋಆಪರೇಟಿವ್ ಆಫೀಸಿನ ಮೆ. ಬಿ. ಸಿ. ರುದ್ರಪ್ಪನವರು ಇಂಗ್ಲಿಷ್ ಆಫೀಸಿಗೂ, ಮಡಿಕೇರಿ ಮುನ್ಸೀಫ್ ಕೋರ್ಟಿನ ಮೆ. ಮುಂಡಂಡ ಚಿಟ್ಟಿಯಚ್ಚನವರು ಕೋಆಪರೇಟಿವ್ ಆಫೀಸಿಗೂ, ವೀರಾಜಪೇಟೆ ತಾಲೋಕು ಆಫೀಸಿನ ಮೆ. ಚಂಡಿರ ಬೆಳ್ಯಪ್ಪನವರು ಮಡಿಕೇರಿ ಮುನ್ಸೀಫ್ ಕೋರ್ಟಿಗೂ, ರಿಜಿಸ್ಟ್ರೇಶನ್ (ಎಷ್ಯೂರೆನ್ಸ್) ಗುಮಾಸ್ತರಾದ ಮೆ. ಜೊಟ್ಟಿಂಗಳ ನಾಣಯ್ಯನವರು ಟ್ರೆಜರಿ ಆಫೀಸಿಗೂ, ಪೊನ್ನಂಪೇಟೆ ಅಸಿಸ್ಟೆಂಟ್ ಪಾರುಪತ್ಯಗಾರರಾದ ಮೆ. ರಶೀದ್ ಖಾನರವರು ವೀರಾಜಪೇಟೆ ತಾಲೋಕು ಆಫೀಸಿಗೂ ವರ್ಗಾಯಿಸಲ್ಪಟ್ಟಿರುವರು.

ಲ್ಯಾಂಡ್ ರಿಕಾರ್ಡ್ ಆಫೀಸಿನ ಹೆಡ್ ಗುಮಾಸ್ತರಾದ ಮೆ. ಯನ್. ಆರ್. ಸುಬ್ರಾಯನವರು ಕೆಲಸದಿಂದ ನಿವೃತ್ತರಾದರು.

ವಿದ್ಯಾ ಇಲಾಖೆ.

ಕಳೆದ ವಾರ ಪ್ರಕಟಿಸಿದ್ದ ವರ್ಗಾವರ್ಗಿಯಲ್ಲದೆ ಮಿಸೆಸ್ ಅಗಾತ ಡಿಮೆಲೊರವರನ್ನು ವೀರಾಜಪೇಟೆ ಮೋಡೆಲ್ ಸ್ಕೂಲಿಗೂ, ಮಿಸೆಸ್ ಮಾಳೇಟಿರ ಮುದ್ದಮ್ಮನವರನ್ನು ನಾಪೋಕ್ಲು ಮೋಡೆಲ್ ಶಾಲೆಗೂ, ಶ್ರೀ ಮುಕ್ತಿರಾಯರನ್ನು ಲೋವರ್ ಗ್ರೇಡಿನಲ್ಲಿ ಸೋಮವಾರಪೇಟೆ ಮೋಡೆಲ್ ಶಾಲೆಗೂ, ಶ್ರೀ ಕೆ. ಆರ್. ಕೃಷ್ಣಯ್ಯನವರನ್ನು ಲೋವರ್ ಗ್ರೇಡಿನಲ್ಲಿ ಪೊನ್ನಂಪೇಟೆಯಿಂದ ನಾಪೋಕ್ಲಿಗೂ, ಶ್ರೀ ಸಿ. ಚೆನ್ನವೀರಪ್ಪನವರನ್ನು ಮಡಿಕೇರಿ ಹೈಸ್ಕೂಲಿನ ಡ್ರಾಯಿಂಗ್ ಮಾಸ್ಟರಾಗಿಯೂ, ಶ್ರೀ ಮಣವಟ್ಟಿರ ಮಾಚೈಯ್ಯನವರನ್ನು ಡ್ರಿಲ್ ಮಾಸ್ಟರಾಗಿಯೂ, ನೇಮಕ ಮಾಡಲಾಗಿದೆ. ಅಲ್ಲದೆ ವೀರಾಜಪೇಟೆಯ ಮೋಡೆಲ್ ಶಾಲೆಯ ಶ್ರೀ ಯಂ. ಬಿ. ಮಾದಪ್ಪನವರಿಗೆ ಕೊಟ್ಟಿದ್ದ ನೋಟೀಸನ್ನು ರದ್ದು ಮಾಡಲಾಗಿದೆ.

ಹಿಂದೂದೇಶ.

ತನ್ನ ಪ್ರಜೆಗಳಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂಬ ಇಚ್ಛೆಗೆ ವಿರೋಧವಾಗಿ, ಸಂಸ್ಥಾನದ ಉಚ್ಚಾಧಿಕಾರಿಗಳು, ತಡೆಯುವದರಿಂದ, ಈ ಗಂಡಾಂತರದಿಂದ ಪಾರಾಗಲು, ಇಂದೋರಿನ ಮಹಾರಾಜ ಹೋಲ್ಕರರು ಯೋಚಿಸಿದ್ದಾರೆ. ತಾನೇ, ತನ್ನ ಇಚ್ಛೆಯಿಂದ, ಹಿಂದಿನ ರಾಜರಾದ ಸರ್ ತುಕೋಜಿರಾವ್‌ರನ್ನು ರಾಜ್ಯವಾಳಲು ನೇಮಿಸಲಿರುವರಂತೆ.

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಚೈನಾ - ಜಪಾನು.

ಯುದ್ಧವು ಯಥಾರೀತಿ ಪ್ರಬಲವಾಗಿ ನಡೆಯುತ್ತಿವೆ. ಚೀನಾ ಸೈನಿಕರು ಸಣ್ಣ ಸಣ್ಣ ತಂಗಡಗಳಾಗಿಕೊಂಡು ಜಪಾನರು ವಶಪಡಿಸಿಕೊಂಡಿರುವ ಪ್ರಾಂತಗಳಲ್ಲಿ ಗಲಭೆ ಎಬ್ಬಿಸಿ ಪುನಹ ವಶಪಡಿಸಿಕೊಳ್ಳುತ್ತಿದ್ದಾರೆ. ಚೀನಾದ ವಾಯುವ್ಯ ದಿಗ್ಭಾಗದ ಮೂಲೆಯಲ್ಲಿರುವ ಕಾನಸೂ ಆಧಿಪತ್ಯದ ರಾಜಧಾನಿಯಾದ ಲಾನ್‌ಚೌವನ್ನು ವಶಪಡಿಸಿಕೊಳ್ಳಲು ಬಂದ ಜಪಾನರ ಒಂಭತ್ತು ವಿಮಾನಗಳನ್ನು ಚೀನಾದವರು ಹಿಂದಕ್ಕಟ್ಟಿ ಗುಂಡಿನಿಂದ ಹೊಡೆದು ಕೆಡವಿಬಿಟ್ಟರು. ಚೀನಾದ ಆಗ್ನೇಯ ದಿಗ್ಭಾಗದಲ್ಲಿ ಬ್ರಿಟಿಷರಿಗೆ ಸೇರಿದ ಹಾಂಗ್‌ಕಾಂಗ್ ಪ್ರದೇಶದ ಬಳಿಯಲ್ಲಿರುವ ಚೀನಿಯರ ಒಂದು ಗ್ರಾಮದ ಮೇಲೆ ಸಿಡಿಮದ್ದಿನ ಗುಂಡುಗಳನ್ನೆಸೆಯಲಾಗ ಬ್ರಿಟಿಷರ ಪ್ರದೇಶಕ್ಕೂ ಬಿದ್ದು ಮೂರು ಜನರು ಹತರಾದರು. ಬ್ರಿಟಿಷ್ ಅಧಿಕಾರಿಗಳು ಇದನ್ನು ಪ್ರತಿಭಟಿಸಲಾಗಿ ಇದು ಆಕಸ್ಮಿಕ ನಡೆದ ಒಂದು ಅಪರಾಧವೆಂದೂ, ಇದರ ನಷ್ಟವನ್ನು ತಾವು ಭರ್ತಿಮಾಡುವುದಾಗಿಯೂ ಜಪಾನರು ತಿಳಿಸಿರುವರು. ಜಪಾನರು ಒಂದೆಡೆ ಜಯಿಸುತ್ತಾ ಹೋದರೆ ಮತ್ತೊಂದೆಡೆ ಚೀನೀಯರು ಅದನ್ನು ಪುನಹ ವಶಪಡಿಸಿಕೊಳ್ಳುತ್ತಾ ಬರುತ್ತಿರುವರು. ಇದರಿಂದಾಗಿ ಜಪಾನರು ಬಳಲಿ ಬೆಂಡಾಗಿರುವರು. ಚೀನಿಯರು ಧೃತಿಗೆಡದೆ ಜಪಾನರ ಅಧಿಕಾರವನ್ನು ತಿರಸ್ಕರಿಸಿ ಪ್ರಾಣಬಲಿ ಕೊಡಲು ತಯಾರಿರುವರು. ಇವರಲ್ಲವೇ ದೇಶಪ್ರೇಮ! ಇವರಲ್ಲವೇ ಸ್ವಾತಂತ್ರ್ಯಾಭಿಲಾಷೆಯ ಕುರುಹು?

ಸ್ಪೇಯಿನ್.

ಜನರಲ್ ಫ್ರಾಂಕೋವು ಈ ವರೆಗೆ ತಾನು ನಡೆಸಿದ ಬಂಡಾಯದಲ್ಲಿ ಕೃತಕೃತ್ಯನಾಗಿ ಸ್ಪೇಯಿನಿನ ಬಹು ಭಾಗವನ್ನು ತನ್ನ ವಶಪಡಿಸಿಕೊಂಡಿರುವನು. ಇಟಲಿ ಹಾಗೂ ಜರ್ಮನಿಯ ಅಪ್ರತ್ಯಕ್ಷ ಸಹಾಯದಿಂದ ಇಂದು ಸ್ಪೇಯಿನಿನ ಪ್ರಮುಖ್ಯ ನಗರಗಳನ್ನು ಕೈವಶ ಮಾಡಿಕೊಂಡು ಮುಂದುವರಿಯುತ್ತಿರುವನು. ಸರ್ಕಾರದ ಪಕ್ಷದವರು ಇವನ ಹಾವಳಿಯನ್ನು ತಡೆಯಲಾರದೆ ಮ್ಯಾಡ್ರಿಡಿಗೆ ತಮ್ಮ ಬಿಡಾರವನ್ನು ಸಾಗಿಸಿರುವರು. ಆದರೆ ಅಲ್ಲಿಯೂ ಅವರಿಗೆ ಶಾಂತಿ ದೊರೆಯದು. ಫ್ರಾಂಕೋವು ಇದನ್ನು ಇನ್ನೊಂದು ವಾರದೊಳಗಾಗಿಯೇ ವಶಪಡಿಸಿಕೊಳ್ಳುವದರಲ್ಲಿದ್ದಾನೆ. ಸರಕಾರ ಪಕ್ಷದಲ್ಲಿ ಈಗ ದ್ವಿಭಾಗವಾಗಿರುವದು. ಕೆಲವರು ಸ್ಪೇಯಿನಿನ ಸ್ವಾತಂತ್ರ್ಯಕ್ಕಾಗಿ, ಪ್ರಜಾ ಪ್ರಭುತ್ವದ ಏಳಿಗೆಗಾಗಿ ಒಬ್ಬನೇ ಒಬ್ಬ ವೀರ ಯೋಧನಿರುವ ವರೆಗೆ ಕದನವನ್ನು ಮುಂದುವರಿಸಬೇಕೆಂದು ಹೇಳುತ್ತಿರುವರು. ಕೆಲವರು ಯುದ್ಧವು ಸಾಕು. ಬಂಡುಗಾರರೊಡನೆ ಒಪ್ಪಂದ ಮಾಡಿಕೊಂಡು ತಣ್ಣಗೆ ಕೂಡ್ರುವದು ಲೇಸೆಂದೆನ್ನುತ್ತಿರುವರು. ಅಂದ ಮೇಲೆ ಇದರಿಂದ ಜನರಲ್ ಫ್ರಾಂಕೋರವರಿಗೆ ಅನುಕೂಲವಾಯಿತು. ಜನರಲ್ ಫ್ರಾಂಕೋರೇ ವಿಜಯವೀರರೆಂದೂ, ಅವರ ರಾಜ್ಯಾಡಳಿತವೇ ಕ್ರಮಬದ್ಧವಾದ್ದೆಂದೂ ಬ್ರಿಟಿಷರು ಮತ್ತು ಫ್ರೆಂಚರು ಒಪ್ಪಿಕೊಳ್ಳಲು ತೀರ್ಮಾನಿಸಿರುವರು. ಹೀಗೆ ಬ್ರಿಟಿಷ್ ಮತ್ತು ಫ್ರೆಂಚರು ಪ್ರಕಟಿಸಿದ ಕೂಡಲೇ ಸ್ಪೇಯಿನ್ ಸರ್ಕಾರದ ಅಧ್ಯಕ್ಷರಾದ ಸಿನ್ಯೋರ್ ಅಜಾನರು ತಮ್ಮ ಉದ್ಯೋಗವನ್ನು ತ್ಯಜಿಸಿ ಸ್ಪೇಯಿನನ್ನು ಬಿಟ್ಟು ಬಿಡಲಿರುವರು. ಹೀಗೆ ನಿರಂಕುಶ ಅಧಿಕಾರ ಅಥವಾ ಸರ್ವಾಧಿಕಾರವನ್ನು ಪ್ರಜಾಪ್ರಭುತ್ವ ಹಿತಕಾಂಕ್ಷಿಗಳೆಂದು ಘೋಷಿಸುವ ಬ್ರಿಟನು ಮತ್ತು ಫ್ರಾನ್ಸು ಮನ್ನಿಸಿ ಪ್ರಜಾಪ್ರಭುತ್ವದ ಕೊಲೆ ಮಾಡಿರುವರೆಂದರೆ ತಪ್ಪಾಗಲಿಕ್ಕಿಲ್ಲ. ಹೀಗೆ ಸಣ್ಣ ಪುಟ್ಟ ಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಮಣ್ಣು ಹಾಕುತ್ತಿರುವ ಪ್ರಜಾಸತ್ತೆಯ ಯುರೋಪಿನ ಈ ಸ್ವಾರ್ಥ ಮನೋವೃತ್ತಿಗೆ ತಡೆಯಿಲ್ಲವೇ?

ಆಫ್ರಿಕಾ.

ಬ್ರಿಟಿಷ್ ಸರ್ಕಾರವು ಆಫ್ರಿಕದಲ್ಲಿಯ ಭಾರತೀಯರನ್ನು ನಾನಾ ರೀತಿಯಿಂದ ಕಷ್ಟಪಡಿಸುತ್ತಿರುವರು. ಆದ್ದರಿಂದಲೇ ಭಾರತದಿಂದ ವಲ್ಲಭಭಾಯಿ ಪಟೇಲರು ಅಲ್ಲಿಗೆ ಹೋಗುವ ವಿಚಾರವೂ ಇರುವದು. ಆದರೆ ಇತ್ತಲಾಗಿ ಬ್ರಿಟಿಷರು ಆಫ್ರಿಕದಲ್ಲಿನ ಉತ್ತಮ ಸ್ಥಳಗಳನ್ನು ಬ್ರಿಟಿಷರಿಗಾಗಿಯೇ ಮೀಸಲಿರಿಸುವ ಕಾನೂನನ್ನು ತರಲು ಯೋಚಿಸಿರುವರು. ಈ ವಿಚಾರದಲ್ಲಿ ಭಾರತೀಯರ ಖಂಡನೆ ಫಲಕಾರಿಯಾಗುವಂತೆ ಕಾಣದ್ದರಿಂದ ಪೂರ್ವ ಆಫ್ರಿಕದ ಭಾರತೀಯ ಕಾಂಗ್ರೆಸು ಈ ಕಾನೂನನ್ನು ಮುರಿಯುವ ಹಂಚಿಕೆ ಮಾಡುತ್ತಿದೆ. ಆಫ್ರಿಕೆಯಲ್ಲಿ ಬ್ರಿಟಿಷರು ಮಾಡುತ್ತಿರುವ ಈ ಅಧಿಕ ಪ್ರಸಂಗದ ಪರಿಣಾಮ ಏನಾಗುವದೋ ನಿರೀಕ್ಷಣೀಯ.

ಜರ್ಮನಿ.

ನಾಜಿ ಪಾರ್ಟಿ ಸ್ಥಾಪನೆಯ ದಿನೋತ್ಸವವನ್ನು ಆಚರಿಸುವ ಸಮಾರಂಭದಲ್ಲಿ ಹಿಟ್ಲರನು, ಯುದ್ಧ ಪ್ರೇರಕರಿಗೆ 'ನಾನೇನು ಹೆದರುವ ಹಾಗಿಲ್ಲ. ಯುದ್ಧ ಪ್ರೇರಣೆಯ ದೆಸೆಯಿಂದ ರಾಷ್ಟ್ರಗಳನ್ನು ಸಮರದ ಹುಚ್ಚಾಟಕ್ಕೆ ಅಂಧರು ಮಾಡಿದರೆ ನಾವಾದರೂ ಸುಮ್ಮನಿರೆವು. ಆದರೆ 1918 ರಲ್ಲಾದಂಥ ಸಂಧಿ ಈ ಬಾರಿ ಆಗದು' ಎಂದಿರುವನು. ಈ ಭಾಷಣವು ಹಿಟ್ಲರನ ಮನವನ್ನು ತೋರಿಸುವದು. ಒಟ್ಟಿನಲ್ಲಿ ಶಾಂತಿ ಉಳಿಯುವಂತೆ, ಬ್ರಿಟನ್ ಜರ್ಮನಿಯ ಸಖ್ಯ ಅಳಿಯದಂತೆ ತನ್ನ ಕಾರ್ಯಕ್ರಮಗಳಿಗೆ ಭಂಗ ಬಾರದಂತೆ ಮಾಡುವ ಹಿಟ್ಲರನ ಯೋಜನೆಗಳು ಬಹಿರಂಗಕ್ಕೆ ಬಂದವು.

ಬ್ರಿಟನು.

ಅನಾಥ ರಾಷ್ಟ್ರಗಳಿಗೆ ಸಹಾಯ ಮಾಡುವ, ಜಗತ್ತಿನ ಶಾಂತಿಗಾಗಿ ದುಡಿಯುವ ಮತ್ತು ಸಿಡುಕಿನ ಮಾತುಗಳನ್ನು ಸ್ಮರಿಸಿ ಶಾಂತಿಯನ್ನವಲಂಬಿಸುವ ಒಂದು ಕೀರ್ತಿ ಪಡೆದ ರಾಷ್ಟ್ರವಿರುವುದಾದರೆ ಅದು ಬ್ರಿಟನು. ಈ ಮಾರ್ಪಾಡು ಬ್ರಿಟನಿಗೆ **ಕಳೆದ ಘೋರ ಸಂಗ್ರಾಮದ ನಂತರ** ಬಂದದ್ದು. ಸರ್ವಾಧಿಕಾರಿಗಳ ಶಕ್ತಿ ಯೂರೋಪಿನಲ್ಲಿ ಮೆರೆಯತೊಡಗಿದಾಗಿನಿಂದಲೂ ಬ್ರಿಟಿಷ್ ಪ್ರಧಾನರನ್ನು ಅವಿವೇಕಿ ಎನ್ನುವದೂ, ಹಿಟ್ಲರ್ ಮುಸಲನಿಗಳ ಮಾತಿಗೆ ಬ್ರಿಟನು ತಲೆತೂಗುವ ಪರಿಯೆನ್ನುವದೂ ಸಾಗುತ್ತಲಿವೆ. ಆದರೆ ಬ್ರಿಟನ್ ಹಾಗಿಲ್ಲ. ಬ್ರಿಟಿಷ್ ಪ್ರಧಾನರು ಏನೇ ಇರಲಿ, ಅಂತೂ ಈ ಅವರ ಹುಚ್ಚುತನದಲ್ಲಿ ಬ್ರಿಟನಿನ ಲಾಭವು ಅಡಗಿದೆ. ಮ್ಯೂನಿಕ್ ಒಪ್ಪಂದದ ಸಮಯದಲ್ಲಿ ಬ್ರಿಟನು ನಿರ್ಬಲನಿತ್ತು. ಆದರೆ ಇಂದು ಸ್ಪೇಯಿನಿನಲ್ಲಿ ಫ್ರಾಂಕೋವಿನ ಅಧಿಕಾರವನ್ನು ಅಂಗೀಕರಿಸುವಾಗ್ಯೆ ಫ್ರಾನ್ಸನ್ನು ತನ್ನ ಜೊತೆಗೆ ಸೇರಿಸಿಕೊಂಡು ಭದ್ರತೆಯನ್ನು ಹೊಂದಿದೆ. ಇನ್ನೂ ಹೀಗೆಯೇ ಇತರ ರಾಷ್ಟ್ರಗಳೊಡನೆ ತನ್ನ ಸ್ನೇಹವನ್ನು ಹಬ್ಬಿಸುತ್ತಿದೆ. ಅಬಿಸೀನಿಯಾದ ಅಂತ್ಯದ ವೇಳೆಯಲ್ಲಿ ಇಟಲಿಯೊಡನೆ ಸಂಧಿ ಮಾಡಿತು. ಝೆಕೊಸ್ಲೊವಾಕಿಯಾದ ಬಲಿದಾನದ ಸಮಯದಲ್ಲಿ ಜರ್ಮನರೊಡನೆ ಒಪ್ಪಂದ. ಈಗ ಸ್ಪೇಯಿನಿನೊಡನೆ ಸಂಧಿ ಮಾಡಿದೆ. ಮುಂದೆ ಜಪಾನರೊಡನೆಯೂ ಸಂಧಿ ಮಾಡಬಹುದೇನೋ? ಅಂತು ಎಲ್ಲ ರಾಷ್ಟ್ರಗಳೊಡನೆ ತಮ್ಮ ಸ್ನೇಹವನ್ನುಬ್ಬಿಸಿಕೊಂಡು ತನ್ನ ಪ್ರಗತಿಯನ್ನು ಸಾಧಿಸುತ್ತಿರುವ ಬ್ರಿಟನರು ಹುಚ್ಚರೇನು? ಯಾರು ಏನೆಂದರೂ ಏನಾಗುವದು? ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳಬೇಕು. ತಮ್ಮ ಸ್ಥಿತಿಯು ಅಬಾಧಿತವಾಗಿ ಉಳಿಯಬೇಕು ಎಂದು ಪ್ರಯತ್ನಿಸುತ್ತಿರುವ ಬ್ರಿಟನರು ಹುಚ್ಚರೇ?

ಮಡಿಕೇರಿ ತಾಲೋಕಿನ ಕಾಂಗ್ರೆಸ್ ಸದಸ್ಯರ ಮಹಾಸಭೆ.

ತಾರೀಕು 27-2-39ರಲ್ಲಿ ಮಡಿಕೇರಿ ತಾಲೋಕಿನ ಕಾಂಗ್ರೆಸ್ ಸದಸ್ಯರ ಮಹಾ ಸಭೆಯು ಕೆ. ವಿ ಗಿರಿ, ಬಿ. ಎ. ಬಿ.ಎಲ್.ರವರ ಅಧ್ಯಕ್ಷತೆಯಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆದು ಗತ ವರ್ಷದ ಕಾರ್ಯಕಲಾಪಗಳನ್ನು ಓದಿ ಒಪ್ಪಿದ ನಂತರ ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಗೆ ಶ್ರೀಮತಿಗಳಾದ ಬಿ. ಟಿ. ಗೌರಮ್ಮ ಮತ್ತು ಮಂಡ್ಯಂಡ ಸೀತಮ್ಮನವರುಗಳನ್ನೂ, ಮೆ. ಗಳಾದ ಡಾ. ಬಿ. ಕೆ. ನಂಜುಂಡೇಶ್ವರ, ಚೆಪ್ಪುಡಿರ ಯಂ. ಪೂಣಚ್ಚ, ಕೆ. ಯಂ. ದೇವಯ್ಯ, ಎ ಎಸ್. ಮಾಚಯ್ಯ, ಕೋಚನ ದೊಡ್ಡಯ್ಯ, ಬಿ. ಜಿ. ಗಣಪಯ್ಯ, ಬಿ. ಡಿ ಗಣಪತಿ, ಎ. ಬಿ. ಮುತ್ತಪ್ಪ, ಮತ್ತು ಪೂಜಾರಿರ ರಾಮಪ್ಪನವರುಗಳನ್ನೂ ಆರಿಸಲಾಯಿತು. ಇವರ ಪೈಕಿ ಡಾ. ಬಿ. ಕೆ. ನಂಜುಂಡೇಶ್ವರರವರು ಅಧ್ಯಕ್ಷರು, ಎ. ಎಸ್. ಮಾಚಯ್ಯನವರು ಖಜಾನಿಯರು ಪಿ. ಎಸ್ ರಾಮಪ್ಪನವರು ಸೆಕ್ರೆಟರಿ.

ಮುಂದಿನ ವರ್ಷದ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀಮತಿ ಬಿ. ಟಿ. ಗೌರಮ್ಮ, ಮೆ. ಗಳಾದ ಡಾ. ಬಿ. ಕೆ.ನಂಜುಂಡೇಶ್ವರ, ಎಸ್ ಮಾಚಯ್ಯ, ಕೆ. ಯಂ. ದೇವಯ್ಯ ಮತ್ತು ಸಿ. ಯಂ. ಪೂಣಚ್ಚನವರುಗಳನ್ನು ಪ್ರತಿನಿಧಿಗಳಾಗಿ ಆರಿಸಲಾಯಿತು.

ಪಿ. ಯಸ್. ರಾಮಪ್ಪ.
ಸೆಕ್ರೆಟರಿ, ತಾಲೋಕು ಕಮಿಟಿ.

ಪ್ರಕಟಣೆ.

ಆಸ್ಪತ್ರೆಯಲ್ಲಿ ಪ್ರತಿ ತಿಂಗಳಲ್ಲಿ ರಕ್ತದ ಕೊರತೆಯಿಂದ ಅನೇಕ ರಾಯಿಲಸ್ಥರು (ಮುಖ್ಯವಾಗಿ ಗರ್ಭಿಣಿ ಹೆಂಗಸರು) ಸಾಯುವರು. ಸ್ಥಳೀಯ ಜೈಲಿನ ಕೈದಿಗಳು ಅವರ ರಕ್ತವನ್ನು ಸಂತೋಷದಿಂದ ಕೊಡುತ್ತಿರುವರು. ಆದರೆ ಆಸ್ಪತ್ರೆಯ ಆವಶ್ಯಕತೆಗೆ ಬೇಕಾಗುವಷ್ಟು ರಕ್ತವು ಬಾರದಿದ್ದುದರಿಂದ ಅನೇಕ ರಾಯಿಲಸ್ಥರು ಉಪಕಾರ ಹೊಂದದೆ ಪ್ರಾಣ ತೊರೆಯುತ್ತಿರುವರು.

ರಕ್ತ ಕೊಡುವದು ಪುಣ್ಯ ಕೆಲಸವೆಂದು ಭಾವಿಸಿ ಪಬ್ಲಿಕ್ ಜನತೆಯಲ್ಲಿ ಯಾರಾದರೂ ಅವರ ರಕ್ತವನ್ನು ಕೊಡಲು ಒಪ್ಪುವದಾದರೆ ಸಿವಿಲ್ ಸರ್ಜನರಿಗೆ ಅಥವ ಆಸ್ಪತ್ರೆಯ ಡಿಸ್ಪೆನ್ಸರಿಯಲ್ಲಿರುವ ಮೆಡಿಕಲ್ ಆಫೀಸರಿಗೆ ತಿಳಿಸಬೇಕೆಂದು ಕೇಳಿಕೊಳ್ಳಲಾಗಿದೆ. ಉಪಯೋಗಿಸಲು ತಕ್ಕದಾದ ರಕ್ತವೆಂದು ಕಂಡು ಬಂದರೆ ಅಂಥವರನ್ನು ರಕ್ತದಾನ ಮಾಡುವವರೆಂದು ಸ್ವೀಕರಿಸಲಾಗುವುದು. ರಕ್ತವನ್ನು ಕೊಡುವವರಿಂದ ಕೊಡುವವರಿಗೆ ತೊಂದರೆಯೇನೂ ಆಗದು. ರಕ್ತದಾನ ಮಾಡುವವರಿಗೆ ಪ್ರತಿ ಸಲಕ್ಕೆ ಸರಕಾರದಿಂದ ರೂ 5 ಬಹುಮಾನ ಕೊಡಲಾಗುವುದು.

ಜಿ. ಪಿ. ಚಾರ್ಲಿವುಡ್,
ಕ್ಯಾಪ್ಟನ್, ಐ. ಯಂ. ಯಸ್.
ಸಿವಿಲ್ ಸರ್ಜನ್, ಮಡಿಕೇರಿ.

ಕೇರಳ ಆಯುರ್ವೇದಿಕ್ ವೈದ್ಯಶಾಲಾ.

ವೀರರಾಜೇಂದ್ರಪೇಟೆ.

ಈ ವೈದ್ಯಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿಸುತ್ತವೆ:- ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಅಲ್ಲದ,

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ,
ಕೆ. ಪಿ. ಪಣಿಕರ್,
ವೈದ್ಯ & ಅಸ್ಟ್ರಲಜರ್, ರಿಜಿಸ್ಟರ್ಡ್,
ಮೆಡಿಕಲ್ ಪ್ರಾಕ್ಟಿಷನರ್,
52-1 ವೀರಾಜಪೇಟೆ

ಗ್ರಾಮಾಭಿವೃದ್ಧಿ ಕಮಿಟಿ ಮೀಟಿಂಗು.

ತಾ. 30-1-30ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಕಮಿಶನರವರ ಅಧ್ಯಕ್ಷತೆಯಲ್ಲಿ ನಡೆದ ಕೊಡಗು ಗ್ರಾಮಾಭಿವೃದ್ಧಿ ಫಂಡಿನ ನಡವಳಿಕೆ.

ಡಿ. ಬೋರ್ಡಿನ ಪ್ರೆಸಿಡೆಂಟರಲ್ಲದೆ ಬಾಕಿ ಎಲ್ಲಾ ಸದಸ್ಯರು ಹಾಜರಿದ್ದರು.

ಕಳೆದ ಮೀಟಿಂಗಿನ ನಡವಳಿಕೆಯನ್ನು ಓದಿ ಅಂಗೀಕರಿಸಲಾಯಿತು.

ಮೊದಲಿನ ಮೀಟಿಂಗುಗಳಲ್ಲಿ ಪಾಸಾದ ಠರಾವುಗಳ ಮೇಲೆ ಯಾವ ಕಾರ್ಯಕ್ರಮ ಕೈಕೊಳ್ಳಲಾಗಿದೆಯೆಂದು ವಿವೇಚಿಸಲಾಯಿತು.

ಠರಾವು ನಂ. 13.

ಕಡಿಕೇರಿಗೆ ರಸ್ತೆ.

1. ಜಮಾಬಂದಿ ಮತ್ತು ಇತರ ತುರ್ತ ಕೆಲಸದ ಕಾರಣಗಳಿಂದ ಆ ರಸ್ತೆಯನ್ನು ಅಜಮಾಯಿಸಲು ಪಾರುಪತ್ಯಗಾರರ ಸಹಾಯ ಸಿಗಲಿಲ್ಲವೆಂದೂ, ಆದುದರಿಂದ ಅದನ್ನು ಅಜಮಾಯಿಸಲಿಲ್ಲವೆಂದೂ ಎಗ್ಸಿಕ್ಯೂಟಿವ್ ಇಂಜಿನೀಯರರು ಹೇಳಿದರು. ಇಂಥಾ ವಿಚಾರಗಳಲ್ಲಿ ಪಾರುಪತ್ಯಗಾರರಿಗಿಂತ ಶ್ಯಾನುಭೋಗರ ಸಹಾಯವೇ ಹೆಚ್ಚು ಪ್ರಯೋಜನಕಾರಿಯಾಗಿರುವುದೆಂದು ಆವರಿಗೆ ಸೂಚಿಸಿದ್ದರಿಂದ ಮತ್ತೊಂದು ಮೀಟಿಂಗಿಗೆ ಅದನ್ನು ಅಜಮಾಯಿಸಿ ರಿಪೋರ್ಟು ಕಳುಹಿಸಲು ಒಪ್ಪಿಕೊಂಡರು.

ಈ ವಿಚಾರದಲ್ಲಿ ಖರ್ಚಾಗುವ ಹಣದ ⅓ನೇ ಅಂಶವನ್ನು ಡಿ. ಬೋರ್ಡಿನಿಂದ ಕೊಡುವ ಬಗ್ಗೆ ಅವರಿಂದ ಯಾವ ಉತ್ತರ ಬಂದಿದೆಯೆಂದು ಶ್ರೀ. ಬಿ. ಯಂ. ಕಾರ್ಯಪ್ಪನವರು ಕೇಳಿದ್ದಕ್ಕೆ ಈ ವಿಚಾರ ಇನ್ನೂ ತೀರ್ಮಾನವಾಗಿಲ್ಲವೆಂದು ಸೂಚಿಸಿದರು.

ಠರಾವು ನಂ. 6.

ಹಣ್ಣುಗಳ ರಸ ತೆಗೆದು ಕೆಡದಂತೆ ಇಡುವದು.

2. ಈ ವಿಚಾರವನ್ನು ವ್ಯವಸಾಯ ಪರಿಶೋಧನಾ ಕೌನ್ಸಿಲಿನಿಂದ ಚುನಾಯಿಸಲ್ಪಟ್ಟಿರುವ ಸ್ಪೆಶ್ಯಲ್ ಆಫೀಸರಿಗೆ ಒಪ್ಪಿಸಲಾಗಿದೆ. ಅವರ ರಿಪೋರ್ಟು ಬಂದನಂತರ ಮುಂದರಿಸಲಾಗುವದೆಂದು ಕಮಿಶನರು ಹೇಳಿದರು. ಈ ವಿಚಾರ ತರಬೇತಿಗೆ ಕಳುಹಿಸಲು ಸ್ಪೆಶ್ಯಲ್ ಆಫೀಸರರ ರಿಪೋರ್ಟಿನ ಅಗತ್ಯವಿಲ್ಲವೆಂದೂ, ಆದುದರಿಂದ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಶ್ರೀ. ಬಿ. ಯಂ. ಕಾರ್ಯಪ್ಪನವರು ಸೂಚಿಸಿದರು. ಬಾಕಿ ಮೆಂಬರುಗಳು ಈ ಕೈಗಾರಿಕೆಯು ಇಂಡಿಯಾದಲ್ಲೇ ಪ್ರಥಮವಾಗಿ ಪ್ರಾರಂಭಿಸಲ್ಪಟ್ಟಿರುವ ಪ್ರಯುಕ್ತ ಅದರ ಸಾಧಕಬಾಧಕಗಳನ್ನರಿಯದೆ ಈ ವಿಚಾರ ಮುಂದಿನ ಕಾರ್ಯಕ್ರಮ ಕೈಗೊಳ್ಳುವದು ಸರಿಯಲ್ಲವೆಂದೂ, ಆದ್ದರಿಂದ ಸ್ಪೆಶ್ಯಲ್ ಆಫೀಸರರ ವರದಿಯನ್ನು ಕಾಯುವದು ಅಗತ್ಯವೆಂದೂ ಸೂಚಿಸಿದರು.

ಸಿವಿಲ್ ಸರ್ಜನರ ಸೂಚನೆಗಳು.

3. ಗ್ರಾಮಗಳಲ್ಲಿ ರುಚಿಯಾದ ಆರೋಗ್ಯಕರ ನೀರು ಸಿಗಲು ತಕ್ಕ ಏರ್ಪಾಡುಗಳು—ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೆಗಿಸಿಕೊಟ್ಟರುವದೆಂದು ತನಗೆ ತಿಳಿದು ಬಂದಿದೆಯೆಂದೂ, ಸಂಪಾಜೆಯ ಕೊಯನಾಡಿನಲ್ಲಿ ಮಾತ್ರ ಒಂದು ಬಾವಿಯು ಅತ್ಯಗತ್ಯವೆಂದೂ ಹೇಳಿ ತಮ್ಮ ಸೂಚನೆಯನ್ನು ಹಿಂತೆಗೆದುಕೊಂಡರು. ಈ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರು ಸೀಮೆಂಟಿನ ಕರ್ಬ್ (Kerb) ಬಾವಿಗಳು ತುಂಬಾ ಕಮ್ಮಿ ಖರ್ಚಿನಿಂದಾಗುವದರಿಂದ ಹಾಗೆ ಮಾಡುವದು ಉತ್ತಮವೆಂದು ಸೂಚಿಸಿದರು. ಈ ವಿಷಯವನ್ನು ಎಗ್ಸಿಕ್ಯೂಟಿವ್ ಇಂಜಿನೀಯರ ಅಜಮಾಯಿಸಿಕೆಗೆ ಬಿಡಲಾಯಿತು.

4. ಕೊಕ್ಕೆ ಹುಳವೇ ಮೊದಲಾದ ಕಾಯಿಲೆಗಳನ್ನು ನಿವಾರಿಸುವ ಯೋಜನೆ:—ಈ ಠರಾವನ್ನು ಜಾರಿಗೆ ತರುವ ಬಗ್ಗೆ ಗ್ರಾಮಾಂತರಗಳಲ್ಲಿ 'ಬೋರ್ ಹೋಲ್'ಗಳ ಅವಶ್ಯಕತೆ ಇರುವುದರಿಂದ ಕಮಿಟಿಯಲ್ಲಿ ಧನ ಸಂಗ್ರಹವಾಗೊಡನೆಯೇ ಹನ್ನೆರಡು ಯಂತ್ರಗಳನ್ನು ತರಿಸಲು ಹಣ ಸಹಾಯ ಮಾಡಬೇಕೆಂದು ಸಿವಿಲ್ ಸರ್ಜನರು ಹೇಳಿದರು. ಕಮಿಟಿಯು ಈ ವಿಚಾರವು ಗ್ರಾಮಾಂತರಗಳಲ್ಲಿ ಖಡ್ಡಾಯವಾಗಿ ಜಾರಿಗೆ ತರಲ್ಪಡಬೇಕೆಂದು ಸೂಚಿಸಿತು. ಮದ್ರಾಸಿನಲ್ಲಿರುವಂತೆ ಇಲ್ಲಿಯೂ ಒಂದು ಪಬ್ಲಿಕ್ ಹೆಲ್ತ್ ಬಿಲ್ಲನ್ನು ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸುವ ಯೋಜನೆ ಸರ್ಕಾರದ ದೃಷ್ಟಿಯಲ್ಲಿದೆಯೆಂದೂ, 12 ಮಿಶಿನುಗಳನ್ನು ತೆಗೆಯುವ ಬಗ್ಗೆ ಹಣ ಮಂಜೂರು ಮಾಡಲಾಗುವದೆಂದೂ ಅಧ್ಯಕ್ಷರು ಸೂಚಿಸಿದರು.

5. ನಾಯಿ ಹುಚ್ಚನ್ನು ನಿವಾರಿಸಲು ಗ್ರಾಮಾಂತರಗಳಲ್ಲಿ ನಾಯಿಗಳನ್ನು ನಾಶಪಡಿಸಬೇಕು:—ಎಂಬುವಲ್ಲಿಯ 'ಗ್ರಾಮಾಂತರದಲ್ಲಿ' ಎಂಬ ಶಬ್ದವನ್ನು ತೆಗೆದು ಬಿಡಬೇಕೆಂದೂ ಯಜಮಾನರಿಲ್ಲದ ನಾಯಿಗಳನ್ನು ಕೊಲ್ಲಲು ತಕ್ಕ ಕ್ರಮ ಕೈಕೊಳ್ಳುವದಗತ್ಯವೆಂದೂ ಕಮಿಟಿಯು ನಿರ್ಧರಿಸಿತು.

6. ಒಂದು ಎಂಬ್ಯುಲೆನ್ಸ್ ಕಾರನ್ನು ತೆಗೆಯಲು ಗ್ರಾಮಾಭಿವೃದ್ಧಿ ಫಂಡಿನಿಂದ ರೂ. 2000 ಇಡಬೇಕು. ಸಿವಿಲ್ ಸರ್ಜನರ ಸೂಚನೆಯಂತೆ ದೂರ ಸ್ಥಳಗಳಿಂದ ತುಂಬಾ ಅಶಕ್ತ ಕಾಯಿಲಸ್ತರನ್ನು ಸುರಕ್ಷಿತವಾಗಿ ಆಸ್ಪತ್ರೆಗಳಿಗೆ ಸಾಗಿಸಲು ಅನುಕೂಲವಾಗುವಂತೆ ಎಂಬ್ಯುಲೆನ್ಸ್ ಕಾರ್ ತೆಗೆಯಲು ಪ್ರಾಂತೀಕ ಸರಕಾರದಿಂದ ರೂ. 4000 ಮಂಜೂರು ಮಾಡಬೇಕೆಂದು ಶಿಫಾರಸು ಮಾಡಲು ತೀರ್ಮಾನವಾಯಿತು.

(ವಾರ್ಷಿಕ ಖರ್ಚು ಎಷ್ಟಾಗಬಹುದೆಂದು ಅಧ್ಯಕ್ಷರು ಕೇಳಿದ್ದಕ್ಕೆ ಸಿವಿಲ್ ಸರ್ಜನರು ಅದರಿಂದ ಬರುವ ಬಾಡಿಗೆಯಿಂದಲೇ ಖರ್ಚನ್ನು ನಿರ್ವಹಿಸಬಹುದೆಂದು ಉತ್ತರವಿತ್ತರು.)

ಕಮಿಷನರ ಸೂಚನೆಗಳು.

7. ಅಮ್ಮತ್ತಿಯಲ್ಲಿ ಸರ್ಕಾರಿ ನೌಕರರ ಹಾಗೂ ಪಬ್ಲಿಕಿನವರ ಪ್ರಯೋಜನಕ್ಕಾಗಿ ಒಂದು ಬಾವಿ ತೆಗೆಯುವ ವಿಚಾರ—ಅಂದಾಜು ಖರ್ಚು ರೂ 1030 ಇದನ್ನು ಮಂಜೂರು ಮಾಡಲಾಯಿತು. ಇದರ ⅓ ಅಂಶ ಖರ್ಚನ್ನು ಈ ಬಾವಿಯಿಂದ ಪ್ರಯೋಜನ ಹೊಂದುವವರಿಂದ ವಸೂಲು ಮಾಡಬಹುದೆಂದು ಅಧ್ಯಕ್ಷರು ಸೂಚನೆ ಕೊಟ್ಟರು. ಆದ್ದರಿಂದ ಮಂಜೂರಾದ 1030 ರೂ. ಯಿಂದ ಈ ಭಾಗವನ್ನು ವಜಾ ಮಾಡಬಹುದೆಂದು ತೀರ್ಮಾನವಾಯಿತು.

8. ಗೋಗ್ರಾಸಕ್ಕಾಗಿ ರೈತರಿಗೆ 'ಸೆಂಟ್ರೊಸಿಮಾ' ಗಿಡದ ಬೀಜ ಹಂಚುವದು:—ಈ ವಿಚಾರ ವೆಟರಿನರಿ ಅ. ಸರ್ಜನ್ ಎ. ಬೋಪಯ್ಯನವರ ರಿಪೋರ್ಟನ್ನು ಅಧ್ಯಕ್ಷರು ಓದಿದರು. ರೈತರಿಗೆ ಧರ್ಮಾರ್ಥವಾಗಿ ಈ ಬೀಜವನ್ನು ಹಂಚುವ ಬಗ್ಗೆ 200 ಪೌಂಡು ಬೀಜ ತರಿಸಲು 100 ರೂ ಮಂಜೂರು ಮಾಡಲಾಯಿತು. ಅಲ್ಲದೆ ಇದನ್ನು ಧರ್ಮಾರ್ಥ ಒದಗಿಸಿ ಕೊಡಲಾಗುತ್ತೋ ಎಂದು ಮಿ. ಸ್ಪೆರ್ಟರವರನ್ನು ಬರೆದು ಕೇಳಲು ತೀರ್ಮಾನವಾಯಿತು.

ಎಗ್ಸಿಕ್ಯೂಟಿವ್ ಇಂಜಿನೀಯರ ಸೂಚನೆಗಳು.

9. ಮಡಿಕೇರಿಯಲ್ಲಿ ಒಂದು ಪ್ರಾಂತೀಕ ಮಾರ್ಕೆಟಿಂಗ್ ಸೊಸೈಟಿ ತೆರೆಯುವದು:—ಎಗ್ಸಿಕ್ಯೂಟಿವ್ ಇಂಜಿನೀಯರವರು ಇದಕ್ಕೆ ಅನ್ವಯಿಸುವ ಅನೇಕ ವಿಚಾರಗಳನ್ನು 'ಹಿಂದು' ಪತ್ರಿಕೆಯಿಂದ ತೆಗೆದು ಹೇಳಿದರು. ರಾ. ಬ. ಶ್ರೀಪತಿರಾಯರು ಮತ್ತು ಶ್ರೀ. ಬಿ. ಯಂ. ಕಾರ್ಯಪ್ಪನವರು ಠರಾವನ್ನು ಸಮರ್ಥಿಸಿದರು. ಅಧ್ಯಕ್ಷರು ಠರಾವನ್ನು ಪುಷ್ಟೀಕರಿಸಿ ಈ ಬಗ್ಗೆ ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಕೊಳ್ಳುವರೆಂದು ಸೂಚಿಸಿದರು.

ಶ್ರೀ. ಡಿ. ಹೆಚ್. ದಾಸಪ್ಪನವರ ಸೂಚನೆಗಳು.

10. ಎಲ್ಕನೂರಿನಲ್ಲಿ, ದೊಡ್ಡ ಮೊಳ್ತೆ ಗ್ರಾಮದಲ್ಲಿ ಕೋಸಿಮರೂರು ಮತ್ತು ಬಾಣಾವರ ಗ್ರಾಮಗಳಲ್ಲಿ ಬಾವಿ ತೆಗೆಯುವದು:—ಈ ವಿಚಾರಗಳನ್ನು ಅಜಮಾಯಿಸಲು ತೀರ್ಮಾನವಾಯಿತು.

11. ಆಲೂರು ಹೊಳೆಗೆ ಶನಿವಾರಸಂತೆ ಬಾಣಾವರ ರಸ್ತೆಯಲ್ಲಿ ಒಂದು ಸೇತುವೆ ಕಟ್ಟುವದು:—ಈ ವಿಚಾರವನ್ನು ಡಿ. ಬೋರ್ಡಿನವರಿಗೆ ವಹಿಸಲಾಯಿತು.

ಶ್ರೀ. ಬಿ. ಯಂ. ಕಾರ್ಯಪ್ಪನವರ ಸೂಚನೆಗಳು.

12. ನಾಪೋಕ್ಲಿನ ಬಾವಲಿಗ್ರಾಮದಲ್ಲಿರುವ ಮುಂಡೇಟಿ ಕೆರೆ:—ಎಗ್ಸಿಕ್ಯೂಟಿವ್ ಇಂಜಿನೀಯರರು ಕೋವಿನ ತಲೆಯಲ್ಲಿ ಕೆರೆ ಕಟ್ಟುವದರಿಂದ ವ್ಯವಸಾಯಕ್ಕೆ ಆಗುವ ಪ್ರಯೋಜನವನ್ನೂ, ಈಗಿನ ಮಳೆಗಾಲ ಕಮ್ಮಿಯಾದ್ದರಿಂದ ಇವುಗಳ ಹೆಚ್ಚಿನ ಉಪಯೋಗವನ್ನೂ ವಿವರಿಸಿದರು. ಆದರೆ ಇಲ್ಲದ ಇವರಿಂದ ಲಾಭ ಹೊಂದುವವರು ಸಕಾಲದಲ್ಲಿ ಕೆರೆಗಳನ್ನು ನೋಡಬೇಕೆಂದೂ ಇಲ್ಲವೇ ಇದಕ್ಕಾಗಿ ವ್ಯಯಿಸಿದ ಹಣವು ನಿಷ್ಪ್ರಯೋಜನವಾಗುವದೆಂದು ಸೂಚಿಸಿದರು.

ಕಮಿಟಿಯು ಇಂಜಿನೀಯರರ ಸೂಚನೆಯನ್ನು ಪುಷ್ಟೀಕರಿಸಿ ಮೇಲಿನ ವಿಚಾರವನ್ನು ಅಜಮಾಯಿಸಲು ತೀರ್ಮಾನ ಮಾಡಿತು.

15. ಕಿರುಂದಾಡು ಗ್ರಾಮಕ್ಕೆ ಒಂದು ರಸ್ತೆ:—ಈ ವಿಚಾರವನ್ನು ಡಿ. ಬೋರ್ಡಿಗೆ ವಹಿಸಲು ತೀರ್ಮಾನವಾಯಿತು.

16. ಬಾವಲಿ ಗ್ರಾಮಕ್ಕೆ ಒಂದು ಕಟ್ಟೆ:—ಈ ಸೂಚನೆಯನ್ನು ವಿಚಾರಿಸಲು ರಿಜಿಸ್ಟ್ರಾರರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು. ಬಾಕಿ ಕೆಲವು ಠರಾವುಗಳನ್ನು ಕಮಿಟಿಯು ಮುಂದೆ ವಿಚಾರಿಸಲು ತೀರ್ಮಾನಿಸಿತು.

ಪಿ. ಯಂ. ಕ್ರೇಜರ.
ಅಧ್ಯಕ್ಷರು.

WANTED

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for samples.

For Terms apply :—

Majestic House, Ludhiana.

4

ಪ್ರಾಟಿಕ್ಷಿಪ.

ಉತ್ತರ ಕೊಡಗು ತಾಲೋಕು ನ್ಯಾಯಿಜರಾನಾಟ ಹೋಬಳಿ ಕೊರನೂರು ಮಜಾಜೂರು ಗ್ರಾಮದ ಪೊತಂಡ ನಾಣಪ್ಪನವರ ಹೆಸರಿನಲ್ಲಿ ಜಮಾಬಂದಿ ನಡೆಯುತ್ತಿರುವ ಸರ್ವೆ ನಂಬರು 78, 79, 80, 81 ರ ಒಟ್ಟು 18 ಎಕರೆ ಹೊಲ ಮಾರಾಟಕ್ಕೆ ಇದೆ. ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ಇತರ ವಿವರಗಳನ್ನು ತಿಳಿದುಕೊಳ್ಳಬಹುದು.

ಯಂ. ಬಿ. ನಂಜಪ್ಪ,
ಯಂ. ಎ. ಪೂವಯ್ಯ,
2-2. ಬೆಳ್ಳುಮಾಡು ಗ್ರಾಮ,
ಮೂರ್ನಾಡು.

ಟ್ರಾವಂಕೂರಿನಲ್ಲಿ ಒಪ್ಪಂದ ಹೇಗಾಗಬಹುದು?

(ಲೇ:—ಮಹಾತ್ಮ ಗಾಂಧಿ) **ಹರಿಜನ ಪತ್ರಿಕೆಯಿಂದ**

ಶ್ರೀ. ಜಿ. ರಾಮಚಂದ್ರನ್‌ರವರು ರಾಜಕುಮಾರಿಗೆ ಬರೆದ ಪತ್ರದಲ್ಲಿಯ ಕೆಳಗಿನ ಸಂಗತಿಗಳನ್ನುದ್ಧರಿಸುವೆನು.

‘ನಮ್ಮ ಧ್ಯೇಯವನ್ನು ಸಾಧಿಸುವದಕ್ಕಾಗಿ ಶಾಂತ ಮತ್ತು ಸತ್ಯನಿಷ್ಠೆಯಿಂದ ಕಾರ್ಯ ಮಾಡಿದ ಹೊರತು ನಮ್ಮ ಉದ್ದೇಶವು ಸಾಧಿಸಲಾರದೆಂಬುದು ನನಗೆ ಗೊತ್ತಾಗಿದೆ. ನಮ್ಮ ಸತ್ಯಾಗ್ರಹ ಕಾರ್ಯಕ್ರಮವನ್ನು ಪ್ರಾರಂಭಮಾಡುವ ಮೊದಲು 6 ವಾರಗಳ ಅವಧಿಯನ್ನು ಸಂಸ್ಥಾನ ಕಾಂಗ್ರೆಸ್ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ನಾವು ಇಟ್ಟುಕೊಂಡಿದ್ದು ತಮಗೆ ಗೊತ್ತಿದೆ. ಶಾಂತಿಗಾಗಿ ನಾವು ಆತುರರಿರುವವೆಂಬುದಕ್ಕೆ ಪರಮೇಶ್ವರನು ಸಾಕ್ಷಿಯಿರುವನು. ಆದರೆ 9 ಕಡೆ ಆದ ಗೋಳೀಬಾರಿನ ಸಂಬಂಧದಲ್ಲಿ ಯಾವ ಬಗೆಯ ವಿಚಾರಣೆಯೂ ನಡೆಯಲಿಲ್ಲ. ಕಳೆದ ಸವಿನಯ ಕಾಯದೆಭಂಗ ಚಳವಳಿಯಲ್ಲಿ ಶಿಕ್ಷೆ ಹೊಂದಿದ ವಕೀಲರಿಗೆ 2 ವರ್ಷ ವಕೀಲಿ ಮಾಡಬಾರದಾಗಿ ವಿಧಿಸಲಾಗಿದೆ. ಕಾಯದೆ ಮಂಡಳದ ಅಧಿವೇಶನ ನಡೆದ ಈ ಸಮಯದಲ್ಲಿಯೇ ಸಂಸ್ಥಾನ ಕಾಂಗ್ರೆಸ್ ಸದಸ್ಯರಾಗಿರುವ 19 ಜನ ಕಾಯದೆ ಮಂಡಳದ ಸದಸ್ಯರ ಸದಸ್ಯತ್ವವನ್ನು ರದ್ದು ಪಡಿಸಿದ್ದಾರೆ. ಈ ಸದಸ್ಯರ ಸದಸ್ಯತ್ವವು ರದ್ದು ಮಾಡಲ್ಪಟ್ಟಿದೆಂದು ಸಾರಿ ಹೊಸದಾಗಿ ಚುನಾವಣೆ ನಡಿಸಲು ಸಂಸ್ಥಾನ ಸರಕಾರಕ್ಕೆ ಬೇಕಾದಷ್ಟು ಅವಕಾಶವಿದ್ದಿತು. ಸರಕಾರದವರು ಹಾಗೆ ಮಾಡದ್ದರಿಂದ ಈಗ 19 ಮತದಾರ ಸಂಘಗಳ ಪ್ರಾತಿನಿಧ್ಯವೇ ಕಾಯದೆಮಂಡಳದಲ್ಲಿರುವುದಿಲ್ಲ. ವಸೂಲಾದ ದಂಡದ ಹಣವನ್ನು ತಿರುಗಿಕೊಟ್ಟಿಲ್ಲ. ಜಪ್ತುಮಾಡಲ್ಪಟ್ಟ ಭೂಮಿಯೂ ತಿರುಗಿ ಸಿಕ್ಕಿಲ್ಲ. ರದ್ದುಪಡಿಸಿದ ವೃತ್ತಪತ್ರಗಳ ರಹದಾರಿ ಮತ್ತೆ ಕೊಡಲ್ಪಟ್ಟಿಲ್ಲ. ಮಹಾರಾಜರ ಜನ್ಮೋತ್ಸವ ಸಮಾರಂಭದ ಕಾಲಕ್ಕೆ ಇವೆಲ್ಲ ಸೌಕರ್ಯಗಳು ಸಿಕ್ಕಬಹುದೆಂದು ಅಪೇಕ್ಷಿಸಲಾಗಿದ್ದಿತು. ಇದರ ಬದಲು ಸಂಸ್ಥಾನ ಕಾಂಗ್ರೆಸ್ ಸ್ವಯಂಸೇವಕರ ಸಂಸ್ಥೆಯನ್ನು ಮುರಿಬಡಿಯಲು ಪ್ರಯತ್ನಗಳು ನಡೆದಿವೆ. ಇದಕ್ಕಾಗಿಯೇ ಒಂದು ವಿಶಿಷ್ಟ ಕಾಯದೆಯನ್ನು ಜಾರಿಯಲ್ಲಿ ತರಲಾಗಿದೆ. ಈಗ ತುರುಂಗಗಳಲ್ಲಿ 200 ಕ್ಕಿಂತ ಹೆಚ್ಚು ರಾಜಕೀಯ ಕೈದಿಗಳಿರುವರು. ಗುಂಡರನ್ನು ನಿಯಂತ್ರಣದಲ್ಲಿಡುವ 90 ನೆಯ ಕಲಮಿನನ್ವಯ ಅನೇಕ ಪ್ರತಿಷ್ಠಿತ ಸದ್ಗೃಹಸ್ಥರ ಮೇಲೆ ಜಾಮೀನ ಖಟ್ಲೆಗಳು ನಡೆದಿವೆ. ಸೆಂಟ್ರಲ್ ಜೇಲಿನಲ್ಲಿ ಕೈದಿಗಳಿಗೆ ಹೊಸ ಸ್ಥಳವನ್ನೇರ್ಪಡಿಸಲಾಗಿದೆ. ಸಂಸ್ಥಾನದಲ್ಲಿಯ ಕೇಂದ್ರಗಳೊಳಗಿಂದ 1000 ಜನ ಸ್ಪೆಶಲ್ ಪೊಲೀಸರನ್ನು ನೇಮಿಸಿಕೊಳ್ಳಲಾಗಿದೆ. ತಿಂಗಳಿಗೆ 5 ರೂಪಾಯಿ ಸಂಬಳದ ಮೇಲೆ ಇವರನ್ನು ನೇಮಿಸಿಕೊಂಡದ್ದು ಆಶ್ಚರ್ಯಕರ ಸಂಗತಿಯು. ಇದಕ್ಕೂ ಹೆಚ್ಚೇನು ಬೇಕು? ಈ ಹೊಲಸು ಕೆಲಸವನ್ನು ಮಾಡಲು ಟ್ರಾವಂಕೂರು ಪೊಲೀಸರು ಸಿದ್ಧರಿಲ್ಲೆಂದೋ ಏನೋ ಎನ್ನುವಂತೆ ಟ್ರಾವಂಕೂರು ಸಂಸ್ಥಾನದ ಹೊರಗಿನಿಂದ ಜನರನ್ನು ಪೊಲೀಸು ಪಡೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಏನೂ ತಡೆಯಿಲ್ಲದೆ ಸರಕಾರದ ದಬ್ಬಾಳಿಕೆ ಯಥಾಪ್ರಕಾರ ಸಾಗಿದೆ. ಹೆಚ್ಚಿಗೆ ಗದ್ದಲವಿಲ್ಲದೆ ಒಮ್ಮೆಲೆ ಧುಡುಂ ಪ್ರವೇಶ ಮಾಡದೆ ಸರಕಾರದವರು ಇದನ್ನು ಸಾಗಿಸಿರುವರು. ಅಂತೆಯೇ 6 ವಾರಗಳ ಅವಧಿಯನ್ನು ನಾವು ಕೊಡಬೇಕಾಯಿತು. ನಾನು ಗಾಂಧೀಜಿಯವರಿಗೆ ಕಳುಹಿಸಿದ ಕಾಗದಗಳನ್ನೆಲ್ಲ, ವಿಶೇಷತಃ ವರ್ಕಿಂಗ್ ಕಮಿಟಿಯವರು ಪಾಸು ಮಾಡಿದ ಎರಡು ಗೊತ್ತುವಳಿಗಳನ್ನು ಪೂರ್ಣವಾಗಿ ಅಭ್ಯಸಿಸಲು ಬಿನ್ನವಿಸುತ್ತೇನೆ. ಸರ್. ಸಿ. ಪಿ. ರಾಮಸ್ವಾಮಿಯವರು ಸ್ವೀಕರಿಸಿದ ಧೋರಣೆಯಿಂದ ರಾಜ ಪ್ರಜರಲ್ಲಿಯ ಮತಭೇದವು ಮತ್ತಷ್ಟು ಹೆಚ್ಚಾಗುವದೆಂಬ ವಿಚಾರದಿಂದ ನನಗೆ ನೋವುಂಟಾಗುತ್ತಿದೆ’

ವರ್ಕಿಂಗ್ ಕಮಿಟಿಯ ಗೊತ್ತುವಳಿಗಳು ಮತ್ತು ಈ ಪತ್ರಕ್ಕೆ ಜೋಡಿಸಿದ ಮುನ್ನುಡಿಯನ್ನು ಇಲ್ಲಿ ನಾನು ಕೊಟ್ಟಿರುವದಿಲ್ಲ. ಸಂಸ್ಥಾನ ಕಾಂಗ್ರೆಸ್ಸಿನವರು ಏನು ಮಾಡುತ್ತಿರುವರೆಂಬವನ್ನು ತಿಳಿದುಕೊಳ್ಳಲು ವಾಚಕರು ಇವನ್ನು ಅವಲೋಕಿಸುವುದವಶ್ಯವಾಗಿದೆ.

ಈ ಕಾಗದಗಳನ್ನೋದಿದರೆ ಅತ್ಯಂತ ವಿಷಾದವಾಗುತ್ತದೆ.

ಸರಕಾರದವರು ಈಗ ಸ್ವೀಕರಿಸಿದ ಧೋರಣೆಯಿಂದ ಮಹಾರಾಜರು ಜನ್ಮೋತ್ಸವದ ಕಾಲಕ್ಕೆ ಕೊಟ್ಟ ಸೌಕರ್ಯ ಪರಿಹಾರ ಮುಂತಾದವುಗಳು ನೀರಿನಲ್ಲಿ ಹೋಮ ಮಾಡಿದಂತೆಯೇ. ಆಗ ತೋರಿಸಿದ ಔದಾರ್ಯವೂ ಕೇವಲ ತೋರಿಕೆಯದ್ದಾಗಿತ್ತೆಂದೂ, ಸ್ವಾಭಾವಿಕವಾದುದಿರಲಿಲ್ಲೆಂದೂ ಮುಂದೆ ನಡೆದ ಘಟನೆಗಳಿಂದ ಗೊತ್ತಾಗುವದು. ಅಲ್ಲದೆ ಟ್ರಾವಂಕೂರ್ ಸಂಸ್ಥಾನದ ವಿರುದ್ಧ ಜನರು ನಡಿಸಿದ ಚಳವಳಿಯನ್ನು ಹತ್ತಿಕ್ಕಲು ಪ್ರಜರಲ್ಲಿಯೇ ಮತಭೇದವನ್ನು ಹುಟ್ಟಿಸಲು ಒಡ್ಡಿದ ಜಾಲವೆಂದೂ ಹೇಳಬಹುದು. ರಾಮಚಂದ್ರರು ತಿಳಿಸಿದ ಸಂಗತಿಯು ನಿಜವಿದ್ದರೆ ಎರಡನೆಯ ಉದ್ದೇಶವು ಸಾಧಿಸಿಯೇ ಇಲ್ಲ, ಮೊದಲನೆಯದು ಅರ್ಧಮರ್ಧ ಸಾಧಿಸಿದೆಂದು ಹೇಳಬಹುದು. ಕೈದಿಗಳ ಬಿಡುಗಡೆಯ ನಂತರ ಹೋರಾಟವು ಕೊನೆಗೊಂಡಿತೆಂದು ಹಿಂದೀ ಪತ್ರಿಕೆಗಳು ನಂಬಲವಕಾಶವುಂಟಾಯಿತು.

ಅರ್ಧಮರ್ಧ ಕೈದಿಗಳ ಬಿಡುಗಡೆಯಲ್ಲಿ ಯಾವದೇ ಬಗೆಯ ದುರುದ್ದೇಶವಿರಲಿಲ್ಲೆಂದು ನಾನು ಭಾವಿಸುತ್ತೇನೆ.

ಸಂಸ್ಥಾನ ಕಾಂಗ್ರೆಸನ್ನು ಹತ್ತಿಕ್ಕುವದೇ ಉದ್ದೇಶವಾಗಿರದೆ ಅದನ್ನು ಸಮಾಧಾನಪಡಿಸುವದು ಸರಕಾರದ ಉದ್ದೇಶವಾಗಿದ್ದರೆ ಹಾಗೆ ಮಾಡುವದು ಹಗುರಾದುದೆಂದು ನನಗೆನಿಸುತ್ತದೆ. ರಾಜಕೀಯ ಕೈದಿಗಳ ಬಿಡುಗಡೆಯನ್ನು ಪೂರ್ಣ ಮುಗಿಸಿ ಸಂಸ್ಥಾನ ಕಾಂಗ್ರೆಸ್ಸಿನೊಡನೆ ವಿಚಾರವಿನಿಮಯ ಮಾಡಿ ಸುಧಾರಣಾ ಸಮಿತಿಯನ್ನು ನೇಮಿಸಿದ್ದಾದರೆ ರಾಜ–ಪ್ರಜರಲ್ಲಿ ಒಡಂಬಡಿಕೆಯುಂಟಾಗುವಲ್ಲಿ ಸಂದೇಹವಿಲ್ಲ.

ಆದರೆ ರಾಜ–ಪ್ರಜರಿಗೆ ಆ ಸೌಭಾಗ್ಯವಿರಲಿಲ್ಲ. ಜಗತ್ತಿನಲ್ಲಿ ಸತ್ಯಾಗ್ರಹವು ಒಳ್ಳೇ ಶಕ್ತಿಸಂಪನ್ನ ಅಸ್ತ್ರವಾಗಬೇಕಾದರೆ ಯಾವದೇ ಬಗೆಯ ಸಿಟ್ಟು ಮತ್ಸರಗಳಿಲ್ಲದ ಅತ್ಯಂತಿಕ ದುಃಖವನ್ನು ಸಹಿಸುವ ಸಿದ್ಧತೆಯಿರಬೇಕೆಂಬುದನ್ನು ಸಂಸ್ಥಾನ ಕಾಂಗ್ರೆಸಿಗರು ಲಕ್ಷ್ಯದಲ್ಲಿಡಬೇಕು. ಅರಸರ ದಬ್ಬಾಳಿಕೆಯನ್ನು ಪ್ರಸಿದ್ಧಿಸುವ ಅಧಿಕಾರವಿದ್ದರೂ ಕೊನೆಯವರೆಗೂ ಕಷ್ಟನಷ್ಟಗಳನ್ನನುಭವಿಸುವ ತಾಳ್ಮೆ ಅವರಲ್ಲಿರಬೇಕಲ್ಲದೆ ಸತ್ಯಕ್ಕೆ ಯಶಸ್ಸು ಕಟ್ಟಿಟ್ಟದ್ದೇ ಎಂಬ ಆತ್ಮವಿಶ್ವಾಸವು ಅವರಲ್ಲಿರಬೇಕು.

ಕಾಂಗ್ರೆಸ್ಸಿನವರು ಆರು ವಾರಗಳ ಅವಧಿಯನ್ನಿಟ್ಟದ್ದು ಸರಿಯಾಯಿತು. ಆದರೆ ಆ ಅವಧಿಯಲ್ಲಿ ಮನುಷ್ಯರಿಗೆ ಶಕ್ಯವಿದ್ದಷ್ಟು ಅಹಿಂಸಾತ್ಮಕ ವಾತಾವರಣವನ್ನುಂಟುಮಾಡುವದು ಶಕ್ಯವೆನಿಸದಿದ್ದರೆ ಮತ್ತು ವಿಧಾಯಕ ಕಾರ್ಯಕ್ರಮವನ್ನು ಮುಂದರಿಸುವದು ಅಶಕ್ಯವೆನಿಸಿದರೆ ಈ ಅವಧಿಯನ್ನು ಬೆಳಿಸುವಲ್ಲಿ ಯಾವದೇ ಬಗೆಯ ಅಗೌರವವಿರುವದಿಲ್ಲ. ಇಷ್ಟೆ ಅಲ್ಲ, ಒಂದು ಬಗೆಯ ಗೌರವವೇ ಇದೆ. ವಿಚಾರವಿಲ್ಲದ ಅಥವಾ ನಿರ್ದಯ ಟೀಕೆಗಾರರು ಹೀಗೆ ಅವಧಿಯನ್ನು ಹೆಚ್ಚಿಸಿದ್ದು ಅಶಕ್ತತೆಯ ಕುರುಹೆಂದು ಟೀಕಿಸಿದರೆ ಕಾಂಗ್ರೆಸಿಗರು ಅದಕ್ಕೆ ಸೊಪ್ಪು ಹಾಕತಕ್ಕದ್ದಲ್ಲ. ಯಾವಾಗ ಯುದ್ಧವನ್ನು ನಿಲ್ಲಿಸಬೇಕು ಮತ್ತು ಯಾವಾಗ ಮುಂದರಿಯಬೇಕೆಂಬುದು ಸೈನಿಕನಿಗೆ ಗೊತ್ತು. ಇಂಥ ನಿಷ್ಕ್ರಿಯ ವೃತ್ತಿಯಲ್ಲಿಯೇ ನಿಜವಾದ ಕಾರ್ಯಸಾಧನೆಯಾಗುವದೆಂಬದನ್ನು ಅವನು ಬಲ್ಲನು. ಹಾಗು ನಿಜವಾದ ನಿಷ್ಕ್ರಿಯ ವೃತ್ತಿಗಿಂತಲೂ ವಿವೇಕಶೂನ್ಯ ಕಾರ್ಯತತ್ಪರತೆಯು ತುಂಬಾ ಅಪಾಯಕರವೆಂಬುದೂ ಅವನಿಗೆ ಗೊತ್ತು. ಎರಡನೆಯದಾಗಿ ದುರ್ಬಲರೆಂದರೆ ಯಾರೂ ದುರ್ಬಲರಾಗುವದಿಲ್ಲ, ಆದರೆ ಸ್ವತಃ ತಮಗೆ ಹಾಗೆ ಎನಿಸಿದರೆ ಮಾತ್ರ ಅವರು ಅಶಕ್ತರಾಗುವರು. ಅಹಿಂಸೆಯು ಬೇಕಾದಂತಹ ಹಿಂಸೆಯನ್ನೂ ಯಶಸ್ವಿಯಾಗಿ ಎದುರಿಸಬಲ್ಲುದೆಂಬದನ್ನು ವರ್ಕಿಂಗ್ ಕಮಿಟಿಯು ತಿಳಿಯತಕ್ಕದ್ದು. ಮತ್ತೆ ಸತ್ಯಾಗ್ರಹವು ಶುರುವಾದರೆ ಸಂಸ್ಥಾನದಲ್ಲಿ ನಡೆದ ಹಿಂಸೆಗೆ ಸಂಸ್ಥಾನ ಕಾಂಗ್ರೆಸ್ಸಿನವರು ಹೊಣೆಗಾರರಲ್ಲೆಂಬದಾಗಿ ನನಗೆ ಹೇಳಲ್ಪಡಬಾರದೆಂದು ನಾನು ಬಯಸುತ್ತೇನೆ. ಹೊಣೆಗಾರಿಯ ಸರಕಾರದಲ್ಲಿ ಸಾರ್ವಭೌಮ ಸರಕಾರದವರು ನೇಮಿಸಿದ ಸರ್ವಾಧಿಕಾರಿಯು ಆ ಸಂಸ್ಥಾನದಲ್ಲಿ ಆಗಬಹುದಾದ ದೊಂಬಿಗೆ ಜವಾಬದಾರನಾದರೆ ಅಲ್ಲಿನ ಜನತೆಯೇ ಜವಾಬದಾರವಲ್ಲವೇ? ಯಾವದೇ ಬಗೆಯ ಹಿಂಸೆದೊಂಬಿಗಳುದ್ಭವಿಸಿದರೆ ಚಾರೀಚೂರಾದಲ್ಲಿ ಸಂಭವಿಸಿದ ಹತ್ಯಾಚಾರಕ್ಕಾಗಿ ಬಾರಡೋಲಿ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಂತೆ ಈ ಚಳವಳಿಯನ್ನು ನಿಲ್ಲಿಸಬೇಕಾಗುವದೆಂಬುದನ್ನು ಸಂಸ್ಥಾನ ಕಾಂಗ್ರೆಸಿನವರು ಚೆನ್ನಾಗಿ ತಿಳಿಯಬೇಕು.

THE

TROPICAL INSURANCE Co. Ltd.,

NEW DELHI.

Chairman Sjt. SUBHAS CHANDRA BOSE.

(President, Indian National Congress.)

A 100% Swadeshi Concern founded by such eminent Leaders as

PANDIT MOTHILAL NEHRU. DR. M. A. ANSARI. HAKIM AJMAL KHAN. S. SRINIVASA IYENGAR. and others.

Wanted an Organiser for Coorg on Salary and commission immediately.

Apply to:—

M. Sunder Ram Shetty, Branch Manager, Hampankatta, MANGALORE. or **K. S. Ramamurthi, M. A.** Secretary, 160, Mount Road, MADRAS.

4-3

ಇಂಗ್ಲೆಂಡಿನ ಆಡಳಿತವು ಅನುಕರಣೀಯವೇ?

ಇಂಗ್ಲೆಂಡನ್ನು ಭಾರತವು ಅನುಕರಿಸುವದಾದರೆ ಅದು ತನ್ನ ಅಂತಿಮವನ್ನು ಆಹ್ವಾನಿಸಿದಂತೆ.

ಲೇಖಕ:-ಗಣೇಶ, ಮಡಿಕೇರಿ.

(ಮ. ಗಾಂಧಿಯವರ ಲೇಖನದ ಆಧಾರದಿಂದ.)

ಇಂಗ್ಲೆಂಡಿನ ಸರ್ಕಾರದ ಆಡಳಿತವು ಜನತೆಗೆ ಸುಖದಾಯಕವಾಗಿದೆ. ಪ್ರಜಾಪ್ರಭುತ್ವವಿರುವ ಅಲ್ಲಿ ಜನತೆಯ ಕೋರಿಕೆಯು ಸಲ್ಲಿಸಲ್ಪಡುತ್ತಿದೆ. ಆದ್ದರಿಂದ ಆ ಸರ್ಕಾರ ಪದ್ಧತಿಯು ಅನುಕರಣೀಯವೆಂದು ನಂಬಿದವರಿರುವರು. ಆದ್ದರಿಂದ ಇಂಗ್ಲೆಂಡಿನ ಸ್ಥಿತಿಯನ್ನು ಪರಿಶೀಲಿಸುವದು ಅಗತ್ಯ. ಇಂಗ್ಲೆಂಡಿನ ಇಂದಿನ ಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ. ಭಾರತವು ಆ ರಾಜ್ಯಪದ್ಧತಿಯನ್ನು ಅನುಸರಿಸದಿರಲಿ ಎಂದು ಪ್ರಾರ್ಥಿಸಬೇಕಾಗುವದು. ಅದರ ಆಡಳಿತವು ಪಾರ್ಲಿಮೆಂಟಿನ ಕೈಯೊಳಗಿರುವುದು. ಪ್ರಜಾಸತ್ತಾತ್ಮಕ ಕುರುಹೆಂದು ಯೋಚಿಸಲ್ಪಟ್ಟಿರುವ ಆ ಪಾರ್ಲಿಮೆಂಟು ಇಂದು ಬಂಜೆ ಹಾಗೂ ವ್ಯಭಿಚಾರಿ ಹೆಂಗಸಿನಂತಿದೆ. ಈ ಎರಡು ಶಬ್ದಗಳು ಕರ್ಕಶವಾಗಿದ್ದರೂ ವಿಷಯಕ್ಕೆ ಸರಿಹೋಲುತ್ತವೆ. ಪಾರ್ಲಿಮೆಂಟು ಇಂದಿನ ವರೆಗೆ ತನ್ನ ತೀರ್ಮಾನದಂತೆ ಒಂದೇ ಒಂದು ಹೇಳಿಕೊಳ್ಳಬಹುದಾದ ಸತ್ಕಾರ್ಯವನ್ನು ಮಾಡಿರುವದಿಲ್ಲ. ಆದ್ದರಿಂದ ಅದನ್ನು ಬಂಜೆ ಹೆಂಗಸಿಗೆ ಹೋಲಿಸಿದ್ದಾಗಿದೆ. ಈ ಪಾರ್ಲಿಮೆಂಟು ಹೊರಗಿನ ಒತ್ತಾಯವಿಲ್ಲದೆ ಯಾವ ಕಾರ್ಯವನ್ನೂ ಮಾಡುವಂತಿಲ್ಲ. ಅದು ವೇಶ್ಯೆಯಂತಿದೆ. ಆಗಿಂದಾಗ್ಗೆ ಬದಲಾಗುತ್ತಿರುವ ಮಂತ್ರಿಗಳ ಹಿಡಿತದಲ್ಲಿ ಅದು ಇದೆ. ಈ ಸಂದರ್ಭದಲ್ಲಿ ಜನತೆಯಿಂದ ಚುನಾಯಿಸಲ್ಪಡುವ ಪ್ರತಿನಿಧಿಗಳು ಅವರ ಒತ್ತಾಯದಂತೆಯೇ ಕೆಲಸ ಮಾಡಬೇಕೇ ವಿನಹ ಅನ್ಯಥಾ ಕೂಡದು. ಆದ್ದರಿಂದ ಪಾರ್ಲಿಮೆಂಟಿನ ವರ್ತನೆ ಸರಿ ಎಂದು ಅಭಿಪ್ರಾಯ ಬರುವದರಿಂದ ಪಾರ್ಲಿಮೆಂಟಿನ ರಚನಾ ಕಾರ್ಯಕ್ರಮವನ್ನು ನೋಡುವ. ಈ ಸಭೆಗೆ ಚುನಾಯಿಸಲ್ಪಡುವ ಪ್ರತಿನಿಧಿಗಳು ಜನರ ಮುಖಂಡರಿರುತ್ತಾರೆ. ಸಂಬಳವಿಲ್ಲದೆ ಅವರು ತಮ್ಮ ಕಾರ್ಯನಿರ್ವಹಿಸುವದರಿಂದ ಅವರು ಜನಹಿತದೃಷ್ಟಿಯಿಂದ ಕೆಲಸ ಮಾಡುವರೆಂದಾಯಿತು. ಓಟರರು ಭಾರತೀಯರಂತಲ್ಲದೆ ಆಧುನಿಕ ವಿದ್ಯಾ ಪಾರಂಗತರಾಗಿರುವವರಿಂದ ಚುನಾವಣಾ ಕಾರ್ಯದಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ತಮ್ಮ ಹಾಗೂ ದೇಶಹಿತ ದೃಷ್ಟಿಯಿಂದ ಮಾಡುವರೆಂಬುದರಲ್ಲೂ ಸಂದೇಹವಿಲ್ಲ. ಇಂಥಾ ಸುಶಿಕ್ಷಿತರಿಂದ ಚುನಾಯಿಸಲ್ಪಡುವ ಮುಖಂಡರ ಸಭೆಯಾದ ಪಾರ್ಲಿಮೆಂಟಿಗೆ ಅರ್ಜಿಗಳಾಗಲೀ ಯಾ ಹೊರಗಿನ ಒತ್ತಾಯವಾಗಲೀ ಯಾಕೆ ಬೇಕು? ದಿನೇ ದಿನೇ ಅದರ ಕೆಲಸವು ಸುಸೂತ್ರವಾಗಿ ನಡೆದು ಜನತೆಗೆ ಅಮೋಘ ಸತ್ಕಾರ್ಯಗಳಾಗಬೇಕಿತ್ತು. ಆದರೆ ವಸ್ತುತಃ ಪಾರ್ಲಿಮೆಂಟಿನ ಸದಸ್ಯರು ಸ್ವಾರ್ಥಿಗಳು ಹಾಗೂ ನಂಬಿಗಸ್ತರಲ್ಲದವರೆಂದು ಊಹಿಸಬೇಕಾಗುತ್ತದೆ. ಪ್ರತಿಯೊಬ್ಬನೂ ಆತನ ಅಲ್ಪ ಲಾಭಕ್ಕಾಗಿ ಹಾತೊರೆಯುವನು. ದೇಶಹಿತಕಾರಕಗಳಾದ ಅತ್ಯಮೋಘ ಸಮಸ್ಯೆಗಳ ಚರ್ಚೆ ನಡೆಯುತ್ತಿರುವಾಗ್ಗೆ ಒಂದೆಡೆ ಮದ್ಯಪಾನ, ಮತ್ತೊಂದೆಡೆ ಧೂಮಪಾನ ಮೊದಲಾದ ಕೃತ್ಯಗಳು ನಡೆಯುವವು. ಆದ್ದರಿಂದಲೇ ಪ್ರಖ್ಯಾತ ಲೇಖಕ ಕಾರ್ಲೈಲರು ಪಾರ್ಲಿಮೆಂಟನ್ನು "ಮಾತಾಡುವ ಜಗತ್ತಿನ ಅಂಗಡಿ" (talking shop of the world) ಎಂದು ಕರೆದಿರುವರು. ಮೆಂಬರರು ತಮ್ಮ ಪಕ್ಷವೆಂಬ ಭಾವನೆಯಿಂದ ಉಮೇದುವಾರರ ಯೋಗ್ಯತಾ ಪರೀಕ್ಷೆ ಮಾಡದೆ ತಮ್ಮ ಮತವೀಯುವರು. ಇದು ಅವರ ಶಿಸ್ತು. ಇದಕ್ಕೆ ವಿರುದ್ಧವಾಗಿ ಯಾವನಾದರೂ ಓಟು ಕೊಡುವನಾದರೆ ಅವನನ್ನು ವಿಶ್ವಾಸಘಾತುಕಿ ಎಂಬ ಬಿರುದಿನಿಂದ ಮನ್ನಿಸುವರು. ಪಾರ್ಲಿಮೆಂಟಿಗಾಗಿ ಖರ್ಚಾಗುತ್ತಿರುವ ಧನ ಮತ್ತು ಸಮಯವನ್ನು ಕೆಲವು ನಿಸ್ವಾರ್ಥಿ ದೇಶಸೇವಕರಿಗೆ ಕೊಟ್ಟಿದ್ದೇ ಆಗಿದ್ದಪಕ್ಷ ಇಂದು ಬ್ರಿಟಿಷ್ ಜನಾಂಗವು ಈಗಿರುವದಕ್ಕಿಂತ ಉಚ್ಚವೇದಿಕೆಯಲ್ಲಿರುತ್ತಿತ್ತು. ಪಾರ್ಲಿಮೆಂಟು ಆ ಜನಾಂಗದ ವಿಪರೀತ ಖರ್ಚಿನ ಗೊಂಬೆ. ಇವು ಹೊಸ ವಿಚಾರಗಳೇನೂ ಅಲ್ಲ. ಅನೇಕ ಬ್ರಿಟಿಷ್ ತಜ್ಞರೇ ಈ ಅಭಿಪ್ರಾಯ ವ್ಯಕ್ತಪಡಿಸಿರುವರು. ಈಗಿನ ಒಬ್ಬ ಪಾರ್ಲಿಮೆಂಟ್ ಸದಸ್ಯರು, 'ನಿಜವಾದ ಒಬ್ಬ ಕ್ರಿಶ್ಚಿಯನನೆಂದೆನಿಸಿಕೊಳ್ಳುವವನು ಅದರ ಸದಸ್ಯನಾಗನು' ಎಂದಿದ್ದಾರೆ. ಮತ್ತೊಬ್ಬರು 'ಅದು ಇನ್ನೂ ತನ್ನ ಶೈಶವಾವಸ್ಥೆಯಲ್ಲಿದೆ' ಎಂದಿರುವರು. ಜನ್ಮಗ್ರಹಣ ಮಾಡಿ 700 ವರ್ಷಗಳು ಕಳೆದರೂ ಸಹ ಅದು ಇನ್ನೂ ಶೈಶವದಲ್ಲಿರುವದಾದರೆ ಅದು ಪ್ರಾಯಕ್ಕೆ ಬರುವದಾದರೂ ಯಾವಾಗ? ಅಂದ ಮೇಲೆ ಮೇಲೆ ಹೇಳಿದ ಬಂಜೆ ಹೆಂಗಸಿನ ಉಪಮೆಯು ಇದಕ್ಕೆ ಸರಿಹೋಲುವದರಲ್ಲಿ ಸಂದೇಹವಿಲ್ಲ.

ಇನ್ನು ವೇಶ್ಯೆಗೆ ಹೋಲಿಸಿದ್ದನ್ನು ಇಲ್ಲಿ ಸಮರ್ಥಿಸಲಾಗುವದು. ಪಾರ್ಲಿಮೆಂಟಿಗೆ ಇಂದು ನಿಜವಾದ ಯಜಮಾನನಿಲ್ಲ. ಪ್ರಧಾನ ಮಂತ್ರಿಯ ಕೈಕೆಳಗೆ ಅದರ ಕಾರ್ಯಕಲಾಪಗಳು ನಡೆಯುವವು. ಪ್ರಧಾನ ಮಂತ್ರಿಯು ತನ್ನ ಅಧಿಕಾರದ ವಿಚಾರ ಹೆಚ್ಚಿಗೆ ಗಮನಿಸುವದಲ್ಲದೆ ಪಾರ್ಲಿಮೆಂಟಿನ ಕ್ಷೇಮಕ್ಕಲ್ಲ. ತನ್ನ ಪಕ್ಷವನ್ನು ಬಲಪಡಿಸಿ ಚುನಾವಣೆಯಲ್ಲಿ ಜಯಶೀಲನಾಗುವ ಯೋಚನೆಯೇ ಅವರ ಧ್ಯೇಯ. ಪ್ರಧಾನ ಮಂತ್ರಿಗಳು ತಮ್ಮ ಪಾರ್ಟಿಯ ಹಿತಸಾಧನೆಗೋಸ್ಕರ ತಮ್ಮ ವಿರೋಧಿಗಳ ಮೂಲಭೂತ ಹಕ್ಕನ್ನೂ ಬಲಿಗೊಟ್ಟಿದ್ದು ವಿರಳವಲ್ಲ. ತಮ್ಮ ಧ್ಯೇಯಸಾಧನೆಗಾಗಿ ಬಿರುದು ಬಾವಲಿಗಳೆಂಬ ಆಶೆಯಲ್ಲಿ ಇತರರನ್ನು ಮರುಳುಗೊಳಿಸುವ ಈ ಲಾಂಛನೀಯವಾದ ಕಾರ್ಯಕ್ರಮಗಳು ಅವರಲ್ಲಿಲ್ಲದೆ ಇಲ್ಲ. ಹೀಗೆ ತಮ್ಮ ನಿರಂತರ ಪ್ರಯತ್ನದಲ್ಲಿ ಆಗಾಗ್ಗೆ ಪ್ರಧಾನರು ಬದಲಾಗುವದರಿಂದ ಪಾರ್ಲಿಮೆಂಟಿನ ಕಾರ್ಯಕಲಾಪಗಳು ಅಸ್ತವ್ಯಸ್ತವಾಗುವದು. ಅಂದ ಮೇಲೆ ವೇಶ್ಯೆಗೆ ಇದನ್ನು ಹೋಲಿಸಿದ್ದರಲ್ಲಿ ತಪ್ಪೇನು?

ಈಗ ಓಟರರ ವಿಚಾರ ಒಂದು ಮಾತಾಡಬೇಕಿದೆ. ಇಂಗ್ಲಿಷ್ ಮತದಾರರಿಗೆ ಅವರ ವಾರ್ತಾ ಪತ್ರಿಕೆಗಳೇ ಸರ್ವಸ್ವ. ವಾರ್ತಾ ಪತ್ರಿಕೆಗಳು ಅನೇಕ ತರಹದ ಅಪ ಪ್ರಚಾರವನ್ನೂ ಅಲ್ಲಿ ಕೈಕೊಳ್ಳಲು ಹಿಂಜರಿಯುವದಿಲ್ಲ. ಆಗ ವಾರ್ತಾಪತ್ರಿಕೆಗಳ ಮೇಲೆ ಅವಲಂಬಿಸಿ ತಮ್ಮ ಮತವನ್ನು ರೂಪಿತಗೊಳಿಸುವ ಓಟರರ ಸ್ಥಿತಿಯೇನು? ಒಬ್ಬ ಯೋಗ್ಯ ಇಂಗ್ಲಿಷ್ ಕೆಲಸಗಾರರನ್ನು ಒಂದು ಪತ್ರಿಕೆಯು ಹೊಗಳಿದರೆ ಅವರ ವಿರೋಧಿಗಳ ಪರ ಕೆಲಸ ಮಾಡುವ ಪತ್ರಿಕೆಯು ತೆಗಳಬಹುದು. ಆದ್ದರಿಂದ ಜನತೆಗೆ ತಮ್ಮ ಅಭಿಪ್ರಾಯಗಳನ್ನು ಆಗಾಗ್ಗೆ ಬದಲಾಯಿಸಬೇಕಾಗುವದು. ಈ ಕೋಲಾಹಲದಿಂದ ಬೇಸತ್ತ ಜನತೆಯು ತಮಗೆ ಟೀಪಾರ್ಟಿ ಸತ್ಕಾರಗಳನ್ನು ಮಾಡುವವರ ಪರ ತಮ್ಮ ಮತವೀಯುವದು ವಾಸ್ತವ. ಹಾಗಾಗುವ ಸಂದರ್ಭದಲ್ಲಿ ಉಮೇದುವಾರರ ಯೋಗ್ಯತಾಪರೀಕ್ಷೆಗೆ ಎಡೆಯೆಲ್ಲಿ? ಓಟರರ ಸ್ಥಿತಿ ಹೀಗೆಯೋ ಅಂತೆಯೇ ಪಾರ್ಲಿಮೆಂಟಿನ ಸದಸ್ಯರ ಸ್ಥಿತಿಯೂ ಸಹ. ಆದರೆ ಬ್ರಿಟಿಷ್ ಜನಾಂಗದಲ್ಲಿ ಒಂದು ಪ್ರಮುಖ ಗುಣವಿದೆ. ಅವರು ತಮ್ಮ ರಾಷ್ಟ್ರವನ್ನು ಕಳೆಕೊಳ್ಳುವ ಯಾವ ಪ್ರಸಂಗಕ್ಕೂ ಕೈಮಿಕ್ಕರು. ಯಾವನೊಬ್ಬನಾದರೂ ಅವರ ರಾಷ್ಟ್ರಗಳ ಮೇಲೆ ದೃಷ್ಟಿಯಿಟ್ಟದ್ದೇ ಆದರೆ ಅವರೆಲ್ಲರೂ ಒಗ್ಗಟ್ಟಾಗಿ ಆತನನ್ನು ವಿರೋಧಿಸುವರು. ಆದರೆ ಇದೊಂದು ಗುಣವಿದ್ದ ಪಕ್ಷ ಅವರಲ್ಲಿ ನಾವು ಅನುಸರಿಸಬಹುದಾದ ಇತರ ಗುಣಗಳಿವೆಯೆಂದು ತಿಳಿಯಲಾಗದು. ಇಂಗ್ಲೆಂಡನ್ನು ಭಾರತವು ಅನುಕರಿಸುವದಾದರೆ ಖಂಡಿತವಾಗಿಯೂ ಭಾರತವು ತನ್ನ ಅಂತಿಮವನ್ನು ಆಹ್ವಾನಿಸಿದಂತೆ ಎಂಬುದರಲ್ಲಿ ರವಷ್ಟೂ ಸಂದೇಹವಿಲ್ಲ. ಇಂಗ್ಲೆಂಡಿನ ಈ ವಿಪನ್ನಾವಸ್ಥೆಗೆ ಕಾರಣವಾದರೂ ಏನಿರಬಹುದು? ಅದು ಇಂಗ್ಲಿಷ್ ಜನಾಂಗದ ವಿಶೇಷ ತಪ್ಪಿನಿಂದಲ್ಲ. ಈ ಸ್ಥಿತಿಯು ಈಗಿನ ಆಧುನಿಕ ನಾಗರೀಕತೆಯ ಪರಿಣಾಮ, ಅದು ಹೆಸರಿಗೆ ಮಾತ್ರ ನಾಗರೀಕತೆ. ಈ ನಾಗರೀಕತೆಯ ಸೋಂಕಿನಲ್ಲಿ ಯೂರೋಪಿನ ರಾಷ್ಟ್ರಗಳು ದಿನೇ ದಿನೇ ಕ್ಷಯಿಸುತ್ತಿರುವವು. ನಾಗರೀಕತೆಯ ಪರಿಣಾಮವನ್ನು ಮುಂದಿನವಾರ ಬರೆಯಲಾಗುವದು.

ತ್ರಿಪುರಿ ಕಾಂಗ್ರೆಸ್ ಅಧಿವೇಶನ.

—:0:—

(ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಿಂದ.)

—:0:—

ಈ ಸಲ ನಡೆಯುವ ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಬಗ್ಗೆ ಕೆಲವೊಂದು ಮಾಹಿತಿಯು ಅಲ್ಲಿನ ಸ್ವಾಗತ ಸಮಿತಿಯವರಿಂದ ಬಂದಿದೆ. ಅದು ಎಲ್ಲರಿಗೂ ಗೊತ್ತಾಗಲೆಂದು ನಮಗೆ ಬಂದಿರುವ ಮಾಹಿತಿಯ ಸಾರಾಂಶವನ್ನು ಕೆಳಗೆ ಕೊಡಲಾಗಿದೆ. ಹೆಚ್ಚಿಗೆ ಮಾಹಿತಿ ನಮ್ಮ ಕಡೆ ಬಂದ ಹಾಗೆ ನಾವು ಅದನ್ನು ಪ್ರಕಟಿಸುವೆವು.

1. ವಿಷಯ ನಿಯಾಮಕ ಸಮಿತಿ—7, 8 ಮತ್ತು 9 ನೇ ಮಾರ್ಚ 1939 ಪ್ರೇಕ್ಷಕ ಫೀ:-ಕಾಂಗ್ರೆಸ್ ಪ್ರತಿನಿಧಿಗಳಿಗೆ ರೂ. 5. ಇತರರಿಗೆ ರೂ. 10.

2. ಕಾಂಗ್ರೆಸ್ ಅಧಿವೇಶನ:-ತಾರೀಕು 9, 10 ಮತ್ತು 11 ನೇ ಮಾರ್ಚ 1939. ಪ್ರೇಕ್ಷಕ ಫೀ-ರೂ. 1, 2, 5, 10, 50 ಮತ್ತು 5,000.

3. ವಸತಿ:-ಪ್ರತಿನಿಧಿಗಳಿಗೆ ಪ್ರತಿಯೊಬ್ಬರಿಗೆ ರೂ. 5, ಇತರ ಪ್ರೇಕ್ಷಕರಿಗೆ ರೂ. 6, ಕುಟುಂಬ (6 ಮಂದಿ) ಕ್ಕೆ ರೂ. 50 ಹಾಗೂ ರೂ. 100.

4. ಊಟ:-ಒಂದು ಹೊತ್ತಿಗೆ 6 ಆಣೆ, ಎರಡು ಹೊತ್ತಿಗೆ 11 ಆಣೆ. ರೈತರ ಊಟ-ಒಂದು ಹೊತ್ತಿಗೆ 3 ಆಣೆ. ಎರಡು ಹೊತ್ತಿಗೆ 5 ಆಣೆ. ಆಯಾ ಪ್ರಾಂತದವರ ರುಚಿ ಪದ್ಧತಿಗಳಿಗನುಸಾರವಾಗಿ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ತ್ರಿಪುರಿ (ವಿಷ್ಣುದತ್ತ ನಗರವು) ಯು ಜಿ. ಐ. ಪಿ. ರೈಲ್ವೆಯ 'ಮದನ ಮಹಲ' ಸ್ಟೇಶನಿನಿಂದ ಸುಮಾರು 7 ಮೈಲು ದೂರದಲ್ಲಿರುವುದು. ಸ್ವಾಗತ ಸಮಿತಿಯವರು ಸ್ಟೇಶನಿನಿಂದ ವಿಷ್ಣುದತ್ತ ನಗರಕ್ಕೆ ಬಸ್ಸುಗಳ ವ್ಯವಸ್ಥೆ ಇಟ್ಟಿದ್ದು ಬಸ್ ಚಾರ್ಜು ಪ್ರತಿಯೊಬ್ಬನಿಗೆ 4 ಆಣೆ ಬೀಳುತ್ತದೆ. ಜಿ. ಐ. ಪಿ. ರೈಲ್ವೆಯವರು ರಿಯಾಯತಿ ತೋರಿಸಿದ್ದು 1¼ ಚಾರ್ಜಿನಲ್ಲಿ ತಮ್ಮ ಯಾವ ಸ್ಟೇಶನಿನಿಂದಾದರೂ ಮದನ ಮಹಲಕ್ಕೆ ಹೋಗಿ ವಾಪಸು ಬರುವ ಟಿಕೇಟುಗಳನ್ನು ಕೊಡುವರು. ಇಂಥಾ ಟಿಕೇಟುಗಳು ತಾ. 28-2-39 ರಿಂದ ತಾ. 12-3-39 ರ ವರೆಗೆ ಕೊಡಲ್ಪಟ್ಟು, ಮರಳಿ ಪ್ರವಾಸವು ತಾ. 21-3-39ರ ಒಳಗಾಗಿ ಮುಗಿಯಬೇಕಾಗುವದು.

ನಾ. ಸು. ಹರ್ಡೀಕರ,

(ಗೌರವ ಕಾರ್ಯದರ್ಶಿ.)

ಧಾರವಾಡ, ತಾ. 22-2-39

ವಿಶೇಷಗಳು ತಿಳಿಯಬೇಕೆ?

ಹೌದು. ಹಾಗಾದರೆ ಇಂದೇ

'ಕೊಡಗು'

ಪತ್ರಿಕೆಯನ್ನು ತರಿಸಿ ಓದಿ ನೋಡಿ ಆಗ ತಿಳಿಯುವುದು.

ಈ ವಾರದ ಕಥೆ.

ಕಾಮನ ಬಿಲ್ಲು.

ಕತೆಗಾರರು:— ನೆರವಂಡ ಪೊನ್ನಪ್ಪ, ಪಾಲೂರು, ನಾಪೋಕ್ಲು.

'ಜೋ, ಜೋ!' ಎಂದು ಹಾಡನ್ನು ಮುಗಿಸಿ, ಪ್ರಫುಲ್ಲೆಯ ತಾಯಿಯು ತನ್ನ ಕೆಲಸದ ನಿಮಿತ್ತವಾಗಿ, ಆತುರದಿಂದ ಹೊರಡಲು, ಇತ್ತ ಕರುಣಾಕರನು ಪುಟ್ಟ ಹೆಜ್ಜೆಗಳನ್ನಿಡುತ್ತ ಅತ್ತಿತ್ತ ನೋಡುತ ಹಾಡು ಕೇಳುತಿದ್ದ ಕಡೆಗೆ ನಡೆದು, ಪ್ರಫುಲ್ಲೆಯು ಮಲಗಿದ್ದ ತೊಟ್ಟಿಲ ಬಳಿ ನಿಂತು, ಇಣಿಕಿ ನೋಡುತ ನಿಂತನು. 'ಕರುಣಾಕರಾ, ಮಗು!' ಎಂದು ಅವನ ತಾಯಿಯು ಕರೆದುದು ಕೇಳಲಿಲ್ಲ.

ತೊಲಗು, ಮಗನೇ, ತೊಲಗು ತೊಟ್ಟಿಲ ಬಳಿಯಿಂದ. ಅದೋ, ಕುರುಡು ಕಾಮನು ಮರೆಯಲ್ಲಿ ನಿಂತು, ಪುಷ್ಪಶರಗಳಿಂದ ತೊಟ್ಟಿಲ ಹುಲ್ಲೆಯನ್ನು ಹೊಡೆಯುತ್ತಿರುವನು! ಅವನು ಗುರಿಯ ಹೊಡೆವ ಮೊದಲೇ ನೀನು ಅದು ನಾಟಿ ನಡೆ, ನಡೆ!—ಪಾಪ! ಅವಾಗಲೆ ಕಾಮನ ಬಾಣಗಳಿಂದ ಹೊಡೆದ ನಷ್ಟವನ್ನು ವಯಸ್ಸಲ್ಲೇ ಅರಿಯದಿರಲು, ಮೊಲೆಯುಣಿಸಿದ ಆ ಬಾಲನಿಗೆ ತಿಳಿಯುವದೆಂತು?

ಹಿರಿಯರ ಸೊಲ್ಲಿನಂತೆ, ಪ್ರಫುಲ್ಲೆಯು ನಿದ್ರೆಯಿಂದೆಚ್ಚೆತ್ತಳು. ಕಿರುಚುತ, ತನ್ನ ಎಳೇ ಕಾಲುಗಳಿಂದ, ಕಾಮನ ಬಾಣಗಳನ್ನು ತಡೆಯುತ್ತಿರುವಳೋ ಎಂಬಂತೆ, ತೊಟ್ಟಿಲನ್ನು ಒದೆಯುತಿರಲು, ಅವಳ ಅಳುವು ಆ ಸಣ್ಣ ಕೋಣೆಯಲ್ಲಿ ದನಿಮರುದನಿಗೊಂಡಿತು. ಅಷ್ಟರಲ್ಲಿ ಕರುಣಾಕರನು ತಾನು ಕೇಳಿದ ಹಾಡನ್ನು ಹಾಡಲು ಬಾರದೆ, 'ಜೋ, ಜೋ!' ಎಂದು ತೊಟ್ಟಿಲನ್ನು ತೂಗಿದನು. ತನ್ನ ಬಳಿಯಲ್ಲಿದ್ದ ಕರುಣಾಕರನ ಮುಖವನ್ನು ಕಂಡು, ಅವಳು ಥಟ್ಟನೆ ಅಳುವನ್ನು ನಿಲ್ಲಿಸಲು, ಎರಡು ನೋಟಗಳೂ ಒಂದನ್ನೊಂದು ಹೊಸ್ತಯೋ ಎಂದು ಶಕ್ತಿಯಿಂದ ಕೆಲವು ಹೊತ್ತು ಎಳೆದುವು. ಅಷ್ಟರಲ್ಲಿ ಕರುಣಾಕರನ ತಾಯಿಯು ಅವನನ್ನು ಕೂಗಿ ಕರೆದಳು. ಕಾಮನು ಪ್ರೇಮದ ಬೀಜವನ್ನು ಬಿತ್ತಲು, ಬಿರುಗಾಳಿಯು ಬಿದ್ದಿತು; ಸೂರ್ಯನು ಮೇಲಕ್ಕೆ ಏರಿದನು.

ಅಂದು ಮೊದಲ್ಗೊಂಡು ಪ್ರಫುಲ್ಲೆ ಕರುಣಾಕರರು ಒಂದು ದೇಹಕ್ಕೆ ಎರಡು ಕಣ್ಣುಗಳಂತೆ ಇದ್ದರು. ಒಬ್ಬರನ್ನೊಬ್ಬರು ಅಗಲರು. ಆಡಲು ಚೆಂಡು ಹಾಡಲು ಪದ ಸಿದ್ಧವಾಯಿತು. ಕರುಣಾಕರನು ಅವಳ ಆಟದ ಗೊಂಬೆಯೊಡನೆ, ಅವಳು ಕರುಣಾಕರನ ಕೊಳಲಾಗಿದ್ದಳು. ಆದರೆ ಗೊಂಬೆಯು ಕಾಸಿನ ಬೆಲೆಯುಳ್ಳದು, ಕೊಳಲು ರೂಪಾಯಿಯದು. ಹೀಗಿದ್ದರೂ ಬಡವ ಬಲ್ಲಿದರೆಂಬ ಭೇದವು ಅವರಿಗೆ ಗೊತ್ತಿರಲಿಲ್ಲ. ಕರುಣಾಕರನು ಕೊಳಲಲ್ಲಿ ಊದುವಾಗ ಪ್ರಫುಲ್ಲೆಗೆ ಪರಮಾನಂದವಾಗುತಿತ್ತು. 'ಎಷ್ಟು ಸುಂದರನು, ಎಷ್ಟು ಸಾಧುವು, ಹೇಗೆ ಊದಬಲ್ಲನು!' ಎಂದು ಅವಳು ಆಶ್ಚರ್ಯಪಡುತಿದ್ದಳು. ಆದರೆ, ಹಾ, ದೈವಘಟನೆಯೆ! ಕರುಣಾಕರನು ಅವಳ ಜೀವದ ಗೆಳೆಯನಾದರೆ, ಜೀವನದ ಗೆಳೆಯನಲ್ಲ, ಏಕೆಂದರೆ ಅವನು ಒಬ್ಬ ಚಿತ್ರ ಕೆಲಸದವನ ಮಗನು; ಅಲ್ಲದೆ ಬಡವನು. ಪ್ರಾಯಕ್ಕೆ ಬಂದ ಮೇಲೆ, ತನ್ನ ಶ್ರೀಮಂತ ಗೆಳತಿಯು ದೂರವಾಗುವಳೆಂಬುದು ಅವನಿಗೆ ಗೊತ್ತಿದ್ದುದರಿಂದ, ತಾನು ಅವಳ ಮನೆಯ ಹೂದೋಟಕ್ಕೆ ಹೋಗಬಾರದೆಂದು ಒಮ್ಮೊಮ್ಮೆ ಯೋಚಿಸುವನು. ಆದರೆ ಕುರುಡನಾದುದರಿಂದ ಕಾಮನಿಗೆ ಬಡವ ಬಲ್ಲಿದರೆಂಬ ಭೇದವು ಇಲ್ಲ.

ಕಾಲಚಕ್ರವು ಸದಾ ತಿರುಗುತ್ತಿರುವುದು. ಹರಿಯುವ ಹೊಳೆಯನ್ನು ತಡೆಯಬಹುದು; ಸಾಧಿಸಿದರೆ, ಉಕ್ಕುವ ಸಮುದ್ರವನ್ನು ತಡೆಯಬಹುದು. ಆದರೆ ಕಾಲಚಕ್ರವು ತಿರುಗುವುದನ್ನು ನಿಲ್ಲಿಸಲು ಅಸಾಧ್ಯವು. ದಿನಗಳು ಕಳೆದು ವಾರವಾಯಿತು; ವಾರಗಳು ಕಳೆದು ತಿಂಗಳಾಯಿತು; ತಿಂಗಳುಗಳಾಗಿ ವರ್ಷ, ವರ್ಷಗಳಾದುವು. ಪ್ರಫುಲ್ಲೆ ಕರುಣಾಕರರು ಆಟದ ಮಕ್ಕಳಲ್ಲ. ಒಂದೇ ಶಾಲೆಯಲ್ಲಿ, ಒಂದೇ ತರಗತಿಯಲ್ಲಿ ಸಂಗಡಿಗರಾಗಿದ್ದು, ಏಕಹೃದಯಿಗಳಂತೆ ಬೆಳೆದರು. ಅವರಿಗೆ ದೇಹವೆರಡಾದರೂ, ಹೃದಯವು ಒಂದೆಯೋ ಎಂಬದಾಗಿ ಭಾಸವಾಗುತಿತ್ತು. ಒಂದು ಹೃದಯದಲ್ಲಿ ಕಲ್ಲಾದರೆ, ಮತ್ತೊಂದರಲ್ಲೂ ಕಲ್ಲೇ; ಒಂದರಲ್ಲಿ ರಕ್ತವಾದರೆ, ಮತ್ತೊಂದರಲ್ಲೂ ರಕ್ತವೇ.

ನಾಳೆ ಕರುಣಾಕರನು ತನ್ನ ತಾಯಿ ತಂದೆಯರೊಡನೆ ಹೊಟ್ಟೆಪಾಡಿಗಾಗಿ ಪರಊರಿಗೆ ಹೋಗಬೇಕು. ತನ್ನ ಪ್ರೀತಿಯ ಗೆಳತಿಯನ್ನು ಅಗಲಬೇಕಲ್ಲ ಎಂಬ ಚಿಂತೆಯು ಅವನ ಹೃದಯವನ್ನು ಒಡೆಯುವಂತೆ ಮಾಡಿತು. ಇದನ್ನರಿತ ಪ್ರಫುಲ್ಲೆಯು ತವಕ್ಕಾದಳು .... ಬೆಳದಿಂಗಳ ರಾತ್ರಿ. ಪ್ರಫುಲ್ಲೆಯ ಮನೆಯ ಹಿಂಭಾಗದ ಹೂದೋಟದಲ್ಲಿಯ ಒಂದು ಬಾವಿಯ ಬಳಿಗೆ ಪ್ರಫುಲ್ಲೆ ಕರುಣಾಕರರು ಹೋಗಿ, ಆನಂದಿಸುತ ಇದ್ದರು. ಆಗ ಅವರ ನೆರಳು ಬಾವಿಯೊಳಗಿನ ನೀರಿನಲ್ಲಿ ಚೆನ್ನಾಗಿ ಕಾಣುತಿರಲು, ಅದನ್ನು ನೋಡಿ ಪ್ರಫುಲ್ಲೆಯು, 'ಪ್ರಿಯ ಕರುಣಾಕರ, ನೋಡು; ನಮ್ಮ ಜೀವವು ಆ ನೀರಿನೊಳಗೆ ಕಾಣಿಸುವ ನೆರಳಿನಂತೆಯಲ್ಲವೇ? ಯಾವನು ಜೀವವನ್ನು ದೀರ್ಘವಾಗಿಟ್ಟುಕೊಂಡಿರಲು ಪ್ರಯತ್ನಿಸುವನೋ ಅವನು, ನೀರಲ್ಲಿ ಕಾಣಿಸುವ ನೆರಳನ್ನು ಹಿಡಿಯಲೆತ್ನಿಸುವ ಮೂರ್ಖನಂತಿರುವನು,' ಎನ್ನಲು, ಕರುಣಾಕರನು, 'ನೀರಲ್ಲಿ ಕಾಣಿಸುವ ನೆರಳುಗಳೆಲ್ಲ ಒಂದೇ ರೂಪವಾಗಿರುವುವು,' ಎಂದು, ಹಿಂದಕ್ಕೆ ಸರಿದು, 'ಈಗ ನೋಡು, ಪ್ರಿಯತಮೆ, ಒಂದು ಜೀವವು ಎರಡಾಗಿರುವುದು.' ಎಂದು ತನ್ನಾಸೆ ಹೇಳಲು, ಅವಳು, 'ಇಲ್ಲ, ಇಲ್ಲ; ಒಂದು ನೆರಳು ಮಾತ್ರ ಕಾಣದಾಗಿರುವುದು,' ಎಂದು ನುಡಿದವಳೆ ಸ್ವಲ್ಪ ಚಕಿತಳಾದಳು. ತನ್ನ ಪ್ರಿಯ ಗೆಳೆಯನು ಮರುದಿನ ತನ್ನನ್ನು ಬಿಟ್ಟು ಅಗಲುವನು ಎಂಬ ಯೋಚನೆಯು ಅವಳನ್ನು ಚುಚ್ಚಿತು. ಹಾಗೆಯೇ ಮನದಲ್ಲಿ ದೇವರು ಸುಖಸಂಪದವನ್ನೀಯಲಿ ಎಂದು ಪ್ರಾರ್ಥಿಸಿಕೊಂಡಳು. ಆಕಾಶವು ಮೋಡಕವಿದು ಕತ್ತಲಾಯಿತು. ಹೂದೋಟ ಬರಿದಾಯಿತು.

ಬೆಳಗಾಯಿತು... ಶೀಟಿಯೊಡನೆ ರೈಲು ಬಂಡಿಯು ಹೊರಟಿತು. 'ಮರೆಯಬೇಡ!' ಎಂಬುದಾಗಿ, ಬಂಡಿಯೊಳಗೆ ತನ್ನ ತಾಯಿ ತಂದೆಯರೊಡನೆ ಇದ್ದ ಕರುಣಾಕರನು ಚಿಂತೆಯಿಂದ ಹೇಳಿದನು. 'ಕೊನೆಯದರ್ಶನ!' ಎಂದು ಪ್ರಫುಲ್ಲೆಯ ಬಾಯಿಯಿಂದ ತಾನಾಗಿ ಹೊರಟಿತು. ಬಂಡಿಯ ಕಿಟಿಕಿಯೊಳಗಿನಿಂದ ಕರುಣಾಕರನು ತನ್ನ ತಲೆಯನ್ನು ಹೊರಚಾಚಿ, ಪ್ರಫುಲ್ಲೆಯನ್ನು ನೋಡುತ್ತಾ ಇದ್ದನು. ಅಷ್ಟರಲ್ಲಿ ಬಂಡಿಯು ಒಂದು ತಿರುವನ್ನು ತಿರುಗಿ ಮಾಯವಾಗುವುದೂ, ಅಲ್ಲೇ ನಿಂತು ನೋಡುತಿದ್ದ ಪ್ರಫುಲ್ಲೆಯ ಕಣ್ಣುಗಳಿಂದೆರಡು ತೊಟ್ಟು ನೀರು ಹರಿಯುವುದೂ ಏಕಸಮಯವಾಯಿತು. ಬಂಡಿಯ ಓಡುವ ಶಬ್ದವು ವಿರಳ ವಿರಳವಾದಂತೆ ಅವಳ ಎದೆಯ ಬಡಿತದ ಶಬ್ದವು ಜೋರು ಜೋರಾಯಿತು. ಒಮ್ಮೆಲೆ ಬಂಡಿಯು ಹಳ್ಳದೊಳಗೆ ಬಿದ್ದು, ಮುಳುಗಿ ಹೋದಂತೆ ಅವಳಿಗೆ ಭಾಸವಾಯಿತು.

ಇದೇನು ಇಂದ್ರಲೋಕವೇ? ಅಲ್ಲ, ಇದು ಮದುವೆಮಂದಿರವು. ವಾದ್ಯವು ಮೊಳಗುತಿದೆ; ಜಯಘೋಷಗಳು ಜೋರಾಗಿ ಕೇಳುತ್ತಿವೆ. ಎಲ್ಲಿ ನೋಡಿದರೂ ಜನಸಂದಣಿಯು, ಕಂಟಿ ಕುರುಡರಿಗೆ, ಒಡನೆ ಬಲ್ಲಿದರಿಗೆ ಸ್ವರ್ಗ ಸುಖವೇ! ಓಹೋ, ಇದು ಮದುವೆಯೆ! ಅದೋ, ಮಂಟಪದಲ್ಲಿ ಒಬ್ಬನು ಸಭ್ಯನಾಗಿ ಸನುಗಿನಗುತ ಕುಳಿತಿರುವನು; ನವನಾಗರಿಕತೆಯು ಆತನ ತಲೆಗೆ ಏರಿಸಿನಾರಿ ಏರಿದಂತೆ ಕಾಣುತ್ತದೆ. ಬಹಳ ಪುಸ್ತಕಗಳನ್ನು ಹೊತ್ತು, ಬೆನ್ನು ಸ್ವಲ್ಪ ಗೂನಾಗಿರುವಂತೆ ತೋರುವುದು. ವಯಸ್ಸು ಎಪ್ಪತ್ತೆಂಟಾದರೂ, ಲೆಕ್ಕದಲ್ಲಿ ಇಪ್ಪತ್ತೆಂಟು ಮಾತ್ರ ದಾಖಲಿಗಿದೆ. ಲೆಕ್ಕದಲ್ಲಿ ತಪ್ಪೋ, ತಪ್ಪಿನಲ್ಲಿ ಲೆಕ್ಕವೂ ತಿಳಿಯದು. ಇದೇನು? ವಧುವಿಗಾಗಿ ವರನೋ, ವಧೆಗಾಗಿ ವರನೋ ಎಂಬ ಸಂಶಯವು ಪಂಡಿತರಲ್ಲಿ ಮೂಡಿರಬಹುದೆಂದು ಭಾಸವಾಗುವದು. ಅದು ಪಂಡಿತರಿಗೇ ಅರಿವು. ವರನು ವಧೆಗಾಗಿ ಹೂವಿನ ಹಗ್ಗವನ್ನು ತೆಗೆದು, ವಧುವಿನ ಕೊರಳಲ್ಲಿಡಲು, ಚಿಂತೆಯಿಂದ ಕಂದಿಕುಂದಿದ ಪ್ರಫುಲ್ಲೆಯು ಸ್ಮೃತಿತಪ್ಪಿದವಳಂತೆ ನಟಿಸಿ, ಬಿದ್ದು ಬಿಟ್ಟಳು. 'ಧಾರೆಯಾಯಿತೆಂದರು ಪುರೋಹಿತರು; 'ಹೊತ್ತಾಯಿತು, ಹೊತ್ತಾಯಿತು' ಎಂದರು ಭಟ್ಟರು. ಅಷ್ಟರಲ್ಲಿ ಸೂರ್ಯನು ಹೊತ್ತಾಯಿತೆಂದು ತಾನೂ ಪರ್ವತ ತಪ್ಪಲಲ್ಲಿಳಿದನು. ಬಹುಶಃ ವಾಯುವು ಮದುವೆಮಂದಿರದ ತಿಂಡಿ ಪದಾರ್ಥಗಳ ಸುವಾಸನೆಯನ್ನು ಸೂರ್ಯನ ಮೂಗಿಗೂ ಹಚ್ಚಿರಬೇಕು. ಆದಕ್ಕಾಗಿಯೇ ಅವನು ತನ್ನ ಮನೆಯ ಹೋಳಿಗೆಯನ್ನು ನೆನಸಿ, ಮುಳುಗಿದನೆಂದು ತೋರುತ್ತದೆ.

ರಾತ್ರಿಯ ಹೊತ್ತು, ನಿಃಶಬ್ದ, ನೀರವ, ಬೆಳದಿಂಗಳಿಲ್ಲ; ತಾರೆಗಳು ವಿರಳ. 'ಕರುಣಾಕರ' ಎಂದು ಕೂಗಿದ ಕೂಗು ನಿಶಬ್ದವನ್ನು ಭೇದಿಸಿ, ಪ್ರತಿಧ್ವನಿಯಾಗಲು, ಪ್ರಫುಲ್ಲೆಯು ರಾತ್ರಿಯಲ್ಲೊಬ್ಬಳೇ ಹೀಗೆ ಕೂಗಿದುದು ತಪ್ಪಾಯಿತೆಂದು ಭಯಗೊಂಡಳು. ಅಷ್ಟರಲ್ಲಿ 'ಪ್ರಫುಲ್ಲೆ' ಎಂದು ಯಾರೋ ಕರೆದಂತಾಯಿತು. ಪ್ರಾಯಶಃ ಆ ಮದುಗೂನನು ಸ್ವಪ್ನದಲ್ಲಿ ತನ್ನನ್ನು ಕರೆಯುತಿರಬಹುದೆಂದು ಯೋಚಿಸಿದಳು. ತನ್ನ ಪ್ರಾಣ, ತನ್ನ ಸರ್ವಸ್ವವೂ, ಕರುಣಾಕರನೇ ಎಂದೂ, ತಾವಿಬ್ಬರು ತೊಟ್ಟಿಲಿಂದ ಅಗಲಿಕೆವರೆಗು ಜತೆಯಲ್ಲಿ ಇದ್ದೂ, ತನಗೆ ಆ ಕರುಣಾಕರನು ಪತಿಯಾಗಲಿಲ್ಲವೆಂಬ ಕೊರಗು ಅವಳನ್ನು ಕೊಲ್ಲುತಿದ್ದರೂ ಕೊಲ್ಲಲಿಲ್ಲ. ತಾನೇಕೆ ಈ ವಿಷಯವನ್ನು ತನ್ನ ಮಾತಾಪಿತೃಗಳಿಗೆ ತಿಳಿಸಲಿಲ್ಲ ಎಂಬ ವ್ಯಸನವು ಅವಳನ್ನು ಕಳೆ ಬರದಂತೆ ಮಾಡದಿದ್ದರೂ ಮಾಡಿತು. ತಪ್ಪು ತನ್ನ ಅಪ್ಪಪ್ಪದಲ್ಲಿಲ್ಲ; ತನ್ನಲ್ಲೇ ಇದೆಯೆಂದು ಯೋಚಿಸತೊಡಗಿದಳು. ಅವನಿರುವ ಊರಿಗೀಗಲೆ ಹೋಗಲೆ ಎಂದು ಯೋಚಿಸಲು, ಇಷ್ಟೊಂದು ಹೊತ್ತಿಗೆ ಬಂಡಿಯು ಸಿಗಲಾರದು ಎಂಬುದು ವಿರೋಧವಾಯಿತು; ಅಲ್ಲದೆ ಅವನ ಮನೆಯನ್ನು ಹುಡುಕುವ ಬಗೆ ಹೇಗೆಂಬುದು ತಿಳಿಯದಾಯಿತು. ತನ್ನ ಕಾಗದವು ತಲುಪಿರಲಾರದೇ, ಅಥವಾ ತನ್ನ ಮದುವೆಯನ್ನು ತಿಳಿದು ಬರಲಾರನೇ ಎಂದೊಮ್ಮೆ ಯೋಚಿಸುತಿರಲು, ಅತ್ತ ಯಾರೋ ಒರುವಂತಾಯಿತು. ಸ್ವಲ್ಪ ಭಯಗೊಂಡಳು. ಮುಂದೆ ಬಂದು, 'ಅಂದು ನಾವಿಬ್ಬರೂ ನಿಂತು ಇಣಿಕಿ ನೋಡಿದ ಈ ಬಾವಿಯೊಳಗೆ ನನ್ನ ಪ್ರಿಯನಿರಬಹುದೇ?' ಎಂದು ಇಣಿಕಿ ನೋಡಿದಳೊಮ್ಮೆ. 'ಅಂದಿನ ದಿನವಲ್ಲ ಇಂದು ಅಂದು ಜೀವನದ ಅಗಲಿಕೆ, ಇಂದು ಜೀವದ' ಎನ್ನುವಷ್ಟರಲ್ಲಿ ಕರುಣಾಕರನು ಪ್ರತ್ಯಕ್ಷನಾದನು. ಇಬ್ಬರಲ್ಲೂ ಮೌನವು. ಮೌನದೊಡನೆ, ಯಾವ ಕಾರಣದಿಂದಲೋ ಕರುಣಾಕರನು ಕರುಣಾಕರನಾಗಿರಲಿಲ್ಲ. ಅದು ಅವನ ಸುಗುಣಗಳಲ್ಲಿ ಚಾಂಚಲ್ಯದೊಂದು ಎಡೆ. 'ಇಲ್ಲ; ಕ್ಷಮಿಸ ; ದೂರವಾಗಿರಬೇಕು,' ಎಂದು ಹೇಳಿ, 'ನೀನು ಇಷ್ಟರ ವರೆಗೆ ನನ್ನೊಡನೆ ನಾಟಕ ಸ್ತ್ರೀಯಂತೆ ಇದ್ದೆ; ಇಂದು ನಿನ್ನ ನಿಜರೂಪವನ್ನರಿತೆನು. ಆದರೂ ನಿನ್ನನ್ನೊಮ್ಮೆ ನೋಡಬೇಕೆಂಬ ಆಸೆಯು ಇತ್ತು. ಅದೂ ಇಂದಿಗೆ ಮುಗಿಯಿತು,' ಎಂದು ಮುಗಿಸಲು, 'ಹಾ, ಕರುಣಾಕರಾ!' ಎಂಬ ಶಬ್ದದೊಡನೆ ಬಾವಿಯು ನೀರೂ 'ಛಲ್' ಎಂದಿತು. ಬಿರುಗಾಳಿಯೆದ್ದು, ಸಿಡಿಲು ಗುಡುಗು ತೊಡಗಿ, ಕಾರ್ಮೋಡಗಳು ಸೇರಿ ಪ್ರಕೃತಿಯು ಪ್ರಳಯ ಕಾಲದಂತೆ ತೋರಿತು.

ಜೋರಾಗಿ ಹೊಡೆದ ಮಳೆಯು ಕರುಣಾಕರನ ಮನದ ಕಲಂಕವನ್ನು ತೊಳೆದುಕೊಂಡು ಹೋಗಲು, 'ಆಹಾ, ಪ್ರಫುಲ್ಲೆ ದೇವಿ, ಇದುವೆ ಪ್ರೇಮ, ಇದುವೆ ತ್ಯಾಗ!' ಎಂದವನೆ ಬಾವಿಯಲ್ಲಿ ತಾನೂ ಬಿದ್ದನು. ತೊಟ್ಟಿಲಲ್ಲಿ ಸಂಗಮವಾದವರು ತೊಟ್ಟಿಲಲ್ಲಿಯೇ ಪುನಃ ಐಕ್ಯವಾದರು. ಅಂತು ಇಂತು ಮಾನವನಿಗೆ ತೊಟ್ಟಿಲೇ? ಇದೇ ಕಾಮನ ಬಿಲ್ಲಿನ ಪ್ರಯೋಗದ ಫಲಿತಾಂಶವು.

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿಸಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–37 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000 ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಬರಾರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–51

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕ.

ಮತ್ತು ಕಂಪನಿ,

(52–12) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,

ಮ. ಕೆ. ಯಂ. ಸುಬ್ಬಯ್ಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಪನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ.

ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಮ್ಮನವರು.

ಸೋಮವಾರಪೇಟೆ—ಮ ಕೆ ಬೋಗಪ್ಪನವರು.

ನಾಪೋಕ್ಲು—ಮ. ಬಿಳ್ಳಿಮಂಡ ಯಂ ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯ್ತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

32 ಸಿ. ಹೆಚ್. ರಾಮಯ್ಯಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಿಗೆ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಗಾಲ ಮಾಲಿನ** ರಿಜಿಸ್ಟರು, ಸಾಲದ ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳು ಇಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ... ಪ್ರಕಾರ ತಯಾರಿಸಲ್ಪಟ್ಟಿರುವ ... ಪುಸ್ತಕಗಳೂ, ... ಪುಸ್ತಕಗಳೂ, ... ಪುಸ್ತಕಗಳೂ, ಓಚರ್ ಪುಸ್ತಕಗಳೂ ಇಲ್ಲದೆ ... ಸಾಲದ ಅರ್ಜಿ, ದವಸಭಂಡಾರದ ... ನಾನಾ ಫಾರಮುಗಳೂ, ... ಕಳುಹಿಸಲಾಗುವದು. ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55	ರೂ. 35.	ರೂ 22
6 ತಿಂಗಳಿಗೆ—	„ 100.	„ 35	„ 22.	„ 13
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವ್ಯಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ಪಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗ.

52-8

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೦—೩—೧೯೩೯.

ಸಂಪುಟ ೧೮] [ಸಂಚಿಕೆ ೪೦

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000 - & 5,000,-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52–13

ಕೇರಳ ಆಯುರ್ವೇದಿಕ್ ವೈದ್ಯಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯವಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52–2

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ ಸೆಲೊಲಾಯಿಡ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

16

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-40

The Agricultural &
Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೀನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-24)

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-24

ವಿ ವಿ ಧ ವಿ ಚಾ ರ.

ಮಣ್ಣಿನ ಪಾತ್ರೆಗಳ ರಂಧ್ರವನ್ನು ಮುಚ್ಚುವುದು.

ಮಣ್ಣಿನಲ್ಲಿ ಮಾಡಿದ ಮಡಿಕೆ ಸೋರಲಾದುವುಗಳಿಗೆ ರಂಧ್ರವುಂಟಾದರೆ ಬಳವದ ಹಿಟ್ಟನ್ನು ಬೆಲ್ಲವನ್ನು ಸೇರಿಸಿ ಆ ರಂಧ್ರಕ್ಕೆ ಅಂಟಿಸಿ ಬಿಸಿಲಿನಲ್ಲಿ ಒಣಗಿಸಿದರೆ ಚೆನ್ನಾಗಿ ಆಗುವುದು. ತರುವಾಯ ಒಲೆಯ ಮೇಲಿಟ್ಟು ಊಟಕ್ಕೆ ಅನುಕೂಲವಾದ ಪದಾರ್ಥಗಳನ್ನು ಮಾಡಬಹುದು. ಅದು ಸೋರುವುದಿಲ್ಲ.

—:0:—

ಗೆದ್ದಲು ಹಿಡಿಯದಂತೆ ಮಾಡುವದು.

ಎಣ್ಣೆಯ ಗೋಡೆಯನ್ನು ಹಾಕಿ ಮನೆಯನ್ನು ಕಟ್ಟುವವರು, ದೂಲಗಳು ನಿಲ್ಲತಕ್ಕ ಸ್ಥಳಗಳಲ್ಲಿಯೂ, ಬಾಗಿಲುವಾಡಗಳು ನಿಲ್ಲುವ ಸ್ಥಳಗಳಲ್ಲಿಯೂ, ಅವುಗಳನ್ನು ಸೇರಿಸುವ ಜಾಗದಲ್ಲಿ (ತಾವರೆ ಎಲೆಯನ್ನು) ಇಟ್ಟಿದ್ದರೆ ಗೆದ್ದಲು ಹಿಡಿಯುವುದಿಲ್ಲ. ಹೀಗೆಯೇ ಮೊಳೆಗೆ ಮನೆಗಳಿಗೂ ಮಾಡಬಹುದು.

—:0:—

ಬಿಳಿ ಜನರ ಬಿರುದುಗಳು.

ರೆವರೆಂಡ್ ಜೇಮ್ಸ್ ಹೋರೇಸ್ ಎಂಬ ನೀಗ್ರೋ ಪಾದ್ರಿಗಳು ನಮ್ಮ ದೇಶದ ಅಭಿಮಾನವನ್ನು ಮಾರಿಕೊಂಡು ದಸರಾಗಿ ಜೀವಿಸುವ ಪಾದ್ರಿಗಳಿಗೆ ದಾರಿ ತೋರಿಸಿದ್ದಾರೆ. ಬಿಳಿ ಜನರು ಕರಿ ಜನರನ್ನು ಹೀನವಾಗಿ ಕಾಣುವುದಕ್ಕೆ ಉತ್ತರವಾಗಿ ಇವರೊಂದು ವಿಚಾರಯುಕ್ತವಾದ ಬಿರುದುಗಳ ಪಟ್ಟಿ ಬಿಳಿ ಜನರಿಗಾಗಿ ರಚಿಸಿದ್ದಾರೆ. 'ಜನರ 1ನೇ ವೈರಿ, ದರೋಡೆಗಾರ ಮನ್ರೊ ಕೊಚ್ ಬಿಳಿ ಜನ; 80 ಮಿಲಿಯ ಡಾಲರ್ ಬೆಲೆಯ ಮೂಲಕ ದ್ರವ್ಯದ ಕಳ್ಳ ವ್ಯಾಪಾರ ನಡೆಸಿದ ಡಿಲ್ಲಿಂಜರ್ ಮತ್ತು ಡೆನಾಲ್ಡ್ ಕೋಸ್ಟರ್ ಬಿಳಿ ಜನರು; ಕೇಪನ್ ಮತ್ತು ಮಷಿನ್‌ಗನ್ ಕೆಲ್ಲಿ ಎಂಬ ದರೋಡೆಗಾರರು, ಬಿಳಿ ಜನರು; ಒಟ್ಟಿನಲ್ಲಿ ಜಗತ್ಪ್ರಖ್ಯಾತ ಖೂಳರೂ, ದರೋಡೆಗಾರರೂ, ಖಳರೂ ಹೆಚ್ಚಾಗಿ ಎಲ್ಲರೂ ಬಿಳಿ ಜನರೇ.'

—:0:—

ಹಿಟ್ಲರನ ಮಗು.

ಈ ವರ್ಷದ ಭವಿಷ್ಯವನ್ನು ಸಾರುತ್ತ ಕೆಲವರಿಗೆ ಮಕ್ಕಳಾಗುವ ವಿಚಾರವನ್ನು ಭವಿಷ್ಯವಾದಿಯೊಬ್ಬ ಪ್ರಕಟಿಸಿದ್ದಾನೆ. ಜೂನ್ ಅಥವಾ ಸೆಪ್ಟೆಂಬರಿನಲ್ಲಿ ವಿಂಡ್ಸರ್ ದಂಪತಿಗಳಿಗೆ ಒಂದು ಗಂಡು ಮಗು ಜನಿಸುವದು. 1940ನೇ ಡಿಸೆಂಬರದಲ್ಲಿ ನಮ್ಮ ಚಕ್ರವರ್ತಿ 6ನೇ ಜಾರ್ಜರು ಗಂಡು ಮಗುವೊಂದರ ತಂದೆಯಾಗುವರು. ಪಾಟ್ಯಾಲದ ಮಹಾರಾಜರು ಕ್ರಿಕೆಟ್ ಆಟಗಾರರನ್ನೇ! ಇವರ ಅನಂತರದ ಆಟಗಾರನಾಗಿ 1939ರ ಜೂನ್‌ನಲ್ಲಿ ಮಗುವೊಂದು ಜನಿಸುವುದು. ಇದರ ಜನನದಿಂದ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಲಿದೆ. ಮಾರ್ಚಿ ಅಥವಾ ಮೇ ತಿಂಗಳಲ್ಲಿ ಇದೇ ವರ್ಷ ಅವಿವಾಹಿತ ಹಿಟ್ಲರನಿಗೊಂದು ಮದುವೆ ಆಗಿಯೇ ಆಗುವುದು. ಅದಕ್ಕೆ ಕಾರಣವೆಂದರೆ ಮೇ ತಿಂಗಳಲ್ಲಿ ಆತನಿಗೊಂದು ಗಂಡು ಮಗು ಹುಟ್ಟುವುದೇ ಆಗಿದೆ. ಏಸು ಕ್ರಿಸ್ತನ ಜನನವಾಗಲೂ ಬಹುದು. ಮದುವೆಯಾದ ಕೊಂಚ ಸಮಯದಲ್ಲಿ ಮಗುವೆಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಸರ್ವಾಧಿಕಾರಿಗೆ ಆದಾವುದು ಅಸಾಧ್ಯ?

—:0:—

ಕಲ್ಲಿನ ಮಳೆ.

ಕಲ್ಲಿನ ಮಳೆಗೆ ಸಿಕ್ಕಿ ನರಳಿದ ಓರ್ವ ಗವರ್ನರರ ಅನುಭವವು ಈಗ ತಾನೇ ಬೆಳಕಿಗೆ ಬಂದಿದೆ. ಅವರು ಮತ್ತಾರೂ ಅಲ್ಲ. ಬ್ರಿ. ಸಾಮ್ರಾಜ್ಯ ಸರ್ಕಾರದ ಪಶ್ಚಿಮ ಇಂಡಿಯಾ ದ್ವೀಪಗಳಲ್ಲೊಂದರ ಗವರ್ನರರು. ಈ ರೀತಿಯಾಗಿ ಸುಮಾರು 20 ನಿಮಿಷಗಳು ಒಂದೇ ಸವನೆ ಕಲ್ಲುಗಳು ಸುರಿದವೆಂದೂ, ಆ ಪ್ರದೇಶಗಳಲ್ಲಿ ಎಲ್ಲಿಯೂ ಕಾಣ ಬರದ ಕಲ್ಲುಗಳಾಗಿದ್ದುವೆಂದೂ ಇವರು ತಿಳಿಸಿರುವರು. ಮಳೆಯು ಕ್ರಮೇಣ ನಿಲ್ಲದೆ ಇ ಷ್ಟಕ್ಕಿದ್ದ ಹಾಗೆ ನಿಂತುದಲ್ಲದೆ, ಆಗ ಬೆಳದಿಂಗಳೂ ಸಹ ಇತ್ತಂತೆ! ಇದ್ದರೂ ಇರಬಹುದು. ಯೋಚಿಸಬ ರ್ರಿ.

—:0:—

ನೈ ಬಿಸಿ ಮಾಡಲು

ಜರ್ಮನಿಯಲ್ಲಿ ಚಳಿಗಾಲದಲ್ಲಿ ನೈಯನ್ನು ಬಿಸಿಯಾಗಿರಿಸಿ ಕೆಲಸಕ್ಕೆ ಸಹಕಾರಿಯಾಗಬಲ್ಲ ಯಂತ್ರವೊಂದರ ಶೋಧ ನಡೆದಿದೆ. ಇದನ್ನು ಕಿಸೆಯಲ್ಲಿ ಧರಿಸಿದರೆ ಸರಿ. ಸುಮಾರು 10 ತಾಸುಗಳ ತನಕ ಆದಾವ ತೆರನ ಚಳಿಯೂ ನೈಯನ್ನು ಸೋಂಕದು. ಇದೊಂದು ಸೇವಿಂಗ್ ಸ್ಟಿಕ್‌ನ ಹಿಡಿಯಂತಿರುತ್ತದೆ. ಇದರೊಳಗೆ ಇರುವ ಕಾಠಿನ್ಯಕ್ಕೆ ಹತ್ತಿಯನ್ನು ಪೆಟ್ರೋಲಿನಲ್ಲದ್ದಿ, ತುಂಬಿದರ ಸರಿ. ಅನಂತರ ಅದರೊಳಗೊಂದು ಚಿಮಿಟಿ ಇರಿಸಿ, ಮುಚ್ಚಳ ಮುಚ್ಚಿ ಕಿಸೆಯಲ್ಲಿರಿಸಿಕೊಂಡರೆ ನಿಮ್ಮಕೆಲಸ ಚಳಿಯಿಂದಲೂ ಸೀಘ್ರ ನಡುಗಲಾರಿರಿ.

—:0:—

ಮರಣಶಾಸನ ಬರೆಯಲು 20 ವರ್ಷ.

ಒಂದು ಮರಣ ಶಾಸನ ಬರೆಯಲು 20 ವರ್ಷ ಬೇಕಾದ ಸಂದರ್ಭವೊಂದು ಶ್ರೀಮತಿ ಫ್ರೆಡರಿಕ್ಷಾ ಕುಕ್ (ಲಂಡನ) ದವರಿಗೆ ಒದಗಿದ ಸೋಜಿಗ ಸುದ್ದಿಯಿದು. ಇದೇ ಜಗತ್ತಿನಲ್ಲಿಲ್ಲ ಪ್ರಖ್ಯಾತವಾದ ಮರಣ ಶಾಸನವಂತೆ. ಇದರಲ್ಲಿ 2000 ಪುಟಗಳಿವೆ. ತನ್ನ ಪ್ರತಿಯೊಂದು ಆಸ್ತಿಯ ವಿವರವೂ ಇದರಲ್ಲಿದ್ದು ಒಟ್ಟು ಬೆಲೆಯು 20 ಸಾವಿರ ಪೌಂಡುಗಳಷ್ಟಾಗುವುದಂತೆ. ತನ್ನ ಕನಬನ್ನಾಗಿಯೇ ಇದನ್ನು ಆಕೆ ಮಾಡಿಕೊಂಡು ತನ್ನ ಪ್ರತಿ ದಿನದ ಸಂಪಾದನೆಯನ್ನೂ ಆ ಶಾಸನಕ್ಕೆ ಸೇರಿಸುತ್ತಾ ಹೋದಳು. ಇದರಿಂದ ವ್ಯಾಜ್ಯವೇನೂ ಇಲ್ಲದಿರಲಿ ಎಂಬುವುದೇ ಆಕೆಯ ಗುರಿಯಾಗಿತ್ತಂತೆ. ಆದರೆ ಶಾಸನವು ಬಯಲಿಗೆ ಬಂದಾಗ ಬರಿ ಶಾಸನವೇ ಉಳಿದಿದ್ದಂತೆ!

—:0:—

ಹೊರಳಾಟ.

ಗಂಡನ ಮರಣದಿಂದ ದುಃಖಿತಳಾದ ಸ್ತ್ರೀಯೊಬ್ಬಳು ಆತನ ಚಿತೆಯಲ್ಲೇ ಬಿದ್ದು ಸಾಯಲೆಳಸಿದಾಗ ಪೋಲೀಸರಿಂದ ಬದುಕಿಸಲ್ಪಟ್ಟಳು. ಇದು ನಾಲ್ಕು ವರ್ಷಗಳ ಹಿಂದಣ ವಿಚಾರ. ಅಂದೇ ಆಕೆ ನಿರಶನವ್ರತವನ್ನು ಕೈಕೊಂಡು ನಿದ್ದೆ ಹೋದಳು. 12 ತಿಂಗಳ ಕಾಲ ನಿದ್ದೆ ಮಾಡಿದಳು. ಅದರ ಪರಿಣಾಮವಾಗಿ ಸ್ವಪ್ನವೊಂದನ್ನು ಕಂಡಳು. ಅದರಲ್ಲಿ ಆಕೆಯ ಗಂಡ 'ನೀನು ನೆಲದಲ್ಲಿ ಹೊರಳುತ್ತಾ ಕಾಶಿಗೆ ಬಾ. ಗಂಗಾ ನದಿ ತೀರದಲ್ಲಿ ನಾನು ನಿನ್ನನ್ನು ಸ್ವಾಗತಿಕರಿಸುವೆನೆಂದು' ಹೇಳಿದನಂತೆ. ಈಗ ಆಕೆ 'ಮಡಸ್ನಾನ' ಮಾಡುತ್ತಾ ಗಂಗಾ ನದಿ ತೀರಕ್ಕೆ ಹೊರಟಿದ್ದಾಳೆ. 700 ಮೈಲಿ ದೂರ ಇದಾಗಲೇ ಮುಗಿಸಿದ್ದಾಳೆ. ಈ ಸಹಾಸಕ್ಕೆ ತೊಡಗಿ 3 ವರ್ಷಗಳೂ ಸಂದಿವೆ.

—:0:—

ನ್ಯಾಯಾಧೀಶರು.

ಕೆಲಿಫೋರ್ನಿಯಾದ ಮ್ಯಾಜಿಸ್ಟ್ರೇಟರು ಬಹಳ ಉದಾರಿಗಳು. ಈ ದೇಶದಲ್ಲಿ ದಂಡನೆ ವಿಧಿಸುವಾಗ, ಇವರು ವಿಸ್ಕಿ, ಬೀರ್, ಬ್ರಾಂಡಿಗಳ ಬಾಟ್ಲಿಗಳನ್ನು ದಂಡ ವಿಧಿಸುತ್ತಿರುವರು ಕೆಲವರ ಬಳಿಕ ಮ್ಯಾಜಿಸ್ಟ್ರೇಟರೇ ಕುಡಿದು ಮತ್ತರಾಗುವರಂತೆ, ಇದೆ. ಇದರಲ್ಲಿ ಜಾಣರಿಗೂ ಲಾಭವಿದೆ. ಆದರೆ ಇದು ಹೆಚ್ಚಾದರೆ ಬಾಟ್ಲಿಗಳ ದಂಡನೆ ರದ್ದು. ನಮ್ಮಲ್ಲಿನ ಕುಡಿಕರು ಇನ್ನು ಅಲ್ಲಿಗೆ ತೆರಳಬಹುದು. ಅಗತ್ಯವಿದ್ದರೆ ಕೋರ್ಟಿನ ವಿಳಾಸವನ್ನು ಕೊಡೋಣ. ಇದು ಕೆಲಿಫೋರ್ನಿಯಾದ ಬಾಂಬೆಯ ಕಾಲೊನಿಯಲ್ಲದೆ. ಕೆಲವು ರಸ್ತೆಯ ಕನಿಷ್ಠರಾಗಿ, ಈಗ ವಿಸ್ಕಿಗೆ 'ಸೀಟು' ಕೊಡುತ್ತಾರೆಯೇ?

—:0:—

ವಿಂಡ್ಸರ್ ದ್ಯೂಕರು.

ಡ್ಯೂಕ್ ಆಫ್ ವಿಂಡ್ಸರರು ತಮ್ಮ ಸ್ವದೇಶಕ್ಕೆ ಹಿಂತಿರುಗಿದ ನಂತರ ಆಸ್ಟ್ರೇಲಿಯದ ಕೆನಡಾ ರಾಜ್ಯದ ಗವರ್ನರ್ ಜನರಲ ಆಗಿ ನೇಮಕವಾಗುವರೆಂದು ಹೇಳಲಾಗಿದೆ. ಇದು ವರೆಗೂ ಅಲ್ಲಿ ಲಾರ್ಡ್ ಟ್ವೀಡ್ ಮೂಯಿರ್‌ರವರು ಇದ್ದರು. ಎರಡು ವರ್ಷಗಳಲ್ಲಿ ಅವರು ನಿವೃತ್ತರಾಗಲಿರುವರು. ಅವರ ನಂತರ ವಿಂಡ್ಸರ್‌ರವರನ್ನು ನೇಮಿಸಲಾಗುವುದಂತೆ.

ಈ ವಿಷಯದ ಪತ್ರಿಕೆಯ ವೃತ್ತಾಂತದ ವಿಂಡ್ಸರ್ ದಂಪತಿಗಳು ಇಂಗ್ಲೆಂಡಿಗೆ ಹಿಂತಿರುಗುವ ಮೊದಲೆ ನಿರ್ಧಾರ ಮಾಡಬೇಕಾಗಿದೆ. ವಿಂಡ್ಸರರು ಮಾತ್ರ ಭೂಪತಿಗೆ ಹಿಂತಿರುಗಲು ಇವರ ಸಹೋದರರೂ, ಸಾರ್ವಭೌಮ 6ನೇ ಜಾರ್ಜರೂ, ಮುಖ್ಯ ಪ್ರಧಾನ ಚೇಂಬರ್ಲೇನರೂ ಆಕ್ಷೇಪಿಸಿರುವರು ಈಗ ಗಳ ಪ್ರಾಚಕರಿಗೆ ತಿಳಿದಿದೆ. ವಿಂಡ್ಸರರೂ ಸಹ ತಮ್ಮ ಮಾತೃಭೂಮಿಯನ್ನು ಕಾಣಲು ಬಹು ತವಕಪಡುತ್ತಿರುವರೆಂದೂ ಹೇಳಲಾಗುತ್ತಿದೆ. ಇತ್ತೀಚೆಗೆ ಜಾರ್ಜ್ (6) ಸಾರ್ವಭೌಮರು ತಮ್ಮ ಸಹೋದರರನ್ನು ಆಸ್ಟ್ರೇಲಿಯಾ ಗವರ್ನರ್ ಜನರಲ್‌ರವರನ್ನಾಗಿ ನೇಮಕ ಮಾಡಿದುದರಿಂದೀಗ ವಿಂಡ್ಸರರನ್ನು ಸಹ ಕೆನಡಾ ರಾಜ್ಯದ ಗವರ್ನರ್ ಜನರಲ್‌ರವರನ್ನಾಗಿ ನೇಮಕ ಮಾಡಬೇಕೆಂದು ಆಕಾಂಕ್ಷೆಯುಳ್ಳವರಾಗಿದ್ದಾರೆಂದೂ, ವಿಂಡ್ಸರರು ಇದಕ್ಕೊಪ್ಪಿದರೆ ಒಂದಲ್ಲ ಒಂದು ವಿಧದಲ್ಲಿ ಮಾತೃಭೂಮಿ ಸೇವೆ ಮಾಡಿದಂತಾಗುವುದರಲ್ಲಿ ಸಂದೇಹವಿಲ್ಲವೆಂದೂ, ದೇಶಬಂಧುವಾಗಿಯೆ ಆಲದ ಸಾರ್ವಭೌಮ ದಂಪತಿಗಳು ಈಗ ಕೆನಡಾ ರಾಜ್ಯದಲ್ಲಿ ಸಂಚರಿಸಲಿರುವುದರಿಂದಲೇ, ವಿಂಡ್ಸರರು ಅಮೇರಿಕದ ಸ್ತ್ರೀಯೊಡನೆ ವ್ಯಾಲಿಸ್ ಸಿಂಪ್ಸನರನ್ನು ವಿವಾಹವಾಗಿರುವುದರಿಂದಲೇ ಅಮೇರಿಕದಲ್ಲಿ ಪ್ರೀತಿ ವಿಶ್ವಾಸವುಳ್ಳವರಾಗಿರುವುದರಿಂದಲೇ ಇದೇನೂ (ಗವರ್ನರ್ ಜನರಲ್ ಹುದ್ದೆ) ಆಗದ ವಾರ್ತೆಯೆಂದು ಹೇಳಲಾಗುವುದಲ್ಲ.

ಬ್ರಿಟಿಷ್ ಅಧಿಕಾರ ವ್ಯಾಪ್ತಿಯ ಮತ್ತೊಂದು ಕ್ಷೇತ್ರದಲ್ಲಿ 'ಡ್ಯೂಕ್ ಆಫ್ ವಿಂಡ್ಸರರನ್ನು ಪ್ರಥಮತಃ ಭಾರತದ ವೈಸರಾಯ್' ಎಂಬದಾಗಿ ಕರೆದು ಅನಂತರ ಅವರನ್ನು ಕೆನಡಾ ರಾಜ್ಯಕ್ಕೆ ಗವರ್ನರ್ ಜನರಲ್‌ರವರನ್ನಾಗಿ ನೇಮಕ ಮಾಡಲಾಗುವುದು' ಎಂದು ಹೇಳಲಾಗಿದೆ.

ಅಮೇರಿಕದ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವ ಡ್ಯೂಕ್ ಆಫ್ ವಿಂಡ್ಸರರು ಕೆನಡ ಗವರ್ನರ್ ಜನರಲ್ ಆಗುವುದರಿಂದ ಬ್ರಿಟನ್ ಅಮೇರಿಕ ಬಂಧವ್ಯ ಹೆಚ್ಚುವುದರಲ್ಲಿ ಸಂದೇಹವಿಲ್ಲ.

—:0:—

ಈ ವಾರದ ಕಥೆ.

ಅಪರಾಧಿ ಯಾರು?

ಲೇ:–ಸುಭದ್ರಾ ತನಯ.

ತಾರಾನಾಥರಾಯರಿಗೆ ವಿಮಲೆ ಮತ್ತು ರವಿಶಂಕರ ಎಂಬ ಇಬ್ಬರು ಮಕ್ಕಳು. ವಿಮಲೆಯು ಹಿರಿಯವಳು. ರವಿಶಂಕರನಿಗೆ ಬರುವ ಫೆಬ್ರವರಿಗೆ 12 ವರ್ಷ ಕಳೆಯುತ್ತದೆ. ವಿಮಲೆಯು ಅವನಿಗಿಂತ ಎರಡು ವರ್ಷಕ್ಕೆ ಹಿರಿಯವಳು. ವಿಮಲೆಯು ಈಗ ತಂದೆಯ ಮನೆಯಲ್ಲಿಯೇ ಇರುವಳು. ತಾಯಿ ಸೀತಮ್ಮನವರ ಸಹಸ್ರನಾಮ ಕೇಳುತ್ತಾ; ತಾಯಿ ಮಗಳೆಂದರೆ ಎಷ್ಟರ ಪ್ರೀತಿ! ಇಲಿ ಬೆಕ್ಕುಗಳಂತೆ ತಂದೆಯೊದರೊ ಕೇಳಬೇಕೆ? ಭಯಂಕರ ಮೂರ್ತಿ. ಸಿಟ್ಟು ಬಂತೆಂದರೆ ಅವರೆದುರಿಗೆ ಏನಿದೆಯೋ? ಅದರಲ್ಲೇ–ಮಂಗಳಾರತಿ.

ತಾರಾನಾಥರು ಶುದ್ಧ ಸನಾತನಿ. ಅವರಿಗೆ ಕಾಂಗ್ರೆಸೆಂದರೆ ಸೇರದು. ಅವರೆದುರಿಗೆ ಯಾರಾದರೂ ಕಾಂಗ್ರೆಸಿನ ವಿಷಯ ಮಾತಾಡಿದ್ದೇ ಆದರೆ–ಅವರು ಒಂದೇ ಸರ್ತಿಗೆ ತನ್ನ ಸಂಪೂರ್ಣ ವಾಕ್ಚಾತುರ್ಯವನ್ನು ತೋರಿಸಿಬಿಡುವರು. 'ಏನು ನಮ್ಮ ಕುಂಪೆನಿರಾಜರ ಕಾರುಭಾರದಲ್ಲಿ ಹೀಗೆಲ್ಲ ಇತ್ತೇ? ಹೊಲೆಯರು ದೇವಸ್ಥಾನಕ್ಕೆ ಹೋಗುವುದು. ಆಗಾಗ ಸಹಪಂಕ್ತಿಭೋಜನ, ಎಲ್ಲಾ ಜಾತಿ ಒಂದೇ ಆಗುವಂತೆ ಮಾಡುವುದು, ಇನ್ನೇನು? 'ಈಗೊಂದು ಹೊಸ ಕಾನೂನು ಬಂದಿದೆಯಂತೆ ಸಾಲಕೊಟ್ಟವರು ಕೊಡುವುದೇ ಬೇಡವಂತೆ, ಇವರಿನ್ನು ಎಷ್ಟರ ಮಟ್ಟಿಗೆ ಕುಣಿಯುತ್ತಾರೆ' ಒಟ್ಟಾರೆ ಮೇಲೆ ಆ ಪಂಚಮ ಜಾರ್ಜರು ಸತ್ತಂದ್ದೇ ಸತ್ತದ್ದು. ಅಂದಿಗೆ ತೀರಿತು. ಜಾತಿ ನೀತಿ ವಿಚಾರ ಆಯ್ತು, ಇನ್ನು ಎಲ್ಲಾ' ಎಂದು ಮುಂಗಾರು ಮಳೆಯಂತೆ ಮಾತನ್ನು ಮುಗಿಸಿ ಬಿಡುತ್ತಿದ್ದರು. ಆರಾದರೂ ಎದುರಿನಿಂದ 'ತಾರಾನಾಥರಾಯರೇ, ಇದೇನು ನೀವು ಹೇಳುವುದು, ಇದನ್ನೆಲ್ಲಾ ನೀವು ಯಾವ ಪೇಪರಿನಲ್ಲಿ ನೋಡಿದ್ದೀರಿ' ಎಂದರೆ 'ಯಾಕಯ್ಯಾ ಪೇಪರು ನೋಡುವುದು? ನಮಗೆ ಕಿವಿ ಇಲ್ಲವೇ? ಪೇಪರಿನಲ್ಲಿ ಏನಿದೆ. ಅವರಿಗೆ ಕೆಲಸವಿಲ್ಲದಕ್ಕೆ ತಗಣೆಕೊಲ್ಲುವ ಯಂತ್ರ, ಇನ್ನು ಕಾಮಕಳಾ ಶಾಸ್ತ್ರ ಅದು ಇದು ಎಂದು ಬರೆಯುವುದಲ್ಲದೆ ಏನಾದರೂ ಸರಿಯಾಗಿ ಬರೆಯುತ್ತಾರೊ?' ಎಂದು ಉಸಿರು ಕಟ್ಟಿ ನುಡಿಯುತ್ತಿದ್ದರು. 'ಇವರೊಂದಿಗೆ ಮಾತಾಡಿದರೆ ಕಾಸಿನ ಪ್ರಯೋಜನವಿಲ್ಲ' ಎಂದು ಎದುರಿಗಿದ್ದವರು ಸುಮ್ಮನೆ ಇದ್ದು ಬಿಡುತ್ತಿದ್ದರು.

'ಕಾಸಿಗೆ ತಕ್ಕ ಕಜ್ಜಾಯ' ಎಂಬಂತೆ ತಾರಾನಾಥರಿಗೆ ತಕ್ಕ ಮಡದಿಯು ದೊರೆತದ್ದಕ್ಕೆ ಆ ಪರಮಾತ್ಮನಿಗೆ ಎಷ್ಟು ವಂದನೆ ಸಿವರೂ ಅದು ಅಲ್ಪವೇ. ತಾರನಾಥರೀಗೆ ಸ್ನಾನಮಾಡಿ ಮನೆಗೆ ಬರಲು ಒಂದು ಚೆಂಬು ನೀರು ಮತ್ತು ಒಂದು ಅಡಿಕೆ ಸಮ ಸೆಗಣಿ ಮನೆ ಮೆಟ್ಟಲಲ್ಲಿ ತಯಾರಾಗಿರಬೇಕು. ಮತ್ತೆ ಜಪಕ್ಕೆ ಕೂತರೆಂದರೆ ಇತ್ತ ಮಧ್ಯಾಹ್ನ 2½ ಗಂಟೆಯಾಗಬೇಕು. ಇದಿಷ್ಟು ಸಮಯ ಜಪಕ್ಕೆ, ಇನ್ನು ಪೂಜೆ ಮಾಡುವುದಿದ್ದರೆ ಆ ದಿನ ಊಟಕ್ಕೆ 4½ ಗಂಟೆಯು. ದೇವರಿಗೆ ಪಾಪ! ಹಸಿವೆಯ ಭರದಿಂದ ರಾಯರು ಹೇಳುವ ಪ್ರತಿಯೊಂದು ಮಂತ್ರವೂ ಅವನಿಗೆ (ದೇವರಿಗೆ) ಒಂದೊಂದು ಬಾಣದಂತೆ ನಾಟುತ್ತಿತ್ತು. ಅಂತೂ ಕಷ್ಟ! ಗ್ರಹಚಾರಕ್ಕೆ ತಿಂಗಳಿಗೊಮ್ಮೆ ಶ್ರಾದ್ಧ ರಮಾಡಿಸುವುದು. ಆ ದಿನದ ಗೌಜನ್ನು ನನ್ನೀ ಲೇಖನಿಯಿಂದ ಬರೆದು ತಿಳಿಸಲು ಅಸಾಧ್ಯ. ಸೀತಮ್ಮನವರಿಗೆ ಇಂದು ಸೀರೆ ಸಮೇತ ಸರಿ ಉಡಲು ಸಮಯವಿಲ್ಲ. ಎಷ್ಟು ಅವಸರದಿಂದ ಮಾಡಿದರೂ ರಾಯರ ಊಟವಾಗಲು ಸೂರ್ಯನು ಕಡಲಿಗೋಗಲು ಹೆಚ್ಚೆಂದರೆ ಅರ್ಧ ಮುಕ್ಕಾಲು ಗಂಟೆಗಳ ವ್ಯತ್ಯಾಸ.

ಇನ್ನು ಸೀತಮ್ಮನವರ ವಿಷಯ: ಬರೆಯುವುದೆಂದರೆ ಅದು ದೊಡ್ಡ ಪುರಾಣವಾಗುವುದು. ಇವರಿಗೆ ಸ್ನಾನಮಾಡಿ ಬರುವಾಗ ಒಂದು ಹಿಡಿ ಸೆಗಣಿಯೂ, ಒಂದು ಕೊಡ ನೀರೂ ಕೈಯಲ್ಲೇ ಬೇಕು. ಬರುವಾಗ ಅದನ್ನು ಹಾದಿ ಇಡೀ ಚಿಮುಕಿಸುತ್ತಾ ಬರುವುದು. ನಂತರ ಬಂದು ಜೇರೆ ಬಟ್ಟೆ ಉಟ್ಟು ಅವರ ಕೆಲಸಕ್ಕೆ ಮೊದಲು ಮಾಡಬೇಕಷ್ಟೆ? ಗ್ರಹಚಾರ ದೋಷದಿಂದ ಅವರು ಸ್ನಾನಮಾಡಿ ಬಂದ ಮೇಲೆ ಅವರ ಕೈ ಅವರ ತಲೆಗೇ ಮುಟ್ಟಿದರೆ ಸರಿ. ಒಂದು ಚೆಂಬು ನೀರಿಗೆ ಮೋಸ ಬಂದಂತೆ. ಅಂತೂ ಹೇಳುವುದಿದ್ದರೆ ಎಲ್ಲಾ ಮನೆಯವರೂ ನೀರಿಗೆ ತಿಂಗಳೊಂದರ 1 ರೂಪಾಯಿ ಕೆರೆಗೆ ಕೊಡುವುದಿದ್ದರೆ ಇವರು ಕಡಿಮೆ ಪಕ್ಷ 15 ಆದರೂ ಕೊಡಬೇಕು. ಪುಣ್ಯಕ್ಕೆ ದೇವರು ಇವರ ಮನೆಯ ಹತ್ತಿರವೇ ಒಂದು ಕೆರೆಯನ್ನು ನಿರ್ಮಿಸಿದ್ದನು. ಎಲ್ಲಾದರೂ ನೀರಿಲ್ಲದ ಸ್ಥಳದಲ್ಲಿ ಪೇಟೆಯ ಮಧ್ಯದಲ್ಲಾಗುತ್ತಿದ್ದರೆ ಏನು ಮಾಡುತ್ತಿದ್ದರೊ ದೇವರೇ ಬಲ್ಲ.'

ವಿಮಲೆಯಾದರೆ ಇವರ ಇಷ್ಟರ ಮಟ್ಟಿನ ಆಚಾರ ವಿಚಾರಗಳಲ್ಲಿ ನುರಿತವಳು. ಅವಳಿಗೆ ವರ್ಷ ಹತ್ತಾಗುವಾಗಲೇ ಮದುವೆಯಾಗಿತ್ತು. ರಾಯರೊಂದು ದಿನ ಪೇಟೆ ಮನೆಗೆ ಹೋಗಿದ್ದಾಗ ಶ್ಯಾಮರಾಯರ ಸಹಾಯದಿಂದ ಪಟ್ವಾರಿ ಸುಂದರರಾಯರ ಮಗ ಗೋಪಾಲನಿಗೆ ಲಗ್ನ ಮಾಡುವುದೆಂತ ನಿಶ್ಚೈಸಿದ್ದರು. ಹುಡುಗನು ಹುಡುಗಿಯನ್ನು ಎಲ್ಲೋ ಒಂದು ದಿನ ಬಂದವನು ನೋಡಿದ್ದೋ ಏನೊ? ಈ ವರ್ತಮಾನ ಮಾತಾಡಿ ವಾರದಿಂದ ದಿನಗಳೇಳರೊಳಗೆ ಲಗ್ನ ಕಾರ್ಯವು ಮುಗಿದಿತ್ತು. ರಾಯರು ಹುಡುಗನೆಂಥವ? ಯೋಗ್ಯನೋ? ತಂದೆಯ ಹೇಳಿಕೆಯಂತೆ ನಡೆದುಕೊಳ್ಳುವವನೊ? ಅವನ ನಡತೆ ಎಂತು? ಇತ್ಯಾದಿ ವಿಷಯಗಳನ್ನು ಅವರೆಂದೂ ವಿಚಾರಿಸಿದ್ದಿಲ್ಲ. ಸುಂದರ ರಾಯರಿಗೆ ಇಬ್ಬರು ಮಕ್ಕಳು. 5 ಖಂಡಿ ಅಡಿಕೆ, 50 ಮುಡಿ ಅಕ್ಕಿ, 4 ಖಂಡಿ ಏಲಕ್ಕಿ ಇಷ್ಟು ಸಾಲ ಇಲ್ಲದೆ ಬರುತ್ತಿತ್ತು. ಹುಡುಗನಿಗೆ ಊಟಕ್ಕೇನೂ ಮೋಸವಿಲ್ಲ. ಎಂದಿಷ್ಟು ಗ್ರಹಿಸಿ ಮದುವೆಯೊಂದು ಮಾಡಿಸಿಬಿಟ್ಟಿದ್ದರು. ಮದುವೆ ಕಳೆದು ವರ್ಷ ಸಂಪೂರ್ಣ ಆಗಲಿಲ್ಲ. ಗೋಪಾಲನು ಮನೆಯಿಂದ ಜಗಳ ಮಾಡಿ ಪಾಲು ತೆಗೆದುಕೊಂಡು ಬಂದು ಒಟ್ಟಿಗೆ ಒಬ್ಬ ಪರ ಜಾತಿಯ ಸ್ತ್ರೀಯನ್ನು ಕರೆದುಕೊಂಡು ಪಟ್ಟಣದಲ್ಲಿ ಕೂತಿದ್ದನು. ವಿಮಲೆಯನ್ನು ಅವಳ ತಂದೆ ಮನೆಗೆ ಕರೆದು ತಂದು ಬಿಟ್ಟಿದ್ದನು. ವಿಮಲೆ ಈಗ ಪುಷ್ಪವತಿಯಾಗಿ ಯೌವನದ ಮೆಟ್ಟಲೇರುತ್ತಿದ್ದಳು. ಆದರೂ ಅವಳನ್ನು ಗೋಪಾಲನು ಕಣ್ಣೆತ್ತಿ ಸಹ ನೋಡುವುದಿಲ್ಲ. ಬೇಕಾದರೆ ಮಾವನ ಮನೆಗೆ ಬರುವುದು ಸಮೇತ ಇಲ್ಲ.

ತಾರಾನಾಥ ರಾಯರಿಗೆ ಅವನನ್ನು ಆ ಹಾದಿಯಿಂದ ತಪ್ಪಿಸುವ ಉಪಾಯ ಮಾಡುವುದು. ಅವನನ್ನು ಕಾಣಲು ಹೋಗುವುದು. ಇದಾವ ಕೆಲಸವೂ ಇಲ್ಲ. ಎಲ್ಲಾದರೂ ಅಗತ್ಯ ಕೆಲಸವಿದ್ದು ಅವನು ಬಂದನೆಂದರೆ ರಾಯರಿಗೆ ಎರಡನೆ ಊಟಮಾಡಬೇಕಾದರೆ ಮನೆಗೆ ಪ್ರತ್ಯೇಕ ಲಶವಾಗಬೇಕು. ಅವನು ಬರುವುದು ಕಡಿಮೆ. ಎಲ್ಲಾದರೂ ಬಂದರೆ–ಅವನು ಎಲ್ಲಾದರೂ ಬಂದವ ಊಟಕ್ಕಿದ್ದರೆ ರಾಯರಿಗಂದು ಉಪವಾಸ. ಅವ ಹೋದ ನಂತರ ಹೆಂಡತಿ ಗಂಡ ಸಮೇತ ಮಿಂದು ಮನೆ ಶುದ್ಧ ಮಾಡಿ ಆ ಮೇಲೆ ಊಟ.

ಸೀತಮ್ಮನವರು ತಂದೆಯ ಶ್ರಾದ್ಧಕ್ಕಾಗಿ ಅವರಣ್ಣನಲ್ಲಿಗೆ ಹೋಗಿದ್ದರು. ಮನೆಯಲ್ಲಿ ವಿಮಲೆ ಇದ್ದಳು. ರಾಯರಿಗೆ ಅಡಿಗೆ ಮಾಡಿ ಬಡಿಸಿದರಾಯಿತು. ಎಂದು ಸೀತಮ್ಮನವರು ಬಿಟ್ಟಿದ್ದರು. ಶನಿಗೆ ಅವರು ಹೋದ ಮೂರನೆ ದಿನವೇ ವಿಮಲೆ ಮುಟ್ಟು. ತಾರಾನಾಥರಾಯರಿಗೆ ಬಂದ ಸಿಟ್ಟು ಹೇಳಬೇಕೆ? ಅದನ್ನು ನನ್ನ ಈ ಚಿಕ್ಕ ಲೇಖನಿಯಿಂದ ಬರೆಯಲು ಕಷ್ಟ. ಯಾವ ಯಾವ ರೀತಿಯ ಬೈಗಳು ಈ ತನಕ ಕೋಶದಲ್ಲಿ ಉಂಟಾಗಿದೆಯೊ? ಅವೆಲ್ಲವೂ ಅವರ (ತಾರಾನಾಥರಾಯರ) ಬಾಯಿಯಿಂದ ಆಣೆ ಕಟ್ಟು ಕಡಿದ ನೀರಿನಂತೆ ಹರಿಯಿತು. ವಿಮಲೆಗೆ ತಡೆಯಲಾರದ ದುಃಖವುಂಟಾಯಿತು. ಧೈರ್ಯದಿಂದ ಹೇಗೆಂದಳು. 'ಅಪ್ಪಾ! ನೀವು ನನ್ನನ್ನು ಚಿಕ್ಕ ಪ್ರಾಯದಲ್ಲಿ ಮದುವೆ ಮಾಡಿಬಿಟ್ಟಿರುವಿರಿ. ಆದಾದರೊ ಹಿಂದು ಮುಂದು ವಿಚಾರಿಸದೆ. ಮಾತಾಡಿದ 7 ದಿವಸಗಳೊಳಗೆ ಎಲ್ಲಾ ತೀರಿದೆ. ಅವರೆಂಥವರು? ಏನು ಎಂದು ಒಂದೂ ವಿಚಾರಿಸಲಿಲ್ಲ. ಏಕೆ? ಇಂದು ನನ್ನನ್ನು ಈ ರೀತಿ ಒಯ್ಯುತ್ತಿರಲು ನಾನು ಮಾಡಿದ ಅಪರಾಧವಾದರೂ ಏನು? ತಾಯಿ ಇದ್ದರೆ ಅವರ ಸಹಸ್ರನಾಮ ನನಗೆ ತಪ್ಪುತ್ತಿರಲಿಲ್ಲ. ಅವರಿಲ್ಲದಕ್ಕೆ ನಿಮ್ಮದಾದು ಒಟ್ಟಾರೆ ನನ್ನ ಗ್ರಹಚಾರ. ನಾನು ಮಾಡಿ ಪೂರ್ವಜನ್ಮದ ಸುಕೃತ ಫಲ' ಎಂದು ಅತ್ತಳು.

ರಾಯರಿಗಂದು ಅವಳ ಕಣ್ಣೀರು ಕಂಡು ಏನಾಯಿತೊ? ಸುಮ್ಮನೆ ಎಲ್ಲಾ ಮಾತನ್ನು ಕಿವಿಗೊಟ್ಟು ಕೇಳುವವರಂತೆ ಸುಮ್ಮನಿದ್ದರು. 'ಅವರವರು ಮಾಡಿದ ಕರ್ಮ ಅವರವರು ತಿನ್ನಬೇಕು' ಎನ್ನುತ್ತಾ ಅಂಗಳಕ್ಕಿಳಿದರು. ಏನೋ ನೆನಪಾದಂತಾಗಿ ಜಗಲಿಗೆ ಹತ್ತಿ ಅಂಗಿತೊಟ್ಟು ಕೊಡೆ ಹಿಡಿದುಕೊಂಡು 'ಜಾಗ್ರತೆ ಬರುತ್ತೇನೆ. ಯಾರಾದರೂ ಬಂದರೆ ಬಯಲ ಕಡೆ ಹೋಗಿದ್ದಾರೆ ಅನ್ನು' ಎಂದು ಹೊರಟು ಹೋದರು. ಇಂದವರ ಮನಸ್ಸಿನಲ್ಲಿ ಏನಾಗಿತ್ತೊ? ಹೋದವರು ಸೀದಾ ಗೋಪಾಲನಿರುವಲ್ಲೇ ಹೋದರು. ಇವರು ಹೋಗುವಾಗ ಅವನು ಮನೆಯಿಂದ ಅಂಗಳಕ್ಕಿಳಿದು ಎಲ್ಲೋ ಹೊರಡಲನುವಾಗಿದ್ದನು. ಅವನ ವೇಷಭೂಷಣಗಳನ್ನು ಕಂಡು ರಾಯರಿಗೆ ಅವನಲ್ಲಿ ಮಾತಾಡುವುದು ಬೇಡವೆಂದೇ ತೋರಿತು. ಒಂದು ಕರೀ–ಮಣ್ಣಿನಿಂದ ಕಪ್ಪಾದ ವಸ್ತ್ರ ಉಟ್ಟಿದ್ದನು. ಮೈಗೊಂದು ಸಣ್ಣ ತುಂಡಂಗಿ ಹಾಕಿಕೊಂಡಿದ್ದನು. ಮಾಡಿಸಿದ ನಂತರ ನೀರು ನೋಡಲಿಲ್ಲ. ಆ ತುಂಡಂಗಿ ಕಾಲಗಲಿಸಿ ಬಗ್ಗಿ ನಡೆಯುತ್ತಾನೆ. ಮುಖವು ಜೋಲು ಬಿದ್ದಿದೆ. ತಲೆಯ ಕೂದಲು ಅಸ್ತವ್ಯಸ್ತವಾಗಿ ಬಿದ್ದಿರುತ್ತದೆ. ಬೀಡಿಯೊಂದನ್ನು ಸೇದುತ್ತಾ ಮೆಲ್ಲಗೆ ನಡಿಯುತ್ತಾನೆ. ಅವನ ದೇಹವು 70 ವರ್ಷದ ಮುದುಕರ ದೇಹದಂತೆ ಆಗಿದೆ. ಇವನ್ನೆಲ್ಲಾ ಕಂಡು ರಾಯರಿಗೆ ಬಾಯಿಂದ ಮಾತೇ ಹೊರಡಲಿಲ್ಲ. ಅವನನ್ನು ನೋಡುವುದೇ ಬೇಡವೆಂದು ಹಿಂದಿರುಗಿದರು. ಗೋಪಾಲನು ಇವರನ್ನು ಕಂಡಿರುವನೋ? ಏನೊ?

ಮನೆಗೆ ಬರುವಾಗ ಗಂಟೆ 11 ಆಗಿತ್ತು. ಸೀತಮ್ಮನವರು ಮತ್ತು ಅವರ ತಮ್ಮ ರಘುನಾಥರಾಯರು ಮನೆಯಲ್ಲಿದ್ದರು. ಭಾವನೊಡನೆ ಮಾತಾಡುವಷ್ಟು ಸಮಧಾನವೂ ಅವರಿಗಾಗ ಇರಲಿಲ್ಲ. ಬಂದವರೇ ಸೀದಾ ಅಂಗಿ ತೆಗೆದಿಟ್ಟು ಸ್ನಾನಕ್ಕಾಗಿ ಹೊರಟರು. ಅಂತೂ ಸ್ನಾನ ಜಪವಾಗುವಾಗ ಸೂರ್ಯನು ಪಡು ದಿಕ್ಕಿನಲ್ಲಿ ಅಡಗಲು ಅಣಿ ಮಾಡಿದ್ದನು. ಸೀತಮ್ಮನವರಿಗೆ ಅಡಿಗೆಯೂ ಅಷ್ಟರಲ್ಲಿ ಸಿದ್ಧವಾಗಿತ್ತು. ರಘುನಾಥರಾಯರು ಸ್ನಾನ ತೀರಿಸಿ ಬಂದರು. ಅವರ ಜಪವು ಬೇಗನೆ ತೀರಿತು. ಊಟಕ್ಕೆ ಕರೆದರು ತಾರಾನಾಥರಾಯರಿಗೆ ಈಗ ಸ್ವಲ್ಪ ಸಿಟ್ಟು ನೆತ್ತಿಯಿಂದ ಇಳಿದಿತ್ತು. ಊಟಕ್ಕೆ ಕೂತುಕೊಳ್ಳುವಾಗ 'ಏನು ಭಾವ!' ಎಂದು ಪ್ರಶ್ನಿಸಿದರು. ಅಂತೂ ಊಟ ಮುಗಿಯುವಾಗ ಸಂಜೆಯಾಗಿತ್ತು.

ಇಂದು ರಾಯರು ಸಿಟ್ಟಿನಿಂದ ಇದ್ದರೂ ಸಮಧಾನ ತಂದುಕೊಂಡು ಅವರು ಕಂಡ ನೋಟವನ್ನೆಲ್ಲಾ ವಿವರವಾಗಿ ಭಾವನಿಗೆ ಹೇಳಿದರು. ಇನ್ನು ಏನು ಮಾಡಲಿ? ಧೈರ್ಯಮಾಡಿ ಒಂದೇ ಮನಸ್ಸಿನಿಂದ ಹೇಳಿರಿ. ನನಗೊಂದು ತಿಳಿಯದು. ನಾಳೆ ನಾನು ತಪ್ಪಿಗೆ ಬೀಳುವುದು ಸರಿಯಲ್ಲ. 'ಪ್ರಾಯಭರಿತೆಯಾದ ಮಗಳನ್ನು ಮನೆಯಲ್ಲಿಟ್ಟುಕೊಂಡಿದ್ದಾನೆ' ಎಂಬ ಅಪವಾದ. ಈ ದಿನ ಕಾಲ ಕೆಟ್ಟಿದ್ದು, ನೆರೆಕರೆಯಲ್ಲೆಲ್ಲಾ ಪ್ರಾಯಭರಿತರಾದ ಹುಡುಗರಿದ್ದಾರೆ. ಒಟ್ಟಿಗೆ ಕಷ್ಟ. ಇದೊಂದು ಹುಟ್ಟಿ ನನ್ನ ಮಾನವನ್ನೆಲ್ಲಾ ಕಳೆದು ಬಿಟ್ಟಿತು. ಏನು ಮಾಡುವುದು. 'ಕಾಲ ಬಂ

ದಂತೆ ಕೋಲ ಕಟ್ಟಬೇಕಲ್ಲಾ' ಎಂದು ಸುಮ್ಮಗಾದರು.

ರಘುನಾಥರಾಯರು ಮನಸ್ಸಿನಲ್ಲೇ ಆಲೋಚಿಸಿ ಬೇಸತ್ತರು 'ಇರಲಿ. ಭಾವಯ್ಯ, ನಾನೊಮ್ಮೆ ಅವನನ್ನು ಕರೆದು ಬುದ್ಧಿ ಹೇಳಿ ನೋಡುತ್ತೇನೆ. ಬೆಳಗಾಗಲಿ' ಎಂದರು. ಏನು ಬುದ್ಧಿ ನನಗವನನ್ನು ನೋಡಿದರೆ ಸಿಟ್ಟು ನೆತ್ತಿಗೇರುತ್ತದೆ. ಅವನ ಉಡುಪೇ? ಅವನ ನಡತೆಯೆ? ಅವನ ದೇಹವೇ? ಒಟ್ಟಾರೆ ಇವೆಲ್ಲಾ ಆ ಕಾಂಗ್ರೆಸಿನ ಮಹತ್ವ. ಎಲ್ಲರನ್ನೂ ಒಂದೇ ಮಾಡುವುದು' ಎಂದು ಧೀರ್ಘಶ್ವಾಸವೊಂದನ್ನು ಬಿಟ್ಟರು.

ಗೋಪಾಲನನ್ನು ನೋಡ ಹೋದ ರಘುನಾಥರಾಯರಿಗೆ ಮನಸ್ಸಿನಲ್ಲಿ ಏನೇನೋ ಆಯಿತು. ಅಂತೂ ಅವನನ್ನು ಕಂಡುದಾಯಿತು. ಅವನದೊಂದೇ ಉತ್ತರ 'ನೀವೇನು ಬೇಕಾದರೂ ಮಾಡಿಕೊಳ್ಳಿ. ನನಗೆ ನಿಮ್ಮ ಸುದ್ದಿ ಇಲ್ಲ. ನನ್ನ ಇಚ್ಛೆಯಿಂದ ನಾನು ಮದುವೆಯಾದ್ದಲ್ಲ. ತಂದೆಯವರ ಇಚ್ಛೆಗೆ ಅವರ ಖುಷಿ ಇದ್ದಂತೆ ಮಾಡಲಿ, ನಾನು ಇವಳನ್ನು ಬಿಟ್ಟು ಬರಲಾರೆ.'

ರಘುನಾಥರಾಯರಿಗೆ ಬೇಸರವು ಆಷ್ಟಿಷ್ಟಲ್ಲ. ಏನು ಮಾಡುವುದೆಂದು ತೋಚದು. ನಡೆದ ಸಂಗತಿಯನ್ನು ಭಾವನಿಗೆ ತಿಳಿಸಿಬಿಡುವೆನೆಂದು ಬಂದು ಎಲ್ಲವನ್ನು ಅಕ್ಷರಶಃ ಹೇಳಿದರು. ರಾಯರು, 'ನಾನು ಹೇಳಿದ್ದಲ್ಲವೆ? ಹೇಳಿದಂತೆ ಕೇಳಲಿದ್ದೆಲ್ಲಿ ಎಂದಿಗೆ ಮನುಷ್ಯನಿಗೆ ಪುರಸ್ತ್ರೀ ಹುಚ್ಚು ಹಿಡಿಯಿತೋ ಅಂದಿಗೆ ಕೆಟ್ಟ, ಇರಲಿ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದರು. 'ಭಾವ, ನಾನೊಂದು ಹೇಳುತ್ತೇನೆ. ನಿಮಗೆ ಮನಸ್ಸಿದ್ದರೆ ವಿಮಲೆಯನ್ನು ಕೊಂಡು ಹೋಗಿ ಅವನಿರುವಲ್ಲಿ ಬಿಟ್ಟು ಬಿಡುವುದು ಕೊಟ್ಟ ಹೆಣ್ಣು ಕುಲದಿಂದ ಹೊರಗೆ? ಎಲ್ಲಾ ಹೀನ ಅವಮಾನ ಅವನಿಗೇ ನಮಗಿಲ್ಲ. ಆಗದೇ?' ಎಂದು ರಘುನಾಥರಾಯರು ಹೇಳಿದರು. 'ಎಲ್ಲಾ ನಿಮ್ಮ ಇಚ್ಛೆ, ನನಗೇನು? ನಿಮಗಾದಂತೆ ನನಗೂ ಎಂದು ಉತ್ತರವಿತ್ತರು ರಾಯರು.

....

ವಿಮಲೆ ಈಗ ಗೋಪಾಲನನ್ನು ಬಿಟ್ಟು ಬೀದಿ ಬೀದಿ ಅಲೆಯುತ್ತಿದ್ದಾಳೆ. ಅಲ್ಲಿ ಹೋದರೆ ಅವನು ಮಾತಾಡುವುದಿಲ್ಲ. ಅಂಗಳ ಹತ್ತಿದ ಕ್ಷಣ ನಾಯಿಗಳಿಂದ ಕಚ್ಚಿಸಿ ಓಡಿಸುತ್ತಾನೆ. ಇಂಥಾ ಕಷ್ಟದಲ್ಲಿ ವಿಮಲೆ ಎಂತು ಜೀವಿಸುವಳು? ಹೀಗೆಯೇ ಅಲೆಯುತ್ತಾ ಒಂದು ದಿನ ಹಸಿವೆಯನ್ನು ತಡೆಯಲಾರದೆ ದೇಗುಲದ ಮೂರದ ಅರಳಿ ಕಟ್ಟೆಯಲ್ಲಿ ಕೂತಿದ್ದಳು. ಅಲ್ಲೇ ಗಾಳಿಗೆ ಜೋಂಪು ಹಿಡಿದಿತ್ತು. ಅದೋ ಒಂದು ತೆಗೋ! ಈ ಹಣ್ಣು ಎಂದು ಎದುರು ಹಣ್ಣುಗಳನಿಟ್ಟು ಮರೆಯಲ್ಲಿ ನಿಂತರು. ಹಸಿವಿಯ ಬಳಲಿಕೆಯಿಂದ ವಿಮಲೆಯು ಅವನ್ನು ತೆಗೆದು ತಿನ್ನುತ್ತಾ, 'ನಿನಗೆ ಸುಖವಾಗಲಿ ನನ್ನನ್ನು ಈ ಹಣ್ಣುಗಳಿಂದ ತಣಿಸಿದ್ದಕ್ಕೆ' ಎನ್ನುತಿರಲು 'ನೀನು ಈ ಹಣ್ಣುಗಳನ್ನು ತಿಂದದ್ದರಿಂದ ನನಗೆ ಸುಖವಾಗದು. ನೀನು ನನ್ನವಳಾಗಬೇಕು. ನಿನ್ನನ್ನು ನಾನು ರಕ್ಷಿಸುವೆನು.' ಎನ್ನುತ್ತಾ ಎದುರಿಗೊಂದು ವ್ಯಕ್ತಿಯು ಒಂದು ಅವಳನ್ನು ಆಲಿಂಗಿಸಿತು. ಇದರಿಂದ ಅವಳು ಈಗೊಂದು ಹಾದಿಯನ್ನು ಹಿಡಿದಳು.

ಓದುಗರೇ, ಇವರೊಳಗೆ ಅಪರಾಧಿಯಾರು? ನೀವೇ ಯೋಚಿಸಿರಿ?

ಗಾಂಧೀ ಮಾರ್ಗವು ಭಾರತ ಸ್ವಾತಂತ್ರ್ಯ ಸಮರದ ಕೈದೀವಟಿಗೆ.

ಇಂದಿಲ್ಲ ನಾಳೆಯಾದರೂ ಬಿಕ್ಕಟ್ಟು ಬರುವದು ನಿಶ್ಚಿತವೆಂದು ನಮಗನಿಸಿದೆ. ತ್ರಿಪುರಿ ಕಾಂಗ್ರೆಸ್ ಅಧಿವೇಶನದ ದಿನಗಳು ಭರದಿಂದ ಸಮೀಪಿಸುತ್ತಿದ್ದು ಅಲ್ಲಿ ಏನಾಗುವದೋ ಎಂಬ ಬಗ್ಗೆ ಪ್ರತಿನಿಧಿಗಳಲ್ಲಿ ಕುತೂಹಲ ಹೆಚ್ಚುವುದು ಸ್ವಾಭಾವಿಕ. ನಮ್ಮ ರಾಜಿನಾಮೆಯಿಂದ ಉದ್ಭೂತವಾದ ಪರಿಸ್ಥಿತಿಯ ಮೇಲೆ ಒಳ್ಳೆಯದಾಯಿತೆಂದು ಕೆಲವರು ಬರೆದದ್ದೂ ಉಂಟು. ಮತ್ತಿನ್ನು ಕೆಲವರು ಟೀಕಿಸಿದ್ದೂ ಉಂಟು. ಆದ್ದರಿಂದ ನಮ್ಮ ಧ್ಯೇಯಕಾರ್ಯಕ್ರಮಗಳೇನು? ನಮ್ಮ ಮತ್ತು ರಾಷ್ಟ್ರಾಧ್ಯಕ್ಷರಲ್ಲಿಯ ಮತಭೇದವೇನು ಎಂಬ ಬಗ್ಗೆ ಸ್ಪಷ್ಟೀಕರಿಸುವದು ಅತ್ಯವಶ್ಯವಾಗಿದೆ. ಈ ಬಿಕ್ಕಟ್ಟು ಎಂದಾದರೊಂದು ದಿನ ಬರುವದೆಂದು ನಮಗೆ ಗೊತ್ತಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅದು ಉದ್ಭವಿಸಬಹುದು. ನಮ್ಮ ಕಾರ್ಯಕ್ರಮಗಳನ್ನು ಮುಂದುವರಿಸುವ ನಮ್ಮ ಪ್ರಯತ್ನದಲ್ಲಿಯೇ ಹುಟ್ಟಬಹುದು.

ಗಾಂಧಿ ಮಾರ್ಗ.

ಇಂತಹ ಬಿಕ್ಕಟ್ಟು ಎಂದೇ ಬರಲಿ, ಹೇಗಾದರೂ ಬರಲಿ ಅದರಿಂದ ಪಾರಾಗಲು ನಾವು ಹಲವಾರು ಮಾರ್ಗಗಳಿಂದ ಉಪಯೋಗಿಸುತ್ತ ಬಂದ ಗಾಂಧಿಯವರ ಅತ್ಯುತ್ತಮ ಮಾರ್ಗವಾದ ಅಹಿಂಸೆಯಿಂದಲೇ ಅದು ಸಾಧ್ಯವೆಂದು ನನಗನಿಸುತ್ತದೆ. ಇಂಥ ಪರಿಸ್ಥಿತಿಯಿಂದ ನಮ್ಮನ್ನು ಮುಂದೆ ಕರೆದೊಯ್ಯುವ ಏಕಮೇವ ವ್ಯಕ್ತಿಯೆಂದರೆ ಆವರು ಮಹಾತ್ಮಾಜೀಯವರು. ಆದ್ದರಿಂದ ನಾವು ಅವರ ಕಾರ್ಯಕ್ರಮಗಳಿಗೆ ಅಂಟಿಕೊಳ್ಳುವುದು ನಮ್ಮ ಧರ್ಮವಲ್ಲದೆ ಆ ಬಿಕ್ಕಟ್ಟು ಬರಲಿ, ಬರದಿರಲಿ ಅಥವಾ ಒಂದು ವೇಳೆ ಬಂದರೆ ಅದನ್ನೆದುರಿಸಲು ನಾವು ಸಿದ್ಧರಾಗುತ್ತಿರುವಾಗ ಅವರ ಧೋರಣೆಯಂತೆ ನಾವು ವರ್ತಿಸಲೇ ಬೇಕು. ಗಾಂಧಿಜೀಯವರಿಗೂ ಕೆಲವು ಒಳ್ಳೇ ತತ್ವ ಹಾಗೂ ಧೋರಣೆಗಳಿವೆ. ಅವಿಲ್ಲದಿದ್ದರೆ ಮನುಷ್ಯನೇ ಅಲ್ಲನೆಂದು ಅವರೇ ಹೇಳಿರುವರು. ಆದುದರಿಂದಲೇ ನಮ್ಮ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವರ ಧುರೀಣತ್ವವನ್ನು ಒಪ್ಪಿಕೊಂಡರೆ ಅದರಿಂದ ರಾಷ್ಟ್ರಾಧ್ಯಕ್ಷರಿಗೆ ಅವಮಾನ ಮಾಡಿದಂತಾಗುವದಿಲ್ಲ. ಅವರ ತತ್ವವು ಅತ್ಯುತ್ತಮವೆಂದು ಕಂಡುಬಂದದ್ದರಿಂದ ಇಲ್ಲಿಯ ವರೆಗೆ ನಾವು ಅವನ್ನು

ವರ್ಕಿಂಗ್ ಕಮಿಟಿಯ ರಾಜಿನಾಮೆಗಳು ಹಿತದಾಯಕವಿರುವವು

ರಾಜೇಂದ್ರ ಬಾಬುಗಳ ಅಭಿಪ್ರಾಯ



ಪರಿಪಾಲಿಸುತ್ತಾ ಬಂದಿದ್ದೇವೆ. ಅವುಗಳನ್ನು ಕೆಣಕಿ ಆಹ್ವಾನಕೊಟ್ಟಲ್ಲಿಂದ ಅವುಗಳ ರಕ್ಷಣೆಗಾಗಿ ನಾವು ನಿಲ್ಲುವುದು ನಮ್ಮ ಧರ್ಮವಾಗಿದೆ.

ರಾಷ್ಟ್ರಕ್ಕೆ ಈಗ ಸ್ಪಷ್ಟ ಧೋರಣೆಯ ಅವಶ್ಯಕತೆ ಇದೆ. ಭಿನ್ನಾಭಿಪ್ರಾಯಗಳು ಬೇರೆ ಬೇರೆ ಪಂಗಡಗಳನ್ನು ಒಟ್ಟುಗೂಡಿಸಿ ಹೊಂದಿಸಿದ ಸಮೂಹಿಕ ಧೋರಣೆಯು ಬೇಡವಾಗಿದೆ. ನಾವು ಮಾಡಿದಾದರೂ ಇದೆ. ಸೌಮ್ಯ ಹಾಗೂ ಉಗ್ರವಾದಿಗಳೆಂದು ಹೇಳುವವರಿಗೂ ಕಾಂಗ್ರೆಸಿನೊಳಗೆ ಸ್ಥಾನವಿದೆ. [illegible] ನೀಯರು ಆ ಶಬ್ದಗಳ ಸ್ಪಷ್ಟ ಅರ್ಥಗಳನ್ನೇ ಹೇಳಿಲ್ಲವಲ್ಲದೆ ಸೌಮ್ಯವಾದಿಗಳ ಗುಂಪಿಗೆ ಸೇರಿದವರು ಅಪರಾಧವೇಕೆ? ಹಾಗೂ ಉಗ್ರವಾದಿಗಳಾಗುವದು ಹಿತಕರವೇಕೆಂಬದನ್ನು ತಿಳಿಸಿ ಹೇಳಿಲ್ಲ. ಹೀಗೆ ಚರ್ಚಿಸಿದವರು—ಇವರಲ್ಲಿ ನಮ್ಮ ಅಧ್ಯಕ್ಷರೂ ಇರುವರು. ತಾವು ರಾಷ್ಟ್ರದ ಮುಂದಿಡಬೇಕೆನ್ನುವ ಸ್ಪಷ್ಟ ಧೋರಣೆಯನ್ನಷ್ಟು ನಮಗೂ ತಿಳಿಸಿ ಹೇಳಿದರೆ ನಮ್ಮ ಮತ್ತು ಅವರ ಏಕಾಭಿಪ್ರಾಯವೆಲ್ಲಿ ಹಾಗೂ ಭಿನ್ನಾಭಿಪ್ರಾಯವೆಲ್ಲಿ ಎಂಬುದು ತಿಳಿಯುವುದು.

ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ನಾವು ರಾಜಿನಾಮೆ ಕೊಡದಿದ್ದರೆ ನಿಯಾಮಕ ಕಮಿಟಿಯಲ್ಲಿಡಲು ನಾವು ಸಿದ್ಧಪಡಿಸಿದ ಗೊತ್ತುವಳಿಗಳು ನಮ್ಮವೇ ಆಗುತ್ತಿದ್ದವು. ಯಾಕೆಂದರೆ ಅಧ್ಯಕ್ಷರಿಗೆ ಆಗಿನ ವರ್ಕಿಂಗ್ ಕಮಿಟಿಯಲ್ಲಿ ಬಹುಮತವಿದ್ದಿಲ್ಲ. ಅಧ್ಯಕ್ಷರಾದರೂ ನಮ್ಮ ಗೊತ್ತುವಳಿಗಳನ್ನು ಗುಣುಗುಟ್ಟದೆ ಸ್ವೀಕರಿಸಬೇಕಾಗುತ್ತಿತ್ತು. ಇಲ್ಲವೇ ವರ್ಕಿಂಗ್ ಕಮಿಟಿಯಲ್ಲಿ ಮತಭೇದವಿದೆ, ಈ ಗೊತ್ತುವಳಿಗೆ ನಾನು ಹೊಣೆಗಾರನಲ್ಲ. ಎಂದು ಬಹಿರಂಗ ಅಧಿವೇಶನದಲ್ಲಿ ಪ್ರತಿನಿಧಿಗಳಿಗೆ ಹೇಳುವ ಪ್ರಸಂಗ ಬರುತ್ತಿತ್ತು.

ಸುಭಾಷರಿಗೆ ಸ್ವಾತಂತ್ರ್ಯ.

ನಮ್ಮ ಸಲಹೆಯ ವಿರುದ್ಧ ನಡೆದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಅವರು ಆರಿಸಿ ಬಂದ ಮೇಲೆ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ನಿರ್ಧರಿಸಲು ನಮ್ಮಿಂದ ಅವರಿಗೆ ಅತಂಕವಾಗದಂತೆ ಅವರಿಗೆ ಸ್ವಾತಂತ್ರ್ಯ ಕೊಡುವುದುಚಿತವೆಂದು ನಮಗನಿಸಿತು. ಆದುದರಿಂದ ನಾವು ಅಲ್ಲಿದ್ದುಕೊಂಡು ಅಧ್ಯಕ್ಷರಿಗೆ ತೊಂದರೆ ಕೊಡುವುದಕ್ಕಿಂತ ಹೊರಗುಳಿದು ಅವರ ಮುಂದಿನ ಮಾರ್ಗವನ್ನು ಸುಲಭ ಮಾಡುವುದಕ್ಕಾಗಿಯೇ ನಾವು ರಾಜಿನಾಮೆ ಕೊಟ್ಟು ಹೊರಬಿದ್ದಿರುತ್ತೇವೆ. ನಾವು ಕೈಕೊಂಡ ಮಾರ್ಗವು ಸದುದ್ದೇಶಪ್ರೇರಿತವಿರುತ್ತದೆ. ಅಧ್ಯಕ್ಷರಿಗೆ ಅತಂಕಗಳನ್ನೊಡ್ಡಿ ಅವರನ್ನು ವಿಷಮ ಪರಿಸ್ಥಿತಿಯಲ್ಲಿ ನೂಕಬೇಕೆಂಬುದು ನಮ್ಮ ಉದ್ದೇಶವೇ ಅಲ್ಲ.

ಅಧ್ಯಕ್ಷರ ಮತದ ಅಗ್ನಿಪರೀಕ್ಷೆ.

ಮೇಲಾಗಿ ನಮ್ಮ ಸದುದ್ದೇಶ ಸೇವೆಯಲ್ಲಿ ಅಧ್ಯಕ್ಷರಿಗೆ ವಿಶ್ವಾಸವಿಲ್ಲದ ಮೇಲೆ ನಾವು ನಮ್ಮ ಅಧಿಕಾರ ಸ್ಥಾನಗಳಲ್ಲಿದ್ದುಕೊಂಡು ನಮ್ಮ ಅಭಿಪ್ರಾಯವನ್ನು ಒತ್ತಾಯದಿಂದ ಅವರ ಮೇಲೆ ಹೇರುವುದು ಎಂದೂ ಸಮಂಜಸವಾಗಲಾರದು. ಭಿನ್ನ ಮತಾಭಿಪ್ರಾಯಗಳನ್ನು ಒಂದುಗೂಡಿಸುವುದಕ್ಕಿಂತಲೂ ಈ ರೀತಿ ಅವಿಶ್ವಾಸ ವ್ಯಕ್ತಮಾಡುವುದು ವಿಷಾದದ ಸಂಗತಿ. ತ್ರಿಪುರಿ ಅಧಿವೇಶನದಲ್ಲಿ ಅಧ್ಯಕ್ಷರು ಇಲ್ಲವೇ ಅವರ ಅನುಯಾಯಿಗಳು ಮತ್ತು ವಿಶ್ವಾಸಪಾತ್ರರು ಮಂಡಿಸುವ ಸೂಚನೆಗಳ ಗುಣದೋಷಗಳ ಬಗ್ಗೆ ವಿಚಾರಿಸುತ್ತೇವೆ. ಮುಂಬರುವ ಬಿಕ್ಕಟ್ಟಿನಲ್ಲಿ ಮಹಾತ್ಮ ಗಾಂಧಿಯವರ ಧುರೀಣತ್ವವು ರಾಷ್ಟ್ರದ ಹಿತದ ಸಲುವಾಗಿ ಅತ್ಯವಶ್ಯವಿದೆಯೆಂದು ನಮಗನಿಸಿದ್ದರಿಂದ ಅವರ ತತ್ವಗಳಿಗೆ ಈ ಸೂಚನೆಗಳನ್ನು ಒರೆಹಚ್ಚಿ ನೋಡುತ್ತೇವೆ. ಅವುಗಳಲ್ಲಿ ಮೋಲಿಕ ಕಂಡುಬಂದದ್ದಾದರೆ ಸೌಮ್ಯ ಹಾಗೂ ಉಗ್ರವಾದಿಗಳೆಂಬ ಬಡಬಡಿಕೆಯು ವ್ಯಕ್ತಿಗತ ಹೊರತಾಗಿ ಅದಕ್ಕೆ ಅರ್ಥವೇ ಉಳಿಯುವುದಿಲ್ಲ. ಒಂದು ವೇಳೆ ಅವು ಒಂದನ್ನೊಂದು ಹೋಲದಿದ್ದರೆ ಹಾಗೆ ನಮ್ಮ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿ ಕೊನೆಯ ನಿರ್ಣಯ ಕೊಡಲು ಬಹಿರಂಗ ಅಧಿವೇಶನದಲ್ಲಿ ಕೇಳಿಕೊಳ್ಳಬೇಕಾಗುವುದು. ಆದುದರಿಂದ ಕಾಂಗ್ರೆಸ್ಸಿನ ಮುಂದಿರುವ ಸಮಸ್ಯೆಯು ಸರಳ ಹಾಗೂ ಸ್ಪಷ್ಟವಿದೆ. ಮತ್ತು ಕಾಂಗ್ರೆಸಾದರೂ ಅಷ್ಟೇ ಸ್ಪಷ್ಟ ನಿರ್ಣಯ ಕೊಡಬೇಕಾಗುವದು.

'ಸ. ಕ.'

ಕೊಡಗು

ಮಾರ್ಚ್ ತಾರೀಕು ೧೦ ನೇ ಶುಕ್ರವಾರ ೧೯೩೯.

ಗಾಂಧಿಜೀಯವರ ಉಪವಾಸ.

ಕಳೆದ ಏಪ್ರಿಲ್ ತಿಂಗಳಲ್ಲಿ ರಾಜಕೋಟೆಯ ಅರಸರಾದ ಟಾಕೋರ ಸಾಹೇಬರು ಸರದಾರ ಪಟೇಲರೊಡನೆ ಒಪ್ಪಂದ ಮಾಡಿದ್ದು, ಪ್ರಜೆಗಳ ಬೇಡಿಕೆಯನ್ನು ಮನ್ನಿಸುವದಾಗಿ ಭರವಸೆ ಕೊಟ್ಟಿದ್ದರು. ಆದರೆ ಒಳಗಿಂದ ರೆಸಿಡೆಂಟರ ಬೆಂಬಲಕೆ ಹಾಗೂ ಕೇಂದ್ರ ಸರಕಾರದ ಕೈವಾಡ ಮುಂತಾದವು ಹೆಚ್ಚಾದ್ದರಿಂದ ರಾಜಕೋಟೆಯ ಟಾಕೋರ ಸಾಹೇಬರು ವಚನಭಂಗ ಮಾಡಿದರು. ಕೊನೆಗೆ ಗಾಂಧೀಜಿಯವರು ಸ್ವತಹ ಸಂಧಾನಕ್ಕೆ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ತಾರೀಕು 3 ರ ಮಧ್ಯಾಹ್ನದ ವರೆಗೆ ಮಹಾತ್ಮರು ಟಾಕೋರ್ ಸಾಹೇಬರೊಡನೆಯೂ, ರೆಸಿಡೆಂಟ್ ಗಿಬ್ಸನರೊಡನೆಯೂ, ಭೇಟಿ ಹಾಗೂ ಪತ್ರ ವ್ಯವಹಾರ ನಡೆಸಿದರೂ ಅವರು ತಮ್ಮ ಸಂಧಾನ ಪ್ರಯತ್ನದಲ್ಲಿ ಜಯಶೀಲರಾಗದ್ದರಿಂದ ಈ ಚರಿತ್ರಾರ್ಹವಾದ ಉಪವಾಸವನ್ನು ಕೈಕೊಳ್ಳಬೇಕಾಯಿತು. ಅವರ ಪ್ರಕೃತಿಯು ಬಹಳೇ ಶೋಚನೀಯಾವಸ್ಥೆಯಲ್ಲಿ ಇರುವಂಥಾ ಈ ಸಂದರ್ಭದಲ್ಲಿ ಅವರು ಈ ರೀತಿಯ ಕಠಿಣ ತರದ ಉಪವಾಸ ವ್ರತವನ್ನು ಬಹು ದಿನಗಳ ವರೆಗೆ ಆಚರಿಸುವದು ಅಸಾಧ್ಯವಾಗಿತ್ತು. ಉಪವಾಸವನ್ನು ಕೈಕೊಂಡೊಡನೆಯೇ ಇಡೀ ಭಾರತದ ಹಾಗೂ ಜಗತ್ತಿನ ದೃಷ್ಟಿಯೆಲ್ಲಾ ರಾಜಕೋಟೆಯೆಡೆಗೆ ಕೇಂದ್ರೀಕರಿಸಿತು. ಭಾರತದ ಉದ್ವೇಗಲಕ್ಕೂ, ಅಲ್ಲೋಲ ಕಲ್ಲೋಲವುಂಟಾಗಿ, ಮಹಾತ್ಮರು ಹೆಚ್ಚು ದಿನ ಉಪವಾಸ ಮಾಡಲು ಅಶಕ್ತರೆಂದೂ, ಆದ್ದರಿಂದ ದೇಶದ ಹಾಗೂ ಜಗತ್ತಿನ ಹಿತಕ್ಕಾಗಿ ವೈಸರಾಯರು ಈ ಸಂದಿಗ್ಧ ಸಮಯದಲ್ಲಿ ಸಮಾಧಾನಕರವಾದ ತೀರ್ಪಿತ್ತು ಮಹಾತ್ಮರ ಉಪವಾಸವ್ರತವನ್ನು ಮುಕ್ತಾಯಗೊಳಿಸಬೇಕೆಂದೂ ತಂತಿಗಳು ವೈಸರಾಯರಿಗೆ ಕಳುಹಿಸಲ್ಪಟ್ಟವು. ಅಧಿಕಾರ ವಹಿಸಿರುವ ಪ್ರತಿ ಕಾಂಗ್ರೆಸ್ ಮಂತ್ರಿಮಂಡಳಗಳು ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವೈಸರಾಯರು ದಕ್ಷತೆಯನ್ನು ವಹಿಸಿ ಇಡೀ ಮಾನವ ಕೋಟಿಯ ಹಿತಸಾಧನೆಯನ್ನು ಮಾಡುತ್ತಿರುವ ಪೂಜ್ಯ ಗಾಂಧಿಯವರನ್ನು ಅವರ ಉಪವಾಸದಿಂದ ನಿವೃತ್ತಿಗೊಳಿಸಬೇಕು; ಇಲ್ಲವೇ, ತಾವು ತಮ್ಮ ಅಧಿಕಾರಕ್ಕೆ ತಿಲಾಂಜಲಿಯನ್ನಿತ್ತು ಚಳವಳರಂಗಕ್ಕೆ ಇಳಿಯುವದಾಗಿ ತಿಳಿಸಿದವು. ಹೀಗೆ ಮಹಾತ್ಮರ ಉಪವಾಸದಿಂದ ದೇಶದಲ್ಲಾದ ಪರಿವರ್ತನೆಯನ್ನು ವಿವರಿಸಿ ಸಮಗ್ರ ಭಾರತವು ಒಂದೇ ಕಂಠದಿಂದ ವೈಸರಾಯರನ್ನು ಕೇಳಿಕೊಂಡಿತು. ಆದ್ದರಿಂದಲೇ ವೈಸರಾಯರು ತನ್ನ ಕಾರ್ಯವನ್ನರಿತು ಅನೇತುಹಿಮಾಚಲ ಪರ್ಯಂತ ವಿರುವ ಭಾರತೀಯರ ಅನರ್ಘ್ಯವಾದ ರಾಷ್ಟ್ರೀಯ ಸಂಪತ್ತಾದ ಗಾಂಧೀಜಿಯವರನ್ನು ಅವರ ಉಪವಾಸವ್ರತದಿಂದ ಮುಕ್ತರನ್ನಾಗಿ ಮಾಡಲು ಅವರಿಗೆ ಸುಧಾರಣೆಯ ಭರವಸೆಯನ್ನು ಕೊಟ್ಟರು. ಆದ್ದರಿಂದ ಪೂಜ್ಯ ಗಾಂಧೀಜಿಯವರು ತಾರೀಕು 7 ರ ಮಧ್ಯಾಹ್ನ ತಮ್ಮ ಉಪವಾಸವನ್ನು ಅಂತ್ಯಗೊಳಿಸಿದರು. ಗಾಂಧೀಜಿಯವರ ಪ್ರಕೃತಿ ಈ ಕಳೆದ 5 ದಿನಗಳ ಉಪವಾಸದಿಂದ ಅಪಾಯಸ್ಥಿತಿಯಲ್ಲಿರುವದರಿಂದ ಅವರ ಆರೋಗ್ಯವು ಜಗನ್ನಿಯಾಮಕನ ಕೃಪೆಯಿಂದ ಒಡನೆ ಸುಧಾರಿಸಲಿ ಎಂದು ಹಾರೈಸುವೆವು. ಈ ವರೆಗೆ ರಾಜಕೋಟೆ ಚಳವಳದಲ್ಲಿ ಭಾಗವಹಿಸಿ ಸೆರೆಮನೆಗೆ ಹೋಗಿರುವ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡಲಾಗಿದೆ. ಗಾಂಧಿಯವರ ಪ್ರಕೃತಿ ಸುಧಾರಿಸಿದೊಡನೇ ವೈಸರಾಯರನ್ನು ಕಾಣುವರು.

ವೈಸರಾಯರ ಸುಧಾರಣಾ ಭರವಸೆಯ ಮೇರೆ, 'ರಾಜಕೋಟೆ ಸಂಸ್ಥಾನಾಧೀಶರು ಸರ್ದಾರ ಪಟೇಲರೊಡನೆ ಒಪ್ಪಂದವನ್ನು ಮಾಡಿದ್ದು ಮತ್ತು ಅದನ್ನು ಜಾರಿಗೆ ತರದೆ ನಿರಾಕರಿಸಿದ್ದು' ಈ ವಿಚಾರವನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರ ಮುಂದಿಡಲಾಗುವದೆಂದೂ, ಅವರ ತೀರ್ಮಾನದಂತೆ ವರ್ತಿಸಲಾಗುವದೆಂದೂ ತಿಳಿದು ಬರುವದು. ಇದರಿಂದ ಸಮರ್ಪಕವಾದ ಹಾಗೂ ದೇಶಾಭ್ಯುದಯ ಕಾರಕ ತೀರ್ಮಾನ ಸಿಗುವದರಲ್ಲಿ ಸಂಶಯವಿಲ್ಲ. ಮೊದಲು ಪಟೇಲರೊಡನೆ ಮಾಡಿದ ಸಂಧಾನ ಷರತ್ತುಗಳು ಜಾರಿಗೆ ಬರುವದರಲ್ಲೂ ಅನುಮಾನವಿಲ್ಲ. ಅಂತು ವೈಸರಾಯರು ತಮ್ಮ ರಾಜಕಾರಣ ಪಟುತ್ವವನ್ನು ಉಪಯೋಗಿಸಿ ಅಖಂಡ ಭಾರತದ ಬಿಕ್ಕಟ್ಟನ್ನು ಪರಿಹರಿಸಿ ಭಾರತೀಯರ ಧನ್ಯವಾದಕ್ಕೆ ಪಾತ್ರರಾದರು. ಅವರ ಈ ವರ್ತನೆಯು ಶ್ಲಾಘನೀಯವಾದ್ದು.

ರಾಜಕೋಟೆಯ ಇತಿಹಾಸದಿಂದ ಸಂಸ್ಥಾನಾಧೀಶರೆಂದರೆ ಕೇಂದ್ರ ಸರಕಾರದ ಕೈಗೊಂಬೆಗಳೆಂಬುದು ವಿಶದವಾಗುತ್ತದೆ. ಆದರೆ ಸಂಸ್ಥಾನಾಧೀಶರ ವಿಚಾರಶಕ್ತಿಯೊಂದು ನೆಟ್ಟಗಿದ್ದರೆ ಎಲ್ಲವನ್ನೂ ಸರಿಪಡಿಸಲು ಶಕ್ಯವಿದೆ. ಔಂದ್ ಸಂಸ್ಥಾನಾಧೀಶರು ತಮ್ಮ ಪ್ರಜೆಗಳ ಬೇಡಿಕೆಯನ್ನು ಸಲ್ಲಿಸಲು ಶಕ್ಯರಿರುವಾಗ ಇನ್ನಿತರ ಅರಸರಿಗೂ ಶಕ್ಯವಾಗುವದರಲ್ಲಿ ಸಂದೇಹವಿಲ್ಲ. ಆದರೆ ವಿವೇಕವನ್ನು ಒತ್ತಟ್ಟಿಗಿಟ್ಟು ಕೇವಲ ವಿಲಾಸಿಗಳಾಗಿ ಮೆರೆಯುವವರಿಗೆ ಪ್ರಜೆಗಳ ಆಗು ಹೋಗುಗಳ ವಿಚಾರ ತಿಳಿಯದು. ಕೇಂದ್ರ ಸರಕಾರದ ದಾಸಾನುದಾಸರಾಗಿ, ಅವರು ಹೇಳಿದಂತೆ ಕುಣಿದು ಭಾರತದ ಅಧಃಪತನವನ್ನು ಸಾಧಿಸುವದೇ ಸಂಸ್ಥಾನವಲ್ಲನೇಕರ ನೀತಿಯೆಂಬಂತೆ ಪರಿಸ್ಥಿತಿಯು ತೋರುತ್ತದೆ. ಸಂಸ್ಥಾನಾಧೀಶರು ಆದಷ್ಟು ಬೇಗನೆ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಸಮಗ್ರ ಭಾರತೀಯ ಹಿತಕ್ಕೆ ಅನುಕೂಲವಾಗುವ ವಾತಾವರಣವನ್ನು ರಚಿಸಬೇಕು. ಇಲ್ಲವಾದರೆ ತಮ್ಮ ಸಿಂಹಾಸನಗಳು ಅಸ್ಥಿರವೆಂಬುವದನ್ನು ತಿಳಿಯಬೇಕು. ಸಂಸ್ಥಾನಾಧಿಕಾರಿಗಳು ತಾವು ಪ್ರಜಾಹಿತಚಿಂತಕರೆಂಬುದನ್ನು ಗ್ರಹಿಸಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಸಲ್ಲಿಸುವದು ಅವರ ಧರ್ಮವಾಗಿದೆ. ಔಂದ್ ಸಂಸ್ಥಾನವು ಹೇಗೆ ತನ್ನ ಪ್ರಜೆಗಳ ಕೋರಿಕೆಯನ್ನು ಸಲ್ಲಿಸಲು ಮುಂದರಿದು ಇಡೀ ಭಾರತೀಯರಿಂದ ಮಾನ್ಯತೆ ಪಡೆಯಿತೋ ಅಂತೆಯೇ ಇತರ ಸಂಸ್ಥಾನಾಧೀಶರೂ ಸಹ ತಮ್ಮ ಪ್ರತಿಷ್ಟೆ, ಪ್ರಜಾಹಿತಚಿಂತನೆ, ಮತ್ತು ಪ್ರಯೋಜನಕ್ಕಾಗಿ ನ್ಯಾಯವಾದ ಮಾರ್ಗವನ್ನನುಸರಿಸಿ ಕೃತಾರ್ಥರಾಗುವರಾಗಿ ಆಶಿಸುತ್ತೇವೆ.

ತ್ರಿಪುರಿ ಪ್ರದರ್ಶನ.

—o0o—

ಅಖಿಲ ಭಾರತ ಪ್ರದರ್ಶನವನ್ನು ತೆರೆಯುವ ಸಮಾರಂಭದಲ್ಲಿ ಪಂಡಿತ ಜವಾಹಿರ್‌ಲಾಲರು ಮಾಡಿದ ಭಾಷಣದ ಸಾರಾಂಶ:—

ಪ್ರದರ್ಶನವನ್ನು ತೆರೆಯುತ್ತಾ ಪಂಡಿತ ಜವಾಹಿರ್‌ಲಾಲ್ ನೆಹರೂರವರು ಈಗಿನ ಬಿಕ್ಕಟ್ಟಿನ ಸ್ಥಿತಿಯನ್ನು ವಿವರಿಸಿದ್ದಲ್ಲದೆ ಕಾಂಗ್ರೆಸು ತನ್ನ ಈ 52 ವರ್ಷದ ಪ್ರಾಯದಲ್ಲಿ ಅನೇಕ ಈ ತರಹದ ಬಿಕ್ಕಟ್ಟನ್ನು ಎದುರಿಸಿದೆಯೆಂದೂ, ಇನ್ನು ಮುಂದೆ ಎಷ್ಟೋ ವಿಷಮ ಪರಿಸ್ಥಿತಿಗಳನ್ನು ಎದುರಿಸಿ ಮುಂದುವರಿಯುವದೆಂದೂ ಹೇಳಿದರು.

ಮುಂದುವರಿಸುತ್ತಾ, 'ನಿಮ್ಮ ಸ್ಮೃತಿಪಥದಲ್ಲಿ ಪ್ರದರ್ಶನವನ್ನು ತೆರೆಯಲು ಒಪ್ಪಿದ್ದ ಮಹಾತ್ಮ ಗಾಂಧಿಯವರ ಮೂರ್ತಿಯು ಇರಬಹುದು. ಅಖಿಲಭಾರತ ಕಾಂಗ್ರೆಸ್ ಕಮಿಟಿ ಹಾಗೂ ಅಖಿಲಭಾರತ ಗ್ರಾಮ ಕೈಗಾರಿಕಾ ಸಂಸ್ಥೆಗಳು ಕೈಕೊಂಡಿರುವ ಈ ಖಾದಿ ಪ್ರದರ್ಶನವು ಮಹಾತ್ಮರ ತತ್ವದ ಕುರುಹುಗಳಾಗಿವೆ.

ಗಾಂಧಿಜೀಯವರು ಇಂದು ರಾಜಕೋಟೆಯಲ್ಲಿ ಉಪವಾಸವ್ರತವನ್ನು ಕೈಕೊಂಡಿರುವ ಪ್ರಯುಕ್ತ ಇಂದಿನ ಇಲ್ಲಿಯ ಕಾರ್ಯಕಲಾಪಗಳು ಮೋಡ ಕವಿದಂತಿವೆ. ಆದರೆ ರಾಷ್ಟ್ರ ಕಾರ್ಯವು ಅವಿಚಲವಾಗಿ ನಡೆಯಬೇಕೆಂಬ ಭಾವನೆಯಿಂದ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಗೋವಿಂದದಾಸರು ಗಾಂಧಿಜೀಯವರ ಆಗಮನವು ಅನಿಶ್ಚಿತವಾದ್ದರಿಂದ ನನ್ನನ್ನು ಪ್ರದರ್ಶನ ತೆರೆಯಲು ಕೇಳಿಕೊಂಡದ್ದನ್ನು ನನ್ನ ಕರ್ತವ್ಯದೃಷ್ಟಿಯಿಂದ ಮನ್ನಿಸಿರುವೆನು. ಕಳೆದ ನಾಲ್ಕು ವರ್ಷಗಳಿಂದ ಪ್ರದರ್ಶನಗಳು ತಪ್ಪದೆ ನಡೆಯುತ್ತಿವೆ. ಪ್ರದರ್ಶನಗಳು ಬರೀ ಕಣ್ಮನರಂಜಕ ಕಾರ್ಯಗಳಲ್ಲ. ಅವು ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ, ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಯಾವ ಕಾರ್ಯಗಳನ್ನು ಕೈಕೊಳ್ಳಬೇಕೆಂಬುವನ್ನು ಸೂಚಿಸುವ ಕ್ಷೇತ್ರಗಳು. ಹಳ್ಳಿ ನಿವಾಸಿಗಳನ್ನು ಉದ್ಧರಿಸುವ ಯೋಚನೆಯನ್ನು ಬಿಟ್ಟರೆ ಸ್ವರಾಜ್ಯವು ಖಂಡಿತಾ ಕೈಗೂಡಲಾರದು. ನಾನು ಸಮತಾವಾದಿ. ದೇಶದಲ್ಲಿ ದೊಡ್ಡ ಕಾರ್ಖಾನೆಗಳಾಗಬೇಕು. ಕೈಗಾರಿಕೆಯು ಅಭಿವೃದ್ಧಿ ಹೊಂದಬೇಕು ಎಂದು ನಂಬುವವನು. ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವದರಿಂದ ನಿರಾಶ್ರಿತರಾಗಿರುವ, ಹೊಟ್ಟೆಗೆ ಕೂಳಿಲ್ಲದಿರುವವರ ಪ್ರಶ್ನೆಯನ್ನು ಬಿಡಿಸಿದಂತಾಗಲಿಲ್ಲ. ನಾವು ದೊಡ್ಡ ಕೈಗಾರಿಕೆ, (ಕಾರ್ಖಾನೆ ಕೈಗಾರಿಕೆ) ಹಾಗೂ ಗ್ರಾಮ ಕೈಗಾರಿಕೆಗಳೊಳಗೆ ತಿಕ್ಕಾಟ ಬರದಂತೆ ನೋಡಿಕೊಳ್ಳಬೇಕು. ಬಂಡವಾಳಿಗರ ದೃಷ್ಟಿಯಿಂದ ದೊಡ್ಡ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟದ್ದೇ ಆದರೆ ಅವರ ಲಾಭಗಳು ಕೆಲವೊಂದು ವ್ಯಕ್ತಿಗಳ ಸ್ವಪ್ರಯೋಜನಕ್ಕಾಗಿ ಅನೇಕ ಬಡ ಕುಟುಂಬಗಳು ಆರ್ಥಿಕ ಅಡಚಣೆಯಿಂದ ನರಳುವ ಸಂಭವ ಬರುತ್ತದೆ.

ಖಾದಿ ತತ್ವವನ್ನು ಪೂಜ್ಯ ಗಾಂಧೀಜಿಯವರು ಹರಡಿರುವರು. ಅದು ಇಂದು ಭಾರತ ಜನಾಂಗದ ಒಂದು ಕುರುಹಾಗಿದೆ. ಈಗ ಕೈಕೊಂಡ ಕೈಗಾರಿಕೆಯಾದರೂ ಅದು ಅಮೋಘವಾಗಿ ಅಭಿವೃದ್ಧಿಗೊಂಡು ಜನರ ಮನವನ್ನಾಕರ್ಷಿಸತೊಡಗಿದೆ. ನೂರೈವತ್ತು ವರ್ಷಗಳ ಈ ಬಡತನದಲ್ಲಿ ಮತ್ತು ಪರದೇಶಿ ಸಾಮಗ್ರಿಗಳ ಮಧ್ಯದಲ್ಲಿ ನಾವು ಅವರ ಸೊಬಗನ್ನು ಪ್ರಶಂಸಿಸುವ ಬುದ್ಧಿಯನ್ನು ಕಳಕೊಂಡಿರುವೆವು. ಆದ್ದರಿಂದ ಇಂದು ನಾವು ನಮ್ಮ ಆ ರುಚಿಯನ್ನು ಅಭಿವೃದ್ಧಿ ಪಡಿಸಬೇಕು. ದೇಶದ ಉನ್ನತಿಗೆ ಕೈಗಾರಿಕೆಯೇ ಆಧಾರ. ಆದ ಪ್ರಯುಕ್ತ ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಕೈಕೊಳ್ಳಬೇಕು, ಅದಕ್ಕೆ ಎಲ್ಲರೂ ಮಾನ್ಯತೆ ಕೊಡಬೇಕು. ಅದೇ ಹಳ್ಳಿಗರ ಜೀವನಾಧಾರವೆಂದು ಪರಿಗಣಿಸಲ್ಪಡಬೇಕು. ಎಂದರೇನೆ ಹಳ್ಳಿಗರಹಾಗೂ ಭಾರತೀಯರೆಲ್ಲರ ಉದ್ಧಾರವಾದಂತಾಯಿತು."

ಒಳದೇಶ.

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಕೊಡಗಿನಿಂದ ಡೆಲಿಗೇಟರುಗಳಾಗಿ ಶ್ರೀ ಗಳಾದ ಪಂದ್ಯಂಡ ಬೆಳ್ಯಪ್ಪನವರು ಮತ್ತು ಎಚ್. ಯಂ. ಪುಟ್ಟಣ್ಣನವರು ಹೋಗಿರುವರು.

ಮದ್ರಾಸ್ ಪ್ರಾಂತದಿಂದ ಇಂಡಿಯನ್ ಪೊಲೀಸಿಗೆ 2 ಉಮೇದ್ವಾರರನ್ನು ಆರಿಸಲಾಗುವದೆಂದೂ, ಶೆಡ್ಯೂಲ್ಡ್ ಕ್ಲಾಸಿನಿಂದ ಎರಡು ಯೋಗ್ಯ ಉಮೇದ್ವಾರರು ಸಿಕ್ಕದ ಪಕ್ಷ ಎಲ್ಲಾ ಮತೀಯರಿಗೂ ಸೇರಿ ಕಾಂಪಿಟಿಟಿವ್ ಪರೀಕ್ಷೆ ನಡೆಸಲಾಗುವದೆಂದೂ, ಕೊಡಗಿನಿಂದ ಅರ್ಜಿ ಮಾಡುಡುವವರಿದ್ದರೆ ಮಾರ್ಚಿ 28 ರೊಳಗೆ ಕಮಿಷನರಿಗೂ, ಏಪ್ರಿಲ್ ತಾರೀಕು 1 ರೊಳಗೆ ಚೀಫ್ ಕಮಿಷನರಿಗೂ ತಲಪುವಂತೆ ಕಳುಹಿಸಬೇಕೆಂದೂ, ಹೆಚ್ಚಿನ ಮಾಹಿತಿಗಳು ಕಮಿಷನರ ಆಫೀಸಿನಿಂದ ಸಿಗುವದೆಂದೂ ತಿಳಿಸಿರುವರು.

ಅಖಿಲ ಭಾರತ ಪಬ್ಲಿಕ್ ಸರ್ವಿಸ್ ಕಮಿಷನಿನ ಕಾಂಪಿಟಿಟಿವ್ ಪರೀಕ್ಷೆಯಲ್ಲಿ ರೈಲ್ವೆ ಇಂಜಿನೀಯರಿಂಗ್ ದರಜೆಗೆ ಶ್ರೀ ಕೋದಂಡ ಜಿ. ದೇವಯ್ಯನವರು ಆರಿಸಲ್ಪಟ್ಟಿರುವರೆಂದೂ, ದಕ್ಷಿಣ ಇಂಡಿಯಾದಲ್ಲಿ ಇವರೊಬ್ಬರೇ ಆ ದರಜೆಗೆ ಆರಿಸಲ್ಪಟ್ಟಿರುವರೆಂದೂ, ಇವರು ನಾಲ್ಕು ವರ್ಷ ಭಾರತದಲ್ಲಿಯೂ, ಎರಡು ವರ್ಷ ಇಂಗ್ಲೆಂಡಿನಲ್ಲಿಯೂ ತರಬೇತು ಹೊಂದಬೇಕಾಗಿದೆಯೆಂದೂ ತಿಳಿಯುತ್ತದೆ.

ಮಡಿಕೇರಿ.

ಇಲ್ಲಿ ಯಾಲಕ್ಕಿ ಮಣಕ್ಕೆ ರೂ. 25 ಕಾಫಿ ಖಂಡಿಗೆ ರೂ. 108 ಕ್ರಯವಿರುತ್ತೆ.

ಇಲ್ಲಿಯ ಹೈಸ್ಕೂಲಿನ ವಾರ್ಷಿಕೋತ್ಸವವು ತಾರೀಕು 6 ರಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು.

ರೆಡ್ ಕ್ರಾಸ್ ಸಂಘದ ಆಶ್ರಯದಲ್ಲಿ ಶಿಶುಪ್ರದರ್ಶನವು ಇಲ್ಲಿಯ ಹೈಸ್ಕೂಲಿನಲ್ಲಿ ಈ ತಾರೀಕು 25 ಮತ್ತು 26 ರಲ್ಲಿ ನಡೆಸಲ್ಪಡುವದೆಂದೂ, ಮೂರು ವರ್ಷಗಳೊಳಗಿನ ಆರೋಗ್ಯದಿಂದಿರುವ ಶಿಶುಗಳಿಗೆ ಬಹುಮಾನ ಕೊಡಲಾಗುವದೆಂದೂ ಮುನ್ಸಿಪಾಲಿಟಿಯಲ್ಲಿ ವಾಸದ ಮನೆಗಳನ್ನೂ, ದನದ ಕೊಟ್ಟಿಗೆಗಳನ್ನೂ ಚೊಕ್ಕಟವಾಗಿಟ್ಟುಕೊಂಡವರಿಗೂ, ಉತ್ತಮ ತರದ ಹಾಲುಳ್ಳ ಹಸುಗಳ ಮಾಲಿಕರಿಗೂ ಸಹ ಬಹುಮಾನಗಳನ್ನು ಕೊಡಲಾಗುವದೆಂದೂ ತಿಳಿಯಬರುತ್ತದೆ.

ಸುಂಟಿಕೊಪ್ಪ.

ಕಳೆದ 26 ನೇ ತಾರೀಕಿನಲ್ಲಿ ಇಲ್ಲಿಯ ಕ್ಲಬ್ಬಿನ ವಾರ್ಷಿಕೋತ್ಸವವು ಶ್ರೀ. ಜಿ. ಯಂ. ಮಂಜನಾಥಯ್ಯನವರ ಅಧ್ಯಕ್ಷತೆಯಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವದೇ ಮೊದಲಾದ ಸ್ಪರ್ಧೆಗಳಿಂದ ನಡೆಯಿತು.

ಪೊನ್ನಂಪೇಟೆ.

ಪೊನ್ನಪ್ಪಸಂತೆಯಲ್ಲಿ ಈ ತಾ. 9 ರಿಂದ ದನಗಳ ಪ್ರದರ್ಶನವು ನಡೆಯುತ್ತಿದೆ.

ವರ್ತಮಾನ ಸಂಗ್ರಹ.

ನಾಪೋಕ್ಲು.

ಕೊಟ್ಟಮುಡಿ ಪರಂಬಿನಲ್ಲಿ ನಡೆಯುವ ದನಗಳ ಪ್ರದರ್ಶನಕ್ಕೆ ತರಕಾರಿ ವಗೈರೆ ವಸ್ತುಗಳನ್ನು ಕಳುಹಿಸುವವರು ಈ ತಾ. 18 ರೊಳಗೆ ಕಳುಹಿಸಬೇಕಾಗಿ ಪ್ರದರ್ಶನ ಕಮಿಟಿಯ ಅಧ್ಯಕ್ಷರು ತಿಳಿಸುತ್ತಾರೆ.

ವರ್ಗಾವರ್ಗಿ.

ಮಡಿಕೇರಿಯ ಮೋಡೆಲ್ ಶಾಲೆಯ ಹಂಗಾಮಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಮಾಕೇರಿರ ಮಾದಪ್ಪನವರನ್ನು ಮತ್ತು ಅಸಿಸ್ಟೆಂಟ್ ಅಧ್ಯಾಪಕರಾಗಿದ್ದ ಶ್ರೀ ಕೆ. ರಾಮಚಂದ್ರರವರನ್ನು ಹೈಸ್ಕೂಲಿಗೂ, ಸೋಮವಾರಪೇಟೆ ಶಾಲೆಯ ಹೆಡ್ ಮಾಸ್ಟರಾದ ಶ್ರೀ ನಾಳಿಯಂಡ ಕಾಳಪ್ಪನವರನ್ನು ಮಡಿಕೇರಿಯ ಮೋಡಲ್ ಶಾಲೆಯ ಹೆಡ್ಮಾಸ್ಟರಾಗಿಯೂ, ಪೊನ್ನಂಪೇಟೆ ಶಾಲೆಯ ಹೆಡ್ಮಾಸ್ಟರಾದ ಶ್ರೀ ಯಂ. ಯನ್. ಕುಟ್ಟಪ್ಪನವರು ಶ್ರೀ ರಾಮಚಂದ್ರರವರ ಬದಲಿಗೂ ವರ್ಗಾಯಿಸಲಾಗಿದೆ.

ದಕ್ಷಿಣ ಕೊಡಗಿನ ಸರ್ಕಲ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಕೋಡಿರಾಣಿಯಂಡ ಬೆಳ್ಯಪ್ಪನವರನ್ನು ನಿವೃತ್ತಿಗೊಳಿಸಿ ಉತ್ತರ ಕೊಡಗಿನ ಸರ್ಕಲ್ ಇನ್ಸ್‌ಪೆಕ್ಟರಾದ ಶ್ರೀ ಮಲ್ಲೇಂಗಡ ಮುತ್ತಣ್ಣನವರನ್ನು ಆ ಸ್ಥಳಕ್ಕೂ, ಶ್ರೀ ಕಂಡ್ರತಂಡ ಕಾರ್ಯಪ್ಪನವರನ್ನು ಉತ್ತರ ಕೊಡಗಿನ ಸರ್ಕಲ್ ಇನ್ಸ್‌ಪೆಕ್ಟರನ್ನಾಗಿಯೂ, ಶ್ರೀ ಮಂಡೇಪಂಡ ಗಣಪತಿಯವರನ್ನು ಶ್ರೀ ಕಾರ್ಯಪ್ಪನವರ ಬದಲಿಗೂ, ಸುಂಟಿಕೊಪ್ಪದಲ್ಲಿದ್ದ ಶ್ರೀ ಅಬ್ದುಲ್ ಗಫೂರ್‌ರವರನ್ನು ಸೋಮವಾರಪೇಟೆಗೂ, ಸೋಮವಾರಪೇಟೆಯಲ್ಲಿದ್ದ ಶ್ರೀ ಚೆಂಬಾಂಡ ಕಾರ್ಯಪ್ಪನವರನ್ನು ದಕ್ಷಿಣ ಕೊಡಗಿನ ಪ್ರಾಸಿಕ್ಯುಟಿಂಗ್ ಇನ್ಸ್‌ಪೆಕ್ಟರನ್ನಾಗಿಯೂ, ಶ್ರೀ ಚೊಟ್ಟಂಗಡ ಅಪ್ಪಣ್ಣನವರನ್ನು ಸಿದ್ದಾಪುರದಿಂದ ನಾಪೋಕ್ಲಿಗೂ, ಶ್ರೀ ಚೇಂದ್ರಿಮಾಡ ಮುತ್ತಣ್ಣನವರನ್ನು ನಾಪೋಕ್ಲಿನಿಂದ ಸುಂಟಿಕೊಪ್ಪಕ್ಕೂ ವರ್ಗಾಯಿಸಲಾಗಿದೆ.

ಹಿಂದೂದೇಶ.

ಮದ್ರಾಸ್ ಸರಕಾರವು, ಮುಂಬರುವ ಜೂನಿನಿಂದ ಇನ್ನೂ 100 ಶಾಲೆಗಳಲ್ಲಿ, ಕಡ್ಡಾಯ ಹಿಂದೀ ಶಿಕ್ಷಣ ನಡೆಸುವ ಅಪ್ಪಣೆ ಕೊಡಲಿದೆ.

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಸತ್ಯಾಗ್ರಹ ಕೈಕೊಳ್ಳಲು ತ್ರಿಪುರಿ ಕಾಂಗ್ರೆಸ್ಸಿನ ಅಭಿಪ್ರಾಯ ಕೇಳಿರುವರು.

ಮೈಸೂರು ಸಂಸ್ಥಾನದ ಸುಧಾರಣಾ ಕಮಿಟಿಗೆ ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಟಿ. ಭಾಷ್ಯಂರವರು ರಾಜಿನಾಮೆ ಕೊಟ್ಟಿರುವರು.

ರಾಷ್ಟ್ರಪತಿ ಸುಭಾಷ ಬೋಸರು ಗಾಂಧೀಜೀಯವರಿಗೆ ಒಡನೇ ತ್ರಿಪುರಿಗೆ ಬರಬೇಕೆಂದೂ, ಪ್ರಮುಖ ಸಮಸ್ಯೆಗಳು ಅವರಿಲ್ಲದೆ ಇತ್ಯರ್ಥವಾಗುವದು ಕಷ್ಟವೆಂದೂ ತಂತಿ ಕಳುಹಿಸಿರುವರು.

ರಾಜಕೋಟೆಯ ಪ್ರಕರಣದ ಬಗ್ಗೆ ಗಾಂಧಿ-ವೈಸರಾಯರಲ್ಲಾದ ಒಡಂಬಡಿಕೆಯಂತೆ ಅಲ್ಲಿಯ ಎಲ್ಲಾ ರಾಜಕೀಯ ಕೈದಿಗಳನ್ನು ಬಿಟ್ಟಿರುವರಲ್ಲದೆ, ಅವರಿಂದ ವಸೂಲ್ಮಾಡಿದ ಜುಲ್ಮಾನೆ ಹಾಗೂ ಆಸ್ತಿಗಳನ್ನು ಹಿಂದಕ್ಕೆ ಕೊಡುವ ಏರ್ಪಾಡುಗಳು ನಡೆಯುತ್ತಿವೆ.

ಹೈದರಾಬಾದಿನ ಸತ್ಯಾಗ್ರಹವು ಅವಿಚಲವಾಗಿ ನಡೆಯುತ್ತಿದೆ. ಆರ್ಯ ಸಮಾಜದವರ ಹಂಡ ತಂಡವು ಅಲ್ಲಿ ಸತ್ಯಾಗ್ರಹ ನಡೆಸಲು ಬರುತ್ತಿದೆ. ಸೋಲಾಪುರದಿಂದ ಸ್ವಾಮಿ ನಾರಾಯಣಾನಂದರವರ ಮುಖಂಡತ್ವದಲ್ಲಿ 15 ಜನರ ಒಂದು ತಂಡವು ತಾ. 8 ರಲ್ಲಿ ಬಂದು ತಲಪಿದೆ.

ಈ ವರ್ಷ ಕಾಂಗ್ರೆಸ್ಸಿಗೆ ಒಟ್ಟು 44,78,720 ಜನರು ಪ್ರಾಥಮಿಕ ಸದಸ್ಯರಾಗಿ ಸೇರಿರುವರೆಂದೂ, ಇದು ಕಳೆದ ವರ್ಷಕ್ಕಿಂತ 13,76,607 ಹೆಚ್ಚೆಂದೂ ತಿಳಿದು ಬರುತ್ತದೆ. ಈ ವರ್ಷದ ಪ್ರಾಂತದ ಸಂಖ್ಯೆಯು 1936-37 ರ ಸಂಖ್ಯೆಯ 7 ರಷ್ಟೂ, 1935-36 ರ ಸಂಖ್ಯೆಯ 9 ರಷ್ಟು ಹೆಚ್ಚಿರುವದು.

ಜಿಲ್ಲಾ ಬೋರ್ಡಿನ ಅಧಿಕಾರ ಉದ್ಯೋಗಗಳಿಗೆ ಹೆಚ್ಚಾಗಿ ಕಳೆದ ಕಾಯಿದೆ ಭಂಗ ಚಳವಳಿಯಲ್ಲಿ ಭಾಗ ವಹಿಸಿ ಸೆರೆ ಮನೆಗೆ ಹೋದವರ ಮತ್ತು ಕಾಂಗ್ರೆಸ್ ತತ್ವ ಪರಿಪಾಲಕರ ಅರ್ಜಿಗಳಿಗೇ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ತನ್ನ ಒಂದು ಮೀಟಿಂಗಿನಲ್ಲಿ ಗುಂಟೂರು ಜಿಲ್ಲಾ ಬೋರ್ಡು ನಿರ್ಧರಿಸಿದೆ.

ಟ್ರಿವೆಂಡ್ರಂನ ಸ್ಟೂಡೆಂಟ್ಸ್ ಫೆಡರೇಷನಿನ ಆಹ್ವಾನದ ಪ್ರಕಾರ, ಮೈಸೂರಿನ ಕಾಂಗ್ರೆಸ ಕೆಲಸಗಾರರಾದ ಶ್ರೀ. ಕೆ. ಟಿ. ಭಾಷ್ಯಂರವರು, ಅತ್ತ ಬರದಂತೆ, ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರು, ತಮ್ಮ ಅಪ್ಪಣೆಯ ಮೂಲಕ ಶ್ರೀ. ಭಾಷ್ಯಂರವರನ್ನು ತಡೆದಿದ್ದಾರೆ.

ಟ್ರಾವಂಕೂರು ನೇಶನಲ್ ಎಂಡ್ ಕ್ವಿಲನ್ ಬ್ಯಾಂಕಿನ ವಿಚಾರದಲ್ಲಿ, ರೂಪಾಯಿಗೆ 4 ಆಣೆಯಂತೆ ಕೊಡಬೇಕೆಂದು ಹಾಕಲ್ಪಟ್ಟ ಅರ್ಜಿಗೆ ಅನುಗುಣವಾಗಿ, ಮದ್ರಾಸ್ ಹೈಕೋರ್ಟು ಜಡ್ಜರು, ಈ ಬ್ಯಾಂಕಿನ ಸಾಲಗಾರರಲ್ಲಿ, ಬ್ರಿಟಿಷ್ ಸರಕಾರದವಲ್ಲಿನ ಸಕಲ ಸಾಲಗಾರರಿಗೂ, ರೂಪಾಯಿಗೆ 3 ಆಣೆಯಂತೆ ಕೊಡುವಂತೆ ತೀರ್ಮಾನಿಸಿರುವರು.

ಸಂಯುಕ್ತ ಪ್ರಾಂತ್ಯದ ಮಹೋಬಾ ಎಂಬಲ್ಲಿ ಮೊಹರಂ ನಿಮಿತ್ತ ಕಾದಾಟವಾಗುವದರಲ್ಲಿತ್ತು. ಹಿಂದೂ ಮುಸ್ಲಿಂ ಮುಖಂಡರ ಸಂಧಾನ ಯತ್ನಗಳು, ಫಲಕಾರಿಯಾಗದಿರಲು, ಕೆಲವು ಹಿಂದುಗಳು ತಾವಾಗಿ ಮುಂದೆ ಬಂದು, ಮುಸಲ್ಮಾನರ 'ಟಾಜಿಯಾಸ್'ನ್ನು ಹೊತ್ತು, ಮೆರವಣಿಗೆಯಲ್ಲಿ ಭಾಗವಹಿಸಿದರು. ಇದನ್ನು ಕಂಡು, ಕಾದಾಟಕ್ಕೆ ಮುಂದಾದ ಹಿಂದೂ ಮುಸ್ಲಿಮರು ಬಾಲ ಮಡಚಿದರು.

ಪಾನನಿರೋಧ ಪ್ರಚಾರದ ಕೇಂದ್ರ ಸಮಿತಿಯವರು ಹೈದರಾಬಾದಿನ ದಾದಿರ ಥೇರವೇಟಲ್ಲಿ ಸುಮಾರು 23,000 ರೂಪಾಯಿ ವ್ಯಯಮಾಡಿ ಕಟ್ಟಿಸಿರುವ ಪಾನನಿರೋಧಗಳ ವಸಾಹತನ್ನು ಒಂದು ವಾರದ ಹಿಂದೆ ಜನರಲ್ ವಾಲಾಷಾನ್ ಪ್ರಿನ್ಸ್ ಮೊಜಾಮ್ ಜಾ ಬಹದ್ದೂರ್‌ರವರು ಪ್ರಾರಂಭಿಸಿದರು. ವಸಾಹತದಲ್ಲಿ ಆ ಸಂಸ್ಥಾನದ ಬಡ ಸಂಸಾರಿಗಳು ವಾಸವಾಗಿದ್ದಾರೆ. ಇವರೆಲ್ಲರೂ ಮಾದಕ ಪದಾರ್ಥಗಳನ್ನು ಖಂಡಿತವಾಗಿಯೂ ಸೇವಿಸುವುದಿಲ್ಲವೆಂದು ವಾಗ್ದಾನಮಾಡಿರುತ್ತಾರೆ.

ಶ್ರೀ. ಕೇದಾರನಾಥ ಸೈಗಲ್ ಎಂಬವರು, ಕಾಂಗ್ರೆಸು, ಹರಿಪುರದಲ್ಲಿ ಸಂಸ್ಥಾನಗಳ ಚಳವಳದಲ್ಲಿ ಭಾಗವಹಿಸಬಾರದೆಂಬ ಠರಾವನ್ನು ಮಾಡಿರುತ್ತಾ, ಅದಕ್ಕೆ ವಿರುದ್ಧವಾಗಿ ಎ. ಐ. ಸಿ. ಸಿ. ಯ ಅಪ್ಪಣೆ ಪಡೆಯದೆ ಶ್ರೀ. ಜಮ್ನಾಲಾಲ ಬಜಾಜರು ಜಯಪುರದಲ್ಲಿಯೂ, ಗಾಂಧೀಜಿಯವರು ರಾಜಕೋಟೆಯಲ್ಲಿಯೂ ಸತ್ಯಾಗ್ರಹವನ್ನಾರಂಭಿಸಿದ ಪ್ರಯುಕ್ತ ಅವರುಗಳ ಮೇಲೆ ಶಿಸ್ತು ಜಾರಿಮಾಡಬೇಕೆಂಬ ಠರಾವನ್ನು ತ್ರಿಪುರಿಯಲ್ಲಿ ಸೇರುವ ಎ. ಐ. ಸಿ. ಸಿ. ಸಭೆಯ ಮುಂದೆ ತರಲಿದ್ದಾರೆ.

ಬಂಗಾಳ ಅಧಿಕೃತ ಗವರ್ನರಾಗಿದ್ದ ಸರ್ ಜಾನ್ ಆಂಡರ್‌ಸನ್‌ರವರ ನಿವೃತ್ತಿವೇತನದ ಒಂದು ಭಾಗವನ್ನು ಬಂಗಾಳ ಸರಕಾರದವರು ವಹಿಸಿಕೊಳ್ಳಬೇಕೆಂದು ಬ್ರಿಟಿಷ್ ಸರಕಾರದವರು ಅವರನ್ನು ಇಂಡಿಯಾ ಸರಕಾರದ ಮೂಲಕ ಪ್ರಾರ್ಥಿಸಿದ್ದರು. ಬಂಗಾಳ ಮಂತ್ರಿಮಂಡಲಿಯವರು—ಈ ದೇಶದ ಗವರ್ನರುಗಳನ್ನು ಚುನಾವಣೆಮಾಡಿಕೊಳ್ಳಲು ಭಾರತೀಯರಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಗಳೂ ಇಲ್ಲವಾದುದರಿಂದ ಈ ಪ್ರಾರ್ಥನೆಯನ್ನು ಪುರಸ್ಕರಿಸಲಾಗದೆಂದು ತಿಳಿಸಿರುವುದಾಗಿ ಪ್ರಕಟವಾಗಿದೆ.

ವಿದೇಶ

ಸ್ಪೈನ್ ಯುದ್ಧಾರಂಭದಿಂದ, ಇದುವರೆಗೆ ಸ್ಪೈನ್ ಸಮುದ್ರಗಳಲ್ಲಿ, 99 ಬ್ರಿಟಿಷ್ ಹಡಗುಗಳು ವಿವಿಧ ಬಾಧೆಗಳಿಗೆ ಆಹುತಿಯಾಗಿವೆ. ಇದು ಸ್ಪೈನ್ ಬಂಡಾಯಗಾರರ ಹಾಗೂ ಸರ್ವಾಧಿಕಾರಿಗಳ ಸಖ್ಯದ ಫಲ.

ಭಾರತೀಯ ವೈಷ್ಣವ ಧರ್ಮ ಪ್ರಚಾರಕರಾದ, ಮಹಾನಂದವ್ರತ ಬ್ರಹ್ಮಚಾರಿಗಳು, ಅಮೇರಿಕೆಯ ಚಿಕಾಗೋ ವಿಶ್ವವಿದ್ಯಾಲಯದ ಪಿ. ಹೆಚ್. ಡಿ, ಬಿರುದನ್ನು ಪಡೆದಿದ್ದಾರೆ. ಇವರು, ಇದಾಗಲೇ, ಅಮೇರಿಕೆಯ ವಿವಿಧ ಭಾಗಗಳಲ್ಲಿ ಭಾರತೀಯ ವೇದಾಂತದ ಕುರಿತಾಗಿ, 252 ಭಾಷಣಗಳನ್ನಿತ್ತಿರುವರು.

ಕಳೆದ ವರ್ಷ ಮಂಚೂಕೊ ಗಡಿಯಲ್ಲಿ ರಷ್ಯನರಿಗೂ, ಜಪಾನರಿಗೂ 161 ಜಗಳಗಳಾದವೆಂದೂ, ಈ ಪುಕಾರುಗಳಲ್ಲಿ ಬರೇ 51ಕ್ಕೆ ಮಾತ್ರ ರಷ್ಯಾವು ಉತ್ತರವಿತ್ತಿದೆಯೆಂದೂ ತಿಳಿಯಬರುತ್ತದೆ. ಜಗಳಗಳ ಮುಖ್ಯ ಕಾರಣವೆಂದರೆ ಅಕ್ರಮ ಪ್ರವೇಶ, ಬೇಟೆ, ಅನ್ಯಾಯಕರವಾದ ಸರ್ವೆ, ಇವೇ ಮೊದಲಾದವಾಗಿವೆ.

ನಿರಶನ ವ್ರತವನ್ನು ನಿಲ್ಲಿಸಿದ ನಂತರ ಮಹಾತ್ಮರ ಪ್ರಕಟಣೆ.

ಸಂಸ್ಥಾನಾಧೀಶರುಗಳು ಪ್ರಜಾಹಿತವನ್ನು ಬಯಸಬೇಕು.

ಕಾಲಗುಣಕ್ಕನುಸಾರ ಅವರು ವರ್ತಿಸಬೇಕು.

ಮುಸಲ್ಮಾನರು ಕಾಂಗ್ರೆಸು ವಿನ್ನು ಹಿತಸಾಧಕ ಸಂಸ್ಥೆಯೆಂದು ತಿಳಿಯಬೇಕು.

ನನ್ನ ಅಭಿಪ್ರಾಯದಲ್ಲಿ ಉಪವಾಸದ ಶುಭ ಸೂಚಕ ಅಂತ್ಯವು ಮಿಲಿಯಾಂತರ ಜನತೆಯ ಪ್ರಾರ್ಥನೆಯ ಫಲಿತಾಂಶವಾಗಿದೆ. ಈ ಮಿಲಿಯಾಂತರ ಜನತೆಯನ್ನು ಅವರ ಒಡನಾಡಿ ತಿಳಿಯಲು ನನಗೆ ಹಕ್ಕಿದೆ. ಆದರೇ ನನ್ನ ಪ್ರೇಮವು ಹಾಗೂ ಆತ್ಮದ ವಿಷ್ವಗಳು. ನನಗೆ ಈ ಮಿಲಿಯಾಂತರ ಜನರಲ್ಲಿ ದೇವರ ಪ್ರಧಾನ ಕಾಣುವುದೇ ವಿನಃ ಬೇರೆ ಇಲ್ಲ ಎಂಬ ನನ್ನ ತಿಳಿದಿರುವೆನು. ಈ ಪ್ರೇಮದ ಅವ್ಯ ಆ ಪರಿಗಾಗಿರುವುದಿಲ್ಲ. ನನಗೆ ಅವರ ಅರಿವು ಉಂಟಾಗಿದೆ. ಅದರಿಂದ ಸತ್ಯವನ್ನು ಹೇಳಿರೆಂದೂ, ಹೇಳದೇ ಸತ್ಯವೆಂದೂ ತಿಳಿದು ಮಿಲಿಯಾಂತರ ಜನತೆಯ ಮುಖಾಂತರ ಪ್ರಾರ್ಥಿಸುತ್ತೇನೆ. ಜಗತ್ತಿನ ಇನ್ನಿತರ ರಾಷ್ಟ್ರಗಳ ಹಾಗೂ ಮುಖಂಡರ ಜಯಾಪೇಕ್ಷೆಯೂ ಈ ಉಪವಾಸಕ್ಕೆ ಬಲವನ್ನು ಕೊಟ್ಟಿತು. ಯೂರೋಪಿಯನರೂ, ಭಾರತೀಯರೂ ಸಹ ಮುಖವಾಗಿ ಶಹರಿಸಿ ಶಾಂತಿದಾಯಕವಾದ ಒಂದು ಒಪ್ಪಂದಕ್ಕೆ ಬರಲು ಪ್ರಯತ್ನಿಸಿ ಕೃತಾರ್ಥರಾದರು. ವಿಶೇಷವಾಗಿ ಹೇಳುವಾದರೆ ಈ ಸಂಧಾನದ ತೀರ್ಮಾನಕ್ಕೆ ವೈಸರಾಯರೇ ಜವಾಬ್ದಾರರು.

ಯೂರೋಪಿಯನರು ಈ ಉಪವಾಸ ಮೊದಲಾದ ಕಾರ್ಯಕ್ರಮಗಳಲ್ಲಿ ನಂಬಿಗೆಯುಳ್ಳವರಲ್ಲ. ಅದರಲ್ಲೂ ರಾಜಕೀಯ ರಂಗದಲ್ಲಿ ಇದರ ಉಪಯೋಗವೆಂದರೆ ಅದು ಮುಕ್ಕನ್ನು ಹಾಸ್ಯಾಸ್ಪದವೆಂದವರು ತಿಳಿಯುವರು. ಭಾರತೀಯರಲ್ಲಿ ಕೆಲವರು ಸಹ ಈ ಉಪವಾಸ ಕ್ರಮವನ್ನು ನಿಷೇಧಿಸುವವರಿದ್ದಾರೆಂದು ನನಗೆ ತಿಳಿದಿದೆ. ಆದರೆ ನನ್ನ ಈ ಐವತ್ತು ವರ್ಷಗಳ ಅನುಭವದಲ್ಲಿ ಉಪವಾಸ ಸತ್ಯಕ್ಕೆ ಸತ್ಯಪ್ರತಿಷ್ಠೆ ... ದಯೆಂದು ಹೇಳಬಲ್ಲೆನು.

ಈಗ ಇಂಗ್ಲಿಷ್ ಜನತೆಯು ಸರಿಯಾಗಿ ಇಲ್ಲಿ ವರ್ತಿಸುವ ವೈಸರಾಯರ ವರ್ತನೆಯನ್ನು ಪರಿಶೀಲಿಸಬೇಕಾಗಿದೆ. ರಾಜಕೀಯ ರಂಗದಲ್ಲಿ ಹಾಗೂ ಬ್ರಿಟಿಷರ ದಿನದಿನದ ಪರಿಸ್ಥಿತಿಯ ದೃಷ್ಟಿಯಿಂದ ವೈಸರಾಯರು 'ಈ ಮನುಷ್ಯನ ಕಾರ್ಯಕ್ರಮಗಳು ನನಗೆ ತಿಳಿಯುವುದಿಲ್ಲ. ಆತನ ಉಪವಾಸಗಳಿಗೆ ಅಂತ್ಯವೇ ಇಲ್ಲ, ಆದ್ದರಿಂದ ಅದಕ್ಕೆ ಸ್ವಲ್ಪ ತಡೆ ಹಾಕಬೇಕು. ಇದು ಆತನ ಕಡೇ ಉಪವಾಸವೆಂದು ಆತನು ಭರವಸೆ ಕೊಡುವುದಿಲ್ಲ. ಆದ್ದರಿಂದ ಆತನು ತನ್ನ ಉಪವಾಸವನ್ನು ನಿಲ್ಲಿಸುವವರೆಗೆ ಯಾವುದೊಂದೂ ಕ್ರಮವನ್ನು ಕೈಗೊಳ್ಳಬಾರದೆಂದು' ಹೇಳಿದ್ದರೆ ಅದು ಸಹಜ ಹಾಗೂ ನಾನು ಒಪ್ಪುವಂಥಾದ್ದೇ ಆಗಿತ್ತು. ಆದರೆ ನೀತಿ ಶಾಸ್ತ್ರದ ಮೇರೆ ಮಾತ್ರ ಇದು ತಪ್ಪಾಗುತ್ತಿತ್ತು. ಹೀಗೆ ಬ್ರಿಟಿಷರು ವರ್ತಿಸಿದ್ದು ತಪ್ಪೆಂದು ನನಗನಿಸಿದರೂ ಸಂಸ್ಥಾನಗಳ ಜಟಿಲ ಸಮಸ್ಯೆಯನ್ನು ಇದು ಸಡಿಲ ಮಾಡಿದೆ.

ರಾಜಕೋಟೆ ಸಂಸ್ಥಾನವನ್ನು ಎಲ್ಲಾ ಸಂಸ್ಥಾನಗಳೂ ಅನುಸರಿಸಬೇಕೆಂದು ನಾನು ಹೇಳುವುದಿಲ್ಲ. ಕೆಲವು ಸಂಸ್ಥಾನಗಳ ಸಮಸ್ಯೆಯು ಬೇರೆ ವಿಧದಿಂದ ತೀರ್ಮಾನಿಸಲ್ಪಡಬಹುದು. ಆದರೆ ಜನತೆಯ ವ್ಯಕ್ತಿಯು ಸಂಸ್ಥಾನಗಳ ಸಮಸ್ಯೆಯ ಕಡೆ ಕೇಂದ್ರೀಕರಿಸಿದೆ. ನಾನು ರಾಜಕೋಟೆಗೆ ಠಾಕೂರ್ ಸಾಹೇಬರ ಹಾಗೂ ಸ್ನೇಹಿತನಂತೆ ಬಂದಿದ್ದೇನೆಂದು ನಂಬಬೇಕಾಗಿ ರಾಜಕುಮಾರರನ್ನು ಕೇಳಿಕೊಳ್ಳುತ್ತೇನೆ. ರಾಜಕೋಟೆ ಸತ್ಯಾಗ್ರಹ ಚಳವಳಿಯನ್ನು ಇನ್ನೂ ಮುಂದರಿಯಲು ಬಿಟ್ಟಿದ್ದರೆ ಜನತೆಯ ಹಾಗೂ ರಾಜರೊಳಗೆ ಪ್ರಚಂಡ ಘರ್ಷಣೆ ಎದ್ದು ಅನಾಹುತವಾಗುವ ಸಂಭವವಿತ್ತು.

ಸಂಸ್ಥಾನಗಳ ಅರಸರು ಈ ಸುಧಾರಣೆಗಳಿಗೆ ಗಮನಕೊಡುವುದಿಲ್ಲವೆಂದು, ಆದ್ದರಿಂದ ಈ ಹಳೇ ಪದ್ಧತಿಯ ನಿರಂಕುಶ ವರ್ತನೆಯು ಧೂಳೀಪಟವಾಗಬೇಕೆಂದೂ ಸಾರ್ವಜನಿಕರ ದೃಷ್ಟಿಯಲ್ಲಿ ಅನುಭವಿಸುತ್ತಿರಬಹುದು. ಆದರೆ ಶುದ್ಧ ಅಹಿಂಸಾವಾದಿಯಾಗಿ ಈ ಅಭಿಪ್ರಾಯದಿಂದ ನಾನು ಭಿನ್ನಿಸುವೆನು. ಅದಲ್ಲದೆ ಭಾರತದಲ್ಲಿ ಒಂದು ನಾಟಕವಿದೆ. ಹಳೆಯ ಈ ಉದ್ಧಟನ ವರ್ತನೆಯೆಲ್ಲ ತೀರು ಹಾಕುವದು ಅವಶ್ಯ. ಆದರೆ ಸಂಸ್ಥಾನಾಧೀಶರು ಕಳೆದ ದಿನಗಳನ್ನು ಮನಸಿಗೆ ತಂದು ಕಾಲಕ್ಕೆ ಸರಿಯಾಗಿ ನಡೆಸಿದ್ದರೆ ಅವರೆ ಎಲ್ಲವೂ ಸರಿಹೋಗುವದು."

ಸಂಸ್ಥಾನಾಧೀಶರು ತಮ್ಮ ಹೊಣೆಯನ್ನು ಅರಿತು ಜನತೆಯ ಮನ ನಾಡಿ ಲಕ್ಷ್ಯಕ್ಕಾಗಿ ಧೈರ್ಯಪೂರ್ವಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಇದು ರಾಜಕೋಟೆಯು ಕಲ್ಪನೆಗೆ ಮೀಸಲಿಡಬೇಕೆಂದಲ್ಲ. ಜನತೆಯ ಹಿತದೃಷ್ಟಿಯಿಂದ ಮತ್ತು ಭಾರತವನ್ನು ನಿರಂಕುಶ ವರ್ತನೆಯಿಂದ ತಪ್ಪಿಸುವ ದೃಷ್ಟಿಯಿಂದ ಧೈರ್ಯಪೂರಿತ ಕ್ರಮಗಳನ್ನನುಸರಿಸಬೇಕು. ನನ್ನ ಇಂದಿನ ಉಲ್ಬಣ ಸ್ಥಿತಿಯಲ್ಲಿ ಹೆಚ್ಚಿಗೆ ಹೇಳಲಾಗುವುದಿಲ್ಲ. ಆದರೂ ಆ ದೈವಿಕ ಪ್ರೇರಣೆಯು ನನ್ನ ಅಂತರಾಳದಿಂದ ಹೊರಟಿದ್ದ ಪ್ರಯುಕ್ತ ಈ ಪ್ರಕಟಣೆಯನ್ನು ಕೊಡಬೇಕಾಯಿತು.

ಮುಸ್ಲಿಮರ ವಿಚಾರ ಹೇಳುವದಿದ್ದರೆ ಅವರೂ ಇಲ್ಲಿ ಬದುಕಿ ಬಾಳಬೇಕು. ಆದ್ದರಿಂದಲೇ ಅವರನ್ನು ಸಮಯವರಿತು ಅವಶ್ಯಕನುಸಾರ ವರ್ತಿಸಲು ಕೇಳಿಕೊಳ್ಳುವೆನು. ಅವರ ಜೀವನವನ್ನು ಸುಧಾರಿಸಿಕೊಳ್ಳಬೇಕು. ರಾಜಕೋಟೆಯಿಂದ ಮುಸಲ್ಮಾನ ಸ್ನೇಹಿತರು ಬಂದು ಅವರಿಗೆ ಪ್ರತ್ಯೇಕ ಸ್ಥಳಗಳನ್ನು ಕೌನ್ಸಿಲು ಯಾ ಇತರ ಸಭೆಗಳಲ್ಲಿ ಕಾದಿರಿಸಬೇಕೆಂದು ಕೇಳಿಕೊಂಡದ್ದನ್ನು ನಾನು ಒಪ್ಪಿರುವೆನು. ಅವರ ಮತಸ್ವಾತಂತ್ರ್ಯವನ್ನು ಕಾಪಾಡಲು ಭರವಸೆಯನ್ನು ಅವರು ಕೇಳದೇನೇ ಕೊಟ್ಟಿರುವೆನು. ಇದರಿಂದ ಭಾರತದ ಇತರ ಮುಸಲ್ಮಾನರ ಮನವೂ ಸಹ ತೃಪ್ತಿಗೊಳ್ಳುವದರಲ್ಲಿ ಸಂದೇಹವಿಲ್ಲ. ನನ್ನ ಸಂಗತಿ, ಕಾಂಗ್ರೆಸ್ಸಾಗಲೀ ಅವರ ಮೂಲಭೂತ ಹಕ್ಕು, ಹಾಗೂ ತತ್ವಗಳಿಗೆ ಯಾವ ವಿಧದ ತೊಂದರೆ ಹಾಗೂ ತೊಡಕುಗಳನ್ನು ತರಲಿಕ್ಕಿಲ್ಲೆಂಬುದು ಅವರಲ್ಲಿ ಖಚಿತವಾಗಬೇಕು.

ಕಾಂಗ್ರೆಸ್ ಅಧಿವೇಶನದ ವಿಚಾರ ಒಂದು ಮಾತು. ನನ್ನ ಆತ್ಮವು ಅಲ್ಲಿದೆ. ಆದರೆ ಅಲ್ಲಿಗೆ ತಲಪಲು ನನಗೆ ಸಾಧ್ಯವಿಲ್ಲ. ನನ್ನ ಸ್ಥಿತಿಯು ಇನ್ನೂ ಸುಧಾರಿಸಿಲ್ಲ. ಅಲ್ಲದೆ ರಾಜಕೋಟೆ ಸಮಸ್ಯೆಯನ್ನು ಪೂರ್ಣವಾಗಿ ತೀರಿಸಿಬಿಡುವದೇ ಯುಕ್ತವೆಂದೂ, ತ್ರಿಪುರಿ ಹಾಗೂ ರಾಜಕೋಟೆಗಳ ಮಧ್ಯೆ ಓಡಾಡುವದು ಸರಿಯಲ್ಲವೆಂದೂ ನನಗನಿಸಿದೆ. ಈಗ ನನ್ನ ಚೈತನ್ಯವನ್ನೆಲ್ಲಾ ರಾಜಕೋಟೆಗಾಗಿಯೇ ಉಪಯೋಗಿಸಬೇಕಿದೆ. ನನಗೆ ಪಡನೆ ದಿಲ್ಲಿಗೆ ಹೋಗಬೇಕಿದೆ. ತ್ರಿಪುರಿ ಅಧಿವೇಶನವು ಯಶಸ್ವಿಯಾಗಲೆಂದಷ್ಟೇ ಹಾರೈಸಬಲ್ಲೆ. ಇಷ್ಟು ವರ್ಷಗಳಿಂದಾಗಿ ಈ ವರ್ಷ ಕಾಂಗ್ರೆಸ್ ಅಧಿವೇಶನಕ್ಕೆ ಗೈರ್ ಹಾಜರಾಗುವದು ಒಂದು ಹೊಸ ಅನುಭವವಾಗಿದೆ. ಅದು ಒಳ್ಳೆದಕ್ಕಾಗಿಯೇ. ಯಾಕೆಂದರೆ ನಾನಿಲ್ಲದೆ ಯಾವದೊಂದೂ ಸ್ವಾಮ್ಯ ನಿರ್ಧಾರದ ಇಚ್ಛೆಯಾಗುವುದಿಲ್ಲವೆಂಬ ಹೆಮ್ಮೆಯೇಕೆ ಪಡಬೇಕು? ಸನ್ಮಿತ್ರರು ತ್ರಿಪುರಿಯಲ್ಲಿ ಶಾಂತಿ, ಧೈರ್ಯಯುತ, ಹಾಗೂ ಸ್ವಾರ್ಥತ್ಯಾಗಿಗಳಾದ ಧುರೀಣರಿದ್ದಾರೆ. ಅದ್ದರಿಂದ ಅಲ್ಲಿ ಹೊಸ ಕಾರ್ಯಕ್ರಮಗಳನ್ನು ರೂಪಿತಗೊಳಿಸಿದರೂ ಸಹ ಅದು ಅಹಿಂಸಾಮಯವಾಗಿರುವುದರಲ್ಲಿ ಸಂದೇಹವಿಲ್ಲ.

ನನ್ನ ಕಾರ್ಯವು ರಾಜಕೋಟೆಯೊಡನೆ ಇನ್ನು ಪ್ರಾರಂಭವಾಗುವದು. ಠಾಕೋರ್ ಸಾಹೇಬರನ್ನೂ, ಅವರ ಅಧಿಕಾರಿಗಳನ್ನೂ ನಾನು ಬಿಡುವಾದ ಭಾವನೆಯಿಂದ ತೀರ್ಪಿಸಿರುವೆನು. ಆದರೆ ಅದು ಸ್ನೇಹದ ಭಾವನೆಯಿಂದ ತೀರಿಸಿದ್ದಾಗಿದೆ. ಠಾಕೋರ್ ಸಾಹೇಬರಿಗೆ ನಾನು ತಂದೆಯ ಸ್ಥಾನದಲ್ಲಿರುವೆನೆಂದು ಪುನಃ ಹೇಳುವೆನು. ರಾಜಕೋಟೆಯು ತನ್ನ ಪ್ರಜೆಗಳ ಕೋರಿಕೆಯನ್ನು ಸಲ್ಲಿಸಿದ ನಂತರ ಕಾಠೇವಾಡದ ಇತರ ಸಂಸ್ಥಾನಗಳೂ ಸಹ ಅದೇ ದಾರಿಯನ್ನನುಸರಿಸುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ರಾಜಕೋಟೆಯು ಬೇರೆ ಸಂಸ್ಥಾನಗಳಿಗೆ ಮಾರ್ಗದರ್ಶಿಯಾಗುವುದು."

ಪ್ರ ಕ ಟ ಣೆ .

ಅಮ್ಮತ್ತಿನಾಡು ಪೇರೂರು ಹೊಸಕೇರಿಗೆ ಸೇರಿದ ಪೊಳ್ಳಿಬೆಟ್ಟದಲ್ಲಿ ವ್ಯಾಪಾರದ ಕಣೆಯಬಂಡಿಯಲ್ಲಿರುವ ಮೂಸ ಅಪ್ಪಿಲ್ ಮಮ್ಮುಕಾಕನು ತಿಳಿಯಪಡಿಸುವುದೇನೆಂದರೆ—

ಸದರಿನಾಡು ಸದರಿ ಗ್ರಾಮದ ಪಣೆಕರ ನಂಬ್ರ, 2ನೇ ಮುತ್ತು ಇವರಿಂದ ನಾನು 1937ನೇ ಇಸವಿ ಜೂನ್ ತಾರೀಖು 14ರಲ್ಲಿ 50 ರೂ. ಗಳ ಕ್ರಯಕೊಟ್ಟು ಹೊಂದಿದ ಸೊತ್ತಿನ ಸ. ನಂ. 156/6 ಮತ್ತು 156/10 ಜಾಗದಲ್ಲಿ ತಕರಾರು ಮೇರೆ 1928ನೇ ಇಸವಿ ಲಾಗಾಯಿತಿನಿಂದ ನಾನು ಸುಮಾರು 800 ರೂ. ಗಳನ್ನು ಖರ್ಚು ಮಾಡಿ ಅಂಗಡಿ ಮನೆ ಕಟ್ಟಿ ಹತ್ತು ಸಹ ನನ್ನ ಸ್ವಂತ ಇಟ್ಟುಕೊಂಡಿರುತ್ತೇನೆ. ನನ್ನ ತಮ್ಮಂದಿಯರಾದ 1ನೇ ಅಬ್ಬು, 2ನೇ ನಾಟು ಯಾನೆ ಇಸ್ಮಾಯಿಲ್ ಎಂಬವರು ನನ್ನನ್ನು ಬಿಟ್ಟು ನಾವಲೇ ಹೊರಟು ಹೋದರು. ಇವರು 1934ನೇ ಇಸವಿಯಲ್ಲಿ ಇಸ್ಮಾಯಿಲ್ ಎಂಬವನು 1935ನೇ ಇಸವಿಯಲ್ಲಿ ಅಬ್ಬು ಎಂಬವನು ಸಹ ಪ್ರತ್ಯೇಕ ಬಂದು ನನ್ನ ಜೊತೆಯಲ್ಲಿ ಇದ್ದರು. ಇವರಿಬ್ಬರು ನನ್ನ ವ್ಯಾಪಾರಕ್ಕೂ, ಸದರಿ ಸ್ವತ್ತಿಗೂ ಹಕ್ಕುದಾರರಲ್ಲ. ಇವರು ನನ್ನ ಸ್ವಂತ ತಮ್ಮಂದಿಯರಾದ ಕಾರಣ ಸದರಿ ಸೊತ್ತನ್ನು ನಾನು ಜನ್ಮದ ಬೆಲೆ ತೀರಿಸಿ ತೆಗೆಯುವ ಖರಾರಿನಲ್ಲಿ ಇವರನ್ನು ಸಹ ಸೇರಿಸಿ, ಇವರ ಹೆಸರಿನಲ್ಲೂ ಸಹ ಜಮಾಬಂದಿ ಮಾಡಿರುತ್ತೇನೆ. ಈ ರೀತಿ ಮಾಡಿದ ಕಾರಣ ನಾನು ಸಾಯುವ ವರೆಗೂ ನನ್ನ ಜೊತೆಯಲ್ಲಿ ಇದ್ದು ಒಂದಲ್ಲಿ ನಾನು ನ್ಯಾಯವಾದ ನಂತರ ನನ್ನ ಹೆಂಡತಿ ಮಕ್ಕಳಿಗೆ ಇವರು ಸಹ ಹಕ್ಕುದಾರರಾಗಿ ಮಾತ್ರ ಇರಬೇಕಾಗಿದೆ. 1938ನೇ ಇಸವಿ ಮೇ ತಾ. 10ರ ಲಾಗಾಯಿತಿನಿಂದ ಅಬ್ಬು ಎಂಬವನು ನನ್ನ ಸಂಗಡ ಜಗಳ ಮಾಡಿ ನನ್ನನ್ನು ಬಿಟ್ಟು ಆ ಲಾಗಾಯಿತಿನಿಂದ ಈ ವರೆಗೆ ಗೋಣಿಕೊಪ್ಪಲಿನಲ್ಲಿ ಇದ್ದಾನೆ. ಮೇಲ್ಕಂಡ ಸ್ವತ್ತಿನ ಅವನ ಹಕ್ಕನ್ನು ಇತರರಿಗೆ ವಿಕ್ರಯ ಮಾಡುವದಾಗಿ ನನ್ನ ತಿಳುವಳಿಕೆಗೆ ಬಂದಿದೆ. ಆದುದರಿಂದ ಸದರಿ ಸ್ವತ್ತಿಗೂ, ನನ್ನ ವ್ಯಾಪಾರಕ್ಕೂ ಸದರಿಯವನು ಹಕ್ಕುದಾರನಲ್ಲ. ಯಾರಾದರೂ ದುರ್ಬೋಧನೆ ನಡಿಸಿ ನನ್ನ ವ್ಯಾಪಾರಕ್ಕೂ, ಸದರಿ ಸ್ವತ್ತಿಗೂ ನನ್ನನ್ನು ನಷ್ಟಪಡಿಸಿದಲ್ಲಿ ಇದಕ್ಕೆ ಉಂಟಾಗುವ ವಿಶಿಷ್ಟ ನಷ್ಟಕ್ಕೆ ನಷ್ಟಪಡಿಸಿದವರೇ ಜವಾಬುದಾರರು ಎಂಬ ಸಂಗತಿ ಈ ಮೂಲಕ ತಿಳಿಸಿರುತ್ತೇನೆ.

ಮೂಸ ಅಪ್ಪಿಲ್ ಮಮ್ಮುಕಾಕ.
ಪೇರೂರುಹೊಸಕೇರಿ,
ಪೊಳ್ಳಬೆಟ್ಟ.

ರಾಜಕೋಟೆ ಸಂಸ್ಥಾನದಲ್ಲಿ ಬಿಕ್ಕಟ್ಟು.

ರಾಜಕೋಟೆಯ ಪ್ರಜೆಗಳು ಜವಾಬ್ದಾರಿ ಸರ್ಕಾರಕ್ಕೋಸ್ಕರ ಮಾಡಿದ ಚಳವಳವೂ, ಆ ಬಗ್ಗೆ ವಲ್ಲಭಬಾಯಿ ಪಟೇಲ್ ಮತ್ತು ಸಂಸ್ಥಾನಧಿಪತಿಗಳಾದ ಟಾಕೋರ್ ಸಾಹೇಬರೊಡನಾದ ಸಂಧಾನದ ವಿಚಾರವೂ, ನಂತರ ಟಾಕೋರ್ ಸಾಹೇಬರು ಈ ಸಂಧಾನ ಶರತ್ತುಗಳನ್ನು ಪಾಲಿಸದ್ದೂ, ಶ್ರೀಮತಿ ಕಸ್ತೂರಿ ಬಾಯಿ ಗಾಂಧಿ, ಮಣಿಬೆನ್ ಪಟೇಲರೇ ಮೊದಲಾದವರು ಅಲ್ಲಿಯ ಚಳವಳದಲ್ಲಿ ಭಾಗವಹಿಸಿ ಸೆರೆಮನೆಗೆ ಹೋದದ್ದೂ, ಗಾಂಧೀಜಿಯವರು ಅಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಲು ಅಲ್ಲಿಗೆ ಹೋದದ್ದೂ ವಾಚಕ ಮಹಾಶಯರಿಗೆ ವಿದಿತವಿದೆ. ಈಗ ಅಲ್ಲಿಯ ಸ್ಥಿತಿಯು ಬಿಕ್ಕಟ್ಟಾವಸ್ಥೆಗೆ ತಲಪಿದೆ. ಜನತೆಯ ಕೋರಿಕೆಯನ್ನು ನೆರವೇರಿಸುವೆನೆಂದು ಪಟೇಲರೊಂದಿಗೆ ಸಂಧಾನ ಮಾಡಿ ನಂತರ ತನ್ನ ವಚನವನ್ನು ಮುರಿದು ದಬ್ಬಾಳಿಕೆಯನ್ನು ಕೈಗೊಂಡ ಅರಸರ ವರ್ತನೆಯನ್ನು ಮಹಾತ್ಮರು ಖಂಡಿಸಿರುವರು. ರಾಜಕೋಟೆಯು ತನ್ನ ಮಾತೆಯೆಂದೂ, ಅಲ್ಲೇ ತನ್ನ ವಿದ್ಯಾಭ್ಯಾಸವನ್ನು ಕೈಕೊಂಡದ್ದೆಂದೂ, ತನ್ನ ತಂದೆಯವರೂ ಸಹ ಅಲ್ಲೇ ದಿವಾನರಾಗಿದ್ದರೆಂದೂ, ಆದ್ದರಿಂದ ತನಗೂ, ರಾಜಕೋಟೆ ಸಂಸ್ಥಾನ ಹಾಗೂ ರಾಜಮನೆತನಕ್ಕೂ ಹೆಚ್ಚಿನ ಬಾಂಧವ್ಯವಿರುವದೆಂದೂ, ಆದ್ದರಿಂದ ಅಲ್ಲಿಯ ಚಳವಳದಲ್ಲಿ ತನ್ನ ಪಾಲಿನ ಕರ್ತವ್ಯ ಮಾಡುವದು ಹಿತವೆಂದೂ ಗಾಂಧೀಜಿಯವರೆಂದಿರುವರು. ಅವರು ಟಾಕೋರ ಸಾಹೇಬರಿಗೆ ಈ ಕೆಳಗಿನ ಸೂಚನೆಗಳನ್ನು ಅಂಗೀಕರಿಸಿ ಜನಹಿತವನ್ನು ಬಯಸಬೇಕೆಂದು ಪತ್ರ ಬರೆದರು.

ಬೇಡಿಕೆಗಳು.

1. ಡಿಸೆಂಬರ್ 26 ನೇ ತಾರೀಕಿನಲ್ಲಿ ನೀವು ಪ್ರಕಟಿಸಿದ ಜಾಹೀರಾತಿನ ಶರತುಗಳನ್ನು ಪಾಲಿಸುವೆನೆಂದು ಸಾರ್ವಜನಿಕರಿಗೆ ತಿಳಿಸಬೇಕು.

2. ಜನವರಿ 21 ನೇ ತಾರೀಕಿನ ನಿಮ್ಮ ಪ್ರಕಟಣೆಯನ್ನು ರದ್ದು ಮಾಡಬೇಕು.

3. ಪರಿಷತ್ತಿನ ಪಕ್ಷಕ್ಕೆ ಬಹುಮತವಿರುವಂತೆ ಪ್ರಜಾಮಂಡಲದ ಕೆಲವು ಮುಖಂಡರನ್ನು ಸುಧಾರಣಾ ಕಮಿಟಿಯಲ್ಲಿ ಸೇರಿಸಬೇಕು.

4. ಈ ಸುಧಾರಣಾ ಕಮಿಟಿಯ ಅಧ್ಯಕ್ಷರನ್ನಾಗಿ ಶ್ರೀ ಎಸ್. ಎಸ್. ಥೇಬರರನ್ನು ನೇಮಿಸಬೇಕು.

5. ಸುಧಾರಣಾ ಕಮಿಟಿಯ ಮಾರ್ಗದರ್ಶಕರಾಗಿ ಮೂರು ಜನ ಅಧಿಕಾರಿಗಳನ್ನು ನೇಮಿಸಬೇಕು. ಅವರು ನನ್ನ ಮಾನ್ಯತೆ ಪಡೆಯುವವರಾಗಬೇಕು. ಕಮಿಟಿಯ ಕಾರ್ಯಕಲಾಪದಲ್ಲಿ ಅವರಿಗೆ ಮತಕೊಡುವ ಅಧಿಕಾರವಿರಕೂಡದು. ಸಂಸ್ಥಾನದ ಬೇರೆ ಬೇರೆ ಖಾತೆಯ ಅಧಿಕಾರಿಗಳಿಗೆ ಕಮಿಟಿಗೆ ಅವಶ್ಯವಾದ ಕಾಗದ ಪತ್ರಗಳನ್ನೂ, ಅಂಕೆ ಸಂಖ್ಯೆಗಳನ್ನೂ, ಇತರ ಸಾಧನ ಸಾಮಗ್ರಿಗಳನ್ನೂ ಒದಗಿ ಕೊಡಲು ನೀವು ಸಲಹೆ ಕೊಡಬೇಕು.

ಮಹಾತ್ಮರ ಹಾಗೂ ಟಾಕೂರ ಸಾಹೇಬರ ಪತ್ರವ್ಯವಹಾರ.

ಗಾಂಧೀಜೀಯವರ ಉಪವಾಸ—ಉಪವಾಸದ ಪ್ರತಿಧ್ವನಿ.

ಮಂತ್ರಿ ಮಂಡಳಿಗಳ ರಾಜೀನಾಮೆಯ ಕುರುಹು.

ನೈಸರಾಯರ ವರ್ತನೆ.

6. ಈ ಕಮಿಟಿಯು 7 ನೇ ತಾರೀಕಿನಿಂದ ಕಾರ್ಯಾರಂಭ ಮಾಡಿ 22 ನೇ ತಾರೀಕಿಗೆ ಮುಗಿಸತಕ್ಕದ್ದು. ಕಮಿಟಿಯವರ ಸೂಚನೆಗಳ ಸಂಬಂಧದಲ್ಲಿ ನಿಮ್ಮ ನಿರ್ಣಯವು ಆ ಸೂಚನೆಗಳು ನಿಮ್ಮ ಕೈಸೇರಿದ 7 ದಿನಗಳಲ್ಲಿ ಹೊರ ಬೀಳಬೇಕು.

7. ಸತ್ಯಾಗ್ರಹಿ ಕೈದಿಗಳನ್ನು ನಾಳಿನ ದಿನವೇ (ತಾ. 4) ಬಿಡುಗಡೆ ಮಾಡಬೇಕು ದಂಡದ ವಸೂಲಿ ಹಾಗೂ ಜಪ್ತಿ ಹುಕುಮುಗಳನ್ನು ನಿಲ್ಲಿಸಬೇಕು. ವಸುಲಾದ ದಂಡ ಮತ್ತು ಜಪ್ತಾದ ಭೂಮಿ ತಿರುಗಿ ಕೊಡಲ್ಪಡಬೇಕು.

ನಾನು ರೆಸಿಡೆಂಟರಾದ ಗಿಬ್ಸನರೊಡನೆ ಮಾತಾಡಿರುವೆನು. ಅವರು ನೀವು ಈ ಮೊದಲು ಮಾಡಿದ ಸಂಧಾನದಂತೆ ನೀವು ನಡೆಯುವದರಲ್ಲಿ ವಿರೋಧ ಬರಲಿಕ್ಕಿಲ್ಲವೆಂದು ಸೂಚಿಸಿರುವರು. ಶುಕ್ರವಾರ (ತಾ. 3.) ಮಧ್ಯಾಹ್ನದೊಳಗೆ ನನ್ನ ಮೇಲಿನ ಸೂಚನೆಗಳನ್ನು ಮಾನ್ಯ ಮಾಡದಿದ್ದರೆ ಅವು ಮಾನ್ಯ ಮಾಡಲ್ಪಡುವ ವರೆಗೆ ನಾನು ಉಪವಾಸವ್ರತ ಕೈಕೊಳ್ಳುವೆನು. ನನ್ನ ಈ ಮೇಲಿನ ಮಾತುಗಳು ನಿಮಗೆ ಬಿರುಸಾಗಿ ಕಾಣಬಹುದು. ಆದರೆ ಹಾಗೆ ಹೇಳಲು ನನಗೆ ಹಕ್ಕಿದೆ. ನಿಮ್ಮ ಅಜ್ಜಂದಿರ ಅಧಿಕಾರ ಸಮಯಲ್ಲಿ ನನ್ನ ತಂದೆಯು ನೌಕರಿಯಲ್ಲಿದ್ದನು. ನಿಮ್ಮ ತಂದೆಯವರು ನನ್ನನ್ನು ತಂದೆಯನ್ನಾಗಿ ಭಾವಿಸಿದ್ದರು. ಒಂದು ಸಾರ್ವಜನಿಕ ಸಭೆಯಲ್ಲಿ ನನ್ನನ್ನು ಅವರು ಗುರುವೆಂದು ಸಂಬೋಧಿಸಿದ್ದುಂಟು. ಆದರೆ ಈ ವರೆಗೆ ನಾನು ಯಾರಿಗೂ ಗುರು ಆಗಿರುವದಿಲ್ಲ. ಆದ್ದರಿಂದ ಅವರನ್ನು ನನ್ನ ಶಿಷ್ಯನನ್ನಾಗಿ ಅಂಗೀಕರಿಸಿಲ್ಲ. ಆದ್ದರಿಂದ ಇಂದು ನೀವು ನನಗೆ ಮಗನೋಪಾದಿಯಲ್ಲಿರುವಿರಿ. ನೀವು ನನ್ನನ್ನು ತಂದೆಯೋಪಾದಿಯಲ್ಲಿ ಭಾವಿಸಿದ್ದೇ ಆದರೆ ಆರಕ್ಷಣದಲ್ಲಿಯೇ ಸ್ವಸಂತೋಷದಿಂದ ನನ್ನ ಸೂಚನೆಗಳನ್ನು ಮಾನ್ಯಮಾಡಿ, ಪ್ರಜೆಗಳ ಹಿತವನ್ನು ಸಾಧಿಸುವಿರಿ. ನನ್ನನ್ನು ನಿಮ್ಮ ಹಾಗೂ ಸಂಸ್ಥಾನದ ವೈರಿಯೆಂದು ಭಾವಿಸಕೂಡದು. ನಾನು ಯಾರ ವೈರಿಯೂ ಆಗಿಲ್ಲ. ಆಗಲು ಶಕ್ಯವೂ ಇಲ್ಲ. ನನ್ನ ಸೂಚನೆಗಳನ್ನು ಮಾನ್ಯ ಮಾಡುವದರಿಂದ ನಿಮ್ಮ ಕರ್ತವ್ಯ, ನಿಮ್ಮ ಪ್ರತಿಷ್ಠೆ, ನಿಮ್ಮ ಹಿತವು ಕೈಗೂಡುವದು.

ರಾಜರು ಹಾಗೂ ಪ್ರಜೆಗಳು ಉಭಯತ್ರರ ಸಂರಕ್ಷಣೆಗಾಗಿಯೇ ಇರುವದು. ಸುಧಾರಣಾ ಕಮಿಟಿಯ ವರದಿಯು ಬರುವ ವರೆಗೆ ನಾನು ಜೀವಂತವಿದ್ದರೆ ನಾನು ಅದನ್ನು ಪರಿಶೀಲಿಸುವೆನು. ಇಲ್ಲವೇ ಶ್ರೀ ಪಟೇಲರು ಹಾಗೆ ಮಾಡುವರು. ನಿಮಗಾಗಲೀ, ಸಂಸ್ಥಾನಕ್ಕಾಗಲಿ ಅದರಿಂದ ಧಕ್ಕೆ ತಗಲದಂತೆ ನೋಡಿಕೊಳ್ಳಲಾಗುವದು. ದೇವರು ನಿಮಗೆ ಆಶೀರ್ವಾದ ಮಾಡಲೀ ಮತ್ತು ಸರಿಯಾದ ಮಾರ್ಗ ತೋರಿಸಲೀ ಎಂದು ಆಶೀರ್ವದಿಸುತ್ತೇನೆ.'

ಟಾಕೋರ್ ಸಾಹೇಬರ ಉತ್ತರ.

'ನನ್ನ ಪ್ರಿಯ ಮಹಾತ್ಮಾ ಗಾಂಧಿಜೀಯವರೇ, ನಿಮ್ಮ ಪತ್ರವು ತಲಪಿತು. ಅದರ ಒಕ್ಕಣೆಯನ್ನು ನೋಡಿ ಅತ್ಯಂತ ವಿಷಾದ ಪಡುತ್ತೇನೆ. ಮೊದಲೇ ನಿಮಗೆ ಹೇಳಿದಂತೆ ಡಿಸೆಂಬರಿನ ಜಾಹೀರನಾಮೆಯು ಖಾಯಂ ಆಗಿರುವದು. ಜನರ ಸಂಬಂಧದಲ್ಲಿ ನೀವು ಮಾಡಿದ ಸೂಚನೆಯು ಈ ಮೊದಲಿನ ಹುಕುಮಿನ ಕರಾರಿಗೆ ಅನ್ವಯಿಸುವದಲ್ಲವಾದ್ದರಿಂದ ಅವುಗಳನ್ನು ಮಾನ್ಯ ಮಾಡುವದು ನನಗೆ ನ್ಯಾಯವಾಗಿ ಕಂಡು ಬರುವದಿಲ್ಲ. ನನ್ನ ಸಂಸ್ಥಾನದ ಹಾಗೂ ಪ್ರಜೆಗಳ ಹಿತವನ್ನು ಕಾಯ್ದುಕೊಳ್ಳಬೇಕಿದ್ದರೆ ನಾನು ನನ್ನ ಮೇಲಿನ ಜವಾಬ್ದಾರಿಯಂತೆ ನಡೆಯಬೇಕಾಗುವದು. ಇಂಥಾ ಮಹತ್ವದ ವಿಚಾರವನ್ನು ಎರಡನೆಯವರಿಗೆ ಒಪ್ಪಿಸಲು ನನಗೆ ಸಾಧ್ಯವಿಲ್ಲ. ಕಮಿಟಿಯು ತನ್ನ ಕಾರ್ಯವನ್ನು ಶಾಂತವಾತಾರಣದಲ್ಲಿ ಆದಷ್ಟು ಬೇಗನೆ ಪ್ರಾರಂಭ ಮಾಡಬೇಕೆಂದೂ, ಅವಶ್ಯಕವಾದ ಸುಧಾರಣೆಗಳನ್ನು ಜಾರಿಯಲ್ಲಿ ತರಲು ವಿಳಂಬವಾಗಬಾರದೆಂದು ನಾನು ಈ ಮೊದಲು ಆಶ್ವಾಸನ ಕೊಟ್ಟ ಮೇರೆ ನಂಬಿರುವೆನು.'

ಮಹಾತ್ಮರ ಉಪವಾಸ.

ಟಾಕೂರ ಸಾಹೇಬರಿಂದ ಸಮಾಧಾನಕಾರಕವಾದ ಉತ್ತರವು ಬರದ್ದರಿಂದ ಪೂಜ್ಯ ಗಾಂಧೀಜಿಯವರು ತಾರೀಕು [illegible]ರ ಮಧ್ಯಾಹ್ನದ ಮೇಲೆ ಉಪವಾಸ ಕೈಕೊಂಡರು. ಅವರು ಈ [illegible] ಪ್ರಕಟಣೆಯನ್ನು [illegible] ಜನತೆಯನ್ನು ಎಚ್ಚರಿಸಿರುವರು.

'ನೀನಕ್ಕೆ ಎಷ್ಟೋ ಸಲವಾನು ಉಪವಾಸ ಕೈಕೊಂಡಿರುವೆನು. ಇದಾದರೂ ಅದರಂತೆಯೇ ಇರುವದು. ನನ್ನ ಹಿತಚಿಂತಕರು ಹಾಗೂ ಸ್ನೇಹಿತರು ಇದರಿಂದ ಅಸಮಾಧಾನಗೊಳ್ಳಕೂಡದೆಂದೂ, ಒಂದೇ ಒಂದು ದಿನವಾದರೂ ಅವರು ಉಪವಾಸ ಕೈಕೊಳ್ಳಬಾರದೆಂದೂ ಕೇಳಿಕೊಳ್ಳುತ್ತೇನೆ. ಸತ್ಯಾಗ್ರಹದಂತೆ ಉಪವಾಸದ ದುರುಪಯೋಗವಾದರೂ ನಡೆದಿದೆ. ಕ್ಷುಲ್ಲಕ ಕಾರಣಗಳಿಗಾಗಿ ಉಪವಾಸ ಮಾಡುವದೂ ಕಂಡು ಬರುತ್ತಿದೆ. ಜನರು ಅವಿಚಾರಿಗಳಾಗಿ ನನ್ನನ್ನು ಹಿಂಬಾಲಿಸಬಾರದು. ಉಪವಾಸವು ಜಾಜ್ವಲ್ಯವಾದ ಔಷಧದೋಪಾದಿಯಲ್ಲಿರುವದು. ಅದನ್ನು ಕ್ವಚಿತ್ತಾಗಿಯೇ ಅವಲಂಬಿಸಬೇಕಾಗುತ್ತದೆ. ಅದಕ್ಕೆ ತಜ್ಞರ ಬುದ್ಧಿವಾದ ಬೇಕು. ಪ್ರತಿಯೊಬ್ಬರೂ ತಜ್ಞರೆಂದು ತಿಳಿದುಕೊಳ್ಳುವದು ತಪ್ಪು ಮತ್ತು ಪಾಪವಾಗಿದೆ. ಈ ವರೆಗೆ ನಾನು ಕೈಕೊಂಡ ಉಪವಾಸಗಳು ನಿರರ್ಥಕವಾಗಿಲ್ಲ. ನನಗೆ ಅವರಿಂದ ಅಮೂಲ್ಯವಾದ ಶಾಂತಿ ಮತ್ತು ಅಮಿತವಾದ ಆನಂದವೇ ಲಭಿಸಿದೆ. ಸತ್ಯಾಗ್ರಹವಾಗಲೀ, ಉಪವಾಸವಾಗಲೀ ಒಂದು ವಿಧದ ತ್ಯಾಗವೇ ಆಗಿದೆ. ನಾನು ಉಪವಾಸ ಕೈಕೊಂಡಿರುವೆನು. ನನ್ನ ಇಷ್ಟಾರ್ಥ ಪ್ರಾಪ್ತಿಸಲು ಯಾರೂ ದುಡುಕತಕ್ಕದ್ದಲ್ಲ. ಉಪವಾಸವನ್ನು ಕೈಕೊಳ್ಳಲು ಪ್ರೇರಣೆ ಮಾಡಿದವನು ಅವರಿಂದ ಪಾರಾಗಲು ನನಗೆ ಶಕ್ತಿಯನ್ನು ಕೊಡುವನು. ನಾನು ಕೈಕೊಂಡ ಮಾನವ ವರ್ಗದ ಸೇವೆಯನ್ನು ಮಾಡಲು ಇನ್ನೂ ಬದುಕಬೇಕೆಂದು ಅವನ ಇಚ್ಛೆಯಿದ್ದರೆ ಉಪವಾಸವು ಎಷ್ಟೇ ದೀರ್ಘವಿದ್ದರೂ ಅದರಿಂದ ನನ್ನ ಪ್ರಾಣನಾಶವಾಗದು. ನನ್ನ ಉಪವಾಸ ಮತ್ತು ನಾನು ಟಾಕೋರ್‌ಸಾಹೇಬರಿಗೆ ಬರೆದ ಪತ್ರ ಇದರಲ್ಲಿ ನನ್ನ ತಪ್ಪಿರುವ ಪಕ್ಷ ಜನತೆಯು ಘಂಟಾಘೋಷವಾಗಿ ಉಪವಾಸವನ್ನೂ, ನನ್ನ ಭಾವನೆಯನ್ನು ನಿಶೇಧಿಸಬೇಕು.'

ದರಬಾರದ ಪ್ರಕಟಣೆ.

ಮಹಾತ್ಮರ ಉಪವಾಸವನ್ನು ಕೈಕೊಂಡನಂತರ ದರ್ಬಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ, ಗಾಂಧೀಯವರು ಸಂಸ್ಥಾನಕ್ಕೆ ಬಂದದ್ದು ಚಳವಳಿಗಾರರು ಅಧಿಕಾರಿಗಳ ಮೇಲೆ ಮಾಡಿದ ಸತ್ಯಾಸತ್ಯತೆಗಳ ಪರಿಶೀಲನೆಗೆಂದೂ, ಇದು ಬಿಟ್ಟು ಗಾಂಧಿಜೀಯವರು ಅಸಾಧ್ಯವಾದ ಬೇಡಿಕೆಗಳನ್ನು ಮುಂದ ಮಾಡಿ ಉಪವಾಸ ಕೈಕೊಂಡು ದರ್ಬಾರದ ಮೇಲೆ ಒತ್ತಾಯಪಡಿಸುತ್ತಿರುವದು ಸಮಂಜಸವಲ್ಲವೆಂದೂ, ನಿಷ್ಕಾರಣವಾಗಿ ಗಾಂಧೀಜೀಯವರು ಉಪವಾಸವನ್ನು ಕೈಕೊಂಡಿರುವ ಪ್ರಯುಕ್ತ [illegible] ಪರಿಸ್ಥಿತಿ [illegible] ಕಾರಣರಲ್ಲವೆಂದೂ ಟಾಕೂರ ಸಾಹೇಬರು [illegible] ಹೇಳಿಕೆ [illegible] ಆದವರೆಂದೂ, ಅವರು ಯೋಗ್ಯವಾದ ಸುಧಾರಣೆಗಳನ್ನು ತನ್ನ ಪ್ರಜೆಗಳಿಗೆ ಕೊಡಲು ತಯಾರಿರುವರೆಂದೂ ಈ ವಿಚಾರವನ್ನು ಮೊದಲಿಂದಲೇ ಅವರು ವ್ಯಕ್ತ ಮಾಡುತ್ತಾ ಬಂದಿರುವರೆಂದೂ, ಗಾಂಧಿಜಿಯವರು ಶಾಂತಿ ಮೌನ ವೇಷ ಹಾಕಿಕೊಂಡು, ಈಗ ಇಲ್ಲಿ ಅಸಾಧ್ಯವಾದ ಬೇಡಿಕೆಗಳನ್ನು ಮುಂದಿಟ್ಟು ಭಯಂಕರವಾದ ತೊಡಕನ್ನು ಮುಂದಿಟ್ಟರವರೆಂದೂ ಪ್ರಕಟಿಸಿದ್ದರು.

ಗಾಂಧಿಯವರ ಉತ್ತರ.

ಗಾಂಧಿಜೀಯವರು ದರ್ಬಾರರವ ಪ್ರಕಟಣೆಯನ್ನು ಟೀಕಿಸುತ್ತಾ, ತನ್ನ ಮೇಲೆ ವಿಶ್ವಾಸ ಭಂಗದ ಆರೋಪ ಹೊರಿಸಿದ್ದು ಅತೀ ನಿರ್ದಯೋತ್ಪಕವಾಗಿದೆಯೆಂದೂ, ತನ್ನ ಉಪವಾಸವು ತಾವು ಕೈಕೊಂಡ ಕಾರ್ಯದ ಒಂದು ಅಂಗವಾಗಿದೆಯೆಂದೂ ನನ್ನ ಉಪವಾಸದ ಕೊನೆಯು ಹೇಗೇ ಪರಿಣಮಿಸಲಿ, ಶಾಂತಿ ನೆಲೆಗೊಳ್ಳುವದು ಮಾತ್ರ ಖಂಡಿತವೆಂದೂ ಹೇಳಿದರು. ಅವರು ಉಪವಾಸದ ದೆಸೆಯಿಂದ ಪತ್ರವ್ಯವಹಾರ ಕಮ್ಮಿ ಮಾಡಿರುವರು. ಅವರು ನಿರ್ಬಲರಾಗಿದ್ದರೂ, ಶಾಂತ ಚಿತ್ತರೂ, ಹರ್ಷಯುಕ್ತರೂ ಆಗಿರುವರು. ಉಪವಾಸ ಕೈಕೊಂಡಂದಿನಿಂದ ಅವರ ಭಾರವು ಆರು ಪೌಂಡುಗಳಷ್ಟು ಕಮ್ಮಿಯಾಗಿದೆ. ಅವರ ದೇಹದ ರಕ್ತ ಒತ್ತಡವು ಹೆಚ್ಚಿದೆ. ಅವರ ಸ್ಥಿತಿಯು ದಿನೇ ದಿನೇ ಕೃಶವಾಗುತ್ತಿದೆ. ಮೊದಲಿನ ಉಪವಾಸಗಳಂತೆ ಈ ಸಾರಿ ಅವರು ಹೆಚ್ಚು ದಿನ ಕೈಕೊಳ್ಳಲಾರರೆಂದು ಡಾಕ್ಟರರ ಅಭಿಪ್ರಾಯ.

ಉಪವಾಸದ ಪ್ರತಿಧ್ವನಿ

ಪೂಜ್ಯ ಗಾಂಧಿಜಿಯವರು ಉಪವಾಸವನ್ನು ಕೈಗೊಂಡದ್ದರಿಂದ ಇಡೀ ಭಾರತದ ಯಾಕೆ? ಇಡೀ ವಿಶ್ವದ ದೃಷ್ಟಿಯು ರಾಜಕೋಟೆಯತ್ತ ತಿರುಗಿದೆ. ಅವರಿಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ, ಶುಭಾಶಯವನ್ನು ಬಯಸಿ ತಂತಿಯ ಸುರಿ ಮಳೆಯೇ ಬರುತ್ತಿದೆ. ಭಾರತದ ಹಾಗೂ ಇಡೀ ಮಾನವ ಜನಾಂಗದ ಏಳ್ಗೆಗೆ ಕಾರಣ ಪುರುಷನೆಂದೆನಿಸಿಕೊಂಡಿರುವ ಮಹಾವ್ಯಕ್ತಿಯಾದ ಗಾಂಧಿಜೀಯವರ ಇಂದಿನ ಕಾರ್ಯಕ್ರಮದ ಜಯವನ್ನು ಬಯಸಿ ಆಫ್ರಿಕಾ, ಕೊಲೊಂಬೊ, ಮೊದಲಾದ ಹೊರಗಿನ ಪ್ರಾಂತಗಳ ಕಾಂಗ್ರೆಸ್ ಕಮಿಟಿಗಳು ಸಹ ತಂತಿ ಮಾಡಿವೆ. ಮಹಾತ್ಮರ ಪತ್ನಿ ಕಸ್ತೂರಿಬಾಯಿ ಗಾಂಧಿಯವರು ಇವರ ಉಪವಾಸದ ಬಗ್ಗೆ, 'ಪರಮಾತ್ಮನು ಅವರ ಹಿಂದಿನ ಉಪವಾಸಗಳಲ್ಲಿ ರಕ್ಷಿಸಿದ್ದಾನೆ. ಈ ಬಾರಿಯೂ ಅವನು ಅವರ ತಪಸ್ಯದಲ್ಲಿ ಸಹಾಯ ಮಾಡುವನೆಂದು ದೃಢವಾಗಿ ನಂಬಿದ್ದೇನೆ.' ಎಂದು ಹೇಳಿರುವರು. ಉಪವಾಸದ ಪ್ರತಿಧ್ವನಿಯು ಇಡೀ ಜಗತ್ತಿನಲ್ಲಿ ಮೊಳಗುತ್ತಿದೆ. ಭಾರತದ ಪ್ರತಿಯೊಂದು ಕಾಂಗ್ರೆಸ್ ಕಮಿಟಿ ಹಾಗೂ ಅಖಂಡ ವ್ಯಕ್ತಿಗಳು ಮಹಾತ್ಮರ ವರ್ತನೆಯನ್ನು ಎವೆಯಿಕ್ಕದೆ ನೋಡುತ್ತಿದ್ದಾರೆ.

ಕಾಂಗ್ರೆಸ್ ಮಂತ್ರಿಮಂಡಳಗಳ ರಾಜಿನಾಮೆ?

ಕಾಂಗ್ರೆಸ್ ಅಧಿಕಾರ ವಹಿಸಿ 25 ತಿಂಗಳುಗಳಾಯಿತು. ಇಂದು ಮಹಾತ್ಮ ಗಾಂಧಿಯವರ ಉಪವಾಸದಿಂದಾಗಿ ಅವರು ತಮ್ಮ ಅಧಿಕಾರ ಸೂತ್ರಗಳನ್ನು ತ್ಯಜಿಸಿ ರಾಜಿನಾಮೆ ಕೊಡುವ ನಿರ್ಧಾರಕ್ಕೆ ಬಂದಿರುವರು. ಮದ್ರಾಸು, ಬೊಂಬಾಯಿ, ಒರಿಸಾ, ಬಿಹಾರ್, ಮಧ್ಯಪ್ರಾಂತ್ಯ, ಸಂಜಾಬ್, ಅಸ್ಸಾಂ, ಮಂತ್ರಿಮಂಡಳಗಳು ಆಯಾಯ ಗವರ್ನರುಗಳ ಮೂಲಕ ರಾಜಕೋಟೆಯ ವಿಚಾರ ಒಡನೆ ವೈಸರಾಯರು ತಕ್ಕ ವ್ಯವಸ್ಥೆ ನಡೆಸಬೇಕೆಂದೂ, ಇಲ್ಲವೇ ದೇಶದಲ್ಲೆಲ್ಲಾ ಭಯಂಕರ ಕ್ಷೋಭೆ ಉಂಟಾಗುವುದರಲ್ಲಿ ಸಂದೇಹವಿಲ್ಲವೆಂದೂ, ತಿಳಿಸಿರುವರು. ಬೊಂಬಾಯಿ ಪ್ರಾಂತದ ಮಂತ್ರಿಮಂಡಲವು, ಬರೀ 48 ತಾಸುಗಳೊಳಗೆ ಸಾರ್ವಭೌಮ ಸರ್ಕಾರವು ಈ ವಿಚಾರ ಶಾಂತರೀತಿಯಿಂದ ಒಪ್ಪಂದ ಮಾಡಿ, ಗಾಂಧಿಯವರ ಉಪವಾಸವ್ರತವನ್ನು ನಿಲ್ಲಿಸಿ ದೇಶಕ್ಕೆ ಹಾಗೂ ವಿಶ್ವಕ್ಕೆ ಸಹಾಯ ಮಾಡದಿದ್ದ ಪಕ್ಷ ತಾವು ರಾಜಿನಾಮೆಯನ್ನೀಯುವುದು ಖಂಡಿತವೆಂದು ನಿರ್ಧರಿಸಿರುವರು. ಹಾಗೆಯೇ ಮಧ್ಯ ಪ್ರಾಂತ್ಯ ಮಂತ್ರಿಮಂಡಳವೂ ನಿರ್ಧರಿಸಿರುವದು. ಬಾಕಿ ಉಳಿದ ಮಂತ್ರಿಮಂಡಳಗಳೂ ತಮ್ಮ ಅಧಿಕಾರ ಸೂತ್ರಗಳನ್ನು ಕಿತ್ತೊಗೆಯಲು ತಯಾರಿವೆ. ಕಳೆದ ಹರಿಪುರ ಅಧಿವೇಶನಕ್ಕೆ ಮೊದಲು ಸಂಯುಕ್ತ ಪ್ರಾಂತದ ಕಾಂಗ್ರೆಸ್ ಮಂತ್ರಿ ಮಂಡಳವು ತನ್ನ ಜವಾಬ್ದಾರಿಕೆಗೆ ರಾಜಿನಾಮೆಯಿತ್ತು ಹೋಗಿತ್ತು. ಇಂದೂ ಸಹ ತ್ರಿಪುರಿ ಅಧಿವೇಶನಕ್ಕೆ ಹೊರಡುವ ಮೊದಲು ಅಂದರೆ ತಾ. 6 ರೊಳಗೆ ಒಂದು ಶಾಂತ ತೀರ್ಮಾನವು ಬಾರದಿದ್ದರೆ ತಾವು ರಾಜಿನಾಮೆಯಿತ್ತು ತ್ರಿಪುರಕ್ಕೆ ಹೋಗುವದಾಗಿ ಸಂಯುಕ್ತ ಪ್ರಾಂತ ಮಂತ್ರಿಮಂಡಳವು ತೀರ್ಮಾನಿಸಿದೆ.

ವೈಸರಾಯರ ವರ್ತನೆ.

ವೈಸರಾಯರು ರಜಪುತಾನದಲ್ಲಿ ದೀರ್ಘವಾದದೊಂದು ಪ್ರವಾಸವನ್ನು ಕೈಗೊಂಡಿದ್ದರು. ಆದರೆ ಗಾಂಧಿಯವರ ಉಪವಾಸದಿಂದಾಗಿ ದೇಶದಲ್ಲಾದ ಅಲ್ಲೋಲ ಕಲ್ಲೋಲ, ಪ್ರತಿ ಗವರ್ನರರ ಮುಖಾಂತರ ಹಾಗೂ ವೈಯಕ್ತಿಕವಾಗಿ ತನಗೆ ಬಂದ ತಂತಿಗಳ ಪರಿಣಾಮದಿಂದ ಈ ವಿಚಾರವನ್ನು ವಿವೇಚಿಸಲು ತಮ್ಮ ಪ್ರವಾಸವನ್ನು ಬಾಕಿ ಮಾಡಿ ದೆಲ್ಲಿಗೆ ಬಂದಿರುವರು. ಈ ಮಧ್ಯೆ ಮಹಾತ್ಮರ ಉಪವಾಸದಿಂದ ರಾಜಕೋಟೆಯಲ್ಲಾದ ಬಿಕ್ಕಟ್ಟಿನವಸ್ಥೆಯ ವಿಚಾರ, ವೈಸರಾಯ ಹಾಗೂ ಬ್ರಿಟಿಷ್ ಸಾರ್ವಭೌಮ ಸರ್ಕಾರ (ಇಂಗ್ಲೆಂಡ್) ದೊಡನೆ ತಂತಿ ವ್ಯವಹಾರಗಳು ನಡೆದಿವೆ. ಭುಲಾಭಾಯಿ ದೇಸಾಯಿಯವರನ್ನು ವೈಸರಾಯರು ಕಂಡು ಈ ವಿಚಾರ ತರ್ಕಿಸಿರುವರು. ಒಡನೆಯೇ ವೈಸರಾಯರು ಒಂದು ಪ್ರಕಟಣೆಯನ್ನು ಹೊರಡಿಸಿ ರಾಜಕೋಟೆಯ ಬಿಕ್ಕಟ್ಟನ್ನು ಪರಿಹರಿಸಿ ಇಂಡಿಯಾ ಸರ್ಕಾರ ಹಾಗೂ ಸಾರ್ವಭೌಮ ಸರ್ಕಾರದ ಸ್ಥಿತಿಯನ್ನು ಉತ್ತಮಗೊಳಿಸುವರೆಂದು ನಂಬಲಾಗಿದೆ.

ತ್ರಿಪುರಿ ಅಧಿವೇಶನ.

ತ್ರಿಪುರಿ ಅಧಿವೇಶನವು ಈ ತಾರೀಕು 11, 12 ಮತ್ತು 13ರಲ್ಲಿ ಸೇರುವುದಷ್ಟೆ. ಅದಕ್ಕಾಗಿ ಭಾರತದ ಪ್ರತಿ ಭಾಗಗಳಿಂದಲೂ ಡೆಲಿಗೇಟರುಗಳೂ, ಪ್ರೇಕ್ಷಕರೂ ತಂಡ ತಂಡವಾಗಿ ಬರುತ್ತಿರುವರು. ಕಾಂಗ್ರೆಸ್ಸಿನ ಅಧ್ಯಕ್ಷರಾದ ಸುಭಾಷ ಬಾಬುಗಳು ತಾರೀಕು 6ರಲ್ಲಿ ತ್ರಿಪುರಿಗೆ ತಲಪಿರುವರು. ಪ್ರಯಾಣದ ಆಲಸ್ಯದಿಂದ ಅವರಿಗೆ 103 ಡಿಗ್ರಿಗಳ ಜ್ವರ ಬಂದಿತ್ತು. ಈಗ ಅವರು ಗುಣಮುಖರಾಗುತ್ತಿರುವರು.

ಜವಾಹರಲಾಲ್ ನೆಹರೂ ಮತ್ತು ಅವರ ತಂಗಿ ವಿಜಯಲಕ್ಷ್ಮಿ ಪಂಡಿತರೂ ಬಂದಿರುವರು. ಇವರಲ್ಲದೆ ಅನೇಕ ಕಾಂಗ್ರೆಸ್ ಮುಖಂಡರೂ, ಮಂತ್ರಿಗಳೂ ಬಂದು ಸೇರಿರುವರು. ಮಹಾತ್ಮ ಗಾಂಧಿಯವರಿಂದ ತೆರೆಯಲ್ಪಡಬೇಕೆಂದಿದ್ದ ಪ್ರದರ್ಶನವು ತಾರೀಕು 6ರಲ್ಲಿ ಪಂಡಿತ ಜವಾಹರ್‌ಲಾಲ್ ನೆಹರೂರವರಿಂದ ತೆರೆಯಲ್ಪಟ್ಟಿತು. ಅವರ ಭಾಷಣದ ಸಾರಾಂಶವನ್ನು ಇನ್ನೊಂದಡೆ ಕೊಡಲಾಗಿದೆ. ತ್ರಿಪುರಿಯಲ್ಲೆಲ್ಲಾ ಅಧ್ಯಕ್ಷರ ಚುನಾವಣೆಯಿಂದಾದ ಬಿಕ್ಕಟ್ಟು ಹಾಗೂ ರಾಜಕೋಟೆಯಲ್ಲಿ ಮಹಾತ್ಮರ ಉಪವಾಸದಿಂದಾದ ಕೋಲಾಹಲದ ವಿಚಾರವೇ ಚರ್ಚಿಸಲ್ಪಡುತ್ತಿವೆ. ಮಹಾತ್ಮರ ಉಪವಾಸವು ಕೊನೆಗೊಂಡದ್ದರಿಂದ ಎಲ್ಲರೂ ಹಸನ್ಮುಖರಾಗಿದ್ದಾರೆ. ಈ ಸಂತೋಷ ಸುದ್ದಿಯನ್ನು ಜವಾಹಿರ್‌ಲಾಲರು ಅಲ್ಲಿ ಘೋಷಿಸುವಾಗ 'ಮಹಾತ್ಮ ಗಾಂಧಿಕೀ ಜೈ' ಎಂಬ ಜಯಘೋಷಣೆಯಿಂದ ಆ ಆವರಣವು ತುಂಬಿ ಮೊರೆಯುತ್ತಿತ್ತಂತೆ. ಇನ್ನೂ ಡೆಲಿಗೇಟರುಗಳೂ ಪ್ರೇಕ್ಷಕರೂ ಬರುತ್ತಲಿದ್ದಾರೆ.

ಠರಾವುಗಳು.

ಈ ವರೆಗೆ 68 ಠರಾವುಗಳು ಬಂದಿವೆ. ವಿಷಯನಿಯಾಮಕ ಸಮಿತಿಯು ಈ ಠರಾವುಗಳನ್ನು ಚರ್ಚಿಸಲಿದೆ. ಇವುಗಳಲ್ಲಿ ಪ್ರಾಮುಖ್ಯವಾದ ಠರಾವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಗಾಂಧೀಜಿಯವರಲ್ಲಿ ಭರವಸೆ.

ಈ ಠರಾವು ಜಿ. ಡಿ. ವರ್ತಕರವರಿಂದ ತರಲ್ಪಟ್ಟಿದೆ. 'ಈ ವರೆಗೆ ಕಾಂಗ್ರೆಸು ಅನುಸರಿಸಿಕೊಂಡು ಬಂದಿರುವ ಮಹಾತ್ಮ ಗಾಂಧಿಜೀಯವರ ತತ್ವ ಹಾಗೂ ಕಾರ್ಯಕ್ರಮಗಳ ಮೇಲಿರುವ ಭರವಸೆಯನ್ನು ಈ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಪುಷ್ಟೀಕರಿಸುತ್ತದೆ' ಅಲ್ಲದೆ "ಮುಂದಿನ ಕಾಂಗ್ರೆಸಿನ ಕಾರ್ಯಕ್ರಮ ಹಾಗೂ ಸೂತ್ರವನ್ನು ಮಹಾತ್ಮರ ಕೈಯಲ್ಲಿ ಕೊಡಬೇಕೆಂಬರ್ಥದ ಒಂದು ಸೂಚನೆಯೂ ಇರುವದು.

ರಾಷ್ಟ್ರಪತಿಗಳಲ್ಲಿ ಅವಿಶ್ವಾಸ.

ರಾಷ್ಟ್ರಪತಿ ಸುಭಾಷಚಂದ್ರ ಬೋಸರ ಮೇಲೆ ಅವಿಶ್ವಾಸವನ್ನು ಸೂಚಿಸಿ ಒಂದು ಠರಾವು ಶ್ರೀ ಶಂಭು ದಯಾಳು ಮಿಶ್ರರವರ ಹೆಸರಿನಲ್ಲಿದೆ. ಈ ಠರಾವಿನ ವಿಚಾರ ಚರ್ಚಿಸಲು ಯಾರು ಮುಂಬರುವಂತೆ ಕಾಣುವುದಿಲ್ಲ. ಈ ಠರಾವು ಮಂಡಿಸಲ್ಪಡುವ ಭರವಸೆ ಕಾಣುವುದಿಲ್ಲ. ಕಾಂಗ್ರೆಸ್ ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸುವಂಥಾ ಒಂದು ಠರಾವು ಕಾಂಗ್ರೆಸ್ಸಿನ ಚರಿತ್ರೆಯಲ್ಲಿ ಇದೇ ಪ್ರಥಮವಾದ ಕಾರಣ ಪ್ರತ್ಯಕ್ಷವಾಗಿ ಅವಿಶ್ವಾಸ ಠರಾವು ಮಂಡಿಸಲ್ಪಡುವದಿಲ್ಲವೆಂದು ನಂಬಲಾಗಿದೆ.

ಸಂಸ್ಥಾನಗಳ ವಿಚಾರ.

'ಸಂಸ್ಥಾನಗಳ ಪರಿಸ್ಥಿತಿಯ ವಿಚಾರದಲ್ಲಿ ಕಾಂಗ್ರೆಸು ಏನು ಮಾಡಬೇಕೆಂಬ ಬಗ್ಗೆ ಶ್ರೀ. ಯಂ. ಯನ್. ಜೋಷಿಯವರು ಒಂದು ಠರಾವನ್ನು ಕಳುಹಿಸಿರುವರು. ಸಂಸ್ಥಾನಗಳಲ್ಲಿ ಈಗಿನ ಚಳವಳವು ಹೊರಗಿನವರ ದೃಷ್ಟಿಯನ್ನೆಳೆದಿದೆ. ಆದ್ದರಿಂದ ಅವರಲ್ಲಿ ಭಾಗ ವಹಿಸದಿರುವದು ಅಸಾಧ್ಯ. ಇಡೀ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸು ಭಾರತೀಯ ಪ್ರಜಾ ಸಂಖ್ಯೆಯ ¼ನೇ ಅಂಶವಷ್ಟಿರುವ ಸಂಸ್ಥಾನ ಪ್ರಜೆಗಳು ಬ್ರಿಟಿಷ್ ಸಾಮ್ರಾಜ್ಯದ ಛತ್ರಛಾಯೆಯಡಿಯಲ್ಲಿರುವ ಆಳರಸರ ಕ್ರೂರ ಅತ್ಯಾಚಾರಗಳಿಗೆ ಬಲಿಯಾಗುವದನ್ನು ಕಾಂಗ್ರೆಸು ಸಹಿಸದು. ಆದ್ದರಿಂದ ಕಾಂಗ್ರೆಸು ತನ್ನ ಕಾರ್ಯಕ್ರಮದ ವ್ಯವಹಾರ ಕ್ಷೇತ್ರದಲ್ಲಿ ಸಂಸ್ಥಾನಗಳನ್ನೂ ಸೇರಿಸಿ ಆಳರಸರ ನಿರಂಕುಶ ಅಧಿಕಾರವನ್ನು ಕಿತ್ತೊಗೆಯಲು ಪ್ರಯತ್ನಿಸಬೇಕೆಂದು ಅಭಿಪ್ರಾಯಪಡುತ್ತದೆ'.

ಈಗ ಕಾಂಗ್ರೆಸಿನಲ್ಲಿ ಕೃತಕ ಮೆಂಬರುಗಳಾಗುವದನ್ನು ತಪ್ಪಿಸಲು ಕಾಂಗ್ರೆಸಿಗೆ ಮೆಂಬರುಗಳನ್ನು ಸೇರಿಸುವಾಗ ಅವರಿಗೆ ಯಾವ ಯೋಗ್ಯತೆ ಇರಬೇಕು ಎಂಬ ಬಗ್ಗೆ ಕೆಲವು ನಿಯಮಗಳನ್ನು ಪಾಸುಮಾಡಲಾಗುವದೆಂದು ತಿಳಿದು ಬಂದಿದೆ.

ಇವಲ್ಲದೆ ಇನ್ನೂ ಇತರ ಮಹತ್ವದ ಠರಾವುಗಳು ಮಂಡಿಸಲ್ಪಡುವವು. ಆಂಧ್ರ ಪ್ರಾಂತವನ್ನು ಪ್ರತ್ಯೇಕವಾಗಿ ಮಾಡಬೇಕೆಂದೂ ಸಹ ಒಂದು ಠರಾವನ್ನು ಕಳುಹಿಸಿರುವರು. ಇದಕ್ಕೆ ಇತರ ಕಾಂಗ್ರೆಸ್ ಡೆಲಿಗೇಟರುಗಳ ಒತ್ತಾಸೆ ಸಿಗುವುದೆಂದು ನಂಬಲಾಗಿದೆಯಂತೆ.

ಮಹಾತ್ಮಗಾಂಧೀಯವರು ತಮ್ಮ ಪ್ರಕೃತಿಯು ಸುಧಾರಿಸಿದೊಡನೆ ವೈಸರಾಯರನ್ನು ಕಾಣಲು ಹೋಗುವ ಪ್ರಯುಕ್ತ ತ್ರಿಪುರಿಗೆ ಹೋಗುವುದಿಲ್ಲವಾಗಿ ತಿಳಿಯುತ್ತದೆ.

ಅಧ್ಯಕ್ಷರು ಅಸ್ವಸ್ಥರಾದ ಕಾರಣ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಶ್ರೀ ಅಬ್ದುಲ ಕಲಾಂ ಅಜಾದರ ಅಧ್ಯಕ್ಷತೆಯಲ್ಲಿ ತಾ. 7ರಲ್ಲಿ ಪ್ರಾರಂಭಿಸಲ್ಪಟ್ಟಿತು.

ವರ್ಕಿಂಗ್ ಕಮಿಟಿಯ ಸದಸ್ಯರೆಲ್ಲರೂ ರಾಜಿನಾಮೆಯಿತ್ತಿರುವ ಪ್ರಯುಕ್ತ ಈಗಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡಿಸಲು ಮತ್ತು ಅಧಿಕಾರಿ ವರ್ಗದ ಠರಾವುಗಳನ್ನು ರೂಪಿತಗೊಳಿಸಲು ಒಂದು ಕ್ರಮವನ್ನು ಕೈಕೊಳ್ಳುವ ಬಗ್ಗೆ ಒಂದು ಕಮಿಟಿಯನ್ನು ನೇಮಿಸುವ ಆಲೋಚನೆಗಳಾಗುತ್ತಿವೆ. ಈಗೀಗ ಅಧ್ಯಕ್ಷರ ಚುನಾವಣೆಯಿಂದಾದ ಬೇಧವು ಮಾಯವಾಗುತ್ತಾ ಬರುತ್ತಿದೆ.

ಹೊಸ ವರ್ಕಿಂಗ್ ಕಮಿಟಿ.

ಸರ್ದಾರ್ ಪಟೇಲರು, ಅಬ್ದುಲ್ ಕಲಾಂ ಅಜಾದರು, ರಾಜೇಂದ್ರ ಪ್ರಸಾದರು ಮತ್ತು ಪಂಡಿತ ನೆಹರುಗಳು ಸುಭಾಷ ಬೋಸರೊಡನೆ ಹೊಸ ವರ್ಕಿಂಗ್ ಕಮಿಟಿಯ ವಿಚಾರ ವಿವೇಚಿಸಿದರು. ಅಧ್ಯಕ್ಷರ ಹಾಗೂ ಹಳೇ ವರ್ಕಿಂಗ್ ಕಮಿಟಿಗರೊಳಗೆ ಒಂದು ತೀರ್ಮಾನವು ಬರುವಂತಿದೆ. ಚುನಾವಣಾ ಕಾಲದಲ್ಲಿ ವರ್ಕಿಂಗ್ ಕಮಿಟಿ ಮೆಂಬರುಗಳ ಮೇಲೆ ಹಾಕಿದ ಆರೋಪಗಳ ವಿಚಾರ ಬೋಸರು ಅವರಿಗೆ ವಿವರಿಸಿ ಅವರನ್ನು ಸಮಾಧಾನ ಮಾಡುವರೆಂದು ನಂಬಲಾಗಿದೆಯಂತೆ. ಅನಂತರ ಹಳೇ ಮೆಂಬರುಗಳ ಬಹುಮತವಿರುವ ಒಂದು ವರ್ಕಿಂಗ್ ಕಮಿಟಿಯು ನೇಮಿಸಲ್ಪಡುವದೆಂದೂ, ನಾಲ್ಕು ಸಮತಾವಾದ ಪಕ್ಷದವರಿಗೆ ಸ್ಥಳ ಕೊಡಲಾಗುವುದೆಂದೂ ನಂಬಲಾಗಿದೆ. ಇವರ ಸತ್ಯಾಸತ್ಯತೆಗಳು ಇನ್ನೂ ಪರಿಷ್ಕಾರವಾಗಿ ತಿಳಿದು ಬಂದಿಲ್ಲ.

ಬ್ರಹ್ಮಚರ್ಯ.

ಲೇ:- ಕೆ. ಯಸ್. ನಾರಾಯಣರಾವ್, ವಿದ್ಯಾರ್ಥಿ, ಮಡಿಕೇರಿ.

ನಮ್ಮ ಧರ್ಮ ಶಾಸ್ತ್ರದಲ್ಲಿ ನಾಲ್ಕು ಆಶ್ರಮಗಳನ್ನು ವಿಧಿಸಿರುವರು. ಅವುಗಳಲ್ಲಿ ಬ್ರಹ್ಮಚರ್ಯವು ಮೊದಲನೆಯದು. ಈ ಆಶ್ರಮದ ವಿಷಯದಲ್ಲಿ ಅನೇಕ ಸಂಗತಿಗಳನ್ನು ಎಂದರೆ-ಬ್ರಹ್ಮಚರ್ಯದ ಲಕ್ಷಣ, ರಕ್ಷಣ, ಮಹತ್ವ ಪ್ರಯೋಜನ ಮೊದಲಾದುವುಗಳನ್ನೆಲ್ಲ ಶಾಸ್ತ್ರಕಾರರು ಬಹು ಸೂಕ್ಷ್ಮವಾಗಿ ವಿವರಿಸಿರುವರು. ಆ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಸಮಾಜಕ್ಕೆ ಬ್ರಹ್ಮಚರ್ಯದಿಂದಾವ ಉಪಕಾರವಾಗಬಹುದು ಮತ್ತು ಆಗಬೇಕು ಎಂಬವನ್ನೇ ಹೇಳಬೇಕೆಂದು ಯೋಚಿಸಿದ್ದೇನೆ.

ಸಮಾಜೋದ್ಧಾರಣೆಗಾಗಿ ಪ್ರಯತ್ನಿಸುವವರು ಬ್ರಹ್ಮಚರ್ಯಾಶ್ರಮದ ಕಡೆಗೆ ತಮ್ಮ ಲಕ್ಷ್ಯವನ್ನು ಕೊಟ್ಟದ್ದು ಕಂಡು ಬರುವುದಿಲ್ಲ. ಹುಡುಗರನ್ನಾಗಲೀ, ಹುಡುಗಿಯರನ್ನಾಗಲೀ ಕೆಲವು ಸಮಯ ಬ್ರಹ್ಮಚರ್ಯವ್ರತದಿಂದಿಡುವುದು ಸಮಾಜಕ್ಕೆ ಬಹಳ ಪ್ರಯೋಜನಕರವು. ಸ್ತ್ರೀ ಪುರುಷ ವ್ಯಕ್ತಿಗಳು ಚಿಕ್ಕಂದಿನಲ್ಲಿ ಬ್ರಹ್ಮಚರ್ಯದಿಂದಿದ್ದು ಆ ಸಮಯದಲ್ಲಿ ಅವರು ವಿದ್ಯಾದೇವಿಯ ತಪಶ್ಚರಣೆಯನ್ನು ಮಾಡಬೇಕು. ವ್ರತಸ್ಥರಾಗಿ ಕುಳಿತುಕೊಳ್ಳದೆ ಯಾವ ಸಂಗತಿಯೂ ಫಲಿಸುವುದಿಲ್ಲ. ವೀರ್ಯ, ಬಲ, ತೇಜಸ್ಸು, ಇವು ಬ್ರಹ್ಮಚರ್ಯದಿಂದುಂಟಾಗುತ್ತವೆ. ಹುಡುಗರಿಗೆ ಕನಿಷ್ಠ ಪಕ್ಷಕ್ಕೆ ಇಪ್ಪತ್ತು ವರ್ಷ ವಯಸಿಗಿಂತ ಮೊದಲು ಮದುವೆಯನ್ನು ಮಾಡಿದರೆ ತಂದೆತಾಯಿಗಳು ತಮ್ಮ ಮಕ್ಕಳ ಋಣದಿಂದ ಮುಕ್ತರಾಗುವುದಿಲ್ಲ. ಬ್ರಹ್ಮಚರ್ಯದಿಂದ ಒರತಕ್ಕ ಮೇಲೆ ಹೇಳಿದ ಗುಣಗಳು ಇವರಲ್ಲಿ ಮೂಡಿದುವುದಿಲ್ಲ. ಇದೇ ಇವರು ಪಿತೃ ಋಣದಿಂದ ಬಿಡುಗಡೆ ಹೊಂದದೆ ಇರಲಿಕ್ಕೆ ಕಾರಣವಾಗಿವೆ. ವೀರ್ಯ, ಬಲ ಮೊದಲಾದ ಗುಣಗಳು ಇವರಲ್ಲಿ ಅನುಗ್ರಹಿಸದೆ ಇದ್ದುದರಿಂದ ಗೃಹಸ್ಥಾಶ್ರಮವು ಇವರಿಗೆ ಬಹು ಭಾರವಾಗುವುದು. ಯೋಗ್ಯವಾದ ವಿದ್ಯೆಯನ್ನು ಕಲಿತು ಬುದ್ಧಿಯನ್ನು ಮತ್ತು ಬ್ರಹ್ಮಚರ್ಯದಿಂದ ಶರೀರವನ್ನು ಬಲಪಡಿಸುವುದಕ್ಕಿಂತ ಮೊದಲೇ ತಮ್ಮ ತಂದೆ ತಾಯಿಗಳು ತಮ್ಮ ಕುತೂಹಲವನ್ನು ಪೂರೈಸುವುದಕ್ಕಾಗಿ ಗೃಹಸ್ಥಾಶ್ರಮದ ನೊಗವನ್ನು ಕುತ್ತಿಗೆಯ ಮೇಲೆ ಇಟ್ಟಿರುವುದರಿಂದ ಮುಂದಿನ ಸಂಸಾರದ ಭಾರವನ್ನು ಹೊತ್ತುಕೊಳ್ಳುವುದು ಅವರಿಗೆ ಬಹು ಪ್ರಯಾಸವಾಗುವುದು. ಬೇಗನೆ ಗೃಹಸ್ಥರಾದವರು ಬಲಹೀನರಾಗುವುದಲ್ಲದೆ ಅವರಿಗಾಗುವ ಸಂತತಿಯು ಕೂಡ ಪೂರ್ಣ ಬಲಹೀನವಾಗುತ್ತದೆ. ಆದುದರಿಂದ ಗೃಹಸ್ಥಾಶ್ರಮವು ಆವಷ್ಟು ದೂರದಲ್ಲಿರುವುದೇ ಒಳ್ಳೆಯದು. ಈ ಬ್ರಹ್ಮಚರ್ಯವು ಸರಿಯಾಗಿ ನಡೆಯುತ್ತಿರುವಾಗ ಮೊದಲು ಸಮಾಜವು ಬಹಳ ಉನ್ನತ ಸ್ಥಿತಿಯಲ್ಲಿತ್ತು. ಮನುಷ್ಯರ ಭವಿಷ್ಯತ್ಕಾಲದ ಜೀವನವು ಈ ಆಶ್ರಮದಲ್ಲೇ ತಯಾರಿಸಲ್ಪಡುತ್ತದೆ. ವಿದ್ಯೆ, ದೀರ್ಘೋದ್ಯೋಗ, ಧೈರ್ಯ, ಸಾಹಸ, ಶಕ್ತಿ ಇವು ಉತ್ತರಾಯುಷ್ಯದಲ್ಲಿ ಜೀವನಕ್ರಮಕ್ಕೆ ಬೇಕಾದ ಸಾಧನಗಳು. ಅವುಗಳನ್ನು ಸಂಪಾದಿಸಲಿಕ್ಕೆ ಇದೇ ಆಶ್ರಮವು ಯೋಗ್ಯವಾಗಿದೆ. ದೀರ್ಘವಾದ ಬ್ರಹ್ಮಚರ್ಯವನ್ನು ಪಾಲಿಸಿದ್ದರಿಂದ ಶ್ರೀರಾಮ ದೂತನಾದ ಹನುಮಂತನು ಎಷ್ಟು ಸಾಹಸದ ಮತ್ತು ಸಾಮರ್ಥ್ಯದ ಕೆಲಸಗಳನ್ನು ಮಾಡಿರುವನು! ಅಂತ್ಯದವರೆಗೆ ಏಕನಿಷ್ಠೆಯಿಂದ ಬ್ರಹ್ಮಚರ್ಯದಲ್ಲೇ ಇದ್ದ ಮಹಾ ಭಾರತಯೋಧನಾದ ಭೀಷ್ಮನ ಸಂಗತಿಯಂತೂ ಆಬಾಲವೃದ್ಧರಿಗೂ ಗೊತ್ತೇ ಇದೆ. ಭೀಷ್ಮಾಚಾರ್ಯನು ತನ್ನ ಶಸ್ತ್ರ ಗುರುವಾದ ಪರಶುರಾಮನಿಗೆ ಯುದ್ಧ ರಂಗದಲ್ಲಿ ಶಸ್ತ್ರಾಸ್ತ್ರಗಳ ಮುಖವಾಗಿ ಪ್ರತ್ಯುತ್ತರವನ್ನು ಕೊಟ್ಟದ್ದಾಗಲಿ, ಶ್ರೀಕೃಷ್ಣನಿಗೆ ಅವನ ಪ್ರತಿಜ್ಞೆಗೆ ವಿರೋಧವಾಗಿ ಕೈಯ್ಯಲ್ಲಿ ಚಕ್ರವನ್ನು ಧರಿಸುವಂತೆ ಮಾಡಿದ್ದಾಗಲೀ ಬರೇ ಬ್ರಹ್ಮಚರ್ಯದ ಪ್ರಭಾವವಲ್ಲದೆ ಇನ್ನಾವುದೂ ಅಲ್ಲ. ಹಿಂದಿನ ಋಷಿಗಳು ಮತ್ತು ಕ್ಷತ್ರಿಯರು ಒಂದು ಕ್ಲುಪ್ತವಾದ ಕಾಲದ ವರೆಗೆ ಈ ಬ್ರಹ್ಮಚರ್ಯಾಶ್ರಮವನ್ನು ಕೈಗೊಳ್ಳುತ್ತಿದ್ದರು. ಸಮಾಜದ ಉನ್ನತಿಗೆ ಪುರುಷರ ಅಥವಾ ಸ್ತ್ರೀಯರ ಬ್ರಹ್ಮಚರ್ಯವೇ ಮೂಲಕಾರಣವಾಗಿದೆ ಎಂಬ ಮಾತನ್ನು ನಾವು ನೂರಾರು ದೃಷ್ಟಾಂತಗಳಿಂದ ಸಿದ್ಧಪಡಿಸಬಹುದು.

ಬ್ರಹ್ಮಚರ್ಯಾಶ್ರಮವು ಉತ್ತಮವಾದದ್ದು, ಸಮಾಜದ ಏಳಿಗೆಗೆ ಕಾರಣವಾದದ್ದು, ಈ ಸಂಗತಿಗಳನ್ನು ಎಷ್ಟೋ ಜನರು ಹೇಳುವರು ಮತ್ತು ಬರೆಯುವರು. ಆದರೆ ಇದಕ್ಕಾಗಿ ಇಂಥಾ ಕೆಲಸವನ್ನೇ ಅಥವಾ ಏರ್ಪಾಡನ್ನೇ ಮಾಡಬೇಕೆಂಬವನ್ನು ಮಾತ್ರ ಬಲ್ಲವರಾಗಲೀ, ಸಮಾಜೋದ್ಧಾರಕರಾಗಲೀ ತೋರಿಸಿದ್ದು ಕಂಡು ಬರುವುದಿಲ್ಲ. ಒಂದು ವೇಳೆ ಕೆಲವರು ಹೀಗೆ ತೋರಿಸಿರಲೂ ಬಹುದು. ಆದರೆ ಅಂಥಾ ಒಂದು ಉಪಾಯವನ್ನು ಪ್ರಚಾರಗೊಳಿಸಿದ್ದು ಗೋಚರಕ್ಕೆ ಬರುವುದಿಲ್ಲ. ವಿಧವೆಯರಿಗೆ ತಿರುಗೊಮ್ಮೆ ಕುಂಕುಮ ಕೊಡಲಿಕ್ಕಾಗಲೀ, ಎಲ್ಲರೂ ಒಂದೇ ಕಡೆಯಲ್ಲಿ ಕುಳಿತು ಊಟ ಮಾಡಲಿಕ್ಕಾಗಲೀ, ಒದ್ದಾಡುತ್ತಿದ್ದಾರೆ. ಆದರೆ ಬಾಲಬಾಲಕಿಯರಲ್ಲಿ ಬಾಲ್ಯವು ಕಳೆಯುವುದಕ್ಕೆ ಮೊದಲೇ ಗೃಹಸ್ಥಾಶ್ರಮದ ಸಂಸಾರವನ್ನು ಒಪ್ಪಿಸುತ್ತಾರೆ. ಇದಕ್ಕೆ ತಡೆಯಾಗುವಂತೆ ಯಾವ ಸಂಸ್ಥೆಯನ್ನು ಮಾಡಿದ್ದುಂಟು? ಯಾವನೂ ಇಲ್ಲ. ಆದರೆ ಪ್ರೌಢಾಪ್ರೌಢ ವಿವಾಹ ಮೊದಲಾದ ಒಣ ಚರ್ಚೆಗಳು ಯಾವಾಗಲಾದರೂ ಕೇಳಬರುತ್ತವೆ. ನಮ್ಮಲ್ಲಿ ಸಂಗತಿ ಏನೆಂದರೆ-ಒಂದು ವಿಷಯವು ಯಾರ ಆಚಾರವಲ್ಲೂ ಬಾರದಿದ್ದರೂ ಎಲ್ಲರ ಚರ್ಚೆಯಲ್ಲಿ ಮಾತ್ರ ಬರುತ್ತದೆ! ಬೇರೆ ಜನಾಂಗದವರ ಸ್ವಭಾವವೇನೆಂದರೆ ಒಬ್ಬ ವಿದ್ಯಾವಂತನು ಒಂದು ಹೊಸ ಸಂಗತಿಯನ್ನು ಶೋಧಿಸುವದಾದರೆ ಮೊದಲಾಗಿ ಯತ್ನಿಸುವನು, ಸಿದ್ಧಪಡಿಸುವನು, ಮತ್ತೆ ಚರ್ಚೆಗೆ ತರುವನು. ಇದು ಹೇಗೋ ಹಾಗೆಯೇ ಸಾಮಾಜಿಕ ವಿಷಯದಲ್ಲಿಯೂ ತನ್ನ ಅಂತರಾತ್ಮಕ್ಕೆ ಯುಕ್ತವಾಗಿ ಕಂಡಂತೆ ನಡೆದುಕೊಳ್ಳುವನು, ಅನಂತರ ಅದನ್ನೇ ಪ್ರತಿಪಾದಿಸುವನು. ಆದರೆ ಇಲ್ಲಿ ಎಲ್ಲ ವಿಪರೀತ, ಇದಕ್ಕೆ ಇದೇ ದೃಷ್ಟಾಂತ. ನಮ್ಮ ತರುಣ ಹುಡುಗರು ಶಾಲೆಯಲ್ಲಿ ವಿದ್ಯೆಯನ್ನು ಕಲಿಯುವಾಗ ಅನೇಕ ವಿಧಗಳಿಂದ ತಮ್ಮ ಬ್ರಹ್ಮಚರ್ಯವನ್ನು ಭಂಗಪಡಿಸುವರು. (ಇದರ ವಿವರವನ್ನು ಮುಂದೆ ಸಂಕ್ಷೇಪವಾಗಿ ಹೇಳುತ್ತೇನೆ.) ಇವರ ಈ ಆಚರಣೆಯ ವಿಚಾರ ಮಾಡುವವರಿಗೆ ತನ್ನಷ್ಟಕ್ಕೆ ತಿಳಿದು ಬರುತ್ತದೆ. ಆದರೆ ಇದಕ್ಕೆ ಯಾರು ಏನು ಮಾಡಿರುವರು? ಈಗಿನ ತರುಣರ ಬುದ್ಧಿಯಲ್ಲಿ ತಾಳ್ಮೆಯಿಲ್ಲ, ಮುಖದಲ್ಲಿ ವರ್ಚಸ್ಸಿಲ್ಲ, ಶರೀರದಲ್ಲಿ ಬಲವಿಲ್ಲ. ಯಾಕೆ? ಇವುಗಳಿಗೆ ಮೂಲ ಕಾರಣವಾದ ಬ್ರಹ್ಮಚರ್ಯವೇ ಅವರಲ್ಲಿ ಇಲ್ಲ, ಇದೇ ಕಾರಣ. ಇಂಥವರಿಂದ ಸಮಾಜದ ಯಾವ ಉದ್ಧಾರವಾದೀತು?

ಪಂಜಾಬಿನಕಡೆಗೆ 'ಆರ್ಯ ಸಮಾಜ' ದವರು 'ಗುರುಕುಲ' ವೆಂಬ ಸಂಸ್ಥೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳ ಬ್ರಹ್ಮಚರ್ಯ ಮತ್ತು ಶೀಲವನ್ನು ಕಾಪಾಡುವಂತೆ ಏರ್ಪಾಡನ್ನು ಮಾಡಿದ್ದಾರೆ. ಆರ್ಯ ಸಮಾಜದವರ ಈ ಕೆಲಸವು ಸಮಾಜದ ಹಿತವನ್ನು ಕೈಗೂಡಿಸಿಕೊಡುವಂಥದಾದುದರಿಂದ ಅವರ ಸಂಸ್ಥೆಯು ಪ್ರಶಂಸನೀಯವಾಗಿದೆ. ಸಮಾಜದಲ್ಲಿ ಮನೋಸಾಮರ್ಥ್ಯವು ಬರುವದಾದರೆ ಗುರುಕುಲದಂಥ ಸಂಸ್ಥೆಯಿಂದಲೇ ಬಂದೀತು. ಗುರುಕುಲವು ಪ್ರಶಂಸೆಗೆ ಪಾತ್ರವಾದದ್ದು. ಅದಂತಿರಲಿ, ಇಲ್ಲಿ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳ ಆಚರಣೆಯನ್ನು ನೋಡಿದರೆ, ವಿದ್ಯೆ ಕಲಿಯದೆ ವ್ಯಾಪಾರ ಅಥವಾ ಬೇರೆ ಉದ್ಯೋಗವನ್ನು ಮಾಡುತ್ತಿರುವ ಅದೇ ವಯಸ್ಸಿನ ತರುಣ ಹುಡುಗರ ನೀತಿ, ಆಚರಣೆ, ಭಯಭಕ್ತಿ ಇವೇ ಒಳ್ಳೆಯದೆಂದು ಹೇಳಬೇಕಾಗುತ್ತದೆ. ಹೈಸ್ಕೂಲ್, ಕಾಲೇಜುಗಳಲ್ಲಿ ವಿದ್ಯೆಯನ್ನು ಕಲಿಯುವವರು, ಆಚರಣೆಯಲ್ಲಿ ಆ ವಿದ್ಯೆಯ ಸಂಸ್ಕಾರದಿಂದ ಮತ್ತು ಉಪಾಧ್ಯಾಯರ ಶುದ್ಧವಾದ ವರ್ತನದಿಂದ ಹಾಗೂ ಉಪದೇಶದಿಂದ ವಿದ್ಯಾಹೀನರಿಗಿಂತ ಒಳ್ಳೆಯವರಾಗಿರಬೇಕಾದದ್ದು ನ್ಯಾಯ. ಆದರೆ ಅಪರ ಸಂಗತಿಯೇ ಬೇರೆ. ಇದು ಖೇದಪೂರ್ಣವಾದ ವಿಚಾರ.

ಇನ್ನು ಶಾಲೆಯ ಸ್ಥಿತಿಯಾದರೆ ಮನೆಸ್ಥಿತಿಯು ಇನ್ನೂ ಕನಿಕರಪಡುವಂತಿದೆ. ಉಂಡು ತಿಂದು ಕೈಯಲ್ಲಿ ಉಳಿಸುವವರಿಂದರೆ ಐಶ್ವರ್ಯವಂತರು. ತಮ್ಮ ಮಕ್ಕಳಿಗೆ ಆದಷ್ಟು ಬೇಗ ಮದುವೆ ಮಾಡಿ, ಆನುಕೂಲವಾದ ವಿಲಾಸದ ಒಡವೆಗಳನ್ನು ಕೈಸಿಕೊಡುವರು. ಇದರಲ್ಲಿ ಇನ್ನೊಂದು ವಿಶೇಷ. ಮದ್ಯ ಕುಡಿದ ಮಂಗಕ್ಕೆ ಚೇಳು ಕಡಿದಂತೆ ಐಶ್ವರ್ಯ, ವಿಲಾಸದ ಒಡವೆಗಳು, ಬಾಲ್ಯದಲ್ಲೇ ವಿವಾಹ ಇಷ್ಟು ಸಂಗತಿಗಳೂ ಇರುವಾಗ ಮಿತಿಮೀರಿ ಬರೆವರುವ ಶೃಂಗಾರ ರಸದ ಕಾದಂಬರಿಗಳು ಇಂಥವರ ಸೇವೆಗೆ ಬಂದಿರುತ್ತದೆ. ಆಗ ಬ್ರಹ್ಮಚರ್ಯದ ಮಾತೆಲ್ಲುಂಟು? ಮನುಸ್ಮೃತಿಯಲ್ಲೇ ಸರಿ! ಇಂಥ ಆಪತ್ತು ಸಮಾಜದಲ್ಲಿ ಹಬ್ಬಿಕೊಂಡಿರುವಾಗ ಸುಧಾರಕರು ಕಣ್ತೆರೆದು ನಶಿಸಿ ಹೋಗುತ್ತಿರುವ ಬ್ರಹ್ಮಚರ್ಯದ ಅನುಸರಣೆಯನ್ನು ಪಾಲಿಸಲಾಗದೇ?

ಶಾಲೆಯ ಹುಡುಗರು ಬ್ರಹ್ಮಚರ್ಯವನ್ನು ಸರಿಯಾಗಿ ಪಾಲಿಸುವಂತೆ ಶಿಕ್ಷಣದ ಪುಸ್ತಕಗಳಲ್ಲಿ ಈ ವಿಷಯದ ಉಪದೇಶ ಪಾಠಗಳನ್ನು ಸೇರಿಸಿದರೆ ತಕ್ಕಮಟ್ಟಿಗೆ ಒಳ್ಳೇದಾಗುವದು. ಶಾಲೆಗಳಿಗೂ, ಕಾಲೇಜುಗಳಿಗೂ ಹೊಂದಿರುವ ಹಾಸ್ಟೆಲ್, ಬೋರ್ಡಿಂಗ್ ಮೊದಲಾದವುಗಳ ವ್ಯವಸ್ಥಾಪಕರು ಈ ವಿಷಯದಲ್ಲಿ ತಕ್ಕ ಜಾಗ್ರತೆಯನ್ನು ತೆಗೆದುಕೊಳ್ಳುತ್ತಿರಬೇಕು. ವಿದ್ಯಾರ್ಥಿಗಳ ಸಂಘಗಳಲ್ಲಿ ಈ ಬ್ರಹ್ಮಚರ್ಯದ ಮಹಿಮೆಯು ಬೇರೂರುವಂತೆ ಯಾವ್ಯಾವ ಉಪಾಯಗಳು ಸಾಧ್ಯವೋ ಅವುಗಳನ್ನೇರ್ಪಡಿಸಿದರೆ ಸಮಾಜಕ್ಕೆ ಏಳಿಗೆಯು ಬೇಗನೆ ಬಂದೀತು. ಆಜನ್ಮ ಬ್ರಹ್ಮಚರ್ಯವನ್ನು ಪಾಲಿಸುವವರು ಈ ಕಲಿಯುಗದಲ್ಲಿ ಇಲ್ಲವೇ ಇಲ್ಲ. ಆದರೂ ಇಂತಿಷ್ಟು ವಯಸ್ಸಿನ ವರೆಗಾದರೂ ಬ್ರಹ್ಮಚರ್ಯವನ್ನು ಕಾಪಾಡುವ ತರುಣರು ಇದ್ದರೆ ಆ ಸಮಾಜವು ಏಳಿಗೆಯನ್ನು ಹೊಂದುವದು. ಅದ್ದರಿಂದ ಮಕ್ಕಳ ತಂದೆತಾಯಿಗಳಾಗಲೀ, ಪಾಲಕರಾಗಲೀ, ಉಪಾಧ್ಯಾಯರಾಗಲೀ ಬೇರೆ ಮುಖಂಡರಾಗಲೀ ಈ ಬ್ರಹ್ಮಚರ್ಯದ ಕ್ರಮವು ಸರಿಯಾಗಿ ನಡೆಯುವಂತೆ ಪ್ರಯತ್ನಿಸಬೇಕೆಂಬುದೇ ನನ್ನ ಉದ್ದೇಶ.

ಹಿಂದೂಸ್ಥಾನದ ರಾಜ್ಯಘಟನೆಯಲ್ಲಿ ತಿದ್ದುಪಡಿಗಳಾಗುವವು.

ಹಿಂದುಸ್ಥಾನದ ರಾಜ್ಯಘಟನೆಯಲ್ಲಿ ತಿದ್ದುಪಡಿ ಮಾಡುವುದಕ್ಕಾಗಿ ಬ್ರಿಟಿಷ್ ಸರ್ಕಾರದವರು ಒಂದು ಮಸೂದೆಯನ್ನು ತರಬೇಕೆಂದು ನಿರ್ಧರಿಸಿದ್ದಾರೆ. ಪಾರ್ಲಿಮೆಂಟಿನ ಸದ್ಯದ ಅಧಿವೇಶನವು ಮುಗಿಯುವುದರೊಳಗಾಗಿ ಆ ಮಸೂದೆಯು ಬರಬಹುದು ಎಂದು ಲಾರ್ಡ್ ಜೆಟ್ಲೆಂಡರು ಲಾರ್ಡ್ ಸಭೆಯಲ್ಲಿ ಲಾರ್ಡ್ ಸ್ನೆಲ್ಲರ ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು.

'ರಾಜ್ಯ ಘಟನೆಯು ಇದು ವರೆಗಿನ ಅನುಭವದ ಮೇಲಿನಿಂದ ಕಂಡು ಬಂದ ಲೋಪ ದೋಷಗಳನ್ನು ತಿದ್ದುವದು ಅತ್ಯಂತ ಅಗತ್ಯವಾಗಿದೆ. ಈ ಬಗೆಯ ತಿದ್ದುಪಡಿಗಳಿಂದ ಯಾವ ಹೊಸ ತತ್ವವೂ ಉಪಸ್ಥಿತವಾಗುವುದಿಲ್ಲ ಮತ್ತು ಈ ಕಾಯಿದೆಯನ್ನು ಪಾಸು ಮಾಡುವಾಗ ಇದ್ದ ಪಾರ್ಲಿಮೆಂಟಿನ ಉದ್ದೇಶವು ಸ್ವಲ್ಪವೂ ಬದಲಾಗುವುದಿಲ್ಲ' ಎಂದು ಅವರು ಹೇಳಿದರು.

ಆಧುನಿಕ ನಾಗರೀಕತೆ.

ಲೇಖಕ:- ಗಣೇಶ, ಮಡಿಕೇರಿ.

(ಮಹಾತ್ಮ ಗಾಂಧಿಯವರ ಲೇಖನದ ಆಧಾರದಿಂದ.)

ಕಳೆದ ಲೇಖನದಲ್ಲಿ ಇಂಗ್ಲೆಂಡಿನ ಆಡಳಿತ ಹಾಗೂ ಅವನ್ನನುಸರಿಸಿದರೆ ಭಾರತಕ್ಕೆ ಬರುವ ಹಾನಿಯನ್ನು ಕುರಿತು ಪ್ರಸ್ತಾಪಿಸಿರುವೆವು. ಈ ಲೇಖನದಲ್ಲಿ ಇಂಗ್ಲೆಂಡಿನ ಆಡಳಿತ ಹಾಗೂ ಅವ್ಯವಸ್ಥೆಗೆ ಮೂಲ ಕಾರಣವಾದ ನಾಗರೀಕತೆಯ ವಿಚಾರ ಚರ್ಚಿಸಲಾಗುವುದು.

ಆಧುನಿಕ ನಾಗರೀಕತೆಯ ವಿಚಾರ ಅನೇಕ ಪ್ರಖ್ಯಾತ ಲೇಖಕರು ಅಮೋಘವಾದ ಲೇಖನಗಳನ್ನು ಬರೆದಿರುವರು. ನಾಗರೀಕತೆಯ ಕೆಡುಕನ್ನು ನಿವಾರಿಸಲು ಅನೇಕ ಸಂಘಸಂಸ್ಥೆಗಳೂ ಪ್ರಯತ್ನಿಸುತ್ತಿರುವವು. ಅವರೆ ಪ್ರಖ್ಯಾತ ಬ್ರಿಟಿಷ್ ಲೇಖಕರೊಬ್ಬರು ತಮ್ಮ 'ನಾಗರೀಕತೆ, ಅದರ ಕಾರಣ ಮತ್ತು ನಿವಾರಣ' ಎಂಬ ಪುಸ್ತಕದಲ್ಲಿ ಬರೆದಂತೆ ನಾಗರೀಕತೆಯು ಒಂದು ಅಂಟು ರೋಗವೇ ಆಗಿರುವದು. ಆದರೆ ನಾಗರೀಕತೆಯ ಪರಿಭಾವನೆಯು ನಮ್ಮೆಲ್ಲರಿಗುಂಟಾಗದಿರಲು ಕೆಲವು ಕಾರಣಗಳಿವೆ. ಪ್ರತಿಯೊಬ್ಬ ಮಾನವನು ತನ್ನ ಮನೋಗತೆಯ ವಿಚಾರ ಹೇಗೆ ಮಾತಾಡುವುದಿಲ್ಲವೋ, ಸಂದರ್ಭ ಬಂದರೂ ಸಹ ಹೇಗೆ ಅವನ್ನು ಸಕಾರಣದಿಂದ ಸಮರ್ಥಿಸಿ ಮಾತಾಡುವನೋ, ತದೋಪಾದಿಯಲ್ಲಿ ಆಧುನಿಕ ನಾಗರೀಕತೆಯಿಂದ ಮತ್ತರಾದವರು ಅದರ ಛಿದ್ರಗಳನ್ನು ಬಹಿರಂಗಪಡಿಸರು. ಹೇಗೆ ಸ್ವಪ್ನದಲ್ಲಿ ಮನುಷ್ಯನು ತಾನು ಕಂಡದ್ದೆಲ್ಲಾ ನಿಜವೆಂದು ಭಾವಿಸಿ ಎಚ್ಚರಗೊಂಡೊಡನೆ ಭ್ರಮೆಯೆಂದು ತಿಳಿಯುವನೋ ಹಾಗೆಯೇ ನಾಗರೀಕತೆಯ ಆಶ್ರಯಗಳು ಕನವರಿಸುತ್ತಿರುವರೆಂದು ತಿಳಿಯಬೇಕು. ಇಂದು ಜಗತ್ತಿನಲ್ಲೇ ನಾಗರೀಕತೆಯು ಆವರಿಸಿಕೊಂಡಿರುವ ಪ್ರಯುಕ್ತ ಅದರ ಸಾಧಕಬಾಧಕಗಳ ವಿವರವು ಸುಲಭವಲ್ಲಾಗದು. ಆದ್ದರಿಂದ ಮೊದಲು 'ನಾಗರೀಕತೆ' ಯೆಂದರೇನು? ಎಂಬುದನ್ನು ಸಕಾರಣವಾಗಿ ಉದಾಹರಿಸುವ:—

ಇಂದು ಯೂರೋಪಿನ ಜನತೆಯು ನೂರು ವರ್ಷಗಳ ಹಿಂದಿನದ್ದಕ್ಕಿಂತ ಉತ್ಕೃಷ್ಟ ತರಹದ ಮನೆಗಳಲ್ಲಿ ವಾಸಿಸುತ್ತಿರುವರು. ಇದು ನಾಗರೀಕತೆಯ ಒಂದು ಕುರುಹು. ಮೊದಲು ಅವರು ಬಟ್ಟೆಗಾಗಿ ಚರ್ಮವನ್ನೂ, ಆಯುಧಕ್ಕಾಗಿ ಭರ್ಜಿಗಳನ್ನೂ ಉಪಯೋಗಿಸುತ್ತಿದ್ದರು. ಈಗ ನಾನಾ ತರಹದ ಬಟ್ಟೆಗಳು, ಕಣ್ಮನ ಸೆಳೆಯುವ ಪೋಷಾಕುಗಳು, ಬಾಂಬು, ಪಿಸ್ತೂಲ್ ಮೊದಲಾದ ಸೌಲಭ್ಯಗಳನ್ನು ಉಪಯೋಗಿಸುತ್ತಿರುವರು. ಯಾವದೋ ಒಂದು ದೇಶದಲ್ಲಿ ಹಿಂದಿನ ಉಡಿಗೆ ತೊಡಿಗೆಗಳನ್ನು ಧರಿಸಿದ ಒಬ್ಬನು ಐರೋಪ್ಯರ ಪೋಷಾಕುಗಳನ್ನು ಧರಿಸಿದನಾದರೆ ಅತನು ಅನಾಗರೀಕತೆಯ ಬಂಧನದಿಂದ ಪಾರಾಗಿ ನಾಗರೀಕತೆಯ ದಂಡೆಯನ್ನು ಸೇರಿದನೆಂದೇ ಭಾವನೆ. ಮೊದಲು ಯೂರೋಪಿನಲ್ಲಿ ಜನರು ತಮ್ಮ ಹೊಲಗಳನ್ನು ಸ್ವಂತ ಉಪಯೋಗಕ್ಕಾಗಿ ಮಾನವ ಶ್ರಮದಿಂದ ಉಳುತ್ತ ಬೆಳೆಸುತ್ತಿದ್ದರು. ಇಂದು ಒಬ್ಬ ಮನುಷ್ಯನು ಯಂತ್ರಗಳ ಸಹಾಯದಿಂದ ಅನೇಕ ಜನರ ಕೆಲಸವನ್ನು ಅಲ್ಪ ಸಮಯದಲ್ಲಿ ತಾನೊಬ್ಬನೇ ಮಾಡಿ ಹಣ ಸಂಪಾದಿಸುವನು. ಆದ್ದರಿಂದಲೇ ಇಂದು ಆಧುನಿಕ ನಾಗರೀಕತೆಯ ತುತ್ತತುದಿಗೇರಿದ ಜನಾಂಗಯೂ ರಾಷ್ಟ್ರಗಳಲ್ಲಿ ಪರಸ್ಪರ ಅಮೋಘ ವ್ಯತ್ಯಾಸವಿರುವದು. ಯಂತ್ರಗಳ ಸಹಾಯದಿಂದ ಬಡ ಕೂಲಿಯವರ ಹೊಟ್ಟೆಗೆ ಮಣ್ಣು ಹಾಕುತ್ತಿರುವದು. ಅಲ್ಪ ಕಾಲದಲ್ಲಿ ಅಮೋಘ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಮಾಡಿದರೆ ಅದೇ ಕೆಲಸವನ್ನು ಕೆಲವೊಂದು ದಿವಸ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಜನತೆಯ ಅನ್ನವನ್ನು ಕಿತ್ತು ತಿಂದಂತಾಗದೇ? ಆದರೆ ಇದೇ ಇಂದಿನ ಜಗತ್ತಿನ ಸಂಪ್ರದಾಯ. ಇದೇ ನಿರುದ್ಯೋಗಕ್ಕೆ ಮೂಲಕಾರಣ. ನಾಗರೀಕತೆಯ ಅಲ್ಪ ಪರಿಣಾಮವಿದು. ಮೊದಲು ಕೆಲವೊಂದು ಜನರು ಮಾತ್ರ ಅಮೂಲ್ಯವಾದ ಪುಸ್ತಕ ಹಾಗೂ ಲೇಖನಗಳನ್ನು ಬರೆಯುತ್ತಿದ್ದರು. ಇಂದು ಯಾವನಾದರೂ ತನ್ನ ಮನಸ್ಸಿಗೆ ಬಂದದ್ದನ್ನು ಬರೆದು ಜನರ ಮೆದುಳಿನಲ್ಲಿ ತುಂಬಲು ಸಮರ್ಥನು. ಪುರಾತನ ಕಾಲದಲ್ಲಿ ಕಾಲ್ನಡಿಗೆ ಹಾಗೂ ಗಾಡಿಗಳ ಮೇಲೆ ಸಂಚರಿಸುತ್ತಿದ್ದರೆ ಇಂದು ಆಕಾಶದಲ್ಲಿ ಹಾರುವನು. ನೀರೊಳಗೆ ಸಂಚರಿಸುವನು. ಭೂಗರ್ಭವನ್ನೂ ಪ್ರವೇಶಿಸಿರುವನು. ಇದು ನಾಗರೀಕತೆಯ ಕುರುಹು. ಈಗ ಜನತೆಗೆ ತಮ್ಮ ಕಾಲುಕೈಯೂ ಅಂಗಾಂಗಗಳ ಉಪಯೋಗವೇ ಬೇಡವಾಗಿದೆ. ಒಂದು ಗುಂಡಿಯನ್ನೊತ್ತಿದರೆ ವಾರ್ತಾ ಪತ್ರಿಕೆ ಬರುವದು. ಮಗುದೊಂದನ್ನು ಒತ್ತಿದರೆ ದಿವ್ಯ ಭೋಜನವು ಮುಂಬರುವದು. ಇದೆಲ್ಲವೂ ಯಂತ್ರ ಸಹಾಯದಿಂದ ಮಾಡಲ್ಪಡುವದು. ಅಂದು ಪರಸ್ಪರ ಕದನದಾಗ ತಮ್ಮ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುವ ಅವಕಾಶವಿತ್ತು. ಇಂದು ಆಧುನಿಕ ಯುದ್ಧೋಪಕರಣದ ಬಲದಿಂದ ಎಂಥಾ ಬಲಿಷ್ಠನನ್ನೂ, ಒಬ್ಬ ನಿಶ್ಶಕ್ತನು ನಿರಾಯಸವಾಗಿ ಕೊಲ್ಲಬಲ್ಲನು. ಇದು ಇಂದಿನ ನಾಗರೀಕತೆ. ಮೊದಲು ಮಾನವನು ಸ್ವತಂತ್ರವಾಗಿ ಬಯಲಲ್ಲಿ ತನಗೋಸ್ಕರ ತನಗೆ ಇಷ್ಟ ಬಂದಂತೆ ದುಡಿಯುತ್ತಿದ್ದನು. ಇಂದು ಸಾವಿರಾರು ಕೆಲಸಗಾರರು ಹಗಲಿರುಳು ಕಾರ್ಖಾನೆಗಳಲ್ಲಿ ಅವಿಶ್ರಾಂತಿಯಿಂದ ಶ್ರಮಿಸಿದರೂ ಅವರ ಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ. ಅವರ ಸ್ಥಿತಿಯು ಕಾಡು ಮೃಗಗಳ ಸ್ಥಿತಿಯಂತಿರುವುದು. ಅವಿಶ್ರಾಂತಿಯಿಂದ ದುಡಿದು ಕೆಲವೊಂದು ಲಕ್ಷಾಧಿಕಾರಿಗಳ ಕೈಗೊಂಬೆಯಾಗಿರುವರು. ಇಂದು, ಹಿಂದ ಕಂಡೂ ಕೇಳದ ಅನೇಕ ರೋಗಗಳು ತಲೆಯೆತ್ತಿ ವೈದ್ಯರ ತಂಡ ತಂಡವೇ ಅವುಗಳ ನಿವಾರಣೆಗೆ ಪ್ರಯತ್ನಿಸುತ್ತಿರುವದು. ಆಸ್ಪತ್ರೆಗಳು ಏರಿವೆ. ಇದೂ ನಾಗರೀಕತೆಯ ಚಿಹ್ನೆ. ಮೊದಲು ದಿನಕ್ಕೆ ಮೂರು ಬಾರಿ ಆಹಾರ ತೆಗೆದುಕೊಳ್ಳುತ್ತಿದ್ದಂಥಾ ಕ್ರಮವು ಇಂದು ಎರಡು ಗಂಟೆಗೊಮ್ಮೆ ಎಂಬಂತೆ ತೆಗೆದುಕೊಳ್ಳಲ್ಪಡುತ್ತಿದೆ. ಅಂದ ಬಳಿಕ ಅವರಿಗೆ ಬೇರೆ ಕೆಲಸಕ್ಕೆ ಸಮಯವೆಲ್ಲಿ? ಇದೆಲ್ಲಾ ಸುಧಾರಿತ ನವನಾಗರೀಕತೆಯ ಚಿಹ್ನೆಗಳು. ನಾಗರೀಕತೆಗೆ ಮಿತವಿಲ್ಲ. ನಾಗರೀಕತೆಯು ದೈಹಿಕ ಸುಖವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಇದರಲ್ಲೂ ಅದು ಕೃತಾರ್ಥವಾಗಿಲ್ಲ. ಹೆಚ್ಚೇಕೆ, ಮಾನವ ಇತಿಹಾಸದಲ್ಲೇ ಈ ನಾಗರೀಕತೆಯು ಅಪ್ರತಿಮವಾದ ಸಂಸ್ಕೃತಿಯನ್ನು ನಿರ್ಮಿಸಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಮಾನವನು ವಿಶ್ವವನ್ನೇ ತನ್ನ ಅಧೀನ ಇಟ್ಟಿರುವನು. ಆದರೆ ಇದರ ಪರಿಣಾಮವೇನು? ಇವಾನ್ ಓಲ್ಡ್‌ಲಂಡರು ಅಂದಿರುವಂತೆ—ಹೊಲದ ಇಲಿಗಳಂತೆ ಭೂಮಿಯೊಳಗೆ ಅವಿತುಕೊಳ್ಳುವದು; ವಿಷವಾಯುವಿನ ಮುಖವಾಡದ ಇಂದಿನ ಕಿರೀಟವನ್ನು ಧರಿಸುವದು, ಅಪರೋಕ್ಷವಾಗಿ ನಿಂತು ನಿರಪರಾಧಿಗಳ ಕೊಲೆ ಮಾಡುವದು, ಇದೇ ಏನು? ನಮ್ಮ ಸಕಲ ತ್ಯಾಗದ, ಎಲ್ಲ ಶ್ರಮದ, ಎಲ್ಲ ಸಾಧನೆಯ ಪ್ರತಿಫಲ? ಇಂದಿನ ಆಧುನಿಕ ನಾಗರೀಕತೆಯು ಪ್ರತಿಫಲವಿಂತಾದ್ದಕ್ಕೆ ಮೊದಲು ಅಂತರ್ಗತವಾಗಿ ಹುದುಗಿದ್ದ ಶಕ್ತಿಯನ್ನು ಮೇಲೆ ಬರಲು ಬಿಡದಷ್ಟರ ಲೇಸ ಗಿತ್ತು. ಮನುಷ್ಯನು ಗುಡಿಸಲುಗಳಿಂದಲೂ, ಗುಹೆಗಳಿಂದಲೂ, ಚರ್ಮದ ಮೇಲುಹೊದಿಕೆಯಿಂದಲೂ ಸ್ವತಂತ್ರವಾಗಿ ಇರುತ್ತಿದ್ದರೆ ಇಂದಿನ ಲಂಡನ್ ಅಥವಾ ಪ್ಯಾರಿಸ ನಗರಗಳಲ್ಲಿರುವದಕ್ಕಿಂತಲೂ ಎಷ್ಟೋ ಕ್ಷೇಮದಿಂದ ನಿರ್ಭೀತನಾಗಿರುತ್ತಿದ್ದನು.

ಇಂದಿನ ನಾಗರೀಕತೆಯು ಅಧಾರ್ಮಿಕವಾದದ್ದು. ಅದು ಯೂರೋಪಿನ ಜನತೆಯನ್ನು ತನ್ನ ಹಿಡಿತದಲ್ಲಿಟ್ಟಿದೆ. ಇದರ ಹಿಡಿತಕ್ಕೊಳಗಾದವರು ಅರ್ಧ ಹುಚ್ಚರಂತೆ ವರ್ತಿಸುವರು. ಅವರಿಗೆ ದೈಹಿಕ ಶಕ್ತಿಯಾಗಲೀ, ಮಾನಸಿಕ ಸ್ಥೈರ್ಯವಾಗಲೀ ಇರಲಾರದು. ನಾಗರೀಕತೆಯೆಂಬ ಮದ್ಯದ ಮತ್ತತೆಯಿಂದ ತಮ್ಮ ಚಟುವಟಿಕೆಯನ್ನಿಟ್ಟುಕೊಂಡಿರುವರು. ಅವರಿಗೆ ಏಕಾಂತದಲ್ಲಿ ಸುಖಸಂತೋಷವಿಲ್ಲ. ಮನೆಯಲ್ಲಿ ತಮ್ಮ ಕರ್ತವ್ಯ ನಿರತೆಯಿಂದ ರಾಣಿಯರಂತಿರಬಹುದಾದ ಸ್ತ್ರೀಯರು ಬೀದಿಯಲ್ಲಿ ಅಲೆಯುವರು, ಇಲ್ಲವೇ ಕಾರ್ಖಾನೆಗಳಲ್ಲಿ ಶ್ರಮಿಸಿ ಅಧೋಗತಿಗಿಳಿಯುವರು. ಉದಾಹರಣೆಗಾಗಿ ಇಂಗ್ಲೆಂಡಿನಲ್ಲಿ ಅರ್ಧ ಮಿಲಿಯ ಹೆಂಗಸರು ಕಾರ್ಖಾನೆಯೂ ಆ ತರಹದ ಸಂಸ್ಥೆಗಳಲ್ಲಿ ಶ್ರಮಿಸುತ್ತಿರುವರು. ಈ ಭಯಂಕರ ವಿಚಾರವೇ ಇಂದಿನ ಜನತೆಯ ಅವ್ಯವಸ್ಥೆಗೆ ಮೂಲ ಕಾರಣ. ಮಹಮದರ ಉಪದೇಶದಂತೆ ಇದು ಸೈತಾನ ನಾಗರೀಕತೆ. ಹಿಂದೂ ಮತವು ಇದನ್ನು 'ಕಪ್ಪು ಕಾಲ' ವೆಂದು ಕರೆಯುವದು. ಬ್ರಿಟಿಷ್ ಜನಾಂಗದ ಸತ್ವವನ್ನೇ ಈ ನಾಗರೀಕತೆಯು ಹೀರುತ್ತಿದೆ. ಅದು ತಡೆಗಟ್ಟಲ್ಪಡಬೇಕು. ಪಾರ್ಲಿಮೆಂಟುಗಳು ನಿಜವಾಗಿಯೂ ಗುಲಾಮಗಿರಿಯ ಕುರುಹುಗಳು. ಈ ವಿಚಾರ ಚೆನ್ನಾಗಿ ವಿವೇಚಿಸಿದರೆ ನೀವೂ ಈ ಅಭಿಪ್ರಾಯಕ್ಕೆ ಬರದೆ ಇರಲಾರಿರಿ. ಇದು ಬ್ರಿಟಿಷರ ತಪ್ಪಲ್ಲ. ಅವರು ನಮ್ಮ ಸಹಾನುಭೂತಿಗೆ ಪಾತ್ರರು. ಅವರು ಚಾಣಾಕ್ಷ ಜನಾಂಗವಾಗಿರುವದರಿಂದ ಈ ಕೆಡುಕುಗಳಿಂದ ತಪ್ಪಿಸಿಕೊಳ್ಳಲೂಬಹುದು. ಮೇಲೆ ವಿವರಿಸಿದ ನಾಗರೀಕತೆಯು ವಾಸಿಮಾಡಲಸಾಧ್ಯವಾದ ರೋಗವೇನೂ ಅಲ್ಲ; ಆದರೆ ಸಧ್ಯಕ್ಕೆ ಬ್ರಿಟಿಷ ಜನಾಂಗವು ಇದರಿಂದ ತಲ್ಲೀನವಾಗಿದೆಯೆಂಬುದು ಮಾತ್ರ ಸಹಜ.

ಮುಂದಿನ ವಾರ ಈ ನಾಗರೀಕತೆಯ ರೋಗವು ಭಾರತಕ್ಕೆ ಹೇಗೆ ಮೂಡಿದ್ದೇನು? ಭಾರತವು ಅದನ್ನಿಟ್ಟುಕೊಳ್ಳಲು ಕಾರಣವೇನು? ಭಾರತವು ತನ್ನ ಸ್ವಾತಂತ್ರ್ಯವನ್ನು ಕಳಕೊಂಡು ಪಾರತಂತ್ರ್ಯಕ್ಕೆ ಸಿಲುಕಿದುದೇಕೆ? ಎಂಬ ವಿಚಾರ ಬರೆಯಲಾಗುವುದು.

ತಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತಂದು ಬಲಪಕ್ಷದವರ ಹಾಗೂ ಗಾಂಧೀಜೀಯವರಿಂದ ಕಪಬಾಸಗಿರಿ ವಹಿಯಬೇಕೆಂದು ಉದ್ಘೋಷಿಸಿದ ರಾಷ್ಟ್ರಪತಿ ಸುಭಾಷ್ ಚಂದ್ರ ಬೋಸರವರು

ಇವರು ಬ್ರಾಂಕೋ ನಿಮೋನಿಯದಿಂದ ನರಳುತ್ತಿರುವರಷ್ಟೆ. ಇನ್ನೂ ಅವರ ಸ್ಥಿತಿಯು ಚೆನ್ನಾಗಿರುವದಿಲ್ಲ. ದಿನವಹಿ ಅವರಿಗೆ ಜ್ವರ 103 ಡಿಗ್ರಿಯ ವರೆಗೆ ಬರುತ್ತಿದೆ. ಡಾಕ್ಟರರು ಅವರು ತ್ರಿಪುರಿ ಅಧಿವೇಶನಕ್ಕೆ ಹೋಗಕೂಡದೆಂದೂ, ಹೋದರೆ ಅವರ ಸ್ಥಿತಿಯು ಹಾಳಾಗುವದೆಂದೂ ಹೇಳಿರುವರು. ಅಂತು ಸುಭಾಷ್ ಬಾಬುಗಳು ತ್ರಿಪುರಿಗೆ ಹೊರಡಲು ಸಿದ್ಧರಾಗಿರುವರು. ಮಹಾತ್ಮ ಗಾಂಧಿಯವರು ಸಹ ಡಾಕ್ಟರುಗಳ ಬೋಧನೆಗೆ ವ್ಯತಿರಿಕ್ತ ಹೋಗಕೂಡದೆಂದು ತಂತಿ ಕಳುಹಿಸಿರುವರು.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿಸಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-38 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ... ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-52

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.

ಮತ್ತು ಕಂಪನಿ,

(52-13) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗಿಪ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

33 ಸಿ. ಹೆಚ್. ರಾಮುಣ್ಣಿ ವೈದ್ಯರ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸವ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಕುಂದೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ: ಮಾದಮ್ಮಯ್ಯನವರು.

ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್-ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1931ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	45,930	0	0
ಜನರಿಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ಕ್ರಿಪ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲ್ಪಡುವುದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲ್ಪಡುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	„ 100.	„ 35.	„ 22.	„ 13.
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.

(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ದಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

62-9 **ಮೆ. ಡಿ. ಶೇಷಾದ್ರಿ,** ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೧೭—೩—೧೯೩೯.

ವಾರ್ಷಿಕ ಚಂದಾ ರೂ. ೩-೮

ಸಂಪುಟ ೧೮] [ಸಂಚಿಕೆ ೪೮

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52–14

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:-ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು. ಲೇಪಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಪಣಿಕರ್,
ವೈದ್ಯ & ಆಸ್ಟ್ರಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-3

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ
ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ
ಸೆಲೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕಾಲಂ
17 ಶದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಷ್ಟಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-45 The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-25)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಶೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತಿ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್). ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್, ಅಜ್ಮೀರ್.

12-21

ರಾಷ್ಟ್ರಪತಿ ಸುಭಾಷ್ ಬೋಸರ ಅಧ್ಯಕ್ಷ ಭಾಷಣ.

ಸಂಸ್ಥಾನ ಚಳವಳದ ಕಡಿವಾಣವನ್ನು ವರ್ಕಿಂಗ್ ಕಮಿಟಿಯು ಹಿಡಿಯಬೇಕು.

ಸಹೋದರಿ ಹಾಗೂ ಸಹೋದರ ಪ್ರತಿನಿಧಿಗಳೇ–

ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷನನ್ನಾಗಿ ನನ್ನನ್ನು ಪುನಃ ಆರಿಸಿದ್ದಕ್ಕೂ, ಇಲ್ಲಿ ನನಗೆ ನೀವು ದಯಪಾಲಿಸಿದ ಅಭೂತಪೂರ್ವಸ್ವಾಗತಕ್ಕೂ ನಿಮ್ಮನ್ನು ವಂದಿಸುತ್ತೇನೆ, ನನ್ನ ಇಚ್ಛೆ ಮೀರಿ ನಿಮ್ಮ ಸ್ವಾಗತ ವಿಜೃಂಭಣೆಯಲ್ಲಿ ಸ್ವಲ್ಪ ಕಮ್ಮಿ ಮಾಡಬೇಕಾಗಿ ಬಂತು, ಆದರೆ ಅದು ನಿಮ್ಮ ಈ ಅಮೋಘ ಹಾಗೂ ಆದರದ ಸ್ವಾಗತದ ಒಂದು ಅಣುವನ್ನಾದರೂ ಕಮ್ಮಿ ಮಾಡಿಲ್ಲ. ಆದ್ದರಿಂದ ನನ್ನ ಪ್ರೇರಣೆಯಿಂದ ಕಮ್ಮಿ ಮಾಡಿದ ಬಗ್ಗೆ ಯಾರಿಗೂ ವಿಷಾದವೆನಿಸದೆಂದು ನಾನು ಆಶಿಸುತ್ತೇನೆ.

ಸ್ನೇಹಿತರೇ. ಭಾಷಣವನ್ನು ಮುಂದೆ ಸಾಗಿಸುವ ಮೊದಲು ರಾಜಕೋಟೆಯಲ್ಲಿ ಮಹಾತ್ಮ ಗಾಂಧಿಯವರ ಧ್ಯೇಯಕ್ಕಾದ ಜಯವನ್ನೂ, ಉಪವಾಸವ್ರತವನ್ನು ಅಂತ್ಯಗೊಳಿಸಿದ ಸಂತೋಷವನ್ನೂ ಮುಂದಿಟ್ಟು ನಿಮ್ಮೊಡನೆ ಆ ಸಂತೋಷದಲ್ಲಿ ಭಾಗಿಯಾಗುವೆನು. ಇಡೀ ದೇಶವೇ ತನ್ನ ವೇದನೆಯಿಂದ ನಿವೃತ್ತಿಗೊಂಡಂತಾಯಿತು.

ಸ್ನೇಹಿತರೇ, ಈ ವರ್ಷವು ಅನೇಕ ವಿಧದಿಂದ ಮಹತ್ವದ ಹಾಗೂ ಬಿಕ್ಕಟ್ಟಿನ ವರ್ಷವಾಗಿದೆ. ಈ ವರ್ಷದ ಅಧ್ಯಕ್ಷರ ಚುನಾವಣೆಯು ಇಷ್ಟು ವರ್ಷಗಳಂತಿಲ್ಲ. ಈ ವರ್ಷದ ಚುನಾವಣೆಯು ದೇಶದಲ್ಲಿ ಅನೇಕ ತರದ ಮನೋವೃತ್ತಿಯನ್ನು ಹಬ್ಬಿಸಿ, ವರ್ಕಿಂಗ್ ಕಮಿಟಿಯ ಹನ್ನೆರಡು ಜನ ಸದಸ್ಯರ ರಾಜಿನಾಮೆಗೆ ಕಾರಣಕೊಟ್ಟಿದೆ. ತ್ರಿಪುರಿ ಅಧಿವೇಶನವು ಹತ್ತಿರ ಸೇರುತ್ತಿರುವಾಗಲೇ ರಾಜಕೋಟೆಯ ಸ್ಥಿತಿಯು ಮಹಾತ್ಮರನ್ನು ಉಪವಾಸವ್ರತ ಕೈಕೊಳ್ಳುವಂತೆ ಮಾಡಿತು. ನಂತರ ಕಾಂಗ್ರೆಸ್ ಅಧ್ಯಕ್ಷರು ಕಾಯಿಲೆಯಿಂದ ನರಳುತ್ತಾ ಬಂದಿರುವರು. ಆದ್ದರಿಂದ ಈ ವರ್ಷದ ಅಧ್ಯಕ್ಷ ಭಾಷಣವು ಮಾಮೂಲಿನಂತೆ ದೀರ್ಘವಾಗಿಲ್ಲ.

ಸ್ನೇಹಿತರೇ, ಈಜಿಪ್ಟಿನ ವಾಫ್ಡ್ ಪಕ್ಷದ ಡಲಿಗೇಟರುಗಳು ನಮ್ಮ ಆಮಂತ್ರಣವನ್ನು ಮನ್ನಿಸಿ ಇಲ್ಲಿಗೆ ಅತಿಥಿಗಳಾಗಿ ದಯಮಾಡಿಸಿರುವದು ನಿಮಗೆ ತಿಳಿದ ವಿಚಾರ. ಅವರಿಗೆ ಸುಸ್ವಾಗತವನ್ನು ಬಯಸಲು ನೀವೂ ನನ್ನೊಡನೆ ಸಹಕರಿಸುವಿರಾಗಿ ನಂಬುತ್ತೇನೆ. ಆದರೆ ವಾಫ್ಡ್ ಪಕ್ಷದ ಅಧ್ಯಕ್ಷರಾದ ನಾಹಾಸ್‌ಪಾಶಾರವರು ಅಲ್ಲಿಯ ರಾಜಕೀಯ ಆಂದೋಲನದ ದೆಸೆಯಿಂದ ಇಲ್ಲಿಗೆ ಬರಲಾಗದ್ದಕ್ಕೆ ವಿಷಾದಿಸಬೇಕಿದೆ. ನಾಹಾಸ್‌ಪಾಶಾರವರಿಗೂ, ಆ ಪಕ್ಷದ ಮುಖಂಡರನ್ನೂ ನನಗೆ

ಬ್ರಿಟಿಷರ ಅಂತರರಾಷ್ಟ್ರೀಯ ಅಬಲತೆಯನ್ನು ನಾವು ಉಪಯೋಗಿಸಿಕೊಳ್ಳಬೇಕು.

ಎಲ್ಲರೂ ಒಮ್ಮತದಿಂದ ಸಾರ್ವಭೌಮ ಸರಕಾರವನ್ನು ಎದುರಿಸಬೇಕು.

ಪರಿಚಯವಿರುವವರಿಂದ ಇಂದಿನ ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಆದ್ದರಿಂದ ಮತ್ತೊಮ್ಮೆ ಅವರಿಗೆ ನನ್ನ ಹೃತ್ಪೂರ್ವಕವಾದ ಸ್ವಾಗತವನ್ನೀಯುತ್ತೇನೆ.

ಹರಿಪುರದಲ್ಲಿ ಕಳೆದ ಫೆಬ್ರವರಿಯಲ್ಲಾದ ಅಧಿವೇಶನದ ನಂತರ ಅಂತರರಾಷ್ಟ್ರೀಯ ಜಗತ್ತಿನಲ್ಲಿ ಅನೇಕ ಮಾರ್ಪಾಡುಗಳು ನಡೆದಿವೆ. ಪ್ರಾಮುಖ್ಯವಾದುವುಗಳೆಂದರೆ ಬ್ರಿಟಿಷ್ ಹಾಗೂ ಫ್ರೆಂಚರು ಪಾಶ್ಚಿಮಾತ್ಯ ಜನಾಂಗಗಳ ಪರವಾಗಿ ನಾಜೀ ಜರ್ಮನಿಗೆ ಶರಣಾಗಿದ 1938 ನೇ ಸೆಪ್ಟಂಬರಿನ ಮ್ಯೂನಿಚ್ ಒಪ್ಪಂದ, ಅಲ್ಲಿಂದ ಫ್ಯಾಸಿಸ್ಟ್ ಇಟೆಲಿಗೂ, ನಾಜಿ ಜರ್ಮನಿಗೂ ಕಳೆಯಿಸಿದ ಸ್ಪೇಯಿನ ಪ್ರಜಾಪ್ರಭುತ್ವದ ಕೊಲೆ, ಪ್ರಜಾಪ್ರಭುತ್ವಹಿತವಾದಿಗಳೆಂಬ ಸೋಗಿನಲ್ಲಿರುವ ಬ್ರಿಟನ್, ಫ್ರಾನ್ಸುಗಳು ಜರ್ಮನಿ ಇಟೆಲಿಗಳೊಟ್ಟಿಗೆ ಸೇರಿ ಸೋವಿಯಟ್ ರಷ್ಯದ ಪ್ರಜಾಪ್ರಭುತ್ವ ಸರಕಾರವನ್ನು ನಿರ್ಮೂಲನಮಾಡಬೇಕೆಂಬ ಹವಣಿಕೆ, ಆದರೆ ಇದಲ್ಲ ಎಷ್ಟರ ವರೆಗೆ ಸಾಧ್ಯ? ರಷ್ಯವನ್ನು ಬಗ್ಗುಬಡಿಯಲೆತ್ನಿಸುವ ಈ ಪ್ರಯತ್ನದಲ್ಲಿ ಬ್ರಿಟಿಷ್ ಯಾ ಫ್ರಾನ್ಸು ಪಡೆಯುವ ಲಾಭವೇನು? ಈ ಅಂತರರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಬ್ರಿಟಿಷ್ ಮತ್ತು ಫ್ರಾನ್ಸ್ ಸಾರ್ವಭೌಮ ಸರಕಾರಗಳು ತಮ್ಮ ಪ್ರಗತಿ, ಪ್ರತಿಷ್ಠೆ, ಹಾಗೂ ಶಕ್ತಿಗೆ ಕುಂದನ್ನು ಉಂಟುಮಾಡಿಕೊಂಡಿವೆ

ನಮ್ಮ ತಾಯ್ನಾಡಿನ ರಾಜಕೀಯರಂಗದ ವಿಚಾರದಲ್ಲಿ ನನಗೆ ಅಸೌಖ್ಯವಾದ್ದರಿಂದ ಕೆಲವೇ ಪ್ರಾಮುಖ್ಯ ಸಮಸ್ಯೆಗಳ ವಿಚಾರ ಮಾತ್ರ ಹೇಳುವೆನು. ಕೆಲವು ಸಮಯದಿಂದ ನನ್ನಲ್ಲುದ್ಭವಿಸಿದ ವಿಚಾರವೆಂದರೆ–ಇಂದು ಭಾರತೀಯರಾದ ನಾವು ನಮ್ಮ ರಾಷ್ಟ್ರೀಯ ಹಕ್ಕಾದ ಸ್ವರಾಜ್ಯವನ್ನು ಬ್ರಿಟಿಷ್ ಸಾರ್ವಭೌಮತ್ವದಿಂದ ಪಡೆಯಲು ತಯಾರಾಗಿರುವೆವು. ಆದ ಪ್ರಯುಕ್ತವೇ ಬ್ರಿಟಿಷ್ ಸಾರ್ವಭೌಮ ಸರಕಾರಕ್ಕೆ ಒಂದು ನಿಶ್ಚಿತ ಸಮಯದೊಳಗೆ ನಮ್ಮ ಬೇಡಿಕೆಯನ್ನು ಸಲ್ಲಿಸುವಂತೆ ಎಚ್ಚರಿಸಬೇಕು. ಫೆಡರಲ್ ಯೋಜನೆಯು ಯಾವಾಗ, ಹೇಗೆ ನಮ್ಮ ಗಂಟಲೊಳಗೆ ತುರುಕಲ್ಪಡುವುದೆಂಬ ಸಮಸ್ಯೆಯು ನಿರೀಕ್ಷಣೀಯ. ಆದರೆ ಈ ಫೆಡರಲ್ ಸ್ಕೀಮಿನ ಗುಣಾವಗುಣಗಳು ನಮಗೆ ವಿಧಿತವಿರುವ ಪ್ರಯುಕ್ತ ಆ ಬಗ್ಗೆ ನಾವು ಹೇಳಬೇಕಾದ ಅಗತ್ಯವಿಲ್ಲ. ಫೆಡರಲ್ ಯೋಜನೆಯನ್ನು ಯೂರೋಪಿನಲ್ಲಿ ಶಾಂ-

ತಿಯು ಸ್ಥಾಪನೆಯಾಗುವ ವರೆಗೆ ಅದೆಷ್ಟು ನಂತರ ಭಾರತದ ಮೇಲೆ ಹೇರುವ ಯೋಜನೆ ನಡೆಸಿದರೆ ಮಾಡಬೇಕಾದ್ದೇನು? ಎಂಬುದೇ ಇಂದು ನಮ್ಮ ಮುಂದಿರುವ ಒಂದು ಪ್ರಶ್ನೆ. ಇಂದು ಅಂತರರಾಷ್ಟ್ರೀಯ ಸಮಸ್ಯೆಯಲ್ಲಿ ತನ್ನ ಸ್ಥಿತಿಯು ಅಬಲವಾದ್ದರಿಂದಲೇ ಬ್ರಿಟಿಸು ಪ್ಯಾಲೆಸ್ತಾನದಲ್ಲಿ ಅರಬರೊಡನೆ ಸಂಧಾನ ಮಾಡುತ್ತಿದೆ. ಆದರಿಂದ ಬ್ರಿಟಿಷ್ ಸಾರ್ವಭೌಮತ್ವಕ್ಕೆ ತನ್ನ ಧೈರ್ಯಸ್ಥೈರ್ಯದ ಮೇಲೆ ಇಂದು ನಂಬಿಗೆಯಿಲ್ಲದಿರುವ ಈ ಸಂದಿಗ್ಧ ಸಮಯದಲ್ಲಿ ನಮ್ಮ ರಾಷ್ಟ್ರೀಯ ಪಕ್ಕಾದ ಸ್ವರಾಜ್ಯದ ಕೇಳಿಕೆಯನ್ನು ಕೆಲವು ದಿವಸಗಳ ಅವಧಿಯಲ್ಲಿ ಸಲ್ಲಿಸಿಕೊಡುವಂತೆ ಅವರ ಮುಂದಿಟ್ಟು, ಆ ಸಮಯದೊಳಗೆ ನಮ್ಮ ಬೇಡಿಕೆಯು ಮನ್ನಿಸಲ್ಪಡದಿದ್ದರೆ, ನಾವು ನಮ್ಮ ರಾಷ್ಟ್ರೀಯ ಧ್ಯೇಯವಾದ ಅರ್ಥಾತ್ ಸ್ವರಾಜ್ಯ ಸಂಪಾದನೆಗೆ ಪ್ರಚಂಡ ಆಂದೋಲನವನ್ನು ಹೂಡಬೇಕಾದ್ದು ಅತ್ಯವಶ್ಯವೆಂದು ನನಗನಿಸುತ್ತದೆ. ನಾವು ಈ ಚಳವಳದಲ್ಲಿ ಉಪಯೋಗಿಸಬಹುದಾದ ಆಯುಧಗಳೆಂದರೆ ಕಾಯದೆ ಭಂಗ ಚಳವಳ, ಅಥವಾ ಸತ್ಯಾಗ್ರಹ. ಹೀಗೆ ಅಖಂಡವಾಗಿ ಭಾರತವೆಲ್ಲಾ ಸತ್ಯಾಗ್ರಹವು ನಡೆದರೆ ಬ್ರಿಟಿಷ್ ಸರಕಾರವು ಇಂದಿನ ಅವರ ಪರಿಸ್ಥಿತಿಯಲ್ಲಿ ಹೆಚ್ಚಿನ ಎದೆ ಕೊಡಲಾರದು. ಬ್ರಿಟಿಷ್ ಸಾರ್ವಭೌಮತ್ವದೊಡನೆ ಇಂಥಾ ಪ್ರಚಂಡ ಚಳವಳ ಹೂಡಲು ಇನ್ನೂ ನಾವು ಸಿದ್ಧರಿಲ್ಲವೆಂದು ಹೇಳುವವರು ನಮ್ಮ ಕಾಂಗ್ರೆಸಿನಲ್ಲಿ ಇದ್ದಾರೆಂದು ಹೇಳಲು ವಿಷಾದವಾಗುತ್ತದೆ. ಆದರೆ ಇಂಥಾ ಅಧೈರ್ಯಕ್ಕೆ ಇಂದು ಕಾಂಗ್ರೆಸಿನಲ್ಲಿ ಒಂದು ಅಣುವಷ್ಟು ಸಹ ಕಾರಣ ಸಿಗಲಿಕ್ಕಿಲ್ಲ. ಎಂಟು ಪ್ರಾಂತಗಳಲ್ಲಿನ ಕಾಂಗ್ರೆಸಿನ ಅಧಿಕಾರದಿಂದ ಅದರ ಪ್ರತಿಷ್ಠೆಯು ಅಭಿವೃದ್ಧಿಗೊಂಡಿದೆ. ಜಿಲ್ಲೆ ಸಂಸ್ಥಾನಗಳು ಎಚ್ಚೆತ್ತು ಅಮೋಘವಾದ ಜಾಗ್ರತಿಗೊಂಡಿವೆ. ಇದಕ್ಕಿಂತ ಹೆಚ್ಚಿನ ಭಾಗ್ಯವನ್ನು ನಿರೀಕ್ಷಿಸುವದು ನಿಷ್ಫಲ. ಅಂತರರಾಷ್ಟ್ರೀಯ ಪರಿಸ್ಥಿತಿಯು ನಮಗನುಕೂಲವಾಗಿರುವಾಗ ಈ ಸುಸಂದರ್ಭವನ್ನು ಕಳಕೊಳ್ಳುವದು ನಮ್ಮ ಮೌಢ್ಯತೆಯ ಪ್ರದರ್ಶನವಾಗದೆ. ಇಂದು ನಾವೆಲ್ಲರೂ ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ನಮ್ಮ ಕರ್ತವ್ಯದೃಷ್ಟಿಯಿಂದ ಚಳವಳವನ್ನು ಕೈಕೊಂಡದ್ದೇ ಆದರೆ ಬ್ರಿಟಿಷ್ ಸಾರ್ವಭೌಮತ್ವವು ಎಂದೂ ಈ ಪ್ರಚಂಡ ಕದನವನ್ನು ಎದುರಿಸಲಾರದು. ನಮಗಾಗಿ ಕಾದಿರುವಾಗ ಒದಗಿರುವ ಈ ಪರಿಸ್ಥಿತಿಯನ್ನು ನಾವು ಉಪಯೋಗಿಸಿಕೊಳ್ಳುವದಿಲ್ಲ. ಯಾ ಜನಾಂಗದ ಜೀವಮಾನದಲ್ಲಿ ಅನುರೂಪವಾಗಿ ಬರುವ ಇಂಥಾ ಸಂದರ್ಭವನ್ನು ಬಿಟ್ಟು ಬಿಡುವೆವೊ?

ಭಾರತೀಯ ಸಂಸ್ಥಾನಗಳ ಜಾಗ್ರತಿಯ ವಿಚಾರ ಮೊದಲೇ ಹೇಳಿರುವೆನು. ಸಂಸ್ಥಾನಗಳ ವಿಚಾರದ ಹರಿಪುರ ಠರಾವನ್ನು ಪರೀಕ್ಷಿಸಿ ತಿದ್ದುವದು ಹಿತವಾಗಿ ನನಗ ಕಾಣುತ್ತದೆ. ಕಾಂಗ್ರೆಸಿನ ಹೆಸರಿನಲ್ಲಿ ಸಂಸ್ಥಾನಗಳಲ್ಲಿ ಚಳವಳವು ನಡೆಯಕೂಡದೆಂದು ಆ ಠರಾವು ಪ್ರತಿಬಂಧಿಸುತ್ತದೆ. ಆದರೆ ಹರಿಪುರ ಅಧಿವೇಶನದಿಂದೀಚೆಗೆ ಅನೇಕ ಕಾರ್ಯಗಳು ನಡೆದಿವೆ. ಸಂಸ್ಥಾನಾಧೀಶರ ಬೆಂಬಲಕ್ಕೆ ಕೇಂದ್ರ ಸರಕಾರವು ಬಂದಿದೆ. ಈ ಪರಿಸ್ಥಿತಿಯಲ್ಲಿ ನಾವು ಸಂಸ್ಥಾನ ಕಾಂಗ್ರೆಸಿನ ಬೆಂಬಲ ನಿಲ್ಲುವದು ಯುಕ್ತವಲ್ಲವೇ? ಹರಿಪುರ ಠರಾವಿನ ಮೇಲ್ಕಂಡ ನಿಬಂಧನೆಯನ್ನು ವಜಾಮಾಡಿ ಸಂಸ್ಥಾನಗಳ ಸ್ವಾತಂತ್ರ್ಯ ಹಾಗೂ, ಜವಾಬ್ದಾರಿ ಸರಕಾರದ ಚಳವಳವನ್ನು ವರ್ಕಿಂಗ್ ಕಮಿಟಿಯೇ ಮುಂದರಿಸುವದು ಹಿತಕರವಾಗಿ ನನಗನಿಸುತ್ತದೆ. ಈ ವರೆಗೆ ನಡೆದ ಚಳವಳವು ಬರೇ ಶೈಶವಾವಸ್ಥೆಯಲ್ಲಿದೆ. ಅದಕ್ಕೆ ಶಿಸ್ತು ಕಾರ್ಯಕ್ರಮಗಳೇನಿಲ್ಲ. ಆದರೆ ಇಂದು ವರ್ಕಿಂಗ್ ಕಮಿಟಿಯು ಇದನ್ನು ಕೈಯಲ್ಲಿ ತೆಗೆದುಕೊಂಡು ಕ್ರಮಬದ್ಧವಾಗಿ ಮುಂದರಿಸುವ ಸಮಯ ಬಂದಿದೆ. ಅಗತ್ಯಬಿದ್ದರೆ ಸಂಸ್ಥಾನ ಚಳವಳಕ್ಕಾಗಿಯೇ ಪ್ರತ್ಯೇ

ಕ ಒಂದು ಸಮಿತಿಯನ್ನೂ ನೇಮಿಸಬಹುದು. ಈ ಸಂದರ್ಭದಲ್ಲಿ ಅಖಿಲ ಭಾರತ ಸಂಸ್ಥಾನ ಪ್ರಜಾ ಸಮ್ಮೇಳನದ ಮತ್ತು ಪೂಜ್ಯ ಗಾಂಧೀಜಿಯವರ ಸಹಾಯವು ಅಗತ್ಯ.

ಈ ಮೊದಲು ನಾನು ನಮ್ಮ ಪೂರ್ಣ ಧ್ಯೇಯವಾದ ಸ್ವರಾಜ್ಯ ಸಂಪಾದನೆಗೆ ಪಡನೆ ಕಾರ್ಯಕ್ರಮ ಕೈಗೊಳ್ಳುವುದು ಹಿತವೆಂದು ಹೇಳಿದೆನು. ಆದರೆ ಅದಕ್ಕೆ ತಕ್ಕ ಸಿದ್ಧತೆಗಳಾಗಬೇಕು. ಮೊದಲನೆಯದಾಗಿ ನಾವು ದಯದಾಕ್ಷಿಣ್ಯವಿಲ್ಲದೆ ಇಂದು ನಮ್ಮ ಸಮೂಹದಲ್ಲಿರುವ ಕೊಳೆಯನ್ನು ಕಿತ್ತೊಗೆಯಬೇಕು. ಜನತೆಯ ಅಧಿಕಾರಲಾಲಸೆಯಿಂದ ಇಂದು ಕಾಂಗ್ರೆಸು ತನ್ನ ಪ್ರತಿಷ್ಠೆಯನ್ನು ಕಳಕೊಳ್ಳುವಂತಿದೆ. ನಂತರ ನಾವು ಬ್ರಿಟಿಷ್ ಸಾರ್ವಭೌಮತ್ವಕ್ಕೆ ವಿರೋಧವಿರುವ ಸಂಸ್ಥೆಗಳಾದ ಟ್ರೇಡ್ ಯೂನಿಯನುಗಳು, ಕಿಸಾನ್ ಚಳವಳಿ, ಇವುಗಳೊಡನೆ ಸಹಕರಿಸಿ ಕೆಲಸ ಮಾಡಬೇಕು. ಹೀಗೆ ಇಡೀ ಭಾರತದಲ್ಲಿರುವ ಎಲ್ಲಾ ಸ್ವತಂತ್ರ (ಸಾರ್ವಭೌಮ ಸರಕಾರಕ್ಕೆ ವಿರೋಧವಿರುವ) ಸಂಸ್ಥೆಗಳ ಒಗ್ಗಟ್ಟನ್ನು ಪಡೆದು ಎಲ್ಲರ ಹೃದಯದಲ್ಲಿಯೂ ಸಾರ್ವಭೌಮತ್ವವನ್ನು ವಿರೋಧಿಸುವ ಆ ಕೆಚ್ಚನ್ನು ಉದ್ರೇಕಗೊಳಿಸಬೇಕು.

ಸ್ನೇಹಿತರೇ, ಇಂದು ಕಾಂಗ್ರೆಸಿನ ಭಾಗ್ಯಾಕಾಶದಲ್ಲಿ ಮೋಡಗಳು ತುಂಬಿವೆ. ಇದರಿಂದ ಅನೇಕ ನಮ್ಮ ಸ್ನೇಹಿತರು ಧೃತಿಗೆಟ್ಟು ನಿರುತ್ಸಾಹಿಗಳಾಗಿರುವರು. ಆದರೆ ನಾನು ಅವಿಚಲನಾದ ಆಶಾವಾದಿ. ಇಂದು ನೀವು ನೋಡುತ್ತಿರುವ ಈ ಮೋಡಗಳು ಮಾಯವಾಗಿ ಹೋಗುವಂತಹವು. ನನಗೆ ನನ್ನ ದೇಶೀಯರ ಸ್ವದೇಶ ಪ್ರೇಮದಲ್ಲಿ ನಂಬಿಕೆ ಇದೆ. ಆದ್ದರಿಂದ ಈ ನಮ್ಮೊಳಗಿನ ಭಿನ್ನಾಭಿಪ್ರಾಯವು ಮಾಯವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. 1923 ರಲ್ಲಿ ಗಯಾದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಇಂತಹದ್ದೊಂದು ಪ್ರಸಂಗ ಬಂದಿತ್ತು. ಅಲ್ಲಿಂದಲೇ ದೇಶಬಂಧು ಚಿತ್ತರಂಜನದಾಸ್ ಮತ್ತು ಮೋತಿಲಾಲ್ ನೆಹರೂರವರು ಸ್ವರಾಜ್ಯ ಪಾರ್ಟಿಯನ್ನು ಸ್ಥಾಪಿಸಿದರು. ನನ್ನ ಗುರುಗಳ ಆ ಉತ್ಸಾಹ ಮತ್ತು ಭಾರತಮಾತೆಯ ಚರಣವೇದಿಕೆಯಲ್ಲಿ ತಮ್ಮ ಪ್ರಾಣಗಳನ್ನು ದೇಶಹಿತಕ್ಕಾಗಿ ಅರ್ಪಿಸಿದ ಮಹಾತ್ಮರು ಇಂದಿನ ಈ ಸಂದಿಗ್ಧ ಬಿಕ್ಕಟ್ಟಿನಲ್ಲಿ ಸಹಾಯ ಮಾಡಲಿ, ಇನ್ನೂ ನಮ್ಮೊಡನಿರುವ ಪೂಜ್ಯ ಮಹಾತ್ಮ ಗಾಂಧೀಯವರು ಸುಗಮವಾದ ಹಾದಿಯಲ್ಲಿ ನಮ್ಮ ಜನಾಂಗವನ್ನು ನಡೆಸಿ ಇಂದಿನ ಬಿಕ್ಕಟ್ಟಿನಿಂದ ಪಾರುಮಾಡಲಿ' ಇದೇ ನನ್ನ ಪ್ರಾರ್ಥನೆ.

ವಂದೇ ಮಾತರಂ.

ಈ ವಾರದ ಸಣ್ಣ ಕಥೆ.

ಲಲಿತೆಯ ಪ್ರಥಮ ಭೇಟಿ.

(ಲೇಖಕ:—ಗಣೇಶ, ಮಡಿಕೇರಿ.)

ನನಗೆ ಮದುವೆಯಾಗಿ ತಿಂಗಳು ಆರು ಕಳೆದಿತ್ತು. ನಾನು ಮದ್ರಾಸಿನಲ್ಲಿ ವ್ಯಾಸಂಗ ಮಾಡುತ್ತಿದ್ದುದರಿಂದ ನನಗೂ, ನನ್ನ ಹೆಂಡತಿಗೂ ಭೇಟಿಯಾಗುವ ಅವಕಾಶವೇ ಸಿಕ್ಕಿರಲಿಲ್ಲ. ನಮಗೆ ಕ್ರಿಸ್‌ಮಸ್ ರಜೆ ಬಂದುದರಿಂದ ನನ್ನ ಪ್ರೇಮಮಯಿಯ ಭೇಟಿಗಾಗಿ ಸಿದ್ಧತೆ ನಡೆಸುತ್ತಿದ್ದೆ. ಎಂಟು ದಿವಸಕ್ಕೆ ಮೊದಲೇ ಬರುವೆನೆಂದು ಪತ್ರ ಬರೆದು ಹಾಕಿದೆ. ನನಗೆ ಮನೆಗೆ ಹೊರಡುವ ಆ ಲಾಲಸೆಯಿಂದ ದಿನಗಳು ಮಾಸಗಳಾಗಿ ಪರಿಣಮಿಸಿದವು. ನನ್ನ ಮನದನ್ನೆ ಮೋಹನೆಯನ್ನು ನೋಡುವೆನಲ್ಲಾ ಎಂಬ ಕಾತುರತೆಯಿಂದ ಎರಡು ದಿನ ನಿದ್ರೆಯೇ ಬರಲಿಲ್ಲ. ನನ್ನ ಸ್ಮೃತಿಪಥದಲ್ಲಿ ಈ ಧ್ಯಾನವೇ ಚಿರಸ್ಥಾಯಿಯಾಗಿ ನೆಲೆಸಿಬಿಟ್ಟಿತ್ತು. ಆದರೆ ಜಗನ್ನಿಯಾಮಕನ ಸೃಷ್ಟಿಯಲ್ಲಿ ಒಬ್ಬೊಬ್ಬನಿಗೆ ಒಂದೊಂದು ವಿಧದ ಕೊರತೆ ಇದ್ದೇ ಇರುವುದು ತಾನೆ? ಅದೇ ಹಣದ ಅಭಾವ. ಇದನ್ನು ಯೋಚಿಸುವಾಗ ನಾನು ಮಾಡುತ್ತಿದ್ದ ಯೋಜನೆಯೆಲ್ಲ ಗಾಳಿಗೋಪುರದಂತೆ ಮಾಯವಾಗುತ್ತಿತ್ತು. ಇದೊಂದು ಮಹತ್ಕಾರಣದಿಂದಲೇ ಹೆಂಡತಿಯ ದರ್ಶನಕ್ಕೆ ಇಷ್ಟು ವಿಳಂಬ. ಈ ಮೊದಲು ನನಗೆ ಮನೆಗೆ ಬರುವ ಅವಕಾಶವಿತ್ತು. ನನ್ನಾಕೆಯಂತೂ ನನ್ನನ್ನು ನೋಡಬೇಕೆಂಬ ಕಾತುರತೆಯನ್ನು ವಿವಿಧ ರೀತಿಯ ಪ್ರೇಮಪತ್ರಗಳಿಂದ ಬರೆದು ಸೂಚಿಸಿದ್ದಳು. ಆಗಲೂ ನನ್ನ ಮನೋರಮೆಯನ್ನು ಸಂಧಿಸಲು ಅಡ್ಡನಿಂತದ್ದು ಈ ಹಣ. ಏನೇ ತೊಂದರೆ ಬಂದರೂ ಈ ಸಾರಿ ನನ್ನ ಪ್ರಿಯೆಯ ಬಳಿ ಸಾರದಿರೆನೆಂದು ಖಂಡಿತ ಮನಸು ಮಾಡಿ ನನ್ನ ಪ್ರಯಾಣಕ್ಕೆ ಪ್ರಿಪರೇಶನ್ (ಸಿದ್ಧತೆಗಳು) ಮಾಡತೊಡಗಿದೆ. ಸಿದ್ಧತೆಗಳು ಎಂದು ಹೇಳುವಾಗ ನಗೆ ಬರಬಹುದು. ಆದರೆ ನಾನು ಹೋಗುತ್ತಿರುವದು ಮೊದಲನೇ ಸಾರಿ. ಪತ್ನಿಯ ಮನವನ್ನೊಲಿಸಿಕೊಳ್ಳಲು ತಕ್ಕ ಸಾಧನಗಳು ಬೇಡವೇನು? ಆದ್ದರಿಂದ ತೆಗೆದುಕೊಂಡು ಹೋಗಬೇಕಾದ ಸಾಮಾನುಗಳ ಪಟ್ಟಿ ಹಾಕಿದೆ. ಒಂದು ಫಸ್ಟ್ ಕ್ಲಾಸ್ ಸೀರೆ ತೆಗೆದುಕೊಂಡು ಹೋಗೋಣವೆನಿಸಿತು. ಮರುಕ್ಷಣವೇ ಛೇ, ಸೀರೆ ತೆಗೆದುಕೊಂಡು ಹೋಗಿ ಪ್ರಯೋಜನವೇನು? ನಾಲ್ಕು ದಿನ ಅದನ್ನು ಪಟ್ಟಾಗಿ ಉಟ್ಟರೆ ತೀರಿತು. ಅಲ್ಲಿ ನಾನಿರುವದು ಅಲ್ಪ ಸಮಯ. ನನ್ನ ಲಲಿತೆ ಮನೆಗೆ ಬಂದಾಗ ಆ ಶೋಕುಗಳು ಎಂದು ನಿರ್ಧರಿಸುವೆ. ಅಂತೂ ಎರಡು ಮೂರು ಪಟ್ಟಿ ಹಾಕಿ ಹರಿದು ಹಾಕಿದೆ. ಕೊನೆಗೆ ನನ್ನ ಹೆಂಡತಿಗೆ ಕಾಂಥರ್ ಡೀನ್ ಹೇರ್ ಆಯಿಲ್, ನನ್ನ ಭಾವಚಿತ್ರ, ಒಂದು ಫೌಂಟನ್‌ಫೆನ್ ಅಲ್ಲದೆ ನಾನು ನಿತ್ಯ ಮನೆಯಲ್ಲಿ ಸೀಗೆ ಕಾಯಿ ಮೈಗೆ ಹಾಕುತ್ತಿದ್ದೆನಾದರೂ ಒಂದು ಪೆಟ್ಟಿಗೆ ಸ್ಯಾಂಡಲ್ ಸೋಪ್, ಮಸಿಯಿಂದ ಹಲ್ಲುಜ್ಜುತ್ತಿದ್ದೆನಾದರೂ ಒಂದು ನೀಮ್ ಟೂತ್ ಫೇಸ್ಟ್ ತಂದೆ. ಹೆಂಡತಿಯ ದೃಷ್ಟಿಯಲ್ಲಿ ಅಪ್‌ಟುಡೇಟ್ ಗಂಡನೆನಿಸಿಕೊಳ್ಳಬೇಕೆಂದು ಎರಡು ಶಿಲ್ಕು ಶರಟುಗಳನ್ನು ಹೊಲಿಸಿದೆ. ಹೀಗೆ ನನ್ನ ಪ್ರಯಾಣ ಸಿದ್ಧತೆಗಳು ಭರದಿಂದ ನಡೆದಂತೆ ಕೈಯಲ್ಲಿದ್ದ ಕಾಸಿನ ಗಂಟು ಕ್ಷಯಿಸುತ್ತಾ ಬಂದದರಲ್ಲೇನು ಆಶ್ಚರ್ಯ?

ಶಾಲೆಗೆ ರಜೆ ಸಿಕ್ಕಿತು. ಬೆಳಿಗ್ಗೆ ಎದ್ದ ಹಾಗೆ ನನ್ನ ಸಾಹಿತ್ಯಗಳೊಡನೆ ಹೋಗಿ ಟ್ರೈಯಿನ್ ಹತ್ತಿದೆ. ರೈಲು ಅಂಬರಕ್ಕೆ ಧೂಮವನ್ನು ಚೆಲ್ಲುತ್ತಾ ಮುಂದೆ ಹೊರಟಿತು. ರೈಲು ಬಂದು ತಲಪಿತು. ನಾನು ರೈಲಿನಿಂದಿಳಿದೆನು ಸಾಯಂಕಾಲ ಒಂಭತ್ತು ಗಂಟೆಯಾಗಿತ್ತು. ದುರ್ದೈವವಶಾತ್ ಟ್ರೈನು ತಡವಾಗಿ ಬಂದದ್ದರಿಂದ ಮಾವನವರು ಕಾದು ಕಾದು ಬೇಸತ್ತು ಬರುತ್ತಾನೋ ಇಲ್ಲವೋ ಎಂಬ ಸಂಶಯದಿಂದ ಹಿಂದಕ್ಕೆ ಹೋಗಿರಬೇಕು. ಕಗ್ಗತ್ತಲೆಯು ಆಗಲೇ ಮುಸುಕಿತ್ತು. ಮಾವನವರ ಮನೆ ಹುಡುಕಿಕೊಂಡು ಹೊರಟೆ ಅಂದವಾದ ತಾರು ಹಾಕಿದ ರಸ್ತೆಯಲ್ಲಿ ಓಡಾಡುತ್ತಿದ್ದ ನನಗೆ ಆ ಹಳ್ಳಿ ದಾರಿಯು ಸಾಕುಸಾಕೆನಿಸಿತು ಅಂತೂ ನನ್ನಾಕೆಯನ್ನು ಕಾಣುವ ಆ ಹಂಬಲ. ಮುಂದುವರಿಯುತ್ತಿದ್ದೆ. ಮನಸಿನಲ್ಲಿ ವಿಚಾರತರಂಗಗಳೆದ್ದು ನಾನಾ ಬಗೆಯ ಕಲ್ಪನೆಗಳನ್ನುಂಟುಮಾಡಿದವು. ದಾರಿಯುದ್ದಕ್ಕೂ ಅವಳ ಯೋಚನೆಯೇ. ಅವಳೊಡನೆ ಮಾತಾಡುವುದೆಂತು, ಏನು ವಿಚಾರ ಪ್ರಸ್ತಾಪಿಸಬೇಕು, ಎಂಬೀ ವಿಚಾರಣೆಯಿಂದ ಈ ನಿರ್ಧಾರಕ್ಕೆ ಬಂದೆ. ಅಪರೂಪವಾಗಿ ನಾನು ಮಾವನ ಮನೆಗೆ ಹೋಗುತ್ತಿರುವದರಿಂದ ನನಗೆ ಒಂದು ಪ್ರತ್ಯೇಕ ಕೋಣೆ ಬಿಟ್ಟುಕೊಡುತ್ತಾರೆ. ನನ್ನ ಹೆಂಡತಿಯು ನನ್ನನ್ನು ನಾಚಿಕೆಯಿಂದ ಬಂದು ಮಾತಾಡಿಸದಿದ್ದರೂ ಕಾಫಿ ತಿಂಡಿ ಕೊಡಲಿಕ್ಕಾದರೂ ಬಂದೇ ಬರುವಳು. ಹೋಗುತ್ತಲೇ ಊಟವಾದ ಮೇಲೆ ತಾಂಬೂಲ ತಟ್ಟೆಯನ್ನೂ, ಬಟ್ಟಲಲ್ಲಿ ಹಾಲನ್ನೂ ತಂದು ಮೇಜಿನ ಮೇಲಿಟ್ಟು ನಸುನಗೆಯಿಂದ ಹೊರಗೆ ಹೋಗಲು ಉದ್ಯುಕ್ತಳಾಗುವಳು. ಆಗ ನಾನು ಬಾ ಕುಳಿತುಕೋ ಎಂದು ಅವಳ ಕೈಹಿಡಿದೆಳೆದು ತಂದ ಸಾಮಾನುಗಳನ್ನು ಕೊಟ್ಟರೆ ಹಸನ್ಮುಖಳಾಗುತ್ತಾಳೆ. ನಂತರ .... ಇಷ್ಟು ಯೋಚನೆಗಳಾಗುವಾಗ ಮಾವನವರ ಮನೆಯ ಮುಂದೆ ಬಂದಿದ್ದೆ. ಹೋಗಿ ತಲಪುತ್ತಲೇ ಮನೆಯವರೆಲ್ಲರೊಡನೆ ಕುಶಲ ಪ್ರಶ್ನೆಗಳು ಆದವು. ನಂತರ ಉಪಚಾರಾದಿಗಳೂ ಆಯಿತು. ನಾನು ನಿರೀಕ್ಷಿಸಿದಂತೆಯೇ ಲಲಿತೆಯೇ ಹಾಲು ತಾಂಬೂಲಗಳನ್ನು ತಂದಳು. ಎಲ್ಲವೂ ನಾನು ಯೋಚಿಸಿದಂತೆಯೇ ನಡೆಯಿತು.

ಇಷ್ಟರಲ್ಲಿ ಗಂಟೆ 12 ಬಾರಿಸಿತ್ತು. ಇಬ್ಬರೂ ನಿದ್ರಾಂಗನೆಯ ಪರವಶರಾದೆವು. ಕೆಲವೇ ನಿಮಿಷಗಳಲ್ಲಿ ನನಗೆಚ್ಚರವಾಯಿತು. ಎದ್ದು ಕುಳಿತೆ. ಕಿಟಕಿಯಿಂದ ಹೊರಗಿನ ಪ್ರಶಾಂತವಾತಾವರಣವು ಕಾಣಿಸುತ್ತಿತ್ತು. ಗಂಭೀರವಾದ ರಾತ್ರಿ. ತಾರೆಗಳು ಮೆಲುಮೆಲನೆ ಮಿನುಗುತ್ತಿದ್ದವು. ಕೆಲವು ಕರಿಮೋಡಗಳು ತೇಲಿ ತೇಲಿ ಹೋಗುತ್ತಿದ್ದವು. ರಾತ್ರಿಯು ಅತೀ ನಿಶ್ಶಬ್ಧವಾಗಿತ್ತು. ಆಕಾಶದ ವೈಭವವೂ, ನಕ್ಷತ್ರಗಳ ಮಿನ್ಕು ಮಿನ್ಕು ಪ್ರಭೆಯೂ ನನ್ನ ಕಣ್ಣುಗಳನ್ನು ಆಕರ್ಷಿಸಿದವು. ತೇಲಿ ಹೋಗುತ್ತಿದ್ದ ಕಾರ್ಮೋಡಗಳು ತಂಗಾಳಿಯಂತೆ ನನ್ನ ಮನಸ್ಸಿನ ಮೇಲೆ ಬೀಸಿದವು. ಅತೀ ನೀಲಗಗನದ ವಿಸ್ತಾರದಲ್ಲಿ ನನ್ನ ಮನಸ್ಸು ಸೂರೆಗೊಂಡಿತು. ಯೋಚನಾ ತರಂಗಗಳು ಮುಂದೋಡಿದಂತೆ ಪ್ರಪಂಚದ ಮೇಲಿನ ಈ ಮಾನವ ಜೀವಿಯು ಅತ್ಯಂತ ಅಗಾಧ ವಿಶ್ವದಲ್ಲಿ ಎಷ್ಟು ಕ್ಷುದ್ರ ಜೀವಿ ಎಂದೆನಿಸಿತು. ಮಾನವನ ಹೊಯ್ದಾಟಗಳು, ಜೀವನದ ಸುಖದುಃಖಗಳ ಅನುಭವಗಳು, ಇವೆಲ್ಲಾ ಕ್ಷಣಿಕವಾದವು. ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳು ಸೂರ್ಯನಿಗಿಂತ ನೂರಾರು ಪಾಲು ದೊಡ್ಡದಿರುವಾಗ ಅತೀ ದೊಡ್ಡ ವಿಶ್ವದಲ್ಲಿ ಧೂಳಿನ ಕಣದಂತೆ ತೇಲಾಡುತ್ತಿರುವ ಈ ಭೂಗ್ರಹಣದಲ್ಲಿ ಹುಟ್ಟಿ ಜೀವಿ ಮನುಷ್ಯ! ಈ ಮಾನವನು ಈ ಕ್ಷಣಿಕ ಸುಖಕ್ಕಾಗಿ ಮಾಡುತ್ತಿರುವ ಕೃತ್ಯಗಳೇನು? ತಾವೇ ಚಿರಂಜೀವಿಗಳೆಂದು ಭಾವಿಸಿ ಮೆರೆದಾಡುವ ಮಾನವರೆಷ್ಟು? ಧನ ಮದದಿಂದ ಮಾನವ ಸಮೂಹವನ್ನೇ ಮನನೋಯಿಸುವ ಮದಾಂಧರೆಷ್ಟು? ಈ ವಿಶಾಲ ಜಗತ್ತಿನ ನಿಯಾಮಕನ ಕೃಪೆಗೆ ಪಾತ್ರರಾಗದೆ, ಆ ವಿಚಾರ ಚಿಂತಿಸದೆ, ವಿಶಾಲ ವಿಶ್ವದ ಮಹಿಮೆಯನ್ನರಿಯದೆ ತೊಳಲಿ ಬಳಲುವರೆಷ್ಟು? ಎಂಬಷ್ಟು ದೂರ ನನ್ನ ಮನವು ಓಡಿತು. ಇದನ್ನೆಲ್ಲಾ ಯೋಚಿಸಿ ದಿಗ್ಭ್ರಾಂತನಾದ ನನ್ನ ಬಾಯಿಯಿಂದ 'ಅಬ್ಬಾ! ಏನಿದೀ ವಿಶ್ವ' ಎಂಬ ಮಾತುಗಳು ತನ್ನಷ್ಟಕ್ಕೆ ಹೊರಬಿದ್ದವು.

ಪಕ್ಕದಲ್ಲಿದ್ದ ನನ್ನ ಪ್ರಾಣೇಶ್ವರಿಯು ಎಚ್ಚರಗೊಂಡು 'ಅದೇನು ನೀವು ಕನವರಿಸುತ್ತಿದ್ದುದು'? ಎಂದು ಕೇಳಿದಳು.

'ಏನೂ ಇಲ್ಲ, ನೀನೇ ನನ್ನ ವಿಶ್ವವೆನ್ನುತ್ತಿದ್ದೆ' ಎಂಬ ಪ್ರೇಮಮಯವಾದ ಉತ್ತರವು ತನ್ನಿಂದ ತಾನೇ ನನ್ನ ಬಾಯಿಯಿಂದ ಹೊರಬಂತು. ಲಲಿತೆಯನ್ನೊಮ್ಮೆ ಮುದ್ದಿಸಿದೆನು. ಆಕೆಯಾದರೂ ಸುಮ್ಮನೆ ಬಿಡಲಿಲ್ಲ ನನ್ನನ್ನು.....ಮುಯ್ಯಿಗೆ ಮುತ್ತು ಕೊಟ್ಟಳು. ಪುನಃ ಮಲಗಿದೆ

ಇತಿಹಾಸ ಪ್ರಸಿದ್ಧ ತ್ರಿಪುರಾಧಿವೇಶನ.

ಮುಂದಿನ ಅಧಿವೇಶನ ಡಿಸೆಂಬರಿನಲ್ಲಿ. ಕೂಡುವ ಸ್ಥಳ ಬಿಹಾರ್‌ನಲ್ಲಿ.

ಗಾಂಧೀಯವರು ಕಾಂಗ್ರೆಸಿನ ಕಡಿವಾಣ ಕೈಯಲ್ಲಿ ಹಿಡಿಯಬೇಕು. ಅವರ ಅಭಿಪ್ರಾಯದಂತೆ ವರ್ಕಿಂಗ್ ಕಮಿಟಿಯು ನೇಮಕವಾಗಬೇಕು. ಸಂಸ್ಥಾನಗಳ ಚಳವಳಿಕ್ಕೆ ಕಾಂಗ್ರೆಸು ಸಹಾಯ ನೀಡಬೇಕು. ಕಾಂಗ್ರೆಸಿನ ಅಂತರ್ಗತ ಕೊಳೆಯನ್ನು ಕಿತ್ತೊಗೆಯಬೇಕು. ಫೆಡರೇಶನನ್ನು ತೀವ್ರ ಖಂಡಿಸಿ ಪೂರ್ಣ ಸ್ವಾತಂತ್ರ ಪಡೆಯಬೇಕು. ಬ್ರಿಟಿಷರ ವಿದೇಶ ನೀತಿಯು ಖಂಡಿಸಲ್ಪಡಬೇಕು. ದಕ್ಷಿಣ ಆಫ್ರಿಕವೇ ಮೊದಲಾದಲ್ಲಿರುವ ಭಾರತೀಯರ ಹಿತಸಾಧನೆಯನ್ನು ಮಾಡಬೇಕು. ಎಲ್ಲರೂ ದೇಶಹಿತಕ್ಕೆ ಒಗ್ಗಟ್ಟಾಗಬೇಕು.

ಈ ತಾ. 11 ರಲ್ಲಿ ತ್ರಿಪುರಿ ಬೆಟ್ಟಗಳ ಕೆಳಗೆ ನಿರ್ಮಿಸಿದ್ದ ಆ ರಮ್ಯವಾದ ವಿಷ್ಣುದತ್ತ ನಗರದ ವಾತಾವರಣದಲ್ಲಿ ಕಾಂಗ್ರೆಸ್ ಮಹಾ ಅಧಿವೇಶನವು ಸೇರಿತು. ಎರಡು ಲಕ್ಷಕ್ಕೆ ಮೀರಿ ನೆರೆದಿದ್ದ ಆ ಜನತೆಯ ಸಮೂಹವು ಮಹಾ ಮಾನವ ಸಾಗರದಂತೆ ಕಂಗೊಳಿಸುತ್ತಿತ್ತು. ಜನತೆಗೆ ನಿಲ್ಲಲು ಸ್ಥಳವಿಲ್ಲದ ಬೆಟ್ಟಗುಡ್ಡ, ಮರ ಕೊಂಬೆಗಳಲ್ಲೂ ಸಹ ಕಿಕ್ಕಿರಿದು ನೆರೆದಿದ್ದರು. ಅಧ್ಯಕ್ಷ ಪೀಠದ ಮುಂದುಗಡೆ ನೇಗಿಲನ್ನು ಹಿಡಿದ ರೈತನ ಅಪೂರ್ವವಾದೊಂದು ಪ್ರತಿಮೆಯು ವ್ಯವಸಾಯದಿಂದ ಜೀವಿಸುವ ಈ ದೇಶದ ವ್ಯವಸಾಯಗಾರರು ಇಂದು ಸ್ವಾತಂತ್ರ್ಯವನ್ನು ಪಡೆಯಲು ಮುಂದಾಗಿರುವರೆಂಬ ಕುರುಹನ್ನು ಸೂಚಿಸುವಂತಿತ್ತು.

ಈಜಿಪ್ಟಿನಿಂದ ನಮ್ಮ ಆಹ್ವಾನ ಪತ್ರಿಕೆಯನ್ನು ಮನ್ನಿಸಿ ಬಂದಿದ್ದ ಪ್ರತಿನಿಧಿಗಳನ್ನು ಅತ್ಯಾದರದಿಂದ ಸ್ವಾಗತಿಸಿಕೊಳ್ಳಲಾಯಿತು. ಒಂದು ವ್ಯಸನಸೂಚಕ ಚಿಹ್ನೆಯೆಂದರೆ ಕಾಂಗ್ರೆಸಿನ ಚರಿತ್ರೆಯಲ್ಲಿ ಎಂದೂ ಕಂಡರಿಯದಂಥಾ ಘಟನೆ. ಅದೇ ಅಧ್ಯಕ್ಷರಾದ ಸುಭಾಷರು ತಮ್ಮ ಕಾಯಿಲೆಯ ನಿಮಿತ್ತ ಅಧ್ಯಕ್ಷತೆಯನ್ನು ವಹಿಸಲು ಅಸಮರ್ಥರಾದದ್ದು. ಆದ್ದರಿಂದ ಕಾಂಗ್ರೆಸಿನ ಪಿತಾಮಹರಂತಿರುವ ಶ್ರೀ ಅಬುಲ್ ಕಲಾಮ್ ಆಝಾದರು ಅಧ್ಯಕ್ಷತೆಯನ್ನು ವಹಿಸಬೇಕಾಯಿತು. 'ವಂದೇ ಮಾತರಂ' ರಾಷ್ಟ್ರ ಗೀತೆಯಾದ ಮೇಲೆ ಅಧಿವೇಶನ ಪ್ರಾರಂಭವಾಯಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಸೇಠ್ ಗೋವಿಂದದಾಸರು ತಮ್ಮ ಅರ್ಥಗರ್ಭಿತ ಭಾಷಣವನ್ನು ಮಾಡಿದರು. ಆಚಾರ್ಯ ನರೇಂದ್ರ ದೇವರವರು ಅಧ್ಯಕ್ಷ ಭಾಷಣವನ್ನು ಹಿಂದೀಯಲ್ಲಿ ಓದಿದರು. ಶ್ರೀ ಶರತ್‌ಚಂದ್ರ ಬೋಸರು ಅದನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿ ಹೇಳಿದರು. ಜಯಜಯಕಾರದಿಂದೊಡಗೂಡಿ ಪ. ಜವಾಹರಲಾಲರು ಈಜಿಪ್ಟಿನ ಡೆಲಿಗೇಟರುಗಳಿಗೆ ಸ್ವಾಗತವನ್ನು ಕೊಟ್ಟರು. ಡೆಲಿಗೇಟರುಗಳ ಮುಖಂಡರು ಅರಬಿಯ ಭಾಷೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಒಂದು ಸಂಸ್ಥೆಯು ಭಿನ್ನಾಭಿಪ್ರಾಯದಿಂದ ವರ್ತಿಸುವದು ಶುಭ ಚಿಹ್ನೆಯಲ್ಲವೆಂದೂ, ಉದಾಹರಣೆಗಾಗಿ ಈಜಿಪ್ಟು ಇಂದು ಸ್ವಾತಂತ್ರ್ಯ ಭಾಗ್ಯಾಕಾಶದಲ್ಲಿ ಮೆರೆಯುತ್ತಿದ್ದರೆ ಅದು ಅವರ ಒಗ್ಗಟ್ಟಿನ ಕುರುಹೆಂದೂ ಸೂಚಿಸುವ ಒಂದು ಭಾಷಣವನ್ನಿತ್ತರು. ಅದನ್ನು ಅವರಲ್ಲೇ ಮತ್ತೊಬ್ಬರು ಇಂಗ್ಲಿಷಿನಲ್ಲಿ ಹೇಳಿದರು. ನಂತರ ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆದು ನಿಧನ ಹೊಂದಿದ ಕೆಚ್ಚೆದೆಯ ವೀರರ ಹಾಗೂ ತ್ಯಾಗಿಗಳ ಬಗ್ಗೆ ದುಃಖ ಸೂಚಕ ಠರಾವುಗಳಾದವು.

ಕಾಂಗ್ರೆಸ್ ಪ್ರಧಾನಾಮಾತ್ಯರಲ್ಲೊಬ್ಬರಾದ ಶ್ರೀ ಗೋವಿಂದವಲ್ಲಭ ಪಂತರು ಕಳೆದ ಇಪ್ಪತ್ತು ವರ್ಷಗಳಿಂದಲೂ ಗಾಂಧೀಜಿಯವರ ನೇತೃತ್ವದಲ್ಲಿ ಸೂಸೂತ್ರವಾಗಿ ಮುನ್ನಡೆದಿರುವ ಕಾಂಗ್ರೆಸಿನ ಮೂಲ ತತ್ವಗಳೇ ಪಾಲಿಸಲ್ಪಡಬೇಕೆಂದೂ, ಈ ತತ್ವಗಳನ್ನೊಡೆದು ಹಾಕುವುದು ಸರಿಯಲ್ಲವೆಂದೂ, ಇವುಗಳನ್ನನುಸರಿಯೇ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳು ಕಟ್ಟಲ್ಪಡಬೇಕೆಂದೂ, ಕಳೆದ ವರ್ಷದ ವರ್ಕಿಂಗ್ ಕಮಿಟಿಯ ಕೆಲಸವನ್ನು ಸಭೆಯು ಹೊಗಳುವುದಲ್ಲದೆ ಆ ಮೆಂಬರುಗಳಲ್ಲಿ ತಮಗೆ ಪೂರ್ಣ ವಿಶ್ವಾಸವಿದೆಯೆಂದೂ, ಮತ್ತು ರಾಜಕೀಯ ವಾತಾವರಣದ ಈ ಬಿಕ್ಕಟ್ಟಿನಲ್ಲಿ ಈ ವರ್ಷ ಕಾಂಗ್ರೆಸಿನ ಕಡಿವಾಣವನ್ನು ಮಹಾತ್ಮ ಗಾಂಧಿಯವರಿಗೆ ಕೊಡಬೇಕೆಂದೂ, ಗಾಂಧೀಯವರೊಬ್ಬರೇ ಜನಾಂಗವನ್ನು ಸುಗಮವಾದ ಹಾದಿಯಲ್ಲಿ ಕೊಂಡೊಯ್ಯಲು ಸಮರ್ಥರೆಂದೂ, ಆದ್ದರಿಂದ ವರ್ಕಿಂಗ್ ಕಮಿಟಿಯನ್ನು ನೇಮಕ ಮಾಡುವಾಗ ಅಧ್ಯಕ್ಷರು ಗಾಂಧಿಜೀಯವರ ಇಚ್ಛೆಯಂತೆ ವರ್ತಿಸಬೇಕೆಂದೂ ಅರ್ಥವನ್ನು ಕೊಡುವ ಠರಾವನ್ನು ಮಂಡಿಸಿದರು. ಅಮೋಘ ಚರ್ಚೆಯಾಯಿತು. ಇದಕ್ಕೆ ಅನೇಕ ತಿದ್ದುಪಡಿಗಳು ಸೂಚಿಸಲ್ಪಟ್ಟವು. ಒಂದು ಸಂದರ್ಭದಲ್ಲಿ ಬಂಗಾಳ ಡೆಲಿಗೇಟರುಗಳು ರೊಚ್ಚಿಗೆದ್ದು ಕೋಲಾಹಲವೆಬ್ಬಿಸಿದರು. ಅಂತೂ ತಿದ್ದುಪಡಿಗಳೆಲ್ಲಾ ತಿರಸ್ಕೃತವಾಗಿ ಠರಾವು ಬಹುಮತದಿಂದ "ಮಹಾತ್ಮ ಗಾಂಧೀಕೀ ಜೈ" ಎಂಬ ಘೋಷಣೆಯೊಡನೆ ಪಾಸಾಯಿತು.

ಸೋಸಿಯಾಲಿಸ್ಟ್ ಪಾರ್ಟಿಯ ಸೆಕ್ರೆಟರಿಯವರಾದ ಶ್ರೀ ಜಯಪ್ರಕಾಶ ನಾರಾಯಣರು ದೇಶದ ಅರ್ಥಾತ್ ಕಾಂಗ್ರೆಸಿನ ಮೂಲ ಧ್ಯೇಯದ ಬಗ್ಗೆ 1935 ನೇ ಆಕ್ಟು ಯಾವ ತರಹದ ಅಧಿಕಾರವನ್ನೂ ಕೊಡಲಾರದಾದ್ದರಿಂದ ಅದನ್ನು ಖಂಡಿಸಿರುವದೆಂದೂ, ಈಗ ಜಾರಿಗೆ ತರಲಿರುವ ಫೆಡರೇಶನಿನ ವಿಚಾರ ಕಾಂಗ್ರೆಸು ತನ್ನ ಕ್ಲುಪ್ತವಾದ ಧೋರಣೆಯನ್ನು ಮೊದಲೇ ವ್ಯಕ್ತಪಡಿಸಿದೆಯೆಂದೂ, ಈಗ ನಮ್ಮ ಮುಂದಿರುವ ಪ್ರಮುಖ ಪ್ರಶ್ನೆಯೆಂದರೆ ಪೂರ್ಣ ಸ್ವರಾಜ್ಯ ಸಾಧನೆಯೇ ಆಗಿದೆಯೆಂದೂ ವಿಶದಪಡಿಸಿ ಠರಾವನ್ನು ಮಂಡಿಸಿದರು. ಒಂದು ನಿಶ್ಚಿತ ಸಮಯದವರೆಗೆ ಸರ್ಕಾರಕ್ಕೆ ನಮ್ಮ ಕೋರಿಕೆಯನ್ನು ಸಲ್ಲಿಸಲು ಅವಧಿಯನ್ನು ಕೊಟ್ಟು ನಂತರ ಮುಂದಿನ ಯೋಚನೆ ಮಾಡುವದು ಯುಕ್ತವೆಂಬರ್ಥದ ತಿದ್ದುಪಡಿಗಳು ಇದ್ದವು. ಆದರೆ ಅವೆಲ್ಲಾ ಅಂಗೀಕೃತವಾಗದೆ ಮೂಲ ಠರಾವೇ ಬಹುಮತದಿಂದ ಅಂಗೀಕೃತವಾಯಿತು.

ಕಾಂಗ್ರೆಸಿನಲ್ಲಿರುವ ಅಂತರ್ಗತ ಕೊಳೆಯನ್ನು ನಿವಾರಿಸುವ ವಿಷಯದ ಠರಾವನ್ನು ಶ್ರೀ ಜಯಪ್ರಕಾಶನಾರಾಯಣರು ಮುಂದಿಟ್ಟು ಕಾಂಗ್ರೆಸಿನಲ್ಲಿ ಹೆಸರಿಗೋಸ್ಕರ ಮೆಂಬರುಗಳಿದ್ದರೆ ಅವರಿಂದ ಕಾಂಗ್ರೆಸಿನ ಧ್ಯೇಯಸಾಧನೆಯಾಗಲಾರದೆಂದೂ, ಅಧಿಕಾರ ಲಾಲಸೆಯಿಂದ ಮಾಡುವ ಈ ಕೃತ್ಯವು ನಿಲ್ಲಿಸಲ್ಪಡಬೇಕೆಂದೂ ಸೂಚಿಸಿದರು. ಠರಾವು ಬಹುಮತದಿಂದ ಪಾಸಾಯಿತು.

ಬ್ರಿಟಿಷ್ ಸಾರ್ವಭೌಮತ್ವವು ಬಲುಚಿಸ್ತಾನ ಹಾಗೂ ಪ್ಯಾಲೆಸ್ತಾನದಲ್ಲಿ ನಡೆಸುತ್ತಿರುವ ಅತ್ಯಾಚಾರಗಳನ್ನು ನಿಷೇಧಿಸಿ ಠರಾವುಗಳಾದವು. ನಂತರ ಪಂಡಿತ ಜವಾಹರಲಾಲರು ಬ್ರಿಟಿಷರ ವಿದೇಶ ನೀತಿಯನ್ನು ಖಂಡಿಸಿ, ಇಂದು ಭಾರತವು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಗಿ ಉಳಿದಿರುವುದರಿಂದ ಬ್ರಿಟಿಷರು ಅನುಸರಿಸುವ ಪರ ರಾಷ್ಟ್ರ ನೀತಿಯೇ ಭಾರತಕ್ಕೂ ಅನುಸರಿಸುವದೆಂದೂ, ಆದ್ದರಿಂದ ಭಾರತವು ಈ ವಿಚಾರ ಜಾಗೃತಿ ವಹಿಸಬೇಕೆಂದೂ ಹೇಳಿದಲ್ಲದೆ, ಬ್ರಿಟಿಷರು ತಮ್ಮ ಹಿತದೃಷ್ಟಿಯಿಂದ ಮಾಡಿದ ಝೆಕೋಸ್ಲೋವಾಕಿಯಾದ ಬಲಿ, ಚೈನಾದಲ್ಲಿಯ ಅವರ ಧೋರಣೆ, ಸ್ಪೈನಿನಲ್ಲಿ ಅವರು ಮಾಡುತ್ತಿರುವ ಕಾರ್ಯಕ್ರಮ ಇವುಗಳನ್ನು ಪರಿಶೀಲಿಸಿದರೆ ಭಾರತಕ್ಕೆ ಅವರ ಈ ವಿದೇಶ ನೀತಿಯಿಂದ ಹಿತವಾಗದೆಂದೂ, ಇಂದು ಜನಾಂಗಗಳ ಸಭೆಯು ಬರೀ ನಾಮಕವಾಸ್ತೆ ಸಂಸ್ಥೆಯೆಂದೂ ಹೇಳಿ ಠರಾವನ್ನು ಮಂಡಿಸಿದರು. ಠರಾವು ಬಹುಮತದಿಂದ ಪಾಸಾಯಿತು.

ಬಾಬು ರಾಜೇಂದ್ರ ಪ್ರಸಾದರು ಸಂಸ್ಥಾನಗಳ ವಿಚಾರದ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು. 'ಸಂಸ್ಥಾನಗಳ ಜನತೆಯ ಇಂದಿನ ಜಾಗೃತಿಯನ್ನು ಕಾಂಗ್ರೆಸು ಮನ್ನಿಸುವದಲ್ಲದೆ ಕೆಲವು ಸಂಸ್ಥಾನಗಳಲ್ಲಿ ಆಳರಸರು ಈ ಚಳವಳಿಯನ್ನು ಕುಗ್ಗಿಸಲು ಮಾಡುತ್ತಿರುವ ಅತ್ಯಾಚಾರಗಳನ್ನು ಕಾಂಗ್ರೆಸು ಖಂಡಿಸುತ್ತದೆ. ಮಹಾತ್ಮ ಗಾಂಧಿಯವರ ನೇತೃತ್ವದಿಂದ ರಾಜಕೋಟೆಯಲ್ಲಾದ ಸುಧಾರಣೆ ಕ್ರಮವು ಬೇರೆ ಆಶ್ರಿತ ಸಂಸ್ಥಾನಗಳಿಂದ ಅನುಸರಿಸಲ್ಪಡಬೇಕೆಂದೂ, ಕಳೆದ ಹರಿಪುರದಲ್ಲಾದ ಗೊತ್ತುವಳಿಯ ಮೇರೆ ಕಾಂಗ್ರೆಸ್ಸಿನ ಹೆಸರಿನಲ್ಲಿ, ಸಂಸ್ಥಾನಗಳಲ್ಲಿ ಕೆಲಸ ಮಾಡುವದು ಅಸಂಭವವಾಗಿತ್ತಾದ್ದರಿಂದ ಸಂಸ್ಥಾನಗಳ ಈ ಜಾಗೃತಿಯ ಸಮಯದಲ್ಲಿ ಕಾಂಗ್ರೆಸ್ ತನ್ನ ಸಹಾಯವನ್ನು ಕೊಡಲು ತಯಾರಿರುವದೆಂದೂ, ಈ ಬಗ್ಗೆ ಸಮಯೋಚಿತವಾಗಿ ಅಪ್ಪಣೆಗಳನ್ನು ಕೊಡಲು ವರ್ಕಿಂಗ್ ಕಮಿಟಿಗೆ ಅಧಿಕಾರ ಕೊಡಬೇಕೆಂದೂ, ಕಾಂಗ್ರೆಸ್ಸಿನ ಧ್ಯೇಯವಾದ ಸ್ವರಾಜ್ಯವು ಸಂಸ್ಥಾನಗಳನ್ನೊಳಗೊಂಡು ಇಡೀ ಭಾರತಕ್ಕೆ ಬರಬೇಕಾದ್ದರಿಂದ ಸಂಸ್ಥಾನಗಳ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಮತೀಯ ಸ್ವಾತಂತ್ರ್ಯದ ವಿಚಾರ ಬೇರೆ ಪ್ರಾಂತಗಳಂತೆಯೇ ಏಕದೃಷ್ಟಿ ಇಡಬೇಕು.' ಠರಾವು ಬಹುಮತದಿಂದ ಅಂಗೀಕೃತವಾಯಿತು.

ಇಂಡಿಯಾದಿಂದ ಹೊರಗಿನ ವಿದೇಶಗಳಲ್ಲಿರುವ ಭಾರತೀಯರ ವಿಚಾರದಲ್ಲಿ ಶ್ರೀ ಸತ್ಯಮೂರ್ತಿಯವರು ಸಿಲೋನ, ಬರ್ಮಾ, ಕೆನಿಯಾ ಮೊದಲಾದ ಪ್ರಾಂತಗಳಲ್ಲಿರುವ ಭಾರತೀಯರ ಬಗ್ಗೆ ಬ್ರಿಟಿಷರು ತೋರುತ್ತಿರುವ ಅಲಕ್ಷ್ಯ ಹಾಗೂ ಕ್ರೂರಾಚಾರಗಳನ್ನು ಖಂಡಿಸಿ ಭಾರತವು ಸ್ವತಂತ್ರವಾದಲ್ಲದೆ ಹೊರಗಿರುವ ತನ್ನ ಪುತ್ರರನ್ನು ರಕ್ಷಿಸುವದು ದುಸ್ತರವೆಂದೂ, ಆದರೂ ನಮ್ಮ ಕೈಯ್ಯಲ್ಲಾದ ಸಹಾಯ ಅವರಿಗೆ ನೀಡಬೇಕೆಂದು ಸೂಚಿಸುವ ಒಂದು ಠರಾವನ್ನು ಮಂಡಿಸಿದರು. ಠರಾವು ಬಹುಮತದಿಂದ ಪಾಸಾಯಿತು.

ಬರುವ ಅಧಿವೇಶನವು ಡಿಸೆಂಬರ್ ತಿಂಗಳಿನಲ್ಲಾಗಬೇಕೆಂದು ಪಂಡಿತ ಜವಾಹರಲಾಲರು ಸೂಚಿಸಿದ ಸೂಚನೆಯು ಅಂಗೀಕೃತವಾಯಿತು. ಬಾಬು ರಾಜೇಂದ್ರ ಪ್ರಸಾದರು ಅಧಿವೇಶನವು ಬಿಹಾರಿನಲ್ಲಿ ನಡೆಯಬೇಕೆಂದು ಕೇಳಿಕೊಂಡಿರುವರು. ಬಹುಶಃ ಅಲ್ಲೇ ನಡೆಯಬಹುದೆಂದು ಊಹಿಸಲಾಗಿದೆ.

ನಂತರ ಮಿಸೆಸ್ ಸರೋಜಿನಿ ನಾಯುಡುರವರು ಎಲ್ಲರಿಗೂ ವಂದನೆಗಳನ್ನರ್ಪಿಸಿ ತಮ್ಮಲ್ಲಿ ಉದಯಿಸಿದ್ದ ಭಿನ್ನಾಭಿಪ್ರಾಯವು ಬರೀ ಸಮುದ್ರದ ನೊರೆಯಂತೆ ಕ್ಷಣಿಕವೆಂದು ಭಾವಿಸಿ ಎಲ್ಲರೂ ಭಿನ್ನಾಭಿಪ್ರಾಯಗಳನ್ನು ಮರೆತು ಕಾಂಗ್ರೆಸಿನ ವರ್ಚಸ್ಸಿಗೆ ಸಹಕಾರಿಗಳಾಗಬೇಕೆಂದು ಭಾಷಣವಿತ್ತರು.

ಅಧ್ಯಕ್ಷರ ಭಾಷಣ ಹಾಗೂ ಸ್ವಾಗತಾಧ್ಯಕ್ಷರ ವಂದನೆಯಾದನಂತರ ಸಭೆಯು 'ಮಹಾತ್ಮಗಾಂಧಿಕೀ ಜೈ' 'ವಂದೇ ಮಾತರಂ' ಮೊದಲಾದ ರಾಷ್ಟ್ರಗೀತೆಗಳ ಜಯ ಜಯಕಾರದಿಂದ ಕೊನೆಗೊಂಡಿತು.

ಕೊಡಗು

ಮಾರ್ಚ್ ತಾರೀಕು ೧೨ ನೇ ಶುಕ್ರವಾರ ೧೯೩೭.

ಕೌನ್ಸಿಲಿನಿಂದ ಕಾಂಗ್ರೆಸ್ ಪಾರ್ಟಿಯ ಹೊರನಡೆತ.

ಕೊಡಗು ನ್ಯಾಯವಿಧಾಯಕ ಸಭೆಯ ಬಜ್ಜೆಟ್ ಅಧಿವೇಶನವು ತಾರೀಕು ೧೪, 15 ಮತ್ತು 16 ರಲ್ಲಿ ನಡೆಯಿತು. ಈ ಸಾರೆಯ ಮೀಟಿಂಗು ಕೆಲವೊಂದು ವಿಶೇಷಗಳಿಂದ ಶೀರ್ಷಿಕೆಗರ್ಹವಾಗಿದೆ. ಯಾವುದೊಂದು ನ್ಯಾಯವಿಧಾಯಕ ಸಭೆಯಾಗಲಿ, ಅಥವ ಇನ್ನಾವ ಸಂಸ್ಥೆಯೇ ಆಗಲೀ ಮೀಟಿಂಗಿನ ಕಾರ್ಯಕ್ರಮ ಪಟ್ಟಿಗಳನ್ನು ಮೂರು ದಿನಕ್ಕೆ ಮುಂದಾದರೂ ಮೆಂಬರರಿಗೆ ತಲುಪಿಸುವದು ನಿಯಮ. ಆದರೆ ನಮ್ಮ ಈ ನ್ಯಾಯವಿಧಾಯಕ ಸಭೆಯು ಕೊಡಗಿನ ಇತರ ಸಂಸ್ಥೆ ಹಾಗೂ ಸಭೆಗಳಿಗೆ ಮಾರ್ಗದರ್ಶಿಯಾಗಿದ್ದು ಸದಸ್ಯರಿಗೆ ಮೀಟಿಂಗಿನ ಕಾರ್ಯಕ್ರಮ ಪಟ್ಟಿಯನ್ನು ನಿಯಮಪ್ರಕಾರ ಮುಟ್ಟಿಸದೆ ತಪ್ಪು ಹೆಜ್ಜೆ ಇಟ್ಟದ್ದು ಖೇದಾಸ್ಪದ ಸಂಗತಿ. ಕಾರ್ಯಕ್ರಮ ಪಟ್ಟಿ ಇಲ್ಲದ್ದರಿಂದ ಮೀಟಿಂಗಿನಲ್ಲಿ ಭಾಗವಹಿಸಲು ತಾವು ತಯಾರಿಲ್ಲವೆಂದೂ, ಜನರ ಪ್ರತಿನಿಧಿಗಳಾಗಿ, ಜನಹಿತದೃಷ್ಟಿಯಿಂದ ಕಾರ್ಯನಡೆಸಲು ಕಾರ್ಯಕ್ರಮ ಪಟ್ಟಿಯಲ್ಲಿರುವ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಿಳಿಯದೆ ಸಭೆಯಲ್ಲಿ ಕೂತು ಹೋಗುವದರಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗಲಿಲ್ಲವೆಂದೂ ಒಂದು ದಿನಕ್ಕೆ ಮೊದಲೇ ಈ ಅವ್ಯವಸ್ಥೆಯ ಬಗ್ಗೆ ಅಧ್ಯಕ್ಷರಿಗೆ ತಾವು ಪತ್ರ ಬರೆದಿದ್ದರೂ ಅದಕ್ಕೆ ಉತ್ತರವೀಯದೆ ನಿರ್ಲಕ್ಷಿಸಿದ ಸರಕಾರದ ವರ್ತನೆಯನ್ನು ನಿಷೇಧಿಸಿಯೂ, ಮೀಟಿಂಗಿನಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಅಧಿವೇಶನವನ್ನು ಒಂದು ದಿನ ಮುಂದರಿಸಬೇಕೆಂದೂ ಕಾಂಗ್ರೆಸ್ ಸದಸ್ಯರು ಅಧ್ಯಕ್ಷರನ್ನು ಕೇಳಿಕೊಂಡರು. ಇದು ಸಕಾರಣವಾದದ್ದರಿಂದ ಅಧ್ಯಕ್ಷರು ಹಾಗೆ ಮಾಡಬಹುದಿತ್ತು. ಆದರೆ ಅಧ್ಯಕ್ಷರು ಇದನ್ನು ಉಪೇಕ್ಷಿಸಿದ್ದು ದೇಶಹಿತದೃಷ್ಟಿಯಿಂದ ಖಂಡನೀಯ. ಅದಕ್ಕೆ ತಮ್ಮ ನಿಷೇಧವನ್ನು ಸೂಚಿಸಿ ಕಾಂಗ್ರೆಸ್ ಪಾರ್ಟಿಯವರು ಮೀಟಿಂಗಿನಲ್ಲಿ ಸಹಕರಿಸದೆ ಸಭೆಯಿಂದ ಹೊರ ನಡೆದದ್ದು ಸಮಂಜಸವಿದೆ.

ಈ ಮೊದಲಿನ ಕೌನ್ಸಿಲು ಅಧಿವೇಶನದಲ್ಲಿ ಪಾಸುಮಾಡಿದ ಅನೇಕಾನೇಕ ದೇಶಹಿತೋಪಕಾರಕ ಠರಾವುಗಳ ಬಗ್ಗೆ ಚೀಫ್ ಕಮಿಷನರ ಅಪ್ಪಣೆಯನ್ನು ಮುಂದಿಟ್ಟಿದ್ದರು. ದುರ್ದೈವವಶಾತ್ ಯಾವ ಪ್ರಾಮುಖ್ಯ ಠರಾವೂ ಅಂಗೀಕರಿಸಿಲ್ಲವೆಂದ ಮೇಲೆ ಈ ಕೌನ್ಸಿಲಿನಲ್ಲಿ ಕಲೆತು ಮೀಟಿಂಗು ಮಾಡುವವರ ಉದ್ದಿಶ್ಯ ತಿಳಿಯದು. ಈ ಕಾರಣಕ್ಕಾಗಿಯೇ ಎರಡನೇ ದಿನ ಕಾಂಗ್ರೆಸ್ ಪಾರ್ಟಿಯವರು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿ, ಕೌನ್ಸಿಲಿನ ಕಾರ್ಯಕಲಾಪಗಳ ಬಗ್ಗೆ ಒಂದು ಪ್ರಕಟಣೆ ಹೊರಡಿಸಿ ಸಭೆಯಿಂದ ಎದ್ದು ಹೋದರು. ಕೌನ್ಸಿಲು ಸ್ಥಾಪಿತವಾದಂದಿನಿಂದ ಅಂದರೆ ಈ ಕಳೆದ ಹದಿನೈದು ವರ್ಷಗಳಿಂದ ಕೌನ್ಸಿಲು ಕೆಲಸ ಮಾಡುತ್ತಿದ್ದರೂ, ಒಂದೇ ಒಂದು ಹೇಳಿಕೊಳ್ಳಬಹುದಾದ ಹಿತಕಾರ್ಯವು ದೇಶದವರಿಗಾಗಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಈ ಕೌನ್ಸಿಲಿನ ಕಾರ್ಯಕ್ರಮಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಇದು ಒಂದು ಬರೀ ತೋರಿಕೆಯ ಚರ್ಚಾಸಭೆಯೆಂಬುದು ವಿಷದವಾಗುತ್ತದೆ. ಒಮ್ಮೆ ಮೀಟಿಂಗಿನಲ್ಲಿ ಅಧ್ಯಕ್ಷರಾಗಿ ಮೆಂಬರುಗಳೊಡನೆ ಕಲೆತು, ಅಲ್ಲಿ ಪಾಸಾದ ಗೊತ್ತುವಳಿಗಳನ್ನು ಚೀಫ್ ಕಮಿಷನರಾಗಿ ತಿರಸ್ಕರಿಸುವ ಈ ನಕಲೀ ವಿಚಾರಕ್ಕೆ ಏನೆನ್ನಬೇಕು. ಈ ನಟನೆಯಿಂದಾದರೂ ದೇಶಹಿತವೇನಾದೀತು? ತಮ್ಮ ಹಿತವನ್ನು ಸಾಧಿಸಿಯಾರು, ಅಧೋಗತಿಗಿಳಿದಿರುವ ನಮ್ಮನ್ನು ಉದ್ಧರಿಸಿಯಾರು ಎಂಬ ಭರವಸೆಯಿಂದ ಜನತೆಯು ಪ್ರಜಾ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವದಾಗಿದೆ. ಆದರೆ ಆ ಆಶೆಯು ನಿರಾಶೆಯೇ ಆಗಿದೆ. ಈ ಕೌನ್ಸಿಲಿನ ಮೂಲಕ ಸರಕಾರದವರು ತಮ್ಮ ನಿರಂಕುಶ ಅಧಿಕಾರವನ್ನಿಟ್ಟಿರುವಾಗ ಬಡ ಜನಾಭಿವೃದ್ಧಿಗಾಗಿ ಹೋರಾಡುವ ಬಡ ಜನರ ಪ್ರತಿನಿಧಿಗಳ ಪ್ರಯತ್ನವು ನಿಷ್ಫಲವಾಗಿದೆ, ಇಂಥಾ ತೋರಿಕೆಯ ಕೌನ್ಸಿಲಿನ ಪುರುಷಾರ್ಥವೇನಿರುವದೋ ತಿಳಿಯದು. ಆದ್ದರಿಂದ ಕಾಂಗ್ರೆಸ್ ಪಾರ್ಟಿ ಮೆಂಬರುಗಳು ಕೈಕೊಂಡ ವರ್ತನೆಯು ಶ್ಲಾಘನೀಯವಿದ್ದಿದೆ. ಈ ಕಳೆದ ಎರಡು ಅಧಿವೇಶನಗಳಲ್ಲಿ ಪಾಸಾದ ಠರಾವುಗಳಲ್ಲಿ ಪ್ರಾಮುಖ್ಯವಾದದ್ದೊಂದನ್ನೂ ಅಂಗೀಕರಿಸದೆ ತಿರಸ್ಕರಿಸಿರುವ ಈ ಸರಕಾರದ ಧೋರಣೆಯನ್ನು ನೋಡಿದರೆ ಕೌನ್ಸಿಲು ಜನೋಪಕಾರಿ ಸಂಸ್ಥೆಯು ಬದಲು ಜನಾಪಕಾರಿಯಾಗಿ ಮಾರ್ಪಟ್ಟಿದೆ. ಎರಡು ಅಧಿವೇಶನಗಳಿಗಾಗಿ ಖರ್ಚಾದ ಹಣವೆಷ್ಟು. ಠರಾವು ಒಂದಾದರೂ ಅಂಗೀಕರಿಸಲ್ಪಟ್ಟಿಲ್ಲವೆಂದರೆ ಪರೋಕ್ಷವಾಗಲ್ಲದಿದ್ದರೂ ಅಪರೋಕ್ಷವಾಗಿ ಈ ಖರ್ಚು ಬಡ ರೈತನ ತಲೆಯ ಮೇಲಲ್ಲವೇನು? ಚೀಫ್ ಕಮಿಷನರು ತಮ್ಮ ಅಧಿಕಾರ ಬಲದಿಂದ ಹೀಗೆ ಠರಾವುಗಳನ್ನು ತಿರಸ್ಕರಿಸುವದು ಖಂಡನೀಯ. ದೇಶಹಿತವನ್ನು ಸಾಧಿಸದೆ ಅಧಿಕಾರ ಚಲಾಯಿಸುವದು ರಾಜ ಧರ್ಮ ಸೂತ್ರವಲ್ಲ. ಹೀಗೆ ಪ್ರಜಾಹಿತದ ಬಗ್ಗೆ ಪಾಸಾದ ನಿರ್ಣಯಗಳನ್ನು ತಿರಸ್ಕರಿಸುವದರಿಂದ ಸರಕಾರವು ಜನಮತಕ್ಕೆ ಎಷ್ಟು ಮನ್ನಣೆಯನ್ನೀಯುತ್ತಿರುವದೆಂಬುದು ವ್ಯಕ್ತವಾಗುತ್ತದೆ. ದೇಶಹಿತವನ್ನು ಸಾಧಿಸುವ ಸರಕಾರ, ಜನತೆಯ ಹಿತಸಾಧನೆಯೇ ತನ್ನ ಮೂಲಧ್ಯೇಯವೆನ್ನುವ ಈ ಸರಕಾರವು ಹೀಗೆ ಜನರ ಹಿತಸಂರಕ್ಷಣೆಯ ಗೊತ್ತುವಳಿಗಳನ್ನು ಕಸದ ಬುಟ್ಟಿ ಕಾಣಿಸುವದು ಎಂದೂ ಅದಕ್ಕೆ ಶೋಭಿಸುವ ವಿಚಾರವಲ್ಲ. ಈ ವರೆಗೆ ಸರಕಾರದ ಧೋರಣೆಯನ್ನು ಕಾಂಗ್ರೆಸಿನವರು ಕೂಲಂಕುಷ ಪರಿಶೀಲಿಸಿರುವರು. ಅವರ ಈ ಅಸಹಕಾರ ದೇಶದಲ್ಲಿ ಹೊಸ ಹುರುಪನ್ನು ಉಂಟುಮಾಡದಿರಲಿಕ್ಕಿಲ್ಲ. ಆದ್ದರಿಂದ ಇನ್ನಾದರೂ ಸರಕಾರದವರು ತಮ್ಮ ಧೋರಣೆಯನ್ನು ಬದಲಾಯಿಸಿ ಜನ ಪ್ರತಿನಿಧಿಗಳ ಕೇಳಿಕೆಗೆ ಮಾನ್ಯತೆ ಕೊಟ್ಟು ಜನಹಿತವನ್ನು ಸಾಧಿಸುವರಾಗಿ ಆಶಿಸಲಾಗಿದೆ.

ಕಾಂಗ್ರೆಸ್ ಪಾರ್ಟಿಯ ಪರ

ಶ್ರೀ ಕೆ. ಸಿ. ಕರುಂಬಯ್ಯನವರು ಮಾಡಿದ ಪ್ರಕಟಣೆ.

"ಅಧ್ಯಕ್ಷರೇ, ಈಗ ನೀವು ಬಜ್ಜೆಟ್ ಠರಾವುಗಳನ್ನು ಚರ್ಚೆ ಬಗ್ಗೆ ಬಿಡುತ್ತಿರುವಿರಿ. ಅದಕ್ಕೆ ಮೊದಲು ನಾನು ಕಾಂಗ್ರೆಸ್ ಪಾರ್ಟಿಯ ಪರ ಒಂದು ಹೇಳಿಕೆಯನ್ನು ಮುಂದಿಡುವೆನು.

ಕೌನ್ಸಿಲು ಸ್ಥಾಪಿತವಾದಂದಿನಿಂದ ಈ ಸಭೆಯ ಮಾನ್ಯ ಮೆಂಬರುಗಳು ಸರಕಾರಕ್ಕೆ ಕೊಟ್ಟ ಸೂಚನೆಗಳೆಲ್ಲವನ್ನೂ ಸರಕಾರದವರು ಅಲಕ್ಷಿಸಿ ಉಪೇಕ್ಷಾವೃತ್ತಿಯಿಂದ ನೋಡುತ್ತಾ ಬಂದಿರುವರು. 1935 ನೇ ಆಕ್ಟನ್ನು ಪಾಸು ಮಾಡಿದ ಮೇಲೆ ಭಾರತದಲ್ಲೆಲ್ಲಾ ಆದ ಮತ್ತು ಆಗುತ್ತಿರುವ ಬದಲಾವಣೆಗಳು ನಮ್ಮ ಈ ಪ್ರಾಂತವಲ್ಲೂ ಬರಬಹುದೆಂದು ಆಶಿಸಿದ್ದೆವು. ಆದರೆ ನಮ್ಮ ದುರ್ದೈವದಿಂದ ಜನತೆಯ ಬೇಡಿಕೆಯ ಬಗ್ಗೆ ಸರಕಾರದ ಧೋರಣೆಯು ಒಂದಷ್ಟಾದರೂ ಮಾರ್ಪಡದೆ ನಿರಾಶೆಯುಂಟಾಗಿದೆ. ಈ ನಾಲ್ಕನೇ ಕೌನ್ಸಿಲಿನ ಪ್ರಥಮ ಅಧಿವೇಶನದಲ್ಲಿ ಪಾಸಾದ ಪ್ರಥಮ ಠರಾವೆಂದರೆ 1935 ನೇ ಆಕ್ಟಿನಲ್ಲಿ ಈ ಪ್ರಾಂತವನ್ನು ನಿಕೃಷ್ಟಭಾವದಿಂದ ನಿರ್ಲಕ್ಷಿಸಿದ ಸರಕಾರದ ಧೋರಣೆಯ ಖಂಡನೆ. ನಂತರವೂ ಈ ಸಭೆಯ ಮಾನ್ಯ ಮೆಂಬರುಗಳು ಸಿಬ್ಬಂದಿ ಖೋತೆಯ ಬಗ್ಗೆ ಸರಕಾರವು ತಲೆಭಾರದ ಆಡಳಿತವನ್ನು ಇಟ್ಟುಕೊಂಡು ಸಣ್ಣ ಉದ್ಯೋಗಸ್ಥರನ್ನು ತೆಗೆಯುವ ಅವರ ಯೋಜನೆಯನ್ನು ನಿಷೇಧಿಸಿ ಅನೇಕ ಉಪಯೋಗಕರವಾದ ಸೂಚನೆಗಳನ್ನು ಕೊಟ್ಟರು. ಇದನ್ನೆಲ್ಲಾ ಅಲಕ್ಷಿಸಿ ಸಿಬ್ಬಂದಿ ಖೋತೆಯ ಸೂಚನೆಗಳನ್ನು ಸಭೆಯ ಮುಂದೆ ಸಹ ಇಡದೆ ಸರಕಾರದವರು ಈ ಖೋತೆಯಲ್ಲಿ ತಮ್ಮ ಅನಾಯಕತ್ವದ ಮಾದರಿಯನ್ನೇ ಅನುಸರಿಸಿರುವರು. ಇದಲ್ಲದೆ ಇದೇ ಸಭೆಯಲ್ಲಿ ಕಳೆದ ಬಜ್ಜೆಟ್ ಮೀಟಿಂಗಿನಲ್ಲಿ ಪಾಸು ಮಾಡಿದ ಠರಾವುಗಳನ್ನು ಚೀಫ್ ಕಮಿಷನರು ಸಮಂಜಸವಾದ ಕಾರಣಗಳನ್ನು ಸಹ ಕೊಡದೆ ತಿರಸ್ಕರಿಸಿರುವರು. ಇದೇ ಅಲ್ಲದೆ ಫೈನಾನ್ಸು ಕಮಿಟಿಯು ಈ ವರ್ಷ ಸೂಚಿಸಿದ ಕೆಲವೊಂದು ಸೂಚನೆಗಳೂ ಸಹ ಸ್ಥಳೀಯ ಸರ್ಕಾರದಿಂದ ಅಂಗೀಕರಿಸಲ್ಪಡಲಿಲ್ಲ

ಕೌನ್ಸಿಲಿನ ನಡವಳಿಕೆಗಳನ್ನು ನಿರ್ಲಕ್ಷ್ಯಭಾವದಿಂದ ಕಂಡು ತಮ್ಮ ಜವಾಬ್ದಾರಿಯನ್ನು ಸೂಚಿಸಿದ ಅಧಿಕಾರಿಗಳ ಧೋರಣೆ, ಚುನಾಯಿತ ದೇಶೀಯ ಮೆಂಬರುಗಳು ಕಾರ್ಯಕ್ರಮ ಪಟ್ಟಿಯಿಲ್ಲದ ಮೀಟಿಂಗಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದೆಂಬ ಅವರ ಊಹನೆ, ಇದನ್ನೆಲ್ಲಾ ನೋಡಿದರೆ ನಿಜವಾಗಿಯೂ ನಕಲಿ ವಿಚಾರದಂತೆ ಕಾಣುತ್ತದೆ.

ನಿನ್ನೆಯ ಆ ಘಟನೆಯು ನಮ್ಮನ್ನು ಇಂದು ಈ ಹೇಳಿಕೆಯನ್ನು ಕೊಡುವಂತೆ ಪ್ರೇರೇಪಿಸಿತು. ಜನತೆಯ ಸ್ಥಿತಿಯನ್ನು ಸುಧಾರಿಸುವ ಹಾಗೂ ಮಹಾ ವ್ಯಕ್ತಿ ಪೂಜ್ಯ ಗಾಂಧೀಜಿಯವರ ತತ್ವವನ್ನು ಪ್ರತಿಪಾದಿಸುವ, ನಿಶ್ಚಿತ ಕಾರ್ಯಕ್ರಮವನ್ನು ಕೈಗೂಡಿಸುವೆನೆಂದು ನಮ್ಮ ಮತದಾರರಿಗೆ ವಚನಬದ್ಧರಾಗಿ ನಾವು ಆ ಅಖಂಡ ಸಂಸ್ಥೆಯಾದ ಕಾಂಗ್ರೆಸಿನ ಹೆಸರಿನಿಂದ ಈ ಕೌನ್ಸಿಲಿಗೆ ನಿಂತದ್ದಾಗಿದೆ. ಈ ಧ್ಯೇಯದಿಂದ ನಾವು ಈ ವರೆಗೆ ಸಹಕರಿಸಿದ್ದನ್ನು ದೌರ್ಬಲ್ಯವೆಂದು ಪರಿಗಣಿಸಲಾಗಿದೆ. ಇಲ್ಲದಿದ್ದರೆ ರಾಜಕೋಟೆಯೇ ಮೊದಲಾದ ಇತರ ಸಣ್ಣ ಸಂಸ್ಥಾನಗಳು ಜವಾಬ್ದಾರಿ ಸರ್ಕಾರ ಪಡೆಯುವ ಸಂಭವದಲ್ಲಿರುವಾಗ ಈ ಪ್ರಾಂತಕ್ಕೆ ಕೊಟ್ಟಿರುವ ಉಪಚಾರವು ಖಂಡನೀಯವಿದೆ. ಈ ಕಾರಣಗಳಿಂದಾಗಿ ಈ ಸಭೆಯಲ್ಲಿ ಯಾವ ತರಹದ ಸಹಕಾರವನ್ನೀಯುತ್ತಾ ಕೇವಲ ಜನತೆಯ ಹಣವನ್ನು ಅನ್ಯಾಯವಾಗಿ ವ್ಯಯಮಾಡಿದಂತಾಗುವದು. ಆದ್ದರಿಂದ ಈ ನಕಲಿ ಕೌನ್ಸಿಲಿನಲ್ಲಿ ಭಾಗವಹಿಸುವದಕ್ಕಿಂತಲೂ ಈ ಸಭೆಯಿಂದ ಹೊರ ನಡೆದು ನಮ್ಮ ವ್ಯವಹಾರ ಕ್ಷೇತ್ರದಲ್ಲಿ ನಮ್ಮ ಮತದಾರರ ಸೇವೆ ಮಾಡುವದು ಶ್ರೇಯಸ್ಕರವೆಂದು ಅನಿಸಿ ನಾವು ಸರಕಾರದ ಧೋರಣೆಯನ್ನು ಖಂಡಿಸಲು ಪೂರ್ಣ ವ್ಯಸನದಿಂದ ಹೊರಗೆ ಹೋಗುವೆವು."

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಇಲ್ಲಿ ಏಲಕ್ಕಿ ಮಣಕ್ಕೆ 22 ರೂಪಾಯಿಯೂ, ಕಾಫಿ ಖಂಡಿಗೆ 105 ರೂಪಾಯಿಯೂ ಕ್ರಯವಿರುತ್ತೆ.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ತಾ. 14 ರಿಂದ ಪ್ರಾರಂಭವಾಗಿ ತಾ. 16 ನೇ ಮಧ್ಯಾಹ್ನ 12-30 ಗಂಟೆಗೆ ಮುಕ್ತಾಯಗೊಂಡಿತು.

ಈ ಮೊದಲು ಕಾರ್ಗುಂದದ ಮ. ಪಟ್ಟಮಾಡ ಪೊನ್ನಪ್ಪನವರನ್ನು ಗುಂಡು ಹೊಡೆದು ಕೊಂದರೆಂಬ ಅಪಾದನೆಯ ಮೇರೆ ಕೈದು ಮಾಡಲ್ಪಟ್ಟ, ಮ. ಕೀಪಾಡಂಡ ಪೊನ್ನಪ್ಪ, ಚೋಕಿರ ಬೆಳ್ಳಪ್ಪ ಮತ್ತು ಪೊದನೋಳಂಡ ಮಾದಪ್ಪನವರುಗಳನ್ನು ಸಬ್ ಜಡ್ಜಿಯವರ ಕೋರ್ಟಿನಲ್ಲಿ ವಿಚಾರಿಸಿ ಇವರು ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿ ಅವರನ್ನು ಖುಲಾಸು ಮಾಡಿರುವದಾಗಿ ವರ್ತಮಾನ.

ವೀರಾಜಪೇಟೆ.

ಕಳೆದ ಡಿಸೆಂಬರಿನಲ್ಲಿ ನಡೆದ ಕ್ರಿಮಿನಲ್ ಜುಡಿಷಿಯಲ್ ಟೆಸ್ಟ್ ಪರೀಕ್ಷೆಯಲ್ಲಿ ಇಲ್ಲಿಯ ತಾಲೋಕು ಆಫೀಸಿನ ಗುಮಾಸ್ತರಾದ ಶ್ರೀ ಮಂಡೇಪಂಡ ಯಂ. ಕಾಳಪ್ಪನವರು ಉತ್ತೀರ್ಣರಾಗಿರುವರೆಂದೂ, ಇಡೀ ಮದ್ರಾಸು ಪ್ರಾಂತದಲ್ಲೇ ಇವರು ಪ್ರಥಮ ಸ್ಥಾನಾಗಿರುವರೆಂದೂ ತಿಳಿಸಲು ಸಂತೋಷಪಡುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಕೆದಮುಳ್ಳೂರು ಗ್ರಾಮದ ಶ್ರೀ. ಜೆ. ಎಸ್. ಸಾಲ್ಡಾನರೆಂಬವರಿಗೆ ಕಳೆದ ತಾ. [illegible]ರ ರಾತ್ರಿ 3 ಗಂಟೆಗೆ ಯಾರೋ ಅವರ ಕಿಟಿಕಿಯಿಂದ, ಮಲಗಿರುವಾಗ ಗುಂಡು ಹೊಡೆದರೆಂದೂ, ಅದು ಅವರ ತೊಡೆಗೆ ತಗಲಿ ಜಖಂ ಆಗಿ ಮೈಸೂರು ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿರುವರೆಂದೂ, ಪೊಲೀಸು ತನಿಖೆಯು ನಡೆಯುತ್ತಿರುವರೆಂದೂ ತಿಳಿಯುತ್ತೇವೆ.

ಪೊನ್ನಂಪೇಟೆ.

ಇಲ್ಲಿಯ ತಾಲೋಕು ಕಾಂಗ್ರೆಸ್ ಮಹಾ ಸಭೆಯು ತಾ. 11 ರಲ್ಲಿ ನಡೆದು ತಾಲೋಕು ಕಾಂಗ್ರೆಸ್ ಕಮಿಟಿಗೆ 35 ಜನ ಕಮಿಟಿಯವರನ್ನು ಚುನಾಯಿಸಿದ್ದಲ್ಲದೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀಗಳಾದ ಕೆ. ಪಿ. ಕರುಂಬಯ್ಯ, ಪಿ. ಜಿ. ಮುದ್ದಮ್ಮಯ್ಯ, ಎ. ಎಸ್. ಪೊನ್ನಪ್ಪ, ಎ. ಎಸ್. ಚಿನ್ನಪ್ಪ, ಜಮ್ಮಡ ಮಾದಪ್ಪ, ಕಾಳಮಾಡ ಗಣಪತಿ, ಕಾಳಿಂಗಡ ಚಿಣ್ಣಪ್ಪ, ಹೊಟ್ಟೆಂಗಡ ಮಾಚಲಪ್ಪನವರುಗಳನ್ನು ಚುನಾಯಿಸಲಾಯಿತು. ಅಲ್ಲದೆ ತಾಲೋಕು ಕಮಿಟಿಯ ಪ್ರೆಸಿಡೆಂಟರಾಗಿ ಶ್ರೀ ಜಮ್ಮಡ ಮಾದಪ್ಪನವರನ್ನೂ, ಸೆಕ್ರೆಟರಿಯಾಗಿ ಶ್ರೀ. ಕೆ. ಕೆ. ಗಣಪತಿಯವರನ್ನೂ ಮತ್ತು ಖಜಾಂಚಿಯಾಗಿ ಶ್ರೀ ಮಳ್ಳಾಂಡ ಚಂಗಪ್ಪನವರನ್ನೂ ಚುನಾಯಿಸಲಾಯಿತು.

ಹಿಂದೂದೇಶ.

ಹೈದರಾಬಾದು ಸತ್ಯಾಗ್ರಹವು ಅಖಂಡವಾಗಿ ನಡೆಯುತ್ತಿದೆ. ಮದ್ರಾಸು ಆರ್ಯಸಮಾಜದ ಉಪಾಧ್ಯಕ್ಷರಾದ ಶ್ರೀ ವೇದವ್ರತ ವರ್ಮರವರ ಮುಖಂಡತ್ವದಲ್ಲಿ ಒಂದು ಪಡೆ ಹೈದರಾಬಾದಿಗೆ ತಾರೀಕು 14 ರಲ್ಲಿ ಹೋಗಿದೆ.

ಓ. ಜನರಲ್ ಅಶ್ಯೂರೆನ್ಸ್ ಸೊಸೈಟಿಯ ಆಕ್ಟಿಂಗ್ ಜನರಲ್ ಮೇನೇಜರಾದ ಶ್ರೀ ಬ್ರಹ್ಮದತ್ತ ಬಿ. ಎಸ್. ಸಿ., ಎಲ್. ಎಲ್. ಬಿ., ಎಫ್. ಎಸ್. ಎಸ್. (ಲಂಡನ್) ರವರನ್ನು ಖಾಯಂ ಜನರಲ್ ಮೇನೇಜರಾಗಿ ನೇಮಿಸಿರುವರು.

ರಾಷ್ಟ್ರಪತಿ ಸುಭಾಷ ಚಂದ್ರಬೋಸರ ಆರೋಗ್ಯವು ಅಷ್ಟೇನು ಸುಧಾರಿಸಿರುವದಿಲ್ಲ. ತಾರೀಖು 15 ರಲ್ಲಿ ಅವರಿಗೆ 101.6 ಡಿಗ್ರಿ ಜ್ವರವಿತ್ತು. ಕ್ರಮೇಣ ಅವರ ಪ್ರಕೃತಿಯು ಸುಧಾರಿಸಬಹುದೆಂದು ನಂಬಲಾಗಿದೆ. ಅವರು ಸ್ವಲ್ಪ ಸುಧಾರಿಸಿದೊಡನೆ ಗಾಂಧಿಯವರನ್ನು ಭೇಟಿಯಾಗಲಿರುವರು.

ಜಯಪುರ ಸತ್ಯಾಗ್ರಹವು ಅಹಿಂಸಾತತ್ವಕ್ಕನುಸಾರವಾಗಿ ನಡೆಯುತ್ತಿದೆ. ಮೊನ್ನೆ ಡಿಲ್ಲಿಗೆ ಗಾಂಧೀಜಿಯವರು ಹೋಗುವಾಗ ಜಯಪುರದಲ್ಲಿ ಅವರನ್ನು ಇದಿರುಗೊಂಡ ಪ್ರಜಾಮಂಡಳದವರಿಗೆ ತಮ್ಮ ಸತ್ಯಾಗ್ರಹವನ್ನು ಅಹಿಂಸಾ ರೀತಿಯಿಂದ ಮುಂದರಿಸುವ ಬಗ್ಗೆ ಗಾಂಧೀಜಿಯವರು ಒಂದು ಸಂದೇಶವನ್ನಿತ್ತರು.

ಮೌಲನಾ ಅಬುಲ್ ಕಲಾಂ ಆಜಾದರು ತ್ರಿಪುರಿಯಿಂದ ಹಿಂತಿರುಗಿ ಬರುವಾಗ ಅಲ್ಲಹಾಬಾದಿನ ರೈಲ್ವೆ ಸ್ಟೇಷನಿನಲ್ಲಿ ಅನನಾಸು ಸಿಪ್ಪೆಯ ಮೇಲೆ ಕಾಲಿಟ್ಟು ಜಾರಿಬಿದ್ದು ಘಾಯಗೊಂಡರೆಂದೂ, ಡಾಕ್ಟರು ಅವರನ್ನು ಪರೀಕ್ಷಿಸಿ ಒಂದು ದಿನದ ವಿಶ್ರಾಂತಿಯು ಅಗತ್ಯವೆಂದದಕ್ಕೆ ಅವರು ಆನಂದಭವನದಲ್ಲೇ ಉಳಿದರು.

ಸಮಯ ಬಂದಲ್ಲಿ ಒಂದು ಲಕ್ಷ ಮಂದಿ ಸತ್ಯಾಗ್ರಹವನ್ನು ಮಾಡಲು ಬರುವದಾಗಿ ಪೂನಾ ಆರ್ಯಸಮಾಜದವರು ಹೈದರಾಬಾದು ಪ್ರಜೆಗಳಿಗೆ ತಿಳಿಯಪಡಿಸಿರುವರು. ಇತರ ದೇಶಗಳಿಂದಲೂ ತಂಡೋಪತಂಡವಾಗಿ ಜನರು ಅಲ್ಲಿಗೆ ಬರಲಿರುವರೆಂದೂ ತಿಳಿಯಬಂದಿದೆ. ಅನೇಕ ಸನ್ಯಾಸಿಗಳೂ ಕೂಡ ಸತ್ಯಾಗ್ರಹ ಮಾಡಲು ಸಿದ್ಧಯಿಸಿರುವರು.

ಕಳೆದ ತಿಂಗಳ 26 ನೇ ತಾರೀಕಿನ ದಿನ ಕೂಡಿದ ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಪಾಸಾದಂತೆ ಸುಧಾರಣಾ ಸಮಿತಿಯಿಂದ 4 ಜನ ಕಾಂಗ್ರೆಸ್ ಸದಸ್ಯರು, ಲೆಜಿಸ್ಲೇಟಿವ್ ಕೌನ್ಸಿಲಿನಿಂದ 6, ರೆಪ್ರೆಸೆಂಟೇಟಿವ್ ಎಸ್ಸೆಂಬ್ಲಿಯಿಂದ 29, ಮತ್ತು ಸ್ಥಾನಿಕ ಸಂಸ್ಥೆಗಳಿಗೆ 72 ಹೀಗೆ ಒಟ್ಟು 111 ಮಂದಿ ಕಾಂಗ್ರೆಸ್ ಸದಸ್ಯರು ರಾಜಿನಾಮೆ ಕೊಟ್ಟಿರುವರು.

ಬರುವ ವರ್ಷದ ಕಾಂಗ್ರೆಸ್ ಮಹಾಧಿವೇಶನವನ್ನು ಬಿಹಾರಿನಲ್ಲಿ ನಡೆಸುವ ತ್ರಿಪುರ ಕಾಂಗ್ರೆಸಿನ ತೀರ್ಮಾನದಿಂದ ಬಿಹಾರಿನ ಜನರೆಲ್ಲರೂ ಸಂತೋಷಚಿತ್ತರಾಗಿರುವರು. ಈಗಲೇ ಕಾಂಗ್ರೆಸ್ ನಡೆಸಲು ಸ್ಥಳ ಹುಡುಕುವ ಏರ್ಪಾಡುಗಳಾಗುತ್ತಿವೆಯಂತೆ. ಕೆಲವು ಕಾಂಗ್ರೆಸಿನವರು ದಕ್ಷಿಣ ಬಿಹಾರ್ ಅಂದರೆ ರಾಮಘರ್‌ದಲ್ಲಿ ನಡೆಯಬೇಕೆಂದೂ ಕೆಲವರು ಉತ್ತರದಲ್ಲಿ ನಡೆಯಬೇಕೆಂದೂ ವಾದ ಪ್ರಾರಂಭಿಸಿರುವರು.

ಇಂಡಿಯಾ ಸರ್ಕಾರದ ರಾಜಕೀಯ ಇಲಾಖೆಯವರ ಸಲಹೆಯನ್ನು ಪುರಸ್ಕರಿಸಿ ಧೇನ್ಕಾನಲ್ ಸಂಸ್ಥಾನದ ಮಹಾರಾಜರವರು ಒಂದು ವರ್ಷದ ವರೆಗೆ ತಮ್ಮ ಸಂಸ್ಥಾನದ ರಾಜ್ಯಾಡಳಿತದ ಭಾರವನ್ನು ಬೇರೊಬ್ಬರಿಗೆ ವಹಿಸಿ ವಿದೇಶಕ್ಕೆ ಪ್ರಯಾಣ ಮಾಡುವರೆಂದು ಪ್ರಕಟವಾಗಿದೆ. ಮಹಾರಾಜರವರು ವಿದೇಶಕ್ಕೆ ಹೋಗಿರುವಾಗ ರಾಜ್ಯಾಡಳಿತವನ್ನು ನಿರ್ವಹಿಸಲು ಒಬ್ಬ ಐರೋಪ್ಯರನ್ನು ದಿವಾನರಾಗಿ ನೇಮಿಸುವ ಯೋಚನೆಯಿದೆಯೆಂದು ತಿಳಿಯುವುದು.

ಪಂಜಾಬ್ ಅಧಿಪತ್ಯದಲ್ಲಿ ವಿದ್ಯಾಪ್ರಚಾರ ಮಾಡಿ ಐದು ವರ್ಷಗಳೊಳಗೆ ನಿರಕ್ಷರಕುಕ್ಷಿಗಳ ಸಂಖ್ಯೆಯನ್ನು ನಿರ್ಮೂಲ ಮಾಡಲು ಅಲ್ಲಿನ ಸರ್ಕಾರದವರು ಕಾರ್ಯಕ್ರಮವನ್ನು ಆರಂಭಮಾಡುವವರಾಗಿದ್ದಾರೆ. ಸುಮಾರು 12 ವಯಸ್ಸಿನಿಂದ 18 ವಯಸ್ಸಿನೊಳಗೆ ಇರುವ ನಿರಕ್ಷರಕುಕ್ಷಿಗಳಾದ ಯುವಕರಿಗೆ ಇದರಿಂದ ಉಪಕಾರವಾಗುವುದು. ಕಾಲೇಜಿನಲ್ಲೂ ಹೈಸ್ಕೂಲುಗಳಲ್ಲೂ ವಿದ್ಯಾಭ್ಯಾಸ ಮಾಡುವ ಶಾಲೆಯ ಶುಲ್ಕವನ್ನು ಮಾಫಿ ಪಡೆದಿರುವ ಮತ್ತು ವಿದ್ಯಾರ್ಥಿ ವೇತನಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಒಂದು ವರ್ಷದಲ್ಲಿ ಕನಿಷ್ಠ ಪಕ್ಷ ಇಬ್ಬರು ಯುವಕರನ್ನಾದರೂ ಅಕ್ಷರಸ್ಥರನ್ನಾಗಿ ಮಾಡಬೇಕೆಂದು ಈ ಏರ್ಪಾಡಿನ ಮೂಲಕ ನಿರ್ಬಂಧ ಮಾಡುವರೆಂದು ಹೇಳಲಾಗಿದೆ.

ವಿದೇಶ

ಪೋಪರ ಪಟ್ಟಾಭಿಷೇಕ ಕಳೆದ ಆದಿತ್ಯವಾರ ಜರಗಿತು. 40 ರಾಷ್ಟ್ರಗಳ ಪ್ರತಿನಿಧಿಗಳು ಹಾಜರಿದ್ದರು.

ಸ್ಪೈನಿನಲ್ಲಿರುವ ಇಟೆಲಿಯ ಸೇನೆಯನ್ನು ಮುಸಲಿನಿಯು ಹಿಂದಕ್ಕೆ ಕರೆಯಿಸಿಕೊಳ್ಳಬಹುದೆಂದು, ಜನರಲ್ ಫ್ರಾಂಕೋ ತಿಳಿಸಿರುವದಾಗಿ ವದಂತಿ.

ಚಾರ್ಲ್ಸ್ ಕಿಂಗ್ಸ್ಲೇ ವುಡ್‌ರವರು, ವಿಮಾನಖಾತೆ ವೆಚ್ಚವಾಗಿ 205 ಮಿಲಿಯ ಪವನುಗಳ ಅಂದಾಜು ಪತ್ರವನ್ನು ಕಾಮನ್ಸ್ ಮಂದಿರದ ಮುಂದೆ ಮಂಡಿಸುತ್ತಾ, ಪ್ರಕೃತದ ವಿಮಾನ ಶಕ್ತಿ 1920-34 ರಲ್ಲಿದ್ದುದಕ್ಕಿಂತ 12 ಮಡಿ ಅಧಿಕವೆಂದರು.

ಮೈಸೂರು ಸತ್ಯಾಗ್ರಹ.

ಮೈಸೂರು ನಗರದ ದೊಡ್ಡಪೇಟೆ ಚೌಕದಲ್ಲಿರುವ ಕೇಂದ್ರ ಪೋಲೀಸ್ ಠಾಣ್ಯಕ್ಕೆ 'ಹಾಮಿಲ್ಟನ್ ಬಿಲ್ಡಿಂಗ್' ಎಂಬ ಹೆಸರಿಟ್ಟಿರುವುದನ್ನು ತೆಗೆಯಬೇಕೆಂದು ಕೆಲವು ಮಂದಿ ಕಾಂಗ್ರೆಸ್ ಸದಸ್ಯರುಗಳು ನಡಿಸುತ್ತಿರುವ ಚಳವಳಿಯು ಕಳೆದ ಕೆಲವು ದಿನಗಳಿಂದ ಸ್ವಲ್ಪ ಬಿಗಿಯಾಗುತ್ತಿದೆ. ತಾ. 9 ನೇ ಗುರುವಾರ ನಾಲ್ವರು ಸ್ವಯಂ ಸೇವಕರು ಆ ಕಟ್ಟಡದ ಮುಂದೆ ಸತ್ಯಾಗ್ರಹವನ್ನು ಹೂಡಿದರು. ಅಂದಿನಿಂದಲೂ ಸತ್ಯಾಗ್ರಹಿಗಳ ಸಂಖ್ಯೆ ದಿನ ದಿನಕ್ಕೆ ಎರಡೆರಡು ಹೆಚ್ಚಾಗುತ್ತಿದೆ. ಈ ತಾ. 10 ನೇ ಶುಕ್ರವಾರವೂ, 14 ನೇ ಮಂಗಳವಾರವೂ ಸ್ವಯಂ ಸೇವಕರುಗಳೊಡನೆ ಇಬ್ಬಿಬ್ಬರು ಹೆಂಗಸರೂ ಆ ಠಾಣ್ಯದ ಮುಂದೆ ಕುಳಿತಿದ್ದರು. ಶುಕ್ರವಾರ ದಿನ ಒಬ್ಬ ಮಹಿಳೆಯು ತನ್ನ ಒಂದೂವರೆ ವರ್ಷದ ಒಂದು ಮಗುವನ್ನೂ ಸಹ ಬಿಸಿಲಿನಲ್ಲಿ ಕೂರಿಸಿಕೊಂಡಿದ್ದಳು. ತಾ. 13 ನೇ ಸೋಮವಾರದಿಂದ ಸತ್ಯಾಗ್ರಹವು ಒಂದು ಹೊಸ ರೂಪವನ್ನು ತಾಳಿತು. ಸತ್ಯಾಗ್ರಹಿಗಳು ಆ ದಿನ ಪೋಲೀಸ್ ಠಾಣ್ಯದ ಮುಂದೆ ಅಖಂಡ ರಾಮ ಭಜನೆ ಮಾಡಬೇಕೆಂದು ನಿರ್ಧರಿಸಿದರು. ಅದರಂತೆ ಅವರು ಆ ದಿನ ಬೆಳಿಗ್ಗೆ "ರಘುಪತಿ ರಾಘವ ರಾಜಾರಾಮ್" ಎಂಬ ಭಜನೆ ಮಾಡಲು ಪ್ರಾರಂಭಿಸಿದರು. ಪೋಲೀಸಿನವರು, ಭಜನೆ ಮಾಡಬೇಡಿರೆಂದು ಎಷ್ಟು ವಿಧದಲ್ಲಿ ಕೇಳಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಸತ್ಯಾಗ್ರಹಿಗಳೆಲ್ಲರನ್ನೂ ಠಾಣ್ಯದೊಳಕ್ಕೆ ಕರೆದುಕೊಂಡು ಹೋಗಿ ಕೂಡಿಸಿ ಮಧ್ಯಾಹ್ನದ ಮೇಲೆ ಅವರನ್ನು ನ್ಯಾಯಾಸ್ಥಾನಕ್ಕೆ ಕರೆದುಕೊಂಡು ಹೋದರು. ನ್ಯಾಯಾಧೀಶರು ಆ ಸತ್ಯಾಗ್ರಹಿಗಳ ಮುಖಂಡನಿಗೆ ಹತ್ತು ರೂಪಾಯಿ ಜುಲ್ಮಾನೆಯನ್ನೂ, ಅದನ್ನು ಕೊಡಲು ತಪ್ಪಿದಲ್ಲಿ ಒಂದು ವಾರ ಸಜಾ ಶಿಕ್ಷೆಯನ್ನೂ, ಉಳಿದವರಿಗೆ ತಲಾ ಆರು ರೂಪಾಯಿಗಳ ಜುಲ್ಮಾನೆಯನ್ನೂ ಅದನ್ನು ಕೊಡಲು ತಪ್ಪಿದಲ್ಲಿ ಐದು ದಿನಗಳ ಸಜಾ ಶಿಕ್ಷೆಯನ್ನೂ ವಿಧಿಸಿದರು. ಜುಲ್ಮಾನೆ ಕೊಡದೆ ಎಲ್ಲರೂ ಬಂದೀಖಾನೆಗೆ ತೆರಳಿದರು. ಮಂಗಳವಾರ ದಿನವೂ ಅದೇ ರೀತಿ ನಡೆಯಿತು. ತಾ. 16 ರಲ್ಲಿ ಇಬ್ಬರು ಹೆಂಗಸರೂ ಸೇರಿ 12 ಮಂದಿ ಸತ್ಯಾಗ್ರಹ ಹೂಡಿದ್ದರು, ಈ ದಿನ ಹೆಂಗಸರನ್ನು ನ್ಯಾಯಾಸ್ಥಾನಕ್ಕೆ ಕರೆದುಕೊಂಡು ಹೋಗಲಿಲ್ಲ. ಅವರು ಸಂಜೆ ಆರು ಗಂಟೆಯ ವರೆಗೂ ಪೋಲೀಸ್ ಠಾಣ್ಯದ ಮುಂದೆ ಕುಳಿತಿದ್ದರು. ಸದರಿ ದಿನ ಹತ್ತು ಮಂದಿ ಸ್ವಯಂ ಸೇವಕರಲ್ಲದೆ ಈ ಸತ್ಯಾಗ್ರಹ ಸಮಿತಿಯ ಮುಖಂಡರು ಮ. ಗಳಾದ ಸುಬ್ಬರಾವ್, ಉಪಾಧ್ಯಾಯ ಮತ್ತು ಸೂರ್ಯನಾರಾಯಣರಾವ್ ಇವರುಗಳೂ ಸಹ ದಸ್ತಗಿರಿಯಾದರು. ಹತ್ತು ಮಂದಿ ಸತ್ಯಾಗ್ರಹಿಗಳಿಗೆ ತಲಾ 100 ರೂಪಾಯಿ ಜುಲ್ಮಾನೆಯನ್ನೂ ಅದನ್ನು ಕೊಡಲು ತಪ್ಪಿದಲ್ಲಿ 2½ ತಿಂಗಳ ಸಜಾ ಶಿಕ್ಷೆಯನ್ನೂ ವಿಧಿಸಿದರು. ಮುಖಂಡರುಗಳ ವಿಚಾರಣೆ ಮುಂದೆ ನಡೆಯುವುದಾಗಿದೆ.

ಗಾಂಧಿ–ವೈಸರಾಯರ ಭೇಟಿ.

ಪೂಜ್ಯ ಗಾಂಧಿಜೀಯವರ ಪ್ರಕೃತಿಯು ಸುಧಾರಿಸುತ್ತಿರುವುದರಿಂದ ತಾರೀಕು 13 ರಲ್ಲಿ ರಾಜಕೋಟೆ ಒಪ್ಪಂದದ ವಿಚಾರ ವೈಸರಾಯರೊಡನೆ ಮಾತಾಡಲು ಹೊರಟರು. ಹೊಸ ಡೆಲ್ಲಿಯಲ್ಲಿ ಗಾಂಧಿಜೀಯವರು 'ಬಿರ್ಲಾ ಕಟ್ಟಡ'ದಲ್ಲಿ ಉಳಕೊಂಡಿದ್ದರು. ತಾ. 15 ರ ಬೆಳಿಗ್ಯೆ 11 ಗಂಟೆಗೆ ಮಹಾತ್ಮರು ತಮ್ಮ ಎಲ್ಲಾ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ವೈಸರಾಯರನ್ನು ಕಾಣಲು ಸಿದ್ಧರಾಗಿ ಶ್ರೀ ಮಹದೇವ ದೇಸಾಯಿಯವರೊಡನೆ ವೈಸರಾಯರ ಬಂಗ್ಲೆಗೆ ಕ್ಲುಪ್ತ ಸಮಯಕ್ಕೆ ಸರಿಯಾಗಿ ದಯಮಾಡಿಸಿದರು. ಮಹದೇವ ದೇಸಾಯಿಯವರು ರಾಜಕೋಟೆ ಸಮಸ್ಯೆಗೆ ಸಂಬಂಧಪಟ್ಟ ಫೈಲುಗಳೊಡನೆ ಮಹಾತ್ಮರೊಂದಿಗೆ ಬಂಗ್ಲೆಯನ್ನು ಪ್ರವೇಶಿಸಿದರು. ವೈಸರಾಯರ ಸೆಕ್ರೆಟರಿಯೋಟನವರು ಗಾಂಧಿಜೀಯವರನ್ನು ಎದುರುಗೊಂಡು ಒಳಗೆ ಕರೆದುಕೊಂಡು ಹೋದರು. ಅಲ್ಲಿ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ತಮ್ಮ ಪತ್ನಿಯೊಂದಿಗೆ ಮಹಾತ್ಮರ ಬರುವಿಕೆಯನ್ನು ಕಾಯುತ್ತಾ ನಿಂತಿದ್ದರು. ಮಹಾತ್ಮರು ಅವರೊಡನೆ ಕೈಕುಲುಕಿ ಆಸೀನರಾದರು. ರಾಜಕೋಟೆಯ ರೆಸಿಡೆಂಟರಾದ ಗಿಬ್ಸನರವರು ಸಂಸ್ಥಾನಕ್ಕೆ ಸಂಬಂಧಪಟ್ಟ ಫೈಲುಗಳೊಡನೆ ಅಲ್ಲಿಯೇ ಸಿದ್ಧರಿದ್ದರು. ಈ ಸಮಾರಂಭವು 1931 ನೇ ಇಸವಿಯ ಗಾಂಧಿ-ಇರ್ವಿನ್ ಭೇಟಿಯನ್ನು ಜ್ಞಾಪಕಕ್ಕೆ ತರುವಂತಿತ್ತು.

ನಂತರ ರಾಜಕೋಟೆಯ ವಿಚಾರ ವಿವೇಚನೆಗಳಾದವು. 2 ಗಂಟೆಗಳ ಸಮಯ ಸ್ನೇಹಪೂರಿತವಾದ ಮಾತುಕತೆಗಳು ನಡೆದವು. ಠಾಕೂರ ಸಾಹೇಬರ 26 ನೇ ಡಿಸಂಬರಿನ ಪ್ರಕಟಣೆ, ಸರ್ದಾರ ಪಟೇಲರಿಗೆ ಸುಧಾರಣಾ ಕಮಿಟಿಗೆ ಮೆಂಬರುಗಳ ಹೆಸರನ್ನು ಸೂಚಿಸುವಂತೆ ಠಾಕೂರ ಸಾಹೇಬರು ಬರೆದ ಪತ್ರ ಇವುಗಳ ವಿಚಾರವೂ, ಈಗ ಫೆಡರಲ್ ಕೋರ್ಟಿಗೆ ವಹಿಸಿರುವ ಸಮಸ್ಯೆಯನ್ನೂ ಕೂಲಂಕುಶವಾಗಿ ಚರ್ಚಿಸಲಾಯಿತು. ಅಲ್ಲದೆ ರಾಜಕೋಟೆ ಸತ್ಯಾಗ್ರಹದ ಸಮಯದಲ್ಲಿ ಪೋಲೀಸಿನವರು ಮಾಡಿದ ಅನಾಚಾರವನ್ನೂ, ಆ ವರೆಗೆ ಗಾಂಧಿಜೀಯವರಿಗೆ ಈ ವಿಚಾರ ತಲಪಿದ 200 ಪುಕಾರುಗಳನ್ನೂ, ಪೋಲೀಸರಿಂದ ಗಾಯಗೊಂಡು ಆ ಬಗ್ಗೆ ಹಾಜರುಪಡಿಸಿದ 85 ಮೆಡಿಕಲ್ ಸರ್ಟಿಫಿಕೇಟುಗಳನ್ನೂ ಗಾಂಧಿಜೀಯವರು ವೈಸರಾಯರ ಅವಗಾಹನೆಗೆ ತಂದರು. ಈ ವಿಚಾರ ವಿಚಾರಿಸಿ ಅದಕ್ಕೆ ತಕ್ಕ ಪ್ರತಿಫಲವನ್ನೀಯುವ ಬಗ್ಗೆ ಒಂದು ಕಮಿಟಿಯನ್ನು ನೇಮಿಸುವರೆಂದು ತಿಳಿಯಲಾಗಿದೆ.

ಹೆಚ್ಚಿನ ಮಾತುಕತೆಗಳು ಇನ್ನೂ ಬಹಿರಂಗವಾಗಿರುವುದಿಲ್ಲ. ವೈಸರಾಯರು ಸಂಸ್ಥಾನಾಧೀಶರಿಗೆ ಹೇಳಿದ ಭಾಷಣದಿಂದಲೂ, ಅವರ ಈಗಿನ ವರ್ತನೆಯಿಂದಲೂ ಸಂಸ್ಥಾನಗಳಲ್ಲಿನ ಚಳವಳಿಕ್ಕೆ ಬ್ರಿಟಿಷ್ ಸಾರ್ವಭೌಮತ್ವವು ವಿರೋಧವಿಲ್ಲದು ಎಂಬುದು ವ್ಯಕ್ತವಾಗುತ್ತದೆ.

ದೇಶೀಯ ಸಂಸ್ಥಾನಗಳ ಅರಸರುಗಳಿಗೆ ವೈಸರಾಯರವರ ಸಲಹೆ.

ವೈಸರಾಯರವರು ಮಾರ್ಚಿ ತಾ. 13 ರಲ್ಲಿ ಹೊಸ ಡೆಹಲಿಯಲ್ಲಿ ನಡೆದ ನರೇಂದ್ರ ಮಂಡಲಿಯ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸಿದರು. ಈ ಸಮ್ಮೇಳನದಲ್ಲಿ ದೇಶೀಯ ರಾಜರುಗಳೂ ಸರದಾರರುಗಳೂ ಸುಮಾರು 50 ಮಂದಿಗಿಂತಲೂ ಹೆಚ್ಚಾಗಿ ಹಾಜರಾಗಿದ್ದರು. ಅವರು ನುಡಿದ ಕೆಲವು ಮಾತುಗಳನ್ನು ಮಾತ್ರ ಇಲ್ಲಿ ಎತ್ತಿ ಪ್ರಕಟಿಸಿರುತ್ತೇವೆ. ಅವರು ಹೇಳಿದುದೇನೆಂದರೆ–'ದೇಶೀಯ ಸಂಸ್ಥಾನಗಳಲ್ಲಿ ಆಗಬೇಕಾದುದ ರಾಜ್ಯಾಂಗರಚನೆಯ ಬದಲಾವಣೆಗಳ ಅಥವಾ ಅಭಿವೃದ್ಧಿಗಳ ವಿಷಯವಾಗಿ ನಾನು ಸಾರ್ವಜನಿಕ ಭಾಷಣಗಳನ್ನು ಮಾಡಿದ ಸಂದರ್ಭಗಳಲ್ಲಿ ದೃಢವಾಗಿ ಹೇಳಿರುವಂತೆಯೇ ಇತ್ತೀಚೆಗೆ ಪಾರ್ಲಿಮೆಂಟ್ ಸಭೆಯಲ್ಲಿ ಚಕ್ರವರ್ತಿ ಸಾರ್ವಭೌಮರವರ ಸರ್ಕಾರದ ಪರವಾಗಿ ಅಂಥಾ ಹೇಳಿಕೆಗಳು ಹೊರಬಿದ್ದಿರುವುದನ್ನು ಶ್ರೀಮನ್ಮಹಾರಾಜರುಗಳು ಪರಾಂಬರಿಸಿರಬಹುದು.

'ಈ ಹೇಳಿಕೆಗಳು ಚಕ್ರವರ್ತಿ ಸಾರ್ವಭೌಮರವರ ಸರ್ಕಾರದ ಮನೋಭಿಪ್ರಾಯವನ್ನು ವಿಶದಗೊಳಿಸುವುದಾಗಿದೆ. ಅದೇನೆಂದರೆ, ತಮ್ಮ ಸಂಸ್ಥಾನದ ಪ್ರಜೆಗಳ ಅವಶ್ಯಕತೆಗೂ ಮತ್ತು–ಆ ಸಂಸ್ಥಾನಕ್ಕೂ ಕೇವಲ ಸಮೀಚೀನವಾದ ಆಳ್ವಿಕೆಯ ರೀತಿಯನ್ನು ನಿರ್ಧರಿಸುವುದು ಆಯಾ ಸಂಸ್ಥಾನಗಳ ಅರಸರ ಪಾಲಿಗೇ ಸೇರಿದುದು. ಈ ಸಂದರ್ಭದಲ್ಲಿ ಸಾರ್ವಭೌಮ ಸರ್ಕಾರದವರು ಅಂಥಾ ರಾಜರುಗಳಾರನ್ನೂ ಒತ್ತಾಯಪಡಿಸುವುದಿಲ್ಲ. ಅದೂ ಅಲ್ಲದೆ ಅರಸರುಗಳು ಸಾರ್ವಭೌಮ ಸರ್ಕಾರದೊಡನೆ ಮಾಡಿಕೊಂಡಿರುವ ಕರಾರು ಕೌಲುಗಳಿಗೆ ಅನುಗುಣವಾಗಿ ಯಾವ ರಾಜ್ಯಾಂಗ ಸುಧಾರಣೆಯನ್ನು ಜಾರಿಗೆ ತಂದರೂ ಸಾರ್ವಭೌಮ ಸರ್ಕಾರದವರು ಅವರುಗಳಿಗೆ ಯಾವ ವಿಧದಲ್ಲೂ ಪ್ರತಿಬಂಧಕಗಳನ್ನೊಡ್ಡುವುದಿಲ್ಲ.

'ಯಾರು ತಮ್ಮ ಪ್ರಜೆಗಳಿಗೆ ತಂದೆಯೋಪಾದಿಯಲ್ಲಿರುತ್ತಾರೋ ಅಂಥವರು, ತಮ್ಮ ರಾಜ್ಯಾಡಳಿತದಲ್ಲಿ ಸಮಸ್ತ ಪ್ರಜಾವರ್ಗಗಳವರಿಗೂ ಯಥಾಯೋಗ್ಯವಾದ ಸಹಾಯಸೌಲಭ್ಯಗಳು ದೊರಕುತ್ತಿವೆಯೆಂಬುದನ್ನೂ ತಮ್ಮ ಸಂಸ್ಥಾನದ ರಾಜ್ಯಾದಾಯದಲ್ಲಿ ಸ್ವಂತ ಖರ್ಚಿಗಾಗಿ ನ್ಯಾಯಬದ್ಧವಲ್ಲದಷ್ಟು ಮೊಬಲಗನ್ನು ತಾವು ಉಳಿಸಿಟ್ಟುಕೊಂಡಿಲ್ಲವೆಂಬುದನ್ನೂ ತಿಳಿಯಬೇಕು.'

ವೈಸರಾಯರು ಮುಂದುವರಿಯುತ್ತಾ ಸಂಯುಕ್ತ ಆಳ್ವಿಕೆಯನ್ನು ದೇಶೀಯ ರಾಜರುಗಳು ಅನುಮೋದಿಸಬಹುದಾಗಿದೆಯೆಂದು ಹೇಳಿದರು.

ಪರದೇಶದ ವಿಚಾರ.

ಸ್ಪೈಯಿನಿನ ಅಂತಃಯುದ್ಧ.

ಸ್ಪೈಯಿನ್ ದೇಶದ ಪ್ರಜಾಪ್ರತಿನಿಧಿ ಸರ್ಕಾರವು ಪುನರ್ವ್ಯವಸ್ಥೆಯನ್ನು ಹೊಂದಿದೆಯೆಂದೂ, ಅಲ್ಲಿ ಜನರಲ್ ಫ್ರಾಂಕೋರವರ ಜಯವನ್ನು ಬ್ರಿಟಿಷ್ ಹಾಗೂ ಫ್ರೆಂಚರು ಮನ್ನಿಸಿರುವರೆಂದೂ ವಾಚಕ ಮಹಾಶಯರಿಗೆ ತಿಳಿದಿರುವುದು. ಸ್ಪೈಯಿನಿನಲ್ಲಿ ಸಮಧಾನವನ್ನು ಸ್ಥಾಪಿಸಬೇಕೆಂಬ ಜನರಲ್ ಫ್ರಾಂಕೋರವರ ಅಭಿಪ್ರಾಯದಂತೆ ಕಾರ್ಯಕ್ರಮಗಳು ಮುಂವರಿಯುತ್ತಿವೆ. ಹೀಗಿದ್ದರೂ ಮೇಡ್ರಿಡ್‌ನಲ್ಲಿ ಸ್ವದೇಶಪ್ರೇಮಪೂರಿತರಾದ ಸರ್ಕಾರ ಪಕ್ಷರಿಗೂ ದಂಗೆಯೋರರಿಗೂ ಹೊಡೆದಾಟ, ಕಡಿದಾಟಗಳು ನಡೆಯುತ್ತಲೇ ಇವೆ. ಮೇಡ್ರಿಡ್‌ನಲ್ಲಿ ದಂಗೆಯೋರರು ವಶಪಡಿಸಿಕೊಂಡಿದ್ದ ಅನೇಕ ಕಟ್ಟಡಗಳನ್ನು ಜನರಲ್ ಮಿಯೂಜರವರ ಅಂದರೆ ಸರ್ಕಾರ ಪಕ್ಷದ ಕಡೆಯವರು ವಶಪಡಿಸಿಕೊಂಡಿರುವರು. ಈ ಭಾಗ ವಿನಹ ಜನರಲ್ ಫ್ರಾಂಕೋರವರು ವಶಪಡಿಸಿಕೊಂಡ ಎಲ್ಲಾ ಭಾಗಗಳಲ್ಲೂ ಶಾಂತಿಯು ನೆಲೆಸಿದೆ. ಜನರಲ್ ಫ್ರಾಂಕೋವು ಈಗ ಮೇಡ್ರಿಡ್ಡಿಗೆ ಹೊರಡುವವನಿದ್ದಾನೆ. ಸರ್ಕಾರದ ನೌಕಾಬಲವು ಪೂರ್ವದಲ್ಲಿ ಸ್ವಾಧೀನಪಡಿಸಿಕೊಂಡಿದ್ದ ಸ್ಪೈಯಿನಿನ ಪೂರ್ವ ಮತ್ತು ಆಗ್ನೇಯ ದಿಕ್ಕುಗಳಲ್ಲಿರುವ ಒಟ್ಟು ಸಮುದ್ರ ತೀರದಲ್ಲೆಲ್ಲಾ ಯಾವ ದೇಶದ ಯಾವ ಹಡಗೇ ಆಗಲಿ ಮೂರು ಮೈಲು ದೂರದಲ್ಲಿರಬೇಕೇ ವಿನಹ ಅದರೊಳಗೆ ಬರಲೇ ಬಾರದೆಂದು ಜನರಲ್ ಫ್ರಾಂಕೋರವರು ಪ್ರಕಟಿಸಿರುವರು.

ಚೈನಾ–ಜಪಾನ್ ಯುದ್ಧ.

ಈ ಯುದ್ಧದಲ್ಲಿ ಈ ವರ್ಷ ನಡೆದ ಹೋರಾಟಗಳಲ್ಲೆಲ್ಲಾ ಬಹು ಭಾರಿ ಎನಿಸಿದ್ದು ಕಳೆದ ವಾರ ಹಾನ್ ನದಿಯ ತೀರದಲ್ಲಿ ನಡೆದುದು. ಜಪಾನರು ಈ ಹಾನ್ ನದಿಯನ್ನು ದಾಟಿ ಬರದಂತೆ ಚೈನೀಯರು ತಡೆದು ಹಾಕಿದರೆಂದೂ, ಆ ಕದನದಲ್ಲಿ ಎರಡು ಪಕ್ಷದವರೂ 3000 ಸೈನಿಕರನ್ನು ಕಳಕೊಂಡರೆಂದೂ ತಿಳಿದುಬಂದಿದೆ. ಶಾಂಗಾಹಾಯಿಯ ಉತ್ತರದಲ್ಲಿ ಚೀನಾದ ಪೂರ್ವ ತೀರದರುವ ಚೀನಾದವರ ನಾಲ್ಕು ಸೈನ್ಯಪಡೆಗಳನ್ನು ಜಪಾನರು ಎದುರಿಸಿ, ಅವು ಚೇತರಿಸಿಕೊಳ್ಳಲಾರದಷ್ಟು ಬಲವಾದ ಅನಾಹುತವನ್ನು ಮಾಡಿರುವದಾಗಿ ಜಪಾನರು ಪ್ರಕಟಿಸಿರುವರು. ಚೀನಾದ ವಾಯವ್ಯ ದಿಗ್ಭಾಗದಲ್ಲಿ ಶಾನ್ಸಿ ಅಧಿಪತ್ಯದ ರಾಜಧಾನಿಯಾದ ಸಿಯೂನ್ ಎಂಬ ಊರಿನ ಮೇಲೆ ಜಪಾನರು ಬಾಂಬು ಸಿಡಿಮದ್ದು ಸುರಿಸಿದಾಗ ಅಲ್ಲಿ ಬ್ರಿಟಿಷ್ ಪಾದ್ರಿಗಳು ಇಟ್ಟು ನಡಿಸುತ್ತಿದ್ದ ಆಸ್ಪತ್ರೆಯೊಂದು ಭಸ್ಮವಾಯಿತೆಂದು ತಿಳಿಯಬರುತ್ತದೆ. ಚೀನಾ ದೇಶದ ನಾಣ್ಯದ ಬೆಲೆಯಲ್ಲಿ ಏಳಿತಗಳೇನೂ ಇಲ್ಲದೆ [illegible] ಸಾಧಕವಾಗುವಂತೆ ಬ್ರಿಟಿಷ್ ಸರ್ಕಾರವರು ಚೀನಾ ಸರ್ಕಾರದವರಿಗೆ 15 ಕೋಟಿ ರೂಪಾಯಿ ಸಾಲ ಕೊಡುವವರಿದ್ದಾರೆ. ಇದರಿಂದ ಬ್ರಿಟನಿನ ಆರ್ಥಿಕ ಹಿತವೂ ಕಾಪಾಡಿದಂತಾಗುವದು. ಅಲ್ಲದೆ ಇದರ ಸಹಾಯದಿಂದ ಚಿಯಾಂಗ್ ಕೈಶೆಕ್‌ರವರ ಆಡಳಿತ ಕ್ರಮವೂ ಬಲಗೊಳ್ಳುವುದರಿಂದ ಜಪಾನಿನವರು ಬ್ರಿಟನರು ನಮ್ಮ ವಿಷಯದಲ್ಲಿ ಮಿತ್ರದ್ರೋಹಕರವಾದ ವರ್ತನೆಯನ್ನು ಅನುಸರಿಸಿರುವರೆಂದೂ ಭಾವಿಸಿ ಆಕ್ಷೇಪಿಸಿರುವರು.

ಪಾಲೇಸ್ತೀನ್.

ಇದರ ರಾಜಕೀಯ ಗಲಭೆಯ ಬಗ್ಗೆ ಒಂದು ಸಮ್ಮೇಳನವು ನಡೆಯಿತು. ಅಗ ಪೂರ್ಣ ಸ್ವಾತಂತ್ರ್ಯದ ಕಡೆಗೆ ಮುಂದುವರಿಯಬೇಕಾದರೆ ಯಹೂದ್ಯರೂ ಅರಬಿ ಪ್ರತಿನಿಧಿಗಳಿಗೆ ಒಪ್ಪಿಸುವರೆಂದೂ, ತಾವು ಈಗ ಪಾಲೆಸ್ತೀನದೊಡನೆ ಮಾಡಲು ಪ್ರಯತ್ನಿಸುತ್ತಿರುವ ಒಪ್ಪಂದಕ್ಕೆ ಇವು ಸಹಾಯಕವಾಗದಿದ್ದರೆ ಬ್ರಿಟಿಷ್ ಸರ್ಕಾರದವರು ಪಾಲೆಸ್ತೀನದ ವಿಚಾರ ತಮ್ಮ ಸ್ವಂತ ರಾಜನೀತಿಯನ್ನೂ, ತೀರ್ಮಾನವನ್ನೂ ಪ್ರಕಟಿಸಿರುವರೆಂದು ಹೇಳಲಾಗಿದೆ. ಈ ಮಧ್ಯೆ ಪಾಲೆಸ್ತೀನ ಗಲಭೆಗಳಾಗುತ್ತಿವೆ. ಬ್ರಿಟಿಷರಿಗೂ ಅರಬಿಯವರಿಗೂ ಅಲ್ಲಲ್ಲಿ ಕದನವಾಗುತ್ತಿದೆ. ತಾರೀಕು 10ನೇ ದಿನ ರಾತ್ರಿ ಈ ಇಕ್ಕಡೆಯವರಿಗೂ ಜಗಳವಾಗಿ ಅರಬಿಯವರಿಗೆ ತುಂಬಾ ನಷ್ಟವಾಗಿದೆ.

COORG FOREST DEPARTMENT

Timber Sale Notice.

Mercara, the 12th March 1939.

The following quantities of timber more or less Ex Forest Depots of Tittimatti Nagerhole, Somwarpet and Fraserpet Ranges will be sold by public auction at Husur on 23-3-1939 commencing at 10 A. M.

1.	Teak	3046 cft
(a)	-do-B. P.	1207
(b)	-do-Poles	742[illegible]
2.	Honne	390[illegible]
(a)	-do-B. P.	87
3.	Bitti	1082
(a)	-do-B. P.	6
4.	Matti	1923
(a)	-do- B. P.	115
5.	Nandi	4623
(a)	-do- B. P.	29
6.	Ajni	48

For further particulars please apply to the Chief Forest Officer, Coorg, Mercara.

ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನ.

ಕಾಂಗ್ರೆಸ್ ಪಾರ್ಟಿ ಸದಸ್ಯರ ಅಸಹಕಾರ!

ಒಂದನೇ ದಿನ.

ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನವು ಪ್ರೆಸಿಡೆಂಟರಾದ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಈ ತಾ. 14, 15, 16ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಶ್ರೀ ಪಂದ್ಯಂಡ ಬೆಳ್ಯಪ್ಪನವರ ವಿನಹ ಎಲ್ಲಾ ಮೆಂಬರುಗಳು ಹಾಜರಿದ್ದರು. ಹೊಸ ಮೆಂಬರುಗಳಾದ ಶ್ರೀ ಸಿ. ಯಂ. ರಾಮರಾಯರು ಮತ್ತು ವಿಸರ್ ಬುಲ್‌ರವರು ಪ್ರತಿಜ್ಞಾವಿಧಿಯನ್ನು ಪೂರೈಸಿದರು.

ರಾ. ಬ. ಅಪ್ಪಾರಂಡ ಚಂಗಪ್ಪನವರ ಮತ್ತು ಶ್ರೀ ಸಿದ್ದ ಸುಬ್ಬಯ್ಯನವರ ನಿಧನಕ್ಕಾಗಿ ದುಃಖ ಸೂಚಕ ಠರಾವನ್ನು ಪಾಸುಮಾಡಲಾಯಿತು.

ಅಧ್ಯಕ್ಷರು ತಮ್ಮ ಪ್ರಾರಂಭ ಭಾಷಣವನ್ನು ಮಾಡಿದ ನಂತರ ಪ್ರಶ್ನೋತ್ತರಗಳು ನಡೆದವು.

ಕೌನ್ಸಿಲು ಮೀಟಿಂಗಿನ ಠರಾವುಗಳಾಗಲೀ ಯಾ ಮೀಟಿಂಗಿನ ಕಾರ್ಯಕ್ರಮ ಪಟ್ಟಿಯಾಗಲೀ ತಮಗೆ ಸಕಾಲದಲ್ಲಿ ಸಿಕ್ಕಲಿಲ್ಲವೆಂದೂ, ಇದು ನಿಯಮಬದ್ಧವಲ್ಲವೆಂದೂ ಶ್ರೀ ಎಸ್. ರಾಮಮೂರ್ತಿಯವರು ಹೇಳಿದರು. ಅಧ್ಯಕ್ಷರು ಇದು ಬರೇ ಕೈ ತಪ್ಪೆಂದೂ, ಅದಕ್ಕಾಗಿ ತಾನು ವ್ಯಸನಪಡುವದಾಗಿಯೂ ಸೂಚಿಸಿದರು.

ಶ್ರೀ ಕೆ. ಸಿ. ಕರುಂಬಯ್ಯನವರು, ಅಧ್ಯಕ್ಷರು ಈ ವಿಚಾರ ವ್ಯಸನಪಡುವದರಿಂದ ತಾವೂ ಮೀಟಿಂಗಿನ ಕಾರ್ಯಕ್ರಮ ಪಟ್ಟಿ, ಸಕಾಲದಲ್ಲಿ ಸಿಗದ್ದರಿಂದ ಇಂದು ಮೀಟಿಂಗಿನಲ್ಲಿ ಭಾಗವಹಿಸಲು ತಯಾರಿಲ್ಲವೆಂದೂ, ನಿಯಮಪ್ರಕಾರ ಕಮ್ಮಿಪಕ್ಷ ಮೂರು ದಿನಕ್ಕೆ ಮೊದಲು ಇವನ್ನು ಕಳುಹಿಸದ್ದಕ್ಕೆ ಅಧ್ಯಕ್ಷರು ಬರೇ ವ್ಯಸನ ಸೂಚಿಸಿದರೆ ಸಾಲದು. ಕೌನ್ಸಿಲಿನ ಕಾರ್ಯಕಲಾಪಗಳು ಸಮಂಜಸವಾಗಿ ನಡೆಯಬೇಕಿದೆ. ಈ ಅವ್ಯವಸ್ಥೆಯ ಬಗ್ಗೆ ಕಾಂಗ್ರೆಸ್ ಪಾರ್ಟಿಯ ಪರವಾಗಿ ಚೀಫ್ ಕಮಿಷನರಿಗೆ ಒಂದು ದಿನಕ್ಕೆ ಮೊದಲೇ ಪತ್ರ ಕಳುಹಿಸಿದ್ದರೂ, ಅದಕ್ಕೆ ಯಾವದೊಂದು ಜವಾಬೀಯದೆ ಸರಕಾರವು ನಿರ್ಲಕ್ಷಿಸಿರುವದೆಂದೂ, ಆದ್ದರಿಂದ ಇಂದಿನ ಮೀಟಿಂಗನ್ನು ಒಂದು ದಿನ ಮುಂದರಿಸಿಡಬೇಕೆಂದೂ ಹೇಳಿದರು.

ಅಧ್ಯಕ್ಷರು ಹಾಗೆ ಮೀಟಿಂಗು ಮುಂದರಿಸಿಡುವದು ಅಸಾಧ್ಯವೆಂತಲೂ, ಮೀಟಿಂಗಿನ ಕಾರ್ಯಕಲಾಪಗಳ ಪಟ್ಟಿ ತಲುಪದ್ದಕ್ಕೆ ನನ್ನ ವಿಷಾದವನ್ನು ಈ ಮೊದಲೇ ಸೂಚಿಸಿದ್ದೇನೆಂದ ಕೂಡಲೇ ಶ್ರೀ ಕರುಂಬಯ್ಯನವರು ಅಧ್ಯಕ್ಷರ ಈ ಧೋರಣೆಯನ್ನು ಕಾಂಗ್ರೆಸ್ ಪಾರ್ಟಿಯ ಪರವಾಗಿ ನಿಷೇಧಿಸಿ, ಮೀಟಿಂಗನ್ನು ಮುಂದರಿಸಿಡದ ಹೊರತು ಇಂದಿನ ಮೀಟಿಂಗಿನಲ್ಲಿ ಭಾಗವಹಿಸಲು ತಯಾರಿಲ್ಲವೆಂದು ಹೇಳಿದರು. ಅದಕ್ಕೆ ಅಧ್ಯಕ್ಷರು ಒಪ್ಪದ್ದರಿಂದ ಕಾಂಗ್ರೆಸ್ ಪಾರ್ಟಿಯ ಸದಸ್ಯರೆಲ್ಲರೂ ಎದ್ದು ಹೊರಗೆ ನಡೆದರು.

ಮೆಂಬರುಗಳಿಗೆ ಕಾರ್ಯಕ್ರಮ ಪಟ್ಟಿಯನ್ನು ಸಕಾಲದಲ್ಲಿ ಕೊಡದ ಅವ್ಯವಸ್ಥೆ.

ಕಳೆದ ಅಧಿವೇಶನದ ಠರಾವುಗಳನ್ನು ಜಾರಿಗೆ ತರುವ ಬಗ್ಗೆ ಸರಕಾರದ ನಕಾರ.

ಬಡ್ಜೆಟ್ ಭಾಷಣಗಳು.

ಫೈನಾನ್ಸು ಮೆಂಬರು ಬಡ್ಜೆಟನ್ನು ಸಭೆಯ ಮುಂದಿಡುತ್ತಾ ಸುದೀರ್ಘವಾದ್ದೊಂದು ಭಾಷಣವನ್ನಿತ್ತರು. ಇದನ್ನು ವಿವರವಾಗಿ ಬರುವ ವಾರ ಪ್ರಕಟಿಸಲಾಗುವದು.

ಶ್ರೀ ಯಂ. ಯಂ. ಬೆಳ್ಯಪ್ಪನವರು ತನ್ನ ಭಾಷಣವನ್ನು ಪ್ರಾರಂಭಿಸುತ್ತಾ ಹೀಗೆಂದರು—ಕಾಂಗ್ರೆಸ್ ಪಾರ್ಟಿ ಮೆಂಬರರು ಸಹಕಾರಣವನ್ನು ಕೊಡದೆ ಹೊರ ಹೋದದ್ದು ಸರಿಯಲ್ಲ. ಇದೊಂದು ನಾಟಕದಂತಾಯಿತು. ಈ ತತ್ವವು ಕಾಂಗ್ರೆಸ್ ನಿಯಮಬದ್ಧವಾದ್ದಲ್ಲ. ಮ. ಗಾಂಧಿಯವರು ಈ ವರ್ತನೆಯನ್ನು ಮನ್ನಿಸಲಿಕ್ಕಿಲ್ಲ. ಬಡ್ಜೆಟಿನಲ್ಲಿ ಫೈನಾನ್ಸ್ ಮೆಂಬರರು ಉಳಿವರಿಯನ್ನು ತೋರಿಸಿರುವರು. ಸಿಬ್ಬಂದಿ ಕಡಿತೆಯು ಸರಿಯಾಗಿ ಮಾಡಲ್ಪಡಲಿಲ್ಲ. ಸಿಬ್ಬಂದಿ ಕಡಿತೆಯನ್ನು ಮಾಡುವಾಗ ಸರ್ಕಾರವು ಯಾವ ತತ್ವವನ್ನೂ ಅನುಸರಿಸಿದಂತೆ ಕಾಣುವದಿಲ್ಲ. ಫಾರೆಸ್ಟ್ ಇಲಾಖೆಯು ರೆವಿನ್ಯೂ ಇಲಾಖೆಯನ್ನು ಬದಿಗೊತ್ತಿ ಮುಂಬರಲು ಯತ್ನಿಸುತ್ತಿದೆ. ಇದರಿಂದ ಕೊಡಗು ಫಾರೆಸ್ಟ್ ಪ್ರಾಂತ್ಯವಾಗಬಹುದೋ ಎಂಬ ಹೆದರಿಕೆ ನನಗಿದೆ. ಒಂದು ಕಾಲದಲ್ಲಿ ಸ್ವರ್ಗದಂತಿದ್ದ ಈ ಕೊಡಗಿನಲ್ಲಿ ಇಂದು ಬಾಳುವದೇ ಕಷ್ಟವಾಗಿರುವುದು. ಮಲೆನಾಡರು ಸರ್ಕಾರದ ಇತ್ತೀಚಿನ ಧೋರಣೆಯಿಂದ ಅಸಮಾಧಾನಗೊಂಡಿರುವರು. ದೇಶದಲ್ಲಿಯ ಮಲೇರಿಯಾ ಹಾವಳಿಯನ್ನು ತಡೆಯಲು ಸರ್ಕಾರವು ತಕ್ಕ ಪ್ರಯತ್ನ ತೆಗೆದುಕೊಂಡಿರುವದಿಲ್ಲ. ಸಹಕಾರ ಇಲಾಖೆಯ ರಿಜಿಸ್ಟ್ರಾರವರನ್ನು ತೆಗೆಯುವರೆಂಬ ವದಂತಿ ಇರುವುದು. ಆದರೆ ಸಹಕಾರಿ ಸಂಸ್ಥೆಯು ಪ್ರಾಮುಖ್ಯ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ಸಂಸ್ಥೆಯಾದುದರಿಂದ ಅಲ್ಲಿ ಒಬ್ಬ ಜವಾಬ್ದಾರಿ ಅಧಿಕಾರಿಯು ಅಗತ್ಯ. ಡಿ. ಬೋರ್ಡಿನ ಹಳೇ ಪ್ರೆಸಿಡೆಂಟರು ಉಪಯೋಗಿಸಲನರ್ಹವೆಂದು ತಿರಸ್ಕರಿಸಿದ್ದ 'ಎತ್ತುಕಡು' ದೋಣಿಯನ್ನು ಈಗಿನ ಪ್ರೆಸಿಡೆಂಟರು ಅಂಗೀಕರಿಸಿರುವರು. ಡಿ. ಬೋರ್ಡಿನ ಆಡಳಿತವು ವ್ಯಕ್ತಿ ದೃಷ್ಟಿಯಿಂದ ನಡೆಯುತ್ತಿದೆಯಲ್ಲದೆ ಸಾರ್ವಜನಿಕ ಉಪಯೋಗ ದೃಷ್ಟಿಯಿಂದಲ್ಲ. (ಅಷ್ಟರಲ್ಲಿ ಅಧ್ಯಕ್ಷರು ಇಂಥಾ ಟೀಕೆಗೆ ಎಡೆಕೊಡುವದಿಲ್ಲ) ವೆಂದು ಎಚ್ಚರಿಸಿದರು.

ಶ್ರೀ. ಚೌಡ್ಲು ಕಾಳಪ್ಪನವರು ತಮ್ಮ ಭಾಷಣವನ್ನು ಓದುತ್ತಾ ಸಿಬ್ಬಂದಿ ಕಡಿತೆಯಲ್ಲಿ ಸಣ್ಣ ಉದ್ಯೋಗಸ್ಥರನ್ನು ತೆಗೆದು ಹಾಕಿದ್ದನ್ನು ಖಂಡಿಸಿದರು. ರಾಜರ ಕಾಲದಿಂದ ಇದ್ದ ದೇಶದ ಪೂರ್ವ ಚರಿತ್ರೆಗೆ ಒಂದು ಕುರುಹಂತಿದ್ದ ಚಾವಡಿಕಾರರನ್ನು ತೆಗೆದದ್ದು ಅಸಮಂಜಸವೆಂದೂ, ಶಾಲೆಗಳಲ್ಲಿ ನಡೆದ ಸಿಬ್ಬಂದಿ ಕಡಿತೆಯು ಪೂರಾ ಕಠಿಣ ತರದ್ದೆಂದೂ, ಸಣ್ಣ ಉದ್ಯೋಗಸ್ಥರೇ ಶ್ರಮ ವಹಿಸಿ ದುಡಿದು ದೇಶದ ಆರ್ಥಿಕ ಸ್ಥಿತಿಯನ್ನುದ್ಧರಿಸಲು ಕಾರಣರೆಂದೂ, ದೊಡ್ಡ ಉದ್ಯೋಗಸ್ಥರಿಂದ ಈ ಕಾರ್ಯಗಳು ಖಂಡಿತ ಅಸಾಧ್ಯವೆಂದೂ ಆದ್ದರಿಂದ ದೊಡ್ಡ ಉದ್ಯೋಗಸ್ಥರ ವೇತನವನ್ನು ಕಮ್ಮಿ ಮಾಡುವದು ಸಮಂಜಸವಾದ ನಡವಳಿಕೆಯೆಂದೂ ಹೇಳಿದರು.

ಶ್ರೀ. ರಾಮ ಮೂರ್ತಿಯವರು—ಇದು ದೇಶದ ಬಡ್ಜೆಟ್ಟನ್ನು ಪರಿಶೀಲಿಸುವ ಹಾಗೂ ದೇಶದ ಅಭಿವೃದ್ಧಿಗೆ ಸಲಹೆಯನ್ನು ಕೊಡುವಂಥಾ ಒಂದು ಸಂದರ್ಭ. ಬಡ್ಜೆಟ್ಟಿನಲ್ಲಿ ರಾಷ್ಟ್ರೀಯ ಕಟ್ಟೋಣ ಕಾರ್ಯಗಳಿಗೆ ಹಣವಿಟ್ಟಿರುವುದಿಲ್ಲ. ಈ ಬಡ್ಜೆಟ್ಟು ಸಮಗಟ್ಟಿಲ್ಪಟ್ಟಂತೆ ಕಂಡರೂ ಕಾರ್ಯತಃ ಅದು ಹೆಚ್ಚು ವೆಚ್ಚದ ಬಡ್ಜೆಟ್ಟೇ ಆಗಿದೆ. ಆದ್ದರಿಂದ ನಾವು ಬೇರೆ ಪ್ರಾಂತ್ಯದೊಡನೆ ಸಂಯೋಜನೆಯಾಗದಿದ್ದರೆ ನಮಗೆ ಮುಕ್ತಿ ಸಿಗಲಾರದು. ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ, ಪಟ್ರೋಲಿಗೆ, ಸರಕಾರಿ ನೌಕರರಿಗೆ ಹಾಗೂ ಸತ್ಕಾರ ಕೂಟಗಳಿಗೆ ಸಣ್ಣ ಹೊಸ ತೆರಿಗೆ ಹಾಕಬೇಕೆಂದು ಸೂಚಿಸುತ್ತೇನೆ. ಜೇನುಮೇಣ ಕೈಗಾರಿಕೆಯು ಬಹು ಲಾಭದಾಯಕವಾದುದರಿಂದ ಸರ್ಕಾರವು ಇದರ ವಿಚಾರ ನಿಗ ತೆಗೆದುಕೊಳ್ಳಬೇಕು. ಬಡ್ಜೆಟ್ಟಿನ ಹೆಚ್ಚಿನ ವಿಚಾರಗಳು ಸರಿಯಾಗಿ ಕಾಣುವದರಿಂದ ಬೇರೇನೂ ಟೀಕಿಸಲು ನನಗಿಲ್ಲ.

ಇಲ್ಲಿ ಮಧ್ಯಾಹ್ನದ ಊಟಕ್ಕಾಗಿ ಸಭೆಯು ಬರಖಾಸ್ತಾಯಿತು.

ಊಟ ಕಳೆದು ಸಭೆಯು 2-30 ಗಂಟೆಗೆ ಪುನಹ ಸೇರಿತು.

ಶ್ರೀ. ಕೆ. ಮಲ್ಲಪ್ಪನವರು ತಮ್ಮ ಭಾಷಣದಲ್ಲಿ—ವ್ಯವಸಾಯ ಉತ್ಪತ್ತಿಗೂ, ಉತ್ಪತ್ತಿಯ ವಿಕ್ರಿಯ ಬಗ್ಗೂ ಸರ್ಕಾರವು ಏನೂ ಮಾಡಿರುವುದಿಲ್ಲ. ಕೆಲವು ವರ್ಷಗಳಿಂದ ಮಳೆಯ ಅಭಾವದಿಂದ ಬೆಳೆಯು ಕಮ್ಮಿಯಾಗುತ್ತಿದೆ. ಸರ್ಕಾರವು ಇದರಿಂದ ರೈತರನ್ನು ತಪ್ಪಿಸಲು ನೀರು ಸರಬರಾಯಿಯ ಕಾರ್ಯ ಕೈಕೊಳ್ಳಬೇಕು. ರೈತನು ಸಾಲದಿಂದ ನರಳುತ್ತಿರುವನು. ಅವನ ಸಾಲದ ಬಾಧೆಯನ್ನು ತಪ್ಪಿಸಬೇಕು. ದೇಶಕ್ಕೊಂದು ಭೂಮಿ ಅಡವಿನ ಸಂಘ ಅತ್ಯಗತ್ಯ. ಇದನ್ನು ಸ್ಥಾಪಿಸುವ ಬಗ್ಗೆ ಇರುವ ಆರ್ಥಿಕ ಮುಗ್ಗಟ್ಟಿನ ವಿಚಾರ ನನಗೆ ತಿಳಿದಿದೆ. ಕೊಡಗಿನ ಭವಿಷ್ಯದ ಬಗ್ಗೆ ಸರ್ಕಾರದವರ ಯಾವ ನಿಶ್ಚಿತ ಧೋರಣೆಯೂ ಕಾಣುವದಿಲ್ಲ. ದಿನಚರ್ಯ ಆಡಳಿತದಿಂದ ದೇಶದ ಸ್ಥಿತಿಯು ಕೆಡುತ್ತಿದೆಯೆಂಬದು ವಿಷದವಾಗುತ್ತದೆ. ಬಡ್ಜೆಟ್ಟನ್ನು ಚೆನ್ನಾಗಿ ಅವಲೋಕಿಸಿದರೆ ಕೊಡಗು ಪ್ರತ್ಯೇಕ ಪ್ರಾಂತವಾಗಿರುವದು ದುಸ್ಸಾಧ್ಯವೆಂದು ತಿಳಿದು ಬರುತ್ತದೆ. ಸರಕಾರದವರು ದಕ್ಷಿಣ ಕೊಡಗಿನವರಿಗೆ ಹೆಚ್ಚಿನ ತಕಾವಿ ಸಾಲ ಕೊಟ್ಟಿದ್ದಾರೆ. ದಕ್ಷಿಣ ಕೊಡಗಿನವರು ವಿದ್ಯೆ ಹಾಗೂ ಆರ್ಥಿಕ ದೃಷ್ಟಿಯಿಂದ ಮುಂದುವರಿಯುತ್ತಿರುವರು. ಮಳೆಯ ಅಭಾವದಿಂದ ಈ ವರ್ಷ ಉತ್ತರ ಕೊಡಗಿನಲ್ಲಿ ಬೆಳೆಯೇ ಆಗಿರುವದಿಲ್ಲ. ಆದ್ದರಿಂದ ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಕೊಂಡು ರೈತರನ್ನು ಉದ್ಧರಿಸಬೇಕೆಂದು ಹೇಳಿದರು.

ಶ್ರೀ. ಎನ್. ಸೋಮಣ್ಣನವರು—ಕಾರ್ಯಕ್ರಮ ಪಟ್ಟಿಯು ನಮಗೆ ಸಕಾಲದಲ್ಲಿ ಸಿಕ್ಕದ ವಿಚಾರ ಮೊದಲೇ ಚರ್ಚಿಸಿದ್ದೇವೆ. ಆದರೆ ಬಾನೂನಿನಲ್ಲಿ ಆ ಸಂಬಂಧ ವಿಷದವಾದ ವಿವರಣೆ ಇಲ್ಲದ್ದರಿಂದಲೂ, ಅಧ್ಯಕ್ಷರು ಇದಕ್ಕೆ ತಮ್ಮ ವ್ಯಸನ ಸೂಚಿಸಿದ್ದರಿಂದಲೂ ನಾವು ತೃಪ್ತರಾದೆವು. ಕಾಂಗ್ರೆಸ್ ಪಾರ್ಟಿಯ ಕಾರಣಗಳು ಸರಿಯಾಗಿರಲಿಲ್ಲ. ಕಾಂಗ್ರೆಸಿನವರ ಈ ವರ್ತನೆಯನ್ನು ನಾನು ನಿಷೇಧಿಸುತ್ತೇನೆ. ಇಂದಿನ ಈ ಬಡ್ಜೆಟ್ಟಿನಿಂದ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿ ತನ್ನ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಲಾರದೆಂಬುವುದು ವಿಷದವಾಗುತ್ತದೆ. ರಿಟ್ರೆಂಚ್‌ಮೆಂಟ್ ಎಲ್ಲಿ ಮಾಡಬೇಕಿತ್ತೋ ಅಲ್ಲಿ ಮಾಡಲಿಲ್ಲ. ಬಡ್ಜೆಟ್ಟನ್ನು ಸಮಗಟ್ಟುವ ದೃಷ್ಟಿಯಿಂದ ಈ ಸಿಬ್ಬಂದಿ ಕಡಿತೆಯನ್ನು ಮಾಡಿದಂತೆ ಕಂಡು ಬರುತ್ತದೆ. ಪೊಲೀಸು ಇಲಾಖೆಯು ಹೊಸದಾಗಿ ತರಬೇತು ಹೊಂದಿ ಬಂದ ಇನ್ಸ್‌ಪೆಕ್ಟರನ್ನು ನಿವೃತ್ತಿಗೊಳಿಸಿದ್ದು ನ್ಯಾಯವಲ್ಲ; ಸಿಬ್ಬಂದಿ ಕಡಿತೆಯು ಹಿಂದುಳಿದ ಪಂಗಡದವರ ಹಿತ ದೃಷ್ಟಿಯಿಂದ ನಡೆದಿರುವ ಪ್ರಯುಕ್ತ ಸಂಬಂಧಪಟ್ಟ ಅಧಿಕಾರಿಗಳಿಗೆ ಕೃತಜ್ಞನಿರುವೆನು. ಆದರೆ ಸಿಬ್ಬಂದಿ ಕಡಿತೆಯ ವಿಧಾನವು 1931ನೇ ಇಸವಿಯ ಕಡಿತೆಯಂತೆ ಕ್ರಮಬದ್ಧವಾಗಿಲ್ಲ. ಉತ್ಪತ್ತಿಯ ಕಾರ್ಯಗಳಿಗೆ ಸರ್ಕಾರವು ಆರ್ಥಿಕ ಸಹಾಯ ಮಾಡಿ ಸಾಲದ ಬಾಧೆಯಿಂದ ನರಳುವ ರೈತರನ್ನು ಉದ್ಧರಿಸಬೇಕು. ಸಿಬ್ಬಂದಿ ಕಡಿತೆ ನಡೆದರೂ ಸಹ ಕೊಡಗು ಪ್ರತ್ಯೇಕ ಇರಲು ಸಾಧ್ಯವಿಲ್ಲ. ಆದರೆ ದೇಶದ ಬಹು ಭಾಗವು ದೇಶದ ಭವಿತವ್ಯದ ಬಗ್ಗೆ ಯಾವ ತೀರ್ಮಾನ ಮಾಡುವದೋ ಅದಕ್ಕೆ ಅನುಮತಿಯನ್ನೀಯಲು ನಾನು ತಯಾರಿರುವೆನು' ಎಂದು ಹೇಳಿದರು.

ಮಿ. ಐವರ್ ಬುಲ್‌ರವರು ಬಡ್ಜೆಟ್ಟಿನ ಕೆಲವಂಶಗಳನ್ನು ಎತ್ತಿ ಹೇಳಿ ಟೀಕಿಸಿದರು. ಫೈನಾನ್ಸ್ ಮೆಂಬರರು ಮೆಂಬರುಗಳು ಸೂಚಿಸಿದ ಕೆಲವು ವಿಷಯಗಳಿಗೆ ಜವಾಬಿತ್ತರು. ನಂತರ ಮೀಟಿಂಗು ತಾ. 15ಕ್ಕೆ ಮುಂದರಿಸಲ್ಪಟ್ಟಿತು.

ಭಾರತವು ಪರಾಧೀನವಾಗಲು ಕಾರಣವೇನು?

(ಮಹಾತ್ಮ ಗಾಂಧಿಯವರ ಲೇಖನದ ಆಧಾರದಿಂದ.)

ಈ ಮೊದಲಿನ ಲೇಖನದಲ್ಲಿ ಆಧುನಿಕ ನಾಗರೀಕತೆಯ ವಿಚಾರ ವಿವೇಚಿಸಲಾಯಿತು. ಇಂದಿನ ಈ ಲೇಖನದಲ್ಲಿ ಭಾರತವು ತನ್ನ ವ್ಯಕ್ತಿತ್ವವನ್ನು ಕಳಕೊಂಡುದರ ಕಾರಣವೇನು? ಎಂಬುದನ್ನು ತರ್ಕಿಸಲಾಗುವುದು. ಕಳೆದ ಲೇಖನವನ್ನು ಓದಿದರೆ ನಾಗರೀಕತೆಯು ಒಂದು ರೋಗವೆಂದೂ, ಅದು ಇಂಗ್ಲೆಂಡಿನಲ್ಲಿ ಜನತೆಯನ್ನು ಪೀಡಿಸುತ್ತಿದೆಯೆಂದಾದಪಕ್ಷ ಅದು ಭಾರತದಲ್ಲಿ ಹೇಗೆ ನೆಲಸಿತೆಂದೂ, ಭಾರತವು ಅದನ್ನು ಇಟ್ಟುಕೊಳ್ಳಲು ಕಾರಣವೇನು ಎಂಬ ಪ್ರಶ್ನೆಯು ಬರುತ್ತೆ.

ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡಿಲ್ಲ, ನಾವು ಅವರಿಗೆ ಕೊಟ್ಟಿರುವೆವು. ಅವರು ಭಾರತದಲ್ಲಿ ತಮ್ಮ ಶಕ್ತಿ ಪ್ರದರ್ಶನದಿಂದ ಬಾಳುತ್ತಿಲ್ಲ. ನಾವು ಅವರನ್ನು ಇಟ್ಟುಕೊಂಡಿರುವೆವು. ಇದರ ನಿಜಸ್ಥಿತಿಯನ್ನು ವಿಚಾರಿಸುವ. ಪ್ರಾರಂಭದಲ್ಲಿ ಅವರು ಇಲ್ಲಿಗೆ ವ್ಯಾಪಾರಿಗಳಾಗಿ ಬಂದರು. ಆ ಸಮಯದಲ್ಲಿ ಅವರಿಗೆ ಇಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿ ಆಳಬೇಕೆಂಬ ಅಭಿಲಾಷೆ ಇರಲಿಲ್ಲ. ವ್ಯಾಪಾರದಲ್ಲಿ ನಿರತರಾಗಿದ್ದ ಕಂಪೆನಿ ಅಧಿಕಾರಿಗಳಿಗೆ ಪ್ರೋತ್ಸಾಹವಿತ್ತವರಾರು? ಅವರ ಬೆಳ್ಳಿ, ಬಂಗಾರಕ್ಕೆ ಮನಸೋತವರಾರು? ಅವರ ಸಾಮಾನುಗಳನ್ನು ಪಡಕೊಂಡವರಾರು? ಎಲ್ಲಾ ನಾವೇ ಎಂಬುದು ಚರಿತ್ರೆಯಿಂದ ವಿಶದವಾಗುತ್ತದೆ. ಕ್ಷಣದಲ್ಲಿ ನಮ್ಮ ಸ್ಥಿತಿಯು ಉನ್ನತಿಗೊಳ್ಳಬೇಕು ಎಂಬ ದುರಾಲೋಚನೆಯಿಂದ ಅವರನ್ನು ತೆರೆದ ಕರಗಳಿಂದ ಆಹ್ವಾನಿಸಿದೆವು. ಅವರಿಗೆ ತರ ತರ್ಹದ ಸಹಾಯವನ್ನಿತ್ತೆವು. ನಾನು ಬಂಗಿ ಸೇವಿಸುವವನಾದರೆ ನನಗೆ ಭಂಗಿ ಕೊಟ್ಟ ವ್ಯಾಪಾರಸ್ಥನನ್ನೇಕೆ ದೂರಬೇಕು? ವ್ಯಾಪಾರಸ್ಥನನ್ನು ದೂರುವುದರಿಂದ ನನ್ನ ದುರಭ್ಯಾಸವು ಹೋದೀತೆ? ಭಾರತ ಮಾತೆಯ ನಿಜವಾದ ಸೇವಕನು ಈ ವಿಚಾರಗಳನ್ನು ಕೂಲಂಕುಶವಾಗಿ ವಿಚಾರಿಸಬೇಕು. ಹೆಚ್ಚು ತಿನ್ನುವುದರಿಂದ ಅಜೀರ್ಣ ಸಂಭವಿಸಿದರೆ ನೀರನ್ನು ದೂಷಣೆ ಮಾಡುವುದರಲ್ಲಿ ಅರ್ಥವಿಲ್ಲ. ಕಾಯಿಲೆಯನ್ನು ಪೂರ್ಣ ಪರೀಕ್ಷಿಸಿ ಔಷಧಿ ಕೊಡುವ ವೈದ್ಯನಂತೆ ಭಾರತದ ಈ ಕಾಯಿಲೆಯನ್ನು ನಿಜವಾದ ದೇಶಭಕ್ತನು ಪರೀಕ್ಷಿಸಿ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು.

ಬ್ರಿಟಿಷ್ ವ್ಯಾಪಾರಸ್ಥರಿಗೆ ನಾವು ಪ್ರೋತ್ಸಾಹವಿತ್ತುದ್ದರಿಂದ ಇಂದು ಭಾರತ ಮಾತೆಯು ಪರದಾಸ್ಯದಲ್ಲಿ ನರಳಬೇಕಾಯಿತು. ನಮ್ಮಲ್ಲಿಯ ರಾಜರುಗಳು ಅವರವರೊಳಗೆ ಕದನವಾದಾಗ ಕಂಪೆನಿಯ ಆಶ್ರಯ ಪಡೆದರು. ಆದ್ದರಿಂದ ವ್ಯಾಪಾರದಲ್ಲಿ ಮಗ್ನವಾಗಿದ್ದ ಕಂಪೆನಿಯು ರಣರಂಗಕ್ಕೂ ಇಳಿಯಿತು. ಇವರಲ್ಲೂ ಅವರ ಪ್ರಬಲ ಧ್ಯೇಯವೆಂದರೆ ತಮ್ಮ ಸಾಮಾನುಗಳಿಗೆ ಗಿರಾಕಿ ಹೆಚ್ಚಿಸಿ ಲಾಭ ಪಡೆಯಬೇಕೆಂಬುದೇ. ಹೀಗೆ ನಮ್ಮ ಸಹಾಯದಿಂದ ಅದು ತನ್ನ ವ್ಯಾಪಾರ ಕ್ಷೇತ್ರವನ್ನು ವಿಸ್ತರಿಸಿ ಅಲ್ಲಲ್ಲಿ ಭದ್ರತೆಗಾಗಿ ಕೋಟೆ ಕೊತ್ತಲಗಳನ್ನು ಕಟ್ಟಿತು. ಆದ್ದರಿಂದ ನಾವು ಮಾಡಿದ ಅಪರಾಧಕ್ಕೆ ಬ್ರಿಟಿಷರನ್ನು ದೂಷಿಸುವುದು ಅವಿವೇಕವಲ್ಲವೇ? ಹಿಂದೂ ಮಹಮ್ಮದೀಯರೊಳಗಿನ ವೈಷಮ್ಯವೂ ಅವರ ಏಳಿಗೆಗೆ ಸಹಕಾರಿಯಾಯಿತು. ಆದ್ದರಿಂದ ನಾವು ಇಂಡಿಯಾವನ್ನು ಪರದಾಸ್ಯಕ್ಕೆ ಸಿಲುಕಿಸಿದವರೆಂಬುದು ಸತ್ಯ.

ಕೆಲವು ಯೂರೋಪಿಯನರು ಉದಾರ ಬುದ್ಧಿಯಿಂದ ಭಾರತದ ಪರಿಸ್ಥಿತಿಯು ಅವ್ಯವಸ್ಥೆಯಲ್ಲಿದ್ದ ಕಾಲಕ್ಕೆ ಅದನ್ನು ಸರಿಪಡಿಸಲು ನಾವಲ್ಲಿರಬೇಕಾಯಿತೆಂದೂ, ಮತ್ತೆ ಕೆಲವರು ನಮ್ಮ ಶಕ್ತಿಯಿಂದ ಅಂದರೆ ಯುದ್ಧ ಕೌಸಲ್ಯದಿಂದ ಭಾರತವನ್ನು ಜಯಿಸಿದೆವೆಂದೂ ಘೋಷಿಸುವರು. ಈ ಎರಡು ಘೋಷಣೆಗಳೂ ತಪ್ಪಾಗಿವೆ. ಭಾರತವನ್ನು ವಶಪಡಿಸಲು ಯುದ್ಧ ಕೌಶಲ್ಯ ಬೇಕಿಲ್ಲ. ನಾವೇ ಅವರನ್ನಿಟ್ಟುಕೊಂಡದ್ದಾಗಿದೆ. ಫ್ರಾನ್ಸಿನ ರಣಧೀರನಾದ ನೆಪೋಲಿಯನನು ಬ್ರಿಟಿಷರನು, ವ್ಯಾಪಾರಿ ಜನಾಂಗ (Nation of shop keepers) ವೆಂದು ಅಂದಿರುವನು. ಅದು ಸಮಂಜಸವಾಗಿ ಅನ್ವಯಿಸುವ ಮಾತಾಗಿದೆ. ಅವರ ವ್ಯಾಪಾರ ದೃಷ್ಟಿಯಿಂದ ಯಾವ ಪ್ರಾಂತವನ್ನಾದರೂ ಅವರು ಹಿಡಿದುಕೊಳ್ಳುವರು. ಅವರ ಸೈನ್ಯ ಹಾಗೂ ಹಡಗು ಪಡೆಯು ಇದನ್ನು ರಕ್ಷಿಸಲಿಕ್ಕಿರುವವು. ಆಫ್ರಿಕದ ಟ್ರಾನ್ಸುವಾಲ್ ಪ್ರಾಂತವು ಅವರಿಗೆ ವ್ಯಾಪಾರಕ್ಕೆ ಅನುಕೂಲವಾಗದ್ದರಿಂದ ಮಿ. ಗ್ಲಾಡ್‌ಸ್ಟನರು ಅದನ್ನು ಬ್ರಿಟಿಷರು ಇಟ್ಟುಕೊಳ್ಳುವುದು ಅಯೋಗ್ಯವೆಂದರು. ಅದು ಅಭಿವೃದ್ಧಿಗೊಂಡು ವ್ಯಾಪಾರಕ್ಕೆ ಅನುವಾದಾಗ ಅದರ ಬಗ್ಗೆ ಕದನವಾಯಿತು. ಪ್ರೆಸಿಡೆಂಟ್ ಕ್ರೂಗರರನ್ನು ಒಮ್ಮೆ ಒಬ್ಬರು ಚಂದ್ರಲೋಕದಲ್ಲಿ ಚಿನ್ನವಿರಬಹುದೇ ಎಂದು ಪ್ರಶ್ನಿಸಿದರಂತೆ. ಅದಕ್ಕೆ ಅವರು ಅಲ್ಲಿ ಖಂಡಿತ ಇಲ್ಲ, ಹಾಗಿದ್ದಪಕ್ಷ ಅದನ್ನು ಬ್ರಿಟಿಷರು ತಮ್ಮ ಹತೋಟಿಗೆ ತರುತಿದ್ದರು ಅಂದರಂತೆ. ಇಂದು ಅವರಿಗೆ ಹಣವೇ ದೇವರಾಗಿರುವುದು. ಇಂದು ನಾವು ನಮ್ಮ ಸ್ವಾರ್ಥ ದೃಷ್ಟಿಯಿಂದ ಯೂರೋಪಿಯನರನ್ನು ಭಾರತದಲ್ಲಿಟ್ಟುಕೊಂಡಿರುವೆವು. ಅವರ ವ್ಯಾಪಾರ ಸಾಮಗ್ರಿಗಳನ್ನು ಕೊಂಡು ಪ್ರೋತ್ಸಾಹಿಸುವೆವು. ಅವರು ನಮಗೆ ಬೇಕಾದ್ದನ್ನು ಒದಗಿಸಿ ನೋಡಿಲ್ಲದೆ ಹಣದ ಪ್ರವಾಹವನ್ನೇ ಹೀರುತ್ತಿರುವರು. ಇದಕ್ಕಾಗಿ ಅವರನ್ನು ದೂಷಿಸಿ ಪ್ರಯೋಜನವಿಲ್ಲ. ಅವರಿಗೆ ಮತ್ತಷ್ಟು ಬಲಕೊಟ್ಟದ್ದೆಂದರೆ ನಮ್ಮ ಅಂತರ್ಗತ ಜಗಳ. ಮೇಲಿನ ವಿಚಾರಗಳನ್ನು ಪರಿಶೀಲಿಸಿದರೆ ಬ್ರಿಟಿಷರು ಭಾರತಕ್ಕೆ ಬರೇ ವ್ಯಾಪಾರಕ್ಕಾಗಿ ಬಂದದ್ದೆಂದು ವೇದ್ಯವಾಗುತ್ತೆ. ಇಲ್ಲಿ ಇಂದು ಅವರು ಇರುವುದಾದರೂ ಅದೇ ಧ್ಯೇಯದಿಂದ. ಅವರಿಗೆ ಬೇಕಾದ ಸಹಾಯವನ್ನು ಮಾತ್ರ ನಾವು ಕೊಡುತ್ತಿರುವೆವು. ಈ ಸಂದರ್ಭದಲ್ಲಿ ಇಂದು ಜಪಾನಿನ ಆಕಾಶದಲ್ಲಿ ಹಾರುತ್ತಿರುವ ಧ್ವಜವು ಬ್ರಿಟಿಷರದ್ದೇ ಅಲ್ಲದೆ ಜಪಾನಿನವರದಲ್ಲವೆಂದು ಹೇಳಬೇಕಾಗಿದೆ. ತಮ್ಮ ವ್ಯಾಪಾರಾಭಿವೃದ್ಧಿಯ ದೃಷ್ಟಿಯಿಂದ ಬ್ರಿಟಿಷರು ಜಪಾನಿಯರೊಡನೆ ಒಪ್ಪಂದ ಮಾಡಿಕೊಂಡಿರುವರು. ಕ್ರಮೇಣ ಅಲ್ಲಿಯೂ ಇವರು ಅಭಿವೃದ್ಧಿಹೊಂದಬಹುದು. ಇಂದು ಬ್ರಿಟಿಷರು ವಿಶಾಲ ಜಗತ್ತನ್ನೇ ತಮ್ಮ ಸಾಮಾನುಗಳ ಒಂದು ಸಂತೆಯಾಗಿ ಮಾರ್ಪಡಿಸಲು ಪ್ರಯತ್ನಿಸುತ್ತಿರುವರು. ಹಾಗೆ ಅವರು ಮಾಡಲಾರರೆಂಬುದು ನಿಜ. ಆದರೆ ಅವರ ಧ್ಯೇಯಸಾಧನೆಯಲ್ಲಿ ಮಾಡಬಹುದಾದ ಸಮಗ್ರ ಪ್ರಯತ್ನವನ್ನೂ ಅವರು ಮಾಡುವರೆಂಬುದು ಮಾತ್ರ ನಿಜವಾದ ಮಾತು.

ಮುಂದಿನ ವಾರ ಭಾರತದ ಸ್ಥಿತಿಯನ್ನು ಕುರಿತು ಬರೆಯಲಾಗುವುದು.

ಎರಡನೇ ದಿನ.

ಈ ದಿನ ಮಿ. ಬಟ್ಲರವರು ಮತ್ತು ಶ್ರೀ ಪಿ. ಐ. ಬೆಳ್ಯಪ್ಪನವರು ಗೈರ್ಹಾಜರಿದ್ದರು.

ಪ್ರಶ್ನೋತ್ತರಗಳು ಯಥಾ ಪ್ರಕಾರ ನಡೆದವು. ಕಾಂಗ್ರೆಸ್ ಪಾರ್ಟಿಯ ಮೆಂಬರರು ಇದರಲ್ಲಿ ಭಾಗ ವಹಿಸದೆ ತಾಟಸ್ಥ್ಯಭಾವವನ್ನು ತಳೆದು ಕುಳಿತಿದ್ದರು. ಸರಕಾರ ಠರಾವುಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಶ್ರೀ. ಕೆ. ಪಿ. ಕರುಂಬಯ್ಯನವರು ಎದ್ದು ಕಾಂಗ್ರೆಸ್ ಪಾರ್ಟಿಯ ಪರವಾಗಿ ಕೌನ್ಸಿಲಿನ ಕಾರ್ಯಕಲಾಪಗಳ ಹಾಗೂ ನಿನ್ನಿನ ಹೊರ ನಡೆತದ ವಿಚಾರ ತನಗೊಂದು ಪ್ರಕಟಣೆಯನ್ನು ಕೊಡಬೇಕಾಗಿದೆಯೆಂದೂ, ಅದಕ್ಕೆ ಅಧ್ಯಕ್ಷರು ಸಮಯ ಕೊಡಬೇಕೆಂದೂ ಕೇಳಿಕೊಂಡರು. ಶ್ರೀ ಯಂ. ಯಂ. ಬೆಳ್ಯಪ್ಪನವರು ಮತ್ತು ಚೌಡ್ನ ಕಾಳಪ್ಪನವರು—ಹೀಗೆ ಪ್ರಕಟಣೆಯನ್ನು ಕೊಡುವುದು ಕಾನೂನುಬಾಹಿರವಾದದ್ದೆಂದೂ, ಅದು ಕಾರ್ಯಕ್ರಮ ಪಟ್ಟಿಯಲ್ಲಿ ಇಲ್ಲದಿರುವದರಿಂದ ಅದಕ್ಕೆ ಎಡೆಕೊಡಲಿಕ್ಕೆ ಕೂಡದೆಂದೂ ಅಧ್ಯಕ್ಷರನ್ನು ಕೇಳಿಕೊಂಡರು. ಅಧ್ಯಕ್ಷರು ಸದರಿ ಪ್ರಕಟಣೆಯ ಬಗ್ಗೆ ವಿಚಾರಿಸಿ ಅದನ್ನು ಮೊದಲು ತಾನು ನೋಡಬೇಕೆಂದು ಕೇಳಿದ ಮೇರೆ ಶ್ರೀ ಕರುಂಬಯ್ಯನವರು ಅದನ್ನು ಅಧ್ಯಕ್ಷರಿಗೆ ತೋರಿಸಿದರು. ಅಧ್ಯಕ್ಷರು ಅದನ್ನು ನೋಡಿ ಹೇಳಿಕೆಯನ್ನು ಸಭೆಯ ಮುಂದಿಡಲು ಕರುಂಬಯ್ಯನವರಿಗೆ ಅನುಮತಿ ಕೊಟ್ಟರು. ಶ್ರೀ. ಕರುಂಬಯ್ಯನವರು ಪ್ರಕಟಣೆಯನ್ನು ಸಭೆಯ ಮುಂದಿಟ್ಟರು. (ಇದರ ವಿವರ ಬೇರೊಂದು ಕಡೆ ಕೊಡಲಾಗಿದೆ.) ನಂತರ ಕಾಂಗ್ರೆಸ್ ಪಾರ್ಟಿಯ ಮೆಂಬರರೆಲ್ಲಾ ಎದ್ದು ಹೊರಗೆ ಹೋದರು.

[ಸಶೇಷ

ರಾಷ್ಟ್ರಪತಿಗಳ ರಾಜವೈಭವದ ಮೆರವಣಿಗೆ.

ತ್ರಿಪುರಿಯಲ್ಲಿ ಜರಗಿದ ಕಾಂಗ್ರೆಸಿನ 52 ನೇ ಮಹಾಧಿವೇಶನ ಸಮಾರಂಭದಲ್ಲಿ ಅಧ್ಯಕ್ಷರಾದ ರಾಷ್ಟ್ರಪತಿ ಸುಭಾಷಚಂದ್ರ ಬೋಸರನ್ನು ನಗರದಲ್ಲಿ ಮೆರವಣಿಗೆ ಮಾಡಲು ಈ ಮೊದಲಿನ 52 ಅಧಿವೇಶನಗಳ ಕುರುಹಾಗಿ 52 ಆನೆಗಳನ್ನು ಏರ್ಪಡಿಸಿದ್ದರು. ಆದರೆ ದುರ್ದೈವ ವಶಾತ್ ಸುಭಾಷ ಬಾಬುಗಳ ಸ್ವಸ್ಥತೆಯಿಲ್ಲದ್ದರಿಂದ ಮೆರವಣಿಗೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಸುಂದರಾಲಂಕೃತವಾದ ಆನೆಯೊಂದು ದೊಡ್ಡ ಭಾವಚಿತ್ರವನ್ನು ಮೆರವಣಿಗೆಯ ರಥದಲ್ಲಿರಿಸಿದ್ದರು. ಆದೇ ಉದಯಿಸುತ್ತಿದ್ದ ದಿನಕರನ ಹೊಂಬಣ್ಣದ ಕಿರಣಗಳು ಉದಯಾಚಲವನ್ನು ಆವರಿಸಿದ್ದಂತ ಆ ಸಮಯದಲ್ಲಿ ರಾಷ್ಟ್ರಾಧ್ಯಕ್ಷರ ರಾಜವೈಭವದ ಮೆರವಣಿಗೆಯು ವಿಷ್ಣುದತ್ತ ನಗರದಿಂದ ಹೊರಟಿತು. ಈ ಅಲಂಕಾರಯುಕ್ತ ಮೆರವಣಿಗೆಯನ್ನು ನೋಡಿ ಕಣ್ಣನಗಳನ್ನು ತಣಿಸಿಕೊಳ್ಳಲು ಸಾವಿರಾರು ಹೆಂಗಸರು, ಗಂಡಸರು ಮಕ್ಕಳು ಸುತ್ತು ಮುತ್ತಲಿನ ಊರುಗಳಿಂದ ಬೇಗಾಗುವದರೊಳಗಾಗಿ ಕಿಕ್ಕಿರಿದು ಬಂದು ನೆರೆದಿದ್ದರು.

ವನರಾಜನಂತೊಪ್ಪುವ ದೊಡ್ಡದೊಂದು ಆನೆಯು ಅಂಬಾರಿಯಲ್ಲಿದ್ದ ತ್ರಿವರ್ಣ ಧ್ವಜವನ್ನು ಅಂಬರದಲ್ಲಿ ಹಾರಿಸುತ್ತಾ ಮಂದಗಮನದಿಂದ ಮುಂದ ಸಾಗಿತ್ತು. ಎಲ್ಲಕ್ಕೂ ಮುಂದ ರಾಷ್ಟ್ರಗೀತೆಯನ್ನೇ ರಾಗಯುಕ್ತವಾಗಿ ಬಾಜಿಸುತ್ತಾ ಮುನ್ನಡೆಯುತ್ತಿದ್ದ ವಾದ್ಯಗಳ ಆ ಘೋಷಣ, ಸ್ವಯಂ ಸೇವಕರ ಆ ಮನರಂಜಕ ಮೆರವಣಿಗೆ, ಅದರ ಹಿಂದೆ ಗುಲಾಬಿ ವರ್ಣದ ಸೀರೆಯುನ್ನುಟ್ಟ ಸಿ ರಿ ಮೊ ಗ ದ ದೇ ಶ ಸೇ ವಿ ಕೆ ಯ ರ ಆ ತಂ ಡ, ಆ ಭಾಗ್ಯಾಕಾಶದಲ್ಲಿ ತಾಳಕ್ಕೆ ಸರಿಯಾಗಿ ಪಟಪಟಿಸುವಂತೆ ತೋರುತ್ತಿದ್ದ ಆ ನೆಚ್ಚಿನ ರಾಷ್ಟ್ರಧ್ವಜ, ಹೀಗೆ ಬಂಗಾರ ಹಾಗೂ ಇನ್ನಿತರ ವಸ್ತ್ರಾಲಂಕೃತವಾಗಿ ದೈನ್ಯದೂಷಾದಿ ನಡೆನ್ನಡಯುತ್ತಿದ್ದ ಆ ಗಜಗಂಗ್ರಿ, ಪ್ರತಿಯೊಂದು ಆನೆಯ ಮೇಲೆ ಕಳೆದ 52 ವರ್ಷಗಳಿಂದ ರಾಷ್ಟ್ರಪತಿತ್ವವನ್ನು ಅಲಂಕರಿಸಿದ, ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ದಾರೆಯೆರೆದ ಮತ್ತು ಎರೆಯುತ್ತಿರುವ ತ್ಯಾಗವೀರರ ಅಲಂಕಾರಯುಕ್ತ ಭಾವಚಿತ್ರಗಳು, ಇದೆಂತ ಅದ್ಭುತ ಹಾಗೂ ಆನಂದಕರ ದೃಶ್ಯ!! ಗಜಪಂಗ್ತಿಗಳ ಹಿಂದೆ ಬರುತ್ತಿದ್ದ ದೇಶಾಭಿಮಾನದ ಕಣಗಳನ್ನು ರಕ್ತದ ಮಸಿಯಲ್ಲಿ ಕಳೆದಿರುವ ಆ ಕೆಚ್ಚೆದೆಯ ತ್ಯಾಗವೀರರು, ಹೆಚ್ಚೇಕೆ? ಆ ವೈಭವವನ್ನು ಈ ನನ್ನ ಬಡ ಲೇಖನಿಯು ವರ್ಣಿಸಲಾರದು. ಈ ಚಿತ್ತಾಕರ್ಷಕ ಹಾಗೂ ಚರಿತ್ರಾರ್ಹದೃಶ್ಯವನ್ನು ನೋಡಿದವರೇ ಧನ್ಯರು. ಶ್ರೀ ಸುಭಾಷ ಬೋಸರು ತಮ್ಮ ಕಾಯಿಲೆಯ ದೆಸೆಯಿಂದ ಮೆರವಣಿಗೆಯ ಆ ಭವ್ಯವೈಭವವನ್ನು ಸ್ವೀಕರಿಸಲು ಅಸಮರ್ಥರಾದ್ದರಿಂದ ಆ ಮಾನವ ಮಹಾಸಾಗರದಲ್ಲಿ ನಿರಾಶೆಯುಂಟಾದರೂ, ಭಯ, ಭಕ್ತಿ, ಪ್ರೇಮ, ವಿಶ್ವಾಸಗಳಿಂದ ಅವರ ಮತ್ತು ಉಳಿದವರ ಭಾವ ಚಿತ್ರಗಳಿಗೆ ಮಣಿದು ವಂದಿಸಿದರು.

ನಂತರ ಪ. ಜವಾಹರಲಾಲರು ಧ್ವಜಾರೋಹಣವನ್ನು ಮಾಡಿದರು.

ವಿ ವಿ ಧ ವಿ ಚಾ ರ.

ಅಟ್ಲಾಂಟಿಕ್ ಸಾಗರವನ್ನು ದಾಟಲು ಸೇತುವೆ.

ಹಡಗನ್ನು ಹತ್ತದೆಯೇ ಅಟ್ಲಾಂಟಿಕ್ ಸಾಗರವನ್ನು ದಾಟಬಹುದೇ? ದಾಟಬಹುದು. ಹೇಗೆಂದರೆ ಅಟ್ಲಾಂಟಿಕ್ ಸಾಗರದ ಒಂದು ಭಾಗವು ಸ್ಕಾಟ್ಲೆಂಡಿನ ಬಳಿ ಬಹು ಇಕ್ಕಟ್ಟಾದ ಪ್ರದೇಶವಲ್ಲಿದೆ. ಇಲ್ಲಿ ಸೀಲ್ ಎಂಬ ದ್ವೀಪವಿದೆ. ಈ ದ್ವೀಪಕ್ಕೂ ಸ್ಕಾಟ್‌ಲೆಂಡಿನ ಭೂಭಾಗಕ್ಕೂ ಸೇರಿಸುವಂಥ ಸೇತುವೆಯೊಂದಿದೆ. ಇದರ ಮೇಲೆ ನಡೆದು ಹೋದರಾಯಿತು; ಅಟ್ಲಾಂಟಿಕ್ ಸಾಗರವನ್ನು ಹಡಗು ಹತ್ತದೆಯೇ ದಾಟಿದಂತಾಗುವುದು.

—o0o—

ಮೀನುಗಳು ನಡೆಯುವುವು.

ಮೀನುಗಳು ನಡೆಯುವುವೆಂದರೆ ಆಶ್ಚರ್ಯವಾಗಬಹುದು. ಆದರೆ ಓಹಿಯೋ ಸಂಸ್ಥಾನದ (ಅಮೇರಿಕ) ವಾರ್ನ್ ಎಂಬಲ್ಲಿ ಎಚ್. ಎ. ರೈನಲ್ಲಿ ಎಂಬವನು ಅಪೂರ್ವವಾದ ಎರಡು ಚೀನಾ ಮೀನುಗಳನ್ನು ನ್ಯೂಯಾರ್ಕ್ ನಗರಕ್ಕೆ ತಂದಿರುವನು. ಪ್ರದರ್ಶಿಸಿದಾಗ ಈ ಮೀನುಗಳು ತಮ್ಮ ಪಕ್ಕಗಳಲ್ಲಿನ ರೆಕ್ಕೆಗಳ ಸಹಾಯದಿಂದ 'ಸೀಲ್' ಪ್ರಾಣಿಗಳು ನಡೆಯುವಂತೆ ನಡೆದುವಂತೆ!

—o0o—

ಮೂರಡಿ ಉದ್ದದ ಮೂಷಿಕಗಳು.

ಡಚ್ ನ್ಯೂಗಿನೀ ಎಂಬಲ್ಲಿ ಶೋಧನೆಗಾಗಿ ಹೊರಟಿದ್ದಾಗ ಆಶ್ಚರ್ಯಕರವಾದ ಅಂಶಗಳು ಕಂಡುಬಂದವು. ಮೂರು ಅಡಿ ಉದ್ದದ ಮೂಷಿಕಗಳು ಕಂಡುಬಂದವು. ಡೆಮೂಷಿಕಗಳಂತೂ ಪ್ರಾಣಾಪಾಯವನ್ನುಂಟು ಮಾಡತಕ್ಕವು, ಶಕ್ತಿಯುತವಾದವು ಮತ್ತು ಭಯವನ್ನುಂಟುಮಾಡತಕ್ಕವು. ಕಾಂಗರೂ ಸಾಧುವಾದರೂ ಹಿಡಿಯುವುದು ಸುಲಭವಾದರೂ ಅವುಗಳಿಂದ ತಪ್ಪಿಸಿಕೊಂಡು ಹೋಗುವುದು ಅಸಾಧ್ಯವಂತೆ! ಏಕೆಂದರೆ ಈ ಕಾಂಗರೂಗಳು (ಸಾಧಾರಣವಾಗಿ ಮರಹತ್ತವು) ಮರವನ್ನೂ ಸಹ ಹತ್ತುವುವಂತೆ!

—o0o—

ಮಾನವ ಜನಾಂಗದ ಮೂಲ ಆಫ್ರಿಕವೇ?

ಮಾನವ ಜನಾಂಗದ ಮೂಲಸ್ಥಾನವು ಮಧ್ಯ ಆಫ್ರಿಕವೆಂದೂ, ಆದಿಮಾನವರು ಈ ಜಗತ್ತಿನಲ್ಲಿ ಜನ್ಮವೆತ್ತಿದ್ದು ಮಧ್ಯ ಆಫ್ರಿಕದಲ್ಲೆಂದೂ ಊಹಿಸಬಹುದಾದ ಚಿಹ್ನೆಗಳು ಈಗ ಪ್ರಾಚೀನ ವಸ್ತು ಸಂಶೋಧಕರಿಗೆ ಕಂಡು ಬಂದಿದೆ ಮತ್ತು ಪುರಾತನ ಕಾಲದ ಅಂದರೆ ಸುಮಾರು 5 ಲಕ್ಷ ವರ್ಷಗಳದ್ದೆಂದು ಹೇಳಬಹುದಾದ ಜನರ ಆಯುಧ ಸಾಮಗ್ರಿಗಳು ದೊರೆತಿವೆಯಂತೆ. ಅಲ್ಲದೆ ಯೂರೋಪು ಮತ್ತು ಏಷ್ಯಗಳಿಗೆ ಜನರು ವಲಸೆ ಮೂಲಕ ಬಂದುದೂ ಈ ಆಫ್ರಿಕದಿಂದಲೇ ಎಂಬುವುದಕ್ಕೆ ಸೂಚನೆಗಳು ಕಂಡುಬಂದಿದೆ.

—o0o—

ಭೂಮಿಯ ಮೇಲೆ ಹೋಗುವ ದೋಣಿ.

ದೋಣಿಯು ನೀರಿನ ಮೇಲೇ ಹೋಗಬೇಕೆಂಬ ನಿಯಮವೇನೂ ಇಲ್ಲ. ಹಾಗಿದ್ದರೂ ಈಗ ಕೇಳುವ ಹಾಗಿಲ್ಲ. ಯಾಕೆಂದರೆ ದೊಡ್ಡ ನದಿಗಳ ಮೇಲೆ ದೋಣಿ ಕಂಪೆನಿಯವರು ದೋಣಿಗಳನ್ನು ಜನರ ಪ್ರಯಾಣಕ್ಕಾಗಿ ಇಟ್ಟಿರುತ್ತಾರೆ. ನದಿಯು ಬೇಸಿಗೆಯಲ್ಲಿ ಬತ್ತಿ ಹೋದರೆ ಆಗೇನು ಮಾಡಬೇಕು? ಅದಕ್ಕಾಗಿಯೇ ನೀರಿಲ್ಲದಿದ್ದರೂ ಸಹ ನೆಲದ ಮೇಲೂ ಹೋಗುವಂತೆ ಈಗ ದೋಣಿಗಳನ್ನು ರಚಿಸುತ್ತಿರಲಾಗಿದೆ.

—o0o—

ರಬ್ಬರ್ ಕಿಟಕಿಗಳು.

ಇನ್ನು ಮುಂದೆ ಶಾಲೆಗಳಲ್ಲಿ ಹುಡುಗರು ಧೈರ್ಯವಾಗಿ ಆಡಬಹುದು. ಏಕೆಂದರೆ ಫುಟ್‌ಬಾಲ್, ಕ್ರಿಕೆಟ್ ಮುಂತಾದುವನ್ನು ಆಡುವಾಗ ಚೆಂಡು ಬಂದು ಬಾಗಿಲುಗಳು, ಕಿಟಕಿಗಳು ಒಡೆದು ಹೋಗಬಹುದು. ಆದರೆ ಇವನ್ನು ತಪ್ಪಿಸಲು ರಬ್ಬರ್ ಕಿಟಕಿಗಳನ್ನು ಏರ್ಪಡಿಸಲಾಗುವುದು. ರಬ್ಬರಿಗೆ ಕ್ಲೋರೀನ್ ಗ್ಯಾಸನ್ನು ಸೇರಿಸಿ ಗಾಜಿನಂತೆ ಪಾರದರ್ಶಕ ವಸ್ತುವನ್ನು ನಿರ್ಮಿಸಿ ಅದರಿಂದ ಕಿಟಕಿಗಳ ಕನ್ನಡಿಯನ್ನು ನಿರ್ಮಿಸುವರಂತೆ!

—o0o—

ನಿಮ್ಮ ಹಿರಿಯ.

ದಕ್ಷಿಣ ಆಫ್ರಿಕದಲ್ಲಿ ಮನುಷ್ಯನನ್ನು ಹೋಲುವ ಎರಡು ಕಪಿಗಳ ತಲೆ ಬುರುಡೆ ನೆಲದಡಿಯಲ್ಲಿ ದೊರೆತಿದೆ. ಇವನ್ನು ಅಮೇರಿಕೆಯ ಡಾ. ವಿಲ್ಲಿಯಂ ಕಿಂಗ್ ಗ್ರೆಗರಿಯವರು ಪರೀಕ್ಷಿಸಿ 'ಮಾನವನೆಂಬವನು ಮಂಗನ ರೂಪದಿಂದ ಇಂದಿನ ಸ್ಥಿತಿಗೆ ಮಾರ್ಪಟ್ಟನೆಂಬುವುದಕ್ಕೆ ಅಲ್ಪ ಮಿದುಳಿನ ಈ ಮಂಗಗಳ ತಲೆಬುರುಡೆಯೇ ಸಾಕ್ಷಿ. ಯೂರೋಪ್, ಆಫ್ರಿಕಾ ಏಷ್ಯಾಗಳಲ್ಲೇ ಮೊದಲು ಮಾನವ ವರ್ಗ ನಿರ್ಮಾಣವಾಗಿದೆ. ಇದೇ ಅದಕ್ಕೆ ಸಾಕ್ಷಿ' ಎಂದು ಈ ಡಾಕ್ಟರು ಅಭಿಪ್ರಾಯಪಡುತ್ತಿದ್ದಾರೆ. ಮಾರುತಿ ಉಪಾಸಕರಿಗೆ ಇದರಿಂದ ಆನಂದಕರವಾಗಬಹುದು!

—o0o—

ಸಾಲಗಾರರಿಂದ ತಪ್ಪಿಸಲು

ಪದೇ ಪದೇ, ಸಾಲ ಪಡೆದುಕೊಂಡ ಹಣವನ್ನು ಹಿಂತಿರುಗಿ ಕೊಡಿರೆಂದು ಕೇಳುವವರ ಕಾಟ ಬಹಳ. ಸಾಲ ಕೊಳ್ಳುವುದು ಹದಿನಾರು ಜನ್ಮಕ್ಕೂ ಬೇಡ ಅನ್ನಿಸಿಬಿಡುವುದು ಇವರ ಈ ಕಾಟ. ಈ ಕಾಟಗಳಿಂದ ಬೇಸರಗೊಂಡ ಲ್ಯೂ-ಪಿನ್-ವೀ ಎಂಬ ಚೀನೀಯನು ತನ್ನೊಬ್ಬ ಸಾಲಗಾರನು ಹಣ ಕೇಳಲು ಬಂದೊಡನೆ ಆತನ ಇದಿರೇ ತನ್ನ ಕೈಯ್ಯ ಎರಡು ಬೆರಳುಗಳನ್ನು ತುಂಡರಿಸಿಕೊಂಡು ಬಿಟ್ಟ. ಲ್ಯೂ ಬೆರಳು ಕಡಿದುಕೊಂಡು ಮೂರ್ಛೆ ಹೋದ. 'ಸಾಲ ಕೊಂಡುದನ್ನು ಕೊಡು' ಎಂದು ಕೇಳಲು ಬಂದವ ತನ್ನ ಮನೆಗೆ ಪರಾರಿಯಾದ. ಲ್ಯೂ ಈಗ ಆಸ್ಪತ್ರೆಯಲ್ಲಿದ್ದಾನೆ. ಹಿಂದೆ ಬಂದ ಮೇಲೆ ಸಾಲ ಮಾಡುವುದನ್ನಾದರೂ ಕಡಿಮೆ ಮಾಡಬಹುದು!

—o0o—

ಕೋವಿ ದೀಪ.

ಬೇಟೆಗೆಂದು ಹೋಗಿ ತಾವೇ ಗುಂಡಿನ ಬಾಯಿಗೆ ತುತ್ತಾದ ಬೇಟೆಗಾರರು ಬಹಳ. ಕೋವಿ ಉಪಯೋಗದಲ್ಲಿಲ್ಲದೆ ಇರುವಾಗ ಅದಕ್ಕೆ 'ರಕ್ಷೆ'ಯನ್ನು ಇರಿಸಲು ಮರೆತಾಗ ಅದು ತನ್ನಂತೆ ಹಾರಿ, ಇನ್ನೊಬ್ಬ ಜೊತೆ ಬೇಟೆಗಾರನ ಮರಣಕ್ಕೆ ಕಾರಣವಾಗುವುದಿದೆ. ಇಂಥಾ ತೊಡಕುಗಳ ನಿವಾರಣೆಗಾಗಿ ಇದೀಗ ಒಂದು ರಕ್ಷೆ ಕಂಡುಹಿಡಿಯಲ್ಪಟ್ಟಿದೆ. ಕೋವಿಯ ತುದಿಗೆ ಇದನ್ನು ತಗಲಿಸಿದರೆ ಸರಿ. ಕೋವಿಯೊಳಗೆ ಮದ್ದು ತುಂಬಲ್ಪಟ್ಟೊಡನೆ ಇದರಲ್ಲಿರುವ ವಿದ್ಯುದ್ಬುಡ್ಡಿ ಬೆಳಕನ್ನು ಕೊಡುತ್ತಿದ್ದು ಅದರೊಳಗೆ ಮದ್ದಿದೆಯೆಂದು ಎಚ್ಚರಿಸುವುದು. ಈ 'ಬುಡ್ಡಿ'ಗೆ ರಕ್ಷೆ ತಗಲಿರುತ್ತದೆಯಷ್ಟೆ. ಆದುದರಿಂದ ರಕ್ಷೆ ಹಾರಿ ಹೋದೊಡನೆ ದೀಪವೂ ಆರಿ ಹೋಗುವುದು. ರಕ್ಷೆ ಹಾರಬೇಕಾದರೆ ಗುಂಡು ಹಾರಬೇಕು!

—o0o—

ಪ್ರಕೃತಿಯದಕ್ಕಿಂತ ಮೇಲಾದ್ದು!

ಪ್ರಕೃತಿಯ ಹಣ್ಣಿಗಿಂತ ಅಂದವಾಗಿ ಕಾಣಲೆಂದು ಅಮೇರಿಕದ ಹಣ್ಣಿನ ವ್ಯಾಪಾರಿಗಳು ಒಂದು ವಿಧವಾದ ಕೆಂಪು ನೀರಿನಲ್ಲಿ ಕಿತ್ತಳೆ ಹಣ್ಣುಗಳನ್ನು ಅದ್ದಿ ಮಾರಲು ಇಡುವರಂತೆ. ಇದರಿಂದ ಪ್ರಕೃತಿ ನಿರ್ಮಿತವಾದ ಸಹಜವಾದ ಕಿತ್ತಲೆಗಿಂತ ಇದು ಚೆನ್ನಾಗಿ ಕಾಣುವುದಂತೆ.

—o0o—

ನೀರಿನಲ್ಲಿ ಮೀನು ಬದುಕಲಾರವು.

ನೀರಿನಲ್ಲಿ ಮೀನುಗಳು ಬದುಕಲಾರವು! ಯಾಕೆಂದರೆ ಅವುಗಳಲ್ಲಿ ಕೆಲವು ಸಸ್ಯಗಳನ್ನೇ ಆಶ್ರಯಿಸಿರುವುದರಿಂದ ಸಸ್ಯಗಳಲ್ಲಿ ನಡೆಯುವ ಶ್ವಾಸೋಚ್ಛ್ವಾಸದಿಂದ ಬರುವ ಆಮ್ಲಜನಕವನ್ನು ಈ ಮೀನುಗಳು ಸೇವಿಸುವವು. ಮಳೆಯಿಂದಲೂ, ಹವಬದಲಾವಣೆಯಿಂದಲೂ ಶುದ್ಧ ನೀರಿನ ಸರೋವರ ಒಂದರಲ್ಲಿಯ ಸಸ್ಯಗಳೆಲ್ಲ ಸತ್ತು ಹೋದವು. ಇದರಿಂದ 'ಬ್ಯಾಕ್ಟೀರಿಯಾ' ಎಂಬವುದು ಕಂಡು ಬಂದಿತು. ಇದಕ್ಕೆ ಹೆಚ್ಚಿಗೆ ಆಮ್ಲಜನಕವೆಲ್ಲ ಉಪಯೋಗಿಸಲ್ಪಟ್ಟ ಕಾರಣವಾಯ್ತು. ಆ ಸರೋವರದಲ್ಲಿನ ಮೀನುಗಳಿಗೆ ವಾಯು ಆಹಾರವೇ ಸಿಕ್ಕದೆ ಎಲ್ಲವೂ ಸತ್ತುಹೋದವು. ಇದನ್ನು ಅಮೇರಿಕದ ಕನೆಕ್ಟಿಕಟ್ ಜಿಲ್ಲೆಯಲ್ಲಿ ತೋರಿಸಲಾಯಿತಂತೆ!

—o0o—

ಕಪ್ಪೆಯ ಶಕ್ತಿ.

140 ಅಡಿ ಎತ್ತರದಿಂದ ನೀವು ನೆಲದ ಮೇಲೆ ಹಾರಿದಿರೆಂದಾದರೆ ನಾವು ವಿಷಾದಪಡಬೇಕಾಗಬಹುದು. ಅಂದರೆ ನಿಮ್ಮ ಜೀವಕ್ಕೆ ಸಂಚಕಾರವೆಂದರ್ಥ. ಹಾಗಿಲ್ಲದಿದ್ದರೆ ಭಯಂಕರ ಗಾಯಗೊಳ್ಳುವುದಾದರೂ ಸಿದ್ಧ. ಆದರೆ ಒಂದು ಜಾತಿಯ ಚಿಕ್ಕ ಕಪ್ಪೆ ಹೀಗೆ ಒಗೆಯಲ್ಪಟ್ಟರೆ ನಿಧಾನವಾಗಿ ಗಾಯಗೊಳ್ಳದೇನೇ ನೆಲದ ಮೇಲೆ ಇಳಿಯುವುದು. ಇಂತಹ ಸಾಹಸದ ಕಪ್ಪೆಗಳು ಮೆಕ್ಸಿಕೋದ ಕಾಡುಗಳಲ್ಲಿ ದೊರೆಯುತ್ತವೆ. ಇವು ಮರಹತ್ತಬಲ್ಲವು. ಅವು ಬೀಳುವಾಗ ತಮ್ಮ ಒಲೆಯಂತಹ ಕಾಲನ್ನು ಅಗಲಿಸಿ ನೆಲದ ಮೇಲೆ ಇಳಿಯುವುವು. 140 ಅಡಿ ಎತ್ತರದ ಮನೆಯ ಮಾಡಿನಿಂದ ಕೆಳಕ್ಕೆ ಬೀಳುವಾಗ ಮನೆಯ ಬುಡದಿಂದ 90 ಅಡಿ ದೂರದಲ್ಲಿ ಬೀಳುವುದು. ಹೀಗೆ ಬೀಳಲು ಏಳು ಸೆಕೆಂಡುಗಳು ಸಾಕು.

—o0o—

ಮಣ್ಣಿನ ಉಪಯೋಗ

ಆಫ್ರಿಕೆಯ ನಾಟಾಲ್‌ನ ಬಳಿಯ ಪೀಟರ್ಮೆರಿಟ್ಸ್ ಬರ್ಗ್ ಎಂಬಲ್ಲಿ ಒಂದು ಜಾತಿಯ ಮಣ್ಣಿನ ಪುಡಿ ದೊರೆಯುತ್ತಿದೆ. ಇದನ್ನು ಅಲ್ಲಿನ ಮೂಲ ನಿವಾಸಿಗಳು ಪ್ರತಿಯೊಂದು ಬಗೆಯ ಚರ್ಮ ರೋಗಗಳಿಗೆ ಉಪಯೋಗಿಸುತ್ತಿರುವುದನ್ನು ಕಂಡ ಡರ್ಬಾನಿನ ಒಬ್ಬ ಬಿಳಿಯವನು ಜರ್ಮನಿಯ ಸುಪ್ರಖ್ಯಾತ ರಸಾಯನ ಶಾಸ್ತ್ರಜ್ಞನಾದ ಪ್ರೊಫೆಸರ್ ಎರಿಚ್ ಹೋಫ್‌ಮನ್‌ನೊಡನೆ ಈ ಕುರಿತು ಶೋಧ ನಡೆಸಬೇಕೆಂದು ಹೇಳಿದ್ದಾನೆ. ಹೋಫ್‌ಮನ್ ಆಫ್ರಿಕೆಗೆ ಬಂದು ಸುಮಾರು 200 ರಾತಲು ಪುಡಿ ಶೇಖರಿಸಿದ. ಆ ವೇಳೆ ಆತನ ಹೆಂಡತಿಯ ಕೈಗೆ ಬಿಸಿ ನೀರು ಬಿದ್ದು, ಕೈ ಸುಟ್ಟು ಹೋಯಿತು. ಹೋಫ್‌ಮನ್, ಈ ಪುಡಿಯನ್ನು ಕಲಸಿ ಹಚ್ಚಲು ಕೂಡಲೇ ಉರಿ ನಿಂತುದಲ್ಲದೆ ಎರಡೇ ದಿನಗಳಲ್ಲಿ ಸುಟ್ಟಗಾಯ ಮಾಸಿತಂತೆ. ಇತರ ಕ್ರಿಯೆ ಇನ್ನು ತಬ್ಬಿಯನ್ನು ಸೇರಿದೊಡನೆ ರೂಪಾಯಿ ಗಟ್ಟಲೆಯಾಗಬಹುದ.

—o0o—

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 25-2-39 ರಲ್ಲಿ ಬೆಳಿಗ್ಗೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಂಬ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

ಮ. ಗಳಾದ 1. ಪಿ. ಐ ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ರಾ. ಬಾ. ಪಿ. ದೇವಯ್ಯನವರು (ಟ್ರೆಜರರ್) 3. ಐ. ಪಿ. ಕಾರ್ಯಪ್ಪನವರು, 4. ಕೆ. ಸಿ. ಕರುಂಬೈಯ್ಯನವರು, 5. ಎಸ್. ಬಿ. ಸೋಮಯ್ಯನವರು, 6. ಹೆಚ್. ಯಂ. ಪುಪ್ಪಣ್ಣನವರು, 7. ಯಂ. ಎಸ್. ಸೋಮಯ್ಯನವರು, 8 ಪಿ. ಜಿ. ಐಯ್ಯಪ್ಪನವರು, 9. ಪಿ ಸಿ. ಕರುಂಬೈಯ್ಯನವರು, 10. ಬಿ. ಪಿ. ಮಾಚೈಯ್ಯನವರು, 11. ಕೆ. ಕೆ. ಗಣಪತಿಯವರು, 12. ಯಂ. ಸಿ. ದೇವಯ್ಯನವರು, 13. ಎನ್. ಶಂಕರಯ್ಯನವರು, 14. ಎಸ. ಎನ್. ರಾಮಶೆಟ್ರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

ಮ. ಕೆ. ಯಂ. ಕುಶಾಲಪ್ಪನವರು ಗೈರುಹಾಜರಾಗಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಜನವರಿ ತಿಂಗಳ ಜಮೆ ಮತ್ತು ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು.

ಹಿಂದಿನ ಶಿಲ್ಕು	12,880	1	11
ಸದರಿ ತಿಂಗಳ ವಸೂಲಿ	13,363	12	8
ಜುಮ್ಲ	26,243	14	7
ಆ ತಿಂಗಳಲ್ಲಿ ಖರ್ಚು	11,723	11	6
ಬಾಕಿ ಶಿಲ್ಕು	14,520	3	1

4. ರಠಾವು ನಂಬರು 4828 ರ ಮೇರೆ ಮ. ಯಂ. ಯಂ. ಬೆಳ್ಯಪ್ಪನವರು ಒಪ್ಪಿಸಿದ 500 ರೂಪಾಯಿ ಬೋನಸು ಮೊಬಲಗಿನ 1937-38 ಬಡ್ಡಿಯನ್ನು ಬ್ಯಾಂಕಿನ ಸಹಕಾರ ವಾಚನಾಲಯಕ್ಕೆ ಪುಸ್ತಕಗಳನ್ನು ಕೊಂಡುಕೊಳ್ಳಲು ವಿನಿಯೋಗಿಸಬಹುದೆಂದು ಸಬ್ ಕಮಿಟಿಯವರು ತೀರ್ಮಾನಿಸಿದ್ದನ್ನು ಮಂಜೂರ್ಮಾಡಲಾಯಿತು.

5. ಸರಕಾರಿ ಉದ್ಯೋಗಸ್ಥರುಗಳು ಕೊಡಗಿನ ಸಹಕಾರಿ ಸಂಘಗಳಲ್ಲಿ ಯಾ ಬ್ಯಾಂಕಿನಲ್ಲಿ ಹಣ ಡಿಪಾಜಿಟ್ಟು ಮಾಡುವುದಾಗಲೀ, ಅವುಗಳ ಆಡಳಿತದಲ್ಲಿ ಭಾಗವಹಿಸುವದಾಗಲೀ ಅಥವಾ ಅಂಥಾ ಸಂಸ್ಥೆಗಳಲ್ಲಿ ನೌಕರಿಯನ್ನು ಪಡಕೊಳ್ಳುವುದಾಗಲೀ ವಗೈರೆ ವಿಷಯಗಳಲ್ಲಿ ಕೊಡಗು ಚೀಫ್ ಕಮಿಷನರವರಿಂದ ಬಂದ ತಾ. 10-1-39 ರ 78,321-38 ರ ಹುಕುಂನ್ನು ಓದಲಾಯಿತು.

ಈ ವಿಷಯದಲ್ಲಿ ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಒಂದು ಸಬ್ ಕಮಿಟಿಯನ್ನು ಏರ್ಪಡಿಸಿ ಸದರಿಯವರು ತಮ್ಮ ರಿಪೋರ್ಟನ್ನು ಇನ್ನೊಂದು ಮೀಟಿಂಗಿನೊಳಗೆ ಕಳುಹಿಸುವಂತೆ ಅವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು.

ಮ. ಗಳಾದ 1. ಪಿ. ಐ ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ಎಸ್. ಎನ್. ರಾಮಶೆಟ್ರು (ಗೌರವ ಕಾರ್ಯದರ್ಶಿ) 3. ರಾ. ಬಾ. ಪಿ. ದೇವಯ್ಯನವರು 4. ಕೆ. ಸಿ. ಕರುಂಬೈಯ್ಯನವರು ಮತ್ತು 5. ಐ ಪಿ. ಕಾರ್ಯಪ್ಪನವರು.

6. ಕಡಿಯತ್ತನಾಡು ಮಲೆದೇವರ ಹಣವು ಬ್ಯಾಂಕಿನಲ್ಲಿ ದಿವಂಗತ ರಾ ಸಾ. ನಡಿಕೇರಿಯಂಡ ಕಾಳಪ್ಪನವರ ಮತ್ತು ಮ. ಚೆಟ್ಟೋಳಿಯಮ್ಮನ ಅಪ್ಪುವಮ್ಮಯ್ಯನವರ ಜಂಟಿ ಹೆಸರಿನಲ್ಲಿ ಡಿಪಾಜಿಟು ಮಾಡಲ್ಪಟ್ಟು ಮೇಲಿನವರ ಪೈಕಿ ಮ. ಕಾಳಪ್ಪನವರು ಗತಿಸಿದ್ದರಿಂದ ಮ. ನಡಿಕೇರಿಯಂಡ ನಂಜಪ್ಪನವರ ಮತ್ತು ಮೇಲ್ಯಂಡ ಮ. ಚೆಟ್ಟೋಳಿಯಮ್ಮನ ಅಪ್ಪುವಮ್ಮಯ್ಯನವರ ಜಂಟಿ ಹೆಸರಿಗೆ ಸದರಿ ಡಿಪಾಜಿಟನ್ನು ವರ್ಗಾಯಿಸಬೇಕೆಂದು ಕರಡ ಗ್ರಾಮಸ್ಥರ ಪೈಕಿ ಕೆಲವರು ಬರಕೊಂಡ ಅರ್ಜಿಯನ್ನು, ಈ ವರ್ಗಾವರ್ಗಿಗೆ ವಿರೋಧವಾಗಿ ಅಂಪರೆ ಈ ಬಾಬಿನಲ್ಲಿ ಕೋರ್ಟಿನವರಿಂದ ಮ. ನಂಜಪ್ಪನವರು ಈ ಹಣಕ್ಕೆ ಒಬ್ಬ ಟ್ರಸ್ಟಿಯೆಂದ ಆರ್ಡರ್ ಪಡೆದು ಅದನ್ನು ಬ್ಯಾಂಕಿಗೆ ಹಾಜ್ರು ಮಾಡುವ ವರೆಗೆ ಡಿಪಾಜಿಟ್ಟು ಮೊಬಲಗನ್ನು ಅವರ ಹೆಸರಿಗೆ ವರ್ಗಾಯಿಸಕೂಡದೆಂದು ಕರಡ ಗ್ರಾಮದ ಜೇಟಿ ಕೆಲವು ಮಹನೀಯರುಗಳಿಂದ ಮತ್ತು ಅಪ್ಪುವಮ್ಮಯ್ಯನವರಿಂದಲೂ ಬಂದ ಅರ್ಜಿಗಳನ್ನು ಓದಲಾಯಿತು.

ಈ ಬಾಬಿನಲ್ಲಿ ಕೆಲವು ಗ್ರಾಮಸ್ಥರು ಮತ್ತು ಉಳಿದ ಡಿಪಾಜಿಟುದಾರರು ಮೇಲ್ಯಂಡ ಮ. ನಂಜಪ್ಪನವರ ಹೆಸರಿಗೆ ವರ್ಗಾಯಿಸಕೂಡದೆಂದು ಫಿರ್ಯಾದಿ ವಿರೋಧಿಸುವವರಿಂದ ನ್ಯಾಯವಾದ ಅಧಿಕಾರಸ್ಥರು ತಕ್ಕ ಹುಕುಂ ಕೊಡುವ ವರೆಗೆ ಸದರಿ ಡಿಪಾಜಿಟ್ಟು ಮೊಬಲಗನ್ನು ನಂಜಪ್ಪನವರ ಹೆಸರಿಗೆ ಜಂಟಿಯಾಗಿ ವರ್ಗಾಯಿಸಲು ಸಾಧ್ಯವಿಲ್ಲವೆಂತ ತೀರ್ಮಾನಿಸಲಾಯಿತು.

7. ಬ್ಯಾಂಕಿನಿಂದ ಕಟ್ಟಡ ಕಟ್ಟಿಸುವ ಉದ್ದೇಶ್ಯ ತಕ್ಕ ಧನ ಸಹಾಯ ಕೊಡಿಸಬೇಕೆಂದು ವೀರಾಜಪೇಟೆಯ ಮಹಿಳಾಸಭೆಯ ಕಮಿಟಿಯವರು ಬರಕೊಂಡ ಅರ್ಜಿಯನ್ನು ಓದಲಾಗಿ, ಹಣದ ಅಭಾವದಿಂದ ಸದರಿಯವರ ಕೋರಿಕೆಯನ್ನು ನೆರವೇರಿಸಲಿಕ್ಕಾಗುವುದಿಲ್ಲವಾಗಿ ತೀರ್ಮಾನವಾಯಿತು.

8. ಪಾಲೂರು ಗ್ರಾಮದ ಮ. ಗಳಾದ ಪುದಿಯನೆರವನ ರಾಮಪ್ಪನವರು ಮತ್ತು ನಂಜಪ್ಪನವರು ತಮ್ಮ ಮನೆ ಮತ್ತು ಸಾಮಾನು ವಗೈರೆಗಳು ಆಕಾಸ್ಮಾತು ಬೆಂದು ಹೋದದ್ದರಿಂದ ಬ್ಯಾಂಕಿನಿಂದ ಧನಸಹಾಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು, ಹಣದ ಅಭಾವದಿಂದ ಮಂಜೂರ್ಮಾಡಲಿಕ್ಕಾಗುವುದಿಲ್ಲವೆಂದು ತೀರ್ಮಾನವಾಯಿತು.

9. ಡಿಪಾಜಿಟು ವಾಯಿದೆ ಗತಿಸುವ ಮೊದಲೇ ತನ್ನ ಡಿಪಾಜಿಟನ್ನು ವಾಪ್ಸು ಕೊಡಬೇಕೆಂದು ಬರಕೊಂಡ ಒಬ್ಬ ಮಹನೀಯರ ಅರ್ಜಿಯನ್ನು ತಿರಸ್ಕರಿಸಲಾಯಿತು.

10. ಡಿಪಾಜಿಟು ವಾಯಿದೆ ಗತಿಸುವ ಮೊದಲೇ ತನ್ನ ಡಿಪಾಜಿಟ್ಟನ್ನು ವಾಪ್ಸು ಕೊಡಬೇಕೆಂದು ಅರ್ಜಿ ಬರಕೊಂಡ ಒಬ್ಬ ಮಹನೀಯಳ ಕೋರಿಕೆಯನ್ನು ತಿರಸ್ಕರಿಸಲಾಯಿತು.

11. ಬ್ಯಾಂಕಿನ ಜನರಲ್ ಬಾಡಿಯವರ ತಾರೀಕು 18-12-38 ರ ಠರಾವು ನಂಬ್ರು 30 ರ ಮೇರೆ ಬ್ಯಾಂಕಿನ ಬೈಲಾವನ್ನು ತಿದ್ದುಪಡಿ ಮಾಡಲು ಒಂದು ಸಬ್ ಕಮಿಟಿಯನ್ನು ಏರ್ಪಾಡು ಮಾಡುವ ವಿಷಯ ಆಲೋಚಿಸಲಾಗಿ, ಸದರಿ ಉದ್ದೇಶ್ಯಕ್ಕೆ ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಒಂದು ಸಬ್ ಕಮಿಟಿಯನ್ನು ಏರ್ಪಾಡುಮಾಡಲಾಯಿ. ಮ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2 ಎಸ್. ಎನ್. ರಾಮಶೆಟ್ರು, 3. ರಾ. ಬಾ. ಪಿ. ದೇವಯ್ಯನವರು (ಟ್ರೆಜರರ್) 4 ಐ. ಪಿ. ಕಾರ್ಯಪ್ಪನವರು ಮತ್ತು 5. ಎಸ್. ಬಿ. ಸೋಮಯ್ಯನವರು

12. ರಸೊಲ್ಯೂಶನ್ ನಂಬ್ರು 4829 ರ ಮೇರೆ ಚೆಂಬೆಬೆಳಿಯೂರು ಸೊಸೈಟಿಯವರು ಪೂರ್ತಿ ಬಡ್ಡಿಯಿಲ್ಲದೆ ಅಸಲಿಗೆ 500 ರೂಪಾಯಿ ಬ್ಯಾಂಕಿಗೆ ಸಲ್ಲಿ ಮಾಡಿರುವುದರಿಂದ ಸದರಿ ಗ್ರಾಮದ ಸಂಯೋಜಿತವಾದ 3 ಸಂಘಗಳಿಂದ ಬ್ಯಾಂಕಿಗೆ ಬರಲಿಕ್ಕಿರುವ ಬಾಕಿ ಜುಮ್ಲ ಸಾಲಗಳಿಗೆ 8 ಹೊಸ ಕಂತುಗಳನ್ನು ಕೊಡಬೇಕೆಂದು ಬರಕೊಂಡ ಮೇರೆ ಮಂಜೂರ್ಮಾಡಲಾಯಿತು, ಅಲ್ಲದೆ ಈ ಮೊಬಲಗುಗಳಿಗೆ ಸದರಿ ಸೊಸೈಟಿಯು ಹೊಸದಾಗಿ ಒಂದು ಒಂದು ಬಾಂಡು ಬರೆದು ಕಳುಹಿಸುವಂತೆಯೂ ಸಹ ತೀರ್ಮಾನಿಸಲಾಯಿತು.

13 ಈ ಕೆಳಗಿನ ಸಂಘಗಳಿಗೆ ಸಾಲಗಳು ಮಂಜೂರಾದವು. (1) ಅಮ್ಮತ್ತಿ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 6000, (2) ವೀರಾಜಪೇಟೆ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 3000, (3) ಕಿಗ್ಗಟ್ಟುನಾಡು ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 3500, (4) ಮೂರ್ನಾಡು ಕ್ರಾಪ್ ಲೋನ್ ಅಂಡ್ ಸೇಲ್ ಸಪ್ಲೈ ಸೊಸೈಟಿಗೆ ರೂ. 1700, (5) ಕೈಕೇರಿ ಕ್ರಾಪ್ ಲೋನ್ ಅಂಡ್ ಸೇಲ್ ಸಪ್ಲೈ ಸೊಸೈಟಿಗೆ ರೂ. 1000, ಮತ್ತು (6) ಬಾವಲಿ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಸೊಸೈಟಿಗೆ ರೂ. 800.

14. ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಬ್ಯಾಂಕಿನ ಮುಂದಿನ ಮೀಟಿಂಗಿಗೆ ಇಡಲಾಯಿತು. ಫ್ರೇಜರ್ ಪೇಟೆ ಸೊಸೈಟಿ, (2) ಕೊಳತಡಬೈಗೋಡು ಸೊಸೈಟಿ, (3) ಬೇಂಗುನಾಡು ಬಾಡಗ ಸೊಸೈಟಿ, (4) ನಂದಿಗುಂದ ಸೊಸೈಟಿ, (5) ಕೈಕಾಡು ಸೊಸೈಟಿ ಮತ್ತು (5) ಮೂರ್ನಾಡುಬಾಡಗ ಸೊಸೈಟಿ.

15. ಬೆಟ್ಟತ್ತೂರು ಸೊಸೈಟಿಯ ಸಾಲದ ಅರ್ಜಿಯನ್ನು ಕಾರಣಾಂತರದಿಂದ ತಿರಸ್ಕರಿಸಲಾಯಿತು.

16. ಬಾವಲಿ ಸಹಕಾರ ಗ್ರಾಮಾಭಿವೃದ್ಧಿ ಸಂಘವನ್ನು ಅವರ ಅರ್ಜಿ ಮೇರೆ ಬ್ಯಾಂಕಿನ ಮೆಂಬರಾಗಿ ಸೇರಿಸಿಕೊಳ್ಳಲಾಯಿತು.

17. ರಾವ್ ಬಹದ್ದೂರ್ ಪಿ. ದೇವಯ್ಯನವರು ಬ್ಯಾಂಕಿನ ಖಜಾಂಚಿತನಕ್ಕೆ ಕೊಟ್ಟ ರಾಜಿನಾಮೆ ಪತ್ರವನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

18 ಕೈಕಾಡು ಗ್ರಾಮದ ಮ. ಮುಕ್ಕಾಟಿರ ಉತ್ತಯ್ಯನವರು ತನ್ನ ಮನೆ ವಗೈರೆ ಬೆಂದುಹೋದುದಕ್ಕಾಗಿ ಬ್ಯಾಂಕಿನಿಂದ ತಕ್ಕ ಧನ ಸಹಾಯ ಕೊಡಬೇಕೆಂದು ಬರಕೊಂಡ ಕೋರಿಕೆಯನ್ನು ಹಣದ ಅಭಾವದಿಂದ ತಿರಸ್ಕರಿಸಲಾಯಿತು.

19. ಪೊನ್ನಂಪೇಟೆ ಟೌನ್ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ಜುಮ್ಲ ಸಾಲಕ್ಕೆ ತಿಂಗಳುವಾರು ಮರುಪಾವತಿಯ ಕಂತಿನ ಬದಲು 10 ಮೂರು ತಿಂಗಳ ಕರಿತಿನಲ್ಲಿ ಮರುಪಾವತಿ ಮಾಡುವಂತೆ ಕಂತು ಹೆಚ್ಚಿಸಿಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಸದರಿ ಸೊಸೈಟಿಯವರು ಅಸಲಿಗಾಗಿ 300 ರೂಪಾಯಿಗಳನ್ನು ಮತ್ತು ಪೂರ್ತಿ ಬಡ್ಡಿಯನ್ನು ವಾಪತಿ ಮಾಡಿದರ ಮಾತ್ರ ಆಲೋಚಿಸಬಹುದೆಂದು ತೀರ್ಮಾನವಾಯಿತು

ಬ್ಯಾಂಕು ಆಫೀಸಿನ ಬಾಡಿಗೆಯನ್ನು 8 ರೂಪಾಯಿಂದ 17 ರೂಪಾಯಿಗೆ ಹೆಚ್ಚಿಸಿರುವದಾಗಿ ಕೊಡಗು ಎಕ್ಸಿಕ್ಯೂಟಿವ್ ಇಂಜಿನಿಯರಿಂದ ಬಂದ ತಾ. 23-2-39 ರ 76 ನೇ ಪತ್ರವನ್ನು ಓದಲಾಯಿತು

ಟ್ರಾವಂಕೂರು ಬ್ಯಾಂಕು ಒಡೆದು ಹೋಗಿ ಬ್ಯಾಂಕಿಗೆ ದೊಡ್ಡ ನಷ್ಟ ಸಂಭವಿಸಿದ ಕಾರಣ ಈಗಿನ ಸಂಬಳ 8 ರೂಪಾಯಿಗೆ 2 ರೂಪಾಯಿ ಹೆಚ್ಚಿಸಿ ಮಾಸೆಯೊಂದ 10 ರೂಪಾಯಿಯಂತೆ ಬಾಡಿಗೆ ಕೊಡಲಾಗುವದೆಂಬ ಸಂಗತಿ ಅವರಿಗೆ ತಿಳಿಸುವಂತೆ ತೀರ್ಮಾನವಾಯಿತು.

21. ಕೊಟ್ಟಮುಡಿ ದನಗಳ ಪ್ರದರ್ಶನದ ಕಾರ್ಯಕ್ಕಾಗಿ ಬ್ಯಾಂಕಿನಿಂದ 50 ರೂಪಾಯಿ ಧನ ಸಹಾಯ ಕೊಡಿಸಬೇಕೆಂದು ಸದರಿ ದನಗಳ ಪ್ರದರ್ಶನದ ಕಮಿಟಿಯವರು ಬರಕೊಂಡ ಅರ್ಜಿಯನ್ನು ಕಾರಣಾಂತರಗಳಿಂದ ತಿರಸ್ಕರಿಸಲಾಯಿತು.

22. ತಿರುವಾಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಸಾಲಗಾರರ ಮೀಟಿಂಗು ತಾ. 28-1-39 ರಲ್ಲಿ ಮದರಾಸಿನಲ್ಲಿ ನಡೆದುದರ ಫಲಯವಾಗಿ ಬ್ಯಾಂಕಿನ ಪರವಾಗಿ ಹೋಗಿದ್ದ ಪ್ರೆಸಿಡೆಂಟರು ಮ. ಪಿ. ಐ ಬೆಳ್ಯಪ್ಪನವರು ಬರಕೊಂಡ ರಿಪೋರ್ಟನ್ನು ಓದಿ ರಿಕಾರ್ಡು ಮಾಡಲಾಯಿತು.

ಮಡಿಕೇರಿ, ತಾ. 25-2-39.

ಪಿ. ಐ. ಬೆಳ್ಯಪ್ಪ, (ಅಧ್ಯಕ್ಷರು.)

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–39 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕಿ.
ಮತ್ತು ಕಂಪನಿ,

(52–14) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಪೋಯಪ್ಪನವರು.
ಬಾಚಮ್ಮನ ಕರ್ಪಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು.
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಬಿನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಸಿ. ಬಿ. ಮುದ್ದಮ್ಮಯ್ಯನವರು.
ಬಿರುನಾಣಿ—ಮ. ಅಜ್ಜಮಾಡ ಮಾಚಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ. ಬೋಗಪ್ಪನವರು.
ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು. (ಪಾಲೇರು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಕೃಷ್ಣನವರು.

ಸೂಚನೆ.—ಪ್ರಿಂಟು ಆದ ರಶೀತಿ ತೆಗೆದುಕೊಳ್ಳತಕ್ಕ ಯಾರೂ ... ಕೊಡತಕ್ಕದ್ದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000 ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮೂ ಖರಾರುಗಳಿಗೆ ... ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–53

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

34 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	45,930	0	0
ಜಮಾಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ತ್ರಿಫ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯವರು.
ಸೆಕ್ರೆಟರಿ:—ಮಿ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ. 55.	ರೂ 35.	ರೂ. 22
6 ತಿಂಗಳಿಗೆ—	,, 100.	,, 35	,, 22.	,, 13
3 ತಿಂಗಳಿಗೆ—	,, 60	,, 20.	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ಡಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

82-10

ಮಿ. ಬಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗ.

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಟಿ. ಐ. ಬೆಳ್ಯಪ್ಪ.

ತಾ. ೨೪—೩—೧೯೩೯.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೮] [ಸಂಚಿಕೆ ೪೨

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-15

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-4

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಕಿರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ
18 ಕುಶಲದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಶೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200. 400 ಮತ್ತು 800 ಗಳ ನಾನಾವರ್ಗದ ಶೇವಣಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾನವಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–46

The Agricultural &
Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–26)

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೧೧,೭೩೮— ೬—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೩೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೩೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೊಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಚಾಲಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–22

ವಿವಿಧ ವಿಚಾರ.

ಕಲ್ಲಿದ್ದಲ 'ಕೇಂಡ್ಲ್'.

ಜರ್ಮನಿ ಎಂದರೆ ಇಂದು ಕೃತಕ ರಾಷ್ಟ್ರವಾಗಿದೆ. ಧರಿಸುವ ಬಟ್ಟೆಯಿಂದ ತಿನ್ನುವ ಆಹಾರದ ತನಕ ಕೃತಕ ವಸ್ತುಗಳೇ. ಅದೇ ಕಲ್ಲಿದ್ದಲಿನ ಮಯಣದ ಬತ್ತಿ (ಕೇಂಡ್ಲ್)ಗಳನ್ನು ತಯಾರಿಸಲು ಇದೀಗ ಮುಂದಾಗಿದೆ. ಕಲ್ಲಿದ್ದಲ ತಾರಿನಿಂದ ಸಿಗಬಹುದಾದ ಜಡ್ಡನ್ನು ಉಪಯೋಗಿಸಿ ಇವನ್ನು ತಯಾರಿಸುವರು. ಜರ್ಮನಿಗೆ ಬೇಕಾಗುವ ಕೇಂಡ್ಲಿನ ಮುಕ್ಕಾಲಂಶ ಈಗ ಇಂಥಾ ಕೇಂಡ್ಲ್‌ಗಳೇ ತಯಾರಿಸಲ್ಪಡುತ್ತಲಿವೆ. ವರ್ಷ ಒಂದರ ಜರ್ಮನಿ 16 ಸಾವಿರ ಟನ್ ಕೇಂಡ್ಲ್ ಮುಗಿಸುತ್ತದೆ. ಏಸು ಕ್ರಿಸ್ತನಿಗೇ ಇದರಿಂದ ಆಶ್ಚರ್ಯವಾಗಬಹುದು.

—o0o—

ರಾವ್ ಬಹದೂರ್ ಸಾಧುವಿನ ಸಮಾಧಿ ಸ್ಥಿತಿ.

ಸಾರಣ ಜಿಲ್ಲೆಯ ಗಂಡಕೀ ನದಿ ತೀರದಲ್ಲೊಬ್ಬ ಸಾಧುವು ಅಲ್ಲಿಯ ಕಲೆಕ್ಟರರ ಅನುಮತಿ ಹೊಂದಿ ನೆಲದೊಳಗೆ ಇಟ್ಟಿಗೆ ಸಿಮೆಂಟುಗಳಿಂದೊಂದು ನೆಲಮಾಳಿಗೆಯನ್ನು ಕಟ್ಟಿಸಿ ಅದರೊಳಗೆ ಹೊಕ್ಕು ದ್ವಾರವನ್ನು ಮುಚ್ಚಿಸಿಕೊಂಡನು. ದಿನದಿನವೂ ಸಾವಿರಾರು ಮಂದಿ ಈ ಸಮಾಧಿಯನ್ನು ನೋಡಲು ಬರುತ್ತಿದ್ದರು. ಸಾಧುವು ಹೇಳಿದಂತೆ 15ನೇ ದಿನ ದ್ವಾರವನ್ನು ಒಡೆದಾಗ ಬತ್ತಿ ಕಳೆಗುಂದಿದ್ದರೂ ಸಾಧುವು ನಗುಮುಖನಾಗಿ ಹೊರಗೆ ಬಂದನಂತೆ. ಎಸೋಸಿಯೇಟೆಡ್ ಪತ್ರಿಕಾ ಪ್ರತಿನಿಧಿಯು ಅವನನ್ನು ಕಂಡು ವಿಚಾರಿಸಿದಾಗ ತಾನು ಪಾಟಿಯಾಲದ ರಾವ್ ಬಹದ್ದೂರ್ ಗೋರಕ್‌ನಾಥ್ ಎಂದನಂತೆ.

—o0o—

ಹೆಂಗಸು- ಗಂಡಸು ಡಿಕ್ಕಿ.

ಎಹರೆನ್ ಹಾರ್ಡರ ಸೇವಕನು ಯಜಮಾನನ ಅತ್ಯವಶ್ಯದ ಕಾರ್ಯನಿಮಿತ್ತನಾಗಿ ರಭಸದಿಂದ ಬೀದಿಗೆ ಅಡ್ಡವಾಗಿ ಹೋಗುತ್ತಾ ಹಾದಿ ಹಿಡಿದು ನಡೆಯುತ್ತಿದ್ದ ಮಿಸೆಸ್ ರಾಸೆಲಳಿಗೆ ಡಿಕ್ಕಿ ಕೊಟ್ಟ. ಆಕೆಯು ಬಿದ್ದು ಭುಜದ ಎಲುಬು ಮುರಿಯಿತು. ಅವಳು ಎಹರೆನ್ ಹಾರ್ಡರನ ಮೇಲೆ ನಷ್ಟದಾವೆ ಹೂಡಿದಳು. ಸೇವಕನು ಹಾದಿಯಲ್ಲಿ ಇತರರಿಗೆ ಅನನುಕೂಲ ಅಪಾಯಗಳಾಗದಂತೆ ನಡೆಯಬೇಕೆಂಬ ನಿಯಮವನ್ನು ಅಲಕ್ಷಿಸಿದುದರಿಂದಲೂ ಈ ಅಪರಾಧವನ್ನು ಆತನು ತನ್ನ ಯಜಮಾನನ ವ್ಯವಹಾರ ನಿರ್ವಾಹದ ಆತುರತೆಯಿಂದ ಕೂಡಿದ್ದುದರಿಂದಲೂ ಆ ಯಜಮಾನನಾದ ಎಹರೆನ್ ಹಾರ್ಡರು 100 ಪವನು ನಷ್ಟ ದ್ರವ್ಯವನ್ನು ರಾಸೆಲಳಿಗೆ ತೆರತಕ್ಕದ್ದೆಂದು ಜಡ್ಜರು ತೀರ್ಪು ಕೊಟ್ಟರು.

—o0o—

ಕೈ ದೀಪ.

ಕೈ ಚೀಲಗಳನ್ನು ಧರಿಸುವುದು ಚಳಿ ಪ್ರದೇಶಗಳಲ್ಲಿ ಮಾತ್ರವಲ್ಲದೆ ಉಷ್ಣ ಪ್ರದೇಶದ ಕೆಲ ಮಂದಿಗಳಿಂದಲೂ ಉಪಯೋಗಿಸಲ್ಪಡುತ್ತಿವೆ. ಇದೀಗ ಈ ಕೈಚೀಲಗಳಿಗೆ ದೀಪ ಕಟ್ಟುವ ಕೆಲಸ ನಡೆದಿದೆ. ಹೆಬ್ಬೆಟ್ಟು ಮತ್ತು ತೋರುಬೆರಳುಗಳ ನಡುವೆ ಒಂದು ವಿದ್ಯುದ್ದೀಪ (ಬಲ್ಬ್) ಇರಿಸಿ ಅದಕ್ಕೆ ಬೇಕಾದ ಬೇಟ್ರಿಯನ್ನು ಮಣಿಕಟ್ಟಿನ ಬಳಿ ಕಟ್ಟಿಕೊಂಡರೆ ಸರಿ. ಮನೆಯಲ್ಲಿ ಕತ್ತಲಾಗಿ ಬೇಗನೆ ಕೈ ಅಥವಾ ಹಿಂದಿನ ಕೋಣೆಯ ಬಾಗಿಲ ಚಿಲಕ ಹುಡುಕಬೇಕೆಂದಾಗ ಕೈಚೀಲ ಧರಿಸಿದ್ದವರು ಹೆಬ್ಬೆರಳು ಮತ್ತು ತೋರ ಬೆರಳ ತುದಿಗಳನ್ನು ತಾಗಿಸಿಬಿಟ್ಟರೆ ಸರಿ. ದೀಪ ಉರಿದುಕೊಂಡು ನಿಮಗೆ ಬೇಕಾದುದು ಕಾಣ ಸಿಕ್ಕುವುದು. ಒಂದೇ ಕಲ್ಲಿಗೆ ಎರಡು ಹಕ್ಕಿ ಎಂದರೆ ಇದೇ.

—o0o—

ಅಪೂರ್ವ ಸೂಜಿಗಲ್ಲು.

ತನ್ನ ತೂಕಕ್ಕಿಂತ 1500 ಪಾಲು ಹೆಚ್ಚು ಭಾರವನ್ನೆತ್ತಬಲ್ಲ ಶಕ್ತಿಯುಳ್ಳ ಒಂದು ಅಪೂರ್ವ ಸೂಜಿಗಲ್ಲನ್ನು ಯುನೈಟೆಡ್ ಸ್ಟೇಟ್ಸ್ (ಅಮೇರಿಕ) ನ ಜನರಲ್ ಎಲೆಕ್ಟ್ರಿಕ್ ಕಂಪೆನಿಯ ವೈಜ್ಞಾನಿಕರು ನಿರ್ಮಾಣ ಮಾಡಿರುವರು. ಇದು ಅಲ್ಯುಮಿನಿಯಂ, ನಿಕ್ಕಲ್, ಕೋಬಾಲ್ಟ್, ಕಬ್ಬಿಣ ಈ ನಾಲ್ಕು ಲೋಹಗಳಿಂದ ತಯಾರಿಸಲ್ಪಟ್ಟಿದೆಯಾದ್ದರಿಂದ ಇದಕ್ಕೆ 'ಅಲ್‌ನಿಕೊ' ಎಂದು ನಾಮಕರಣ ಮಾಡಿರುವರು.

—o0o—

ಅಸಾಮಾನ್ಯ ಪಾಂಡಿತ್ಯ.

ಹರ್‌ದೋಯಿ ಜಿಲ್ಲೆಗೆ ಸೇರಿದ ಪಾಲಿ ಹಳ್ಳಿಯಲ್ಲಿನ ಒಬ್ಬ ಏಳು ವರ್ಷದ ಬಾಲಕಿಯು ಎಲ್ಲರಿಗೂ ಒಂದು ಅದ್ಭುತ ವ್ಯಕ್ತಿಯಾಗಿರುವಳು.

ಈ ಹುಡುಗಿಯು ಉಪನಿಷತ್, ರಾಮಾಯಣ, ಮಹಾಭಾರತ, ಇವುಗಳಲ್ಲಿ ಯಾವ ಭಾಗವನ್ನು ಹೇಳಿದರೂ ಅದನ್ನು ಸ್ವಲ್ಪವೂ ತಡೆಬಡೆಯಿಲ್ಲದೆ ಹೇಳುವಳು. ಅಲ್ಲದೆ ಗೀತೆಯ ತತ್ವವನ್ನು ಕುರಿತು ಅನೇಕ ಮಂದಿ ನೆರೆದ ಸಭೆಗಳಲ್ಲಿ ಉಪನ್ಯಾಸಗಳನ್ನು ಮಾಡುವಳು. ಇದರಿಂದ ಅವಳಿಗ ಸ್ವಲ್ಪವೂ ದಣಿವೇ ಇಲ್ಲದಂತಾಗಿದೆ.

—o0o—

ತ್ರಿಪುರಿ ಕಾಂಗ್ರೆಸ್ಸಿನ ಆದಾಯ.

2,20,000 ರೂಪಾಯಿ.

ತ್ರಿಪುರಿ ಕಾಂಗ್ರೆಸ್ ಮಹಾಸಭೆಯ 52ನೇ ಅಧಿವೇಶನದ ಒಟ್ಟು ಉತ್ಪತ್ತಿಯು ಸುಮಾರು 2,20,000 ರೂಗಳ ವರೆಗೆ ಆಗಿದೆಯೆಂದೂ, ವೆಚ್ಚವೂ ಅಷ್ಟಕ್ಕೇ ಬಂದಿದೆಯೆಂದೂ ತಿಳಿದು ಬಂದಿದೆ. ಪ್ರತಿನಿಧಿಗಳ ಶುಲ್ಕ ಮತ್ತು ಸ್ವಾಗತ ಸಮಿತಿಯವರಿಂದ ಸುಮಾರು 1 ಲಕ್ಷ ರೂಪಾಯಿ ಉತ್ಪತ್ತಿಯಾಗಿದೆ. ಪ್ರದರ್ಶನದಲ್ಲಿದ್ದ 200 ಅಂಗಡಿಗಳ ಬಾಡಿಗೆಯಿಂದ 20,000 ರೂಪಾಯಿ, ವಿಷಯ ನಿಯಾಮಕ ಸಮಿತಿ ಮತ್ತು ಬಹಿರಂಗ ಅಧಿವೇಶನದ ಪ್ರೇಕ್ಷಕರಿಂದ ಅನುಕ್ರಮವಾಗಿ ಸುಮಾರು 25,000 ರೂಪಾಯಿ ಮತ್ತು 35,000 ರೂಪಾಯಿ ಬಂದಿದೆ. ವಸತಿ ಗೃಹಗಳಿಂದ ಸುಮಾರು 20 ಸಾವಿರ ರೂಪಾಯಿ ಉತ್ಪನ್ನ. ಪ್ರದರ್ಶನದಿಂದ ಸುಮಾರು 20 ಸಾವಿರ ರೂಪಾಯಿ ಬಂದಿದೆ.

—o0o—

ಎಣ್ಣೆ ದ್ವೀಪ.

ನ್ಯೂಯಾರ್ಕಿನ ಬಳಿ ಇರುವ ಸ್ಟಾಟೆನ್ ದ್ವೀಪದ ವಿಸ್ತೀರ್ಣ 257 ಎಕ್ರೆಗಳು. ಇದು ಸಂಪೂರ್ಣವಾಗಿ ಎಣ್ಣೆಯನ್ನು ಶೇಖರಿಸುವುದಕ್ಕಾಗಿಯೇ ಉಪಯೋಗಿಸಲ್ಪಟ್ಟಿದೆ. ಸೋಕೊನಿ ಎಣ್ಣೆ ಕಂಪೆನಿಯವರಿಗೆ ಸೇರಿದ ಈ ದ್ವೀಪ ಎಣ್ಣೆಯ ಉಗ್ರಾಣ. ಇಲ್ಲಿಂದಲೇ ಜಗತ್ತಿನ ವಿವಿಧ ಭಾಗಗಳಿಗೆ ಎಣ್ಣೆ ಕಳುಹಿಸಲ್ಪಡುತ್ತದೆ. ಎಲ್ಲವು ಯಂತ್ರಗಳ ಮೂಲಕವೇ ನಡೆಯುವುದರಿಂದ ಇಲ್ಲಿ ಅತೀ ಅಲ್ಪ ಕೆಲಸಗಾರರಿದ್ದರೂ, ವರ್ಷಕ್ಕೆ ಸುಮಾರು 250 ಮಿಲಿಯ ಗೆಲನ್ ವಿವಿಧ ರೀತಿಯ ಎಣ್ಣೆಗಳ ಚಲಾವಣೆ ಇಲ್ಲಿ ಸಾಗುತ್ತದೆ. ಈ ದ್ವೀಪದಲ್ಲಿ ಎಂಥಾ ಭಯಂಕರ ಅಗಸಿಬಲ್ಲ ಯಂತ್ರಗಳೂ ಇದ್ದು ಜಗತ್ತಿನ ಜೀವಾಳವೆನ್ನಬಹುದಾದ ಎಣ್ಣೆಗಳ ರಕ್ಷಣೆ ಸಾಗುತ್ತದೆ. ಸೋಕೊನಿ ಪೆಟ್ರೋಲ್ ಅಲ್ಲಿ ಶೇಖರಿಸಲ್ಪಟ್ಟು ಇಲ್ಲಿಗೆ ಕಳುಹಿಸಲ್ಪಡುತ್ತದೆ.

—o0o—

ಧೂಳಿನ ಮಹತ್ವ.

ಧೂಳೆಂಬುವುದು ಜಗತ್ತಿಗೇ ಅತೀ ಅಗತ್ಯದ ವಸ್ತು ... ಜಗತ್ತಿನಲ್ಲಿ ಇರದೆಂದೂ ... ಅದೇ ... ಇಲ್ಲವಾಗಬಹುದು ಜ... ಪ್ರತಿಯೊಂದು ಕಣ ಧೂಳಿ... ಜಗತ್ತು ... ಪ್ರದೇಶವಾಗು... ಬಗಲೇ ಬೇಕಷ್ಟೆ. ... ಧೂಳಿನ ಕಣಗಳಿವೆ. ... ಮೋಡ ಕೆಳಗೆ ... ಹನಿಯೊಳಗಿ... ತರುತ್ತವೆ ನೋ...

—o0o—

... ಜೈಲಿಗೆ.

... ಪ್ರಸಿದ್ಧ ಸ್ಟೇಷನ್ ಮಾಸ್ಟರನೊಬ್ಬನು ... ಹೆಸರು ... ನರ್ತನವೆಂದರೆ ಪ್ರಾಣ ... ಕಿನಾರೆಯ ... ಎಣ್ಣೆ ... ಸ್ಟೇಷನಿನ ಊರಲ್ಲಿ ... ಒಂದು ದಿನ ಮನೆ... ಸ್ಟೇಷನಿಗೆ ಬಂದಳು. ನರ್ತನವನ್ನಾಡು ... ; ಆಗಲಿ ಎಂದಳು ಆಕೆಳು. ಅದೇ ... ಸ್ಟೇಷನಿನ ಇಕ್ಕಡೆಯಲ್ಲಿಯೂ (ಡೇಂಜರ್) ಗಂಡಾಂತರದ ಸಿಗ್ನಲ್ ಸಂಕೇತ ಕೊಟ್ಟು ಅವಳೊಡನೆ ನರ್ತನ ತೊಡಗಿಯೇ ಬಿಟ್ಟ ಸ್ಟೇಷನ್ ಮಾಸ್ಟರ್. ರೈಲು ಬಂಡಿಗಳು ಆಚೆಯೀಚೆ ಕಡೆಗಳಿಂದ ಬಂದು ಸಿಗ್ನಲ ಕಂಬಗಳಿಂದ ಹೊರಗೆ ನಿಂತು ಬಿಗಿಲ್ ಕೊಟ್ಟು ಕೊಟ್ಟು ಸೋತು ಹೋದವು. ಅವುಗಳ ಗಾರ್ಡುಗಳಲ್ಲೊಬ್ಬನು ಇಳಿದು ಸ್ಟೇಷನಿಗೆಂದು ಬಂದು ನೋಡಲು ಸ್ಟೇಷನ್ ಮಾಸ್ಟರ ನರ್ತನ ಮಾಡುತ್ತಿದ್ದಾನೆ. ಅದಕ್ಕೆ ದೊರೆತ ಉಡುಗೊರೆ ಎಂದರೆ ಏಳು ವರ್ಷದ ಸಜೆ!

—o0o—

ಬ್ರಿಟಿಷರ ಜೀವನಾಧಾರ ಕೊಡೆ.

ಬ್ರಿಟಿಷ್ ರಾಜಕಾರಣ ಪಟುಗಳು ತಮ್ಮ ಕಾರ್ಯಗಳಲ್ಲಿ ಜಯಶೀಲರಾಗಬೇಕಾದರೆ ಏನಾದರೊಂದು ಗುರುತು ಅವರ ಬಳಿ ಇರಲೇ ಬೇಕು. ಚೇಂಬರ್ಲೇನರ ರಕ್ಷೆ, ಗುರುತು, ಸಂಭಾವನಾ ಚಿಹ್ನೆ—ಕೊಡೆ. ಈ ಟ್ರೇಡ್ ಮಾರ್ಕಿನ ದೆಸೆಯಿಂದ ಇದೀಗ ಬ್ರಿಟನ್ ತನ್ನ ಹೊಸ ವ್ಯಾಪಾರಕ್ಕೆ ಆರಂಭಿಸಿದೆ. ಅಂತೂ ಚೇಂಬರ್ಲೇನರು ಕೊಡೆಯಿಂದ ಶ್ರೇಷ್ಠರಾದರೋ ಅಥವಾ ಕೊಡೆ ಚೇಂಬರ್ಲೇನರಿಂದಾಗಿ ಕೀರ್ತಿ ಹೊಂದಿತೋ ತಿಳಿಯದಾದರೂ ಅದು ಇಂದು ಬ್ರಿಟಿಷರ ನಾಯಕತ್ವದ ಗುರುತಾಗಿದೆ. ಚೇಂಬರ್ಲೇನರು ತಾನಿನ್ನು ಯುವಕನೆಂದೆಣಿಸುವಂತೆ ಅವರ ಕೊಡೆಯೂ ಇದೆ. ಅದರಲ್ಲೂ ಬ್ರಿಟಿಷರೆಂದರೆ ಹಳೇ ಕಾಲುಚೀಲ, ಬೂಟ್ಸು, ಹ್ಯಾಟು, ಮುಂತಾದ ಹಳೆ ವಸ್ತುಗಳೇ ನೇತಾಡಿಕೊಂಡು ಬಾಳುವವರು. ಹೇಗಿದ್ದರೂ, ಚೇಂಬರ್ಲೇನರ ಕೊಡೆ ಬ್ರಿಟಿಷರ ಪ್ರಾಣ. ಅದನ್ನು ತಕ್ಕ ಕಾಲದಲ್ಲಿ ಬಿಡಿಸದಿದ್ದರೆ ಬ್ರಿಟನ್ನಿನ ಮೇಲೆ ಭೀಕರ ವೃಷ್ಟಿ ಬಿದ್ದೇ ಬೀಳುವುದು. ಬ್ರಿಟನ್ನಿನ 'ಕಮಿಷನ್ ಏಜೆಂಟ್' ಕೆಲಸದ ಟ್ರೇಡ್ ಮಾರ್ಕೇ ಅವರ 'ರಕ್ಷೆ' ಎನ್ನುತ್ತಿರುವದು ಜರ್ಮನ್ ಪತ್ರಿಕೆ. ನಿಜ! ಜೆಕೊಸ್ಲೊವಾಕಿಯಾ, ಆಸ್ಟ್ರಿಯಾ, ಅಬಿಸೀನಿಯಾ, ಸ್ಪೆಯಿನುಗಳ ವ್ಯಾಪಾರ ಬ್ರಿಟನೂ ಮಾಡಿತ್ತಷ್ಟೆ!

—o0o—

ಈ ವಾರದ ಸಣ್ಣ ಕಥೆ.

ಶಾರದೆ.

(ಲೇಖಕ-ನೆರವಂಡ ಪೊನ್ನಪ್ಪ, ಪಾಲೂರು.)

ನಡುರಾತ್ರಿಯಾಯಿತು. ಬಿರುಗಾಳಿಯೆದ್ದು, ಕಾರ್ಮೋಡಗಳು ತುಂಬಿ, ಪ್ರಕೃತಿಯು ಪ್ರಳಯಕಾಲದಂತೆ ತೋರಿತು. ಸಿಡಿಲು ಮಿಂಚುಗಳು ಭೂಮಿಯನ್ನು ಭಸ್ಮಮಾಡುವಂತೆ ಕಾಣಲು, ಗುಡುಗು ಇಹಲೋಕವನ್ನು ನಡುಗಿಸುತ್ತಿತ್ತು. ಶಾರದೆಯು ತನ್ನ ಆಸನದಿಂದ ಎದ್ದು, ಕಿಟಕಿಯಿಂದ ಹೊರಗೆ ನೋಡಿದಳು. ಆಲಿಸಿದಳು. ಭೂಕಂಪವು ಪ್ರಾರಂಭವಾಯಿತು; ಅದು ನಿಂತೊಡನೆ ಆತ್ಯಾಶ್ಚರ್ಯಕರವಾದ ಸಿಡಿಲೊಂದು ಹೊಳೆಯಿತು. ಯಾವುದೊ ಒಂದು ವ್ಯಕ್ತಿಯು ಮಹಿಷವೊಂದನ್ನೇರಿ ಬರುವಂತೆ ಶಾರದೆಯು ಕಂಡು, ಸ್ವಲ್ಪ ಬೆದರಿದಳು. ತಕ್ಷಣದಲ್ಲಿ ಮನೆಯ ಹೆಬ್ಬಾಗಿಲನ್ನು ಯಾರೋ ಒದೆದಂತೆ ಶಬ್ದವಾಯಿತು. ತಟ್ಟನೆ ತನ್ನ ಪ್ರಿಯ ಚಂದ್ರಶೇಖರನು ಮಲಗಿದ್ದಲ್ಲಿಗೆ ಅವಳು ನಡೆದಳು. ಚಂದ್ರಶೇಖರನು ದೀನಸ್ವರದಿಂದ ಕೂಗಿದನು. ಒಮ್ಮೆಲೆ ಎದ್ದು, ಹಾಸಿಗೆಯಲ್ಲಿ ಕುಳಿತನು; ಪುನಃ ತಟ್ಟನೆ ಬಿದ್ದನು, 'ಶಾರದೆ' ಎಂದು ಕರೆದನು. ಶಾರದೆಯು ಅವನ ಹಾಸಿಗೆಯಲ್ಲಿ ಮೌನವಾಗಿ ಕುಳಿತಳು. ಅವನು 'ಶಿವ, ಶಿವ!' ಎಂದು ಹೇಳಿ, ಮರುಮಾತನಾಡಲಿಲ್ಲ. ಶಾರದೆಯ ಕಣ್ಣುಗಳಲ್ಲಿ ನೀರು ತುಂಬಿತು; ತನ್ನ ಪ್ರಿಯನನ್ನು ಕರೆದಳು. ಉತ್ತರವಿಲ್ಲ. 'ಅಯ್ಯೋ, ನಾನು ಕೆಟ್ಟೆನು' ಎಂದಳು ಶಾರದೆ.

ಚಂದ್ರಶೇಖರನು ತನ್ನ ವಿದ್ಯಾಭ್ಯಾಸವನ್ನು ಮುಗಿಸಿ, ಅತಿ ಕಡಿಮೆ ವೇತನದ ಒಂದು ನೌಕರಿಯಲ್ಲಿದ್ದನು. ಆಡಂಬರವು ಹೆಚ್ಚಿತ್ತು; ಆದಾಯವು ಕುಗ್ಗಿತ್ತು; ಕುಡಿಕತನವು ಯೌವನವನ್ನೇರಿತ್ತು; ಸಾಲವು ಹೆಚ್ಚಿತು. ಒಂದು ದಿನ ಎಂದಿಗಿಂತ ಹೆಚ್ಚಾಗಿ ಕುಡಿದು, ದಾರಿ ನಡೆದು ಬರುತ್ತಿರಲು, ಕತ್ತಲೆಯಾಯಿತು; ಚಂದ್ರಶೇಖರನು ದಾರಿ ಕಾಣದೆ ಮನೆಯೊಂದರ ಜಗಲಿಯನ್ನೇರಿ, ಪ್ರಜ್ಞೆಯಿಲ್ಲದೆ ಕೂಗಿದನು. ಮನೆಯ ಯಜಮಾನನು ಹೊರಗೆ ಬಂದು ನೋಡಿ, ಚಂದ್ರಶೇಖರನನ್ನು ತಾನು ಶಿಕ್ಷಿಸುವಂತೆ ನಿಶ್ಚಯಿಸಿದನು. ಮರುದಿನ ಚಂದ್ರಶೇಖರನು ತನ್ನ ಕೆಲಸಕ್ಕೆ ಹೋಗುವ ಮೊದಲೇ ತನ್ನ ಮೇಲಧಿಕಾರಿಯ ಕಟ್ಟಪ್ಪಣೆಯ ಕಾಗದವನ್ನೋದಿ ನಡುಗಿದನು. ಆದರೂ ತನ್ನ ತಪ್ಪನ್ನೊಪ್ಪಿ, ಕ್ಷಮೆಯನ್ನು ಬೇಡಿ, ಇನ್ನು ಮುಂದಕ್ಕಾದರೂ ಕುಡಿಕತನವನ್ನು ಬಿಡುವೆನೆಂಬ ಭಾವನೆಯು ಅವನಲ್ಲಿರಲಿಲ್ಲ. 'ನನ್ನ ಅನ್ನವು ನನ್ನಲ್ಲೇ ಇದೆ. ನಾನು ಯಾರಿಗು ಹೆದರ ಬೇಕಾಗಿಲ್ಲ. ಈ ಅಲ್ಪ ನೌಕರಿಯಿಲ್ಲದಿದ್ದರೆ ನಾನು ಬದುಕಲಾರೆನೇ ?' ಎಂದಂದುಕೊಂಡನು.

ಶಾರದೆಯು ವಿದ್ಯೆಯಲ್ಲಿ ಉಚ್ಚತರ ಗತಿಯನ್ನು ಪಡೆದವಳು. ಆದರೆ ಅವಳ ಆಡಂಬರವೆಲ್ಲ ತನ್ನ ಪ್ರಿಯನ ತಪ್ಪುಗಳನ್ನು ತಿದ್ದುವುದರಲ್ಲಿಯೆ ಆಯಿತು. ನಿರಾಶೆಯಾದಳು. ಸಾಲವಾದರೂ ತನ್ನ ಪ್ರಿಯನನ್ನು ಬಯ್ಯಲಾರೆನು ಎಂದು ಧೈರ್ಯದಿಂದ ನುಡಿದಳು. ತನ್ನ ಒಡವೆ ಉಡುಗರೆಗಳನ್ನು ಮಾರಿದಳು. ಆದರೇನು? ಚಂದ್ರಶೇಖರನು ಮೋಹಿನಿಗಾಗಿ ಹಣವನ್ನು ಕೊಟ್ಟು ಬಿಡುತಿದ್ದನು. ಕೊನೆಗೆ ಶಾರದೆಯು ಏಕವಸ್ತ್ರಧಾರಿಯಾದಳು. ಇಂತಾದರೂ ತನ್ನ ಪ್ರಿಯನ ಮನಸ್ಸನ್ನು ನೋಯಿಸದೆ ಹಣವನ್ನು ಒದಗಿಸುತ್ತಿದ್ದಳು. ಆದರದು ಸಾಧ್ಯವಾಗಲಿಲ್ಲ. ಈಗ ಅವಳು ಸಾಲದಲ್ಲಿ ಸೋತು, ತನ್ನ ಪತಿಯನ್ನೂ ಕಳೆದುಕೊಂಡು ಅನಾಥೆಯಾದಳು.

ಶಾರದೆಯು ವಿಧವೆಯಾಗಿ ಇಂದಿಗೆ ಒಂದು ತಿಂಗಳಾಯಿತು. ದಿನ ಹೋದಂತೆ ಪತಿಯ ಮೇಲಿನ ಪ್ರೇಮವು ಹೆಚ್ಚಚ್ಚಾಗತೊಡಗಿತು. ಚಂದ್ರಶೇಖರನ ಸರ್ವ ತಪ್ಪುಗಳನ್ನು ಅವಳು ಮನ್ನಿಸಿದಳು. ತಾನು ತನ್ನ ಪತಿಯನ್ನೆಷ್ಟು ಪ್ರೀತಿಸುತಿದ್ದರೂ ತನ್ನನ್ನೇಕೆ ಅವನು ಪ್ರೀತಿಸುತಿರಲಿಲ್ಲವೆಂಬುದು ಅವಳಿಗೆ ತಿಳಿಯದಾಯಿತು. ಅವನೆಷ್ಟೋ ಸಾರಿ ಮದ್ಯದಿಂದ ಮತ್ತನಾಗಿ ಊಟವನ್ನು ಮಾಡದೆ ಇರಲು, ಶಾರದೆಯು ಉಪವಾಸವಿರುತಿದ್ದಳು. ಅಂತಾದರೂ ಸಾಯುವಾಗ ಅವನು ತನ್ನನ್ನು ಮನ್ನಿಸಲಿಲ್ಲವೆಂಬುದು ಅವಳನ್ನು ಕೊರಗಿಸುತಿತ್ತು. ಇಂದು ಶಾರದೆಯು ಸಣ್ಣ ಪೆಟ್ಟಿಗೆಯೊಂದನ್ನು ಹೊತ್ತು, ಮನೆಯನ್ನು ಬಿಟ್ಟಳು. ಸ್ತ್ರೀಯೊಬ್ಬಳೆ ದಾರಿಯಲ್ಲಿ ನಡೆಯುವುದು ಒಳಿತಲ್ಲವೆಂದು, ತನ್ನ ಪತಿಯ ಪೋಷಾಕನ್ನು ತೊಟ್ಟಳು. ಒಮ್ಮೆ ನಾಚಿಕೆ ಪಟ್ಟಳು; ಆದರೆ ಧೈರ್ಯದಿಂದ ಮುನ್ನಡೆದು ಬಳಲಿ, ಆಶ್ರಮವೊಂದನ್ನು ಸೇರಿದಳು.

ಸನ್ಯಾಸಿಯು ಪೂಜೆಗಾಗಿ ಪ್ರತಿ ದಿನವು ಹೂಗಳನ್ನು ಕುಯ್ದು ತಂದು, ಆ ಆಶ್ರಮದಲ್ಲಿ ದೇವರನ್ನು ಧ್ಯಾನಿಸುತ್ತಾ ಕೆಲವು ಕಾಲ ಶಾರದೆಯು ನೆಮ್ಮದಿಯಿಂದಿದ್ದಳು. ತನ್ನ ಗುಟ್ಟು ಯಾರಿಗೂ ತಿಳಿದಿರಲಿಲ್ಲ. ಆದರೆ ಆ ಕಪಟ ಸನ್ಯಾಸಿಯು ಮಾತ್ರ ಸಂಶಯದಿಂದ ಅವಳನ್ನು ನೋಡುತ್ತಿದ್ದನು. ಅವಳು ಹೂಗಳನ್ನು ತಂದಿಡುವುದರಲ್ಲಿ, ಸ್ನಾನಮಾಡಿ ಪೂಜೆಗಾಗಿ ತನ್ನ ಬದಿಯಲ್ಲಿ ಓರೆಯಾಗಿ ಕುಳಿತುಕೊಳ್ಳುವುದರಲ್ಲಿ, ಮಾತನಾಡುವುದರಲ್ಲಿ ಸನ್ಯಾಸಿಯು ಸ್ತ್ರೀಯ ಚರ್ಯೆಗಳನ್ನು ಕಂಡು, ಅವಳನ್ನೇ ಒಮ್ಮೊಮ್ಮೆ ಎವೆಯಿಕ್ಕದೆ ನೋಡುತ್ತಿರುವನು. ಶಾರದೆಯು ಮುಖಕ್ಕೆ ಗಂಧವನ್ನು ವಿಪುಲವಾಗಿ ಹಚ್ಚುತಿದ್ದುದರಿಂದ ಮೂಗು ಬೊಟ್ಟಿನ ಗುರುತಾಗಲೀ, ಓಲೆಯ ಗುರುತಾಗಲಿ ಕಾಣುತಿರಲಿಲ್ಲ. ಶಾರದೆಯು ತನ್ನ ಕಷ್ಟವು ದೂರವಾಯಿತೆಂದು ಭಾವಿಸಿದಳು. ಆದರೆ ಸನ್ಯಾಸಿಯ ಕ್ರೂರ ದೃಷ್ಟಿಯು ಮಾತ್ರ ಅವಳ ಮೇಲೆ ಅಲ್ಲದೆ ಇತರ ಶಿಷ್ಯವರ್ಗದವರ ಗಮನಕ್ಕೆ ಹೋಗುವುದು ಕಡಿಮೆಯಾಯಿತು.

ಒಂದು ವರ್ಷವಾಗಿ, ಒಂದೆರಡು ತಿಂಗಳು ಕಳೆಯಿತು. ಶುಕ್ಲ ಪಕ್ಷದ ರಾತ್ರಿಯೊಂದರಲ್ಲಿ ಆ ಕಪಟ ಸನ್ಯಾಸಿಯು ಶಿಷ್ಯ ಮಂಡಲಿಗೆ ತನ್ನ ತಪ್ಪು ತಿಳಿಯದಂತೆ ಮಾಡಲು, ಎಲ್ಲರೆದುರಿನಲ್ಲಿ ಶಾರದೆಯನ್ನು ಹೊರಮಾಡಿದನು; ಎಲ್ಲ ಶಿಷ್ಯರಿಂದಲೂ ಪ್ರಮಾಣವನ್ನು ಮಾಡಿಸಿದನು. 'ಹಾ, ದೈವವೇ, ನನಗೀ ಅಧೋಗತಿಯು ಸಂಭವಿಸಿತೇ ?' ಎಂದು ಶಾರದೆಯು ಮನದಲ್ಲೇ ರೋಧಿಸುತ, 'ಬೆಳ್ಳಗಿರುವದೆಲ್ಲ ಹಾಲಲ್ಲ' ಎಂಬ ಅಭಿಜ್ಞರ ನುಡಿಯಂತೆ 'ಆಶ್ರಮಗಳಲ್ಲಿರುವವರೆಲ್ಲ ಸನ್ಯಾಸಿಗಳಲ್ಲ' ಎಂಬುದನ್ನು ನಾನು ಗಮನಿಸದೆ ಮೋಸ ಹೋದೆನಲ್ಲ' ಎನ್ನುತ್ತಾ ಅಲ್ಲಿಂದ ನಡೆದಳು. ಗರ್ಭಿಣಿಯಾದುದರಿಂದ ಅವಳಿಗೆ ನಡೆಯಲಸಾಧ್ಯವಾಯಿತು. ಪ್ರಸವವೇದನೆಯಿಂದಲೋ ಎಂಬಂತೆ, ಕಾಡಿನೊಳಗಿನ ಅದೊಂದು ಚಿಕ್ಕ ಮೈದಾನದಲ್ಲಿ ಕುಳಿತು, ಕೂಗಿದಳು. ಅವಳ ಕೂಗು ಆ ಕಾನನದೊಳಗೆ ಪ್ರತಿಧ್ವನಿಗೊಂಡಿತು. ಮರಗಿಡಗಳು ಮರುಗಿದುವು; ಹಕ್ಕಿಗಳು ಹಾ ಹಾ ಹಾಡಿದುವು; ಅಲೆವ ಮೃಗಗಳು ಅಲೆಯದೆ ನಿಂತುವು; ಬಾಣ ಚುಕ್ಕಿಗಳು ವ್ಯಸನದಿಂದೆಂಬಂತೆ ಒಮ್ಮೆ ಕಣ್ಣೆಮ್ಮಿದುವು. ಅನಾಥರಿಗೆ ಆತನೇ ನಾಥನು, ಅಷ್ಟರಲ್ಲಿ ಬೆಸ್ತನೊಬ್ಬನು ಮೀನು ಹಿಡಿಯುವ ಆಸೆಯಿಂದ ಬೆಳದಿಂಗಳಲ್ಲಿ ಶಾರದೆಯು ಕುಳಿತಿದ್ದೆಡೆಗೆ ಬಂದನು. ಸತ್ಯವಿದ್ದರೆ ಎತ್ತಲೂ ಭಯವಿಲ್ಲ !

'ಹುಟ್ಟುವಾಗ ತನ್ನ ಮನೆ; ಬಳೆವಾಗ ಪರರ ಮನೆ' ಎಂಬಂತೆ ಶಾರದೆಯು ಉತ್ತಮ ಕುಲದಲ್ಲಿ ಹುಟ್ಟಿ, ಆಶ್ರಮದಲ್ಲಿ ದೇವರ ಧ್ಯಾನವನ್ನು ಮಾಡಿ, ಈಗ ಬೆಸ್ತರ ಮನೆಯಲ್ಲಿರುವಳು. ಅವಳ ಮಗನಾದ ಕಮಲಾಕರನು ಈಗ ಅವಳಿಗೆ ಆನಂದವನ್ನುಂಟುಮಾಡುತ್ತಿರುವನು. ಬೆಸ್ತನ ಮನೆಯಲ್ಲಿ ಇದ್ದುದು ಬೆಸ್ತನೂ ಅವನ ಸಣ್ಣ ಮಗನೊಬ್ಬನೂ. ಈಗ ಶಾರದೆಯು ಎರಡು ಮಕ್ಕಳ ತಾಯಿಯಂತಿದ್ದಳು. ಬೆಸ್ತನು ಗೈದು ತಂದುದರಲ್ಲಿ ಅವರು ನಾಲ್ವರ ಜೀವನವು ಸಾಗುತಿತ್ತು. ಒಂದು ರಾತ್ರೆ ಮೀನು ಹಿಡಿಯಲು ಹೋದ ಬೆಸ್ತನು ಮರಳಿ ಬರಲಿಲ್ಲ. ಶಾರದೆಯು ಅವಾಕ್ಕಾದಳು. ಎರಡು ದಿವಸವಾಯಿತು. ಅವನಿರವು ಇಲ್ಲ. ಕೊನೆಗೆ ಒಂದು ವಾರವಾಯಿತು. ಆದರೂ ಬೆಸ್ತನು ಹಿಂದಿರುಗಲಿಲ್ಲ. ಊಟಕ್ಕೆ ಗತಿಯಿಲ್ಲ. ಬೆಸ್ತನಲ್ಲಿದ್ದ ಚರಕವೊಂದು ಮಾತ್ರ ಅವರು ಮೂವರ ಜೀವನದ ಕಷ್ಟವನ್ನು ನೀಗಿಸಬಲ್ಲುದಾಗಿತ್ತು. ಕಮಲೆಯು ಇಬ್ಬರು ಮಕ್ಕಳನ್ನು ಹೊತ್ತು, ದಾರಿ ನಡೆದು, ಕಾಡನ್ನು ಬಿಟ್ಟು, ಊರೊಂದನ್ನು ಸೇರಿ, ಒಬ್ಬ ಬ್ರಾಹ್ಮಣನ ಮನೆಯಲ್ಲಿ ಚಾಕರಿಗೆ ನಿಂತಳು.

ಆ ಬ್ರಾಹ್ಮಣನಿದ್ದುದೂ ತನ್ನ ಮನೆಯಲ್ಲಿ ಒಬ್ಬನೆ. ಅವನು ದಿನಃಪ್ರತಿ ಪೂಜೆಗಾಗಿ ಮೂರು ಮೈಲು ದೂರವಿರುವ ದೇವಾಲಯವೊಂದಕ್ಕೆ ಹೋಗುವನು. ಆ ದೇವಾಲಯದಿಂದ ಅವನಿಗೆ ತಿಂಗಳಿಗೆ ಆರೇಳು ರೂಪಾಯಿಗಳು ದೊರೆಯುತ್ತಿದ್ದುವು. ಶಾರದೆಯು ಚರಕದಿಂದ ನೂಲನ್ನು ತಯಾರಿಸಿ, ಮಾರಿ ತಂದುದನ್ನು ಆ ಬ್ರಾಹ್ಮಣನ ಕೈಯಲ್ಲಿ ಕೊಡುತಿದ್ದಳು. ಅವಳು ಪುನಃ ಉತ್ತಮ ಕುಲವನ್ನು ಸೇರಿದಾಗ ತನ್ನ ಕಷ್ಟವು ಇಂದಿಗೆ ಪರಿಸಮಾಪ್ತಿಯಾಯಿತೆಂದಳು. ಆದರೆ ದೈವಗತಿಯೇ ಬೇರೆ.

ಒಂದು ದಿನ ಪೂಜೆಗೆಂದು ಆ ಬ್ರಾಹ್ಮಣನು ಹೂಗಳನ್ನು ತೆಗೆದುಕೊಂಡು ಹೊರಡಲು ಶಾರದೆಯ ಆರು ವಯಸಿನ ಮಗನಾದ ಕಮಲಾಕರನು ತಾನೂ ದೇವರ ಪೂಜೆಗೆ ಹೋಗವೆನೆಂದು ಹಟಮಾಡಿ ಹೊರಟನು. ಇತ್ತ ಶಾರದೆಯೂ ಬೆಸ್ತನ ಮಗನೂ ಮನೆಯಲ್ಲಿ ಉಳಿದರು.

ಪೂಜೆಯಾಯಿತು. ಪೂಜಾರಿಯೂ ಕಮಲಾಕರನೂ ಊಟವನ್ನು ತೀರಿಸಿ, ದೇವಾಲಯದ ಮೆಟ್ಟಲನ್ನಿಳಿದು ಬರುವಾಗ ಆ ಬ್ರಾಹ್ಮಣನು ಸಣ್ಣ ಮರವೊಂದರಲ್ಲಿ ಜೇನನ್ನು ಕಂಡನು. ಅದನ್ನು ಕುಯ್ಯಬೇಕೆಂಬ ಆಸೆಯು ಕಮಲಾಕರನನ್ನು ಹುರುಪುಗೊಳಿಸಿತು. ಪೂಜಾರಿಯು ಮರವನ್ನೇರಲರಿಯದೆ ಆ ಪುಟ್ಟ ಬಾಲಕನಿಗೆ ದುರ್ಬೋಧನೆಯನ್ನು ಮಾಡಿ, ಮರವನ್ನು ಹತ್ತುವಂತೆ ಕಮಲಾಕರನಿಗೆ ಹೇಳಿದನು. ಕಮಲಾಕರನು ಮರವನ್ನೇರಿ ಒಂದು ಕತ್ತಿಯಿಂದ ಜೇನಿದ್ದ ಕೊಂಬೆಯನ್ನು ಕಡಿಯಲು, ಆ ಕೊಂಬೆಯು ತಾನಾಗಿ ಸೀಳಿ, ಬೀಳಲು ಮತ್ತೊಂದು ಮರದಲ್ಲಿ ಸಿಕ್ಕಿಕೊಂಡಿತು. ಆ ಬಾಲಕನು ಮರದಿಂದಿಳಿದು, ಸಿಕ್ಕಿಕೊಂಡಿದ್ದ ಕೊಂಬೆಯನ್ನು ತಪ್ಪಿಸುವಾಗ ಆ ಕೊಂಬೆಯೂ ಮತ್ತೊಂದು ಮರವೂ ಅವನ ತಲೆಯ ಮೇಲೆ ಬಿದ್ದುವು. ಪೂಜಾರಿಯು ದಾರಿ ನಡೆದು, ಮನೆಯನ್ನು ಸೇರಿದನು. ಅವನೊಬ್ಬನೇ ಹಿಂತಿರುಗುತಿರುವುದನ್ನು ಕಂಡು, ಶಾರದೆಯು ವಿಚಾರಿಸಿದಳು. ಕಮಲಾಕರನು ತನ್ನೊಡನೆ ಬರಲಿಲ್ಲವೆಂದೂ, ಅವನು ಸ್ನಾನಕ್ಕೆಂದು ಕೆರೆಗೆ ಹೋದನೆಂದೂ ಸುಳ್ಳು ಹೇಳಿದನು.

ದಿವಸವು ಒಂದಾಯಿತು. ಎರಡಾ
ಯಿತು. ಇಂದಿಗೆ ವಾರವಾಯಿತು.
ಮಲಾಕರನ ಸುಳಿವೇ ಇಲ್ಲ. ಊರು
ಕೇರಿ, ನಾಡುಗಳಲ್ಲಿ ಗಲಭೆಯಾಯಿತ
ಎಲ್ಲರಲ್ಲಿಯೂ ಆಶ್ಚರ್ಯಸೂಚಕವೆ
ಕೆರೆ ಕುಂಟೆಗಳಲ್ಲಿ, ಕಾಡು ಕೊಚ್ಚೆಗಳ
ಎಲ್ಲರೂ ಕಮಲಾಕರನನ್ನು ಹುಡುಕಿ
ದು. ಕೆಲವರು, 'ಅವನನ್ನು ದೇವ
ಕಾಡು ಸೇರಿಸಿ ಬಿಟ್ಟರು,' ಎಂದರು.
ರಕೆಯ ಹೊತ್ತರು; ಕಾಣಿಕೆ ತೆತ್ತರು.
ವರೂ ಕಮಲಾಕರನು ಬರಲಿಲ್ಲ. '
ನು ಜೀವವಾಗಿರುವನು; ಇದು ದೇ
ಕೋಪ' ಎಂದರು ಊರ ಜೋತಿಷ್ಯ
ಶಾರದೆಯು ಅವಾಕ್ಕಾದಳು.
ದಿನ ಕೆರೆಯಲ್ಲಿ ಮಿಂದು, ಮಡಿಬಟ್ಟೆ
ನ್ನು ಶಾರದೆಯು ಉಡುತಿರಲು, ಯಾ
ತನ್ನನ್ನು ಹಿಡಿದಂತೆ ಅವಳಿಗೆ ಭಾ
ಯಿತು. ಬೋಧೆಯು ತಪ್ಪಿತು,

ಕೊಡಗು ಕೌನ್ಸಿಲು ಬಡ್ಜೆಟ್ ಮೀಟಿಂಗು.

(ಕಳೆದ ಸಂಚಿಕೆಯಿಂದ ಸಾಗಿದ್ದು.)

ಠರಾವುಗಳು.

1. '7ನೇ ಲ್ಯಾಂಡ್ ರೆವಿನ್ಯೂ ಖರ್ಚಿನಲ್ಲಿ ರೂ. ಒಂದು ಕಡಿಮೆ ಮಾಡಬೇಕೆಂದು ಈ ಸಭೆಯು ಚೀಫ್ ಕಮಿಶನರಿಗೆ ಶಿಫಾರಸು ಮಾಡುತ್ತದೆ. ಕಂದಾಯದಲ್ಲಿ ಶೇಕಡ 25ರಂತೆ ಮಾಫಿ ಬಿಡಬೇಕೆಂಬುವುದೇ ಈ ಠರಾವಿನ ಉದ್ದಿಶ್ಯ'. ಈ ಠರಾವನ್ನು ಶ್ರೀ ಚೌಡ್ಲು ಕಾಳಪ್ಪನವರು ಸೂಚಿಸಿ, ಮಳೆಯ ಅಭಾವದ ದೆಸೆಯಿಂದ ದೇಶದಲ್ಲೆಲ್ಲಾ ಬೆಳೆಯು ಹಾಳಾಗಿದೆಯೆಂದೂ, ಬೆಳೆ ಬೆಳೆಯದೆ ಹೊಟ್ಟೆಗೇ ತೊಂದರೆಪಡುತ್ತಿರುವ ಜನರಿಗೆ ಸರ್ಕಾರದವರು ಕಂದಾಯ ಬಿಟ್ಟು ಉದ್ಧರಿಸುವದು ಅವರ ಕರ್ತವ್ಯವೆಂದೂ ಹೇಳಿದರು. ರೆವಿನ್ಯೂ ಮೆಂಬರರು ಎಲ್ಲರಿಗೂ ಮಾಫಿ ಬಿಡಲಿಕ್ಕಾಗುವುದಿಲ್ಲವೆಂದೂ, ಬೆಳೆಯಾಗದೆ ತುಂಬಾ ನಷ್ಟ ಸಂಭವಿಸಿದವರ ವಿಚಾರ ಮಾತ್ರ ವಿಚಾರಿಸಲಾಗುವದೆಂದು ಹೇಳಿದರು. ಜ. ಒ. ಎಫ್. ಮಾರ್ಲೆಂಡರವರು ಠರಾವನ್ನು ವಿರೋಧಿಸಿಯೂ, ಶ್ರೀ. ಯಂ. ಯಂ. ಬೆಳ್ಯಪ್ಪನವರು ಠರಾವನ್ನು ಸಮರ್ಥಿಸಿಯೂ ಮಾತಾಡಿದರು. ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

2. '7. A. ಲೇಂಡ್ ರೆವಿನ್ಯೂ ಖರ್ಚಿನಲ್ಲಿ ರೂ. ಒಂದು ಕಡಿಮೆ ಮಾಡಬೇಕೆಂದು ಈ ಸಭೆಯು ಸೂಚಿಸುತ್ತದೆ. ಭಾಗಮಂಡ್ಲ ನಾಡು ಕಚ್ಚೇರಿಯನ್ನು ವಜ ಮಾಡಬಾರದೆಂಬುವುದೇ ಈ ಠರಾವಿನ ಉದ್ದಿಶ್ಯ.' ಶ್ರೀ. ಸಿದ್ಧಮಲೆ ಸೋಮಣ್ಣನವರು ಈ ಠರಾವನ್ನು ಸೂಚಿಸಿ, ಭಾಗಮಂಡ್ಲ ನಾಡು ಕಚ್ಚೇರಿಯನ್ನು ತೆಗೆಯುವುದರಿಂದ ಜನತೆಗೆ ತುಂಬಾ ಅನಾನುಕೂಲವಾಗುವದೆಂದೂ, ಅದನ್ನು ತೆಗೆಯುವದರಿಂದ ಅವರಿಗೆ ಇನ್ನು ಮಡಿಕೇರಿ ನಾಡು ಕಚ್ಚೇರಿಯೇ ವ್ಯಾಪಿಸುವದರಿಂದ ಮೂವತ್ತು ಮೈಲುಗಳ ದೂರದಲ್ಲಿರುವ ಗ್ರಾಮಸ್ಥರು ಕಚ್ಚೇರಿಗೆ ಬರುವದು ಪೂರಾ ಕಷ್ಟವೆಂದೂ ಆದ್ದರಿಂದ ಅದನ್ನು ವಜ ಮಾಡದೆ ಜನಹಿತವನ್ನು ಬಯಸಬೇಕೆಂದೂ ಹೇಳಿದರು. ಫೈನಾನ್ಸು ಮೆಂಬರರು—ಕಳೆದ ಮೀಟಿಂಗಿನಲ್ಲಿ ಫ್ರೇಜರ್‌ಪೇಟೆ ನಾಡುಕಚ್ಚೇರಿಯನ್ನು ತೆಗೆಯಕೂಡದೆಂದು ಠರಾವಿತ್ತೆಂದೂ, ಈಗ ಭಾಗಮಂಡ್ಲವನ್ನು ತೆಗೆಯಕೂಡದೆಂದು ವಾದಿಸುವದು ಹಿತವಲ್ಲವೆಂದೂ, ಅಲ್ಲಿಯ ಕೆಲಸಗಳನ್ನು ನಿರ್ವಹಿಸಲು ಎರಡು ಕ್ಲಾರ್ಕರನ್ನು ಇಡಲಾಗುವದೆಂದೂ ಹೇಳಿದರು. ಶ್ರೀ. ಯಂ. ಯಂ. ಬೆಳ್ಯಪ್ಪನವರು ಠರಾವನ್ನು ಪುಷ್ಟೀಕರಿಸಿ ಮಾತಾಡಿದರು. ಸೂಚಕರು ಉತ್ತರವಿತ್ತ ಮೇಲೆ ಓಟಿಗೆ ಹಾಕಲಾಗಿ ಠರಾವಿಗೆ ಪರವಾಗಿ ನಾಲ್ಕೂ, ವಿರೋಧವಾಗಿ ಐದೂ ಓಟು ಬಂದದ್ದರಿಂದ ಬಿದ್ದು ಹೋಯಿತು.

3. ಸರ್ಕಾರದ ಮೇಲ್ವಿಚಾರಣೆ ಮೇರೆ ಫಾರೆಸ್ಟಿನಿಂದ ತೆಗೆದ ಕೂಲಿ ಮರದ ಬಾಬ್ತು ಜಮಾ ಬಂದ 10. ಫಾರೆಸ್ಟ್ ಟಿಂಬರಿನಲ್ಲಿ ನಮೂದಿಸಲ್ಪಟ್ಟಿರುವ ರೂ. 2,69,600ರಲ್ಲಿ ರೂ. ಒಂದು ಕಡಿಮೆ ಮಾಡಬೇಕು. ಉದ್ಯೋಗಸ್ಥರಲ್ಲದವರ ಒಂದು ಸಮಿತಿಯನ್ನು ನೇಮಿಸಿ ಈಗ ಅನುಸರಿಸುತ್ತಿರುವ ಫಾರೆಸ್ಟ್ ಇಲಾಖೆಯ ತತ್ವವನ್ನು ಪರೀಕ್ಷಿಸಿ ಸರಿಪಡಿಸಲು ಶಿಫಾರಸು ಮಾಡಬೇಕೆಂಬುವುದೇ ಈ ಠರಾವಿನ ಉದ್ದಿಶ್ಯ'. ಶ್ರೀ. ಯಂ. ಯಂ. ಬೆಳ್ಯಪ್ಪನವರು ಈ ಠರಾವನ್ನು ಸೂಚಿಸಿ ಈಗಿನ ಫಾರೆಸ್ಟ್ ಇಲಾಖೆಯವರ ತತ್ವವು ಸಮಂಜಸವಾಗಿಲ್ಲವೆಂದೂ, ಫಾರೆಸ್ಟಿನಿಂದ ಈಗ ಹೆಚ್ಚಿನ ಪರಿಮಾಣದಿಂದ ಗಂಧದ ಹಾಗೂ ತೊಲೆ ಮರಗಳನ್ನು ಕೀಳುತ್ತಿರುವದರಿಂದ ಕೆಲವೇ ವರ್ಷಗಳಲ್ಲಿ ಕೊಡಗಿನ ಫಾರೆಸ್ಟು ಉತ್ಪತ್ತಿಯು ಕುಂದಿಹೋಗುವ ಸಂಭವವಿದೆಯೆಂದೂ, ಆದ್ದರಿಂದ ಒಂದು ಕಮಿಟಿಯನ್ನೇರ್ಪಡಿಸಿ ಇದನ್ನು ಕೂಲಂಕುಶ ವಿಚಾರಿಸಿ ಸರಿಪಡಿಸುವದು ಹಿತವೆಂದೂ ಹೇಳಿದರು. ಫಾರೆಸ್ಟು ಮೆಂಬರರು—ಇದನ್ನು ವಿರೋಧಿಸುತ್ತಾ, ಇಂದು ಕೊಡಗಿನ ಫಾರೆಸ್ಟ್ ಇಲಾಖೆ ಕಾರ್ಯ ಕಲಾಪಗಳು ಯಾವ ರೀತಿಯಿಂದಲೂ ಹಿಂದುಳಿದಿಲ್ಲವೆಂದೂ, ಒಂದು ಕಡೆಯಲ್ಲಿ ಹೆಚ್ಚಿಗೆ ಮರ ಕೀಳುತ್ತಿದ್ದರೆ ಮತ್ತೊಂದು ಕಡೆಯಲ್ಲಿ ಅದೇ ಪ್ರಮಾಣದಿಂದ ನೆಡಲಾಗುತ್ತಿದೆಯೆಂದೂ ಆದ್ದರಿಂದ ಭಯಪಡುವ ಸಂಭವವಿಲ್ಲವೆಂದೂ ಹೇಳಿದರು.

ಶ್ರೀ. ಕೆ. ಮಲ್ಲಪ್ಪನವರು ಠರಾವನ್ನು ಸಮರ್ಥಿಸಿ ಮಾತಾಡಿದರು. ಸೂಚಕರು ಉತ್ತರವಿತ್ತರು. ಫಾರೆಸ್ಟು ಮೆಂಬರರು ಅದನ್ನು ವಿರೋಧಿಸಿ ಮಾತಾಡಿದ ಮೇಲೆ ಓಟಿಗೆ ಹಾಕಲಾಗಿ 5 ಪರವಾಗಿಯೂ 6 ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

4. 25—ಈ— ಜನರಲ್ ಮತ್ತು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಖರ್ಚಿನಲ್ಲಿ ಒಂದು ರೂಪಾಯಿ ಕಮ್ಮಿ ಮಾಡಬೇಕೆಂಬ ಠರಾವನ್ನು ಶ್ರೀ ಚೌಡ್ಲು ಕಾಳಪ್ಪನವರು ಸೂಚಿಸಿ ಸೇರಿನ ಆಳತೆಯಲ್ಲಿ ಹಲೆ ಹೊಡೆಯಬೇಕೆಂಬ ರೂಲು ಇರುವದರಿಂದ ಅದನ್ನು ವಾಪಸು ತೆಗೆದುಕೊಂಡರು.

5. XXVI ವಿದ್ಯಾ ಖರ್ಚಿನಲ್ಲಿ ಒಂದು ರೂಪಾಯಿ ಕಮ್ಮಿ ಮಾಡಬೇಕು ಎಂಬ ಠರಾವನ್ನು ಚೌಡ್ಲು ಕಾಳಪ್ಪನವರು ಸೂಚಿಸಿ ರೈತರ ಸ್ಥಿತಿಯು ಪೂರಾ ಶೋಚನೀಯಾವಸ್ಥೆಯಲ್ಲಿರುವುದೆಂದೂ ಅದ್ದರಿಂದ ಶಾಲಾ ಫೀಜನ್ನು ಹೆಚ್ಚಿಸುವದರಿಂದ ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅಡ್ಡಿ ಮಾಡಿದಂತಾಗುವದೆಂದೂ ಹೇಳಿದರು. ವಿದ್ಯಾ ಇಲಾಖಾ ಮೆಂಬರರು ಕೊಡಗಿನಲ್ಲಿ ವಿದ್ಯಾರ್ಜನೆಗೆ ಇರುವಷ್ಟು ಸೌಕರ್ಯವು ಬೇರೆ ಎಲ್ಲೂ ಇಲ್ಲವೆಂದೂ ಇಲ್ಲಿಯ ಫೀಜನ್ನು ಹೆಚ್ಚಿಸಿದರೂ ಸಹ ಮದ್ರಾಸಿನಲ್ಲಿರುವ ದರದ ಅರ್ಧವೇ ಆಗುತ್ತದೆಂದೂ ಹೇಳಿದರು. ನಂತರ ಸೂಚಕರು ಉತ್ತರವಿತ್ತರು. ಓಟಿಗೆ ಹಾಕಲಾಗಿ 5 ಜನರು ಪರವಾಗಿಯೂ, 4 ಜನರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

6 XXVI ವಿದ್ಯಾ ಖರ್ಚಿನಲ್ಲಿ ಒಂದು ರೂಪಾಯಿ ಕಮ್ಮಿ ಮಾಡಬೇಕು. ಎಂಬ ಠರಾವನ್ನು ಶ್ರೀ. ಯಂ. ಯಂ. ಬೆಳ್ಯಪ್ಪನವರು ಸೂಚಿಸಿ ಪ್ರೈಮರಿ ಶಾಲೆಗಳಲ್ಲಿ ಸ್ಕೂಲ್ ಫೀ ಮಾಫಿ ಬಿಡಬೇಕೆಂದು ಹೇಳಿದರು. ವಿದ್ಯಾ ಇಲಾಖಾ ಮೆಂಬರರು ಪ್ರೈಮರಿ ಶಾಲೆಗಳಲ್ಲಿ ಫೀಜು ಮಾಫಿ ಇದೆಯೆಂದು ತಿಳುವಳಿಕೆ ಕೊಟ್ಟ ಮೇರೆ ಠರಾವು ವಾಪಸು ತೆಗೆಯಲ್ಪಟ್ಟಿತು.

7. 42. ಕೋ-ಆಪರೇಷನ್ ಖರ್ಚಿನಲ್ಲಿ ಒಂದು ರೂ. ಕಡಿಮೆ ಮಾಡಬೇಕೆಂಬ ಠರಾವನ್ನು ಶ್ರೀ. ಯಂ.ಯಂ. ಬೆಳ್ಯಪ್ಪನವರು ಸೂಚಿಸಿ ಕೊಡಗಿನಲ್ಲಿ ಕ್ರಾಪ್ ಲೋನ್ ಸೇಲ್ ಸಂಘಗಳೂ, ಪ್ರಾಥಮಿಕ ಸಂಘಗಳೂ ಜಯಪ್ರದವಾಗಿರುವದಿಲ್ಲ. ಬರೀ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವದರಿಂದ ಸಹಕಾರ ಸಂಘಗಳ ಪ್ರಯೋಜನವು ಲಭಿಸಿದಂತಾಗಲಿಲ್ಲ. ಆದ್ದರಿಂದಲೇ ಉದ್ಯೋಗಿಗಳಲ್ಲದವರ ಬಹುಮತವಿರುವ ಒಂದು ಕಮಿಟಿ ನೇಮಕ ಮಾಡಿ ಅದು ಸಂಘಗಳ ಕೆಲಸ ಕಾರ್ಯಗಳ ವಿಚಾರ ಪರಿಶೀಲಿಸಿ ರಿಪೋರ್ಟು ಮಾಡಬೇಕೆಂದು ಹೇಳಿದರು.

ಫೈನಾನ್ಸು ಮೆಂಬರರು ಇದನ್ನು ವಿರೋಧಿಸಿ ಕೋ-ಆಪರೇಟಿವ್ ಸಂಘಗಳ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾಗಿದೆ. ಸಂಘಗಳ ಸ್ಥಿತಿಯು ಚಿಂತಾಜನಕವಾಗಿಲ್ಲವೆಂದು ಹೇಳಿದರು. ಶ್ರೀ. ಬೆಳ್ಯಪ್ಪನವರು ಜವಾಬಿತ್ತರು. ನಂತರ ಓಟಿಗೆ ಹಾಕಲಾಗಿ 5 ಪರವಾಗಿಯೂ 4 ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

8. ಶ್ರೀ. ಅಬ್ದುಲ್ ರಹಮಾನ್ ಖಾನರವರು ಹಿಂದುಳಿದ ಪಂಗಡದವರ ವಿದ್ಯಾಭಿವೃದ್ಧಿಗಾಗಿ ಕಮ್ಮಿ ಪಕ್ಷ ಅವರಿಗೆ ಕೊಡುತ್ತಿರುವ ಗ್ರಾಂಟನ್ನು ರೂ 3000 ಕ್ಕಾದರೂ ಏರಿಸಬೇಕೆಂಬ ಬಗ್ಗೆ ಒಂದು ಠರಾವನ್ನು ಮಂಡಿಸಿ, ಪ್ರೆಂಚ ಮೆಂಟಿನ ಭರದಲ್ಲಿ ಹಿಂದುಳಿದ ಪಂಗಡದವರ ವಿದ್ಯಾಭಿವೃದ್ಧಿಗಾಗಿ ಕೊಡುತ್ತಿದ್ದ ಗ್ರಾಂಟಿನಲ್ಲಿ ಮೊತ್ತ ಮಾಡಿರುವುದು ಪೂರಾ ವಿಷಾದಕರ ಸಂಗತಿಯೆಂದೂ ಹಿಂದುಳಿದ ಪಂಗಡದವರಿಗೆ ವಿಶಿಷ್ಟ ಪ್ರೋತ್ಸಾಹವಿತ್ತು ಅವರನ್ನು ಮೇಲೆಳೆಯುವದು ಸರ್ಕಾರದ ಅತ್ಯಗತ್ಯ ಕರ್ತವ್ಯವಾಗಿದೆ. ಕೊಡಗು ಸರ್ಕಾರವು ಈ ವಿಷಯದಲ್ಲಿ ಯಾವ ದಯೆಯನ್ನು ತೋರಿಸಿಲ್ಲವೆಂದೂ ಹೇಳಿದರು.

ವಿದ್ಯಾ ಇಲಾಖೆಯ ಮೆಂಬರರು—ಹಿಂದುಳಿದ ಪಂಗಡದವರಿಗೆ ಅನುಕೂಲ ಕಲ್ಪಿಸುವ ಈ ಯೋಜನೆಯಲ್ಲಿ ಕೊಡಗು ಸರಕಾರವು ಯಾವ ಸಹಕಾರಕ್ಕೂ ಹಿಂದಿಲ್ಲವೆಂದೂ, [illegible] ಯಲ್ಲಿ [illegible] ಮೊತ್ತ ಮಾಡುವ ಗತ್ಯಂತರವಿಲ್ಲವೆಂದೂ, ಸೂಚಕರು ಕೇಳಿದಂತೆ ಗ್ರಾಂಟನ್ನು ರೂ. 3000 ಕ್ಕೆ ಏರಿಸುವದು ಅಸಾಧ್ಯವೆಂದೂ ಹೇಳಿದರು

ಶ್ರೀ. [illegible]ಣ್ಣನವರು—ವಿದ್ಯಾ ಮೆಂಬರರ [illegible] ಸಮಂಜಸವಿಲ್ಲವೆಂದೂ ಇತರ ಪಂಗಡಗಳ ಅಭಿವೃದ್ಧಿಗೆ ತೋರಿಸುವಂತೆ ಹಿಂದುಳಿದ ಪಂಗಡದವರಿಗೆ ಸಹಾಯ ಮಾಡುವದು ಸರ್ಕಾರದ ಕರ್ತವ್ಯವೆಂದೂ ಹೇಳಿದರು. ಸೂಚಕರು ಜವಾಬಿತ್ತರು.

ವಿದ್ಯಾ ಮೆಂಬರರೂ ಉತ್ತರವಿತ್ತ ಮೇಲೆ ಓಟಿಗೆ ಹಾಕಲಾಗಿ 6 ಪರವಾಗಿಯೂ 4 ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

ಕಾಂಗ್ರೆಸ್ ಪಾರ್ಟಿಯವರು ಮೀಟಿಂಗಿನಲ್ಲಿ ಸಹಕರಿಸದೆ ಸಭಾ ತ್ಯಾಗ ಮಾಡಿದ್ದರಿಂದ ಅವರು ಕಳುಹಿಸಿದ 27 ಠರಾವುಗಳು ಚರ್ಚಿಸಲ್ಪಡಲಿಲ್ಲ.

ಮಸೂದೆಗಳು.

1. ಕೊಡಗಿನಲ್ಲಿ ಲೇವಾದೇವಿಯನ್ನು ಒಂದು ಸ್ಥಿಮಿತಕ್ಕೆ ತರಲು, ಅಂದರೆ ಸಾಲ ಕೊಡುವವನು ತನ್ನ ಲೆಕ್ಕಪತ್ರಗಳನ್ನು ಸರಿಯಾಗಿಡಬೇಕಲ್ಲದೆ ಅನ್ಯಾಯದ ದ್ವಿಗುಣ ಬಡ್ಡಿ ಮೊದಲಾದುವುಗಳನ್ನು ಹಾಕಿ ಬಡ ರೈತರನ್ನು ಪೀಡಿಸುವದನ್ನು ನಿಲ್ಲಿಸುವ ಮಸೂದೆ ಬಗ್ಗೆ ಸಿಲೆಕ್ಟ್ ಕಮಿಟಿಯವರ ರಿಪೋರ್ಟನ್ನು ಫೈನಾನ್ಸು ಮೆಂಬರರು ಮುಂದಿಟ್ಟರು. ರಿಪೋರ್ಟಿನ ಮೇಲೆ ಚರ್ಚೆ ನಡೆದು ಮಸೂದೆಯ ಧ್ಯೇಯವು ದೇಶದ ಕಲ್ಯಾಣವನ್ನು ಸಾಧಿಸುವದಾದ್ದರಿಂದ ವಿರೋಧವಿಲ್ಲದೆ ಪಾಸಾಯಿತು.

2. ಬಡ ವ್ಯವಸಾಯಗಾರರನ್ನು ಸಾಲದ ಹೊರೆಯಿಂದ ತಪ್ಪಿಸುವ ಬಗ್ಗೆ ಸಾಲ ನಿವಾರಣೆ ಬೋರ್ಡುಗಳನ್ನು ನಿರ್ಮಿಸ

(6 ನೇ ಪುಟ ನೋಡಿ)

...ಳಂತೆ 'ಜೇನು ಕುಯ್ಯುತ್ತೇನೆ; ಕತ್ತಿಯನ್ನು ಕೊಡು' ಎಂದು ಕೂಗಿದಳು. ಊರೂರಲ್ಲಿ ಓಡಾಡಿದಳು. ಕೆರೆಗಳಲ್ಲಿ ಈಜಾಡಿದಳು. ರಾತ್ರಿಯಾಯಿತು. ಶಾರದೆಯು ಕಾಣೆಯಾದಳು. ಮಳೆಯು ಜೋರಿಂದ ಸುರಿಯಿತು. ಶಾರದೆಯು ಇರವೇ ಇಲ್ಲ. ಸಿಡಿಲು ಗುಡುಗಾಯಿತು. ಇನ್ನೂ ಅವಳ ಸುಳಿವೇ ಇಲ್ಲ. 'ಕಮಲಾಕರನನ್ನು ಹುಡುಕುತಿರುವಳು' ಎಂದರು ಕೆಲವರು; ಕೆಲವರು, 'ದೇವರ ಮಾಯೆ' ಎಂದರು. 'ಸಾವಿತ್ರಿಯಂತೆ, ತನ್ನ ಪತಿಯ ಪ್ರಾಣವನ್ನೂ, ಮಗನ ಪ್ರಾಣವನ್ನೂ ಹಿಂದಕ್ಕೆ ತರಲು, ಯಮನೊಡನೆ ಶಾರದೆಯು ಆಕಾಶಕ್ಕೆ ನೆಗೆದಿರಬಹುದು' ಎಂದರು ಅಭಿಜ್ಞರು!

ಕೊಡಗು

ಮಾರ್ಚ್ ತಾರೀಕು ೨೪ ನೇ ಶುಕ್ರವಾರ ೧೯೩೯.

ತ್ರಿಪುರಿ ಕಾಂಗ್ರೆಸ್ ಮಹಾ ಸಭೆ.

ಕಳೆದ ವಾರ ಮಹಾಕೋಶಲದ ತ್ರಿಪುರಿ ಗ್ರಾಮದಲ್ಲಿ ನಡೆದ ರಾಷ್ಟ್ರೀಯ ಸಭೆಯ ೫೨ನೇ ಅಧಿವೇಶನವು ಹಿಂದಿನ ವರ್ಷಗಳಿಗಿಂತ ವಿಶೇಷವಾದದ್ದಾಗಿದೆ. ಈ ಮಹಾಸಭೆಯ ಅಧ್ಯಕ್ಷರ ಚುನಾವಣೆಯು ಕಳೆದ ನಂತರ ಕಾಂಗ್ರೆಸಿನೊಳಗುಂಟಾದ ಭಿನ್ನಾಭಿಪ್ರಾಯಗಳನ್ನು ಕುರಿತು ಈ ಮೊದಲು ಬರೆಯಲಾಗಿತ್ತು. ಶ್ರೀಯುತ ಸುಭಾಷ್ ಚಂದ್ರಬೋಸರವರು ಮಹಾತ್ಮ ಗಾಂಧಿಯವರ ಇಚ್ಛೆಗೆ ವಿರುದ್ಧವಾಗಿ ನಿಂತು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದರಿಂದಲೂ, ಆ ಸಂದರ್ಭದಲ್ಲಿ ಮಹಾತ್ಮರ ಸಲಹೆಗಳನ್ನನುಸರಿಸಿಯೇ ಕಾಂಗ್ರೆಸ್ಸಿನ ಕಾರ್ಯಕಲಾಪಗಳನ್ನು ನಡೆಸುತ್ತಿದ್ದ ವರ್ಕಿಂಗ್ ಕಮಿಟಿಯ ಹದಿಮೂರು ಸದಸ್ಯರುಗಳು ತಮ್ಮ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟದ್ದರಿಂದಲೂ, ಸುಭಾಷರ ಜಯದಿಂದ ಕಾಂಗ್ರೆಸ್ಸಿನಲ್ಲಿ ಮಹಾತ್ಮರ ತತ್ವಗಳಿಗೆ ಅಪಜಯವಾಯಿತೆಂದು ಗಾಂಧಿಜಿಯವರು ಪ್ರಕಟಿಸಿದ್ದರಿಂದಲೂ ಈ ಸಾರಿಯ ಕಾಂಗ್ರೆಸ್ಸಿನ ತೀರ್ಮಾನಗಳು ಹೇಗಾಗುವವೆಂದು ಎಲ್ಲರೂ ಬಹು ಕುತೂಹಲದಿಂದ ಎದುರು ನೋಡುತ್ತಿದ್ದರು. ಕಾಂಗ್ರೆಸ್ಸಿನ ಎಡಪಕ್ಷದವರು ಸುಭಾಷರ ಪರವಾಗಿಯೂ, ಬಲಪಕ್ಷದವರು ಮಹಾತ್ಮರ ತತ್ವಗಳ ಪರವಾಗಿಯೂ ಕಾಂಗ್ರೆಸ್ಸಿನ ಪ್ರತಿನಿಧಿಗಳ ಒತ್ತಾಸೆಯನ್ನು ಪಡೆಯಲು ಯತ್ನಿಸುತ್ತಿದ್ದರು. ಇದಕ್ಕಾಗಿ ಕಾಂಗ್ರೆಸಿನೊಳಗಿನ ಅಭಿಪ್ರಾಯ ಭೇದಗಳು ತೀವ್ರ ರೂಪವನ್ನು ತಾಳುತ್ತಿದ್ದವು. ಇದರಿಂದ ಕಾಂಗ್ರೆಸ್ಸಿನ ಒಗ್ಗಟ್ಟು ಮುರಿದು ಅದರ ಶಕ್ತಿಯು ಕುಂದುವದೆಂದು ಕಾಂಗ್ರೆಸ್ಸಿನ ಶತ್ರುಗಳು ನಿರೀಕ್ಷಿಸುತ್ತಿದ್ದರು. ಇದನ್ನು ನಿವಾರಿಸಲು ಎರಡು ಪಕ್ಷದವರೂ ಕುತೂಹಲರಾಗಿದ್ದರು.

ಆದರೆ ಸುಭಾಷ್ ಬೋಸರ ಎಡಪಕ್ಷದವರಿಗೆ ಜಯವುಂಟಾದರೆ ಮಹಾತ್ಮರ ಅಹಿಂಸಾ ಮತ್ತು ಸತ್ಯ—ಇವೆರಡು ತತ್ವಗಳಿಗೆ ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಎಡೆ ಸಿಕ್ಕಲಿಕ್ಕಿಲ್ಲವೆಂಬ ಭೀತಿಯು ಬಲಪಕ್ಷದವರನ್ನಿಸಿಕೊಳ್ಳುವ ಕಾಂಗ್ರೆಸ್ಸಿನ ಅನುಭವಿ ಹಳಬ ಮುಂದಾಳುಗಳಿಗೆ ಹುಟ್ಟಿತ್ತು. ಆದುದರಿಂದ ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮರ ಮುಂದಾಳುತನವನ್ನಿಟ್ಟುಕೊಂಡು ಕಾಂಗ್ರೆಸ್ಸಿನ ಒಗ್ಗಟ್ಟನ್ನು ಕಾಪಾಡುವಂಥ ಠರಾವನ್ನು ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿಯವರಾದ ಪಂಡಿತ ವಲ್ಲಭ ಪಂತರವರು ಕಾಂಗ್ರೆಸ್ಸಿನ ವಿಷಯನಿಯಾಮಕ ಸಮಿತಿಯ ಮುಂದಿಟ್ಟರು. ನಂತರ ಮಹಾ ಸಭೆಯ ಮುಂದೂ ಬಂತು. ಇವೆರಡು ಸಭೆಗಳಲ್ಲಿಯೂ ಇದನ್ನು ಕುರಿತು ಬಹು ದೀರ್ಘ ಚರ್ಚೆ ನಡೆಯಿತು. ಎರಡು ಕಡೆಯವರಿಗೂ ಜಯವಾಗುವ ಆಶೆಯು ಇತ್ತು. ಆದರೆ ಇವೆರಡು ಸ್ಥಳಗಳಲ್ಲೂ ಮಹಾತ್ಮರ ಮುಂದಾಳುತನವನ್ನು ಒಪ್ಪಿಕೊಳ್ಳುವ ಈ ಠರಾವು ಬಹು ದೊಡ್ಡ ಬಹುಮತದಿಂದ ಮಂಜೂರಾಯಿತು. ಇದಕ್ಕೆ ವಿಷಯನಿಯಾಮಕ ಸಮಿತಿಗಿಂತಲೂ ಮಹಾ ಸಭೆಯಲ್ಲಿ ಹೆಚ್ಚಿನ ಬೆಂಬಲ ದೊರೆಯಿತು.

ಈ ತೀರ್ಮಾನದಿಂದ ಮಹಾತ್ಮರ ತತ್ವಗಳಿಗೆ ಜಯವಾಯಿತೆಂಬುದರಲ್ಲಿ ಸಂಶಯವಿಲ್ಲ. ಕಾಂಗ್ರೆಸ್ಸಿಗೆ ಹಾಗೂ ಹಿಂದೂ ದೇಶಕ್ಕೆ ಪ್ರಪಂಚದಲ್ಲಿ ಇಂದಿನ ಪ್ರಾಮುಖ್ಯತೆಯ ಸ್ಥಳ ದೊರಕಿಸಿದ್ದು ಮಹಾತ್ಮರು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಇನ್ನಾದರೂ ಭಾರತ ಭೂಮಿಯ ಸ್ವಾತಂತ್ರ್ಯ ಹೋರಾಟವನ್ನು ಜಯಪ್ರದವಾಗಿ ನಡಿಸಲು ಶಕ್ತರಾದ ಏಕಮಾತ್ರ ಮುಂದಾಳೆಂದರೆ ಅವರು ಗಾಂಧಿಜಿಯವರೇ. ಈ ವಿಚಾರವನ್ನು ಕಾಂಗ್ರೆಸು ಮಹಾ ಸಭೆಯವರು ಪುನಹ ಒಪ್ಪಿಕೊಂಡು ಪ್ರಪಂಚದ ತಿಳುವಳಿಕೆಗಾಗಿ ಬಹಿರಂಗಪಡಿಸಿದ್ದು ಹಿಂದೂಸ್ಥಾನದ ಸುಯೋಗವೆಂದೇ ಅನ್ನಬೇಕಾಗಿದೆ. ಇನ್ನು ರಾಷ್ಟ್ರಪತಿಗಳು ಹಿಂದೀಯರ ಸ್ವಾತಂತ್ರ್ಯ ಹೋರಾಟವನ್ನು ಜಯಪ್ರದವಾಗಿ ನಡಿಸುವಂತೆ ಮಹಾತ್ಮರು ಅವರಿಗೆ ಸಕಲ ಸಹಾಯವನ್ನು ಮಾಡದೆ ಇರಲಾರರು.

ಈ ತೀರ್ಮಾನದಿಂದ ರಾಷ್ಟ್ರಪತಿಗಳ ಮೇಲೆ ಕಾಂಗ್ರೆಸು ಸಭೆಗೆ ವಿಶ್ವಾಸವಿಲ್ಲವೆಂದು ಸೂಚಿಸಿದಂತಾಗಿದೆಯೆಂದು ಕೆಲವರು ಹೇಳಬಹುದು. ಇದು ನಿಜವಲ್ಲ. ಸುಭಾಷ್ ಬೋಸರು ರಾಷ್ಟ್ರಪತಿಗಳಾಗಿ ಇದ್ದುಕೊಂಡು ಮಹಾತ್ಮರ ಸಲಹೆಗಳನ್ನನುಸರಿಸಿ ಹೋರಾಟವನ್ನು ನಡೆಸಬೇಕೆಂಬುದೇ ಮೇಲಿನ ತೀರ್ಮಾನದ ಉದ್ದೇಶ. ಇದರಿಂದ ಸುಭಾಷ್ ಬೋಸರು ಬೇಸರಪಡಲು ಕಾರಣವಿಲ್ಲ. ಮಹಾತ್ಮರು ಕಾಂಗ್ರೆಸ್ ಸಂಸ್ಥೆಯು ಸತ್ಯ ಮತ್ತು ಅಹಿಂಸಾ ತತ್ವಗಳನ್ನನುಸರಿಸಿಯೇ ನಡೆಯುವಂತೆ ಮಾಡಿದಂದಿನಿಂದ ನಿಜಕ್ಕೂ ಅವರೇ ಏಕ ಮಾತ್ರ ಮುಂದಾಳಾಗಿದ್ದಾರೆ. ಈ ತೀರ್ಮಾನದಿಂದ ಹಾಗೆಯೇ ಮುಂದಕ್ಕೂ ನಡೆಯಬೇಕೆಂದು ನಿಶ್ಚಯಿಸಿದ್ದಾಗಿದೆ. ಇದರಿಂದ ಯಾರಿಗೂ ಏನೊಂದೂ ಅಪಮಾನಕ್ಕೆ ಕಾರಣವಿಲ್ಲ. ತನ್ನ ತತ್ವಗಳ ಮೇಲೆ ದೇಶದವರಿಗೆ ವಿಶ್ವಾಸ ಕಡಿಮೆಯಾಗುತ್ತಿದೆಯೆಂದು ಮಹಾತ್ಮರಿಗೆ ಉಂಟಾಗಿದ್ದ ಸಂಶಯವನ್ನು ಈ ಠರಾವು ಹೋಗಲಾಡಿಸಿದೆ.

ಕಠಿಣವಾದ ಕಾಯಿಲೆಯ ದೆಸೆಯಿಂದ ರಾಷ್ಟ್ರಪತಿಗಳಿಗೆ ಮಹಾ ಸಭೆಯಲ್ಲಿ ಹಾಜರಿರಲು ಸಾಧ್ಯವಾಗದೆ ಹೋದರೂ ಮಹಾ ಸಭೆಯ ತೀರ್ಮಾನವನ್ನನುಸರಿಸಿ ನಡೆಯಲು ತಯಾರಿರುವೆನೆಂದು ಅವರು ಇತ್ತಲಾಗಿ ಸೂಚಿಸಿದ್ದು ಸಂತೋಷದ ವಿಷಯವಾಗಿದೆ. ಕಾಂಗ್ರೆಸಿನೊಳಗೆ ಎಲ್ಲಿ ಒಡಕು ಬಂದುಬಿಡುವದೋ ಎಂಬ ಭೀತಿಯಿಂದ ಪ್ರಾರಂಭವಾದ ತ್ರಿಪುರಿ ಅಧಿವೇಶನವು ಒಗ್ಗಟ್ಟಿಂದ ಅಂತ್ಯಗೊಂಡದ್ದು ಹಿಂದೂ ದೇಶದ ಭಾಗ್ಯವಾಗಿದೆ. ಇದರಿಂದ ಕಾಂಗ್ರೆಸಿನ ಒಗ್ಗಟ್ಟೂ, ಶಕ್ತಿಯೂ ಮತ್ತಷ್ಟು ಹೆಚ್ಚಿ, ದೇಶದ ಹೋರಾಟವು ಇನ್ನಷ್ಟು ಹುರುಪಿನಿಂದ ನಡೆಯುವದೆಂದೂ, ರಾಷ್ಟ್ರಪತಿಗಳು ತಮ್ಮ ಅಸ್ವಸ್ಥತೆಯಿಂದ ಶೀಘ್ರವಾಗಿ ಗುಣಹೊಂದಿ ಮುಂದಿನ ಕಾರ್ಯವನ್ನು ಕೈಕೊಳ್ಳಲು ಸಿದ್ಧರಾಗುವರೆಂದೂ ನಮ್ಮ ಭರವಸೆಯಾಗಿದೆ.

ಮಧ್ಯಯೂರೋಪದಲ್ಲಿ ಹಿಟ್ಲರನ ಧಾಳಿ.

—o0o—

ಝೆಕೊಸ್ಲೋವಾಕಿಯಾದ ಸಮಾಧಿ.

ಮಧ್ಯಯೂರೋಪದಲ್ಲಿ ಹಿಟ್ಲರನ ಹಾವಳಿಯು ಒಮ್ಮಿಂದೊಮ್ಮೆ ಭೂಕಂಪದ ಸ್ಫೋಟನದಂತೆ ಹೊರಬೀಳುತ್ತಿದೆ. ಮೊದಲೊಮ್ಮೆ ಝೆಕೊಸ್ಲೊವಾಕಿಯಾದ ಮೇಲೆ ತನ್ನ ಕೈವಾಡವನ್ನು ನಡೆಸಿ ಯಾವ ರಕ್ತಪಾತವಿಲ್ಲದೇ ಝೆಕೊಸ್ಲೋವಾಕಿಯಾದ ಅರ್ಧ ಜೀವವನ್ನು ಹೀರಿದ್ದನು. ಇಂದು ಪುನಹ ಒಮ್ಮೆ ಆರ್ಭಟಿಸಿ ಝೆಕೊಸ್ಲೊವಾಕಿಯಾ ರಾಷ್ಟ್ರವನ್ನೇ ತನ್ನ ಗಂಟಲ ಕೆಳಗೆ ಇಳಿಸಿಬಿಟ್ಟಿರುವನು. ಇದರಿಂದಾಗಿ ಕಳೆದ ಮ್ಯೂನಿಕ್ ಒಪ್ಪಂದಕ್ಕೆ ಸೊನ್ನೆ ಬಿದ್ದಿತು. ಝೆಕೊಸ್ಲೊವಾಕಿಯಾ ಪ್ರಜಾಪ್ರಭುತ್ವವು ನಾಶಮಾಡಲ್ಪಟ್ಟಿತು. ಇದರಿಂದ ಪ್ರಜಾಪ್ರಭುತ್ವ ರಾಜ್ಯಗಳೆಂದೂ, ಝೆಕೊಸ್ಲೊವಾಕಿಯಾದ ಹಿತಚಿಂತಕರೆಂದೂ ಸಾರಿದ ಬ್ರಿಟನ್ ಮತ್ತು ಫ್ರಾನ್ಸಿನ ಮುಖಕ್ಕೆ ಕಪ್ಪು ಬಳಿದಂತಾಯಿತು. ಹಿಟ್ಲರನ ಇಂದಿನ ರಾಜ್ಯಾಕ್ರಮಣವು ಜಗತ್ತಿನಲ್ಲಿ ಒಂದು ಹೊಸ ರೀತಿಯದ್ದಾಗಿದೆ. ಜಪಾನಾಗಲೀ, ಅಥವಾ ಮುಸಲೋನಿಯಾಗಲೀ ಘೋರ ಸಂಗ್ರಾಮವನ್ನು ಹೂಡಿ ಅನೇಕ ಜನರ ಪ್ರಾಣ ಬಲಿಯನ್ನು ಕೊಟ್ಟು ರಕ್ತ ಕಾಲುವೆಯನ್ನು ಹರಿಸಿದರೂ ಸಹ ಏನೊಂದೂ ಲಾಭ ಪಡೆಯದೆ ತತ್ತರಿಸುತ್ತಿರುವಾಗ ಬರೇ ಹದಿನೆಂಟು ತಿಂಗಳುಗಳ ಅವಧಿಯಲ್ಲಿ ಯಾವುದೊಂದೂ ತೊಂದರೆಯನ್ನೂ ಪಟ್ಟುಕೊಳ್ಳದೆ ಬರೇ ಬಾಯಿ ಬೆದರಿಕೆಯಿಂದ ಆಸ್ಟ್ರೀಯವನ್ನು ನುಂಗಿ, ನಂತರ ಝೆಕೊಸ್ಲೊವಾಕಿಯಾವನ್ನು ಅಪ್ಪಳಿಸಿ, ಈಗ ಉಕ್ರೈನ್ ಪ್ರಾಂತವನ್ನು ಕಬಳಿಸಲು ಪ್ರಯತ್ನ ಮಾಡುವ ಹಿಟ್ಲರನ ಈ ಯೋಜನೆಯು ಜಗತ್ತನ್ನೇ ಬೆರಗುಗೊಳಿಸಿದೆ. ಹೀಗೆ ದಿನೇ ದಿನೇ ಪ್ರಬಲವಾಗುತ್ತಿರುವ ಹಿಟ್ಲರನ ವರ್ತನೆಯು ಹಿಂದೊಮ್ಮೆ ಮಹಾ ಯೋಧನಾಗಿ ಮೆರೆದ ನೆಪೋಲಿಯನನನ್ನು ಜ್ಞಾಪಕಕ್ಕೆ ತರುತ್ತಿದೆ. ಹಿಟ್ಲರನಿಗೆ ಈಗ ಯೂರೋಪಿನ ಇತರ ರಾಷ್ಟ್ರೀಯಗಳ ತಾಟಸ್ಥ್ಯಭಾವವು ಹುರುಪನ್ನು ಕೊಟ್ಟಿದೆ. ಬ್ರಿಟನ್ ಫ್ರಾನ್ಸುಗಳಂಥಾ ಪ್ರಬಲ ರಾಷ್ಟ್ರಗಳು ನಮಗೆ ಸಂಬಂಧಪಡದ ಚಿಕ್ಕ ರಾಷ್ಟ್ರಗಳ ಆಹುತಿಯಾದರೆ ತಮಗೇನು ಎಂಬಂತೆ ತಾಟಸ್ಥ್ಯಭಾವವನ್ನು ವಹಿಸಿರುವದು ತಮ್ಮ ಮುಂದಿನ ಪ್ರಗತಿಗೆ ತಾವೇ ಧಕ್ಕೆ ತಂದುಕೊಂಡಂತೆ. ಬ್ರಿಟನರು ಬರೇ ಬಾಯಿಯಲ್ಲಿ ಬಡಬಡಿಸಿ ದೂರ ಸರಿಯುತ್ತಿರುವ ತಮ್ಮ ದ್ರೋಹಿತ್ವವನ್ನು ಬಿಡಬೇಕು. ಜರ್ಮನಿಯನ್ನು ಇನ್ನೂ ಸ್ನೇಹಭಾವದಿಂದ ನೋಡುತ್ತಿರುವ ಧೋರಣೆಯು ಬದಲಾಗಬೇಕು, ನಾಝಿ ರಾಕ್ಷಸನನ್ನು ಬಲವಾಗಿ ಎದುರಿಸುವ ಮುತ್ಸದ್ದಿತನವನ್ನು ವಹಿಸಬೇಕು. ಯೂರೋಪಿನಲ್ಲಿ ತನ್ನ ಒಡೆತನವನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯಿಂದ ಮುಂದರಿಯುತ್ತಿರುವ ಹಿಟ್ಲರನ ಮುಂದೆ ತಮ್ಮ ಬುಡುಬುಡುಕೆಯ ಶಾಂತಿವಾದವನ್ನು ಕಿತ್ತೊಗೆಯಬೇಕು. ಇಂದಿನ ಹಿಟ್ಲರನ ಪ್ರಾಬಲ್ಯಕ್ಕೆ ಇಂಗ್ಲಂಡು, ಫ್ರಾನ್ಸದ ಅಂಜುಬುರುಕುತನವೇ ಕಾರಣವೆಂದು ಮನಗಾಣಬೇಕು. ಹೀಗೆ ಜರ್ಮನಿಯನ್ನು ಮುಂದರಿಯಲು ಬಿಟ್ಟರೆ ತಮ್ಮ ಅಧಃಪತನವು ಸಮೀಪಿಸಿತೆಂದು ಈ ಸಾಧು ರಾಷ್ಟ್ರಗಳು ಭಾವಿಸಬೇಕು.

ಕೌನ್ಸಿಲು ಬಡ್ಜೆಟ್ ಮೀಟಿಂಗು.

(೫ನೇ ಪುಟದಿಂದ ಸಾಗಿದ್ದು.)

ಲು ತಕ್ಕ ಅನುಮಾಡುವ ಬಗ್ಗೆ ಒಂದು ಮಸೂದೆಯು ಫೈನಾನ್ಸು ಮೆಂಬರರಿಂದ ಸೂಚಿಸಲ್ಪಟ್ಟಿತು. ಇದು ಅಂಗೀಕೃತವಾದ್ದರಿಂದ ಅದನ್ನು ಶ್ರೀ. ಗಳಾದ ಐ. ಪಿ. ಕಾರ್ಯಪ್ಪ, ಬಿ. ಯಂ. ಕಾರ್ಯಪ್ಪ, ಎನ್. ಸೋಮಣ್ಣ, ಕೆ. ಮಲ್ಲಪ್ಪ, ಯಂ. ಯಂ. ಬೆಳ್ಯಪ್ಪ, ಅಬ್ದುಲ್ ರಹಮಾನ್ ಖಾನ್ ಐವರ್ ಬುಲ್, ಫೈನಾನ್ಸು ಮೆಂಬರು ಮತ್ತು ಪಿ. ಐ ಬೆಳ್ಯಪ್ಪನವರಿಂದ ಕೂಡಿದ ಒಂದು ಸಿಲೆಕ್ಟ್ ಕಮಿಟಿಗೆ ವಹಿಸಲಾಯಿತು.

೩. ಕೊಡಗು ಪ್ರಾಂತದಲ್ಲಿ ಹೊಗೆಸೊಪ್ಪನ್ನು ಯಾವ ವಿಧದಲ್ಲಾದರೂ ಮಾರಲು ಲೈಸೆನ್ಸ್ ಬೇಕೆಂಬ ಬಗ್ಗೆ ಒಂದು ಮಸೂದೆಯನ್ನು ಫೈನಾನ್ಸು ಮೆಂಬರರು ಮಂಡಿಸಿದರು. ಮಸೂದೆಯು ಅಂಗೀಕೃತವಾದ್ದರಿಂದ ಇದನ್ನು ಶ್ರೀ. ಗಳಾದ ಕೆ. ಸಿ. ಕರುಂಬಯ್ಯ, ಯಂ. ಯಂ. ಬೆಳ್ಯಪ್ಪ, ಪಿ. ಐ. ಬೆಳ್ಯಪ್ಪ, ಎನ್. ಸೋಮಣ್ಣ, ಎಸ್. ಎಸ್. ರಾಮಮೂರ್ತಿ ಕರ್ನಲ್ ಮೂರ್ಲೆಂಡರು ಮತ್ತು ಫೈನಾನ್ಸ್ ಮೆಂಬರರಿಂದ ಕೂಡಿದ ಒಂದು ಸಿಲೆಕ್ಟ್ ಕಮಿಟಿಗೆ ವಹಿಸಲಾಯಿತು.

ವರ್ತಮಾನ ಸಂಗ್ರಹ.

ಒಳದೇಶ.

ತಾರೀಕು 23 ರಲ್ಲಿ ಕೊಡಗಿನ ಕೆಲವು ಭಾಗಗಳಲ್ಲಿ ಚೆನ್ನಾಗಿ ಮಳೆ ಬಿದ್ದಿದೆಯಾಗಿ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ 110 ಪ ಲಕ್ಕಿ ಮಣಕ್ಕೆ ರೂ. 25 ಕ್ರಯವಿರುತ್ತದೆ.

ತಾರೀಕು 21 ನೇ ಮಂಗಳವಾರ ತ್ರಿಪುರಿ ಕಾಂಗ್ರೆಸ್ ಮಹಾಧಿವೇಶನಕ್ಕೆ ಹೋಗಿದ್ದ ಶ್ರೀ ಕಂಬ್ಯಂಡ ಬೆಳ್ಯಪ್ಪನವರು ಮಡಿಕೇರಿ ಮಮಿಾನ್ಸ್ದರರ ಸಂಘದ ಹಾಲ್ ಸಭೆಯಲ್ಲಿ, ನಾಪೋಕ್ಲಿನಲ್ಲಿ ತಾ. 19 ರಲ್ಲೂ ತ್ರಿಪುರಿ ಕಾಂಗ್ರೆಸ್ ಅಧಿವೇಶನದ ವಿಚಾರ ಭಾಷಣ ಕೊಟ್ಟರು.

ನಾಪೋಕ್ಲು.

ತಾರೀಕು 20-3-39 ರಲ್ಲಿ ಕಕ್ಕಬೆಯ ಸುತ್ತುಮುತ್ತಲಿನ ಜನರು ದಿ. ಬ. ಕೆ. ಚಂಗಪ್ಪನವರ ಅಧ್ಯಕತೆಯಲ್ಲಿ ಸಭೆ ಸೇರಿ ಅಲ್ಲಿ ಒಂದು ಯೂಲಕ್ಕಿ ದಾಸ್ತಾನು ಮತ್ತು ಮಾರಾಟ ಮಾಡುವ ಸಹಕಾರಿ ಸಂಘವನ್ನು ಒಡನೇ ತೆರೆಯುವಂತೆ ತೀರ್ಮಾನಿಸಿರುವರು. ಇಂಥಾ ಏರ್ಪಾಡು ಭಾಗಮಂಡ್ಲದಲ್ಲೂ ನಡೆಯುತ್ತಿರುವದಾಗಿ ತಿಳಿಯುತ್ತೇವೆ.

ವೀರಾಜಪೇಟೆ.

ತಾರೀಕು 22 ರಲ್ಲಿ ಇಲ್ಲಿ ಒಂದು ಸಾರ್ವಜನಿಕ ಸಭೆ ನೆರೆಯಿಸಿ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಹೊರಬಂದ ವಿಚಾರದಲ್ಲಿ ಕೌನ್ಸಿಲ್ ಮೆಂಬರಾದ ಶ್ರೀ ಐಚಂಡ ಪಿ. ಕಾರ್ಯಪ್ಪನವರೂ, ತ್ರಿಪುರಿ ಅಧಿವೇಶನದ ವಿಚಾರದಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರೂ ಭಾಷಣಗಳನ್ನಿತ್ತರು.

ಗಜೆಟ್.

ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯು 1939 ಜುಲೈಯಲ್ಲಿ ಇಂಗ್ಲೆಂಡಿನಲ್ಲಿ ನಡೆಯುವದೆಂದೂ, ಅದಕ್ಕೆ ಕೂತಲು ಇಚ್ಛಿಸುವವರು 11 ನೇ ಏಪ್ರಿಲ್ ದೊಳಗೆ ಸಿವಿಲ್ ಸರ್ವಿಸ್ ಕಮಿಷನಿನ ಸೆಕ್ರೆಟರಿಯವರಿಗೆ ತಲಪುವಂತೆ ಅರ್ಜಿ ಬರಕೊಳ್ಳಬೇಕೆಂದೂ ಹೆಚ್ಚಿನ ವಿವರ ಕೊಡಗು ಕಮಿಷನರಿಂದ ತಿಳಕೊಳ್ಳಬಹುದೆಂದೂ ಪ್ರಕಟವಾಗಿದೆ.

ಹಿಂದೂದೇಶ.

ಮದ್ರಾಸ್ ಸರ್ಕಾರವು ಎಲಿಮೆಂಟರಿ ಶಾಲಾ ಕಟ್ಟಡಗಳಿಗಾಗಿ ಮದ್ರಾಸ್ ಕೋರ್ಪರೇಶನಿಗೆ 2 ಲಕ್ಷ ರೂಪಾಯಿಗಳ ಸಾಲ ಕೊಟ್ಟಿದೆ.

ಜಯಪುರದಲ್ಲಿ ಸೆರೆಮನೆವಾಸಿಯಾಗಿರುವ ಶ್ರೀ ಜಮ್ನಾಲಾಲ ಬಜಾಜರನ್ನು ಒಡನೇ ಬಿಡುಗಡೆ ಮಾಡುವ ಏರ್ಪಾಡು ಗಳಾಗುತ್ತಿರುವದೆಂದು ತಿಳಿದು ಬಂದಿದೆ.

ಪೂಜ್ಯ ಗಾಂಧಿಜೀಯವರ ಪ್ರೇರಣೆಯಂತೆ ಜಯಪುರ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆ. **ನನ್ನ ಮುಂದಿನ ಆಜ್ಞಾಪ್ಯಾಯ** ವನ್ನರಿಯದೆ ಸತ್ಯಾಗ್ರಹ ಪ್ರಾರಂಭಿಸಕೂಡದೆಂದೂ ಅವರು ಅಪ್ಪಣೆ ಮಾಡಿರುವರು.

ರಾಷ್ಟ್ರಪತಿ ಸುಭಾಷ ಬಾಬುಗಳ ಆರೋಗ್ಯವು ಇನ್ನೂ ಸುಧಾರಿಸಿರುವದಿಲ್ಲ. ಅವರಿಗೆ ತಾರೀಕು 22 ರಲ್ಲಿ 100.5 ಡಿಗ್ರಿ ಜ್ವರ ಇತ್ತು. ಅವರ ರಕ್ತ ಒತ್ತಾಟವು ಇನ್ನೂ ತೀವ್ರವಾಗಿಯೇ ಇದೆ. ಕೆಮ್ಮಲು ಮೊದಲಿಗಿಂತ ಈಗ ಕಮ್ಮಿಯಾಗಿರುವದು.

ಮುಂಬಾಯಿ ಸರ್ಕಾರವು ಸಾರ್ಜಂಟ್ ಮತ್ತು ಸಬ್‌ಇನ್ಸ್‌ಪೆಕ್ಟರ್ ವರ್ಗದವರನ್ನು ಒಂದೇ ವರ್ಗವಾಗಿ ಪರಿಗಣಿಸಿದೆ. ಅಲ್ಲದೆ ಅಲ್ಲಿನ ಆಂಗ್ಲೋ ಇಂಡಿಯನರು ತಮ್ಮನ್ನು ಭಾರತೀಯರೆಂದೇ ಪರಿಗಣಿಸಬೇಕೆಂದು ಸರ್ಕಾರವನ್ನು ಕೇಳಿದ್ದಾರೆ.

ಬರುವ ಅಖಿಲಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗನ್ನು ಅಲ್ಲಹಾಬಾದಿನಲ್ಲಿ ನಡೆಸಬೇಕೆಂದು ಅಲ್ಲಿಯ ನಗರ ಕಾಂಗ್ರೆಸಿನವರು ಅಹ್ವಾನಿಸಿರುವರು. ಮೌಲಾನ ಅಬ್ದುಲ್ ಕಲಾಂ ಆಝಾದರು ಕಾಯಿಲಸ್ಥರಾಗಿ ಅಲ್ಲಿರುವದರಿಂದ ಪ್ರಾಯಶಃ ಅಲ್ಲಹಾಬಾದಿನಲ್ಲೇ ಮೀಟಿಂಗು ನಡೆದೀತು.

ರಾಜಕೀಯ ಕೈದಿಗಳನ್ನು ಊಟವೇ ಮುಂತಾದ ವಿಚಾರಗಳಲ್ಲಿ ಉತ್ತಮ ರೀತಿಯಿಂದ ನಡೆಸಿಕೊಂಡು ಬರಬೇಕು ಮತ್ತು ಅಕೃತ್ಯ ಹಾಗೂ ಅತ್ಯಾಚಾರದ ಕ್ರಿಮಿನಲ್ ತಕ್ಸೀರು ಮಾಡಿದ ವಕೀಲರುಗಳ ಸನ್ನದು ರದ್ದು ಮಾಡಬೇಕು ಎಂಬ ಎರಡು ಬಿಲ್ಲುಗಳು ಮಧ್ಯಪ್ರಾಂತ ಅಸೆಂಬ್ಲಿಯಲ್ಲಿ ಪಾಸಾದವು.

ತ್ರಿಪುರಿ ಕಾಂಗ್ರೆಸಿನ ಸ್ವಯಂ ಸೇವಕರಾಗಿದ್ದ ಶ್ರೀ ವಿ. ವಿ. ಸಂಗೋಲ್ ಎಂಬವರೂ ಮತ್ತು ಜಮ್ಮೂ ನಗರದಿಂದ ಪ್ರತಿನಿಧಿಗಳಾಗಿ ಬಂದಿದ್ದ ಶ್ರೀ ಹಿರ್‌ಜೀಬಾಯಿ ಆಸ್‌ವಾಲ್ ಎಂಬವರೂ ಜಬ್ಬಲ್ಪುರ ಆಸ್ಪತ್ರೆಯಲ್ಲಿ ಕಾಯಿಲೆಯಿಂದ ಮೃತರಾದರೆಂದೂ, ಅಲ್ಲಿಯ ಜಿಲ್ಲಾ ಕಾಂಗ್ರೆಸಿನವರು ಅವರ ಅಂತ್ಯಮ ಸಂಸ್ಕಾರವನ್ನು ಮಾಡಿದರೆಂದೂ ತಿಳಿಯುತ್ತೇವೆ.

ಒರಿಸಾದಲ್ಲಿ ಅಫೀಮನ್ನು ಬಹಿಷ್ಕರಿಸುವ ಬಗ್ಗೆ ಖಾನೂನು ಮಾಡಿರುವರಷ್ಟೆ. ಈ ಸಂದರ್ಭದಲ್ಲಿ ಒರಿಸಾದ ನೆರೆ ಪ್ರಾಂತ್ಯವಾದ ಬಂಗಾಲ ಸರ್ಕಾರದವರು ಅವರಲ್ಲಿ ಅಫೀಮಿನ ಬೆಲೆಯನ್ನು ಅರ್ಧಕ್ಕೆ ಇಳಿಸಿ ಒರಿಸಾದಿಂದ ಜನರನ್ನು ಆಕರ್ಷಿಸುವ ಹವಣಿಕೆಯಲ್ಲಿದ್ದಾರೆಂದೂ ಒರಿಸಾದ ಎಕ್ಸೈಸ್ ಮಂತ್ರಿಗಳಾದ ಶ್ರೀ ಬೋಧರಾಮರನರು ಎಸೆಂಬ್ಲಿಯಲ್ಲಿ ಹೇಳಿದರು.

ರಾಜಕೋಟೆ ಸುಧಾರಣೆಯ ವಿಚಾರ ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಪು ಇನ್ನೂ ಬರಲಿಲ್ಲವೆಂದೂ, ರಾಜಕೀಯ ಇಲಾಖೆಯವರು ಇನ್ನೂ ಗಾಂಧಿ, ಪಟೇಲರೊಡನೆ ಟಾಕೂರ ಸಾಹೇಬರಿಗಾದ ಪತ್ರವ್ಯವಹಾರವನ್ನು ನ್ಯಾಯಾಧೀಶರಿಗೆ ಕಳುಹಿಸದೆ ರಾಜಕೋಟೆಗೆ ಕಳುಹಿಸಿ ಅಲ್ಲಿನ ಜವಾಬನ್ನು ಕಾಯುತ್ತಿರುವರೆಂದೂ, ಅದಕ್ಕಾಗಿಯೇ ರಾಜಕೋಟೆ ಸಮಸ್ಯೆಯ ತೀರ್ಮಾನವು ವಿಳಂಬವಾಗಿರುವದಾಗಿಯೂ ಗೊತ್ತಾಗಿದೆ.

ಬರುವ ಕಾಂಗ್ರೆಸ್ ಅಧಿವೇಶನಕ್ಕೆ ಸ್ಥಳವನ್ನು ಹುಡುಕುವ ಬಗ್ಗೆ ಬಾಬು ರಾಜೇಂದ್ರ ಪ್ರಸಾದರು ಕೆಲವು ಧುರೀಣರೊಂದಿಗೆ ಬಿಹಾರಿನ ಕೆಲವು ಭಾಗಗಳಲ್ಲಿ ಸುತ್ತಾಡಿದರು. ಎಲ್ಲಾ ಭಾಗಗಳನ್ನು ಅಜಮಾಯಿಸಿ ಹಾಜಿಪುರದ ಹತ್ತಿರದ ಒಂದು ಸ್ಥಳವನ್ನು ಗುರ್ತಿಸಿರುವರೆಂದೂ, ಅಲ್ಲಿಯ ಜಿಲ್ಲಾ ಬೋರ್ಡಿನವರು ಇದಕ್ಕೆ ತಮ್ಮಿಂದಾದ ಸಹಾಯ ಮಾಡುವಂತೆ ಭರವಸೆ ಕೊಟ್ಟಿರುವರೆಂದೂ, ನೀರಿನ ಹಾಗೂ ಇಲೆಕ್ಟ್ರಿಕ್ ಸರಬರಾಯಿಗೆ ಏನೂ ತೊಂದರೆಯಿಲ್ಲವೆಂದೂ ತಿಳಿದು ಬಂದಿದೆ.

" ಕಲಿತುದರಿಂದ, ಪರೀಕ್ಷೆಯನ್ನು ಕೊಟ್ಟು ಪಾಸಾದುದರಿಂದ, ಡಿಗ್ರಿಗಳ ಪಡೆಯುವಿಕೆಯಿಂದ ಪತ್ರಿಕೋದ್ಯಮಿಯಾಗುವುದು ಸಾಧ್ಯವೇ ಇಲ್ಲ. ಪತ್ರಿಕೆಗಳಲ್ಲಿ ಹಲಕಾಲ ಕೆಲಸ ಮಾಡಿದರೆ, ಹುಟ್ಟುಗುಣದಿಂದ ತುಂಬಿದವನಾದರೆ ಪತ್ರಿಕೋದ್ಯಮಿಯಾಗುವುದು ಸಾಧ್ಯ. ಪತ್ರಿಕೋದ್ಯಮಿಯಷ್ಟೇ ಧಾರ್ಮಿಕ, ರಾಜಕೀಯ, ಸಾಮಾಜಿಕ ವಿಚಾರವನ್ನು ತಿಳಿದವನು ಬೇರಿಲ್ಲ." ಎಂದು ಮದ್ರಾಸಿನಲ್ಲಿ ತಮ್ಮ ಭಾಷಣದಲ್ಲಿ ಸೀಟರ್ ಜೋನ್ಸ್ ಎಂಬವರು ಅಭಿಪ್ರಾಯವಿತ್ತರು.

ತ್ರಿಪುರಿಯ ಕಾಂಗ್ರೆಸ್ ಮಹಾಧಿವೇಶನಕ್ಕಾಗಿ ಖರ್ಚಾಗಿ ಉಳಿಯುವ ಹಣದಿಂದ ಜಬ್ಬಲ್ಪುರದಲ್ಲಿ ಒಂದು ಕಾಂಗ್ರೆಸ್ ಗೃಹವನ್ನು ಕಟ್ಟಬೇಕೆಂದು ತ್ರಿಪುರಿ ಕಾಂಗ್ರೆಸಿನ ಸ್ವಾಗತ ಸಮಿತಿಯವರು ನಿಶ್ಚೈಸಿರುತ್ತಾರೆ. ಈ ಗೃಹಕ್ಕೆ ಸೇರಿದಂತೆ ಒಂದು ವಸ್ತುಸಂಗ್ರಹಾಲಯವನ್ನು ಕಟ್ಟಿಸಿ ಅದರಲ್ಲಿ ಕಾಳಿಚೂರಿ ಕಲೆಗಳ ಮತ್ತು ವಾಸ್ತುಶಿಲ್ಪದ ಆದರ್ಶ ವಸ್ತುಗಳನ್ನಿಡಬೇಕೆಂದು ತೀರ್ಮಾನ ಮಾಡಿರುತ್ತಾರೆ. ತ್ರಿಪುರಿ ಮಹಾ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಗಾಗಿ ರಚನೆಯಾಗಿದ್ದ ರಥವನ್ನು ಇಲ್ಲಿ ಕಾಪಾಡಿಟ್ಟಿರಬೇಕೆಂದು ಯೋಚಿಸಿರುತ್ತಾರೆ.

Thanks Offering.

We thank our numerous friends and relatives for the Condolence letters sent to us for the bereavement in our family—the sad demise of our daughter. We regret our inability to reply individualy.

Dr. & Mrs. K. A. Chittyana,
Mysore.

ವೀರಾಜಪೇಟೆ ಸಾರ್ವಜನಿಕ ಸಭೆ.

ಈ ತಾ. 22 ರಲ್ಲಿ ಎಡೆನಾಲ್ಕುನಾಡು ತಾಲೋಕು ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ವೀರಾಜಪೇಟೆ ರೀಡಿಂಗ್ ರೂಮು ಎದುರುಗಡೆ ಒಂದು ಸಾರ್ವಜನಿಕ ಸಭೆ ಸೇರಿತು. ಮೀಟಿಂಗಿಗೆ ಪೂರ್ವ, ಕಾಂಗ್ರೆಸು ಕೆಲಸಗಾರರು ರಾಷ್ಟ್ರೀಯ ಗೀತೆ ಮತ್ತು ಧ್ವಜದೊಡನೆ ಮುಖ್ಯ ಬೀದಿಯಲ್ಲಿ ಮೆರವಣಿಗೆ ಬಂದು, ಮೀಟಿಂಗಿನ ಸ್ಥಳದಲ್ಲಿ ವಂದೇ ಮಾತರಂ ಪದವನ್ನು ಹಾಡಿದರು. ಮ, ರಾ. ಅಬ್ದುಲ್ ಗಫೂರ್ ಖಾನ್ ಪೈಶ್ಗಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಕೋರಿಕೆ ಮೇರೆ ಶ್ರೀ ಮಾನ್ ಪಿ. ಐ. ಬೆಳ್ಯಪ್ಪನವರು ತ್ರಿಪುರಿ ಕಾಂಗ್ರೆಸು ಮಹಾ ಸಭೆಯ ತೀರ್ಮಾನಗಳನ್ನು ಕುರಿತು ಉಪನ್ಯಾಸ ಮಾಡಿದರು.

ಅನಂತರ ಶ್ರೀಯುತ ಐ ಪಿ. ಕಾರ್ಯಪ್ಪ ಯಂ. ಎಲ್. ಸಿ. ಯವರು—ಕಳೆದ ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ ಮೀಟಿಂಗಿನಿಂದ ಕಾಂಗ್ರೆಸು ಪಾರ್ಟಿಯ ಮೆಂಬರುಗಳು ಎದ್ದು ಹೊರ ಬಂದ ವಿಚಾರ ಭಾಷಣ ಮಾಡಿದರು.

ಆ ಮೇಲೆ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

1. 'ಬಜೆಟ್ ಚರ್ಚೆಯಲ್ಲಿ ಭಾಗವಹಿಸುವುದು ವ್ಯರ್ಥವೆಂದು ಕಾಂಗ್ರೆಸು ಪಕ್ಷದ ಮೆಂಬರುಗಳು ಕಳೆದ ಕೌನ್ಸಿಲಿನ ಬಜೆಟ್ ಮೀಟಿಂಗಿನಿಂದ ಎದ್ದು ಹೊರ ಬಂದದ್ದು ನ್ಯಾಯವಾಗಿದೆ ಮತ್ತು ಅದಕ್ಕಾಗಿ ಈ ಸಭೆಯು ಸದರಿ ಮೆಂಬರುಗಳನ್ನು ಅಭಿನಂದಿಸುತ್ತದೆ.'

ಸೂಚಕರು—ಮೆ. ಕೀತಿಯಂಡ ಕುಟ್ಟಪ್ಪನವರು, ಅನುಮೋದಕರು—ಮೆ. ಪುಲಿಯಂಡ ಕುಶಾಲಪ್ಪನವರು.

2. 'ರೆವಿನ್ಯು ಮ್ಯಾನುವಲ್ಲಿನ ನಿಬಂಧನೆಗಳ ಕರಡು ತಿದ್ದು ಪಡಿಗಳನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ. ಮತ್ತು ಅವುಗಳನ್ನು ತಿದ್ದುಪಡಿ ಮಾಡಲು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂದು ಚೀಫ್ ಕಮಿಷನರವರನ್ನು ಕೇಳಿಕೊಳ್ಳುತ್ತದೆ.'

ಮೆ. ಸೋಮಯಂಡ ಅಚ್ಚಯ್ಯನವರು ಸೂಚಿಸಿದ ಈ ಠರಾವನ್ನು ಮೆ. ಕುಟ್ಟಂಡ ಬೆಳ್ಯಪ್ಪನವರು ಅನುಮೋದಿಸಿದರು.

3. 'ಸರ್ಕಾರದವರು ಸ್ಕೂಲು ಫೀಜನ್ನು ಹೆಚ್ಚಿಸಲು ಮಾಡಿದ ತೀರ್ಮಾನವನ್ನು ಈ ಸಭೆಯು ಪೂರ್ಣ ವಿರೋಧಿಸುತ್ತದೆ ಮತ್ತು ಹಾಗೆ ಫೀಜನ್ನು ಹೆಚ್ಚಿಸಕೂಡದೆಂದು ಸರ್ಕಾರದವರನ್ನು ಪುನಹ ಒತ್ತಿ ಕೇಳಿಕೊಳ್ಳುತ್ತದೆ.'

ಸೂಚಕರು—ಮೆ. ಕೆ. ಕುಟ್ಟಪ್ಪನವರು. ಅನುಮೋದಕರು—ಮೆ. ಪುಟ್ಟಿಚಂಡ ಬೆಳ್ಯಪ್ಪನವರು.

ಯೂರೋಪಿನ ಅವಸ್ಥಾಂತರ.

ನಾಝಿಯಾ ರಾಕ್ಷಸನ ಬಲಾತ್ಕಾರ—
ಇದನ್ನು ಎದುರಿಸಲು ಇತರ ರಾಷ್ಟ್ರಗಳ ಸಹಕಾರ—
ಲಿತೋನಿಯದಲ್ಲಿ ಹಾಹಾಕಾರ—

ಹಿಟ್ಲರನು ಝೆಕೊಸ್ಲೋವಾಕಿಯಾವನ್ನು ವಶಪಡಿಸಿಕೊಂಡು ಉಕ್ರೈನ ಪ್ರಾಂತದಕಡೆಗೆ ಮುಂದುವರಿಯುತ್ತಿರುವನಷ್ಟೆ. ಈ ಮಧ್ಯೆ ಯೂರೋಪದ ಪ್ರಬಲ ರಾಷ್ಟ್ರಗಳೆಂದೆನಿಸಿಕೊಂಡಿರುವ ಬ್ರಿಟನ್, ಫ್ರಾನ್ಸು, ರಷ್ಯ ಹಾಗೂ ಪೋಲೆಂಡುಗಳು ಒಂದುಗೂಡಿ ಹಿಟ್ಲರನು ಮುಂದ ಇಂಥಾ ಹೆಜ್ಜೆಯನ್ನಿಟ್ಟದ್ದಾದರೆ ಅದನ್ನು ಖಂಡಿಸಲು ಯೋಚಿಸಿವೆ. ಅದ್ದರಿಂದ ಸೋವಿಯಟ್ ರಷ್ಯಾವು ಪ್ರಜಾಪ್ರಭುತ್ವರಾಷ್ಟ್ರಗಳೆಂದೆನಿಸಿಕೊಳ್ಳುವ ಎಲ್ಲ ರಾಷ್ಟ್ರಗಳು ಹಿಟ್ಲರನ ನಿರಂಕುಶಾಧಿಕಾರದ ಪರಮಾವಧಿಯನ್ನು ಎದುರಿಸಲು ಒಂದು ಸಮ್ಮೇಳನ ಸೇರಬೇಕೆಂದು ಘೋಷಿಸಿದೆ. ಆದರೆ ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲಿ ಸಭೆ ನೆರೆಯಿಸಿ ತೀರ್ಮಾನ ಮಾಡುವದು ಹೆಚ್ಚು ವಿಳಂಬವಾಗುವದರಿಂದ ಒಡನೆ ಒಂದು ಪ್ರಕಟಣೆಯನ್ನು ನಮ್ಮೆಲ್ಲರ ಅನುಮತಿಯಿಂದಹೊರಡಿಸಿ ಕಾರ್ಯಕ್ಕಿಳಿಯುವುದು ಯುಕ್ತವೆಂದು ಬ್ರಿಟಿಷರುಸೂಚಿಸಿರುವರು. ರಷ್ಯಾ ಮತ್ತು ಪೋಲೆಂಡಿನವರು ಏಕಕಂಠದಿಂದ ಬ್ರಿಟಿಷರು ಎಲ್ಲರಿಗೂ ಅನ್ವಯಿಸುವ ಒಂದು ಪ್ರಕಟಣೆ ಹೊರಡಿಸಬೇಕೆಂದೂ, ಅದರಲ್ಲಿ ಎಲ್ಲಾ ರಾಷ್ಟ್ರಗಳು ಸಮ್ಮತಿಸುವಂಥಾ ಶರತುಗಳಿರಬೇಕೆಂದೂ ಸೂಚಿಸಿರುವರು. ಈ ಮಧ್ಯೆ ಇಟಲಿಯು ತನ್ನಾಭಿಪ್ರಾಯವನ್ನು ವ್ಯಕ್ತಪಡಿಸುವದೆಂದೂ, ತಾ. 25 ರಲ್ಲಿ ಮುಸಲೋನಿಯು ಮಾಡುವ ಭಾಷಣದಲ್ಲಿ ಅವರ ಧ್ಯೇಯವು ತಿಳಿಯಬರುವದೆಂದೂ ನಂಬಲಾಗಿದೆ. ಬ್ರಿಟಿಷರು ಜರ್ಮನಿಯ ಬರ್ಲಿನ್ ಪಟ್ಟಣದಲ್ಲಿದ್ದ ತಮ್ಮ ರಾಯಭಾರಿಯನ್ನು ಹಿಂದಕ್ಕೆ ಕರೆದುಕೊಂಡಿರುವರು. ಬ್ರಿಟಿಷರು ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಯುದ್ಧಕ್ಕೆ ಕಾಲಿಕ್ಕುವ ಸಂದರ್ಭದಲ್ಲಿ ಅಸ್ಟ್ರೇಲಿಯಾವು ಬ್ರಿಟಿಷ್ ಪ್ರಜಾಪ್ರತಿನಿಧಿ ಸರಕಾರಕ್ಕೆ ತಮ್ಮ ಸಹಾಯವನ್ನು ಕೊಡುತ್ತೇವೆಂದೂ, ಬ್ರಿಟಿಷರ ಇಂದಿನ ಶಾಂತಿ ಪ್ರಯತ್ನದಲ್ಲಿ ತಮಗೆ ಭರವಸೆಯಿದೆಯೆಂದೂ, ಬ್ರಿಟನ್ ಮುಳುಗಿದರೂ ಅದರೊಡನೆ ಮುಳುಗಲು ತಯಾರಿರುವೆವೆಂದು ತಿಳಿಸಿರುವರು.

ಅಮೇರಿಕದ ಕೆನಡಾ ಪ್ರಾಂತವೂ ಸಹ ಬ್ರಿಟಿಷರ ಪ್ರಗತಿಯೇ ತಮ್ಮ ಪ್ರತಿಷ್ಠೆಯೆಂದೂ, ಆ ಪ್ರಜಾಸತ್ತಾತ್ಮಕರ ರಾಜ್ಯವು ತೊಂದರೆಗೊಳಪಟ್ಟರೆ ತಾವೂ ತೊಂದರೆ ಪಟ್ಟುಕೊಟ್ಟಂತೆಯೆಂದೂ, ಅದ್ದರಿಂದ ಇಂದು ಬ್ರಿಟನು ಯುದ್ಧದಲ್ಲಿ ಕಾಲಿಕ್ಕಿದರೆ ಅದು ನಾವು ಹೂಡಿದ ಯುದ್ಧವೆಂದೇ ಭಾವಿಸಿ ಅದರಲ್ಲಿ ಸಹಕರಿಸುವೆವೆಂದೂ ಹೇಳಿರುವರು.

ಲಿತೂನಿಯವು ಶಿರಬಾಗಿತು.

ಜರ್ಮನಿಯ ಭಾಗ್ಯವಿಧಾತನಾದ ಹಿಟ್ಲರನ ಲಿತೂನಿಯಕ್ಕೆ ಒಂದು ಬೆದರಿಕೆ ಕೊಟ್ಟು ಮೆಮೆಲ್ ಎಂಬ ಪ್ರಾಂತವನ್ನು ತನಗೆ 48 ಗಂಟೆಗಳೊಳಗೆ ಬಿಟ್ಟುಕೊಡದಿದ್ದರೆ ಸೈನ್ಯ ಸಹಾಯದಿಂದ ಅದನ್ನು ವಶಪಡಿಸಿಕೊಳ್ಳುವೆನೆಂದು ಹೇಳಿದ್ದನು. ಅದ್ದರಿಂದ ಲಿತೂನಿಯಾ ಸರ್ಕಾರವು ಸಭೆ ಸೇರಿ ವಿಚಾರಗಳನ್ನು ಪರಿಶೀಲಿಸಿ ತಾರೀಕು 21 ರಲ್ಲಿ ಮೆಮೆಲ್ ಪ್ರಾಂತವನ್ನು ಬಿಟ್ಟುಕೊಡಲು ನಿರ್ಧರಿಸಿತು. ಅದ್ದರಿಂದ ಮೆಮೆಲಿನಲ್ಲಿರುವ ತಮ್ಮ ಸೈನ್ಯವನ್ನು ಲಿತೂನಿಯಾ ಸರ್ಕಾರವು ಹಿಂದಕ್ಕೆ ಕರೆಸಿದೆ. ಅದ್ದರಿಂದ ಯಾವದೊಂದು ಪ್ರಯಾಸವಿಲ್ಲದೆ ಲಿತೋನಿಯವು ಜರ್ಮನರ ವಶವಾಯಿತು. ಮುಂದಿನ ಕಾರ್ಯಕ್ರಮವೇನೋ ತಿಳಿಯದು.

ಡೆನ್ಮಾರ್ಕನಲ್ಲಿ ನಾಝಿಗಳು.

ಡೆನ್ಮಾರ್ಕಿನ ನಾಝಿ ಮುಖಂಡನಾದ ಫ್ರಿಟ್ಸ್ ಕ್ಲಾಸೆನ್‌ರವರು ಝೆಕೊಸ್ಲೋವಾಕಿಯಾವನ್ನು ಜರ್ಮನಿಯು ಯಾವ ರೀತಿಯಲ್ಲಿ ಉಪಚರಿಸಿತೋ ಹಾಗೆಯೇ ಡೆನ್ಮಾರ್ಕನ್ನೂ ಸಹ ನೋಡುವ ಬಗ್ಗೆ ಹಿಟ್ಲರನನ್ನು ಕೇಳಿಕೊಂಡಿರುವನಂತೆ. ಅದಕ್ಕೆ ಡೆನ್ಮಾರ್ಕಿನ ಮುಖ್ಯ ಮಂತ್ರಿ ಹರ್ ಸ್ಟಾನಿಂಗರು, ತಾವು ಯಾವ ಜನಾಂಗದ ರಾಜಕೀಯ, ಇಲ್ಲವೇ ಸಾಮಾಜಿಕ ರಂಗದಲ್ಲಿ ಕೈಹಾಕುವವರಲ್ಲವೆಂದೂ, ನಮ್ಮ ರಾಜಕೀಯ ರಂಗಕ್ಕೆ ಯಾರೂ ಬರಕೂಡದೆಂದೂ ಡೆನ್ಮಾರ್ಕಿನಲ್ಲಿರುವ ಅಲ್ಪ ಸಂಖ್ಯಾಕ ನಾಝಿಗಳನ್ನು ಅವರಿಗೆ ಸಿಗಬೇಕಿದ್ದ ಸೌಕರ್ಯಕ್ಕಿಂತ ಹೆಚ್ಚಿಗೆ ಕೊಟ್ಟು ಸನ್ಮಾನಿಸಿರುವೆವೆಂದೂ ಅದ್ದರಿಂದ ಯಾವ ಜನಾಂಗವೂ ನಮ್ಮ ಮೇಲೆ ಕೈಮಾಡುವದು ನ್ಯಾಯಸಮ್ಮತವಲ್ಲವೆಂದೂ ಹೇಳಿರುವರು.

ನಾಝಿಗಳಿರುವ ಪ್ರಾಂತಗಳೆಲ್ಲಾ ಕೋಲಾಹಲವೆದ್ದಿದೆ. ಯೂರೋಪು ಖಂಡವೇ ಇವರ ಉದ್ದಾಮತನದಿಂದ ತಲ್ಲಣಗೊಂಡಿದೆ. ಮುಂದಿನ ಪರಿಸ್ಥಿತಿ ಹೇಗಾಗುವದೋ ಊಹಿಸುವವರಾರು? ಎಲ್ಲಾ ಕಾಲಗರ್ಭದಲ್ಲಡಗಿದೆ.

ತಿರುವಾಂಕೂರಿನಲ್ಲಿ ಕಾಂಗ್ರೆಸ್ ಮುಖಂಡರ ಕೈಸೆರೆ.

ಮೀಟಿಂಗಿಗೆ ಪೋಲೀಸರ ಅಡಚಣೆ.

ಟ್ರಾವಂಕೂರು ಸ್ಟೇಟ್ ಕಾಂಗ್ರೆಸ್ಸಿನ ಧುರೀಣರಾದ ಭೂತ ಲಿಂಗಂ ಚಿಟ್ಟಿಯಾರ್, ಜಿ. ಪಿ. ಶೇಕರ್ ಮೊದಲಾದವರನ್ನು ಪೋಲೀಸರು ಬಂಧಿಸಿರುವರು. ಅವರ ವಿಚಾರಣೆ ನಡೆದು ಅವರಿಗೆ ತಲಾ 1 ವರ್ಷದ ಸಜೆಯು ವಿಧಿಸಲಾಗಿದೆ. ಕ್ವಿಲಾನಿನಲ್ಲಿಯೂ ಪೋಲೀಸರು ಶ್ರೀ. ಟಿ. ಯಂ. ವರ್ಗೀಸ್, ವಿ. ಕೆ. ಕುಂಜು ಮೊದಲಾದವರನ್ನು ಬಂಧಿಸಿರುವದಲ್ಲದೆ ಅವರನ್ನು ವಿಚಾರಿಸಿ ಮೇಜಿಸ್ಟ್ರೇಟರಾದ ಶ್ರೀ. ಎಸ್. ಕೋಲಪ್ಪ ಪಿಳ್ಳೆಯವರು ತಲಾ ಒಂದು ವರ್ಷದ ಶಿಕ್ಷೆ ವಿಧಿಸಿರುವರು. ಈ ಸಂದರ್ಭದಲ್ಲಿ ಕ್ವಿಲೋನಿನಲ್ಲಿ ಒಂದು ಸಾರ್ವಜನಿಕ ಸಭೆಯು ನೆರೆದಿತ್ತು. ಅಲ್ಲಿ ಮುಖಂಡರು ಭಾಷಣ ವೇದಿಕೆಗಳನ್ನೇರಿ ಸತ್ಯಾಗ್ರಹದ ವಿಚಾರ ಭಾಷಣ ಕೊಡುವ ಸಂದರ್ಭದಲ್ಲಿ ಕೆಲವು ಪುಂಡರು ಡೋಲು ಮೊದಲಾದುವನ್ನು ಬಡಿಯುತ್ತಾ ಶಬ್ಧ ಮಾಡಿ ಮೀಟಿಂಗನ್ನು ಮುಂದರಿಸಲು ಅವಕಾಶ ಕೊಡಲಿಲ್ಲ. ಅದ್ದರಿಂದ ಪುನಹ ಕಾಂಗ್ರೆಸ್ ಅನುಯಾಯಿಗಳೆಲ್ಲರೂ ಬೇರೊಂದೆಡೆಗೆ ಹೋಗಿ ಸೇರಿದರು. ಅಲ್ಲಿಯೂ ಈ ತೊಂದರೆಯೇ ಆಯಿತು. ಹೀಗೆಯೇ ಕಾಂಗ್ರೆಸಿನವರು ಬೆಳಗ್ಗೆಯಿಂದ ಸಾಯಂಕಾಲದ ವರೆಗೆ 6 ಸ್ಥಳಗಳಲ್ಲಿ ಸೇರಿದರು. ಎಲ್ಲಿಯೂ ಮೀಟಿಂಗನ್ನು ಸಾಂಗವಾಗಿ ನಡಿಸಲು ದುಸಾಧ್ಯವಾಯಿತು. ಇಂಥಾ ರೇಗಿಸುವ ಪ್ರಸಂಗವು ನಡೆದರೂ ಸಹ ಕಾಂಗ್ರೆಸ್ಸಿನವರು ಸಿಟ್ಟುಗೊಳ್ಳದೆ ಸಾಯಂಕಾಲ 'ಮಹಾತ್ಮಾ ಗಾಂಧಿಕೀ ಜೈ' ಎಂಬ ಘೋಷಣೆಯಿಂದ ಶಾಂತ ಚಿತ್ತದಿಂದ ಇದ್ದರು. ಈ ಪುಂಡರು ಮೀಟಿಂಗು ನಡೆಯುವಾಗ ಧ್ವಜವನ್ನು ಕಿತ್ತು ಕಾಂಗ್ರೆಸ್ ಅನುಯಾಯಿಗಳಿಗೆ ತುಂಬಾ ಅವಮಾನ ಮಾಡಿದರೂ ಕಾಂಗ್ರೆಸಿನವರು ತಮ್ಮ ಶಿಸ್ತಿನಿಂದ ಶಾಂತ ರೀತಿಯಿಂದ ವರ್ತಿಸಿದ್ದು ಅಭಿನಂದನೀಯ. ಈ ಪುಂಡಾಟವು ಪೋಲೀಸರ ಪ್ರೇರಣೆಯಿಂದ ನಡೆದದ್ದೆಂದು ಭಾವಿಸಲಾಗಿದೆ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಕೊಡಗು ಹಜರತ್ ಚೀಫ್ ಕಮೀಷನರ್
ಮತ್ತು ಕಮೀಷನರ್ ಸಾಹೇಬರು
ಗಳವರಲ್ಲಿ ವಿನಂತಿ.

ಇದೇ ಮಾರ್ಚ ತಾರೀಕು 14, 15 ಮತ್ತು 16ರಲ್ಲಿ ನಡೆದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗಿನಲ್ಲಿ ಕೌನ್ಸಿಲ್ ಮೆಂಬರಾದ ಎ. ಜಿ. ಮಾದಪ್ಪನವರು ಈ ಕೆಳಗಿನ ಪ್ರಶ್ನೆಗಳನ್ನು ಕೌನ್ಸಿಲ್ ಆಫೀಸಿಗೆ ಕಳುಹಿಸಿದ್ದರೆಂದು ತಿಳಿಯಬರುತ್ತದೆ.

(a) ಕಳೆದ ಸಾರಿ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಮಹಾಸಭೆಯು ಯಾವಾಗ ನಡೆಸಲ್ಪಟ್ಟಿತು?

(b) ಯಾರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು?

(c) ಶ್ರೀ. ಯಂ. ಯಂ. ಬೆಳ್ಯಪ್ಪ ಯಂ. ಯಲ್. ಸಿ. ಯವರು ತನಗೆ ಮಹಾ ಸಭೆಯವರು ಬೋನಸ್ಸಾಗಿ ಕೊಟ್ಟದ್ದೆಂಬ ನೆವದಿಂದ 500 ರೂ. ಗಳನ್ನು ಕಾನೂನಿಗೆ ವಿರೋಧವಾಗಿ ಬ್ಯಾಂಕಿನಿಂದ ಮರಳಿ ಹೊಂದಿಕೊಂಡ ವಿಷಯವು ಸರ್ಕಾರದ ಅವಗಾಹನೆಗೆ ಬಂದಿರುತ್ತದೋ?

(d) ಈ ವರ್ತನೆಯ ವಿಷಯ ರಿಜಿಸ್ಟ್ರಾರರವರು ಸರ್ಕಾರಕ್ಕೆ ಸರಿಯಾದ ಸಮಯದಲ್ಲಿ ತಿಳಿಸಿರುತ್ತಾರೋ? ಹೀಗಿದ್ದ ಪಕ್ಷ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡರು? ಇಲ್ಲದಿದ್ದ ಪಕ್ಷ ಯಾತಕ್ಕಾಗಿ?

(e) ಶ್ರೀ. ಯಂ. ಯಂ. ಬೆಳ್ಯಪ್ಪನವರು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಹಣದ ಮತ್ತು ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯ ಹಣದ ವಿಷಯದಲ್ಲಿ ತೆಗೆದ ಅನ್ಯಾಯದ ವರ್ತನೆಗೋಸ್ಕರವಾಗಿ ಅವರು 10 ವರ್ಷಗಳ ವರೆಗೆ ಕೊಡಗಿನ ಯಾವ ಸಹಕಾರಿ ಸಂಸ್ಥೆಗಳಲ್ಲೂ ಭಾಗ ವಹಿಸಕೂಡದೆಂದು ಬ್ಯಾಂಕಿನ ಬಹು ಮಟ್ಟಿಗೆ ಎಲ್ಲಾ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದರೆಂಬ ಸಂಗತಿಯು ಸರ್ಕಾರದ ಅವಗಾಹನೆಗೆ ಬಂದಿರುತ್ತದೋ?

(f) ಶ್ರೀ. ಬೆಳ್ಯಪ್ಪನವರ ವರ್ತನೆಯಿಂದ ಸೆಂಟ್ರಲ್ ಬ್ಯಾಂಕು ಇನ್ಶೂರೆನ್ಸ್ ಸೊಸೈಟಿಯಿಂದ ಸಿಕ್ಕಬೇಕಾಗಿದ್ದ ಪ್ರಾರಂಭದ ಕಮಿಶನ್ ಸುಮಾರು ರೂ. 4000 ಮತ್ತು ರಿನಿವಲ್ ಕಮಿಷನ್ ಸುಮಾರು ಮಾಹೆಯಾನ 300 ರೂ. ಗಳ ಮೇರೆ ನಷ್ಟ ಪಟ್ಟುಕೊಂಡಿತೆಂದು ಸರ್ಕಾರದ ತಿಳುವಳಿಕೆಗೆ ಬಂದಿರುತ್ತದೋ?

(g) ಸದರಿ ಇನ್ಶೂರೆನ್ಸ್ ಸೊಸೈಟಿಯು ಸೆಂಟ್ರಲ್‌ಬ್ಯಾಂಕ್ ಕೊಡಲಿಕ್ಕಿದೆ ಎಂಬ ಕಾರಣದಿಂದ ಅವರ ಮೇಲೆ ದಾವೆ ದಾಕಲು ಮಾಡಿದಿಯೋ? ಈ ರೀತಿ ದಾವೆ ದಾಕಲು ಮಾಡಲು ಈ ಸೊಸೈಟಿಗೆ ಅಧಿಕಾರವಾಗಲೀ ನ್ಯಾಯವಾಗಲೀ ಇದೆಯೋ?

(h) ಸದರಿ ಇನ್ಶೂರೆನ್ಸ್ ಸೊಸೈಟಿಯು ಶ್ರೀ. ಸಿ. ಜಿ. ಐಯ್ಯಪ್ಪ ಬಿ. ಎ. ಬಿ. ಎಲ್. ರವರನ್ನು ಕನ್ವೀನರ್ ಎಂದು ಅಂಗೀಕರಿಸಿ ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಜಿಟ್ಟು ಮಾಡಿದ 4000 ರೂ. ಗಳನ್ನು ವಾಪಸು ಹೊಂದಿಕೊಂಡದ್ದು ನಿಜವೋ?

(i) ತನಗೆ ಸಂಬಂಧಪಡುವ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಕ್ಕೆ ಬರುವವೆಂಬದನ್ನು ತಿಳಿದು ಬೇಕೆಂತಲೇ ಶ್ರೀ. ಯಂ. ಯಂ. ಬೆಳ್ಯಪ್ಪನವರು ಬ್ಯಾಂಕ್ ಸಭೆಯ ಮಧ್ಯಾಹ್ನದ ಮೇಲಿನ ಅಧಿವೇಶನಕ್ಕೆ ಗೈರ್ಹಾಜರಾಗಿದ್ದರೆಂಬ ಸಂಗತಿಯು ಸರ್ಕಾರದ ತಿಳುವಳಿಕೆಗೆ ಬಂದಿದೆಯೋ?

(j) ಶ್ರೀ. ಯಂ ಯಂ. ಬೆಳ್ಯಪ್ಪ ಯಂ. ಯಲ್. ಸಿ. ಯವರು ಮತ್ತು ಬ್ಯಾಂಕಿನ ಇನ್ನೂ ಕೆಲವು ಡೈರೆಕ್ಟರುಗಳು ಸಹಕಾರಿಗಳೆಂದು . ಗಣಿಸಲ್ಪಟ್ಟಿದ್ದರೂ ಟ್ರಾವಂಕೂರು ನೇಶನಲ್ ಅಂಡ್ ಕ್ವಿಲಾನ್ ಬ್ಯಾಂಕಿನಲ್ಲಿ ತಾವಿಟ್ಟ ಡಿಪಾಜಿಟ್ಟುಗಳನ್ನು ಸದರಿ ಬ್ಯಾಂಕ್ ಮುಚ್ಚಿ ಹೋಗುವ ಸ್ಥಿತಿಯನ್ನು ತಿಳಿದೂ ಸೆಂಟ್ರಲ್ ಬ್ಯಾಂಕಿಗೆ ಯಾವುದೊಂದು ಸೂಚನೆಯನ್ನೂ ಕೊಡದೆ ತಮ್ಮ ಡಿಪಾಜಿಟ್ಟುಗಳನ್ನು ಮಾತ್ರ ಹೊಂದಿಕೊಂಡ ವಿಷಯವು ಸರ್ಕಾರದ ಅವಗಾಹನೆಗೆ ಬಂದಿರುವದೋ?

(k) ಬ್ಯಾಂಕಿನ ಕಳೆದ ಮಹಾಸಭೆ ಮೀಟಿಂಗಿನಲ್ಲಿ ಡೈರೆಕ್ಟರುಗಳ ಚುನಾವಣೆಯಲ್ಲಿ ಅಪಜಯ ಹೊಂದಿದ ಕೆಲವು ಉಮೇದ್ವಾರರು ಬ್ಯಾಂಕಿನ ವಿಷಯ ಚೇಷ್ಟೆಯ ಪ್ರಚಾರ ಕೆಲಸ ನಡೆಸುತ್ತಿರುವದು ಸರ್ಕಾರದ ತಿಳುವಳಿಕೆಗೆ ಬಂದಿದೆಯೋ? ಹಾಗಾದ ಪಕ್ಷ ಸರ್ಕಾರವು ಇದನ್ನು ಎದುರಿಸಲು ಯಾವ ಕ್ರಮ ತೆಗೆದುಕೊಂಡಿ ಯುತ್ತದೆ.

ಆದರೆ ಮೇಲಿನ ಮೂರು ದಿವಸಗಳ ಗಳಲ್ಲೂ ಈ ಪ್ರಶ್ನೆಗಳಿಗೆ ಉತ್ತರವು ಬಂದಿರುವದಿಲ್ಲವೆಂದು ಕೌನ್ಸಿಲು ಮೀಟಿಂಗಿನ ಉತ್ತರಗಳ ಪಟ್ಟಿಯಲ್ಲಿ (Answers to the interpellations) ಕಂಡುಬರುವುದು. ಇದರ ಕಾರಣವೇನೆಂದು ಗೊತ್ತಾಗುವುದಿಲ್ಲ. ಮೇಲೆ ಕೇಳಲ್ಪಟ್ಟ ಪ್ರಶ್ನೆಗಳು ಅತೀ ಮುಖ್ಯವಾದವುಗಳಾಗಿರುತ್ತವೆ. ಕೊಡಗಿನ ಬಹು ಮಟ್ಟಿಗೆ ಎಲ್ಲಾ ಸಹಕಾರಿ ಸಂಘಗಳಿಗೆ ಹಣ ಒದಗಿಸಿಕೊಡುವದರಲ್ಲೂ ಮತ್ತು ಮೇಲ್ವಿಚಾರ ನಡೆಸುವದರಲ್ಲೂ ಕೇಂದ್ರ ಸಂಸ್ಥೆಯಾಗಿರುವ ಸೆಂಟ್ರಲ್ ಸಹಕಾರಿ ಬ್ಯಾಂಕಿನ ಕಾರ್ಯಕಲಾಪಗಳನ್ನೂ ಮತ್ತು ಆಡಳಿತದ ವಿಷಯವನ್ನೂ ಸರಕಾರವೂ ಮತ್ತು ದೇಶದ ಎಲ್ಲಾ ಸಹಕಾರಿ ಬಂಧುಗಳೂ ಚೆನ್ನಾಗಿ ಪರೀಕ್ಷಿಸುತ್ತಿದ್ದು ಕುಂದು ಕೊರತೆಗಳು ಕಂಡುಬಂದರೆ ಅವುಗಳನ್ನು ನಿರ್ಮೂಲ ಮಾಡಲು ತೊಂದರೆ ತೆಗೆದುಕೊಳ್ಳಬೇಕಾಗಿರುತ್ತದೆ. . ಆದ್ದರಿಂದ ಈ ಬ್ಯಾಂಕಿನಲ್ಲಿ ಆದ ಮೇಲೆ ನಮೂದಿಸಿದ ಕುಂದುಕೊರತೆಗಳನ್ನು ಕೌನ್ಸಿಲಿನಲ್ಲಿ ಕೇಳಿದ್ದು ಈ ಸಂಸ್ಥೆಯ ಏಳಿಗೆಯ ಬಗ್ಗೆ ಸರಕಾರದ ಮತ್ತು ಸಹಕಾರಿಗಳ ದೃಷ್ಟಿಯಲ್ಲಿ ಬಹು ಯೋಗ್ಯವಾದದ್ದೆಂದು ತೋರುತ್ತದೆ. ಈ ಪ್ರಶ್ನೆಗಳು ಸೆಂಟ್ರಲ್ ಬ್ಯಾಂಕಿನ ಗೌರವ ಕಾರ್ಯದರ್ಶಿಯವರಾಗಿ ತಾ. 18-2-38 ರ ವರೆಗೆ ಕೆಲಸ ಮಾಡಿದ ಶ್ರೀ ಯಂ. ಯಂ. ಬೆಳ್ಯಪ್ಪನವರ ನ್ಯಾಯಸಮ್ಮತವಲ್ಲದ ಕೆಲಸದ ವಿಷಯವಾದ್ದರಿಂದ ಇವುಗಳ ತಪಶೀಲ್ ವೃತ್ತಾಂತವನ್ನು ದೇಶಸ್ಥರ ಮತ್ತು ಸರ್ಕಾರದ ಮುಂದಿಟ್ಟು ಬ್ಯಾಂಕಿನ ಮುಂದಿನ ಅಭಿವೃದ್ಧಿಗೆ ತೊಡಕು ಬಾರದ ರೀತಿ ಇನ್ನು ಬರುವ ಡೈರೆಕ್ಟರುಗಳು ಮತ್ತು ಗೌರವ ಕಾರ್ಯದರ್ಶಿಗಳವರು ಕೆಲಸ ಮಾಡಲು ಎಚ್ಚರಿಕೆ ಕೊಡಲು ಇಂಥಾ ಪ್ರಶ್ನೆಗಳ ಅವಶ್ಯಕತೆ ಇರುತ್ತವೆ. ಆದರೆ ಇವುಗಳಿಗೆ ಉತ್ತರ ಕೊಡದ ಮೂರು ದಿವಸಗಳ ನಡಾವಳಿಕೆಗಳಲ್ಲೂ ಬಚ್ಚಿಡಲು ಯಾರು ಮತ್ತು ಯಾವ ಕಾರಣವೆಂದು ಗೊತ್ತಾಗಲಾರದು

ತಾ. 15-3-39 ರ ಕೌನ್ಸಿಲ್ ಪ್ರಶ್ನೋತ್ತರಗಳಲ್ಲಿ ಮುಜರಾಯಿ ಇಲಾಖೆಯ ವಿಷಯದಲ್ಲಿ ಕೆಲವು ಪ್ರಶ್ನೆಗಳಿದ್ದವು. ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡಿದ ಶ್ರೀ ಕೀತಿಯಂಡ ಕಾಳಪ್ಪನವರ ಸಂಬಂಧವಾಗಿ ಹೆಚ್ಚಿನ ಮಟ್ಟಿಗೆ ಪ್ರಶ್ನೆಗಳು ಇದ್ದವೆಂದು ತಿಳಿಯುತ್ತೆ. ಇವರು ಈ ಇಲಾಖೆಯಲ್ಲಿ ಬಹು ಮುತುವರ್ಜಿಯಿಂದ ಕೆಲಸ ಮಾಡಿರುತ್ತಾರೆ. ಅನ್ಯಥಾ ದೋಷಾರೋಪಣೆಯ ಪ್ರಶ್ನೆಯನ್ನು ಒಬ್ಬ ಕೌನ್ಸಿಲ್ ಮೆಂಬರರು ಕೇಳಿದ್ದು ಸಮಂಜಸವಾಗಿ ಕಾಣುವದಿಲ್ಲ. ಆದರೂ ಸರಕಾರವು ಈ ಪ್ರಶ್ನೆಗಳಿಗೆ ಉತ್ತರವನ್ನಿತ್ತಿತು. ಮುಜರಾಯಿ ಇಲಾಖೆಯ ಮೇಲ್ವಿಚಾರದಲ್ಲಾಗಲೀ ಅಥವಾ ಕಾರ್ಯಕಲಾಪಗಳಲ್ಲಾಗಲೀ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವಿರುವದಿಲ್ಲ. ಆದರೆ ಸರ್ಕಾರವು ರಿಜಿಸ್ಟರ್ ಮಾಡಿ ಮೇಲ್ವಿಚಾರಣೆ ನಡೆಸುತ್ತಿರುವ ಈ ಸಹಕಾರಿ ಕೇಂದ್ರ ಸಂಸ್ಥೆಯ ಕಾರ್ಯಕಲಾಪಗಳಲ್ಲಾದ ಅನ್ಯಾಯದ ಬಗ್ಗೆ ಉಂಟಾದ ಪ್ರಶ್ನೆಯಲ್ಲಿ ಸರಕಾರವು ವಹಿಸಿದ ತಟಸ್ಥ ವೃತ್ತಿಯು ದೇಶಸ್ಥರಲ್ಲಿ ಅಸಮಾಧಾನವನ್ನುಂಟುಮಾಡಿರುತ್ತದೆ. ಆದ್ದರಿಂದ ಇನ್ನು ಮುಂದಾದರೂ ಹಜರತ್ ಚೀಫ್ ಕಮಿಷನರವರೂ, ಕಮಿಷನರವರೂ ಈ ಮೇಲಿನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ದೇಶಸ್ಥರಿಗೆ ತಿಳಿಯುವ ರೀತಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ.

'ಒಬ್ಬ ಸಹಕಾರಿ'

ಟ್ರಾವಂಕೂರಿನ ಪರಿಸ್ಥಿತಿ.

ಪೂಜ್ಯ ಗಾಂಧಿಜೀಯವರ ಪ್ರಕಟಣೆ.

ಕೇಂದ್ರ ಸರಕಾರದ ಅಪ್ಪಣೆ ವಿನಹ ಆಳರಸರು ಒಂದು ಹುಲ್ಲಿನ ಕಣವನ್ನು ಸಹ ಅಲ್ಲಾಡಿಸಲಾರರು. ಕಾಲದ ವಾತಾವರಣಕ್ಕನುಗುಣವಾಗಿ ಅವರು ಮಾರ್ಪಡದಿದ್ದರೆ, ಹೆಚ್ಚು ಕಾಲ ಬಾಳಲಾರರು. ಅಮಾನುಷ ಅತ್ಯಾಚಾರದಿಂದ ಜನತೆಯ ಬೇಡಿಕೆಯನ್ನು ಕುಗ್ಗಿಸಲಾರರು. ಸಾರ್ವಭೌಮ ಸರಕಾರವು ಎಚ್ಚತ್ತು ವರ್ತಿಸದಿದ್ದರೆ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲಾರದು. ಆತುರವು ಅನರ್ಥಕಾರಿಯೆಂದರಿತು ಸತ್ಯಾಗ್ರಹಿಗಳು ಶಿಸ್ತಿನಿಂದ ಮುಂದುವರಿಯದಿದ್ದರೆ ತಮ್ಮ ಧ್ಯೇಯಸಾಧನೆಯಲ್ಲಿ ಕೃತಕೃತ್ಯರಾಗರು. ಸತ್ಯ ಮತ್ತು ಅಹಿಂಸೆಯೇ ಸ್ವಾತಂತ್ರ ಸಾಧನೆಯ ಮೂಲ ಸ್ತಂಭಗಳೆಂಬದನ್ನು ಪ್ರತಿಯೊಬ್ಬನೂ ನಂಬಿ ಕಾರ್ಯ ಮಾಡಿದರೆ ಸ್ವಾತಂತ್ರ್ಯವು ದೂರವಿರದು.

ಟ್ರಾವಂಕೂರಿನಲ್ಲಿ ಈಗಾಗಲೇ ಕೆಲವು ಕಾಂಗ್ರೆಸ್ ಧುರೀಣರ ಕೈಸೆರೆಯಾಗಿದೆ. ಈ ವಿಚಾರ ಮಹಾತ್ಮ ಗಾಂಧಿಯವರು ಒಂದು ಹೇಳಿಕೆಯನ್ನು ಹೊರಡಿಸಿ ಸಂಸ್ಥಾನದ ಅಧಿಪತಿಗಳು ಕಾಲದ ಪರಿಸ್ಥಿತಿಯನ್ನರಿತು ಅದಕ್ಕನುಗುಣವಾಗಿ ಮಾರ್ಪಡಬೇಕೆಂದೂ, ಸ್ಟೇಟ್ ಕಾಂಗ್ರೆಸಿನವರು ತಾ. 25 ರಿಂದ ಪ್ರಾರಂಭಿಸುವಂತೆ ನಿಶ್ಚಯಿಸಿದ ಸತ್ಯಾಗ್ರಹವನ್ನು ತನ್ನ ಅಭಿಪ್ರಾಯ ತಿಳಿದ ನಂತರ ಹೂಡಬೇಕೆಂದೂ ಸೂಚಿಸಿರುವರು. ಗಾಂಧಿಜೀಯವರು ತನ್ನ ಉಪವಾಸ ವ್ರತವನ್ನು ಪೂರೈಸಿದ ನಂತರ ತಿರುವಾಂಕೂರಿನ ಸಮಸ್ಯೆಯನ್ನು ಚೆನ್ನಾಗಿ ಪರಿಶೀಲಿಸುತ್ತಿರುವರು. ಶ್ರೀ. ಗಳಾದ ತಾನುಪಿಳ್ಳೆ, ಜಿ. ರಾಮಚಂದ್ರನ್ ಮೊದಲಾದವರ ಕೈಸೆರೆಯ ವಿಚಾರ ಗಾಂಧಿಜೀಯವರು ತಿಳಿದೊಡನೆಯೇ ಸಂಸ್ಥಾನಾಧೀಶರು ಈ ವಿಧದ ತಮ್ಮ ಧೋರಣೆಯಿಂದ ಜನರ ಮನಸ್ಸಿನಲ್ಲಿ ಉದ್ಭೂತವಾಗಿರುವ ಸ್ವಾತಂತ್ರ್ಯಾಪೇಕ್ಷೆಯನ್ನು ಕಿತ್ತೊಗೆಯಲಾರರೆಂದು ಘೋಷಿಸಿರುವರು. ಅವರ ಪ್ರಕಟಣೆಯ ಸಾರಾಂಶವಿದು:-

'ಶ್ರೀ ಗಳಾದ ತಾನುಪಿಳ್ಳೆ ಮತ್ತು ರಾಮಚಂದ್ರರವರನ್ನು ಬಂಧಿಸಿದ ಟ್ರಾವಂಕೂರ್ ದರ್ಬಾರಿನ ಕೃತ್ಯವು ಎಂದೂ ಅವರಿಗೆ ಶೋಭಿಸುವಂತಾದ್ದಲ್ಲ. ನಾನು ರಾಜಕೋಟೆಯಲ್ಲಿರುವಾಗ ದಿವಾನರಾದ ಶ್ರೀ ರಾಮಸ್ವಾಮಿ ಐಯ್ಯರರು ಸ್ಟೇಟ್ ಕಾಂಗ್ರೆಸಿನ ಹೊರಗಿನವರ ಸಹಾಯದ ವಿಚಾರ ಖಂಡಿಸಿ ಬರೆದ ಲೇಖನವನ್ನೋದಿರುವೆನು. ಸಂಸ್ಥಾನದ ಆಳರಸರು ಜನಾಪೇಕ್ಷೆಯನ್ನು ತಿರಸ್ಕರಿಸಿ ಅವರನ್ನು ಬಗ್ಗುಬಡಿಯಲು ಹೊರಗಿನ ಕೇಂದ್ರ ಸರಕಾರದ ಸಹಾಯ ಬೇಡುತ್ತಿರುವಾಗ ಜನತೆಯೂ ತಮ್ಮ ರಕ್ಷಣೆಗಾಗಿ ಹೊರಗಿನ ಸಹಾಯ ಬೇಡುವದು ವಾಸ್ತವ. ನಾನು ಬರೇ ಸತ್ಯಾಗ್ರಹದಲ್ಲಿ ನುರಿತ ಒಬ್ಬ ಯೋಧನಂತೆ ಅವರಿಗೆ ಅಹಿಂಸಾ ಹಾಗೂ ಶಾಂತಿಯ ತತ್ವದ ಮಹಿಮೆಯನ್ನು ಬೋಧಿಸಬಲ್ಲೆನೇ ವಿನಹ ಮತ್ತೆ ಯಾವ ಕಾರ್ಯವೂ ನನ್ನಿಂದಾಗದು.

ಸಂಸ್ಥಾನದ ಜನತೆಯ ಮತ್ತು ಸಾರ್ವಭೌಮ ಸರಕಾರದ ಸಂಬಂಧವು ಪ್ರಾಮುಖ್ಯ ಹಾಗೂ ಅಭೇದ್ಯವಾದದ್ದು. ಸಾರ್ವಭೌಮ ಸರಕಾರಕ್ಕೂ, ತಾವು ಸ್ವತಂತ್ರರೆಂದೂ, ಮನಸ್ವೇಚ್ಛೆ ಕಾರ್ಯಕ್ರಮ ನಡೆಸಬಲ್ಲವರೆಂದೂ ಹೆಮ್ಮೆಗೊಟ್ಟುಕೊಳ್ಳುವ ಸಂಸ್ಥಾನಾಧೀಶರಿಗೂ, ಇರುವ ಸಂಬಂಧವೆಂದರೆ ಕೇಂದ್ರ ಸರಕಾರದ ಅಪ್ಪಣೆ ವಿನಹ ಆಳರಸರು ಹುಲ್ಲಿನ ಕಣವನ್ನು ಸಹ ಅಲುಗಾಡಿಸಲಾರರು. ಅಂಥಾ ಆಳರಸರನ್ನು ಅಂಕೆಯಲ್ಲಿಟ್ಟಿರುವ ಸಾರ್ವಭೌಮ ಸರಕಾರವು ಜನತೆಯ ಕೃಪೆಯಿಂದ ಬಾಳುತ್ತಿರುವದೆಂಬುದನ್ನು ನಿರಂಕುಶವರ್ತಿಗಳಾದ ಅರಸರು ತಿಳಿಯಬೇಕು. ಇಂದು ಜನಾಂಗವು ಐಕ್ಯಮತ್ಯದಿಂದ ಅಹಿಂಸಾ ಹಾಗೂ ಸತ್ಯವನ್ನನುಸರಿಸಿ ಚಳವಳ ಮಾಡಿದರೆ ಸಾರ್ವಭೌಮ ಸರಕಾರವನ್ನು ತೆಗೆದು ಹಾಕಿ ಜನತೆಯ ಸರ್ಕಾರವನ್ನು ಸ್ಥಾಪಿಸುವದು ಸಾಧ್ಯವಿದೆ.

ಆದ್ದರಿಂದ ನನಗೆ ಕಾಣುವದೇನಂದರೆ-ಸರ್ ಸಿ. ಪಿ. ರಾಮಸ್ವಾಮಿ ಐಯ್ಯರರು ಮತ್ತು ಅವರಂಥ ಮನೋಭಾವವುಳ್ಳ ದಿವಾನರು ಜನತೆಗೆ ದುರ್ಬೋಧನೆಯನ್ನು ಕೊಡುವವರು. ಕಾಂಗ್ರೆಸು ಅಖಂಡ ಸಂಸ್ಥೆಯೆಂಬುದನ್ನು ಮರೆತು, ಕಾಂಗ್ರೆಸ್ ಕೆಲಸಗಾರರನ್ನು ಅತ್ಯಾಚಾರಕ್ಕೊಳಪಡಿಸುವ ಈ ಯತ್ನವು ಅಖಂಡವಾದ ಸೂರ್ಯನ ಪ್ರಭೆಯನ್ನು ತನ್ನ ಪುಟ್ಟ ಕೈಗಳಿಂದ ಮರೆ ಮಾಡಲು ಯತ್ನಿಸಿದ ಬಾಲಕನ ಪ್ರಯತ್ನದಂತೆಯೇ ಸರಿ. ಇದರಿಂದ ಸಂಸ್ಥಾನಾಧೀಶರ ಮೇಲೆ ಜನತೆಯು ಅಸಮಾಧಾನಗೊಳ್ಳುವದೇ ವಿನಹ ಬೇರೆ ಇಲ್ಲ. ಆದ್ದರಿಂದ ನಾನು ಅರಸರಿಗೂ ಮತ್ತು ಅವರ ಹಿತಬೋಧಕರಿಗೂ ಹೇಳುವದೇನಂದರೆ ಸಮಯದ ವಾತಾವರಣವನ್ನರಿತು ಅವರು ಅದಕ್ಕೆ ಹೊಂದಿಕೊಳ್ಳಬೇಕು. ತತ್ಕಾಲಕ್ಕೆ ಈ ಸ್ವಾತಂತ್ರ್ಯ ಚಳವಳವನ್ನು ತಮ್ಮ ಅತ್ಯಾಚಾರದಿಂದ ಕುಗ್ಗಿಸಬಹುದು. ಆದರೆ ಅದನ್ನು ಸಮೂಲವಾಗಿ ನಾಶಪಡಿಸುವದು ದುಸ್ತರವಾಗಿದೆ. ನಾನು ಇಲ್ಲಿ ಹೇಳುವುದೇನಂದರೆ-ಕೇಂದ್ರ ಸರ್ಕಾರವೂ ಸಹ ತನ್ನ ಅಂಜಿಕೆಯನ್ನು ಬದಿಗೊತ್ತಿ ಸಂಸ್ಥಾನಾಧೀಶರ ಬೆಂಬಲಕ್ಕೆ ಹೇಗೆ ತಯಾರಾಗಿದೆಯೋ ಹಾಗೆಯೇ ಆ ಕುತೂಹಲ ದೃಷ್ಟಿಯಿಂದ ಜನತೆಯ ಕೇಳಿಕೆಯನ್ನು ಪರಿಶೀಲಿಸಿ ತನ್ನ ಪ್ರತಿಷ್ಠೆ ಹಾಗೂ ಪ್ರಗತಿಯನ್ನು ಉಳಿಸಿಕೊಳ್ಳಬೇಕು. ಜನತೆಯನ್ನು ನಿರ್ಲಕ್ಷಿಸಿ ನಿರಂಕುಶಾಧಿಕಾರವನ್ನು ನಡೆಸುತ್ತಿದ್ದ ದಿನಗಳು ಕಳೆದು ಹೋದವು. ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಂಗೀಕರಿಸಿರುವ ಕೇಂದ್ರ ಸರ್ಕಾರವು ಕಾಂಗ್ರೆಸಿನ ಮೇಲೆ ಸಂಸ್ಥಾನಗಳಲ್ಲಿ ಹೊರಿಸುತ್ತಿರುವ ಆರೋಪಗಳನ್ನು ಸಹಿಸುವುದು ಹೇಗೆ? ಈ ಆರೋಪಗಳು ಒಂದು ವಿಧದಿಂದ ಕೇಂದ್ರ ಸರ್ಕಾರದ ಪ್ರಗತಿಯನ್ನು ಕೆಳಮಟ್ಟಕ್ಕೆ ತರುವುದಿಲ್ಲವೇ?

ತಿರುವಾಂಕೂರು ಪ್ರಜೆಗಳಿಗೆ ನನ್ನ ಬುದ್ಧಿವಾದವಿಷ್ಟೆ-ಈಗಾಗಲೇ ಕೆಲವು ಕೈಸೆರೆಗಳು ನಡೆದಿವೆ. ಅವು ಫಲದಾಯಕವಾಗಬೇಕಾದರೆ ಪ್ರಜೆಗಳು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಎಲ್ಲಿಯಾದರೂ ಹಿಂಸಾ ತತ್ವವು ಹೊರಬರುವದೆಂಬ ನಂಬಿಕೆ ಇದ್ದರೆ ಮೆರವಣಿಗೆಗಳನ್ನಾಗಲೀ, ಇತರ ಯಾವ ಕಾರ್ಯಕ್ರಮಗಳನ್ನಾಗಲೀ ನಿಲ್ಲಿಸಿ. ಎಲ್ಲರೂ ವಿಧಾಯಕ ಕಾರ್ಯಕ್ರಮಕ್ಕೆ ತೊಡಗಿರಿ. ಕಾಯಿದೆ ಭಂಗ ಚಳವಳವೇ ನಮ್ಮ ಧ್ಯೇಯಸಾಧನೆಯ ಹೆದ್ದಾರಿಯೆಂದು ತಿಳಿದುಕೊಳ್ಳುವದು ಹಿತವಲ್ಲ. ನಾನು ಪರಿಸ್ಥಿತಿಯನ್ನು ಕೂಲಂಕುಷವಾಗಿ ವಿವೇಚಿಸಿ ನನ್ನ ಅಭಿಪ್ರಾಯವನ್ನು ಚಳವಳದ ವಿಚಾರ ಕೊಡುವೆನು. ಕಾಯಿದೆ ಭಂಗ ಚಳವಳವು ಸತ್ಯಾಗ್ರಹದ ಒಂದು ಸಣ್ಣ ಭಾಗ. ವಿದ್ಯಾವಂತ, ಅವಿದ್ಯಾವಂತ, ಅಬಾಲವೃದ್ಧರಾದಿಯಾಗಿ ಎಲ್ಲರೂ ಅಹಿಂಸಾ ತತ್ವದ ಮಹಿಮೆಯನ್ನರಿತು ಒಂದಾಗಲಿ. ಈ ಕೆಲಸದಲ್ಲಿ ವಿದ್ಯಾರ್ಥಿಗಳೂ ಸಹ ಭಾಗವಹಿಸಬಹುದು. ಆತುರವು ಅನರ್ಥಕಾರಿಯೆಂಬುದನ್ನು ಸತ್ಯಾಗ್ರಹಿಗಳು ತಿಳಿಯಲಿ. ಸತ್ಯ ಮತ್ತು ಅಹಿಂಸೆಯಿಂದ ತಮ್ಮ ಚಳವಳವನ್ನು ಶಿಸ್ತಿನಿಂದ ಮುಂದುವರಿಸುವೆವೆಂದು ಯಾವಾಗ ಅವರು ಪಣತೊಡುವರೋ ಅಂದೇ ಅವರಿಗೆ ಸ್ವಾತಂತ್ರ್ಯ ಕಟ್ಟಿಟ್ಟಂತೆ ಎಂಬುವನ್ನು ಮನಸ್ಸಿನಲ್ಲಿಡಲಿ.

ಯೂರೋಪಿನ ರಾಜಕೀಯ ರಂಗ.

ನಾಜೀರಾಕ್ಷಸನ ಅಧಿಕಪ್ರಸಂಗ – ಬ್ರಿಟಿಷರ ತೇಜೋಭಂಗ

ಝೆಕೋಸ್ಲೋವಾಕಿಯಾದ ಸಮಾಧಿ! ಅತ್ಯಾಚಾರದ ಪರಮಾವಧಿ!! ಪ್ರಜಾಸತ್ತಾತ್ಮಕ ರಾಜ್ಯ ಕ್ರಮದ ಅಂತ್ಯ ವಿಧಿ!!! ಮುಂದಿನ ಘೋರ ಸಂಗ್ರಾಮದ ಕಳಹದಿ!!!!

ಕಳೆದ ಸೆಪ್ಟಂಬರಿನಲ್ಲೊಮ್ಮೆ ಮಧ್ಯ ಯೂರೋಪದ ರಾಜಕೀಯ ಗಗನದಲ್ಲಿ ಯುದ್ಧ ಕಾರ್ಮೋಡಗಳು ತುಂಬಿ ಎಲ್ಲರ ದೃಷ್ಟಿಯೂ ಅತ್ತ ಕಡೆ ಕೇಂದ್ರೀಕರಿಸಿತ್ತು. ಆ ಸಮಯದಲ್ಲೇ ಜರ್ಮನಿಯ ಭಾಗ್ಯವಿಧಾತನಾದ ಹಿಟ್ಲರನು ಝೆಕೋಸ್ಲೋವಾಕಿಯಾದ ಮೇಲೆ ತನ್ನ ದೃಷ್ಟಿಯಲ್ಲಿ ಬೀರಿದ ಪರಿಣಾಮವಾಗಿ ಬ್ರಿಟಿಷ್ ಮತ್ತು ಫ್ರೆಂಚರು ತಮ್ಮ ಗಂಟಲಿನ ನೀರೊಣಗಿಸಿಕೊಂಡು ಮ್ಯೂನಿಕ್‌ನಲ್ಲಿ ಒಪ್ಪಂದ ಮಾಡಿ ಝೆಕೋಸ್ಲೋವಾಕಿಯಾದಲ್ಲಿ ಸುಡೆಟನ್ ಜರ್ಮನರು ಬಹುಮತದಲ್ಲಿರುವ ಪ್ರಾಂತಗಳನ್ನು ಬಿಟ್ಟುಕೊಟ್ಟುದಾಯಿತು. ಜರ್ಮನಿಯು, ಹಸಿದ ಹುಲಿಗೆ ಆಹಾರ ಸಿಕ್ಕೊಡನೇ ಅದನ್ನು ಜೀರ್ಣಿಸಿಕೊಳ್ಳುವ ವರೆಗೆ ಹೇಗೆ ಸುಮ್ಮಗಿರುವದೋ ಹಾಗೇ ತಾನು ವಶಪಡಿಸಿಕೊಂಡಿದ್ದ ಪ್ರಾಂತದ ವ್ಯವಸ್ಥೆಯು ಸರಿಯಾಗುವ ವರೆಗೆ ಸುಮ್ಮನಿತ್ತು. ಈಗ ಒಮ್ಮಿಂದೊಮ್ಮೆ ಝೆಕೋಸ್ಲೋವಾಕಿಯಾದ ಮೇಲೆ ಬಿದ್ದು ವಶಪಡಿಸಿ ಬಿಟ್ಟಿದೆ.

ಝೆಕೋಸ್ಲೋವಾಕಿಯಾದ ನಿಧನ.

ಝೆಕೋಸ್ಲೋವಾಕಿಯಾದಲ್ಲಿ ಸ್ಲೋವಾಕಿಯಾ ಎಂಬ ಒಂದು ಸಣ್ಣ ಪ್ರಾಂತವಿದೆ. ಇಲ್ಲಿ ಜರ್ಮನಿ ನಾಜಿಗಳ ಹಾವಳಿ ಜಾಸ್ತಿಯಿತ್ತು. ಇದು ಝೆಕ್ಕರ ಕೇಂದ್ರ ಸರಕಾರಕ್ಕೆ ಒಳಪಟ್ಟದ್ದು ಇದರ ಪರಿಪಾಲನೆಯು ಅದಕ್ಕೆ ಅಡಗಿತ್ತು. ಜರ್ಮನಿಯು ಇಲ್ಲಿಯ ನಾಜಿಗಳ ಸಹಾಯದಿಂದ ಹೇಗಾದರೂ ಅದನ್ನು ತಮ್ಮ ಧ್ವಜದಡಿಯಲ್ಲಿ ತರಬೇಕೆಂದು ಹವಣಿಸುತ್ತಿತ್ತು. ಆದ್ದರಿಂದ ಜರ್ಮನ್ ಸರಕಾರವು ಅಲ್ಲಿಯ ನಾಜಿಗಳಿಗೆ ಸ್ವಾತಂತ್ರ್ಯ ಚಳವಳ ಹೂಡಲು ಪ್ರೋತ್ಸಾಹ ಕೊಡುತ್ತಾ ಬಂದಿತು. ಮ್ಯೂನಿಕ್ ಒಪ್ಪಂದದ ನಂತರ ಇಲ್ಲಿಯ ಸ್ವಾತಂತ್ರ್ಯ ಚಳವಳಿಯು ಪ್ರಖರವಾಗಿ ನಡೆಯುತ್ತಾ ಬಂದಿತ್ತು. ಇಲ್ಲಿಯ ಅವ್ಯವಸ್ಥೆಯನ್ನು ನಿವಾರಿಸುವ ಉದ್ದಿಶ್ಯದಿಂದ ಝೆಕ್ಕ ಕೇಂದ್ರ ಸರಕಾರವು ಮಿಲಿಟರಿಯನ್ನು ಕಳುಹಿಸಿ ಅಲ್ಲಿಯ ಮಂತ್ರಿಮಂಡಳವನ್ನು ಕಿತ್ತೊಗೆಯಿತು. ಈ ಮಂತ್ರಿಮಂಡಳದವರು ಹಿಟ್ಲರನ ಹತ್ತಿರ ಈ ವಿಚಾರ ಹೇಳಿದರು. ಹಿಟ್ಲರನಿಗೆ ಇದರಿಂದ ಅಂಗೈಯಲ್ಲೇ ಸ್ವರ್ಗಪ್ರತಿಷ್ಠೆಯಾದಂತಾಯಿತು. ಅವನಿಗೆ ಬೇಕಾಗಿದ್ದದ್ದಾದರೂ ಇದೇ. ನಾನಾರೀತಿಯಲ್ಲಿ ಝೆಕ್ ಸರಕಾರದ ವಿರೋಧ ಪ್ರಚಾರ ಹೊರಡಿಸಿ ದೇಶದಲ್ಲೆಲ್ಲಾ ಹಬ್ಬಿಸಿದನು. ನಂತರ ತನ್ನ ಸುಸಜ್ಜಿತ ಸೈನ್ಯದಿಂದೊಡಗೂಡಿ ಝೆಕೋಸ್ಲೋವಾಕಿಯಾವನ್ನು ನುಗ್ಗಿ 'ಶರಣಾಗತನಾಗು' ಎಂಬ ತನ್ನ ಅಧಿಕಾರವಾಣಿಯಿಂದ ಸ್ವಾತಂತ್ರ್ಯ ಭಾಗ್ಯಾಕಾಶದಲ್ಲಿ, ಪ್ರಜಾಸರ್ಕಾರವನ್ನು ನಡೆಸಿ ನಲಿಯುತ್ತಿದ್ದ ಜನಾಂಗದ ಕೈಯಿಂದ ಶಸ್ತ್ರಗಳನ್ನು ಕೆಳಗಿಡಿಸಿ ವಶಪಡಿಸಿಕೊಂಡು ಬಿಟ್ಟನು. ಹೀಗೆ ದಬ್ಬಾಳಿಕೆಯಿಂದ ಜರ್ಮನಿಯು ತನ್ನ ಪಾಶವೀಶಕ್ತಿಯನ್ನು ನಿರಪರಾಧಿ ರಾಷ್ಟ್ರದ ಮೇಲೆ ತೋರಿ ಯಾವದೊಂದು ರಕ್ತಪಾತವಿಲ್ಲದೆ ಬರೇ ಬಾಯಿಮಾತಿನಿಂದಲೇ ತನ್ನ ವಿಜಯ ಪತಾಕೆಯಡಿಗೆ ಸೇರಿಸಿಕೊಂಡಿತು. ಆದ್ದರಿಂದ ವಾರದ ಹಿಂದೆ ಸ್ವತಂತ್ರವಾಗಿ ಪ್ರಜಾಪ್ರಭುತ್ವದ ಸರ್ಕಾರ ನಡೆಸಿಕೊಂಡು ಶಾಂತ ವಾತಾವರಣದಲ್ಲಿ ಆನಂದಿಸುತ್ತಿದ್ದ ಆ ರಾಷ್ಟ್ರವು ಇಂದು ಜಗತ್ತಿನಲ್ಲೇ ಇಲ್ಲದೆ ಮಾಯವಾಗಿದೆ. ನಾಝಿ ಕಾಳರಕ್ಕಸನ ದವಡೆಗೆ ಸಿಲುಕಿ ತನ್ನ ಪ್ರತಿಷ್ಠೆಯನ್ನು ಕಳಕೊಂಡಿದೆ.

ರುಥೇನಿಯಾದ ಶೋಧನ.

ಹೀಗೆ ಒಂದು ಕಡೆಯಲ್ಲಿ ಗಲಭೆಗಳಾಗುತ್ತಿರುವಾಗ ಸಿಕ್ಕಿದ್ದು ಬಿಟ್ಟರೆ ಕಲಿತದ್ದು ಬುದ್ಧಿಯಲ್ಲ'ವೆಂಬ ನಾಣ್ಣುಡಿಯಂತೆ ಹಂಗೇರಿಯವು ಅದರ ನೆರೆಯಲ್ಲಿರುವ ರಾಷ್ಟ್ರವಾದ ರುಥೇನಿಯಾದ ಮೇಲೆ ಕೈ ಮಾಡಿದೆ. ಮತ್ತೊಂದೆಡೆ ಪೋಲೆಂಡು ರುಥೇನಿಯಾವನ್ನು ಆಕ್ರಮಿಸುತ್ತಿದೆ. ಈ ಪರಿಣಾಮದಿಂದಾಗಿ ಮಧ್ಯೆ ಸಿಕ್ಕಿರುವ ರುಥೇನಿಯಾದ ದೀನ ಸ್ಥಿತಿಯು ಅವರ್ಣನೀಯವಾಗಿದೆ. ಆದ್ದರಿಂದ ರುಥೇನಿಯಾವು ಈ ಅತಿಕ್ರಮದ ವಿಚಾರವಾಗಿ ಯೂರೋಪಿನ ಇತರ ರಾಷ್ಟ್ರಗಳಿಗೆ ಮೊರೆಯಿಟ್ಟಿದೆ. ಹಂಗೇರಿಯು ರುಥೇನಿಯಾವನ್ನು ವಶಪಡಿಸಿಕೊಂಡಲ್ಲಿ ತನ್ನ ಆಡಳಿತ ಕ್ರಮವನ್ನು ಸರಿಪಡಿಸುತ್ತಿದೆ. ಈಗ ಜರ್ಮನಿಯು ಪೋಲೆಂಡನ್ನು ಎರಡು ಪಾರ್ಶ್ವಗಳಲ್ಲಿಯೂ ಆಕ್ರಮಿಸಿಕೊಂಡಿರುವದರಿಂದಲೂ, ಹಂಗೆರಿಯನ್ನು ಸಮೀಪಿಸಿರುವದರಿಂದಲೂ, ಯೂರೋಪಿನ ಇತರ ರಾಷ್ಟ್ರಗಳ ತಾಟಸ್ಥ್ಯಭಾವದಿಂದಲೂ, ಹಂಗರಿ ಮತ್ತು ಪೋಲೆಂಡು ರಾಷ್ಟ್ರಗಳು ಕಳವಳಗೊಂಡಿವೆ.

ರೊಮೇನಿಯಾದ ವ್ಯಸನ.

ಜರ್ಮನೀ ಸರಕಾರವು ರೊಮೇನಿಯಾ ಸರಕಾರದವರಿಗೆ ಕೆಲವು ಶರತ್ತುಗಳನ್ನು ಹಾಕಿರುವದು. ಅದರ ಮೇರೆ ರೊಮೇನಿಯವು ತನ್ನಲ್ಲಿರುವ ಎಲ್ಲಾ ರಫ್ತು ವ್ಯಾಪಾರವನ್ನು ಜರ್ಮನಿಗೊಪ್ಪಿಸಿ ಅದು ಬರೇ ವ್ಯವಸಾಯವೇ ಮುಖ್ಯ ಕಸುಬುಳ್ಳ ರಾಜ್ಯವಾಗಬೇಕೆಂದಿತ್ತು. ಆದರೆ ರೊಮೇನಿಯಾ ಸರ್ಕಾರದವರು ಈ ಶರತ್ತನ್ನು ತಿರಸ್ಕರಿಸಿರುವದಲ್ಲದೆ ಅದರ ರಾಜರಾದ ಕೆರೋಲ್‌ರವರು ತಮ್ಮ ಮಂತ್ರಿಮಂಡಳವನ್ನು ನೆರೆಯಿಸಿ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳು ತಮಗೆ ಸಹಾಯವನ್ನೀವ ಪಕ್ಷದಲ್ಲಿ ಮಧ್ಯಯೂರೋಪದ ಇತರ ರಾಷ್ಟ್ರಗಳಾದ ಪೋಲಂಡ್, ಬಲ್ಗೇರಿಯಾ, ರೊಮೇನಿಯಾ, ಗ್ರೀಸ್, ತುರ್ಕಿ ಮತ್ತು ಯುಗುಸ್ಲೋವಿಯಾ ಇವುಗಳನ್ನು ಒಟ್ಟುಗೂಡಿಸಿ ಜರ್ಮನಿಯನ್ನು ಎದುರಿಸಲು ತಯಾರಿರುವೆವೆಂದು ತೀರ್ಮಾನಿಸಿರುವರು. ಈ ಬಾಲ್ಕನ್ ಪರ್ಯಾಯದ್ವೀಪದ ರಾಷ್ಟ್ರಗಳೆಲ್ಲವೂ ಒಂದುಗೂಡುವ ಸಂದರ್ಭವು ಕಂಡು ಬರುತ್ತಿದೆ.

ಬ್ರಿಟಿಷರ ಧೋರಣ.

ಮಿ. ಚೇಂಬರ್‌ಲೇನರು ಜರ್ಮನರ ಈ ಆಕ್ರಮಣದ ವಿಚಾರ ಭಾಷಣ ಮಾಡುತ್ತಾ, ತನ್ನ ಈಗಿನ ಈ ವರ್ತನೆಯಿಂದ ಜರ್ಮನಿಯು ಕಳೆದ ಮ್ಯೂನಿಕ್ ಒಪ್ಪಂದದ ಶರತುಗಳನ್ನು ಪೂರ್ಣ ಮುರಿದಂತಾಗಿದೆಯೆಂದೂ, ಜರ್ಮನರು ಮಾಡಿದ ಮತ್ತು ಮಾಡುತ್ತಿರುವ ಭಯಂಕರ ಘಟನೆಗಳಿಂದಾಗಿ ಇಡೀ ಜಗತ್ತೇ ಈ ನಾಜೀ ರಾಜ್ಯದ ರಾಕ್ಷಸಿ ಕಾರ್ಯಗಳನ್ನು ನೋಡಿ ತಲ್ಲಣಗೊಂಡಿದೆಯೆಂದೂ, ಶಾಂತಿ ರಕ್ಷಣೆಗಾಗಿ ತಾವು ಏನನ್ನು ಬೇಕಾದರೂ ಮಾಡಲು ಸಿದ್ಧರಿದ್ದೇವೆಂದೂ, ನೂರಾರು ವರ್ಷಗಳಿಂದ ಸ್ವಾತಂತ್ರ್ಯದ ಭಾಗ್ಯಾಕಾಶದಲ್ಲಿ ಸುಖಿಸಿದ ತಾವು ಇನ್ನೊಬ್ಬರಿಗೆ ಶರಣಾಗತರಾಗುವದಿಲ್ಲವೆಂದೂ, ಬರೇ ರಾಜ್ಯವಿಸ್ತರಣಾಲಾಲಸೆಯಿಂದ ರಕ್ತಧಾರೆಗಳನ್ನು ಸುರಿಸಿ ಬಡ ರಾಷ್ಟ್ರಗಳನ್ನು ನಿರ್ಮೂಲಮಾಡುವ ಈ ಪಾಶವೀಕೃತ್ಯವನ್ನು ತಾವು ಅಂಗೀಕರಿಸುವದಿಲ್ಲವೆಂದೂ, ತಮಗೆ ವಿರುದ್ಧ ಯಾರಾದರೂ ಹೋರಾಡಲು ಸಿದ್ಧರಾದರೆ ನಾವು ಹೇಡಿಗಳಂತೆ ಹಿಂದುಳಿಯಲಾರೆವೆಂದೂ, ಆದ್ದರಿಂದ ಈ ಧೋರಣಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಪ್ರತಿಯೊಬ್ಬನೂ ಸಹಾಯಮಾಡಬೇಕೆಂದೂ ಘೋಷಿಸಿದರು.

ಫ್ರಾನ್ಸಿನ ಘೋಷಣೆ.

ಜರ್ಮನಿಯು ಝೆಕೋಸ್ಲೋವಾಕಿಯಾದಲ್ಲಿ ಒಂದು ಬಿಂದು ರಕ್ತವನ್ನು ಚೆಲ್ಲದಲೇ ನಡೆಸಿದ ಕೈವಾಡವನ್ನು ಫ್ರಾನ್ಸು ಖಂಡಿಸಿದೆ. ಇದು ನ್ಯಾಯಬಾಹಿರವಾದ ಕಾರ್ಯವೆಂದೂ, ಪ್ರಜಾಸತ್ತಾಕವಾಗಿ ಸ್ವತಂತ್ರವಾಗಿದ್ದುಕೊಂಡು ಶಾಂತತೆಯಲ್ಲಿ ಓಲಾಡುತ್ತಿದ್ದ ಈ ಸಣ್ಣ ರಾಷ್ಟ್ರಗಳನ್ನು ಒಂದೊಂದಾಗಿ ಕಬಳಿಸುತ್ತಿರುವ ಹಿಟ್ಲರನ ಧೋರಣವು ಪ್ರಜಾಸತ್ತಾತ್ಮಕ ಸೂತ್ರಕ್ಕೇ ಹಾನಿಕಾರಿಯೆಂದೂ ಆದ್ದರಿಂದ ಅವರ ಈ ವರ್ತನೆಯನ್ನು ಖಂಡಿಸುವದಲ್ಲದೆ ಈ ಸಣ್ಣ ಪ್ರಾಂತಗಳಿಗೆ ಬೆಂಬಲ ಕೊಡುವರ್ಥದ ಒಂದು ಹೇಳಿಕೆಯನ್ನು ಜರ್ಮನಿ ಸರಕಾರಕ್ಕೆ ಕೊಟ್ಟಿದೆ.

ರಷ್ಯಾದ ಖಂಡನ.

ರಷ್ಯಾವೂ ಜರ್ಮನರ ಈಗಿನ ಅತ್ಯಾಚಾರದಿಂದ ಪೂರಾ ಅತೃಪ್ತಿಗೊಂಡಿದೆಯೆಂದೂ, ಜರ್ಮನರು ರಾಜ್ಯವಿಸ್ತರಣಾಲಾಲಸೆಯಿಂದ ಬಡ ರಾಷ್ಟ್ರಗಳನ್ನು ಬಗ್ಗುಬಡಿಯುತ್ತಿರುವದು ಭಯಂಕರ ವಿಚಾರವೆಂದೂ, ಝೆಕೊಸ್ಲೋವಾಕಿಯಾವನ್ನು ಸಾಧಾಕ್ರಾಂತವನ್ನಾಗಿ ಮಾಡಿ ಉಕ್ರೈನ ಪ್ರಾಂತಕ್ಕೆ ಕಾಲಿಕ್ಕುವ ಜರ್ಮನರ ಧೋರಣೆಯನ್ನು ತಾನು ಖಂಡಿಸದೆ ಇರಲಾರದೆಂದೂ, ಹಾಗೇ ಜರ್ಮನರು ಈ ವಿಚಾರವನ್ನು ನಿರ್ಲಕ್ಷಿಸಿ ಮುಂದುವರಿವದ್ದೇ ಆದರೆ ತಾವು ಪೋಲೆಂಡಿಗೆ ಸಹಾಯವನ್ನಿತ್ತು ಜರ್ಮರ ಕಣ್ಣಿನಲ್ಲಿಯ ರಕ್ತವನ್ನಿಳಿಸುತ್ತೇವೆಂದೂ ಹೇಳಿ ಜರ್ಮನರ ಧೋರಣೆಯನ್ನು ಖಂಡಿಸಿರುವರು.

ಝೆಕ್ಕರ ಜೀವನ.

ಜರ್ಮನರು ಝೆಕೋಸ್ಲೋವಾಕಿಯಾವನ್ನು ಕೈವಶಪಡಿಸಿಕೊಂಡ ವಾರ್ತೆಯನ್ನು ಕೇಳಿದೊಡನೇ ಕಳೆದ ಘೋರ ಯುದ್ಧದ ನಂತರ ಸ್ವತಂತ್ರವಾಗಿದ್ದ ಆ ರಾಷ್ಟ್ರದ ಸ್ವಾತಂತ್ರ್ಯಪ್ರಿಯ ಪ್ರಜೆಗಳನೇಕರು ನಾಜೀಗಳ ಅತ್ಯಾಚಾರಕ್ಕೆ ಸಿಕ್ಕಿ ನರಳುವದಕ್ಕಿಂತ ಪ್ರಾಣತ್ಯಾಗವೇ ಲೇಸೆಂದು ಆತ್ಮಹತ್ಯ ಮಾಡಿಕೊಂಡಿರುವರು. ಅನೇಕರು ಮಾಡಿನಿಂದ ಕೆಳಗೆ ಹಾರಿಯೂ, ವಿಷಪಾನದಿಂದಲೂ, ಗುಂಡಿನ ಬಲಿಯಿಂದಲೂ ತಮ್ಮ ಜೀವನವನ್ನು ಸ್ವಾತಂತ್ರ್ಯಾಪಹರಣದ ವೇದಿಕೆಯಲ್ಲಿ ಹೋಮಿಸಿ ಪುನೀತರಾದರು. ಝೆಕೋಸ್ಲೋವಾಕಿಯಾದ ಅಧ್ಯಕ್ಷರಾಗಿದ್ದ ಡಾ. ಬೆನೆಸ್‌ರವರು ಝೆಕೊಸ್ಲೋವಾಕಿಯಾವು ಇನ್ನೂ ಜರ್ಮನರ ಕೈವಶವಾಗಿಲ್ಲವೆಂದೂ, ತನ್ನ ದೇಹದಲ್ಲಿ ಒಂದು ತೊಟ್ಟು ರಕ್ತವು ಹರಿಯುತ್ತಿರುವವರೆಗೆ ರಾಷ್ಟ್ರವು ಯಾರ ಕೈವಶವಾಗಲಾರದೆಂದೂ ನುಡಿದಿರುವರಂತೆ. ನಾಝಿಗಳ ಉಪಟಳವೊಂದೆಡೆ, ಪುನರ್ಘಟನೆಗೊಳಿಸಲ್ಪಡುತ್ತಿರುವ ರಾಷ್ಟ್ರದ ಪ್ರಾಂತಿಕ ಬಿಕ್ಕಟ್ಟುಗಳು ಮತ್ತೊಂದೆಡೆ, ಇದರಿಂದ ಝೆಕ್ಕರ ಪರಿಸ್ಥಿತಿಯು ಹೃದಯದ್ರಾವಕವಾಗಿರುವದು.

ನಮ್ಮ ಬಿನ್ನಣ.

ವಾಚಕರೇ, ಕಳೆದ ಘೋರ ಯುದ್ಧದ ನಂತರ ಮಧ್ಯಯೂರೋಪದಲ್ಲಿ ಉದ್ಭವಿಸಿದ ಈ ಚಿಕ್ಕ ಚಿಕ್ಕ ರಾಷ್ಟ್ರಗಳಲ್ಲಿ ಒಂದಾದ ಝೆಕೊಸ್ಲೋವಾಕಿಯಾವು ತನ್ನ ತಾರುಣ್ಯಕ್ಕೆ ಕಾಲಿಡುವಾಗಲೇ ನಾಝಿ ರಾಕ್ಷಸನ ಕರಾಳ ಹೊಡೆತಕ್ಕೆ ಆಹುತಿಯಾಗಿ ಅಕಾಲಮರಣವನ್ನೈದಿತು. ಜರ್ಮನಿಯು ಈ ಮೊದಲು ಮಾಡಿದ ವಾರ್ಸೆಲ್ ಒಪ್ಪಂದವೇನಾಯಿತು? ಕಳೆದ ಸಪ್ಟಂಬರಿನಲ್ಲಿ ಚತುರ್ರಾಷ್ಟ್ರಗಳೊಳಗೆ ಮ್ಯೂನಿಚ್‌ನಲ್ಲಾದ ಒಪ್ಪಂದವೇನಾಯಿತು? ಒಪ್ಪಂದದ ಶರತ್ತುಗಳನ್ನು ಒಂದೊಂದಾಗಿ ತೆಗೆದು ಗಾಳಿಗೆ ಬಿಸಾಡಿ ತನ್ನ ರಾಜ್ಯವಿಸ್ತರಣಾ ಹಾಗೂ ಸಾಹಿತ್ಯ ಸಾಮಗ್ರಿಗಳ ಸರಬರಾಯಿಗಾಗಿ ಫಲವತ್ತಾದ ಉಕ್ರೈನ ಪ್ರಾಂತವನ್ನು ಕಿತ್ತುಕೊಳ್ಳಬೇಕೆಂದು ಜರ್ಮನಿಯು ಹವಣಿಸುತಿತ್ತು. ಆ ದಾರಿಯಲ್ಲಿ ಮುಳ್ಳಿನಂತಿದ್ದ ಝೆಕೋಸ್ಲೋವಾಕಿಯಾವು ಇಂದಿಗೆ ನಿರಾಯಾಸವಾಗಿ ನಿರ್ನಾಮಗೊಳಿಸಲ್ಪಟ್ಟಿತು. ಮ್ಯೂನಿಚಿನಲ್ಲಿ ಸೇರಿ ಝೆಕ್ ರಾಷ್ಟ್ರವನ್ನು ಬಲಿಕೊಟ್ಟ ಕಾಲಕ್ಕೆ ಬ್ರಿಟನರು ಝೆಕ್ಕರಿಗೆ ಮಾತು ಕೊಟ್ಟದ್ದಾದರೂ ಏನು? ಅನ್ಯರಾಷ್ಟ್ರಗಳು ಝೆಕೊಸ್ಲೋವಾಕಿಯಾವನ್ನು ಪ್ರವೇಶಿಸಿ ಬಲಾತ್ಕಾರದಿಂದ ತೊಂದರೆಪಡಿಸಿದ ಪಕ್ಷ ತಾವು ಸಹಾಯ ಮಾಡುವೆವೆಂದು ಫ್ರಾನ್ಸಿನೊಡಗೂಡಿ ಭರವಸೆಯಿತ್ತಿತ್ತು. ಇಂದಾದರೂ ಝೆಕೊಸ್ಲೋವಾಕಿಯಾವು ಜಗತ್ತಿನಿಂದಲೇ ಮಾಯವಾಗುತ್ತಿರುವಾಗ ಪ್ರಜಾಸತ್ತಾತ್ಮಕ ರಾಜ್ಯಗಳೆಂದು ಹೊಗಳಿಸಿಕೊಳ್ಳುವ ಈ ರಾಷ್ಟ್ರಗಳು ಕಣ್ಣೆವೆಯಿಕ್ಕದೆ ನೋಡುತ್ತಿರುವವು. ಉಕ್ರೈನವು ಜರ್ಮನರ ವಕ್ರದೃಷ್ಟಿಗೆ ಬಿದ್ದಡೆ ಪರಿಣಾಮವೇನಾಗುವದೋ ನಿರೀಕ್ಷಣೀಯ.

ಭಾರತದ ಸ್ಥಿತಿ.

ಇಂದಿನ ನಾಗರೀಕತೆಯ ಪರಿಣಾಮದಿಂದಾಗಿ ಪರದೈವದಿಂದ ದೂರ ಸರಿಯುತ್ತಿರುವೆವು.

ಭಾರತವು ಏಕ ಜನಾಂಗ, ರೈಲ್ವೆಗಳೇ ಇಂದಿನ ಭಿನ್ನಾಭಿಪ್ರಾಯಕ್ಕೆ ಕಾರಣ.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಭಾರತದ ಸ್ಥಿತಿಯು ಹೃದಯವಿದ್ರಾವಕವಿರುವುದು. ಅದನ್ನು ಯೋಚಿಸುವಾಗಲೇ ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಬರುವದು, ಕೈಗಳು ನಡುಗಿ ಶಿಥಿಲವಾಗುವವು. ಹೃದಯಾಂತರಾಳದಲ್ಲಿರುವ ವಿಚಾರಗಳನ್ನು ಈ ಲೇಖನಿಯ ಮುಖಾಂತರ ವಿವರಿಸಲಾಗುವದೇ ಎಂಬ ಹೆದರಿಕೆಯುಂಟಾಗಿದೆ. ಇಂದು ಭಾರತ ಮಾತೆಯು ತನ್ನ ವರ್ಚಸ್ಸನ್ನು ಕಳೆದುಕೊಂಡು ಪರದಾಸ್ಯದ ಶೃಂಖಲೆಯಿಂದ ಬಂದಿತಳಾಗಿರುವದು ಬ್ರಿಟಿಷ್ ಜನಾಂಗದಿಂದಲ್ಲ; ಆಧುನಿಕ ನಾಗರೀಕತೆಯ ಅನುಕರಣೆಯ ಪರಿಣಾಮದಿಂದಾಗಿ. ಈ ಕರಾಳ ರಾಕ್ಷಸಿಯ ಕೈಯಲ್ಲಿ ಸಿಲುಕಿ ಮಾತೆಯು ತತ್ತರಿಸುತ್ತಿರುವಳು. ಆದರೆ ಅದರಿಂದ ಪಾರಾಗಲು ಇನ್ನೂ ದಾರಿಗಳು ಉಳಿಯದೆ ಇಲ್ಲ. ಆದರೆ ಪ್ರತಿ ದಿನಗಳೂ ಈ ದಾರಿಗಳನ್ನು ಮುಚ್ಚುತ್ತಾ ಬರುತ್ತಿವೆ. ಪ್ರಕೃತ ಮತಗಳ ವಿಚಾರ ತೆಗೆದುಕೊಳ್ಳುವ. ಗಾಂಧಿಜೀಯವರ ಮಾತಿನಲ್ಲಿ ಹೇಳುವದಾದರೆ, 'ಧರ್ಮವೇ ನನ್ನ ಪ್ರಾಣಾಧಾರ, ಆದರೆ ಭಾರತವು ಅಧಾರ್ಮಿಕವಾಗತೊಡಗಿದೆ. ನಾವು ನಮ್ಮ ಮೂಲಧಾರವಾಗಿರುವ ಪರಮೇಶ್ವರನಿಂದ ದೂರ ಸರಿಯುತ್ತಿರುವೆವು' ಎಂದು ಹೇಳಬಹುದು. ಹೇಗೆ ಬೆಳಗುವ ದೀಪದ ಕೆಳಗಡೆ ಕತ್ತಲೆ ಇರುವದೋ ಹಾಗೆಯೇ ಪ್ರತಿಯೊಂದು ಮತದಲ್ಲಿಯೂ ಕೆಲವು ವಿಧದ ತಪ್ಪು ಯಾ ಅಕೃತ್ಯಗಳು ಇದ್ದೇ ಇವೆ. ಇದಕ್ಕಿಂತಲೂ ಭಯಂಕರವಾದ, ಭಾರತದ ನಾಶಕ್ಕೆ ಕಾರಣವಾದ ಅಕೃತ್ಯಗಳೆಂದರೆ ನಾಗರೀಕತೆಯ ಸೋಗಿನಲ್ಲಿ ನಡೆಯುವಂಥವಾಗಿವೆ. ಧರ್ಮ ಧರ್ಮಗಳಿಗೆ ತಿಕ್ಕಾಟ ಬಂದು ಅದರಿಂದ ಉದ್ಭೂತವಾಗುವ ಯುದ್ಧದಲ್ಲಿ ಅನಾಹುತಗಳಾಗುವವೆಂಬುದು ನಿಜ. ಆದರೆ ಈ ನಾಗರೀಕತೆಯ ಅನುಕರಣೆಯ ಪರಿಣಾಮದಿಂದ ಆಗುವ ಅನಾಹುತವು ಅವರ್ಣನೀಯ. ಇದರ ಪರಿಣಾಮದಿಂದಾಗಿ ನಾಶಹೊಂದುವ ವ್ಯಕ್ತಿಗಳಿಗೆ ಲೆಕ್ಕವಿಲ್ಲ. ಬೆಂಕಿಯ ಜ್ವಾಲೆಗೆ ಮರುಳಾಗಿ ಪತಂಗಗಳು ಹೇಗೆ ಬೆಂಕಿಯಲ್ಲಿ ಬಿದ್ದು ನಾಶ ಹೊಂದುವವೋ ಅದೇ ರೀತಿಯಲ್ಲಿ ಈ ನಾಗರೀಕತೆಯ ಸೊಬಗಿಗೆ ಮೈಮರೆತು ಅದರ ಕರಾಳ ಪರಿಣಾಮಕ್ಕೆ ಎಷ್ಟೋ ಕುಟುಂಬ ಯಾಕೆ? ಜನಾಂಗಗಳೇ ನಾಶವಾಗುತ್ತಿವೆ. ಕೂಲಂಕುಶವಾಗಿ ವಿವರಿಸುವದಾದರೆ ಇಂದು ನಮ್ಮ ಆಧುನಿಕ ಸುಖ ಸಂಪತ್ತುಗಳಲ್ಲೊಂದಾದ ಮತ್ತು ಹಣದಾರಿಯ ದೂರವನ್ನು ಹತ್ತು ಹೆಜ್ಜೆಗಳಂತೆ ತೋರಿಸುವ ರೈಲ್ವೆ, ಜನರ ಹಿತರಕ್ಷಕರು ದೇಶದಲ್ಲಿ ಖಾನೂನನ್ನು ಸ್ಥಿಮಿತದಲ್ಲಿಡುವವರು. ಎಂದು ಹೊಗಳಿಸಿಕೊಳ್ಳುವ ವಕೀಲರು, ಕಷ್ಟ ಕಾಲದಲ್ಲಿ ರಕ್ಷಕರು ಮೃತ್ಯುವನ್ನು ಪರಿಹರಿಸಿ ಸಮಾಜೋದ್ಧಾರ ಮಾಡುವಂಥವರು ಎಂದೆಣಿಸಲ್ಪಡುವ ಡಾಕ್ಟರುಗಳು ಇವರೇ ಇಂದು ಭಾರತ ಮಾತೆಯ ಅಧಃಪತನಕ್ಕೆ ಕಾರಣರು. ಸಕಾಲದಲ್ಲಿ ನಾವು ಎಚ್ಚತ್ತು ಚೇತರಿಸಿಕೊಳ್ಳದಿದ್ದರೆ ನಾವು ಸಮೂಲ ನಾಶವಾಗುವದು ಖಂಡಿತ. ವಾಚಕರೇ, ಹೀಗೆನ್ನುವಾಗ ನಿಮಗೆ ಇದು ಪರಿಹಾಸ್ಯವಾಗಿ ತೋರೀತು. ಅದ್ದರಿಂದ ಮೇಲ್ಕಂಡ ಮೂರು ವಿಚಾರಗಳನ್ನು ಪ್ರತ್ಯೇಕ ಪ್ರತ್ಯೇಕ ತೆಗೆದುಕೊಂಡು ವಿವರಿಸಿದರೆ ಹೇಗೆ ಅವುಗಳು ಭಾರತದ ಇಂದಿನ ಶೋಚನೀಯಾವಸ್ಥೆಗೆ ಕಾರಣಗಳೆಂಬುದು ಮನವರಿಕೆಯಾಗುವುದು. ಆದ್ದರಿಂದ ಪ್ರಕೃತಃ ರೈಲ್ವೆಗಳ ವಿಚಾರ ತರ್ಕಿಸುವ.

ರೈಲ್ವೆಗಳಿಲ್ಲದಿದ್ದ ಪಕ್ಷ ಇಂದು ಬ್ರಿಟಿಷರು ಭಾರತವನ್ನು ಹಿಡಿದಿರುವಂಥಾ ಆ ಅಂಕೆಯಲ್ಲಿ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲವೆಂದು ಮೊದಲು ತಿಳಿಯಬೇಕು. ಅವುಗಳಿಲ್ಲದಿದ್ದರೆ ಜನತೆಯು ಒಂದು ಸ್ಥಳದಿಂದ ಮತ್ತೊಂದೆಡೆಗೆ ತಂಡೋಪತಂಡವಾಗಿ ಹೋಗಲಾರದು. ಅವುಗಳು ದೇಶದ ಒಂದು ಕಡೆಯಲ್ಲಾಗುವ ವಿಚಾರವನ್ನು ಎಲ್ಲಾ ಸ್ಥಳಗಳಿಗೂ ತಿಳಿಸುವ ಗೂಢಾಚಾರರಂತಿರುವವು. ರೈಲ್ವೆಗಳು ಬರಗಾಲವನ್ನು ಹೆಚ್ಚಿಸಲು ಕಾರಣಗಳು. ಯಾಕೆಂದರೆ ಜನರು ಅಲ್ಪಾಸೆಯಿಂದ ತಮ್ಮಲ್ಲಿರುವ ವಸ್ತುಗಳನ್ನೆಲ್ಲಾ ಮಾರಿಬಿಟ್ಟು, ನಾಗರೀಕತೆಯ ಸೊಬಗಿಗೆ ಮರುಳಾಗಿ ಕಷ್ಟಕ್ಕೀಡಾಗುವರು. ಇವುಗಳಿಂದಾಗಿಯೇ ಒಂದು ಕಾಲಕ್ಕೆ ಪವಿತ್ರ ಸ್ಥಳಗಳೆಂದೆನಿಸಿಕೊಂಡಂಥವು ಇಂದು ಅಪವಿತ್ರವಾಗಿವೆ. ಯಾಕೆಂದರೆ-ಪೂರ್ವದಲ್ಲಿ ಯಾತ್ರಾಸ್ಥಳಗಳಿಗೆ ಹೋಗಲು ನಡೆದೇ ಹೋಗಬೇಕಿತ್ತು. ಆದಪ್ರಯುಕ್ತ ಬರೀ ಅನನ್ಯ ಭಕ್ತರು ಮಾತ್ರ ಹೋಗುತ್ತಿದ್ದರು. ಆದರೆ ಇಂದು ಈ ರೈಲ್ವೆಗಳ ಸಾಹಾಯದಿಂದ ಯಾವನಾದರೂ ಹೋಗಬಹುದಾಗಿದೆ. ಎಂಥಾ ದುರಾಚಾರಕ್ಕೂ ಈಗ ಎಡೆ ಇದೆ. ಆದರೆ ಇಂದು ಈ ರೈಲ್ವೆಗಳ ಮುಖಾಂತರವಾಗಿಯೇ ಭಾರತದ ಜನತೆಯ ಕಷ್ಟಗಳು ಪ್ರತಿಯೊಬ್ಬನಿಗೂ ಅರಿತು ಪ್ರಚಂಡ ಜನಜಾಗೃತಿಯಾಯಿತು; ಅದ್ದರಿಂದ ಅವೂ ತಮ್ಮ ಪಾಲಿನ ಸತ್ಕಾರ್ಯಗಳನ್ನು ಮಾಡಿದಂತಾಗಲಿಲ್ಲವೇ? ಎಂದು ಕೇಳಬಹುದು. ನಿಜ. ಆದರೆ ಈ ರೈಲ್ವೆಗಳು ಅರ್ಥಾತ್ ಬ್ರಿಟಿಷರು ಭಾರತಭೂಮಿಗೆ ಬರುವ ಮೊದಲು ನಾವೆಲ್ಲಾ ಒಂದೇ ಅಖಂಡ ಜನಾಂಗವಾಗಿದ್ದೆವು. ಆದ್ದರಿಂದಲೇ ಬ್ರಿಟಿಷರ ಮೊದಲು ಇಲ್ಲಿ ಆಳಿದ ಚಕ್ರವರ್ತಿಗಳು ಇಡೀ ಭಾರತವನ್ನು ಏಕಛತ್ರಿಯಡಿಯಲ್ಲಿ ಆಳಲು ಸಮರ್ಥರಾದರು. ಆಗಲೇ ಒಗ್ಗಟ್ಟು ನೆಲೆಸಿತ್ತು. ಕ್ಷಣಿಕ ಜಗಳಗಳಾಗುತ್ತಿದ್ದರೂ ಪ್ರತಿಯೊಬ್ಬನ ಅಂತರಾಳದಲ್ಲಿ ನಾವೆಲ್ಲರೂ ಏಕ ಮಾತೆಯ ಪುತ್ರರೆಂಬ ನಾದವು ಮೊಳಗುತಿತ್ತು. ಬ್ರಿಟಿಷರ ಹಿಡಿತವು ಭಾರತದಲ್ಲಿ ಬಲವಾದಂತೇ ನಮ್ಮಲ್ಲಿ ಸಂಗಡಗಳು ತಲೆದೋರಿದವು. ವಿಶದವಾಗಿ ಹೇಳುವದಿದ್ದರೆ ನಮ್ಮ ಪೂರ್ವಜರು ಗಾಡಿಗಳ ಮೇಲೆ ಯಾ ಕಾಲ್ನಡಿಗೆಯಿಂದ ತಿರುಗುತ್ತಿದ್ದ ಕಾಲಕ್ಕೆ ಇತರ ತಮ್ಮ ಸಹೋದರರೊಡನೆ ಮಿಳಿತವಾಗಿ ಅವರ ಭಾಷೆ ನಡೆ ನುಡಿಗಳನ್ನು ಕಲಿತುಕೊಳ್ಳುವ ಅನುವಿತ್ತು. ದಕ್ಷಿಣದಲ್ಲಿ ರಾಮೇಶ್ವರವನ್ನೂ, ಪೂರ್ವದಲ್ಲಿ ಜಗನ್ನಾಥ ದೇವಾಲಯವನ್ನೂ, ಉತ್ತರದಲ್ಲಿ ಹರಿದ್ವಾರವನ್ನೂ ಸ್ಥಾಪಿಸಿದ ನಮ್ಮ ತಾತಂದಿರ ದೂರದೃಷ್ಟಿಗೆ ಏನೆನ್ನುವಿರಿ? ಇದರಿಂದಲೇ ಅವರು ಇಂದಿನ ನಾಗರಿಕರೆಂದೆನಿಸಿಕೊಳ್ಳುವವರಿಗೆ ಎಂದೂ ಹಿಂದಿರಲಿಲ್ಲವೆಂಬುವುದು ವಿಶದವಾಗದೇ? ದೇವರನ್ನು ಮನೆಯಲ್ಲೇ ಆರಾಧಿಸಿದರೆ ಸಾಕೆಂದು ಅವರಿಗೆ ತಿಳಿದಿತ್ತು. ಯಾರ ಮನಸು ನಿರ್ಮಲವಾಗಿರುವದೋ ಅಲ್ಲೇ ಗಂಗಾ ನದಿ ಇದೆ ಎಂಬುವದನ್ನು ಅವರು ಕಲಿಸಿರುವರು. ಭಾರತವು ಒಂದೇ ಜನಾಂಗ, ಅದು ಅಭೇದ್ಯವಾದದ್ದು ಎಂಬ ಅವರ ಮನವೇ ಮೇಲಿನಂತೆ ಕ್ಷೇತ್ರಗಳನ್ನು ನಿರ್ಮಿಸಲು ಪ್ರೇರೇಪಿಸಿದ್ದು. ಈ ಕಾರ್ಯಕ್ರಮದಿಂದಲೇ ಇಡೀ ಭಾರತದ ಜನತೆಯ ಮನಸಿನಲ್ಲಿ ನಾವು ಒಂದೇ ಜನಾಂಗವೆಂಬ ಭಾವನೆಯು ಕ್ಷಿಪ್ರದಲ್ಲಿಯೇ ವೃದ್ಧಿಗೊಂಡಿತು. ಇದು ಇಡೀ ಜಗತ್ತೇ ಕಂಡರಿಯದ ಹೊಸ ವಿಧದ ಪ್ರಚಾರ ಕೆಲಸ. ಇಂದು ನಾವು ಭಿನ್ನ ಜನಾಂಗದವರು ಎಂಬ ಭಾವನೆಯು ಅತ್ಯಾಚಾರದ ಪರಮಾವಧಿಯೆಂದಿರುವ ಆಧುನಿಕ ನಾಗರೀಕತೆಯಿಂದ ಮತ್ತರಾದ ನಾಗರೀಕರೆಂದೆನಿಸಿಕೊಳ್ಳುವ ನಮ್ಮಲ್ಲಿ ಮಾತ್ರ ಮೂಡಿರುವದು. ರೈಲ್ವೆಯ ಮೂಲಕವಾಗಿಯೇ ನಾವು ಭಿನ್ನ ಭಿನ್ನ ಜನಾಂಗದವರು ಎಂಬ ಭಾವನೆಯು ಬರಲು ಕಾರಣ. ಆದರೆ ರೈಲ್ವೆಗಳ ಮುಖಾಂತರವೆ ಇಂದು ನಾವು ಏಕ ಜನಾಂಗವೆಂಬ ಭಾವನೆಯು ಜನತೆಯಲ್ಲಿ ಉದ್ಭವಿಸಿರುವದೆಂದು ನೀವು ಊಹಿಸಬಹುದು. ಆದರೆ ಅಫೀಮನ್ನು ತಿನ್ನುವ ಮನುಷ್ಯನು ಅಫೀಮು ತಿಂದ ಮೇಲೆ ಅದರ ಪರಿಣಾಮದಿಂದ ಅದು ಕೆಟ್ಟದೆಂದು ತಿಳಿಯುವನು. ಅದು ಕೆಟ್ಟದೆಂದು ತಿಳಿಯುವುದಕ್ಕಾಗಿ ಅಫೀಮು ತಿನ್ನಬೇಕೆನ್ನುವ ವಾದದಲ್ಲಿ ಹುರುಳು ಹೇಗೆ ಇಲ್ಲವೋ ಹಾಗೆಯೇ ಮೇಲಿನ ಪ್ರಸಂಗದಲ್ಲಿಯೂ ಕೂಡ. ಅದ್ದರಿಂದ ರೈಲ್ವೆಗಳ ವಿಚಾರ ನಾನು ಹೇಳಿದ ವಿಚಾರಗಳನ್ನು ವಾಚಕರು ವಿಮರ್ಶಿಸಿದರೆ ತಿಳಿಯುವದು.

ಭಾರತವು ಏಕ ಜನಾಂಗವೆಂಬ ಭಾವನೆಯು ಮುಸಲ್ಮಾನರ ಆಳ್ವಿಕೆಯ ಮೊದಲು ಇದ್ದಿತೆಂಬುವುದು ನಿಜ. ಆದರೆ ಈಗ ಮುಹಮ್ಮದೀಯರು, ಪಾರ್ಸಿಗಳು, ಕ್ರಿಶ್ಚಿಯನರು ಇನ್ನೂ ಅನೇಕ ಜನಾಂಗಗಳಿರುವಾಗ ಹೇಗೆ ಭಾರತವು ಒಂದೇ ಜನಾಂಗವಾಗುವದು? ಹಿಂದೂ-ಮುಸಲ್ಮಾನರು ಆದಿಯಿಂದಲೂ ಶತ್ರುಗಳು. ನಮ್ಮ ಹಿಂದಿನ ಕಟ್ಟು ಕಥೆಗಳೇ ಇದಕ್ಕೆ ಆಧಾರ. ಹಿಂದುಗಳು ಪೂರ್ವಕ್ಕೆ ಮುಖ ಮಾಡಿ ಆರಾಧಿಸಿದರೆ ಮುಸಲ್ಮಾನರು ಪಶ್ಚಿಮಕ್ಕೆ. ಹಿಂದುಗಳು ದನವನ್ನು ಗೋಮಾತೆಯೆಂದು ಪೂಜಿಸಿದರೆ ಮುಹಮ್ಮದೀಯರು ಅದನ್ನು ಕೊಂದು ಹಾಕುತ್ತಾರೆ. ಹೀಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಭಿನ್ನಾಭಿಪ್ರಾಯವಿರುವಾಗ ಹೇಗೆ ಇಂಡಿಯಾವು ಏಕ ಜನಾಂಗವಾಗುವುದೆಂಬ ವಿಚಾರವು ವಾಚಕರ ತಲೆಯಲ್ಲಿ ಮೂಡಿರಬಹುದಲ್ಲವೇ? ಈ ವಿಚಾರ ಮುಂದಿನ ವಾರ ಬರೆಯಲಾಗುವುದು.

ಸಾಮ್ರಾಜ್ಯದ ರಕ್ಷಣೆಗೆ ಕೋತಿಗಳ ರವಾನೆ!

ಅಟ್ಲಾಂಟಿಕ ಮಹಾಸಾಗರ ಮತ್ತು ಭೂಮಧ್ಯ ಸಮುದ್ರದ ಮಹಾದ್ವಾರದಂತಿರುವ ಜಿಬ್ರಾಲ್ಟರು ಇಂಗ್ಲಿಷರ ಸ್ವಾಧೀನವಾಗುವಾಗ್ಯೆ ಅಲ್ಲಿ ಅನೇಕ ಮಿಶ್ರಜಾತಿಯ ಜನರೂ, ಆಫ್ರಿಕದಿಂದ ಅಲ್ಲಿಗೆ ಬಂದಿದ್ದ ಸಾವಿರಾರು ಕೋತಿ ಕುಟುಂಬಗಳೂ ವಾಸವಾಗಿದ್ದವು. ಜಿಬ್ರಾಲ್ಟರು ಬ್ರಿಟಿಷ ಸಾಮ್ರಾಜ್ಯದ ಜೀವಾಳದಂತಿರುವುದು. ಬ್ರಿಟಿಷರ ವ್ಯಾಪಾರ ವಹಿವಾಟುಗಳೂ, ಸಮುದ್ರಮಾರ್ಗಗಳೂ ಈ ಜಿಬ್ರಾಲ್ಟರಿನ ಮೂಲಕವಾಗಿಯೇ ಇವೆ. ಜಿಬ್ರಾಲ್ಟರು ಇತರರ ವಶವಾದರೆ ಬ್ರಿಟಿಷ ಸಾಮ್ರಾಜ್ಯದ ಸೌಭಾಗ್ಯ ಸೂರ್ಯನು ಮುಳುಗಿದಂತೆಯೇ ಸರಿ. ಅದು ಅಷ್ಟು ಪ್ರಾಮುಖ್ಯವಾಗಿರುವದರಿಂದಲೇ ಅದರ ರಕ್ಷಣೆಗೆ ಬ್ರಿಟಿಷರು ಶತಪ್ರಯತ್ನಗಳನ್ನು ಮಾಡುತ್ತಿರುವರು. ಪರಂತು ಈಗ್ಯೆ ಕೆಲವು ವರ್ಷಗಳಿಂದ ಜಿಬ್ರಾಲ್ಟರಿನಲ್ಲಿ ಕೋತಿಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದ ಹಾಗೆ ಬ್ರಿಟಿಷ್ ಸಾಮ್ರಾಜ್ಯದ ಬಲವೂ ದರ್ಪವೂ ಕುಂದುತ್ತ ಬಂದಿರುವುದರಿಂದ, ಎಷ್ಟರ ತನಕ ಜಿಬ್ರಾಲ್ಟರಿನಲ್ಲಿ ಕೋತಿಗಳು ಇರುವವೋ ಅಷ್ಟರ ತನಕ ಜಿಬ್ರಾಲ್ಟರು ಇಂಗ್ಲಿಷರ ವಶವಾಗಿರುವುದು ಎಂಬ ಒಂದು ಅಭಿಪ್ರಾಯ ಅಲ್ಲಿಯ ಜನರಲ್ಲಿ ಉಂಟಾಗಿರುವುದು. ಆ ವಿಶ್ವಾಸವು ಸುಳ್ಳಾಗಿರಲಿ, ಸತ್ಯವಾಗಿರಲಿ, ಪರಂತು ಜನರಲ್ಲಿ ಅಂಥ ವಿಶ್ವಾಸವಿರುವುದು ನಿಜವಾಗಿದೆ.

ಈಗಂತೂ ಜಿಬ್ರಾಲ್ಟರಿನಲ್ಲಿ ಬರೇ ಎರಡು ಕೋತಿ ಕುಟುಂಬಗಳು ಇರುವವು. ಜಿಬ್ರಾಲ್ಟರಿನ ಮೇಲೆ ಮುಸೋಲಿನಿಯ ವಕ್ರದೃಷ್ಟಿ ಇದ್ದು ಅದನ್ನು ಇಟಲಿಗೆ ಸೇರಿಸಿಕೊಳ್ಳಲಿಕ್ಕೆ ಅವನು ಸಮಯ ಸಾಧಿಸುತ್ತಿರುವನು. ಆದ್ದರಿಂದ ಇನ್ನು ಈಗಿದ್ದ ಎರಡು ಕೋತಿ ಕುಟುಂಬಗಳು ನಾಶವಾಗುವದರೊಂದಿಗೆ ಜಿಬ್ರಾಲ್ಟರೂ ಅನ್ಯಾಕ್ರಾಂತವಾಗುವುದೆಂದೂ ಜನರು ಊಹಿಸಿದರೆ ತಪ್ಪಲ್ಲ. ಜನರು ಧೈರ್ಯಗೆಡದಂತೆಯೂ ಧೈರ್ಯ ತಾಳುವಂತೆಯೂ ಈಗ ಬ್ರಿಟಿಷ ಸರಕಾರವು ಆಫ್ರಿಕದಿಂದ ಮೂವತ್ತು ಕೋತಿ ಕುಟುಂಬಗಳನ್ನು ಜಿಬ್ರಾಲ್ಟರಿಗೆ ರವಾನಿಸಿರುವದು. ಜಿಬ್ರಾಲ್ಟರಿನಲ್ಲಿ ಕೋತಿಗಳ ಸಂಖ್ಯೆ ಹೆಚ್ಚಾದಂತೆ ಬ್ರಿಟಿಷ ಸಾಮ್ರಾಜ್ಯವೂ ಸುರಕ್ಷಿತವಾಗಿರಬಹುದೆಂದು-ಕನಿಷ್ಠಪಕ್ಷ ಜನರು ಹಾಗೆ ತಿಳಕೊಳ್ಳಬಹುದು-ಎಂದು ಪ್ರಸ್ತುತ ಸರಕಾರವು ತಿಳಿದಿರಬೇಕು!

'ಸ್ವ. ಮಾ.'

ಉಪವಾಸ —ಲೇ:-ಮಹಾತ್ಮ ಗಾಂಧಿ. ('ಹರಿಜನ' 18-3-1939.)

ಅನಾದಿಯಿಂದಲೂ ಉಪವಾಸ ವಿಧಿಸು ಆಚರಿಸಲ್ಪಡುತ್ತಿದೆ. ಅದನ್ನು ಆತ್ಮಶುದ್ಧಿಗಾಗಿ ಸತ್ಕಾರ್ಯ ಇಲ್ಲವೇ ದುಷ್ಕಾರ್ಯಗಳ ಸಫಲಕ್ಕಾಗಿ ಆಚರಿಸುವರು. ಭಗವಾನ್ ಬುದ್ಧ, ಏಸುಕ್ರಿಸ್ತ ಹಾಗೂ ಮಹಮ್ಮದರು ತಮ್ಮ ಇಷ್ಟ ದೇವತೆಯನ್ನು ಪ್ರತ್ಯಕ್ಷ ನೋಡಲಿಕ್ಕಾಗಿ ಉಪವಾಸ ಕೈಕೊಂಡರು. ಶ್ರೀ ರಾಮಚಂದ್ರನು ತನ್ನ ವಾನರ ಸೈನ್ಯವು ಲಂಕೆಗೆ ಹೋಗಲನುವಾಗುವಂತೆ ದಾರಿ ಬಿಡಬೇಕೆಂದು ಸಮುದ್ರ ರಾಜನನ್ನು ಕುರಿತು ಉಪವಾಸ ಮಾಡಿದನು. ಪಾರ್ವತಿಯು ಪರಮೇಶನನ್ನು ಒಲಿಸಿ ವರಿಸಲಿಕ್ಕಾಗಿ ಇದನ್ನು ಆಚರಿಸಿದಳು. ಆದರೆ ನಾನು ಸಹ ಈ ಮೇಲ್ಕಂಡ ಉದಾಹರಣೆಗಳನ್ನೇ ಅನುಸರಿಸಿ ಅವರ ಧ್ಯೇಯಕ್ಕಿಂತಲೂ ಕಮ್ಮಿ ತರಹದ ಗುರಿಯನ್ನಿಟ್ಟುಕೊಂಡು ಉಪವಾಸ ಮಾಡಿರುವೆನು.

ನಾನು ಶೇಗಾವನ್ನು ಬಿಟ್ಟು ರಾಜಕೋಟೆಗೆ ಹೋಗುವ ಮೊದಲು ಉಪವಾಸವ್ರತ ಕೈಗೊಳ್ಳಲು ನಿಶ್ಚೈಸಿದ್ದೆನೋ ಎಂಬ ಪ್ರಶ್ನೆಗೆ ಉತ್ತರವೀಯದೆ ನನ್ನ ಉಪವಾಸದ ಯೋಗ್ಯತೆಯನ್ನು ಚರ್ಚಿಸಲು ಹೋಗುವದಿಲ್ಲ. 1933 ನೇ ಆಗಸ್ಟನಲ್ಲಿ ನಾನು ಕೈಕೊಂಡ ಉಪವಾಸವು ಬರೇ ಅಲ್ಪ ದಿನಗಳದ್ದಾದರೂ ಅದರಿಂದ ನನ್ನ ಪ್ರಕೃತಿಗೆ ಧಕ್ಕೆ ತಗಲಿತು. ನನ್ನನ್ನು ಬಿಡುಗಡೆ ಮಾಡಿದ ಬಳಿಕ ನಾನು ಮೃತ್ಯುಮುಖನಾಗಿದ್ದೆ. ಅಲ್ಲಿಂದ ನಾನು ಉಪವಾಸಗಳೆಂದರೆ ಹೆದರುತ್ತಿದ್ದೆ. ನನ್ನ ವಾರ್ಷಿಕ ಉಪವಾಸದ ದಿನಗಳಾದ ಏಪ್ರಿಲ್ 6 ಮತ್ತು 13 ನೇ ದಿನಗಳಿಂದಲೇ ನನ್ನ ಪ್ರಕೃತಿಯು ಉಪವಾಸವನ್ನು ಕೈಕೊಳ್ಳಲು ಯೋಗ್ಯವಲ್ಲವೆಂಬುದು ವಿಷದವಾಗುತ್ತಿತ್ತು. ಆದ್ದರಿಂದ ನಾನು ಶೇಗಾವನ್ನು ಬಿಟ್ಟು ರಾಜಕೋಟೆಗೆ ಹೊರಡುವಾಗ ನನ್ನ ಮನಸ್ಸಿನಲ್ಲಿ ಉಪವಾಸದ ಯಾವ ಯೋಚನೆಯೂ ಇರಲಿಕ್ಕೆ ಕಾರಣವಿರಲಿಲ್ಲ. ಅಂಥಾ ನಿಶ್ಚಿತ ಯೋಚನೆಯಿಂದಿದ್ದರೆ ನನ್ನ ಸ್ನೇಹಿತರಿಗೆ ಕೊಟ್ಟಿರುವ ಭರವಸೆಯ ಮೇರೆ ಅವರಿಗೆ ಮೊದಲು ತಿಳಿಸಬೇಕಿತ್ತು. ಹಾಗೆ ಉಪವಾಸದ ವಿಚಾರ ಮೊದಲು ಯಾವ ಯೋಚನೆಯನ್ನೇ ಮಾಡುವ ಅವಕಾಶವಿರಲಿಲ್ಲ. ನನಗೆ ಉಪವಾಸ ಮಾಡುವ ಯೋಚನೆಯು ನನ್ನ ಆತ್ಮದ ಯಾತನೆಯಿಂದ ತೀವ್ರವಾಗಿ ಬರಲು ಕಾರಣವಾಯಿತು. ಉಪವಾಸವನ್ನು ಕೈಕೊಳ್ಳುವ ಮುಂಚಿನ ದಿನಗಳು ಅಮೋಘ ಪ್ರಾರ್ಥನೆಯ ದಿನಗಳಾಗಿದ್ದವು. ನಿರಶನ ವ್ರತವನ್ನು ಕೈಕೊಂಡ ದಿನದ ಮುಂದಿನ ರಾತ್ರಿಯ ಅನುಭವವು ನನ್ನನ್ನು ಉಸಿರುಕಟ್ಟಿಸಿತ್ತು. ನನಗೆ ಏನು ಮಾಡಬೇಕೆಂಬ ತಿಳಿವು ಇರಲಿಲ್ಲ. ಮಾರಣೆ ದಿನ ಪ್ರಾತಃಕಾಲ ನಾನು ಮಾಡಬೇಕಾದುದ್ದೇನು? ಅದರ ಪರಿಣಾಮವೇ ನಾ ದೀಕ್ಷೆ ಎಂಬುವದರ ಅರಿವಾಯಿತು. ನಾನು ಈ ವ್ರತವನ್ನು ಸುಮ್ಮನೆ ತೆಗೆದುಕೊಳ್ಳುತ್ತಿರಲಿಲ್ಲ. ದೇವರಿಗೆ ನಾನು ಉಪವಾಸ ಮಾಡಬೇಕೆಂಬ ಇಚ್ಛೆ ಇದೆಯೆಂಬ ನಂಬಿಗೆಯಿಂದ ಅದನ್ನು ಕೈಕೊಂಡದ್ದಾಗಿದೆ.

ಸತ್ಯಾಗ್ರಹವೆಂಬ ಸೈನ್ಯದಲ್ಲಿ ಉಪವಾಸವ್ರತವು ಭಯಂಕರವಾದೊಂದು ಆಯುಧವಾಗಿದೆ.

ಇದನ್ನು ತೆಗೆದುಕೊಳ್ಳಲು ಎಲ್ಲರಿಂದಲೂ ಸಾಧ್ಯವಿಲ್ಲ. ಬರೇ ಶಾರೀರಕ ಬಲವು ಇದನ್ನು ಕೈಕೊಳ್ಳಲು ತಕ್ಕ ಯೋಗ್ಯತೆಯಲ್ಲ. ದೇವರಲ್ಲಿ ನಂಬಿಕೆ ಇಡದಿದ್ದರೆ ಇದು ಅಪ್ರಯೋಜಕ. ಅದು ಯಾಂತ್ರಿಕ ಸಹಾಸ ಅಥವಾ ಬರೇ ಅನುಕರಣೆಯಾಗಿರಲಿಕ್ಕಾಗದು. ಅದು ಒಬ್ಬನ ಆತ್ಮದ ಅಂತರಾಳದಿಂದ ಹೊರಟು ಬರಬೇಕು. ಆದ್ದರಿಂದಲೇ ಅದು ಅಪರೂಪವಾಗಿದೆ. ನಾನು ಅದಕ್ಕೆ ಸರ್ವಿಸಿಸಿದವನಾಗಿದ್ದೇನೆ. ರಾಜಕೀಯ ರಂಗದ ನನ್ನ ಸಹೋದ್ಯೋಗಿಗಳಿಗ್ಯಾರಿಗೂ ಈ ಉಪವಾಸದ ಆವಶ್ಯಕತೆ ಕಂಡುಬರಲಿಲ್ಲವೆಂಬುದು ವಿಚಾರಿಸತಕ್ಕ ವಿಚಾರ. ಆದರೆ ನನ್ನ ಉಪವಾಸವನ್ನು ಅವರು ನಿಷ್ಪ್ರಯೋಜಕವೆಂದಾಗಲೀ, ಇನ್ನಾವ ಕಾರಣದಿಂದಾಗಿ ಸೂಚಿಸಿದ್ದಿಲ್ಲವೆಂದೆನ್ನಲು ಸಂತೋಷವಾಗುತ್ತದೆ. ಆಶ್ರಮದ ಸಂಗಡಿಗರೂ ಸಹ ಅಪರೂಪ ಸಂದರ್ಭಗಳಲ್ಲದೆ ಉಪವಾಸದ ಅವಶ್ಯಕತೆಯನ್ನು ಕಂಡಿರುವುದಿಲ್ಲ. ಎಂಥಾ ಸಂದರ್ಭದಲ್ಲೂ ಕೂಡ ನನ್ನ ಅನುಮತಿ ವಿನಹ ಇಂಥಾ ಅಮೋಘ ಉಪವಾಸಗಳನ್ನು ಕೈಕೊಳ್ಳಕೂಡದೆಂಬ ತಡೆಯನ್ನು ಅವರು ಅಂಗೀಕರಿಸಿರುವರು.

ಅದಪ್ರಯುಕ್ತ ಉಪವಾಸವು ಶಕ್ತಿಯುತ ಆಯುಧವಾಗಿದ್ದರೂ ಸಹ ಅದಕ್ಕೆ ಆವಶ್ಯಕವಾದ ಮಿತಿಯೂ ಬೇಕು. ಉಪವಾಸವನ್ನಾಚರಿಸಿದ ಅನುಭವಶಾಲಿಗಳೇ ಅದನ್ನು ಕೈಕೊಳ್ಳಬಲ್ಲರಲ್ಲದೆ ಎಲ್ಲರಿಗೂ ಅಸಾಧ್ಯ. ನನ್ನ ಈ ಅಭಿಪ್ರಾಯದಿಂದ ಅನೇಕ ಉಪವಾಸಗಳು ಸುಶ್ರಾವ್ಯವಾಗಿ ಕರೆಯಲ್ಪಡುವ ಅನ್ನ ಸತ್ಯಾಗ್ರಹದ ಕೆಳಗೆ ಬರುವದಿಲ್ಲ. ಅವು ಬರೇ ಸರಿಯಾದ ಆಲೋಚನೆ ಮತ್ತು ತಯಾರಿಕೆಯಿಲ್ಲದ ಉಪವಾಸ ಮುಷ್ಕರಗಳೆಂದು ಕರೆಯಲ್ಪಡುವವು. ಆಗಾಗ್ಯೆ ಈ ಉಪವಾಸ ಮುಷ್ಕರಗಳು ಕೈಕೊಳ್ಳಲ್ಪಟ್ಟದ್ದೇ ಆದರೆ ಅವಕ್ಕಿರುವ ಅಲ್ಪ ಸ್ವಲ್ಪ ಗೌರವವು ಮಾಯವಾಗಿ ಬರೇ ಪರಿಹಾಸ್ಯದ ಯೋಜನೆಯಾಗುವುದು.

ತಿರುವಾಂಕೂರು.

ಮಾರ್ಚಿ ತಾರೀಕು 25 ರಿಂದ ಶಾಯಿದೆ ಭಂಗ ಚಳವಳನನ್ನು ಕೈಕೊಳ್ಳಬೇಕೆಂದು ತಿರುವಾಂಕೂರು ಸಂಸ್ಥಾನ ಕಾಂಗ್ರೆಸು ತೀರ್ಮಾನಿಸಿದ ವರದಿಯನ್ನು ಮಹಾತ್ಮರಿಗೆ ಕೊಡಲು ಅವರು ಹೀಗೆಂದು ಹೇಳಿರುವರು:—

'ಹದಿನೈದು ದಿನಗಳಿಂದ ಅಂದರೆ ನಾನು ಶೇಗಾವನ್ನು ಬಿಟ್ಟನಂತರ ತಿರುವಾಂಕೂರಿನ ವಿಚಾರ ನಾನು ತಿಳಿದುಕೊಳ್ಳದ್ದರಿಂದ ತಿರುವಾಂಕೂರಿನಲ್ಲಿ ಕಾಯಿದೆ ಭಂಗ ಚಳವಳವನ್ನು ಕೈಕೊಳ್ಳುವ ವಿಚಾರ ನನ್ನ ತೀರ್ಮಾನವನ್ನು ಕೊಡುವುದು ಹಿತವಾಗಿ ಕಾಣುವದಿಲ್ಲ. ಆದರೆ ಕೆಲವು ಸಾಮಾನ್ಯ ತತ್ವಗಳನ್ನು ಹೇಳುವುದರಲ್ಲಿ ಅಡ್ಡಿಯಿಲ್ಲ. ಪ್ರಥಮತಃ ಹೇಳುವದಾದರೆ ಯಾವದೊಂದು ಕಾಯಿದೆ ಭಂಗ ಚಳವಳವನ್ನು ಕೈಕೊಳ್ಳುವ ಮೊದಲಿನ ಕರ್ತವ್ಯವೆಂದರೆ ಚಳವಳದಲ್ಲಿ ಭಾಗ ವಹಿಸುವರಾಗಲೀ, ಅಥವಾ ಸಾರ್ವಜನಿಕರಾಗಲೀ ಹಿಂಸಾ ತತ್ವವನ್ನು ಅವಲಂಬಿಸರೆಂಬ ಆ ದೃಢವಾದ ನಂಬಿಕೆಯನ್ನು ಖಚಿತ ಪಡಿಸುವುದು. ಹಿಂಸಾ ಪ್ರವೃತ್ತಿಯು ಕೈಕೊಳ್ಳಲ್ಪಟ್ಟ ನಂತರ ಇದು ಸಂಸ್ಥಾನಾಧಿಕಾರಿಗಳ ಮತ್ತು ಕಾಯಿದೆ ಭಂಗ ಚಳವಳಕ್ಕೆ ವಿರೋಧವಿರುವ ಜನರ ಕೃತ್ತಿಮದ ಪರಿಣಾಮವೆಂದರೆ ಅದು ಸಮಂಜಸವಾದ ಉತ್ತರವಾಗದು. ಹಿಂಸೆಯ ವಾತಾವರಣದಲ್ಲಿ ಕಾಯಿದೆ ಭಂಗ ಚಳವಳವು ಖಂಡಿತಾ ಯಶಸ್ವಿಯಾಗಿ ಕೆಲಸ ಮಾಡಲಾರದೆಂಬುದು ನಿಷಧವಾದ ಸಂಗತಿ. ಹೀಗೆಂದರೆ ಸತ್ಯಾಗ್ರಹಿಯು ಮಾಡಬೇಕಾದ ಕೆಲಸವು ಪರಿಸಮಾಪ್ತಿಯಾಯಿತು. ಕೆಲಸ ಮಾಡಲು ಬೇರೆ ದಾರಿ ಇಲ್ಲವೆಂದು ತಿಳಿಯಲಾಗದು. ಕಾಯಿದೆ ಭಂಗ ಚಳವಳದಲ್ಲದೆ ಇತರ ದಾರಿಗಳು ಕಂಡುಹಿಡಿಯಲ್ಪಡಬೇಕು. ಎರಡನೇ ಪರತೆಂದರೆ—ಕಾಯಿದೆ ಭಂಗವು ವೇಶದ ಪ್ರಗತಿಗೆ ಕುಂದು ತರಸಂಭವಿದ್ದರೆಬಾರದು. ಜನರಿಗೆ ತೊಂದರೆಯನ್ನೀಯುವಂಥಾ, ಇಲ್ಲವೇ ಕಾಯಿದೆಯ ಭಂಗದಿಂದ ಜನತೆಗೆ ಅಪಕಾರವಾಗದಂಥಾ ಕಾನೂನುಗಳನ್ನು ಮಾತ್ರ ಮುರಿಯಬೇಕು. ಅಂದರೆ ಜನತೆಗೆ ತೊಂದರೆಯೊಗದೆ ಸರಕಾರಕ್ಕೆ ಇದರಿಂದ ಹೆಚ್ಚಿನ ಕೆಲಸ ಹಿಡಿಸುವ ವರತುಗಳನ್ನೇ ತೆಗೆದು ವಿರೋಧಿಸಬೇಕು. ಮೂರನೇಯದಾಗಿ ಆ ಚಳವಳವು ಜನತೆಯೆಲ್ಲವೂ ಅದಕ್ಕೆ ಟೊಂಕಕಟ್ಟಿ ಇಳಿಯಲು ಮನಬರುವಷ್ಟು ಕಾರಣ ಉಳ್ಳದ್ದಾಗಿರಬೇಕು. ಕಾಯಿದೆ ಭಂಗದಲ್ಲಿ ವಿದ್ಯಾರ್ಥಿಗಳು ಭಾಗ ತೆಗೆದುಕೊಳ್ಳುವಂತೆ ಆಹ್ವಾನಿಸಬಾರದು. ಚಳವಳದಲ್ಲಿ ಯಾವ ವಿಧದ ಅಂತರ್ಗತ ಗುಟ್ಟಿರಬಾರದು. ಶಿಸ್ತಿಗಾಗಿ ಇಡಲ್ಪಡುವ ಕನಿಷ್ಟ ಆವಶ್ಯಕತ್ವಗಳಿಗೆ ಕಾಯಿದೆ ಭಂಗ ಚಳವಳಿಗಾರರು ಹೊಂದಿಕೊಂಡಿರಬೇಕು.'

1921 ನೇ ವರ್ಷದಲ್ಲಾದ ಅಸಹಾಕಾರ ಚಳವಳಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಾಲೇಜುಗಳಿಂದ ಹೊರಬಂದು ಅಸಹಕಾರ ಚಳವಳದಲ್ಲಿ ಭಾಗವಹಿಸಬೇಕೆಂದು ಹೇಳಿದ ಗಾಂಧೀಜೀಯವರು ಇಂದು ವಿದ್ಯಾರ್ಥಿಗಳು ಈ ಚಳವಳದಲ್ಲಿ ಭಾಗ ವಹಿಸಕೂಡದೆಂದೆನ್ನಲು ಕಾರಣವೇನೆಂದು ಕೇಳಲು, ಅವರು ಹಿಂದಿನ ಆ ಸ್ಥಿತಿಯು ತೀರ ಭಿನ್ನವಾಗಿತ್ತೆಂದೂ, ಅಂದಿನ ಅಸಹಕಾರಕ್ಕಾಗಿ ಕಾಲೇಜು ತ್ಯಜಿಸುವದು ಹಿತವಿತ್ತೆಂದೂ, ಕಾಲೇಜನ್ನು ತ್ಯಜಿಸಿ ಹುಡುಗರು ಹೊರಬಂದರೆ ಅವರು ಪಟ್ಟಣಿಗರಾಗುವದರಿಂದ ಚಳವಳದಲ್ಲಿ ಭಾಗ ವಹಿಸಲು ಅವರಿಗೆ ಯಾವ ಅತಡಣೆಯಿಲ್ಲವೆಂದೂ, ಇಂದೂ ಸಹ ಹುಡುಗರು ಕಾಲೇಜುಗಳನ್ನು ಸಂಪೂರ್ಣ ತ್ಯಜಿಸಿ ಚಳವಳದಲ್ಲಿ ಭಾಗವಹಿಸಿದರೆ ನನಗೆ ಅಸಮಾಧಾನವಿಲ್ಲವೆಂದು ಹೇಳಿದರು.

ರಾಜಕೋಟೆ ಸುಧಾರಣೆ.

—:0:—

ಮುಸ್ಲಿಮರ ಕೇಳಿಕೆ.

—:0:—

ರಾಜಕೋಟೆಯ ... ಠಾಕೋರು ಸಾಹೇಬರ ಪ್ರಕಟಣೆ ಹಾಗೂ ಪಟೇಲರಿಗೆ ಬರೆದ ಕಾಗದದ ವಿವರವನ್ನು ಫೆಡರಲ್ ಕೋರ್ಟಿನ ಚೀಫ್ ಜಸ್ಟೀಸರಾದ ಸರ್ ಮಾರಿಸ್ ಗ್ವಾಯರವರಿಗೆ ರವಾನಿಸಲಾಗಿರುವದು. ಗಾಂಧೀಯವರು ಅದರ ಪರಿಣಾಮದ ಬಗ್ಗೆ ರಾಜಕೋಟೆಯಲ್ಲೇ ಇರುವರು. ಈ ಮಧ್ಯೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಯಂ. ಎ. ಜಿನ್ನಾರವರಿಗೆ ರಾಜಕೋಟೆಯ ಮುಸಲ್ಮಾನರು ಸುಧಾರಣಾ ಕಮಿಟಿಯಲ್ಲಿ ತಮ್ಮ ಪ್ರತಿನಿಧಿತ್ವದ ಬಗ್ಗೆ ಹೋರಾಡಬೇಕೆಂದು ತಿಳಿಸಿರುವರು. ಅಲ್ಲದೆ ಈ ಎರಡು ಠರಾವುಗಳನ್ನೂ ಮಾಡಿ ಕಳುಹಿಸಿರುವರು:—'ರಾಜಕೋಟೆ ಸುಧಾರಣಾ ಕಮಿಟಿಯಲ್ಲಿ ಮುಸ್ಲಿಮರಿಗೆ ಎರಡು ಸ್ಥಳವಿರಬೇಕು, ಅಲ್ಲಿಯ ಪ್ರಜಾ ಮಂಡಳವಾಗಲೀ, ಸರ್ದಾರ ಪಟೇಲರಾಗಲೀ ಮುಸ್ಲಿಮರ ಪ್ರತಿನಿಧಿಗಳಾಗಿರಲಿಕ್ಕಿಲ್ಲ. ಆದ್ದರಿಂದ ಅವರು ಮಾಡಿಕೊಳ್ಳುವ ಯಾವ ಒಪ್ಪಂದ ಶರತುಗಳಾಗಲೀ ಮುಸ್ಲಿಮರಿಗೆ ಅನ್ವಯಿಸುವದಿಲ್ಲ. ಅವರ ಪ್ರತಿನಿಧಿಗಳ ಅಭಿಪ್ರಾಯವಿಲ್ಲದ ರಚಿಸಲ್ಪಡಬಹುದಾದ ಯಾವ ಸಮಿತಿಯಾಗಲೀ ಅವರಿಗೆ ಬಂಧಿತವಾಗಿರಲಾರದು.'

'ಪ್ರಜಾ ಮಂಡಲದ ಕೇಳಿಕೆಯು ಸಮಂಜಸವಾಗಿರುವುದಿಲ್ಲ. ಅದು ಸಂಸ್ಥಾನದ ಎಲ್ಲಾ ಪಂಗಡಗಳ ಪ್ರತಿನಿಧಿಯಾಗಲಾರದು. ಪ್ರಜಾ ಮಂಡಳಕ್ಕೆ ಸಮಿತಿಯಲ್ಲಿ ಬಹುಮತ ಕೊಟ್ಟದ್ದೇ ಆದರೆ ಅಲ್ಪ ಪಕ್ಷದವರ ಮತೀಯ, ಸಾರ್ವಜನಿಕ, ಆರ್ಥಿಕ, ಸಾಂಸ್ಕೃತಿಕಕ್ಕೆ ಧಕ್ಕೆ ಬರುವದರಲ್ಲಿ ಸಂದೇಹವಿಲ್ಲ.'

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–40 ಬೆಂಗಳೂರು ಸಿಟಿ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕಿ.

ಮತ್ತು ಕಂಪೆನಿ,

(52–15) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮುಂಡೀಪಂಡ ಸೋಮಯ್ಯನವರು.
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಸಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾಚಪ್ಪನವರು ಮತ್ತು ಮೆ. ಜಿ ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ಶಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟುಳ್ಳ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible] ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52–54

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

35 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ. ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿಸಲಾಗಿದ್ದು 1921ರಲ್ಲಿ)

		ರೂ	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಹೊಬಲಗು	–	45,930	0	0
ಜಮೂಬಂದ ರೀವಜ್ಞಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ಕ್ರಿಪ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಪ್ಟ್ ಡಿಪಾಜಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಪ್ಟ್ ಡಿಪಾಜಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂಡ್ಯಂಡ ಐ ಬೆಳ್ಯಪ್ಪನವರು ಎಂ. ಎಲ್ ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮೆ ಎಸ್. ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗಿನ ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ 55	ರೂ 35.	ರೂ 22
6 ತಿಂಗಳಿಗೆ—	,, 100.	,, 35	,, 22.	,, 13
3 ತಿಂಗಳಿಗೆ—	,, 60.	,, 20	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಆಪ್ಪುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ತಿ2-11

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Bellıappa, at 'Kodagu' Press Mercara tor 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩-೮-೦
ತಾ. ೩೧—೩—೧೯೩೯.
ಸಂಪುಟ ೧೮] [ಸಂಚಿಕೆ ೪೩

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES
bearing interest at 4% p. a.
in denominations of
Rs. 50/-,100/-,500/-,1,000/- & 5,000,-
are now issued at
all our Branches.

SEASON DEPOSITS
repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-16

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-5

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ
ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ
ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕೂಲಂ
19 ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮುವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–47

The Agricultural &
Industrial Bank Ltd

"ZANDU"

ಝುಂಡೂರವರ	ಝುಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. ಝುಂಡೂ ಆಯುರ್ವೇದ್ಯಸ್ಥ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–27)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೧೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೬೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.ಎಫ್.ಎಸ್.ಎಸ್.(ಲಂಡನ್). ಜನರಲ್ ಮ್ಯಾನೇಜರ್, ಅಜ್ಮೀರ್.

12–23

ಈ ವಾರದ ಪುಟ್ಟ ಕಥೆ.

ಅವಳಿಗಾಗಿ.

(ಲೇಖಕ—ಶ್ರೀ ಸುಭದ್ರಾತನಯ.)

—"ಶಾಂತಂ ಪಾಪಂ! ಅತ್ಯಾಚಾರ! ಅಧರ್ಮ, ಅಧಃಪಾತ! ಎಂದು ಆರ್ಯ ಸಂಸ್ಕೃತಿಯು ಬೆಚ್ಚಿಬಿದ್ದು ಕೂಗಿಕೊಳ್ಳುತ್ತಿರುವುದು. ಹೀಗಿರಲು ಮುಂದಿನ ಏಳಿಗೆಯನ್ನು ಬಯಸದ ನೀನು, ನಿನ್ನ ಜನ್ಮ ವ್ಯರ್ಥ, ನಿನಗೆ ವಿದ್ಯೆ ಏತಕ್ಕೆ? ನಿಮ್ಮನೇಕೆ ಸಾಕಿ ಸಲಹುವುದು? ನಿನ್ನ ಆರೋಗ್ಯವನ್ನು ಏತಕ್ಕೆ ಬಯಸುತ್ತಿರುವದು? ನಿನ್ನ ಈ ಅನಾಚಾರಕ್ಕೆ? ನೀನು ಶಾಲೆಗೆ ಯೋಗ್ಯನಲ್ಲ. ಎಲ್ಲಾದರೂ ಬೀದಿಯಲ್ಲಿ ಶೋಕು ಮಾಡಿ ಸಿಗರೇಟನ್ನು ಬಾಯಲ್ಲಿಟ್ಟು ಕಣ್ಣನ್ನು ಅಚೀಚೆಕಡೆ ತಿರುಗಿಸಿ ನಡೆಯಲೇ ಯೋಗ್ಯ. ಸುಮ್ಮನೆ ನಿನ್ನ ತಾಯಿಯ ಹಟಕ್ಕಾಗಿ ಶಾಲೆಗೆ ಹಾಕಿದೆ. ನಿನಗೆ ಕೊಟ್ಟ ಹಣವನ್ನು ಬೇಂಕಿನಲ್ಲಿಡುತ್ತಿದ್ದರೆ ಇಷ್ಟರೊಳಗೆ ರೂ. 10 ಸಾವಿರ ಕೂಡುತ್ತಿತ್ತು. ಆ ಹಣದಿಂದ ನಿನಗೆ ಜೀವನ ನಡೆಸಬಹುದಿತ್ತು. ಯಾಕೆ ನಿನ್ನನ್ನು ಶಾಲೆಗೆ ಹಾಕಿದೆ?" ಎಂದು ನೀಲಕಂಠ ಶಾಸ್ತ್ರಿಗಳು ತನ್ನ ಮಕ್ಕಳಿಬ್ಬರ ಎದುರಿನಲ್ಲಿ ಗುಲ್ಲೆಬ್ಬಿಸಿದ್ದರು.

'ಕಾಫಿಯಾಯಿತು' ಎಂದು ಸತಿ-ಸುಶೀಲಮ್ಮನವರೆಂದರು. 'ನೋಡಿದೆಯಾ ನಿನ್ನ ಮಕ್ಕಳ ಬುದ್ಧಿ. ನಿನಲ್ಲವೇ ಅಂದು ಹೇಳಿದ್ದು. ಶಾಲೆಗೆ ಕಳುಹಿಸಬೇಕು, ವಿದ್ಯಾವಂತರನ್ನಾಗಿ ಮಾಡಬೇಕು. ಅದು ಮಾಡಬೇಕು—ಇದು ಮಾಡಬೇಕು. ಅಂದದ್ದು. ನೋಡು! ಇಂದು ಸತ್ಯಶಂಕರನಿಗೆ ಆ ಮಾಜಿಸಬ್‌ರಿಜಿಸ್ಟ್ರಾರರ ಮಗಳನ್ನು ಮದುವೆಯಾಗಬೇಕಂತೆ. ನನ್ನೆದುರು ಕೇಳಲು ನಿಂತಿದ್ದಾನೆ. ಎಂಥ ಧೈರ್ಯ! ಇವನಿಗೆ. ಅವಳನ್ನು ಮದುವೆಯಾದನಂತರ ನಿನಗಿನ್ನು ಎರಡು ಕೈಗಳಿಂದ ತಿನ್ನಬಹುದು.' 'ಹೌದು! ನೀನೀಗ ಸುಮ್ಮನೆ ಲೋಕನಾಥನನ್ನೇಕೆ ಬಯ್ಯುವಿ, ಅವನೇನು ಮಾಡಿದನು. ಬಾ ಲೋಕೋ!' ಎಂದು ಸುಶೀಲಮ್ಮನವರು ಮಗನನ್ನು ಕರೆದುಕೊಂಡು ಒಳಗೆ ಹೋದಳು. 'ಇಂದು ಅನ್ನ, ನಾಳೆ ಇನ್ನು. ಮೇಲುಪಂಕ್ತಿ ಬರೆದಂತೆ ಕೀಳುಪಂಕ್ತಿ' ಎನ್ನುತ್ತಾ ಶಾಸ್ತ್ರಿಗಳು ಒಳಗೆ ಹೋದರು.

ಸತ್ಯಶಂಕರನು ಮಂಗಳೂರಿನಲ್ಲಿ ಕೊಲೇಜಿನಲ್ಲಿ ಬಿ. ಎ. ತರಗತಿಯಲ್ಲಿ ಓದುತ್ತಿದ್ದನು. ಅವನ ತಮ್ಮನು ಊರ ಶಾಲೆಯೊಂದರಲ್ಲಿ ಕಲಿಯುತ್ತಿದ್ದನು. ಕಲಿಯುವುದರಲ್ಲಿ ಸತ್ಯಶಂಕರನನ್ನು ಮೀರಿದವರಿಲ್ಲ. ಬಹಳ ಚತುರನು, ನೋಡಲು ಸುಂದರನು. ಇವನನ್ನು ಪ್ರತಿಯೊಬ್ಬ ಉಪಾಧ್ಯಾಯರೂ ಪ್ರೀತಿಸುತ್ತಿದ್ದರು. ಅಂದ ಮೇಲೆ ಹುಡುಗರು ಇವನ ಮೇಲೆ ಪ್ರೀತಿಯಿಡದಿರುವರೇ? ಅಂತೂ ಹೇಳುವುದಿದ್ದರೆ ಎಲ್ಲರಿಗೂ ಇವನಲ್ಲಿ ಪ್ರೇಮ. ಇವನ ತರಗತಿಯಲ್ಲಿ ಕೆಲವು ಹುಡುಗಿಯರೂ ಇದ್ದರು. ಇನ್ನು ಅವರಿಗೆ ಇವನಲ್ಲಿ ಪ್ರೇಮವಿಲ್ಲವೆಂದು ಪ್ರತ್ಯೇಕ ಹೇಳಬೇಕೇ? ಎಲ್ಲರೂ ಸರಿಯಾಗಿ ವೇಶ ಹಾಕಿಕೊಂಡವರೇ. ಅವರ ಓರೆ ನೋಟ, ಅವರ ನಡತೆ ಇವನ್ನು ಕಂಡು ಹಲವು ಹುಡುಗರು ಇವರಿಗೆ ಮರುಳಾಗಿದ್ದರಲ್ಲದೆ ಅವರಲ್ಲಿ ಕೆಲವರು ತಾವು ಮದುವೆಯಾಗುವೆನೆಂದೂ ಭಾಷೆ ಕೊಟ್ಟಿದ್ದರು. ಅಂಥವರಲ್ಲಿ ನಮ್ಮ ಸತ್ಯಶಂಕರನೊಬ್ಬನು.

ಸತ್ಯಶಂಕರನು ಈ ತನಕ ತಂದೆಯ ಮಾತನ್ನು ಮೀರಿದವನಲ್ಲ. ಇವನು ಏನು ಕೇಳಿದರೂ ತಂದೆಯವಕ್ಕೆ ಒಪ್ಪದೆ ಇದ್ದದ್ದೂ ವಿರಳ. ಹೀಗಿದ್ದದರಿಂದ ಅವನು ಕೇಳಲು ಕಾರಣವಾಯಿತು. ಶಾಸ್ತ್ರಿಗಳಿಗೇಕೋ ಇಂದು ಬಲು ಸಿಟ್ಟು.

ಸತ್ಯಶಂಕರನು ಪ್ರೀತಿಸಿದವಳಾದರೂ ಬರೀ ಕಾಲಿ ಅನ್ನವನ್ನಲ್ಲ. ಜಾತಿಯಲ್ಲಿ ಮೀಕನಿನವಳಾದರೂ ನೀತಿಯಲ್ಲಿ ಅವಳನ್ನು ಮೀರಿದವರಿಲ್ಲ. ಒಂದು ದಿನ ಅವಳೇ ಇವನೊಡನೆ ಪ್ರಥಮತಃ ಮಾತಾಡಿದ್ದು. ಅಷ್ಟರ ತನಕ ಅವನು ಯಾರೊಂದಿಗೂ (ಅಂದರೆ ಸ್ತ್ರೀಯರಲ್ಲಿ ಮಾತ್ರ) ಮಾತಾಡಿದವನಲ್ಲ. ಅವರ ಕಡೆ ನೋಡಿದವನೂ ಸವೋತ ಅಲ್ಲ. ಇವನ ರೂಪ, ಇವನ ಕಲಿಯುವಿಕೆಗಳನ್ನೂ ಕಂಡು ಮರುಳಾಗಿ ಅವಳೇ ಒಂದು ದಿನ 'ನೀವು ನಮ್ಮ ಮನೆಗೆ ಬರಬೇಕು' ಎಂದು ಕರೆದಳು. ಆರು ಕರೆದರೂ ಶಾಂತ ಸ್ವಭಾವದ ಸತ್ಯ ಶಂಕರನು ಈ ತನಕ 'ನಾನು ಬರಲಾರೆ' ಎಂದವನಲ್ಲ 'ಆಗಲಿ' ಎಂದ.

ಪದ್ಮಾವತಿ ಸೋನ್ಸು ಎಂದರೆ ಬಹಳ ಜೆಲುವಿನ ಹುಡುಗಿ. ಅವಳು ಅಲ್ಲಿನ ಸಬ್ ರಿಜಿಸ್ಟ್ರರರ ಮಗಳು. ಒಬ್ಬಳೇ ಮಗಳಾದ್ದರಿಂದ ಅವಳನ್ನು ಎಷ್ಟು ಕಲಿಸಲೂ ಅವರು ಹಿಂದೆಗೆಯುತ್ತಿರಲಿಲ್ಲ. ಕಲಿಯುವುದರಲ್ಲಿಯೂ ಸತ್ಯಶಂಕರನನ್ನು ಬಿಟ್ಟರೆ ಅವಳೇ ಮತ್ತೆ ಕ್ಲಾಸಿನಲ್ಲಿ. ಪದ್ಮಾವತಿಯ ಕೋರಿಕೆಯಂತೆ ಸತ್ಯಶಂಕರನು ಇಂದು ಅವಳ ಮನೆಗೆ ಬಂದನು. ಆದಿತ್ಯವಾರವಾದ್ದರಿಂದ ತಂದೆ ತಾಯಿ ಎಲ್ಲರೂ ಮನೆಯಲ್ಲಿದ್ದರು. ಬಂದವನು 'ಎಲ್ಲಿ ಪದ್ಮಾವತಿಸೋನ್ಸು' ಎಂದನು. ಅವನ ಸ್ವರ ಕೇಳಿದ ಕೂಡಲೇ ಅವಳು ಹೊರ ಬಂದಳು. 'ಬನ್ನಿ ಈ ಕಡೆ' ಎಂದು 'ಶೇಕ್ ಹೇಂಡ' ಮಾಡಿ ಒಂದು ಕುರ್ಚಿಯನ್ನು ತೋರಿಸಿದಳು. ಅವಳ ತಂದೆ ತಾಯಿಗಳಿಗೆ ಇವನ ಪರಿಚಯವನ್ನು ಮಾಡಿ ಕೊಟ್ಟಳು. ಅವರು ಬಹಳ ಸಂತೋಷಪಟ್ಟರು. 'ಪ್ರತಿ ಆದಿತ್ಯವಾರವೂ ಇಲ್ಲಿ ಬನ್ನಿ' ಎಂದು ಆದರದಿಂದ ನುಡಿದರು. ಪದ್ಮಾವತಿಯು ಅವನನ್ನು ತನ್ನ ಕೋಣೆಗೆ ಕರೆದುಕೊಂಡು ಹೋದಳು.

ಈಗ ಅವರಿಬ್ಬರೇ. ಅವಳು ತಮ್ಮ ಪಾಠದ ವಿಷಯ ಹಲವು ಪ್ರಶ್ನೆಗಳನ್ನು ಮಾಡಿ ಸತ್ಯಶಂಕರನೊಡನೆ ವಾದಮಾಡತೊಡಗಿದಳು. ಅವನಿಗೆ ತನ್ನಲ್ಲಿ ಪಾಠಗಳ ವಿಷಯ ವಾದ ಮಾಡುವವರಲ್ಲಿ ತುಂಬಾ ಆದರ. ಆದ್ದರಿಂದ ಪದ್ಮಾವತಿಯಲ್ಲಿ ಅವನಿಗೆ ಪ್ರೇಮವು ಹುಟ್ಟಿತು. ಅವನು ಹೀಗೆಂದನು—'ಪದ್ಮಾವತಿ! ನೀನು ಇಷ್ಟು ತಿಳಿದವಳಾಗಿ ನನ್ನೊಡನೆ ಇಷ್ಟು ಚಿಕ್ಕ ವಿಷಯದಲ್ಲಿ ಯಾಕೆ ವಾದಿಸುವೆ. ಸುಮ್ಮನೆ ತಲೆ ಹಾಳು ಮಾಡಿಕೊಳ್ಳಬೇಡ. ಇದೆಲ್ಲ ಬರೀ ಅಲ್ಪವಾದ ವಿಷಯ' ಎಂದನು. 'ಆಗಲಿ, ನಿಮಗೆಲ್ಲಾ ಇದು ಅಲ್ಪ ವಿಷಯ' ಎಂದು ನಸುನಕ್ಕಳು. ಅವಳ ನಗುವನ್ನು ಸತ್ಯಶಂಕರನು ಸರಿಯಾಗಿ ನೋಡಿದ್ದನು. ಏನೋ ಒಂದು ಆಶೆ ಇದ್ದಂತೆ ಕಂಡಿತು ಆ ನಗುವಿನಲ್ಲಿ. ಅವನಿಗೂ ಅದರ ಕಾರಣವನ್ನು ತಿಳಿಯಲು ಆಶೆಯಾಯಿತು. ಪ್ರತ್ಯುತ್ತರವಾಗಿ ಅವನೂ ಒಂದು ನಸುನಗು ನಕ್ಕನು. ಮತ್ತೆ ಕುರ್ಚಿಯಿಂದ ಎದ್ದು 'ನಾನಿನ್ನು ಹೋಗಲೇ?' ಎಂದನು. 'ಆಯಿತು ಬರುವ ಆದಿತ್ಯವಾರ ಬರುವಿರಾ?' ಎನ್ನುತ್ತಾ ಹತ್ತಿರ ಬಂದಳು. 'ಆಗಬಹುದು' ಎನ್ನುತ್ತಾ ಸತ್ಯಶಂಕರನು ತನ್ನ ಕೈಯನ್ನು ಅವಳ ಕೈಗೆ ಕೊಟ್ಟನು. ಆಗವಳು ಅದನ್ನೆಳೆದುಕೊಂಡು ಚುಂಬಿಸಿದಳು. ಸತ್ಯಶಂಕರನು ನಸುನಕ್ಕನು. ಇಬ್ಬರೂ ಹತ್ತಿರ ಸೇರಿದರು. ಅಲ್ಲದೆ ತಮ್ಮ ಪ್ರೇಮವೆಂಬ ಬೀಜವನ್ನು ಬಿತ್ತಿ, ಅದಕ್ಕೆ ನೀರೆರೆಯಲಾರಂಭಿಸಿದರು. ಒಂದು ಗಳಿಗೆ ಇಬ್ಬರೂ ಸ್ವರ್ಗ ಸುಖವನ್ನು ಪಡೆದರು. ಸತ್ಯಶಂಕರನು ಹೊರಟನು. ಪದ್ಮಾವತಿಯು 'ಬರುವಿರಷ್ಟೆ' ಎನ್ನುತ್ತಾ ಅವನು ಹೋಗುವವನನ್ನು ನೋಡುತ್ತಾ ನಿಂತಳು.

ಸತ್ಯಶಂಕರನು ಇಂದು ಖಂಡಿತ ಮಾಡಿ ಬಂದಿದ್ದನು. 'ಅಪ್ಪಾ! ನಾನವಳನ್ನು ಮದುವೆಯಾಗುವುದು ಖಂಡಿತ. ನೀನೆಷ್ಟು ಹೇಳಿದರೂ ಈ ವಿಷಯದಲ್ಲಿ ಮಾತ್ರ ನೀನು ನನ್ನನ್ನು ಕ್ಷಮಿಸಬೇಕು, ಜಾತಿಯಲ್ಲೇನಿದೆ? ಎಲ್ಲರೂ ಒಂದೇ. ಅವಳ ಮನೆ ಮತ್ತು ನಮ್ಮ ಮನೆ ಇವೆರಡನ್ನು ನೋಡಿದರೆ ಯಾರದು ಬ್ರಾಹ್ಮಣರ ಮನೆ, ಯಾರದು ಶೂದ್ರರ ಮನೆ ಎಂದು ತಿಳಿಯುವುದು. ಇರಲಿ, ಜಾತಿ ನೀತಿ ವಿಚಾರ. ಎಷ್ಟು ನಿರ್ಮಲ ಹೃದಯರು ಅವರು. ನೀನೊಮ್ಮೆ ಅವಳನ್ನು ನೋಡಿದರೆ ಸಾಕು. ಎಷ್ಟು ಚೆಲುವೆಯವಳು? ಅವಳ ಗುಣವೆಷ್ಟು? ಇವನ್ನೆಲ್ಲ ಕಂಡರೆ ನೀವೇ ಹೇಳುವಿರಿ.' 'ಏನು ನನ್ನೆದುರು ನಿನ್ನ ಈ ಹಿತಬೋಧನೆಯೇ? ನೀನು ಹುಟ್ಟಿ ಇನ್ನೂ ವರ್ಷ 25 ಆಗಲಿಲ್ಲ. ನಿನಗೆ ಧರ್ಮದ ವಿಚಾರ ಏನು ಗೊತ್ತು? ನೀನಾವ ಧರ್ಮ ಗ್ರಂಥವನ್ನು ಓದಿರುವಿ. ಚೆಂದ ಕಂಡದ್ದೆಲ್ಲಾ ಒಳ್ಳೆಯದೆಂದರಿಯಬೇಡ. ಬೆಳ್ಳಗಿದ್ದದ್ದು ಹಾಲಲ್ಲ. ಕೆಲವೊಮ್ಮೆ ಸುಣ್ಣದ ನೀರು ಸಮೇತ ಬೆಳ್ಳಗಿರುತ್ತದೆ. ಅದೆಲ್ಲಾದರೂ ಕಣ್ಣಿಗೆ ತಾಗಿದರೆ ಏನು ಗತಿಯಾಗುವುದೆಂದು ಗೊತ್ತಿದೆಯೋ? ಎಂದು ಶಾಸ್ತ್ರಿಗಳು ಘರ್ಜಿಸಿದರು. 'ಇಲ್ಲಪ್ಪಾ, ಇದು ಸುಣ್ಣದ ನೀರಲ್ಲ. ಖಂಡಿತವಾಗಿಯೂ ಹಾಲು. ನೀನವರ ಮನೆಯವರ ಗುಣವನ್ನು ನೋಡಬೇಕು' ಎಂದನು. 'ನೀನು ಹೀಗೆಲ್ಲಾ ಮಾಡುವಿಯಾದರೆ ಆ ಮೇಲೆ ಇಲ್ಲಿ ಕಾಲಿಡಬಾರದು. ಕಂಡೆಯಾ! ನಿನಗಿಲ್ಲಿಯ ನೀರು ಸಂದಿತು. ನನ್ನೊಬ್ಬ ಮಗನು ತೀರಿದನೆಂದೇ ನಾನು ಗ್ರಹಿಸುತ್ತೇನೆ. ಅವರ ಮಾತಿಗೆ ಮರುಳಾಗಿ ಹೀಗೆಲ್ಲಾ ಮಾತಾಡುವಿಯೆಂದು ತೋರುತ್ತೆ, ಬೇಡ ನಿನಗೆ. ನಾನು ಹೇಳಿದುದು ನೀನು ಕೇಳದಿದ್ದರೆ ನಿನ್ನ ವಿದ್ಯಾಭ್ಯಾಸವೂ ಇಲ್ಲಿಗೆ ಕೊನೆಗೊಂಡಿತೆಂದು ತಿಳಿದುಕೋ' ಎಂದರು. 'ಏನೇ ಆಗಲಿ, ನಾನು ಅವಳನ್ನು ಮದುವೆಯಾಗುವುದು ಖಂಡಿತ. ನನಗೆ ನಿಮ್ಮ ಜಾತಿಯೂ ಬೇಡ, ನಿಮ್ಮ ಹಣವೂ ಬೇಡ' ಎಂದು ಮನೆಯಿಂದ ಹೊರಟನು. ಮತ್ತವನು ಆ ಕಡೆ ತಿರುಗಿ ಸಹ ನೋಡಲಿಲ್ಲ. 'ಹೋದರೆ ಹೋಗಲಿ' ಎಂದು ಶಾಸ್ತ್ರಿಗಳು ಸುಮ್ಮನಿದ್ದರು.

ಮಧ್ಯಾಹ್ನ ಊಟ ತೀರಿಸಿ ಶಾಸ್ತ್ರಿಗಳು ಕೋಣೆಯಲ್ಲಿ ಆರಾಮ ಕುರ್ಚಿಯ ಮೇಲೆ ಮಲಗಿದ್ದರು. ಕೈಯಲ್ಲಿ ಸ್ಥಳೀಕ ಪತ್ರಿಕೆಯೊಂದನ್ನು ತೆಗದು ಓದುತ್ತಿದ್ದರು. ಯಾವಾಗಿನ್ನು ಓದುವಂತೆ ಅವರ ಮಧ್ಯದಿಂದ ಕಾಗದ ತೆಗೆದು ಎದುರಿಗೆ ಹಿಡಿದರು. ನೋಡುವುದೇನನ್ನು? ಶಾಸ್ತ್ರಿಗಳಿಗೆ ಕಣ್ಣು ಕತ್ತಲೆ ಬಂತು. 'ಸುಶೀಲಾ' ಎಂದರು. ಸುಶೀಲಮ್ಮನವರು ಬರುವಾಗ ಶಾಸ್ತ್ರಿಗಳು ಮೂರ್ಛೆ ಹೋಗಿದ್ದರು. ಏನೆಂದು ಭಾಸವಾಗಲಿಲ್ಲ. ಹತ್ತಿರದಲ್ಲೇ ಬಿದ್ದಿದ್ದ ಪತ್ರಗಳನ್ನು ನೋಡಿದರು. ಒಂದರಲ್ಲಿ 'ಸತ್ಯಶಂಕರನ ಮತ್ತು ಪದ್ಮಾವತಿ ಸೋನ್ಸು ಇವರ ಭಾವಚಿತ್ರಗಳಿದ್ದವು. ಅಲ್ಲದೆ 'ಮಿಶ್ರ ವಿವಾಹ' ಎಂದು ಮೇಲೆ ದೊಡ್ಡದಾಗಿ ಬರೆದಿದ್ದಿತು. ಅಲ್ಲದೆ ಅವರ ಕುಲ ಗೋತ್ರಗಳನ್ನು ವಿವರಿಸಿ ಅವರ ಮಿಶ್ರ ವಿವಾಹಕ್ಕೆ ಸಂತೋಷಪಟ್ಟ ಮಹನೀಯರ ಅಭಿಪ್ರಾಯವಿದ್ದಿತು. ಮೇಜಿನ ಮೇಲೆ ಇನ್ನೊಂದು ಪತ್ರವಿದ್ದಿತು. ಅದನ್ನೂ ನೋಡಿದರು. ಅದು ಸತ್ಯಶಂಕರನು ಬರೆದ ಪತ್ರ—ತಾಯಿಗೆ. ಅದರಲ್ಲಿ ಹೀಗಿತ್ತು:—

'ಅಮ್ಮಾ! ನಾನಿಂದು ನಿಮ್ಮ ಬಂಧನದಿಂದ ಹೊರಗಾದೆ. ಧರ್ಮವನ್ನು ತ್ಯಜಿಸಿದೆ. ನಿಮ್ಮೆಲ್ಲರನ್ನು ತ್ಯಾಗ ಮಾಡಿದೆ. ಅಪ್ಪನವರಿಗೆ ಇದರಿಂದ ಖೇದವಾಗಬಹುದು. ಅವರನ್ನು ಸಮದಾಯಿಸು. ನೀನು ಇಷ್ಟರತನಕ ನನ್ನನ್ನು ಪ್ರೀತಿಯಿಂದ ಸಲಹಿದೆ. ಇನ್ನು ನನ್ನನ್ನು ಹಾಗೆ ಕಾಣು. ಇಂದು ನಿಮ್ಮೆಲ್ಲರನ್ನೂ ತ್ಯಜಿಸಿದ್ದು ಯಾವುದಕ್ಕಾಗಿ ಅರಿತಿರುವೆಯಾ?— ಅವಳಿಗಾಗಿ.'

ಇಂತಿ ನಿನ್ನ,
ಸತ್ಯಶಂಕರ.

ಹಿಂದೂ-ಮುಸ್ಲಿಂ ಐಕ್ಯ ಹೇಗೆ?

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ವಿವಿಧ ಮತೀಯರು ಭಾರತದಲ್ಲಿ ವಾಸಿಸುವರೆಂದ ಮಾತ್ರಕ್ಕೆ ಭಾರತೀಯರು ಭಿನ್ನ ಜನಾಂಗದವರಲ್ಲ. ಹಿಂದೂದೇಶವು ಹಿಂದಿಯರಿಂದಲೇ ತುಂಬಿ ಹಿರಿದಾಗಿ ಮೆರೆಯಬೇಕೆಂಬುದು ಹಿತೋಕ್ತಿಯಲ್ಲ. ಮತಗಳು ಪರದೈವ ಸಾಧನೆಗೆ ವಿವಿಧ ಮಾರ್ಗಗಳೇ ವಿನಹ ಜನಾಂಗವನ್ನು ಬೇರ್ಪಡಿಸುವ ಸಾಧನಗಳಲ್ಲ. ನಮ್ಮೊಳಗೆ ಜಗಳಾಡಿಕೊಂಡು ಮೂರನೆಯವರ ಹತ್ತಿರ ಹೋಗುವದು ಯೋಗ್ಯತೆಯಲ್ಲ. ಹಿಂದೂ-ಮುಸ್ಲಿಮರ ಐಕ್ಯತೆಗೆ ಮತವಾಗಲೀ, ಗೋವಧೆಯಾಗಲೀ ಇತರ ತತ್ವಗಳಾಗಲೀ ತಡೆ ಇಲ್ಲ. ಭಾರತವು ಏಕ ಜನಾಂಗವೆಂಬುದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬನೂ ಹೀಗೆ ತಿಳಿದಲ್ಲದೆ ಭಾರತೀಯರಾದ ನಮಗೆ ಪ್ರಗತಿ, ಪ್ರತಿಷ್ಠೆ ಯಾವುದೂ ಇಲ್ಲವೇ ಇಲ್ಲ.

ಕಳೆದ ಲೇಖನದ ಪರಿಣಾಮದಿಂದ ವಾಚಕರ ಮನಸಿನಲ್ಲುತ್ಪನ್ನವಾಗಿರಬಹುದಾದ ಮೇಲಿನ ಪ್ರಶ್ನೆಯು ತೀರಾ ಜಟಿಲವಾದದ್ದಾದರೂ, ಕೂಲಂಕುಶ ವಿವೇಚನೆಯಿಂದ ಅದರ ಉತ್ತರವು ಸುಲಭವಾಗಿ ದೊರಕುವದು. ಪ್ರಥಮತಃ ಹೇಳುವದಾದರೆ ಮೇಲ್ಕಂಡ ಪ್ರಶ್ನೆಯಾದರೂ ಗತ ಲೇಖನದಲ್ಲಿ ನಮೂದಿಸಿದ್ದಂತೆ ರೈಲ್ವೆ, ಲಾಯರುಗಳು ಮತ್ತು ಡಾಕ್ಟರುಗಳ ಸಂಪರ್ಕದ ಪರಿಣಾಮವೇ. ನಾವು ರೈಲ್ವೆಗಳ ವಿಚಾರ ಕಳೆದ ವಾರ ಪ್ರಸ್ತಾಪಿಸಿರುವಂತೆ ಮನುಷ್ಯನು ತನ್ನ ಕೈಕಾಲುಗಳ ಪರಿಮಿತಿ ದಾಟದೆ ಇರಬೇಕೆಂದೇ ಪ್ರಕೃತಿಯಿಂದ ರಚಿಸಲ್ಪಟ್ಟಿರುತ್ತಾನೆ. ರೈಲ್ವೆಗಳ ಸಹಾಯದಿಂದಾಗಲೀ ಅಥವಾ ಇತರ ಈ ತರದ ಹುಟ್ಟು ಸೌಕರ್ಯಗಳ ಸಹಾಯದಿಂದಾಗಲೀ ನಾವು ಸ್ವಾಭಾವಿಕ ಸ್ಥಿತಿಗೆ ವಿರುದ್ಧವಾದರೆ ಈಗ ದೊರೆಯುತ್ತಿರುವ ಅವ್ಯವಸ್ಥೆಯು ಕಲ್ಪಿತವಾಗುವದರಲ್ಲಿ ಸಂದೇಹವಿಲ್ಲ. ನಮ್ಮ ಕಷ್ಟಗಳನ್ನು ನಾವಾಗಿ ಕಲ್ಪಿಸಿಕೊಳ್ಳುವದಾಗಿದೆ. ಮಾನವ ದೇಹದ ಚಲನವಲನಕ್ಕೂ, ಅದರ ಆಶೆ ಅಭಿಲಾಷೆಗಳಿಗೂ ದೇವರು ಅದರ ರಚನೆಯಲ್ಲಿ ಒಂದು ಮಿತಿಯನ್ನಿಟ್ಟಿರುವನು. ಆದರೆ ಮಾನವನು ಈ ಪರಿಮಿತಿಯನ್ನು ದಾಟಿ ವರ್ತಿಸುತ್ತಿರುವನೆಂಬುದು ದೇವರಿಗೆ ಒಡನೆ ಗೊತ್ತಾಯಿತು, ಮಾನವನಿಗೆ ದೇವರು ಬುದ್ಧಿ ಸಾಮರ್ಥ್ಯವನ್ನಿತ್ತದ್ದು ತನ್ನ ನಿರ್ಮಾಣಕರ್ತನನ್ನು ತಿಳಿದುಕೊಳ್ಳಲಿಕ್ಕಾಗಿ. ಆದರೆ ಮಾನವನು ಇದನ್ನು ತೃಣೀಕರಿಸಿ ನಿರ್ಮಾಣಕರ್ತನನ್ನೇ ಮರೆಯುತ್ತಿರುವನು. ಅವನು ತನ್ನ ಸುತ್ತುಮುತ್ತಲಿನ ಯಾ ಹತ್ತಿರದ ನೆರೆಯವನಿಗೆ ಸಹಾಯಮಾಡುವಂತೆ ಅವನ ಪ್ರಕೃತಿಯು ರಚಿತವಾಗಿದೆ. ಆದರೆ ಮಾನವನ ಹುಟ್ಟುತನದಲ್ಲಿ ಪ್ರಕೃತಿಯಲ್ಲಿರುವ ಪ್ರತಿ ವ್ಯಕ್ತಿಗೂ ಸಹಾಯ ಮಾಡಬೇಕೆಂಬ ಬೋಧನೆಯನ್ನು ಮಾಡಿ ಮುಂದರಿದಿರುವೆನೆಂದು ನಟಿಸುವದು ತಪ್ಪು. ಹೀಗೆ ತನ್ನಿಂದ ಅಸಾಧ್ಯವಾದದ್ದನ್ನು ಪ್ರಯತ್ನಿಸಿ ಮಾನವನು ವಿಧವಿಧ ಮತಗಳ, ವಿವಿಧ ವಿಚಾರಗಳ ಸಂಪರ್ಕದಿಂದ ದಿಙ್ಮೂಢನಾಗುವನು. ಈ ಕಾರಣಗಳಿಂದಾಗಿ ರೈಲ್ವೆಗಳು ಬಹು ಅಪಾಯಕರವಾದ ಸಂಸ್ಥೆಗಳೆಂಬುದು ತಿಳಿದು ಬರಬಹುದು. ಇವುಗಳ ಪರಿಣಾಮದಿಂದಾಗಿಯೇ ಮನುಷ್ಯನು ತನ್ನ ನಿರ್ಮಾಣಕರ್ತನಿಂದ ದೂರ ಸರಿಯುತ್ತಿರುವನು.

ಈಗಾಗಲೇ ವಾಚಕರ ಮನಸ್ಸಿನಲ್ಲಿ ಹಿಂದೂ ದೇಶೀಯರು ಏಕ ಜನಾಂಗವೆಂಬ ವಿಚಾರವನ್ನು ತೆಗೆದುಕೊಂಡು ಮಾನವ ದೇಹಾಕೃತಿಯ ವಿಚಾರ ತರ್ಕಿಸುವ ಉದ್ದಿಶ್ಯವೇನೆಂಬ ಸಂದೇಹವು ಮೂಡಿರಬಹುದು. ಆದ್ದರಿಂದ ಪ್ರಕೃತ ಆ ಪ್ರಶ್ನೆಯನ್ನೇ ತರ್ಕಿಸೋಣ. ವಿವಿಧ ಜನಾಂಗಗಳ ಸಮ್ಮಿಲನದಿಂದ ಭಾರತೀಯರು ವಿವಿಧ ಜನಾಂಗದವರು ಎಂದು ಭಾವಿಸಕೂಡದು. ಬೇರೆ ಬೇರೆ ಮತಾನುಯಾಯಿಗಳು ಭಾರತದಲ್ಲಿ ವಾಸಿಸುವರೆಂದ ಮಾತ್ರಕ್ಕೆ ಭಾರತವು ಒಂದೇ ಜನಾಂಗವಲ್ಲವೆಂದು ಯಾರೂ ಸಮರ್ಥಿಸಲಾಗದು. ಪರದೇಶೀಯರು ಬಂದು ಇಲ್ಲಿ ವಾಸಿಸುತ್ತಿದ್ದರೆ ಭಾರತವು ಏಕ ಜನಾಂಗವೆಂಬುದನ್ನು ಮಾರ್ಪಡಿಸಲಾಗದು. ಎಲ್ಲಾ ಮತಗಳೂ ಸಮುದ್ರದಲ್ಲಿ ನದಿಗಳು ಸೇರಿದಂತೆ ವಿಶಾಲ ಭಾರತದ ಏಕ ಜನಾಂಗದಲ್ಲಿ ಮಿಲನವಾಗುವವು. ಭಾರತವು ಅನಾದಿಯಿಂದ ತನ್ನ ಈ ವರ್ಚಸ್ಸನ್ನು ಕಾಯ್ದುಕೊಂಡಿದೆ. ವಸ್ತುತಃ ಪರೀಕ್ಷಿಸಿದರೆ ಭಾರತದಲ್ಲಿ ಪ್ರತಿಯೊಬ್ಬನಿಗೊಂದರಂತೆ ಮತಗಳಿರುವವು. ಆದರೆ ರಾಷ್ಟ್ರೀಯತೆಯ ಆ ಭಾವನೆಯನ್ನು ತಳೆದವರು ಬೇರೆ ಜನಾಂಗದವರ ಗೋಜಿಗೆ ಹೋಗುವದಿಲ್ಲ. ಅವರು ಹೋದದ್ದೇ ಆದರೆ ಅವರನ್ನು ಒಂದು ಜನಾಂಗವೆಂದು ಕರೆಯಲಾಗುವದಿಲ್ಲ. ಹಿಂದೂ ದೇಶವು ಬರೇ ಹಿಂದೀಯರಿಂದಲೇ ತುಂಬಿರಬೇಕೆಂದು ಹಿಂದುಗಳು ಭಾವಿಸಿದರೆ ಅವರು ಕನವರಿಸುತ್ತಿರುವರೆಂದು ಹೇಳಬೇಕು. ತಮ್ಮದೇ ದೇಶ ಎಂಬ ಭಾವನೆಯಿಂದ ಜೀವಿಸುತ್ತಿರುವ ಹಿಂದೂಗಳು, ಮಹಮ್ಮದೀಯರು, ಪಾರ್ಸಿಗಳು ಮತ್ತು ಕ್ರಿಶ್ಚಿಯನರು ಸಹ ಒಗ್ಗಟ್ಟಿನಲ್ಲಿ ಜೀವಿಸಬೇಕು. ಏತಕ್ಕಾಗಿ? ತಮ್ಮ ತಮ್ಮ ಪ್ರಗತಿಗೋಸ್ಕರ ತಮ್ಮ ಅಭಿವೃದ್ಧಿ ಹಾಗೂ ಹಿತಚಿಂತನೆಯಿಂದ

ಆದರೆ ಹೃದಯಾಂತರಾಳದಿಂದ ಬೆಳೆದು ಬಂದಿರುವ ಹಿಂದೂ-ಮುಸ್ಲಿಂ ವಿರೋಧವನ್ನು ಮರೆಯುವದೆಂತು? ಎಂಬ ಪ್ರಶ್ನೆ ಬರುತ್ತದೆ. ಹಿಂದೂ ಮುಸ್ಲಿಮರು ಪರಸ್ಪರ ಕದನ ಮಾಡುತ್ತಿದ್ದ ಕಾಲಕ್ಕೆ ಅಂದರೆ ಮಹಮ್ಮದೀಯರು ಹಿಂದೂ ದೇಶಕ್ಕೆ ಪ್ರಥಮತಃ ಬಂದಾಗ ಅವರಲ್ಲಿ ಪರಸ್ಪರ ವಿರೋಧವೂ, ಕಲಹವೂ ಇತ್ತು. ಆದರೆ ಅದರ ನಂತರ ಮಹಮ್ಮದೀಯ ಅರಸರ ಕೈಕೆಳಗೆ ಹಿಂದುಗಳೂ, ಹಿಂದೂ ಅರಸರ ಕೈಕೆಳಗೆ ಮಹಮ್ಮದೀಯರೂ ಪರಸ್ಪರ ಐಕ್ಯತೆಯಿಂದ ಬಾಳಿದ್ದುಂಟು. ಆದರೆ ಬ್ರಿಟಿಷರು ಭಾರತಕ್ಕೆ ಕಾಲಿಕ್ಕಿದಂದಿನಿಂದ ಈ ವಿರೋಧಭಾವವು ತೀವ್ರವಾಗಿ ಹಬ್ಬತೊಡಗಿತು. ಆದರೆ ಇಂದು ಹಿಂದೂ ಮುಸ್ಲಿಮರು ಬದ್ಧವಿರೋಧಿಗಳೆಂದರೆ ಸಮಂಜಸವಾಗದು. ಏಕೆಂದರೆ, ಇಂದು ಎಷ್ಟೋ ಹಿಂದೂ, ಹಾಗೂ ಮುಸಲ್ಮಾನರು ಒಂದೇ ಮಾತಾಪಿತೃಗಳಿಂದ ಉದ್ಭವಿಸಿದವರಿದ್ದಾರೆ. ಆ ಅಜ್ಞಂಧಿತ ರಕ್ತಕಣಗಳು ಇಂದೂ ಅವರ ರಕ್ತದಮನಿಯಲ್ಲಿ ಹರಿದಾಡುತ್ತಿದೆ. ಜನತೆಯು ತನ್ನ ಮತವನ್ನು ಮಾರ್ಪಡಿಸಿಕೊಂಡರೆ ಪರಸ್ಪರ ವೈರತ್ವವೇಕೆ ಬರಬೇಕು? ಮಹಮ್ಮದೀಯರ ದೇವರು ಹಿಂದೂಗಳ ದೇವರಿಂದ ಭಿನ್ನವಾಗಿರುವನೇನು? ಮತಗಳು ಒಂದೇ ಸ್ಥಳಕ್ಕೆ ಹೋಗುವ ವಿವಿಧ ಮಾರ್ಗಗಳಂತೆ. ಒಂದೇ ಗುರಿಯನ್ನು ಮುಟ್ಟಲು ತಮಗಿಚ್ಛೆಬಂದ ದಾರಿಯನ್ನು ಹಿಡಿದು ನಡೆದರೆ ತಪ್ಪೇನು? ಮತಗಳ ಪರಸ್ಪರ ಜಗಳಕ್ಕೆ ಕಾರಣವೆಲ್ಲಿದೆ? ಶೈವರಿಗೂ ವೈಷ್ಣವರಿಗೂ ಪರಸ್ಪರ ವೈಷಮ್ಯವಿದೆ. ಅಂದರೆ ಅವರು ಭಿನ್ನ ಜನಾಂಗದವರೆನ್ನಲಿಕ್ಕಾಗುತ್ತದೆಯೇ? ವೇದಾಂತ ಮತಕ್ಕೂ, ಜೈನಮತಕ್ಕೂ ವ್ಯತ್ಯಾಸವಿರಬಹುದು. ಆದರೆ ಅದರ ಅನುಯಾಯಿಗಳೆಲ್ಲಾ ಒಂದೇ ಜನಾಂಗವಲ್ಲವೇನು? ಈ ಭಿನ್ನಾಭಿಪ್ರಾಯಕ್ಕೆ ಕಾರಣವೆಂದರೆ ಇಷ್ಟು. ನಾವು ಪರದಾಸ್ಯತೆಯಿಂದ ಬಂಧಿತರಾಗಿರುವದು. ಪರಸ್ಪರ ಜಗಳವಾಡಿ ಮೂರನೆಯವರ ತೀರ್ಮಾನಕ್ಕೆ ಹೋಗುವ ಆ ಪರಾವಲಂಬನವು ನಮ್ಮಲ್ಲಿ ಬೇರೂರಿದೆ. ನಾವು ವಿಚಾರಗಳನ್ನು ವಿವೇಚಿಸುತ್ತಾ ಮುನ್ನಡೆದರೆ ಮತಕ್ಕೂ ನಾವು ಅದರ ಹೆಸರಿನಿಂದ ಪರಸ್ಪರ ಜಗಳ ಮಾಡಿಕೊಳ್ಳುವದಕ್ಕೂ ಕಾರಣವೇ ಇಲ್ಲ. ಇದರಿಂದ ಭಾರತ ಮಹಾಶಯರಿಗೆ ಯಾವ ಮತವನ್ನಾಗಲೀ, ಯಾವನೊಬ್ಬನು ಅವಲಂಬಿಸಿದರೆ ಅದು ಕಲಹಬೀಜವಲ್ಲವೆಂದೂ, ಬರೇ ಅದು ನಮ್ಮ ನಿರ್ಮಾಣ ಕರ್ತನಿನ ತಿಳುವಿಗೆ ಒಂದು ದಾರಿಯೆಂದೂ ಖಚಿತವಾಗಿರಬಹುದು.

ಗೋವಧೆಯನ್ನು ನಿಲ್ಲಿಸುವದೆಂತು? ಈ ವಿಚಾರದಲ್ಲಿ ಪರಸ್ಪರ ಕಲಹಕ್ಕವಕಾಶವಿಲ್ಲವೇ? ಎಂದು ಸಂದೇಹಬರುತ್ತದೆ. ನಿಜ. ನಾವು ಗೋವುಗಳನ್ನು ಪೂಜ್ಯಭಾವದಿಂದ ನೋಡುತ್ತೇವೆ. ಭಾರತವನ್ನು ರಕ್ಷಿಸುವವಳೆಂದರೆ ಈ ಗೋಮಾತೆ. ಯಾಕೆಂದರೆ ಭಾರತವು ಕೃಷಿಕರ ದೇಶ. ಆದ್ದರಿಂದ ಗೋವುಗಳ ಅಭಿವೃದ್ಧಿಯಲ್ಲಿ ಭಾರತದ ಅಭಿವೃದ್ಧಿಯೂ ಕೂಡಿದೆಯೆಂಬದರಲ್ಲಿ ಸಂಶಯವಿಲ್ಲ. ಗೋವು ನೂರಾರು ವಿಧಾನಗಳಿಂದ ಮಾನವನಿಗೆ ಪ್ರಯೋಜನಕಾರಿ. ಇದನ್ನು ನಮ್ಮ ಮುಸಲ್ಮಾನ ಸಹೋದರರೂ ಅಲ್ಲಗಳೆಯರು. ಗೋವುಗಳನ್ನು ಯಾವ ಸ್ನೇಹದೃಷ್ಟಿಯಿಂದ ನೋಡುವೆವೋ ಹಾಗೆಯೇ ನಮ್ಮ ಸ್ನೇಹಿತರಿಗೂ ಮರ್ಯಾದೆಯನ್ನು ಕೊಡುವೆವು. ಒಬ್ಬ ಮನುಷ್ಯನು ಮಹಮ್ಮದೀಯನಿರಲಿ, ಅಥವ ಹಿಂದೂವಿರಲಿ ಅವನು ಈ ಗೋವಿನಷ್ಟೇ ಉಪಕಾರಿಯಲ್ಲವೇನು? ಹಾಗಿದ್ದಮೇಲೆ ಗೋವನ್ನು ಉಳಿಸಲು ಮನುಷ್ಯನನ್ನು ಕೊಲ್ಲುವದೇ? ಗೋವಧೆ ಮಾಡುವನೆಂಬ ನೆಪದಿಂದ ಮಹಮ್ಮದೀಯನನ್ನು ಕೊಲ್ಲುವದು ಸಮಂಜಸವಲ್ಲ. ಅಂಥಾ ಸಮಯದಲ್ಲಿ ಮಾಡತಕ್ಕ ಕರ್ತವ್ಯವೆಂದರೆ ಮಹಮ್ಮದೀ ಸಹೋದರನ ಹತ್ತಿರ ಹೋಗಿ ದೇಶದ ಕಲ್ಯಾಣಕ್ಕಾಗಿ ಹಾಗೂ ಆತನ ಹಿತಕ್ಕಾಗಿ ಅದನ್ನು ಕಾಪಾಡಲು ಕೇಳಿಕೊಳ್ಳಬೇಕು. ಅವನು ಅದಕ್ಕೆ ಒಪ್ಪದಿದ್ದಲ್ಲಿ ತನ್ನ ಕೈಯಿಂದ ಅದನ್ನು ಉಳಿಸಲು ಸಾಧ್ಯವಾಗಲಿಲ್ಲವೆಂಬ ಭಾವನೆಯಿಂದ ಬಿಡಬೇಕು. ತಾನು ಗೋವಧೆಯ ವಿಚಾರ ತುಂಬಾ ಕನಿಕರಪಡುವವನಿದ್ದರೆ ವಧೆ ಮಾಡುತ್ತಿರುವ ತನ್ನ ಸಹೋದರನ ಪ್ರಾಣಕ್ಕೆ ಹಾನಿತರುವದರ ಬದಲು ತನ್ನ ಜೀವವನ್ನೇ ಅರ್ಪಿಸಬೇಕು. ಇದೇ ಮತದ ಖಾನೂನು. ಇದರಿಂದಲೇ ಹಿಂದೂ ಮುಸ್ಲಿಮರ ಐಕ್ಯ. ಮತ್ತೊಂದು ವಿಚಾರ. ಮಾನವನಲ್ಲಿ ಒಂದು ವಿಶೇಷ ಗುಣವಿದೆ. ಅದೇ ಪ್ರತಿಯೊಬ್ಬನ ಇಚ್ಛಾ ಸ್ವಾತಂತ್ರ್ಯ. ಒಂದು ವಿಚಾರವನ್ನು ನಾವು ನಮ್ಮ ದೃಷ್ಟಿಯಲ್ಲಿ ಖಂಡಿಸಿದರೆ, ಅದನ್ನು ಸಮರ್ಥಿಸುವವನೂ ಇರಬಹುದು. ಒಂದು ಮಗುವನ್ನು ಒಂದು ಕೆಲಸವನ್ನು ಮಾಡುವದು ತಪ್ಪೆಂದು ತಡೆ ಹಾಕಿದಷ್ಟು ಅದರಲ್ಲಿ ಆ ಕೆಲಸವನ್ನು ಮಾಡಬೇಕೆಂಬ ಕುತೂಹಲವು ಹೆಚ್ಚುತ್ತದೆ. ಹಾಗೆಯೇ ಗೋವಧೆಯನ್ನು ಖಂಡಿಸಿ ಪ್ರಚಾರ ಸಾಗಿಸಿದಷ್ಟು ವಧೆಯು ತೀವ್ರವಾಗಿ ಹಬ್ಬುತ್ತದೆ. ಆದ್ದರಿಂದಲೇ ಗೋಪೋಷಕ ಸಂಸ್ಥೆಗಳು, ಈ ಕೆಲಸ ಮಾಡುತ್ತಿದ್ದ ಸಭೆಗಳ ಪ್ರಚಾರದಿಂದಾಗಿ ಇಂದು ಅವು ಗೋನಾಶಕ ಸಂಸ್ಥೆಗಳಾಗಿವೆ. ಅವುಗಳ ಪ್ರಚಾರ ಹೆಚ್ಚಿದಂತೆ ಗೋವಧೆಯೂ ಹೆಚ್ಚಾಗತೊಡಗಿದೆ. ಇಂಥಾ ಸಂಘಸಂಸ್ಥೆಗಳನ್ನಿಟ್ಟುಕೊಳ್ಳುವದು ನಮಗೆ ಶೋಭಿಸುವ ವಿಚಾರವಲ್ಲ. ಒಬ್ಬ ಮುಸಲ್ಮಾನ ಸಹೋದರನು ದನವನ್ನು ಕೊಲ್ಲುವ ಪ್ರಯತ್ನದಲ್ಲಿರುವಾಗ ಏನು ಮಾಡಬೇಕು. ಸಹೋದರನನ್ನು ದನಕ್ಕಾಗಿ ಕೊಂದು ಹಾಕುವದೇ? ಅಥವ ತನ್ನ ಪ್ರಾಣವನ್ನು ಅದಕ್ಕಾಗಿ ಅರ್ಪಿಸುವದೇ? ದನವನ್ನು ರಕ್ಷಿಸಲು ತಾನು ಪ್ರಾಣದಾನ ಮಾಡುವದಾದರೇ ಅಷ್ಟೇ ಪ್ರಯೋಜನವಿರುವ ಮುಸಲ್ಮಾನ ಸಹೋದರನನ್ನೂ ರಕ್ಷಿಸಲು ತಾನು ಸಿದ್ಧನಾಗುವದು ನ್ಯಾಯ. ಹಿಂದುಗಳು ಗೋವುಗಳನ್ನು ಹೊಡೆದು ಹಿಂಸಿಸುವಾಗ ಯಾರು ಪ್ರತಿಭಟಿಸುವರು? ಮಳೆಗಾಲ ಬೇಸಿಗೆಯೆನ್ನದೆ ತಕ ತೊಂದರೆ ಕೊಡುವಾಗ ಯಾರು ಅದರ ರಕ್ಷಣೆಗೆ ಬರುವರು? ಅಂದ ಮಾತ್ರಕ್ಕೆ ಈ ಗೋವಧೆಯು ನಮ್ಮನ್ನು ಭಿನ್ನ ಜನಾಂಗವನ್ನಾಗಿ ಮಾಡಲಾರದು. ಹಿ

ದೂಗಳು ಅಹಿಂಸಾತತ್ವವನ್ನು ಪರಿಪಾಲಿಸುವದರಿಂದ ಗೋವಧೆಯನ್ನು ನಿಷೇಧಿಸುವದಾದರೆ, ಗೋವಧೆಮಾಡುವ ಸಹೋದರನನ್ನು ಕೊಲ್ಲುವ ಹವ್ಯಾಸವು ಅಹಿಂಸಾತತ್ವವನ್ನು ಅಲ್ಲಗಳೆಯುವದಲ್ಲವೇ? ಒಂದು ಪ್ರಾಣಿಯನ್ನು ರಕ್ಷಿಸಲು ಮತ್ತೊಂದನ್ನು ಕೊಲ್ಲುವದು ನ್ಯಾಯವಲ್ಲ.

ಆದರೆ ಎಲ್ಲಾ ಹಿಂದುಗಳು ಅಹಿಂಸಾತತ್ವವನ್ನು ಅನುಸರಿಸುವರೇನು? ಅನೇಕ ಹಿಂದೂಗಳು ಮಾಂಸವನ್ನು ತಮ್ಮ ಆಹಾರದಲ್ಲಿ ಉಪಯೋಗಿಸುತ್ತಾರೆ. ಆದ್ದರಿಂದ ಅವರು ಅಹಿಂಸಾಪಾಲಕರಲ್ಲ, ಹಿಂದುಗಳು ಅಹಿಂಸಾಪಾಲಕರೆಂದೂ, ಮುಸ್ಲಿಮರು ಹಿಂಸಾವಾದಿಗಳೆಂದೂ ಆದ್ದರಿಂದ ಅವರಲ್ಲಿ ಐಕ್ಯತೆ ಇರಲು ಸಾಧ್ಯವಿಲ್ಲವೆಂಬುದೂ ನಿರಾಧಾರವಾಗಿದೆ. ಹಿಂದುಗಳಲ್ಲಿ ಎಷ್ಟೋ ಹಿಂಸಾವಾದಿಗಳಿಲ್ಲವೇನು? ಅಂತಾದ್ದರಲ್ಲಿ ಹಿಂದೂ ಮತವು ಏಕವಾಗಿ ಉಳಿವದಲು ಈ ಹಿಂಸಾ–ಅಹಿಂಸಾವಾದವು ಐಕ್ಯತೆಗೆ ತೊಡಕಲ್ಲ. ಇಂಥಾ ಈ ವಿಚಾರಗಳನ್ನು ಸ್ವಾರ್ಥಸಾಧಕರಾದ ಮತಭೋಧಕರು ನಮ್ಮ ತಲೆಯಲ್ಲಿ ತುರುಕಿರುವರು. ಇವನ್ನು ಇಂಗ್ಲಿಷರು ಪೂರ ಸಮರ್ಥಿಸಿ ನಮ್ಮಲ್ಲಿ ದೃಢಪಡಿಸಿವರು. ಮಹಮ್ಮದೀಯರ ಪವಿತ್ರ ಪುಸ್ತಕವಾದ ಕೊರಾನನ್ನು ನಿಷ್ಪಕ್ಷಪಾತದೃಷ್ಟಿಯಿಂದ ಓದಿದರೆ ಹಿಂದುಗಳಿಗೆ ಹಿತವಾಗುವ ಅನೇಕ ಭಾಗಗಳಿವೆ. ಭಗವದ್ಗೀತೆಯಲ್ಲಿಯೂ ಮುಸಲ್ಮಾನರಿಗೆ ಹಿತವಾಗುವ ಅನೇಕ ಭಾಗಗಳಿರುವವು. ಕೊರಾನಿನಲ್ಲಿ ನಮಗೆ ಅರ್ಥವಾಗದ ಅಥವ ಹಿತವಾಗದ ಭಾಗಗಳಿದ್ದರೆ ಮಹಮ್ಮದೀಯರನ್ನು ದೂಷಿಸಬೇಕೇಕೆ? ಜಗಳವಾಗಬೇಕಾದರೆ ಕಮ್ಮಿಪಕ್ಷ 2 ಜನರು ಆಗತ್ಯ. ಅಂಥಾದ್ದರಲ್ಲಿ ನಾವು ಸುಮ್ಮನಿದ್ದರೆ ಮಹಮ್ಮದೀಯರು ಏಕೆ ನಮ್ಮ ಮೇಲೆ ಬೀಳುವರು? ಆದ್ದರಿಂದ ನಮ್ಮ ಐಕ್ಯತೆಗೆ, ಮತವಾಗಲೀ, ಗೋವಧೆಯಾಗಲೀ ಇಲ್ಲವೇ ಕುರಾನಾಗಲೀ ವಿರೋಧಬಾರದು.

ಆದರೆ ಈ ಎರಡು ಮತಗಳು ಒಂದಾಗಲು ಮಧ್ಯದಲ್ಲಿರುವ ಬ್ರಿಟಿಷರು, ಬಿಡುವರೋ ಎಂಬ ಪ್ರಶ್ನೆಯೂ ಬರುತ್ತದೆ. ಇದು ಕೇವಲ ಒಂದು ಹೆದರಿಕೆಯ ಪ್ರಶ್ನೆ. ಇದು ಬರೇ ಅಧೈರ್ಯವನ್ನು ಸೂಚಿಸುತ್ತದೆ. ಎರಡು ಸಹೋದರರು ಒಂದೇ ಮನೆಯಲ್ಲಿ ಒಗ್ಗಟ್ಟಿನಿಂದ ಜೀವನ ನಡೆಸಲು ನಿಶ್ಚಯಿಸಿದ್ದರೆ ಮೂರನೆಯನೊಬ್ಬನಿಗೆ ಅವರನ್ನು ಬೇರ್ಪಡಿಸಲು ಸಾಧ್ಯವೇ? ಮೂರನೆಯವರ ಮಾತಿಗೆ ಕಿವಿಗೊಡುವದಾದರೆ ಅವರು ಅವಿವೇಕಿಗಳೆಂಬುದು ತಿಳಿದುಬರುತ್ತದೆ. ಹಾಗೆಯೇ ಹಿಂದೂ-ಮುಸಲ್ಮಾನರು ಒಮ್ಮತದಿಂದ ಏಕೀಕರಿಸಿದರೆ ಮೂರನೆಯವರಾದ ಬ್ರಿಟಿಷರು ಏನೂ ಮಾಡರು. ನಾವು ಅವಿವೇಕಿಗಳಾದರೆ ಮಾತ್ರ ಅವರ ಕೈವಾಡವು ನಡೆಯುವದು. ಒಂದು ಮಣ್ಣಿನ ಪಾತ್ರವು ಕಲ್ಲಿನ ಹೊಡತವನ್ನು ತಡೆಯಲಾರದು. ಮೂರನೇಯವರ ಈ ಕಲ್ಲೊಡೆತಕ್ಕೆ ನಮ್ಮ ಮನಸ್ಸು ಮಣ್ಣಾಗಿರದೆ ಕಲ್ಲಿಗಿಂತ ಗಟ್ಟಿ ಇರಬೇಕು. ಅಂದರೇನೆ ಚಿರಕಾಲದ ಐಕ್ಯತೆಯು ಸಾಧ್ಯ.

ನಮ್ಮೊಳಗೆ ಪರಸ್ಪರ ಅಪನಂಬಿಕೆ ಇದೆ. ಮಹಮ್ಮದೀಯರು ಈ ವಿಚಾರವಲ್ಲಿ ಬ್ರಿಟಿಷರನ್ನು ಮರೆ ಹೊಕ್ಕರೆ ನಾವು ಅವನ್ನು ವಿರೋಧಿಸಿ ಯಾಕೆ ಕೆಲಸ ಮಾಡಬೇಕು? ಹಿಂದುಗಳು ಇದಕ್ಕೆ ವಿರೋಧಿಸದಿದ್ದರೆ ಕ್ರಮೇಣ ಮಹಮ್ಮದೀಯರಲ್ಲಿ ಭ್ರಾತೃಭಾವವು ಉದ್ಭವಿಸದಿರದು. ನಮ್ಮ ಜಗಳವನ್ನು ಮೂರನೆಯವರಾದ ಬ್ರಿಟಿಷರಲ್ಲಿಗೆ ಕೊಂಡು ಹೋಗಲು ನಾವು ನಾಚಿಕೆ ಪಡಬೇಕು. ನಮ್ಮ ಮಹಮ್ಮದೀ ಸಹೋದರರಲ್ಲಿ ನಮಗೆ ನಂಬಿಕೆ ಇರಬೇಕು, ನಂಬಿಕೆಯಿಂದ ಕೆಟ್ಟವರು ಜಗತ್ತಿನಲ್ಲಿ ಯಾರೂ ಇಲ್ಲ.

ಹಿಂದೂ-ಮುಸಲ್ಮಾನರು ಎಂದೂ ಜಗಳಾಡಲಿಕ್ಕಿಲ್ಲವೆಂದು ನಾವು ಹೇಳುವದಲ್ಲ. ಜೊತೆಯಲ್ಲಿರುವ ಎರಡು ಸಹೋದರರು ಕೆಲವು ವೇಳೆ ಜಗಳಾಡುವದುಂಟು. ಇದರಿಂದ ತಲೆ ತಲೆ ಒಡೆದುಕೊಳ್ಳುವದೂ ಉಂಟು. ಸಿಟ್ಟಿನಲ್ಲಿರುವಾಗ ಯಾರೂ ಏನನ್ನೂ ಮಾಡಿಬಿಡಬಹುದು. ನಾವು ಹೀಗೆ ಜಗಳಾಡುವಾಗ ಬ್ರಿಟಿಷರದ್ದಾಗಲೀ ಯಾ ಇತರರದ್ದಾಗಲೀ ಸಹಾಯ ಆಶಿಸುವದಲ್ಲ. ಎರಡು ಸಹೋದರರು ಸಿದ್ಧರಾಗಿ ಹೊಡೆದಾಡಿದ ಮೇಲೆ ಮೂರನೆಯವನಿಗೆ ದೂರು ಹೇಳಿದರೆ ಹೇಗೆ ತೀರ್ಪು ಕೊಡುವದು? ಇಬ್ಬರೂ ಧ್ಯೇಯ ಒಂದೇ ಇಟ್ಟುಕೊಂಡು ಮಾಡುತ್ತಿರುವ ಕೆಲಸದಲ್ಲಿ ಪರಿಣಾಮ ಒಂದೇ ಆಗದು. ಹೊಡೆದಾಟದಲ್ಲಿ ಒಬ್ಬನಿಗೇ ಜಖಂ ಆಗಲೂ ಬಹುದು. ಅಂದ ಪಕ್ಷಕ್ಕೆ ಮತ್ತೊಬ್ಬನು ನಿರಪರಾಧಿಯೆನ್ನಲಾಗುತ್ತದೆಯೇ? ಆದ್ದರಿಂದ ಇಂಥಾ ಸಂದರ್ಭದಲ್ಲಿ ಕೋರ್ಟುಗಳಿಗಾಗಲೀ, ಮೂರನೆಯವರ ಹಂಗಿಗಾಗಲೀ ಹೋಗುವದರಿಂದ ಹಿತವಾಗದು. ಹೀಗೆ ಹೇಳಿದರೆ ವಾಚಕರಿಗೆ ಸೋಜಿಗವಾಗಬಹುದು. ಆದರೆ ಮುಂದಿನ ವಾರ ಇದನ್ನು ಸಂಪೂರ್ಣ ವಿವರಿಸಿ ವಕೀಲರು ಹೇಗೆ ಭಾರತದ ಅಧಃಪತನಕ್ಕೆ ಕಾರಣರು ಎಂಬುದನ್ನು ಸಮರ್ಥಿಸಲಾಗುವದು.

ಸಾರ್ವಜನಿಕ ಸಭೆಗಳು.

ಗೋಣಿಕೊಪ್ಪ.

ಈ ತಾ. 26ರಲ್ಲಿ ಕಿಗ್ಗಟ್ಟುನಾಡು ತಾಲೋಕು ಕಾಂಗ್ರೆಸ್ ಕಮಿಟಿಯವರ ಆಶ್ರಯದಲ್ಲಿ ಗೋಣಿಕೊಪ್ಪ ಸಂತೆ ಮೈದಾನದಲ್ಲಿ ಶ್ರೀಮಾನ್ ಕೇಳಪಂಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತು. ಮೆರವಣಿಗೆ ಮತ್ತು ರಾಷ್ಟ್ರ ಧ್ವಜಾರೋಹಣವು ನಡೆಯಿತು. ಸುಮಾರು 400 ಜನರ ವರೆಗೆ ಹಾಜರಿದ್ದರು.

ಅಧ್ಯಕ್ಷರು ಕಾರ್ಯಕ್ರಮ ಪಟ್ಟಿ ಪ್ರಕಾರ ಕೇಳಿಕೊಂಡ ಮೇರೆ ಶ್ರೀ. ಪಿ. ಐ. ಬೆಳ್ಯಪ್ಪನವರು ತ್ರಿಪುರಿ ಕಾಂಗ್ರೆಸು ಮಹಾ ಸಭೆಯ ತೀರ್ಮಾನಗಳನ್ನು ಕುರಿತು ಉಪನ್ಯಾಸ ಮಾಡಿದರು.

ಅನಂತರ ಶ್ರೀ ಕೆ. ಸಿ. ಕರುಂಬಯ್ಯ ಎಂ. ಎಲ್. ಸಿ. ಯವರು ಕಳೆದ ನ್ಯಾಯ ವಿಧಾಯಕ ಸಭೆಯ ಬಡ್ಜೆಟ್ ಮೀಟಿಂಗಿನಿಂದ ಕಾಂಗ್ರೆಸ್ ಪಾರ್ಟಿಯ ಮೆಂಬರುಗಳು ಎದ್ದು ಹೊರಬಂದ ವಿಚಾರ ಭಾಷಣ ಮಾಡಿದರು. ಆ ಮೇಲೆ ಕೆಳಗಿನ ಠರಾವುಗಳು ಸರ್ವ ಸಮ್ಮತದಿಂದ ಮಂಜೂರಾದವು.

(1) ಬಡ್ಜೆಟ್ ಚರ್ಚೆಯಲ್ಲಿ ಭಾಗ ವಹಿಸುವುದು ವ್ಯರ್ಥವೆಂದು ಕಾಂಗ್ರೆಸ್ ಪಕ್ಷದ ಮೆಂಬರುಗಳು ಕಳೆದ ಕೌನ್ಸಿಲಿನ ಬಡ್ಜೆಟ್ ಮೀಟಿಂಗಿನಿಂದ ಎದ್ದು ಹೊರಬಂದದ್ದು ನ್ಯಾಯವಾಗಿದೆ ಮತ್ತು ಅದಕ್ಕಾಗಿ ಈ ಸಭೆಯು ಮೆಂಬರುಗಳನ್ನು ಅಭಿನಂದಿಸುತ್ತದೆ.

(2) 1938ನೇ ಇಸವಿಯ ಬಡ್ಜೆಟ್ ಮೀಟಿಂಗಿನಲ್ಲಿ ಪಾಸಾದ 35 ಠರಾವುಗಳಲ್ಲಿ ಒಂದನ್ನಾದರೂ ಮಾನಿಸದಿರುವ ಸರಕಾರದ ವರ್ತನೆಯು ಖಂಡನೀಯವಾಗಿದೆ. ಮತ್ತು ಕಾಂಗ್ರೆಸ್ ಪಾರ್ಟಿಯವರು ಹೊರ ನಡೆದಾಗ ಚುನಾಯಿತ ಬಾಕಿ ಮೆಂಬರುಗಳು ಅವರಲ್ಲೊ ನೊಂದಲಾಗಿ ಕೌನ್ಸಿಲ್ ಮೀಟಿಂಗಿನಲ್ಲಿ ಆಕ್ಷೇಪವೆತ್ತಿದ ಮೆಂಬರರೂ ಕೂಡ ಹೊರಬಾರದೆ ಇದ್ದದ್ದು ನಾಚಿಕೆಗೇಡು. (2ನೇ ಭಾಗ ತಿದ್ದುಪಡಿ ಸೂಚನೆ ಮೇರೆ ಸೇರಿಸಲಾಯಿತು.) ಸೂಚಕರು ಶ್ರೀ ಜೆ. ಎ. ಮಾದಪ್ಪನವರು. ಅನುಮೋದಕರು ಎ. ಎಸ್. ಚೆಣ್ಣಪ್ಪನವರು.

(3) ರೆವಿನ್ಯೂ ಮ್ಯಾನ್ಯುವಲ್ಲಿನ ನಿಬಂಧನೆಗಳ ಕರಡು ತಿದ್ದುಪಡಿಗಳನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ ಮತ್ತು ಅವುಗಳನ್ನು ತಿದ್ದುಪಡಿ ಮಾಡಲು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂದು ಚೀಫ್ ಕಮಿಷನರರವರನ್ನು ಕೇಳಿಕೊಳ್ಳುತ್ತದೆ. ಸೂಚಕರು ಕೆ. ಸಿ. ಕರುಂಬಯ್ಯ ಎಂ. ಎಲ್. ಸಿ. ಯವರು. ಅನುಮೋದಕರು ಶ್ರೀ ಕೆ. ಚೆಣ್ಣಪ್ಪನವರು.

(4) ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿದ್ದ ಗ್ರಾಂಟಿನಲ್ಲಿ 7 ಸಾವಿರ ರೂಪಾಯಿಗಳನ್ನು ಕಮ್ಮಿ ಮಾಡುವ ತೀರ್ಮಾನವನ್ನು ಈ ಸಭೆಯು ಪೂರ್ಣ ವಿರೋಧಿಸುತ್ತದೆ. ಮತ್ತು ಹಾಗೆ ಗ್ರಾಂಟನ್ನು ಕಮ್ಮಿ ಮಾಡಕೂಡದೆಂದು ಸರ್ಕಾರವನ್ನು ಪುನಹ ಒತ್ತಿ ಕೇಳಿಕೊಳ್ಳುತ್ತದೆ.

(5) ಸರ್ಕಾರದವರು ಸ್ಕೂಲು ಫೀಜನ್ನು ಹೆಚ್ಚಿಸಲು ಮಾಡಿದ ತೀರ್ಮಾನವನ್ನು ಈ ಸಭೆಯು ಪೂರ್ಣ ವಿರೋಧಿಸುತ್ತದೆ ಮತ್ತು ಹಾಗೆ ಫೀಜನ್ನು ಹೆಚ್ಚಿಸಕೂಡದೆಂದು ಸರ್ಕಾರವನ್ನು ಪುನಹ ಕೇಳಿಕೊಳ್ಳುತ್ತದೆ. ಸೂಚಕರು ಎ. ಎಸ್. ಪೊನ್ನಪ್ಪನವರು. ಅನುಮೋದಕರು ಎಂ. ಚಂಗಪ್ಪನವರು.

ಮೇಲ್ಕಂಡ ಠರಾವುಗಳು ಪಾಸಾದನಂತರ ಶ್ರೀ ಕೊಡಂದೇರ ಚಂಗಪ್ಪನವರು ಡಿಸ್ಟ್ರಿಕ್ಟ್ ಬೋರ್ಡಿನ ಕೆಲವು ವಿಷಯಗಳನ್ನು ಟೀಕಿಸಿದ್ದಕ್ಕೆ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರು ಸರಿಯಾದ ಜವಾಬನ್ನು ಇತ್ತನಂತರ ಅಧ್ಯಕ್ಷರಿಗೂ ನೆರೆದ ಮಹನೀಯರಿಗೂ ವಂದನೆಗಳಿಂದ ಸಭೆಯು ಬರಕಾಸ್ತು ಮಾಡಲಾಯಿತು.

ಹುದಿಕೇರಿ.

ಈ ತಾರೀಕು 27ರಲ್ಲಿ ಕಿಗ್ಗಟ್ಟುನಾಡು ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಹುದಿಕೇರಿ ದೇವಸ್ಥಾನದ ಬಳಿ ಒಂದು ಸಾರ್ವಜನಿಕ ಸಭೆ ಸೇರಿತು ಮೀಟಿಂಗಿನ ಮುಂಚೆ ರಾಷ್ಟ್ರೀಯ ಗೀತೆ ಮತ್ತು ಧ್ವಜದೊಡನೆ ಮೆರವಣಿಗೆಯಾಯಿತು. ಶ್ರೀಮಾನ್ ಬಯವಂಡ ಪೊನ್ನಪ್ಪನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಅನುಮತಿ ಮೇರೆ ಶ್ರೀ ಗಳಾದ ಪಿ. ಜಿ. ಮುದ್ದಮ್ಮಯ್ಯನವರು, ಬಿದ್ದಂಡ ಕಾರ್ಯಪ್ಪನವರು ಮತ್ತು ಕೆ. ಸಿ. ಕರುಂಬಯ್ಯನವರು ಕೌನ್ಸಿಲ ಮೀಟಿಂಗಿನಿಂದ ಹೊರ ನಡೆದ ವಿಷಯ ವಿವರಿಸಿದನಂತರ ಮೇಲ್ಕಂಡ ಠರಾವುಗಳೇ ಇಲ್ಲಿಯೂ ಪಾಸಾದವು.

1 ನೇ ಠರಾವನ್ನು ಶ್ರೀ. ಕೆ. ಕೆ. ಗಣಪತಿಯವರು ಸೂಚಿಸಿದರು. ಅದನ್ನು ಶ್ರೀ ಹೆಚ್. ಕುಶಾಲಪ್ಪನವರು ಅನುಮೋದಿಸಿದರು.

2 ನೇ ಠರಾವು ಸೂಚಕರು ಶ್ರೀ ಕಡೇಮಾಡ ಸೋಮಯ್ಯನವರು. ಅನುಮೋದಕರು ಶ್ರೀ ತಡಿಯಂಗಳ ಸುಬ್ಬಯ್ಯನವರು.

3 ನೇ ಠರಾವು ಸೂಚಕರು ಶ್ರೀ ಕಡೇಮಾಡ ಸೋಮಯ್ಯನವರು. ಅನುಮೋದಕರು ಶ್ರೀ ಚೇಂದೀರ ಮುದ್ದಯ್ಯನವರು.

4 ನೇ ಠರಾವು ಸೂಚಕರು ಶ್ರೀ ಎ. ಎಸ್. ಪೊನ್ನಪ್ಪನವರು. ಅನುಮೋದಕರು ಶ್ರೀ ಕೆ. ಸಿ. ಕರುಂಬಯ್ಯನವರು.

5 ನೆ ಠರಾವು ಸೂಚಕರು ಶ್ರೀ ಎ. ಎಸ್. ಪೊನ್ನಪ್ಪನವರು. ಅನುಮೋದಕರು ಶ್ರೀ ಕೆ. ಕೆ. ಗಣಪತಿಯವರು.

ಶ್ರೀಮಂಗಲ.

ಇದೇ ತಾ. 28 ರಲ್ಲು ಶ್ರೀಮಂಗಲ ಕಚೇರಿ ಬಳಿ ಕಿಗ್ಗಟ್ಟುನಾಡಿನ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀಯುತ ಮಚ್ಚಮಾಡ ಬಿದ್ದಯ್ಯನವರ ಅಧ್ಯಕ್ಷತೆಯಲ್ಲಾ ಒಂದು ಮೀಟಿಂಗು ನಡೆಯಿತು.

ಶ್ರೀ ಗಳಾದ ಕೆ. ಸಿ. ಕರುಂಬಯ್ಯ, ಬಿ. ಯಂ. ಕಾರ್ಯಪ್ಪನವರುಗಳು ಕಳೆದ ಕೌನ್ಸಿಲಿನ ಬಡ್ಜೆಟ್ ಮೀಟಿಂಗಿನಿಂದ ಕಾಂಗ್ರೆಸ್ ಮೆಂಬರುಗಳ ಸಭಾತ್ಯಾಗದ ವಿಚಾರ ಭಾಷಣ ಮಾಡಿದರು.

ತದನಂತರ ಮೇಲ್ಕಂಡ ಠರಾವುಗಳೇ ಬಹುಮತದಿಂದ ಪಾಸಾದವು.

1 ನೇ ಠರಾವು ಸೂಚಕರು ಶ್ರೀ ಕೆ. ಕೆ. ಗಣಪತಿಯವರು. ಅನುಮೋದಕರು ಶ್ರೀ ತಡಿಯಂಗಳ ತಿಮ್ಮಯ್ಯನವರು.

2 ನೇ ಠರಾವು ಸೂಚಕರು ಶ್ರೀ ಎ. ಎಸ್. ಪೊನ್ನಪ್ಪನವರು. ಅನುಮೋದಕರು ಶ್ರೀ ಐಮ್ಮುಡ ಸುಬ್ಬಯ್ಯನವರು.

3 ನೇ ಠರಾವು ಸೂಚಕರು ಶ್ರೀ ಅಜ್ಜಮಾಡ ಮಾದಪ್ಪನವರು. ಅನುಮೋದಕರು ಶ್ರೀ ಬಾದುಮಂಡ ಮಾದಪ್ಪನವರು.

4 ನೇ ಠರಾವು ಸೂಚಕರು ಶ್ರೀ ತಡಿಯಂಗಳ ತಿಮ್ಮಯ್ಯನವರು. ಅನುಮೋದಕರು ಶ್ರೀ ಕಳ್ಳಂಗಳ ನಾಣೈಯ್ಯನವರು.

5 ನೇ ಠರಾವು ಸೂಚಕರು ಶ್ರೀ ಎ. ಎಸ್. ಪೊನ್ನಪ್ಪನವರು. ಅನುಮೋದಕರು ಕೆ. ಕೆ. ಗಣಪತಿಯವರು.

ಇದಾದ ಮೇಲೆ ಶ್ರೀ ಪಿ. ಐ. ಬೆಳ್ಯಪ್ಪ ಯಂ. ಯಲ್. ಸಿ. ಯವರು ತ್ರಿಪುರಿ ಕಾಂಗ್ರೆಸ್ ಮಹಾ ಸಭೆಯ ವಿಷಯ ವಿವರಿಸಿದ ನಂತರ ಅಧ್ಯಕ್ಷರಿಗೂ, ನೆರೆದ ಮಹನೀಯರಿಗೂ ವಂದನೆಯಿಂದ ಸಭೆಯನ್ನು ಬರಕಾಸ್ತು ಮಾಡಲಾಯಿತು.

ಕೊಡಗು

ಮಾರ್ಚ್ ತಾರೀಕು ೩೧ ನೇ ಶುಕ್ರವಾರ ೧೯೩೯.

ಯೂರೋಪಿನಲ್ಲಿ ಮಹಾ ಯುದ್ಧವಾಗುವುದೇ?

ಯೂರೋಪು ಖಂಡದ ಪಟವು ಕ್ಷಣ ಕ್ಷಣಕ್ಕೂ ಬದಲಾಗುತ್ತಿದೆ. ಜರ್ಮನಿಯ ಹಿಟ್ಲರನು ಸಾಮ್ರಾಜ್ಯವಿಸ್ತರಣೆಯ ಲಾಲಸೆಯಿಂದ ಇಡೀ ಯೂರೋಪನ್ನೇ ಗಡಗಡನೆ ನಡುಗಿಸುತ್ತಿರುವನು. ಒಂದು ಗುಂಡನ್ನೂ ಹಾರಿಸದೆ ಕಳೆದ ವರ್ಷ ಅವನು ಆಸ್ಟ್ರಿಯಾ ರಾಜ್ಯವನ್ನು ಕೈವಶಮಾಡಿಕೊಂಡನು. ಆರು ತಿಂಗಳ ನಂತರ ಸುಡೆಟನ್ ಜರ್ಮನರನ್ನು ಝೆಕೊಸ್ಲೋವಾಕಿಯಾದಿಂದ ಬೇರ್ಪಡಿಸಿ ನಾಝೀ ರಾಜ್ಯದೊಂದಿಗೆ ಸೇರಿಸಿಕೊಂಡನು. ಇದೇ ರೀತಿಯಲ್ಲಿ ಮೊನ್ನೆ ತಾನೇ ಝೆಕೊಸ್ಲೋವಾಕಿಯಾವನ್ನೂ ಮತ್ತು ಲಿಟ್ವಿಯಾದ ಮೆಮೆಲ್ ಬಂದರವನ್ನೂ ಯುದ್ಧದ ಬೆದರಿಕೆಯಿಂದಲೇ ಜರ್ಮನಿರಾಜ್ಯಕ್ಕೆ ಸೇರಿಸಿಕೊಂಡುಬಿಟ್ಟನು. ಅವನ ಸಾಮ್ರಾಜ್ಯವಿಸ್ತರಣದ ದಾಹವು ಇನ್ನೂ ಅಡಗಿರುವದಿಲ್ಲ. ಪೋಲೆಂಡ್, ರೊಮೇನಿಯ ಮತ್ತು ಯುಗುಸ್ಲೇವಿಯಾಗಳ ಮೇಲೆ ಅವನ ದೃಷ್ಟಿಯು ಹಾಯ್ದಿದೆ. ಇವುಗಳ ಮೇಲೆ ಯಾವ ಕ್ಷಣದಲ್ಲಿ ಬೀಳುವನೆಂದು ಹೇಳುವದು ಸಾಧ್ಯವಿಲ್ಲ. ಅವನ ಕಾರ್ಯಸಾಧನೆಗಳೆಲ್ಲವೂ ಥಕ್ಕನೆ ಆಶ್ಚರ್ಯಚಕಿತವಾಗಿ ನಡೆಸಲ್ಪಡುತ್ತವೆ. ಈಗ ಯುದ್ಧವೆಂದರೆ ಬಹು ಭಯಂಕರವೂ ಮತ್ತು ಅನಾಹುತಕಾರಿಯೂ ಆದ ಕಾರಣ ಇಂಗ್ಲೆಂಡು, ಫ್ರಾನ್ಸು ಮೊದಲಾದ ಯೂರೋಪಿನ ಹಲವು ಜನಾಂಗಗಳು ಯುದ್ಧರಂಗಕ್ಕಿಳಿಯಲು ಹಿಂಜರಿಯುತ್ತಿವೆ ಎಂಬುವದನ್ನು ಹಿಟ್ಲರನು ಚೆನ್ನಾಗಿ ಅರಿತುಕೊಂಡಿರುವನು. ಈ ದೆಸೆಯಿಂದ ಅವನು ತನ್ನ ಮುಂದಿನ ಕಾರ್ಯವನ್ನು ಬಹಿರಂಗ ಪಡಿಸದೆ, ಥಕ್ಕನೆ ತನಗೆ ಬೇಕಾದ ಚಿಕ್ಕ ರಾಷ್ಟ್ರಗಳ ಮೇಲೆ ತನ್ನ ಸೈನ್ಯವನ್ನು ನಡಿಸಿಯೇ ಬಿಡುತ್ತಾನೆ. ಬೇರೆ ಜನಾಂಗಗಳು ಶಾಂತಿ ಸ್ಥಾಪನೆಯ, ರಾಜಿಯ ಮಾತುಕತೆಗಳನ್ನು ನಡೆಸಲು ಪ್ರಾರಂಭಿಸುವಷ್ಟರಲ್ಲೇ ಹಿಟ್ಲರನು ತನಗೆ ಬೇಕಾದ ರಾಜ್ಯವನ್ನು ಕೈವಶಪಡಿಸಿಬಿಡುವನು. ತನ್ನ ಕಾರ್ಯವು ಸಿದ್ಧಿಯಾದನಂತರ ಇದು ತನ್ನ ಕಡೇ ಗಡಿವಿಸ್ತರಣವೆಂತಲೂ, ಇನ್ನು ಮುಂದೆ ಇಂಥಾ ಧಾಳಿ ನಡಿಸುವದಿಲ್ಲವೆಂತಲೂ ಫೋಟಾಫೋಪವಾಗಿ ಹೇಳುವನು. ಹಾಗೆಯೇ ಮ್ಯೂನಿಚ್ ಒಪ್ಪಂದದಲ್ಲಿ ಹೇಳಿದ್ದನು. ಆದರೆ ತಾನು ನಿರೀಕ್ಷಿಸಿದ ಸಮಯ ಬಂದಾಗ್ಯೆ ಅವನು ತನ್ನ ಹಿಂದಿನ ಮಾತುಗಳನ್ನು ಮುರಿಯಲು ಹಿಂಜರಿಯದೆ ತನ್ನಿಷ್ಟದಂತೆ ವರ್ತಿಸಿಯೇ ಬಿಡುವನು. ಯೂರೋಪಿನಲ್ಲಿ ಚಿಕ್ಕ ಚಿಕ್ಕ ಜನಾಂಗಗಳೂ ಕೂಡ ಇತರ ದೊಡ್ಡ ಜನಾಂಗಗಳೊಂದಿಗೆ ಮಾಡಿಕೊಂಡ ಒಪ್ಪಂದದ ದೆಸೆಯಿಂದ ಸ್ವಾತಂತ್ರ ರಾಜ್ಯಗಳಾಗಿದ್ದವು. ಆದರೆ ಈಗ ಹಿಟ್ಲರನ ಯುದ್ಧದ ಬೆದರಿಕೆಗೆ ಅಂಜಿ ಇಂಗ್ಲೇಂಡು, ಫ್ರಾನ್ಸು ಮೊದಲಾದ ಜನಾಂಗಗಳು ತಮ್ಮ ಒಪ್ಪಂದದ ಮೇರೆ ಝೆಕೊಸ್ಲೋವೇಕಿಯಾದಂತಹ ಚಿಕ್ಕ ಜನಾಂಗಗಳಿಗೆ ಸಹಾಯ ಮಾಡಲು ಹಿಂಜರಿದಿರುವ ಕಾರಣ ಚಿಕ್ಕ ರಾಜ್ಯಗಳ ಅಳಿವು ಆಗುವ ಕಾಲಬಂದಿದೆ. ಚಿಕ್ಕ ರಾಜ್ಯಗಳನ್ನು ಹಿಟ್ಲರನು ಏನೊಂದೂ ಕಷ್ಟ ನಷ್ಟಗಳಿಲ್ಲದೆ ಕೈವಶ ಮಾಡಿಕೊಳ್ಳುತ್ತಾ ಬರುತ್ತಿರುವದರಿಂದ ಜರ್ಮನಿಯ ಶಕ್ತಿಯು ದಿನೇ ದಿನೇ ಹೆಚ್ಚುತ್ತಿದೆ. ಇದರಿಂದ ಯೂರೋಪಿನ (ಇಟಲಿ ವಿನಹ) ಇತರ ದೊಡ್ಡ ಜನಾಂಗಗಳ ಸುರಕ್ಷಿತೆಗೂ ಹಾನಿತಟ್ಟದಿರದು. ಅದನ್ನೀಗ ಈ ಜನಾಂಗಗಳು ಅರಿತುಕೊಳ್ಳಲಾರಂಭಿಸಿವೆ.

ಹಿಟ್ಲರನು ಶ್ರಮವಿಲ್ಲದೆ ದಿಗ್ವಿಜಯವನ್ನು ಹೊಂದುತ್ತಿದ್ದರೂ ಕೂಡ ಮಹಾಯುದ್ಧಕ್ಕೆ ಮುಮುಕಲು ಇಷ್ಟಪಡುವಂತೆ ಕಾಣುವದಿಲ್ಲ. ರಷ್ಯಾದ ಭೀತಿಯು ಜರ್ಮನಿಗೆ ಸಾಕಷ್ಟಿದೆ. ಅದರೊಂದಿಗೆ ಬ್ರಿಟನು, ಫ್ರಾನ್ಸು ಮತ್ತು ಅಮೇರಿಕಾ ಸೇರಿದರೆ ಜರ್ಮನಿಯ ದಿಗ್ವಿಜಯವು ಸುಲಭ ಸಾಧ್ಯವಲ್ಲವೆಂದು ಹಿಟ್ಲರನಿಗೆ ತಿಳಿಯದ್ದಲ್ಲ. ಆದುದರಿಂದಲೇ ಪೋಲೆಂಡಿನ ಮೇಲೆ ಕೈ ಹಾಕಲು ಅವನು ಯತ್ನಿಸಿದಾಗ್ಯೆ ಪೋಲೆಂಡು ಚಿಕ್ಕದಾಗಿದ್ದರೂ ಕೂಡ ಯುದ್ಧ ಮಾಡದೆ ಶರಣಾಗತವಾಗುವ ಬದಲು ಯುದ್ಧ ಮಾಡಿ ಮಡಿಯುವದು ಉತ್ತಮವೆಂದು ನಿರ್ಧರಿಸಿದ ಕೂಡಲೇ ಪೋಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸುವ ಇಚ್ಛೆಯು ತನಗಿಲ್ಲವೆಂದು ಹಿಟ್ಲರನು ತನ್ನ ಕಾರ್ಯವನ್ನು ತತ್ಕಾಲ ನಿಲ್ಲಿಸಿರುವನು. ಆದರೂ ಪೋಲೆಂಡರಿಗೂ, ಜರ್ಮನರಿಗೂ ಅಲ್ಲಲ್ಲಿ ತಿಕ್ಕಾಟವು ನಡೆಯುತ್ತಲೇ ಇದೆ. ಈ ಕಿಡಿಯು ಎಂದು ಮಹಾವಗ್ನಿಯಾಗಿ ಉರಿಯುವದೋ ಯಾರಿಗೂ ಹೇಳಲು ಸಾಧ್ಯವಲ್ಲ. ಆದರೆ ಹಿಟ್ಲರನ ಇಷ್ಟರ ವರೆಗಿನ ವರ್ತನೆಯನ್ನು ನೋಡಿದರೆ ಭಯಭೀತರಾಗಿ ಆತ್ಮಸಂರಕ್ಷಣೆಗಾಗಿ ಯುದ್ಧ ಸನ್ನದ್ಧರಾಗುತ್ತಿರುವ ಜನಾಂಗಗಳು ಸಮಾಧಾನಗೊಳ್ಳುವ ವರೆಗೂ ಅವನು ಸುಮ್ಮನಿದ್ದು ಇತರ ಜನಾಂಗಗಳು ಕಾರ್ಯಕ್ಕೆ ತಯಾರಿಲ್ಲದ ಸಮಯದಲ್ಲಿ ಅನಿರೀಕ್ಷಿತವಾಗಿ ಪುನಹ ಯುದ್ಧದ ಬೆದರಿಕೆಯಿಂದ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವನೆಂದೇ ಹೇಳಬೇಕಾಗಿದೆ. ಹೇಗೂ ಅವನು ತನ್ನ ಜನಾಂಗವು ಈ ಮೊದಲು ಕಳೆದುಕೊಂಡ ಸಾಮ್ರಾಜ್ಯವನ್ನೂ, ವಸಾಹತುಗಳನ್ನೂ ಮರಳಿ ಪಡೆದು ಮಧ್ಯ ಮತ್ತು ಆಗ್ನೇಯ ಯೂರೋಪಿನ ಹಾಗೂ ಸಾಧ್ಯವಾದರೆ ಇಡೀ ಯೂರೋಪ್ ಖಂಡದ ಸರ್ವಾಧಿಕಾರಿಯಾಗಲು ಇಚ್ಛಿಸುವನೆಂದರೆ ಅತಿಶಯೋಕ್ತಿಯಾಗಲಾರದು.

ಹಿಟ್ಲರನ ವರ್ತನೆಯಿಂದ ಯೂರೋಪಿನಲ್ಲಿ ಇಂದು ನಾಗರೀಕತನದ ಕಾಯಿದೆಯು ಜಾರಿಯಲ್ಲಿ ಇರುವಂತೆ ಕಾಣುವದಿಲ್ಲ. ಬದಲು ಕಾಡು ಜನರ ಹಿಂಸಾಚರಣೆಯ ಪ್ರಾಬಲ್ಯವು ಹೆಚ್ಚುತ್ತಿದೆ. ಶಾಂತಿಪ್ರಿಯರಾದ ಪ್ರಜಾಪ್ರತಿನಿಧಿ ತತ್ವದ ರಾಜ್ಯಗಳು ಒಂದಾಗಿ ಹಿಟ್ಲರನ ಸರ್ವಾಧಿಕಾರಿತನದ ಧಾಳಿಯನ್ನು ತಡೆಯಲು ಸಿದ್ಧರಾಗದಿದ್ದರೆ, ಯೂರೋಪಿನ ಹಾಗೂ ಪ್ರಪಂಚದ ಮುಂದಿನ ಸ್ಥಿತಿಯು ಬಹು ಭಯಾನಕವಾಗುವದರಲ್ಲಿ ಸಂದೇಹವಿಲ್ಲ. ಹಿಟ್ಲರನ ಅಭಿಲಾಷೆಯಂತೆ ಜರ್ಮನಿಯ ಸಾಮ್ರಾಜ್ಯವಿಸ್ತರಣಕ್ಕೆ ಅವಕಾಶದೊರೆತರೆ ಯುದ್ಧವು ಆಗದೆ ಇರಬಹುದು. ಆದರೆ ಬದಲು ಅವನ ಕಾರ್ಯಗಳಿಗೆ ಇತರ ಜನಾಂಗಗಳು ಅಡ್ಡಿ ಬಂದದ್ದೇ ಆದರೆ ಇಂದಲ್ಲದಿದ್ದರೂ, ಕೆಲಕಾಲಾನಂತರವಾದರೂ ಯುದ್ಧವು ಸಂಭವಿಸದಿರದು. ಅವಕಾಶವಾದಂತೆಯೇ ಜರ್ಮನಿಯ ಶಕ್ತಿಯು ಹೆಚ್ಚುತ್ತಿದೆ. ಯೂರೋಪಿನ ಇಂದಿನ ಪರಿಸ್ಥಿತಿಯು ಇಂತಹ ಬಿಕ್ಕಟ್ಟಾವಸ್ಥೆಯಲ್ಲಿರುವದರಿಂದ ಪ್ರಪಂಚ ಯುದ್ಧದ ಮಹಾವಗ್ನಿಯು ಎಂದು ಅಲ್ಲಿ ಧಗ್ಗನೆ ಉರಿಯುವದೆಂದು ಹೇಳುವದು ಕಷ್ಟವಾಗಿದೆ. ಹೇಗೂ ಕ್ಷಣ ಕ್ಷಣಕ್ಕೂ ಯುದ್ಧವು ಸಮೀಪಿಸುತ್ತಿದೆಯೆಂದು ಹೇಳಬಲ್ಲೆವು.

ಮುಸಲೋನಿಯ ಭಾಷಣದ ಪರಿಣಾಮ.

ಮಧ್ಯಯೂರೋಪದಲ್ಲಿ ಹಿಟ್ಲರನು ಕೈಕೊಂಡ ಕಾರ್ಯಕ್ರಮಗಳನ್ನು ನಿರೋಧಿಸಿ ಅವನನ್ನು ಎದುರಿಸಲು ಸನ್ನದ್ಧರಾಗುತ್ತಿದ್ದ ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯಾದ ಒಪ್ಪಂದವು ಕೈಗೂಡುವಂತಿಲ್ಲ. ಸರ್ವಾಧಿಕಾರಿಗಳು ಈ ಮೊದಲು ಆವೇಶಪೂರಿತ ಭಾಷಣಗಳಿಂದ ತಮ್ಮ ಮನದ ಉತ್ಕಟೇಚ್ಛೆಯನ್ನು ಹೊರಪಡಿಸುತ್ತಿದ್ದರು. ಆದರೆ ಇದೀಗ ಆ ಇಚ್ಛೆಯನ್ನು ಕಾರ್ಯರೂಪದಲ್ಲಿ ತರುತ್ತಿರುವರು. ಅವರ ಭಾಷಣಗಳಿಂದಲೇ, ಬೆದರಿ ಕಂಗಾಲಾಗಿದ್ದ ಪ್ರಜಾಸತ್ತಾತ್ಮಕ ರಾಜ್ಯಗಳೆನಿಸಿಕೊಂಡಿರುವ ಬ್ರಿಟನ್ ಮತ್ತು ಫ್ರಾನ್ಸು ಇಂದಿನ ಅವರ ದಿಟ್ಟ ವರ್ತನೆಯಿಂದ ದಿಗ್ಭ್ರಾಂತವಾಗಿರುವವು. ತಮ್ಮ ಬಾಯ್ಮಾತಿಗೇ ಜವಾಬು ಕೊಡಲು ತತ್ತರಿಸಿ ಬೆದರಿದ ಈ ರಾಷ್ಟ್ರಗಳು ಕಾರ್ಯತಃ ತಮ್ಮನ್ನು ಖಂಡಿತಾ ಎದುರಿಸಲಾರವೆಂಬುದು ಸರ್ವಾಧಿಕಾರಿಗಳಿಗೆ ವಿಧಿತವಿದೆ. ಆದ ಪ್ರಯುಕ್ತವೇ ತಮ್ಮಿಚ್ಛೆಯಂತೆ ಯಾರ ಪರಿವೆಯೂ ಇಲ್ಲದೆ ಬಡರಾಷ್ಟ್ರಗಳನ್ನು ಒಂದೊಂದಾಗಿ ತಮ್ಮ ಕರಗತ ಮಾಡಿಕೊಳ್ಳುತ್ತಿರುವವು.

ತಾರೀಕು 26 ರಲ್ಲಿ ಮುಸಲೋನಿಯು ಮಾಡಿದ ಭಾಷಣವನ್ನು ನೋಡಿದರೆ ಅವನು ಕೆಲವೊಂದು ಇಚ್ಛೆಗಳಲ್ಲಿ ನಿಶ್ಚಲನಾಗಿರುವನು ಕಂಡು ಬರುವದು. ಮೊದಲಿನದೊಂದು ಭಾಷಣದಲ್ಲಿ ಆತನು ಕೋರ್ಸಿಕಾ, ನೈಸ್, ಸವಾಯಿ, ಸುಯೇಜ್, ಟ್ಯೂನಿಸ್ ಮತ್ತು ಜಿಬೂಟಿ ಈ ಪ್ರಾಂತಗಳನ್ನು ಬಿಟ್ಟುಕೊಡಬೇಕೆಂದು ಫ್ರಾನ್ಸನ್ನು ಕೇಳಿದ್ದನು. ಇಂದಿನ ಈ ಭಾಷಣದಲ್ಲಿ ಆತನು ಫ್ರಾನ್ಸಿಗೆ ಇದನ್ನೆಲ್ಲಾ ಪಡನೇ ತೀರ್ಮಾನಿಸುವ ಅಧಿಕಾರ ಕೊಟ್ಟಿರುವನು. ಒಂದು, ಮೇಲ್ಕಂಡ ಪ್ರಾಂತಗಳನ್ನು ಸವಿನಯದಿಂದ ಒಪ್ಪಿಸಿಬಿಡಬೇಕು ಇಲ್ಲವೇ ಮುಸಲೋನಿಯನ್ನು ವಿರೋಧಿಸಬೇಕು. ಈ ಭಾಷಣದಲ್ಲಿ ಆತನು ಬರೇ ಜಿಬೂಟಿ, ಟ್ಯೂನಿಸ್, ಮತ್ತು ಸುಯೇಜ್ ಈ ಪ್ರಾಂತಗಳನ್ನೇ ಕೇಳಿರುವದರಿಂದ ಫ್ರಾನ್ಸ್ ಮತ್ತು ಬ್ರಿಟನಿಗೆ ಈ ಭಾಷಣವು ಬಹಳ ತೃಪ್ತಿಕರ ಹಾಗೂ ನ್ಯಾಯವಾದದ್ದೆಂದು ಕಂಡು ಬಂದಿದೆ. ಹಿಟ್ಲರನು ಇಂದು ಭಾರತವನ್ನು ಬಿಟ್ಟುಕೊಡಬೇಕೆಂದು ಕೇಳದೆ ಬೇರೆ ಸಣ್ಣ ಪ್ರಾಂತವಾವುದನ್ನಾದರೂ ಕೇಳಿದರೆ ಅದು ಬ್ರಿಟನರಿಗೆ ಸಮಂಜಸವಾಗಿ ಕಾಣುವದು. ಭಾರತವನ್ನು ಕೇಳದೆ ಸಣ್ಣದನ್ನು ಕೇಳಿದನಲ್ಲಾ ಎಂಬುವುದೇ ತೃಪ್ತಿ. ಈ ರೀತಿ ಇಂದು ಮುಸಲೋನಿಯ ಭಾಷಣವು ಪ್ರಜಾ ಸತ್ತಾತ್ಮಕ ರಾಜ್ಯಗಳಿಗೆ ತೃಪ್ತಿಯನ್ನುಂಟುಮಾಡಿದೆ. ಇಂದು ಪ್ರಜಾಸತ್ತಾತ್ಮಕ ರಾಜ್ಯಗಳು ಸರ್ವಾಧಿಕಾರಿಗಳ ಪ್ರೇರಣೆಯಂತೆ ಕುಣಿಯುತ್ತಿರುವ ಕಾಲ. ಆದ್ದರಿಂದಲೇ ಪ್ರಜಾ ಪ್ರಭುತ್ವ ರಾಷ್ಟ್ರಗಳ ದೃಷ್ಟಿಯಲ್ಲಿ ಸರ್ವಾಧಿಕಾರಿಗಳ ವರ್ತನೆಗಳು ಸಮಂಜಸವಾಗಿ ಪರಿಗಣಿಸಲ್ಪಟ್ಟಿದೆ. ತಲೆಗೆ ಬಿಸಿ ಏರಿರುವ ಈ ಪ್ರಜಾ ಸತ್ತಾತ್ಮಕ ರಾಜ್ಯಗಳು ಹಸಿದ ಹುಲಿಗಳಂತಿರುವ ನಿರಂಕುಶಾಧಿಕಾರಿಗಳನ್ನು ಅವರ ಅಲ್ಪ ಕೇಳಿಕೆಗಳನ್ನು ಸಲ್ಲಿಸಿ ತೃಪ್ತಿಪಡಿಸಬಹುದೆಂಬುದು ಬರೇ ಕನವರಿಕೆಯಾಗಿದೆ. ತಮ್ಮ ಕೇಳಿಕೆಗಳು ಯಾವುದೊಂದೂ ಅಭ್ಯಂತರವಿಲ್ಲದೆ ಸಲ್ಲಿಸಲ್ಪಡುತ್ತಿರುವದನ್ನು ಕಂಡು ಸರ್ವಾಧಿಕಾರಿಗಳು ಬೆದರಿಕೆಗಳನ್ನು ಹಾಕಿ ಹೆಚ್ಚಿನ ಬೇಡಿಕೆಗಳನ್ನು ಮುಂದಿಡುವದು ವಾಸ್ತವ. ಈ ಪ್ರಜಾ ಸತ್ತಾತ್ಮಕ ರಾಜ್ಯಗಳು ತಮ್ಮ ಸ್ಮೃತಿ ವಿಭ್ರಮಣೆಯಿಂದ ಕನವರಿಸುತ್ತಿರುವ ಮಧ್ಯೆ ಸರ್ವಾಧಿಕಾರಿಗಳು ಕ್ರಮೇಣ ಬೆಳೆದು ಈ ಅಂಜುಬುರುಕ ರಾಷ್ಟ್ರಗಳ ಕುತ್ತಿಗೆಗೆ ಕೈ ಹಾಕಿದ ಹೊರತು ಇವರು ಸ್ವಪ್ನ ರಾಜ್ಯದಿಂದ ಹಿಂದಿರುಗುವಂತಿಲ್ಲ.

ಹಿಟ್ಲರನ ಸ್ನೇಹದಿಂದ ಇಂದು ಮುಸಲೋನಿಯು ಆತನು ಇಚ್ಛಿಸಿವಷ್ಟು ಲಾ

ಮುಖ್ಯಪಟ್ಣ ಮೇಡ್ರಿಡ್ ಫ್ರಾಂಕೋವಿನ ವಶವಾಯಿತು.

ಬಂಡಾಯಗಾರನಾದ ಜನರಲ್ ಫ್ರಾಂಕೋವು ಸ್ಪೆಯಿನಿನ ಮುಕ್ಕಾಲು ಭಾಗವನ್ನು ವಶಪಡಿಸಿಕೊಂಡಿರುವನು. ಸ್ಪೆಯಿನಿನಲ್ಲಿ ಅವನ ಈ ವರೆಗಿನ ಅಂದರೆ 30 ತಿಂಗಳ ಕದನದಿಂದಾಗಿ ಅನೇಕ ಪ್ರಮುಖ ನಗರಗಳು ನಾಮಾವಶೇಷವಾಗಿವೆ. ಸ್ಪೆಯಿನಿನ ಮುಖ್ಯ ಪಟ್ಣನಾದ ಮೇಡ್ರಿಡನ್ನು 72 ಗಂಟೆಗಳೊಳಗೆ ಬಂಡಾಯಗಾರರ ವಶಕ್ಕೊಪ್ಪಿಸಿ ಸರಕಾರ ಪಕ್ಷದವರು ಶರಣಾಗತರಾಗಬೇಕೆಂದೂ, ಇಲ್ಲದಿದ್ದರೆ ತನ್ನ ಸೈನ್ಯ ಸಮೇತ ನುಗ್ಗಿ ಪಟ್ಣವನ್ನು ನೆಲಸಮಮಾಡುವದಾಗಿಯೂ ಫ್ರಾಂಕೋವು ಬೆದರಿಕೆ ಕೊಟ್ಟಿದ್ದನು. ಅದೇ ಮೇರೆ ಈಗ ಸ್ಪೆಯಿನ್ ಸರ್ಕಾರವು ಶಸ್ತ್ರಸನ್ಯಾಸವನ್ನು ಕೈಕೊಂಡು ಫ್ರಾಂಕೋವಿಗೆ ಶರಣಾಗತವಾಗಿದೆ. ಫ್ರಾಂಕೋವು ಏಪ್ರಿಲ್ ತಾರೀಕು 1 ರಲ್ಲಿ ಮೇಡ್ರಿಡನ್ನು ಪ್ರವೇಶಿಸಲಿರುವನು. ಅಂತು ಇತಿ ಸ್ಪೆಯಿನ್! ಫ್ರಾಂಕೋವಿನ ಕರಗತವಾಯಿತು. ಈತನ ಉದ್ದಾಮತನದ ಪರಿಣಾಮವಾಗಿ ಫ್ರಾನ್ಸು ಮೊದಲಾದ ರಾಷ್ಟ್ರಗಳಿಗೆ ಬೆದರಿಕೆ ಹುಟ್ಟಿದೆ. ಇನ್ನೇನು ಆಗಲಿದೆಯೋ ನೋಡುವ.

ಒಳದೇಶ.

ಮೈಸೂರು ಪೋಲೀಸು ಇಲಾಖೆಯಲ್ಲಿದ್ದ ಶ್ರೀ ನಾಳಿಯಂಡ ಅಚ್ಚಪ್ಪನವರನ್ನು ಬೆಂಗಳೂರು ನಗರದಲ್ಲಿ ಟ್ರಾಫಿಕ್-ಬ್ರಾಂಚಿನ ಪೋಲೀಸ್ ಇನ್ಸ್‌ಪೆಕ್ಟರಾಗಿ ನೇಮಿಸಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಕೋಲಾರು ಜಿಲ್ಲೆಯ ಮಲ್ಬಾಗಲು ತಾಲೋಕಿನ ಡೆಪ್ಟಿ ಅಮಲ್ದಾರರಾಗಿದ್ದ ಶ್ರೀ ಕುಲ್ಲಚಂಡ ಅಪ್ಪಯ್ಯನವರನ್ನು ಮೈಸೂರು-ಜಿಲ್ಲೆಯ ಹೆಗ್ಗಡೆದೇವನ ಕೋಟೆ ತಾಲೋಕಿನಲ್ಲು ಹಂಗಾಮಿ ಅಮಲ್ದಾರರನ್ನಾಗಿ ನೇಮಿಸಿರುವರೆಂದು ತಿಳಿಸಲು ಸಂತೋಷವೆನಿಸುತ್ತದೆ.

ಬೀರಾರಿನಲ್ಲಿ ರೇಂಜರಾಗಿರುವ ಶ್ರೀ ಯಂ. ಎ. ಚಿಣ್ಣಪ್ಪನವರು ತಾ. 18-3-39 ರಲ್ಲಿ ಒಂದು ದೊಡ್ಡ ಹೆಬ್ಬುಲಿಯನ್ನೂ, ತಾರೀಕು 20-3-39 ರಲ್ಲಿ ಒಂದು ಚಿರತೆಯನ್ನೂ ಗುಂಡು ಹೊಡೆದು ಕೊಂದರೆಂದೂ ಈ ವರೆಗೆ ಇವರು 11 ಹೆಬ್ಬುಲಿಗಳನ್ನು 16 ಚಿರತೆಗಳನ್ನೂ ಕೊಂದಿರುವರಾಗಿಯೂ ತಿಳಿಸುತ್ತಾರೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 108 ಯೂಲಕ್ಕಿ ಮಣಕ್ಕೆ ರೂ. 25 ಕ್ರಯವಿರುತ್ತೆ.

ತಾರೀಕು 29 ಮತ್ತು 30 ರಲ್ಲಿ ಕೋದಾಂಡ್ ಪೂವಯ್ಯ ಸಹೋದರಿಯರು ತಮ್ಮ ಗಾಯಕ ಮತ್ತು ನರ್ತಕ ಸಹಪಾಠಿಗಳೊಡನೆ ಹೈಸ್ಕೂಲ್ ಹಾಲ್‌ನಲ್ಲಿ ನೃತ್ಯ ಕಲೆಯನ್ನು ಪ್ರದರ್ಶಿಸಿದರು.

ರಿಟ್ರೆಂಚ್‌ಮೆಂಟಿನ ಕಾರ್ಯವೂ ಇನ್ನೂ ನಿಲ್ಲಲಿಲ್ಲವೆಂದೂ, ಪುನಃ ಈಗ ಮಧ್ಯೆ ಮಧ್ಯೆ ಮೊದಲು ನೋಟೀಸು ಹೋಗಿ ಬಾಕಿಯೂದ ಕೆಲವರಿಗೆ ನೋಟೀಸು ಹೋಗುತ್ತಿದೆಯೆಂದೂ ತಿಳಿಯುತ್ತೇವೆ.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಮೇನೇಜರರಾದ ಶ್ರೀ ಎಸ್. ರಾಮಚಂದ್ರರವರು ಮದನ ಪಳ್ಳಿಗೆ ವರ್ಗವಾಗಿ ಹೋಗುವರಾಗಿಯೂ, ಅವರ ಬದಲು ಶ್ರೀ ಎಸ್. ಅಬ್ದುಲ್ ಮುತಾಲಿಫ್‌ರವರು ಬರುವರಾಗಿಯೂ ತಿಳಿಯುತ್ತೇವೆ.

ವೀರಾಜಪೇಟೆ.

ಇಲ್ಲಿ ಭತ್ತ ಗಾಡಿಗೆ ರೂ. 43/ ಕ್ರಯವಿರುತ್ತೆ.

ಪೊನ್ನಂಪೇಟೆ.

ಇದೇ ಏಪ್ರಿಲ್ ತಾರೀಕು 3 ನೇ ಸೋಮವಾರ ದಿನ ಹಗಲು 2 ಗಂಟೆಗೆ ಇಲ್ಲಿಯ ಶಾಲೆಯಲ್ಲು, ಶಾಲೆಯ ಮುಂದಿನ ಅಭಿವೃದ್ಧಿಯ ವಿಷಯ ಅಂದರೆ ಶಾಲಾ ಬಡಾವಣೆ, ಸ್ಕೂಲ್ ಫೀಜು ಹೆಚ್ಚಿಸಿದ್ದರ ವಿಚಾರ, ಶಾಲಾ ಉಪಾಧ್ಯಾಯರನ್ನು ಹೆಚ್ಚಿಸುವ ವಿಚಾರ ಮತ್ತು ಹೊಸ ಕಟ್ಟಡವನ್ನು ಸರಕಾರಕ್ಕೆ ವಹಿಸಿಕೊಡುವ ವಿಷಯ ಒಂದು ಮೀಟಿಂಗನ್ನು ಶಾಲಾಭಿವೃದ್ಧಿ ಸಂಘದ ಆಶ್ರಯದಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಬೇತರಿ ಕಡುವಿನಲ್ಲಿ ಬರುವ ತಾರೀಕು 2 ರಿಂದ 3 ದಿನಗಳ ವರೆಗೆ ವೆಂಕಟರಮಣ ಜಾತ್ರೆಯು ನಡೆಯುವದೆಂದು ಸಚಿದಾನಂದರೆಂಬವರು ಹಸ್ತಪತ್ರಿಕೆಗಳನ್ನು ಹಂಚಿರುವರಾಗಿಯೂ, ಇದು ಬರೇ ಜನರಿಂದ ದುಡ್ಡು ಎಳೆಯಲು ಮಾಡಿದ ಕೃತ್ರಿಮವೆಂತಲೂ, ಸ್ವೇಚ್ಛೆಯಿಂದ ಅಲ್ಲಿ ಉದರ ಭರಣಾರ್ಥವಾಗಿ ಈ ಜಾತ್ರೆಯನ್ನು ನಡೆಸಲು ಯಾರೋ ಗುಪ್ತನಾಮದಿಂದ ಪೋಲ್ಕಂಡ ಪತ್ರಿಕೆಯನ್ನು ಹೊರಡಿಸಿರುವದೆಂದು ಅದನ್ನು ಟೀಕಿಸುವ ಹಸ್ತಪತ್ರಿಕೆಗಳೂ ಹಂಚಲ್ಪಟ್ಟಿರುವದಾಗಿಯೂ ತಿಳಿಯುತ್ತೇವೆ.

ಗೋಣಿಕೊಪ್ಪಲು.

ತಾ. 26 ರಲ್ಲಿ ಮ. ಕೇಳಪಂಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಇಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಶ್ರೀ ಮಾನ್ ಸಿ. ಐ. ಬೆಳ್ಯಪ್ಪನವರು ತ್ರಿಪುರಿ ಕಾಂಗ್ರೆಸ್ಸಿನ ವಿಚಾರವಾಗಿಯೂ, ಶ್ರೀಯುತ ಕೆ. ಸಿ. ಕರುಂಬಯ್ಯನವರು ಕಾಂಗ್ರೆಸು ಪಕ್ಷದವರು ಕೌನ್ಸಿಲಿನಿಂದ ಹೊರ ಬಂದ ವಿಷಯವಾಗಿಯೂ ಭಾಷಣ ಮಾಡಿದರು. ನಂತರ ಕೆಲವು ಠರಾವುಗಳೂ ಪಾಸಾದವು.

ಯೂರೋಪಿಯನ್ ಪ್ಲಾಂಟರುಗಳ ಪರ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಾಗಿದ್ದ ಮಿ. ಮೂರಿಸ್‌ರವರು ಮತ್ತು ಮಿ. ಬ್ರಮೊಲ್ಡ್‌ರವರು ತಮ್ಮ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿದ್ದನ್ನು ಚೀಫ್ ಕಮಿಷನರವರು ಮಂಜೂರು ಮಾಡಿರುವರು. ಇವರ ಖಾಲಿ ಸ್ಥಳಗಳಿಗೆ ಉಪಚುನಾವಣೆಯು ಬೇಗನೆ ನಡೆಯಲಿರುವುದು.

ಹುದಿಕೇರಿ.

ತಾರೀಕು 27 ರಲ್ಲಿ ಶ್ರೀ ಬಯವಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಇಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆಯಿತು. ಶ್ರೀ ಗಳಾದ ಪಿ. ಜಿ. ಮುದ್ದಮ್ಮಯ್ಯ, ಕೆ. ಸಿ. ಕರುಂಬಯ್ಯ ಮತ್ತು ಬಿದ್ದಂಡ ಕಾರ್ಯಪ್ಪನವರುಗಳು ಕಾಂಗ್ರೆಸ್ ಪಕ್ಷದವರ ಕಳೆದ ಕೌನ್ಸಿಲು ಮೀಟಿಂಗಿನ ಸಭಾತ್ಯಾಗದ ವಿಚಾರವೂ, ಶ್ರೀ ಎ. ಎಸ್. ಪೊನ್ನಪ್ಪನವರು ಮತ್ತು ಕೆ. ಕೆ. ಗಣಪತಿಯವರು ಡಿ. ಬೋರ್ಡಿನ ವಿಚಾರವಾಗಿಯೂ ಭಾಷಣ ಮಾಡಿದರು. ನಂತರ ಕೆಲವು ಠರಾವುಗಳು ಪಾಸಾದವು.

ಶ್ರೀಮಂಗಲ.

ತಾ. 28 ರಲ್ಲಿ ಶ್ರೀ ಮುಚ್ಚಮಾಡ ಬಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಶ್ರೀ. ಗಳಾದ ಕೆ. ಸಿ. ಕರುಂಬಯ್ಯ ಮತ್ತು ಬಿ. ಯಂ. ಕಾರ್ಯಪ್ಪನವರುಗಳು ಕಾಂಗ್ರೆಸ್ ಮೆಂಬರುಗಳು ಕಳೆದ ಕೌನ್ಸಿಲ್ ಅಧಿವೇಶನದ ಸಭಾತ್ಯಾಗದ ವಿಚಾರ ಭಾಷಣ ಮಾಡಿದರು. ನಂತರ ಕೆಲವು ಠರಾವುಗಳು ಪಾಸಾದವು.

ಹಿಂದೂದೇಶ.

ಜಯಪುರ ಸತ್ಯಾಗ್ರಹದ ನಿಮಿತ್ತ, ಸೆರೆ ಹಿಡಿದು, ಶಿಕ್ಷೆಗೆ ಗುರಿಪಡಿಸಲ್ಪಟ್ಟ 25 ಸ್ತ್ರೀಯರ ಬಿಡುಗಡೆ ಆಗಿದೆ.

ಗಯೂದಲ್ಲಿ, ಸದ್ಯದಲ್ಲೇ ಜರಗಲಿರುವ ಅಖಿಲ ಭಾರತ ಕಿಸಾನ್ ಸಭಾ ಪರಿಷತ್ತಿನ ಅಧ್ಯಕ್ಷರಾಗಿ, ಶ್ರೀ. ಆಚಾರ್ಯ ನರೇಂದ್ರ ದೇವ್‌ರವರು ಆರಿಸಲ್ಪಟ್ಟಿದ್ದಾರೆ.

ಜೈಲಿನ ಕೈದಿಗಳಿಗೋಸ್ಕರ, ಯೋಗ್ಯ ವಿಚಾರಗಳ ಮೇಲೆ ಭಾಷಣ ಕೊಡುವ ಏರ್ಪಾಡುಗಳನ್ನು, ಜೈಲುಗಳಲ್ಲಿ ನಡೆಸುವ ಬಗೆಗೆ, ಪಂಜಾಬ್ ಸರಕಾರವು, ಜೈಲ್ ಸುಪರಿಂಟೆಂಡೆಂಟರಿಗೆ ಅಧಿಕಾರವಿತ್ತಿದೆ.

ಕೇಂದ್ರ ಅಸೆಂಬ್ಲಿಯಲ್ಲಿ, ಪೋಸ್ಟ್ ಕಾರ್ಡಿನ ಬೆಲೆ ತಗ್ಗಿಸಬೇಕೆಂಬ ವಿಚಾರದಲ್ಲಿ ಪ್ರಬಲ ಚರ್ಚೆ ನಡೆದು, ಸರಕಾರದ ಪಕ್ಷ ಸೋತು ಹೋಗಿ, ಕಾರ್ಡಿನ ದರ ಇಳಿಸಬೇಕೆಂಬ ವಿಚಾರ ಮಂಜೂರಾಯಿತು.

'ಜಗತ್ತಿನ ರಾಷ್ಟ್ರಗಳೆಲ್ಲ ಶಸ್ತ್ರಸನ್ಯಾಸವನ್ನು ಕೈಕೊಂಡು, ಹಿಟ್ಲರನ ಕಣ್ಣು ತೆರೆಯಬೇಕು. ಅದೇ ಶಾಂತಿಗೆ ಮಾರ್ಗ. ಇದರಿಂದ ಕೊಲೆಯು ನಿಲ್ಲುವುದು' ಎಂದು ಮಹಾತ್ಮಾಜಿಯವರು ಜಗತ್ತಿಗೆ ಸಂದೇಶವಿತ್ತಿದ್ದಾರೆ.

ತನ್ನ ಪತಿಯು ಎಷ್ಟೋ ಕೋಟಿ ಸಂಖ್ಯೆಯ ಭಾರತೀಯರಿಗೆ ನಾಯಕರಾಗಿರುವುದರಿಂದ ತಾನು ತಾಯಿಯಾಗಿ ವರ್ತಿಸಬೇಕಾದ ಭಾರವು ತನ್ನ ಮೇಲಿರುವುದೆಂದು ಶ್ರೀ ಗಾಂಧಿಯವರ ಸತಿ ಶ್ರೀಮತಿ ಕಸ್ತೂರಿಬಾಯಿಯವರು ರಾಜಕೋಟೆಯಲ್ಲಿ ತಿಳಿಸಿರುವರು.

ಇಂಡಿಯಾ ದೇಶದಲ್ಲಿರುವ ಬ್ಯಾಪ್ಟಿಸ್ಟ್ ಕ್ರೈಸ್ತರು ಕಲ್ಕತ್ತಾದಲ್ಲಿ ಸಭೆಯನ್ನು ನಡೆಸಿ ಕ್ರಿಸ್‌ಮಸ್ ದಿನದ ಮದ್ಯವಿಲ್ಲದೆಯೇ ಪ್ರಾರ್ಥನೆಯನ್ನು ನಡೆಸಿ ಕಾಂಗ್ರೆಸ್ ಮಂತ್ರಿಮಂಡಳವು ಪ್ರಾರಂಭಿಸಿದ ಮದ್ಯಪಾನ ನಿಷೇಧ ಕಾರ್ಯಕ್ರಮದಲ್ಲಿ ಸಹಾಯಮಾಡಲು ತೀರ್ಮಾನಿಸಿರುವರು.

ಇಂದೋರ್ ಸಂಸ್ಥಾನದ ಮಹಾರಾಜರಾದ ಹೋಲ್ಕರರು, ಹರಿಜನರಿಗೆ ದೇವಸ್ಥಾನ ಪ್ರವೇಶಕ್ಕೆ ಇದು ವರೆಗೆ ಇದ್ದ ಅಲ್ಪ ತೊಡಕನ್ನು ನಿವಾರಿಸಿ, ಸರ್ವ ಹರಿಜನರೂ, ಇತರ ಮೇಲ್ಜಾತಿಯವರಂತೆ, ದೇವಸ್ಥಾನವನ್ನು ಪ್ರವೇಶಿಸಬಹುದೆಂದು ತೀರ್ಮಾನಿಸಿರುವರು.

ಮದ್ರಾಸಿನ ಮುಂದಿನ ಗವರ್ನರರಾಗಿ ಕೇಪ್ಟನ್ ಆರ್ಥರ್ ಓಸ್ವಾಲ್ಡ್ ಹೋಪ್, ಯಂ. ಸಿ., ಯಂ. ಸಿ. ಒ. ರವರು ನೇಮಿಸಲ್ಪಟ್ಟಿರುವರು. ಈಗಿನ ಗವರ್ನರರು ಮುಂದಿನ ನವಂಬರದಲ್ಲಿ ನಿವೃತ್ತರಾಗಲಿರುವದರಿಂದ, ಆ ಬಳಿಕ ಇವರು ಚಾರ್ಜು ವಹಿಸಿಕೊಳ್ಳುವರು.

ಮದ್ರಾಸ್ ಅಸೆಂಬ್ಲಿಯಲ್ಲಿನ ಸದಸ್ಯರು, ಅಸೆಂಬ್ಲಿಯಲ್ಲಿ ಯಾವ ಭಾಷೆಯಲ್ಲಿ ಮಾತನಾಡಬೇಕೆಂಬುವರ ಕುರಿತು, ಚರ್ಚೆ ನಡೆದು, ಅವರು ಇಂಗ್ಲೀಷಿನಲ್ಲೇ ಮಾತನಾಡಬೇಕೆಂಬ ಕಟ್ಟು ಇಲ್ಲವೆಂದೂ, ತಮ್ಮ ಮಾತೃಭಾಷೆಯಲ್ಲೇ ಮಾತನಾಡಬಹುದೆಂದೂ ತೀರ್ಮಾನವಾಯಿತು.

ಹಿಂದೂ ಧರ್ಮಕ್ಕೆ, ಹೈದರಾಬಾದಿನಲ್ಲಿನ ಅನಾಚಾರದಿಂದುಂಟಾದ ಆಘಾತವನ್ನಿದಿರಿಸುವುದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯವಿದೆ. ಆದರಿಂದ, ಭಾರತದ ವೀರಶೈವರೆಲ್ಲ ಇದರಲ್ಲಿ ಭಾಗವಹಿಸಲು ಮುಂದಾಗಬೇಕೆಂದು, ಅಖಿಲ ಭಾರತ ವೀರಶೈವ ಮಹಾಸಭೆಯು ಲಿಂಗಾಯತರನ್ನು ಕೇಳಿಕೊಂಡಿದೆ.

ಕೇಂದ್ರ ಅಸೆಂಬ್ಲಿಯಲ್ಲಿ ಹಿಂದಿನ ದಿನ ಒಂದು ರೂಪಾಯಿಯಿಂದ ಬರೇ ಕಾಲು ರೂಪಾಯಿಗೆ ಇಳಿಸಲ್ಪಟ್ಟ ಉಪ್ಪಿನ ತೆರಿಗೆಯ ವಿಚಾರ ಪುನರಾಲೋಚಿಸಬೇಕೆಂದು ವೈಸರಾಯರ ಅಭಿಪ್ರಾಯವಾಗಿದ್ದರೂ, ಶ್ರೀ. ಸತ್ಯಮೂರ್ತಿಗಳ ವೀರಾವೇಶದ ಭಾಷಣ, ಆ ಯೋಜನೆಯನ್ನು ಮುರಿದು, ಹಿಂದಿನ ದಿನದ ತಿದ್ದುಪಡಿಯೇ ಮಂಜೂರಾಗುವಂತೆ ಮಾಡಿತು.

ತಿರುವಾಂಕೂರು ಸತ್ಯಾಗ್ರಹ ಚಳವಳದಲ್ಲಿ ಸೆರೆ ಹಿಡಿಯಲ್ಪಟ್ಟಿದ್ದ ಕಾಂಗ್ರೆಸ್ ಮುಖಂಡರನ್ನು ಬಿಡಲಾಗಿದೆ. ಮಾರ್ಚ ತಾರೀಕು 25 ರಲ್ಲು ಸತ್ಯಾಗ್ರಹ ಕೈಕೊಳ್ಳಲಾಗುವದೆಂದು ಕಾಂಗ್ರೆಸಿನವರು ಹೊರಡಿಸಿದ ಪ್ರಕಟಣೆಯು ಮೇಲೆ ಸತ್ಯಾಗ್ರಹ ಕೈಕೊಳ್ಳದಿರುವದರಿಂದ ಇವರನ್ನು ಬಿಡಲಾಗಿದೆಯೆಂದೂ ಸಂಸ್ಥಾನ ಸರ್ಕಾರವು ಪ್ರಕಟಿಸಿದೆ.

ಮಧ್ಯಯೂರೋಪಿನ ಸಮಸ್ಯೆಗಳು.

ಹಿಟ್ಲರನು ಝೆಕೊಸ್ಲೋವಾಕಿಯಲ್ಲಿ ಮಾಡಿದ್ದೇನು?
ಪೋಲೆಂಡಿನ ಗತಿಯೇನು?
ಯುಗೊಸ್ಲೋವಿಯೂದ ಸ್ಥಿತಿಯೇನು?
ಜರ್ಮನರ ಹಂಚಿಕೆಯೇನು?
ಇವರ ಸಹಾಯದಿಂದ ಇಟಲಿಯು ಸಾಧಿಸುವದೇನು?
ರೊಮೇನಿಯಾದಲ್ಲಿ ಜರ್ಮನರ ಕೈವಾಡವೇನು?
ಪ್ರಜಾಪ್ರಭುತ್ವ ರಾಷ್ಟ್ರಗಳ ಭವಿತವ್ಯವೇನು?

ಝೆಕೊಸ್ಲೊವಾಕಿಯಾ.

ಝೆಕೊಸ್ಲೊವಾಕಿಯದ ಬಳಿ ಪ್ರಾಂತಗಳಾದ ಬೊಹೇಮಿಯಾ, ಮೊರೇವಿಯಾ, ಸ್ಲೊವಾಕಿಯಾ, ಮತ್ತು ರುಥೇನಿಯಾಗಳೊಳಗೆ ಕೆರಸ್ವರ ವಸತ ಇಂದಿಕ್ಕೆ, ಸ್ಲೊವಾಕಿಯರು ಮತ್ತು ರುಥೇನಿಯಾ ಇವು ತಮಗೆ ಸ್ವಾತಂತ್ರ್ಯ ಸಿಗಲು ಬಯಸುತ್ತಿದ್ದರೆಂದು, ಹಂಗೇರಿಯನ್ನು [illegible] ಯಾಗಿ ಅವು ಆ ಬೇಡಿಕೆಯನ್ನು ಸಿದ್ಧ ಕರಿಸಿದ ಈ ಪ್ರಾಂತ್ಯಗಳು ಹಿಟ್ಲರನ ಸಹಾಯವನ್ನು ಕೇಳುತ್ತಿರುವ ಬಳಿ ಸಂಗತಿ ನಡೆಯಿತು. ಈ ಗಡಿಬಿಡಿ ಎಲ್ಲ ಹಂಗಾಮೆಯೂ ಆಯಿತು. ಜರ್ಮನರು ಸ್ಲೊವಾಕಿಯಾ ಮತ್ತು ರುಥೇನಿಯಾದ ಹಿತರಕ್ಷಕರಂತೆ ಬಳಸುಗ್ಗಿ ಅವನ್ನು ವಶಪಡಿಸಿದ್ದೆಂದು ಘೋಷಿಸಿ, ಆ ಪ್ರಾಂತ್ಯಗಳನ್ನು ಅವರಿಗೆ ಒಪ್ಪಿಸಿದಂತೆ ರಾಜ ಪದವಿಯ ಅವರ ಅಧ್ಯಕ್ಷರ ಪದವಿ ದಾನವನ್ನು ಬಲಾತ್ಕರಿಸಿ ಜಯತಿಲಕ ಇಟ್ಟನು. ರುಥೇನಿಯಾವನ್ನು ಹಂಗೇರಿಯು ವಶಪಡಿಸಿಕೊಂಡಿತು. ಇದರಿಂದಾಗಿ ಜರ್ಮನಿಗೆ ಮತ್ತಷ್ಟು ಒಳ್ಳೆಯ ದಾರಿ ಸಿಕ್ಕಿ, ಹಂಗೇರಿಯಕ್ಕಾಗಿ ರುಮೇನಿಯಕ್ಕೆ ಹೋಗುವದು ಅವರಿಗೆ ಸುಲಭವಾಯಿತು. ಹೀಗೆ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದ ಝೆಕೊಸ್ಲೋವಾಕಿಯವನ್ನು ಛಿನ್ನಭಿನ್ನವಾಗಿ ವಿಂಗಡಿಸಿ ರಾಷ್ಟ್ರೀಯತೆಯ ಅರಸನಾಗಿ ತನ್ನ ಭಯಂಕರ ದಬ್ಬಾಳಿಕೆಯನ್ನು ತೋರಿಸಿದನು.

ಪೋಲೆಂಡ್.

ಝೆಕೊಸ್ಲೊವಾಕಿಯಾದ ನಂತರ ಹಿಟ್ಲರನ ದೃಷ್ಟಿಯು ಇವರ ಮೇಲೆ ಬೀಳುವದು. ಇದು ಮಹಾ ಯುದ್ಧದ ನಂತರ ಹೊಸದಾಗಿ ಸ್ವತಂತ್ರ್ಯವಾದ ರಾಷ್ಟ್ರಗಳಲ್ಲಿ ಒಂದು. ಇದಕ್ಕೂ, ರಷ್ಯಾಕ್ಕೂ ಜರ್ಮನಿಗೂ ಒಪ್ಪಂದವಿದೆ. ಈಗ ಫ್ರಾನ್ಸು ಬ್ರಿಟನ್ ಬಲ ಹಿಡಿದು ಕುಣಿಯುತ್ತಿರುವದರಿಂದ ರಷ್ಯಾ ಮತ್ತು ಪೋಲೆಂಡುಗಳು ತಮ್ಮೊಳಗೆ ಒಂದು ಒಪ್ಪಂದ ಮಾಡಿಕೊಂಡಿರುವದು. ಬಾಲ್ಟಿಕ್ ಸಮುದ್ರ

ಫಲವನ್ನು ಪಡೆಯುತ್ತಿಲ್ಲ. ಮುಸಲೋನಿಗೆ ಇದು ತಿಳಿಯದೆಯೂ ಇಲ್ಲ. ಆದರೆ ಹಿಟ್ಲರನ ಸ್ನೇಹವಿಲ್ಲದ ಇಟಲಿಯು ಈ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಬೆದರಿಕೆಯನ್ನು ಹಾಕಿದ್ದ ಪಕ್ಷದಲ್ಲಿ ಅದರ ಪರಿಣಾಮವು ನಿಶ್ಚಿತವಾಗುತ್ತಿರಲಿಲ್ಲ. ಹಿಟ್ಲರನ ಕೈವಾಡದಿಂದಲೇ ಇಂದು ಆ ಬಿಳಿಗೇಡಿ ರಾಷ್ಟ್ರಗಳು ಇಟಲಿಯನ್ನು ವಿರೋಧಿಸಿಲ್ಲ. ಇಟಲಿಯು ಈ ಸ್ನೇಹದಿಂದಲೇ ಫ್ರಾನ್ಸಿನ ಮೇಲೆ ಹೇಳಿದ ಪ್ರಾಂತಗಳನ್ನು ಪಡೆಯದೆ ಬಿಡಲಿಕ್ಕೂ ಇಲ್ಲ. ಸ್ವತಃ ಬ್ರಿಟನ್ ಮತ್ತು ಫ್ರಾನ್ಸುಗಳನ್ನು ಇಟಲಿ [illegible] ವರೆಗೂ ಜರ್ಮನಿಯು [illegible] ಭೂಮಧ್ಯ ಸರೋವರದ [illegible] ವಶಪಡಿಸಿಕೊಂಡು ತನ್ನ [illegible] ಪ್ರಕಟಿಸದೆ ಬಿಡು [illegible] ಸಾಧು ರಾಷ್ಟ್ರಗಳು [illegible] ಕಾರ್ಯವನ್ನು ಮಾಡುವುದಕ್ಕೆ [illegible] ಬಗೆ ಇಲ್ಲ ವೇ ಇಲ್ಲ.

ಸಂತೆಯಲ್ಲಿ ಜೂಜಾಟ ಎಂಬ ಒಂದು ನಗರವಿದೆ. ಇವರಲ್ಲಿ ಜರ್ಮನರೇ ಹೆಚ್ಚು ರುವರು. ಈ ಜರ್ಮನರು ತಮ್ಮ ಜರ್ಮನಿಯ ನಿಜ ರಾಜ್ಯದಲ್ಲಿ ಸೇರಿಸಬೇಕೆಂದು ಹಿಟ್ಲರನನ್ನು ಬೇಡಿಕೊಳ್ಳುತ್ತಿರುವರು.

ಲಿಟ್ವೇನಿಯಾ.

ಇದೂ ಸಹ ಮಹಾ ಯುದ್ಧದ ನಂತರ ಸ್ವತಂತ್ರವಾದ ಒಂದು ಸಣ್ಣ ರಾಷ್ಟ್ರ. ಇದರಲ್ಲಿ ಮೆಮೆಲ ಎಂಬ ಬಂದರು ಹೆಚ್ಚು ಜರ್ಮನಿ ವಸತಿಯಿಂದ ಕೂಡಿದ್ದು ಈ ಪ್ರಾಂತ್ಯದಲ್ಲಿ ಜರ್ಮನರು ಚಳವಳಿ ನಡೆಸಿ ಈಗ ಅದು ಹಿಟ್ಲರನ ಕೈಗೆ ತಾನಾಯಿತು. ಪ್ರತಿಯೊಂದು ರಾಷ್ಟ್ರದಲ್ಲಿಯೂ ಎಲ್ಲಿ ಜರ್ಮನರು ಬಹುಮತವಾಗಿರುವರೋ ಅವರೆಲ್ಲರೂ ಚಳವಳ ನಡೆಸಿ, ಗಲಭೆ ಎಬ್ಬಿಸಿ ಹಿಟ್ಲರನಿಗೆ ಸಹಾಯ ಮಾಡಿ ಜರ್ಮನ್ ಚಕ್ರಾಧಿಪತ್ಯವನ್ನು ವಿಸ್ತರಿಸಲು ಯತ್ನಿಸುತ್ತಿರುವರು.

ಯುಗೊಸ್ಲೋವಿಯಾ.

ಮಹಾ ಯುದ್ಧದ ಮುಂಚೆ ಸರ್ವಿಯಾ ಎಂಬ ಹೆಸರಿನಿಂದಿದ್ದ ಈ ರಾಷ್ಟ್ರವು ಯುದ್ಧದ ನಂತರ ಹಂಗೇರಿಯಾದ ಕೆಲ ಭಾಗವನ್ನು ಕಿತ್ತುಕೊಂಡು ಸ್ವತಂತ್ರವಾದ ಒಂದು ರಾಷ್ಟ್ರವಾಯಿತು. ಪೋಲೆಂಡಿನಂತರ ವಿಚಾರಿಸಬೇಕಾದ್ದು ಇದರ ಸ್ಥಿತಿ. ಈಗ ಬ್ರಿಟನ್, ಮತ್ತು ಫ್ರಾನ್ಸ್ ಇವುಗಳ ಶಕ್ತಿ ಕುಂದಿ ಇಟಲಿ ಜರ್ಮನಿಗಳು ತಲೆಯೆತ್ತಿ ಮೆರೆಯುತ್ತಿರುವಾಗ ಮಧ್ಯೆ ಇರುವ ಈ ಪುಟ್ಟ ರಾಷ್ಟ್ರವು ಇಟಲಿ, ಜರ್ಮನಿಗಳೊಡನೆ ಸಖ್ಯ ಬೆಳೆಸಿದೆ. ಆದರೆ ಒಳಗಿಂದೊಳಗೆ ಈ ಎರಡು ರಾಷ್ಟ್ರಗಳ ಮೇಲೂ, ಹಂಗೇರಿಯಾದ ಮೇಲೂ ಅದಕ್ಕೆ ವಿಶ್ವಾಸವಿಲ್ಲ. ಮೊದಲೊಮ್ಮೆ ಯುಗೊಸ್ಲೋವಾಕಿಯಾದ ರಾಜನೊಬ್ಬನನ್ನು ಫ್ರಾನ್ಸು ಕೊಲೆ ಮಾಡಿದ್ದರಿಂದ ಇಂದೂ ಆ ವೈರವು ಬೆಳೆಯುತ್ತಿದೆ. ಈಗ ಇಟಲಿಯೊಡನೆ ಸಖ್ಯ ಮಾಡಿಕೊಂಡಿದ್ದರೂ ತನ್ನ ಪಶ್ಚಿಮ ಕರಾವಳಿಯ ಮೇಲೆ ಇಟಲಿಗೆ ಕಣ್ಣಿದೆಯೆಂಬುದು ಅದಕ್ಕೆ ತಿಳಿದಿದೆ. ಇನ್ನೊಂದು ಭಾಗವಾದ ಕ್ರೋಟಿಯಾವನ್ನು ಹಂಗೇರಿಯಾದವರು ವಶಪಡಿಸಲು ಹವಣಿಸುತ್ತಿರುವರೆಂಬುವದೂ ಅದಕ್ಕೆ ಗೊತ್ತಿದೆ. ಯುರೋಪದ ಬೇರೆ ಪ್ರಾಂತ್ಯಗಳಲ್ಲಿಲ್ಲ ಜರ್ಮನರೆಂಬ ಈ ರೋಗಾಣುಗಳಿಂದ ಹುಟ್ಟಿದ ಆಂದೋಲನ ಇಲ್ಲಿಯೂ ಹಬ್ಬಲಿಕ್ಕೆ ಸಾಕಷ್ಟು ಜರ್ಮನರಿರುವರು. ಆದ್ದರಿಂದ ಜರ್ಮನಿಯು ಝೆಕೊಸ್ಲೊವಾಕಿಯಾದಲ್ಲಿ ನಡೆಸಿದ ಪ್ರಹಸನವನ್ನು ಇಲ್ಲಿ ನಡೆಸಿ ಒಂದಂಶವನ್ನು ಹಂಗೇರಿಗೆ ಕೊಟ್ಟು ಇನ್ನೊಂದು ಭಾಗವನ್ನು ತನ್ನ ಕೈಕೆಳಗೆ ಆ

ಶ್ರಿತರಾಜ್ಯವಾಗಿ ಮಾಡಿದರೆ ಜರ್ಮನಿಗೆ ತನ್ನ ಹಡಗುಗಳನ್ನು ಅಬಾಧಿತವಾಗಿ ಕಪ್ಪು ಸಮುದ್ರದ ವರೆಗೆ ಓಡಾಡಿಸಬಹುದು. ಜರ್ಮನರ ದೃಷ್ಟಿಯು ಯಾವ ಕಡೆ ಪಸರಿಸುವದೋ ನೋಡಬೇಕು.

ರೊಮೇನಿಯಾ.

ಜರ್ಮನಿಯು ರೊಮೇನಿಯಾದ ಮೇಲೆ ಕಣ್ಣಿಟ್ಟು ಅದನ್ನು ವಶಪಡಿಸಿಕೊಳ್ಳಲು ಯತ್ನಿಸಿದೆ. ಅದು ತನ್ನ ಕೈಗಾರಿಕೆ ಸಾಮಗ್ರಿಗಳನ್ನೆಲ್ಲ ಜರ್ಮನರ ಪಾದದಲ್ಲಿರಿಸಿ ಬರೇ ಕೃಷಿಕರ ರಾಜ್ಯವಾಗಿರಬೇಕೆಂದು ಜರ್ಮನರ ಇಚ್ಛೆ. ಅದ್ದರಿಂದಲೇ ಬರೇ 3 ದಿನಗಳೊಳಗೆ ಈ ಶರತ್ತಿಗೆ ಒಪ್ಪದಿದ್ದರೆ ರೊಮೇನಿಯಾದ ಹೆಸರು ಭೂಪಟದಿಂದ ನಾಮಾವಶೇಷವಾಗುವದೆಂದು ಅವನು ಘರ್ಜಿಸಿರುವನು. ಜರ್ಮನಿಯು ರೊಮೇನಿಯಾದ ಮೇಲೆ ಕಣ್ಣಿಡಲು ಕಾರಣವಿರುವದು. ರೊಮೇನಿಯು ಫಲವತ್ತಾದ ದೇಶ. ಅಲ್ಲಿಯ ಎಣ್ಣೆ ಗಣಿಗಳು ಜಗತ್ತಿನಲ್ಲಿ 5 ನೇ ಸ್ಥಾನ ಪಡೆದಿವೆ. ಅಲ್ಲಿ ವರ್ಷಕ್ಕೆ 7 ಮಿಲಿಯ ಟನ್ ಎಣ್ಣೆ ಸಿಗುತ್ತದೆ, ಅಲ್ಲದೆ ಅದು ಬರೇ ಮೂಲು ಲಕ್ಷ ಸೈನ್ಯದಿಂದ ರಕ್ಷಿಸಲ್ಪಡುತ್ತಿದೆ. ಆದ್ದರಿಂದ ಅದನ್ನು ಜಯಿಸುವದು ಜರ್ಮನಿಗೆ ಕ್ಷಣ ಮಾತ್ರದ ಕೆಲಸವೆಂದು ತಿಳಿದಿದೆ.

ಜರ್ಮನಿಯ ಕಾಂಕ್ಷೆ.

ಹಿಂದೊಮ್ಮೆ ಹಿಟ್ಲರನು ಮ್ಯೂನಿಕಿನಲ್ಲಿ ಭಾಷಣ ಮಾಡಿದಾಗ ಮಹಾ ಯುದ್ಧದ ನಂತರ ಭಿನ್ನ ಭಿನ್ನವಾಗಿ ಹರಿದು ಹಂಚಿಹೋದ ಜರ್ಮನ್ ಚಕ್ರಾಧಿಪತ್ಯವು ಒಂದಾಗಬೇಕು. ಎಲ್ಲಿ ಯಾವ ಪ್ರಾಂತದಲ್ಲಿ ಜರ್ಮನ್ ಸಹೋದರರು ಇರುವರೋ ಅವರ ಹಿತಚಿಂತನೆಯನ್ನು ಕೋರುವದು ನಮ್ಮ ಕರ್ತವ್ಯವೆಂದ ಮಾತು ಇಂದು ಜ್ಞಾಪಕಕ್ಕೆ ಬರುತ್ತದೆ. ಅದರಂತೆಯೇ ಹಿಟ್ಲರನು ತನ್ನ ರಾಷ್ಟ್ರವನ್ನು ವಿಸ್ತರಿಸಬೇಕೆಂಬ ಆ ಭಯಂಕರ ದಾಹದಿಂದ ಕೂಡಿದವನಾಗಿ ಮುಂದುವರಿಯುತ್ತಿರುವನು. ಅವನ ಈ ಕಾಂಕ್ಷೆಗಳಿಗೆ ಬ್ರಿಟಿಷ್ ಹಾಗೂ ಇತರ ಪ್ರಜಾಪ್ರಭುತ್ವ ರಾಜ್ಯಗಳ ಅಂಜಿಕೆಯು ಅನುಕೂಲವಾಗಿಯೇ ಪರಿಣಮಿಸಿದೆ. ಇಂದು ಜರ್ಮನಿಯು ಸರ್ವಾಧಿಕಾರಿಯಾದ ಹಿಟ್ಲರನ್ನು ಪುರಾತನ ಕಾಲದ ನೆಪೋಲಿಯನನ್ನು ಜ್ಞಾಪಕಕ್ಕೆ ತರುತ್ತಿರುವನು.

ಪ್ರಜಾಸತ್ತಾತ್ಮಕ ರಾಜ್ಯಗಳ ಅವಸ್ಥೆ.

ಇಂದು ಜಗತ್ತಿನಲ್ಲಿ ಪ್ರಜಾಸತ್ತಾತ್ಮಕ ರಾಜ್ಯಕ್ರಮವು ಮಾಯವಾಗುವದೋ ಎಂಬ ಭಯವು ಎಲ್ಲರಲ್ಲಿಯೂ ಮೂಡಿದೆ. **ಪ್ರಜಾಸತ್ತಾತ್ಮಕ ರಾಷ್ಟ್ರಗಳಿಗೆ ಮುಂದಾ**ಳುಗಳೆಂದೆನ್ನಿಸಿಕೊಂಡಿರುವ ಬ್ರಿಟನ್ ಮತ್ತು ಫ್ರಾನ್ಸ್ ಬಾಯಿ ತುಂಬಾ ಮಾತಾಡಿ, ಪೌರೋಹಿತ್ಯವನ್ನು ಮಾತ್ರ ವಹಿಸಿಕೊಂಡಿರುವರು. ಇವರ ಕೈಯಿಂದ ಏನೂ ಸಾಗದೆಂಬುದು ಹಿಟ್ಲರನಿಗೆ ಬೋಧೆಯಾಗಿದೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಎಂಬ ನಾಣ್ಣುಡಿಯಂತೆ ಇಂದು ಗಿಡೋಪಾದಿಯಲ್ಲಿ ಬೆಳೆಯುತ್ತಿರುವ ಹಿಟ್ಲರನ ವರ್ತನೆಗಳನ್ನು ಈಗಲೇ ಖಂಡಿಸದೆ ತಮ್ಮ ಬಾಯಿ ಮಾತಿನ ಬಡಬಡಿಕೆಯಿಂದ ಪ್ರಯೋಜನವಿಲ್ಲವೆಂದು ಈ ಪ್ರಮುಖ ರಾಷ್ಟ್ರಗಳು ತಿಳಿಯಬೇಕು. ದಿನೇ ದಿನೇ ಬೆಳೆದು ಪ್ರಬಲನಾಗುತ್ತಿರುವ ಜರ್ಮನರನ್ನು ಎದುರಿಸುವದು ಕ್ರಮೇಣ ಈ ರಾಷ್ಟ್ರಗಳಿಗೆ ಅಶಕ್ಯವಾದೀತೆಂದು ಅವು ನಂಬಿ ಕಾರ್ಯಕ್ರಮ ಕೈಗೊಳ್ಳದಿದ್ದರೆ ಖಂಡಿತ ಈ ರಾಷ್ಟ್ರಗಳಿಗೆ ಮೋಕ್ಷವಿಲ್ಲ.

ಸತ್ಯಾಗ್ರಹಿಗಳ ಸದ್ಗುಣಗಳು

ಹಿಂದೂಸ್ಥಾನದಲ್ಲಿ ಪ್ರತಿಯೊಬ್ಬ ಸತ್ಯಾಗ್ರಹಿಯೂ ಹೊಂದಿರಬೇಕಾದ ಯೋಗ್ಯತೆಗಳೇನೆಂಬ ವಿಷಯದಲ್ಲಿ ಮಹಾತ್ಮ ಗಾಂಧಿಯವರು ತಮ್ಮ ಅಭಿಪ್ರಾಯವನ್ನು ಈ ರೀತಿ ಹೇಳಿರುತ್ತಾರೆ:—

(1) ದೇವರಲ್ಲಿ ಆತನಿಗೆ (ಸತ್ಯಾಗ್ರಹಿಗೆ) ನಿಶ್ಚಲವಾದ ಭಕ್ತಿ ಇರಬೇಕು. ಏಕೆಂದರೆ ಅವನೇ ಆತನ ಆಶ್ರಯಸ್ಥಾನ.

(2) ಆತನು ಸತ್ಯ ಮತ್ತು ಅಹಿಂಸೆ ಈ ತತ್ವಗಳೇ ತನ್ನ ಧ್ಯೇಯವೆಂದು ನಂಬಬೇಕು. ಮತ್ತು ಆತನು ಸತ್ಯವನ್ನೂ ಪ್ರೇಮವನ್ನೂ ತನ್ನ ಕಷ್ಟಾನುಭವದ ಮೂಲಕ ಯಾರನ್ನು ಎಚ್ಚರಗೊಳಿಸಲು ಪ್ರಯತ್ನ ಪಡುತ್ತಾನೋ ಅಂಥಾ ಮನುಷ್ಯನ ಸ್ವಭಾವದಲ್ಲಿ ಅಡಕವಾಗಿರುವ ಶುಭಾಂಶದಲ್ಲಿ ನಂಬಿಗೆ ಉಳ್ಳವನಾಗಿರಬೇಕು.

(3) ಆತನು ನಿರ್ದುಷ್ಟವಾದ ಜೀವನವನ್ನು ನಡಿಸುತ್ತಿರಬೇಕು ಮತ್ತು ತನ್ನ ಉದ್ದೇಶ ಸಾಧನೆಗಾಗಿ ತನ್ನ ಜೀವನವನ್ನು ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧನಾಗಿರಬೇಕು.

(4) ಆತನು ಸ್ವಾಭಾವಿಕವಾಗಿ ಖಾದಿಯನ್ನು ಧರಿಸುವವನೂ, ನೂಲುವವನೂ ಆಗಿರಬೇಕು. ಇದು ಇಂಡಿಯಾ ದೇಶಕ್ಕೆ ಆವಶ್ಯಕ.

(5) ಆತನು ಸಂಪೂರ್ಣವಾಗಿಯೂ ಮದ್ಯಪಾನ ವರ್ಜಿತನಾಗಿರಬೇಕು. ಆತನ ಕಾರ್ಯಕಾರಣಗಳು ಸ್ಫುಟವಾಗಿರುವದಕ್ಕೂ ಆತನ ಬುದ್ಧಿ ಸ್ಥಿಮಿತವಾಗಿರುವದಕ್ಕೂ ಆತನು ಇತರ ಮಾದಕ ಪದಾರ್ಥಗಳಾವುವನ್ನೂ ಸಹ ಸೇವಿಸಬಾರದು.

(6) ಆತನು ಆಗಾಗ್ಗೆ ವಿಧಿಸಬಹುದಾದ ಶಿಸ್ತಿನ ನಿಯಮಗಳನ್ನು ಸಂತೋಷದಿಂದ ಪರಿಪಾಲಿಸುವವನಾಗಬೇಕು.

(7) ಆತನು ಬಂಧಿಖಾನೆಯ ನಿಯಮಗಳು ತನ್ನ ಆತ್ಮ ಗೌರವಕ್ಕೆ ಕುಂದಕ ತರಲು ಉದ್ದೇಶಪೂರ್ವಕವಾಗಿ ವಿಧಾಯಿಸಿದವುಗಳಲ್ಲವೆಂದು ತಿಳಿದಲ್ಲಿ ಅವುಗಳನ್ನು ಪರಿಪಾಲಿಸಬೇಕು.

ತ್ರಿಪುರಿಯ ಪಂತರ ಠರಾವು.

ರಾಷ್ಟ್ರಪತಿ ಬೋಸರ ಪ್ರಕಟಣೆ.

ತ್ರಿಪುರ ಠರಾವಿನಂತೆ ಗಾಂಧೀಜೀಯವರನ್ನು ಕಾಣದೆ ವರ್ಕಿಂಗ್ ಕಮಿಟಿಯವರ ನೇಮಕ ಅಸಾಧ್ಯವಾಗಿದೆ. ಒಂದೇ ಪಕ್ಷದವರ (ರಾಜಿನಾಮೆ ಇತ್ತವರ) ಒಮ್ಮತದ ವರ್ಕಿಂಗ್ ಕಮಿಟಿಯಾಗಬೇಕೆಂದು ನಿರ್ಣಯಿಸಿದರೆ ನಾನು ಸಹಕರಿಸುವದು ಕಷ್ಟವಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿಯ ಪರಿವೆಯಿಲ್ಲದ ರಾಜಕೀಯ ರಂಗದ ವಿರೋಧಿಗಳು ಹುರುಳಿಲ್ಲದ ಮಾತಾಡುತ್ತಿರುವದು ನಿಂದಾಸ್ಪದವಾಗಿದೆ. ಮಹಾತ್ಮರೊಬ್ಬರಿಂದಲೇ ಕಾಂಗ್ರೆಸ್ಸಿನ ಐಕ್ಯತೆ ಸಾಧ್ಯವೆಂಬದು ಸರ್ವಶ್ರುತವಾಗಿದೆ

‘ತ್ರಿಪುರಿ ಕಾಂಗ್ರೆಸ್ ಅಧಿವೇಶನವು ಅಂತ್ಯಗೊಂಡ ಒಂದು ವಾರದಲ್ಲಿ, ನಾನು ಹೊಸ ವರ್ಕಿಂಗ್ ಕಮಿಟಿಯನ್ನು ನೇಮಿಸಲಿಲ್ಲವೆಂದೂ, ಅದರ ಪರಿಣಾಮವಾಗಿ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಕ್ಕೆ ಬಂದ ಧಕ್ಕೆಗೆ ನಾನೇ ಜವಾಬ್ದಾರನೆಂದೂ, ಅದ್ದರಿಂದ ಒಡನೇ ನಾನು ಹೊಸ ವರ್ಕಿಂಗ್ ಕಮಿಟಿ ನೇಮಕ ಮಾಡಬೇಕೆಂದೂ ಒಂದು ಚಳವಳವು ಪ್ರಾರಂಭಿಸಲ್ಪಟ್ಟಿತ್ತು. ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಹದಿಮೂರು ಜನ ಸದಸ್ಯರು ತಮ್ಮ ಪದವಿಗೆ ರಾಜಿನಾಮೆಯನ್ನಿತ್ತದ್ದರ ಫಲವಾಗಿ ಕಾಂಗ್ರೆಸು ತನ್ನ ಕಾರ್ಯಕಲಾಪದಲ್ಲಿ ಪಡಬೇಕಾದ ಕಷ್ಟದ ಸಮಯದಲ್ಲಿ ಯಾರೂ ಇಂಥಾ ಚಳವಳ ಹೂಡಿರಲಿಲ್ಲ. ತ್ರಿಪುರಿ ಕಾಂಗ್ರೆಸ್ ಅಧಿವೇಶನವು ನಾನು ಕಾಯಿಲಸ್ಥನಾಗಿದ್ದಾಗ ಪೂಜ್ಯ ಗಾಂಧೀಜಿಯವರು ಕಾಂಗ್ರೆಸಿಗೆ ಬರಲು ಸಾಧ್ಯವಿಲ್ಲದಿದ್ದಾಗ, ಹತ್ತಿರದಲ್ಲಿ ನನ್ನ ಮತ್ತು ಗಾಂಧೀಜಿಯವರ ಭೇಟಿ ಅಸಾಧ್ಯವಿದ್ದಾಗ ಈ ಠರಾವನ್ನು ಪಾಸು ಮಾಡಿತು. ಪಂಡಿತ ಪಂತರ ಠರಾವಿನಲ್ಲಿ ಮಹಾತ್ಮ ಗಾಂಧಿಯವರ ಪ್ರೇರಣೆಯಂತೆ ವರ್ಕಿಂಗ್ ಕಮಿಟಿ ನೇಮಕವಾಗಬೇಕೆಂಬ ಸೂಚನೆಯು ಪಾಸಾಗದಿದ್ದ ಪಕ್ಷದಲ್ಲಿ ನಾನು ಕಾಂಗ್ರೆಸ್ ನಿಯಮ ಪ್ರಕಾರ ಈ ಮಾರ್ಚ ತಾ. 13 ರಲ್ಲೇ ಹೊಸ ವರ್ಕಿಂಗ್ ಕಮಿಟಿಯ ಹೆಸರುಗಳನ್ನು ಸೂಚಿಸುತ್ತಿದ್ದೆ. ಗಾಂಧೀಜೀಯವರನ್ನು ಕಾಣದೆ ಯಾವ ವಿಚಾರವನ್ನೂ ನಾನು ಮಾಡಲು ಆ ಠರಾವು ತಡೆ ಇರುವದರಿಂದಲೂ, ನನ್ನ ಪ್ರಕೃತಿಯ ಅಸ್ವಸ್ಥತೆಯ ದೆಸೆಯಿಂದಲೂ ಈ ವರೆಗೆ ವರ್ಕಿಂಗ್ ಕಮಿಟಿಯ ನೇಮಕವು ದುಸ್ಸಾಧ್ಯವಾಗಿದೆ. ಸದ್ಯಕ್ಕೆ ನಾನು ಹೋಗಿ ಗಾಂಧೀಜೀಯವರನ್ನು ಕಾಣುವದೂ, ಗಾಂಧೀಜೀಯವರು ಇಲ್ಲಿಗೆ ಬರುವದೂ ಈಗಿನ ನಮ್ಮ ಸ್ಥಿತಿಯಿಂದ ಅಸಾಧ್ಯವಾದ ಕೆಲಸ. ನಾವು ಇಬ್ಬರು ಸೇರಿ ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ವಿಚಾರಿಸಿದ ವಿನಹ ವರ್ಕಿಂಗ್ ಕಮಿಟಿಯನ್ನು ನೇಮಿಸುವದು ಆಗದ ಮಾತು. ಮಹಾತ್ಮಾ ಗಾಂಧಿಯವರೊಡನೆ ನಾನು ಮಾತಾಡುವ ವಿಚಾರಗಳಾವವೂ ಇವೇ.

ಚರ್ಚಿಸಲ್ಪಡಬೇಕಾದ ಸಮಸ್ಯೆಗಳು.

1. ಈ ವರ್ಷಕ್ಕೆ ಯಾವ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕೈಕೊಳ್ಳಬೇಕೆಂಬುವ ಬಗ್ಗೆ ಅವರ ಅಭಿಪ್ರಾಯಬೇಕು.

2. ಪ್ರೆಸಿಡೆಂಟರ ಚುನಾವಣೆಯಿಂದಲೂ ಕಳೆದ ತ್ರಿಪುರಿ ಅಧಿವೇಶನದ ಕಾರ್ಯಕಲಾಪಗಳಿಂದಲೂ ಬಂದಿರುವ ಭಿನ್ನಾಭಿಪ್ರಾಯವನ್ನು ಸರಿಪಡಿಸಿ ಎರಡು ಪಂಗಡಗಳೂ ಒಂದಾಗುವ ಸಂಭವದ ಬಗ್ಗೆ ತೀರ್ಮಾನ.

3. ಹೊಸ ವರ್ಕಿಂಗ್ ಕಮಿಟಿಯ ಬಗ್ಗೆ ಗಾಂಧೀಜೀಯವರ ಅಭಿಪ್ರಾಯ. ಅವರು ವರ್ಕಿಂಗ್ ಕಮಿಟಿಯು ಒಮ್ಮತವಂದರೆ ಒಂದೇ ಪಂಗಡದವರಿಂದ ರಚಿಸಲ್ಪಡಬೇಕೆನ್ನುವರೋ? ಅಥವಾ ಕಾಂಗ್ರೆಸಿನ ಎಲ್ಲಾ ಪಂಗಡಗಳಿಗೂ ಅದರಲ್ಲಿ ಪ್ರತಿನಿಧಿತ್ವವಿರಬೇಕೆಂಬ ನಮ್ಮ ಸೂಚನೆಯನ್ನು ಮನ್ನಿಸುವರೋ? ಅವರು ಮೊದಲಿನ ವಿಚಾರವನ್ನು ಸಮರ್ಥಿಸುವರಾದರೆ ಖಂಡಿತವಾಗಿಯೂ ನನ್ನಂಥವರಿಗೂ, ಮೊದಲಿನ ವರ್ಕಿಂಗ್ ಕಮಿಟಿ ಮೆಂಬರುಗಳಿಗೂ ಒಮ್ಮತದಿಂದ ಕೆಲಸ ಮಾಡಲು ಸಾಧ್ಯವೇ ಇಲ್ಲ.

4. ಪಂಡಿತ ಪಂತರ ಠರಾವಿನ ವಿಚಾರ ಮಹಾತ್ಮರ ಅಭಿಪ್ರಾಯವನ್ನು ನನಗೆ ತಿಳಿಯಬೇಕಿದೆ. ಪ್ರೆಸಿಡೆಂಟರ ಮೇಲೆ ಅದು ಅವಿಶ್ವಾಸ ಠರಾವೆಂದೂ, ಪ್ರೆಸಿಡೆಂಟರು ರಾಜಿನಾಮೆ ಕೊಡಬೇಕೆಂದೂ ಅವರು ಭಾವಿಸುವರೋ? ಅಲ್ಲ ಕೆಲವು ಮುಖಂಡರು ತ್ರಿಪುರಿಯಲ್ಲಿ ಹೇಳಿದಂತೆ ಈ ಠರಾವು ಅಧ್ಯಕ್ಷ ಹಾಗೂ ಗಾಂಧಿಯವರೊಳಗೆ ಸಂಧಿ ಮಾಡುವಂಥಾದ್ದೆಂದು ಭಾವಿಸುವರೋ? (ಈ ಸಂಧರ್ಭದಲ್ಲಿ ನನ್ನ ಕಡೆಯಿಂದ ಮಹಾತ್ಮ ಗಾಂಧಿಯವರೊಡನೆ ಭೇದಭಾವವು ಬಂದಿರುವದೇ ಇಲ್ಲ. ಮಹಾತ್ಮರನ್ನು ಪೂಜ್ಯಭಾವದಿಂದ ಕಾಣುವವರಲ್ಲಿ ನಾನು ಯಾರಿಗೂ ಹಿಂದಿಲ್ಲ.)

1922 ರಲ್ಲಿ ಗಯೆಯಲ್ಲಿ ನಡೆದ ಕಾಂಗ್ರೆಸಿನಂತೆ ಜನತೆಯು ಒಂದು ಪಂಗಡದಲ್ಲಿ ಭೇದಭಾವವಿರುವಾಗ ಈ ಮೇಲಿನ ಸಮಸ್ಯೆಗಳ ಪೂರ್ಣ ವಿವೇಚನೆಯಿಂದಲೇ ಹೊಸ ವರ್ಕಿಂಗ್ ಕಮಿಟಿಯ ರಚನೆಯಾಗಬೇಕಿದೆ.

ವರ್ಕಿಂಗ್ ಕಮಿಟಿಯ ರಚನೆ.

ವರ್ಕಿಂಗ್ ಕಮಿಟಿಯ ನೇಮಕವು ಒಂದೇ ಪಂಗಡದವರಿಂದಾಗಬಾರದೆಂದು ತೀರ್ಮಾನವಾದರೆ ಬೇರೆ ಬೇರೆ ಪಂಗಡಗಳಿಗೆ ಹೇಗೆ ಎಷ್ಟೆಷ್ಟು ಪ್ರತಿನಿಧಿತ್ವವಿರಬೇಕೆಂಬುದನ್ನು ನಿಶ್ಚಯಿಸಬೇಕು. ಇಂಥಾ ಜಟಿಲ ಪ್ರಶ್ನೆಯನ್ನು ತೀರ್ಮಾನಿಸಲು ಮಹಾತ್ಮರೊಂದಿಗೆ ದೀರ್ಘ ಚರ್ಚೆ ನಡೆಸಬೇಕಿದೆ. ಅದ್ದರಿಂದ ನನ್ನನ್ನು ವರ್ಕಿಂಗ್ ಕಮಿಟಿಯ ನೇಮಕದ ಬಗ್ಗೆ ಪ್ರಶ್ನಿಸುತ್ತಿರುವ ಮಹಾಶಯರು ಮಹಾತ್ಮ ಗಾಂಧಿಯವರೊಡನೆ ಭೇಟಿಯಾಗಲು ನನಗೆ ಸಮಯ ಕೊಡುವರಾಗಿ ಆಶಿಸುತ್ತೇನೆ. ಮಹಾತ್ಮ ಗಾಂಧಿಯವರೇ ತಂತಿ ಮೂಲಕ ಡಾಕ್ಟರುಗಳ ಅಭಿಪ್ರಾಯಕ್ಕೆ ವಿರೋಧ ವರ್ತಿಸಿದ್ದಕ್ಕೆ ನನ್ನನ್ನು ಆಕ್ಷೇಪಿಸಿರುವರು. ಅದ್ದರಿಂದ ಮೇಲಿನ ಭೇಟಿಯ ಕಾರ್ಯಕ್ರಮವನ್ನು ಅವರೇ ಕೈಕೊಳ್ಳಬಹುದು. ರಾಜಕೀಯರಂಗದಲ್ಲಿ ಒಬ್ಬನು ಒಬ್ಬನಿಂದ ರಕ್ಷಿಸಲ್ಪಡಲು ಆಶಿಸಬಾರದು. ಎಲ್ಲರೂ ಖಂಡಿತವಾದಿಗಳಿರಬೇಕು. ತಮ್ಮ ಸ್ವಂತ ಸಂಸ್ಥೆಯ ಜನರಿಂದಲೂ ಆಶ್ರಯ ಪಡೆಯಬಾರದು. ಅದ್ದರಿಂದಲೇ ನಾನು ನನ್ನ ವೈದ್ಯ ಬಂಧುಗಳ ಮಾತನ್ನು ಉಲ್ಲಂಘಿಸಿ ತ್ರಿಪುರಕ್ಕೆ ಹೋದದ್ದಾಗಿದೆ. ಅಲ್ಲಿ ನನಗೆ ಸಂಬಂಧಿಸುವ ವಿಚಾರಗಳಿದ್ದವು. ಮಹಾತ್ಮರ ಬರುವಿಕೆಯಿಂದ ಎಲ್ಲಾ ಸುಸೂತ್ರವಾಗಿ ತೀರ್ಮಾನಿಸಲ್ಪಡುವದೆಂದು ನಂಬಿದ್ದೆನು.

ರಾಜಕೀಯ ರಂಗದ ನನ್ನ ವಿರೋಧಿಗಳು.

ನಾನು ಮುಗಿಸುವುದಕ್ಕೆ ಮೊದಲು ರಾಜಕೀಯ ರಂಗದ ಕೆಲವು ವಿರೋಧಿಗಳು ನನ್ನ ಮೇಲೆ ಹೊರಿಸಿರುವ ಆರೋಪಗಳನ್ನೊಮ್ಮೆ ವಿಚಾರಿಸಬೇಕಿದೆ.

ಕಳೆದ ಹರಿಪುರ ಅಧಿವೇಶನದ ನಂತರ ಆರು ವಾರಗಳ ವರೆಗೆ ವರ್ಕಿಂಗ್ ಕಮಿಟಿಯು ಸಭೆ ಸೇರದಿದ್ದರೂ ಈ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿಯ ನೇಮಕವಾಗದ್ದರಿಂದ ಸಂಭವಿಸಿದ ಅನಾನುಕೂಲತೆಯನ್ನು ನಾನು ಒಪ್ಪುತ್ತೇನೆ. ಆದರೆ ಅಂತರರಾಷ್ಟ್ರೀಯ ಪರಿಸ್ಥಿತಿಯ ಅರಿವೇ ಇಲ್ಲದ, ಅಂತರರಾಷ್ಟ್ರೀಯ ಈ ಪರಿಸ್ಥಿತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ತಿಳಿಯದ ಕೆಲವು ಪುಢಾರಿಗಳು ಅಂತರರಾಷ್ಟ್ರೀಯ ಸಮಸ್ಯೆಗಳಲ್ಲಿ ನುರಿತ ಮೇಧಾವಿಗಳಂತೆ, ಬೊಹೇಮಿಯಾ, ಸ್ಲೋವಾಕಿಯಾದ ಹಾಗೂ ಮಧ್ಯಯೂರೋಪದ ಬಿಕ್ಕಟ್ಟಿನ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿ ಇಲ್ಲದಿರುವದು ಅವಿವೇಕವೆಂದೂ, ಅದ್ದರಿಂದ ಅದರ ನೇಮಕ ಒಡನೇ ಆಗಬೇಕೆಂದೂ ಹೇಳುವದು ನಿಜವಾಗಿಯೂ ನನ್ನನ್ನು ಆಶ್ಚರ್ಯಕ್ಕೀಡುಮಾಡಿದೆ.

ನಾನು ಪ್ರಯಾಣಕ್ಕೆ ತುಂಬಾ ಅಶಕ್ತನಿರುವದರಿಂದ ಮಹಾತ್ಮ ಗಾಂಧೀಯವರು (ಅವರ ಪ್ರಕೃತಿಯ ಸ್ಥಿತಿಯಲ್ಲಿ ನಾನು ಇದನ್ನು ಇಚ್ಛಿಸುವದಿಲ್ಲ.) ಇಲ್ಲಿಗೆ ಬರುವದಾದರೆ ನನ್ನ ಡಾಕ್ಟರುಗಳು ಭೇಟಿ ಕೊಡಲು ನನ್ನನ್ನು ಖಂಡಿತ ಬಿಡುವರು. ಇದರಿಂದ ಇಡೀ ಭಾರತದ ಪ್ರಚಂಡ ಸಮಸ್ಯೆಯು ಬಗೆಹರಿವಂತಾಗುವದು

ಮಹಾತ್ಮರೊಬ್ಬರಿಂದಲೇ ಐಕ್ಯತೆ ಸಾಧ್ಯ.

ಇಂದಿನ ಪರಿಸ್ಥಿತಿ ಮೀರಿ ಪೂಜ್ಯ ಗಾಂಧಿಜೀಯವರೊಬ್ಬರೇ ಕಾಂಗ್ರೆಸಿನ ಈ ಪಂಗಡಗಳಲ್ಲಿ ಒಗ್ಗಟ್ಟನ್ನು ತರಲು ಸಮರ್ಥರು. ಆದರೆ ದುರ್ದೈವ ವಶಾತ್ ಅವರು ತ್ರಿಪುರಿಗೆ ಬರಲಾರದಾದರು. ಇಲ್ಲದ ಪಕ್ಷ ಸ್ಥಿತಿಯು ಇಂಥಾ ಪರಿಮಿತಿಗೆ ತಲುಪುತ್ತಿರಲಿಲ್ಲ. ಗಾಂಧಿಜೀಯವರು ನಮ್ಮೊಳಗೆ ಐಕ್ಯತೆಯನ್ನು ಸ್ಥಾಪಿಸಲು ಅಸಮರ್ಥರಾದರೆ (ದೇವರು ಹಾಗೆ ಮಾಡದಿರಲಿ) ಕಾಂಗ್ರೆಸಿನ ಭವಿತವ್ಯವನ್ನು ಯೋಚಿಸಿ ಹೃದಯವು ಕಂಪಿಸುತ್ತಿದೆ. ನನ್ನ ಮಟ್ಟಿಗೆ ಹೇಳುವದಾದರೆ ಗಾಂಧಿಜೀಯವರ ತತ್ವ-ಮತ್ತು ಕಾರ್ಯಕ್ರಮಗಳನ್ನು ಬಹುಶಃ ಇತರರು ಒಪ್ಪುವಂತೆ ಕೂಲಂಕುಶ ವಿಚಾರಿಸಿದ್ದಲ್ಲದೆ ಒಪ್ಪಲು ನನಗೆ ಅಸಾಧ್ಯ. ಆದರೂ ಗಾಂಧೀಜಿಯವರಿಗೆ ನನ್ನಲ್ಲಿರುವ ನಂಬಿಕೆಯನ್ನು ಶಾಶ್ವತ ಇಟ್ಟುಕೊಳ್ಳಲು ನಾನು ಸಮರ್ಥನಿರುವೆನು.

ಮುಸಲೋನಿಯ ಭಾಷಣದ ಸಾರಾಂಶ.

ಫೇಸಿಸ್ಟ್ ಸಂಗಡದ ಇಪ್ಪತ್ತನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಮುಸಲೋನಿಯು ಭಾಷಣ ಮಾಡುತ್ತಾ ಹೀಗೆಂದಿರುವನು:-“ಇಂದಿನ ಈ ಸಭೆಯು ಯೂರೋಪು ಒಂದು ಚರಿತ್ರಾರ್ಹ ಸಂದಿಗ್ಧ ಸ್ಥಿತಿಯಲ್ಲಿರುವಾಗ ನಡೆಯುತ್ತಿದೆ. ಇಂದಿನ ಯೂರೋಪಿನ ನಾಗರೀಕತೆಯ ರಕ್ಷಣೆಗಾಗಿ ಶಾಂತಿಯು ಅಗತ್ಯ. ಜರ್ಮನಿ-ಇಟಲಿಗಳೊಳಗಿರುವ ಈಗಿನ ಸ್ನೇಹವನ್ನು ಮುರಿಯುವುದಾಗಲೀ, ಕೆಡಿಸುವದಾಗಲೀ ಹುಡುಗಾಟಿಕೆಯ ಮಾತು. ಈ ಸ್ನೇಹವು ಈ ಎರಡು ರಾಜ್ಯಗಳೊಳಗಿನ ಸಂಬಂಧದ ಪರಿಣಾಮವೇ ಅಲ್ಲ; ಬೇರೆ ನಾಗರೀಕತೆಯ ಸಮುದಾಯಿಕ ಊಹನೆಗಳ ವಿರೋಧವಿರುವ ಕ್ರಾಂತಿಕಾರಕ ಸರ್ಕಾರಗಳ ಸಮ್ಮಿಲನ. ಇದೇ ನಮ್ಮೊಳಗಿರುವ ಒಗ್ಗಟ್ಟಿನ ತಳಹದಿ. ಮಧ್ಯ ಯೂರೋಪಿನಲ್ಲಿ ನಡೆದ ಅವ್ಯವಸ್ಥೆಗಳೆಲ್ಲಾ ಆಗಬೇಕಾದದ್ದೇ ಹೌದು. ಪ್ರಜಾಸತ್ತಾತ್ಮಕ ರಾಜ್ಯಗಳ ಶೋಕದಲ್ಲಿ ಭಾಗಿಗಳಾಗಲು ನಮಗೆ ಸಾಧ್ಯವಿಲ್ಲ. ಕಳೆದ ಡಿಸೆಂಬರಿನಲ್ಲಿ ನಾನು ಇಟಲಿಯನ ಮುಂದಿಟ್ಟಿರುವ ಕೇಳಿಕೆಗಳು ಇನ್ನೂ ತೀರ್ಮಾನಿಸಲ್ಪಟ್ಟಿರುವದಿಲ್ಲ. ಜಿಬೂಟಿ, ಟ್ಯೂನಿಸ್ ಮತ್ತು ಸೂಯೆಜ ಈ ಮೂರರ ಸಮಸ್ಯೆಯನ್ನು ಬಗೆಹರಿಸಬೇಕು. ಫ್ರೆಂಚರು ಈ ಚರ್ಚೆಯಲ್ಲಿಯೇ ಭಾಗವಹಿಸದೆ ತಿರಸ್ಕರಿಸಬಹುದು. ಅದರೆ ಅವರ ವಿಷಮ ಪರಿಣಾಮವನ್ನು ಅವರು ನೆನಪಿಸಿಕೊಳ್ಳುವದೊಳ್ಳೆಯದು. ಸೈನಿಕರ ದೃಷ್ಟಿಯಿಂದ, ಪ್ರಾಕೃತಿಕ ಲಕ್ಷಣದಿಂದ, ಚರಿತ್ರಾಧಾರದಿಂದ ಭೂಮಧ್ಯ ಸಮುದ್ರದ ಮೇಲ್ಕಂಡ ಭಾಗಗಳು ಇಟಲಿಗೆ ಅತ್ಯಾವಶ್ಯಕ. ಇಂದು ನಾವು ನ

ಹರಿಜನ ಸಭೆ.

ಸನ್ 1939ನೇ ಇಸವಿ ಮಾರ್ಚಿ ತಾರೀಕು 26ನೇ ಆದಿತ್ಯವಾರ ದಿನ ಮರಗೋಡು ಶಾಲೆಯ ಬಳಿಯಲ್ಲಿ ಈ ಕೆಳಗೆ ನಮೂದಿಸಿರುವ ಹದಿನಾರು ಕೇರಿಗಳ ಹರಿಜನ ಮುಖ್ಯಸ್ಥರೂ ಮತ್ತು ಅಂದಾಜು ನೂರು ಜನರು ಸೇರಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿ ಬರಾಯಿಸಿರುವ ಮಜಕೂರು ಅದಾಗಿ.

ನಾವುಗಳು ಮದುವೆ ಕಾರ್ಯದಲ್ಲಿ ಗಂಡು ಹೆಣ್ಣಿಗೆ ಕೊಡತಕ್ಕ ಪದ್ಧತಿ ಪ್ರಕಾರ ಎಂದರೆ ಈಗಿನ ಆರ್ಥಿಕ ಸ್ಥಿತಿಗನುಸಾರವಾಗಿಯೂ ನಮ್ಮ ಪದ್ಧತಿಗೆ ಲೋಪಬಾರದ ರೀತಿಯಲ್ಲಿಯೂ ಸುಧಾರಣೆ ಮಾಡಿಕೊಳ್ಳತಕ್ಕ ಬಗ್ಗೆ ಈ ಕೆಳಗಿನ ತೀರ್ಮಾನವನ್ನು ಮಾಡಿಕೊಂಡಿರುತ್ತೇವೆ.

ಗಂಡಿನ ಕಡೆಯಿಂದ ಹೆಣ್ಣಿಗೆ ತೆರ ಹಣ ರೂ.	7-8-0
ಹೆಣ್ಣಿನ ಕಡೆಯಿಂದ ದತು ಹಣ ರೂ.	10-0-0
ಲಗ್ನ ಕಟ್ಟುವ ಬಗ್ಗೆ ಗಂಡಿನಿಂದ ರೂ.	1-0-0
ಲಗ್ನ ಕಟ್ಟುವ ಬಗ್ಗೆ ಹೆಣ್ಣಿನಿಂದ ರೂ.	0-8-0
ಶಾಸ್ತ್ರದಲ್ಲಿ ಗೌಡಾರತಿ ಬಗ್ಗೆ ರೂ.	1-0-0
ಗೋವರಮಾವನ ಹಣ ರೂ.	0-4-0
ದೇವರ ಹಣ ರೂ.	0-4-8
ಜುಮ್ಲ ರೂ.	20-8-8

ಅಲ್ಲದೆ ಹೆಣ್ಣಿಗೆ 2 ಸೀರೆ, 2 ರವಿಕೆ 2 ವಸ್ತ್ರ, ವಡವೆ, ಕಡಗ, ಹಿಂಬಳೆ, ಕಾಲುಂಗುರ, ಮೂಗುಬಟ್ಟು, ಕಟ್ಟೋಲೆ, ಯಾರಾವು ಮುಂತಾದ ಬಣ್ಣ ಬಂಗಾರವು ಮನ್ನಪಡಿಸದೆ ಅವರವರ ಶಕ್ತ್ಯಾನುಸಾರ ಮಾಡಿಸತಕ್ಕದ್ದು. ತಾಯಿಗೆ ಕೊಡತಕ್ಕ ಸೀರೆ ಮನ್ನಪಡಿಸಿದೆ. ಗುಂಬ, ಗುಡಾಣ ಕೆಂಚಿತ್ವಾದರೂ ಮಾಮೂಲು ಪದ್ಧತಿ ಮೇರೆ ನಡಿಸತಕ್ಕದ್ದು. ಬಳೆಗಾರನನ್ನು ಕರೆಯಿಸುವದನ್ನು ಖರ್ಚು ಕಡಿಮೆ ಮಾಡುವ ಬಗ್ಗೆ ಮನ್ನಪಡಿಸಿದೆ. ಗಂಡು ಹೆಣ್ಣಿನ ಶಾಸ್ತ್ರದಲ್ಲಿ ದೂಡ್ಮಳಿ ಕಳಸದ ಶಾಸ್ತ್ರಕ್ಕೆ 7 ಮಾನ ಅಡಿಕೆ, 9 ಕಟ್ಟು ಎಲೆ. ದಾರೆ ಕಳಸದ ಶಾಸ್ತ್ರಕ್ಕೆ 3 ಮಾನ ಅಡಿಕೆ, 5 ಕಟ್ಟು ಎಲೆ ಮಾತ್ರ. ಲಗ್ನ ಕಟ್ಟಲಿಕ್ಕೆ ಹೋಗುವಾಗ ಹೆಡಿಗೆ ಹಿಟ್ಟು ಗಡಿಗೆ ಹೆಂಡ ಮನ್ನಪಡಿಸಿದೆ. ಲಗ್ನ ಕಟ್ಟಲಿಕ್ಕೆ ಹೋಗುವಾಗ 1 ಮಾನ ಅಡಿಕೆ, 5 ಕಟ್ಟು ಎಲೆ, 3 ಮಾನ ಕಡಲೆ, 3 ತೆಂಗಿನಕಾಯಿ 5 ಅಚ್ಚು ಬೆಲ್ಲ ಮಾತ್ರ ತೆಗೆದುಕೊಂಡು ಹೋಗುವುದು.

ಮೇಲ್ಕಂಡ ತೀರ್ಮಾನದ ಮುಚ್ಚಳಿಕೆಗೆ ನಮ್ಮ ಮನೋರಾಜಿಯಿಂದ ಒಪ್ಪಿ ರುಜು ಮಾಡಿರುತ್ತೇವೆ.

ರುಜು ಮಾಡಿದ ಮುಖ್ಯಸ್ಥರ ಹೆಸರು.

ಮೆ. ಗಳಾದ (1) ಮರಗೋಡು ಗ್ರಾಮದ ಕೇರಿಯ ಬಲಗ್ಯೆ ಬುಂಡ, (2) ಕಟ್ಟೆಮಾಡು ಗ್ರಾಮದ ಕೇರಿಯ ಬಲಗ್ಯೆ ನಿಂಗ, (3) ಕಡಗದಾಳು ಗ್ರಾಮದ ಕೇರಿಯ ಬಲಗ್ಯೆ ಕುಮಾರ, (4) ಮೂರ್ನಾಡು ಕೆರೆಮನೆ ಚಿಕ್ಕ ಕೇರಿಯ ಬಲಗ್ಯೆ ತಿಮ್ಮ, ಮೂರ್ನಾಡು ಕೆರೆಮನೆ ದೊಡ್ಡ ಕೇರಿಯ ಬಲಗ್ಯೆ ಬೈರ, ಮೂರ್ನಾಡು ಪೇಟೆ ಕೇರಿಯ ಬಲಗ್ಯೆ ಈರ, (5) ಕಾಂತೂರು ದಾಸರ ಕೇರಿಯ ಬಲಗ್ಯೆ ಜವರ, (6) ಮೂರ್ನಾಡು ಬಾಡಗ ಕೇರಿಯ ಬಲಗ್ಯೆ ಈರ, (7) ಕಡಿಯತ್ತೂರು ಕೇರಿಯ ಬಲಗ್ಯೆ ಡೊಂಕಯ್ಯ, (8) ಬೇಂಗೂರು ಕೇರಿಯ ಬಲಗ್ಯೆ ಪುಟ್ಟ, (9) ಕಾರ್ಗುಂದ ಕೇರಿಯ ಬಲಗ್ಯೆ ಕುಳ್ಳಯ್ಯ, (10) ಚಪ್ಪೆಕಾಡು ಕೇರಿಯ ಬಲಗ್ಯೆ ಈರ, (11) ಕಳಕೇರಿ ನಿಡುಗಣೆ ಕೇರಿಯ ಬಲಗ್ಯೆ ಚುಂಡ, (12) ಸಿದ್ಧಕಾಡು ಕೇರಿಯ ಬಲಗ್ಯೆ ಸಣ್ಣ (13) ದೆಟ್ಟಿಕೇರಿ ಬಲಗ್ಯೆ ನಿಂಗ, (14) ಹೊರಮಲೆನಾಡು ಕೇರಿಯ ಬಲಗ್ಯೆ ಮಂಜಯ್ಯ, (15) ಅಪ್ಪಂಗಳ ಕೇರಿಯ ಬಲಗ್ಯೆ ಬೈರ, (16) ಮಡಿಕೇರಿ ಗದ್ದೆ ಕೆಳಗೆ ಕೇರಿಯ ಬಲಗ್ಯೆ ಸುಬ್ಬಯ್ಯ.

ಹಾಜರಿದ್ದವ.

ಸೂಚನೆ:-ವಿದ್ಯಾಹೀನರಾಗಿ ಹಿಂದುಳಿದಿರುವ ಈ ಹರಿಜನರ ಸಭೆಯು ಕೋಲಾಹಲದಿಂದ ನಿಷ್ಪ್ರಯೋಜನವಾಗುವ ಸಮಯಕ್ಕೆ ಅಲ್ಲಿಯಣ ನಾಲ್ಕಾರು ಸ್ಥಳೀಯ ಮಹನೀಯರು ಕೈಯಿಕ್ಕಿ ಅದನ್ನು ಜಯಪ್ರದವಾಗಿ ನಡೆಸಿ ಕೊಟ್ಟರು. ಹರಿಜನೋದ್ಧಾರಕ್ಕಾಗಿ ಮಹಾತ್ಮ ಗಾಂಧಿಯವರು ತಮ್ಮ ಅನುಯಾಯಿಗಳ ಸಮೇತ ತನುಮನ ಧನಗಳಿಂದ ಹೆಣಗಾಡುತ್ತಿರುವುದು ಅಲ್ಲದೆ 'ಹರಿಜನ' ಪತ್ರಿಕೆಯ ಮೂಲಕ ಉದ್ಧಾರ ಕಾರ್ಯ ನಡಸುತ್ತಿರುವುದೂ ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಕೊಡಗಿನಲ್ಲಿ ಮಾತ್ರ ಹರಿಜನ ಸಂಘವಿರುವುದಾದರೂ ನಾಮ ಮಾತ್ರಕ್ಕೆಂದರೆ ಸುಳ್ಳಾಗಲಾರದು. ಹರಿಜನರನ್ನು ಅವರು ಸಭೆ ನಡೆಸುವ ಎಲ್ಲಾ ಸ್ಥಳಗಳಲ್ಲೂ ಸುಧಾರಿಸಿ ಪ್ರೋತ್ಸಾಹಿಸುವುದು ಆ ಸಂಘದವರ ಕೆಲಸವಾಗಿತ್ತು. ಆದರೆ ಹರಿಜನರ ಉದ್ಧಾರಕ್ಕಾಗಿ ಯಾವ ತೆರನಾದ ಶಿಸ್ತಿನ ಕಾರ್ಯಕ್ರಮವು ಈ ವರೆಗೆ ಹರಿಜನ ಸಂಘದವರಿಂದ ಕೊಡಗಿನಲ್ಲಿ ನಡೆಸದೆ ಇರುವದಕ್ಕೆ ನಾನೆಷ್ಟು ವಿಷಾದಿಸಿದರೂ ಅದು ಅಲ್ಪವೆಂದೇ ಹೇಳಬೇಕಾಗಿದೆ. ಮುಂದಾದರೂ ಮಹಾತ್ಮರ ಜೀವ ಸ್ವರೂಪರಾದ ಹರಿಜನರ ಏಳಿಗೆಗೆ ಕೊಡಗಿನ ಹರಿಜನ ಸಂಘದವರು ಎಚ್ಚೆತ್ತು ಕಾರ್ಯ ಕೈಕೊಳ್ಳಬೇಕಾಗಿ ನನ್ನ ಪ್ರಾರ್ಥನೆ.

ಸಿ. ಕೆ. ಕೃಷ್ಣಪ್ಪ.

ಲ್ಲಾ ಹಣವನ್ನೂ ಖರ್ಚು ಮಾಡಲು ತಯಾರಿರುವೆವು. ಆರ್ಥಿಕ ಕೊರತೆಯಿಂದ ಜೀವನ ಸಾಗಿಸುವುದು ಕಷ್ಟವಾದರೂ ಚಿಂತೆಯಿಲ್ಲ. ನಮ್ಮ ಸೈನ್ಯವು ಸುಸಜ್ಜಿತವಾಗಿರಬೇಕು ಕಡೆಯಲ್ಲಿ ಹೇಳುವದಾದರೆ ಫ್ಯಾಸಿಸಮ್ ಕಳೆದ 20 ವರ್ಷಗಳಿಂದ ಅಭಿವೃದ್ಧಿಯಾಗುತ್ತಾ ಬಂದಿದೆ. ಎಲ್ಲರೂ ಅದರ ಶ್ರೇಯಸಿಗೆ ಹೋರಾಡಬೇಕು. ಪ್ರತಿಯೊಬ್ಬನೂ ಫ್ಯಾಸಿಸ್ಟ್ ತತ್ವಗಳಾದ, 'ನಂಬಿಕೆ, ಶಿಸ್ತು ಮತ್ತು ಯುದ್ಧ' ಇವನ್ನಿಟ್ಟು ಹೋರಾಡಿದರೆ ಜಯವು ನಿಶ್ಚಯ.

ಕೊಡವರಲ್ಲಿ ಸಮಾಜ ಸುಧಾರಣೆಯ ಪರಿಣಾಮ.

(ಬಿ. ಯಂ. ಕಾರ್ಯಪ್ಪ ಯಂ. ಎಲ್. ಸಿ. ಯವರಿಂದ.)

ಒಂದು ಶತಮಾನಕ್ಕೆ ಮೇಲ್ಪಟ್ಟ ಬ್ರಿಟಿಷರ ಆಳ್ವಿಕೆಯಲ್ಲಿ ಹಿಂದೂಸ್ಥಾನದ ಇತರ ಅನೇಕ ದೊಡ್ಡ ಪ್ರಾಂತ್ಯಗಳಿಗಿಂತ ಕೊಡಗಿನಲ್ಲಿ ಓದು ಬರವಣಿಗೆಯು ಹೆಚ್ಚಾಗಿರುತ್ತದೆಂದು ಎಲ್ಲರಿಗೂ ತಿಳಿದ ಸಂಗತಿ. ಅದರಲ್ಲೂ ನಮ್ಮ ಯುವಕರಿಗೆ ಪ್ರೌಢ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಖಾಸಗಿ ವಿದ್ಯಾವೇತನ ಫಂಡುಗಳೂ, ಇನ್ನಿತರ ಸಂಸ್ಥೆಗಳೂ ಏರ್ಪಟ್ಟಿರುವವು. ಈ ತರಹದ ಉತ್ತೇಜನ ದೊರಕಿದ್ದರಿಂದ ಅನೇಕರು ಪ್ರೌಢ ವಿದ್ಯಾಭ್ಯಾಸದಲ್ಲಿ ಉತ್ತೀರ್ಣರಾಗಿ ಈ ದೇಶದಲ್ಲೂ ಮತ್ತು ಹೊರಗೂ ಸಹ ಜವಾಬ್ದಾರಿ ಅಧಿಕಾರಗಳಲ್ಲೂ ಮತ್ತು ಇನ್ನಿತರ ಕ್ಷೇತ್ರಗಳಲ್ಲೂ ದ್ರವ್ಯಾರ್ಜನೆಮಾಡಿಕೊಂಡು ದೇಶಕ್ಕೆ ಗೌರವವನ್ನು ತಂದರುವರೆಂದು ಹೆಮ್ಮೆಪಡುತ್ತಿರುವೆವು. ಹೀಗೆ ದೇಶದ ದುಡಿತದ ವಂತಿಗೆಯಿಂದ ವಿದ್ಯೆಯನ್ನು ಸಂಪಾದಿಸಿ ಅನುಕೂಲಸ್ಥರಾಗುತ್ತಿರುವಾಗ್ಯೆ ಕೆಲವು ವರ್ಷಗಳಿಂದ ಸಮಾಜದ ಮೇಲ್ಮೈಯ ದೃಷ್ಟಿಯಿಂದ ಇವರ ವರ್ತನೆಯು ಬಹಳ ಅಪಾಯಕರವಾದ ರೀತಿಯಲ್ಲಿ ಪರಿಣಮಿಸುವುದು ಬಹಳ ಭಯಂಕರವಾಗಿರುತ್ತದೆಂದು ವರ್ಣಿಸಲು ವ್ಯಸನಪಡಬೇಕಾಗಿದೆ. ಈ ತರಹದ ಭಯಕ್ಕೆ ಕಾರಣವಾದ ಸ್ವಾರ್ಥತೆಯ ನಡವಳಿಕೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಎತ್ತಿ ಹೇಳಿ ಸಮಾಜದ ದೃಷ್ಟಿಗೆ ಗೋಚರಪಡಿಸುವದು ಅವಶ್ಯವಿರುತ್ತೆ.

1. ಈಗ ಸಡಿಲವಾಗುತ್ತಾ ಬರುವ ನಮ್ಮ ವಿವಾಹ ಪದ್ಧತಿಗಳಿಂದ ನಾವು ಒಡನೇ ಎಚ್ಚರಗೊಳ್ಳದಿದ್ದರೆ, ಗ್ರಾಮಗಳಲ್ಲಿರುವ ಮನೆಗಳೂ ಮತ್ತು ಪಿತ್ರಾರ್ಜಿತ ಭೂಮಿಗಳೂ ಒಂದೇ ತಲೆಯಲ್ಲಿ ಕೈತಪ್ಪುವುದರಲ್ಲಿ ಯಾವ ಸಂಶಯವೂ ಇಲ್ಲ. ಈಗಿನ ಸಮಾಜ ಸುಧಾರಕರು ಖರ್ಚು ಕೋತೆಯ ನೆಪದಿಂದ ಬೇಕಾದಷ್ಟು ದುಂದು ಖರ್ಚುಗಳನ್ನು ಮಾಡಿಕೊಂಡು ಪಿತ್ರಾರ್ಜಿತ ಮನೆಗಳನ್ನು ನಿಕೃಷ್ಟಭಾವದಿಂದ ಕಂಡು ಪೂರ್ವ ಪದ್ಧತಿಯಂತೆ ಮದುವೆಕುರಿ ಮಾಡುವುದನ್ನು ಬಿಟ್ಟು ಊರಿನ ಇಷ್ಟಮಿತ್ರರನ್ನೂ, ಸಮೀಪದ ಬಂಧು ಬಳಗದವರನ್ನೂ ಬರಗೊಡಿಸದಂತ ರೀತಿಯಲ್ಲಿ ಶಾಲೆಗಳಲ್ಲೂ, ವಿದ್ಯಾರ್ಥಿ ಭವನಗಳಲ್ಲೂ ಒಂದೇ ದಿನದಲ್ಲಿ ವಿವಾಹ ನಡಿಸುವದು ನವನಾಗರೀಕತೆಯ ವರ್ತನೆಗಳಾಗಿ ಅಂಗೀಕರಿಸಲ್ಪಡುವದು ಕಂಡುಬರುತ್ತೆ. ಯಾರು ಯಾವ ರೀತಿಯಲ್ಲಿ ವರ್ತಿಸಿದರೂ ಕೂಡ ಕೇಳುವವರು ಯಾರೆಂಬ ಭಾವನೆಯು ಈ ಪ್ರೌಢ ವಿದ್ಯಾವಂತ ನಗರೀಕರಾದ ಬುದ್ಧಿವಂತರಲ್ಲಿ ನೆಲೆಸಿರುತ್ತೆ. ಈ ಸುಧಾರಕರ ತೇಜಸ್ಸು ಈಗ ಗ್ರಾಮಗಳಲ್ಲಿ ಪ್ರಕಾಶಕ್ಕೆ ಬರುತ್ತ ಆಗಿರುತ್ತೆ. ಈಚೆಗೆ ಸ್ತ್ರೀ ವಿದ್ಯಾಭ್ಯಾಸವು ಹೆಚ್ಚುತ್ತಾ ಬಂದ ಹಾಗೆ ಉಡಿಗೆ ತೊಡಿಗೆಗಳಲ್ಲಿಯೂ ಮತ್ತು ಸ್ವಇಚ್ಛೆಯಾಗಿ ಸಿಕ್ಕಿದವರ ಜೊತೆಯಲ್ಲು ಹೋಗುವುದು, ಮದುವೆಮಾಡಿಕೊಳ್ಳುವುದು, ಮತ ಬಿಟ್ಟು ಮದುವೆಮಾಡಿಕೊಳ್ಳುವುದೂ ಇವೆಲ್ಲ ಸ್ವಾತಂತ್ರ್ಯವೆಂದೂ, ಈ ತರಹದ ವರ್ತನೆಗಳಿಗೆ ಸಮಾಜವು ಕಣ್ಣುಮುಚ್ಚಿಕೊಂಡು ತಟಸ್ಥರಾಗಿರುವದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸಾಲದುದಕ್ಕೆ ಈಗ ಹೊರಗೆ ಉದ್ಯೋಗ, ವ್ಯಾಪಾರಗಳಲ್ಲಿರುವವರು ಮತ್ತು ಉದ್ಯೋಗಗಳಿಂದ ನಿವೃತ್ತರಾದವರೂ ಹೊರಗೆ ಬೆಂಗಳೂರು, ಮೈಸೂರು, ಕಣ್ಣಾನೂರು ವಗೈರೆ ದೊಡ್ಡ ಪಟ್ಟಣಗಳಲ್ಲಿ ಮನೆ ಕಟ್ಟಿಕೊಂಡು ಮಾದರಿ ಪುರುಷರಾಗಿ ಮುಖ್ಯವಾಗಿ ನಮ್ಮ ಎಲ್ಲಾ ಅಪತ್ತುಗಳಿಗೆ ಕಾರಣಭೂತರಾಗಿ ಮೆರೆಯುತ್ತಲಿರುವರು. ಇವರ ಸಮಾಜ ದ್ರೋಹವೆಂಬ ಕೆಂಡವು ಐಶ್ವರ್ಯವೆಂಬ ಬೂದಿಯಿಂದ ಮುಚ್ಚಿಕೊಂಡದ್ದರಿಂದ ಸಮಾಜವು ಇದರ ಪರಿಣಾಮವಾಗಿ ಮುಂದೆ ಬರುವಂಥ ಅಪಾಯಗಳನ್ನು ನಿಗಕ್ಕೆ ತಂದುಕೊಂಡಂತೆ ಕಾಣುವದಿಲ್ಲ. ಈ ಐಶ್ವರ್ಯವಂಥ ಪದವೀಧರರಾದ ವಿದ್ಯಾವಂತರು, ಕೊಡಗಿನ ಹಿತವೆಂದೂ, ಕೊಡವರ ಹಿತವೆಂದೂ ಬಾಯಲ್ಲಿ ಹೇಳುವುದು ಮಾತ್ರವಲ್ಲದೆ ವರ್ತನೆಗಳು ತೀರಾ ಲಜ್ಜಾಸ್ಪದ, ಅಧಾರ್ಮಿಕ ಮತ್ತು ಅಪಾಯಕರವಾಗಿರುತ್ತೆ. ಎಲ್ಲರೂ ವಿದ್ಯಾವಂತರಾಗಬೇಕೆಂಬದೂ, ಅನುಕೂಲಸ್ಥರಾಗಬೇಕೆಂಬದೂ ನ್ಯಾಯವಾದ ಗುರಿ. ಅದಕ್ಕೆ ಬುದ್ಧಿವಂತರಾದ ಯುವಕ, ಯುವತಿಯರಿಗೆ ದೇಶದ ರೈತಾಪಿ ಜನರ ದುಡಿತದ ಆತೃಪ್ತಿಯಿಂದ ಸಹಾಯ ಮಾಡಬೇಕಾದದ್ದು ಸಹಜ. ಆದರೆ ಈ ಸಹಾಯವನ್ನು ಪಡೆದುಕೊಂಡು ಅನುಕೂಲಕ್ಕೆ ಬಂದ ನಂತರ ಸಮಾಜದ ಅಡಿಗಲ್ಲನ್ನೇ ಕಿತ್ತೊಗೆಯುವ ವರ್ತನೆಯಾದರೆ, ಇನ್ನು ಮುಂದೆ ಇಂಥಾ ವರ್ತನೆಗಳಿಗೆ ಸಹಾಯಕವಾಗುವ ವಿದ್ಯಾರ್ಜನೆಗೆ ದೇಶದವರು ಬೆಂಬಲ ಕೊಟ್ಟು ಎಲ್ಲರನ್ನೂ ಪಟ್ಟಣಗಳಲ್ಲೂ, ಹೊರ ದೇಶಗಳಲ್ಲೂ ನೆಲೆಸುವಂತೆ ಮಾಡಿ ಗ್ರಾಮಗಳಲ್ಲಿ ನಾವು ನಿರ್ಭಾಗ್ಯರಾಗಬೇಕೋ ಎಂಬ ಪ್ರಶ್ನೆಯು ತಲೆ ಎತ್ತಿ ಕಂಡು ಬರುತ್ತೆ. ಇವರಲ್ಲನೇಕರು ನಾವು ಹಿಂದೀಯರು ಎಂದು ವಾದಿಸುತ್ತಿರುವರು. ಖಂಡಿತವಾಗಿಯೂ ನಾವೆಲ್ಲರೂ ಹಿಂದೀಯರೇ. ಹಿಂದೀಯರೆಂದು ಹೆಮ್ಮೆ ಪಡಬೇಕಾದದ್ದೂ ಸಹ ಅವಶ್ಯ. ಹಿಂದೀ ಪ್ರಶ್ನೆಯನ್ನು ವಿಮರ್ಶಿಸುವಾಗ್ಯೆ ಹಿಂದೀಯರಂತೆ ವರ್ತಿಸುವುದು ಧರ್ಮ. ಆದರೆ ಇವರ ಹಿಂದೀಯರೆಂಬ ಭಾವವು ಸ್ವಾರ್ಥತೆ ಮತ್ತು ಬೇಜವಾಬ್ದಾರಿಕೆ ಮುಸುಕುಗಳಿಂದ ಮುಚ್ಚಲ್ಪಟ್ಟಿರುತ್ತೆ. ಇವೆಲ್ಲಾ ಕಾರಣಗಳಿಂದ ದೇಶದವರು ಎಚ್ಚೆತ್ತು ಮುಂದಣ ವರ್ತನೆಯು ಯಾವ ರೀತಿಯಲ್ಲಿರಬೇಕೆಂದು ಕೂಡಲೇ ಆಲೋಚಿಸಬೇಕಾಗಿದೆ.

[ಸಶೇಷ.

ವಿವಿಧ ವಿಚಾರ.

ಉಂಗುಷ್ಟದ ಶಕ್ತಿ.

ಬ್ರಿಟನ್ನಿನ 10 ವರ್ಷ ಪ್ರಾಯದ ಹುಡುಗ, ಪೀಟರ್ ಒಡೆಲ್ ಬಾಲ್ಯದಲ್ಲಿಯೇ ರೋಗಕ್ಕೆ ತುತ್ತಾಗಿ ಅಂಗಾಂಗಗಳ ಶಕ್ತಿ ಕಳಕೊಂಡ. ಆದರೆ ಬಲಗಾಲು ಒಂದು ಮಾತ್ರ ಉಪಯೋಗಕ್ಕೆ ಬೀಳುವಂತಿತ್ತು. ಅದೇ ಈತ ಆ ಕಾಲಿನ ಉಂಗುಷ್ಟದ ಸಹಾಯದಿಂದ ಟೈಪಿಂಗ್ ಕಲಿತಿದ್ದಾನೆ. ತನ್ನ ಮೊದಲ ಪದ್ಯವೊಂದನ್ನೂ, ಅದಕ್ಕೆ ಅಗತ್ಯಬೀಳುವ ಪತ್ರವನ್ನೂ ಈ ಉಂಗುಷ್ಟದಿಂದಲೇ ಟೈಪ್ ಮಾಡಿ ಕಳುಹಿಸಿದ್ದಾನೆ. ಕುರುಡರಿಗೆ ಜ್ಞಾನಶಕ್ತಿ ಹೆಚ್ಚೆನ್ನುವುದಕ್ಕೆ ಇದೂ ಒಂದು ಉದಾಹರಣೆ!

—o0o—

ನಡೆಯುವಾಗ ಸಂಗೀತ.

ನೀವು ಬೀದಿಯಲ್ಲಿ ನಡೆಯುತ್ತಿರುವಾಗಲೂ ಇನ್ನು ಸಂಗೀತ ಕೇಳಬಹುದು. ಮಂಗಳೂರು ಬೀದಿಯಲ್ಲಿ ನಡೆಯುವ ನೀವು ಕಲ್ಕತ್ತೆಯಲ್ಲಿ ಸೈಗಲ್ ಹಾಡುವುದನ್ನೂ ಕೇಳಬಹುದೆಂದರೆ ಆಶ್ಚರ್ಯವಾಗಬಹುದು. ಆದರೆ ರಷ್ಯಾ ದೇಶದ ವಿದ್ಯಾರ್ಥಿ ಶೋಧಕನು ಊರುಗೋಲಿ (ವಾಕಿಂಗ್ ಸ್ಟಿಕ್)ನಲ್ಲಿ ಇರಿಸಬಹುದಾದ ಅತೀ ಪುಟ್ಟ ರೇಡಿಯೋವನ್ನು ಕಂಡು ಹಿಡಿದಿದ್ದಾನೆ. ಇದು ಕೋಲಿನ ಹಿಡಿಯಲ್ಲಿ ಇರಿಸಲ್ಪಟ್ಟು ಆ ಕೋಲಿನ ಇನ್ನೊಂದು ತುದಿ ನೆಲಕ್ಕೆ ತಾಗಿದೊಡನೆ ಸಂಗೀತವಾಗಲೀ, ಸುದ್ದಿಯಾಗಲೀ ಕೇಳಿಸುವುದು. ಸೈನಿಕರ ಉಪಯೋಗಕ್ಕಾಗಿ ರಷ್ಯವು ಇಂಥಾ ಲಂಕ್ಷಾಂತರ ರೇಡಿಯೋ ಬೆತ್ತಗಳನ್ನು ತಯಾರಿಸಲು ಯೋಚಿಸಿದೆ.

—o0o—

ಸರ್ಕಾರಕ್ಕೆ ಚೇಳು ಕಾಣಿಕೆ.

ಜೈಪುರದಲ್ಲಿ ರಾಜಕೀಯ ಬಂಧಿಗಳನ್ನು ಕೂಡುವ ಒಂದು ಲಂಬಾ ಡಿಟೆನ್ಷನ್ ಕ್ಯಾಂಪ್ ಎಂಬುವ ದೊಡ್ಡಿಯೊಂದಿದೆ. ಅಲ್ಲಿ ಬಂಧಿತರಾಗಿರುವ ಕೈದಿಗಳಿಂದ ಆ ಸ್ಥಳ ಬಹಳ ಅನಾರೋಗ್ಯಕರವಾದುದೆಂದೂ, ಅಲ್ಲಿ ಯಾರನ್ನೂ ಬಂಧಿಸಿಡಲು ಯೋಗ್ಯ ಸ್ಥಳವಲ್ಲವೆಂದೂ ಎಷ್ಟು ಬಾರಿ ದೂರು ಕೊಟ್ಟರೂ ಅದು ಸರ್ಕಾರದವರ ಗಮನಕ್ಕೆ ಬೀಳಲಿಲ್ಲ. ಈಗ ಅಲ್ಲಿನ ಕೈದಿಗಳು ಒಂದು ಅತ್ಯುಗ್ರ ವಿಷಪೂರಿತವಾದ ಚೇಳೊಂದನ್ನು ಹಿಡಿದು ಅಧಿಕಾರಿಗಳಿಗೆ ಕಾಣಿಕೆಯೊಪ್ಪಿಸಲು ಒಂದು ಸೀಸೆಯಲ್ಲಿ ಹಾಕಿಟ್ಟಿರುವರು. ಈ ಚೇಳು ಕಡಿದರೆ ಹಾವಿನ ವಿಷದಷ್ಟೇ ಪ್ರಾಣಾಪಾಯಕರವಂತೆ. ಈ ಕ್ಯಾಂಪಿನಲ್ಲೇ ಜೈಪುರ ಸಂಸ್ಥಾನದ ಪ್ರಮುಖ ಪ್ರಜೆಗಳಾದ ಶ್ರೀ. ಚಿರಂಜೀಲಾಲ್ ಶಾಸ್ತ್ರಿ ಇವರುಗಳು ಬಂಧನದಲ್ಲಿರುವರು.

—o0o—

ಚಿಟ್ಟೆಗೆ ಹಿಂಸೆಪಡಿಸಿದರೆ ಜುಲ್ಮಾನೆ.

ಅಮೇರಿಕದ ಕ್ಯಾಲಿಫೋರ್ನಿಯಾದ ಪೆಸಿಫಿಕ್ ಗ್ರೋವ್‌ನಲ್ಲಿ ಒಂದು ವಿಚಿತ್ರ ಶಾಸನವು ಆಚರಣೆಯಲ್ಲಿದೆ. ಅದೇನೆಂದರೆ ಯಾರಾದರೂ ಚಿಟ್ಟೆಗೆ ಹಿಂಸೆ ಪಡಿಸಿದ್ದು ಗೊತ್ತಾದರೆ ಅವರು ನೂರು ಪೌಂಡುಗಳ ವರೆಗೆ ಜುಲ್ಮಾನೆ ಕೊಡಬೇಕು. ಮತ್ತು 6 ತಿಂಗಳಕಾಲ ಶಿಕ್ಷೆ ಅನುಭವಿಸಬೇಕು. ಕಳೆದ 60 ವರ್ಷಗಳಿಂದ ಥಳ ಥಳನೆ ಹೊಳೆಯುವ ಚಿಟ್ಟೆಗಳು ಕೆನಡಾ ದೇಶದ ರಾಕೀ ಪರ್ವತ ಸ್ತೋಮದಿಂದ ಸುಮಾರು ಒಂದು ನೂರು ಮೈಲಿಗಳ ವರೆಗೆ ಹಾರಿ ಬಂದು ಚಳಿಗಾಲದಲ್ಲಿ ಕ್ಯಾಲಿಫೋರ್ನಿಯಾದ ಗ್ರೋವ್‌ನಲ್ಲಿ ಬಂದು ನೆಲೆಸುವವು. ಆದ್ದರಿಂದ ನಗರ ಸಭೆಯವರು ಇವನ್ನು ಯಾರೂ ಹಿಂಸೆ ಮಾಡಕೂಡದೆಂದೂ ಹಾಗೆ ಮಾಡಿದ್ದಾದರೆ ಮೇಲ್ಕಂಡಂತೆ ಶಿಕ್ಷೆ ವಿಧಿಸಲಾಗುವುದೆಂದೂ ವಿಧಾಯಕ ಮಾಡಿರುವರು.

—o0o—

ಸಿನೆಮಾ ನಟನಟಿಯರನ್ನು ಅನುಕರಿಸಬಾರದು.

ತುರ್ಕಿ ರಾಜ್ಯದ ವಿದ್ಯಾ ಖಾತೆಯವರು ತಮ್ಮ ರಾಜ್ಯದ ವಿದ್ಯಾ ಶಾಲೆಗಳಲ್ಲಿ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಯಾವ ರೀತಿ ಬಟ್ಟೆ ಬರೆಗಳನ್ನು ಧರಿಸಬೇಕೆಂಬುವುದನ್ನೂ, ಅಲಂಕಾರ ಮಾಡಿಕೊಳ್ಳಬೇಕೆಂಬುವುದನ್ನೂ ನಿರ್ದೇಶಿಸಿ ಎಲ್ಲಾ ಉಪಾಧ್ಯಾಯರಿಗೂ ಹುಕುಂಗಳನ್ನು ಕಳುಹಿಸಿರುತ್ತಾರೆ. ತುರ್ಕಿಯ ಶಾಲಾ ಬಾಲಕರೂ, ಬಾಲಕೀಯರೂ ತಮ್ಮ ತಲೆಯ ಕೂದಲನ್ನೂ ತುರ್ಕಿ ಯುವಕ ಯುವತಿಯರ ಘನತೆಗೆ ಕುಂದಕ ಬಾರದ ರೀತಿಯಲ್ಲೂ ಅವರುಗಳು ಯಾವ ಸೈನಿಕ ಶಿಕ್ಷಣವನ್ನು ಪಡೆದಿರುತ್ತಾರೋ ಅದಕ್ಕನುಗುಣವಾಗಿಯೂ ಕತ್ತರಿಸಿಕೊಳ್ಳಬೇಕೆಂದು ಅಪ್ಪಣೆ ಮಾಡಿರುತ್ತಾರೆ. ವಿದ್ಯಾರ್ಥಿನಿಯರು ತಮ್ಮ ಕೂದಲುಗಳನ್ನು ಗುಂಗುರ ಗುಂಗುರಾಗಿ ಮಾಡಿಕೊಳ್ಳದಂತೆಯೂ, ತುಟಿಗಳಿಗೆ ಬಣ್ಣ ಹಚ್ಚಿಕೊಳ್ಳದಂತೆಯೂ ಮುಖಕ್ಕೆ ಬಳಿಯುವ ಕ್ರೀಮ್‌ಸ್ನೂ ಇತ್ಯಾದಿ ಸೌಂದರ್ಯವರ್ಧಕ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳದಂತೆಯೂ ನೋಡಿಕೊಳ್ಳಬೇಕೆಂದು ಶಾಲಾ ಮುಖ್ಯೋಪಾಧ್ಯಾಯಿನಿಯರಿಗೆ ಕಟ್ಟಾಜ್ಞೆ ಮಾಡಿರುತ್ತಾರೆ. ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ವಿದ್ಯಾ ಶಾಲೆಗಳಿಗೆ ಭೇಟಿ ಕೊಟ್ಟು ಯಾರಾದರೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೇಲ್ಕಂಡ ನಿಯಮಗಳಿಗೆ ವಿರೋಧವಾಗಿ ನಡೆದಿರುವವನ್ನು ಕಂಡಲ್ಲಿ ಆಯಾ ಶಾಲೆಯ ಉಪಾಧ್ಯಾಯರುಗಳಿಗೆ ತಕ್ಕ ಶಿಕ್ಷೆ ವಿಧಿಸುವರೆಂದು ಪ್ರಕಟವಾಗಿದೆ.

—o0o—

ಇಂಗ್ಲೆಂಡಿನಲ್ಲಿ ಮದ್ಯಪಾನ.

ಪ್ರಾಂತೀಕ ಸ್ವಾಯತ್ತತೆಯು ಪ್ರಾರಂಭವಾದಂದಿನಿಂದ ಹಿಂದುಸ್ಥಾನದಲ್ಲಿ ಪ್ರಾಂತೀಕ ಸರ್ಕಾರಗಳು ಮದ್ಯಪಾನ ನಿರೋಧ ಉಪಾಯಗಳನ್ನು ಕೈಕೊಳ್ಳಲು ಪ್ರಯತ್ನಿಸುತ್ತಿರುವದು ಎಲ್ಲರಿಗೂ ವಿದಿತವಾಗಿರುವ ಮಾತು. ಮದ್ಯದ ಬಗ್ಗೆ ಪ್ರಸಿದ್ಧವಾದ ಸಂಗತಿಗಳಿಂದ ಇಂಗ್ಲೆಂಡಿನಲ್ಲಿ ಮದ್ಯದ ಮಾರಾಟವು ಬೆಳೆಯುವುದರಲ್ಲಿಯೇ ಇದೆಯೆಂದು ಕಂಡುಬರುತ್ತದೆ. ಬಿಯರ್ ಸೇಯುವು ಬ್ರಿಟಿಷರಿಗೆ ಮೆಚ್ಚಿನದು. ಕಳೆದ ವರ್ಷ ಅದರ ಮಾರಾಟವು 1936ರಲ್ಲಿಯದಕ್ಕಿಂತ 6% ದಿಂದ ಹೆಚ್ಚಾಯಿತು. 1936ರಲ್ಲಿಯ ಮಾರಾಟಕ್ಕೆ ಹೋಲಿಸಿ ನೋಡಿದರೆ 23% ಹೆಚ್ಚಿದಂತೆ ಕಂಡುಬರುವದು. ಸರಕಾರದವರು 'ಬಿಯರ್'ನ ಬೆಲೆ ಇಳಿಸಿರುವುದೂ ಹೀಗಾಗುವುದರ ಕಾರಣವಿರಬಹುದು. 1937ರಲ್ಲಿ 215 ಕೋಟಿ ರೂಪಾಯಿಗಳನ್ನು ಬ್ರಿಟಿಷ 'ಬಿಯರ್'ಗಾಗಿ ವೆಚ್ಚ ಮಾಡಿದರು. ಎಲ್ಲ ಮಾದಕ ಪೇಯಗಳಿಗಾಗಿ ಒಟ್ಟು ವೆಚ್ಚ ಮಾಡಿದ್ದು ಸುಮಾರು 346 ಕೋಟಿ ರೂಪಾಯಿ. ಮದ್ಯ ಮಾರುವ ಉದ್ಯೋಗಸ್ಥರಿಗೆ 1936-37ನೇ ಸಾಲಿನಲ್ಲಿ 40 ಕೋಟಿ ರೂ ಗಳಷ್ಟು ಲಾಭವಾಗಿದ್ದು ಹಿಂದಿನದಕ್ಕಿಂತಲೂ ಹೆಚ್ಚಿದೆ. ಮಾದಕಗಳನ್ನು ಕದ್ದು ಮಾಡುವವರ ಸಂಖ್ಯೆಯು ಬೆಳೆದಿದೆಯೆಂದು ಬೇರೆ ಹೇಳುವುದೇನೂ ಬೇಡ. 'ಬಿಯರ್'ನ ವಿಕ್ರಯವು ಹೆಚ್ಚಿದಂತೆ ಕುಡಿದು ಮತ್ತೇರಿದಾಗಿನ ಅಸಭ್ಯ ವರ್ತನೆಗಾಗಿ ಹಾಕಿದ ಕಟ್ಲೆಗಳ ಸಂಖ್ಯೆಯೂ ಹೆಚ್ಚಿದೆಯೆಂದು ಅಂಕೆ ಸಂಖ್ಯೆಗಳಿಂದ ಒಡೆದು ಕಾಣುತ್ತಿದೆ.

ಬ್ರಿಟನಿನಲ್ಲಿ ಮದ್ಯಕ್ಕಾಗಿ ಪ್ರತಿಯೊಬ್ಬನೂ ವರುಷಕ್ಕೆ 75 ರೂಪಾಯಿಗಳನ್ನು ವೆಚ್ಚ ಮಾಡುತ್ತಾನೆ. ಹಿಂದೀಯನ ವರ್ಷದ ಉತ್ಪನ್ನದ ಎರಡರಷ್ಟು ಬ್ರಿಟಿಷನೊಬ್ಬನ ಮದ್ಯವೊಂದಕ್ಕೆ ವೆಚ್ಚವಾಗುತ್ತದೆ. ಬ್ರಿಟನಿನಲ್ಲಿ 20 ವರ್ಷ ಪ್ರಾಯದವರಿಂದೆಲ್ಲರೂ ವರ್ಷಕ್ಕೆ 110 ರೂ. ಗಳನ್ನು ಖರ್ಚು ಮಾಡುವರೆಂದು ಲೆಕ್ಕದಿಂದ ಹೊರಡುತ್ತದೆ.

—o0o—

ವಧುವು ವರನನ್ನು ನಾಚಿಕೆಗೀಡುಮಾಡಿ ಮದುವೆಯನ್ನು ತಪ್ಪಿಸಿಕೊಂಡಳು.

ಅಂಬಾಲದ ಸಮೀಪದ ಹಳ್ಳಿಯಲ್ಲಿ ಹದಿನೈದು ವರ್ಷದ ವಧುವಿಗೆ 50 ವರ್ಷದ ವರನು ನಿಶ್ಚಿತವಾಗಿ ಲಗ್ನದ ಮುಹೂರ್ತ ಬಂದೊದಗಲು ಆ ದಿಟ್ಟ ಹುಡುಗಿಯು ವರನನ್ನು ಕುರಿತು, 'ನಾನು ನಿನ್ನ ಮೊಮ್ಮಗಳಾಗುವಂತಿದ್ದೇನೆ. ನನ್ನ ಕೈ ಹಿಡಿಯಲು ಹವಣಿಸುವ ನಿನಗೆ ಒಂದಿಷ್ಟು ನಾಚಿಕೆಯೂ ಆಗುವುದಿಲ್ಲವಲ್ಲ!' ಎಂದು ಜರೆದು ತನ್ನ ಹೆತ್ತವರೂ ಬಂಧುಬಳಗವೂ ಎಷ್ಟು ಒತ್ತಾಯ ಮಾಡಿದರೂ, ಹಸೆಮಣೆಗೆ ಹೋಗಲು ಒಪ್ಪದೆ ಸತ್ಯಾಗ್ರಹ ಮಾಡಲು ವರನು ಹತಾಶನಾಗಿ ಹಿಂತಿರಳಬೇಕಾಯಿತು.

—o0o—

ಹೆಂಡಿರ ತರಬೇತಿ.

ಹೆಂಡತಿಯಾಗುವವಳು ಏನೆಲ್ಲಾ ತಿಳಿದಿರಬೇಕೋ ಅದೆಲ್ಲವನ್ನು ಕಲಿಸಬಲ್ಲ ಶಾಲೆಗಳೆರಡು ಜಪಾನಿನಲ್ಲಿ ಸ್ಥಾಪಿಸಲ್ಪಟ್ಟಿವೆ. ಒಂದು ಟೋಕಿಯೋದಲ್ಲಿ: ಇನ್ನೊಂದು ಪ್ರಿಟೋರಿಯಾ ಎಂಬಲ್ಲಿ. ದಕ್ಷಿಣ ಅಮೇರಿಕೆಯ ಬ್ರೆಜಿಲ್‌ನಲ್ಲಿ ವಾಸವಾಗಿರುವ 30 ಸಾವಿರ ಜಪಾನಿಯರಿಗಾಗಿ ಈ ಶಾಲೆಗಳಲ್ಲಿ ಮಡದಿಯರ ತರಬೇತಿ ನಡೆಯುತ್ತಿದೆ. ತರಬೇತಿಯಾದ ಬಳಿಕ ಸರ್ಕಾರವು ಈ ಹೆಂಡಿರಾಗತಕ್ಕ ಸುಮಂಗಲೆಯರನ್ನು ಬ್ರೆಜಿಲಿಗೆ ಪಾರ್ಸಲ್ ಮಾಡಿ ಕಳುಹಿಸುವುದು. ನಮ್ಮಲ್ಲಿ ಇದರ ಅಗತ್ಯ ಅಧಿಕವಾಗಿ ಇದೆ!

—o0o—

ಅಪ್ರಿಯವಾದವರಿಗೆ.

ಫ್ರೆಂಚ್ ಸರ್ಕಾರವು ಜಗತ್ತಿಗೇ ಬೇಡವಾಗಿರುವ ಮಂದಿಗಾಗಿ ಒಂದು ಕೇಂದ್ರವನ್ನು ಸ್ಥಾಪಿಸಿದೆ. ಇದರಲ್ಲಿ ಯೂರೋಪಿನ ಪದಭ್ರಷ್ಟ ರಾಜರೂ, ರಾಜ್ಯಾಧಿಕಾರಿಗಳೂ, ಇತರರೂ ಹಾಗೆಯೇ ಅತೀ ಬಡವರೂ ಸೇರಿದ್ದಾರೆ. ಇಲ್ಲಿ ಇವರೆಲ್ಲ ತಮ್ಮ ತಮ್ಮ ಕೆಲಸಗಳನ್ನು ತಾವು ತಾವೇ ಮಾಡಿಕೊಂಡು ಕ್ರಮವಾಗಿ ಅಗೆಡಿ ಸೂತ್ರವನ್ನು ವಹಿಸಿ ಕಾಲ ಕಳೆಯಬೇಕು. ಇವರನ್ನೆಲ್ಲ ನೋಡಿಕೊಳ್ಳಲು ಇರುವ ನಾಯಕನು, ಇವರನ್ನು ಹತೋಟಿಗೆ ತರಬೇಕು. ಇಲ್ಲಿ ಸ್ತ್ರೀಯರು ಇಲ್ಲವೇ ಇಲ್ಲ. ವಿಸ್ತು ಮೀರುವ ಕಾಂಗ್ರೆಸ್ ಮಂದಿಗಾಗಿ ಅಥವಾ ಕಾಂಗ್ರೆಸ್ಸಿನ ಪೊಲಿಸಿನ ನಿವಾರಣೆಯ ಕಾಲ ಹೊರ ಬರುವ ಅಧಿಕಾರಿಗಳಿಗಾಗಿ ನಮ್ಮಲ್ಲೂ ಇಂಥಾ ಕೇಂದ್ರವೊಂದು ಬೇಡವೇ?

—o0o—

ಖುಶಿಬಂದಾಗ ಗಂಡಾಗಬಹುದು! ಹೆಣ್ಣಾಗಬಹುದು!

ವಿಲ್ಲಿಯ ಪಕೆಟ್ ಎಂಬ ಅಮೇರಿಕದ ಪ್ರಾಣಿ ಶಾಸ್ತ್ರಜ್ಞರು ಹೊಸದೊಂದು ಶೋಧ ಮಾಡಿದ್ದಾರೆ. ಇದರ ಫಲವಾಗಿ ಒಂದು ವ್ಯಕ್ತಿಯು ಖುಸಿ ಬಂದಾಗ ತನ್ನ ಲಿಂಗವನ್ನು ಬದಲಾಯಿಸಬಹುದಂತೆ.

ಈ ವೈಜ್ಞಾನಿಕ ಪ್ರಯೋಗದ ಪ್ರಭಾವವನ್ನು ಈ ಮಹನೀಯರು ಪ್ರತ್ಯಕ್ಷ ಕಾಣಿಸಿದರು. ಕಪ್ಪೆಗಳಲ್ಲಿ ಈ ಪರಿವರ್ತನೆಯನ್ನು ತೋರಿಸಿದರು.

ಕಪ್ಪೆಯು ಹುಟ್ಟುವಾಗ ಗಂಡಾಗಿಯೂ ಇರುವುದಿಲ್ಲ; ಹೆಣ್ಣಾಗಿಯೂ ಇರುವುದಿಲ್ಲ. ಒಂದು ವರ್ಷವಾಗುತ್ತಲೇ ಅದರ ಲಿಂಗ ಸ್ವಭಾವವು ಸ್ಥಿರವಾಗುವುದು. ಕಪ್ಪೆಯು ಈ ನಪುಂಸಕ ಸ್ಥಿತಿಯಲ್ಲಿರುವಾಗ ಅದರ ದೇಹಕ್ಕೆ ಇಂಜೆಕ್ಷನುಗಳನ್ನು ಕೊಟ್ಟು ಅದಕ್ಕೆ ಬೇಕಾದ ಲಿಂಗ ಸ್ವರೂಪವನ್ನು ಕೊಡಬಹುದು.

ಕಪ್ಪೆಯಲ್ಲಿ ಸಾಧ್ಯವಾದುದು ಮನುಷ್ಯನಲ್ಲಿ ಅಸಾಧ್ಯವೇ? ಎಂಬುದು ಈಗಿನ ಜಿಜ್ಞಾಸೆ.

—o0o—

ರಾಜಕೋಟೆ

ಲೇ- ಮಹಾತ್ಮ ಗಾಂಧಿ (ಹರಿಜನ 25-3-'39).

ಸತ್ಯ ಮತ್ತು ಅಹಿಂಸಾನುಯಾಯಿಗಳಿಗೆ ಪ್ರತಿಷ್ಠೆ ಬಂದೇ ಬರುವದು. ತಮ್ಮ ಮೇಲೆ ಸ್ವಾತಂತ್ರ್ಯವಿರುವ ಜನತೆಯೇ ಸ್ವರಾಜ್ಯಪಡೆದ ಜನಾಂಗವೆಂದೆಣಿಸಲ್ಪಡುವದು. ಸ್ವರಾಜ್ಯ ಸರಕಾರವು ನಮ್ಮ ಬೇಕು ಬೇಡಿಕೆಗಳನ್ನು ಸಲ್ಲಿಸುವದೆಂದು ತಿಳಿಯಲಾಗದು. ನಾವು ನಾವೇ ಸ್ವಾವಾಲಂಬಿಗಳಾಗುವುದರಿಂದ ದೇಶ ಹಿತಸಾಧನೆಯಾಗುವದು. ನಮ್ಮ ಪಾಲಿನ ಸೇವೆಯನ್ನು ಕೆಲಸದಿಂದ ಸಲ್ಲಿಸುವದರಿಂದ ದೇಶದ ಪ್ರಗತಿಯು ಹೆಚ್ಚುವದು. ಅರಸರು ತಮ್ಮ ಕರ್ತವ್ಯವನ್ನು ತಿಳಿದು ಮಾಡಿದರೇನೇ ಬೊಕ್ಕಸದ ಕೈಯನ್ನು ಮುಟ್ಟಲು ಅರ್ಹರಾಗಬಹುದು. ಬಡವ ಬಲ್ಲಿದರೆಂಬ, ನಾನಾ ವರ್ಣದವರೆಂಬ ಆ ಭೇಧ ಬರಕೂಡದು. ಇದೇ ಪ್ರಜಾಸ್ವಾತಂತ್ರ್ಯ ಸರಕಾರದ ರೂಪರೇಖೆಯಾಗುವದು

ಗಾಂಧಿಜೀಯವರು ರಾಜಕೋಟೆ ಪ್ರಜೆಗಳಿಗೆ ಬರೆದ ಎರಡನೇ ಲೇಖನದ ಅನುವಾದವಿದು:-

'ಅಹಿಂಸಾ ತತ್ವದಲ್ಲಿ ಕಟ್ಟಲ್ಪಟ್ಟ ಸ್ವರಾಜ್ಯದಲ್ಲಿ ಜನತೆಯು ತನ್ನ ಹಕ್ಕುಬಾಧ್ಯತೆಗಳಿಗಾಗಿ ಕಾತುರಪಡಬೇಕಿಲ್ಲ. ಆದರೆ ಅವರು ತಮ್ಮ ಕರ್ತವ್ಯವನ್ನು ಮಾತ್ರ ಪೂರ್ಣ ತಿಳಿದಿರುವದು ಅವಶ್ಯಕ. ಕರ್ತವ್ಯವಿಲ್ಲದೆ ಹಕ್ಕು ಇಲ್ಲ. ಕರ್ತವ್ಯವನ್ನು ಯಶಸ್ವಿಯಾಗಿ ಮಾಡುವವನಿಗೆ ಬಾಧ್ಯತೆಯು ಬಂದೇ ಬರುತ್ತವೆ. ಅದ್ದರಿಂದ ನಾಗರೀಕರೆಂಬ ಆ ಹಕ್ಕು ಬರಬೇಕಾದರೆ ಸಂಸ್ಥಾನದಲ್ಲಿ ತಮ್ಮ ಕರ್ತವ್ಯವನ್ನು ಪೂರ್ಣ ಮಾಡಬೇಕು. ಪ್ರತಿಯೊಬ್ಬನಿಗೂ ಸುಳ್ಳು ಹೇಳುವ ಹಾಗೂ ದುರಾಚಾರಗಳನ್ನು ಮಾಡುವ ಹಕ್ಕಿದೆ. ಆದರೆ ಇಂಥಾ ಹಕ್ಕಿನ ಉಪಯೋಗದಿಂದ ತನಗೂ ಹಾಗೂ ಸಂಬಂಧಪಟ್ಟ ಸಂಘ ಸಂಸ್ಥೆಗಳಿಗೂ ಹಾನಿಬರುವದು. ಸತ್ಯ ಮತ್ತು ಅಹಿಂಸೆಯನ್ನು ಯಾರು ಪರಿಪಾಲಿಸುತ್ತಾರೋ ಅವರಿಗೆ ಖಂಡಿತವಾಗಿಯೂ ಪ್ರತಿಷ್ಠೆ ಬರುವುದು. ಈ ಪ್ರತಿಷ್ಠೆಯಿಂದ ಬಾಧ್ಯತೆಯೂ ಬರದಿರದು. ಕರ್ತವ್ಯದ ಫಲವಾಗಿ ಬಂದ ಬಾಧ್ಯತೆಗಳನ್ನು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಉಪಯೋಗಕ್ಕೇ ಸಜ್ಜನರು ಉಪಯೋಗಿಸುವರಲ್ಲದೆ ಸ್ವಾರ್ಥಕ್ಕಾಗಿ ಎಂದೂ ಇಲ್ಲ. ಒಂದು ಜನತೆಯ ಅಥವಾ ಜನಾಂಗದ ಸ್ವಾತಂತ್ರ್ಯವೆಂದರೆ ತಮ್ಮನ್ನು ತಾವೇ ಹಮ್ಮುಬಸ್ತಿನಲ್ಲಿಟ್ಟಿರುವ, ತಮ್ಮ ಮೇಲೆ ತಮಗೆ ಸ್ವಾತಂತ್ರ್ಯವಿರುವ ಕೆಲವು ವ್ಯಕ್ತಿಗಳ ಕೂಟ. ಇಂಥಾ ಸ್ವರಾಜ್ಯವು ಪ್ರತಿ ವ್ಯಕ್ತಿಗಳು ನಾಗರೀಕರಾಗಿ ತಾವು ಮಾಡಬೇಕಾದ ಕರ್ತವ್ಯವನ್ನು ಮಾಡುವದರಿಂದ ಬರುತ್ತದೆ. ಇದರಲ್ಲಿ ಯಾವನೊಬ್ಬನೂ ತನ್ನ ಹಕ್ಕಿಗಾಗಿ ಹೊಡೆದಾಡುವದಿಲ್ಲ. ಅವರು ತಮ್ಮ ಕರ್ತವ್ಯ ದೃಷ್ಟಿಯಿಂದ ಮುಂಬರುವದೇ ವಿನಹ ಬಾಧ್ಯತೆ, ಹಕ್ಕು ಯಾ ಬಿರುದುಗಳಿಗಾಗಿ ಅಲ್ಲ.

ಈ ವಿಚಾರಗಳನ್ನು ಒಂದು ಮೀಟಿಂಗಿನಲ್ಲಿ ನಾನು ವಿವರಿಸುತ್ತಿದ್ದಾಗ, ಗ್ರಾಮಗಳಿಗೆ ಹೋಗಿ ಹಳ್ಳಿ ಜನರಿಗೆ ಸ್ವರಾಜ್ಯ ಲಭಿಸಿದ ನಂತರ ಮಾರ್ಪಾಡುಗಳೇನಾಗುವವು. ಆ ಸಂದರ್ಭದಲ್ಲಿ ಹಳ್ಳಿಗರು ಮಾಡಬೇಕಾದುದೇನು ಎಂಬ ಬಗ್ಗೆ ಪ್ರಚಾರ ನಡೆಸಲು ವಾಲಂಟೀಯರುಗಳನ್ನು ತಯಾರು ಮಾಡಬೇಕೆಂದು ತೀರ್ಮಾನವಾಯಿತು. ಹಾಗೆ ಗ್ರಾಮಾಂತರಗಳಲ್ಲಿ ವಾಲಂಟೀಯರುಗಳು ಭೋದಿಸಿ ಹಳ್ಳಿಗಳನ್ನು ಚೊಕ್ಕಟವಾಗಿಡುವಂತೆಯೂ, ಸ್ವಾವಾಲಂಬಿಗಳಾಗುವಂತೆ ಕೈಗಾರಿಕೆಗಳ ಆವಶ್ಯಕತೆಗಳನ್ನು ಭೋದಿಸಿಯೂ ಮಾರ್ಪಡಿಸಬೇಕು. ಸ್ವರಾಜ್ಯ ಸಿಕ್ಕಿದರೆ ಸರ್ಕಾರವು ನಮಗೆ ಬೇಕಾದ್ದನ್ನೆಲ್ಲಾ ಒದಗಿಸಿಕೊಡುವದೆಂಬ ನಂಬಿಕೆಯಿಂದ ಇರಕೂಡದೆಂದು ಹೇಳಬೇಕು. ಗ್ರಾಮ ಕೈಗಾರಿಕೆಗಳ ಅಭಾವದಿಂದ ಇಂದಿನ ನಮ್ಮ ಗ್ರಾಮಗಳು ಅವನತಿಯನ್ನು ಹೊಂದಿದೆ. ಅವುಗಳ ಉನ್ನತಿಯಾಗಬೇಕಿದ್ದರೆ ಗ್ರಾಮ ಕೈಗಾರಿಕೆಯು ಅಭಿವೃದ್ಧಿಗೊಳ್ಳಬೇಕು. ಗ್ರಾಮ ಕೈಗಾರಿಕೆಗಳಲ್ಲಿ ಪ್ರಧಾನವಾದದೆಂದರೆ ನೂಲುವದು. ನಂತರ ಅವರೊಂದಿಗೆ ಇನ್ನಿತರ ಉಪ ಕೈಗಾರಿಕೆಗಳೂ ಬರುವವು. ರಾಜಕೋಟೆಯ ಪ್ರಜೆಗಳು ತಮ್ಮ ಕರ್ತವ್ಯವನ್ನು ತಿಳಿದದ್ದೇ ಆದರೆ ಪ್ರತಿಯೊಬ್ಬನೂ ಸ್ವತಃ ನೂತ ಖಾದಿ ಬಟ್ಟೆಯನ್ನು ಧರಿಸಬೇಕು. ಹಾಗೆ ಕೈಗಾರಿಕೆಯ ಮಹತ್ವವನ್ನರಿತು ಎಲ್ಲರೂ ಖಾದಿಧಾರಿಗಳಾದರೆ ಸಂಸ್ಥಾನದ ಲಕ್ಷೋಪಲಕ್ಷ ಹಣವು ಉಳಿತಾಯವಾದಂತಾಗುವುದು. ಮತ್ತು ಅಲ್ಪ ಖರ್ಚಿನಿಂದ ಅಮಿತ ಸೌಲಭ್ಯಗಳನ್ನು ಪಡೆಯುವ ದಾರಿಯೂ ಸುಲಭವಾಗುವದು. ಹಣವು ಬರೇ ವ್ಯಾಪಾರದ ಒಂದು ಸಾಧನ. ಅದಕ್ಕೆ ಪ್ರತ್ಯಕ್ಷ ಬೆಲೆಯಿಲ್ಲ. ಹಳ್ಳಿಗರಾದ ನಮಗೆ ಹಣದ ಆವಶ್ಯಕತೆ ಬೇಡ. ಕೆಲಸದಿಂದ ಹಣಕ್ಕಿಂತ ಲಾಭ ಪಡೆಯಬಹುದು. ಹಣದ ಬದಲು ಕೆಲಸವನ್ನುಪಯೋಗಿಸುವದು ದೇಶದ ಪ್ರಗತಿಯನ್ನು ಹೆಚ್ಚಿಸುವದು. ಪ್ರತಿಯೊಬ್ಬನೂ ಸ್ವಾವಾಲಂಬಿಯಾಗಲು ಇದೊಂದು ಸಾಧನ.

ರಾಜಕೋಟೆಯ ಪ್ರತಿಯೊಬ್ಬ ಹೆಂಗಸು ಮತ್ತು ಗಂಡಸು ಈ ವಿಧಾನದಲ್ಲಿ ತರಬೇತು ಪಡೆಯಬೇಕು. ಸಂಸ್ಥಾನದ ಆಸ್ತಿಯು ಸಂಸ್ಥಾನದ ಪ್ರಜೆಗಳದ್ದು. ಠಾಕೋರ್ ಸಾಹೇಬರು ಬರೇ ಅವರ ಮೊಕ್ತೇಸರರು. ಅವರು ತಮ್ಮ ಆ ನಿಕ್ಷೇಪದಾರಿಕೆಯ ಕೆಲಸ ಮಾಡಬೇಕೇ ವಿನಹ ಅನ್ಯ ಕೆಲಸ ಸಾಗದು. ಅವರ ಈ ಕರ್ತವ್ಯದಿಂದ ಅದಕ್ಕೆ ಪ್ರತಿಫಲವಾಗಿ ಸಂಸ್ಥಾನದ ಭಂಡಾರದಿಂದ ಕೆಲವು ಹಣವನ್ನವರು ಉಪಯೋಗಿಸಿಕೊಳ್ಳಬಹುದು. ಹೀಗೆ ಅರಸರೂ ಪ್ರಜೆಗಳೂ ತಮ್ಮ ತಮ್ಮ ಕರ್ತವ್ಯದೃಷ್ಟಿಯಿಂದ ವರ್ತಿಸಿದ್ದೇ ಆದರೆ ಇವರೊಳಗೆ ಘರ್ಷಣೆ ಬರಲವಕಾಶವೇ ಇಲ್ಲ. ಜವಾಬ್ದಾರಿ ಸರ್ಕಾರದ ಕೈಕೆಳಗೆ ಪ್ರತಿಯೊಬ್ಬನೂ ಅಂದರೆ ಬಡ ಕೂಲಿಯವನಿಂದಾಗಿ ರಾಜರ ವರೆಗೆ ಎಲ್ಲರೂ ಸುಖಿಗಳಾಗಬೇಕು. ಅಹಿಂಸವೆಂಬ ತಳಹದಿಯ ಮೇಲೆ ನಿಂತ ಸ್ವರಾಜ್ಯದಲ್ಲಿ ಒಬ್ಬನು ಮತ್ತೊಬ್ಬನ ವಿರೋಧಿಯಾಗಲು ಆಸ್ಪದವಿಲ್ಲ. ಬಡವ ಬಲ್ಲಿದನೆಂಬ ಭೇದ ಬರಲು ಅವಕಾಶವಿಲ್ಲ.. ದುಂದುಗಾರಿಕೆ, ಕುಡುಕತನ ಅಸಭ್ಯ ವರ್ತನೆಗಳಿಗೆ ಸ್ಥಳವೇ ಇಲ್ಲ. ಧನವಂತರು ತಮ್ಮ ಐಶ್ವರ್ಯವನ್ನು ತಮ್ಮ ಸುಖಲಾಲಸೆಗಳಿಗಾಗಿ ಖರ್ಚುಮಾಡದೆ ಸದ್ವಿನಿಯೋಗಿಸುವರು. ಕೆಲವೊಂದು ಲಕ್ಷ್ಮೀಪುತ್ರರು ದಿವ್ಯ ಅರಮನೆಗಳಲ್ಲಿ ಜೀವಿಸುವದೂ, ಸಹಸ್ರಾರು ಬಡಜನರು ಬೀದಿಗಳಲ್ಲಿ ಭಿಕಾರಿಗಳಂತೆ ತಿರುಗಿ ಬೆಳಕನ್ನೇ ಕಾಣದ ಗುಡಿಸಲುಗಳಲ್ಲಿ ಬೆಳೆಯುವದೂ ಆಗ ಸಂಭವಿಸಲಿಕ್ಕಿಲ್ಲ. ಹಿಂದೂ ಮುಸ್ಲಿಂ ತಿಕ್ಕಾಟ, ಅಸ್ಪೃಶ್ಯತೆ, ಧನಿಕ ಬಡವರಲ್ಲಿನ ಭೇಧ ಇವುಗಳಿಗೆ ಎಡೆ ಇಲ್ಲ. ಈ ಸಂದರ್ಭದಲ್ಲಿ ಸಂಸ್ಥಾನದ ಒಂದು ಉದಾಹರಣೆ ಕೊಡುವೆನು. ಅದೇ ಗಿರಿಸಿಯಾಸ್ ಮತ್ತು ಭಾಯಾತ್‌ರೊಳಗಿರುವ ಭೇಧ. ಇವರು ಜನತೆಯ ಒಂದು ಅಂಗ. ಸ್ವರಾಜ್ಯ ಕಾಂಕ್ಷಿಗಳು ಗಿರಿಸಿಯಾನರಿಂದ ಭಾಯಾತರು ಹೆದರಬೇಕಾಗಿಲ್ಲವೆಂಬದನ್ನು ಖಚಿತಪಡಿಸಬೇಕು. ಅಹಿಂಸಾ ಸ್ವರಾಜ್ಯದಲ್ಲಿ ಒಬ್ಬನ ಹಕ್ಕನ್ನು ಮತ್ತೊಬ್ಬನು ಕಿತ್ತುಕೊಳ್ಳುವ ಅತಿಕ್ರಮ ಪ್ರವೇಶವಿಲ್ಲ. ಅತಿಕ್ರಮ ಪ್ರವೇಶಿಗಳಿಗೆ ಇಂಥಾ ಸ್ವರಾಜ್ಯ ಸರ್ಕಾರದಲ್ಲಿ ಸ್ಥಳವೇ ಇಲ್ಲ. ಅದ್ದರಿಂದಲೇ ಕೆಲವು ಗಿರಸಿಯಾಸರು ಕಾಂಗ್ರೆಸನ್ನು ಕಂಡರೆ ಬೆದರುತ್ತಿರುವರು. ಈ ಹೆದರಿಕೆಗೆ ಕಾರಣವಿಲ್ಲ. ಅವರು ತಮ್ಮ ಸಹೋದರರೊಂದಿಗೆ ಸಮತಾ ಭಾವನೆಯಿಂದ ವರ್ತಿಸಬೇಕು. ಅವರು ಹೆಚ್ಚು ಕೈಗಾರಿಕಾ ಪ್ರೋತ್ಸಾಹಿಗಳಾಗಬೇಕು. ನಿಜವಾಗಿ ಸಲ್ಲಬೇಕಾದವನ ಬಾಧ್ಯತೆಯನ್ನು ನಿರಾಕರಿಸುವದರಿಂದ ಕಾಂಗ್ರೆಸ್ ತನ್ನ ಪ್ರತಿಷ್ಠೆಯನ್ನು ಇಟ್ಟುಕೊಳ್ಳಲಾರದು. ಸಾರ್ವಜನಿಕ ಸುಖಕ್ಕಾಗಿ ಶ್ರಮಿಸುವದರಲ್ಲಿ, ಜನಾಂಗದ ಉನ್ನತಿಯನ್ನು ಸಾಧಿಸುವದರಲ್ಲಿ ಅದರ ಪ್ರತಿಷ್ಠೆ ಇರುವದು. ಈ ಕೆಲವು ದಿನಗಳಿಗೆ ಹಿಂದೆ ಗಿರಿಸಿಯಾಸರ ಒಂದು ಸಮ್ಮೇಳನವು ರಾಜಕೋಟೆಯಲ್ಲಾಯಿತು. ಅದು ಮೆರವಣಿಗೆಗೆ ಹೋಗುತ್ತಿದ್ದಾಗ ನಾನು ಮಳಿಗದಲ್ಲಿಂದ ನೋಡಿದೆ. ಅವರ ಧ್ವಜದಲ್ಲಿ ಬರೆದದ್ದ ಕೆಲವೊಂದು ವಾಕ್ಯಗಳು ನನ್ನ ದೃಷ್ಟಿಯನ್ನು ಆಕಡೆ ಸೆಳೆದವು. ಅವು ಯಾವನೊಬ್ಬನ ಮನವನ್ನೂ ಸಹ ಸೆಳೆಯುವಂತಹವು. ಅವುಗಳನ್ನೇ ಇಲ್ಲಿ ಕೊಡಲಾಗಿದೆ.

(1) ನಿಮ್ಮನ್ನು ನೀವೇ ತರಬೇತು ಮಾಡಿಕೊಳ್ಳಿ. ಮಾದಕ ಪಾನೀಯಗಳನ್ನು ಸೇವಿಸದಿರಿ. ಪವಿತ್ರ ಹಾಗೂ ಸುಲಭ ಜೀವನವನ್ನಭ್ಯಾಸಿಸಿರಿ.

(2) ವಿಧಾಯಕ ಕಾರ್ಯಕ್ರಮಗಳಲ್ಲಿ ಗಿರಸಿಯಾಸರಿಗೆ ನಂಬಿಕೆ ಇದೆ.

(3) ನನ್ನದೇ ಸರಿಯೆಂದೆನ್ನಬೇಡ. ಯಾವುದು ಸರಿ ಇದೆಯೋ ಅದೇ ನನ್ನದೆಂದು ಹೇಳು.

(4) ಐಶ್ವರ್ಯಕಾಂಕ್ಷೆ, ಹೊಟ್ಟೆ ಕಿಚ್ಚು ಮತ್ತು ಇತರ ದುಷ್ಟ ಲಾಲಸೆಗಳನ್ನು ತ್ಯಜಿಸು.

(5) ನಾವು ಬೇರೆ ಜನರ ಹಕ್ಕುಗಳ ಬಗ್ಗೆ ಅತಿಕ್ರಮ ಪ್ರವೇಶ ಮಾಡುವದನ್ನು ಮೆಚ್ಚುವದಿಲ್ಲ.

(6) ದುಃಖಪಡುತ್ತಿರುವವರನ್ನು ರಕ್ಷಿಸುವದು ನಮ್ಮ ಕರ್ತವ್ಯ.

(7) ಕ್ಷಮೆ ಯೆಂಬುದು ಬಲಾಢ್ಯನ ವಿಶೇಷ ಗುಣ.

(8) ಯಾವುದಕ್ಕೆ ಬೆಲೆ ಇದೆಯೋ ಆ ಮಾತನ್ನೇ ಆಡು. ವಿವೇಚನೆಯಿಲ್ಲದೆ ಮಾತಾಡುವುದು ಬೇಡ.

(9) ಸ್ವತಂತ್ರನಾಗಬೇಕಾದರೆ ಮನಸ್ವಾತಂತ್ರ್ಯದಿಂದಿರು. ಮೇಲಿನ ಕಾರ್ಯಕ್ರಮಗಳು ಜಾರಿಯಲ್ಲಿ ಬರಬೇಕಾದರೆ ರಾಜಕೋಟೆ ಸಂಸ್ಥಾನವು ಯೋಗ್ಯ ಯುವಕ ಯುವತಿಯರನ್ನು ತಯಾರು ಮಾಡಬೇಕು. ಅವರಿಗೆ ಇವರಲ್ಲಿ ನಂಬಿಕೆ ಇರಬೇಕು. ನಾವು ಇನ್ನೂ ಮೌನ ಕಾರ್ಯಕ್ರಮವನ್ನು ತಿಳಿದಿಲ್ಲ. ನಾವು ಅದನ್ನು ಸಾಧಿಸಿಕೊಳ್ಳಬೇಕು. ನಿನ್ನೆಯ ಮೀಟಿಂಗಿನಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ ಒಂದು ದಳವನ್ನು ಕರೆದೆನು. ಅವರು ನನಗೆ ಹೆಸರುಗಳನ್ನಿತ್ತಿರುವರು. ಅವರಿಗೆ ಅಹಿಂಸೆ ಮತ್ತು ಸತ್ಯದಲ್ಲಿ ನಂಬಿಕೆ ಇರುವುದೇ ಆದರೆ ಅವರು ಈ ಕಾರ್ಯವನ್ನು ಜಯಪ್ರದವಾಗಿ ನಡೆಸುವದಲ್ಲದೆ ರಾಜಕೋಟೆ ಸಂಸ್ಥಾನವು ಮುಂಬರುವ ಜವಾಬ್ದಾರಿಕೆಯನ್ನು ಹೊರಲು ಶಕ್ತಿಯುಳ್ಳದ್ದಾಗುವದು. ಆದ್ದರಿಂದ ಈಗ ಮುಂಬಂದಿರುವ ಕೆಲಸಗಾರರನ್ನು ನಾನು ವಂದಿಸುವೆನು.'

'ಕೊಡಗು' ಪತ್ರಿಕೆಯ ಬಾಬ್ತು

ನಿಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡಿ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–41 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇ ಕಂಪನಿಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೇ.

ಮತ್ತು ಕಂಪೆನಿ,

(52–16) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ, ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಸಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ.

ಜಿ: ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ಮಾನಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಯಂಡ ಟಿ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ.	2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... [illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್**, ಬೆಂಗಳೂರು.

52–55

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಖಾಯಂಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

36 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು**, ಸಾಲ ಮೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಟಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ಥ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಾಗುತ್ತದೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಥ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ಥ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ತಜಮೂಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್ ಸಿ
ಟ್ರೆಜರರ್:—ರಾವ್ ಬಹದ್ದೂರ್ ಸಿ ದೇವಯ್ಯನವರು.
ಸೆಕ್ರೆಟರಿ:—ಮೆ ಎಸ್. ಎನ್ ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ 55.	ರೂ. 35	ರೂ. 22
6 ತಿಂಗಳಿಗೆ—	,, 100.	,, 35	,, 22	,, 13
3 ತಿಂಗಳಿಗೆ—	,, 60.	,, 20	,, 13.	,, 8
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ಒದಗಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೇಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್
ಸೌತ್ ಪರೇಡ್, ಬೆಂಗಳೂರು.

(62-12)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೭—೪—೧೯೩೯.

ಸಂಪುಟ ೧೮] [ಸಂಚಿಕೆ ೪೪

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-17

ಕೇರಳ ಆಯುರ್ವೇದಿಕ್ ವೈದ್ಯಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-6

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ
ಸೆಲೊಲಾಯಿಟ್ ಅಥವಾ ಚಿನ್ನ ಮುಂತಾ: ಪ್ರತಿಯೊಂದು ಕಾಲಂ
20 ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭನನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-48

The Agricultural &
Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-28) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೭೦,೫೯,೨೪೫— ೦—೦
ಭವನದ ಆಸ್ತಿಗಳು	೧೧,೭೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ಸ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

12-24

ಈ ನಾರದ ಕಥೆ.

ಮಾಧು.

(ಲೇ-ಗಣೇಶ, ಮಡಿಕೇರಿ.)

ಮಾಧವರಾವ್ ಎಂದರೆ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಸುಪ್ರಸಿದ್ಧ ವ್ಯಕ್ತಿ. ಅವನು ಒಂದು ಜಾತಿಯ ವಿದ್ಯಾರ್ಥಿಗಳ ಅಖಂಡ ಮುಖಂಡ. ಆ ವ್ಯಕ್ತಿಯ ಮೇಲೆಯೇ ನನ್ನ ಈ ಬರಹವು ನಿಂತಿರುವ ಪ್ರಯುಕ್ತ ಒಂದಿಷ್ಟು ಅವನ ಪರಿಚಯ ಮಾಡಿಕೊಟ್ಟರೆ ಒಳಿತು. ಮಾಧವರಾವ್ ಎಂಬ ನಾಮಾವಶೇಷವಾಗಿ 'ಮಾಧು' ಎಂಬ ಉಪನಾಮಧೇಯವು ಅವನಿಗಿತ್ತು. ಅವನ ಹೈಸ್ಕೂಲ್ ಕಾಲವು ನಿರವಧಿಯಾದದ್ದು. ಕಾಲದ ಕಟ್ಟಿಲ್ಲದ ಕಾಲಾತೀತನೆಂದರೂ ಸರಿಯೇ. ಅತನು ಹಿಟ್ಲರನಂತಹ ಬಲಿತ ಬ್ರಹ್ಮಚಾರಿ, ಕಚ್ಚೆದೆಯ ಕಟ್ಟಾಳು. ಶಾಲಾ ಪಂದ್ಯಾಟಗಳಲ್ಲಿ ಅಗ್ರಸ್ಥಾನ ಪಡೆದು, ಬೆಳೆಸಿದ ಲಕಟು ಶರೀರ ಅವನದು. ಚಲನಚಿತ್ರನಟರ ನೀಳವಾದ ಕ್ರಾಪು. ಖಾದಿಯಲ್ಲದಿದ್ದರೂ ಆ ಮಾದರಿಯ ಉಡಿಗೆ ತೊಡಿಗೆ. ಅವರ ಮೇಲೂ ಕ್ರೀಡಾಲೋಕದ ವಿಖ್ಯಾತ ವಿಭೂತಿಗಳ ಜೀವನ ಚರಿತ್ರೆಗಳೆಲ್ಲ ಇವನಿಗೆ ಹೃದ್ಗತ. ಅನೇಕ ತನ್ನದೇ ಆದ ಪದ್ಯಗಳನ್ನು ರಚಿಸಿ, ತನ್ನ ಪಡೆಯವರಿಗೆ ಹಂಚಿದ್ದನು. ಬುದ್ಧಿವಂತನೂ, ಅನುಭವಶಾಲಿಯೂ ಆಗಿದ್ದರಿಂದ ತಕ್ಕಮಟ್ಟಿನ ವಿದ್ಯಾರ್ಜನೆಯೂ ಆಗಿದ್ದಿತು. ಸಂಘ ಸಂಸ್ಥೆಗಳ ಚರ್ಚೆಗಳಲ್ಲಿ ಭಾಗಿಯಾಗಿ ಅನೇಕ ಧುರೀಣರನ್ನು ಸಹ ಚಳಿ ಹಿಡಿಸುವ 'ಸಭಾಕಂಪ'ವನ್ನು ಕಳೆದುಕೊಂಡಿದ್ದನು. ಅಲ್ಲದೆ ಅವನದೊಂದು 'ಭೀಷ್ಮ ಪ್ರತಿಜ್ಞೆ' ಇತ್ತು. ಭೀಷ್ಮ ಪ್ರತಿಜ್ಞೆಯೆಂದು ಹೇಳಲು ಇದು ದ್ವಾಪರ ಯುಗವಲ್ಲದಿದ್ದರೂ ಗುರು ಶಿಷ್ಯರ ಸಂಬಂಧ ಸಂವಿಧಾನವನ್ನು ತಾರುಮಾರು ಮಾಡುವ, ಒಂದು ಪ್ರತಿಜ್ಞೆ ಮಾಡಿ, ಮುಂಬರುವವರಿಗೆಲ್ಲ ತಮ್ಮನಾಗಿ, ಹಿಂಬರುವವರಿಗೆ ಅಣ್ಣನಾಗಿ 'ಜಾಂಬವಂತ'ನ ಸ್ಥಾನಪ್ರತಿಷ್ಠೆಯನ್ನು ಪಡೆದಿದ್ದನು. ಇಂಥಾ ಗುಣಗಳನ್ನೊಳಗೊಂಡ ಇವನು ಜನಾನುರಾಗಿಯಾಗಿದ್ದನೆಂದು ಹೇಳುವದು ಅನವಶ್ಯಕ.

ಇಷ್ಟೆಲ್ಲಾ ಪುರಾಣವೇಕೆಂದು ನೀವು ಕೇಳಬಹುದಲ್ಲವೇ? ಒಂದು ಸಾಮಾನ್ಯ ದುರಂತಕ್ಕೆ ಪುಷ್ಟಿಯನ್ನು ಕೊಡಲು. ಶಾಲಾ ತರಗತಿಯಲ್ಲಿ ಇವನ ಪೌರುಷವಂತಾದ್ದೆಂದು ಸ್ವಲ್ಪ ನಿರೂಪಿಸಬೇಕಿದೆ. ತರಗತಿಯಲ್ಲಿ ಇವನ ಪ್ರಶ್ನಾವಳಿಗಳು ಮರಿಗಳನ್ನು ಹಾಕುತ್ತಿರಲಾಗಿ ಕೆಲವು ಅಧ್ಯಾಪಕರು ಗದ್ಗದ ಕಂಠರಾಗುವರು; ಕೆಲವರು ಅಂತರಂಗದಲ್ಲಿ ರಾಜಿಪ್ರಯತ್ನ ನಡೆಸುವರು; ಕೆಲವರು ಬಹಿರಂಗದಲ್ಲಿ ಶಪಿಸುವರು. ಮತ್ತೆ ಕೆಲವರು ಮೌನ ವ್ರತವನ್ನಾಚರಿಸುವರು. ಈ ಒಂದೊಂದೂ ಒಂದು ವಿಧದ ಪ್ರತಿಕ್ರಿಯೆಯುಳ್ಳದ್ದಾಗಿಯೇ ಇತ್ತು.

ಶಾಲೆಯ ವಿಜ್ಞಾನ ಶಾಸ್ತ್ರ ಪಂಡಿತರಾದ ಕೃಷ್ಣರಾಯರು ಮೇಲಿನ ಎರಡನೇ ವರ್ಗಕ್ಕೆ ಸೇರಿದವರು. ಒಂದು ಸಲ ಸುಪ್ರಸಿದ್ಧವಾದ ಸರ್ಕಸೊಂದು ಇಲ್ಲಿಗೆ ಬಂದಿತ್ತು. ಮಾಧುವು ತನ್ನ ಸಂಗಡಿಗರೊಂದಿಗೆ ಅಲ್ಲೂ ಇದ್ದ. ಅದೃಷ್ಟವಶಾತ್ ಅಧ್ಯಾಪಕ ಕೃಷ್ಣರಾಯರೂ ಬಂದಿದ್ದರು. ಮಾಧುವು ತನ್ನ ಸ್ನೇಹಿತರೊಡನೆ ಒಂದೆರಡು ಅಂಕ ನೇರವಾಗಿ ಅವರ ಮೇಲೆ ಕುಳಿತಿದ್ದನು. ಸರ್ಕಸಿನ ಪ್ರದರ್ಶನ ಪ್ರಾರಂಭವಾಗುತ್ತಲೇ ಮಾಧುವು ಒಂದು ಚಿಟ್ಟೆಯಂತಹ ಹುಳವನ್ನು ಹಿಡಿದು ಅದರ ಕುತ್ತಿಗೆಗೊಂದು ಉದ್ದವಾದ ನೂಲನ್ನು ಬಿಗಿದು ಉಪಾಧ್ಯಾಯರ ರುಮಾಲಿನ ಮೇಲೆ ಬಿಟ್ಟನು. ಆ ಹುಳು ರುಮಾಲಿನಿಂದಿಳಿದು ಹಣೆಯ ಮೇಲೆ ಹರಿಯಬೇಕೆನ್ನುವಷ್ಟರಲ್ಲಿಯೇ ಮೇಲಕ್ಕೆಳೆದುಬಿಡುವನು. ಹೀಗೆ ಬಹಳ ಹೊತ್ತು ಉಪಾಧ್ಯಾಯರಿಗೆ ಅರಿಯದಂತೆಯೇ ತಾನು ನಗದೆ, ಎಲ್ಲರನ್ನೂ ನಗಿಸಿ ಚೇಷ್ಟೆಯಲ್ಲಿ ನಿರತನಾದನು. ಸುತ್ತಮುತ್ತಲಿನ ಕಿಲಕಿಲನೆಂಬ ನಗುವಿನ ಕೋಲಾಹಲದ ಕಾರಣವನ್ನರಿಯದ ಉಪಾಧ್ಯಾಯರಿಗೆ ಕಕಮಕಹಿಡಿಯಿತು. ಕಟ್ಟಕಡೆಗೆ ನಿರಾಶರಾಗಿ ಮೇಲೆ ನೋಡಿದರು. ಗೊಂದಲದ ಕಾರಣವನ್ನು ಅರಿತುಕೊಂಡನು. ಇಷ್ಟರಲ್ಲಿ ವಿರಾಮದ ಘಂಟೆಯಾಗಿದ್ದರಿಂದ ಮಾಧುವು ಹಿಮಂತರುತುವಿನ ಅಂಬರಗತ ಧೂಮಕೇತುವಿನಂತೆ ಅದೃಶ್ಯನಾದನು.

ಮಾರಣೆ ದಿನ ಶಾಲಾವಾಠಕ್ಕಾರಂಭವಾಯಿತು. ಮೊದಲನೇ ಗಂಟೆಯಲ್ಲಿಯೇ ಕೃಷ್ಣರಾಯರ ವಿಜ್ಞಾನ ಶಾಸ್ತ್ರ. ಉಪಾಧ್ಯಾಯರ ಮುಖವು ಕೆಂಪಡಗಿತ್ತು. ಉಪಾಧ್ಯಾಯರು ಶುಚಿಯಾದ ಬಿಳೀ ಉಡುಪನ್ನು ತೊಟ್ಟಿದ್ದರು. ವಿದ್ಯಾರ್ಥಿಗಳ ಕಡೆಗೇ ನೋಡಿಕೊಂಡು ಕುರ್ಚಿಯಲ್ಲಿ ಕುಳಿತರು. ಏನು? ಕುಳಿತರೇ? ಹೌದು. ಅಷ್ಟರಲ್ಲಿಯೇ ವಿದ್ಯಾರ್ಥಿಗಳೆಲ್ಲರೂ ನಗುವಿನ ಕೋಲಾಹಲದಲ್ಲಿ ತಲ್ಲೀನರಾದರು. ಬೋಧಕರಿಗೆ ಕೋಪವು ಇಮ್ಮಡಿಯಾಯಿತು. ಆದರೆ ಕೋಪಕ್ಕೆ ಉರಿಯಿಲ್ಲ; ಸೌದೆಯಿಲ್ಲ; ಆಹುತಿಯಾಗಲು ತುತ್ತಿಲ್ಲ. ಕಂಪಿಸುತ್ತಿದ್ದ ಹಾಗೆಯೇ ಕುರ್ಚಿಯಿಂದೆದ್ದರು. ಅಧ್ಯಾಪಕರ ಬಿಳೀ ಬಟ್ಟೆಯನ್ನು ಮಸಿಯು ಆಲಿಂಗಿಸಿದ್ದಿತು. ಅಷ್ಟರಲ್ಲೇ ಕೋಣೆಯೊಳಗೆಲ್ಲಾ 'ಹ್ಹುರಾ' ಎಂಬ ಅರ್ಭಟವೆದ್ದಿತು. ಬೋಧಕರ ಸಿಟ್ಟು ಮುಮ್ಮಡಿಯಾಯಿತು. ಕಣ್ಣಿನ ಕನ್ನಡಕವು ಕೆಂಪಾಯಿತು. ಧ್ವನಿ ಎದ್ದ ಮೂಲೆಯನ್ನು ನೋಡಿದರು. ಅಷ್ಟರಲ್ಲೇ ಬೇರೊಂದು ಮೂಲೆಯಿಂದ ಸಿಂಹ ಗರ್ಜನೆಯು ಗುಡುಗಿತು. ಅಂತೂ ತರಗತಿಯು ದೈತ್ಯನ ಕುಣಿತದ ಕೂಟವಾಯಿತು. ಇದೆಲ್ಲಾ ಮಾಧುವಿನ ಮಂತ್ರದ ಪರಿಣಾಮ.

ಬೋಧಕರು ತನ್ನ ದುರವಸ್ಥೆಯನ್ನು ನೋಡಿ ದಿಕ್ಕು ಕಾಣದಂತಾಗಿ ಇದ್ದಕ್ಕಿದ್ದಂತೆಯೇ ಮುಖ್ಯೋಪಾಧ್ಯಾಯರ ಕೋಣೆಗೆ ಬಿರ್ರನೆ ನುಗ್ಗಿ ಹೋದರು. ಇವರ ದುರವಸ್ಥೆಯನ್ನು ನೋಡಿ ಅಲ್ಲಿಯೂ ಹಾಸ್ಯ ಪ್ರವಚನಗಳ ಸುರಿಮಳೆಯನ್ನು ಸಹೋದ್ಯೋಗಿಗಳು ಸುರಿಸಿದರು. ಕೃಷ್ಣರಾಯರಿಗೆ ತಡೆಯಲಾರದಾಯಿತು. ಮುಖ್ಯೋಪಾಧ್ಯಾಯರಿಗೆ ದೂರುಕೊಟ್ಟರು. ಮಾರಣೆ ದಿನ ಮಾಧುವಿಗೆ ರೂ. ೫ ಜುಲ್ಮಾನೆ ವಿಧಿಸಲಾಗಿತ್ತು. ಮಾಧುವು ಚಕ್ರವ್ಯೂಹದ ಅಭಿಮನ್ಯುವಿನಂತೆ ಹೋರಾಡಿದರೂ ರೂ. ೫ ತೆರಲೇಬೇಕಾಯಿತು.

ಇಂಥಾ ಪ್ರಸಂಗಗಳು ಹೆಚ್ಚಿದವು. ಕೊನೆಗೆ ಮುಖ್ಯೋಪಾಧ್ಯಾಯರೂ ಕೃಷ್ಣರಾಯರ ಮಾತಿಗೆ ಬೆಲೆಕೊಡದ ಹಾಗಾಯಿತು. ಕೃಷ್ಣರಾಯರು ದಕ್ಷರಾದ ಬೋಧಕರಲ್ಲವೆಂಬ ಭಾವನೆ ಮೂಡಲಾಯಿತು. ಕೃಷ್ಣರಾಯರೂ ದೂರು ಹೇಳುವದನ್ನೆ ತಡೆದರು. ಮಾಧುವಿನ ಈ ಕುಚೇಷ್ಟೆಗಳು ಮುಖ್ಯೋಪಾಧ್ಯಾಯರ ಮೂಲಕ ಅವನ ತಂದೆಗೂ ತಲುಪಿತು. ಮನೆಯ ಶಾಂತ ವಾತಾವರಣವೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ಮಾಧುವಿನ ಮೇಲೆ ತಂದೆಯ ಕಟ್ಟಪ್ಪಣೆಯೂ ಆಯಿತು. ಇದರಿಂದ ಶಾಲೆಯಲ್ಲಿ ಒಂದು ವಾರ ಶಾಂತವಾತಾವರಣವಿತ್ತು. ಆದರೆ ಮಾನವ ಜೀವನ ವೈಶಿಷ್ಟ್ಯವು ಅಷ್ಟು ಸ್ಥಿರವಾಗಿದ್ದಲ್ಲಿ ಇನ್ನು ಸಂಕ್ಷೋಭೆಗೆ ಕಾರಣವೆಲ್ಲಿಹುದು? ಕೋಲಾಹಲಕ್ಕೆ ಒಂದೇ ವಾರ ವಿಶ್ರಾಂತಿ ದೊರೆತದ್ದು.

ಅಂದು ಸೋಮವಾರ. ಕಡೇ ಗಂಟೆಯಲ್ಲಿ ಕೃಷ್ಣರಾಯರ ವಾಠ. ಅಧ್ಯಾಪಕರು ಬೋಧನಾ ಪುಸ್ತಕಗಳನ್ನು ಕೈಯಲ್ಲಿ ಹಿಡಿದು ಕ್ಲಾಸಿಗೆ ಬರುತ್ತಿದ್ದರು. ಮಾಧುವಿನಿಂದ ಪ್ರೇರೇಪಿತರಾದ ಹುಡುಗರೆಲ್ಲ ಕ್ಲಾಸಿನಿಂದ ಒಬ್ಬೊಬ್ಬರಾಗಿ ಹೊರಹೋಗಹತ್ತಿದರು. ಅಧ್ಯಾಪಕರು ಕ್ಲಾಸನ್ನು ಪ್ರವೇಶಿಸುವಷ್ಟರಲ್ಲಿ ವಿದ್ಯಾರ್ಥಿಗಳು ಕ್ಲಾಸಿನಲ್ಲಿಲ್ಲ. ಅಧ್ಯಾಪಕರು ಯೋಚನಾಪರರಾಗಿ ಆಫೀಸು ಕೋಣೆಯಲ್ಲಿ ಮಂಡಿಸಿದರು. ವಿದ್ಯಾರ್ಥಿಗಳು ಪುನಃ ಕ್ಲಾಸಿನಲ್ಲಿ ಆಸೀನರಾದರು. ಮಾಧುವು ತನ್ನ ಸಹಪಾಠಿಗಳೊಡನೆ ಆಫೀಸು ಕೋಣೆಗೆ ಹೋದನು. 'ಅಧ್ಯಾಪಕರೇ, ಇದು ನಿಮ್ಮ ಗಂಟೆಯೆಂಬ ಅರಿವಿಲ್ಲವೇನು? ಪಾಠಕ್ಕೆ ಬರಬೇಕು' ಎಂದು ಹೇಳಿದನು ಮಾಧು. ಮೊದಲೇ ಕೋಪಾರುಣನೇತ್ರರಾಗಿದ್ದ ಅಧ್ಯಾಪಕರು ಕಿಡಿಕಿಡಿಯಾದರು. ಹೊರಹೊರಡುವಂತೆ ಆಜ್ಞಾಪಿಸಿದರು. ಆದರೆ ಹೆದರಿಕೆಯನ್ನರಿಯದ ಮಾಧು ಸುಮ್ಮನಿರುವನೇ? 'ಸಾರ್, ನಿಮಗೆ ಸಂಬಳ ಸರಕಾರದವರು ಕೊಡುವದು ವಿದ್ಯಾರ್ಥಿಗಳಿಗೆ ಪಾಠ ಹೇಳಬೇಕೆಂದು, ಆಫೀಸಿನಲ್ಲಿ ಕೂತುಕೊಳ್ಳಲಿಕ್ಕಲ್ಲ ಸಂಬಳ' ಎಂದು ನುಡಿದೇ ಬಿಟ್ಟನು. ಅಧ್ಯಾಪಕರಿಗ ಘಾಯದ ಮೇಲೆ ಬರೆ ಎಳೆದಂತಾಯಿತು. ಕೋಪಾವೇಶದಿಂದ ಕೈಗೆ ಸಿಕ್ಕಿದ ರೂಲರನ್ನು ಹಿಡಿದು ಎದ್ದು ನಿಂತರು. ಮಾಧುವು ತನ್ನ ಸಹಪಾಠಿಗಳೊಡನೆ ಪಲಾಯನ ಸೂತ್ರವನ್ನು ಪಠಿಸಿದ್ದ. ಅಷ್ಟರಲ್ಲಿ ಶಾಲಾ ಗಂಟೆಯಾದ್ದರಿಂದ ಎಲ್ಲರೂ ಮನೆಗೆ ತಿರಳಿದರು.

ಮಾರಣೇ ದಿನ ಮುಖ್ಯೋಪಾಧ್ಯಾಯರೊಂದಿಗೆ ಕೃಷ್ಣರಾಯರು ಬರುತ್ತಿದ್ದರು. ಮುಖ್ಯೋಪಾಧ್ಯಾಯರ ಮುಖವು ರೌದ್ರಾವತಾರತಾಳಿದಂತಿತ್ತು. ಹುಬ್ಬನ್ನು ಗಂಟಿಕ್ಕಿದ ಭರದಲ್ಲಿ ಹಣೆಯಲ್ಲಿದ್ದ ಗಂಧವು ಪಳ್ಳನೆ ಒಡೆದು ಬಿರಕುಬಿಟ್ಟಿತ್ತು. ನಂದುವ ದೀಪವು ಪ್ರಜ್ವಲಿಸುವಂತೆ ಅವರ ಕಣ್ಣುಗಳು ಕೆಂಪಡರಿದ್ದವು. ಅನಿರೀಕ್ಷಿತವಾಗಿ ಸಿಡಿಲಿನಂತೆ ಅವರ ಕೈಯಲ್ಲಿದ್ದ ಬೆತ್ತವು ಮಾಧುವಿನ ಬೆನ್ನ ಮೇಲೆ ಆಶ್ರಯವನ್ನು ಪಡೆಯಿತು. ಇದರ ಕಾರಣಗಳನ್ನು ತಿಳಿಯಲೋ ಎಂಬಂತೆ ಬೆನ್ನ ಮೇಲೆ ಬಾಸುಂಡೆಗಳು ಬಂದವು. ಉಕ್ಕಿನಂತಿದ್ದ ಮಾಧುವಿನ ಕೈ ಬೆತ್ತವನ್ನು ಹಿಡಿದು ಮತ್ತೆ ಪ್ರಯೋಗಕ್ಕೆ ಅವಕಾಶ ಕೊಡದೆ ಕಿತ್ತೆಸೆಯಿತು.

ಇಂದು ಉಪಾಧ್ಯಾಯರ ಸಮಿತಿಯು ಪೂರ್ತಿ ಬಾರಿ ಸೇರಿತು. ಮಾಧುವಿನ ವಿಚಾರವೇ ಚರ್ಚೆಯದಾಯ್ತು. ಆ ಅಧ್ಯಾಪಕ ಮಂಡಳಿಯಲ್ಲಿ ಅವನ ಪರವಾದಿಸುವವರಾರು? ಕೋಪ-ದ್ವೇಷಗಳ ಕತ್ತಲೆ ಕವಿದಿರುವಾಗ್ಯೆ ಅಲ್ಲಿ ಔದಾರ್ಯಕ್ಕೆ ಎಡೆಯೆಲ್ಲಿ? ಅವರ ತೀರ್ಮಾನವು ಮಾಧುವಿನ ಬಾಳಿನ ರಸವನ್ನೇ ಹೀರಿತು. ಮಾಧುವು ಶಾಲೆಯಿಂದ ವಿಸರ್ಜಿತನಾದುದನ್ನು ಶಾಲೆಯು ವಿಷಾದದಿಂದ ಕಂಡಿತು. ಯೋಗ್ಯತಾ ಪತ್ರದಲ್ಲಿ ನಡತೆ ಚೆನ್ನಾಗಿಲ್ಲವೆಂದು ಬರೆದದ್ದರಿಂದ ಬೇರಾವ ಶಾಲೆಯಲ್ಲೂ ಮಾಧುವಿಗೆ ಪ್ರವೇಶ ದೊರೆಯಲಿಲ್ಲ. ಮಾಧುವಿನ ಜೀವನವು ನೀರಸವಾಗಿ ಕೊನೆಗೊಂಡಿತು.

—oOo—

ಹೋಟೇಲು ಮಾಲೀಕರಿಗೆ ಭಯವಿಲ್ಲ.

'ಏ ಮಾಣಿ! ಇದೆಂದು ಮಾಡಿದ ದೋಸೆ? ಮರಕಟ್ಟಿ ಹೋಗಿದೆ' ಎಂದು ಹೋಟೆಲು ಮಾಣಿಗಳನ್ನು ಗದರಿಸುವವರಿಗಾಗಿ ಒಂದು ಶೋಧ ನಡೆದಿದೆ. ಮೇಜಿನ ಮೇಲೆ ಪ್ಲೇಟು ಇಡುವಲ್ಲಿ ಒಂದು ತರಹದ 'ಪ್ಲೇಟ್' ಇಡಲ್ಪಟ್ಟಿದ್ದು, ಇದಕ್ಕೆ 'ಎಲೆಕ್ಟ್ರಿಕ್ ಕರೆಂಟ್' ಕೊಡಲ್ಪಟ್ಟಿರುತ್ತದೆ. ನಿಮ್ಮ ದೋಸೆ ತುಂಬಿದ ಪ್ಲೇಟು ಇದರ ಮೇಲೆ ಇಟ್ಟೊಡನೆಯೇ ಸ್ವಿಚ್ ಹಾಕಿ ಹೋಟೆಲ್ ಮಾಣಿಯು ಈ ಪ್ಲೇಟನ್ನು ಬಿಸಿಮಾಡುವನು. ನಿನ್ನೆ ಮಾಡಿದ ದೋಸೆ, ಇಡ್ಲಿಗಳಿಗೂ ಇದರ ದೆಸೆಯಿಂದ ಗಿರಾಕಿಗಳು ಬರಬಹುದು. ಬದುಕಿದರಪ್ಪಾ ಹೋಟೆಲಿನವರು! ಇನ್ನೇನು ತಿಂಡಿ ಮಾಡಿ ತಿಂಗಳೊಂದಾದರೂ ಹೆದರಿಕೆ ಯಾಕೆ? ಒಮ್ಮೆ ಸ್ವಿಚ್ ಹಾಕಿದರಾಯಿತು! ತಿಂಡಿಗಳು ಬಿಸಿಯಾಗಿ ಕೈಗೆ ತಣ್ಣೀರು ಸವರಿ ಮುಟ್ಟಬೇಕು. ನಗರ ಸಭೆಯವರೇ, ನೀವೊಂದು ಉಪಾಯಮಾಡಿ ಹಳೇ-ಹೊಸ ಪದಾರ್ಥಗಳನ್ನು ಕಂಡುಹಿಡಿದು ಜನರಿಗೆ ಉಪಕಾರ ಮಾಡಿ.

—oOo—

ಜಯಪುರ ಸತ್ಯಾಗ್ರಹ.

ಸತ್ಯಾಗ್ರಹಿಯು ಅಹಿಂಸಾತತ್ವ ಪಾಲಕನಿರಬೇಕು. ಅಹಿಂಸೆಯು ಕೈಲಾಗದವರ ತತ್ವವಲ್ಲವೆಂದು ಎಲ್ಲರೂ ತಿಳಿಯಬೇಕು. ಟೊಳ್ಳು ಅಹಿಂಸಾ ನಟನೆಯಿಂದ ಸ್ವರಾಜ್ಯವು ಲಭಿಸದೆಂದು ಮನಗಾಣಬೇಕು. ಸ್ವರಾಜ್ಯವು ಗೆಲ್ಲಲ್ಪಡಬೇಕು. ಬಲಾಢ್ಯರ ಅಹಿಂಸೆಯನ್ನು ಉಪಯೋಗಿಸಬೇಕು. ಮಾನವ ಕೋಟಿಯ ಉದ್ಧಾರಕ್ಕೆ ಅಹಿಂಸಾತತ್ವ ಪಾಲನವೇ ದಾರಿ ಎಂಬುವನ್ನು ಜಗತ್ತಿಗೇ ಸಾರಬೇಕು.

ಲೇ- ಮಹಾತ್ಮ ಗಾಂಧಿ (ಹರಿಜನ 1–4–'39).

ಜಯಪುರದಲ್ಲಿ ಕಾಯಿದೆ ಭಂಗ ಚಳವಳನ್ನು ನಿಲ್ಲಿಸಿದ್ದರಿಂದ ಅನೇಕ ಸತ್ಯಾಗ್ರಹಿಗಳ ಆಶಾ ಭಗ್ನತೆಯಾಗಿರುವದೆಂದೂ, ಅವರಲ್ಲಿ ನಿರುತ್ಸಾಹವು ನೆಲೆಸಿತು ವಿಧಾಯಕ ಕಾರ್ಯಕ್ರಮಗಳಾದ ಖಾದಿ ಪ್ರೋತ್ಸಾಹ ಮೊದಲಾದ ಪ್ರಾಮುಖ್ಯ ಸಮಸ್ಯೆಗಳನ್ನು ಕೈಕೊಳ್ಳಲು ಮುಂಬರದಿರುವರೆಂದೂ, ಕೂಗು ಕೇಳಿಸುತ್ತಿದೆ ಇದು ಸಾರ್ವಜನಿಕ ಅಭಿಪ್ರಾಯವಾದ ಪಕ್ಷ ಚಳವಳವನ್ನು ನಿಲ್ಲಿಸಿದ ಘೋಷಣೆಯು ಸಮಂಜಸವಾಗಿದೆಯೆಂಬುವುದಕ್ಕೆ ಯಾವ ತೊಡಕೂ ಇಲ್ಲ. ಇದರಿಂದ ಸತ್ಯಾಗ್ರಹಿಗಳಲ್ಲಿ ಅಹಿಂಸಾ ತತ್ವವು ಬೇರೂರಿಲ್ಲವೆಂದೂ ಅದಿಲ್ಲದೆ ಸತ್ಯಾಗ್ರಹವು ಮುಂದುವರಿಯಲಾರದೆಂಬ ಭರವಸೆಯು ಅವರಲ್ಲಿ ಉದ್ಭೂತವಾಗಿಲ್ಲವೆಂದೂ ಮನವರಿಕೆಯಾಗುತ್ತದೆ. ಸಂಸ್ಥಾನಗಳ ಸ್ವಾತಂತ್ರ್ಯ ತನ್ನು ಪಡೆಯಲು ಕಾಯಿದೆಭಂಗ ಚಳವಳವನ್ನು ಹೂಡುವ ವಿಚಾರ ಮಾತಾಡುವ ಸತ್ಯಾಗ್ರಹಿಗಳಿಗೆ ಅದರ ಪರಿವೆಯೇ ಇಲ್ಲದಂತೆ ಭಾಸವಾಗುತ್ತಿದೆ. ಅವರು ಪ್ರಾಂತ್ಯಗಳಲ್ಲಿ ಈ ವರೆಗೆ ಆದ ಚಳವಳದ ಪಾಠವನ್ನು ಕಲಿತಿಲ್ಲವೇನು? ಬ್ರಿಟಿಷ್ ತೋಪುಗಳ ಅಥವಾ ಮಿಲಿಟರಿ, ಪೊಲೀಸುಗಳ ಸಹಾಯವಿಲ್ಲದೆ ಪ್ರಾಂತೀಕ ಸ್ವಾತಂತ್ರ್ಯ ಪಡೆದ ಹೊರಗಿನ ಪ್ರಾಂತಗಳ ಕಾಂಗ್ರೆಸ್ ಮಂತ್ರಿ ಮಂಡಳಗಳು ಕೆಲಸ ಸಾಗಿಸಲಾರವೆಂಬದು ವಿಷಧವಿಲ್ಲವೇನು? ಹೀಗೆ ಇಂಥಾ ಅರ್ಧ ಸ್ವಾತಂತ್ರ್ಯವನ್ನು ಅಹಿಂಸಾ ತತ್ವಾಚರಣೆಯಿಂದ ಪಡೆದದ್ದಾದರೆ ಅದನ್ನು ಆ ತತ್ವದ ನೇರಿಯೇ ಇಟ್ಟುಕೊಳ್ಳಬೇಕು. ಕಳೆದ ಇಪ್ಪತ್ತು ವರ್ಷಗಳ ಜನತೆಯ ಜಾಗೃತಿಯ ಕಾಲದಲ್ಲಿ, ಕೋವಿ ಗುಂಡುಗಳ, ಲಾಠಿ ಪ್ರಹರಗಳ ಮಧ್ಯೆ ಜನತೆಯು ಅಹಿಂಸಾ ತತ್ವವೇ ಮಾನವ ಕೋಟಿಯ ಉದ್ಧಾರ ಸಾಧನವೆಂಬುವುದನ್ನರಿತಿದೆ. ಆದರೂ ಕಾಂಗ್ರೆಸ್ ಮಂತ್ರಿ ಮಂಡಳಗಳು ಅನಿವಾರ್ಯವಾಗಿ ಇಂದಿನ ಅರ್ಧಮರ್ಧ ಸ್ವರಾಜ್ಯ ವೇದಿಕೆಯಲ್ಲಿ ಹಿಂಸಾಚರಣೆಯನ್ನು ಕೈಕೊಳ್ಳಬೇಕಾಗುತ್ತವೆ. ಹಿಂಸಾಚರಣೆಗೆ ಜನತೆಯನ್ನು ತರಬೇಕು ಮಾಡದ ವಿನಹ ಅದು ಯಶಸ್ವಿಯಾಗಿ ನಡೆಯದು. ಆದರೆ ನಮ್ಮ ಅಹಿಂಸೆಯು ಕೈಲಾಗದವರ ತತ್ವವೇನು? ಹಿಂದೂ ಮುಸ್ಲಿಂ ಐಕ್ಯತೆಯು ನಮಗೊಂದು ಪ್ರಬಲ ಸಮಸ್ಯೆ. ಕಾಂಗ್ರೆಸಿನ ಅಂತರ್ಗತ ಕೊಳೆಯು ಹಿಂಸಾ ತತ್ವದ ಹೆಗ್ಗುರುತು. ಸಂಸ್ಥಾನದ ಸ್ವರಾಜ್ಯವು ಕೇವಲ ಅಹಿಂಸೆಯೆಂಬ ಉಪಾಯದಿಂದ ದೊರಕುವದಲ್ಲ. ಸ್ವರಾಜ್ಯವು ಗೆಲ್ಲಲ್ಪಡಬೇಕು. ಹಾಗಾದರೆ ಬಲಾಢ್ಯರ ಅಹಿಂಸೆಯನ್ನು ಉಪಯೋಗಿಸಬೇಕು. ಅಂದರೆ ಅವಿಚಲ ಶ್ರಮ, ಶಾಂತ ಹಾಗೂ ಸಹನಾಪೂರಿತ ತಾಳ್ಮೆ, ಜನರ ಸೇವೆ, ತಿನ್ನಲು ಕೂಳಿಲ್ಲದೆ ತಳಮಳಿಸುತ್ತಿರುವವರ ಪೋಷಣೆ, ಹಾಗೂ ಜನಾಪಕಾರಿಯಾಗದ ಸಂಸ್ಥಾನ ಕಾಯಿದೆಗಳ ಪಾಲನೆ ಈ ಕಾರ್ಯಗಳು ನಡೆಯಬೇಕು. ಬಲಾಢ್ಯರ ಅಹಿಂಸಾ ತತ್ವವು ನಮ್ಮಲ್ಲಿ ಬೇರೂರದ ಹೊರತು ಸಂಸ್ಥಾನಗಳ ಹಾಗೂ ಬ್ರಿಟಿಷ್ ಇಂಡಿಯಾದ ಇತರ ಪ್ರಾಂತಗಳ ಸ್ವರಾಜ್ಯ ಹೋರಾಟವು ಕನಸಿನ ಮಾತೇ ಸರಿ. ಮುಂದೆ ಸತ್ಯಾಗ್ರಹಿಯಾಗತಕ್ಕವನು ಖಾದಿ ಧಾರಣ ಹಾಗೂ ನೂಲುವವನ್ನು ಕೈಕೊಂಡು ಅಹಿಂಸಾಪಥದಲ್ಲಿ ನಡೆಯಬೇಕು.

ಜಯಪುರದ ಸತ್ಯಾಗ್ರಹಿಗಳು ಇನ್ನು ಮುಂದೆ ಬರಬಹುದಾದ ಸತ್ಯಾಗ್ರಹಗಳಲ್ಲಿ ಭಾಗ ವಹಿಸಲು ಆಶಿಸುವರಿದ್ದರೆ ಮೇಲಿನ ನನ್ನ ಶರತುಗಳನ್ನು ಪಾಲಿಸಿ ಅಹಿಂಸೆಯನ್ನು ಅನುಸರಿಸಬೇಕು. ಈ ವಿಚಾರವು ಬರೇ ಜಯಪುರ ಜನತೆಗೇ ಇಲ್ಲ. ಇಡೀ ಭಾರತದ ಎಲ್ಲಾ ಪ್ರಾಂತ ಹಾಗು ಸಂಸ್ಥಾನಗಳಿಗನ್ವಯಿಸುತ್ತವೆ. ಇದರಿಂದ ಸ್ವರಾಜ್ಯ ಹೋರಾಟವು ನಿಂತು ಹೋಗುವದೆಂಬ ಅರ್ಥವಲ್ಲ. ಕಾಯಿದೆ ಭಂಗ ಚಳವಳವು ಅಷ್ಟು ಸುಲಭಸಾಧ್ಯವಲ್ಲವೆಂಬುವುದೇ ಇದರರ್ಥ. ಆದರೆ ನಾನೂ ಇನ್ನೂ ಕಲಿಯಬೇಕಾದ ವಿಚಾರಗಳಿವೆ. ಸತ್ಯವೆಂಬ ದೇವರ ಮುಂದೆ ಎಷ್ಟು ವಯಸ್ಕನಾದರೂ ಬಾಲಕನಂತೆಯೇ. ಆದರೆ ಕಾಯಿದೆಭಂಗವು ಸ್ವಾತಂತ್ರ್ಯ ಸಂಪಾದನೆಗೆ ಪ್ರಮುಖ ದಾರಿಯೆಂದಾದರೆ ಅಹಿಂಸೆಯ ಸಮಾಗಮನದಿಂದ ಅದು ಇನ್ನಷ್ಟು ಪ್ರಾಮುಖ್ಯವಾದ ದಾರಿಯೆಂದೂ,' ಅದರ ಪರಿಣಾಮವು ಇನ್ನಷ್ಟು ಫಲಕಾರಿಯಾಗುವದರಲ್ಲಿ ಸಂದೇಹವಿಲ್ಲವೆಂದೂ ಹೇಳಬಲ್ಲೆನು,

ತಿರುವಾಂಕೂರ್ ಅತ್ಯಾಚಾರ

- **ಕತ್ತಲೆ ಕೋಣೆಯಲ್ಲಿ ರಾಜಕೀಯ ಕೈದಿಗಳ ಭಂಗ.**
- **ಅತ್ಯಾಚಾರಗಳಿಂದಾಗಿ ಮುಖಂಡರ ಮಾನಭಂಗ.**
- **ಸಾರ್ವಜನಿಕ ಸಭೆಗಳೇ ಈ ಪುಂಡರ ನಗ್ನ ನಾಟಕ ರಂಗ.**
- **ನಿರಪರಾಧಿ ಜನರ ಶೀಜೋಭಂಗ.**
- **ಕುಟಿಲ ನೀತಿಯ ಸರಕಾರದ ಕಾರ್ಯ ರಂಗ.**

ತಿರುವಾಂಕೂರು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಪಟ್ಟಂತಾನು ಪಿಳ್ಳೆಯವರು ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಇದರಿಂದ ತಿರುವಾಂಕೂರು ರಾಜಕೀಯ ರಂಗದ ವಾತಾವರಣವು ವಿಷದೀಕೃತವಾಗುವದು.

ಮುಂದಿನ ಕಾರ್ಯ.

'ಮಹಾತ್ಮಾ ಗಾಂಧಿಯವರು ತಿರುವಾಂಕೂರು ಪರಿಸ್ಥಿತಿಯನ್ನು ವಿಚಾರಿಸಿ ಆ ಬಗ್ಗೆ ಸೂಚನೆಗಳನ್ನು ಕೊಡುತ್ತಿರುವದು ನಮ್ಮ ಸುದೈವ. ಆದರಂತೆಯೇ ಇಂದು ನಾವು ಇಲ್ಲಿಯ ಸತ್ಯಾಗ್ರಹವನ್ನು ಪೂರ್ಣವಾಗಿ ನಿಲ್ಲಿಸಿರುವೆವು. ಗಾಂಧೀಜೀಯವರ ಪ್ರೇರಣೆಯಂತೆ ರಾಷ್ಟ್ರೀಯ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ನಮ್ಮ ಸಂಸ್ಥಾನ ಕಾಂಗ್ರೆಸನ್ನು ಬಲಪಡಿಸಬೇಕಿದೆ. ನಮ್ಮ ಈ ಸಂಸ್ಥೆಯ ಅಭಿವೃದ್ಧಿಯು ಅಮೋಘವಾಗಿ ನಡೆದು ಅದು ಅಹಿಂಸಾ ಮತ್ತು ಸತ್ಯದ ಮೇಲೆ ಆಧರಿಸಿ ನಿಂತು ತನ್ನ ಗುರಿಯನ್ನು ಸಾಧಿಸಲು ತಯಾರಾಗಬೇಕು. ಆದ್ದರಿಂದ ಇಂದು ನಾವು ವಿಧಾಯಕ ಕಾರ್ಯಕ್ರಮವನ್ನು ಕೈಗೊಂಡು ಸುಗಮವಾದ ಹಾದಿಯಲ್ಲಿ ಮುಂದರಿದು ಮಹಾತ್ಮರ ಕೃಪೆಗೆ ಪಾತ್ರರಾಗಬೇಕಾಗಿದೆ.

ರಾಜಕೀಯ ಕೈದಿಗಳ ಸ್ಥಿತಿ.

ಈ ವಿಚಾರವು ಹೃದಯದ್ರಾವಕವಿರುವದು. ಸತ್ಯಾಗ್ರಹವನ್ನು ನಿಲ್ಲಿಸಿದ್ದರೂ ಸಹ ಸರ್ಕಾರವು ತನ್ನ ಘೋಷಣೆಯನ್ನು ಬದಲಾಯಿಸದೆ ತನ್ನ ಪಾಶವೀ ಕೃತ್ಯಗಳನ್ನು ಮಾಡುತ್ತಿರುವದು ನಿಂದ್ಯಾಸ್ಪದ. ಕೈದಿಗಳನ್ನು ಬೆಳಕಿಲ್ಲದ ಕತ್ತಲೆ ಕೋಣೆಗಳಲ್ಲಿ ಹಾಕಿ ಕಷ್ಟಪಡಿಸುವದು ವಿಷಾದದ ಸಂಗತಿ. ಚಿರಯಿಂಕ್ಲಿ ತಾಲೂಕಿನ ಅಧ್ಯಕ್ಷರೂ, ಪ್ರಸಿದ್ಧ ವಕೀಲರೂ, ಕೌನ್ಸಿಲ್ ಸದಸ್ಯರೂ ಆದ ಶ್ರೀ. ಪಿ. ನಾನೂ ಎಂಬವರನ್ನು ಬಂಧಿಸಿ, ಕೈಗೆ ಕೋಳವನ್ನು ಹಾಕಿ ಬೀದಿಯಲ್ಲಿ ಮೆರವಣಿಗೆಯ ಮುಖಾಂತರ ಅವರಿಗೆ ಅವಮಾನಪಡಿಸಿ ತೊಂದರೆಗೊಳಪಡಿಸಿದರು. ಈಗ ಹೊಸದಾಗಿ ಸೇರಿಸಿದ ಸ್ಪೆಶ್ಯಲ್ ಪೊಲೀಸರ ಅತ್ಯಾಚಾರಗಳು ಅವರ್ಣನೀಯ. ಕ್ವಿಲಾನ್ ಮೊದಲಾದ ಭಾಗಗಳಲ್ಲಿ ನಡೆದ ಸಾರ್ವಜನಿಕ ಸಭೆಗಳಿಗೆ ಅವಮಾನಕರವಾದ ಮಾತುಗಳನ್ನಾಡುತ್ತಾ ಡೋಲುಗಳ ಶಬ್ದವನ್ನು ಮಾಡಿ ಭಾಷಣಕರ್ತರ ಹಾಗೂ ಪ್ರೇಕ್ಷಕರ ಮೇಲೆ ಕಲ್ಲುಗಳನ್ನೆಸೆಯುತ್ತಾ ಜನರ ಮೇಲೆ ಬಿದ್ದು ಅವರ ಬಟ್ಟೆಬರೆಗಳನ್ನು ಹರಿದು ತೊಂದರೆಗೀಡು ಮಾಡುತ್ತಾ, ಅಮಾನುಷ ಅತ್ಯಾಚಾರಗಳನ್ನು ಮಾಡಿದ ವರ್ತನೆಯನ್ನು ಖಂಡಿಸಬೇಕಿದೆ. ಕುತಾಟುಕೊಳಂ ಎಂಬಲ್ಲಿ ನಡೆದ ಸಭೆಯ ಅಧ್ಯಕ್ಷರ ಬಟ್ಟೆಬರೆಗಳನ್ನೆಲ್ಲಾ ಬಿಚ್ಚಿ ಅವಮಾನ ಪಡಿಸಿದರೆಂದ ಮೇಲೆ ಇವರ ಅತ್ಯಾಚಾರದ ಪರಮಾವಧಿಯನ್ನು ವರ್ಣಿಸಲಸದಳ. ಕೆಲವು ಸಭೆಗಳಲ್ಲಿ ಈ ಸ್ಪೆಶ್ಯಲ್ ಪೊಲೀಸರೇ ನಗ್ನರಾಗಿ ಸಭೆಯ ಒಳಗೆ ನುಗ್ಗಿ ಗಲಾಟೆ ಎಬ್ಬಿಸಿ ತೊಂದರೆ ಪಡಿಸಿರುವರು. ತಾರೀಕು 1ರಲ್ಲಿ ಕ್ವಿಲೋನ್ ತಾಲೋಕು ಕಾಂಗ್ರೆಸ್ ಕಮಿಟಿಯ ಮೀಟಿಂಗು ಮುಗಿದು ಶ್ರೀ. ಪಿ. ಜಿ. ವ[illegible]ಗೀಸ್ ಬಿ. ಎ. ಮತ್ತಿತರ ಸದಸ್ಯರು ಬ[illegible]ರುತ್ತಿದ್ದಾಗ್ಯೆ ಈ ತುಂಟರು ಅವರನ್ನು ತ[illegible]ಡೆದು ಚೆನ್ನಾಗಿ ಹೊಡೆದದ್ದಲ್ಲದೆ ಅವ[illegible] ಕೈಯಲ್ಲಿದ್ದ ಸಾಮಾನುಗಳನ್ನೆಲ್ಲಾ ಅಪಹರಿಸಿರುವರು. ಅವರಲ್ಲಿ ಒಬ್ಬರು ತುಂಬಾ ಗಾಯಗೊಂಡಿರುವದರಿಂದ ಅವರ ಸ್ಥಿತಿಯು ಚಿಂತಾಜನಕವಿದೆ. ಇಂಥಾ ಅತ್ಯಾಚಾರಗಳನ್ನು ಸರ್ಕಾರದವರು ಪರೋಕ್ಷವಾಗಿ ನಡಿಸುತ್ತಿರುವದು ಲಾಂಛನೀಯ.

ವಿಚಾರಿಸಬೇಕಾದ ಸಮಸ್ಯೆಗಳು.

ದಿವಾನರಾದ ರಾಮಸ್ವಾಮಿ ಐಯರವರು ಈ ವಿಚಾರಗಳನ್ನು ಕುರಿತು ಸರ್ಕಾರವು ಜನತೆಗೆ ಯಾವ ತಂಟೆಯನ್ನು ಮಾಡಿಲ್ಲವೆಂದು ಘೋಷಿಸುವರು. ಆದ್ದರಿಂದ ಈ ಕೆಳಗಿನ ವಿಚಾರಗಳನ್ನು ವಿಚಾರಿಸಬೇಕಿದೆ.

(1) ಒಂಭತ್ತು ಕಡೆಯಲ್ಲಿ ನಿರಪರಾಧಿ ಜನತೆಯ ಮೇಲೆ ಗುಂಡು ಹಾರಿಸಿ [illegible]ನೇಕರನ್ನು ಮೃತ್ಯುವಿಗೆ ತುತ್ತು ಮಾಡಿದ[illegible]

(2) ಶಿವರಾಜನ್‌ಪಾಂಡ್ಯ ಎಂಬ [illegible]ಯಂಸೇವಕನು ಬಂಧಿತನಾಗಿ ಪೊಲೀ[illegible] ಕೈವಶವಿರುವಾಗ ಅಕಸ್ಮಾತು ಸತ್ತದ್ದು[illegible]

(3) ಡಾ. ಎನ್. ಎಸ್. ಪಿಳ್ಳೆ[illegible]ರು ಬಂಧಿತರಾಗಿ ಪೊಲೀಸರ ಕೈವಶ[illegible]ವರು ಮಾರಣೇ ದಿನ ಆಸ್ಪತ್ರೆಯಲ್ಲಿ [illegible]ಳುತ್ತಿರುವದು. ಇಂಥಾ ಇನ್ನೂ [illegible]ಕ ರೀತಿಯ ಅಮಾನುಷ ಕೃತ್ಯಗಳನು [illegible]ಚಾರಿಸಬೇಕು.

ಗಾಂಧೀಜಿಯವರು ತಿರುವಾಂಕೂರು ಸಂಸ್ಥಾನದ ವಿಚಾರವನ್ನು ಪರಿಶೀಲಿಸುತ್ತಿರುವದರಿಂದ ನಾವು ಗಾಂಧಿಜೀಯವರಲ್ಲಿ ಸುರಕ್ಷಿತವಾಗಿರುವೆವೆಂದು ಹೇಳಬೇಕಾಗಿಲ್ಲ. ಆದುದರಿಂದ ಅವರ ಪ್ರೇರಣೆಯಂತೆ ಸತ್ಯ ಮತ್ತು ಅಹಿಂಸೆಯನ್ನು ಪಾಲಿಸುವವರಾಗುವ.'

ರಾಜಕೋಟೆ ಸಮಸ್ಯೆ.

- ಸರ್ದಾರ ಪಟೇಲರೊಡನಾದ ಒಪ್ಪಂದದ ಜಯ.
- ಅವರು ಸೂಚಿಸಿದ ಸುಧಾರಣಾ ಸಮಿತಿಯ ಸದಸ್ಯರನ್ನು ಸ್ವೀಕರಿಸುವ ಅಭಯ.

ರಾಜಕೋಟೆ ಸಮಸ್ಯೆಯನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಮಾನಕ್ಕೆ ಸಲ್ಲಿಸಲ್ಪಟ್ಟಿತ್ತು. ಈಗ ನ್ಯಾಯಾಧೀಶರು ಆ ವಿಚಾರದ ಠಾಕೋರ್ ಸಾಹೇಬರ ಜಾಹೀರನಾಮೆಗೂ ನಂತರ ಬರೆದ ಪತ್ರಗಳಿಗೂ ವ್ಯತ್ಯಾಸವಿರುವದೆಂದೂ, ಠಾಕೋರು ಸಾಹೇಬರು ವಲ್ಲಭಭಾಯಿ ಪಟೇಲರು ಸೂಚಿಸುವವರನ್ನು ಸುಧಾರಣಾ ಕಮಿಟಿಯಲ್ಲಿ ಸೇರಿಸುವೆನೆಂದು ಭರವಸೆಕೊಟ್ಟು ನಂತರ ಅದನ್ನು ಬದಿಗೊತ್ತಲು ಅಧಿಕಾರವಿಲ್ಲವೆಂದೂ, ಸರ್ದಾರ ಪಟೇಲರ ಶಿಫಾರಸ್ಸನ್ನು ಪರಿಶೀಲಿಸಿ ವಿಚಾರಿಸುವ ಅಧಿಕಾರ ಠಾಕೋರ ಸಾಹೇಬರಿಗಿದ್ದರೂ ಸಹ ಅವರು ಸೂಚಿಸಿದ ಹೆಸರುಗಳನ್ನು ಸಮಂಜಸ ಕಾರಣ ವಿನಹ ನಿರಾಕರಿಸುವ ಹಕ್ಕು ಅವರಿಗಿಲ್ಲವೆಂದೂ ಠಾಕೋರು ಸಾಹೇಬರ ಹೊಸ ಜಾಹೀರನಾಮೆಯಲ್ಲಿ ಸುಧಾರಣಾ ಕಮಿಟಿಯ ಸದಸ್ಯರ ಸಂಖ್ಯೆಯು ಹತ್ತಕ್ಕೆ ಏರಕೂಡದೆಂದಿರುವದರಿಂದ ಠಾಕೂರ ಸಾಹೇಬರೇ ಈಗ ಹೊರಗಿನಿಂದ ಅವರ ಅಧ್ಯಕ್ಷರನ್ನು ಚುನಾಯಿಸುವ ಘೋಷಣೆ ಮಾಡುವದು ನ್ಯಾಯಬಾಹಿರವಾದದ್ದೆಂದೂ, ಇದರಿಂದ ತಮ್ಮ ಹೇಳಿಕೆಯ ಗೌರವನ್ನೆ ಮುರಿದಂತಾಗಿದೆಯೆಂದೂ, ಠಾಕೋರು ಸಾಹೇಬರು ಕಾರ್ಯಪ್ರವರ್ತರಾಗದ ವಿನಹ ಈ ಕಮಿಟಿಯು ಬೆಳಕಿಗೆ ಬರಲಾರದೆಂದೂ, ಠಾಕೋರುಸಾಹೇಬರು ಬೇರೆಯವರು ಕಮಿಟಿಗೆ ಸೂಚಿಸಿದ ಹೆಸರುಗಳನ್ನು ಅಂಗೀಕರಿಸುವದರಿಂದ ಯಾವ ಅವಮಾನವಾಗಲಾರದೆಂದೂ, ಕಾಂಗ್ರೆಸ್ ಪಕ್ಷವಲ್ಲಿ ಯಾವುದಾದರೂ ತಪ್ಪಿರಬಹುದೋ ಎಂಬ ವಿಚಾರ ಹೇಳಲಾರೆನೆಂದೂ ಪ್ರಕಟಣೆ ಹೊರಡಿಸಿರುವರು. ಅವರ ತೀರ್ಮಾನದ ನಂತರ ಕೊಟ್ಟ ಹೇಳಿಕೆಯು ಈ ರೀತಿ ಇದೆ.

'ಸುಧಾರಣಾ ಕಮಿಟಿಯ ಅಧ್ಯಕ್ಷರ ಚುನಾವಣೆ ವಿಚಾರ ಭಿನ್ನಾಭಿಪ್ರಾಯವಿರುವ ಪ್ರಯುಕ್ತ ನನ್ನ ಅಭಿಪ್ರಾಯದಲ್ಲಿ ಠಾಕೋರ ಸಾಹೇಬರ ಮೊದಲಿನ ಜಾಹೀರಾತಿನಲ್ಲಿ ಸುಧಾರಣಾ ಕಮಿಟಿಯು ಬರೇ ಹತ್ತು ಮಂದಿಯಿಂದ ಕೂಡಿರಬೇಕೆಂದು ನಿಶ್ಚಿತವಾಗಿ ಹೇಳಲ್ಪಟ್ಟಿರುವದರಿಂದ ಹೊರಗಿನವರನ್ನು ಈಗ ಅಧ್ಯಕ್ಷರಾಗಿ ಮಾಡುವದು ಸರಿಯಾದ ವರ್ತನೆಯಾಗದು. ಠಾಕೋರು ಸಾಹೇಬರ ಈ ಮೊದಲಿನ ಪ್ರಕಟಣೆಯ ವಿಚಾರದಲ್ಲಿ ಅವರೇ ಪುನಹ ಹೊರಡಿಸಿದ ಜಾಹೀರಾತುಗಳಿಂದ ನಂಬಿಕೆ ಕಳಕೊಂಡಂತೆಯಾಗಲಿಲ್ಲವೇ ಎಂಬ ವಿಚಾರಕ್ಕೆ ನಾನು ನನ್ನ ಅಭಿಪ್ರಾಯ ಕೊಡಲಾರೆ.

ಈ ಸಂದರ್ಭ ನಾನು ಕೆಲವು ಅಭಿಪ್ರಾಯಗಳನ್ನು ಸೂಚಿಸಿದರೆ ಅದು ಅಪ್ರಸ್ತುತವಾಗಲಾರದೆಂದು ನಂಬಿರುವೆನು. ನಾನು ಈ ಸಮಸ್ಯೆಯ ವಿಚಾರ ನನ್ನ ನಿರ್ಧಾರವನ್ನು ಹೊರಪಡಿಸಲು ಇಕ್ಕಡೆಯ ಕಾರಣಗಳನ್ನು ವಿಮರ್ಶಿಸುವಾಗ ಕ್ಷುಲ್ಲಕ ಕಾರಣಗಳಿಗಾಗಿ ಅಮೋಘ ಸಮಸ್ಯೆಗಳನ್ನು ಹುಟ್ಟಿಸಿಕೊಂಡು ತೊಂದರೆಕೊಡುತ್ತಿದ್ದ ಜನರ ಮಾನಸಿಕ ವಿಕಾರ ಕೆಲವು ವಿಚಾರಗಳಂತೂ ತೀರಾ ಆಧಾರರಹಿತವಾಗಿದ್ದವು. ಇದರಿಂದ ರಾಜಕೋಟೆಯ ವಾತಾವರಣವು ಶಾಂತವಾಗಿಲ್ಲ. ಅಥವ ಇಕ್ಕಡೆಗಳಲ್ಲಿನ ಭೇದ ಭಾವವು ಒಂದಾಗಿಲ್ಲವೆಂಬುದು ವಿಷದವಾಗುತ್ತದೆ. ಆದ್ದರಿಂದ ನಾನು ಆಶಿಸುವದೆಂದರೆ ಸುಧಾರಣಾ ಕಮಿಟಿಯು ನಿರ್ವಿಘ್ನವಾಗಿ ತನ್ನ ಅಮೋಘ ಜವಾಬ್ದಾರಿಕೆಯನ್ನು ಹೊತ್ತು ಕಾರ್ಯರಂಗಕ್ಕೆ ಇಳಿಯುವಾಗ ಶಾಂತ ಹಾಗೂ ವಿಶ್ವಾಸಪೂರಿತ ವಾತಾವರಣದಿಂದ ಜನತೆಯು ಅವರನ್ನು ಆಹ್ವಾನಿಸಬೇಕು. ಪಂಗಡಗಳ ಹಾಗೂ ವ್ಯಕ್ತಿಗಳ ಸ್ವಾತಂತ್ರ್ಯ ಯಾ ಪ್ರತಿಷ್ಠೆಯು ಪ್ರಾಮುಖ್ಯವಾದದ್ದೇ. ಆದರೆ ಇಡೀ ರಾಜಕೋಟೆ ಜನಾಂಗದ ಹಿತದೃಷ್ಟಿಯು ಅವುಗಳಿಗಿಂತ ಪ್ರಾಮುಖ್ಯವಾದದ್ದೆಂದು ಎಲ್ಲರೂ ತಿಳಿಯಬೇಕು.'

ಸರ್ದಾರ ವಲ್ಲಭಭಾಯಿ ಪಟೇಲರ ಶಿಫಾರಸ್ಸುಗಳನ್ನು ಅನಿವಾರ್ಯವಾಗಿ ಠಾಕೋರು ಸಾಹೇಬರು ಅಂಗೀಕರಿಸಬೇಕೋ ಯಾ ಸಂಸ್ಥಾನಾಧೀಶರೆಂಬ ತಮ್ಮ ಅಧಿಕಾರದಿಂದ ಅದನ್ನು ವಿಮರ್ಶಿಸಿ ತಿರಸ್ಕರಿಸಲು ಸಾಧ್ಯವೋ ಎಂಬ ವಿಚಾರ ಅವರ ವಿವರಿಸುತ್ತಾ ಒಮ್ಮೆ ಇಕ್ಕಡೆಯವರೊಳಗೆ ಒಪ್ಪಂದವಾಗಿ ಕೆಲವು ಕರಾರುಗಳನ್ನು ಇಕ್ಕಡೆಯವರೂ ಒಪ್ಪಿ ಹಾಕಿಕೊಂಡಿರುವರು. ಆದರೆ ಠಾಕೋರ್ ಸಾಹೇಬರು ಹೊರಗಿನ ಹೇಳಿಕೆಯ ಪ್ರಭಾವದಿಂದಲೋ ಯಾ ಇನ್ನಾವ ಕಾರಣದಿಂದಲೋ ಅದನ್ನು ಕಡೆಗಣಿಸುವ ಹವ್ಯಾಸಕ್ಕೆ ತೊಡಗಿದ್ದರು. ಆದರೆ ಈಗ ವಿಚಾರಗಳೆಲ್ಲ ಸರಿಹೋಗಿರುವ ಪ್ರಯುಕ್ತ ಸುಧಾರಣ ಕಮಿಟಿಯು ಬೇಗನೆ ನೇಮಕವಾಗಿ ಮುಂದಿನ ಹಿತಕಾರ್ಯಗಳನ್ನು ಕೈಕೊಳ್ಳಲಿ ಎಂದು ಹೇಳಿರುವರು.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಜಯ ನಿಶ್ಚಯ.

ತ್ರಿಪುರಿ ಕಾಂಗ್ರೆಸಿಗೆ ಈಜಿಪ್ಟ್ ದೇಶದಿಂದ ಬಂದಿದ್ದ ವಾಫ್ದ್ ಪಕ್ಷದ ಪ್ರತಿನಿಧಿಗಳು ಈ ವರೆಗೆ ಭಾರತದ ಕೆಲವು ಕಡೆಗಳನ್ನು ಸಂದರ್ಶಿಸಿ ತಮ್ಮ ಮಾತೃಭೂಮಿಗೆ ಹೊರಡುವ ಸಂದರ್ಭದಲ್ಲಿ ಪೂಜ್ಯ ಗಾಂಧಿಜೀಯವರಿಗೆ 'ನಾವು ಹಡಗು ಹತ್ತುವ ಮೊದಲು ಈ ಕೀರ್ತಿಕರ ಪವಿತ್ರ ಭೂಮಿಯಲ್ಲಿಯ ನಮ್ಮ ಈ ಅಲ್ಪ ಸಮಯದ ಇರುವಿಕೆಯಲ್ಲಿ ಪೂಜ್ಯ ಮತ್ತು ದೈವ ಪ್ರೇರಿಪಿತ ಅಖಂಡ ಮುಖಂಡರಾದ ನೀವು ನಮಗೆ ಕೊಟ್ಟ ಆದರ ಆತಿಥ್ಯಕ್ಕಾಗಿ ನಿಮಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇವೆ. ನಿಮ್ಮ ಅಮೋಘ ಮುಂದಾಳುತನದಲ್ಲಿ ಜಯಪ್ರದವಾಗಿ ಅಭಿವೃದ್ಧಿಗೊಳ್ಳುತ್ತಿರುವ ಭಾರತ ರಾಷ್ಟ್ರೀಯ ಚಳವಳವು ಬೇಗನೆ ತನ್ನ ಜಯಪತಾಕೆಯನ್ನು ಭಾರತ ಭಾಗ್ಯಾಕಾಶದಲ್ಲಿ ಹಾರಿಸದರದೆಂಬ ಅವಿಚಲವಾದ ನಂಬಿಕೆಯಿಂದ ನಾವು ಮಾತೃಭೂಮಿಗೆ ಹಿಂದಿರುಗುವೆವು' ಎಂಬ ಸಂದೇಶವನ್ನು ಕಳುಹಿಸಿರುವರು.

ಬಾಬು ಸುಭಾಸರ ಪ್ರಕಟಣೆ.

- ಭಾರತ ಮಾತೆಯಲ್ಲಿ ಅಜರಾಮರವಾದ ನಂಬಿಕೆ.
- ತ್ರಿಪುರಿಯ ಹೃದಯದ್ರಾವಕ ನಡವಳಿಕೆ.

ರಾಷ್ಟ್ರಪತಿ ಸುಭಾಷ ಚಂದ್ರಬೋಸರು ಅವರ ಕಾಯಿಲೆಯ ವಿಚಾರ ಮತ್ತು ವರ್ಧಾದಲ್ಲಿ ಅಧ್ಯಕ್ಷರ ಚುನಾವಣೆಯ ನಂತರ ಕಡೇ ಸಾರಿ ಗಾಂಧೀಜಿಯವರನ್ನು ಕಂಡ ನಂತರ ಕಾಂಗ್ರೆಸಿನಲ್ಲಾದ ಕೋಲಾಹಲದ ವಿಷಯಗಳನ್ನು ವಿವರಿಸಿ 'ಮೋಡರ್ನ್‌ರಿವ್ಯೂ' ಪತ್ರಿಕೆಯಲ್ಲಿ ದೀರ್ಘವಾದ್ದೊಂದು ಲೇಖನವನ್ನು ಬರೆದಿರುವರು.

ಅದಲ್ಲಿ ಶ್ರೀ ಬೋಸರು 'ವರ್ಧಾದಲ್ಲಿ ಕಡೇ ಬಾರಿ ವರ್ಕಿಂಗ್ ಕಮಿಟಿಯು ಸೇರಿದ್ದಾಗ ನಾನು ಅದರಲ್ಲಿ ಭಾಗವಹಿಸಲು ಅಶಕ್ತನಾದ್ದರಿಂದ ಆ ಮೀಟಿಂಗನ್ನು ತ್ರಿಪುರಿ ಅಧಿವೇಶನದ ವರೆಗೆ ಮುಂದರಿಸಬೇಕೆಂದು ಅನ್ನುವಾಗ ವರ್ಕಿಂಗ್ ಕಮಿಟಿಯ ನನ್ನ ಸಹೋದ್ಯೋಗಿಗಳು ರಾಜಿನಾಮೆಯನ್ನೀಯುವರೆಂಬ ಸೂಚನೆಯ ಗಂಧ ಸಹ ಇರಲಿಲ್ಲ. ಆದರೆ ಮೇಲಿನ ನನ್ನ ಸೂಚನೆಯ ವಿಚಾರದಲ್ಲಿ ಅನೇಕ ಕಾಲ್ಪನಿಕ ಸಮಾಚಾರಗಳು ಹೊರಟಿರುವವು. ವರ್ಕಿಂಗ್ ಕಮಿಟಿಯಲ್ಲಿ ಮಾಡುವ ಮಾಮೂಲು ಕೆಲಸವನ್ನು ಸಹ ಮಾಡಕೂಡದೆಂದು ನಾನು ಆಜ್ಞೆ ಮಾಡಿದೆನಾಗಿ ಘೋಷಿಸುವರು. ಆದರೆ ಈ ಸಮಾಚಾರಗಳೆಲ್ಲಾ ಅಡಿಪಾಯವಿಲ್ಲದ ಮನೆಗಳಂತೆ ಆಧಾರರಹಿತವಾದವುಗಳು. ನಾನು ಬರೇ ಕಾಂಗ್ರೆಸ್ ಅಧಿಕಾರವರ್ಗದವರಿಂದೆ ಮಹಾಸಭೆಯಲ್ಲಿ ಪರ್ಯಾಲೋಚನೆಗೆ ಮುಂದಿಡಲ್ಪಡುವ ಠರಾವುಗಳ ವಿಚಾರ ಮಾತ್ರ ಬಹಿರಂಗ ಅಧಿವೇಶನಕ್ಕೆ ದಿನ ಮುಂಚಿತವಾಗಿ ಅವುಗಳನ್ನು ತಯಾರಿಸಬಹುದೆಂದು ಸೂಚಿಸಿದ್ದಾಗಿದೆ. ಅಲ್ಲದೆ ಮೀಟಿಂಗನ್ನು ಮುಂದರಿಸಿಡುವ ಈ ನನ್ನ ಅಭಿಪ್ರಾಯವನ್ನು ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ತಂತಿ ಮುಖಾಂತರ ತಿಳಿಸಿ ಈ ವಿಚಾರದಲ್ಲಿ ಬಾಕಿ ಮೆಂಬರುಗಳ ಅಭಿಪ್ರಾಯವನ್ನು ತಿಳಿಸಲು ಸೂಚಿಸಿದ್ದೆನು. ಆದರೆ ನನ್ನ ಆ ತಂತಿಗೆ ಜವಾಬೆಂದರೆ ಈ ಹನ್ನೆರಡು ಮಂದಿ ಕಾರ್ಯಕರ್ತರ ರಾಜಿನಾಮೆಯ ಸಮಾಚಾರ' ಎಂದಿರುವರು.

ತ್ರಿಪುರಿಗೆ ತಮ್ಮ ಕಠಿನ ಕಾಯಿಲೆಯಲ್ಲಿಯೂ ಸಹ ಹೋದದ್ದೇಕೆ ಎಂಬ ವಿಚಾರ ಅವರು ಬರೆಯುತ್ತಾ, 'ತ್ರಿಪುರಿಯಲ್ಲಿ ಅನೇಕ ತರದ ಕ್ಷುಲ್ಲಕ ಅಭಿಪ್ರಾಯಗಳು ಹರಡಿದ್ದವು. ನನಗೆ ಕಾಯಿಲೆಯಿಲ್ಲವೆಂದೂ, ನನ್ನ ಮೇಲಿನ ಜವಾಬ್ದಾರಿಯನ್ನು ತಪ್ಪಿಸಲು ಈ ನಟನೆಯನ್ನು ನಾನು ಕೈಕೊಂಡಿರುವದಾಗಿಯೂ ಆಡಿಕೊಳ್ಳುವ ಜನರಿದ್ದರು. ಇಂಥಾ ಸಂಶಯಪೂರಿತ ವಾತಾವರಣವಿದ್ದದ್ದರಿಂದ ನಾನು ತ್ರಿಪುರಿಗೆ ನನ್ನ ಪ್ರಾಣದಾನೆಯನ್ನು ಕೊರೆದು ಹೋಗಬೇಕಾಯಿತು. ನನ್ನ ಮನಸ್ಸಿನಲ್ಲಿ ತ್ರಿಪುರಿಯ ಆ ವಾತಾವರಣವು ಅಮೋಘ ಬೇಸರವನ್ನುಂಟುಮಾಡಿತು. ಅಲ್ಲಿಯ ವಿಚಾರಗಳನ್ನು ವಿವೇಚಿಸಿದರೆ ಹೃದಯದ್ರಾವಕವಿರುವದು. ಕಾಂಗ್ರೆಸಿನಲ್ಲಿಯ ನನ್ನ ಈ ಹತ್ತೊಂಭತ್ತು ವರ್ಷಗಳ ಪರಿಶ್ರಮದಲ್ಲಿ ಇಂಥಾ ಮನಸ್ಸಿಗೆ ತಟ್ಟುವ ವಿಚಾರಗಳು ನಡೆದಿಲ್ಲ. ನಾನು ಕಾಯಿಲಸ್ಥನಾಗಿ ಹಾಸಿಗೆಯಲ್ಲಿ ಬಿದ್ದು ಹೊರಳಾಡುತ್ತಿರುವಾಗ ಕಾಂಗ್ರೆಸಿನ ಹೃದಯಕೋಶದಂತಿರುವ ವರ್ಕಿಂಗ್ ಕಮಿಟಿಯಲ್ಲಿಯೇ ಈ ಅಲ್ಲೋಲಕಲ್ಲೋಲವಾದರೆ ಕಾಂಗ್ರೆಸ್ಸಿನ ಮುಂದಿನ ಸ್ಥಿತಿ ಹೇಗಾದೀತು ಎಂಬ ಪ್ರಶ್ನೆಯು ನನ್ನ ಮನೋರಾಜ್ಯದಲ್ಲಿ ಕುದಿಯುತಿತ್ತು. ನನ್ನ ಪ್ರಾಣಪ್ರಿಯವಾದ ಭಾರತ ಮಾತೆಯ ಅರ್ತನಾದಕ್ಕಾಗಿ ನನ್ನ ಮನವು ತಳಮಳಗೊಳ್ಳುತಿತ್ತು. ಹೀಗೆ ಕಲಕಲ್ಪಟ್ಟ ಯೋಚನೆಯಿಂದ ಅನೇಕ ರಾತ್ರಿ ಹಗಲುಗಳು ಉರುಳಿದವು. ಕ್ರಮೇಣ ನನ್ನಲ್ಲಿ ಒಂದು ಹೊಸ ಚೈತನ್ಯವು ತಲೆದೋರಿತು. ನನ್ನ ಮಾನಸಿಕ ಕೋಲಾಹಲವು ಶಾಂತವಾಗತೊಡಗಿತು. ಮಾನವರಲ್ಲಿರುವ ನನ್ನ ನಂಬಿಕೆಯೂ ನನ್ನ ದೇಶೀಯರಲ್ಲಿರುವ ನನ್ನ ಭರವಸೆಯೂ ಅಭಿವೃದ್ಧಿಯಾಗತೊಡಗಿದವು.

ನನಗೆ ಕಾಯಿಲೆಯಲ್ಲಿ ತಾಯಿತ ಯಾ ಮಾಂತ್ರಿಕ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಅನೇಕರ ಸೂಚನೆ ಇತ್ತು. ಆದರೆ ನನಗೆ ಅವುಗಳಲ್ಲಿ ನಂಬಿಕೆ ಇಲ್ಲದ್ದರಿಂದ ನಾನು ಅವುಗಳಿಗೆ ಮನಗೊಡಲಿಲ್ಲ.'

ತಮ್ಮ ಲೇಖನವನ್ನು ವಿರಾಮಗೊಳಿಸುತ್ತಾ ಪೂಜ್ಯ ಬೋಸರು ತನ್ನ ಈಗಿನ ಕಾಯಿಲೆಯಲ್ಲಿ ಅವರ ಹಿತಚಿಂತನೆಯಿಂದ ಶ್ರಮಿಸಿದ ಎಲ್ಲಾ ಸಹಾಯಕರಿಗೆ ತಮ್ಮ ಆಭಾರ ಕೃತಜ್ಞತೆಯನ್ನು ತೋರಿಸಿರುವರಲ್ಲದೆ, ತ್ರಿಪುರಿ ಕಾಂಗ್ರೆಸು ಆಡಿದ ಹಾಗೂ ಮಾಡಿದ ಕಾರ್ಯಗಳೇನೇ ಇದ್ದರೂ ಭಾರತಮಾತೆಯಲ್ಲಿ ಹಾಗೂ ಇಂದಿನ ಈ ಸತ್ಯಾಗ್ರಹದಲ್ಲಿ ಅಜರಾಮರವಾದ ಭಕ್ತಿ ಮತ್ತು ನಂಬಿಕೆಯಿದೆಯೆಂದೂ ಭಾರತದ ಪಾರತಂತ್ರ್ಯ ವಿನಾಶನವೇ ತನ್ನ ಜೀವನದ ಪ್ರಥಮ ಧ್ಯೇಯವೆಂದೂ ಘೋಷಿಸಿರುವರು.

ಕೊಡಗು

ಏಪ್ರಿಲ್ ತಾರೀಕು ೭ ನೇ ಶುಕ್ರವಾರ ೧೯೩೯.

ರಾಜಕೋಟೆ ಒಪ್ಪಂದ.

ರಾಜಕೋಟೆ ಸಂಸ್ಥಾನದ ಅರಸರಿಗೂ, ಅಲ್ಲಿಯ ಪ್ರಜಾಪಕ್ಷದವರಿಗೂ ರಾಜ್ಯಾಡಳಿತೆಯಲ್ಲಿ ಸುಧಾರಣೆಯ ಸಂಬಂಧ ಮಾಡಿದ ಒಪ್ಪಂದದ ವಿವಾದವನ್ನು 'ಕುರಿತು ಪೂಜ್ಯ ಗಾಂಧೀಜಿಯವರು ಕಳೆದ ತಿಂಗಳ ಪ್ರಾರಂಭದಲ್ಲಿ ಕೈಕೊಂಡಿದ್ದ ಉಪವಾಸವ್ರತವು ಜಯಪ್ರದವಾಯಿತು. ಮಹಾತ್ಮರು ಅಪೇಕ್ಷಿಸಿದಂತೆ ಅಲ್ಲಿಯ ಅರಸರು ಆ ಒಪ್ಪಂದದ ಶರತ್ತುಗಳನ್ನು ನಡಿಸಿಕೊಡುವಂತೆ ತೀರ್ಮಾನವಾಗಿದೆ.

ರಾಜಕೋಟೆಯ ಠಾಕೂರ್ ಸಾಹೇಬರಿಗೂ ಅಲ್ಲಿ ಪ್ರಜೆಗಳ ಪರವಾಗಿ ಸರ್ದಾರ ವಲ್ಲಭಭಾಯಿ ಪಟೇಲರಿಗೂ ಆ ದೇಶದ ಸುಧಾರಣೆಯ ಸಂಬಂಧ ಕಳೆದ ಡಿಸೆಂಬರು ತಿಂಗಳಲ್ಲಿ ಆಗಿದ್ದ ಒಪ್ಪಂದದ ಶರತ್ತುಗಳ ಪೈಕಿ 2 ರಲ್ಲಿ ವಿವಾದಕ್ಕೆ ಕಾರಣವುಂಟಾಗಿತ್ತು, ಸುಧಾರಣೆಯನ್ನು ಆಲೋಚಿಸಲು ನೇಮಿಸಲ್ಪಡುವ ಹತ್ತು ಜನರ ಕಮಿಟಿಯಲ್ಲಿ ಮೂರು ಜನರು ಅಲ್ಲಿಯ ಸರ್ಕಾರಿ ನೌಕರರಿರಬೇಕೆಂದೂ, ಉಳಿದ ಏಳು ಜನರ ಹೆಸರನ್ನು ಸರ್ದಾರ್ ಪಟೇಲರುವರ ಶಿಫಾರಸ್ಸು ಮಾಡಬೇಕೆಂತಲೂ, ಈ ಕಮಿಟಿಯ ಮೆಂಬರುಗಳೆಲ್ಲರೂ ಆ ಸಂಸ್ಥಾನದ ಪ್ರಜೆಗಳು ಯಾ, ಸರ್ಕಾರಿ ನೌಕರರು ಆಗಿರಬೇಕೆಂತಲೂ, ಈ ಕಮಿಟಿಗೆ ಅಧ್ಯಕ್ಷರನ್ನು ಠಾಕೂರ್ ಸಾಹೇಬರು ನೇಮಿಸಬೇಕೆಂತಲೂ ಈ ಒಪ್ಪಂದದಲ್ಲಿವೆ. ಪಟೇಲರವರಿಗೆ ಏಳು ಮೆಂಬರುಗಳ ಹೆಸರನ್ನು ಶಿಫಾರಸ್ಸು ಮಾಡುವ ಅಧಿಕಾರ ಕೊಡಲ್ಪಟ್ಟಿದೆಯೇ ವಿನಹ ಅವರ ಶಿಫಾರಸ್ಸಿನ ಹೆಸರುಗಳನ್ನೇ ಠಾಕೋರು ಸಾಹೇಬರು ಒಪ್ಪಿಕೊಳ್ಳಬೇಕೆಂದಿಲ್ಲವೆಂತಲೂ ಕಮಿಟಿಯ ಸದಸ್ಯರನ್ನು ನೇಮಿಸುವ ಅಧಿಕಾರವು ಠಾಕೋರು ಸಾಹೇಬರರಿಗಿದೆಯೆಂತಲೂ, ಅಲ್ಲದೆ ಈ ಕಮಿಟಿಗೆ ಹತ್ತು ಮೆಂಬರುಗಳ ವಿನಹ ಒಬ್ಬ ಅಧ್ಯಕ್ಷರನ್ನು ನೇಮಿಸುವ ಅಧಿಕಾರ ತನಗಿದೆಯೆಂತಲೂ ಠಾಕೋರ್ ಸಾಹೇಬರ ವಾದವಾಗಿತ್ತು. ತಾನು ಶಿಫಾರಸು ಮಾಡುವ ಏಳು ಜನರನ್ನೆ ಠಾಕೋರ್ ಸಾಹೇಬರು ಕಮಿಟಿಗೆ ನೇಮಿಸಬೇಕೆಂತಲೂ, ಅವುಗಳನ್ನು ಬದಲಾಯಿಸುವ ಅಧಿಕಾರ ಅವರಿಗಿಲ್ಲವೆಂತಲೂ ಕಮಿಟಿಯ ಹತ್ತು ಮೆಂಬರುಗಳ ಪೈಕಿ ಒಬ್ಬರನ್ನೇ ಅವರ ಅಧ್ಯಕ್ಷರಾಗಿ ನೇಮಿಸಬೇಕೆಂತಲೂ ಪಟೇಲರವರ ವಾದವಾಗಿತ್ತು. ಈ ತರದ ಭಿನ್ನಾಭಿಪ್ರಾಯವುಂಟಾದ ಕಾರಣ ಅಲ್ಲಿಯ ಪ್ರಜಾಪಕ್ಷದವರು ಪುನಹ ಸತ್ಯಾಗ್ರಹವನ್ನು ಹೂಡಬೇಕಾಯಿತು. ಮಹಾತ್ಮ ಗಾಂಧೀಯವರ ಮತ್ತು ಅವರ ಪತ್ನಿಯವರ ಜನ್ಮಸ್ಥಳವಾದ ಈ ಸಂಸ್ಥಾನದಲ್ಲಿ ವಾಯಿದೆ ಭಂಗ ಚಳವಳದಿಂದ ಉಂಟಾದ ಕಷ್ಟ ನಷ್ಟಗಳನ್ನು ಕೇಳಿ ಮಹಾತ್ಮರು ತಾನೇ ಅಲ್ಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿದರು. ಠಾಕೋರ್ ಸಾಹೇಬರವರ ವಾದದಲ್ಲಿ ಹುರುಳಿಲ್ಲವೆಂತಲೂ, ಅವರು ರುಜು ಮಾಡಿದಂತಹ ಒಪ್ಪಂದವನ್ನು ನಡಿಸಿಕೊಡುವುದು ಅವರ ಕರ್ತವ್ಯವೆಂತಲೂ ಮಹಾತ್ಮ ಗಾಂಧಿಯವರನ್ನು ಅವರನ್ನು ಕೇಳಿಕೊಂಡರು. ಆದರೆ ಠಾಕೋರ್ ಸಾಹೇಬರು ಅದಕ್ಕೆ ಒಪ್ಪದ ಕಾರಣ ಅವರು ಅದನ್ನು ನಡಿಸಿಕೊಡುವವರೆಗೆ ಅಥವ ತನ್ನ ಪ್ರಾಣಾಂತ್ಯದ ವರೆಗೆ ಮಹಾತ್ಮರು ಉಪವಾಸವ್ರತವನ್ನು ಕೈಕೊಂಡದ್ದೂ, ಈ ಸಂಬಂಧ ಇಡೀ ಹಿಂದೂ ದೇಶ ತಳಮಳಗೊಂಡದ್ದೂ ಕಡೆಗೆ ವೈಸರಾಯರು ಈ ವಿಚಾರಕ್ಕೆ ಕೈ ಹಾಕಿ ಇಂಡಿಯಾದ ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಸರ್ ಮಾರಿಸ್ ಗ್ವಾಯರ್‌ರವರು ಕೊಡುವ ತೀರ್ಮಾನವನ್ನು ನಡೆಸಿಕೊಡುವಂತೆ ವೈಸರಾಯರು ಭರವಸೆ ಕೊಟ್ಟ ಮೇಲೆ ಮಹಾತ್ಮರು ಅದಕ್ಕೆ ಒಪ್ಪಿ ತನ್ನ ನಿರಶನವ್ರತವನ್ನು ಅಂತ್ಯಗೊಳಿಸಿದ್ದೂ, ಎಲ್ಲರಿಗೂ ತಿಳಿದ ವಿಷಯವಾಗಿದೆ. ಅದರಂತೆಯೇ ಸರ್ ಮಾರಿಸರವರು ತನ್ನ ತೀರ್ಮಾನವನ್ನು ಈಗ ಪ್ರಕಟಿಸಿರುವರು. ಅವರ ಈ ತೀರ್ಮಾನವು ಪಟೇಲರವರ ಹಾಗೂ ಮಹಾತ್ಮರ ವಾದವನ್ನೇ ಸಂಪೂರ್ಣ ಸಮರ್ಥಿಸಿದೆ. ಸರ್ದಾರ್ ಪಟೇಲರವರು ಠಾಕೋರ್ ಸಾಹೇಬರಿಗೆ ಕಳುಹಿಸಿದ ಕರಡು ಒಪ್ಪಂದದ ಶಬ್ದಗಳಿಗೂ, ಠಾಕೂರು ಸಾಹೇಬರು ಪ್ರಕಟಿಸಿದ ಒಪ್ಪಂದದ ಶಬ್ದಗಳಿಗೂ ಸ್ವಲ್ಪ ವ್ಯತ್ಯಾಸವಿದ್ದರೂ ಕೂಡ ಹತ್ತು ಮೆಂಬರುಗಳ ಪೈಕಿ ಪಟೇಲರವರು ಶಿಫಾರಸ್ಸು ಮಾಡುವ ಏಳು ಜನರನ್ನೇ ಠಾಕೂರ್ ಸಾಹೇಬರವರು ನೇಮಿಸಬೇಕೆಂಬುವುದು ಒಪ್ಪಂದದಲ್ಲಿ ಸ್ಪಷ್ಟವಾಗಿದೆ; ಆ ಹೆಸರುಗಳನ್ನು ಬದಲಾಯಿಸಬೇಕೆಂದು ಅವರು ಪಟೇಲರವರನ್ನು ಕೇಳಿಕೊಳ್ಳಬಹುದಲ್ಲದೆ ಅವುಗಳನ್ನು ತಿರಸ್ಕರಿಸುವ ಅಥವಾ ತಾನಾಗಿ ಬದಲಾಯಿಸುವ ಅಧಿಕಾರವು ಠಾಕೋರ್ ಸಾಹೇಬರಿಗಿಲ್ಲವೆಂತಲೂ, ಕಮಿಟಿಯ ಮೆಂಬರುಗಳ ಸಂಖ್ಯೆಯು ಹತ್ತು ಆಗಿರಬೇಕೆಂದು ಒಪ್ಪಂದದಲ್ಲಿರುವ ಕಾರಣ ಅದರ ಅಧ್ಯಕ್ಷರನ್ನಾಗಿ ಈ ಹತ್ತು ಮೆಂಬರುಗಳ ಪೈಕಿ ಒಬ್ಬರನ್ನು ನೇಮಿಸಬೇಕಲ್ಲದೆ ಹೊರಗಿನವರನ್ನು ನೇಮಿಸುವ ಅಧಿಕಾರವು ಠಾಕೋರ್ ಸಾಹೇಬರಿಗಿಲ್ಲವೆಂತಲೂ ಸರ್ ಮಾರಿಸರವರು ಕೊಟ್ಟ ತೀರ್ಮಾನವು ನ್ಯಾಯಸಮ್ಮತವಾಗಿದೆ. ಒಬ್ಬ ಹಿಂದೀ ರಾಜರಿಗೂ, ಅಲ್ಲಿಯ ಪ್ರಜೆಗಳಿಗೂ ಉಂಟಾದ ಒಂದು ಒಪ್ಪಂದದ ತಕರಾರಿನ ತೀರ್ಮಾನವನ್ನು ಒಬ್ಬ ಬ್ರಿಟಿಷ್ ಆಫೀಸರಿಗೆ ಮಹಾತ್ಮರು ಬಿಟ್ಟದ್ದು ಹಲವರಿಗೆ ಆಶ್ಚರ್ಯವನ್ನುಂಟುಮಾಡಿತ್ತು. ಸಾಧಾರಣವಾಗಿ ಸಂಸ್ಥಾನಗಳ ಅರಸರುಗಳಿಗೆ ಒತ್ತಾಸೆಯನ್ನೀಯುತ್ತಿರುವ ಬ್ರಿಟಿಷ್ ಉದ್ಯೋಗಸ್ಥರು ಪ್ರಜೆಗಳಿಗೆ ಹಿತಕರವಾದ ತೀರ್ಮಾನವನ್ನು ಕೊಡುವರೋ ಎಂಬ ಸಂಶಯವು ಕೆಲವರಲ್ಲಿ ತಲೆದೋರಿತ್ತು. ಆದರೆ ಸರ್ ಮಾರಿಸರವರ ತೀರ್ಮಾನವು ಮಹಾತ್ಮರು ಅವರ ನ್ಯಾಯಶೀಲತೆ ಮೇರೆ ಇಟ್ಟಂಥ ಭರವಸೆಯನ್ನು ಸಲ್ಲಿಸಿದೆ. ಈ ತೀರ್ಮಾನವು ಹಿಂದೂ ದೇಶದ ದೇಶೀಯರಿಗೆಲ್ಲಾ ತೃಪ್ತಿಯನ್ನುಂಟುಮಾಡದಿರದು. ಅಷ್ಟು ಮಾತ್ರವಲ್ಲ; ಗ್ವಾಯರ್‌ರವರು ತನ್ನ ತೀರ್ಮಾನದ ಅಂತ್ಯದಲ್ಲಿ ಮುಂದೆ ನೇಮಿಸಲ್ಪಡುವ ಈ ಕಮಿಟಿಯವರು ಒಪ್ಪಂದಕ್ಕೆ ರುಜು ಮಾಡಿದ ಎರಡು ಪಕ್ಷಗಳ ಗೌರವವನ್ನು ಮಾತ್ರ ಎಣಿಸದೆ ರಾಜಕೋಟೆಯ ಪ್ರಜಾಸಮೂಹದ ಹಿತವನ್ನು ಬಯಸಿ ಪರಸ್ಪರ ದ್ವೇಷಾಸೂಯೆಗಳನ್ನು ಬಿಟ್ಟು ತಮ್ಮ ಕಾರ್ಯವನ್ನು ನಡೆಸಬೇಕೆಂದು ವಿನಂತಿಮಾಡಿಕೊಂಡಿರುವರು. ಈ ಯೋಗ್ಯವಾದ ಸಲಹೆಯನ್ನು ಕಮಿಟಿಯ ಮೆಂಬರುಗಳು ಮನವರಿಕೆಮಾಡಿಕೊಂಡು ಅಲ್ಲಿಯ ಪ್ರಜೆಗಳ ಅಭಿವೃದ್ಧಿಯ ದೃಷ್ಟಿಯಿಂದ ತಮ್ಮ ವರದಿಯನ್ನು ತಯಾರಿಸುವರಾಗಿ ನಂಬುತ್ತೇವೆ. ಮಹಾತ್ಮರ ಉಪವಾಸದ ಈ ಅದ್ವಿತೀಯ ಜಯವು ಭಾರತ ಭೂಮಿಯ ಆಶ್ರಿತ ಸಂಸ್ಥಾನಗಳ ರಾಜ್ಯಾಡಳಿತದ ವಿಚಾರದಲ್ಲಿ ಮುಖ್ಯವಾದ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಿದಂತಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಉಡುಪಿ, ಲಿಮಿಟೆಡ್.

ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿನ 37–38ನೇ ವರ್ಷದ ವಾರ್ಷಿಕ ವರದಿಯನ್ನು ಆದರದಿಂದ ಸ್ವೀಕರಿಸುವೆವು. ಈ ವರದಿಯು ಸರ್ವವಿಧದಿಂದಲೂ ಬ್ಯಾಂಕಿನ ಉತ್ತಮ ಸ್ಥಿತಿಯನ್ನು ಜನತೆಯ ಮುಂದಿಡುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಕೆಲವಂಶಗಳನ್ನು ಈ ಕೆಳಗೆ ಕೊಟ್ಟು ಉದಾಹರಿಸುವೆವು. ಬ್ಯಾಂಕಿನ ಕ್ಷೇಮನಿಧಿಯು 3,10,000 ರೂಪಾಯಿ ಇರುತ್ತದೆ. ಸಂಶಯಾಸ್ಪದದ ಸಾಲವನ್ನು ಸಮುಗಟ್ಟಲು ಇಟ್ಟ ಹಣ ಸೇರಿಸಿದರೆ ರೂ. 3,90,000 ಆಗುವದು. ಇದು ಬ್ಯಾಂಕಿನ ಭದ್ರತೆಯನ್ನು ತೋರಿಸುತ್ತದೆ. ಕ್ಷೇಮನಿಧಿ ಹಣವು ಪಾವತಿಯಾಗಬೇಕಾದ(ಪೈಯಿಡ ಆಫ್)ಮೊಬಲ(3,03,415)ಗಿಂತ ಹೆಚ್ಚಿರುವದು. ಇಂಥಾ ಶುಭ ಚಿಹ್ನೆಯು ಕೆಲವೇ ಬ್ಯಾಂಕುಗಳಲ್ಲಿರುವದೆಂದು ಹೇಳಬಹುದು. ಈ ವರ್ಷ ಬ್ಯಾಂಕಿಗೆ ರೂ. 38,078–11–5 ಲಾಭವಿರುತ್ತೆ. ಇದರಲ್ಲಿ ಶೇಕಡ 10ರಂತೆ ಬೋನಸು ಹಂಚಲು ತೀರ್ಮಾನಿಸಿರುವರು. ಇದರಿಂದ ಶೇರುದಾರರಿಗೆ ಆನಂದವೆನಿಸದಿರದು. ಅಲ್ಲದೆ ಈ ವರ್ಷದ ಮಹಾ ಸಭೆ ಮೀಟಿಂಗಿನಲ್ಲಿ 'ಈ ವರ್ಷದ ಸಾರ್ವಜನಿಕ ಆರ್ಥಿಕ ಅಡಚಣೆಯಿಂದಾಗಿ ಬ್ಯಾಂಕಿಗಾದಹಣದ ಬಿಕ್ಕಟ್ಟಿನಲ್ಲೂ ಸಹ ಬ್ಯಾಂಕಿನ ಡೈರೆಕ್ಟರುಗಳು ತಮ್ಮ ಕಾರ್ಯದಕ್ಷತೆಯಿಂದ ಬ್ಯಾಂಕಿನ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಅವರನ್ನು ಶೇರುದಾರರ ಈ ಸಭೆಯು ಅಭಿನಂದಿಸುತ್ತದೆ' ಎಂಬ ಠರಾವನ್ನು ಪಾಸು ಮಾಡಿದ್ದನ್ನು ನೋಡಿದರೆ ಬ್ಯಾಂಕಿನ ಕಾರ್ಯ ಕಲಾಪಗಳ ಬಗ್ಗೆ ಪಾಲುದಾರರಿಗೆ ಎಷ್ಟರ ಮಟ್ಟಿನ ಸಂತೋಷವಿದೆಯೆಂಬುವುದು ವ್ಯಕ್ತವಾಗುತ್ತದೆ. ಹೆಚ್ಚೇಕೆ? ಬ್ಯಾಂಕು ದಿನೇ ದಿನೇ ಜನಾದರಣೆಗೆ ಪಾತ್ರವಾಗಿ ಅಭಿವೃದ್ಧಿಗೊಳ್ಳುತ್ತಿರುವದೆಂದು ಅದರ ವರದಿಯಿಂದ ವ್ಯಕ್ತವಾಗುತ್ತದೆ. ಹೀಗೆಯೇ ಜನತೆಯ ಕೃಪೆಗೆ ಪಾತ್ರವಾಗಿ ಅವಿಚಲವಾದ ಕೀರ್ತಿಯನ್ನು ಪಡೆದು ಬ್ಯಾಂಕುಗಳ ಸಮೂಹದಲ್ಲಿ ಅಗ್ರಸ್ಥಾನವನ್ನು ಪಡೆದು ಶೋಭಿಸಲಿ ಎಂಬುವುದೇ ನಮ್ಮ ಹಿರಿಯಾಸೆ.

ರಾಜಕೋಟೆ.

ಮಹಾತ್ಮ ಗಾಂಧೀಕಿ ಜೈ.

ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಸರ್ ಮಾರಿಸ್ ಗ್ವಾಯರ್‌ರವರು ರಾಜಕೋಟೆ ಸಮಸ್ಯೆಯ ಬಗ್ಗೆ ಕೊಟ್ಟ ಹೇಳಿಕೆಯು ಗಾಂಧೀಯವರ ಧ್ಯೇಯವನ್ನು ಪೂರ್ಣ ಜಯಪ್ರದವನ್ನಾಗಿ ಮಾಡಿದೆ. ಸರ್ದಾರ ವಲ್ಲಭಭಾಯಿ ಪಟೇಲ್, ಮಹದೇವದೇಸಾಯಿ ಮತ್ತು ಸರೋಜಿನಿ ನಾಯಡುರವರು ನ್ಯಾಯಾಧೀಶರ ಹೇಳಿಕೆಯು ತಿಳಿದು ಬಂದ ಮೇಲೆ ಗಾಂಧೀಜಿಯವರ ಭೇಟಿ ತೆಗೆದುಕೊಂಡರು. ಈ ಸಮಸ್ಯೆಯ ವಿಚಾರದಲ್ಲಿ ಗಾಂಧಿಯವರ ಅಭಿಪ್ರಾಯವೇನೆಂದು ಪತ್ರಿಕಾಪ್ರತಿನಿಧಿಗಳು ಸರೋಜಿನಿನಾಯುಡುರವರನ್ನು ಕೇಳುವಾಗ 'ಮಹಾತ್ಮ ಗಾಂಧೀಕಿ ಜೈ' ಎಂಬ ಉತ್ತರವನ್ನು ಕೊಟ್ಟರಂತೆ. ಗಾಂಧಿಜೀಯವರು ತಾರೀಕು 4 ರಲ್ಲಿ ವೈಸರಾಯರ ಸಂದರ್ಶನಕ್ಕೆ ಹೋಗಿದ್ದರು. ಅವರ ಚರ್ಚಾ ವಿಷಯವು ರಾಜಕೋಟೆ ಸಮಸ್ಯೆಯ ಬಗ್ಗೆ ನ್ಯಾಯಾಧೀಶರ ಪ್ರಕಟಣೆಯೇ ಆಗಿದ್ದಿರಬೇಕೆಂದು ಊಹಿಸಲಾಗಿದೆ. ಗಾಂಧಿಜೀಯವರು ರಾಜಕೋಟೆ ಕಾಂಗ್ರೆಸ್ಸಿನ ಮುಖಂಡರಾದ ಶ್ರೀ ದೇಬಾರರಿಗೆ, 'ನಮ್ಮ ಧ್ಯೇಯವು ನ್ಯಾಯಾಧೀಶರ ಪ್ರಕಟಣೆಯಿಂದ ಜಯಪ್ರದವಾಗಿದೆ' ಎಂದು ತಂತಿ ಮಾಡಿರುವರು. ಈ ವಿಚಾರವು ರಾಜಕೋಟೆಗೆ ತಲಪಿದೊಡನೆ ನಿಮಿಷದಲ್ಲಿ ಜನತೆಯು ಉತ್ಸಾಹದಿಂದ ವಿಚಾರವನ್ನು ಅರಿಯಲು ಕಿಕ್ಕಿರಿದು ನೆರೆದಿತ್ತು. ಆ ಜನರ ಉತ್ಸಾಹ, ಅವರ ಶಿಸ್ತು, ಆಕೋಲಾಹಲ, ಎಲ್ಲವೂ ನವಚೈತನ್ಯದಿಂದ ಕೂಡಿತ್ತು. ಗಾಂಧೀಯವರು ಡೆಲ್ಲಿಯಲ್ಲಿಯೇ ಕೆಲವು ದಿನ ಇರುವರಾಗಿ ತಿಳಿದು ಬರುತ್ತದೆ.

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಫೆಬ್ರವರಿ ತಿಂಗಳಲ್ಲಿ ಕೊಡಗಿನಲ್ಲಿ 283 ಜನನಗಳೂ 290 ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ಕೊಡಗು ಗೌಡವಿದ್ಯಾಸಂಘದ ವಾರ್ಷಿಕ ಸಭೆಯು ತಾರೀಕು 10-4-39 ರಲ್ಲಿ ಕಟ್ಟೆಮಾಡು ಗ್ರಾಮದಲ್ಲಿ ಶ್ರೀ ನಿಡ್ಯಮಲೆ ಮುದ್ದಪ್ಪ ಬಿ. ಎ., ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 108 ಯೂಲಕ್ಕಿ ಮಣಕ್ಕೆ ರೂ. 25 ಕ್ರಯವಿರುತ್ತೆ.

ಕೋರ್ಟು ಖಚೇರಿಗಳು ಈಸ್ಟರ್ ರಜಾಕ್ಕಾಗಿ ತಾರೀಕು 5 ರಿಂದ 11 ರ ವರೆಗೂ, ಇಲ್ಲಿಯ ಹುಡುಗಿಯರ ಹೈಸ್ಕೂಲು ತಾ. 4 ರಿಂದ 14 ರ ವರೆಗೂ ಮುಚ್ಚಲ್ಪಟ್ಟಿವೆ.

ಸಿವಿಲ್ ಸರ್ಜನರ ಆಫೀಸಿನ ಹೆಡ್ ಕ್ಲಾರ್ಕರಾದ ಶ್ರೀ ಪುರುಷೋತ್ತಮ ಮೊದಲಿಯಾರರನ್ನು ಕೆಲಸದಿಂದ ನಿವೃತ್ತಿಮಾಡಿ ಅವರ ಬದಲು ಶ್ರೀ ಕೊರವಂಡ ಸುಬ್ಬಯ್ಯನವರನ್ನು ನೇಮಿಸಿರುವರು.

ಕಾಟಕೇರಿ ಗ್ರಾಮದ ಎರಡು ವರ್ಷಕ್ಕೊಮ್ಮೆ ನಡೆಯುವ ದೇವರ (ಕೊಂಬಾಟ್) ಹಬ್ಬವು ಈ ವರ್ಷ ಇದೇ ಏಪ್ರಿಲ್ ತಾ. 4 ರಿಂದ ಪ್ರಾರಂಭವಾಗಿದೆ. ಇದರ ದೊಡ್ಡ ಹಬ್ಬವು ತಾ. 11 ನೇ ಮಂಗಳವಾರದಿಂದ 13 ನೇ ಗುರುವಾರದ ವರೆಗೆ ನಡೆಯುವದೆಂದು ತಿಳಿಯುತ್ತೇವೆ.

ಇಲ್ಲಿಯ ತಾಲೋಕು ಕಾಂಗ್ರೆಸು ಕಮಿಟಿಯವರು ರಾಷ್ಟ್ರೀಯ ಸಪ್ತಾಹವನ್ನು ತಾ. 8 ರಲ್ಲಿ ಇಲ್ಲೂ, (ಪ್ರಭಾತಭೇರಿ, ಬೆಳಿಗ್ಗೆ 6-30 ಗಂಟೆಗೆ, ಸಭೆ ಸಾಯಂಕಾಲ 5-30 ಗಂಟೆಗೆ) ತಾ. 9 ರಲ್ಲಿ ಸುಂಟಿಕೊಪ್ಪದಲ್ಲೂ ಮತ್ತು ತಾ. 13 ರಲ್ಲಿ ಮೂರ್ನಾಡಿನಲ್ಲೂ ಆಚರಿಸುವರಾಗಿ ತಿಳಿಯುತ್ತೇವೆ.

ಚೀಫ್ ಕಮಿಷನರವರು ಈ ತಾರೀಕು 10 ರಲ್ಲಿ ಕೊಡಗಿಗೆ ಬಂದು ಇಲ್ಲಿ ಸುಮಾರು ಎರಡು ವಾರಗಳ ವರೆಗೆ ಇರುವರೆಂದು ಸುದ್ದಿ.

ಬೇಸಿಗೆ ಕಾಲದ ರಜೆಗಾಗಿ ಕೊಡಗಿನ ಸಿವಿಲ್ ಕೋರ್ಟುಗಳು ಈ ತಾ. 17 ರಿಂದ ಮೇ ತಾ. 28 ವರೆಗೂ, ಕೊಡಗಿನ ಜುಡಿಷ್ಯಲ್ ಕಮಿಷನರವರ ಕೋರ್ಟು ಈ ತಾ. 17 ರಿಂದ ಜೂನ್ ತಾ. 16 ರ ವರೆಗೂ ಮುಚ್ಚಲ್ಪಡುವವು.

ಅಮ್ಮತ್ತಿ.

ಇಲ್ಲಿಯ ಕಾವಾಡಿ ಗ್ರಾಮದ ಶ್ರೀ ಭಗವತಿ ದೇವರ ಉತ್ಸವವು ಈ ತಾ. 11 ಮತ್ತು 12 ರಲ್ಲು ನಡೆಯುವದಾಗಿ ತಿಳಿಯುತ್ತೇವೆ.

ಶ್ರೀ ಪಾಲೇಕಂಡ ಪೊವಯ್ಯನವರ ಅಧ್ಯಕ್ಷತೆಯಲ್ಲಿ, ವೀರಾಜಪೇಟೆ ತಾ. ಕಾ. ಕಮಿಟಿಯ ಆಶ್ರಯದಲ್ಲಿ ಇಲ್ಲಿ ಒಂದು ಸಾರ್ವಜನಿಕ ಸಭೆ ಸೇರಿದು ಶ್ರೀ ಪಿ. ಐ. ಬೆಳ್ಯಪ್ಪನವರು ತ್ರಿಪುರಿ ಅಧಿವೇಶನದ ವಿಚಾರವಾಗಿಯೂ, ಶ್ರೀ ಗಳಾದ ಕೊಳ್ಳಿಮಾಡ ಸಿ. ಕರುಂಬಯ್ಯ, ಬಿದ್ದಂಡ ಯಂ. ಕಾರ್ಯಪ್ಪ, ಐನಂಡ ಕಾರ್ಯಪ್ಪನವರುಗಳು ಕೌನ್ಸಿಲು ಸಭಾತ್ಯಾಗದ ವಿಷಯವಾಗಿಯೂ ಭಾಷಣ ಮಾಡಿದರಲ್ಲದೆ ಕೆಲವು ಠರಾವುಗಳೂ ಅಂಗೀಕೃತವಾದವು.

ವೀರಾಜಪೇಟೆ.

ಕೊಡಗು ಜಮೀನ್ದಾರರ ಸಂಘದ ಕಮಿಟಿ ಮೀಟಿಂಗೊಂದು ಈ ತಾ. 11 ರಲ್ಲಿ ಇಲ್ಲಿ ನಡೆಯುವುದು.

ಎಡೆನಾಲ್ಕುನಾಡು ತಾಲೋಕು ಕಾಂಗ್ರೆಸು ಮೆಂಬರುಗಳ ವಾರ್ಷಿಕ ಜನರಲ್ ಮೀಟಿಂಗು ಈ ತಾ. 6 ರಲ್ಲಿ ವೀರಾಜಪೇಟೆಯಲ್ಲಿ ಶ್ರೀಮಾನ್ ಐನಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೂರ್ನಾಡು.

ಮುತ್ತಾರುಮುಡಿ ಗ್ರಾಮದ ಕೆಂಬಡತಂಡ ಮನೆಯಲ್ಲಿದ್ದ ಮರಗೋಡು ಗ್ರಾಮದ ಶ್ರೀ ಪಚ್ಚರಂಡ ಮುತ್ತಣ್ಣನೆಂಬವರು ಈ ತಾ. 3 ನೇ ಸೋಮವಾರ ಬೆಳಿಗ್ಗೆ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಿರುವರೆಂದೂ, ಕಾರಣವು ಇನ್ನೂ ತಿಳಿದು ಬಂದಿಲ್ಲವೆಂದೂ, ಪೊಲೀಸಿನವರ ತನಿಖೆಯು ನಡೆಯುತ್ತಿರುವದಾಗಿಯೂ ವರ್ತಮಾನ.

ಗಜೆಟ್.

ಕೊಡಗಿನ ಟೆಕ್ಸ್ಟ್ ಬುಕ್ ಕಮಿಟಿಯ ಪ್ರಥಮ ಮೀಟಿಂಗು ಈ ತಾ. 15 ರಲ್ಲಿ ಮಡಿಕೇರಿಯಲ್ಲಿ ನಡೆಯುವುದು.

ಮಾರ್ಚಿ 1 ರಿಂದ ಮುಂದಿನ ಆರ್ಡರಿನ ವರೆಗೆ ಭೂಮಿ ರೂಪಿತಕ್ಕಾಗಿ ಮತ್ತು ವ್ಯವಸಾಯಕ್ಕಾಗಿ ಸರಕಾರದಿಂದ ಕೊಡಲ್ಪಡುವ ಸಾಲಗಳ ಬಡ್ಡಿಯು ಶೇಕಡ ವಾರ್ಷಿಕ ರೂ. 5½ ಯಂತೆಯೂ, ಕಷ್ಟ ಅಥವ ಇತರ ವಿಪತ್ತುಗಳಲ್ಲಿ ಕೊಡುವ ಸಾಲದ ಬಡ್ಡಿಯೂ ಶೇಕಡ ರೂ. 3 ರಂತೆಯೂ ವ್ಯವಸಾಯಗಾರರ ಸಾಲನಿವಾರಣೆಗಾಗಿ ಕೊಡುವ ಹಣಕ್ಕೆ ಶೇಕಡ 6¼ ರ ದರದಲ್ಲಿಯೂ ಬಡ್ಡಿ ವಿಧಿಸುವರು.

ಕೊಡಗಿನ ಸೆಕೆಂಡರಿ ಮತ್ತು ಎಲಿಮೆಂಟರಿ ಶಾಲೆಗಳ ಪಠ್ಯಪುಸ್ತಕಗಳನ್ನು ಆರಿಸಲಿಕ್ಕಾಗಿ ಈ ಕೆಳಗಿನ ಸದಸ್ಯರುಗಳಿಂದ ಕೂಡಿದ 'ಟೆಕ್ಸ್ಟ್ ಬುಕ್' ಕಮಿಟಿಯು ನೇಮಿಸಲ್ಪಟ್ಟಿದೆ 1. ಕೊಡಗು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರು (ಪ್ರೆಸಿಡೆಂಟರು) 2. ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರು, 3. ಮಡಿಕೇರಿ ಮುನ್ಸಿಪಾಲಿಟಿಯ ಅಧ್ಯಕ್ಷರು, 4. ವೀರಾಜಪೇಟೆ ಮುನ್ಸಿಪಾಲಿಟಿಯ ಅಧ್ಯಕ್ಷರು, 5. ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮಾಸ್ಟರು, 6. ವೀರಾಜಪೇಟೆ ಹೈಸ್ಕೂಲಿನ ಹೆಡ್ ಮಾಸ್ಟರು, ಮತ್ತು 7. ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಹೆಡ್ ಮಿಸ್ಟ್ರೆಸ್‌ರವರು.

ಹಿಂದೂದೇಶ.

ಲಾಹೋರಿನ ರೈತರ ಸತ್ಯಾಗ್ರಹವು ನಡೆಯುತ್ತಲೇ ಇದೆ. ಇದು ವರೆಗೆ, 350 ಮಂದಿಯು ಕೈದು ಮಾಡಲ್ಪಟ್ಟಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗು ಈ ತಾ. 28 ರಲ್ಲಿ ಕಲ್ಕತ್ತಾದಲ್ಲಿ ಜರಗುವದು.

ಗಡಿನಾಡಿನ ಸರಕಾರವು ತನ್ನ ಪ್ರಾಂತ್ಯದಲ್ಲಿ ಸಂಪೂರ್ಣ ಪಾನನಿಷೇಧ ಕಾನೂನನ್ನು ಜಾರಿಯಲ್ಲಿ ತರಲು ನಿರ್ಧರಿಸಿದೆ.

ಹ್ಯಾಮಿಲ್ಟನ್ ಸತ್ಯಾಗ್ರಹವು ಶ್ರೀ ತಗಡೂರು ರಾಮಚಂದ್ರರಾಯರ ಹೇಳಿಕೆಯ ಮೇರೆ ಸಧ್ಯಃ ನಿಲ್ಲಿಸಲ್ಪಟ್ಟಿದೆಯೆಂದು ತಿಳಿಯಬರುತ್ತದೆ.

ಔಂಧ ಸಂಸ್ಥಾನದಲ್ಲಿ ನಿರಕ್ಷರ ಕುಕ್ಷಿಗಳ ಅಕ್ಷರಾಭ್ಯಾಸ ಕಾರ್ಯವು ಆರಂಭವಾದ 2 ತಿಂಗಳಲ್ಲಿ ಶೇ. 50 ರಷ್ಟು ಹೆಚ್ಚು ಮಂದಿ ಓದುಗರಾಗಿರುವರಂತೆ.

ಕೇಂದ್ರ ಅಸೆಂಬ್ಲಿಯಲ್ಲಿ ಪರರಾಷ್ಟ್ರೀಯರನ್ನು ರಿಜಿಸ್ಟರ್‌ಮಾಡುವ ಮತ್ತು ಈ ಬಿಲ್ಲಿನ ಕುರಿತಾದ ಕಾಂಗ್ರೆಸಿನವರ ತಿದ್ದುಪಡಿಗಳು ಪಾಸಾದುವು.

ಗಾಂಧಿ ಸೇವಾಸಂಘದ ಬೀಹಾರಿನ ಬೃಂದಾವನದಲ್ಲಿ ಜರಗುವ ಪರಿಷತ್ತಿನ ಸಂಬಂಧ ನಡೆಸಲಾಗುವ ವಸ್ತುಪ್ರದರ್ಶನದ ಉದ್ಘಾಟನೆಯನ್ನು, ಮಹಾತ್ಮಾಜಿಯವರು ಏಪ್ರಿಲ್ 20 ರಲ್ಲು ನೆರವೇರಿಸಲಿರುವರು.

ಹಿಂದೂ ಮುಸ್ಲಿಂ ಕಾದಾಟಗಳನ್ನು ತೊಡೆದು ಹಾಕುವುದಕ್ಕಾಗಿ ಮಧ್ಯಪ್ರಾಂತ್ಯದ ಸರಕಾರವು, ಬೇಗನೆ ಒಂದು ಕಾನೂನನ್ನು ತರಲಿದೆ. ಅಲ್ಲದೆ ಜಾತಿ ಭೇದ ಹರಡಿ, ಕಲಹಕ್ಕೆ ಆಸ್ಪದ ಕೊಡುವವರನ್ನು ಗಡೀಪಾರು ಮಾಡಲೂ ಸರಕಾರ ಯೋಚಿಸುತ್ತಿದೆ.

ಹಿಂದೂ ದೇವಾಲಯಗಳಲ್ಲಿ ಹರಿಜನರಿಗೆ ಮುಕ್ತದ್ವಾರವಿರಬೇಕೆಂದು ಸಾರ್ವಜನಿಕರು ಮೈಸೂರು ಅಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಕೇಳಿದ್ದನ್ನು ಅನುಲಕ್ಷಿಸಿ ಶ್ರವಣಬೆಳಗೊಳದ ಗೋಮಟೇಶ್ವರ ಮತ್ತು ಬೇಲೂರು ಚೆನ್ನಕೇಶವ ದೇವಾಲಯದ ಅಂಗಣದಲ್ಲಿ ಹರಿಜನರು ಪ್ರವೇಶಿಸಲು ಅಡ್ಡಿಯಿಲ್ಲೆಂದು ಮೈಸೂರು ಸರಕಾರದವರು ಆಜ್ಞೆ ಹೊರಡಿಸಿರುವರು.

ಹೈದರಾಬಾದಿನ ಸತ್ಯಾಗ್ರಹ ಚಳವಳಿಯ ಫಲವಾಗಿ, ನಿಜಾಮರವರು ಧಾರ್ಮಿಕ ತೊಡಕುಗಳ ನಿವಾರಣೆಗೋಸ್ಕರ ಕಮಿಟಿಯನ್ನೇರ್ಪಡಿಸಲು ಯೋಚಿಸಿದೆ. ಅಲ್ಲದೆ, ಅಲ್ಲಿನ ಪ್ರಧಾನರಾದ ಸರ್ ಅಕ್ಬರ್ ಹೈದರಿಯವರು ಮಹಾತ್ಮಾಜೀಯವರೊಡನೆ ಪತ್ರವ್ಯವಹಾರ ನಡೆಸಿ, ಜವಾಬ್ದಾರಿ ಸರಕಾರ ಸ್ಥಾಪಿಸುವ ಯೋಜನೆಯನ್ನೂ ಅವರಿಗೆ ತಿಳಿಸಿದ್ದಾರೆ. ಸರ್ ಹೈದರಿಯವರು ತಮ್ಮ ಸರಕಾರದ ಈ ಕುರಿತಾದ ಧೋರಣೆಯನ್ನು ಇದೇ ತಿಂಗಳಲ್ಲಿ ಪ್ರಕಟಿಸಲಿರುವರು.

ಹೈದರಾಬಾದಿನ ಮಹಿಳಾ ಸಮಾಜದ ಪ್ರಮುಖ ಸದಸ್ಯರಾದ ಮಿಸೆಸ್ ಹುಮಾಯೂನ್ ಮಿರ್ಜಾರವರು ಮಹಾತ್ಮ ಗಾಂಧಿಯವರಿಗೆ ಒಂದು ಕಾಗದವನ್ನು ಬರೆದು, ಹಿಂದೂ ಮಹಮ್ಮದೀಯರ ಐಕ್ಯತೆಗಾಗಿ ಉಪವಾಸ ವ್ರತವನ್ನು ಕೈಕೊಳ್ಳಿರೆಂದೂ, ಇದು ಬಹಳ ಪ್ರಾಮುಖ್ಯವಾದುದೆಂದೂ, ಮಹಾತ್ಮ ಗಾಂಧಿಯವರು ಯಾವ ಯಾವ ಉದ್ದೇಶಸಾಧನೆಗಳಿಗಾಗಿ ಇದು ವರೆಗೆ ಉಪವಾಸವ್ರತವನ್ನು ಹಿಡಿದಿರುತ್ತಾರೆಯೋ ಅವೆಲ್ಲಕ್ಕಿಂತಲೂ ಇದು ಪರಮ ಪವಿತ್ರವಾದ ತ್ಯಾಗವೆನಿಸುವುದೆಂದೂ ಪ್ರಾರ್ಥಿಸಿರುತ್ತಾರೆ.

ಪುದುಕೋಟೆ ಸಂಸ್ಥಾನದ ಸರ್ಕಾರದವರು 1939-40 ನೇ ಸಾಲಿನಲ್ಲಿ ತಮ್ಮ ಸರ್ಕಾರದ ನೌಕರರ ಸಂಬಳವನ್ನು ಕಡಿತಮಾಡಲು ನಿಶ್ಚಯಮಾಡಿರುತ್ತಾರೆ. 25 ರೂಪಾಯಿನಿಂದ 100 ರೂಪಾಯಿನೊಳಗೆ ಸಂಬಳ ಪಡೆಯುತ್ತಿರುವವರ ಸಂಬಳದಲ್ಲಿ ರೂಪಾಯಿಗೆ ಆರು ಕಾಸಿನಂತೆಯೂ 100 ರೂಪಾಯಿಗಿಂತ ಹೆಚ್ಚು ಸಂಬಳ ಪಡೆಯುವವರ ಸಂಬಳದಲ್ಲಿ ರೂಪಾಯಿಗೆ ಒಂದಾಣೆಯಂತೆಯೂ ಹಿಡಿಯುವರು. 1938-39 ನೇ ಸಾಲಿನಲ್ಲಿ ಆ ಸಂಸ್ಥಾನದಲ್ಲಿ ಮಳೆ ಬೆಳೆಗಳಾಗದೆಯೂ ಸರ್ಕಾರದವರು ವಿಶೇಷವಾಗಿ ರೆವಿನ್ಯೂ ರಿಯಾಯಿತಿಗಳನ್ನು ತೋರಿಸಿದುದರಿಂದಲೂ ಸಂಸ್ಥಾನದ ಖರ್ಚು ಆದಾಯಕ್ಕಿಂತಲೂ 2,31,940 ರೂಪಾಯಿ ಹೆಚ್ಚಾಯಿತೆಂದು ಪ್ರಕಟವಾಗಿದೆ.

ಮಧ್ಯಪ್ರಾಂತದ ಹಿಂದಿನ ಮುಖ್ಯ ಮಂತ್ರಿಗಳಾದ ಡಾ. ಖರೆ ಇವರು ಮಧ್ಯಪ್ರಾಂತದ ಗವರ್ನರರೊಡನೆ ಒಳಸಂಚು ಮಾಡಿದ್ದರು ಎಂಬ ವಿಧಾನವನ್ನು ಪಂ|| ಜವಾಹರಲಾಲ ನೆಹರುರವರು ಲಖನೌದ 'ನ್ಯಾಶನಲ್ ಹೆರಲ್ಡ್' ಪತ್ರಿಕೆಯಲ್ಲಿ ಬರೆದಿದ್ದರು. ಈ ಆರೋಪಗಳನ್ನು ಹಿಂದಕ್ಕೆ ತಕ್ಕೊಳ್ಳುವ ಬಗ್ಗೆ ಡಾ. ಖರೆ ಇವರು ಪಂ|| ಜವಾಹರಲಾಲರಿಗೆ ವಕೀಲರ ಪರವಾಗಿ ನೋಟೀಸು ಕೊಟ್ಟು ತಿಳಿಸಿರುವದಾಗಿ ತಿಳಿಯುತ್ತದೆ. 'ಗವರ್ನರರೊಡನೆ ಒಳಸಂಚು ಮಾಡಿದ ನನ್ನ ಮೇಲಿನ ಆರೋಪವನ್ನು ಹಿಂತಕ್ಕೊಳ್ಳಿ' ಎಂಬ ತಂತಿಯನ್ನು ಡಾ. ಖರೆಯವರು ತ್ರಿಪುರಿ ಅಧಿವೇಶನದ ಕಾಲಕ್ಕೆ ಪಂ|| ಜವಾಹರಲಾಲರಿಗೆ ಕಳಿಸಿದ್ದರು. ಆದರೆ ಪಂ|| ಜವಾಹರಲಾಲರಿಂದ ಅವರಿಗೆ ಉತ್ತರವೇ ಬರಲಿಲ್ಲ.

ವಿವೇಕ

ಬ್ರಿಟಿಷರ ಧೈರ್ಯವನ್ನೂ, ಕಾರ್ಯಸ್ಥೈರ್ಯವನ್ನೂ ಕಂಡು, ಇನ್ನು ಬ್ರಿಟನ್ನು ಬಾಲಮುದುರಿ ಮೂಲೆಯಲ್ಲಿ ಕುಳಿತುಕೊಳ್ಳದೆಂದು ಅಮೇರಿಕನರು ಆನಂದಗೊಂಡಿದ್ದಾರೆ.

ಪುನಃ 250 ಸಾವಿರ ಹೆಚ್ಚಿನ ಮಂದಿ, ಸೈನ್ಯಕ್ಕೆ ಬೇಕಾಗಿರುವರೆಂದು ಬ್ರಿಟಿಷ್ ಯುದ್ಧ ಮಂತ್ರಿಗಳಾದ ಹೋರ್ ಬೆಲಿಶಾರವರು ಸಾರಿದ್ದಾರೆ. ಇಷ್ಟು ಮಂದಿ ಸೇರಿದರೆಂದರೆ, ಜಗತ್ತಿನಲ್ಲೆಲ್ಲಾ ಅತೀ ದೊಡ್ಡ ಟೆರಿಟೋರಿಯಲ್ ಸೇನೆಯನ್ನು ಬ್ರಿಟನ್ ಹೊಂದಿದಂತಾಯಿತು.

ಸ್ಪೈಯಿನ್ ಬಂಡಾಯವು ಕೊನೆಗಂಡಿತು.

ಜನರಲ್ ಫ್ರಾಂಕೋನಿಗೆ ಜಯವಾಯಿತು.

ಕಳೆದ ಎರಡುವರೆ ವರ್ಷಗಳಿಂದ ನಡೆಯುತ್ತಿದ್ದ ಸ್ಪೈಯಿನ್ ಬಂಡಾಯವು ಮುಗಿದಂತಾಯಿತು. ಬಾರ್ಸಿಲೋನಾ ನಗರವು ಬಿದ್ದ ಮೇಲೆ ಸಂಪೂರ್ಣ ನಿರಾಶರಾಗಿದ್ದರೂ ಅಲ್ಲಿ ವೈರಿಗಳೊಡನೆ ಹೋರಾಟ ಮಾಡುತ್ತಿದ್ದ ಸ್ಪೈಯಿನ್ ಸರ್ಕಾರಿ ಸೈನಿಕರು, ನಿನ್ನೆ ಮೇಡ್ರಿಡಲ್ಲಿ ಬಂಡುಗಾರ ದಂಡುಗಳು ಕಾಲಿಟ್ಟ ಕೂಡಲೇ ಅವರಿಗೆ ಶರಣಾಗತರಾಗಿ ಮೇಡ್ರಿಡ್ ನಗರವನ್ನು ಬಿಟ್ಟುಕೊಟ್ಟರು.

ಮೇಡ್ರಿಡ ನಗರದ ಸರ್ಕಾರಿ ಕಚೇರಿಗಳೆಲ್ಲ ಬಂಡುಗಾರರ ವಶವಾದೊಡನೆ ಸ್ಪೈಯಿನ್ ಸರ್ಕಾರದ ಮುಖ್ಯ ಸೇನಾಪತಿಯಾದ ಕರ್ನಲ್ ಕಾಸಾಡೊ ಇವರು ರಾಜಧಾನಿಯನ್ನು ಬಿಟ್ಟು ಓಡಿ ಹೋಗಿರುವರೆಂಬ ಸುದ್ದಿ ಹಬ್ಬಿರುವದು.

ಸಾಯಂಕಾಲದ ಸುಮಾರಿಗೆ ಬಂಡುಗಾರರ ವಿಮಾನಗಳು ಮೇಡ್ರಿಡ್ ನಗರಕ್ಕೆ ಬಂದವು ಮತ್ತು ಮನೆಗಳ ಮೇಲೆ ಹಾರಾಡ ತೊಡಗಿದವು. ಜನರೆಲ್ಲರೂ ಭಯದಿಂದ ತಲ್ಲಣಿಸತೊಡಗಿದರು. ನಾಟಕ, ಸಿನಿಮಾ, ಅಂಗಡಿ ಮೊದಲಾದವು ನಿತ್ಯದಂತೆ ನಡೆಯಬೇಕೆಂದೂ ಅವುಗಳಲ್ಲಿ ಸ್ವಲ್ಪವೂ ತಡೆಯಾಗಕೂಡದೆಂದೂ ಬಂಡುಗಾರರ ಅಧಿಕಾರಿಗಳು ಆಜ್ಞೆ ಮಾಡಿದರು.

ಬಂಡುಗಾರರ ದಂಡಾಳುಗಳು ಮೇಡ್ರಿಡ್‌ನಲ್ಲಿ ನುಗ್ಗುತ್ತಿರುವಾಗ ಒಂದು ಗುಂಡನ್ನು ಸಹ ಹಾರಿಸಬೇಕಾದ ಪ್ರಸಂಗ ಬರಲಿಲ್ಲ. ಮಧ್ಯಾಹ್ನ ಸಿಪಾಯಿಗಳ ಆಹಾರ ಸಾಮಗ್ರಿಗಳನ್ನೊಳಗೊಂಡು ಮೋಟಾರು ಲಾರಿಗಳು ಬಂದವು. ಸಿಪಾಯಿಗಳು ತಮ್ಮನ್ನು ಸ್ವಾಗತಿಸಿದ ಜನರಿಗೆ ಚಾಕಲೇಟುಗಳನ್ನೂ, ಹಣ್ಣು ಹಂಪಲುಗಳನ್ನೂ ಹಂಚಿದರು.

ಸ್ವಲ್ಪ ಹೊತ್ತಿನ ಮೇಲೆ ಕೆಲವು ಸಿಪಾಯಿಗಳು ಮೇಡ್ರಿಡ್ ವಿಶ್ವ ವಿದ್ಯಾಲಯದಲ್ಲಿ ನುಗ್ಗಿ ಅದನ್ನಾಕ್ರಮಿಸಿಕೊಂಡರು.

ಜನರ ಸ್ವಾಗತ.

ರಾಜಧಾನಿಯನ್ನು ಆಕ್ರಮಿಸಿಕೊಂಡದ್ದನ್ನು ಕಣ್ಣಾರೆ ಕಂಡ ರಾಯಟರ ಸುದ್ದಿಗಾರನು ಬರೆಯುವುದೇನೆಂದರೆ—

ಮಾಡ್ರಿದ ನಗರವು ಬಂಡುಗಾರರ ವಶವಾಯಿತೆಂಬ ಸುದ್ದಿಯನ್ನು ಕೇಳಿದ ಕೂಡಲೇ ನಾನು ಅಲ್ಲಿಗೆ ಹೋದೆನು. ಜನರು ಅತ್ಯುತ್ಸಾಹದಿಂದ ಬಂಡುಗಾರರನ್ನು ಸ್ವಾಗತೀಕರಿಸುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಜನರು ಗುಂಪಾಗಿ ರಸ್ತೆಗಳಲ್ಲಿ ನಿಂತು ಕೂಗುತ್ತಾ, ಜಯಕಾರ ಮಾಡುತ್ತಾ ಬಂಡುಗಾರರನ್ನು ಸ್ವಾಗತಿಸುತ್ತಿದ್ದರು. ಎಷ್ಟೋ ಜನರ ಕಣ್ಣುಗಳಲ್ಲಿ ನೀರು ಸುರಿಯುತ್ತಿದ್ದಿತು.

ಜನಲ್ ಫ್ರಾಂಕೋನು ಏಪ್ರಿಲ್ 1 ನೇ ತಾರೀಕಿನ ದಿನ ಮೇಡ್ರಿಡ್ ನಗರದಲ್ಲಿ ಪ್ರವೇಶ ಮಾಡುವನು.

ಸರ್ಕಾರಿ ಧ್ವಜಗಳ ಕಣ್ಮರೆ.

ಮೇಡ್ರಿಡವು ಬಂಡುಗಾರರ ವಶವಾಯಿತೆಂಬ ಸುದ್ದಿಯನ್ನು ಕೇಳಿದ ಕೂಡಲೇ ಅನೇಕ ಕಟ್ಟಡಗಳ ಮೇಲೆ ಇದ್ದ ಸರ್ಕಾರಿ ಧ್ವಜಗಳು ಒಮ್ಮಿಂದೊಮ್ಮಲೇ ಮಾಯವಾದವು. ಎಷ್ಟೋ ಅಂಗಡಿಗಳಲ್ಲಿ ಸರಕಾರಿ ನಾಣ್ಯಗಳನ್ನು ಮತ್ತು ನೋಟುಗಳನ್ನು ಅಂಗಡಿಕಾರರು ಸ್ವೀಕರಿಸಲಿಲ್ಲ.

ಮೇಡ್ರಿಡನ್ನು ವಶಪಡಿಸಿಕೊಂಡಿದ್ದಕ್ಕಾಗಿ ಹಿಟ್ಲರ ಮುಸಲೋನಿಯವರು ಜನರಲ್ ಫ್ರಾಂಕೋನಿಗೆ ತಂತಿಗಳನ್ನು ಕಳುಹಿಸಿ ಅವನನ್ನು ಅಭಿನಂದಿಸಿದ್ದಾರೆ.

ರಾಷ್ಟ್ರಪತಿಗಳ ಪ್ರಕಟಣೆ.

ಸುಭಾಷ ಚಂದ್ರ ಬೋಸರು ತಾ. ೯ರಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿ ತ್ರಿಪುರಿಯಲ್ಲಾದ ವಿಚಾರಗಳು ಹಾಗೂ ಪಂಡಿತ ಪಂತರ ಠರಾವಿನ ವಿಚಾರದ ತಮ್ಮ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ.

'ಬಿಕ್ಕಟ್ಟಿನ ಸಂದರ್ಭಗಳಲ್ಲಿ, ಗಜಿಬಿಜಿಯ ಸಮಯದಲ್ಲಿ ಯಾ ಸಂಶಯವು ತುಂಬಿರುವಂಥಾ ಈ ವಾತಾವರಣದಲ್ಲಿ ಪ್ರಕಟಣೆಗಳು ಯಾ ಇತರ ಯಾವ ವಿಚಾರಗಳೂ ವಿಪರೀತ ಅರ್ಥವನ್ನು ಕೊಡುವದು ವಾಸ್ತವ. ಹಾಗೆಯೇ ಮಾರ್ಚಿ 25 ರಲ್ಲಿ ನಾನು ಹೊರಡಿಸಿದ ಹೇಳಿಕೆಯೂ ಕೆಲವರಲ್ಲಿ ವಿಪರೀತ ಅರ್ಥಕ್ಕೆ ಅವಕಾಶ ಕೊಟ್ಟಿದೆ. ಆ ಹೇಳಿಕೆಯಲ್ಲಿ ಪಂಡಿತ ಪಂತರ ಠರಾವಿನ ಕದೇ ಶರತು ಅವ್ಯವಸ್ಥೆಯಿಂದ ಕೂಡಿದ್ದೆಂದು ಮಾತ್ರ ಹೇಳಿದ್ದೆನು. ಆದರೆ ನನ್ನ ಸ್ನೇಹಿತರು ಇದನ್ನು ತಪ್ಪು ದೃಷ್ಟಿಯಿಂದ ತಿಳಿದು ಪಂಡಿತ ಪಂತರ ಠರಾವೇ ಅವ್ಯವಸ್ಥೆಯದೆಂದು ನಾನು ಹೇಳಿರುವೆನಾಗಿ ಅರ್ಥ ಮಾಡಿಕೊಂಡರು. ಆದರೆ ಈ ವಿಚಾರದಲ್ಲಿ ನಾನು ಕೂಲಂಕುಶ ಹೇಳುವದನ್ನರೆ ಈ ಠರಾವನ್ನು ಕ್ಲುಪ್ತ ಸಮಯದಲ್ಲಿ ನನಗೆ ಒಪ್ಪಿಸಿರಲಿಲ್ಲ.

ನಾನು ನಿಯಮ ಪ್ರಕಾರ ರಿಟೆರ್ನಿಂಗ್ ಆಫೀಸರ ಕರ್ತವ್ಯದೃಷ್ಟಿಯಿಂದ ವರ್ತಿಸಿದ್ದರೆ ಈ ಠರಾವನ್ನು ತಿರಸ್ಕರಿಸುವ ಅಧಿಕಾರ ನನಗಿತ್ತು. ಆದರೆ ನಾನು ಪ್ರಜಾಸತ್ತಾತ್ಮಕ ರಾಜ್ಯಕ್ರಮದಲ್ಲಿ ಅವಿಚಲ ಭರವಸೆ ಇರುವವನಾದ್ದರಿಂದ ಈ ಠರಾವನ್ನು ಮಹಾಸಭೆಯಲ್ಲಿ ಚರ್ಚೆಗೆ ಬಿಟ್ಟು ಬಹುಮತವು ತೀರ್ಮಾನಿಸುವಂತೆ ಶಿರಬಾಗಿ ನಡೆಯುವದು ನನ್ನ ಕರ್ತವ್ಯವೆಂದು ತಿಳಿದು ಅದನ್ನು ಅಂಗೀಕರಿಸಿದೆನು. ಮೌಲಾನಾ ಅಬ್ದುಲ್ ಕಲಾಂ ಆಝಾದರು ರಾಷ್ಟ್ರಿಯ ಕೇಳಿಕೆಯ ಠರಾವಿಗೆ ಶರತ್ ಚಂದ್ರ ಬೋಸರವರು ತಂದ ತಿದ್ದುಪಡಿಯನ್ನು ಕ್ಲುಪ್ತ ಸಮಯದಲ್ಲಿ ಕೊಡಲಿಲ್ಲವೆಂಬ ಕಾರಣದಿಂದ ತಿರಸ್ಕರಿಸಿದಂತೆ ತಿರಸ್ಕರಿಸಬಹುದಿತ್ತು. ನಿಯಮದಂತೆ ಠರಾವನ್ನು ಬದಗೊತ್ತುವ ಅಧಿಕಾರವಿದ್ದರೂ ಬಹುಮತದ ಜನರು ಅದನ್ನು ಸಮರ್ಥಿಸಿರುವಾಗ ನನ್ನ ನಿರಂಕುಶ ವರ್ತನೆಯಿಂದ ಅದನ್ನು ತಿರಸ್ಕರಿಸುವುದು ಪ್ರಜಾ ಸತ್ತಾತ್ಮಕ ರಾಜ ಸೂತ್ರಕ್ಕೆ ವಿರೋಧವೆಂದೇ ನಾನು ಠರಾವಿಗೆ ವಿರೋಧ ನಿಲ್ಲದೆ ಬಿಟ್ಟಿದ್ದಾಗಿದೆ.

ಆದ್ದರಿಂದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಲೀ, ಕಾಂಗ್ರೆಸ್ಸಿನ ಯಾವ ಸದಸ್ಯರೇ ಆಗಲಿ ನಾನು ಪಂಡಿತ ಪಂತರ ಠರಾವನ್ನು ಅಂಗೀಕರಿಸುವದಿಲ್ಲವೆಂದು ತಿಳಿಯಕೂಡದು. ನನ್ನ ಮನದಲ್ಲಿ ಅಂಥಾ ಯೋಚನೆ ಇದ್ದಿದ್ದರೆ ಠರಾವನ್ನು ಮೊದಲೇ ತಿರಸ್ಕರಿಸಲಿಕ್ಕೆ ಆಗುವಿತ್ತು. ಅಂತೂ ಈ ಸಂದರ್ಭದಲ್ಲಿ ಎಲ್ಲಾ ಸಂಶಯಾಸ್ಪದದ ವಿಚಾರಗಳನ್ನು ತೀರ್ಮಾನಿಸಲು ಮಹಾತ್ಮರ ಸಲಹೆಯು ತುಂಬಾ ಉಪಕಾರಿಯಾಗದೆ ಇರದು.

ಸಾರ್ವಜನಿಕ ಸಭೆ.

ತಾ 4-4-39ರಲ್ಲಿ ಅಮ್ಮತ್ತಿ ಗಾಂಧೀ ಮೈದಾನದಲ್ಲಿ ಶ್ರೀ ಪಾಲೇಕಂಡ ಪೂವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ನಡೆಯಿತು. ಶ್ರೀ. ಪಿ. ಐ. ಬೆಳ್ಯಪ್ಪನವರು ತ್ರಿಪುರಿ ಅಧಿವೇಶನದ ವಿಚಾರವಾಗಿಯೂ, ಶ್ರೀ ಗಳಾದ ಕೆ. ಸಿ. ಕರುಂಬಯ್ಯ, ಐನಂಡ ಕಾರ್ಯಪ್ಪ, ಮತ್ತು ಬಿದ್ದಂಡ ಕಾರ್ಯಪ್ಪನವರುಗಳು ಕೌನ್ಸಿಲ್ ಬಜೆಟ್ ಮೀಟಿಂಗಿನಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡಿದ ಸಭಾತ್ಯಾಗದ ವಿಚಾರವಾಗಿಯೂ, ರೆವಿನ್ಯೂ ಮ್ಯಾನ್ಯುವಲಿನ ತಿದ್ದುಪಡಿಯ ವಿಚಾರವಾಗಿಯೂ, ಸ್ಕೂಲ್ ಫೀಸ್ ಏರಿಸುವಿಕೆ ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೆ ಗ್ರ್ಯಾಂಟನ್ನು ಕಮ್ಮಿ ಮಾಡಿದ್ದೇ ಮೊದಲಾದ್ದರ ವಿಷಯವಾಗಿಯೂ ಭಾಷಣ ಮಾಡಿದರು.

ನಂತರ ಈ ಕೆಳಗಿನ ಠರಾವುಗಳು ಶ್ರೀ ನೆಲ್ಲಮಕ್ಕಳ ದೇವಯ್ಯನವರಿಂದ ಸೂಚಿಸಲ್ಪಟ್ಟು, ಶ್ರೀ ಐನಂಡ ಮಾದಪ್ಪನವರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಪಾಸಾದುವು.

(1) ಜನರ ಪ್ರತಿನಿಧಿಗಳ ಕೋರಿಕೆಗೆ ಸರ್ಕಾರದವರು ತೋರಿಸುವ ಉದಾಸೀನತೆಯನ್ನು ನಿಷೇಧಿಸಲಿಕ್ಕಾಗಿ ಕಳೆದ ಕೌನ್ಸಿಲು ಮೀಟಿಂಗಿನಿಂದ ಕಾಂಗ್ರೆಸ್ ಪಕ್ಷದ ಮೆಂಬರುಗಳು ಎದ್ದು ಹೊರಬಂದದ್ದು ನ್ಯಾಯ ಸಮ್ಮತವಾಗಿದೆ; ಮತ್ತು ಅವರ ಈ ಕಾರ್ಯಕ್ಕೆ ಈ ಸಭೆಯು ಸಂಪೂರ್ಣ ಒತ್ತಾಸೆಯನ್ನೀಯುತ್ತದೆ.'

(2) ರೆವಿನ್ಯೂ ಮ್ಯಾನ್ಯುವಲಿನ ಕರಡು ನಿಬಂಧನೆಗಳ ತಿದ್ದುಪಡಿಯನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ ಮತ್ತು ಉದ್ಯೋಗಸ್ಥರಲ್ಲದವರ ಬಹುಮತವಿರುವ ಕಮಿಟಿಯವರು ತಯಾರಿಸುವ ತಿದ್ದುಪಡಿಗಳು ಮಾತ್ರ ದೇಶೀಯರಿಗೆ ತೃಪ್ತಿಕರವಾಗುವವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

(3) ಸ್ಕೂಲು ಫೀಜನ್ನು ಏರಿಸುವದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಅಡಚಣೆಯಾಗುವ ಕಾರಣ ಹಾಗೆ ಸ್ಕೂಲ್ ಫೀಜನ್ನು ಏರಿಸಕೂಡದೆಂದು ಈ ಸಭೆಯು ಚೀಫ್ ಕಮಿಶನರನ್ನು ಕೇಳಿಕೊಳ್ಳುತ್ತದೆ.

(4) ಡಿಸ್ಟ್ರಿಕ್ಟ್ ಬೋರ್ಡಿನ ಈಗಿನ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರ್ಕಾರದವರು ಖರ್ಚು ಯೋಜನೆಯ ನೆಪದಿಂದ ಬೋರ್ಡಿಗೆ ಕೊಡುತ್ತಿರುವ ವಂತಿಗೆಯಲ್ಲಿ ರೂ. 7 ಸಾವಿರ ಕಡಿಮೆ ಮಾಡಲು ಮಾಡಿರುವ ತೀರ್ಮಾನವನ್ನು ಈ ಸಭೆಯು ಖಂಡಿಸುತ್ತದೆ. ಬೋರ್ಡಿನವರು ಗ್ರಾಮವಾಸಿಗಳಿಗೆ ಮಾಡುತ್ತಿರುವ ವಿದ್ಯಾ ಪ್ರಸಾರ, ವೈದ್ಯ ಚಿಕಿತ್ಸೆ, ಗ್ರಾಮಾಂತರ ರಸ್ತೆ ಮೊದಲಾದ ಬಹು ಉಪಯುಕ್ತಕಾರ್ಯಗಳ ಹಿತ ದೃಷ್ಟಿಯಿಂದ ಸರ್ಕಾರದವರು ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡಕೂಡದೆಂದು ಚೀಫ್ ಕಮಿಷನರವರನ್ನು ಈ ಸಭೆಯು ಕೇಳಿಕೊಳ್ಳುತ್ತದೆ.

ಅವಿವೇಕ ವರ್ತನೆ.

ಗಾಂಧಿಜೀಯವರ ಪ್ರಕಟಣೆ.

ತಿರುವಾಂಕೂರು ಸಂಸ್ಥಾನಾಧಿಕಾರಿಗಳು ತಮ್ಮ ಪ್ರಜಗಳಿಗೆ ಕೊಡುತ್ತಿರುವ ಅಮಾನುಷ ಅತ್ಯಾಚಾರಗಳ ವಿಚಾರದಲ್ಲಿ ಪೂಜ್ಯ ಗಾಂಧಿಜೀಯವರು ಪ್ರಕಟಣೆಹೊರಡಿಸಿ ಅದು ಬರೇ ಅವಿವೇಕದ ಹೆಗ್ಗುರುತೆಂದೂ, ಇದರಿಂದ ಜನತೆಯಲ್ಲಿ ಮೂಡಿರುವ ಸ್ವಾತಂತ್ರ್ಯ ಸಾಧನೋದ್ದೇಶವು ಪುಕ್ಕಟ್ಟೆ ಚಿನ್ನದಂತೆ ಪವಿತ್ರವಾಗುವದೇ ಹೊರತು ಬೇರಿಲ್ಲವೆಂದೂ, ಪ್ರಜೆಗಳು ಈ ಸಂದರ್ಭದಲ್ಲಿ ತಮ್ಮ ಸಹನಾ ಶಕ್ತಿಯನ್ನು ತೋರಿಸಿದರೆ ಸತ್ಯಾಗ್ರಹದ ಫಲವು ಇದರಲ್ಲೇ ಲಭಿಸದಿರದೆಂದೂ ಅಂದಿರುವರು.

ತಿರುವಾಂಕೂರು ಸರ್ಕಾರದವರು ಗಾಂಧೀಜಿಯವರ ಪ್ರಕಟಣೆಯು ಸರಿಯಲ್ಲವೆಂದೂ ತಿರುವಾಂಕೂರಿನಲ್ಲಿ ಯಾವ ಅತ್ಯಾಚಾರವೂ ನಡೆದಿಲ್ಲವೆಂದೂ, ಗಾಂಧೀಜಿಯವರಿಗೆ ಈ ಸುಳ್ಳು ವರ್ತಮಾನ ಯಾರೋ ಕೊಟ್ಟಿರಬೇಕೆಂದೂ ಹೇಳಿರುವರು.

ನೋಟೀಸು.

ಕೊಡಗು ರೆವಿನ್ಯೂ ಮ್ಯಾನ್ಯುವಲಿ ಸಂಬಂಧಪಟ್ಟ ನಿಬಂಧನೆಗಳ ಕರಡು ತಿದ್ದುಪಡಿಗಳನ್ನು ಆಲೋಚಿಸಲಿಕ್ಕಾಗಿಯೂ, ಕೌನ್ಸಿಲಿನಲ್ಲಿ ಪಾಸಾದ ಹಣಕಾಸಿನ ಕೊಡುವವರ (ಸಪ್ಲಿಮೆಂಟರಿ ಬಿಲ್) ಮಸೂದೆಯಲ್ಲಿ ಸೂಚಿಸಿರುವ ಬಡ್ಡಿ ದರವನ್ನು ವಿಮರ್ಶಿಸಲಿಕ್ಕಾಗಿಯೂ, ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾರೀಕು 11ನೇ ಮಂಗಳವಾರ ಮಧ್ಯಾಹ್ನ 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವದು. ಕಾರ್ಯಕಾರಿ ಮಂಡಳಿಯ ಸದಸ್ಯರು ಎಲ್ಲರೂ ತಪ್ಪದೆ ಬರಬೇಕಾಗಿ ಕೋರಿಕೆ.

ಬಿ. ಯಂ. ಸುಬ್ಬಯ್ಯ,

ತಾ. 4-4-39. ಪ್ರೆಸಿಡೆಂಟ್.

ಮಧ್ಯ ಯೂರೋಪಿನ ಮಹಾ ಮೂರ್ತಿಗಳು.

ಹಿಟ್ಲರನ ಶೌರ್ಯ—ಚೇಂಬರ್ಲೇನರ ಔದಾರ್ಯ—ಮುಸಲೋನಿಯ ಧೈರ್ಯ.

ಹಿಟ್ಲರ್.

ಬ್ರಿಟಿಷ್ ಜನಾಂಗದ ವೃದ್ಧಾಪ್ಯದಲ್ಲಿ ಧಾರ್ಮಿಕ ಬೋಧನೆ—ಪಾಲೇಸ್ತೀನ್ ದಬ್ಬಾಳಿಕೆಯ ಖಂಡನೆ—ಮಧ್ಯ ಯೂರೋಪದ ರಾಷ್ಟ್ರಗಳನ್ನು ಕೈಕೆಳಗೆ ತರುವ ಯೋಜನೆ—ಜರ್ಮನ್-ಇಟಲಿ ಬಾಂಧವ್ಯದ ಸಮರ್ಥನೆ—

ಹರ್ ಹಿಟ್ಲರನು ಚೇಂಬರ್ಲೇನರ ಭಾಷಣದಿಂದ ಕುಪಿತನಾಗಿ ವಿಲ್ ಹೆಮ್ ಶಿವನಿನಲ್ಲಿ ಒಂದು ಭಾಷಣವನ್ನು ಮಾಡಿದನು. 'ನೂರೆಂಬರ್ಗಿನಲ್ಲಿ ನಡೆದ ಕಳೆದ ಸಮ್ಮೇಳನವು ಶಾಂತಿಯ ಹೆಗ್ಗುರುತು. ಜರ್ಮನಿಯು ಯಾವಾಗಲೂ ಶಾಂತಿ ಮಾರ್ಗದಲ್ಲಿ ಮುಂದರಿಯುವದು. ಆದರೆ ಯಾವುದೊಂದು ರಾಷ್ಟ್ರವಾದರೂ ತಮ್ಮ ತೋಳ್ಬಲವನ್ನು ಪ್ರದರ್ಶಿಸಲು ಬಂದರೆ ಅದನ್ನು ಎದುರಿಸಲು ನಾವು ಸದಾ ಸಿದ್ಧರೇ ಇರುವೆವು. ಜನಾಂಗಗಳನ್ನು ಧಾರ್ಮಿಕ ಹಾಗೂ ಅಧಾರ್ಮಿಕ ಪಥದಲ್ಲಿ ನಡೆಯುವಂತಹುದೆಂದು ವಿಭಾಗಿಸುವ ಬ್ರಿಟನರ ಧೋರಣೆಯು ಖಂಡನೀಯವಿದೆ. ಈ ಕಳೆದ ಮುನ್ನೂರು ವರ್ಷದಲ್ಲಿ ಅಧಾರ್ಮಿಕ ಹಾಗೂ ಅನಾಚಾರದ ಪಥದಲ್ಲಿ ವರ್ತಿಸಿದ ಬ್ರಿಟನು ಇಂದು ತನ್ನ ವೃದ್ಧಾಪ್ಯದಲ್ಲಿ ಧಾರ್ಮಿಕ ವಿಚಾರ ಬೋಧಿಸುತ್ತಿರುವದು. ಜರ್ಮನಿಯ ಆಂತರಿಕ ವಿಚಾರಗಳನ್ನು ವಿಚಾರಿಸಿ ಅದರ ತಪ್ಪು ಹೆಜ್ಜೆಗಳನ್ನು ತಿದ್ದುವ ಹವ್ಯಾಸ ಬ್ರಿಟನಿಗೆ ಬೇಡ. ಪಾಲೆಸ್ತೀನದಲ್ಲಿ ಬ್ರಿಟಿಷರು ಮಾಡುತ್ತಿರುವ ದಬ್ಬಾಳಿಕೆ ಹಾಗೂ ಅತ್ಯಾಚಾರಗಳ ವಿಚಾರ ನಾವು ಪ್ರಶ್ನಿಸುತ್ತಿರುವೆವೇನು? ಅದ್ದರಿಂದ ನಮ್ಮಲ್ಲಿಯ ಅಂತರರಾಷ್ಟ್ರೀಯ ವಿಚಾರ ಬ್ರಿಟನು ನೌರೋಪಿತ್ಯಕ್ಕೆ ಹವ್ಯಾಸ ವಹಿಸುವದಕ್ಕೆ ಹಾಕಬೇಕೇಕೆ? ಪಾಲೇಸ್ತಿನದಲ್ಲಿ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಜನರ ಮೇಲೆ ಗುಂಡು ಹಾರಿಸುವ ಅಧಿಕಾರ ಬ್ರಿಟಿಷರಿಗೆ ಲ್ಲಿಂದ ಬಂತು? ನಾವು ಮಧ್ಯ ಯೂರೋಪಿನಲ್ಲಿ ಅಂಥಾ ಅಮಾನುಷ ಕೃತ್ಯಗಳನ್ನು ಕೈಕೊಂಡಿಲ್ಲ. ನಾವು ಮಾಡಿದ ಮತ್ತು ಮಾಡುವ ಕಾರ್ಯಗಳನ್ನೆಲ್ಲಾ ಶಾಂತತೆಯಿಂದಲೇ ಮಾಡಿರುವೆವು ಮತ್ತು ಮಾಡುವೆವು. ಆಂಗ್ಲೊ-ಜರ್ಮರೊಳಗಾದ ಒಪ್ಪಂದಂತೆ ಬ್ರಿಟನಿಗೆ ಶಾಂತಿಯಲ್ಲಿ ಭರವಸೆ ಇಲ್ಲದ ಪಕ್ಷ ಆ ಒಪ್ಪಂದದ ಶರತುಗಳು ಇನ್ನು ಬ್ರಿಟನಿಗೆ ಬಂಧಿತವಾಗುವದಲ್ಲವೆಂದು ನಾವು ಹೇಳುವೆವು. ಅಗ್ನಿ ಜ್ವಾಲೆಯಲ್ಲಿರುವ ಹುರಿಗಡಲೆಯನ್ನು ಎತ್ತಲು ಹೋಗಿ ಕೈಸುಟ್ಟುಕೊಂಡಂತೆ ಬ್ರಿಟಿಷರ ಸ್ಥಿತಿಯಾಗದಿರದು.

ನಮ್ಮ ಧ್ಯೇಯವನ್ನು ಸಾಧಿಸಲೂ ನಮ್ಮ ಹಿತ ಸಂರಕ್ಷಣೆ ಮಾಡಿಕೊಳ್ಳಲು ನಮಗೆ ಶಕ್ತಿ ಇದೆ. ಬೇರೆ ರಾಷ್ಟ್ರಗಳ ಮೇಲೆ ಭಾರ ಹಾಕಿ ಯಾ ಇತರ ರಾಷ್ಟ್ರಗಳನ್ನು ನಂಬಿ ನಾವು ಬಾಳುವವರಲ್ಲ.

ಬ್ರಿಟನು ಜಗತ್ತಿನ ಗೋಚರಕ್ಕೆ ಬೀಳದೆ ಚಿಕ್ಕದಿದ್ದಾಗ ಜರ್ಮನ್ ರಾಜ್ಯವು ಹೇಗೆ ವಿಸ್ತಾರವಾಗಿದ್ದಿತು. ಅವರ ಚಕ್ರವರ್ತಿಯು ಹೇಗೆ ಪ್ರಾಗ್ಯೂದಲ್ಲಿ ಅಭಿಷೇಕ ಮಾಡಿಸಲ್ಪಟ್ಟಿದ್ದು ಎಂಬುವುದು ತಿಳಿದಿರಲಿಕ್ಕಿಲ್ಲ. ಮಧ್ಯ ಯೂರೋಪಿನ ರಾಷ್ಟ್ರಗಳು ಪುರಾತನ ಜರ್ಮನಿಯ ವಿಭಾಗಗಳೆಂದು ಬ್ರಿಟಿಷರು ತಿಳಿಯಬೇಕು. ಝೆಕೊಸ್ಲೊವಾಕಿಯಾವನ್ನು ನಾವು ನಮ್ಮ ಅಧಿಕಾರಕ್ಕೆ ಒಳಪಡಿಸಿಕೊಂಡಿದ್ದರೆ ಅದು ಅಲ್ಲಿಯ ಪ್ರಜೆಗಳ ಹಿತ ದೃಷ್ಟಿಯಿಂದ. ಅವರು ಖಂಡಿತವಾಗಿಯೂ ಬ್ರಿಟಿಷರ ಅಧೀನದ ಪ್ರಜೆಗಳಿಗಿಂತ ಹೆಚ್ಚಿನ ಸುಖಕರವಾದ ಜೀವನ ಸಾಗಿಸುವರೆಂಬುವುದನ್ನು ಬ್ರಿಟನು ಅರಿಯಬೇಕು. ಜರ್ಮನಿಗೆ ಯುದ್ಧದ ಆಶೆಯಿಲ್ಲ. ನಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ನಾವು ಪ್ರಯತ್ನಿಸುತ್ತಿರುವೆವು.

ಜರ್ಮನ್ ಮತ್ತು ಇಟಲಿಯೊಳಡಗಿರುವ ಬಾಂಧವ್ಯವನ್ನು ಮುರಿಯಲೆತ್ನಿಸುವ ಈ ರಾಷ್ಟ್ರಗಳ ಪ್ರಯತ್ನವು ನಿಷ್ಫಲ. ಪೋಲೇಂಡಿನೊಡನೆ ನಮಗೆ ದ್ವೇಷವಿಲ್ಲ. ನಮ್ಮ ವ್ಯಾಪಾರದ ಹಿತದೃಷ್ಟಿಯಿಂದ ಅವರೊಡನೆ ಸಹಕರಿಸುವದು ನಮ್ಮ ಕರ್ತವ್ಯ. ಇಂಥಾ ಐಕ್ಯತೆಯಲ್ಲಿ ಬ್ರಿಟನು ವಿಷ ಬೀಜ ಹಾಕಿ ಐಕ್ಯತೆಗೆ ಭಂಗ ತರುವದು ಅವಕ್ಕೆ ಹಿತವಲ್ಲ. ಕಳೆದ ಘೋರ ಸಂಗ್ರಾಮದಲ್ಲಿ ಜರ್ಮನಿಯನ್ನು ಗೆದ್ದ

ವೆಂದು ಯಾವ ಜನಾಂಗವೂ ಹೇಳುವ ಆಧಾರವಿಲ್ಲ. ಅಂದು ಜರ್ಮನಿಯು ಶಾಂತಿಯ ದೃಷ್ಟಿಯಿಂದಲೇ ಯಾರಿಗೂ ಮಣಿಯದೆ ಒಪ್ಪಂದಕ್ಕೆ ಒಪ್ಪಿತು. ಇಂದೂ ಜರ್ಮನಿಯು ಶಾಂತ ದೃಷ್ಟಿಯಿಂದಲೇ ವರ್ತಿಸುತ್ತಿರುವದು.'

ಚೇಂಬರ್ಲೇನ್.

ಪೋಲೇಂಡಿಗೆ ಸಹಾಯೋಪಕಾರ.
ನಾಝಿ ತತ್ವದ ಧಿಕ್ಕಾರ.
ಫ್ರಾನ್ಸ್-ರಷ್ಯಾದೊಡನೆ ಸಹಕಾರ

ಬ್ರಿಟಿಷ್ ಪ್ರಧಾನರಾದ ಚೇಂಬರ್ಲೇನರು ಪಾರ್ಲಿಮೆಂಟ್ ಸಂಸ್ಥೆಯಲ್ಲಿ ಈ ಕೆಳಗಿನ ಭಾಷಣ ಮಾಡಿದರು—

ಬ್ರಿಟಿಷ್ ಸರ್ಕಾರದ ಅಂತರ್ ರಾಷ್ಟ್ರೀಯ ಧೋರಣೆಯನ್ನು ವಿವರಿಸುವ ಈ ಸಂದರ್ಭದಲ್ಲಿ ನನಗೆ ಸಂತೋಷವೆನಿಸುತ್ತದೆ. ಈ ವರೆಗೆ ವಿವಿಧ ರಾಷ್ಟ್ರಗಳೊಳಗೆ ಬಂದ ಘರ್ಷಣೆಯನ್ನು ತಪ್ಪಿಸಲು ಆಯಾಯ ರಾಷ್ಟ್ರಗಳೊಡನೆ ಐಕ್ಯತೆಯಿಂದ ವರ್ತಿಸಿ ಭಿನ್ನಾಭಿಪ್ರಾಯವನ್ನು ಬ್ರಿಟನು ತೊಲಗಿಸಿದೆ. ಈ ಸಭೆಗೆ ಮನವರಿಕೆ ಇರುವಂತೆ ಈಗ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ಬಿಕ್ಕಟ್ಟಾವಸ್ಥೆಗೆ ಇಟ್ಟಿರುವದರಿಂದ ಅನೇಕ ಸರ್ಕಾರಗಳೊಡನೆ ಬ್ರಿಟಿಷ್ ಸರಕಾರದ ಧೋರಣೆಯನ್ನು ವಿಷದಪಡಿಸುವದು ಅವಶ್ಯವಿದೆ. ಪೋಲೇಂಡ್ ಸರಕಾರವನ್ನು ವಿರೋಧಿಸಿ ಯಾವ ರಾಷ್ಟ್ರವಾದರೂ ಅದರ ಸ್ವಾತಂತ್ರ್ಯಾಪಹರಣಕ್ಕೆ ಕೈಯಿಕ್ಕಿ ಪೋಲೇಂಡು ಸರ್ಕಾರವು ಅದನ್ನು ವಿರೋಧಿಸಿದರೆ ಆ ಸಮಯದಲ್ಲಿ ಪೋಲೇಂಡಿಗೆ ಸಹಾಯ ಮಾಡಲು ಬ್ರಿಟನು ತಯಾರಿರುವದು. ಈ ಬಗ್ಗೆ ಪೋಲೇಂಡಿನ ಸರ್ಕಾರಕ್ಕೆ ಬ್ರಿಟನು ಭರವಸೆಯನ್ನು ಕೊಡುತ್ತದೆ. ಅಲ್ಲದೆ ರೊಮೇನಿಯಾ ಸರಕಾರವನ್ನು ರಕ್ಷಿಸಲಿಕ್ಕೂ ಬ್ರಿಟನು ಸಿದ್ಧವಿದೆ. ಇವರ ಮಧ್ಯೆ ಫ್ರೆಂಚ್ ಸರ್ಕಾರವೂ ಸಹ ನಮ್ಮೊಡನೆ ಸಹಕರಿಸಿ ಪೋಲೇಂಡಿಗೆ ಸಹಾಯಮಾಡಲು ಸಿದ್ಧವಿದೆಯೆಂದರೆ ಅಪ್ರಸ್ತುತವಾಗಲಾರದು.

ಇಂದು ನಾವು ಮಾಡುತ್ತಿರುವ ಕೆಲಸ ಮತ್ತು ನಾವು ಅನುಸರಿಸುತ್ತಿರುವ ತತ್ವವು ರಷ್ಯಾ ಸರ್ಕಾರದ ಒಪ್ಪಿಗೆಗೆ ಪಾತ್ರವಾಗಿದೆಯೆಂಬುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಇಂಥಾ ಬಿಕ್ಕಟ್ಟಿನ ಸಂದರ್ಭಗಳಲ್ಲಿ ನಾವು ಒಗ್ಗಟ್ಟಾಗಿ ನಮ್ಮ ಎದುರು ಪಕ್ಷದವರನ್ನು ಎದುರಿಸುವದು ಹಿತವಿದೆ. ಈ ಬಿಕ್ಕಟ್ಟಿನಲ್ಲಿ ಸಮ್ಮೇಳನಗಳನ್ನು ಏರ್ಪಡಿಸಿ ನಮ್ಮ ಧೋರಣೆಯನ್ನು ನಿಶ್ಚಯಪಡಿಸಲು ಸಮಯವಿಲ್ಲ. ಎಲ್ಲರೂ ಒಗ್ಗಟ್ಟಾಗಿ ಮುಂದೆ ನಾಝಿ ಅನಾಚಾರಗಳು ಮಧ್ಯಯೂರೋಪದಲ್ಲಿ ನಡೆಯಂತೆ

ತಡೆಗಟ್ಟುವದು ಯೋಗ್ಯವಿದೆ! ಚೇಂಬರ್ಲೇನರ ಈ ಪಾರ್ಲಿಮೆಂಟಿನ ಭಾಷಣವು ಎಲ್ಲರ ಆದರಣೆಯನ್ನು ಪಡೆದಿದೆ. ರಷ್ಯನರು, ಫ್ರೆಂಚರು, ಪೋಲೇಂಡರು, ರೂಮೇನಿಯನರು ಎಲ್ಲಾ ರಾಷ್ಟ್ರಗಳಲ್ಲೂ ಈ ಭಾಷಣವು ಸಮಾಧಾನವನ್ನುಂಟುಮಾಡಿದೆ.

ವಿವಿಧ ರಾಷ್ಟ್ರಗಳೊಡನೆ ನಡೆಯುತ್ತಿರುವ ವ್ಯವಹಾರವು ತೀರಿದೊಡನೆ ಚೇಂಬರ್ಲೇನರು ಪುನಃ ತಮ್ಮ ಧೋರಣೆಯನ್ನು ವಿಷದಪಡಿಸಿ ಮತ್ತೊಂದು ಭಾಷಣ ಮಾಡುವವರಿರುವರು.

ಮುಸಲೋನಿ.

ಜನಾಂಗಗಳ ಕುಟುಂಬದಲ್ಲಿ ಇಟಲಿಗೆ ಅಗ್ರಸ್ಥಾನ ಬೇಕು. ಇಟಲಿಯ ಜನಾಂಗವು ಒಮ್ಮತದಿಂದ ಒಬ್ಬ ಮಾನವನಂತೆ ವಿಪತ್ತುಗಳನ್ನು ಎದುರಿಸಲು ಸಿದ್ಧವಿರುವದೆಂಬುದು ಎಲ್ಲರಿಗೂ ತಿಳಿದಿರಬೇಕು.

ಇಟಲಿಯ ಸರ್ವಾಧಿಕಾರಿಯಾದ ಮುಸಲೋನಿಯು ಭಾಷಣ ಮಾಡುತ್ತಾ, 'ನಾವು ತಯಾರಾಗುತ್ತಿರುವೆವು. ನಮ್ಮ ಸಂರಕ್ಷಣೆ ಮಾಡಿಕೊಳ್ಳಲು ಯಾರ ಸಹಾಯವೂ ನಮಗವಶ್ಯವಿಲ್ಲ. ಫ್ಯಾಸಿಸಮ್ಮಿನ ಪ್ರಥಮ ವರ್ಷಗಳಲ್ಲಾದ ವಿಚಾರಗಳು ಅಮೋಘವಿರುವವು. ಈಗ ನಡೆಯುತ್ತಿರುವ ವಿಷಯಗಳಂತೂ ಅವರ್ಣನೀಯವಿರುವವು. ಜನಾಂಗಳ ಈ ಕುಟುಂಬದಲ್ಲಿ ಇಟಲಿಗೆ ಪ್ರಧಾನ ಸ್ಥಾನವು ಖಂಡಿತಾಸಿಗಬೇಕು. ಆ ಸ್ಥಾನಕ್ಕೆ ತಕ್ಕಂಥಾ ಅರ್ಹತೆಯು ಅದಕ್ಕಿದೆ. ಇಟಲಿ ಜನಾಂಗವೆಲ್ಲಾ ಒಗ್ಗಟ್ಟಾಗಿ ಒಂದೇ ಧ್ಯೇಯಸಾಧನೆಗೆ ಒಬ್ಬ ಮನುಷ್ಯನೋಪಾದಿಯಲ್ಲಿ ತಯಾರಾಗಿರುವದು. ಆದ್ದರಿಂದ ಮುಂದೆ ಎಂಥಾ ವಿಪತ್ತುಗಳನ್ನೂ ಸಹ ಎದುರಿಸಲು ಇಟಲಿಯು ಸದಾ ಸಿದ್ಧವಿರುವದು' ಎಂದರುವನು.

ನಾಪೋಕ್ಲು ದನಗಳ ಪ್ರದರ್ಶನ.

ಕಳೆದ ತಾರೀಕು 18 ಮತ್ತು 19 ರಲ್ಲಿ ಈ ಜಾತ್ರೆಯು ಯಶಸ್ವಿಯಾಗಿ ನಡೆಯಿತು. ದಿ. ಬ. ಕೆ. ಚಂಗಪ್ಪನವರು ಪ್ರದರ್ಶನವನ್ನು ತೆರೆದರು. ಶ್ರೀ ಮುಂಡಂಡ ಪೊನ್ನಪ್ಪನವರು ಕಿತ್ತಳೆ ವ್ಯವಸಾಯದ ವಿಚಾರವಾಗಿಯೂ, ಶ್ರೀ ತಜ್ಜಮಾಡ ತಾಳಯ್ಯನವರು ಪಾಲೇರಿಯಾ ನಾಶದ ವಿಚಾರವಾಗಿಯೂ, ಶ್ರೀ ನೆಲ್ಲಮಕ್ಕಳ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಯಂ. ಕಾರ್ಯಪ್ಪನವರು ಗ್ರಾಮಪುನರಾಭಿವೃದ್ಧಿಯ ವಿಚಾರವಾಗಿಯೂ, ಶ್ರೀ ಕರವಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಶೇಷಗಿರಿರಾಯರು ವಿವಿಧ ಉದ್ದೇಶದ ಸಂಘಗಳ ವಿಚಾರವಾಗಿಯೂ, ಶ್ರೀ ಬಿ. ಯಂ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಪಿ ಐ. ಬೆಳ್ಯಪ್ಪನವರು ತ್ರಿಪುರಿ ಕಾಂಗ್ರೆಸಿನ ವಿಚಾರವಾಗಿಯೂ ಭಾಷಣ ಮಾಡಿದರು. ಶ್ರೀ ಕರವಂಡ ಚಂಗಪ್ಪನವರು ಇನಾಮುಗಳನ್ನು ಹಂಚಿದರು. ಪ್ರದರ್ಶನದ ಅಧ್ಯಕ್ಷರಾದ ಶ್ರೀ ಬಿ. ಯಂ. ಸುಬ್ಬಯ್ಯನವರ ಭಾಷಣದ ಸಾರಾಂಶವಲ್ಲಿ ಕೊಡಲಾಗಿದೆ.

'ಕಡಿಯತ್ತುನಾಡು, ನಾಲ್ಕುನಾಡು ಸಹಕಾರಿ ಸಂಘಗಳು ಕೂಡಿ ನಡಸಿರುವ ಈ ಪ್ರದರ್ಶನವನ್ನು ತೆರೆಯಲು ದಿ. ಬ. ಕೆ. ಚಂಗಪ್ಪ ಬಿ. ಎ. ಇವರು ಒಪ್ಪಿಕೊಂಡದಕ್ಕೆ ಅವರಿಗೆ ಪ್ರದರ್ಶನ ಕಮಿಟಿಯ ಪರ ವಂದಿಸುತ್ತೇನೆ. ಇವರನ್ನು ನಿಮಗೆ ಪರಿಚಯ ಮಾಡುವ ಅಗತ್ಯವಿಲ್ಲ. ಸಂಣ ಉದ್ಯೋಗವನ್ನು ಪಡೆದು ತನ್ನ ಸಾಮರ್ಥ್ಯದಿಂದ ಅಭಿವೃದ್ಧಿಗೊಳ್ಳುತ್ತಾ ಕಡೆಗೆ ಕಮಿಷನರ ಹುದ್ದೆಯ ಚಾರ್ಜನ್ನೂ ಸಹ ಎರಡು ಸಲ ನೋಡಿದ ಮಹನೀಯರಿವರು. ಅಧಿಕಾರದ ಅಹಂಭಾವಕ್ಕೆ ಮರುಳಾಗದೆ ರೈತರೊಡನೆ ಒಡನಾಡಿ ಜನಾನುರಾಗಿಯಾಗಿದ್ದವರಿವರು. ನಿವೃತ್ತರಾದೊಡನೆ ಬೇರೆ ಎಷ್ಟೋ ಉದ್ಯೋಗಸ್ಥರಂತೆ ಪಟ್ಟಣವಲ್ಲೇ ಉಳಿಯದೆ ಗ್ರಾಮವಾಸವೇ ಯೋಗ್ಯವೆಂದು ಗ್ರಾಮದಲ್ಲಿ ಬಂದು ನಮಗೆಲ್ಲಾ ಮಾದರಿಯಾಗಿರುವವರಿವರು. ಈ ಆದರ್ಶ ವ್ಯಕ್ತಿಯು ನಮ್ಮ ಕೋರಿಕೆಯನ್ನು ಸಲ್ಲಿಸಲು ಒಪ್ಪಿರುವದು ನಮ್ಮ ಸುದೈವವಾಗಿದೆ.' ಮುಂದಿನ ವಿಚಾರ ಮಾತಾಡುವ ಮೊದಲು ಪ್ರದರ್ಶನದ ಹಿತಚಿಂತನೆಯಿಂದ ಬಂದಿರುವ ಎಲ್ಲರಿಗೂ ನಾನು ಕಮಿಟಿಯ ಪರ ಸುಸ್ವಾಗತವನ್ನು ಬಯಸುತ್ತೇನೆ.

ಈ ಪ್ರದರ್ಶನವು ಒಂದು ಸಲ ಎಮ್ಮೆಮಾಡಿನಲ್ಲೂ, ಮೂರು ಸಲ ಈ ಕೊಟ್ಟಂಬುಡಿ ಮೈದಾನದಲ್ಲೂ ನಡೆದು ಅದು ಇನ್ನೂ ತನ್ನ ಶೈಶವಾವಸ್ಥೆಯಲ್ಲಿದೆ. ವರ್ಷಂಪ್ರತಿ ಶೆರೆಯೋಣದರಿಂದ ಈ ಎರಡು ನಾಡುಗಳು ಮತ್ತು ಸುತ್ತಮುತ್ತಲಿನ ನಾಡುಗಳು ಎಷ್ಟರ ಮಟ್ಟಿಗೆ ಎಚ್ಚತ್ತು ಅವರ ಕಾರ್ಯದಕ್ಷತೆಯನ್ನು ಕೈಕೊಂಡಿರುವರೆಂಬುದು ಈಗ ನೆರೆದ ಪ್ರದರ್ಶನದಿಂದಲೂ ಮತ್ತು ಜನರ ಉತ್ಸಾಹದಿಂದಲೂ ತಮಗೆಲ್ಲರಿಗೂ ವೇದವಾಗದಿರದು.

ಈ ಕಡೆ ಸರಕಾರವು ಕಡಿಯತ್ತುನಾಡಿಗೆ 2 ಗೂಳಿಗಳನ್ನೂ, ನಾಲ್ಕುನಾಡಿಗೆ 3 ಗೂಳಿಗಳನ್ನೂ, ಬೇಂಗುನಾಡು, ಬೇಂಗೂರಿಗೆ 1, ಕುಯಿಂಗೇರಿನಾಡು, ಬೆಟ್ಟಕೇರಿಗೆ 1. ಅಂತು 7 ಗೂಳಿಗಳನ್ನು ಕೊಟ್ಟಿರುವರು. ಇದರಿಂದ ನಾಡಿನ ಜನರು ಹೆಚ್ಚಿನ ಪ್ರಯೋಜನ ಹೊಂದಲಾರರು. ದೂರದಿಂದ ಹಸುಗಳನ್ನು ಹಿಡಿದು ತರುವದು ಕಷ್ಟವಾಗಿದೆ. ಆದ್ದರಿಂದ ಗ್ರಾಮಕ್ಕೊಂದು ಗೂಳಿಯಂತಾದರೂ ಸರಕಾರದವರು ಇಡಿಸಬೇಕು.

ವ್ಯವಸಾಯ.

ನಮ್ಮ ನಾಡಿನಲ್ಲಿ ಈಗ ಭತ್ತದ ವ್ಯಸಾಯ ಒಂದಲ್ಲದೆ ಬೇರೆ ಯಾವ ಕರೆಫಸಲೆತ್ತುವದಕ್ಕೆ ಪ್ರಯತ್ನಿಸುವದಿಲ್ಲವೆಂದರೆ ತಪ್ಪಾಗದು. ಈಗ ಶೇಕಡ 4–5 ಜನರು ಪ್ರಯತ್ನಪಡುವರು. ಆದರೆ ಈ ಮೊದಲು ರೈತನು ತನ್ನ ಸುತ್ತಮುತ್ತಲು ಕರೆ ಫಸಲಾಗಿ ಕಾಫಿ ಬೆಳೆಸುತ್ತ ಸುಖವಾಗಿ ಬಾಳುತ್ತಿದ್ದದ್ದು ನನಗೆ ಗೊತ್ತಿದೆ. ಈಗ ಯಜಮಾನನೆನಿಸಿಕೊಂಡ ಯಾವ ರೈತನಿಗೂ ಕರೆ ಫಸಲು ಇಲ್ಲದೆ ದುಃಸ್ಥಿತಿಯಲ್ಲಿ ಬಿದ್ದಿದ್ದಾನೆ. ಈಗ ರೈತನು ತರಕಾರಿ ಮಾಡಿಕೊಳ್ಳುವದೆಂದರೆ ಆತನಿಗೆ ಕಷ್ಟವೆಂಬೂ, ಆದ್ದರಿಂದ ಕ್ರಯಕ್ಕೆ ಕೊಂಡುಕೊಳ್ಳುವುದೇ ಲಾಭವೆಂದೂ ತಿಳಿದು ಪೇಟೆಯಿಂದ ತರುವುದು ಕಂಡಿದ್ದೇನೆ. ಹೀಗೆ ಹೇಳಿಕೊಳ್ಳುವವರು ನಮ್ಮ ದೇಶಕ್ಕೆ ಹೊರಗಿನಿಂದ ಬರುವ ರೂ. 50,000 ದಷ್ಟು ಮೆಣಸೊಂದನ್ನು ಕ್ರಯಕ್ಕೆ ಕೊಳ್ಳುತ್ತಾರೆಂದರೆ ಬಾಕಿ ತರಕಾರಿ ವಗೈರೆ ನಾವು ಬೆಳೆಸದೆ ಇರುವದರಿಂದ ಎಷ್ಟು ಸಾವಿರ ರೂಪಾಯಿ ಹೊರಗೆ ಹೋಗುತ್ತಿದೆಂಬುದನ್ನು ನೀವೇ ಊಹಿಸಿರಿ! ಆದ್ದರಿಂದ ನಾವೆಲ್ಲರೂ ವ್ಯವಸಾಯಗಾರರು. ವ್ಯವಸಾಯದಲ್ಲಿ ನಿರತರಾಗಿ ನಮ್ಮ ಕಡುಬಡತನವನ್ನು ಹೋಗಲಾಡಿಸುವದಕ್ಕೆ ಪ್ರಯತ್ನಪಡುವವರಾಗಬೇಕು. ಕಷ್ಟಪಡುವವನನ್ನು ಕಾಣುವಾಗ ನಾವು ಅವನಂತೆ ಕಷ್ಟಪಟ್ಟರೆ, ಎಲ್ಲರೂ ಒಂದೇ ಸಮಾನ ಐಶ್ವರ್ಯವಂತರಾಗುವರು.

ಕೈಗಾರಿಕೆ.

ಕೈಗಾರಿಕೆ–ಅಂದರೆ ನೇಗಿಲು, ನೊಗ, ಕುಕ್ಕೆ, ಪಟ್ಟಿಗೆ ವಗೈರೆ–ಈ ಕೆಲಸವು ಈಗೀಗ ಬಹಳ ಕಮ್ಮಿಯಾಗಿ ಕಂಡುಬರುತ್ತೆ. ಇಲ್ಲಿಗೆ ಈ ದಿನ ಮೇಲ್ಕಂಡ ಸಾಮಾನುಗಳು ಪ್ರದರ್ಶನಕ್ಕೆ ಬಂದಿರುವದಿಲ್ಲ. ಗ್ರಾಮಗಳಲ್ಲಿ ಕೈಗಾರಿಕೆ ಕಲಿತವರು ಇಲ್ಲವೆಂದರೆ ಆಶ್ಚರ್ಯ ತೋರುವದು. ಇದರ ವಿಷಯ ರೈತನು ಅಸಡ್ಡೆಯಿಂದ ಮತ್ತೊಬ್ಬರ ಆಶ್ರಯಕ್ಕೆ ಹೋಗುವದರ ಅರ್ಥವೇನು? ಆದ್ದರಿಂದ ಇನ್ನಾದರೂ ರೈತರಿಗೆ ಬೇಕಾಗುವ ಮುಟ್ಟು ಸಾಮಾನುಗಳ ತಯಾರಿಸುವಿಕೆಗೆ ಹೆಚ್ಚು ಗಮನಕೊಡಬೇಕಾಗಿ ಎಲ್ಲರನ್ನೂ ಕೇಳಿಕೊಳ್ಳುತ್ತೇನೆ.

ಧನಸಹಾಯ.

ಈ ಪ್ರದರ್ಶನಕ್ಕೆ ಧನ ಸಹಾಯ ಮಾಡಿದವರನ್ನು ತಮ್ಮ ಅವಗಾಹನೆಗೆ ತಾರದಿದ್ದರೆ ನಾನು ನನ್ನ ಭಾಗದ ಕೆಲಸವನ್ನು ಮಾಡಿದಂತಾಗುವದಿಲ್ಲ. ಈ ಕೆಳಗಿನ ಮಹನೀಯರು ಉದಾರ ಬುದ್ಧಿಯಿಂದ ಪ್ರದರ್ಶನಕ್ಕೆ ಸಹಾಯ ಮಾಡಿರುವರು.

(1) ಕೊಡಗು ಕಮಿಷನರ್ ಸಾಹೇಬರವರಾದ ಐ. ಎಂ. ಫ್ರೇಜರ್ ಐ. ಸಿ. ಎಸ್. ರವರು ಪ್ರದರ್ಶನಕ್ಕೆ ತಂದ ಉತ್ತಮ ಹೂಡುವ ದನಗಳಿಗೆ ಇನಾಂ ಕೊಡಬೇಕೆಂದು ಕೊಟ್ಟ ರೂ. 10/-

(2) ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ರಾ. ಸಾ. ಮಂಡೇಪಂಡ ಮಂದಣ್ಣನವರು ರೂ. 5/-.

(4) ಡಿಸ್ಟ್ರಿಕ್ಟ್ ಪೊಲೀಸ್ ಸುಪರಿಂಟೆಂಡೆಂಟರಾದ ಶ್ರೀ ಕೋಡಿರ ಉತ್ತಪ್ಪನವರು ಕೊಟ್ಟ ರೂ. 5/-.

(4) ದಿ. ಬ. ಕೇಟೋಳಿರ ಚಂಗಪ್ಪನವರು ಕೊಟ್ಟ ರೂ. 5/-.

(5) ರಿಜಿಸ್ಟ್ರಾರವರಾದ ಶ್ರೀ ಕರವಂಡ ಚಂಗಪ್ಪನವರು ಕೊಟ್ಟ ರೂ. 3/-

ಜಮ್ಮ ಜಮೆಯಾದ ರೂ. 28-0-0.

ಈ ನಾಡಿನ ಮೇಲ್ಮೆಗಾಗಿ ಧನ ಸಹಾಯ ಮಾಡಿದವರಿಗೂ ಪ್ರದರ್ಶನಕ್ಕೆ ಸೇರಿದ ಮಹನೀಯರಿಗೂ ನಾನು ಪ್ರದರ್ಶನ ಮಂಡಲಿಯ ಪರವಾಗಿ ನನ್ನ ಮನಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಹರಿಜನ ಮೀಟಿಂಗು.

ಹದಿನಾರು ಕೇರಿಯ ಹರಿಜನ ಮುಖ್ಯಸ್ಥರೂ ಸೇರಿ ತಮ್ಮ ಮದುವೆ ಕಾರ್ಯದಲ್ಲಿ ದುಂದು ವೆಚ್ಚಗಳನ್ನು ಮಾಡಿಕೊಂಡು ಸಾಲಗಾರರಾಗಿ ತುಂಬಾ ತೊಂದರೆಗೀಡಾಗುತ್ತಿರುವುದನ್ನು ನಿಲ್ಲಿಸುವ ಸಲುವಾಗಿ ಸಭೆ ಸೇರಿ ರೂ. 20–8–8 ಪೈ ಖರ್ಚಿನಿಂದಲೇ ಮದುವೆಗಳನ್ನು ಮಾಡಿಕೊಂಡು ತಮ್ಮ ಆರ್ಥಿಕೋನ್ನತಿಯನ್ನು ಮಾಡಿಕೊಳ್ಳಬೇಕೆಂದು ಕಳೆದ ಸಭೆಯಲ್ಲಿ ನಿರ್ಧರಿಸಿದರು. ಆದರೆ ಇನ್ನೂ ಎರಡು ಕೇರಿಯ ಹರಿಜನರು ಬಾರದೆ ಇದ್ದುದರಿಂದ ಪುನಃ ತಾರೀಕು 2–4–39 ನೇ ದಿವಸ ಮೂರ್ನಾಡು ಪಾಂಡಾಣೆ ಮಂದಿನಲ್ಲಿ ಸಭೆ ಸೇರಿದರು. ಅಂದಿನ ಸಭೆಗೆ ಹರಿಜನ ಸೆಕ್ರೆಟರಿಯವರಾದ ಶ್ರೀ ಪಂದ್ಯಂಡ ಬೆಳ್ಯಪ್ಪನವರನ್ನೂ ಮತ್ತು ಶ್ರೀ ಸಿ. ಯಂ. ಪೂಣಚ್ಚನವರನ್ನೂ ಆಹ್ವಾನಿಸಬೇಕೆಂದು ಹರಿಜನ ಮುಖಂಡರು ಪ್ರಯತ್ನಪಟ್ಟರು. ಆದರೆ ಅವರೀರ್ವರು ಕೊಡಗಿನಲ್ಲಿ ಇಲ್ಲದೆ ಬೇರೆ ಕಡೆ ಪ್ರವಾಸ ಹೋಗಿದ್ದುದರಿಂದ ಅದು ಸಾಧ್ಯವಾಗಲಿಲ್ಲ.

ಅಂದಿನ ಸಭೆಗೆ ಶ್ರೀ ಬಿದ್ದಂಡ ಜಿ. ಮುತ್ತಣ್ಣನವರನ್ನು ಅಧ್ಯಕ್ಷರಾಗಿರಬೇಕೆಂದು ಕೋರಿಕೊಂಡ ಮೇರೆ ಹರಿಜನರೆಲ್ಲರೂ ವಾದ್ಯಘೋಷದೊಡನೆ ಮೂರ್ನಾಡು ಕ್ಲಬ್ಬಿನ ಮಂದಿರದಿಂದ ಮೆರವಣಿಗೆಯಲ್ಲಿ ಅವರನ್ನು ಪಾಂಡಾಣೆ ಮಂದಿಗೆ ಕರೆದೊಯ್ದರು. ಶ್ರೀ ಮುತ್ತಣ್ಣನವರು ಸರ್ವಸಮ್ಮತದಿಂದ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಇಂದಿನ ಕೂಟಕ್ಕೆ ಇಲ್ಲಿಯ ಅನೇಕ ಗಣನೀಯ ಪುರವಾಸಿಗಳು ಹಾಜರಿದ್ದರಲ್ಲದೆ ಮೈಸೂರು ಪ್ರಾಂತದ ಕೃಷ್ಣರಾಜನಗರದ ಚುಂಚನಕಟ್ಟೆಯ ಗುರುಕುಲದ ವ್ಯವಸ್ಥಾಪಕರಾದ ಶ್ರೀ. ಹೆಚ್. ಕೆ. ಪುಟ್ಟಣ್ಣನವರೂ ಸಹ ಹಾಜರಿದ್ದರು.

ಮರಗೋಡು ಮೀಟಿಂಗಿನಲ್ಲಿ ಹರಿಜನರೆಲ್ಲರೂ ಸೇರಿ ಇಂತಿಷ್ಟೇ ಖರ್ಚು ಮಾಡಬೇಕೆಂದು ನಿರ್ಧರಿಸಿ ಬರಕೊಂಡು ಬಂದಿದ್ದ ನಿಬಂಧನೆಯನ್ನು ಸಭೆಯ ಮುಂದಿಡಲಾಯಿತು. ಇದನ್ನು ದೀರ್ಘ ಚರ್ಚೆಯಾದ ನಂತರ ಶ್ರೀ ಪುಟ್ಟಣ್ಣನವರು ಖರ್ಚಿನ ಪಟ್ಟಿಯ ಪ್ರತಿ ವಿಷಯಗಳನ್ನು ಒಂದೊಂದಾಗಿ ಓದಿದರು. ಅದರಲ್ಲಿ ಇನ್ನೂ 11 ಆಣೆ ಖರ್ಚು ಪೋಲ್ತಿ ಮಾಡಿ ಮೊದಲಿದ್ದ ರೂ. 20–8–8 ಯಿಂದ ರೂ. 19–13–8 ವರೆಗೆ ಇಳಿಸಬೇಕೆಂದು ಹರಿಜನರೆಲ್ಲರೂ ಸಂತೋಷದಿಂದ ಒಪ್ಪಿಕೊಂಡರು ಇಂದಿನ ಈ ನಿರ್ಣಯವೇ ಕೊನೆಯ ನಿರ್ಣಯವೆಂದು ದೀರ್ಘ ಚರ್ಚೆಯಿಂದ ಒಪ್ಪಲಾಯಿತು. ಈ ನಿರ್ಣಯವನ್ನು ಇನ್ನೊಂದು ಸಭೆ ಸೇರಿ ಬದಲಾಯಿಸುವ ತನಕ ಇದನ್ನೇ ಅನುಸರಿಸುತ್ತೇವೆಂದು ಎಲ್ಲರೂ ಎದ್ದುನಿಂತು ಎರಡು ನಿಮಿಷ ಕಾಲ ಭಗವತ್ಪ್ರಾರ್ಥನೆಯನ್ನು ಮಾಡಿದರು.

ತಮ್ಮ ಉನ್ನತಿಗಾಗಿ ಹಿತಬೋಧನೆಯನ್ನು ಮಾಡಬೇಕೆಂದು ಹರಿಜನರು ಕೇಳಿಕೊಂಡ ಮೇರೆ ಶ್ರೀ. ಗಳಾದ ವಂಕಪಯ್ಯನವರು ಹಿಂದೂ ಧರ್ಮದ ಮೇಲೆಯೂ, ಹರಿಜನೋದ್ಧಾರಕ್ಕಾಗಿ ಈಗ ಶ್ರಮಿಸುತ್ತಿರುವ ಮುಂದಾಳುಗಳ ವಿಚಾರವಾಗಿಯೂ, ಮಡೆಯಂಡ ದೇವಯ್ಯನವರು ನಿಷಾಸೇವನೆಯ ವಿಚಾರವಾಗಿಯೂ, ಕೆ. ರಾಮನಾಯಕರು ಹರಿಜನರು ತಮ್ಮ ಸ್ವಾತಂತ್ರ್ಯತೆಯನ್ನು ತಿಳಿದು ಸುಖ ಜೀವನ ನಡೆಸುವ ಹಾದಿಯನ್ನು ಕಂಡುಕೊಳ್ಳಬೇಕೆಂದೂ, ತಮ್ಮ ಶುಭಾಶುಭ ಕಾರ್ಯಗಳಿಗೆ ಬಹು ಸುಲಭವಾಗಿ ಹಣವನ್ನು ಒದಗಿಸಲು ತಮ್ಮದೇ ಒಂದು ಸಂಘವನ್ನು ಮಾಡಿ ತಿಂಗಳೊಂದರ ನಾಲ್ಕಾಣೆಯಂತೆ ಚಂದಾ ಹಾಕಿ ಆ ಮೂಲಕ ಧನವನ್ನು ಒದಗಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದೂ, ಹೆಚ್. ಕೆ. ಪುಟ್ಟಣ್ಣನವರು ಹರಿಜನರಲ್ಲಿರುವ ದುರ್ನಡತೆಯನ್ನು ಹೋಗಲಾಡಿಸುವ ಸುಲಭೋಪಾಯಗಳನ್ನೂ ಮತ್ತು ನಿಷಾ ದೇವಿಯ ಆಲಿಂಗನೆಯಿಂದ ತಮ್ಮನ್ನು ತಾವೇ ಬಿಡಿಸಿಕೊಳ್ಳುವ ಸುಲಭ ಮಾರ್ಗಗಳನ್ನೂ, ವಿದ್ಯಾಹೀನರಾದ ಹರಿಜನರ ಉದ್ಧಾರ ಕ್ರಮವನ್ನೂ ವಿವರಿಸಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು.

ಹರಿಜನರು ತಾವಾಗಿಯೇ ಮುಂದೆ ಬಂದು ತಮ್ಮ 22 ಮಂದಿ ಮಕ್ಕಳನ್ನು ಮೇ ತಿಂಗಳಲ್ಲಿ ಮೂರ್ನಾಡು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿಸುವದಾಗಿ ವಗ್ದಾನ ವಿತ್ತು ಹೆಸರನ್ನೂ ಕೂಡ ಬರೆಸಿದರು.

ಅಧ್ಯಕ್ಷರು ರಸಭರಿತವಾದ ತಮ್ಮ ಭಾಷಣವನ್ನು ಮಾಡಿ ಹರಿಜನರ ಉತ್ತಮ ಜೀವನವನ್ನೂ ಹುರಿಗೊಳಿಸಿದರು.

ಅಧ್ಯಕ್ಷರಿಗೆ ವಂದನೆಯಾದ ನಂತರ ಸಭೆಯ ಕಾರ್ಯಕಲಾಪಗಳು ಕೊನೆಗೊಂಡವು.

'ಹಾಜರಿದ್ದವ'

ವಕೀಲರು.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ವಕೀಲ ವೃತ್ತಿಯು ಅನೇಕ ದುರಾಚಾರಗಳ ಕಾರ್ಯಸ್ಥಾನವು— ಭಾರತದ ಪರದಾಸ್ಯತೆಗೆ ಇದು ರಾಜಮಾರ್ಗವು—ಬಡವರ ರಕ್ತವನ್ನು ಹೀರುವ ರಣರಂಗವು—ಶ್ರಮವಿಲ್ಲದೆ ಧನ ಗಳಿಸಬೇಕೆಂಬ ಆಲಸಿಗಳ ಕಾಮಧೇನುವು—ನ್ಯಾಯಸ್ಥಾನಗಳ ಪ್ರಗತಿಗೆ ಆಧಾರ ಸ್ತಂಭವು—ಬ್ರಿಟಿಷರ ಅಂಧ ಆಡಳಿತೆಗೆ ಸಹಕಾರಿಯಾದ ಕೈದೀಪವು—ಹಿಂದೂ-ಮುಸ್ಲೀಮರ ಬೇಧವನ್ನು ಬೆಳೆಸಿದ ಸಾಧನವು—ಧರ್ಮದ ಸೂಕ್ಷ್ಮ ಪ್ರಭೆಯನ್ನರಿಯದ ಅಂಧಾಕಾರವು—

ಎರಡು ಪಂಗಡಗಳೊಳಗೆ ಜಗಳವಾದರೆ ನ್ಯಾಯಸ್ಥಾನಕ್ಕೆ ಹೋಗುವುದು ಅವಿವೇಕವೆಂದು ಗತಲೇಖನದಲ್ಲಿ ಹೇಳಿರುವೆವು. ಇದರಿಂದ ವಾಚಕರಲ್ಲಿ ಆಶ್ಚರ್ಯವುಂಟಾಗಿರಬಹುದು. ಆದರೆ ಅದು ಯಥಾಸ್ಥಿತಿಯಾಗಿದೆ. ನಮ್ಮ ಅಭಿಪ್ರಾಯದಲ್ಲಿ ಈ ವಕೀಲರೇ ಭಾರತವನ್ನು ಪರದಾಸ್ಯದಲ್ಲಿ ಸಿಲುಕಿಸಿದವರು. ಹಿಂದೂ ಮುಸ್ಲಿಮರ ಭೇಧಭಾವವನ್ನು ಬೆಳೆಸಿ ಭಾರತವನ್ನು ಬ್ರಿಟಿಷರ ಬಂಧನದಲ್ಲಿರಿಸಿದವರು. ಆದರೆ 'ಇಂಥಾ ಅಭಿಪ್ರಾಯವನ್ನು ಬಾಯಲ್ಲಿ ಹೇಳುವದು ಸುಲಭ. ಅದನ್ನು ವಿವರಿಸಿ ಜನರಿಗೆ ಮುಂದಿಟ್ಟು ಮಾಡುವದು ಕಷ್ಟ. ಲಾಯರುಗಳಿಲ್ಲದಿದ್ದರೆ ಸ್ವಾತಂತ್ರ್ಯ ಸಂಗ್ರಾಮದ ಬೆಳಕನ್ನು ಹೇಗೆ ನಾವು ಕಾಣುತ್ತಿದ್ದೆವು? ಬಡಬಗ್ಗರನ್ನು ಬಲಾಢ್ಯರ ಅತ್ಯಾಚಾರದಿಂದ ತಪ್ಪಿಸುವವರಾರು? ನ್ಯಾಯವು ಹೇಗೆ ಸಿಕ್ಕುತಿತ್ತು? ಮನಮೋಹನ ಘೋಷರಂತಹ ಪ್ರಸಿದ್ಧ ವಕೀಲರು ಬರೇ ಬಡಜನರ ಹಿತಕ್ಕಾಗಿ ಅವರ ಪರನಿಂತು ಅವರಿಂದ ಏನೂ ಪ್ರತಿಫಲಪಡೆಯದೇ ಶ್ರಮಿಸಲಿಲ್ಲವೇನು? ಇಂದು ಕಾಂಗ್ರೆಸು ಸಂಸ್ಥೆಯು ಮುಂದರಿದು ಜಗತ್ತಿನ ರಾಷ್ಟ್ರಗಳ ಕಣ್ಣುಗಳನ್ನು ಕುಕ್ಕುತ್ತಿರುವದು ಈ ಲಾಯರ್ ಬಂಧುಗಳ ಪ್ರತಿಭೆಯಿಂದಲ್ಲವೇನು? ಇಂಥಾ ದೇಶ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿರುವ ವಕೀಲ ವರ್ಗವನ್ನು ಭಾರತದ ಬಂಧನಕ್ಕೆ ಕಾರಣ ಕರ್ತರೆಂದು ಹೇಳುವದು ಸಮಂಜಸವಾದ ಧೋರಣೆಯಲ್ಲ'ವೆಂಬ ಅಭಿಪ್ರಾಯವು ಓದುಗರಲ್ಲಿ ಮೂಡುವದು ವಾಸ್ತವ. ಆದರೆ ಒಂದು ಸಮಯದಲ್ಲಿ ನಮ್ಮ ಅಭಿಪ್ರಾಯವಾದರೂ ಹಾಗೆಯೇ ಇತ್ತು. ಪ್ರಕೃತ ಲಾಯರುಗಳು ದೇಶಹಿತ ಸಾಧಕ ಕಾರ್ಯಗಳಾವುದನ್ನೂ ಮಾಡಲಿಲ್ಲವೆಂಬುದು ನಮ್ಮ ಅಭಿಪ್ರಾಯವಲ್ಲ. ಶ್ರೀ ಘೋಷರಂತವರು ಬಡಬಗ್ಗರಿಗೆ ಅಮಿತಸಹಾಯ ಮಾಡಿದುದೂ ಅಸತ್ಯವಲ್ಲ. ಇಂದು ಕಾಂಗ್ರೆಸಿನ ಪ್ರಗತಿಗೆ ವಕೀಲರು ಸಹಕಾರಿಗಳೆಂಬುದರಲ್ಲೂ ಭಿನ್ನಾಭಿಪ್ರಾಯವಿಲ್ಲ. ಆದರೆ ವಕೀಲರು ಮನುಷ್ಯರೂ ಹೌದು. ಪ್ರತಿಯೊಬ್ಬ ಮಾನವನಲ್ಲಿಯೂ ಒಂದು ಸಲ್ಲಕ್ಷಣವಿದ್ದೇ ಇರುವದು. ವಕೀಲರು ದೇಶಹಿತ ಮಾಡಿರುವರು ಎಂಬ ಘೋಷಣೆಯು ಬರುವದಾದರೆ ಅದು ಆತನು ಮನುಷ್ಯನಾಗಿ ಮಾಡಬೇಕಾದ್ದನ್ನು ಮಾಡಿದ್ದು. ಆತನು ಲಾಯರಾಗಿ ಮಾಡಬೇಕಾದ್ದನ್ನು ಆತನು ಮಾಡಿಲ್ಲ. ನಮ್ಮ ಈ ಲೇಖನದ ಅಭಿಪ್ರಾಯವು ವಕೀಲ ವೃತ್ತಿಯು ದುರಾಚಾರವನ್ನು ಬೋಧಿಸುವಂತಾದ್ದೆಂದೂ, ಅದು ಪ್ರಚೋದನೆಗೆ ಅವಕಾಶ ಕೊಡುವಂಥಾದ್ದೆಂದೂ ಧೃಢಪಡಿಸುವದಾಗಿದೆ.

ಉದಾಹರಣೆಗಾಗಿ ಈಗ ಕೆಲವು ಹಿಂದೂ ಮುಸ್ಲಿಮರೊಳಗೆ ಘರ್ಷಣೆ ಬಂದು ಜಗಳದಲ್ಲಿ ಪರಿಣಮಿಸಿತೆನ್ನುವ. ಒಬ್ಬ ಸಾಮಾನ್ಯ ಮನುಷ್ಯನು ಇಕ್ಕಡೆಯ ತಪ್ಪುಗಳನ್ನು ಅವರಿಗೇ ತಿಳಿಸಿ ಇನ್ನು ಮುಂದೆ ಇಂಥಾ ದುರ್ವರ್ತನೆಗೆ ಕೈಯಿಕ್ಕಬೇಡಿರೆಂದು ಬೋಧಿಸಿ ಕಳುಹಿಸುವನು. ಆದರೆ ಅವರು ಒಬ್ಬ ವಕೀಲನ ಹತ್ತಿರ ಹೋದರೆ ಅಲ್ಲಿ ವಕೀಲರು ಮಾಡುವದೇನು? ತಾವು ವಹಿಸಿಕೊಂಡ ಪಕ್ಷದವರಲ್ಲಿ ತಪ್ಪಿದ್ದರೂ ಸಹ ಅದನ್ನು ಬಚ್ಚಿಟ್ಟು ಅಪರಾಧಿಗಳಿಗೆ ತಿಳಿಯದ ಅನೇಕಾನೇಕ ಖಾನೂನುಗಳನ್ನು ಹೇಳಿ ತಮ್ಮ ಪಕ್ಷದವರನ್ನು ಕೋರ್ಟಿಗೆಳೆದು ಅವರನ್ನು ಯಾವದೊಂದಾದರೂ ಕುಯುಕ್ತಿಯಿಂದ ಜಯಶೀಲರನ್ನಾಗಿ ಮಾಡುವದಾಗಿದೆ. ಇಂಥಾ ಕುಯುಕ್ತಿಯನ್ನುಪಯೋಗಿಸದೆ ಸತ್ಯದಿಂದ ಅವರನ್ನು ಸಮಜಾಯಿಸಿ ಕಳುಹಿಸುವದು ಅವರ ವಕೀಲವೃತ್ತಿಯ ಗೌರವಕ್ಕೆ ಕಡಮೆಯೆಂದು ಭಾವಿಸುವರು. ಆದ್ದರಿಂದ ಲಾಯರುಗಳು ಜಗಳ ಕಲಹಗಳನ್ನು ಕಮ್ಮಿ ಮಾಡುವದರ ಬದಲು ಜನರಿಗೆ ನಾನಾತರದ ಕಾನೂನಿನ ಬೋಧನೆಯಿಂದ ಕಲಹಗಳನ್ನು ಹೆಚ್ಚಿಸುವರೆಂಬುದು ವಿಶದವಾಗುತ್ತದೆ. ಅಲ್ಲದೆ ಲಾಯರುವೃತ್ತಿಯನ್ನು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡು ತಾವು ಪ್ರಗತಿಯನ್ನು ಪಡೆಯಬೇಕೆಂಬ ಇಚ್ಛೆಯಿಂದ ಜನರು ಕೈಕೊಳ್ಳುವರೇ ವಿನಹ ಜನಹಿತದೃಷ್ಟಿಯಿಂದಲ್ಲ. ಮಾನವನು ಧನಿಕನಾಗಲು ಇದೊಂದು ದಾರಿಯೆಂದು ಮಾತ್ರ ಅವನ್ನು ತಿಳಿದುದರಿಂದಕ್ಕಾಗಿ ಇಲ್ಲದ ಜಗಳಗಳನ್ನು ಪ್ರೋತ್ಸಾಹಿಸುವರು. ಸಣ್ಣ ಸಣ್ಣ ವಕೀಲರು ಜಗಳಗಳನ್ನು ಉದ್ದೇಶಪೂರ್ವಕ ಕಲ್ಪಿಸುವರೆಂದರೆ ತಪ್ಪಾಗಲಾರದು. ವಕೀಲರಿಗೆ ಕೇಸುಗಳನ್ನು ಹಿಡಿದುಕೊಡುವ ಮಧ್ಯಸ್ಥಗಾರರು ಜಿಗಣೆಗಳಂತೆ ಬಡ ಗ್ರಾಮಸ್ಥರ ರಕ್ತವನ್ನು ಹೀರುವರು. ಲಾಯರುಗಳು ಜನಹಿತವನ್ನು ಮಾಡಬೇಕಾದ ಮಾನವರಲ್ಲವೇನು? ಆ ವೃತ್ತಿಯಲ್ಲಿ ಸಮಾಜದ ಹಿತಸಂರಕ್ಷಣೆ ಮಾಡುವದು ಸಾಧ್ಯವಿಲ್ಲವೇನು? ಸುಲಭದಲ್ಲಿ ಧನವನ್ನು ಗಳಿಸಿ ಮತ್ತರಾಗಿ ಮೆರೆಯಬೇಕೆಂಬ ವಿಲಾಸಿಗಳು ಇಂಥಾ ವೃತ್ತಿಯನ್ನವಲಂಬಿಸಬೇಕು. ಲಾಯರುಗಳೇ ತಮ್ಮ ವೃತ್ತಿಯು ಮಾನ್ಯ ಉದ್ಯೋಗವೆಂದು ಪರಿಗಣಿಸುವದು. ತಮ್ಮ ಕೆಲಸದ ಪ್ರತಿಫಲವನ್ನು ನಿಶ್ಚಯಿಸುವವರೂ ಅವರೇ ಆದ ಪ್ರಯುಕ್ತ ಹೊಗಳಿಕೆಯ ಮಾತುಗಳಿಂದ ಬಡ ಜನರನ್ನು ಮರುಳುಗೊಳಿಸಿ ಅವರ ಆರ್ಥಿಕ ದುರವಸ್ಥೆಗೆ ಕಾರಣರಾಗುವರು. ಅವರು ದೇಶಹಿತಕ್ಕಾಗಿ ಏನೊಂದು ಕಾರ್ಯವನ್ನು ಮಾಡಿದ್ದರೆ ಅದು ದುಡ್ಡಿನ ದೃಷ್ಟಿಯಿಂದಲ್ಲದೆ ಬೇರಲ್ಲ. ಅಂತ ಬಳಿಕ ಅಂಥಾ ಕಾರ್ಯವನ್ನು ಸತ್ಕಾರ್ಯವೆಂದು ಕರೆಯಲಿಕ್ಕಾಗುವದೇನು?

ಹಿಂದೂ ಮುಸ್ಲಿಮರ ಜಗಳಗಳನ್ನು ಆದ್ಯಂತವಾಗಿ ವಿಚಾರಿಸಿ ತಿಳಿಯುವವರಿಗೆ ಅವರ ಮೂಲಕಾರಣವು ವಕೀಲರ ಕೈವಾಡವೆಂಬುದು ತಿಳಿಯದಿರದು. ಇವರ ಈ ಹಾವಳಿಯಿಂದಾಗಿ ಅನೇಕ ಕುಟುಂಬಗಳೇ ನಾಶವಾಗಿವೆ; ಅಣ್ಣ ತಮ್ಮಂದಿರಲ್ಲಿ ವೈರತ್ವವು ಬೇರೂರಿದೆ. ಅನೇಕ ದುರಾಚಾರಗಳು ನಡೆದಿವೆ. ಆದರೆ ಅದಕ್ಕಿಂತ ಅಮೋಘವಾದ ತಪ್ಪನ್ನು ಎಂದರೆ, ಭಾರತದಲ್ಲಿಯ ಬ್ರಿಟಿಷರ ಹಿಡಿತವನ್ನು ಬಲಗೊಳಿಸಿದವರು ಈ ನಮ್ಮ ಲಾಯರು ಬಂಧುಗಳೇ. ನ್ಯಾಯಕೋರ್ಟುಗಳಿಲ್ಲದಿದ್ದರೆ ಬ್ರಿಟಿಷ್ ಸಾರ್ವಭೌಮತ್ವಕ್ಕೆ ಭಾರತದಲ್ಲಿ ಅಧಿಕಾರ ನಡೆಸಲು ಸಾಧ್ಯವಿತ್ತೇನು? ಜನತೆಯ ಹಿತಕ್ಕಾಗಿ ಈ ನ್ಯಾಯಸ್ಥಾನಗಳು ಕಲ್ಪಿಸಲ್ಪಟ್ಟವೆಯೆಂಬುದು ಮಿಥ್ಯ ತಪ್ಪಭಿಪ್ರಾಯ. ಜನತೆಯಲ್ಲಿ ಪರಸ್ಪರ ನಡೆಯಬಹುದಾದ ಜಗಳಗಳನ್ನು ನ್ಯಾಯಸಮರ್ಪಕವಾಗಿ ತೀರ್ಮಾನಿಸಲು ನಗರಗಳಲ್ಲಿರುವ ಮಧ್ಯಸ್ಥಗಾರರಿಂದ ಸಾಧ್ಯವಾಗದು. ನಿಜವಾಗಿಯೂ ಜನರು ತಮ್ಮ ಜಗಳಗಳನ್ನು ತಮ್ಮ ನೆಂಟರ ಅಥವಾ ಇತರ ಮುಖ್ಯಸ್ಥರ ಮುಖೇನ ತೀರ್ಮಾನಿಸಿಕೊಳ್ಳುವವರಿಂದ ತಮ್ಮ ಮನುಷ್ಯತ್ವವನ್ನು ಕಳಕೊಳ್ಳುತ್ತಾರೆ. ಅದರಲ್ಲೂ ಅವರು ನ್ಯಾಯಸ್ಥಾನಗಳ ಸಹಾಯ ಪಡೆದರೆ ತಮ್ಮ ಹೇಡಿತನ ಹಾಗೂ ಪರದಾಸ್ಯವನ್ನು ಇನ್ನೂ ಬಲಪಡಿಸಿದಂತಾಯಿತು. ಪರಸ್ಪರ ಕದನಗಳಲ್ಲಿ ತಮ್ಮಲ್ಲಿಯ ಭಿನ್ನಾಭಿಪ್ರಾಯ ಯಾ ಜಗಳಗಳನ್ನು ಪೂರ್ವಕಾಲದಲ್ಲಿ ತೀರ್ಮಾನಿಸಿಕೊಳ್ಳುವ ಕಾಲಕ್ಕೆ ಅದು ಅಶಿಕ್ಷಿತ ಪದ್ಧತಿಯೆಂದು ಕರೆಯಲ್ಪಟ್ಟಿತು. ಆದರೆ ಇಂದು ನಮ್ಮಲ್ಲಿಯ ಭೇದಭಾವವನ್ನು ಪರಿಹರಿಸಲು ಮೂರನೇಯವರಿಗೆ ನಮ್ಮನ್ನ ಒಪ್ಪಿಸಿಕೊಳ್ಳುವದು ಸ್ವಾತಂತ್ರ್ಯವನ್ನರಿಯದ ಶಿಕ್ಷಿತ ಸಮಾಜದ ಮೌಢ್ಯತೆಯೆಂದರೆ ತಪ್ಪಾಗುವದೇ? ಖಂಡಿತವಾಗಿಯೂ ಮೂರನೇ ಪಂಗಡದವರ ತೀರ್ಮಾನವು ಧರ್ಮಬದ್ಧವಾಗಿರಲಿಕ್ಕೆ ಸಾಧ್ಯವಿಲ್ಲ. ಆಯಾಯ ಪಂಗಡಗಳೇ ತಮ್ಮ ತಮ್ಮ ತಪ್ಪನ್ನು ಚೆನ್ನಾಗಿ ತಿಳಿದವರು. ನಮ್ಮ ಹಣವನ್ನು ತೆಗೆದುಕೊಂಡು ನಮಗೆ ನ್ಯಾಯಕೊಡುವರೆಂದು ನಾವು ನಂಬುವದು ಯೋಗ್ಯವೇ? ಹಣದ ದೃಷ್ಟಿಯಿಂದ ಶ್ರಮಿಸುವವರಿಗೆ ಧರ್ಮದ ಸೂಕ್ಷ್ಮದೃಷ್ಟಿಯು ತಿಳಿಯುವದೇ?

ಪ್ರಾಮುಖ್ಯವಾಗಿ ಮನಸಿನಲ್ಲಿಡಬೇಕಾದ ವಿಚಾರವೆಂದರೆ ವಕೀಲರ ಸಹಕಾರವಿಲ್ಲದಿದ್ದ ಪಕ್ಷ ನ್ಯಾಯಸ್ಥಾನಗಳು ಸ್ಥಾಪಿತವಾಗುತ್ತಿರಲಿಲ್ಲ. ಇದ್ದರೂ ತಮ್ಮ ಕೆಲಸವನ್ನು ಮಾಡಲಿಕ್ಕಾಗುತ್ತಿರಲಿಲ್ಲ. ಅವುಗಳಿಲ್ಲದೆ ಬ್ರಿಟಿಷರು ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ನಡೆಸಲಾಗುತ್ತಲೂ ಇರಲಿಲ್ಲ. ಬರೇ ಯೂರೋಪಿಯನ್ ಜಡ್ಜರೂ, ವಕೀಲರೂ ಇದ್ದಿದ್ದರೆ ಅವರು ಬರೇ ಇಂಗ್ಲೀಷ್ ಜನಾಂಗದ ಮೇಲೆ ತಮ್ಮ ಅಧಿಕಾರವನ್ನು ನಡೆಸಲು ಸಾಧ್ಯರಾಗುತ್ತಿದ್ದರು. ಯೂರೋಪಿಯನರಿಗೆ ಭಾರತೀಯ ಜಡ್ಜರ ಹಾಗೂ ವಕೀಲರ ಸಹಕಾರವಿಲ್ಲದೆ ಏನೊಂದೂ ಕಾರ್ಯ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಪ್ರಾರಂಭದಲ್ಲಿ ವಕೀಲರನ್ನು ನಿರ್ಮಿಸಿದ್ದು ಹೇಗೆ ಮತ್ತು ಅವರಿಗೆ ಕೊಟ್ಟ ಸವಲತ್ತುಗಳೇನೇನು ಎಂಬುದನ್ನು ತಿಳಿದರೆ ವಕೀಲ ವೃತ್ತಿಯು ಎಂಥಾ ಭಯಂಕರವೃತ್ತಿಯೆಂಬುದು ಮನವರಿಕೆಯಾಗದಿರದು. ಇಂದು ವಕೀಲರೆಲ್ಲರೂ ತಮ್ಮ ವೃತ್ತಿಯನ್ನು ಅಗೌರವದ ಕೆಲಸವೆಂದು ತಿಳಿದು ಕಿತ್ತೊಗೆದರೆ ಬ್ರಿಟಿಷ್ ಆಡಳಿತೆಯು ಒಂದೇ ಒಂದು ದಿನದಲ್ಲಿ ಕುಸಿದು ಬೀಳುವದು. ನಾವು ಪರಸ್ಪರ ಕಲಹ ಮಾಡಿಕೊಳ್ಳುವವರೆಂದೂ, ನ್ಯಾಯಸ್ಥಾನಗಳಿಲ್ಲದಿದ್ದರೆ ನೀರಿಲ್ಲದ ಮೀನಿನ ಹಾಗೆ ನಾವಾಗುವೆವೆಂದೂ ನಮ್ಮ ಮೇಲೆ ಆರೋಪಣೆಯನ್ನು ಹೊರಿಸಿರುವ ಬ್ರಿಟಿಷರ ಕಣ್ಣು ತೆರೆಯುವದು. ಈ ಮೇಲೆ ಹೇಳಿದ ವಿಚಾರಗಳೆಲ್ಲವೂ ನ್ಯಾಯಾಧಿಕಾರಿಗಳಿಗೂ ಅನ್ವಯಿಸುತ್ತವೆ. ಇಂದು ಬ್ರಿಟಿಷ್ ಆಳ್ವಿಕೆಯ ಪ್ರಗತಿಗೆ ಆಧಾರಸ್ತಂಭಗಳೆಂದರೆ ನ್ಯಾಯಾಧೀಶರು ಮತ್ತು ವಕೀಲರು. ಈ ಸ್ತಂಭಗಳ ಬಲದ ಮೇಲೆಯೇ ಬ್ರಿಟಿಷ್ ಸಾರ್ವಭೌಮತ್ವವು ತನ್ನ ಅಧಿಕಾರವನ್ನು ಚಲಾಯಿಸುತ್ತಿರುವದು. ಮುಂದಿನ ವಾರ ಡಾಕ್ಟರರು ಹೇಗೆ ಭಾರತದ ಅವನತಿಗೆ ಕಾರಣರೆಂಬುದನ್ನು ತರ್ಕಿಸಲಾಗುವದು.

(ಈ ಲೇಖನವು ಯಾರಿಗೂ ಅನ್ವಯಿಸದು)

ಅಖಿಲ ಭಾರತ ಕಾಂಗ್ರೆಸ್

ಕಮಿಟಿ ಮೀಟಿಂಗು.

ಈ ಸಾರಿಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗು ಬಹಳ ಸಮಹತ್ವದ್ದಿದೆ. ತ್ರಿಪುರಿಯ ಅಧಿವೇಶನದ ನಂತರ ಇದೇ ಅದರ ಪ್ರಥಮ ಕೂಡುವಿಕೆಯಾಗಿದೆ. ವರ್ಕಿಂಗ್ ಕಮಿಟಿಯನ್ನು ಈ ವರೆಗೆ ನೇಮಕಮಾಡಿಲ್ಲವಾದುದರಿಂದ ಆ ವಿಚಾರ ದೀರ್ಘ ಚರ್ಚೆಯು ಈ ಮೀಟಿಂಗಿನಲ್ಲಿ ಬರಬಹುದು. ಮೀಟಿಂಗಿನ ತಾರೀಕು ಇನ್ನೂ ನಿಶ್ಚಯಿಸಲ್ಪಡದಿದ್ದರೂ ಏಪ್ರಿಲ್ ಮೂರನೇ ವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುವದು. ಕಲ್ಕತ್ತಾದ ವೆಲ್ಲಿಂಗ್‌ಡನ್ ಚೌಕಿಯಲ್ಲಿ ಮೀಟಿಂಗನ್ನು ಕೂಡಿಸುವ ಏರ್ಪಾಡು ನಡೆದಿದೆ. ಸು—

ಮೂರು 5,000 ಮಂದಿ ಜನರು ಕೂಡಬಹುದಾದ ಒಂದು ಚಪ್ಪರವನ್ನು ಹಾಕಿಸಲಾಗುವುದು. ಮುಂದಿನ ಸನ್ನಾಹಗಳು ತಾರೀಕು ನಿಶ್ಚಯಿಸಿದ ನಂತರ ಪ್ರಾರಂಭವಾಗುವವು. ಇಡೀ ಕಾಂಗ್ರೆಸೇ ಅಲ್ಲ; ಜಗತ್ತೇ ಮೀಟಿಂಗಿನ ಫಲಿತಾಂಶವನ್ನು ಎದುರು ನೋಡುತ್ತಿದೆ. ವರ್ಕಿಂಗ್ ಕಮಿಟಿಯು ಹೇಗೆ ನೇಮಿಸಲ್ಪಡಬೇಕು ಮತ್ತು ಯಾವ ಯಾವ ಪಂಗಡಕ್ಕೆ ಎಷ್ಟೆಷ್ಟು ಪ್ರತಿನಿಧಿಗಳಿರಬೇಕು ವಗೈರೆ ವಿಚಾರಗಳನ್ನು ಸುಭಾಷ್ ಬಾಬುಗಳು ಗಾಂಧೀಜಿಯವರೊಡನೆ ತರ್ಕಿಸಲಿರುವರು.

ರಾಷ್ಟ್ರೀಯ ಸಪ್ತಾಹವನ್ನು ಆಚರಿಸಿರಿ.

ಇಪ್ಪತ್ತು ವರ್ಷಗಳ ಹಿಂದೆ ಪಂಜಾಬ್ ಪ್ರಾಂತ್ಯದಲ್ಲಿಯ ಅಮೃತಸರ ಪಟ್ಟಣದ ಜಾಲಿಯನ್ವಾಲಾ ಭಾಗದಲ್ಲಿ ಜನರಲ್ ಡಾಯರನು ಶಾಂತಿಯುಕ್ತರಾದ ರಾಷ್ಟ್ರವೀರರ ಮೇಲೆ ಮಾಡಿದ ಅತ್ಯಾಚಾರದಿಂದ ಹುತಾತ್ಮರಾದ ದೇಶಬಾಂಧವರ ಸ್ಮರಣೆಯನ್ನು ನಾವು ಪ್ರತಿ ವರ್ಷ ಮಾಡುತ್ತ ಬಂದಿರುವೆವು. ಈ ವರ್ಷವಾದರೂ ಎಲ್ಲ ಹಳ್ಳಿ-ಪಟ್ಟಣಗಳಲ್ಲಿ ಈ ಸಪ್ತಾಹವು ತಾ. 6-4-39ರಿಂದ 13-4-37ರ ವರೆಗೆ ಯಶಸ್ವಿಯಾಗುವಂತೆ ನಾವೆಲ್ಲರೂ ಪ್ರಯತ್ನಮಾಡಬೇಕು.

ಈ ಸಪ್ತಾಹದಲ್ಲಿ ತ್ಯಾಗವೀರರ ಸ್ಮರಣೆ ಮಾಡಿ, ಅವರ ಚರಿತ್ರೆಯನ್ನು ಓದುವುದು, ಕೇಳುವುದಲ್ಲದೆ ಆಯಾ ಸ್ಥಳಗಳಲ್ಲಿ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಮಾಡಿಕೊಳ್ಳಬೇಕು.

ಸಪ್ತಾಹವು ಮುಗಿದ ಮೇಲೆ ಜಿಲ್ಲಾ ಕಮಿಟಿಯು ಈ ಸಂಬಂಧ ತನ್ನ ಜಿಲ್ಲೆಯ ವರದಿಯನ್ನು ನಮ್ಮ ಕಚೇರಿಗೆ ಕಳುಹಿಸಿಕೊಡಬೇಕು.

ಕ. ಪ್ರಾ. ಕಾ. ಕ, ನಾ. ಸು. ಹರ್ಡೀಕರ,
ಧಾರವಾಡ. (ಗೌ. ಕಾರ್ಯದರ್ಶಿ.)

—:o:—

ಗಿಡಗಳ ಬೇಟೆ.

ಹಾರುವ ನೊಣ-ನುಸಿಗಳನ್ನು ಹಿಡಿವ ನಿರುದ್ಯೋಗಿ ವಿದ್ಯಾವಂತರವನ್ನು ಕಂಡು, ಅನೇಕ ಬಾರಿ ನೀವು ಆಶ್ಚರ್ಯಗೊಂಡುದದೆ ಎನ್ನುವಾಗ, ಮಿಡಿತೆಯನ್ನು ಹಿಡಿವ ಗಿಡವಿದೆ ಎಂದರೆ ಅದೆಷ್ಟು ಅಚ್ಚರಿಯಾಗದು? ಡಾರ್ಲಿಂಗ್ ಟೋನಿಯೊ ಕ್ರಿಸಂಪೋರಾ ಎಂಬದೊಂದು ಗಿಡವನ್ನು, ಬೆಳೆಗಳಿಗಾಗುತ್ತಿರುವ ಮಿಡಿತೆಗಳ ಬಾಧೆಯನ್ನು ತಪ್ಪಿಸಲು, ಕಂಡು ಹಿಡಿದಿದ್ದಾರೆ. ಈ ಗಿಡವನ್ನು, ಮಿಡಿತೆಗಳು ಅಧಿಕವಾಗಿರುವಲ್ಲಿ ನೆಟ್ಟರೆ ಸರಿ! ಇದು ಹೆಡೆ ಎತ್ತಿದ ಹಾವಿನಂತೆ ಕಂಡು ಬಂದು, ತನ್ನಲ್ಲಿನ ಮಧುರ ರಸದ ಮೂಲಕ ಮಿಡಿತೆಯನ್ನು ಸೆಳೆದು, ಅದು ಈ ಗಿಡದ ಬಾಯಿಯೊಳಗೆ ಹೋಗುವಂತೆ ಮಾಡುತ್ತದೆ. ಮಿಡಿತೆ, ಗಿಡದ ಬಾಯಿಗೆ ಹೋಗುವುದೇ ತಡ; ಬಾಯಿ ಮುಚ್ಚಲ್ಪಟ್ಟು, ಮಿಡಿತೆಯ ಕೊನೆಯಾದೊಡನೆ ಬಾಯಿ ತೆರೆಯಲ್ಪಡುತ್ತದೆ. ತಿಂಗಳಿಗೊಮ್ಮೆ ಈ ಗಿಡಕ್ಕೆ ಬೇರೆ ಆಹಾರವನ್ನು ಕೊಡಬೇಕಾಗುತ್ತದೆ.

—:0:—

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 25-3-39 ರಲ್ಲು ಬೆಳಿಗ್ಗೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ 1. ಪಿ. ಐ. ಬೆಳ್ಯಪ್ಪನವರು(ಅಧ್ಯಕ್ಷರು) 2. ರಾ. ಬಾ. ಸಿ. ದೇವಯ್ಯನವರು (ಟ್ರೆಜರರ್) 3. ಸಿ. ಜಿ. ಐಯ್ಯಪ್ಪನವರು, 4. ಎನ್. ಬಿ. ಸೋಮಯ್ಯನವರು, 5. ಐ. ಪಿ. ಕಾರ್ಯಪ್ಪನವರು, 6. ಕೆ. ಸಿ. ಕರುಂಬೈಯ್ಯನವರು, 7. ಹೆಚ್. ಯಂ. ಪುಷ್ಪಣ್ಣನವರು, 8. ಯಂ. ಎಸ್. ಸೋಮಯ್ಯನವರು, 8. ಎನ್. ಶಂಕರಯ್ಯನವರು, 10. ಬಿ. ಪಿ. ಮಾಚೈಯ್ಯನವರು, 11. ಯಂ. ಸಿ. ದೇವಯ್ಯನವರು, 12. ಕೆ. ಯಂ. ಕುಶಾಲಪ್ಪನವರು, 13. ಪಿ. ಸಿ. ಕರುಂಬೈಯ್ಯನವರು, 14. ಕೆ. ಕೆ. ಗಣಪತಿಯವರು ಮತ್ತು 15. ಎಸ್. ಎನ್. ರಾಮಶೆಟ್ರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರರೂ, ಸೀನಿಯರ್ ನಾನ್‌ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸುಪರ್ ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಫೆಬ್ರವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಹಿಂದಳ ಶಿಲ್ಕು	14,520	3	1
ಸದರಿ ತಿಂಗಳ ವಸೂಲಿ	24,816	14	0
ಜುಮ್ಲ	39,337	1	1
ಆ ತಿಂಗಳಲ್ಲಿ ಖರ್ಚು	20,856	15	0
ಬಾಕಿ ಶಿಲ್ಕು	18480,	2	1

4. ರಾ. ಬ. ಪಟ್ಟಮಾಡ ದೇವಯ್ಯನವರು ಬ್ಯಾಂಕಿನ ಖಜಾನ್ಜಿತನಕ್ಕೆ ಕೊಟ್ಟ ರಾಜಿನಾಮೆ ಪತ್ರವನ್ನು ಆಲೋಚಿಸಲು ಮುಂದರಿಸಿಡಲಾಯಿತು.

5. ಸರಕಾರಿ ಉದ್ಯೋಗಸ್ಥರುಗಳು ಸಹಕಾರ ಸಂಸ್ಥೆಗಳಲ್ಲಿ ಭಾಗವಹಿಸುವುದಾಗಲೀ ಹಣ ಡಿಪಾಜಿಟ್ಟು ಇಡುವುದಾಗಲೀ ವಗೈರೆ ಬಾಬುಗಳಿಗೆ ಕೊಡಗು ಚೀಫ್ ಕಮಿಷನರವರು ತಾ. 10-1-39 ರಲ್ಲು ಕಳುಹಿಸಿದ ಆರ್ಡರನ್ನು ಪರಿಶೀಲಿಸಿ ರಿಪೋರ್ಟು ಬರೆಯುವಂತೆ ನೇಮಿಸಲ್ಪಟ್ಟ ಸಬ್ ಕಮಿಟಿಯವರು ತಾ. 25-2-39ರ ರೆಸೊಲ್ಯೂಶನ್ ನಂಬ್ರು 4846 ರ ಮೇರೆ ಬರಕೊಂಡ ರಿಪೋರ್ಟನ್ನು ಓದಿ ಮಂಜೂರು ಮಾಡಿದ್ದಲ್ಲದೆ ಸದರಿ ರಿಪೋರ್ಟಿನನುಸಾರವಾಗಿ ಚೀಫ್ ಕಮಿಷನರವರಿಗೆ ಪತ್ರವ್ಯವಹಾರ ಮಾಡುವಂತೆ ತೀರ್ಮಾನವಾಯಿತು.

6. ಪ್ರತ್ಯೇಕ ಮನುಷ್ಯನಿಂದಲ್ಲದೆ ಸಂಸ್ಥೆಗಳಿಂದ ಬ್ಯಾಂಕಿಗೆ ಬರತಕ್ಕ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟು ಮೊಬಲಗು ಬಡ್ಡಿ ಸೇರಿ ಯಾವ ಸಮಯಗಳಲ್ಲೂ ರೂ. 10,000ಕ್ಕೆ ಮೀರಕೂಡದೆಂದು ಸೇವಿಂಗ್ಸ್ ಬ್ಯಾಂಕು ರೂಲ್ ನಂಬ್ರು 3 ನ್ನು ತಿದ್ದುಪಡಿ ಮಾಡುವಂತೆ ತೀರ್ಮಾನವಾಯಿತು.

7. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಈ ಕೆಳಗಿನ ಮಹಿಳೆ ಮತ್ತು ಮಹನೀಯರುಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು. 1. ಶ್ರೀಮತಿ ಕೋಡಿರ ಅಕ್ಕವ್ವನವರು 2. ಮುಳ್ಳಂಡ ಮುತ್ತಪ್ಪನವರು ಮತ್ತು 3. ಹೊಟ್ಟೇಂಗಳ ಕಾರ್ಯಪ್ಪನವರು.

8. ಮದ್ರಾಸಿನ ಸೆಂಟ್ರಲ್ ಕೋಆಪರೇಟಿವ್ ಇನ್ಸ್‌ಟಿಟ್ಯೂಟಿನಲ್ಲಿ ತರಬೇತು ಹೊಂದುತ್ತಿರುವ ಹಂಗಾಮಿ ಸುಪರ್ ವೈಜರುಗಳು ಪ್ರಯಾಣದ ಭತ್ಯ ಬ್ಯಾಂಕಿನಿಂದ ಕೊಡಿಸಬೇಕೆಂದು ಬರಕೊಂಡ ಅರ್ಜಿಯನ್ನು ಹಣದ ಅಭಾವದಿಂದ ತಿರಸ್ಕರಿಸಲಾಯಿತು.

9. ಮೆ. ಐ. ಸಿ. ಸುಬ್ಬಯ್ಯನವರು ಬ್ಯಾಂಕಿನಲ್ಲಿರುವ ತನ್ನ ಟ್ರಿಫ್ಟ್ ಡಿಪಾಜಿಟ್ಟು ಮೊಬಲಗು ರೂ. 6525 ನ್ನು ಮತ್ತು ಶ್ರೀಮತಿ ಮುಕ್ಕಾಟಿರ ಕುಂಜ್ಞಮ್ಮನವರ ಹೆಸರಿನಲ್ಲಿರುವ ಮಾಬಲಗು ರೂ. 8156-4-0 ನ್ನು ಸಹ ವಾಪ್ಸು ಕೊಡಬೇಕೆಂದು ಮೆ. ಸುಬ್ಬಯ್ಯನವರು ಬರಕೊಂಡ ಪತ್ರವನ್ನು ಓದಲಾಯಿತು.

ಟ್ರಿಫ್ಟ್ ಸರ್ಟಿಫಿಕೇಟ್ ರೂಲ್ ಮೇರೆ ಸದರಿ ಮಹನೀಯರ ಡಿಪಾಜಿಟ್ಟು ಮೊಬಲಗನ್ನು ವಾಪ್ಸು ಕೊಡುವಂತೆಯೂ, ಮೇಲ್ಕಂಡ ಮಹನೀಯರು ಬ್ಯಾಂಕಿಗೆ ಅರ್ಜಿ ಬರೆದುಕೊಂಡ ನಂತರ ಅವರ ಡಿಪಾಜಿಟ್ಟು ಮೊಬಲಗನ್ನೂ ಸಹ ವಾಪ್ಸು ಕೊಡುವಂತೆಯೂ ತೀರ್ಮಾನವಾಯಿತು.

10. ಬರುವ ಎಪ್ರಿಲ್ ತಾ. 8 ಮತ್ತು 9ರಲ್ಲು ನಡೆಯುವ ಅಖಿಲಭಾರತ ಸಹಕಾರ ಸಂಘಗಳ ಸ್ಟ್ಯಾಂಡಿಂಗ್ ಕಮಿಟಿ ಮೀಟಿಂಗಿಗೆ ಬ್ಯಾಂಕಿನಿಂದ ಡೆಲಿಗೇಟರನ್ನು ಮತ್ತು ಚರ್ಚಿಸಲಿಕ್ಕಿರುವ ವಿಷಯಗಳನ್ನು ಕಳುಹಿಸಬೇಕೆಂದು ಸದರಿ ಸಂಸ್ಥೆಯ ಗೌರವ ಕಾರ್ಯದರ್ಶಿಯವರು ಬರೆದ ಪತ್ರ ನಂಬರು 1640ನ್ನು ಓದಲಾಗಿ, ಬ್ಯಾಂಕಿನ ಪರವಾಗಿ ಪ್ರತಿನಿಧಿಯನ್ನು ಹಾಗೂ ಚರ್ಚೆಗಿರುವ ವಿಷಯಗಳನ್ನು ಕಳುಹಿಸುವದು ಸಾಧ್ಯವಿಲ್ಲವಾಗಿ ತೀರ್ಮಾನವಾಯಿತು.

11. ಪೊನ್ನಂಪೇಟೆ ಟೌನ್ ಸೊಸೈಟಿಯವರು ಬ್ಯಾಂಕಿನ ರೆಸೊಲ್ಯೂಶನ್ ನಂಬರು 4870ರ ಮೇರೆ 300 ರೂಪಾಯಿಗಿಂತ ಹೆಚ್ಚು ಅಸಲಿಗಾಗಿಯೂ ಮತ್ತು ಪೂರ್ತಿ ಬಡ್ಡಿಯನ್ನು ಪಾವತಿ ಮಾಡಿರುವುದರಿಂದ ಸದರಿ ಸೊಸೈಟಿಗೆ ಅವರ ಅರ್ಜಿ ಮೇರೆ ಮತ್ತು ಯೂನಿಯನ್ ಪ್ರಸಿಡೆಂಟರ ಶಿಫಾರಸು ಮೇರೆ 10 ಮೂರು ತಿಂಗಳ ಕಂತುಗಳನ್ನು ಮಂಜೂರು ಮಾಡಲಾಯಿತು.

12. ಬ್ಯಾಂಕಿಗೆ ಸಾಲಕ್ಕೋಸ್ಕರ ಈ ಕೆಳಗಿನ ಸೊಸೈಟಿಗಳು ಬರಕೊಂಡ ಅರ್ಜಿಗಳನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು. ಫ್ರೇಜರ್‌ಪೇಟೆ ಟೌನ್ ಸೊಸೈಟಿ, (2) ನಂದಿಗುಂದ ಸೊಸೈಟಿ, (3) ಕೊಳತಡಬೈಗೋಡು ಸೊಸೈಟಿ, (4) ಕುಯಂಗೇರಿ ಸೊಸೈಟಿ, (5) ಮೂರ್ನಾಡು ಬಾಡಗ ಸೊಸೈಟಿ, (6) ಕೈಕಾಡು ಸೊಸೈಟಿ, (7) ಬೇಂಗುನಾಡು ಬಾಡಗ ಸೊಸೈಟಿ, (8) ಕುಕ್ಲೂರು ಸೊಸೈಟಿ, (9) ಕೈಕೇರಿ ಸೊಸೈಟಿ ಮತ್ತು (10) ದೇವನೂರು ಸೊಸೈಟಿ.

14. ಅಮ್ಮತ್ತಿ ಮತ್ತು ಕಿಗ್ಗಟ್ಟುನಾಡು ಕ್ರಾಪ್ ಲೋನ್ ಮತ್ತು ಸೇಲ್ ಸೊಸೈಟಿಗಳಿಗೆ ಅವುಗಳ ಸಾಲದ ಅರ್ಜಿ ಮೇರೆ ರೂ. 2000 ಮತ್ತು 1500 ಮಂಜೂರು ಮಾಡಲಾಯಿತು.

15. ಬ್ಯಾಂಕಿನ ಇನ್ನೊಂದು ಡೈರೆಕ್ಟರುಗಳ ಮೀಟಿಂಗನ್ನು ಬರುವ ಎಪ್ರಿಲ್ ತಿಂಗಳ 3ನೇ ವಾರದಲ್ಲಿ ನಡೆಸುವಂತೆ ತೀರ್ಮಾನಿಸಲಾಯಿತು.

16 ತನ್ನ ಮನೆ ಬೆಂದು ಹೋಗಿ ಅಪಾರ ನಷ್ಟಕ್ಕೆ ಈಡಾದುದರಿಂದ ಬ್ಯಾಂಕಿನಿಂದ ಧನ ಸಹಾಯ ಕೊಡಿಸಬೇಕೆಂದು ಕೈಕಾಡು ಮುಕ್ಕಾಟಿರ ಮೆ. ಬೆಳ್ಯಪ್ಪನವರು ಬರಕೊಂಡ ಅರ್ಜಿಯನ್ನು ಹಣದ ಅಭಾವದಿಂದ ತಿರಸ್ಕರಿಸಲಾಯಿತು.

17. ಬ್ಯಾಂಕಿನ ಪ್ರೆಸಿಡೆಂಟರು, ಗೌರವ ಕಾರ್ಯದರ್ಶಿ, ಟ್ರೆಜರರ್ ಮತ್ತು ಮೆ. ಗಳಾದ ಸಿ. ಜಿ. ಐಯ್ಯಪ್ಪನವರು ಮತ್ತು ಕೆ. ಸಿ. ಕರುಂಬಯ್ಯನವರುಗಳಿಂದ ಕೂಡಿದ ಒಂದು ಡೆಪ್ಯುಟೇಶನು ಕೊಡಗಿನ ಸಹಕಾರ ಚಳವಳದ ವಿಷಯವಾಗಿಯೂ, ಮುಖ್ಯವಾಗಿ ಸೆಂಟ್ರಲ್ ಬ್ಯಾಂಕಿನ ಕೆಲಸ ಕಾರ್ಯಗಳ ವಿಷಯವಾಗಿಯೂ ಚೀಫ್ ಕಮಿಷನರೊಡನೆ ಪ್ರಸ್ತಾಪಿಸಲಿಕ್ಕಾಗಿ ಬರುವ ಎಪ್ರಿಲ್ ತಿಂಗಳಲ್ಲಿ ಅವರು ಕೊಡಗಿಗೆ ಬರುವಾಗ್ಯೆ ಭೇಟಿ ಮಾಡುವಂತೆ ತೀರ್ಮಾನಿಸಲಾಯಿತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು.

ಶರಚ್ಚಂದ್ರ ಬೋಸರು.

ಬಂಗಾಲ ಅಸೆಂಬ್ಲಿಯಲ್ಲಿಯ ಕಾಂಗ್ರೆಸ್ ಪಕ್ಷದ ಮುಖಂಡರೂ, ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ ಆದ ಶರಚ್ಚಂದ್ರ ಬೋಸರು ಕಾಂಗ್ರೆಸ್ ಅಧಿಕಾರ ಸ್ಥಾನಗಳಿಂದ ನಿವೃತ್ತರಾಗುವ ಯೋಚನೆ ನಡೆಸಿರುವರೆಂದು ತಿಳಿದುಬರುತ್ತದೆಂದು 'ಸ್ಟಾರ್ ಆಫ್ ಇಂಡಿಯಾ' ಪತ್ರಿಕೆಯು ಪ್ರಸಿದ್ಧ ಮಾಡಿರುತ್ತದೆ. ತ್ರಿಪುರಿ ಕಾಂಗ್ರೆಸ್ಸಿನಿಂದ ತಿರುಗಿ ಬಂದ ಮೇಲೆ ಶರಚ್ಚಂದ್ರರು ಹೈಕೋರ್ಟಿಗೆ ಪ್ರತಿ ದಿವಸ ತಪ್ಪದೆ ಹೋಗುತ್ತಿದ್ದರೂ ಬಂಗಾಲ ಅಸೆಂಬ್ಲಿಗೆ ಮಾತ್ರ ಅವರು ಎರಡೇ ದಿವಸ ಹಾಜರಿದ್ದರೆಂದೂ ಪತ್ರಿಕೆಯು ಉಲ್ಲೇಖಿಸಿರುತ್ತದೆ.

—:0:—

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-42 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52-17) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಟಿ. ಮುದ್ದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ.

ಟಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.

ಶಾಪೋಕ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.

(ಶಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ** ರೂ. 2,53,15,500.

1937ರಲ್ಲಿ **ಪೂರ್ತಿಯಾದ ಉದ್ಯೋಗ** ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ... ೧೦೦೦ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ೨...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್**, ಬೆಂಗಳೂರು.

52-56

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಶಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲು ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

37 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅನುಲ್ಲಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೊನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೊನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂಪ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ:—ಮೆ. ಎಸ್. ಎನ್ ರಾಮಶೆಟ್ಟಿಯವರು

ತಾ. 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ. 55.	ರೂ. 35	ರೂ. 22
6 ತಿಂಗಳಿಗೆ—	,, 100.	,, 35	,, 22	,, 13
3 ತಿಂಗಳಿಗೆ—	,, 60.	,, 20	,, 13.	,, 8.
1 ತಿಂಗಳಿಗೆ—	,, 25.	,, 10	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(82-13)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1530

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩—೮—೦
ತಾ. ೧೪—೪—೧೯೩೯.
ಸಂಪುಟ ೧೮] [ಸಂಚಿಕೆ ೪೫

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at . p. a.
in denominatio: [illegible]
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-18

ಕೇರಳ ಆಯುರ್ವೇದಿಕ್ ವೈದ್ಯಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು. ರಸಾಯನಗಳು, ಚೂರ್ಣಗಳು, ಮಾತ್ರೆಗಳು,;ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‍ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-7

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಕೇರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕೆನೈಟ್. ಎಂದೂ ತುಂಡಾಗದ
ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ
21 ಕದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.
ನಿಮಗೆ ತೃಪ್ತಿಯಾಗಬೇಕೆಂ[illegible]ದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂ[illegible] ಆರೋಗ್ಯ! ನೆನಪಿರಲಿ!

ಗಳೇ:

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಶೇಖರಣಾರ್ಥ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20. 40, 80; 200, 400 ಮತ್ತು 800 ಗಳ ನಾನಾಪರ್ಗದ ಠೇವಣಾತಿಗಳಿಗೆ ವ್ಯೆಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಪಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-49

The Agricultural &
Industrial Bank Ltd

"ZANDU"

ಝಂಡೂರವರ | **ಝಂಡೂರವರ**

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ, ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

ಮತ್ತು ಆಯುರ್ವೇದ ವಿದ್ವಾನ್

(52-29)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

12-25

ಈ ವಾರದ ಕಥೆ.

ಸೇಡು!

(ಲೇ-ಷಣ್ಮುಖಸಿಂಹ, ಸಂಟಿಕೊಪ್ಪ.)

ವಿಮಲೆಯು ಆ ಸಣ್ಣ ಮಗುವನ್ನು ಎತ್ತಿಕೊಂಡು, ವೇಗವಾಗಿ ಮುಂದೆ ನಡೆಯತೊಡಗಿದಳು. ಮಧ್ಯಾಹ್ನದ ಬಿಸಿಲಿನ ತಾಪವು ಬಹಳ ಜೋರಾಗಿತ್ತು. ನಡೆಯುವುದೂ ಸಹ ಬಹಳ ದುಸ್ತರವಾಗಿತ್ತು. ಇದಾವುದನ್ನೂ ಲಕ್ಷ್ಯಸದೆ ಅವಳು ಒಂದೇ ಸಮನೆ ನಡೆಯುತ್ತಲೇ ಇದ್ದಳು; ಅವಳು ಪರಿಧಾನ ಮಾಡಿಕೊಂಡಿದ್ದ ವಸ್ತ್ರವು ಧೂಳಿನಿಂದ ಮಾಸಿಹೋಗಿತ್ತು. ಮುಖವು ಬಹಳ ವ್ಯಾಕುಲತೆಯಿಂದ ತುಂಬಿತ್ತು. ತೃಷೆಯು ಅವಳನ್ನು ಬಹಳ ಪೀಡಿಸುತ್ತಿತ್ತು. ಹದಿನೈದು ಮೈಲುಗಳ ದೂರವನ್ನು ಬರೀ ಕಾಲುನಡೆಯಿಂದಲೇ ಆ ಸಣ್ಣ ಮಗುವನ್ನು ಎತ್ತಿಕೊಂಡು ಬಂದಿದ್ದಳು. ತನ್ನ ಇಷ್ಟಿತ ಸ್ಥಳವನ್ನು ವೇಗನೆ ಸೇರಬೇಕೆಂದು ಅವಳು ಬಹಳ ಲವಲವಿಕೆಯಿಂದಿದ್ದಳು—ಪೇಟೆಯು ಸಮೀಪವಾಯಿತೆಂದು ವಿಮಲೆಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾದಂತಾಯಿತು. ಮಗುವು ಅಳಲು ತೊಡಗಿತು. ಅಳುತ್ತಿರುವ ಮಗುವನ್ನು ಅಲ್ಲೇ ಮರದ ನೆರಳಲ್ಲಿ ಮಲಗಿಸಿ, ರಸ್ತೆಯ ಬದಿಯಲ್ಲಿರುವ ನಲ್ಲಿಯಿಂದ ತನ್ನ ಎರಡು ಕೈಗಳಿಂದ ಹಿಡಿದು ನೀರನ್ನು ಕುಡಿಯತೊಡಗಿದಳು. ದಾಹವು ಉಪಶಮನವಾಯಿತು; ಅಳುತ್ತಿರುವ ಮಗುವನ್ನು ಸಂತೈಸಲಾರದೆ ಹೋದಳು. ಎರಡು ದಿವಸಗಳಿಂದಲೂ ಹೊಟ್ಟೆಗೆ ಅನ್ನ ದೊರಕದಿಲ್ಲ ವಿಮಲೆಗೆ—ಹಸಿವೆಯಿಂದ ಕಂಗೆಟ್ಟಿದ್ದಳು. ಏನೋ ಮಹತ್ಕಾರ್ಯಕ್ಕಾಗಿ ಅಷ್ಟು ದೂರ ಯಾವುದನ್ನೂ ಗಮನಿಸದೆ ಪಟ್ಟಣಕ್ಕೆ ಬಂದಿದ್ದಳು ಅವಳು.

ಮಗುವು ಅಳುವುದನ್ನು ನಿಲ್ಲಿಸಲಿಲ್ಲ; ಅವಳಿಗೆ ಕೋಪವು ಬಂದಿತು. 'ಈ ಮಗುವಿಗೆ ಜನ್ಮಕೊಟ್ಟ ನನಗೆ ಹೊಟ್ಟೆಗೆ ಅನ್ನವಿಲ್ಲದೆ, ಧರಿಸಲಿಕ್ಕೆ ಬಟ್ಟೆಯಿಲ್ಲದೆ........, ನನ್ನ ಜೀವನವನ್ನು ಮಣ್ಣುಗೂಡಿಸಿ........ನನ್ನನ್ನು ಪರದೇಶಿಯಾಗಿ ಮಾಡಿ ಓಡಿದ......ಶ್ರೀಧರ......ಸೇಡನ್ನು ತೀರಿಸದೆ ಬಿಡೆನು........' ಇನ್ನೂ ಏನೇನೋ ಹೇಳುತ್ತಾ ಆ ಹೆಂಗಸು ಬೀದಿಯಲ್ಲಿ ನಡೆಯತೊಡಗಿದಳು.

ಪೇಟೆಯ ಇಕ್ಕೆಡೆಯ ಅಂಗಡಿಗಳನ್ನೂ ನೋಡುತ್ತಾ ಹೋಗುತ್ತಿದ್ದಳವಳು. ಪೇಟೆಯ ಮಧ್ಯ ಭಾಗಕ್ಕೆ ತಲಪಿದಳು. ಅಕಸ್ಮಾತಾಗಿ ಬೋರ್ಡೊಂದು ಅವಳ ಮನಸ್ಸನ್ನು ಸೆಳೆಯಿತು. ಅಲ್ಲೇ ನಿಂತು ನೋಡತೊಡಗಿದಳು. "ಶ್ರೀಧರ್ ಫ್ರೋಟೋ ಸ್ಟುಡಿಯೊ" ಎಂಬ ದೊಡ್ಡ ಅಕ್ಷರದ ಬೋರ್ಡನ್ನು ಮಹಡಿಯ ಬದಿಗೆ ತೂಗಹಾಕಿದ್ದರು. ಅಲ್ಲೇ ನಿಂತಿರುವ ಜವಾನನ್ನು ಕೇಳಿದಳು ವಿಮಲೆ, 'ಯಜಮಾನರು ಇರುವರೇ?' 'ಇರುವರು; ಆದರೆ ನಿಮ್ಮಂಥ ಭಿಕಾರಿಗಳಿಗೆ ಅವರನ್ನು ಕಂಡು ಆಗಬೇಕಾದುದೇನು?' ಜವಾನನು ದರ್ಪದಿಂದ ನುಡಿದನು. ವಿಮಲೆಗೆ ಬಹಳ ಸಿಟ್ಟು ಬಂದಿತು, ಚಿಂತಿಸಿದಳು. ಕೋಪಕ್ಕೆ ಇದು ಸಮಯವಲ್ಲವೆಂದು ತಿಳಿದು 'ನಾನು ಅವರ ಊರವಳೇ, ಅಗತ್ಯವಾಗಿ ಕಾಣುವ ಕೆಲಸವಿದೆ' ಎಂದು ವಿಮಲೆ ನುಡಿದಳು. ಜವಾನನು ಮಹಡಿಯ ಮೇಲೆ ಹೋಗಿ ತಿರುಗಿ ಬಂದು 'ಬರಹೇಳಿದರು' ಎಂದು ಅವಳನ್ನು ಕರೆದುಕೊಂಡು ಹೋದನು.

ಫ್ರೋಟೋಗ್ರಾಫರ್ ಶ್ರೀಧರರಾಯರು ಆರಾಮ ಕುರ್ಚಿಯೊಂದರ ಮೇಲೆ ಸುಖಾಸೀನರಾಗಿದ್ದರು. ವೈನಿಕಪ್ಪೊಂದು ಅವರ ಬಳಿಯಲ್ಲಿ ಬಿದ್ದಿತ್ತು. ಸಿಗರೇಟೊಂದನ್ನು ಸೇದುತ್ತಾ ಅದರ ಹೊಗೆ ಸುತ್ತಿ ಸುತ್ತಿಕೊಂಡು ಮೇಲಕ್ಕೇರುವುದನ್ನು ಅವಲೋಕಿಸುತ್ತಿದ್ದರು. ಏನೋ ಚಿಂತಿಸುತ್ತಿದ್ದರು. ಸ್ಟುಡಿಯೋದಲ್ಲಿ ಅವರಿಗೆ ಅಷ್ಟೊಂದು ಆದಾಯವಿರಲಿಲ್ಲವಾದ್ದರಿಂದ ಬೇರೆ ಏನಾದರೂ ಕಾರ್ಖಾನೆಯನ್ನು ಹೊರಡಿಸಬೇಕೆಂದು ಚಿಂತಿರುತ್ತಿದ್ದಿರಬೇಕು! ಜವಾನನು ವಿಮಲೆಯನ್ನು ರಾಯರೆದುರಿಗೆ ಕರೆತಂದು ಬಿಟ್ಟು ಹೋದನು.

ವಿಮಲೆಯನ್ನು ನೋಡಿದೊಡನೆಯೇ ರಾಯರ ಮುಖವು ಕಪ್ಪಿಟ್ಟಿತು. ಮುಖವು ವಿಕಾರವಾಯಿತು. ಬಾಯಿಯಿಂದ ಮಾತುಗಳು ಹೊರಡಲೊಲ್ಲವು. ಆಗ 'ವಿ..ಮ..ಲೆ' ಅಸ್ಫುಟವಾಗಿ ತನ್ನಿಂದ ತಾನೇ ಆ ಶಬ್ದವು ಶ್ರೀಧರನ ಬಾಯಿಯಿಂದ ಹೊರಟಿತು. 'ನನ್ನನ್ನು ಗುರುತಿಸಿದಿರಾ?' ವಿಮಲೆಯು ಕೇಳಿದಳು.

'ಹೌದು; ಗುರುತಿಸಿದೆನು. ನಿನ್ನನ್ನು ಇಲ್ಲಿ ಬರಲು ಹೇಳಿದವರಾರು? ನೀನು ನನಗೆ ಮುಖ ತೋರಿಸಬೇಡ........ಇಲ್ಲಿಂದ ಹೊರ ನಡೆ.' ರಾಯರು ನಡುಗುವ ಧ್ವನಿಯಿಂದ ಗರ್ಜಿಸಿದರು. 'ಇದು ನಿಮ್ಮದೇ ಮಗು. ಇದನ್ನು ರಕ್ಷಿಸಿರಿ; ನನ್ನನ್ನು ಕಾಪಾಡಿರಿ. ನಿಮ್ಮನ್ನು ನಂಬಿದ ನನ್ನನ್ನು ನೀವು ಕೈಬಿಟ್ಟು ನಡೆದಿರಿ, ಸಮಾಜದಲ್ಲಿ ನನ್ನನ್ನು ಮುಖ ಎತ್ತದ ಹಾಗೆ ಮಾಡಿದಿರಿ ಎಲ್ಲಕ್ಕೂ ಕಾರಣರು ನೀವು........ನನಗೆ ಇನ್ನಾರು ಗತಿ?' ಎಂದು ಗದ್ಗದ ಕಂಠದಿಂದ ವಿಮಲೆಯು ನುಡಿದು ಆ ಕೂಸನ್ನು ಅವರ ಎದುರಿಗಿರುವ ಮೇಜಿನ ಮೇಲೆ ಮಲಗಿಸಿ, ಕಣ್ಣೀರು ಸುರಿಸುತ್ತಾ ರಾಯರನ್ನು ದಿಟ್ಟಿಸಿ ನೋಡತೊಡಗಿದಳು.

'ಗತಿಯಾರೆಂದು ನನ್ನನ್ನು ಕೇಳಲು ಬಂದೆಯಾ? ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸು. ಬೀದಿಯ ಭಿಕಾರಿಯಾಗು, ನನ್ನ ಕಣ್ಣ ಮುಂದೆ ನಿಲ್ಲಬೇಡ' ಹೇಳುತ್ತಾ ರಾಯರು ಅವಳನ್ನು ಹೊರದೂಡಲು ಜವಾನನ್ನು ಕರೆದರು.

ವಿಮಲೆಗೆ ಆಕಾಶವೇ ಕಳಚಿ ಬಿದ್ದಂತಾಯಿತು. ತನ್ನ ಆಸೆಯೆಲ್ಲಾ—ನಿರಾಶೆಯಾಯಿತು ಸೇಡು! ಇದು ಅವಳ ಕಣ್ಣು ಮುಂದೆ ಬಂದು ನಿಂತಿತು. ಚಿಂತಿಸಿದಳು; ಫಲವಿಲ್ಲ. ರಾಕ್ಷಸೀ ಕೃತ್ಯವನ್ನು ಕೈಗೊಳ್ಳಲು ಮನಸ್ಸು ಮಾಡಿದಳು. 'ನಿಮಗೆ ಒಂದು ಪತ್ರವಿದೆ' ಎಂದು ಹೇಳುತ್ತಾ ರಾಯರ ಸಮೀಪಕ್ಕೆ ಬಂದಳು ಅವಳು. ಬಗ್ಗಿ ತನ್ನ ಮಡಿಲೊಳಗೆ ಬಚ್ಚಿಟ್ಟುಕೊಂಡಿದ್ದ ಹರಿತವಾದ ಚಾಕೊಂದನ್ನು ಹೊರತೆಗೆದಳು. ಚಾಕನ್ನು ತೆಗೆದುಕೊಂಡವಳೇ 'ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸು' ಎಂದು ರಾಯರು ಆಸನದಿಂದ ಏಳುವುದರೊಳಗಾಗಿ, ಆ ಪುಟ್ಟ ಚಾಕು ರಾಯರ ಹೃದಯವನ್ನು ಪ್ರವೇಶಿಸಿತು. ರಕ್ತವು ಒಮ್ಮೆಲೆ ಹೊರಪುಟಿಯಿತು. 'ಪಿಶಾಚಿನೀ' ಎಂದು ರಾಯರು ಚಿಟ್ಟನೆ ಚೀರಿ ಧೊಪ್ಪನೆ ನೆಲಕ್ಕುರುಳಿದರು. ಸ್ವಲ್ಪ ಸಮಯದಲ್ಲೇ ಅವರ ಪ್ರಾಣವಾಯುವು ಹಾರಿಹೋಯಿತು. ಜವಾನನು ಅನಾಹುತ ಸಂಭವಿಸಿತೆಂದು ಗುಲ್ಲೆಬ್ಬಿಸಿದನು. ರಸ್ತೆಯಲ್ಲಿ ಹೋಗುತ್ತಿದ್ದ ಜನರು ಧಾವಿಸಿ ಬಂದರು. ಪೋಲೀಸಿನವರು ಬಂದು ವಿಮಲೆಯನ್ನು ಕೈದು ಮಾಡಿ ಬಂಧನದಲ್ಲಿರಿಸಿದರು.

ವಿಮಲೆಯು ಬಾಲ ವಿಧವೆ. ತನ್ನ ಯೌವನದಲ್ಲಿ ಪತಿಯನ್ನು ಕಳಕೊಂಡಿದ್ದಳು. ವಿಮಲೆಯ ಬಾಲ್ಯದಲ್ಲಿಯೇ ಅವಳ ತಂದೆಯು ಮೃತರಾಗಿದ್ದರು. ತಾಯಿಯು ಇವಳ ಪೋಷಣೆ ಮಾಡುತ್ತಿದ್ದಳು. ಬಡತನದ ಜೀವನ ಇವರದು. ಇವಳ ಊರಿಗೆ ಆಗಾಗ ಒಬ್ಬರು ಬಟ್ಟೆ ಬರೆಗಳನ್ನು ತೆಗೆದುಕೊಂಡು ಮಾರಾಟಕ್ಕೆ ಬರುತ್ತಿದ್ದರು. ಅವರ ಹೆಸರು ಶ್ರೀಧರರಾಯರೆಂದು. ತನ್ನ ಪಿತ್ರಾರ್ಜಿತ ಆಸ್ತಿಯನ್ನು ಮುಂದುಗಾರಿಕೆಯಿಂದ ಕಳಕೊಂಡು, ಸಿಕ್ಕ ಸಿಕ್ಕ ಕಂಪೆನಿಗಳ ಏಜೆನ್ಸಿ ತೆಗೆದುಕೊಂಡು ಪೇಟೆ, ನಾಡು ಮೊದಲಾದಲ್ಲಿ ತಿರುಗುವವರಲ್ಲಿ ಇವರೂ ಒಬ್ಬರು. ವಿಮಲೆಯ ಮನೆಗೆ ಅವರು ಆಗಾಗ ಬರತೊಡಗಿದರು. ಅವಳಿಗೆ ರಾಯರು ಹಣದಾಸೆಯನ್ನು ತೋರಿಸಿದರು. ಅವಳನ್ನು ಸುಧಾರಿತ ರೀತಿಯಿಂದ ಲಗ್ನವಾಗಿ ತನ್ನ ಊರಿಗೆ ಕರೆದೊಯ್ಯುವೆನೆಂದು ವಾಗ್ದಾನ ಮಾಡಿದರು. ಉದರ ಪೋಷಣೆಗೆ ಬೇರೆ ಯಾವ ಉಪಾಯವನ್ನೂ ಕಾಣದೆ ಅವಳು ಸಮ್ಮತಿಸಿದಳು. ವಿಮಲೆಯು ರಾಯರ ಅನುರಾಗಕ್ಕೆ ಪಾತ್ರಳಾದಳು. ರಾಯರು ಐದಾರು ತಿಂಗಳ ಕಾಲ ಅವಳೊಡನೆ ಸಂತೋಷದಿಂದಿದ್ದರು. ಅವಳು ಗರ್ಭಿಣಿಯಾಗಿರುವ ಚಿಹ್ನೆಯು ಅವರಿಗೆ ತೋರಿತು. ತನ್ನನ್ನು ಇನ್ನು ಎಲ್ಲರೂ ಗೇಲಿ ಮಾಡುವರೆಂದು ತಿಳಿದು, ಅವರು ಯಾರ ಹತ್ತಿರವೂ ಹೇಳದೆ ಪರಾರಿಯಾದರು. ಅವಳನ್ನು ವಂಚಿಸಿದರು. ಹದಿನೈದು ಮೈಲು ದೂರದಲ್ಲಿರುವ ಆ ಪಟ್ಟಣದಲ್ಲಿ, ಒಂದು 'ಫ್ರೋಟೋ ಸ್ಟುಡಿಯೊ' ತೆರೆದು ಅಲ್ಲಿ ಇರುತ್ತಿದ್ದರು.

ವಿಧವೆ ವಿಮಲೆಯು ಗರ್ಭಿಣಿಯಾಗಿರುವ ಸಂಗತಿಯು ಊರೆಲ್ಲಾ ಹರಡಿತು. ಅವಳನ್ನು ಎಲ್ಲರೂ ಜರೆದರು. ಸಮಾಜವು ಅವಳನ್ನು ದೂರಮಾಡಿತು. ಗಂಡುಮಗುವೊಂದನ್ನು ಪ್ರಸವಿಸಿದಳು. ಇದೇ ಸಮಯದಲ್ಲಿ ಅವಳ ತಾಯಿಯೂ ಸ್ವರ್ಗಸ್ಥಳಾದಳು. ಅವಳ ಜೀವನೋಪಾಯವು ನಡೆಯುವುದು ಬಹಳ ಕಷ್ಟವಾಯಿತು. ಉಪವಾಸ ಬೀಳುವ ಪ್ರಸಂಗವು ಬಂದಿತು. ಭಿಕ್ಷೆ ಬೇಡಲು ಮೊದಲು ಸುರುಮಾಡಿದಳು. ಇವಳನ್ನು ಕೇಳುವವರು ಯಾರೂ ಇಲ್ಲದೆ ಹೋಯಿತು. ಶ್ರೀಧರನ ವಿಚಾರವಾಗಿ ಪತ್ತೆ ನಡೆಸಿದಳು, ಅವನು ಇರುವ ಸ್ಥಳವು ಅವಳಿಗೆ ಗೊತ್ತಾಯಿತು. ತನ್ನನ್ನು ವಂಚಿಸಿ, ಅಪಮಾನ ಮಾಡಿ, ಜೀವನವನ್ನು ಮಣ್ಣುಗೂಡಿಸಿ, ಭಿಕ್ಷೆ ಬೇಡಲಿಕ್ಕೆ ಮಾಡಿದ ಶ್ರೀಧರ ರಾಯರ ಮೇಲೆ ಸೇಡು ತೀರಿಸಿಕೊಳ್ಳಲು ದೃಢ ನಿಶ್ಚಯ ಮಾಡಿದಳು. ಆ ಹದಿನೈದು ಮೈಲುಗಳ ದೂರವನ್ನು ಹಸಿವು, ಬಾಯಾರಿಕೆಯನ್ನು ಲೆಕ್ಕಿಸದೆ ನಡೆದು ಬಂದು ತನ್ನ ಸೇಡನ್ನು ಶ್ರೀಧರರಾಯರ ಮೇಲೆ ತೀರಿಸಿದಳು.

ಅಂದು ನ್ಯಾಯಸ್ಥಾನದಲ್ಲಿ ವಿಮಲೆಯ ವಿಚಾರಣೆಯಾಯಿತು. ಜನರು ಕಿಕ್ಕಿರಿದಿದ್ದರು. ನ್ಯಾಯಾಧೀಶರ ಎದುರಿನಲ್ಲಿ ವಿಮಲೆಯು ತನ್ನ ಆತ್ಮವೃತ್ತಾಂತವನ್ನು ಮುಚ್ಚುಮರೆ ಇಲ್ಲದೆ ಹೇಳಿದಳು. ಶ್ರೀಧರ ರಾಯರು ಅವಳನ್ನು ವಂಚಿಸಿದ ವಿಚಾರವಾಗಿ, ನ್ಯಾಯಾಧೀಶರ ಮುಂದೆ ನಿರ್ಭೀತಿಯಿಂದ ಹೇಳತೊಡಗಿದಳು. ಹೇಳುತ್ತಾ ಹೋದಂತೆ ಅವಳ ಸ್ವರವು ಕ್ಷೀಣವಾಗತೊಡಗಿತು. ಕರ್ಕಶ ಸ್ವರದಿಂದ ಚಿಟ್ಟನೆ ಚೀರಿ ನೆಲಕ್ಕುರುಳಿಬಿಟ್ಟಳು. ಹಿಡಿದೆತ್ತುವಾಗ ಅವಳ ಪ್ರಾಣವಾಯುವು ಈ ನಶ್ವರ ಪ್ರಪಂಚವನ್ನು ಬಿಟ್ಟು ಹಾರಿಹೋಗಿತ್ತು. ಡಾಕ್ಟರರು 'ಹೃದಯಸ್ತಂಭನ' ಎಂದು ಪರೀಕ್ಷೆ ಮಾಡಿದರಂತೆ. ವಿಮಲೆಯ ಕರುಣಾಜನಕ ವೃತ್ತಾಂತವನ್ನು ಕೇಳಿ ಎಲ್ಲರೂ ಮರುಗಿದರು. ಅವಳ ಮಗುವನ್ನು 'ಅನಾಥಾಶ್ರಮ'ಕ್ಕೆ ಒಪ್ಪಿಸಲಾಯಿತು. ನಮ್ಮೀ ಭಾರತ ಭೂಮಿಯಲ್ಲಿ ಇಂತಹ ಅದೆಷ್ಟು ಕರುಣಾಜನಕ ಘಟನೆಗಳು ನಡೆಯುವುದಿಲ್ಲ!

—o0o—

ಹೇಂಟೆ ಮನುಷ್ಯ.

ನ್ಯೂಜೀಲೇಂಡಿನ ಆಸ್ಪತ್ರೆಯೊಂದರಲ್ಲಿ ಹೆರೋಲ್ಡ್ ಕ್ರೈಡರ್ ಎಂಬವನೊಬ್ಬ ರೋಗಿ. ಇತನಿಗೆ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆದು ಪಡೆದು ಬೇಸರ ಬಂದಿತು. ತನ್ನ ಬೇಸರ ಕಳೆಯಲು ಹೊಸ ಮೊಟ್ಟೆಯೊಂದನ್ನು ತರಿಸಿ, ಅದಕ್ಕೆ ಕಾವು ಕೊಡುತ್ತಾ ಬಂದ. ಸರಿ! ಮೊಟ್ಟೆಯೊಳಗಿನ ಪದಾರ್ಥವು ಇವನ ಸಹಾಸಕ್ಕೆ ಮೆಚ್ಚಿತು! ಇನ್ನೇನು 25 ದಿನಗಳಲ್ಲಿ ಮೊಟ್ಟೆಯೊಡೆದು ಇವನಿಗೊಂದು ಮರಿಸಿಕ್ಕಿತು. ಅಬ್ಬಾ! ರೋಗಿ!! ನಿರುದ್ಯೋಗಿಗಳಿಗೆ ಒಂದು ಹೊಸ ಕೆಲಸವನ್ನು ಕಲಿಸಿದೆಯಲ್ಲವೇ? ಮೊಟ್ಟೆಗಳನ್ನು ಮರಿ ಮಾಡಲು ಇನ್ನು ಹೇಂಟೆಗಳೇಕೆ?

—o0o—

ಡಾಕ್ಟರರು.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಐರೋಪ್ಯ ಔಷಧಗಳ ಪಾಂಡಿತ್ಯದಿಂದ ನಮ್ಮನ್ನು ಗುಲಾಮಗಿರಿಗೆ ಸಿಲುಕಿಸಿಕೊಂಡಂತಲ್ಲದೆ ಮತ್ತಿಲ್ಲ. ಜನಸೇವೆಗೆಂದು ಈ ವೃತ್ತಿಯನ್ನು ಕೈಕೊಳ್ಳುವ ಮಂದಿ ಹೆಚ್ಚಿಲ್ಲ. ಡಾಕ್ಟರರ ವೃತ್ತಿಯು ಜನೋಪಕಾರಿಯೆಂಬ ಹೆಸರಿನಿಂದ ಜನಾಪಕಾರ ಮಾಡುತ್ತಿರುವುದೆಂದರೆ ತಪ್ಪಿಲ್ಲ. ಧನಮದವನ್ನು ಹೆಚ್ಚಿಸಿ, ವಿಲಾಸಿಗಳನ್ನಾಗಿ ಮಾಡುವ ಹೆದ್ದಾರಿಯೆಂದರೆ ಅತಿಶಯೋಕ್ತಿಯಲ್ಲ. ಇದರಿಂದ ಭಾರತದ ಆರ್ಥಿಕ, ಸಾಂಸ್ಕೃತಿಕ ಹಾಗೂ ಸ್ವಾತಂತ್ರ್ಯ ನಾಶವಾಗಿದೆಯೆಂಬುದರಲ್ಲಿ ಸಂದೇಹವೇ ಇಲ್ಲ.

ಕಳೆದ ಲೇಖನದಿಂದ ಲಾಯರುಗಳು ದುಷ್ಕಾರ್ಯಮಾಡಿದರೂ ಅದು ಮಾನವನಾಗಿ ಮಾಡಿದ್ದೇ ವಿನಹ ಲಾಯರಾಗಿ ಅಲ್ಲವೆಂದೂ, ಆದ್ದರಿಂದ ಲಾಯರು ವೃತ್ತಿಯು ಖಂಡಿತವಾಗಿಯೂ ಧಾರ್ಮಿಕ ವೃತ್ತಿಯಿಂದ ಕೂಡಿದ್ದಲ್ಲವೆಂತಲೂ ವಾಚಕರಿಗೆ ನಂಬಿಕೆಯಾಗಿರಬಹುದು. ಆದರೆ ಶವಶೋಧನೆಯೇ ಕಠಿಣ ಕಾಯಿಲೆಗಳೇ ಮೊದಲಾದ ಕಷ್ಟದ ಸಂದರ್ಭದಲ್ಲಿ ಔಷಧಿಕೊಟ್ಟು ಜನತೆಯನ್ನು ರಕ್ಷಿಸಿ ಪ್ರಾಣದಾನ ಮಾಡುವ ಡಾಕ್ಟರರು ಹೇಗೆ ಭಾರತದ ಅವನತಿಗೆಯೂ ಹಿಂದೂ ದೇಶದ ಪರದಾಸ್ಯತೆಗೆ ಸಹಕಾರಿಗಳಾದರು? ಎಂಬ ಸಂದೇಹವೂ ಬರಬಹುದು. ಆಧುನಿಕ ನಾಗರೀಕತೆಯೆಂಬ ಆ ದೊಡ್ಡ ಮರದಲ್ಲಿ ಈ ವೃತ್ತಿಗಳೆಲ್ಲವೂ ಕೊಂಬೆಗಳಂತೆ. ದುರಾಚಾರವೇ ಈ ಮರದ ಬೇರುಗಳು. ಅಂದ ಮೇಲೆ ಅಂಥಾ ಮರದ ಕೊಂಬೆಗಳೆಲ್ಲವೂ ಒಂದೇ ತರದ ಫಲಗಳನ್ನು ಕೊಡುವವರಲ್ಲಿ ಸಂದೇಹವಿಲ್ಲ. ಯಾವನೊಬ್ಬ ಮಾನವನಲ್ಲಿಯೂ ಡಾಕ್ಟರ್ ವೃತ್ತಿಯು ಧಾರ್ಮಿಕತನದ ಹೆದ್ದಾರಿ. ಬಡಜನರಿಗುಪಕಾರಿ, ಅನೇಕ ಪಾಮರಗಣರ ಜೀವರಕ್ಷಣಾಕಾರಿಯೆಂಬ ಭಾವನೆಯು ಬರುವದು ವಾಡಿಕೆ. ಆದರೆ ಅವರ ಗುಣಾವಗುಣಗಳನ್ನು ಕೂಲಂಕುಶವಾಗಿ ವಿವೇಚಿಸಿದರೆ ಈ ಧಾರ್ಮಿಕ ವೃತ್ತಿಯನ್ನು ಕೈಕೊಂಡ ಡಾಕ್ಟರುಗಳು ಯಾಕೆ ಸಮಾಜದಲ್ಲಿ ಪ್ರಮುಖಸ್ಥಾನವನ್ನು ಗಳಿಸಿಲ್ಲವೆಂಬುದು ವೇದ್ಯವಾಗದಿರದು. ಬ್ರಿಟಿಷರು ಈ ವೈದ್ಯವೃತ್ತಿಯನ್ನು ಭಾರತದಲ್ಲಿನ ತಮ್ಮ ಹಿಡಿತವನ್ನು ಬಲಗೊಳಿಸಲು ಚೆನ್ನಾಗಿ ಉಪಯೋಗಿಸಿರುವರು. ಡಾಕ್ಟರರು ನಮ್ಮನ್ನು ನಿರಾಶರನ್ನಾಗಿ ಮಾಡಿರುವರು. ಕೆಲವು ವೇಳೆ ಈ ಬಿರುದು ಬಾವಲಿಗಳನ್ನು ಪಡೆದ ಡಾಕ್ಟರುಗಳಿಗಿಂತಲೂ ಡಾಂಭಿಕ ವೈದ್ಯರೇ ಒಳ್ಳೆಯವರೆಂದೆನಿಸುತ್ತದೆ. ಈಗ ಡಾಕ್ಟರರ ಕರ್ತವ್ಯವೇನೆಂದು ವಿಚಾರಿಸುವ-ದೇಹದ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು-ನಿಜವಾಗಿ ಹೇಳುವದಾದರೆ ಅದೇ ಅಲ್ಲ. ದೇಹಕ್ಕೆ ಬರುವ ಕಾಯಿಲೆಯನ್ನು ನಿವಾರಿಸುವದು. ಈ ಕಾಯಿಲೆಗಳು ಹೇಗೆ ಬರುವವು? ಖಂಡಿತವಾಗಿ ಹೇಳುವದಾದರೆ ಅಚಾತುರ್ಯ ಹಾಗೂ ಅಲಕ್ಷ್ಯದಿಂದ ಹೆಚ್ಚಾಗಿ ತಿಂದರೆ ಒಬ್ಬನಿಗೆ ಅಜೀರ್ಣವಾಗುವದು. ಡಾಕ್ಟರರಲ್ಲಿಗೆ ಓಡಬೇಕು ಅವರು ಔಷಧಿ ಕೊಡುವರು ಅದು ಶಮನವಾಗುವದು. ಡಾಕ್ಟರರ ಈ ಸಹಾಯವಿರುವದರಿಂದ ಪುನಹ ಆತನು ಮಿತಿಮೀರಿ ತಿನ್ನಲು ಹಿಂಜರಿಯುವದಿಲ್ಲ. ಇದರಿಂದ ಆತನ ಆರೋಗ್ಯವು ಶಿಥಿಲವಾಗಿ ಅವನ ಮೆದುಳಿನ ಮೇಲಿನ ಹಿಡಿತವು ತಪ್ಪುವದು. ಮೊದಲಿನ ಸಾರೆಯಲ್ಲಿಯೇ ಡಾಕ್ಟರರು ಆತನನ್ನು ಸುಲಭೋಪಾಯದಿಂದ ರಕ್ಷಿಸದಿದ್ದ ಪಕ್ಷ ಆತನು ಶ್ರಮಪಟ್ಟು ಅಜೀರ್ಣದ ತೊಂದರೆಯಿಂದ ಬಳಲಿ ಮುಂದೆ ಹೆಚ್ಚು ತಿನ್ನುವ ಪ್ರಸಂಗಕ್ಕೆ ಹೋಗುತ್ತಿರಲಿಲ್ಲ. ಒಬ್ಬನು ಒಂದು ದುರಭ್ಯಾಸಕ್ಕೆ ತುತ್ತಾಗಿ ಒಂದು ರೋಗಪೀಡಿತನಾದನೆನ್ನುವ. ಡಾಕ್ಟರರು ಅವನನ್ನು ಗುಣಮಾಡುತ್ತಾರೆ. ಆದರೆ ಅದರ ಫಲಿತಾಂಶವೇನು? ಪುನಹ ಆತನು ತನ್ನ ಮೊದಲಿನ ದುರಭ್ಯಾಸವನ್ನು ಮುಂದರಿಸುವನು. ಡಾಕ್ಟರರು ಮಧ್ಯೆ ಕೈಹಾಕಿ ಕಾಯಿಲೆಯನ್ನು ನಿಲ್ಲಿಸುವ ಪಾರುಪತ್ಯೆಯನ್ನು ವಹಿಸದಿದ್ದ ಪಕ್ಷ ಪ್ರಕೃತಿ ನಿಯಮ ಮೀರಿ ಕಾಯಲಸ್ತನು ಕೆಲಕಾಲ ನರಳಿ ಶಾಶ್ವತ ಗುಣ ಹೊಂದುತ್ತಿದ್ದನು. ಆತನ ಮನಸ್ಸಿನಲ್ಲಿ ಈ ನರಳಾಟದ ಚಿತ್ರವು ಶಾಶ್ವತವಾಗಿ ಉಳಿಯುತ್ತಿತ್ತು. ಆದ್ದರಿಂದ ಆತನು ಮುಂದೆ ತನ್ನ ದುರಭ್ಯಾಸವನ್ನು ಕೈಕೊಳ್ಳಲು ಹೆದರುತ್ತಿದ್ದನು.

ಆಸ್ಪತ್ರೆಗಳು ಪಾಪ ಕೃತ್ಯಗಳನ್ನು ಪ್ರೋಧಿಸುವ ಸಂಸ್ಥೆಗಳೆಂದರೆ ಅತಿಶಯೋಕ್ತಿಯಾಗಲಾರದು. ಆಸ್ಪತ್ರೆಗಳ ಭರವಸೆಯಿಂದ ಜನರು ತಮ್ಮ ಆರೋಗ್ಯವನ್ನು ತೃಣೀಕರಿಸಿ ದುರಾಚಾರಗಳಿಗೊಳಗಾಗುವರು. ಡಾಕ್ಟರುಗಳ ಸಮೂಹದಲ್ಲಿ ಯುರೋಪಿಯನರು ಪ್ರಚಂಡ ಪಾಪಿಗಳೆಂದರೆ ತಪ್ಪಾಗದು. ಅಲಕ್ಷ್ಯದಿಂದ ಮಾನವನಿಗೆ ಬಂದ ಒಂದು ಕಾಯಿಲೆಗಾಗಿ ಲಕ್ಷೋಪಲಕ್ಷ ಜೀವಿಗಳನ್ನು ಕೊಂದು ಹಾಕುವ ಆ ಪೈಶಾಚಿಕ ವೃತ್ತಿಯು ಅಸಹನೀಯವಾದುದು. ಪರಿಶೋಧನೆಗಾಗಿ ಇತರ ಮೂಕ ಪ್ರಾಣಿಗಳ ಮೇಲೆ ತಮ್ಮ ವಿಜ್ಞಾನ ಶಾಸ್ತ್ರಪ್ರಯೋಗ ನಡೆಸುವರು. ಇಂಥಾ ಕಠಿಣ ವರ್ತನೆಯನ್ನು ಯಾವ ಮತವೂ ಮನ್ನಿಸದು. ಎಲ್ಲ ಮತಗಳು ಬರೇ ಒಬ್ಬ ಮಾನವನಿಗಾಗಿ ಹೀಗೆ ಲಕ್ಷೋಪಲಕ್ಷ ಪ್ರಾಣಿಗಳ ವಧೆಯನ್ನು ಮಾಡುವದು ರಾಕ್ಷಸೀಕೃತ್ಯವೆಂದು ಘೋಷಿಸುವವು. ಈ ಡಾಕ್ಟರರು ನಮ್ಮ ಮತದ ಈ ಸದ್ಬೋಧನೆಯನ್ನು ನಿರ್ಲಕ್ಷಿಸುವರು. ಅವರ ಅನೇಕ ಔಷಧಿಗಳಲ್ಲಿ ಪ್ರಾಣಿಗಳ ಕೊಬ್ಬಾಗಲಿ, ಮಾದಕ ಪಾನೀಯಗಳಾಗಲೀ ಇರುವುದರಿಂದ ಇವು ನಮ್ಮ ಮತ ಪ್ರಕಾರ ಹಿಂದೂಗಳಿಗೂ, ಮಹಮ್ಮದೀಯರಿಗೂ ವಿರೋಧವಿರುವವು. ನಾವು ನಾಗರೀಕರೆಂಬ ಸೋಗನ್ನು ಹಾಕಿಕೊಂಡು ಪುರಾತನ ಕಾಲದ ಮತ ಕಟ್ಟಳೆಗಳನ್ನು ಮೂಢ ನಂಬಿಕೆಗಳೆಂದು ಜರೆಯುತ್ತಿರುವೆವು. ಆದರೆ ನಾವು ಈ ಸೋಗಿನಲ್ಲಿ ಮಾಡುವುದೇನು? ಅವಕ್ಕಿಂತಲೂ ಹೀನವಾದ ಪೈಶಾಚಿಕ ಕೃತ್ಯ. ಆದ್ದರಿಂದ ಈ ಡಾಕ್ಟರುಗಳೇ ಜನತೆಯಲ್ಲಿ ದುರಾಭ್ಯಾಸವನ್ನು ಹೆಚ್ಚಿಸಲು ದಾರಿ ತೋರುವವರೆನ್ನಬಹುದು. ಡಾಕ್ಟರರ ಧೈರ್ಯದಿಂದ ಉತ್ತೇಜಿತರಾದ ಜನರು ಹಸಿತಪ್ಪಿ ವರ್ತಿಸಿ ತಮ್ಮಲ್ಲಿ ಹಿಡಿತವನ್ನಿಡಲಾರದೆ ಕಡಿವಾಣವಿಲ್ಲದ ಕುದುರೆಗಳಂತೆ ಅಲೆದು ಅಧೋಗತಿಗಿಳಿಯುವರು. ಇಂಥಾ ನಮ್ಮ ಅವನತ ಸ್ಥಿತಿಯಲ್ಲಿ ದೇಶಹಿತಕಾರಕ ಕೆಲಸಗಳನ್ನು ಹೇಗೆ ಮಾಡಲು ಸಾಧ್ಯ. ಐರೋಪ್ಯ ಔಷಧಗಳ ಅರಿವನ್ನು ಮಾಡಿಕೊಳ್ಳುವುದೆಂದರೆ ನಮ್ಮನ್ನು ನಾವು ಗುಲಾಮಗಿರಿಗೆ ಸಿಲುಕಿಸಿಕೊಂಡಂತೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ವೃತ್ತಿಯನ್ನೇಕೆ ಕೈಕೊಳ್ಳಬೇಕೆಂಬ ಬಗ್ಗೆ ನಾವು ಆಲೋಚಿಸುವದಿಲ್ಲ. ಜನತೆಯ ಸೇವೆಯನ್ನು ಮಾಡಲಿಕ್ಕೆಂಬ ದೃಷ್ಟಿಯಿಂದ ಕೈಕೊಳ್ಳುವವರೆಷ್ಟು ಮಂದಿ ಇರುವರು? ಸಮಾಜದಲ್ಲಿ ಬಿರುದನ್ನು ಗಳಿಸಿ ಧನಾಢ್ಯರಾಗಿ ಧನಮದದಿಂದ ಮತ್ತರಾಗಿ ವಿಲಾಸಿಗಳಾಗುವದಕ್ಕಲ್ಲದೆ ಮತ್ತಿಲ್ಲ. ಈ ವೃತ್ತಿಯಲ್ಲಿ ಜನತಾಸೇವೆಯೆಂಬುದಿಲ್ಲ. ಬದಲು ಅದು ಜನಾಪಕಾರಿಯೆಂದರೆ ತಪ್ಪಲ್ಲ. ಡಾಕ್ಟರರು ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿ ಬಡಜನರಿಗೆ ಹೊರಲಾರದಷ್ಟು ಖರ್ಚು ಮಾಡಿಸಿ ಅವರ ಆರ್ಥಿಕ ಅಧಃಪತನಕ್ಕೆ ಕಾರಣರಾಗುವರು. ಅವರು ಮಾಡುವ ನಿಜವಾದ ಔಷಧಗಳ ಕ್ರಯಕ್ಕಿಂತ ಬಹಳ ಹೆಚ್ಚಾದ ಚಾರ್ಜನ್ನು ಮಾಡಿ ಜನರನ್ನು ಹಿಂಡುವರು. ಕಾಯಿಲೆಯಿಂದ ಡಾಕ್ಟರರು ನಮ್ಮನ್ನು ಮುಕ್ತರನ್ನಾಗಿ ಮಾಡುವರೆಂಬ ಭರವಸೆಯಿಂದ ಬರುವ ಜನತೆಯು ಡಾಕ್ಟರರಿಂದ ವಂಚಿಸಲ್ಪಟ್ಟು ಕಷ್ಟಕ್ಕೀಡಾಗುವುದು. ಕೆಲವು ವೈದ್ಯರಂತೂ ಬೇಕೆಂದು ಔಷಧಗಳನ್ನು ಕೊಟ್ಟು ಕಾಯಿಲೆಯನ್ನು ಮುಂದರಿಸಿ ಹೆಚ್ಚು ದಿನ ಬಡ ರೋಗಿಯನ್ನು ತೊಂದರೆಗೊಳಿಸಿ ತಮ್ಮ ಔಷಧಿಯನ್ನು ಖರ್ಚು ಮಾಡಿಸಿ ಧನ ಸಂಪಾದಿಸುವರು. ಇಂತಹ ಕೃತ್ಯಗಳನ್ನು ಮಾಡುವ ಈ ವೈದ್ಯಕೀಯ ವೃತ್ತಿಯು ಹೇಗೆ ಪ್ರಶಂಸನಾರ್ಹವಾದೀತು? ಆದ್ದರಿಂದ ಭಾರತವು ವೈದ್ಯವೃತ್ತಿಯಿಂದ ತನ್ನ ಪ್ರಗತಿಯನ್ನು ಕಳಕೊಂಡಿದೆ. ಒಟ್ಟಾರೆ ಹೇಳುವದಾದರೆ ಈ ವರೆಗೆ ನಾವು ವಿವರಿಸಿದಂತೆ ರೈಲ್ವೆಗಳು, ಲಾಯರುಗಳು ಮತ್ತು ಡಾಕ್ಟರರು ಆಧುನಿಕ ನಾಗರೀಕತೆಯೆಂಬ ಪರದೆಯೊಳಗೆ ನಿಂತು ತಮ್ಮ ಭೀಕರ ಕೃತ್ಯಗಳಿಂದ ಜನತೆಯ ಆರ್ಥಿಕ, ಸಾಂಸ್ಕೃತಿಕ ಹಾಗೂ ಸ್ವಾತಂತ್ರ್ಯ ನಾಶಕ್ಕೆ ಕಾರಣರಾಗಿರುವರು. ಹಾಗಾದಪಕ್ಷ ನಿಜವಾದ ನಾಗರೀಕತೆಯೇನು? ಅದರ ರೂಪರೇಷೆ ಯಾವುದು ಎಂಬುದೊಂದು ಪ್ರಶ್ನೆ ಉದ್ಭವಿಸುವುದು ವಾಸ್ತವ. ಆದ್ದರಿಂದ ಮುಂದಿನ ನಮ್ಮ ಲೇಖನದಲ್ಲಿ ಇದರ ವಿಚಾರ ಬರೆಯಲಾಗುವುದು.

ಹೈದರಾಬಾದು ಸತ್ಯಾಗ್ರಹ.

ಹೈದರಾಬಾದಿನಲ್ಲಿ ಪ್ರಖರವಾದ ಚಳವಳ ನಡೆದು ಅನೇಕ ಸತ್ಯಾಗ್ರಹಿಗಳು ಸೆರೆಮನೆಯನ್ನು ಸೇರಿದ್ದರು. ಆದರೆ ಇತ್ತಲಾಗಿ ಅಲ್ಲಿಯ ಪ್ರಧಾನರಾದ ಸರ್ ಅಕ್ಬರ್ ಹೈದರಿಯವರೊಳಗೂ ಮತ್ತು ಗಾಂಧೀಜೀಯವರೊಳಗೂ ಪತ್ರವ್ಯವಹಾರ ನಡೆಯಿತು. ಇದರ ಪರಿಣಾಮವಿನ್ನೂ ಗೊತ್ತಿರುವದಿಲ್ಲ. ಅವರೂ ಹೈದರಾಬಾದು ಸರಕಾರದವರು ರಾಜಕೀಯ ಕೈದಿಗಳನ್ನು ಬಿಡುವ ಯೋಚನೆ ಮಾಡಿರುವರು. ತಾರೀಕು 10ರಲ್ಲಿ 32 ಜನರನ್ನು ಹೈದರಾಬಾದು ಸಿಟಿ ಸೆಂಟ್ರಲ್ ಜೈಲಿನಿಂದ ಬಿಡಲಾಗಿದೆ. ಕ್ರಮವಾಗಿ ಬಾಕಿ ಬಂಧಿಗಳನ್ನೂ ಬಿಡುವ ಯೋಚನೆ ನಡೆದಿದೆ. ಬಿಡುಗಡೆ ಹೊಂದಿದ ಕಾಂಗ್ರೆಸ್ ಮುಖಂಡರನ್ನು ಎದುರುಗೊಳ್ಳುವ ಬಗ್ಗೆ ಕಾಂಗ್ರೆಸ್ ಧುರೀಣರನೇಕರು ಏರ್ಪಡಿಸಿದ್ದರು. ಆದರೆ ಸರಕಾರದವರು ಇವರಿಗೆ ಅವರನ್ನು ಸ್ವಾಗತಿಸಿ ಹೂಮಾಲೆ ಹಾಕಲು ಅನುಕೊಡದೆ ಪ್ರತಿಯೊಬ್ಬ ಕೈದಿಗಳನ್ನೂ ಅವರವರ ಮನೆಗೇ ತಂದು ಬಿಟ್ಟರಂತೆ. ರಾಜಕೀಯ ಕೈದಿಗಳನ್ನು ಕ್ಷಮಿಸುವ ಪ್ರಕಟಣೆಯನ್ನು ಸರಕಾರವು ಹೊರಡಿಸುವದೆಂದೂ, ಆದರೆ ಅದು ಇನ್ನೂ ತಯಾರಾಗಿಲ್ಲವಾಗಿಯೂ ತಿಳಿಯಬರುತ್ತದೆ.

ಗಾಂಧಿ-ಹೈದರಿಯವರ ವ್ಯವಹಾರದ ವಿಚಾರದ ಪರಿಣಾಮದಿಂದ ರಾಜಕೀಯ ಕೈದಿಗಳನ್ನು ಬಿಡುವ ಯೋಚನೆಯೋ ಅಲ್ಲ ಈ ತಿಂಗಳ ಅಂತ್ಯದಲ್ಲೇ ಸರಕಾರದವರು ಪ್ರಕಟಿಸುವ ಸುಧಾರಣೆಗಳ ವಿಚಾರ ಕಾಂಗ್ರೆಸಿನವರೂ ಯೋಚಿಸಲೀ ಎಂಬ ಯೋಚನೆಯಿಂದ ಬಿಡುಗಡೆ ಮಾಡಿರುವದೋ ತಿಳಿಯದು. ಅಂತು ರಾಜಕೀಯ ಕೈದಿಗಳನ್ನು ಬಿಡುವ ಹಾಗೂ ಜನತೆಯ ಹಿತದೃಷ್ಟಿಯನ್ನು ಆಲೋಚಿಸುವ ಯೋಚನೆಯು ಸಂಸ್ಥಾನಾಧೀಶರಿಗೆ ಬಂದದ್ದು ಶುಭ ಚಿಹ್ನೆಯಾಗಿದೆ.

ಶ್ರೀಮತಿ ಕಸ್ತೂರಿ ಗಾಂಧಿಯವರು.

ಶ್ರೀಮತಿ ಕಸ್ತೂರಿ ಬಾಯಿಯವರು ಮಲೇರಿಯಾಪೀಡಿತರಾಗಿ ಹಾಸಿಗೆ ಹಿಡಿದಿರುವರು. ಅವರಿಗೆ ತಾರೀಕು 9ರಲ್ಲಿ 102 ಡಿಗ್ರಿ ಜ್ವರವಿತ್ತು. ತುಂಬಾ ಅಶಕ್ತೆಯಾಗಿರುವ ವೃದ್ಧಮಾತೆಯವರ ಕಾಯಿಲವು ಈಗ ಸ್ವಲ್ಪ ಗುಣಮುಖವಾಗಿದೆ.

ರಾಜಕೋಟೆ

ಪ್ರಶ್ನಾಕರ್ತರಿಗೆ ಗಾಂಧಿಜೀಯವರ ಉತ್ತರ.

- ವೈಸರಾಯರಲ್ಲಿಗೆ ಹೋದದ್ದು ನನಗೆ ನಾಚಿಕೆಯಲ್ಲ.
- ಅವರ ಕೃಪೆಯನ್ನು ಪ್ರಾರ್ಥಿಸುವ ಅರ್ಜಿದಾರನಂತೆ ನಾನು ಹೋಗಿಲ್ಲ.
- ಫೆಡರಲ್ ಕೋರ್ಟಿಗೆ ಈ ಸಮಸ್ಯೆಯನ್ನು ಒಪ್ಪಿಸಿದ್ದರಿಂದ ಫೆಡರೇಶನ್ ಹತ್ತಿರ ಬರಲಿಲ್ಲ.
- ಫೆಡರೇಶನ್ ಭಾರತಕ್ಕೆ ಕಾಲಿಕ್ಕುವದಾದರೆ ಅದು ನಮ್ಮ ಅಹಿಂಸಾತತ್ವ ಪಾಲನೆಯ ಭ್ರಷ್ಟತೆಯಿಂದ ಮತ್ತು ಕಾಂಗ್ರೆಸ್ಸಿನ ಅಂತರ್ಗತ ಕೊಳೆಯಿಂದಲ್ಲದೆ ಮತ್ತಿಲ್ಲ.

ಪೂಜ್ಯ ಗಾಂಧಿಜೀಯವರು ಈ ವಾರದ 'ಹರಿಜನ' ಪತ್ರಿಕೆಗಾಗಿ ಬರೆದ ಲೇಖನವೊಂದನ್ನು ಪ್ರಕಟಿಸಿರುವರು. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

'ಕೆಲವು ಸ್ನೇಹಿತರು ನಾನು ರಾಜಕೋಟೆ ಸತ್ಯಾಗ್ರಹದಲ್ಲಿ ಕೈಹಾಕಿದ್ದನ್ನು ನಿಶೇಧಿಸುತ್ತಿರುವರು. ಆದ್ದರಿಂದ ಅವರು ನನಗೆ ಹಾಕಿದ ಪ್ರಶ್ನೆಗಳನ್ನು ಇಲ್ಲಿಕೊಟ್ಟು ನನ್ನ ಉತ್ತರವನ್ನು ಬಹಿರಂಗಪಡಿಸುವುದು ಅವಶ್ಯಕ. ಒಬ್ಬರು ಹೀಗೆ ಬರೆಯುತ್ತಾರೆ, 'ರಾಜಕೋಟೆಯ ವಿಚಾರದಲ್ಲಿ ಹೆಚ್ಚು ಶ್ರಮವಹಿಸಿ ಮನಸ್ಸನ್ನು ಏಕೀಕರಿಸಿರುವ ಪ್ರಯುಕ್ತ ಬೇರೆ ವಿಚಾರಗಳಿಗೆ ನಿಮ್ಮ ಮನಸ್ಸು ಕೆಟ್ಟು ಹೋಗಿದೆ. ನೀವು ತ್ರಿಪುರಿಯಲ್ಲಿರಬೇಕಾಗಿದ್ದದ್ದು ನಿಮ್ಮ ಆದ್ಯ ಕರ್ತವ್ಯವಾಗಿತ್ತು. ನೀವು ಅಲ್ಲಿ ಇದ್ದಿದ್ದ ಪಕ್ಷಕ್ಕೆ ಅಲ್ಲಿಯ ವಿಚಾರಗಳು ಇಂದಿನಂತಿರದೆ ಪೂರಾ ಮಾರ್ಪಡುತ್ತಿದ್ದವು. ಆದರೆ ನೀವು ಅನಿಶ್ಚಿತ ಅವಧಿಯ ಉಪವಾಸವನ್ನು ಕೈಗೊಂಡಿರಿ. ಜನತೆಗೆ ತಿಳುವಳಿಕೆ ಕೊಡದೆ ದೇಶದ ಶಾಂತತಾಭಂಗ ಮಾಡಲು ನಿಮಗೆ ರವಷ್ಟು ಅಧಿಕಾರವಿಲ್ಲ. ನೀವು ಉಪವಾಸಮಾಡಿದ್ದರ ಕಾರಣವೇನು? ಒಬ್ಬ ರಾಜರನ್ನು ತನ್ನ ಮಾತಿನಂತೆ ವರ್ತಿಸಲು ಪ್ರೇರೇಪಿಸಲಿಕ್ಕಲ್ಲವೇ? ರಾಜಕೋಟೆ ಜನತೆಯು ಶಾಂತಿಯ ಭಂಗ ಚಳವಳವನ್ನು ಕೈಗೊಂಡಿತ್ತು. ನೀವು ಆ ಚಳವಳವನ್ನು ನಿಲ್ಲಿಸದ ಪಕ್ಷ ಅವರು ಕ್ರಮೇಣ ಬಲಗೊಳ್ಳುತ್ತಿದ್ದರು. ಖಂಡಿತವಾಗಿ ನಿಮ್ಮ ಈ ವರ್ತನೆಗಳಿಂದ ಪ್ರಜಾಪ್ರಭುತ್ವದ ತತ್ವಗಳಿಗೆ ಎಡೆ ಇಲ್ಲ. ಒಂದು ಕಾಲಕ್ಕೆ ವೈಸರಾಯರ, ಗವರ್ನರರ ಭೇಟಿ ಮಾಡಕೂಡದೆಂದು ಘೋಷಿಸುತ್ತಿದ್ದ ನೀವು ಇಂದು ವಿವಿಧ ಭಾಗಗಳಲ್ಲಿ ಅತ್ಯಮೋಘ ಸಮಸ್ಯೆಗಳು ವಿಚಾರಾರ್ಹವಾಗಿ ನಿಂತಿರುವಾಗ ವೈಸರಾಯರ ಮತ್ತು ಗವರ್ನರರೊಡನೆ ಆಗಾಗ್ಯೆ ಭೇಟಿ ಮಾಡಿಕೊಂಡು ಅವರ ಸಂತೋಷಗಳಲ್ಲಿ ಭಾಗವಹಿಸುತ್ತಿರುವಿರಿ. ನೀವು ಫೆಡರೇಶನನ್ನು ಪೂರ್ತಿ ವಿರೋಧಿಸುವರೆಂದು ನಂಬಲಾಗಿದೆ. ಆದರೆ ನೀವು ರಾಜಕೋಟೆ ಸಮಸ್ಯೆಯನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರಿಗೆ ಒಪ್ಪಿಸಿದ್ದೂ, ಅವರ ತೀರ್ಮಾನವು ಹೊರಬೀಳುವ ವರೆಗೆ ನೀವು ಡೆಲ್ಲಿಯಲ್ಲೇ ಕಾದಿದ್ದೂ ಸಮಂಜಸ ಕಾಣದು. ನಿಜವಾಗಿಯೂ ಮಹಾತ್ಮರುಗಳ ನಡತೆಯು ಆಶ್ಚರ್ಯದಾಯಕವಾದುದು.'

ಭರದಿಂದ ಯೋಚಿಸದೆ ಓದುವವರಿಗೆ ಇದು ನಿಜವಾಗಿ ತೋರದಿರದು. ಆದರೆ ಸ್ವಲ್ಪ ವಿವೇಚಿಸುವವರಿಗೆ ಹಾಗೂ ಸತ್ಯಾಗ್ರಹದ ತತ್ವಗಳನ್ನರಿತವರಿಗೆ ಇದರಲ್ಲಿರುವ ತಪ್ಪು ಗೋಚರಿಸದಿರದು. ನಾನು ರಾಜಕೋಟೆಯಲ್ಲಿ ಮಾಡಿರುವ ಯಾ ಮಾಡುತ್ತಿರುವ ಕಾರ್ಯದಲ್ಲಿ ಹೊಸದೇನೂ ಇಲ್ಲ. ಭೂಗೋಳಿಕ ದೃಷ್ಟಿಯಿಂದ ನೋಡಿದರೆ ವಿಶಾಲಭಾರತದಲ್ಲಿ ರಾಜಕೋಟೆಯು ಒಂದು ಚಿಕ್ಕ ಚುಕ್ಕೆಯೆನಬಹುದು. ಆದರೆ ಅಲ್ಲಿ ನಡೆದ ವಿಚಾರವು ಮಾತ್ರ ನನ್ನ ದೃಷ್ಟಿಯನ್ನು ಸಾರ್ವಜನಿಕ ಉಪಯೋಗದ ಬಗ್ಗೆ ಅಲ್ಲಗಳೆಯಕು. ರಾಜಕೋಟೆಯಲ್ಲಿಯ ನನ್ನ ಪರಿಶ್ರಮವು ಕೆಡುಕನ್ನು ಮೊಳಕೆಯಲ್ಲಿಯೇ ಹಾಳು ಮಾಡಬೇಕೆಂಬ ದೃಷ್ಟಿಯಿಂದಾಗಿದೆ. ಅಲ್ಲಿಯ ನನ್ನ ಶ್ರಮದ ಫಲದಿಂದ ಇಡೀ ಭಾರತಕ್ಕೇ ಹಿತವಾಗಿರುವದು. ತನ್ನ ಪಡೆಯಲ್ಲಿಯ ಸೈನಿಕರ ದುರ್ಬಲತೆಯನ್ನು ಸಹಿಸದ ಜನರಲನಂತೆ ನಾನು ವರ್ತಿಸಿರುವೆನು. ಚಂಪಾರಣ್ಯ ಮೊದಲಾದಲ್ಲಿ ಈ ಮೊದಲು ನಡೆದ ಸತ್ಯಾಗ್ರಹಗಳಲ್ಲಿ ನಡೆದ ಸತ್ಯಾಗ್ರಹಗಳು ಇಡೀ ಭಾರತದ ದೃಷ್ಟಿಯನ್ನೆಳೆದಿದ್ದವು. ಆದರೆ ಆ ಚಳವಳದ ಸಮಯದಲ್ಲಿ ನನ್ನ ಇಡೀ ಸಮಯವನ್ನೇ ಅದರ ಎಚ್ಚರಿಕೆಗಾಗಿ ಉಪಯೋಗಿಸಬೇಕಿತ್ತು. ಒಂದು ಯುದ್ಧಕ್ಕೆ ತಯಾರು ಮಾಡುವದಕ್ಕೂ, ಒಂದು ಅಂದೋಲನಕ್ಕೂ ವ್ಯತ್ಯಾಸವಿದೆ. ತ್ರಿಪುರಿಯು ಮುಂದಿನ ಯುದ್ಧಕ್ಕೆ ಒಂದು ಸಿದ್ಧತೆಯೇ ವಿನಹ ಬೇರಿಲ್ಲ. ಆದರೆ ರಾಜಕೋಟೆ ಒಂದು ಚಿಕ್ಕ ಕದನವೇ ಆಗಿತ್ತು. ಅದರಿಂದ ಕದನವಾಗುತ್ತಿರುವಲ್ಲಿ ಇರುವದು ಪ್ರಾಮುಖ್ಯವೆಂದು ನನಗನಿಸಿತು. ಅಹಿಂಸಾಪೂರಿತ ಸತ್ಯಾಗ್ರಹದಲ್ಲಿ ಉಪವಾಸವ್ರತವು ಒಂದು ದೊಡ್ಡ ಆಯುಧವಾಗಿದೆ. ಕೆಲವೊಂದು ಶಿಕ್ಷಿತ ಹಾಗೂ ತರಬೇತಾದವರು ಮಾತ್ರ ಅದನ್ನು ಉಪಯೋಗಿಸಲು ಸಮರ್ಥರು. ದೈವಕೃಪೆಯಿಂದ ನನಗೆ ದೊರೆತಿರುವ ಬುದ್ಧಿವಂತಿಕೆಯನ್ನು ನಾನು ಸಕಾಲದಲ್ಲಿ ಉಪಯೋಗಿಸದಿದ್ದರೆ ಅದು ನನ್ನ ಮೌಢ್ಯತೆಯ ಪ್ರದರ್ಶನವಾಗದಿರದು. ನನ್ನ ಹೃದಯಾಂತರಾಳದಿಂದ ಉಕ್ಕಿ ಬರುವ ಆ ದೈವ ಪ್ರೇರಿತ ಸಲಹೆಯು ಪ್ರಜಾಪ್ರಭುತ್ವಕ್ಕೆ ಎಂದೂ ವಿರೋಧವಿಲ್ಲದೆಂಬ ಭರವಸೆ ನನಗಿದೆ. ಮೊದಲಿನ ಉಪವಾಸಗಳಿಂದ ದೇಶಕ್ಕೆ ಹಿತವಾಗಿದ್ದ ಪಕ್ಷ ರಾಜಕೋಟೆ ನಿರಶನವ್ರತವನ್ನು ದೂಷಿಸಲು ಕಾರಣವೇನು? ಮೊದಲಿನ ಉಪವಾಸಗಳನ್ನು ದೂಷಿಸಿರುವರೆಂದು ಹೇಳಬಹುದು. ಆದರೆ ಅವುಗಳಿಂದ ದೇಶಹಿತಸಾಧನೆಯಾಗಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಪ್ರಜಾಪ್ರಭುತ್ವದ ಏಳಿಗೆಗೆ ಕುಂದು ತರುವ ವಸ್ತುವೆಂದರೆ ಹಿಂಸಾತತ್ವವಲ್ಲದೆ ಬೇರಿಲ್ಲ. ನನ್ನ ಉಪವಾಸದಿಂದ ದೇಶದವರು ದೇಶಕ್ಕೆ ಉಪಯೋಗವಾಗಿಲ್ಲವೆಂದು ಹೇಳುವದಾದರೆ ನಾನು ಈ ಉಪವಾಸವು ಖಂಡಿತವಾಗಿಯೂ ಹಿಂಸಾತತ್ವವನ್ನು ಶಮನಮಾಡುವದರಲ್ಲಿ ಸಹಕಾರಿಯಾಗಿದೆಯೆಂದು ಹೇಳಬಲ್ಲೆನು.

ವೈಸರಾಯರಲ್ಲಿಗೆ ಹೋಗಲು ನನಗೆ ಯಾವ ವಿಧದ ನಾಚಿಕೆಯೂ ಆಗಲಿಲ್ಲ. ವೈಸರಾಯರು ಬ್ರಿಟಿಷ ಸಾರ್ವಭೌಮ ಸರಕಾರದ ಭಾರತ ಪ್ರತಿನಿಧಿಯೆಂಬ ಮತ್ತು ಭಾರತದಲ್ಲಿ ಅವರ ಕೈಕೆಳಗಿರುವ ಅರಸರ ಅಸಭ್ಯ ವರ್ತನೆಯನ್ನು ಸರಿಪಡಿಸುವುದು ಅವರ ಕರ್ತವ್ಯವೆಂಬ ದೃಷ್ಟಿಯಿಂದ ವೈಸರಾಯರನ್ನು ಆಹ್ವಾನಿಸಿದ್ದಾಗಿದೆ. ನಾನು ಅವರಲ್ಲಿಗೆ ಅವರ ಕೃಪೆಯನ್ನು ಪ್ರಾರ್ಥಿಸುವ ಅರ್ಜಿದಾರನಂತೆ ಹೋಗಿಲ್ಲ. ಅವರು ರಾಜಕೋಟೆಯ ಸಮಸ್ಯೆಯಲ್ಲಿ ಕೈಹಾಕಬೇಕೆಂದು ಕೇಳಿಕೊಂಡು ನಂತರ ಅವರ ಭೇಟಿಗೆ ನಾನು ಹೋಗದಿದ್ದ ಪಕ್ಷ ಅದು ನನ್ನ ಪಾಲಿಗೆ ಅಸಭ್ಯ ವರ್ತನೆಯಾಗುತ್ತಿತ್ತು. ನನ್ನ ಉಪವಾಸದ ಸಮಯದಲ್ಲಿ ಅವರು ನನ್ನೊಡನೆ ವರ್ತಿಸಿದ ಆ ಸಭ್ಯತೆಯನ್ನು ಮೆಚ್ಚಿದ್ದೇನೆ. ನನ್ನ ಉಪವಾಸದ ಸಂದರ್ಭದಲ್ಲಿ ಈ ಸಮಸ್ಯೆಯ ಬಗ್ಗೆ ತಾನು ಕೈಹಾಕದಿರುವದು ಅವರ ಇಷ್ಟವಂತಿತ್ತು. ಆದರೆ ಅವರು ಸಕಾಲದಲ್ಲಿ ಬಿಕ್ಕಟ್ಟನ್ನು ಪರಿಹರಿಸಿ ದೇಶದಲ್ಲಿ ಕ್ಷೋಭೆಯನ್ನು ನಿಲ್ಲಿಸಿದರು. ಅವರು ಜನತೆಯ ಕುತೂಹಲವನ್ನು ತಿಳಿದು ಜನತೆಯ ಕೂಗಿಗೆ ಕಿವಿಗೊಟ್ಟರು. ತನ್ನ ರಜಪುತಾನದ ಪ್ರಯಾಣವನ್ನು ಈ ಆರ್ತಧ್ವನಿಗಾಗಿಯೇ ನಿಲ್ಲಿಸಿ ತನ್ನ ಕರ್ತವ್ಯದೃಷ್ಟಿಯಿಂದ ಹಿಂದಿರುಗಿದರು. ವೈಸರಾಯರೊಡನೆ ಭೇಟಿ ತೆಗೆದುಕೊಂಡ ಬಗ್ಗೆ ನಾನು ವಿಷಾಧಿಸಬೇಕಾದ ಅವಶ್ಯಕತೆ ಕಾಣೆನು. ಸತ್ಯಾಗ್ರಹದಲ್ಲಿ ಸಮಯವರಿತು ವಿರೋಧಿಯೊಡನೆ ಸಹಕರಿಸಿ ನಮ್ಮ ಧ್ಯೇಯವನ್ನು ಮರ್ಯಾದಾಪೂರ್ವಕವಾಗಿ ಸಾಧಿಸಿಕೊಳ್ಳುವುದೂ ಒಂದು ಕಲೆ. ನಾನು ಈ ಮೊದಲಿನ ಸಂದರ್ಭಗಳಲ್ಲಿ ಲಾರ್ಡ್ ಹ್ಯಾಲಿಫಾಕ್ಸರೊಡನೆ ಮಾಡಿದ ಭೇಟಿಗಳಂತೆಯೇ ಇದೂ ಸರಿಯಾಗಿರುವುದು.

ಕಡೆಯದಾಗಿ ಇರುವ ಸಂಶಯವೆಂದರೆ ವಲ್ಲಭಭಾಯಿ ಪಟೇಲ್ ಮತ್ತು ಠಾಕೂರ್ ಸಾಹೇಬರೊಳಗಾದ ವ್ಯವಹಾರವನ್ನು ಪರಿಶೋಧಿಸಿ ಇತ್ಯರ್ಥ ಮಾಡುವ ಕೆಲಸವನ್ನು ಚೀಫ್ ಜಸ್ಟೀಸರಾದ ಮಾರಿಸ್ ಗ್ವಾಯರರಿಗೆ ಬಿಟ್ಟುಕೊಟ್ಟದ್ದು. ವಲ್ಲಭಭಾಯಿ ಪಟೇಲರು ಒಂದು ವಿಧ ವಾದಿಸಿದರೆ ಠಾಕೂರ್ ಸಾಹೇಬರು ಮತ್ತೊಂದು ವಿಧ ವಾದಿಸುತ್ತಿದ್ದರು. ವೈಸರಾಯರು ಇವರ ತೀರ್ಮಾನದ ಬಗ್ಗೆ ಚೀಫ್ ಜಸ್ಟೀಸರಿಗೆ ಈ ಸಮಸ್ಯೆಯನ್ನು ಒಪ್ಪಿಸುವದೆಂದು ತಿಳಿಸಿದರು. ಇಂಥಾ ಸಂದರ್ಭದಲ್ಲಿ ನಾನು ಮಾಡಬೇಕಾದುದೇನು? ಚೀಫ್ ಜಸ್ಟೀಸರ ಕೋರ್ಟ ನಾನಾ ಕಾನೂನುಗಳ ಜನ್ಮಸ್ಥಾನವೆಂಬ ಹೆದರಿಕೆಯಿಂದ ಅದು ಕೂಡದೆಂದು ಹೇಳಲಿಕ್ಕಾಗುವುದೇ? ಅಂಥಾ ವಿರೋಧಕ್ಕೆ ನನ್ನ ಹೃದಯಾಂತರಾಳದಿಂದ ಉಕ್ಕಿ ಬರುವ ದೈವಪ್ರೇರಣೆಯು ಪೂರಾ ವಿರೋಧಿಸಿರುವುದು.

ಸರ ಮಾರಿಸ್ ಗ್ವಾಯರರ ಸಹಾಯವನ್ನು ಈ ಸಂದಿಗ್ಧ ಸಮಯದಲ್ಲಿ ಪಡೆದುದರಿಂದ ಫೆಡರೇಶನ್ನೇನೂ ಹತ್ತಿರವಿರಲಿಲ್ಲ. ಅದು ಭಾರತಕ್ಕೆ ಕಾಲಿಡಬೇಕಾದರೆ ದೇಶದಲ್ಲಿ ಹಬ್ಬುತ್ತಿರುವ ಹಿಂಸಾತತ್ವವನ್ನು ಅಹಿಂಸಾ ಪತಾಕೆಯಡಿಯಲ್ಲಿಡಲು ಅಸಾಧ್ಯವಾಗಿರುವ ನಮ್ಮ ನಿರ್ವೀರ್ಯತೆ ಹಾಗೂ ಅಶಕ್ತತೆಯಿಂದ. ನಾನು ಈ ಕಳೆದ ಒಂದು ವರ್ಷದಿಂದ ಪಡಪಡಿಸುತ್ತಿರುವ ಕಾಂಗ್ರೆಸ್ಸಿನ ಆ ಅಂತರ್ಗತ ಕೊಳೆಯಿಂದ. ಚೀಫ್ ಜಸ್ಟೀಸರಾದ ಸರ್ ಮಾರಿಸ್ ಗ್ವಾಯರರು ಈ ಸಮಸ್ಯೆಯನ್ನು ತನ್ನ ಕಾನೂನಿನಂತೆ ಅಧಿಕಾರ ಚಲಾಯಿಸಿ ಈ ವಿಚಾರಿಸಿರುವುದಿಲ್ಲ. ಬರೇ ಒಬ್ಬ ನ್ಯಾಯ ವಿಮರ್ಶಕರಂತೆ ಈ ಸಂದರ್ಭದಲ್ಲಿ ಅವರು ವರ್ತಿಸಿರುವರು. ಅವರ ಹೇಳಿಕೆಯನ್ನು ಓದಿದವರು ಯಾ ಓದುವವರು ಅದಕ್ಕಾಗಿ ವಹಿಸಿದ ಶ್ರಮವನ್ನು ಅರಿಯದಿರಲಾರರು.

ವಿಚಿತ್ರ ಸಂಗತಿ.

ಪರಚಿತ್ತ ವಿಜ್ಞಾನ.

ಪರಚಿತ್ತ ಜ್ಞಾನ ನಮ್ಮ ಪೂರ್ವಿಕರಿಗಿತ್ತೆಂದೂ, ಒಬ್ಬನ ಮನಸ್ಸಿನ ವಿಚಾರ ಎಷ್ಟೋ ದೂರದಲ್ಲಿದ್ದ ಇನ್ನೊಬ್ಬನಿಗೆ ತಿಳಿಯುತ್ತಿತ್ತೆಂದೂ ಕೇಳಿದ್ದೇವೆ. ಆದರೆ ಯಾವ ಪ್ರಾಣಿಯನ್ನು ನಾವು ಅಲ್ಪವೆನ್ನುವೆವೋ ಅಂತಹ ಇರುವೆಯಲ್ಲಿ ಈ ಜ್ಞಾನವು ಇಂದಿಗೂ ಇದೆಯೆಂಬುದು ನಿರ್ವಿವಾದ. ಶೋಧಕರೂ ಇದನ್ನು ಕಂಡುಹಿಡಿದಿದ್ದಾರೆ. ಎಂ. ಬಿ. ಡಿ. ಡಬ್ಲ್ಯು. ಮೋರ್ತಿ ಎಂಬ ವಿಜ್ಞಾನ ಶಾಸ್ತ್ರಜ್ಞರು ಲಂಡನ್ ನಗರದಲ್ಲಿ ತನ್ನ ಶೋಧವನ್ನು ಮುಂದಿಗ ತೋರಿದರು. ಮೊದಲನೆಯದಾಗಿ ಇರುವೆಯೊಂದಕ್ಕೆ ಕೊಂಚ ಸಕ್ಕರೆಯನ್ನು ಕೊಟ್ಟರು. ಇದಾದ ಮೂರು ನಿಮಿಷಗಳಲ್ಲಿ ಇತರ ನಾಲ್ಕು ಇರುವೆಗಳು ಆ ಮೊದಲನೇ ಇರುವೆ ಇರುವಲ್ಲಿಗೆ ಬರುವುದರ ಬದಲು ನೇರವಾಗಿ ಸಕ್ಕರೆ ಪಬ್ಬ ಇರುವಲ್ಲಿಗೇನೇ ಬಂದುವಂತೆ. ಧಾರವಾಡಕ್ಕೆ ಕಳುಹಲಾದ ನಾಮಪತ್ರ ತಕ್ಕ ಕಾಲದಲ್ಲಿ ಮುಟ್ಟಲಿಲ್ಲವೆಂದು ಅಲ್ಲಿಗೆ ಮುಟ್ಟುವ ಮೊದಲೇ ಪ್ರಕಟಿಸುವ ಇಲೆಕ್ಷನ್ ಆಫೀಸರರಿಗೂ, ನಾಮಪತ್ರವನ್ನು ಕೈಯಲ್ಲಿ ಹಿಡಿದೊಡನೆಯೇ ಆ ಪತ್ರ ಹಾಜರು ಮಾಡಿದವರು ಪಕ್ಷ ವಾದಿಧಾರಿಗಳಲ್ಲವೆನ್ನುವವರಿಗೂ ಈ ಜ್ಞಾನ ಇರಬೇಕಲ್ಲವೇ?

ಕೊಡಗು

ಏಪ್ರಿಲ್ ತಾರೀಕು ೧೪ ನೇ ಶುಕ್ರವಾರ ೧೯೩೯.

ಕೊಡಗಿನಲ್ಲಿ ವಿದ್ಯಾಭ್ಯಾಸ.

'ವಿದ್ಯಾಹೀನ ಪಶು ಸಮಾನ' ಎಂಬ ಹೇಳಿಕೆಯ ಅರ್ಥವನ್ನು ನಾಗರೀಕ ಜನಾಂಗಗಳೆಲ್ಲವೂ ಚೆನ್ನಾಗಿ ಅರಿತುಕೊಂಡು ತಮ್ಮ ತಮ್ಮ ದೇಶಗಳಲ್ಲಿ ವಿದ್ಯದ ಬೆಳಕಿನಿಂದ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಸರ್ವ ಪ್ರಯತ್ನಗಳನ್ನು ಮಾಡುತ್ತಿವೆ. ಜನಸಂಖ್ಯೆಯು ದಟ್ಟವಾಗಿರುವ ಮತ್ತು ಐಶ್ವರ್ಯವಂತರಿಂದ ಕೂಡಿರುವ ಪಟ್ಟಣಗಳಲ್ಲಿ ಮಾತ್ರವಲ್ಲ, ಜನಸಂಖ್ಯೆ ವಿರಳವಾಗಿಯೂ, ಬಡವರ ನಿವಾಸ ಸ್ಥಾನವಾಗಿಯೂ ಇರುವ ಗ್ರಾಮಗಳಲ್ಲಿಯೂ ಕೂಡ ಮಕ್ಕಳ ವಿದ್ಯಾಭ್ಯಾಸಕ್ಕೆ ಎಲ್ಲಾ ಅನುಕೂಲತೆಯ ಏರ್ಪಾಡುಗಳು ಮಾಡಲ್ಪಡುತ್ತಿವೆ. ವಿದ್ಯಾಪ್ರಚಾರಕ್ಕೆ ಬಡತನವು ಅಡ್ಡಿ ಬಾರದಂತೆ ಮಾಡಲು ಪ್ರೈಮರಿ ವಿದ್ಯಾಭ್ಯಾಸಕ್ಕೆ ಫೀಸೇ ಇಲ್ಲದೆ ಮಾಡಲ್ಪಟ್ಟಿದೆ. ಇಷ್ಟು ಮಾತ್ರವಲ್ಲ, ತಂದೆ ತಾಯಿಗಳು ಮಕ್ಕಳನ್ನು ಶಾಲೆಗಳಿಗೆ ಖಡ್ಡಾಯವಾಗಿ ಕಳುಹಿಸಬೇಕೆಂದೂ ಕೂಡ ಖಾನೂನು ಮಾಡಲ್ಪಟ್ಟಿದೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವುದಕ್ಕಾಗಿ, ಹುಡುಗಿಯರಿಗೆ ಮೇಲಿನ ತರಗತಿಗಳಲ್ಲಿಯೂ ಫೀಸು ಮಾಫಿ ಬಿಡಲಾಗಿದೆ. ಹಗಲೆಲ್ಲಾ ದುಡಿಯುತ್ತಿರುವ ಪ್ರಾಯಸ್ಥರ ನಿರಕ್ಷರತನವನ್ನು ಹೋಗಲಾಡಿಸಲು ಅವರಿಗಾಗಿ ರಾತ್ರಿ ಶಾಲೆಗಳು ಫೀಸಿಲ್ಲದೆ ಮಾಫಿಯಾಗಿ ನಡಿಸಲ್ಪಡುತ್ತಿವೆ.

ವಿದ್ಯಾ ಪ್ರಸಾರಕ್ಕಾಗಿ ಬೇರೆ ದೇಶಗಳಲ್ಲಿ ಯಾಕೆ ಇಂಡಿಯಾದ ಇತರ ಪ್ರಾಂತ್ಯಗಳಲ್ಲಿ ಈ ತರಹದ ಪ್ರಯತ್ನಗಳು ನಡಿಸಲ್ಪಡುತ್ತಿರುವಾಗ್ಯೆ ಕೊಡಗಿನ ಸ್ಥಿತಿಯು ಈಗ ಹಿಂದಕ್ಕೆ ತಳ್ಳಲ್ಪಡುತ್ತಿರುವುದು ತುಂಬಾ ಶೋಚನೀಯವಾಗಿದೆ. ಈ ಮೊದಲು ಕೊಡಗು ಪ್ರಾಂತ್ಯವು ಪ್ರೈಮರಿ ವಿದ್ಯಾಭ್ಯಾಸದಲ್ಲಿ ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸದಲ್ಲಿ ಹಿಂದೂಸ್ಥಾನದ ಇತರ ಪ್ರಾಂತ್ಯಗಳಿಗಿಂತ ಮುಂದುವರಿದಿದೆ ಎಂಬ ಹೆಸರನ್ನು ಪಡೆದಿತ್ತು. ಆದರೆ ಇಂದು ಸರ್ಕಾರದವರು ಆ ಒಳ್ಳೇ ಹೆಸರನ್ನು ಕಳಕೊಳ್ಳಲು ಯತ್ನಿಸುತ್ತಿರುವರು. ಸರ್ಕಾರದ ಆದಾಯ ವೆಚ್ಚವನ್ನು ಸರಿಗಟ್ಟುವ ಉದ್ಧಿಶ್ಯ ಸಿಬ್ಬಂದಿ ಖೋತೆ ಮಾಡುವ ಯತ್ನದಲ್ಲಿ ತಲೆಭಾರ ಆಡಳಿತೆಯ ದೊಡ್ಡ ದೊಡ್ಡ ಉದ್ಯೋಗಸ್ಥರ ಸಂಖ್ಯೆಯನ್ನೂ, ಸಂಬಳವನ್ನೂ ಕಡಿಮೆ ಮಾಡುವುದರ ಬದಲು ವಿದ್ಯಾಭ್ಯಾಸದ ಅನುಕೂಲತೆಗಳನ್ನು ಕಡಿಮೆ ಮಾಡಲು ತೊಡಗಿರುವುದು ಖಂಡನೀಯವಾಗಿದೆ. ಬಾಲಕಿಯರ ಎಲಿಮೆಂಟರಿ ಶಾಲೆಗಳೆಲ್ಲವೂ ಮುಚ್ಚಲ್ಪಟ್ಟಿವೆ. 3 ನೇ ಫಾರಮಿನಿಂದ ಸ್ಕೂಲು ಫೀಸು ಹೆಚ್ಚಿಸಲ್ಪಟ್ಟಿದೆ. ಸರ್ಕಾರದಿಂದ ಜಿಲ್ಲಾ ಬೋರ್ಡಿಗೆ ಕೊಡುತ್ತಿದ್ದ ಸುಮಾರು ರೂ. 22,000 ವಾರ್ಷಿಕ ವಂತಿಗೆಯಲ್ಲಿ ರೂ. 5,000 ಕಡಿಮೆ ಮಾಡಲ್ಪಟ್ಟಿದೆ. ಇವುಗಳಿಂದ ಕೊಡಗಿನಲ್ಲಿ ವಿದ್ಯಾಭ್ಯಾಸಕ್ಕೆ ದೊಡ್ಡ ಧಕ್ಕೆ ತಗಲುವುದರಲ್ಲಿ ಸಂದೇಹವಿಲ್ಲ.

ಈ ಪ್ರಾಂತ್ಯದ ಎಲಿಮೆಂಟರಿ ವಿದ್ಯಾಭ್ಯಾಸವೆಲ್ಲವೂ ಹೆಚ್ಚು ಕಮ್ಮಿ ಡಿಸ್ಟ್ರಿಕ್ಟ್ ಬೋರ್ಡಿನಿಂದಲೇ ನಡಿಸಲ್ಪಡುತ್ತಿರುವುದಾಗಿದೆ. ಇದಕ್ಕಾಗಿ ಅವರು ರೂ. 80,000 ಕ್ಕಿಂತ ಹೆಚ್ಚಾಗಿ ಖರ್ಚು ಮಾಡುತ್ತಿರುವರು. ಇತರ ಪ್ರಾಂತ್ಯಗಳಲ್ಲಿ ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ವಿದ್ಯಾಭ್ಯಾಸದ ಖರ್ಚಿನ ಅರ್ಧದಷ್ಟು ವಂತಿಗೆ ಕೊಡುತ್ತಿರುವರು. ಇಲ್ಲಿಯು ಸರ್ಕಾರದವರು ಬರೇ ನಾಲ್ಕರಲ್ಲಿ ಒಂದು ಭಾಗ ಕೊಡುತ್ತಿದ್ದು, ಅದರಲ್ಲೂ ಈಗ ರೂ. 5000 ಕಡಿಮೆ ಮಾಡಲು ನಿಶ್ಚಯಿಸಿದ್ದು ದೊಡ್ಡ ಅನ್ಯಾಯವಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರ ಆದಾಯವೂ ಚೆನ್ನಾಗಿಲ್ಲದ್ದರಿಂದ, ವಂತಿಗೆಯು ಕಡಿಮೆ ಮಾಡಲ್ಪಟ್ಟ ಕಾರಣ ಬೋರ್ಡಿನ ಶಾಲೆಗಳ ಸಂಖ್ಯೆಯನ್ನಾಗಲೀ, ಉಪಾಧ್ಯಾಯರುಗಳ ಸಂಖ್ಯೆಯನ್ನಾಗಲೀ ಹೆಚ್ಚಿಸಲು ಅವರಿಗೆ ಅಸಾಧ್ಯವಾಗಿದೆ. ಇರುವ ಶಾಲೆಗಳನ್ನೇ ನಡಿಸಲು ಅವರು ಹೊಸ ತೆರಿಗೆಯನ್ನು ಆಲೋಚಿಸಬೇಕಾಗಿದೆ. ಇಂಥಾ ಸಂದರ್ಭದಲ್ಲಿ ಹುಡುಗಿಯರ ಶಾಲೆಗಳು ಮುಚ್ಚಲ್ಪಟ್ಟಿರುವ ಕಾರಣ, ಅಲ್ಲಿಯ ಮಕ್ಕಳನ್ನು ಸಮೀಪದ ಬೋರ್ಡು ಶಾಲೆಗಳಿಗೆ ಸೇರಿಸಿಕೊಳ್ಳಲು ಸಾಧ್ಯವಿಲ್ಲವಾಗಿದೆ. ಹಾಗೆ ಸೇರಿಸಿಕೊಂಡರೆ ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಯಾಕಂದರೆ, ಈಗಿರುವ ಸ್ಥಿತಿಯಲ್ಲಿಯೇ ಬೋರ್ಡು ಶಾಲೆಗಳಲ್ಲಿ ಮಕ್ಕಳು ತುಂಬಿ ಹೋಗಿ ಸಾಕಷ್ಟು ಉಪಾಧ್ಯಾಯರುಗಳಿಲ್ಲ. ಸರ್ಕಾರದ ವಂತಿಗೆಯನ್ನು ಕಡಿಮೆ ಮಾಡಿರುವುದರಿಂದ ಶಾಲಾ ಸಿಬ್ಬಂದಿಯನ್ನು ಹೆಚ್ಚಿಸಲು ಸಾಧ್ಯವಿಲ್ಲವಾಗಿದೆ. ಅಂದ ಮೇಲೆ ಹುಡುಗಿಯರ ಶಾಲೆಯಲ್ಲಿ ಓದುತ್ತಿದ್ದ ಮಕ್ಕಳಿಗೆ ಬೋರ್ಡು ಸ್ಕೂಲುಗಳಲ್ಲಿಯೂ ಸ್ಥಳವಿಲ್ಲವೆಂದಾಯಿತು. ಇದರಿಂದ ಸ್ತ್ರೀ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವುದರ ಬದಲು ಅದರ ದಾರಿಗೆ ಮುಳ್ಳು ಹಾಕಿದಂತಾಯಿತು. ಇದರ ಪರಿಣಾಮವಾಗಿ ಈಗ ಸುಶಿಕ್ಷಿತೆಯರಿಂದ ನಡಿಸಲ್ಪಡುತ್ತಿರುವ ಸಾವಿರಾರು ಸಂಸಾರಗಳು ಮುಂದೆ ನಿರಕ್ಷರಕುಕ್ಷಿಗಳ ಪಾಲಾಗುವವು. ಮುಂದಿನ ಜನಾಂಗವನ್ನು ತಯಾರು ಮಾಡುವಂಥ ಸ್ತ್ರೀಯರು ನಿರಕ್ಷರಸ್ಥರಾಗುವುದರಿಂದ ಉಂಟಾಗುವ ಭಯಾನಕ ಪರಿಸ್ಥಿತಿಯನ್ನು ದೇಶೀಯರೂ ಹಾಗೂ ಸರ್ಕಾರದವರೂ ಈಗಲೇ ಚೆನ್ನಾಗಿ ಅರಿತುಕೊಂಡು ಅದನ್ನು ಪರಿಹರಿಸಲು ಮುಂದಾಲೋಚನೆಯಿಂದ ವರ್ತಿಸಬೇಕಾಗಿದೆ.

ಇದರೊಂದಿಗೆ 8ನೇ ತರಗತಿಯಿಂದ ಸ್ಕೂಲು ಫೀಸನ್ನು ಏರಿಸುವುದರಿಂದ ಮೇಲಿನ ತರಗತಿಗಳಲ್ಲಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಅಡಚಣೆಯಾಗುವುದು. ಈಗಲೇ ಹಲವು ಮಕ್ಕಳ ತಂದೆ ತಾಯಿಗಳಿಗೆ ಸ್ಕೂಲು ಫೀಸನ್ನು ಕೊಡಲು ಸಾಧ್ಯವಿಲ್ಲದೆ ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿರುವರು. ಫೀಸನ್ನು ಹೆಚ್ಚಿಸಿದ ಮೇಲಂತೂ ಇನ್ನೂ ಅನೇಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಮನ್ನಪಡಿಸಬೇಕಾಗುವುದು. ದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಅಡ್ಡಿ ತರುವುದು ಯಾವ ನಾಗರೀಕ ಸರಕಾರದ ಉದ್ದೇಶವೂ ಆಗಿರಲಾರದು. ಅಂದ ಮೇಲೆ ನಮ್ಮ ಸರಕಾರವು ಈ ವಿಧಾನವನ್ನು ಕೈಕೊಳ್ಳುವುದು ಯೋಗ್ಯವೇ ?

ಆದಕಾರಣ ಸರಕಾರದವರು ಸ್ಕೂಲು ಫೀಸು ಏರಿಸುವುದನ್ನು ಬಾಕಿಮಾಡಬೇಕು; ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೆ ವಿದ್ಯಾ ಇಲಾಖೆಗಾಗಿ ಕೊಡುತ್ತಿರುವ ವಂತಿಗೆಯನ್ನು ಕಡಿಮೆಮಾಡುವುದರ ಬದಲು ಅದನ್ನು ಹೆಚ್ಚಿಸಿ ಮುಚ್ಚಲ್ಪಟ್ಟಿರುವ ಹುಡುಗಿಯರ ಶಾಲೆಗಳ ಮಕ್ಕಳಿಗೆ ಸಮೀಪದ ಬೋರ್ಡು ಶಾಲೆಗಳಲ್ಲಿ ಸ್ಥಳ ದೊರೆಯುವಂತೆಯೂ, ಅಲ್ಲಿ ಸಾಕಷ್ಟು ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಿಸುವಂತೆಯೂ ಅನುಕೂಲ ಮಾಡಬೇಕು. ಇಲ್ಲವಾದರೆ ಕೊಡಗಿನ ಮಕ್ಕಳ ಹೆಚ್ಚಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಮಣ್ಣು ಹಾಕಿದಂತಾಗುವುದು. ಇದರಿಂದ ವಿದ್ಯಾಭ್ಯಾಸದ ವಿಚಾರದಲ್ಲಿ ಕೊಡಗನ್ನು ಮುಂದಕ್ಕೆ ಸಾಗಿಸುವುದರ ಬದಲು ಹಿಂದಕ್ಕೆ ತಳ್ಳಿ, ಇಲ್ಲಿಯ ಜನರನ್ನು ಅಜ್ಞಾನಿಗಳನ್ನಾಗಿ ಮಾಡುವ ಅಪರಾಧಕ್ಕೆ ಸರಕಾರದವರು ಗುರಿಯಾಗಬೇಕಾಗುವುದು. ಆದುದರಿಂದ ಸರಕಾರದವರು ಸಕಾಲದಲ್ಲಿ ಎಚ್ಚರಗೊಳ್ಳುವರೇ ?

ಚೈನಾದಲ್ಲಿ ಭಾರತೀಯ ವೈದ್ಯ ಪಥಕ.

ಚೈನಾ ಜಪಾನುಗಳೊಳಗೆ ನಡೆಯುತ್ತಿರುವ ಘೋರ ಸಂಗ್ರಾಮದಲ್ಲಿ, ನಿರಪರಾಧಿ ಜನಾಂಗವಾದ ಚೈನಾವನ್ನು ತನ್ನ ರಾಜ್ಯವಿಸ್ತರಣಾದಾಹದಿಂದ ಹಿಂಸಿಸುತ್ತಿರುವ ಜಪಾನಿನ ಅಮಾನುಷ ಅತ್ಯಾಚಾರವನ್ನು ಭರತಖಂಡವು ಖಂಡಿಸಿದೆ. ಹಾಗೆಯೇ ಅಬಲರಾದ ಚೈನೀಯರ ಸಹಾಯಕ್ಕೆಂದು ಹಿಂದೂ ದೇಶವು ಒಂದು ವೈದ್ಯಕೀಯ ದಳವನ್ನು ಡಾಕ್ಟರ್ ಅತಾಲ್ ರವರ ಮುಖಂಡತ್ವದಲ್ಲಿ ಕಳುಹಿಸಿದೆ. ಅವರು ಅಲ್ಲಿಂದ ಪಂಡಿತ ಜವಾಹರಲಾಲ್ ನೆಹರೂರವರಿಗೆ ತಮ್ಮ ಅಲ್ಲಿಯ ಕಾರ್ಯದ ಕುರಿತು ಪತ್ರ ಬರೆದಿರುವರು. ಇದರಿಂದ ಈ ವೈದ್ಯಕೀಯ ಪಡೆಯು ಅಖಂಡವಾದ ಸೇವೆಯನ್ನು ಚೈನೀಯರಿಗೆ ಮಾಡಿದೆ ಮತ್ತು ಮಾಡುತ್ತಿದೆಯೆಂಬುದು ವಿಶದವಾಗುತ್ತದೆ. ರಾಷ್ಟ್ರದ ಮರ್ಯಾದೆಗಾಗಿ, ಸ್ವಾತಂತ್ರ್ಯಸಾಧನೆಗಾಗಿ, ಹಾಗೂ ತಮ್ಮ ಜೀವಸಂರಕ್ಷಣೆಗಾಗಿ ಅವಿಚಲವಾಗಿ ಹೋರಾಡುತ್ತಿರುವ ಆ ಚೈನೀಯರ ದೃಢಸಂಕಲ್ಪವು ಅನುಕರಣೀಯವು. ಪಂಡಿತ ಜವಾಹರಲಾಲರು ಈ ವರೆಗೆ ಅನೇಕ ಭಾಷಣಗಳಲ್ಲಿ ಸೂಚಿಸಿರುವಂತೆ ಈ ದಳವು ಚೈನೀಯರಿಗೆ ಮಹದುಪಕಾರಿಯಾಗಿದೆ. ಅಂತರರಾಷ್ಟ್ರೀಯ ಸಮಸ್ಯೆಗಳಲ್ಲಿ ಹಿಂದೂ ದೇಶವು ಗಣನೆಗೆ ಬಾರದ್ದೆಂದು ಹೇಳಿಕೊಂಡರೂ ಹಿತಾಹಿತದ ವಿಮರ್ಶೆಯಲ್ಲಿ, ಅಕೃತ್ಯಗಳನ್ನು ಖಂಡಿಸಿ ಸದ್ವರ್ತನೆಯನ್ನು ಸಮರ್ಥಿಸುವ ಧೋರಣೆಯಲ್ಲಿ ಹಿಂದೂ ದೇಶವು ಸತ್ಪಥದಲ್ಲಿ ನಡೆಯುವದಲ್ಲದೆ ಬೇರಿಲ್ಲವೆಂಬುದು ಇದರಿಂದ ತಿಳಿಯುತ್ತದೆ. ನಿರಂಕುಶಾಧಿಕಾರದಿಂದ ಮತ್ತು ರಾಜ್ಯವಿಸ್ತರಣಾ ಲಾಲಸೆಯಿಂದ ಕ್ರೂರಾಚಾರಗಳನ್ನು ಮಾಡುವ ರಾಷ್ಟ್ರಗಳನ್ನು ಹೇಗೆ ಭಾರತವು ನ್ಯಾಯ್ಯದೃಷ್ಟಿಯಿಂದ ನೋಡುತ್ತದೆಯೆಂಬುದು ಇದರಿಂದ ತಿಳಿಯುತ್ತದೆ. ಡಾ. ಅತಾಲ್‌ರವರು ತಮ್ಮ ಪತ್ರದಲ್ಲಿ ಸೂಚಿಸಿರುವಂತೆ ಈಗೀಗ ಆ ವೈದ್ಯಕೀಯ ಸಂಗಡವು ಯಶಸ್ವಿಯಾದ ಸಹಾಯವನ್ನು ಕೊಡುವ ಸಲಕರಣೆಗಳನ್ನು ಮಾಡಿಕೊಂಡು ಶ್ರಮಿಸುತ್ತಿರುವದರಿಂದ ಮುಂದಕ್ಕೆ ಅದಕ್ಕೆ ಹೆಚ್ಚು ಸಹಾಯ ಮಾಡಲು ಸಾಧ್ಯವಿದೆಯೆಂಬುದು ದೃಢವಾಗುತ್ತದೆ. ಭಾರತವು ತನ್ನ ಸಹಾಯವನ್ನು ಚೈನೀಯರಿಗೆ ಕೊಟ್ಟು, ತನ್ನ ಕರ್ತವ್ಯವನ್ನು ಮಾಡುತ್ತಿದೆ. ಅದು ಯಶಸ್ವಿಯಾಗಿ ಜರಗಬೇಕಾದರೆ ಭಾರತೀಯರ ಪ್ರೋತ್ಸಾಹವು ಇನ್ನಷ್ಟು ಬೇಕಿದೆ. ಆದ್ದರಿಂದ ಭಾರತೀಯರು ವಿಶಾಲ ಮನಸ್ಸಿನಿಂದ ಬಲಾತ್ಕಾರದ ಅತ್ಯಾಚಾರಕ್ಕೊಳಪಟ್ಟಿರುವ ಚೈನೀಯರಿಗೆ ಸಹಾಯವಿತ್ತು ಪ್ರೋತ್ಸಾಹಿಸುವುದು ಅವಶ್ಯವಿದೆ. ವೈದ್ಯಕೀಯ ದಳವು ಯಾವತೊಂದರೆಗೂ ಒಳಗಾಗದೆ ಅವಿಚಲವಾಗಿ ಚೈನೀಯರಿಗೆ ಸಹಾಯಮಾಡಿ ಸುರಕ್ಷಿತವಾಗಿ ಭಾರತಕ್ಕೆ ಹಿಂದಿರುಗಲೆಂದೇ ನಮ್ಮ ಹಿರಿಯಾಸೆ.

ವರ್ತಮಾನ ಸಂಗ್ರಹ.

ಒಳದೇಶ.

ಶ್ರೀಯುತ ಚೆರಿಯಪಂಡ ನಾಣಯ್ಯ ಬಿ. ಎ. ಯವರು ಬೆಂಗೂರಿನಲ್ಲಿ ಪೊಲೀಸು ಸಬ್ ಇನ್ಸ್‌ಪೆಕ್ಟರಾಗಿ ನೇಮಕ ಹೊಂದಿರುವರಾಗಿ ತಿಳಿದು ಸಂತೋಷಪಡುತ್ತೇವೆ.

ರಾಷ್ಟ್ರೀಯ ಸಪ್ತಾಹ ಆಚರಣೆ ಬಗ್ಗೆ ಈ ತಾ. 8 ರ ಪ್ರಾತಃಕಾಲ ಮಡಿಕೇರಿಯಲ್ಲಿ ಧ್ವಜಾಭಿವಂದನೆ. ತಾ. 10 ರಲ್ಲಿ ಕೈಕೇರಿ ಹರಿಜನರ ಕೇರಿ ಸಂದರ್ಶನೆ, ತಾ. 9 ರಲ್ಲಿ ಗೋಣಿಕೊಪ್ಪಲಲ್ಲಿ, ತಾ. 10 ರಲ್ಲಿ ಬಿಟ್ಟಂಗಾಲದಲ್ಲಿ ಮತ್ತು ತಾ. 13 ರಲ್ಲಿ ಪೊನ್ನಂಪೇಟೆಯಲ್ಲಿ ಮೆರವಣಿಗೆ, ಧ್ವಜಾಭಿವಂದನೆ ಮತ್ತು ಸಾರ್ವಜನಿಕ ಸಭೆಗಳು ನಡಿಸಲ್ಪಟ್ಟವು.

ಕಳೆದ ತಿಂಗಳ 25 ನೇ ಶನಿವಾರ ಕಿಗ್ಗಟ್ಟುನಾಡು, ಬೇಂಗುನಾಡು ಮತ್ತು ಮಡಿಕೇರಿನಾಡುಗಳ ಕೆಲವು ಭಾಗಗಳಿಗೆ ವಿಶೇಷ ತರದ ಆಣಿಕಲ್ಲುಗಳು ಬಿದ್ದವು. ಹೆಚ್ಚಾಗಿ ಕಡಿಮೆಯಾದರೂ ದಪ್ಪವಾದ ಆಣಿಕಲ್ಲುಗಳು ಸುರಿದವು. ಕೆಲವು ಕಡೆ ತೆಂಗಿನ ಕಾಯಷ್ಟು ದಪ್ಪವಾದ ಆಣಿಕಲ್ಲುಗಳು ಬಿದ್ದವು. ಇದರಿಂದ ಕೆಲವು ಕಡೆ ಮನೆಯ ಹಂಚುಗಳು ಒಡೆದವಲ್ಲದೆ ಒಂದು ಕಡೆ ಒಂದು ಎಮ್ಮೆ ಕೂಡ ಸತ್ತು ಹೋಯಿತಂತೆ. ಕಳೆದ ಅರ್ಧ ಶತಮಾನದಿಂದೀಚೆಗೆ ಇಂಥಾ ಆಣಿಕಲ್ಲುಗಳು ಬಿದ್ದದ್ದು ಯಾರಿಗೂ ತಿಳಿಯದಂತೆ.

ಮಡಿಕೇರಿ.

ಚೀಫ್ ಕಮಿಷನರು ತಾರೀಕು 11 ರಲ್ಲಿ ಇಲ್ಲಿಗೆ ಬಂದಿರುವರು.

ಇಲ್ಲಿ ಕಾಫಿ ಖಂಡಿಗೆ ರೂ. 108 ಏಲಕ್ಕಿ ಮಣಕ್ಕೆ ರೂಪಾಯಿ 25 ಕ್ರಯವಿರುತ್ತೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 22-4-39 ನೇ ಶನಿವಾರ 11 ಗಂಟೆಗೂ, ಪೋಲಿಸಿಮಾಂಟಿ ಬೋರ್ಡಿನ ಮೀಟಿಂಗು ಮಧ್ಯಾಹ್ನ 2 ಗಂಟೆಗೂ ನಡೆಯುವದಾಗಿ ತಿಳಿಯುತ್ತೇವೆ.

ವೀರಾಜಪೇಟೆ.

ಜೇನು ಮೇಣ ಸಂಘದ ಹೊಸ ಕಟ್ಟಡವನ್ನು ತಾರೀಕು 24 ರ ಬೆಳಿಗ್ಗೆ 11 ಗಂಟೆಗೆ ಚೀಫ್ ಕಮಿಷನರು ತೆರೆಯುವರೆಂತಲೂ, ಅದೇ ದಿನ ಆ ಸಂಘದ ವಾರ್ಷಿಕ ಮಹಾ ಸಭೆಯು ಮಧ್ಯಾಹ್ನ 2 ಗಂಟೆಗೆ ನಡೆಯುವದೆಂದೂ ತಿಳಿಯುತ್ತೇವೆ.

ನಿಧನ ವಾರ್ತೆ.

ನಲಜಿ ಗ್ರಾಮದ ಮೆ. ಮಣವಟ್ಟಿರ ಸಂಪಣ್ಣನವರು ಈ ತಾ. 8 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿದು ವ್ಯಸನಪಡುತ್ತೇವೆ.

ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯ ಒಬ್ಬ ಸದಸ್ಯರಾದ ಸುಂಟಿಕೊಪ್ಪದ ಗುಂಡುಗುಟ್ಟಿ ತೋಟದಲ್ಲಿದ್ದ ಶ್ರೀಮತಿ ಪಿ. ಟಿ ಗೌರಮ್ಮನವರು ಈ ತಾ. 13ರ ಬೆಳಿಗ್ಗೆ 11 ಗಂಟೆಗೆ ಸಮೀಪದ ಹರದೂರು ಹೊಳೆಯಲ್ಲಿ ಈಜಾಡುತ್ತಾ ಸ್ನಾನ ಮಾಡುತ್ತಿದ್ದಾಗ್ಯೆ ಆಕಸ್ಮಾತು ನೀರಿನಲ್ಲಿ ಮುಳುಗಿ ಶಿವಾಧೀನರಾದರೆಂದು ತಿಳಿಯಲು ವ್ಯಸನವಾಗುತ್ತೆ.

ಕಾರ್ಗುಂದ

ಕಳೆದ ಆದಿತ್ಯವಾರ ಕಾರ್ಗುಂದದ ನಾಪಂಡ ಮನೆಯಲ್ಲಿ ರಾತ್ರಿ ಒಟ್ಟಿಗೆ ಮಲಗಿದ್ದ 3 ಮಕ್ಕಳ ಪೈಕಿ ಇಬ್ಬರಿಗೆ (ಬಳೆಮುರಿ) ಕಟ್ಟು ಹಾವು ಕಚ್ಚಿ ಅವರಿಬ್ಬರೂ ಮೃತರಾದರೆಂದು ವರ್ತಮಾನ.

ಹಿಂದೂದೇಶ.

ರಾಜಕೋಟೆ ಸಮಸ್ಯೆಯು ಶಾಂತರೀತಿಯಿಂದ ಒಡನೇ ತೀರ್ಮಾನಿಸಲ್ಪಟ್ಟರೆ ಗಾಂಧಿಜೀಯವರು ಮೇ ತಿಂಗಳ ಅಂತ್ಯದಲ್ಲಿ ಗಡಿನಾಡಿಗೆ ಹೋಗಲಿರುವರು.

ವಿದ್ಯಾರ್ಥಿಗಳ ಮುಷ್ಕರದಿಂದ ಕಟಕಿನ ಮೆಡಿಕಲ್ ಸ್ಕೂಲನ್ನು ಸದ್ಯಕ್ಕೆ ಮುಚ್ಚಬೇಕೆಂದು ಒರಿಸ್ಸಾ ಸರ್ಕಾರವು ನಿರ್ಧರಿಸಿದೆ.

ಮುಂಬಾಯಿಯ ಸೋಸಿಯಲಿಸ್ಟ ಮುಖಂಡರೊಬ್ಬರಾದ ಶ್ರೀ ತಯೇಬ್ ಶೇಖ್ ಎಂಬವರಿಗೆ ಕಲ್ಕತ್ತೆಯ ಮೇಜಿಸ್ಟ್ರೇಟರು ನಾಲ್ಕು ತಿಂಗಳ ಕಠಿಣ ಶಿಕ್ಷೆ ವಿಧಿಸಿದ್ದರು. ಕಲ್ಕತ್ತೆಯಲ್ಲಿ ರಾಜದ್ರೋಹ ಭಾಷಣ ಮಾಡಿದುದೇ ಇವರ ತಪ್ಪು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ನೇಮಕ ವಿಚಾರದಲ್ಲಿ ಸ್ವಲ್ಪ ಗಲಾಟೆಯಾಗಬಹುದು. ಶ್ರೀ ಸುಭಾಷರು ರಾಷ್ಟ್ರಪತಿತ್ವಕ್ಕೆ ರಾಜಿನಾಮೆ ಕೊಡುವ ಸಂದರ್ಭ ಇದೆಯೆಂದೂ, ಹಾಗಾದರೆ ಮೌಲಾನ ಅಜಾದರು ಅಧ್ಯಕ್ಷರಾಗುವರೆಂದೂ ವರ್ತಮಾನ.

ನೃತ್ಯಕೂಟದಲ್ಲಿದ್ದು ತನ್ನ ಜೀವನ ಮಾಡುತ್ತಿದ್ದ ಸೆನೊರಿಟಾ ಸೋಫಿಯಾ ಅಲವರೆಜ್ ಎಂಬಾಕೆಯು ಹಿಂದೂದೇಶದ ಅದೊಬ್ಬ ರಾಜನನ್ನು ವಿವಾಹವಾಗಲಿರುವಳಂತೆ. ಆ ಅರಸನಾರೆಂದು ತಿಳಿದು ಬಂದಿಲ್ಲ. ಬಿಳಿ ಹುಡುಗಿಯಾದ ಈಕೆ ರಂಗೂನಿನಿಂದ ತನ್ನ ನಲ್ಲನನ್ನು ಕಾಣಲು ಬಂದಿರುವಳು.

ತಮಿಳುನಾಡು ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರು ತಾ. 28 ರಲ್ಲಿ ಜರಗಲಿಕ್ಕಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗನ್ನು ಮುಂದರಿಸಿಡಬೇಕೆಂದು ರಾಷ್ಟ್ರಪತಿಗಳಿಗೆ ತಂತಿ ಕೊಟ್ಟಿದ್ದಾರೆ. ರಾಷ್ಟ್ರಪತಿಗಳು ಅದು ಅಸಾಧ್ಯವೆಂದೂ, ಅದರ ಬಗ್ಗೆ ಗಾಂಧಿಜೀಯವರನ್ನು ಕೇಳಿ ತನಗೆ ತಿಳಿಸಬೇಕೆಂದೂ ಜವಾಬಿತ್ತಿರುವರು.

ಪಂಡಿತ ಜವಾಹಿರ್‌ಲಾಲ್ ನೆಹರೂರವರ ಮೇಲೆ ಶೀಘ್ರದಲ್ಲಿಯೇ ಒಂದು ಪ್ರಾಣಘಾತಕವಾದ ಹಲ್ಲೆಯು ಮಾಡಲ್ಪಡತಕ್ಕದ್ದೆಂಬ ಭವಿಷ್ಯವನ್ನು ಸಂಯುಕ್ತ ಪ್ರಾಂತದಲ್ಲಿಯ ಓರ್ವ ಪ್ರಸಿದ್ಧ ಜ್ಯೋತಿಷಿಗಳಾದ ಪಂಕಜ ಇವರು ತರ್ಕಿಸಿದ್ದಾರೆ. ಆದರೆ ಈ ಹಲ್ಲೆಯಿಂದ ಪಂಡಿತ ಜವಾಹಿರ್‌ಲಾಲರು ಸುಖರೂಪವಾಗಿ ಪಾರಾಗಿ ಅವರು ಜನತೆಯ ಅಂತ್ಯಂತ ದೊಡ್ಡ ಮುಖಂಡರಾಗುವರೆಂದೂ ಈ ಜೋಯಿಸರು [illegible]

ಜಲಂದರ್‌ನ ಮುನಿಸಿಪಾಲಿಟಿಯು ತೋಟಗಳ ಕೆಲಸ ನಡೆಸಿಕೊಡಲಿಲ್ಲವೆಂದು ಅವರು ಮುಷ್ಕರ ತೊಟ್ಟುದರಿಂದ ಕಾಂಗ್ರೆಸ್ ಸ್ವಯಂ ಸೇವಕರು ನಗರದ ಆರೋಗ್ಯ ರಕ್ಷಣೆಗಾಗಿ ಮುಂದಾಗಿದ್ದಾರೆ. ಈ ನಡುವೆ ಮುನಿಸಿಪಾಲಿಟಿಯ ಕೌನ್ಸಿಲರ್ ಮೊದಲಾದ ಅಧಿಕಾರಿಗಳು ಸತ್ತರೆಂದು ಪ್ರತಿದಿನವೂ ಒಬ್ಬೊಬ್ಬರ ಶವದಹನದ ಆಟ ಪರಿಹಾಸ್ಯಗಳನ್ನೂ ಇವರು ಸಾಗಿಸುತ್ತಿದ್ದಾರೆ.

ಈ ಸಂಸ್ಥಾನದಲ್ಲಿ ಸುಮಾರು 2 ಸಾವಿರ ಜನರು ದಂಗೆಯೆದ್ದು ಸಂಸ್ಥಾನದ ಜೈಲಿನಲ್ಲಿ ನುಗ್ಗಿ ಬೆಂಕಿ ಹಚ್ಚಿದ್ದರು. ಪೊಲೀಸರು ಗೋಳಿಬಾರು ಮಾಡಿದರು. 65 ಗುಂಡುಗಳನ್ನು ಹಾರಿಸಿದರು. ಅನೇಕರಿಗೆ ಗಾಯಗಳಾದವು. ಜನಾಂಗವು ಜೈಲಿನ್ನೇ ನುಗ್ಗಿ ರಿಕಾರ್ಡುಗಳನ್ನು ಸುಟ್ಟು ಹಾಕಿದರು. ಜೈಲಿಗೆ ಬೆಂಕಿ ಹಚ್ಚಿದರು. ಸುಮಾರು 35 ಕೈದಿಗಳನ್ನು ಬೆಂಕಿಯಿಂದ ತಪ್ಪಿಸಿಕೊಳ್ಳಲು ಬಿಡುಗಡೆ ಮಾಡಿದರು. ಆ ಮೇಲೆ ಜನರ ಗುಂಪು ಜೈಲು ಅಧಿಕಾರಿಯ ಮನೆಗೆ ಬೆಂಕಿ ಹಚ್ಚಿದರು. ಜೈಲು ವಾರ್ಡರುಗಳನ್ನು ಕೊಂದು ಹಾಕಿದರು. ಟೆಲಿಗ್ರಾಫು ತಂತಿಗಳನ್ನು ಕಿತ್ತೊಗೆದರು. ಕಾಂಗ್ರೆಸ್ ಧ್ವಜವನ್ನು ಸಂಸ್ಥಾನದ ಅಧಿಕಾರಿಗಳು ಕಿತ್ತೊಗೆದು ಕೆಲವರನ್ನು ದಸ್ತಗಿರಿ ಮಾಡಿದ್ದೇ ಈ ದಂಗೆಗೆ ಕಾರಣವಂತೆ.

ವಿದೇಶ

ಹಂಗೇರಿ ಮತ್ತು ಪೆರೂ ಎಂಬ ರಾಷ್ಟ್ರಗಳು ಜನಾಂಗಗಳ ಕೂಟದ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಇತ್ತಿರುವರು.

ಬ್ರಿಟಿಷ್ ಮಂತ್ರಿಗಳಾದ ಸರ್ ಮೊರಿಸ್ ಪೀಟರ್‌ಸನ್‌ರವರು ಜನರಲ್ ಫ್ರಾಂಕೋವಿನ ಜಯವನ್ನು ಹೊಗಳಿ ಅವನಿಗೆ ಶಹಬಾಸ್‌ಗಿರಿಯನ್ನು ಕೊಡಲು ಸ್ಪೈಯಿನಿಗೆ ಹೊರಟಿರುವರಂತೆ.

ಅಲ್ಬೇನಿಯಾವು ಪೂರ್ತಿಯಾಗಿ ಇಟಲಿಯೊನರ ವಶವಾಗಿಲ್ಲವೆಂದೂ, ಅಲ್ಲಲ್ಲಿ ತೀವ್ರ ಕದನಗಳಾಗುತ್ತಿರುವದೆಂದೂ, ಇಟಲಿಯನರ ಅಧಿಕಾರವನ್ನು ಅಲ್ಬೇನಿಯೊನರು ತಿರಸ್ಕರಿಸಿರುವದಾಗಿಯೂ, ಇಟಲಿಯು ದಿನೇ ದಿನೇ ಮುಂದುವರಿಯುತ್ತಿರುವದಾಗಿಯೂ ತಿಳಿದುಬರುತ್ತದೆ.

ತಾ. 11 ರಲ್ಲಿ ಫ್ರೆಂಚ್ ಕೇಬಿನೆಟ್ ಮೀಟಿಂಗು ನಡೆದು ಮುಂಬರುವ ಯಾವ ಬಿಕ್ಕಟ್ಟಿನಲ್ಲೂ ತಾವು ಸಿದ್ಧರಿರಬೇಕೆಂದೂ ಅದ್ದರಿಂದ ದಮ್ಮ ಹಡಗುಪಡೆ, ಸೈನ್ಯ, ವಿಮಾನಗಳು ತಯಾರಿರಬೇಕೆಂದೂ, ಇನ್ನು ಸರ್ವಾಧಿಕಾರಿಗಳು ಅತ್ಯಾಚಾರವನ್ನು ತಾವು ಸಹಿಸಲಾರೆವೆಂದೂ ತೀರ್ಮಾನಿಸಿರುವರು

ದಕ್ಷಿಣ ಅಮೇರಿಕಾದಲ್ಲಿರುವ ಅರ್ಜನ್‌ಟೈನ್ ಪ್ರಜಾಧಿಪತ್ಯದ ಸರ್ಕಾರದವರು ಜರ್ಮನಿಯಿಂದ ರೈಲ್ವೆಯಂತ್ರೋಪಕರಣಗಳನ್ನು ತರಿಸಿಕೊಂಡು ಅದಕ್ಕೆ ಪ್ರತಿಯಾಗಿ 1,00,000 ಟನ್ ಗೋಧಿಯನ್ನೂ 8,000 ಟನ್ ಉಣ್ಣೆಯನ್ನೂ ಕಳುಹಿಸಿಕೊಡುವದಾಗಿ ಒಪ್ಪಂದ ಮಾಡಿಕೊಂಡಿರುತ್ತಾರೆ.

ಇಟಲಿಯು ಅಲ್ಬೇನಿಯಾದ ಮೇಲೆ ತೋರಿಸಿದ ಅವರ ಕೃವಾಡವನ್ನು ಖಂಡಿಸಿ ಮುಂದೆ ಮಧ್ಯಯೂರೋಪದ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂಥಾ ವರ್ತನೆಯನ್ನು ಸರ್ವಾಧಿಕಾರಿಗಳು ಕೈಕೊಂಡದ್ದೇ ಆದರೆ ನಾವು ಅವರನ್ನು ವಿರೋಧಿಸಿ ರಣಾಂಗಣಕ್ಕೆ ಇಳಿಯುವೆವೆಂದು ಬ್ರಿಟನ್ ಮತ್ತು ಫ್ರಾನ್ಸ್ ಒಮ್ಮತದಿಂದ ಒಂದು ಪ್ರಕಟನೆ ಹೊರಡಿಸಿರುವರು.

ಬಹುಮಾನ.

ನನ್ನ ಬಾಪ್ತು ಒಂದು ಕರೆಯುವ ಹಸ ಅದರ ಹೋರಿಕರ (ಬಿಸ್ತ್ರಲಾಗಿತ್ತು) ಇವು ಕಳೆದ ಫೆಬ್ರವರಿಯಲ್ಲಿ ವೀರಾಜಪೇಟೆಯಿಂದ ತಪ್ಪಿಸಿಕೊಂಡು ಬಿಟ್ಟಂಗಾಲದವರೆಗೆ ಬಂದದ್ದನ್ನು ಜನರು ಕಂಡಿರುತ್ತಾರೆ. ಅಲ್ಲಿಂದೀಚೆಗೆ ನಾವು ನಮ್ಮ ಭಾಗದಲ್ಲಿ ಹುಡುಕಿ ಸಿಕ್ಕಿರುವುದಿಲ್ಲ. ಈ ರಾಸುಗಳನ್ನು ಪತ್ತೆಮಾಡಿ ಕೊಟ್ಟವರಿಗೆ ರೂಪಾಯಿ 2 ಬಹುಮಾನ ಕೊಡುತ್ತೇನೆ. ಯಾರ ವಶದಲ್ಲಿಯಾದರೂ ಇದ್ದ ಪಕ್ಷದಲ್ಲಿ ಈ ಪತ್ರಿಕೆಯ ಮೂಲಕ ಅರುಹಿಕೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

1. ಕೆಂಪುವರ್ಣದ ಅಂದಾಜು 4 ಅಡಿ ಎತ್ತರದ ಮೊಖದಲ್ಲಿ ಬೋರೆ ಇರುವ ಕೋಡು ಎರಡು ಇಂಚು ಉದ್ದದ ಪುಷ್ಟಿಯಾಗಿರುವ ಹಸ.

2. ಅದೇ ವರ್ಣದ ಮೊಖದಲ್ಲಿ ಬೋರೆ ಇರುವ ಒಂದುವರೆ ವರ್ಷದ ಇದರ ಹೋರಿಕರ.

ಚೆಪ್ಪುಡೀರ ಎಸ್. ಪೂವಯ್ಯ.
ಧನುಗಾಲ, ಪೊನ್ನಂಪೇಟೆ.

COORG FOREST DEPARTMENT.

SALE NOTICE.

Mercara, the 16th April

Tenders invited by 12 noon on 30th April 1939 for the right to fell and remove timber from 4 coupes aggregating 300 acres in the Tithimatti and Nagorhole Ranges containing mostly Teak (Tectona grandis), Biti (Dalbergia latifolia), Honne (Pterocarpus marsupium), Mathi (Terminalia tomentosa), Nandi (Lagerstroemia lanceolata) and Junglewoods.

For further particulars please apply to the CHIEF FOREST OFFICER, COORG, MERCARA.

ರಾಷ್ಟ್ರೀಯ ವಾರ.

ಈ ತಾ. 6ರಿಂದ 13ರ ವರೆಗೆ ರಾಷ್ಟ್ರೀಯ ವಾರವಾಗಿ ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ಕಾಂಗ್ರೆಸ್ಸಿನವರಿಂದ ಆಚರಿಸಲ್ಪಟ್ಟಿತು.

ಮಡಿಕೇರಿ.

ತಾ. 8ರ ಬೆಳಿಗ್ಗೆ ಮಡಿಕೇರಿ ಜಮಿೂನ್ದಾರರ ಸಂಘದ ಕಟ್ಟಡ ಎದುರುಗಡೆಯಲ್ಲಿ ರಾಷ್ಟ್ರೀಯ ಧ್ವಜಾರೋಹಣವು ನಡೆಯಿತು.

ಗೋಣಿಕೊಪ್ಪ.

ತಾ. 9ರ ಮಧ್ಯಾಹ್ನ 3 ಗಂಟೆಗೆ ಗೋಣಿಕೊಪ್ಪಲಲ್ಲಿ ರಾಷ್ಟ್ರೀಯ ಗೀತೆಯೊಡಗೂಡಿ ಮೆರವಣಿಗೆ ನಡೆಸಿ ಆಸ್ಪತ್ರೆಯ ಸಮಿೂಪದ ಮೈದಾನದಲ್ಲಿ ಸಾರ್ವಜನಿಕ ಸಭೆ ಸೇರಿತು. ಕಿಗ್ಗಟ್ಟುನಾಡು ತಾಲೋಕು ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಜಮ್ಮಡ ಮಾದಪ್ಪನವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಧ್ವಜಾಭಿವಂದನೆ ಮಾಡಿದ ಮೇಲೆ ಶ್ರೀಯುತರುಗಳಾದ ಸಿ. ಐ. ಬೆಳ್ಳಪ್ಪನವರು, ಕಡೇಮಾಡ ಜಿ. ಪೂವಯ್ಯನವರು ಮತ್ತು ಕಾಳೇಂಗಡ ಚಿಣ್ಣಪ್ಪನವರು ರಾಷ್ಟ್ರೀಯ ವಾರದ ಮಹತ್ವ ಕಾಂಗ್ರೆಸ್ಸಿನ ಕಾರ್ಯಕ್ರಮ ಮುಂತಾದವುಗಳನ್ನು ಕುರಿತು ಭಾಷಣ ಮಾಡಿದರು. ಶ್ರೀ. ಕೊಡಂದೇರ ಚಂಗಪ್ಪನವರು ಕಾಂಗ್ರೆಸ್ಸಿನ ಕಾರ್ಯಕಲಾಪಗಳನ್ನು ಕುರಿತು ಸೂಚಿಸಿದ ಕೆಲವು ಸಂದೇಹಗಳಿಗೆ ಸಮರ್ಪಕವಾದ ಜವಾಬು ಕೊಡಲ್ಪಟ್ಟಿತು. ಅಧ್ಯಕ್ಷರ ಆಶ್ಯರು ಭಾಷಣದಿಂದ ಸಭೆಯು ಮುಕ್ತಾಯವಾಯಿತು.

ಕೈಕೇರಿ.

ತಾ. 10ರ ಬೆಳಿಗ್ಗೆ 8 ಗಂಟೆಗೆ ಶ್ರೀ. ಜಮ್ಮಡ ಮಾದಪ್ಪನವರು, ಸಿ. ಐ. ಬೆಳ್ಳಪ್ಪನವರು ಇನ್ನು ಕೆಲವು ಗ್ರಾಮಸ್ಥರೊಡನೆ ಕೈಕೇರಿ ಹರಿಜನರ ಮನೆ ಮಾರುಗಳನ್ನೆಲ್ಲಾ ಸುತ್ತಿನೋಡಿ, ಅವು ಬಹು ಶುಚಿಯಾಗಿದ್ದದನ್ನು ಕಂಡು ಸಂತೋಷಪಟ್ಟು ಅಲ್ಲಿಯ ಹರಿಜನರನ್ನೆಲ್ಲಾ ಒಂದು ಕಡೆ ಸೇರಿ, ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಜಾರಿಗೆ ತಂದು ಅವರ ಉದ್ಧಾರವನ್ನು ಸಾಧಿಸಿಕೊಳ್ಳುವ ರೀತಿಯನ್ನು ಅವರಿಗೆ ಹೇಳಿಕೊಟ್ಟರು.

ಬಿಟ್ಟಂಗಾಲ.

ತಾ. 10ರ ಬೆಳಿಗ್ಗೆ 11½ ಗಂಟೆಗೆ ಬಿಟ್ಟಂಗಾಲದ ಬೀದಿಯಲ್ಲಿ ತ್ರಿವರ್ಣದ ಬಾವುಟದೊಂದಿಗೆ ರಾಷ್ಟ್ರೀಯ ಗೀತೆ ಹಾಡುತ್ತಾ ಮೆರವಣಿಗೆ ಹೋಗಿ ಸಮಿೂಪದ ಮೈದಾನದಲ್ಲಿ ಸಭೆ ಕೂಡಲಾಯಿತು. ಸುತ್ತಮುತ್ತಲಿನ ನಾಲ್ಕೈದು ಗ್ರಾಮಗಳ ಜನರು ಸೇರಿದ್ದರು. ಧ್ವಜಾಭಿವಂದನೆಯ ನಂತರ ಶ್ರೀ. ನಾಯಡ ಚಿಣ್ಣಪ್ಪನವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು.

ಮೆ. ಸಿ. ಐ. ಬೆಳ್ಳಪ್ಪನವರು ರಾಷ್ಟ್ರೀಯ ವಾರ ಆಚರಣೆಯನ್ನೂ, ತ್ರಿಪುರಿ ಕಾಂಗ್ರೆಸ್ ಅಧಿವೇಶನವನ್ನೂ ಮತ್ತು ಕಾಂಗ್ರೆಸ್ ಪಕ್ಷದವರು ಕೌನ್ಸಿಲ್ ಮಿೂಟಿಂಗಿನಿಂದ ಹೊರಬಂದ ವಿಚಾರವನ್ನೂ ಕುರಿತು ಭಾಷಣ ಮಾಡಿದರು. ಮೆ. ಜ[illegible]

ಮೆ. ಕಡೇಮಾಡ ಪೂವಯ್ಯನವರು ಜಲಿಯನ್‌ವಾಲಾ ಭಾಗದ ಅತ್ಯಾಚಾರದ ವಿಷಯವಾಗಿಯೂ ಮತ್ತು ನಿಷಾನಿಷೇಧದ ವಿಚಾರವಾಗಿಯೂ, ಮೆ. ಕಾಳೇಂಗಡ ಚಿಣ್ಣಪ್ಪನವರು ನಿಷಾ ನಿಷೇಧವನ್ನು ಕುರಿತೂ ಮಾತಾಡಿದರು. ಮೆ. ಗುಡ್ಡಂಡ ಭೀಮಯ್ಯನವರು ಕೇಳಿದ ಪ್ರಶ್ನೆಗಳಿಗೆ ಜವಾಬು ಕೊಡಲಾಯಿತು.

ಮೆ. ನಾಯಡ ಬೆಳ್ಳಪ್ಪನವರಿಂದ ಸೂಚಿಸಲ್ಪಟ್ಟು, ಮೆ. ಮುಳ್ಳಂಡ ಚಿಣ್ಣಪ್ಪನವರಿಂದ ಅನುಮೋದಿಸಲ್ಪಟ್ಟ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದವು.

(1) ಲಿವಿಸ್ಟ್ಯೂ ಮ್ಯಾನ್ಯುವಲಿನ ಕರಡು ನಿಬಂಧನೆಗಳ ತಿದ್ದುಪಡಿಯನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ ಮತ್ತು ಉದ್ಯೋಗಸ್ಥರಲ್ಲದವರ ಬಹುಮತವಿರುವ ಕಮಿಟಿಯವರು ತಯಾರಿಸುವ ತಿದ್ದುಪಡಿಗಳು ಮಾತ್ರ ದೇಶೀಯರಿಗೆ ತೃಪ್ತಿಕರವಾಗುವವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

(2) ಡಿಸ್ಟ್ರಿಕ್ಟ್ ಬೋರ್ಡಿನ ಈಗಿನ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರ್ಕಾರದವರು ಖರ್ಚು ಖೋತೆಯ ನೆವದಿಂದ ಬೋರ್ಡಿಗೆ ಕೊಡುತ್ತಿರುವ ವಂತಿಗೆಯಲ್ಲಿ ರೂ. 7 ಸಾವಿರ ಕಡಿಮೆಮಾಡಲು ಮಾಡಿರುವ ತೀರ್ಮಾನವನ್ನು ಈ ಸಭೆಯು ಖಂಡಿಸುತ್ತದೆ. ಬೋರ್ಡಿನವರು ಗ್ರಾಮವಾಸಿಗಳಿಗೆ ಮಾಡುತ್ತಿರುವ ವಿದ್ಯಾ ಪ್ರಸಾರ, ವೈದ್ಯ ಚಿಕಿತ್ಸೆ, ಗ್ರಾಮಾಂತರ ರಸ್ತೆ ಮೊದಲಾದ ಬಹು ಉಪಯುಕ್ತ ಕಾರ್ಯಗಳ ಹಿತ ದೃಷ್ಟಿಯಿಂದ ಸರ್ಕಾರದವರು ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡಕೂಡದೆಂದು ಚೀಫ್ ಕಮಿಷನರವರನ್ನು ಈ ಸಭೆಯು ಕೇಳಿಕೊಳ್ಳುತ್ತದೆ.

(3) ಸ್ಕೂಲ್ ಫೀಜನ್ನು ಏರಿಸುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಅಡಚಣೆಯಾಗುವ ಕಾರಣ ಹಾಗೆ ಸ್ಕೂಲ್ ಫೀಜನ್ನು ಏರಿಸಕೂಡದೆಂದು ಈ ಸಭೆಯು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ.

(4) ಜನರ ಪ್ರತಿನಿಧಿಗಳ ಕೋರಿಕೆಗೆ ಸರ್ಕಾರದವರು ತೋರಿಸುವ ಉದಾಸೀನತೆಯನ್ನು ನಿಷೇಧಿಸಲಿಕ್ಕಾಗಿ ಕಳೆದ ಕೌನ್ಸಿಲ್ ಮಿೂಟಿಂಗಿನಿಂದ ಕಾಂಗ್ರೆಸ್ ಪಕ್ಷದ ಮೆಂಬರುಗಳು ಎದ್ದು ಹೊರಬಂದದ್ದು ನ್ಯಾಯ ಸಮ್ಮತವಾಗಿದೆ; ಮತ್ತು ಅವರ ಈ ಕಾರ್ಯಕ್ಕೆ ಈ ಸಭೆಯು ಸಂಪೂರ್ಣ ಒತ್ತಾಸೆಯನ್ನೀಯುತ್ತದೆ.

ಅಧ್ಯಕ್ಷರ ಆಶ್ಯರು ಭಾಷಣವಾದ ಮೇಲೆ ವಂದೇ ಮಾತರಂ ಗೀತೆಯಿಂದ ಸಭೆಯು ಸಾಯಂಕಾಲ 3½ ಗಂಟೆಗೆ ಬರಕಾಸ್ತಾಯಿತು.

ಮೂರ್ನಾಡು.

ಈ ತಾ. 13ರಲ್ಲಿ ಮಧ್ಯಾಹ್ನ 1½ ಗಂಟೆಗೆ ಮೂರ್ನಾಡು ಪೇಟೆಯಲ್ಲಿ ರಾಷ್ಟ್ರೀಯ ಧ್ವಜ ಸಮೇತ ಮೆರವಣಿಗೆ ನಡೆ[illegible] ಮಿೂಟಿಂಗು ಸೇರಿತು. ಚೌರಿರ ಅಪ್ಪಯ್ಯನವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ಶ್ರೀಯುತ ಪಂದ್ಯಂಡ ಬೆಳ್ಳಪ್ಪನವರು ತ್ರಿಪುರಿ ಕಾಂಗ್ರೆಸ್ಸಿನ ತೀರ್ಮಾನಗಳನ್ನೂ, ರಾಷ್ಟ್ರೀಯ ವಾರ ಆಚರಣೆಯ ಉದ್ದೇಶವನ್ನೂ ಕುರಿತೂ, ಮೆ. ಬಿದ್ದಂಡ ಕಾರ್ಯಪ್ಪನವರು ಕಾಂಗ್ರೆಸು ಪಕ್ಷದವರು ಕೌನ್ಸಿಲು ಸಭಾತ್ಯಾಗ ಮಾಡಿದ್ದರ ವಿಷಯವಾಗಿಯೂ, ಲಿವಿಸ್ಟ್ಯೂ ಮ್ಯಾನ್ಯುವೆಲ್ ತಿದ್ದುಪಡಿ, ಸ್ಕೂಲು ಫೀಸು ಏರಿಸುವಿಕೆ ಮೊದಲಾದವುಗಳನ್ನು ಕುರಿತೂ ಭಾಷಣ ಮಾಡಿದರು. ಆ ಮೇಲೆ ಮೆ. ಮಡೆಯಂಡ ದೇವಯ್ಯನವರಿಂದ ಸೂಚಿಸಲ್ಪಟ್ಟು, ಮೆ. [illegible]ರಿಂದ ಅನುಮೋದಿಸಲ್ಪಟ್ಟ ನಾಲ್ಕು ಠರಾವು ವಿರೋಧವಿಲ್ಲದೆ ಪಾಸಾದವು. ಈ ಠರಾವುಗಳು ಮೇಲೆ ಕಾಣಿಸಿದ ಠರಾವುಗಳ ಆಧಾರದಿಂದ ಅವುಗಳನ್ನು ಇಲ್ಲಿ ಪುನಹ ಕೊಟ್ಟಿರುವುದಿಲ್ಲ.

ಕೊಡಗಿನ ಒಕ್ಕಲಿಗರ ವಿದ್ಯಾಭಿವೃದ್ಧಿ ಸಭೆ.

ಕೊಡಗು ದೇಶದಲ್ಲಿ ಒಕ್ಕಲಿಗರು ಸು. ಮೂರು ಹತ್ತು ಸಾವಿರ ಮಂದಿ ಇರುವರು. ಇವರಲ್ಲಿ ಬಹು ಮಂದಿ ನಿರಕ್ಷರ ಕುಕ್ಷಿಗಳು. ಹರಿಜನರು, ಮುಸಲ್ಮಾನರು ಇತ್ಯಾದಿ ಕೋಮುವಾರು ಸಂಘಗಳು ಸರಕಾರದವರ ದೃಷ್ಟಿಯಿಂದ ಹಿಂದುಳಿದ ಪಂಗಡದವರೆಂದು ಗಣಿಸಲ್ಪಟ್ಟು ಅವರಿಗೆ ವಿದ್ಯಾ ಪ್ರಚಾರಕ್ಕೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡುತ್ತಲಿರುವರು. ಸುಮಾರು ಹತ್ತು ಸಾವಿರ ಇರುವ ಈ ಜನಾಂಗದಲ್ಲಿ ಬರೀ 591 ಮಂದಿ ವಿದ್ಯಾವಂತರು. ಈ ಜನಾಂಗದ ವಿದ್ಯಾಭಿವೃದ್ಧಿಯಲ್ಲಿ ಸರ್ಕಾರದವರು ತೀರ ಉದಾಸೀನತೆಯಿಂದ ಇರುತ್ತಾರೆ ಎಂಬುದನ್ನು ಇನ್ನು ಬೇರೆ ಹೇಳತಕ್ಕದ್ದೇನು? ತಮ್ಮ ಈ ವಿಧವಾದ ದುಸ್ಥಿತಿಯನ್ನು ಅರಿತವರಾದ ಕೆಲವು ಮಂದಿ ತರುಣರು ಈಗ ಕಣ್ಣು ತೆರೆದವರಾಗಿ ತಮ್ಮದೇ ಆದ ಒಕ್ಕಲಿಗರ ವಿದ್ಯಾಭಿವೃದ್ಧಿ ಸಂಘವೊಂದನ್ನು ಸ್ಥಾಪಿಸಿ ತನ್ಮೂಲಕ ಕುಲಸೇವೆಯನ್ನು ಮಾಡಲು ಮುಂದೆ ಬಂದಿರುವ ಸಂಗತಿಯು ಸಂತೋಷಜನಕವಾದ ವಿಷಯವಾಗಿದೆ.

ತಾ. 31-3-39 ನೇ ದಿವಸ ಗೋಣಿಕೊಪ್ಪಲಿನಲ್ಲಿ ನಡೆದ ಈ ಕೂಟದಲ್ಲಿ ಇದೇ ಏಪ್ರಿಲ್ ತಿಂಗಳು 25 ನೇ ದಿವಸ ಕೊಡಗು ಒಕ್ಕಲಿಗರ ಮಹಾ ಸಭೆಯೊಂದನ್ನು ಮೈಸೂರು ಪ್ರಾಂತ್ಯದ ಕಾಂತರಾಜಪುರದ ಶ್ರೀಮಾನ್ ಧೀನಬಂಧು ಯಂ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಬೇಕೆಂತಲೂ ಮುಂತಾಗಿ ಹಲವು ತೀರ್ಮಾನಗಳನ್ನು ಮಾಡಿಕೊಂಡರು. ಈ ವೇಳೆ ಮೈಸೂರು ಪ್ರಾಂತದ ಕೃಷ್ಣರಾಜನಗರಕ್ಕೆ ಸೇರಿದ ಪ್ರಸಿದ್ಧ ಕ್ಷೇತ್ರವಾದ ಚುಂಚನಕಟ್ಟೆಯಲ್ಲಿ ನಡೆಯುತ್ತಿರುವ ಗುರುಕುಲ ಮತ್ತು ಅನಾಥಾಶ್ರಮ ಸಂಸ್ಥೆಗಳ ವ್ಯವಸ್ಥಾಪಕರು ಶ್ರೀ ಮಾ. ಕೆ. ಪು[illegible]ದ ಸಲಹೆಗಳನ್ನು ಕೊಟ್ಟದ್ದಕ್ಕಾಗಿ ತಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಮಾನ್ಯರಿಗೆ ಅರ್ಪಿಸುವದರೊಡನೆ ಸಭೆಯು ಬರಕಾಸ್ತಾಯಿತು.

ಗೋಣಿಕೊಪ್ಪ ವಿ. ಹೆಚ್. ವೆಂಕಟಪ್ಪ,
(ಗೌ. ಕಾರ್ಯದರ್ಶಿ)

ಕೊಡ್ಲಿಪೇಟೆ ಬಾಲಚಮೂ ಪ್ರದರ್ಶನ.

ತಾ. 21-1-39ನೇ ಶನಿವಾರ ರಾತ್ರಿ ಕೊಡ್ಲಿಪೇಟೆ ಶಾಲೆಯ ಬಾಲಚಮೂ ಸಂಸ್ಥೆಯವರು ಶನಿವಾರಸಂತೆ ಮಾರ್ಕೆಟ್ ಬಳಿ ಶಿಬಿರಾಗ್ನಿಯನ್ನೂ, ವಿವಿಧ ವಿನೋದಾವಳಿಗಳನ್ನೂ ಚಲೋ ರೀತಿಯಿಂದ ಪ್ರದರ್ಶಿಸಿದರು. ಸದರಿ ಪ್ರದರ್ಶನವು ಆ ದಿವಸ ರಾತ್ರಿ 8½ ಗಂಟೆಯಿಂದ ಸುಮಾರು 11 ಗಂಟೆ ವರೆಗೆ ನಡೆಯಿತು. ಸ್ಥಳೀಯ ಉದ್ಯೋಗಸ್ಥರೂ, ಪುರನಿವಾಸಿಗಳೂ, ಸುತ್ತುಮುತ್ತಲಿನ ಗ್ರಾಮದವರೂ ಸೇರಿ ಸುಮಾರು ಮುನ್ನೂರು ನಾನೂರು ಜನರು ಪ್ರೇಕ್ಷಕರಾಗಿ ಬಂದಿದ್ದರು. ಮಿಸೆಸ್ ಗೌರಮ್ಮ ಸುಬ್ರಾಯರವರು ಶಿಬಿರಾಗ್ನಿ[illegible]ಯನ್ನು [illegible] ಶಿಬಿರಾಗ್ನಿಯನ್ನು [illegible]. ಕೂಡಲೇ ಸ್ಕೌಟ್ ಬಾಲಚರ ಪ್ರಾರ್ಥನೆಯು ಜರಗಿತು. ಒಂದಾದ ಮೇಲೊಂದರಂತೆ ಸದರಿ ಸಂಸ್ಥೆಯ ಬಾಲಕರು ಅಭಿನೈಸಿದ ಪ್ರದರ್ಶನಗಳು, ಪದ್ಯಗಳು, ಹಾಡುಗಳು, ನಕಲಿಗಳು-ಪ್ರೇಕ್ಷಕರನ್ನು ಸಂತೋಷಪಡಿಸಿದವು. ಪ್ರೇಕ್ಷಕರು ಎರಡು-ಮೂರು ಗಂಟೆಗಳ ವರೆಗೆ ತನ್ಮಯರಾಗಿ ಕುಳಿತು ಚಿಕ್ಕ ಬಾಲಕರ ವಿವಿಧ ವಿನೋದಗಳನ್ನು ನೋಡುತ್ತಲಿದ್ದರು. ಮುಂದಿನ ಪ್ರಜೆಗಳಾದ ಇಂದಿನ ಬಾಲಕರನ್ನು ಈ ಬಾಲಚಮೂ ಸಂಸ್ಥೆಯ ಮೂಲಕವಾಗಿ ದೇಶ ಸೇವೆಗೆ ತರಬೆತು ಮಾಡುತ್ತಲಿರುವ ಸ್ಕೌಟ್ ಮತ್ತು ಕಬ್ ಮಾಸ್ಟರುಗಳನ್ನು ತುಂಬಾ ವಂದಿಸುತ್ತೇನೆ. ಹಾಗೂ ಈ ಸಂಸ್ಥೆಯ ಬಾಲಕರಿಗೆ ಊಟ ಉಪಚಾರಗಳಿಗೆ ಅನುಕೂಲ ಪಡಿಸಿದ ಮೆ. ಎಸ್. ಎಂ. ಚೆನ್ನಬಸಪ್ಪನವರಿಗೆ ಮತ್ತು ಕೋಟೆ ಪೂಜಾರಿಯವರಿಗೂ ಮತ್ತು ಬಾಲಕರ ಆಟಪಾಟಗಳಿಗೆ ಯೋಗ್ಯವಾದ ಅನುಕೂಲತೆಗಳನ್ನು ಒದಗಿಸಿಕೊಟ್ಟ ಪುರ ನಿವಾಸಿಗಳಿಗೂ ತುಂಬ ವಂದಿಸುತ್ತೇನೆ. ಬಾಲಕರ ವಿವಿಧ ವಿನೋದಾವಳಿಗಳು ಮುಕ್ತಾಯವಾದನಂತರ ಮೆ. ಕೆ. ಜಿ. ಸುಬ್ರಾಯರು ಈ ಸಂಸ್ಥೆಯ ತತ್ವ, ಧ್ಯೇಯ ಮುಂತಾದ ವಿಷಯಗಳನ್ನು ಕುರಿತು ಪುಟ್ಟ ಭಾಷಣವೊಂದನ್ನು ಮಾಡಿದರು. ಅನಂತರ ಅಂದಿನ ಕಾರ್ಯಕ್ರಮವು ಕೊನೆಗಂಡಿತು. ಈ ಸಂಸ್ಥೆಯ ಕೆಲವು ಚಿಕ್ಕ ಬಾಲಕರು ನಿರ್ಭೀತಿಯಿಂದ ತುಂಬಿದ ಸಭೆಯಲ್ಲಿ ತಮ್ಮ ಪಾತ್ರವನ್ನು ಅಭಿನೈಸಿದುದು ಕೊಂಡಾಡತಕ್ಕದ್ದೇ ಸರಿ. ಈ ಸಂಸ್ಥೆಯ ಬಾಲಕರಿಗೂ, ಸ್ಕೌಟ್ ಮತ್ತು ಕಬ್ ಮಾಸ್ಟರಿಗೂ, ಪ್ರೇಕ್ಷಕರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯವನ್ನೀಯಲೆಂದು ಜಗದೀಶ್ವರನನ್ನು ಪ್ರಾರ್ಥಿಸುವೆನು.

'ಪ್ರೇಕ್ಷಕ'

ರಾಜಕೋಟೆ

ಸುಧಾರಣಾ ಕಮಿಟಿ.

ಪ್ರಜಾಪ್ರಭುತ್ವದ ಮೇಲೆ ಎಲ್ಲಾ ಪಂಗಡಗಳಿಗೂ ಯೋಗ್ಯವಾದ ಪ್ರಾತಿನಿಧ್ಯವಿರಬೇಕು—ಉದ್ಯೋಗಸ್ಥ ಮೆಂಬರರಿಗೂ ಓಟುಮಾಡುವ ಅಧಿಕಾರವಿರಬೇಕು—ಆದ್ದರಿಂದ ಈ ಮೊದಲು ಸುಧಾರಣಾ ಕಮಿಟಿಗೆ ನಾನು ಸೂಚಿಸಿದ ಹೆಸರುಗಳನ್ನು ಪಟೇಲರು ತಮ್ಮ ಸೂಚನೆಯಲ್ಲಿ ಸೇರಿಸಬೇಕು—ಎಂದರೇನೇ ಸುಧಾರಣಾ ಕಮಿಟಿಯ ಕೆಲಸವು ಸಾಂಗವಾಗಿ ನಡೆಯುವದು.

ರಾಜಕೋಟೆ ಸಂಸ್ಥಾನದ ಅರಸರಾಭ ಠಾಕೂರ ಸಾಹೇಬರು ಕಳೆದ ಡಿಸೆಂಬರು ತಾರೀಕು 26 ರಲ್ಲಿ ಹೊರಡಿಸಿದ ಪ್ರಕಟಣೆ ಮೇರೆ ಸುಧಾರಣಾ ಕಮಿಟಿಯನ್ನು ನೇಮಿಸುವ ಬಗ್ಗೆ ಸ್ವಲ್ಪ ತೊಂದರೆಗಳು ಕಂಡು ಬರುವಂತಿದೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಸರ್ ಮೂರಿಸ್ ಗ್ವಾಯರ್‌ರವರ ತೀರ್ಮಾನದ ಮೇರೆ ಸರದಾರ ವಲ್ಲಭ ಭಾಯಿಯವರು ಸೂಚಿಸುವ ಏಳು ಮಂದಿಯನ್ನು ಠಾಕೋರು ಸಾಹೇಬರು ಅಂಗೀಕರಿಸಬೇಕಾಗಿದೆ. ಆದರೆ ಕಮಿಟಿಯಲ್ಲಿ ಹತ್ತು ಜನರಿಗಿಂತ ಹೆಚ್ಚಿರಕೂಡದೆಂದು ನಿಯಮವಿಟ್ಟಿರುವದರಿಂದ ಬೇರೆ ಬೇರೆ ಪಂಗಡದವರಿಗೆ ಕಮಿಟಿಯಲ್ಲಿ ಪ್ರಾತಿನಿಧ್ಯ ಕೊಡುವ ವಿಚಾರ ತುಂಬಾ ಕಷ್ಟಕ್ಕಿಟ್ಟಿದೆ. ಅಲ್ಲಿಯ ಮುಸಲ್ಮಾನರು, ಭಾಯತರು ಮೊದಲಾದ ಪಂಗಡಗಳು ಈಗಾಗಲೇ ಚಳವಳ ಕೈಕೊಂಡಿರುವರು. ಇವರಿಗೆಲ್ಲಾ ಪ್ರಾತಿನಿಧ್ಯಕೊಟ್ಟು ಪ್ರಜಾಪರಿಷತ್ತಿಗೆ ಬಹುಮತವಿರುವಂತೆ ಕಮಿಟಿಯನ್ನು ನೇಮಕಮಾಡುವದು ಕಷ್ಟತಮವಾಗಿರುವದು. ಠಾಕೂರ ಸಾಹೇಬರು ಕಮಿಟಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಿಕ್ಕಾಗಲೀ, ಯಾ ಸರಕಾರದ ಮೆಂಬರುಗಳು ಓಟು ಮಾಡಕೂಡದೆಂದು ನಿರ್ಬಂಧಿಸಲಿಕ್ಕಾಗಲೀ ಒಪ್ಪುವಂತಿಲ್ಲ. ಆದ್ದರಿಂದ ಸುಧಾರಣ ಕಮಿಟಿ ನೇಮಕದ ಸಮಸ್ಯೆಯು ಇನ್ನೂ ತೀರ್ಮಾನವಾಗದೆ ನಿಂತಿರುವದು. ಈ ವಿಚಾರದಲ್ಲಿ ಗಾಂಧಿಯವರಿಗೂ, ಠಾಕೂರ ಸಾಹೇಬರಿಗೂ ಪತ್ರವ್ಯವಹಾರಗಳಾದವು. ಅವನ್ನು ಇಲ್ಲಿ ಕೊಡಲಾಗಿದೆ.

ಗಾಂಧಿಯವರ ಪತ್ರ.

ಠಾಕೂರು ಸಾಹೇಬರಿಗೆ ಮಹಾತ್ಮ ಗಾಂಧಿಯವರು ಈ ಕೆಳಗಿನ ಪತ್ರವನ್ನು ಬರೆದರು:-'ನೀವು ಈ ಮೊದಲೇ ಸೂಚಿಸಿರುವ ನಾಲ್ಕು ಹೆಸರುಗಳು ಕಮಿಟಿಯಲ್ಲಿರಬೇಕೆಂದು ನೀವು ಇಚ್ಛಿಸಬಹುದು. ಸರ್ದಾರ ಪಟೇಲರಿಂದ ಸೂಚಿಸಲ್ಪಡುವ ಪ್ರಜಾಮಂಡಲದ ಸದಸ್ಯರಿಗೆ ಬಹುಮತವಿರುವವರೆಗೆ ನಿಮ್ಮ ನಾಲ್ಕು ಹೆಸರುಗಳನ್ನು ಅವರು ಸಂತೋಷದಿಂದ ಅಂಗೀಕರಿಸುವರು. ಆ ನಾಲ್ಕು ಹೆಸರುಗಳು ಬದಲಾಗದೆ ಇರಬೇಕೆಂಬ ಪಕ್ಷ ಸರ್ದಾರರು ಎಂಟು ಹೆಸರುಗಳನ್ನು ಸೂಚಿಸಬೇಕಾಗುತ್ತದೆ. ನೀವು ಸೂಚಿಸಿದ ನಾಲ್ಕು ಹೆಸರುಗಳನ್ನು ವಾಪಾಸು ತೆಗೆದುಕೊಳ್ಳುವದಾದರೆ ಸರ್ದಾರರು ಬರೀ ಏಳು ಹೆಸರುಗಳನ್ನು ಮಾತ್ರ ಸೂಚಿಸುವರು. ಆದ್ದರಿಂದ ದಯಮಾಡಿ ನೀವು ಸೂಚಿಸುವ ಮೂರು ಜನರ ಹೆಸರುಗಳನ್ನೂ, ಕಮಿಟಿಯ ಅಧ್ಯಕ್ಷರು ಯಾರಾಗುವರೆಂಬುದನ್ನೂ ತಿಳಿಸಿ.'

ಠಾಕೂರ ಸಾಹೇಬರ ಉತ್ತರ.

ಠಾಕೂರು ಸಾಹೇಬರು ಈ ಕೆಳಗಿನ ದೀರ್ಘ ಉತ್ತರವನ್ನು ಗಾಂಧೀಜಿಯವರಿಗೆ ಕಳುಹಿಸಿದರು. ಮುಸಲ್ಮಾನರ, ಭಾಯತರ ಮತ್ತು ಹಿಂದುಳಿದ ಪಂಗಡದವರ ಪರ ನಾನು ಸೂಚಿಸಿರುವ ಹೆಸರುಗಳೇ ಇರಬೇಕೆಂದು ನಾನು ಅಭಿಪ್ರಾಯ ಪಡುವೆ

ನೆಂದು ನೀವು ಊಹಿಸಿದ್ದು ಸರಿ. ಆದರೆ ಪಟೇಲರು ಸೂಚಿಸಿರುವ ಹೆಸರುಗಳೆಲ್ಲವನ್ನೂ ಅಂಗೀಕರಿಸುವದಕ್ಕಾಗಿ ಕಮಿಟಿಯ ಸಂಖ್ಯೆಯನ್ನು ಹೆಚ್ಚಿಸಬೇಕೆಂಬುದು ಇಂದಿನ ಸ್ಥಿತಿಯಲ್ಲಿ ಅಸಾಧ್ಯ. ಈಗ ನಾವು ಮಾಡಬೇಕಾದ ಕೆಲಸವೆಂದರೆ ಕಳೆದ ಡಿಸೆಂಬರು ತಾ. 26 ರ ನನ್ನ ಪ್ರಕಟಣೆ ಮೇರೆ ನ್ಯಾಯಾಧೀಶರು ಕೊಟ್ಟ ಸೂಚನೆಯನ್ನು ಅಂಗೀಕರಿಸಿ ನಡೆಯುವದು. ಆ ಮೇರೆ ಕಮಿಟಿಯಲ್ಲಿ ಹತ್ತು ಜನರಿಗಿಂತ ಹೆಚ್ಚು ಸಂಖ್ಯೆ ಇರಕೂಡದೆಂಬ ನಿರ್ಬಂಧವಿದೆ. ಮುಸ್ಲಿಂ ಮತ್ತು ಭಾಯತ್ ಪಂಗಡಗಳಿಗೆ ಸರಿಯಾದ ಪ್ರಾತಿನಿಧ್ಯವಿರಬೇಕೆಂಬುದು ನಿರ್ವಿವಾದ. ಈ ದೃಷ್ಟಿಯಿಂದಲೇ ಜನವರಿ ತಾ. 21 ರ ನನ್ನ ಪ್ರಕಟಣೆಯಲ್ಲಿ ಮುಸಲ್ಮಾನರಿಗೆ ಎರಡು ಭಾಯತರಿಗೆ ಒಂದು ಹೀಗೆ ಮೂರು ಸ್ಥಳಗಳನ್ನು ಕಲ್ಪಿಸಬೇಕೆಂದು ಸೂಚಿಸಿದ್ದಾಗಿದೆ. ಅಲ್ಲದೆ ಫೆಬ್ರವರಿ 28 ರಲ್ಲಿ ಮುಸ್ಲಿಮರು ನಿಮ್ಮನ್ನು ಕಂಡಾಗಲೂ, ಭಾಯತ್ ಸಂಘದ ಅಧ್ಯಕ್ಷರಿಗೆ ಮಾರ್ಚಿ 11 ರಲ್ಲಿ ನೀವು ಬರೆದ ಪತ್ರದಿಂದಲೂ ನೀವು ನಾನು ಸೂಚಿಸಿದ್ದ ಹೆಸರುಗಳನ್ನು ಅಂಗೀಕರಿಸುವದಾಗಿ ಒಪ್ಪಿರುವಿರಿ. ಈ ಮೇಲ್ಕಂಡ ನಿಮ್ಮ ಭರವಸೆಗಳಿಂದ ನೀವು ಈ ಮೊದಲು ನಾನು ಮುಸಲ್ಮಾನರ ಮತ್ತು ಇತರ ಹಿಂದುಳಿದವರ ಪಂಗಡದವರ ಪರ ಸೂಚಿಸಿದ ಹೆಸರುಗಳನ್ನು ಸರ್ದಾರ ಪಟೇಲರು ಸೂಚಿಸುವ ಏಳು ಹೆಸರುಗಳಲ್ಲಿ ಸೇರಿಸುವಂತೆ ನೀವು ಪಟೇಲರಿಗೆ ಹೇಳುವಿರಾಗಿ ನಂಬಿರುವೆನು. ಅಲ್ಲದೆ ಒಂದು ಕಮಿಟಿಯಲ್ಲಿ ಒಂದೇ ಪಂಗಡಕ್ಕೆ ಬಹುಮತವಿರಬೇಕೆಂಬ ಆ ದೃಷ್ಟಿಗಿಂತಲೂ ಎಲ್ಲಾ ಪಂಗಡಗಳಿಗೂ ಯಥೋಚಿತ ಪ್ರಾತಿನಿಧ್ಯವಿರುವದು ನ್ಯಾಯಸಮ್ಮತವೆಂಬುದನ್ನು ನೀವು ಅಲ್ಲಗಳೆಯಲಾರಿರಿ. ನಾನು ಸರದಾರ ಪಟೇಲರ ಸಲಹೆಯನ್ನು ಕಾಯುತ್ತಿರುವೆನು. ಅದು ಸಿಕ್ಕಿದೊಡನೆಯೇ ಓಟು ಮಾಡಲು ಅಧಿಕಾರವಿರುವ ಮೂರು ಜನ ಉದ್ಯೋಗಸ್ಥರನ್ನು ನೇಮಿಸಿ ನಂತರ ಪ್ರೆಸಿಡೆಂಟರು ಯಾರಾಗಬೇಕೆಂಬುದನ್ನು ನಿಶ್ಚಯಿಸುವೆನು.' ಅಲ್ಲದೆ ಠಾಕೂರು ಸಾಹೇಬರು ಹಿಂದುಳಿದ ಪಂಗಡದವರ ಪರ ಸೂಚಿಸಿರುವ ಹೆಸರೂ ಸಮಿತಿಯಲ್ಲಿ ಸೇರ್ಪಡಬೇಕೆಂದು ಆಶಿಸಿದ್ದಾರೆ.

ಭೋರ ಪಂಗಡದ ಕೇಳಿಕೆ.

ಸುಧಾರಣ ಕಮಿಟಿಗೆ ಮುಸ್ಲಿಮರು ಹೇಗೆ ಪ್ರತಿನಿಧಿಗಳನ್ನು ಚುನಾಯಿಸಲು ಅರ್ಹರೋ ಹಾಗೆಯೇ ತಮಗೂ ಆ ಅರ್ಹತೆಯಿದೆಯೆಂದೂ ಆದ್ದರಿಂದ ತಮ್ಮ ಪಂಗಡದ ಪ್ರತಿನಿಧಿಯಾಗಿ ಸರ್ದಾರ ಪಟೇಲರಿಂದ ಮೊದಲು ಸೂಚಿಸಲ್ಪಟ್ಟಿದ್ದ ಶ್ರೀ ಮುಲ್ಲವಾಜ್ಜಿಯವರನ್ನು ತಾವು ಚುನಾಯಿಸಿರುವದಾಗಿಯೂ ತಮ್ಮದೊಂದು ಸಭೆಯಲ್ಲಿ ತೀರ್ಮಾನಿಸಿರುವದಲ್ಲದೆ ಮಹಾತ್ಮರಿಗೂ, ಠಾಕೂರು ಸಾಹೇಬರಿಗೂ ಮತ್ತು ರೆಸಿಡೆಂಟ್ ಗಿಬ್ಸನರಿಗೂ ಈ ವಿಚಾರ ತಿಳಿಸಿರುವರು.

ಪಟೇಲರ ವಿಚಾರಣೆ.

ಸುಧಾರಣಾ ಕಮಿಟಿಯ ಸದಸ್ಯರನ್ನು ನೇಮಿಸುವ ಬಗ್ಗೆ ಸರ್ದಾರ ಪಟೇಲರು ಅಲ್ಲಲ್ಲಿಯ ಸ್ಥಳೀಕ ಕಾರ್ಯಕರ್ತರೊಂದಿಗೆ ವಿಚಾರಿಸಿ ತರ್ಕಿಸಿದರು. ಗಾಂಧಿಜೀಯವರಿಗೆ ತಮ್ಮ ಪಟ್ಟಿಯನ್ನು ಕಳುಹಿಸುವ ಮೊದಲು ಅವರು ಪುನಹ ಕಾರ್ಯಕರ್ತರನ್ನು ವಿಚಾರಿಸುವವರಿರುವರು.

ಪಂಡಿತ ಜವಾಹರರ ಘೋಷಣೆ.

'ಅನೇಕ ಜನರು ಕಾಂಗ್ರೆಸಿಗೆ ತಮ್ಮ ಸ್ವಾರ್ಥದೃಷ್ಟಿಯಿಂದ ಸೇರಿರುವರಲ್ಲದೆ ಕಾಂಗ್ರೆಸಿನೊಳಗೆ ಅನುಪಯೋಗಿಕವಾದ ಕಾರ್ಯಗಳನ್ನು ಮಾಡುತ್ತಿರುವರು. ಈ ಮಾತಿನ ಮಲ್ಲತನವು ಬರೀ ಕಾಂಗ್ರೆಸ್ ಸದಸ್ಯರಲ್ಲೇ ಅಲ್ಲ. ಕಾಂಗ್ರೆಸಿನ ಅಧಿಕಾರ ಹೊತ್ತ ಜವಾಬಾರಿ ಮುಖಂಡರಲ್ಲೂ ಕಂಡು ಬರುವದು. ಇದರಿಂದ ದೇಶದ ಪ್ರಗತಿಗೆ ಕುಂದೇ ವಿನಹ ಬೇರಿಲ್ಲ.' ಎಂದು ಪಂಡಿತ ಜವಾಹರಲಾಲ್ ನೆಹರೂರವರು ಕಾವನ್ ಪೂರದ ಜಿಲ್ಲಾ ರಾಜಕೀಯ ಸಮ್ಮೇಳನದಲ್ಲಿ ಮಾತಾಡು

ತ್ತಾ ಹೇಳಿದರು. ಅಲ್ಲದೆ ಅವರು ಮುಂದುವರಿಸುತ್ತಾ 'ನಮ್ಮಲ್ಲಿ ಈಗ ಕಂಡು ಬರುತ್ತಿರುವ ಕೋಮುವಾರು ಜಗಳ ಮತ್ತಿತರ ವೈಶಮ್ಯಗಳು ಅಧಿಕಾರದ ಆಶೆಯಿಂದಯೂ ಇತರ ಸ್ವಾರ್ಥದೃಷ್ಟಿಯ ಅಪೇಕ್ಷೆಗಳಿಂದ ಉದ್ಭೂತವಾಗುವವೇ ವಿನಹ ನಾವುಗಳು ಸಮತಾದೃಷ್ಟಿಯಿಂದ ವರ್ತಿಸಿದ್ದೇ ಆದರೆ ಇವಕ್ಕೆ ಖಂಡಿತಾ ಎಡೆಯಿಲ್ಲ. ಆದ್ದರಿಂದ ಇಂದು ಸಮತಾವಾದವು ಜಾರಿಗೆ ಬರುವದು ಕಷ್ಟವಾದರೂ, ಕ್ರಮೇಣ ಸಮತಾವಾದದಿಂದಲೇ ಭಾರತಕ್ಕೆ ಮುಕ್ತಿ' ಎಂದರು. ಅಲ್ಲದೆ ಇಂಡಿಯಾ ಸರಕಾರದ ಆಕ್ಟನ್ನು ತಿದ್ದುಪಡಿ ಮಾಡುವ ವಿಚಾರದಲ್ಲಿ ನೆಹರೂರವರು ಪ್ರಾಂತೀಕ ಸರಕಾರಗಳಿಗೆ ಈಗಲೇ ಈ ಆಕ್ಟಿನಿಂದಾಗಿ ಅಧಿಕಾರವಿಲ್ಲದಾಗಿರುವದು. ಅದನ್ನು ತಿದ್ದುಪಡಿ ಮಾಡುವದರಿಂದ ಇರುವ ಅಲ್ಪ ಸ್ವಲ್ಪ ಅಧಿಕಾರವನ್ನು ಕಳೆದುಕೊಂಡಂತಾಗುವದೆಂದು ಹೇಳಿರುವರು.

ಅಜೀರ್ಣಕ್ಕೆ ಔಷಧಿ.

ಅಜೀರ್ಣದಿಂದ ನರಳುವವರಿಗಾಗಿ ಇಲ್ಲೊಂದು ಔಷಧಿ ಇದೆ. ಜಪಾನಿನಿಂದ ಬಂದುದು. ಬೆರನ್ ತಕಾಸಿ ಮಿತೂಹಾ. ಎಂಬ ಜಪಾನಿನ ಕೋಟ್ಯಾಧೀಶ ಬೇಂಕರ್, ಇದೀಗ ತನ್ನ 82ನೇ ಪ್ರಾಯದಲ್ಲಿ ತೀರಿಕೊಂಡ. ಇವನ 50ರ ಪ್ರಾಯದಲ್ಲಿ ಇವನಿಗೆ ಭಯಂಕರ ಅಜೀರ್ಣ ರೋಗ ತಗಲಿತು. ವೈದ್ಯರೆಲ್ಲ ಇದನ್ನು ಗುಣಪಡಿಸಲು ಸಾಧ್ಯವಿಲ್ಲೆಂದು ಈತನ ಆಶೆಯನ್ನೇ ಬಿಟ್ಟರು. ಆದರೆ ತಕಾಶಿ ಇದರಿಂದ ಎದೆಗುಂದದೆ ಮನೆಯಲ್ಲೊಂದು ದನ ಸಾಕಲು ಪ್ರಾರಂಭಿಸಿದ. ಅದರ ಹಾಲನ್ನು ಉಪಯೋಗಿಸಹತ್ತಿದ. ಅಲ್ಲದೆ ಅದಾವ ತಿಂಡಿಯನ್ನೇ ಆಗಲಿ ಅದನ್ನು ತಾನು ತಿನ್ನಬೇಕಿದ್ದರೆ ದನ ಮೊದಲು ತಿನ್ನಬೇಕೆಂದು ಕಟ್ಟು ಮಾಡಿದ. ದನ ತಿನ್ನದಿದ್ದುದನ್ನು ತಾನು ತಿನ್ನಲಾರ. ಅಡಿಗೆ ಭಟ್ಟನಿಗೆ ಮೊದಲು ದನಕ್ಕೆ ಕೊಟ್ಟು ಆ ಮೇಲೆ ರಾಯನಿಗೆ ಕೊಡುವ ಕೆಲಸ. ಇದರಿಂದಾಗಿ ಹೇಗೂ 42 ವರ್ಷ ಈ ಕೋಟ್ಯಾಧೀಶ ಬಾಳಿದ. ಬದುಕಬೇಕೆನ್ನುವ ಕೆಲ ಧನಿಕರು ದನ ತಿನ್ನುವ ವಸ್ತುಗಳನ್ನೇ ತಿನ್ನಲಿ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಪಠ್ಯ ಪುಸ್ತಕ ಬದಲಾವಣೆ.

ಕಳೆದ ವಾರದ, 'ಕೊಡಗು' ಪತ್ರಿಕೆ ನೋಡಿ ಶಾಲಾ ಮಕ್ಕಳ ಪಠ್ಯ ಪುಸ್ತಕ ಬದಲಾವಣೆ ಮಾಡಿ ಹೊಸದಾಗಿ ಪುಸ್ತಕಗಳನ್ನಿಡಲು ಕಮಿಟಿಗಳನ್ನು ಆರಿಸಿದ ವಾರ್ತೆಯು ತಿಳಿಯಬಂತು. ಅದಕ್ಕೆ ಮೊದಲಾಗಿ ಬಡ ತಂದೆ ತಾಯಂದಿರಾದ ನಾವು ಸದರಿ ಕಮಿಟಿ ಹಾಗೂ ಇಲಾಖಾಧಿಕಾರಿಗಳನ್ನು ಕೇಳಿಕೊಳ್ಳುವದೇನಂದರೆ, ಮಕ್ಕಳಿಗೆ ಆಗಾಗ ಪುಸ್ತಕ ಬದಲಾಯಿಸಿಡುವ ಕಾರಣ ಈ ಕನಿಷ್ಟಕಾಲದಲ್ಲಿ ಒಂದು ದೊಡ್ಡ ಬಾಧಕವೆಂದೇ ಊಹಿಸಬೇಕಾಗಿದೆ. ಶಾಲಾ ಮಕ್ಕಳ ಫೀಸು ಹೆಚ್ಚಿಸಿದ್ದು ಅವರಿಗೆ ತಿಳಿಯದ್ದಲ್ಲ. ಇದರ ಜತೆಗೆ ಮಕ್ಕಳು ಎಲ್ಲಾ ಹೊಸ ಪುಸ್ತಕಗಳನ್ನು ತೆಗೆಯಬೇಕೆಂದಾದರೆ ಈ ಪುಸ್ತಕವು ಬಹಳ ಗಾತ್ರವಾಗಿಯೇ ತೋರುವುದು. ವಿದ್ಯೆಯು ತನ್ನ ಶೌರ್ಯವನ್ನು ಬಡ ತಂದೆತಾಯಿಗಳ ಮೇಲೆ ತೋರಿಸುವ ಹಾಗೆ ಕಾಣುವುದು. ಹಿಂದಿನ ಕಾಲದಲ್ಲಿ ಒಂದು ಪುಸ್ತಕವನ್ನಿಟ್ಟರೆ ಅದು ಒಬ್ಬ ತಂದೆಗೆ ಐದಾರು ಮಕ್ಕಳಿದ್ದರೆ ಎಲ್ಲರೂ ಕಲಿಯಬಹುದಾದಷ್ಟು ಅನುಕೂಲವಿದ್ದಿತು. ಆದರೆ ಈಗೀಗ ಕಷ್ಟ ಪರಂಪರೆಗಳ ಸಮಯದಲ್ಲಿ ಬಡರೈತರ ಕಷ್ಟವೇ ತಮ್ಮ ಕಷ್ಟವೆಂದು ತಿಳಿದಾಗ್ಯೂ ಅಧಿಕಾರಿಗಳು ಹೊಸ ಪುಸ್ತಕಗಳನ್ನು ಪುನಃ ಆರಿಸಿಡುವರೆಂಬ ವಾರ್ತೆಯನ್ನು ಕೇಳುವಾಗ ಬಹಳ ಶೋಚನೀಯವಾಗಿದೆ. ಈಗಿರತಕ್ಕಂತಹ ಪುಸ್ತಕಗಳನ್ನು ಬದಲಾಯಿಸಲು ಕಾರಣವೇನೂ ತೋರುವುದಿಲ್ಲ. ಅದರಲ್ಲೂ ಮಕ್ಕಳ ಸ್ಥಿತಿಯನ್ನರಿಯದೆ ಸಾಂಪತ್ತಿಕ ರೋಗವನ್ನು ಗಮನಕ್ಕೆ ತಾರದೆ, ಶಾಲಾ ವಿದ್ಯಾರ್ಥಿಯು ಪುಸ್ತಕವೊಂದನ್ನಾದರೂ ಪಾಠಕ್ಕೆ ತಾರದಿದ್ದಲ್ಲಿ ಹೊರ ಅಡಿಸುವರು ವಿದ್ಯಾರ್ಥಿಗಳು ಮುಖ ಬಾಡಿಸಿ ತಮ್ಮ ತಂದೆ ತಾಯಿಗಳಿಗೆ ಇದನ್ನು ತಿಳಿಸಲು ಸಾಲ ಮಾಡಿಯಾದರೂ ಮಕ್ಕಳನ್ನು ಸರಿಪಡಿಸಬೇಕಾಗಿದೆ. ಆರ್ಥಿಕ ದುಃಸ್ಥಿತಿಯ ಕಾಲದಲ್ಲಿ ಹೊದೆಯಲು ಅಂಗಿ, ಸೇವಿಸಲು ಗಂಜಿ ಇಲ್ಲದ ಬಡವನಾದ ತಂದೆಗೆ ತನ್ನ ಮಕ್ಕಳು ನಾಲ್ಕು ಅಕ್ಷರ ಕಲಿತರೆ ಅದೇ ಒಂದು ಭಾಗ್ಯ. ಅಂಥಾ ಕಾಲದಲ್ಲಿ ಆ ಅವಸ್ಥೆಯನ್ನರಿಯದೆ ಅಧಿಕಾರಿಗಳು ಈ ಬಿಕ್ಕಟ್ಟಾವಸ್ಥೆಯಲ್ಲಿ ಹೊಸ ಪುಸ್ತಕಗಳನ್ನಾರಿಸಬೇಕೆಂದು ಅಭಿಪ್ರಾಯಪಟ್ಟದ್ದು ವಿದ್ಯೆಯನ್ನು ಹಿಂದಡಲಿಕ್ಕೋ ಮುಂದಡಲಿಕ್ಕೋ ಎಂದು ತಿಳಿಯದು. ಆದರೂ ಒಂದು ವೇಳೆ ಬದಲಾಯಿಸಿದರೂ ವಿಪರೀತ ಖರ್ಚಿಗೆ ದಾರಿ ಕೊಡದೆ ಅಲ್ಲಲ್ಲಿ ಒಂದೊಂದು ಪುಸ್ತಕಗಳನ್ನು ಬದಲಾಯಿಸಿ, ಆ ಮಟ್ಟಿಗೆ ಬಡ ತಂದೆ ತಾಯಿಗಳನ್ನು ತೃಪ್ತಿಪಡಿಸಿದಲ್ಲಿ ಧನ್ಯರಾಗುತ್ತಿದ್ದೆವು. ಹೇಗೂ ಸದರಿ ಕಮಿಟಿಯು ದೇಶದ ಕ್ಷೇಮವನ್ನು ಕೋರಿ ಇಂತಹ ವಿಪರೀತ ಖರ್ಚಿಗೆ ಆಸ್ಪದವಿತ್ತು ವಿದ್ಯಾರ್ಥಿಗಳ ವಿದ್ಯಾರ್ಜನೆಯ ದಾರಿಯನ್ನು ತಪ್ಪಿಸಲು ನೋಡಲಾರರೆಂದು ನಂಬುವ,

—ಮಕ್ಕಳ ತಂದೆ.

ನೂರಂಬಡನಾಡು ದೇವಸ್ಥಾನ.

ನೂರಂಬಡ ನಾಡಿನ ನಾಡು ದೇವಸ್ಥಾನವಾದ ಮಕ್ಕಿ ದೇವಸ್ಥಾನದ ಆಡಳಿತೆಯನ್ನು ಸುಸೂತ್ರವಾಗಿ ನಡೆಸಲು ಒಂದು ಸಮಿತಿಯು ಕೆಲವು ವರ್ಷಗಳ ಹಿಂದೆ ನೇಮಿಸಲ್ಪಟ್ಟ ವಿಷಯ ಬಹಳ ಸಂತೋಷಕರ. ಆದರೆ ಈ ಸಮಿತಿಯು ಈಗ ಮುತುವರ್ಜಿಯಿಂದ ಕೆಲಸ ಮಾಡದೆ, ದೇವಸ್ಥಾನದ ಹಣವನ್ನು ಸರಿಯಾಗಿ ವಸೂಲು ಮಾಡದೆ ನಿಂತಿರುವುದಾಗಿ ತಿಳಿದುಬರುತ್ತದೆ. ದೇವರ ಭಂಡಾರದ ಹಣವನ್ನು ಸರಿಯಾದ ವಿಲೇವಾರಿ ಮಾಡುವುದು ಗ್ರಾಮಸ್ಥರ ಕೆಲಸವಾಗಿದೆ. ಭಕ್ತರೆಲ್ಲರೂ ತಕ್ಕ ನಿಗ ತೆಗೆದುಕೊಂಡು ಇನ್ನು ಮುಂದಕ್ಕಾದರೂ ಸರಿಯಾಗಿ ನಡಿಸಿ, ಹೊರಗಿರುವ ಹಣವನ್ನು ವಸೂಲು ಮಾಡಿ, ಆಡಳಿತೆಯನ್ನು ಸುಸೂತ್ರವಾಗಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

—ನಾಡವ.

ಕೊಡವರಲ್ಲಿ ಸಮಾಜ ಸುಧಾರಣೆಯ ಪರಿಣಾಮ.

ನಂ. ೩.

(ಲೇ– ಬಿ. ಎಂ. ಕಾರ್‍ಯಪ್ಪ, ಎಂ.ಎಲ್.ಸಿ.)

ಪದ್ಧತಿಗಳ ಉದ್ದಿಶ್ಯ.

ಮನುಷ್ಯನು ಸಮಾಜದಲ್ಲಿ ವಾಸಿಸುವ ಪ್ರಾಣಿಯಾದುದರಿಂದಲೂ ಮತ್ತು ಮನುಷ್ಯನಿಗೂ ಇತರ ಪ್ರಾಣಿವರ್ಗಗಳಿಗೂ ಸ್ವಾಭಾವಿಕವಾದ ವ್ಯತ್ಯಾಸಗಳಿಂದ ಕೂಡಿದ ಗುಣಗಳಿರುವ ಕಾರಣದಿಂದಲೂ, ಇದರ ಫಲಿತಾಂಶವಾಗಿ ಮನುಷ್ಯ ವರ್ಗದಲ್ಲಿ ಕೆಲವು ನಡವಳಿಕೆಗಳಿಗೆ ಹೆಚ್ಚಿನ ಅವಕಾಶವಿರುವ ಕಾರಣ, ಬುದ್ಧಿವಂತರಾದ ಹಿರಿಯರು ಪದ್ಧತಿಗಳನ್ನು ನಿರ್ಣೈಸಿರುವುದಾಗಿದೆ. ಈ ನಿರ್ಣಯಗಳು ಪ್ರೀತಿ, ಸಹಕಾರ, ಸೇವೆ ವಗೈರೆ ಎಲ್ಲಾ ಉತ್ತಮ ಗುಣಗಳನ್ನು ಅಭಿವೃದ್ಧಿ ಪಡಿಸಿ, ಕಾಪಾಡುವಂಥಾದ್ದಾಗಿ ವ್ಯಕ್ತಿಗಳನ್ನು ಕುಟುಂಬಗಳಲ್ಲಿಯೂ, ಕುಟುಂಬಗಳನ್ನು ಗ್ರಾಮದಲ್ಲಿಯೂ, ಗ್ರಾಮಗಳನ್ನು ದೇಶದಲ್ಲಿಯೂ ದೇಶದ ಹಿತ ದೃಷ್ಟಿಯಿಂದ ಮಾಡಿರುವರು.

ಪ್ರತಿಯೊಬ್ಬ ವ್ಯಕ್ತಿಯ ಅಭಿವೃದ್ಧಿಗೆ ಕುಟುಂಭಸ್ಥರೂ, ನೆಂಟರಿಷ್ಟರೂ ಮತ್ತು ದೇಶವೂ ಸಹ ಧಾರಾಳವಾಗಿ ದುಡಿದುಕೊಳ್ಳುತ್ತಿರುವುದು ಎಲ್ಲರೂ ತಿಳಿದ ಸಂಗತಿ. ಯಾರಾದರೂ ಅಲ್ಲವೆಂದು ಹೇಳುವವರು ಇದ್ದರೆ ಅದು ತಿಳಿಗೇಡಿತನವೆಂದು ಧೈರ್‍ಯದಿಂದ ಹೇಳಬಹುದು. ನಿಜವಾಗಿಯೂ ದೇಶವನ್ನು ನಮ್ಮ ಮುಂದಿನ ಜನಾಂಗಕ್ಕೆ ಕಾದಿಡಬೇಕೆಂಬ ಮುಮುಕ್ಷೆ ಇರುವ ಪಕ್ಷ ಗ್ರಾಮಗಳಲ್ಲಿರುವ ಮನೆಗಳನ್ನು ಕಾಪಾಡಿಡಬೇಕಾದುದು ಅವಶ್ಯವಲ್ಲವೇ ?. ಈಗ ನಡೆಯುತ್ತಿರುವುದೇನು ? ಈಗಿನ ನವ ನಾಗರಿಕತೆಯ ಪರಿಣಾಮವಾಗಿ ಸ್ವಾರ್ಥತೆಯ ದೃಷ್ಟಿಯಿಂದ ವ್ಯಕ್ತಿಸ್ವಾತಂತ್ರ್ಯವೆಂದು ಹೇಳಿಕೊಂಡು ವಿದ್ಯಾವಂತರಾದನಂತರ ಉದ್ಯೋಗಕ್ಕೆ ಶರಣಾಗಿ ತನ್ನನ್ನು ತಾನೇ ಮರೆತು ಧನಸಹಾಯ (ಫಂಡಿನಿಂದ) ವನ್ನೂ, ವಿದ್ಯಾವೇತನ ಕೊಟ್ಟವರನ್ನೂ ಮತ್ತು ಇತರ ಸಹಾಯ ಮಾಡಿದವರನ್ನೂ ಕೂಡ ಅಗೌರವದಿಂದ ಕಂಡು, ಅಂಥವರನ್ನು ಬುದ್ಧಿಹೀನರೆಂದು ದೂಷಿಸುವದನ್ನು ನಾವೆಷ್ಟೋ ಕೇಳಿಯೂ, ಕಂಡೂ ಇರುವೆವು. ಅಲ್ಲದೆ ಕೊಡಗಿನಲ್ಲಿ ಅನುಕೂಲ ದೊರೆತವರು ಪಟ್ಟಣಗಳಲ್ಲೂ ದೇಶವನ್ನು ಬಿಟ್ಟು ಅಭಿವೃದ್ಧಿ ಹೊಂದಿದವರು ದೊಡ್ಡ ಪಟ್ಟಣಗಳಲ್ಲೂ ಮನೆಮಾರು ಕಟ್ಟಿಕೊಂಡು, ಶುಭ ಶೋಭಾನೆಗಳನ್ನು ಇರುವ ಸ್ಥಳಗಳಲ್ಲೇ ಅಥವ ಹೊಟೇಲು, ಬಾಡಿಗೆ ಮನೆಗಳಲ್ಲಿ ಮಾಡಿಕೊಂಡು ಪಿತ್ರಾರ್ಜಿತ ಆಸ್ತಿಗಳ ಉತ್ಪತ್ತಿಯನ್ನು ಮಾತ್ರ ಹೊಂದಿಕೊಂಡು, ಸ್ವತಂತ್ರ ಜೀವನವೆಂದು ಹೆಮ್ಮೆಪಡುತ್ತಲಿರುವರು. ಇವರಿಗೆ ಪಿತ್ರಾರ್ಜಿತ ಮನೆಗಳೂ, ತಂದೆತಾಯಿಂದಿರೂ, ಅಣ್ಣ ತಮ್ಮಂದಿರೂ, ಅಕ್ಕತಂಗಿಯರೂ, ನೆಂಟರಿಷ್ಟರೂ ಬಹಳ ಕಡಿಮೆ ದರದ್ದಾಗಿ ಕಂಡುಬರುವರು. ವಿದ್ಯಾವಂತರಾಗಿ ಸಂಪಾದನೆ ಮಾಡುವವರೂ ತೀರ ಹೊರಗೆ ಇದ್ದರೆ, ಮನೆಗಳಲ್ಲೂ ಗ್ರಾಮಗಳಲ್ಲೂ ಉಳಿಯುವವರ್‍ಯಾರೆಂದು ಸ್ವಲ್ಪ ಯೋಚಿಸಿದರೆ, ತಮ್ಮ ತಿಳುವಳಿಕೆಯವರೂ ಮತ್ತು ನಿಸ್ಸಹಾಯಕರೂ ಉಳಿಯುವರಾಗಿರುತ್ತೆ. ಇಂಥವರಿಂದ ಹೊರಗೆ ನಿಂತವರ ಸಹಾಯವಿಲ್ಲದೆ ಮನೆಗಳನ್ನೂ ಗ್ರಾಮಗಳನ್ನೂ ಉದ್ಧರಿಸುವುದು ಸಾಧ್ಯವೇ ? ಈ ರೀತಿಯಲ್ಲಿ ಎಷ್ಟು ಜನರು ಹೊರಗಿರುವವರು ಎಂದು ಲೆಕ್ಕಹಾಕಿದರೆ, ನಮ್ಮ ಮನೆಗಳೂ, ಗ್ರಾಮಗಳೂ ನಾಶವಾಗಿ, ದೇಶವನ್ನು ಕಳಕೊಳ್ಳುವದಕ್ಕೆ ಎಷ್ಟು ವರ್ಷಗಳು ಬೇಕಾಗಬಹುದೆಂದು ಕಂಡುಹಿಡಿಯಬಹುದು. ಈ ನವ ನಾಗರೀಕತೆಯು ಇದೇ ರೀತಿಯಲ್ಲಿ ಅಭಿವೃದ್ಧಿಯಾದರೆ ಒಂದು ತಲೆ ಅಂದರೆ ೩೦ ವರ್ಷಗಳೂ ಕೂಡ ಬೇಡವೆಂದೇ ನನ್ನ ಭಾವನೆ. ಎರಡು ಸಾವಿರಕ್ಕೆ ಮೇಲ್ಪಟ್ಟು ದೃಢಕಾಯರಾದ ಯುವಕರು ಹೊರಗ ಹೋಗಿರುವರು. ಅಷ್ಟೇ ಯುವತಿಯರು ಲಗ್ನವಾಗದೆ ನಿಂತಿರುವರು. ಹೊರಗೆ ಹೋದ ಯುವಕರು ಯಾವ ತರದ ಜೀವನ ನಡೆಸುತ್ತಿರಬಹುದೆಂಬುದನ್ನು ಸ್ವಲ್ಪ ಆಲೋಚಿಸುವ. ಅದರ ಪರಿಣಾಮವೇನಾಗಬಹುದು. ಸ್ತ್ರೀಯರಿಗೂ ಈಗಿನ ವಿದ್ಯೆಯನ್ನು ಕೊಡುತ್ತಲಿರುವೆವು. ಅವರೂ ಸ್ವತಂತ್ರರಾಗಿ ವರ್ತಿಸಲು ಸುರುಮಾಡಿರುವರು. ಕಾನೂನಿಗೊಳಪಟ್ಟ ಕಳ್ಳತನಕ್ಕೆ, ಧರ್ಮ ವಿರುದ್ಧ ಕೆಲಸಗಳು ಹೊರಬೀಳುವಂಥ ಸಲಕರಣೆಗಳು ದಿನೇ ದಿನೇ ವಿದ್ಯುಚ್ಛಕ್ತಿ (electric speed) ವೇಗದಿಂದ ಕಂಡುಹಿಡಿಯಲ್ಪಡುವ ಈ ಕಾಲದಲ್ಲಿ ನೀರಿನಲ್ಲಿರುವ ಮೀನು ನೀರು ಕುಡಿಯಲಿಲ್ಲವೆಂದು ಹೇಳುವುದು ಸಾಧ್ಯವೇ? ವಿಷದವಾಗಿ ಬರೆಯುವುದಕ್ಕಿಂತ ಬರೆಯದಿರುವುದರಿಂದಲೇ ವಾಚಕ ಮಹಾಶಯರಿಗೆ ಚೆನ್ನಾಗಿ ಅರ್ಥವಾಗುವುದೆಂದು ನಂಬುತ್ತೇನೆ. ಇವುಗಳೆಲ್ಲದರ ಪರಿಣಾಮವೇನು? ಆಗುವುದು ಆಗಲಿ, ಹೋಗುವುದು ಹೋಗಲಿ ಎಂದು ಕುಳಿತುಕೊಳ್ಳುವುದೇ ? ಈ ಭ್ರಷ್ಟತ್ವವು ಸಮಾಜ ಪ್ರೇಮವೇ ? ದೇಶ ಪ್ರೇಮವೇ ಅಥವ ವ್ಯಕ್ತಿ ಪ್ರೇಮವೇ ? ವ್ಯಕ್ತಿ ಪ್ರೇಮದ ಹಿತ ದೃಷ್ಟಿಯಿಂದ ವ್ಯಕ್ತಿಯೂ, ಸಮಾಜವೂ, ದೇಶವೂ ಎಷ್ಟರ ಮಟ್ಟಿಗೆ ಏಳಿಗೆಯಾಗುವುದು ಸಾಧ್ಯ ? ಇದನ್ನೆಲ್ಲಾ ಹೇಳಲು ಹೊರಟದ್ದೇ ಆದರೆ ಗ್ರಾಮದಲ್ಲಿ ಅಕ್ರಮಗಳಿವೆ ಎಂದು ಪಂಡಿತರು ಸಮಾಧಾನಗೊಳ್ಳುವರು. ಹೇಗ ಪಟ್ಟಣಗಳಲ್ಲಿರುವ ಸಿನೇಮ ಮತ್ತು ನಾಟಕಗಳು ಗ್ರಾಮದ ಜನರನ್ನು ನಾಶಪಡಿಸುತ್ತಿರುವವೋ, ಹಾಗೆಯೇ ಪಟ್ಟಣದಲ್ಲಿನ ಮಾದರೀ ಜನರ ಆಕೃತ್ಯಗಳು ಗ್ರಾಮವಾಸಿಗಳನ್ನು ತಪ್ಪು ದಾರಿಗೆ ಹೆಚ್ಚಚ್ಚಾಗಿ ಇಳಿಸುತ್ತಿರುವರು. ಪಿತ್ರಾರ್ಜಿತ ಮನೆಗಳು ವ್ಯಕ್ತಿಗಳಿಗೆ ಅಪಾಯ ಸಂಭವಿಸಿದ ಕಾಲದಲ್ಲಿ ಆಶ್ರಯ ಕೊಡುವ ಸ್ಥಾನಗಳಾಗಿವೆ. ಅವುಗಳನ್ನು ಕಾಪಾಡಲಿಕ್ಕೆ ಅನುಕೂಲದಲ್ಲಿರುವವರೇ ಹೆಚ್ಚಾಗಿ ಭಾಗಿಗಳಾಗಬೇಕಾದದ್ದು ಅವರ ಧರ್ಮ. ಅದಕಾರಣ ಶುಭಶೋಭಾನಗಳು ಇಂಥಾ ಮನೆಗಳಲ್ಲಿ ನಡೆಸಿದ್ದಾದರೆ ಅವುಗಳ ರಿಪೇರಿ ವಗೈರೆ ಕೆಲಸಗಳಿಗೆ ಅವಕಾಶ ದೊರೆತು ಕಾಪಾಡಲ್ಪಡುವುದು. ಈ ರೀತಿಯಿಂದ ಕಾಪಾಡಲ್ಪಟ್ಟರೆ ಗ್ರಾಮದ ಮನೆಗಳೂ ಮತ್ತು ಗ್ರಾಮವೂ ಸಹ ಉದ್ಧರಿಸಲ್ಪಟ್ಟು ದೇಶದ ಭದ್ರತೆಯು ಕಾಪಾಡಲ್ಪಡುವುದು. ಈಗ ನಮ್ಮ ಅನೇಕ ಮನೆಗಳು ಬಹಳ ಹೀನ ಸ್ಥಿತಿಯಲ್ಲಿವೆ ಎಂದರೆ ತಪ್ಪಾಗಲಾರದು. ಆದುದರಿಂದ ಅಳಿಯುತ್ತಾ ಬರುವ ಜನಾಂಗವು ಈ ವಿಷಯದಲ್ಲಿ ತಪ್ಪನ್ನು ತಿದ್ದಿಕೊಳ್ಳದ ಪಕ್ಷ ಮುಂದಿನ ಜನಾಂಗವು ಮನೆಗಳನ್ನೂ, ದೇಶವನ್ನೂ ಸಹ ಕಳಕೊಳ್ಳುವುದು ಖಂಡಿತ.

ನಮ್ಮ ಹಿರಿಯರ ಒಂದು ಮಾತು, 'ಕಾಣತೆ ಬೆಂದು ಪೋಚಿ, ಕೇಳತೆ ಕಡಪೋಚಿ' ಅನುಭವದ ಮತ್ತು ಪ್ರಯೋಜನಯುಕ್ತವಾದ ಮಾತಾಗಿರುತ್ತದೆ. ಈಗ ಎಷ್ಟೋ ವಿದ್ಯಾವಂತರಿಗೆ ಕುಟುಂಬಸ್ಥರನ್ನೂ, ಕುಟುಂಬದ ಯುವಕರನ್ನೂ ಮತ್ತು ಬಾಳಿಕೆ ಹೋದ ಅಕ್ಕತಂಗಿಯರನ್ನೂ ಮತ್ತು ಅತ್ತೆಯಂದಿರನ್ನೂ ಗೊತ್ತಿಲ್ಲದಿರುವುದು ವಾಡಿಕೆಯಾಗಿಹೋಗಿದೆ ಎಂದಮೇಲೆ ನೆಂಟರಿಷ್ಟರನ್ನು ಎಷ್ಟರ ಮಟ್ಟಿಗೆ ತಿಳಿದುಕೊಂಡಿರಬಹುದೆಂದು ಯೋಚಿಸಿ. ಈ ಕಾರಣಗಳಿಂದಲೇ ನಮ್ಮ ಪದ್ಧತಿಗಳನ್ನು ಮದುವೆ ಮುಂಜಿಗಳಲ್ಲಿ ಎಲ್ಲಾ ಮನೆಯವರೂ ನೆಂಟರಿಷ್ಟರೂ ಸೇರಿ ಒಂದೆರಡು ದಿನಗಳು ಮಿಳಿತವಾಗಿರಲು ಅವಕಾಶ ಒದಗಿಸಿದ್ದಾಗಿರುತ್ತದೆ. ಆದರೆ ಈಗಿನ ನಮ್ಮ ನಡವಳಿಕೆಗಳು 'ಅಚ್ಚುನಾಯಕಂಡ ಬಲ್ಯ ಅಚ್ಚು, ಪೊಲಿಯಂಡ ಇರ' ಎಂಬಂತೆ ದೊಡ್ಡಸ್ತಿಕೆಯ ಖರ್ಚಿನ ಹೆಸರು ಬೇಕು.

[ಸಶೇಷ.

ಸಂಸ್ಥಾನಗಳು.

ಲೇ:- ಮಹಾತ್ಮ ಗಾಂಧಿ. ("ಹರಿಜನ" ತಾ. 8-4-'39).

ಸರಕಾರದ ದಬ್ಬಾಳಿಕೆಯಿಂದ ಸ್ವಾತಂತ್ರ್ಯ ಚಳವಳವು ನಿಲ್ಲದು. ಇದು ಜನತೆಯಲ್ಲಿ ಹೊಸ ಹುರುಪನ್ನು ಉದ್ರೇಕಗೊಳಿಸುವ ಸಾಧನ. ಹಿಂಸಾತತ್ವವು ಸತ್ಯಾಗ್ರಹಿಗಳ ಚಿತ್ತಭಿತ್ತಿಯಿಂದ ಮಾಯವಾಗಬೇಕು. ಹೃದಯಾಂತರಾಳದಿಂದ ಅಹಿಂಸಾತತ್ವವು ಉದಿಸಿ ಬೆಳಗಬೇಕು. ಭಾಷಣ ಹಾಗೂ ಲೇಖನಗಳಲ್ಲಿ ಕಟು ಟೀಕೆಗಳು ಮಾಯವಾಗಬೇಕು. ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಅಂದೇ ಭಾರತದ ಪರದಾಸ್ಯ ವಿಮೋಚನೆ!

ಸಂಸ್ಥಾನಗಳಲ್ಲಿ ಕಾಯಿದೆ ಭಂಗ ಚಳವಳವನ್ನು ನಿಲ್ಲಿಸಿದ್ದರ ಪೂರ್ಣ ಲಾಭ ಪಡೆಯಬೇಕಾದರೆ ಅದನ್ನು ನಿಲ್ಲಿಸಿದ ಕಾರಣವು ಜನತೆಯಲ್ಲಿ ಮನದಟ್ಟಾಗಬೇಕು. ಇದರ ಒಂದು ಪರಿಣಾಮವು ನಾವು ಯೋಚಿಸಿದಂತೆ ಕೆಲವು ಸಂಸ್ಥಾನಾಧಿಕಾರಿಗಳು ಕಾಯಿದೆ ಭಂಗ ಚಳವಳವು ನಿಂತ ಮೇಲೆ ಹುರುಪುಗೊಂಡೋ ಎಂಬಂತೆ ತಮ್ಮ ಕ್ರೂರ ಕೃತ್ಯಗಳನ್ನು ಹೆಚ್ಚಿಸಿ ನಿರಪರಾಧಿ ಜನರನ್ನು ತೊಂದರೆಗೊಳಿಸುತ್ತಿರುವದು. ಎಲ್ಲೆಲ್ಲಿ ಇಂಥಾ ಕೃತ್ಯಗಳು ನಡೆಯುತ್ತಿರುವವೋ ಅಲ್ಲಿ ಜನತೆಯು ಅಧೈರ್ಯಗೊಳ್ಳಲು ಕಾರಣವಿಲ್ಲ. ಈ ದಬ್ಬಾಳಿಕೆಯಿಂದ ಸತ್ಯಾಗ್ರಹದ ಬಗ್ಗೆ ಜನತೆಯಲ್ಲಿ ಹೊಸ ಉಪಾಯಗಳು ತಲೆದೋರಿ ಸತ್ಯಾಗ್ರಹ ಸಮರವು ಪ್ರಬಲವಾಗಲನುವಾಗುವುದರಲ್ಲಿ ಸಂದೇಹವಿಲ್ಲ. ಇಂಥಾ ಸಂದರ್ಭದಲ್ಲಿ ಸರ್ಕಾರದ ದಬ್ಬಾಳಿಕೆಯ ಕಾರಣಗಳನ್ನು ಕಂಡುಹಿಡಿಯುವುದು ಸುಲಭ. ಸತ್ಯಾಗ್ರಹದ ಮೊದಲಿನ ಪಾಠವನ್ನು ಕಲಿಯಲು ಇದು ಸಹಕಾರಿ. ಈ ಪ್ರಚಂಡ ಹಾಗೂ ಅಜೇಯವಾದ ಸತ್ಯಾಗ್ರಹ ಸಮರದ ತತ್ವವನ್ನರಿತವರು ಸರಕಾರದ ದಬ್ಬಾಳಿಕೆಯನ್ನು ನಿರ್ವೀರ್ಯರೂ ಹಾಗೂ ನಿಸ್ತೇಜರಾಗಿ ಅನುಭವಿಸುವುದರ ಬದಲು ಧೈರ್ಯ ಹಾಗೂ ದೃಢನಿಶ್ಚಯವುಳ್ಳವರಾಗಿ ಅನುಭವಿಸಬೇಕೆಂದು ಬೋಧಿಸಬೇಕು. ಉದಾಹರಣೆಗಾಗಿ ಒಂದು ಸಂಸ್ಥೆಯನ್ನು ಸರಕಾರದವರು ನಿಯಮಬಾಹಿರವಾದುದೆಂದು ಬಹಿಷ್ಕರಿಸಿದರೆ ಅದರ ಸದಸ್ಯರು ಸರಕಾರದ ದಬ್ಬಾಳಿಕೆಗೆ ಹಾಗೂ ಕ್ರೂರ ಕಟ್ಟಳೆಗಳಿಗೆ ಹೆದರಿ ಅವರ ಇಚ್ಛೆಯಂತೆ ತಲೆಬಾಗುವರು. ಇದು ಹೇಡಿತನವಲ್ಲದೆ ಬೇರಿಲ್ಲ. ಸತ್ಯಾಗ್ರಹದ ತತ್ವವನ್ನರಿತ ಜನತೆಯಾದರೆ ತಮ್ಮ ಉತ್ಸಾಹವನ್ನು ಏಕೀಕರಿಸಿ ಅಹಿಂಸಾಪೂರ್ಣ ವಿರೋಧವನ್ನು ವ್ಯಕ್ತಪಡಿಸುವರು. ಸಂಸ್ಥೆಯ ಸದಸ್ಯರು ವೈಯಕ್ತಿಕವಾಗಿ ಸಂಸ್ಥೆಯ ನ್ಯಾಯಸಮರ್ಥನೆಗೆ ಹೋರಾಡಬಹುದು. ಸಂಸ್ಥೆಯು ನ್ಯಾಯಸಮ್ಮತವಾದುದೆಂದು ವಾದಿಸಬಹುದು. ನಿಯಮ ಕ್ಕೊಳಪಟ್ಟು ಈ ರೀತಿಯ ತಮ್ಮ ಅಸಮಾಧಾನವನ್ನು ಸರಕಾರದವರ ದೃಷ್ಟಿಗೆ ತಂದು ಸರಕಾರದವರು ಇವರನ್ನು ಕಟುಸಚರಿಸಿ ಸೆರೆಮನೆಗೆ ಕಳುಹಿಸಿದರೆ ನಗುಮುಖದಿಂದ ಅದಕ್ಕೊಳಗಾಗಬೇಕು. ಇಂಥಾ ಸಂದರ್ಭದಲ್ಲಿ ಅವರು ತಮ್ಮ ಮನಸ್ಸಿನಲ್ಲಿ ಸಂಸ್ಥಾನಾಧೀಶರ ಮೇಲೆ ದ್ವೇಷ ಬುದ್ಧಿ ಇದೆಯೋ ಎಂದು ಪರೀಕ್ಷಿಸಬೇಕು. ಈ ರೀತಿಯ ತರಬೇತನ್ನು ಪಡೆಯುವುದರಲ್ಲಿ ಖಂಡಿತವಾಗಿಯೂ ಶಾಂತ ಅಹಿಂಸಾಭಾವವು ಮೂಡಿ ಅಜೇಯವಾದ ಸಾಮರ್ಥ್ಯವು ಹುಟ್ಟಿ ಪ್ರತಿಯೊಬ್ಬನೂ ಸತ್ಯಾಗ್ರಹದ ಸಮರಕ್ಕೆ ಸಮರ್ಥನಾದ ಯೋಧನಾಗುವನು.

ಈ ಮೊದಲಿನ ಸತ್ಯಾಗ್ರಹ ಚಳವಳಗಳನ್ನು ನಾನು ತುಂಬಾ ಆತುರದಿಂದ ಹಾಗೂ ಜಯದ ನಂಬಿಕೆಯಿಂದ ಕೈಕೊಂಡದ್ದು ತಪ್ಪೆಂದು ಈಗ ನನಗನಿಸುತ್ತದೆ. ಆದರೂ ನನ್ನ ಆ ವರ್ತನೆಯಿಂದ ಹಾನಿಯೇನೂ ಸಂಭವಿಸಿರುವುದಿಲ್ಲ. ಜನತೆಯ ನಾಡೀ ಪರೀಕ್ಷೆಯನ್ನರಿತೇ ನಾನು ಕಾರ್ಯಪ್ರವರ್ತನಾಗುವೆನು. ಆದ್ದರಿಂದ ಇಂದು ನಾನು ಸತ್ಯಾಗ್ರಹವನ್ನು ಹೂಡಿ ಜನತೆಯ ಸ್ಥಿತಿಯನ್ನರಿತು ಸತ್ಯಾಗ್ರಹವನ್ನು ನಿಲ್ಲಿಸಿದರೆ ನನಗೆ ಅವಮಾನವೆನಿಸುವುದಿಲ್ಲ. ನನ್ನ ತೀರ್ಮಾನವು ತಪ್ಪೆಂದು ಭಾವಿಸಿ ಜನರನ್ನು ತರಬೇತು ಮಾಡುವುದು ನನ್ನ ಪಾಲಿನ ಕರ್ತವ್ಯವಾಗುವುದು. ಇದರಿಂದ ತೊಂದರೆಯಾಗದೆಯೂ ಇಲ್ಲ. ಯಾವದೊಂದೂ ತಯಾರಿಕೆಯಿಲ್ಲದೆ ಸ್ವಾತಂತ್ರ್ಯ ಚಳವಳದ ಸತ್ಯಾಗ್ರಹ ಸಮರದಲ್ಲಿ ನುಗ್ಗಿ ಸ್ವತಂತ್ರರಾಗಿ ಹೋರಾಡುತ್ತಿದ್ದಂತಹ ಯೋಧರಿಗೆ ಇಂದು ಸತ್ಯಾಗ್ರಹ ಚಳವಳದ ಶಿಸ್ತಿನ ಕಟ್ಟು ಕಟ್ಟಳೆಗಳು ತಡೆಯನ್ನುಂಟುಮಾಡಿವೆ. ಆದರೂ ಈ ಶಿಸ್ತಿನ ಕಟ್ಟಳೆಗಳೇ ಸತ್ಯಾಗ್ರಹದ ತಳಹದಿ. ಅನೇಕ ತರದ ಕಷ್ಟಪರಂಪರೆಗಳಿಗೊಳಗಾಗಿ ಅನುಭವ ಪಡೆಯದ ವಿನಃ ಬಲವುಳ್ಳ ಹಾಗೂ ಚುರುಕಿನ ಅಹಿಂಸಾ ತತ್ವವನ್ನು ಅಭ್ಯಾಸ ಮಾಡುವುದು ದುಸ್ತರವಾಗಿದೆ. ಆದ್ದರಿಂದ ಈಗ ಸಂಸ್ಥಾನಾಧೀಶರು ನಡೆಸುತ್ತಿರುವ ಅಮಾನುಷ ಕಾರ್ಯಕ್ರಮಗಳು ಪ್ರತಿಯೊಬ್ಬ ಸತ್ಯಾಗ್ರಹಿಯಲ್ಲಿ ಸತ್ಯಾಗ್ರಹದ ಪೂರ್ಣ ಅರಿವನ್ನು ತಂದು ಅವನಲ್ಲಿ ನವಹುರುಪನ್ನು ಹುಟ್ಟಿಸುವವೇ ವಿನಃ ಅವನಲ್ಲಿರುವ ಆ ಸ್ವಾತಂತ್ರ್ಯಾಪೇಕ್ಷೆಯನ್ನು ಕಿತ್ತೊಗೆಯಲು ಸಮರ್ಥವಾಗವು. ಸತ್ಯಾಗ್ರಹವನ್ನು ನಿಲ್ಲಿಸೋಣಾದ್ದರಿಂದ ನಿರಾಶರಾದ ಸತ್ಯಾಗ್ರಹಿಗಳಲ್ಲಿ ಸತ್ಯಾಗ್ರಹದ ಮೂಲತತ್ವಗಳು ಹೃದಯಾಂತರಾಳದಿಂದ ಬೆಳೆದು ಬೆಳಕನ್ನು ಕಂಡಿಲ್ಲವೆಂಬುದು ವ್ಯಕ್ತವಾಗುತ್ತದಲ್ಲದೆ ಹಿಂಸಾತತ್ವವು ಇನ್ನೂ ಅವರ ಹೃದಯದ ಮೇಲ್ಗಡೆಯಲ್ಲಿಯೇ ಸ್ಥಾನ ಪಡೆದಿರುವುದು. ಈ ಹಿಂಸಾ ತತ್ವವನ್ನು ಹೃದಯಾಂತರಾಳದಲ್ಲಿ ಹೂತುಬಿಡಬೇಕು. ಅದು ಕ್ರಮೇಣ ಕ್ಷಣವಾಗಿ ಮಾಯವಾಗಿ ಹೋಗಬೇಕು. ಹೃದಯದಲ್ಲಿ ಶಾಂತ ವಾತಾವರಣವು ಹಬ್ಬಿ ಶೋಭಾಯಮಾನವಾಗಿ ಬೆಳಗಬೇಕು.

ಆದ್ದರಿಂದ ಎಲ್ಲಿ ಸರಕಾರದ ಕ್ರೂರ ಕಟ್ಟಳೆಗಳು ನಿರಪರಾಧಿ ಜನತೆಯನ್ನು ಬಗ್ಗುಬಡಿಯಲೆತ್ನಿಸುವುವೋ ಅಲ್ಲಿ ಜನತೆಯು ಕುಗ್ಗುವುದರ ಬದಲು ಅವರಲ್ಲಿ ನವಚೈತನ್ಯವುಂಟಾಗಿ ವಿಧಾಯಕ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆದು ಜನತೆಯು ಎಚ್ಚೆತ್ತು ವರ್ತಿಸುವುದು. ಅಧಿಕಾರಿಗಳು ಎಂತಹ ಕ್ರೂರ ಕೃತ್ಯವನ್ನು ಕೈಕೊಂಡರೂ ಅವರನ್ನು ವಿರೋಧಿಸುವ ಮಾರ್ಗವು ಅಹಿಂಸಾಚರಣೆಯಿಂದಲ್ಲದೆ ಬೇರೆ ಇಲ್ಲವೆಂಬುದು ಎಲ್ಲರಲ್ಲಿಯೂ ಖಚಿತವಾಗಬೇಕು. ಇಂತಹ ಸ್ಥೈರ್ಯವು ಪ್ರತಿಯೊಬ್ಬನಲ್ಲಿಯೂ ಒಡಮೂಡಿದರೆ ನಾವು ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅರ್ಧ ಜಯವನ್ನು ಪಡೆದಂತೆಯೇ. ಈ ಸ್ಥೈರ್ಯವು ಜನತೆಯಲ್ಲಿ ಬರಬೇಕಾದರೆ ನಮ್ಮ ಭಾಷಣ, ಲೇಖನಗಳಲ್ಲಿ ಉಪಯೋಗಿಸುವ ಕಠಿಣ ಭಾಷೆಯು ಮಾತೆಯಾಗಬೇಕು. ಹೇಳಿದ್ದನ್ನು ಕಾರ್ಯರೂಪದಲ್ಲಿ ಅಹಿಂಸಾರೂಪದಲ್ಲಿ ತರುವ ಅಭ್ಯಾಸವು ಪ್ರತಿಯೊಬ್ಬನಲ್ಲಿಯೂ ಬೇರೂರಬೇಕು. ಅಂದೇ ಭಾರತಕ್ಕೆ ಶ್ರೇಯಸ್ಸು! ಜನತೆಗೆ ವರ್ಚಸ್ಸು !! ಕಾಂಗ್ರೆಸ್ಸಿಗೆ ಯಶಸ್ಸು !!!

ವೀರರಾಜಪೇಟೆ ತಾ.
ಕಾಂಗ್ರೆಸ್ ಮಹಾಸಭೆ.

ಕಳೆದ ತಾರೀಕು 6 ರಲ್ಲು ನಡೆದ ವೀರರಾಜಪೇಟೆ ತಾಲೋಕು ಕಾಂಗ್ರೆಸ್ ಸದಸ್ಯರುಗಳು ಜನರಲ್ ಮೀಟಿಂಗಿನ ನಡವಳಿಕೆ.

ಮ. ಐನಂಡ ಕಾರ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಕಳೆದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

ಲೆಖ್ಖವನ್ನು ಓದಿ ಮಂಜೂರುಮಾಡಲಾಯಿತು.

ತಾಲೋಕು ಕಾಂಗ್ರೆಸ್ ಕಮಿಟಿಗೆ ಈ ವರ್ಷದ ಮಟ್ಟಿಗೆ ಹದಿನೈದು ಜನರು ಸದಸ್ಯರುಗಳಿರಬೇಕೆಂಬದಾಗಿ ತೀರ್ಮಾನಿಸಲಾಯಿತು.

ಈ ಕೆಳಗೆ ನಮೂದಿಸಿರುವವರನ್ನು ತಾಲೋಕು ಕಮಿಟಿ ಮೆಂಬರುಗಳನ್ನಾಗಿ ಚುನಾಯಿಸಲಾಯಿತು.

1. ಐನಂಡ ಕಾರ್ಯಪ್ಪನವರು, 2. ಮುಂಡೇಪಂಡ ಸೋಮಯ್ಯನವರು, 3. ವಿ. ಆರ್. ತಮ್ಮಯ್ಯನವರು, 4. ನಾಯಡ ಬೆಳ್ಯಪ್ಪನವರು, 5. ಪುಲಿಯಂಡ ಸುಬ್ಬಯ್ಯನವರು, 6. ಸೋಮೆಯಂಡ ಅಚ್ಚಯ್ಯನವರು, 7. ಪುಟ್ಟಿಚಂಡ ಪೊಣ್ಣಪ್ಪನವರು, 8. ಹೆಚ್. ಬಿ. ತಮ್ಮಯ್ಯನವರು, 9. ಕೆ. ಯಂ. ಸುಬ್ರಾಯನವರು, 10. 11. ಅಬ್ದುಲ್ ಗಫೂರ್ ಖಾನ್ ಸೈಠ್ಗಿಯವರು, 12. ಬಲ್ಯಾಟಂಡ ಮುದ್ದಮ್ಮನವರು, 13. ಚೆಂಬಾಂಡ ಮಾದಪ್ಪನವರು, 14. ಕೊತಂಡ ಗಣಪತಿಯವರು, 15. ಮಳಾಂಡ ಚಿಣ್ಣಪ್ಪನವರು.

ಮುಂದಣ ಸಂವತ್ಸರಕ್ಕೆ ಮೆ. ಗಳಾದ ಐನಂಡ ಕಾರ್ಯಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಮುಂಡೇಪಂಡ ಸೋಮಯ್ಯನವರನ್ನು ಸೆಕ್ರೆಟರಿಯರನ್ನಾಗಿಯೂ, ಚೆಂಬಾಂಡ ಮಾದಪ್ಪನವರನ್ನು ಖಜಾನ್ಚಿಯರನ್ನಾಗಿಯೂ ಚುನಾಯಿಸಲಾಯಿತು.

ಕಮಿಟಿ ಮೀಟಿಂಗು.

ತಾರೀಕು 6-4-39 ರಲ್ಲು ನಡೆದ ವೀರರಾಜಪೇಟೆನಾಡು ತಾಲೋಕು ಕಾಂಗ್ರೆಸ್ ಕಮಿಟಿ ಮೀಟಿಂಗಿನ ಪ್ರೊಸಿಡಿಂಗ್ಸ್.

ಹಾಜರಿದ್ದ ಮೆಂಬರುಗಳು.

1. ಐ. ಪಿ. ಕಾರ್ಯಪ್ಪನವರು (ಅಧ್ಯಕ್ಷರು) 2. ಮುಂಡೇಪಂಡ ಸೋಮಯ್ಯನವರು (ಸೆಕ್ರೆಟರಿ) 3. ಚೆಂಬಾಂಡ ಮಾದಪ್ಪನವರು (ಖಜಾನ್ಚಿ) 4. ವಿ. ತಮ್ಮಯ್ಯನವರು, 5. ಕೊತಂಡ ಗಣಪತಿಯವರು, 6. ಹೆಚ್. ಬಿ. ತಮ್ಮಯ್ಯನವರು, 7. ಪುಟ್ಟಿಚಂಡ ಪೊಣ್ಣಪ್ಪನವರು, 8, ಮಾಚೆಟ್ಟಿರ ಮುತ್ತಣ್ಣನವರು, 9. ಸೋಮೆಯಂಡ ಅಚ್ಚಯ್ಯನವರು, 10. ನಾಯಡ ಬೆಳ್ಯಪ್ಪನವರು, 11. ಮಳಾಂಡ ಚಿಣ್ಣಪ್ಪನವರು, 12. ಪುಲಿಯಂಡ ಸುಬ್ಬಯ್ಯನವರು.

ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗೆ ಡೆಲಿಗೇಟರುಗಳಾಗಿ ಈ ಕೆಳಗಿನ ಮೆಂಬರುಗಳನ್ನು ಚುನಾಯಿಸಲಾಯಿತು.

1 ಐನಂಡ ಕಾರ್ಯಪ್ಪನವರು, 2. ಮುಂಡೇಪಂಡ ಸೋಮಯ್ಯನವರು 3. ಚೆಂಬಾಂಡ ಮಾದಪ್ಪನವರು, 4. ವಿ. ತಮ್ಮಯ್ಯನವರು, 5. ಮಾಚೆಟ್ಟಿರ ಮುತ್ತಣ್ಣನವರು, 6. ಪುಟ್ಟಿಚಂಡ ಪೊಣ್ಣಪ್ಪನವರು, 7. ಪುಲಿಯಂಡ ಸುಬ್ಬಯ್ಯನವರು, 8. ಸೋಮೆಯಂಡ ಅಚ್ಚಯ್ಯನವರು.

ಬರುವ ಕಮಿಟಿ ಮೀಟಿಂಗಿನೊಳಗೆ ಸೆಕ್ರೆಟರಿಯವರು ತಾಲೋಕು ಕಮಿಟಿಯ ಎಲ್ಲಾ ಲೆಖ್ಖಗಳನ್ನು ಹೊಸ ರಿಜಿಸ್ಟರುಗಳಲ್ಲಿ ಬರಾಯಿಸಿ ಕ್ರಮಪಡಿಸುವಂತೆ ಕೇಳಿಕೊಳ್ಳಲಾಯಿತು.

ಐ. ಪಿ. ಕಾರ್ಯಪ್ಪ,
ಅಧ್ಯಕ್ಷರು.

ಅಲ್ಬೇನಿಯೂದ ಅಂತ್ಯವಿಧಿ.

ಶಾಂತಿಸ್ಥಾಪಕರಂತೆ
ಅಲ್ಬೇನಿಯೊಕ್ಕೆ ನುಗ್ಗಿ ತನ್ನ
ಗುರಿಯನ್ನು ಸ್ಥಾಪಿಸಿದ ಮುಸಲೋನಿ.
ಇದಕ್ಕೆ ಒತ್ತಾಸೆಯನ್ನಿತ್ತು ಮುಸಲೋನಿಯನ್ನು
ಸಮರ್ಥಿಸುವ ಹಿಟ್ಲರ್. ಇವರ ಅನಿರೀಕ್ಷಿತ ಕಾರ್ಯಕ್ರಮದಿಂದ
ಬೆಪ್ಪಾಗಿರುವ ಬ್ರಿಟನ್. ಬ್ರಿಟನದ ಬಾಲ ಹಿಡಿದು
ಕುಣಿಯುತ್ತಿರುವ ಫ್ರಾನ್ಸ್. ಇದನ್ನೆಲ್ಲಾ
ನೋಡಿ ನಗೆಗಡಲೊಳಗೆ ಮು
ಳುಗಿ ಏಳುತ್ತಿರುವ
ಅಮೇರಿಕ.
ಅಂತೂ ಯುರೋಪಿನ ವಾತಾವರಣವೇ ಅಲ್ಲೋಲ ಕಲ್ಲೋಲ !

ಅಲ್ಬೇನಿಯೂ.

ಇದು ಇಟಲಿಯ ಪಕ್ಕದಲ್ಲಿರುವ ಒಂದು ರಾಷ್ಟ್ರ. ಇದು ಸ್ವತಂತ್ರವಾಗಿದ್ದುಕೊಂಡು ಸ್ವತಂತ್ರರಾಜರಿಂದ ಆಳಲ್ಪಡುತ್ತಿತ್ತು. ಇದರ ಸುತ್ತಿರುವ ರಾಷ್ಟ್ರಗಳೆಂದರೆ ಯುಗೊಸ್ಲೇವಿಯೂ, ಮತ್ತು ಗ್ರೀಸ್, ಇದು ಸಮುದ್ರ ತೀರಾವಳಿಯನ್ನು ಆವರಿಸಿಕೊಂಡಿರುವದರಿಂದ ವ್ಯಾಪಾರಕ್ಕೆ ಬಹು ಅನುಕೂಲ ಸ್ಥಳ. ಇಟಲಿಗೂ, ಇದಕ್ಕೂ ಮಧ್ಯೆ ಎಡ್ರಿಯೂಟಿಕ್ ಸಮುದ್ರವಿದೆ. ಮುಸಲೋನಿಯು ಈ ಪ್ರಾಂತವನ್ನು ಕರಗತಮಾಡಿಕೊಳ್ಳುವ ಹವ್ಯಾಸದಿಂದ ಮನದೊಳಗೆ ಕುದಿಯುತ್ತಿದ್ದನು. ತಾರೀಕು 7 ರಲ್ಲಿ ಎಲ್ಲರೂ ಬೆರಗಾಗುವಂತೆ ಏಕಾಏಕಿ ಅಲ್ಬೇನಿಯೂದ ಮೇಲೆ ಕೈ ಮಾಡಿ ಅದನ್ನು ತನ್ನ ಅಂಕೆಗೆ ಸೇರಿಸಿಕೊಂಡು ಬಿಟ್ಟನು. ಅದರ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ತಾರೀಕು ಏಳು.

ಮುಸಲೋನಿಯು ತನ್ನ ಸೈನ್ಯವನ್ನು ಅಲ್ಬೇನಿಯೂದ ಮೇಲೆ ಧೈಮಾಡುವಂತೆ ಪ್ರೇರೇಪಿಸಿದನು. ಏಕಾಏಕಿ ಮುಸಲೋನಿಯು ಕೈಗೊಂಡ ಈ ಕಾರ್ಯದಿಂದಾಗಿ ಎಲ್ಲಾ ರಾಷ್ಟ್ರಗಳು ಚಕಿತವಾಗಿ ದಿಕ್ಕು ತೋಚದಂತಾದವು. 35 ಸಾವಿರ ಸೈನಿಕರ ಸೇನೆಯು ಒಂದೇ ಬಾರಿಯಲ್ಲಿ ಅಲ್ಬೇನಿಯೂದ ಸಮುದ್ರತೀರಾವಳಿಯಲ್ಲಿ ಬಂದು ತಂಗಿತು. ಜೊತೆಯಲ್ಲಿ 400 ವಿಮಾನಗಳೂ, ಮುತ್ತಿಗೆಯಲ್ಲಿ ಭಾಗವಹಿಸಿದವು. ಪ್ರಥಮತಃ ಅಲ್ಬೇನಿಯನರು ಅವರನ್ನು ತೀವ್ರವಾಗಿ ವಿರೋಧಿಸಿದರು. ಇಟಲಿಯೂನರು ಕರಪತ್ರಗಳ ಮೂಲಕ ಅಲ್ಬೇನಿಯನರು ಇಟಲಿಯೂನರಿಗೆ ಶರಣಾಗತರಾಗಬೇಕೆಂದೂ, ಇಲ್ಲವೇ ಇಡೀ ಅಲ್ಬೇನಿಯವು ತನ್ನ ವಿನಾಶವನ್ನು ಕಾಣಬೇಕಾಗುವದೆಂದೂ ಬೆದರಿಕೆಯನ್ನು ಹಾಕಿ ವಿಮಾನಗಳಿಂದ ಚೆಲ್ಲಿದ್ದರು. ಆದರೂ ಅಲ್ಬೇನಿಯರು ಇಟಲಿಯೂನರನ್ನು ವಿರೋಧಿಸಿ ಯುದ್ಧ ಮಾಡಿದರು. ಯುದ್ಧದಲ್ಲಿ ಅಲ್ಬೇನಿಯರಿಗೆ ತುಂಬಾ ನಷ್ಟ ಸಂಭವಿಸಿದುದಲ್ಲದೆ ಅನೇಕ ಯೋಧರು ಹತರಾದರು. ಸಾಯಂಕಾಲ ಅಲ್ಬೇನಿಯೂದ ಕೇಬಿನೆಟ್ ಸಭೆ ಸೇರಿ ಇಟಲಿಯೂನರಿಗೆ ಮಣಿಯುವದು ಎಂದೂ ಸಾಧ್ಯವಿಲ್ಲವೆಂದೂ, ತಮ್ಮ ಸ್ವಾತಂತ್ರ್ಯಕ್ಕಾಗಿ ಅಂತ್ಯದ ವರೆಗೆ ಹೋರಾಡುವದೇ ಯುಕ್ತವೆಂದೂ ತೀರ್ಮಾನಿಸಿತು. ಇಂದು ಇಟಲಿಯೂನರು ಅಲ್ಬೇನಿಯೂದ ಅನೇಕ ಬಂದರುಗಳನ್ನು ವಶಪಡಿಸಿಕೊಂಡರು. ಯುಗುಸ್ಲೇವಿಯೂ ಸರಕಾರವನ್ನು ಅಲ್ಬೇನಿಯೂ ಸರಕಾರವು ತಮ್ಮ ಹಳೇ ಒಪ್ಪಂದ ಪ್ರಕಾರ ಸಹಾಯ ಕೊಡಬೇಕೆಂದು ಕೇಳಿತ್ತು. ಆದರೆ ಇಟಲಿಯು ಯುಗುಸ್ಲೋವಿಯೂಕ್ಕೆ ತಾನು ಯಾವ ತೊಂದರೆಯನ್ನು ಮಾಡುವುದಿಲ್ಲವೆಂದು ಭರವಸೆಯಿತ್ತಿರುವದರಿಂದ ಯುಗುಸ್ಲೋವಿಯವು ಅಲ್ಬೇನಿಯೂದೊಡನೆ ಸಹಕರಿಸಲಿಲ್ಲ.

ತಾರೀಕು ಎಂಟು.

ಇಟಲಿಯೂನರ ಸೈನ್ಯವು ಬಂದರುಗಳನ್ನು ವಶಪಡಿಸಿಕೊಂಡು ಮುಂದುವರಿಯುತ್ತಾ ಮುಖ್ಯ ಪಟ್ಟಣವಾದ ಟಿರಾನನ್ನೂ ವಶಪಡಿಸಿಕೊಂಡಿತು. ಅರಸರಾದ ಜಾಗರು ತನ್ನ ಸಹೋದರಿಯರೊಂದಿಗೆ ಗ್ರೀಸಿಗೆ ಹೋದರು. ಅರಸರ ಅರಮನೆಯೂ, ಇತರ ಭವ್ಯವಾದ ಕಟ್ಟಡಗಳೂ ನೆಲಸಮವಾಗಿವೆ. ಅಬಿಸೀನಿಯೂದ ವೀರ ಯೋಧರು ಮುಖ್ಯ ಪಟ್ಟಣದ ರಕ್ಷಣೆ ಬಗ್ಗೆ ಪ್ರಚಂಡವಾಗಿ ಹೋರಾಡಿದರು. ಒಂದು ಸಮಯದಲ್ಲಿ ಅವರ ಗುಂಡು ಬಾಂಬುಗಳ ರಭಸದಲ್ಲಿ ಇಟಲಿಯ ಸೈನ್ಯವು ದಿಕ್ಕೆಟ್ಟು ಹೋಗಿದ್ದಿತಂತೆ. ಆದರೆ ಅವರ ಈ ಪೌರುಷವು ಬಹಳ ಕಾಲ ನಿಲ್ಲಲಿಲ್ಲ. ಕ್ರಮೇಣ ಒಬ್ಬೊಬ್ಬರೇ ತಮ್ಮ ಪ್ರಾಣವನ್ನು ಮಾತೃಭೂಮಿಗರ್ಪಿಸಿ ಕೃತಾರ್ಥರಾದರು. ಮುಖ್ಯ ಪಟ್ಟಣವು ಇಟಲಿಯೂನರ ವಶವಾಯಿತು. ಇಡೀ ಅಲ್ಬೇನಿಯೂವೇ ಇಟಲಿಯೂನರ ವಶವಾಯಿತು.

ಇಟಲಿಯೂನರ ಆಡಳಿತ.

ಅಲ್ಬೇನಿಯೂವು ಪೂರ್ತಿ ಅವರ ವಶವಾಗಿರುವುದರಿಂದ ಅವರು ಈಗ ಅಲ್ಲಿಯ ಆಡಳಿತವನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಲು ಪ್ರಯತ್ನಿಸುತ್ತಿರುವರು. ಇಟಲಿ ಸಾರ್ವಭೌಮತ್ವದ ಒಂದು ಪ್ರಾಂತೀಕ ಸರಕಾರವನ್ನು ನಿರ್ಮಿಸುವ ಏರ್ಪಾಡು ನಡೆದಿದೆ. ಇಟಲಿ ರಾಷ್ಟ್ರಗೀತೆಯು ಪ್ರತಿ ಮೂಲೆ ಮೂಲೆಗೂ ಬ್ರಾಡ್‌ಕ್ಯಾಸ್ಟ್ ಮಾಡಲ್ಪಟ್ಟಿತು. ಅನೇಕ ಅಲ್ಬೇನಿಯನರು ಆದರದಿಂದ ಇಟಲಿಯೂನರನ್ನು ಬರಮಾಡಿಕೊಂಡರಂತೆ. ಅನೇಕರು ಬಂದು ಮುಸಲೋನಿಗೆ ಧನ್ಯವಾದಗಳನ್ನರ್ಪಿಸಿ ಭೇಟಿ ತೆಗೆದುಕೊಂಡರಂತೆ. ಅಂತು ಸ್ವತಂತ್ರ ಅಬಿಸೀನಿಯವು ಇಟಲಿಯ ಪತಾಕೆಯಡಿಯಲ್ಲಿ ಪ್ರಾಂತೀಕ ಸರಕಾರದಿಂದ ಕೂಡಿ ಜೀವಿಸಬೇಕಾಗಿದೆ.

ಸೀನ್ಯರ್ ಗಯೂಡರ ಹೇಳಿಕೆ.

'ಅಲ್ಬೇನಿಯೂದ ಅರಸರಾದ ಜಾಗ್‌ರವರ ಅವ್ಯವಸ್ಥಿತವಾದ ಆಡಳಿತದಿಂದ ಅಸಂತುಷ್ಟರಾದ ಪ್ರಜೆಗಳು ನಮ್ಮ ಸಹಾಯವನ್ನು ಬೇಡಿದರು. ಅಲ್ಲಿರುವ ಇಟಲಿಯನರ ಮೂಲಭೂತ ಹಕ್ಕುಗಳನ್ನು ಕಿತ್ತೊಗೆದು, ನಿರಂಕುಶಾಧಿಕಾರವನ್ನು ಕೈಕೊಂಡು ನಮ್ಮ ಮಿತ್ರರಾಷ್ಟ್ರವಾದ ಯುಗುಸ್ಲೇವಿಯದ ಮೇಲೆ ಕೈ ಮಾಡಲು ಹೊರಟಿದ್ದ ಅಲ್ಬೇನಿಯೂದ ಅರಸರನ್ನು ಶಿಕ್ಷಿಸುವದು ನಮ್ಮ ಕರ್ತವ್ಯವಾಗಿತ್ತು. ಮೊದಲೊಮ್ಮೆ ಈ ರಾಜರು ಯುಗುಸ್ಲೋವಿಯನ್ನು ಮುರಿಯುವುದಕ್ಕೆ ನಮ್ಮ ಸಹಾಯವನ್ನು ಕೇಳಿದ್ದರು. ಇಟಲಿಯು ಇದನ್ನು ತಿರಸ್ಕರಿಸಿದ್ದರಿಂದ ಜಾಗ್‌ರವರು ಉದ್ರೇಕಗೊಂಡು ಅಲ್ಬೇನಿಯೂದಲ್ಲಿರುವ ಇಟಲಿಯನರನ್ನು ಕ್ರೂರದಂಡನೆಗೆ ಗುರಿಪಡಿಸುವದು ನಮಗೆ ತಿಳಿಯದಿರಲಿಲ್ಲ. ಇಟಲಿ ಸರಕಾರವು ಈ ವಿಚಾರ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿತು. ಆದರೆ ಮತ್ತರಾದ ಅರಸರು ಅದನ್ನು ಗಣನೆಗೆ ತೆಗೆದುಕೊಳ್ಳದ್ದರಿಂದ ಇಟಲಿಯು ತನ್ನ ಪುತ್ರರನ್ನು ರಕ್ಷಿಸಲು ಮುಂದರಿಯಬೇಕಾಯಿತು. ಇದರಿಂದ ಯಾರಿಗೂ ಆಶ್ಚರ್ಯವಾಗಲೂ ಭಯವಾಗಲಿಕ್ಕೆ ಕಾರಣವಿಲ್ಲ' ಎಂದು ಇಟಲಿಯ ಪ್ರಚಾರ ಮಂತ್ರಿ ಸೀನಿಯರ್ ಗಯೂಡರವರು ಹೇಳಿರುವರು.

ಜರ್ಮನರ ಒಪ್ಪಿಗೆ.

ಇಟಲಿ ಸೈನ್ಯವು ಅಲ್ಬೇನಿಯೂದ ಮೇಲೆ ಮುತ್ತಿಗೆ ಹಾಕುವ ಮೊದಲು ಮುಸಲೋನಿ ಮತ್ತು ಹಿಟ್ಲರನೊಡನೆ ಈ ವಿಚಾರ ಟೆಲಿಫೋನ್ ಮೂಲಕ ಮಾತುಕತೆಗಳಾಗಿದ್ದುವು. ಹಿಟ್ಲರನು ಮುಸಲೋನಿಯ ಈ ವರ್ತನೆಗೆ ತನ್ನ ಒತ್ತಾಸೆಯನ್ನಿತ್ತಿದ್ದನು. ಇಟಲಿ ಅಲ್ಬೇನಿಯೂದೊಳಗಾದ ಒಪ್ಪಂದದಂತೆ ಇಟಲಿಯ ಇಂದಿನ ವರ್ತನೆಯು ಇರುವುದು. ಇಟಲಿಯ ಈ ವರ್ತನೆಯಿಂದ ಜರ್ಮನ್ ಇಟಲಿಗಳೊಳಗಣ ಒಪ್ಪಂದವು ಇನ್ನೂ ಬೆಳೆದಿದೆ. ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳ ವರ್ತನೆಯು ಗುಟ್ಟೇ ಜರ್ಮನರಿಗೆ ತಿಳಿಯದೆಂದೂ ಅಲ್ಬೇನಿಯೂ ರಣರಂಗದಲ್ಲಿ ಯಾವ ಪ್ರಜಾಪ್ರಭುತ್ವವೂ ಆಸಕ್ತಿ ವಹಿಸದೆ ತಾಟಸ್ಥ್ಯಭಾವವನ್ನು ತಳೆದಿರುವುದು ನಾಚಿಕೆಗೇಡೆಂದೂ, ಇಂತಹ ಹೇಡಿ ರಾಷ್ಟ್ರಗಳು ಇಟಲಿ ಜರ್ಮನರೊಳಗಿರುವ ಬಾಂಧವ್ಯವನ್ನು ಮುರಿಯಲೆತ್ನಿಸುವುದು ಹಾಸ್ಯಾಸ್ಪದವೆಂದೂ ಪ್ರಕಟಿಸಿರುವರು. ಮಧ್ಯ ಯೂರೋಪಿನಲ್ಲಿ ಜರ್ಮನಿಯ ಜಯವನ್ನು ಆಶಿಸಿ ಯಾವ ರೀತಿಯಿಂದ ಇಟಲಿಯು ಸಹಕರಿಸಿತೋ ಅದೇ ರೀತಿಯಲ್ಲಿ ಇಂದು ಇಟಲಿಯ ವರ್ತನೆಯನ್ನು ಶ್ಲಾಘಿಸಿ ನಾವು ಸಹಾಯ ಮಾಡದಿರೆವು' ಎಂದು ಜರ್ಮನರು ಘೋಷಿಸಿರುವರು.

ಬ್ರಿಟಿಷರ ಮುಗ್ಧತೆ.

ಇಟಲಿಯೂನರ ಈ ವರ್ತನೆಯಿಂದ ಬ್ರಿಟಿಷರು ಮುಗ್ಧರಾಗಿಹೋಗಿರುವರು. ಅವರ ಪೌರೋಹಿತ್ಯವನ್ನು ಈ ಸಾರಿ ಬಿಟ್ಟಂತೆ ಕಾಣುತ್ತದೆ. ಇಟಲಿಯೂನರ ವರ್ತನೆಯನ್ನು ಎದುರಿಸುವ ವಿಚಾರವಾಗಲೀ ಯಾ ಖಂಡಿಸುವ ವಿಚಾರವಾಗಲೀ ಅವರ ಮನಸ್ಸಿನಲ್ಲಿರುವಂತೆ ಕಾಣುವುದಿಲ್ಲ. ಬ್ರಿಟಿಷ್ ಕ್ಯಾಬಿನೆಟ್ ತಾ. ೮ರಲ್ಲಿ ಕೂಡಿತು. ಅಲ್ಬೇನಿಯದ ಶೋಚನೀಯಾವಸ್ಥೆಯ ವಿಚಾರ ತರ್ಕಿಸಲಾಯಿತು. ಆದರೆ ಆ ಬಗ್ಗೆ ತಮ್ಮ ನಿಶ್ಚಿತ ಧೋರಣೆಯನ್ನು ಇನ್ನೂ ದೃಢಪಡಿಸಿಲ್ಲ. ಇಟಲಿಯ ಈ ಆಕ್ರಮಣದಿಂದ ಬ್ರಿಟಿಷರ ಮುಖಕ್ಕೆ ಕಪ್ಪು ಬಳಿದಂತಾಗಿದೆ. ತಾನು ಇಟಲಿಯೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ನಿರಾಕರಿಸಿ ಇಟಲಿಯನ್ನು ವಿರೋಧಿಸುವ ಧೈರ್ಯ ಬ್ರಿಟನಿಗಿಲ್ಲ. ಇನ್ನು ಮುಂದೆ ಇಟಲಿಯು ತನ್ನ ಈ ರಾಜ್ಯವಿಸ್ತರಣಾಲಾಲಸೆಯಿಂದ ಗ್ರೀಸ್ ಯಾ ಇತರ ಪ್ರಾಂತಗಳ ಮೇಲೆ ಬಿದ್ದರೆ ಬ್ರಿಟನು ಆ ಧೋರಣೆಯನ್ನು ಖಂಡಿಸಿ, ತಮ್ಮ ಒಪ್ಪಂದವನ್ನು ತೃಣೀಕರಿಸಿ, ಇಟಲಿಯನ್ನು ಪ್ರತಿಭಟಿಸದೆ ಇರಲಾರೆವೆಂದೂ, ತಮ್ಮ ಧೋರಣೆ ಎಂಥಾದ್ದಿರಬೇಕೆಂಬುದನ್ನು ಒಡನೆ ನಿಶ್ಚಯಿಸಲು ಪಾರ್ಲಿಮೆಂಟು ಸಭೆ ಸೇರುವದೆಂದೂ ಅಂದಿರುವರು. ಇವರ ಈ ಏರ್ಪಾಡುಗಳಾಗುವವರೆಗೆ ಪುಟ್ಟ ರಾಷ್ಟ್ರಗಳು ಸರ್ವಾಧಿಕಾರಿಗಳ ಹಿಡಿತದೊಳಗೆ ಬರುವವರಲ್ಲಿ ಅನುಮಾನವಿಲ್ಲ.

ಫ್ರೆಂಚರ ಧೋರಣೆ.

ಬ್ರಿಟಿಷರ ಬಾಲಹಿಡಿದು ಕುಣಿಯುತ್ತಿರುವ ಫ್ರಾನ್ಸು ಬ್ರಿಟನು ತಾಟಸ್ಥ್ಯಧೋರಣೆಯನ್ನು ತಳೆದಿರುವಾಗ ಹೇಗೆ ತಾನು ಮುಂದೆ ನಿಂತು ಇಟಲಿಯೂನರ ವರ್ತನೆಯನ್ನು ಪ್ರತಿಭಟಿಸೀತು? ಇವು ಮೂರು ರಾಷ್ಟ್ರಗಳೊಳಗಾಗಿರುವ ಒಪ್ಪಂದದ ಮೇರೆ ಇಟಲಿಯ ಇಂದಿನ ವರ್ತನೆಯು ಖಂಡನೀಯವಾದುದು. ಆದರೆ ಈ ರಾಷ್ಟ್ರಗಳು ಅದನ್ನು ನಿಷೇಧಿಸುವಷ್ಟು ಧೈರ್ಯಯುತವಾಗಿಲ್ಲ. ಫ್ರೆಂಚರ ಧೋರಣೆಯು ಬ್ರಿಟಿಷ್ ವರ್ತನೆಯನ್ನನುಸರಿಸಿ ನಿಂತಿರುವುದು.

ಅಮೇರಿಕದ ಖಂಡನೆ.

ಅಲ್ಬೇನಿಯೂದಲ್ಲಿ ಇಟಲಿಯು ಮಾಡಿದ ಕೃತ್ಯವು ಖಂಡನೀಯವೆಂದೂ, ಇಟಲಿ ಅಧಿಕಾರವನ್ನು ಅಲ್ಬೇನಿಯೂದಲ್ಲಿ ಅಮೇರಿಕನರು ಒಪ್ಪುವದಿಲ್ಲವೆಂದೂ, ಜರ್ಮನಿ–ಇಟಲಿಗಳಲ್ಲಿ ಒಂದು ರಾಷ್ಟ್ರವಾದರೂ ತಟಸ್ಥವಾಗಿದೆಯಲ್ಲಾ ಎಂಬ ಭರವಸೆ ಈ ವರೆಗಿತ್ತು; ಆದರೆ ಜರ್ಮನರ ಹೆಜ್ಜೆಯನ್ನನುಸರಿಸಿಯೋ ಎಂಬಂತೆ ಇಟಲಿಯೂನರೂ ಈ ಕೃತ್ಯವನ್ನು ಕೈಕೊಂಡಿರುವದರಿಂದ ಈ ಎರಡು ರಾಷ್ಟ್ರಗಳು ಒಂದೇ ತರದ ಧೋರಣೆಯಿರುವವೆಂಬುದು ವಿಶದವಾಗಿದೆಯೆಂದೂ ಇವರ ಈ ಐಕ್ಯತೆಯ ದಬ್ಬಾಳಿಕೆಯನ್ನು ಇತರ ರಾಷ್ಟ್ರಗಳು ಸಕಾಲದಲ್ಲಿ ಖಂಡಿಸದಿದ್ದರೆ ಯೂರೋಪಿನಲ್ಲೆಲ್ಲಾ ಅನೇಕಾನೇಕ ಅನಾಹುತಗಳಾಗಿ ಇಡೀ ಯೂರೋಪಿನ ನಕ್ಷೆಯೇ ಬದಲಾಗುವದರಲ್ಲಿ ಸಂದೇಹವಿಲ್ಲವೆಂದೂ ಅಮೇರಿಕನರು ಅಭಿಪ್ರಾಯಪಟ್ಟಿರುವರು.

ಇಂಡಿಯಾದ ಪ್ರಸಿದ್ಧ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತವೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-42 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ.	2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52-5

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪ್ನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ, ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52-19) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಸಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

38 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಪೂವಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಪೂವಪ್ಪನವರು ಮತ್ತು ಮೆ. ಜಿ. ಪೂವಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂಚಮ್ಮನವರು.

ಸೋಮವಾರಪೇಟೆ—ಮೆ ಕೆ. ನಾಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪನೆ: ಸನ್ 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಹಣಗಳು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂಧ್ಯಂಡ ಐ. ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮಿ. ಎಸ್. ಎನ್. ರಾಮುಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ಪೃಥಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಆರೋಗ್ಯವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(52-14)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.
ತಾ. ೨೧—೪—೧೯೩೯.
ವಾರ್ಷಿಕ ಚಂದಾ ರೂ. ೩—೮—
ಸಂಪುಟ ೧೮] [ಸಂಚಿಕೆ ೪೬

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 6 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-19

ಕೇರಳ ಆಯುರ್ವೇದಿಕ್ ವೈದ್ಯಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಅಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯುಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಅಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-8

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ
ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ
ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂ
22 ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.
ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–50

The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52–30) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೮
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್, **ಚಾಮರಾಜಪೇಟೆ, ಬೆಂಗಳೂರು ಸಿಟಿ.**

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್). ಜನರಲ್ ಮ್ಯಾನೇಜರ್, **ಅಜ್ಮೀರ್.**

12–26

ನಿಜವಾದ ನಾಗರೀಕತೆ.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಕರ್ತವ್ಯವನ್ನು ಕೈನೀಡಿ ತೋರಿಸುವದೇ ನಾಗರೀಕತೆ. ವಿವಿಧ ಜನಾಂಗಗಳ ಉಪಟಳದಿಂದ ಅಚ್ಚಳಿಯದೆ ಅವಿಚಲನಾಗಿ ನಿಂತಿರುವ ಆ ಸಂಪ್ರದಾಯವೇ ನಾಗರೀಕತೆ. ಆಧುನಿಕ ನಾಗರೀಕತೆಯ ಥಳಕಿಗೆ ಮನಮಾರಿಕೊಳ್ಳದಿರುವದೇ ನಾಗರೀಕತೆ. ಇಂದು ಪಟ್ಟಣಗಳಲ್ಲಿ ನೆಲೆಸಿ ರಾರಾಜಿಸುತ್ತಿರುವದೇ ಅನಾಗರೀಕತೆ. ಹಳ್ಳಿಗಳಿಂದ ಪ್ರಚಾರವಾಗಿ ಆ ಸರಳ ಜೀವನವು ಪಸರಿಸಿದರೆ ಅದೇ ನಿಜವಾದ ನಾಗರೀಕತೆ. ಸುಖಕಾಂಕ್ಷಿಗಳಾಗಿ ಆಶಾಪಾಶಕ್ಕೊಳಗಾಗಿ ಶ್ರಮಿಸುತ್ತಿರುವುದೇ ದಾಸ್ಯತೆ.

ಈ ವರೆಗಿನ ನಮ್ಮ ಲೇಖನ ಸರಣಿಯಿಂದ ಆಧುನಿಕ ನಾಗರೀಕತೆ, ಅದರ ಸೋಗನ್ನು ಹಾಕಿಕೊಂಡಿರುವ ರೈಲ್ವೆಗಳು, ಲಾಯರು ಹಾಗೂ ಡಾಕ್ಟರು ವೃತ್ತಿಗಳಿಂದಾಗುವ ದುಷ್ಪರಿಣಾಮವನ್ನು ತರ್ಕಿಸಿದೆವು. ಇದರಿಂದ ವಾಚಕರ ಮನಸಿನಲ್ಲಿ 'ಇಂದಿಗೆ ನಾಗರೀಕತೆಯ ಆಧಾರಸ್ತಂಭಗಳಂತಿರುವ ಈ ಉದ್ಯೋಗವೃತ್ತಿಗಳನ್ನು ಅನಾಗರೀಕತೆಯ ಅಂಧಾಕಾರವೆಂದು ಘೋಷಿಸಿದ ಮೇಲೆ, ನಿಜವಾದ ನಾಗರೀಕತೆಯೇನು? ಅದರ ರೂಪರೇಷೆಯೆಂತು?' ಎಂಬ ಪ್ರಶ್ನೆಯು ಮೂಡಿರಬಹುದು. ಆದ್ದರಿಂದ ಆ ಪ್ರಶ್ನೆಗೆ ಉತ್ತರವೀಯುವದು ನಮ್ಮ ಕರ್ತವ್ಯ.

ಈ ಪ್ರಶ್ನೆಯ ಉತ್ತರವು ಅಷ್ಟೇನು ಜಟಿಲವಾದದ್ದಲ್ಲ. ಭಾರತವು ಒಂದು ಕಾಲಕ್ಕೆ ತನ್ನ ಸ್ವಯೂರ್ಜಿತವಾಗಿ ಗಳಿಸಿದ್ದ ಆ ನಾಗರೀಕತೆ; ನಮ್ಮ ಅಳಿದ ಪಿತಾಮಹರು ಪವಿತ್ರ ಭಾರತದ ಫಲಭರಿತ ಭೂಮಿಯಲ್ಲಿ ಬಿತ್ತಿದ ಆ ಬೀಜ; ಇನ್ನೂ ಅಳಿದಿಲ್ಲ. ಕಾಲಚಕ್ರದ ಉರುಳಾಟದಲ್ಲಿ ಅನೇಕ ರಾಜ್ಯಗಳು ತಲೆಯೆತ್ತಿ ಮೆರೆದವು. ಮೆರೆದು ಮರೆಯಾದವು. ರೋಮ್ ಚಕ್ರಾಧಿಪತ್ಯ, ಗ್ರೀಸಿನ ಅದೃಷ್ಟ ಎಲ್ಲವೂ ಒಂದು ಕಾಲಕ್ಕೆ ಕಾನೇತಾನಾಗಿ ಶೋಭಿಸಿದವು. ಇದೆಲ್ಲಾ ಆ ಕಾಲಕ್ಕೆ ಮಾತ್ರ. ಆದರೆ ನಮ್ಮ ಭಾರತ ಮಾತೆಯು ತನ್ನ ಅಂತರ್ಗತ ವರ್ಚಸ್ಸನ್ನು ಈ ಕಾಲಚಕ್ರದ ತೀವ್ರ ಉರುಳಾಟದ ಪರಿವೆಯಿಲ್ಲದೆ ಕಾಪಾಡಿಕೊಂಡು ಅವಿಚಲವಾಗಿ ನಿಂತಿರುವಳು. ಜಗತ್ತಿನ ಈ ಉರುಳಾಟದ ಕೋಲಾಹಲದ ಮಧ್ಯದಲ್ಲಿ ಪವಿತ್ರ ಭಾರತ ಮಾತೆಯು ತನ್ನ ಸ್ಥಿರತೆ ಹಾಗೂ ಪ್ರತಿಷ್ಠೆಯನ್ನು ಇಟ್ಟುಕೊಂಡಿರುವಳು. 'ಭಾರತೀಯರು ಏನೂ ತಿಳಿಯದವರು, ಅನಾಗರೀಕರು, ಆದ್ದರಿಂದ ಅವರು ಯಾವದೊಂದು ಬಪಲಾಪಣೆಗೆ ಯೋಗ್ಯರಲ್ಲ'ವೆಂಬೊಂದು ಅಪವಾದವನ್ನು ಪರ ಜನಾಂಗದವರು ಹೊರಿಸಿರುವರು. ಈ ಅಪವಾದವೇ ನಮ್ಮ ಸ್ಥಿರತೆಯನ್ನು ಸೂಚಿಸುವದು. ಒಂದು ತತ್ವವನ್ನು ವಿಚಾರಿಸಿ, ಅದರ ಸಾಧಕಬಾಧಕಗಳನ್ನು ನಿರ್ಣಯಿಸಿ ಅದನ್ನು ಅಂಗೀಕರಿಸಿದ ಮೇಲೆ, ಅನುಭವದಿಂದ ಅದೇ ಉತ್ತಮ ಮಾರ್ಗವೆಂದು ತಿಳಿದು ಬಂದ ಮೇಲೆ ಪುನಹ ಇತರ ರಾಷ್ಟ್ರಗಳ ಥಳಕಿನ ಸೊಬಗಿಗೆ ಮನಮಾರಿಕೊಳ್ಳುವದು ಸರಿಯಲ್ಲ. ಅನೇಕ ಜನಾಂಗಗಳು ತಮ್ಮ ಕೈವಾಡವನ್ನು ಭಾರತದಲ್ಲಿ ನಡೆಸಿ ಭಾರತದ ಅನಾದಿಕಾಲದ ಧರ್ಮಸೂತ್ರಗಳನ್ನು ಮರೆಮಾಡಲು ಯತ್ನಿಸಿದವು. ಯಾವ ಜನಾಂಗದ ಕೈವಾಡವು ಎಷ್ಟೇ ನಡೆದರೂ ನಮ್ಮ ಆರ್ಷೇಯವಾದ ಆ ಕೀರ್ತಿಸಾಧನವು ಇನ್ನೂ ಉಳಿದಿದೆ. ಇದೇ ಭಾರತದ ಸೌಂದರ್ಯ, ನಮ್ಮ ಆಶೆಭರವಸೆಗಳ ಆಧಾರಸ್ತಂಭ.

ಕರ್ತವ್ಯದ ಪಥವನ್ನು ತೋರಿಸುವ ಆ ಗುಣವೇ ನಾಗರೀಕತೆ. ಕರ್ತವ್ಯವನ್ನು ಮಾಡುವದು, ಸದಾಚಾರವನ್ನು ಪಾಲಿಸುವದು ಇವೇ ನಾಗರೀಕತೆಯ ಆಧಾರ ಸ್ತಂಭಗಳು. ಸದಾಚಾರಿಯಾಗಬೇಕಾದರೆ ನಮ್ಮ ಆನಯನ ಅಭಿಲಾಷೆಗಳ ಮೇಲೆ ನಮಗೆ ಅಧಿಕಾರವಿರಬೇಕು. ಗುಜರಾತಿ ಭಾಷೆಯಲ್ಲಿ ನಾಗರೀಕತೆ ಎಂದರೆ ಸದಾಚಾರ ಎಂಬ ಅರ್ಥವಿರುವದು. ನಾಗರೀಕತೆಯೆಂಬುದರ ಈ ವಿವರಣೆಯು ಸರಿಯಿದ್ದರೆ ಭಾರತ ದೇಶವು, ಅನೇಕ ಲೇಖಕರು ಬರೆದಿರುವಂತೆ ಬೇರೆ ಜನಾಂಗಗಳಿಂದ ಕಲಿಯಬೇಕಾದುದೇನೂ ಇಲ್ಲ. ನಮ್ಮ ಮನಸ್ಸೆಂಬುದು ಚಂಚಲ ಸ್ವಭಾವದ್ದೆಂಬುದು ಎಲ್ಲರಿಗೂ ತಿಳಿದದೆ. ಅದರ ಆಶಾಪೂರ್ತಿಯಾಗುವದೇ ಇಲ್ಲ. ಒಂದು ಕಾರ್ಯ ಸಫಲವಾದರೆ ಬೇರೆ ಅನೇಕ ಕಾಂಕ್ಷೆಗಳು ಉದ್ಭೂತವಾಗಿ ತಮ್ಮ ಸಾಫಲ್ಯವನ್ನು ಕಾಯುತ್ತಿರುವವು. ಆದ್ದರಿಂದ ನಾವು ಹೆಚ್ಚು ಸಾಧಿಸಿಕೊಂಡರೆ ಹೆಚ್ಚು ಆಸೆ ಬರುವದೂ ವಾಸ್ತವ. ಇದನ್ನು ತಿಳಿದೇ ನಮ್ಮ ಪಿತಾಮಹರು ನಮ್ಮ ಆಸೆ ಆಕಾಂಕ್ಷೆಗಳಿಗೆ ಒಂದು ಮಿತಿಯನ್ನಿಟ್ಟಿದ್ದರು. ಸುಖವೆಂಬುದು ಬರೀ ಮನಸಿನ ಒಂದು ಸ್ಥಿತಿಯಲ್ಲದೆ ಮತ್ತಿಲ್ಲವೆಂಬುದು ಅವರಿಗೆ ತಿಳಿದಿತ್ತು. ಐಶ್ವರ್ಯವಂತನಾಗುವದರಿಂದ ಶಾಶ್ವತ ಸುಖಲಭಿಸದೆಂದೂ, ಬಡವನಾದ್ದರಿಂದ ಅಸುಖಿಯೆಂದು ಹೇಳುವದರಲ್ಲಿ ಅರ್ಥವಿಲ್ಲವೆಂದೂ ಅವರು ತಿಳಿದಿದ್ದರು. ಧನಿಕರು ಕೆಲವೇ ಜನರೆಂದೂ, ಮಿಲಿಯೊಂತರ ಜನರು ಬಡವರಾಗಿರುವ ಕಾರಣ ಧನದಲ್ಲಿ ಸಾರ್ವಜನಿಕ ಸುಖವಿಲ್ಲವೆಂದೂ ಘೋಷಿಸಿದರು. ಇವನ್ನೆಲ್ಲಾ ವಿಚಾರಿಸಿಯೇ ಸುಖಲಾಲಸೆಗಳ ಹಾಗೂ ಧನಕನಕಗಳ ಸುಖವು ಕ್ಷಣಿಕವೆಂದರು. ಆದ್ದರಿಂದ ನಾವು ಅನಾದಿಯಿಂದಲೂ ಇಲ್ಲಿ ನಡೆಯುತ್ತಾ ಬಂದ ಕೃಷಿಯನ್ನೇ ಅವಲಂಭಿಸಿ ಜೀವನ ನಡೆಸಿದೆವು. ಅದೇ ಪುರಾತನ ಕಾಲದ ಗುಡಿಸಲುಗಳಲ್ಲಿ ಬದುಕುತ್ತಿರುವೆವು. ನಮ್ಮ ಅಂದಿನ ಮನೋವೃತ್ತಿಯೇ ಇಂದೂ ಅಚ್ಚಳಿಯದೆ ನಿಂತಿರುವದು. ಜೀವನವನ್ನು ತುಕ್ಕು ಹಿಡಿಸುವ ಆ ನಾಗರೀಕತೆಯ ಸ್ಪರ್ಧೆಯು ನಮ್ಮಲ್ಲಿ ಉಪಸ್ಥಿತವಾಗಿಲ್ಲ. ಪ್ರತಿಯೊಬ್ಬರೂ ಆತನ ವ್ಯವಸಾಯವನ್ನು ಕರ್ತವ್ಯದೃಷ್ಟಿಯಿಂದ ನಿರ್ವಹಿಸುತ್ತಾ ಬಂದರು. ಇದರಿಂದ ನಮಗೆ ಯಂತ್ರೋಪಕರಣಗಳ ಪರಿವೆಯಿಲ್ಲವೆಂದಲ್ಲ. ಈ ಯಂತ್ರೋಪಕರಣಗಳ ಲಾಲಸೆಗೆ ಬಿದ್ದದ್ದೇ ಆದರೆ ನಮ್ಮ ಸ್ವಾತಂತ್ರ್ಯವನ್ನು ಕಳಕೊಂಡು ಗುಲಾಮರಾಗುವೆವೆಂದು ನಮ್ಮ ಪಿತಾಮಹರು ತಿಳಿದಿದ್ದರು. ಆದ್ದರಿಂದ ಅವರು ಈ ಯಂತ್ರೋಪಕರಣಗಳ ಹವ್ಯಾಸವನ್ನು ತೊರೆದು ತಮ್ಮ ಅವಯವಗಳಿಂದ ಮಾಡಬಹುದಾದಷ್ಟರಲ್ಲಿಯೇ ತೃಪ್ತಿಗೊಂಡಿದ್ದರು. ಪಟ್ಟಣಗಳಲ್ಲಿ ಶಾಂತ ಜೀವನವು ಅಸಾಧ್ಯವೆಂದೂ, ಅದು ಕಳ್ಳಕಾಕರರ, ವ್ಯಭಿಚಾರವೇ ಮೊದಲಾದ ದುರಾಚಾರಗಳ ತವರೂರೆಂದೂ, ಬಡಜನರ ರಕ್ತಶೋಷಣೆಯನ್ನು ಮಾಡುವ ಕಾರ್ಯಸ್ಥಾನವೆಂದೂ ತಿಳಿದಿದ್ದರು. ಆದ್ದರಿಂದಲೇ ಅವರು ಪಟ್ಟಣಗಳ ಸೊಬಗಿಗೆ ಮನಮಾರಿಕೊಳ್ಳದೆ ಗ್ರಾಮಜೀವನವನ್ನೇ ಆಶ್ರಯಿಸಿದರು. ರಾಜರುಗಳು, ಹಾಗೂ ಅವರ ಖಡ್ಗಧಾರೆಗಳೂ, ಧರ್ಮಾಚಾರದ ಆ ಸೂಕ್ಷ್ಮ ತತ್ವದ ಮುಂದೆ ಸತ್ವಹೀನವಾದೆಂದು ಅರಿವು ಅವರಿಗಿತ್ತು. ಆದ್ದರಿಂದಲೇ ಅವರು ಯತೀಶ್ವರರಿಗೆ ರಾಜರಿಗಿಂತ ಮರ್ಯಾದೆ ಕೊಡುತ್ತಿದ್ದರು. ಇಂಥಾ ಒಂಬ ವ್ಯವಸ್ಥೆ ಇರುವ ಜನಾಂಗಕ್ಕೆ ಬೇರೆ ಜನಾಂಗಗಳಿಗೆ ಬುದ್ಧಿವಾದ ಮಾಡುವ ಅರ್ಹತೆ ವಿನಹ ಬೇರೆ ಜನಾಂಗದಿಂದ ಕಲಿಯುವ ಅರ್ಹತೆಯಿಲ್ಲ. ಪೂರ್ವದಲ್ಲೂ ಇಲ್ಲಿ ವಕೀಲರೂ, ವೈದ್ಯರೂ, ಕೋರ್ಟುಗಳೂ ಇದ್ದವು. ಆದರೆ ಅವು ತಮ್ಮ ಹದ್ದುಮೀರಿ ಹೋಗಿರಲಿಲ್ಲ. ಆ ಕಾಲದಲ್ಲಿ ಅದು ಶ್ರೇಷ್ಠ ಉದ್ಯೋಗವೆಂದು ಪರಿಗಣಿಸಲ್ಪಡುತ್ತಿರಲಿಲ್ಲ. ಅವರು ಬರೀ ಜನರ ಅಧೀನ ಕೆಲಸಗಾರರೆಂದು ಸಂಭೋಧಿಸಲ್ಪಡುತ್ತಿದ್ದರು. ನ್ಯಾಯಾನ್ಯಾಯಗಳ ವಿಮರ್ಶೆಯು ಧರ್ಮಬದ್ಧವಾಗಿ ನಡೆಸಲ್ಪಡುತ್ತಿತ್ತು. ಜನರು ತಮ್ಮ ತಮ್ಮ ಗ್ರಾಮಗಳಲ್ಲಿ ಸ್ವತಂತ್ರರಾಗಿದ್ದರು. ಅವರು ಸ್ವಾತಂತ್ರ್ಯ ರಾಜ್ಯಭಾರದ ಸಂತೋಷವನ್ನು ಪಡೆದಿದ್ದರು. ಎಲ್ಲಿ ಇಂದಿನ ಆಧುನಿಕ ನಾಗರೀಕತೆಯೆನಿಸುವ ಆ ಕರಾಳ ಸ್ವರೂಪವು ತನ್ನ ಪ್ರತಿಭೆಯನ್ನು ಹರಡಿಲ್ಲವೋ ಆ ಗ್ರಾಮಗಳು ಇಂದೂ ಆ ಸನಾತನವಾದ ಸುಖವನ್ನನುಭವಿಸುತ್ತಿವೆ. ಅವರು ಇಂದಿನ ಆಧುನಿಕ ಸುಖವಿಲಾಸಗಳನ್ನು ಹೇಯವಾಗಿ ಕಾಣುವರು. ಅವರನ್ನು ಬ್ರಿಟಿಷ್ ಸಾರ್ವಭೌಮತ್ವವು ಆಳುವದಲ್ಲ. ಅವರು ಎಂದೂ ಹಾಗೆ ಆಳಲ್ಪಡಲಿಕ್ಕೂ ಇಲ್ಲ. ಭಾರತ ಮಾತೆಯನ್ನು ಪ್ರೀತಿಸುವ ಪ್ರತಿಯೊಬ್ಬ ಪುತ್ರನೂ ಈಗಿನ ನಾಗರೀಕತೆಯಿಂದ ಕೆಡದಿರುವ ಹಳ್ಳಿಗಳಲ್ಲಿ ಆರು ತಿಂಗಳು ಜೀವಿಸಿ ಅಲ್ಲಿಯ ಸ್ವಾತಂತ್ರ್ಯ ಸುಖಜೀವನವನ್ನು ಪಡೆಯುವದು ಉಚಿತ. ಎಂದರೇನೇ ಇಂದಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೈಯಿಕ್ಕಲು ಆತನು ಸಮರ್ಥನಾಗುವನು. ಆದ್ದರಿಂದ ನಿಜವಾದ ನಾಗರೀಕತೆಯು ಪಟ್ಟಣವಾಸದಿಂದ ಇಲ್ಲವೇ ರೈಲ್ವೆ ವಿಮಾನಗಳ ಸಂಪರ್ಕದಿಂದ ಬರುವದಲ್ಲ. ನಾಗರೀಕತೆಯು ಗ್ರಾಮಗಳಿಂದ ಹರಡಬೇಕೇ ವಿನಹ ಪಟ್ಟಣಗಳಲ್ಲಿ ನಾಗರೀಕತೆಯು ನಾಮಾವಶೇಷವಾಗಿದೆ.

'ಈಗ ಮೇಲೆ ವಿವರಿಸಿದಂತೆ ಭಾರತ ದೇಶವು ಇದ್ದಿದ್ದ ಪಕ್ಷದಲ್ಲಿ ಅದು ಬೇರೆ ರಾಷ್ಟ್ರಗಳಿಂದ ಕಲಿಯತಕ್ಕದ್ದಿಲ್ಲವೆಂಬುದು ಸಮಂಜಸವಾಗುತ್ತಿತ್ತು. ಆದರೆ ಇಂದು ಭಾರತವು ಹೇಗಿದೆ? ಮತದ ಹೆಸರಿನಿಂದ ಪ್ರಾಣವಧೆ ನಡೆಯುತ್ತಿದೆ. ದೇವರ ಹೆಸರಿನಲ್ಲಿ ದೇವದಾಸಿಯರಾಗಿ ವ್ಯಭಿಚಾರವು ಮುಂದೊತ್ತುತ್ತಿದೆ. ಅನೇಕ ಸುಲಕ್ಷಣಯುವತಿಯರು ವಿಧವೆಯರಾಗಿ ನರಳುತ್ತಿರುವರು. ಇನ್ನೂ ಅನೇಕಾನೇಕ ದುಷ್ಕೃತ್ಯಗಳು ನಡೆಯುತ್ತಿವೆ. ಇದನ್ನೆಲ್ಲಾ ನಾಗರೀಕತೆಯೆಂದು ಕರೆಯುವದು ಸಾಧ್ಯವೇ'? ಎಂಬ ಪ್ರಶ್ನೆಯು ಉಪಸ್ಥಿತವಾಗುವದು ಸಹಜ. ಆದರೆ ಇವು ನಮ್ಮ ಪುರಾತನ ನಾಗರೀಕತೆಯ ಕುರುಹುಗಳಲ್ಲ. ಇವು ಇಂದಿನ ಆಧುನಿಕ ನಾಗರೀಕತೆಯ ಪರಿಣಾಮಗಳು. ಇವನ್ನು ಕಿತ್ತೊಗೆಯಲು ಪ್ರಯತ್ನಗಳು ನಡೆದವು; ಹಾಗೂ ನಡೆಯುತ್ತಿವೆ. ಈ ದುರಾಚಾರಗಳನ್ನು ಕಿತ್ತೊಗೆಯಲು ನಮ್ಮ ಚೈತನ್ಯವನ್ನು ಉಪಯೋಗಿಸಬೇಕು, ನಾವು ವಿವರಿಸಿದ ಆಧುನಿಕ ನಾಗರೀಕತೆಯು ಅದರ ಉಪಾಸಕರಿಂದಲೇ ಹಾಗೆ ವಿವರಿಸಲ್ಪಟ್ಟಿದೆ. ಅನಾದಿಕಾಲದ ಭಾರತದ ನಾಗರೀಕತೆಯೂ ಸಹ ಹಾಗೆಯೇ. ಜಗತ್ತಿನ ಯಾವ ಭಾಗದಲ್ಲೂ, ಯಾವ ನಾಗರೀಕತೆಯ ಅಡಿಯಲ್ಲೂ ಜನತೆಯು ಶಾಂತಿಯನ್ನು ಪಡೆದಿಲ್ಲ. ಭಾರತ ನಾಗರೀಕತೆಯ ಮೂಲಧ್ಯೇಯವು ಮಾನವನ ನೀತಿಯನ್ನು ಮಾರ್ಪಡಿಸುವಂಥಾದ್ದು. ಆಧುನಿಕ ನಾಗರೀಕತೆ ಅರ್ಥಾತ್ ಪಾಶ್ಚಿಮಾತ್ಯ ನಾಗರೀಕತೆಯು ಜನತೆಯಲ್ಲಿ ಅನೀತಿಯನ್ನು ಪ್ರಚಾರಮಾಡುವಂಥಾದ್ದು. ಇದು ನಾಸ್ತಿಕವಾದದಿಂದ ಉದ್ಭೂತವಾದದ್ದು. ಆದರೆ ಭಾರತ ನಾಗರೀಕತೆಯು ಜಗನ್ನಿಯಾಮಕನಿರುವನೆಂಬ ಆ ಅವಿಚಲ ನಂಬಿಕೆಯ ತಳಹದಿಯ ಮೇಲೆ ಉಪಸ್ಥಿತವಾದದ್ದು. ಆದ್ದರಿಂದ ಭಾರತದ ಪ್ರತಿಯೊಬ್ಬ ಹಿತಚಿಂತಕನೂ ಭಾರತ ನಾಗರೀಕತೆಯನ್ನು ಅರಿತು, ನಂಬಿ ತಾಯಿಯ ಮೊಲೆ ಹಾಲನ್ನು ಕುಡಿಯಲು ಮಗುವು ಹೇಗೆ ಕಾತುರಪಡುತ್ತದೋ ಹಾಗೇ ಆರ್ಷೇಯವಾದ ಭಾರತ ನಾಗರೀಕತೆಯನ್ನು ಆಶ್ರಯಿಸಬೇಕು. ಅಂದೇ ಭಾರತವು ತನ್ನ ಪ್ರತಿಷ್ಠೆಯನ್ನು ಪುನಹ ಸಂಪಾದಿಸೀತು.

ಮುಂದಿನ ವಾರ ಭಾರತವು ಹೇಗೆ ಸ್ವತಂತ್ರವಾಗಬಹುದೆಂಬುದನ್ನು ವಾಚಕರ ಮುಂದಿಡಲಾಗುವದು.

ಸರ್ವಾಧಿಕಾರಿಗಳ ಭವಿತವ್ಯ.

೧೯೩೯-೪೦ರಲ್ಲಿ ಮಹಾಯುದ್ಧವಾಗುವದಿಲ್ಲ.

ಮುಸಲೋನಿಯಿಂದ ಗಂಡಾಂತರ.

(ಇಟಲಿಯ ಮುಸಲೋನಿ)

(ಜರ್ಮನಿಯ ಹಿಟ್ಲರ್)

ಜ್ಯೋತಿಷಿಗಳಿಗೆ ಮಾರ್ಚ 21 ನೇ ತಾರೀಕು ಮಹತ್ವದ ದಿನ ಆ ದಿನ ಆರು ಕುಂಡಲಿ ಹಾಕಿ ಜಗತ್ತಿನ ಭವಿತವ್ಯವನ್ನು ನಿರ್ಣಯಿಸುವರು ಈ ಸಾರಿಯ ಕುಂಡಲಿಯಿಂದ ಇಂಗ್ಲೆಂಡಕ್ಕೆ ಹೆಚ್ಚು ಮಹತ್ವವು ಅಂತರರಾಷ್ಟ್ರೀಯ ದೃಷ್ಟಿಯಿಂದ ಲಭಿಸುವಂತೆ ಕಾಣುತ್ತದೆ

ಹೆರ್ ಹಿಟ್ಲರ್.

ಸರ್ವಾಧಿಕಾರಿಗಳನ್ನು ಕುರಿತು ಯಾರೂ ಭಯಪಡಬೇಕಾದ ಕಾರಣವಿಲ್ಲ. ಜರ್ಮನರ ಸರ್ವಾಧಿಕಾರಿಯು ಜಾಣನಾದ ನಾಯಕ, ಆದರೆ ಅವನ ಜಾತಕವು ಅಷ್ಟೊಂದು ಚೆನ್ನಾಗಿಲ್ಲ. ಯೆಹೂದ ಜನರ ಮೇಲೆ ವಿಚಿತ್ರ ಹಿಂಸೆ, ಬಲಶಾಲಿಯಾಗಬೇಕೆಂಬ ಮಹತ್ವಾಕಾಂಕ್ಷೆ ಇವೆರಡು ಅವನೆಣಿಕೆಗೆ ವಿರುದ್ಧವಾಗಿ ನಿಲ್ಲುವವು ಜರ್ಮನಿಯ ಪರಿಸ್ಥಿತಿಯ ಬಲಾಬಲವನ್ನು ವಿಚಾರಿಸಿದರೆ ಜರ್ಮನಿಗೆ ಕೊನೆಗಾದರೂ ಸರ್ವನಾಶವು ತಪ್ಪಿದ್ದಲ್ಲ ಎಲ್ಲವೂ ಕೈಸೇರಿತೆಂದು ಆನಂದಪಡುವಾಗ 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂಬಂತಾಗುವದು.

ಬೆನಿಟೋ ಮುಸಲೋನಿ.

ಮುಸಲೋನಿಯು ವಿಚಿತ್ರತರದ ಸರ್ವಾಧಿಕಾರಿ. ಅವನ ಜಾತಕವೂ ಅಷ್ಟೊಂದು ಉಚ್ಚತರದ್ದಲ್ಲ ಅವನ ಸ್ವಭಾವನೇ ವಿಶಿಷ್ಟವಾಗಿದ್ದು ಅವನು ಲೋಕಕಂಟಕರಲ್ಲಿ ಒಬ್ಬನೆಂದು ಪರಿಗಣಿಸಲ್ಪಡುವನು. ಅವನು ಮಹಾ ಸ್ವಾರ್ಥಿಯು. ಯುದ್ಧಾತುರನಾದ ಸರ್ವಾಧಿಕಾರಿಯು. ಜಗತ್ತಿನ ಶಾಂತಿಪ್ರಿಯರನ್ನು ಪರಿಗಣಿಸುವನೇ? ಆದ ಕಾರಣ ಹಿಟ್ಲರನಿಂದ ಜಗತ್ತಿಗೆ ಹಾನಿಯಾಗುವದರ ಬದಲು ಮುಸಲೋನಿಯಿಂದಲೇ ಆ ಗಂಡಾಂತರವು ಸಂಭವಿಸಬಹುದು ಆದರೆ ಅಲ್ಲಿಯ ಒಳಗಿನ ಪರಿಸ್ಥಿತಿ ಹಾಗು ಆರ್ಥಿಕ ದುಸ್ಥಿತಿ ಸ್ವಲ್ಪ ಕಾಲದ ವರೆಗೆ ಯುದ್ಧವನ್ನು ತಡೆಯಬಹುದು

೧೯೩೯ ರಲ್ಲಿ.

ಈ ವರ್ಷ ಮುಸಲೋನಿಯನ್ನು ಕೊಲ್ಲುವ ಬಗ್ಗೆ 2-3 ಸಾರಿ ಪ್ರಯತ್ನಗಳಾಗಬಹುದು ಆದರೆ ಕೊಲೆಗಡುಕರು ತಮ್ಮ ಸಾಹಸದಲ್ಲಿ ಯಶಸ್ವಿಯಾಗುವದಿಲ್ಲ. ಕೊನೆಗಾದರೂ ಮುಸಲೋನಿಗೆ ಅಪಮೃತ್ಯು ತಪ್ಪಿದ್ದಲ್ಲ ಹಿಟ್ಲರನು ಮಾತ್ರ ಸ್ವಾಭಾವಿಕವಾದ ಮರಣಕ್ಕೆ ಈಡಾಗುವನು

ಇಂಗ್ಲೆಂಡದ ಪರಿಸ್ಥಿತಿಯು ಜನರು ತಿಳಿದುಕೊಂಡಂತಿಲ್ಲ, ಗಂಡಾಂತರದ ಸಂದರ್ಭಗಳಲ್ಲಿ ಅದು ಎಲ್ಲಕ್ಕೂ ಮೀರಿದ ಮಹಾಶಕ್ತಿ ಅಂತೂ ಬ್ರಿಟನಕ್ಕೆ ನಷ್ಟವಾಗತಕ್ಕ ಮಹಾಯುದ್ಧವು ಸಂಭವಿಸುವಂತೆ ತೋರುವದಿಲ್ಲ ಆದರೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಸಣ್ಣ ಪುಟ್ಟ ಯುದ್ಧಗಳು ನಡೆದು ಕೋಲಾಹಲವಾಗುವ ಸಂಭವವಿದೆ. ಪಾಲೆಸ್ತೈನದಲ್ಲಿ ಯುದ್ಧ, ಚೀನ ಜಪಾನ ಯುದ್ಧ, ಗಡಿನಾಡುಗಳಲ್ಲಿ ಅಲ್ಲಲ್ಲಿ ಬಡಿದಾಟ ಮುಂತಾದವುಗಳೆಲ್ಲ ನಡೆಯುವವು. ಒಟ್ಟಿನಲ್ಲಿ 1939-40 ನೇ ವರ್ಷವು ಇಂಗ್ಲೆಂಡಕ್ಕೆ ಭಯಂಕರವಾಗಿದೆ.

ಈ ವರ್ಷ ಅಲ್ಲಲ್ಲಿ ವರ್ಗಕಲಹವನ್ನು ನಾವು ಕಾಣಬಹುದು. ಇದಕ್ಕೆ ವಿಷಮ ರಾಜಕೀಯ ಪರಿಸ್ಥಿತಿ ಆರ್ಥಿಕ ದುಸ್ಥಿತಿ ಹಾಗು ಕ್ರಾಂತಿಕಾರಕ ವಾತಾವರಣ ಮುಂತಾದವುಗಳೇ ಮುಖ್ಯ ಕಾರಣಗಳಾಗಬಹುದು ಅಲ್ಲದ ಆರ್ಥಿಕ ದುಸ್ಥಿತಿಯಿಂದ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಜನ ಸಾಮಾನ್ಯರಲ್ಲಿ ಅಸಂತುಷ್ಟಿಯುಂಟಾಗಿ ಒಂದು ಬಗೆಯ ಕ್ರಾಂತಿಯುಂಟಾಗಬಹುದು ಅಂತೂ ಈ ವರ್ಷದಲ್ಲಿ ಬ್ರಿಟನವು ಬಹಳ ಆತುರದಿಂದ ಇರಬೇಕಾದ ಪ್ರಸಂಗವುಂಟಾಗುವದು

ಮಹತ್ವದ ಬದಲಾವಣೆಗಳು

1 ಇಂಗ್ಲೆಂಡು ತನ್ನ ಸಾಮ್ರಾಜ್ಯದಲ್ಲಿರುವ ಎಲ್ಲಾ ಜನಾಂಗದ ಬೇಡಿಕೆಯಂತೆ ನಡೆದುಕೊಳ್ಳಬೇಕಾಗುವದು ಆದರೆ ಆಫ್ರಿಕದ ಪೂರ್ವ ಭಾಗವನ್ನು ಯುರೋಪಿನ ಒಂದು ಪ್ರಬಲ ರಾಷ್ಟ್ರಕ್ಕೆ ಆಹುತಿಯಾಗಿ ಕೊಡಬೇಕಾದ ಪ್ರಸಂಗವು ಬರಬಹುದು

2 ಐಯರ್ಲೇಂಡು ಒಂದಾಗುವ ಸಂಭವವಿದೆ ಐಯರ್ಲೇಂಡಿನ ಉತ್ತರ ಭಾಗವು ಐಯರಿಶ್ ಫ್ರೀಸ್ಟೇಟಿನಲ್ಲಿ ಸೇರುವದು ಕೆಲವು ಸಮಯಗಳ ವರೆಗೆ ಅಂತಃಕಲಹವು ಒತ್ತಾಯದಿಂದ ಸಾಗಬಹುದು ಆದರ ಕೊನೆಗಾದರೂ ಐಯರ್ಲೇಂಡವು ಅಖಂಡವೆನಿಸಬೇಕಾಗುವದು ಬರುವ ಒಂದು ವರ್ಷದಲ್ಲಿ ಡಿವೇಲರನ್ನು ಎಷ್ಟೋ ಸಂಕಟಗಳು ಬೆನ್ನಟ್ಟಬಹುದು ಆದರೆ ಇಂಗ್ಲೆಂಡಿನಿಂದ ಯಾವ ತರಹದ ತೊಂದರೆಯೂ ಉಂಟಾಗುವದಿಲ್ಲ

3. ಭೂಮಧ್ಯ ಸಮುದ್ರ, ಪ್ಯಾಲೆಸ್ತೈನ್ ಹಾಗೂ ಪೂರ್ವಾಂತ್ಯದಲ್ಲಿ ಅನೇಕ ಬದಲಾವಣೆಗಳಾಗಬಹುದು. ಐಯರ್ಲೇಂಡ್ ದ್ವೀಪಗಳು ಉತ್ತರ ಸಾಗರ ಹಾಗೂ ಬಾಲ್ಟಿಕ ಸಾಗರದಲ್ಲಿ ಹೆಚ್ಚು ಗಂಡಾಂತರಗಳುಂಟಾಗಬಹುದು ಅಮವಾಸ್ಯೆ ಹಾಗೂ ಗ್ರಹಣ ಮೊದಲಾದ ಪರ್ವ ಕಾಲಗಳಲ್ಲಿ ಈ ಮೇಲೆ ಸೂಚಿಸಿದ ಭಾಗಗಳಲ್ಲಿ ಒಂದಲ್ಲ ಒಂದು ಬಗೆಯಿಂದ ಹಾನಿಯು ತಪ್ಪಿದ್ದಲ್ಲ. ಈ ಗಂಡಾಂತರದಿಂದ ಫ್ಯಾಸಿಸ್ಟ್ ತತ್ವಕ್ಕೆ ವಿರುದ್ಧವುಳ್ಳ ರಾಷ್ಟ್ರಗಳು ಪ್ರಯತ್ನಪೂರ್ವಕವಾಗಿ ಪಾರಾಗುವವು. ಬ್ರಿಟನಿನ ಬಲವು ಕಡಲಪಡೆಯಲ್ಲಿ ಮಹತ್ವದಿದ್ದು ಇನ್ನಾದರೂ ಆದರ ಅಸ್ತಿತ್ವ ಹಾಗೂ ಮಹತ್ವವು ಆದರ ನೌಕಾಬಲದಿಂದಲೇ ಉಳಿಯುವುದು. ಇವೆಲ್ಲ ಈ ರೀತಿಯಿಂದ ಬ್ರಿಟನು ಮೇ ತಿಂಗಳಲ್ಲಿಯೇ ಮಹತ್ವದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. 'ಸ. ಕ.'

ಔಂಧ್ ಸಂಸ್ಥಾನದಲ್ಲಿ ನಿರಕ್ಷರತೆಯ ನಿರ್ಮೂಲ.

ಮಾಯಾ ಲಾಂದ್ರದ ಬೋಧನೆ—ಉತ್ತಮ ಹರಿಕೀರ್ತನೆ.
ಜನತೆಯ ನಿರಕ್ಷರತೆಯ ನಿವಾರಣೆ—ಉಳಿದ ಸಂಸ್ಥಾನಗಳಿಗೆ ಉದಾಹರಣೆ

(**ಹರಿಜನ, ತಾ.** 15-4-39)

ಔಂಧ್ ಸಂಸ್ಥಾನದಲ್ಲಿ ಅಲ್ಲಿಯ ಅರಸರು ಜನತೆಗೆ ಕೊಟ್ಟ ಸುಧಾರಣೆಗಳ ಫಲಿತಾಂಶವಾಗಿ ಅಲ್ಲಿ ನಿರಕ್ಷರತೆಯನ್ನು ನಿರ್ಮೂಲ ಮಾಡುವ ಕಾರ್ಯವು ಭರದಿಂದ ನಡೆಯುತ್ತಿದೆ ಅಲ್ಲಿಯ ಯುವಕ ವಿದ್ಯಾ ಬೋರ್ಡು ಈ ಕಳೆದ ಅಲ್ಪ ಅವಧಿಯಲ್ಲಿ ಶ್ರಮಿಸಿದ ಪರಿಣಾಮವಾಗಿ ಏಳು ಸಾವಿರ ಯುವಕರು ಅಕ್ಷರಸ್ಥರಾಗಿರುವರು ಉದ್ಯೋಗಸ್ಥರಲ್ಲದವರಿಂದ ಕೂಡಿದ ಈ ಬೋರ್ಡಿನ ಸಹಾಯಕ್ಕಾಗಿ ಅರವತ್ತು ಜನರಿಂದ ಕೂಡಿದ ಒಂದು ಸ್ವಯಂಸೇವಕ ದಳವು ಒಂದು ತಾಲೂಕಿನಲ್ಲಿ ಕಾರ್ಯ ಕೈಗೊಂಡಿದೆ ಈ ಅರುವತ್ತು ಸ್ವಯಂ ಸೇವಕರು ನಾಲ್ಕು ಸಂಡಗಳಾಗಿ ಪ್ರತಿ ಗ್ರಾಮಗಳನ್ನು ಸುತ್ತಿ ಜನರಿಗೆ ಬೋಧಿಸುವರು ಇವರು ಸಹಾಯಕ್ಕಾಗಿ ಮಾಯಾಲಾಂದ್ರದ ಪ್ರದರ್ಶನವನ್ನಿಟ್ಟಿರುವರು ಅಲ್ಲದ ಹರಿಕೀರ್ತನೆ ಪ್ರವೀಣೆಯಾದ ರಾಜ ಕುಮಾರಿ ನಂದಾರ್ ಪ್ರ ಪಂತರು ನಿರಕ್ಷರತೆಯ ವಿಚಾರದ ತಮ್ಮ ಅಮೋಘ ಕೀರ್ತನೆಗಳಿಂದ ಜನರಲ್ಲಿ ಹುರಿದುಂಬಿಸುತ್ತಿರುವರು ಹರಿಕೀರ್ತನೆಯು ಮತ್ತು ಮಾಯಾಲಾಂದ್ರ ಪ್ರದರ್ಶನದ ಮುಖ್ಯ ಸಂಗತಿಯೆಂದರೆ ವಿದ್ಯಾ ಪ್ರಸಾರ ಮತ್ತು ಅವಿದ್ಯಾವಂತರಿಂದಾಗುವ ಹಾನಿ ಅನೇಕ ಸ್ವಯಂಸೇವಕರು ಇವರನ್ನು ಹಿಂಬಾಲಿಸಿ ಗ್ರಾಮ ಗ್ರಾಮಾಂತರಗಳಲ್ಲಿ ಶ್ರಮಿಸುತ್ತಿರುವರು ಈ ಪ್ರಚಾರದ ಪರಿಣಾಮದಿಂದಾಗಿ ಅನೇಕ ಜನರು ಸ್ವಯಂಸೇವಕರಾಗಿ ದಿನೇ ದಿನೇ ಸೇರುತ್ತಿರುವರು ಪ್ರತಿ ಗ್ರಾಮದಲ್ಲಿಯೂ ಈ ವಾಲಂಟೀಯರುಗಳು ಅಲ್ಲಿಯ ವಿದ್ಯಾವಂತರನ್ನು ಕರೆಸಿ ಅವರಿಗ ನಿರಕ್ಷರತೆಯ ನಿವಾರಣೆಗ ಕಂಕಣಬದ್ಧರಾಗಲು ಬೋಧಿಸುವರು ಕಳೆದ ಒಂದು ತಿಂಗಳಿನಿಂದ ಈ ಪ್ರಚಾರದಿಂದಾಗಿ 4 ಸಾವಿರ ಜನರು ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿರುವರು. ಸ್ವಯಂ ಸೇವಕರ ತಂಡವು ದಿನೇ ದಿನೇ ಬೆಳೆಯುತ್ತಿದೆ

ಪ್ರತಿ ಗ್ರಾಮಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಿಂದ ಬರೆಯಲ್ಪಟ್ಟ ಅಕ್ಷರ ಮಾಲೆಯ ಬೋರ್ಡುಗಳು ಕಂಡು ಬರುವವು. ಪ್ರತಿ ಗ್ರಾಮಗಳ ಸಾಯಂಕಾಲದಲ್ಲಿನ ಆ ವಾತಾವರಣವು ಉತ್ಸಾಹ ಮತ್ತು ಹುರುಪಿನಿಂದ ಕೂಡಿರುವದು. ಪ್ರಥಮದಲ್ಲಿ ರೈತರು ಸ್ವಯಂ ಸೇವಕರ ಈ ಪ್ರಯತ್ನದಲ್ಲಿ ನಂಬಿಕೆಯನ್ನಿಟ್ಟಿರಲಿಲ್ಲ. ಆದರೆ ಕ್ರಮೇಣ ಅವರಲ್ಲಿ ಈಗ ನಂಬಿಗೆಯು ಉತ್ಪನ್ನವಾಗಿ ಹೊಸ ಹುರುಪನ್ನು ಉದ್ರೇಕಗೊಳಿಸಿದೆ. ಸ್ವಯಂ ಸೇವಕರ ಕಾರ್ಯವು ಈಗ ಸುಲಭವಾಗಿ ಮುಂದರಿಯುತ್ತಿದೆ. ಪ್ರೀತಿ ಮತ್ತು ಅವಿಚಲ ಪ್ರಯತ್ನವು ಕಡೆಯಲ್ಲಿ ಜಯಹೊಂದುವುದು ಎಂಬುವುದರಲ್ಲಿ ಸಂದೇಹವಿಲ್ಲ.

ಯೂರೋಪಿನ ರಾಜಕೀಯ ರಂಗ.

ಸಣ್ಣ ರಾಷ್ಟ್ರಗಳಿಗೆ ಸಹಾಯ ಮಾಡುವೆವೆಂಬ ಬ್ರಿಟನ್-ಫ್ರಾನ್ಸ್‌ಗಳ ಉಪಕಾರ. ಅಂತರಾಷ್ಟ್ರೀಯ ಒಪ್ಪಂದಕ್ಕೆ ಸರ್ವಾಧಿಕಾರಿಗಳ ಧಿಕ್ಕಾರ. ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರಷ್ಯಾದ ಸಹಕಾರ. ಬಲ್ಗೇರಿಯಾದಲ್ಲಿ ನಾಜಿಗಳ ಬಹಿಷ್ಕಾರ. ತಮ್ಮ ರಾಷ್ಟ್ರಕ್ಕಾಗಿ ರಷ್ಯಾಕ್ಕೆ ರಸ್ತೆ ಕೊಡುವ ರೊಮೇನಿಯನರ ನಿರ್ಧಾರ. ಇದನ್ನು ಖಂಡಿಸಿ ಜರ್ಮನಿಯು ತೆಗೆಯುತ್ತಿರುವ ಉದ್ಗಾರ. ಸರ್ವಾಧಿಕಾರಿಗಳ ಮುಂದಿನ ಫಲಾಹಾರಕ್ಕೆ ನಕಾರ. ಇಂದಿಗೆ ಪ್ರಧಾನ ಸಮಸ್ಯೆಯಾಗಿರುವ ಯುರೋಪಿನ ವಿಚಾರ. ಪ್ರಜಾಪ್ರಭುತ್ವ ರಾಷ್ಟ್ರಗಳ ಹಾಹಾಕಾರ.

ಈ ವರೆಗಿನ ಮಧ್ಯ ಯೂರೋಪದ ರಾಜಕೀಯ ಗೊಂದಲದಲ್ಲಿ, ಜರ್ಮನಿಯು ಬಾಯಲ್ಲಿ ಶಾಂತಿ, ಶಾಂತಿ ಎನ್ನುತ್ತಾ ಮತ್ತಾವ ವಿಚಾರವನ್ನೇ ಬಾಯಲ್ಲಿ ಆಡದೆ ರಾಷ್ಟ್ರಗಳನ್ನು ನುಂಗುವ ಬಕಾಸುರನಂತೆ ವರ್ತಿಸಿತು. ಯಾವ ರಾಷ್ಟ್ರಗಳಿಗೂ ಅರಿವಾಗದಂತೆ ಒಡನೆ ಬಡ ರಾಷ್ಟ್ರಗಳ ಮೇಲೆ ಬಿದ್ದು, ಬೇರೆ ರಾಷ್ಟ್ರಗಳು ಎಚ್ಚೆತ್ತು ನಿಲ್ಲುವಷ್ಟರಲ್ಲಿ ಅದನ್ನು ಜೀರ್ಣಿಸಿಕೊಂಡುಬಿಟ್ಟು ನಂತರ ಬಾಯಲ್ಲಿ ಶಾಂತಿ ಸಾಧನೆಯ ಮಾತುಗಳ ಸುರಿಮಳೆಯನ್ನು ಸುರಿಸುವದು ಜರ್ಮನಿಯ ಭಾಗ್ಯವಿಧಾತ ಹಿಟ್ಲರನದೊಂದು ಉಪಾಯ. ಆದರೆ ಅವನ ಸ್ನೇಹಿತನಾದ ಇಟಲಿಯ ಮುಸಲೋನಿಯು ತುಂಬಾ ಸಂಭಾವಿತನು. ತನಗೆ ಬೇಕಾದ್ದನ್ನು ಕೇಳದೆ ಕೈನೀಡನು. ಎಂಬ ಭರವಸೆಯು ಜಗತ್ತಿನ ರಾಷ್ಟ್ರಗಳಿಗೆಲ್ಲಾ ಇತ್ತು. ಆದರೆ ಕಳೆದ ವಾರದಲ್ಲಿ ಇಡೀ ಜಗತ್ತಿನ ರಾಷ್ಟ್ರಗಳು ವಿಸ್ಮಯಗೊಳ್ಳುವಂತೆ ಇಟಲಿಯು ಬಡ ರಾಷ್ಟ್ರ ಆಲ್ಬೇನಿಯಾದ ಮೇಲೆ ಬಿದ್ದು ತನ್ನ ವಿಜಯ ಪತಾಕೆಯನ್ನು ಅಲ್ಲಿ ಏರಿಸಿತು. ಇವರಿಂದ ತಮ್ಮ ತಮ್ಮ ದಿನಚರ್ಯೆಯಲ್ಲಿ ನಿರತವಾಗಿದ್ದ ರಾಷ್ಟ್ರಗಳು ಎಚ್ಚೆತ್ತು ಮುಂದೆ ಬಂದವು. ಅಷ್ಟರಲ್ಲಿ ಆಲ್ಬೇನಿಯಾವು ಮುಸಲೋನಿಯ ಕಂಠದ ಕೆಳಗೆ ಇಳಿದಿತ್ತು.

ಕೈಯಲ್ಲಿ ಮಾಡದಿದ್ದರೂ ಬಾಯಿಮಾತಿನಲ್ಲಿ ಪೌರೋಹಿತ್ಯ ನಡೆಸಿ ಬದುಕಿ ಬಾಳುತ್ತಿರುವ ಪ್ರಜಾಸತ್ತಾತ್ಮಕ ರಾಷ್ಟ್ರಗಳೆನಿಸಿದ ಬ್ರಿಟನ್ ಮತ್ತು ಫ್ರಾನ್ಸು ಈ ವರೆಗೆ ಹಿಟ್ಲರನು ಒಂದು ಕಡೆ, ಮುಸಲೋನಿಯು ಮತ್ತೊಂದೆಡೆ ಮಾಡಿದ ಕೃತ್ಯಗಳನ್ನು ಕೂಲಂಕುಶವಾಗಿ ವಿಚಾರಿಸಿ, ಕಣ್ಮುಚ್ಚಿ ನೋಡಿ ತಮ್ಮ ಆ ಗೊಡ್ಡು ಬೆದರಿಕೆಗಳನ್ನು ಅದೆಷ್ಟೋ ಬಾರಿ ಹಾಕಿದ್ದವು. ಅದೆಷ್ಟೋ ಬಾರಿ ನಿರ್ಬಲ ಹಾಗೂ ಅತೀವ ಬಡ ರಾಷ್ಟ್ರಗಳ ಹಿತಚಿಂತಕರಂತೆ ವರ್ತಿಸಿ ಅವುಗಳನ್ನು ಬಲಿ ಇಕ್ಕಿದ್ದುಂಟು. ಆದರೆ ಈಗ ತಮ್ಮ ಈ ಗೊಡ್ಡು ಬೆದರಿಕೆಯಿಂದ ಪ್ರಯೋಜನವಿಲ್ಲವೆಂದೂ, ದಿನೇ ದಿನೇ ಪ್ರವರ್ಧಮಾನರಾಗಿ ಬೆಳಗುತ್ತಿರುವ ಸರ್ವಾಧಿಕಾರಿಗಳ ಉಪಟಳದಿಂದ ತಮ್ಮನ್ನು ಕಾಪಾಡಿಕೊಳ್ಳುವ ಬಗ್ಗೆ ಒಂದು ನಿಶ್ಚಿತ ಯೋಜನೆ ಮಾಡದಿದ್ದರೆ ತಮಗೆ ಗತ್ಯಂತರವಿಲ್ಲವೆಂಬೂ ತಿಳಿಯಿತು. ಆದುದರಿಂದಲೇ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಚೆಂಬರ್ಲೇನರು ಫ್ರಾನ್ಸು ಮತ್ತು ಬ್ರಿಟನಿನೊಳಗಿರುವ ಐಕ್ಯತೆಯನ್ನು ಪುಷ್ಟೀಕರಿಸಿ ಮಧ್ಯಯುರೋಪದಲ್ಲಿಯ ಸರ್ವಾಧಿಕಾರಿಗಳ ಮುಂದಿನ ಅನಾಚಾರಗಳನ್ನು ತಾವು ಸಹಿಸೆವೆಂದೂ, ಗ್ರೀಸ್ ಮತ್ತು ರುಮೇನಿಯಾ ಪ್ರಾಂತ್ಯಗಳಿಗೆ ಈ ಸರ್ವಾಧಿಕಾರಿಗಳ ಉಪಟಳದಿಂದ ಅವನ್ನು ರಕ್ಷಿಸುವ ಭರವಸೆಯನ್ನೂ ಕೊಟ್ಟರು. ತಮ್ಮ ಆತ್ಮ ಸಂರಕ್ಷಣೆಯ ಬಗ್ಗೆ ಅವರು ಈಗ ಸಕಲ ಸರಂಜಾಮುಗಳನ್ನೂ ಸಿದ್ಧಗೊಳಿಸುತ್ತಿರುವರು. ಒಂದೆಡೆ ರಷ್ಯಾದೊಡನೆ ಸಖ್ಯ ಬೆಳೆಸಲು ಪ್ರಯತ್ನಿಸುತ್ತಿರುವರು. ಬ್ರಿಟಿಷ್ ಪ್ರಧಾನರಾದ ಚೆಂಬರ್ಲೇನರು ಒಡನೆ ತಮ್ಮ ಧೋರಣೆಯನ್ನು ವಿಶದಪಡಿಸುವ ವಿಚಾರ ಒಂದು ಭಾಷಣಮಾಡಲಿರುವರಂತೆ. ಬ್ರಿಟಿಷ್ ಮತ್ತು ಫ್ರೆಂಚರು ಪೋಲೆಂಡಿಗೂ ಮತ್ತು ರುಮೇನಿಯಾಕ್ಕೂ ಸಂಕಷ್ಟದಲ್ಲಿ ತಮ್ಮ ಸಹಾಯವನ್ನು ನೀಡುವೆವೆಂದು ಕೊಟ್ಟ ಭರವಸೆಯು ರಷ್ಯಾದಿಂದ ಶ್ಲಾಘಿಸಲ್ಪಟ್ಟಿದೆ. ಮಧ್ಯಯೂರೋಪಿನಲ್ಲಿ ಇನ್ನುಮುಂದೆ ಸರ್ವಾಧಿಕಾರಿಗಳು ಅತ್ಯಾಚಾರವನ್ನು ಕೈಕೊಂಡರೆ ಅದನ್ನು ತಡೆಗಟ್ಟಲು ರಷ್ಯಾದ ಸಹಾಯವನ್ನು ಅಲ್ಲಿಯ ರಾಷ್ಟ್ರಗಳು ಆಶಿಸಿವೆ. ಟರ್ಕಿಯು ರಷ್ಯಾದ ಸಹಾಯವನ್ನು ಬೇಡಿದೆ. ಬ್ರಿಟನು ಟರ್ಕಿಯೊಡನೆ ಒಪ್ಪಂದ ಮಾಡಿಕೊಂಡು ಟರ್ಕಿಯನ್ನು ಸ್ನೇಹಭಾವದಿಂದ ಕಾಣುವ ಯೋಚನೆ ಮಾಡಿದೆ.

ಈ ಮಧ್ಯೆ ಭೂಮಧ್ಯ ಸಮುದ್ರದ ಸುತ್ತಲಿನ ರಾಷ್ಟ್ರಗಳಲ್ಲಿ ಕೋಲಾಹಲವೆದ್ದಿದೆ. ಇಟಲಿ ಸೈನ್ಯವು ಸ್ಪೈಯಿನಿಗೆ ಹೋಗುತ್ತಿದೆ. ಜನರಲ್ ಫ್ರಾಂಕೋವಿನ ಸೈನ್ಯ ಸಾಮಗ್ರಿಗಳನ್ನು ಸ್ಪೈಯಿನಿನ ಮೊರಾಕೋ ಪಟ್ಟಣಕ್ಕೆ ಸಾಗಿಸುತ್ತಿರುವನು. ಬ್ರಿಟಿಷರು ಜಿಬ್ರಾಲ್ಟರ್ ಜಲಸಂಧಿನ್ನು ಭದ್ರಪಡಿಸುತ್ತಿರುವರು. ಫ್ರೆಂಚರು ಫ್ರೆಂಚ್ ಮೊರಾಕೋವನ್ನು ಹಿಡಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವರು. ಭೂಮಧ್ಯ ಸಮುದ್ರದಲ್ಲಿರುವ ಟೇಂಜೀಯರ್ ಎಂಬ ಪ್ರಾಂತ್ಯವನ್ನು ವಶಪಡಿಸಿಕೊಳ್ಳುವ ಬಗ್ಗೆ ಸರ್ವಾಧಿಕಾರಿಗಳು ಪ್ರಯತ್ನಿಸುತ್ತಿರುವರು. ಈ ಪ್ರಾಂತ್ಯವು ಭೂಮಧ್ಯ ಸಮುದ್ರದಲ್ಲಿರೋಣಾದ್ದರಿಂದ ಇದಕ್ಕೆ ಅಂತರರಾಷ್ಟ್ರೀಯ ವ್ಯಾಪಾರದ ಹಾಗೂ ರಾಜಕೀಯದ ದೃಷ್ಟಿಯಲ್ಲಿ ತುಂಬಾ ಪ್ರಾಮುಖ್ಯತೆ ಇದೆ. ಸರ್ವಾಧಿಕಾರಿಗಳು ಈ ಪ್ರಾಂತ್ಯದ ಮೇಲೆ ಕೈಮಾಡಿದರೆ ಈ ಮೊದಲಿನ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮುರಿದಂತಾಗುವುದರಿಂದ ಬ್ರಿಟನ್ ಮತ್ತು ಫ್ರಾನ್ಸು ಸರ್ವಾಧಿಕಾರಿಗಳ ಅಂಥಾ ವರ್ತನೆಯನ್ನು ಮೊಳಕೆಯಲ್ಲೇ ಮುರಿದು ಹಾಕುವ ಯೋಚನೆ ಮಾಡುತ್ತಿರುವವು.

ಈ ಕಡೆ ರೊಮೇನಿಯಾವು ಬಿಕ್ಕಟ್ಟಿನ ಸಂದರ್ಭದಲ್ಲಿ ರಷ್ಯಾದ ಸೈನ್ಯವು ತನ್ನ ಪ್ರಾಂತ್ಯದ ಮಧ್ಯಕ್ಕಾಗಿ ದಾಟಬಹುದೆಂದು ಒಪ್ಪಿಗೆಯನ್ನಿತ್ತಿರುವುದರಿಂದ ಜರ್ಮನಿಯು ತುಂಬಾ ಉದ್ರೇಕಗೊಂಡಿದೆ. ವಿವಿಧ ವಿಧಾನದ ಪ್ರಚಾರ ಕಾರ್ಯವನ್ನು ಕೈಗೊಂಡು ಜರ್ಮನಿಯು ಜನರಲ್ಲಿ ಮನಃಕಷಾಯ ಹುಟ್ಟಿಸುತ್ತಿದೆ.

ಜಿಬ್ರಾಲ್ಟರ್ ಜಲಸಂಧಿನಲ್ಲಿ ಫ್ರೆಂಚರ ಒಂದು ದೊಡ್ಡ ಹಡಗುಪಡೆಯು ತಯಾರಾಗಿ ನಿಂತಿರುವುದು. ಬ್ರಿಟಿಷರ ಕೆಲವು ಹಡಗುಗಳೂ ಇರುವುವು. ಅವರ ಮುಖ್ಯ ಪಡೆಯು ಮಾಲ್ಟಾ ದ್ವೀಪದಲ್ಲಿ ತಯಾರಾಗಿ ನಿಂತಿರುವದಾಗಿ ತಿಳಿದುಬಂದಿದೆ. ಅಂತೂ ಸದ್ಯಕ್ಕೆ ಬ್ರಿಟನ್ ಫ್ರಾನ್ಸುಗಳು ಒಂದಾಗಿ ವಿಮಾನ ಬಲವನ್ನು ನಡೆಸುವ ಯೋಜನೆಯು ನಡೆದಿದೆ. ಟರ್ಕಿಯು ಎಲ್ಲಾ ಸಮಯದಲ್ಲಿಯೂ ಬ್ರಿಟಿಷ್ ಮತ್ತು ಫ್ರೆಂಚರಿಗೇ ಸಹಾಯ ಮಾಡಬಹುದೆಂದು ನಿರೀಕ್ಷಿಸಲಾಗಿದೆ. ರುಮೇನಿಯಾ ಪೋಲೇಂಡ್ ಹಾಗೂ ಯುಗುಸ್ಲೋವಾಕಿಯಗಳಿಗೆ ಈ ಪ್ರಜಾಪ್ರಭುತ್ವ ರಾಷ್ಟ್ರಗಳ ಸಹಾಯ ಭರವಸೆಯಿಂದ ಸಂತೋಷವಾಗಿದೆ. ಹಿಟ್ಲರ್ ಮುಸಲೋನಿಗಳು ಯೂರೋಪಿನ ನಾನಾ ರಾಷ್ಟ್ರಗಳನ್ನು ಯೋಚಿಸಿ ಕನವರಿಸುತ್ತಿರುವರು. ಬಲ್ಗೇರಿಯಾದಲ್ಲಿ ಅಲ್ಲಿಯ ನಾಜಿಗಳ ಬಹಿಷ್ಕಾರ, ಫ್ರಾನ್ಸ್ ಮಂತ್ರಿಮಂಡಲದ ಯುದ್ಧ ತಯಾರಿಯ ನಿರ್ಧಾರ, ಇತ್ತ ಜರ್ಮನಿಯು ಪೋಲೇಂಡಿನವರಿಗೆ ಘೋಷಿಸುತ್ತಿರುವ ಉದ್ಗಾರ, ಇದಕ್ಕೆ ಮರುತ್ತರವಾಗಿ ಅವರಿತ್ತಿರುವ ನಕಾರ, ಇದಿಷ್ಟು ಯಾವ ರೀತಿಯಿಂದ ಹೇಗೆ ತೀರ್ಮಾನಿಸಲ್ಪಡುವುದೆಂಬುದು ಮನಸಿಗೆ ಬಾರದ ವಿಚಾರ.

ಈ ವರೆಗೇನೋ ಉಳಿದ ರಾಷ್ಟ್ರಗಳು ನಿದ್ರೆಯಲ್ಲೋ ಎಂಬಂತೆ ಕನವರಿಸುತ್ತಿದ್ದಾಗ ಇಟಲಿ ಜರ್ಮನಿಗಳು ತಮ್ಮ ಫಲಾಹಾರವನ್ನು ನಿರ್ವಿಘ್ನವಾಗಿ ಪೂರೈಸಿದುವು. ಆದರೆ ಈಗ ಬ್ರಿಟಿಷರು ಎಚ್ಚೆತ್ತು ಅವರ ನೌಕಾದಳವು ಭೂಮಧ್ಯ ಸಮುದ್ರದಲ್ಲಿ ಭರದಿಂದ ಓಡುತ್ತಿರುವುದು. ಫ್ರಾನ್ಸು ಯುದ್ಧಕ್ಕೆ ಸರ್ವಸನ್ನಾಹನಾಗಿ ನಿಂತಿದೆ. ಉಳಿದ ರಾಷ್ಟ್ರಗಳೂ ಎಚ್ಚೆತ್ತು ತಯಾರಾಗುತ್ತಿವೆ. ಅಂದಮೇಲೆ ಈ ವರೆಗೆ ಯಾವ ಖರ್ಚಿಲ್ಲದ ನಿರಾಯಾಸವಾಗಿ ಫಲಹಾರ ಮಾಡಿದಂತೆ ಆಗುತ್ತದೆಯೇನು? ಸರ್ವಾಧಿಕಾರಿಗಳ ಮುಂದಿನ ಫಲಾಹಾರದ ಯೋಚನೆಯು ಹೇಗಿದೆಯೋ? ಅದು ಹೇಗೆ ನಡೆಯುವುದೋ? ಬ್ರಿಟನ್ ಮತ್ತು ಫ್ರಾನ್ಸು ತಮ್ಮ ಮರೆಹೊಕ್ಕ ರಾಷ್ಟ್ರಗಳನ್ನು ಹೇಗೆ ರಕ್ಷಿಸುವವೋ? ಇವೆಲ್ಲಾ ಕಾಲ ಗರ್ಭದಲ್ಲಡಗಿರುವ ವಿಚಾರಗಳು.

ಜಾತಿ ಪರೀಕ್ಷೆ.

ಉತ್ತರ ಜರ್ಮನಿಯ ಮೆಕ್‌ಲೆನ್‌ಬರ್ಗ್ ಎಂಬ ಪ್ರಾಂತ್ಯದ ಪ್ರಜೆಗಳೆಲ್ಲರನ್ನು ಎಕ್ಸ್‌ರೇ ಪರೀಕ್ಷೆಗೆ ಗುರಿಪಡಿಸಲಾಗುವದು. ಈ ಕೆಲಸ ನಡೆಸುವವರು ಶುದ್ಧ ಜರ್ಮನರು ತಾವೆಂದು ಹೇಳಿಕೊಳ್ಳುವ ನಾಜಿಕಪ್ಪಂಗಿ ಸೈನಿಕರು. ಈ ಪರೀಕ್ಷೆಯನ್ನು ಪ್ರೊಫೆಸರ್ ಡಾ. ಹೊಲ್‌ಫೆಲ್ಡರ್‌ರವರು ಫ್ರೆಂಕ್‌ಫರ್ಟ್ ವಿಶ್ವವಿದ್ಯಾನಿಲಯದಲ್ಲಿ ನಡೆಸಲಿರುವರು. ಧರ್ಮದ ನೈಜ ಅರ್ಥವನ್ನರಿಯದ ಮೌಢ್ಯದಿಂದ ಕೆಕ್ಕರಿದ ನಮ್ಮ ಭಾರತ ಭೂಮಿಯಲ್ಲಿ ಇದು ಮೊದಲು ಸಾಗಬೇಡವೇ? ಏಕ ಪತ್ನಿನಿಷ್ಠ ಮತ್ತು ಮಹಾ ಪತಿವ್ರತೆ ಎಂದೆನ್ನುವ ಮಾನವರಿಗೂ ಸಹ ಇಂಥಾ ಒಂದು ಎಕ್ಸರೆ ಕಂಡುಹಿಡಿದಿದ್ದರೆ ಅದೆಷ್ಟೋ ಒಳ್ಳೆಯದಿತ್ತಲ್ಲವೇ?

—:o:—

ಸ್ವಯಂ ಸೇವಕರು ಮತ್ತು ವಿದ್ಯಾಬೋರ್ಡ್ ಕೈಕೊಂಡ ಕಾರ್ಯವು ಮಹತ್ವವಾದದ್ದು. ಇಂಥಾ ಕಷ್ಟತಮವಾದ ಕಾರ್ಯದ ಫಲವೂ ತುಂಬಾ ಶ್ಲಾಘನೀಯವಾದದ್ದೇ ಹೌದು. ಈ ಸ್ವಯಂ ಸೇವಕರ ಮತ್ತು ನಿರಕ್ಷರತಾ ನಿವಾರಣಾ ಬೋರ್ಡಿನ ಶ್ರಮದ ಪ್ರತಿಫಲವನ್ನು ಇಲ್ಲಿ ಕೊಡಲಾಗಿದೆ. ಔಂಧ್ ಪಟ್ಟಣದಲ್ಲಿ 600 ಜನರು, ಔಂಧ್ ತಾಲೋಕಿನಲ್ಲಿ 3 ಸಾವಿರ ಜನರು, ಕುಂದಾಲ್ ಟೌನ್ 400 ಜನರು, ಕುಂದಾಲ್ ತಾಲೋಕಿನಲ್ಲಿ 3 ಸಾವಿರ ಜನರು, ಅಟ್‌ಪಾಡಿ ತಾಲೋಕು 300 ಮತ್ತು ಅಟ್‌ಪಾಡಿ ತಾಲೋಕಿನಲ್ಲಿ 6 ಸಾವಿರ ಜನರು ಓದು ಬರಹ ಕಲಿತಿರುವರು. ಆದ್ದರಿಂದ ಸಂಸ್ಥಾನದಲ್ಲಿಯ ವಿದ್ಯಾವಂತರ ಸಂಖ್ಯೆಯು 12 ಸಾವಿರದಿಂದ ಹೆಚ್ಚಿದಂತಾಯಿತು. ಅಂದರೆ ಅಲ್ಲಿಯ ವಿದ್ಯಾಭ್ಯಾಸವು ಶೇಕಡ 50 ಕ್ಕೆ ತಲುಪಿರುವದು.

ಕೊಡಗು

ಏಪ್ರಿಲ್ ತಾರೀಖು ೨೧ ನೇ ಶುಕ್ರವಾರ ೧೯೩೯.

ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ಸರ್ಕಾರದ ಸಹಾಯ.

ಕೊಡಗಿನ ಸಹಕಾರಿ ಸಂಸ್ಥೆಗಳಿಗೆ ಕೇಂದ್ರಸ್ಥಾನವು ಸಹಕಾರಿ ಸೆಂಟ್ರಲ್ ಬ್ಯಾಂಕು ಆಗಿದೆ. ಹಳ್ಳಿಗಳಲ್ಲಿಯೂ ಹಾಗೂ ಶಹರುಗಳಲ್ಲಿಯೂ ಇರುವ ಸಹಕಾರಿಗಳಿಗೆ ಅವರವರ ಸಂಘಗಳ ಮೂಲಕ ಸಾಲಗಳನ್ನು ಹಂಚುತ್ತಿರುವ ಸಂಸ್ಥೆಯು ಇದೊಂದೇ ಆಗಿದೆ. ಕಳೆದ ವರ್ಷ ಈ ಬ್ಯಾಂಕಿನ ಸುಮಾರು ರೂ. 43,000 ಠೇವಣಾತಿ ಇಡಲ್ಪಟ್ಟಿದ್ದ ತಿರುವಾಂಕೂರು ನೇಶನಲ್ & ಕೊಯಿಲನ್ ಬ್ಯಾಂಕಿನ ಮುಚ್ಚುವಿಕೆಯಿಂದ ಈ ಬ್ಯಾಂಕಿಗೆ ತಗಲಿದ ಧಕ್ಕೆಯಿಂದಲೂ, ಪಬ್ಲಿಕಿನವರಿಗೆ ಎಲ್ಲಾ ಬ್ಯಾಂಕುಗಳ ಮೇಲೆ ವಿಶ್ವಾಸ ಕಡಿಮೆಯಾಗಿ ಠೇವಣಾತಿಗಳು ಬರುವದು ಕಡಿಮೆಯಾದದ್ದರಿಂದಲೂ, ಕೆಲವು ಸಮಯದ ವರೆಗೆ ಸಹಕಾರಿ ಸಂಘಗಳಿಗೆ ಬೇಕಾದ ಹಾಗೆ ಈ ಬ್ಯಾಂಕಿನಿಂದ ಸಾಲ ಕೊಡಲು ಸಾಧ್ಯವಾಗಲಿಲ್ಲ. ಇದರಿಂದ ಗ್ರಾಮಗಳಲ್ಲಿರುವ ಸಹಕಾರಿಗಳಲ್ಲಿ ಹಾಹಾಕಾರವಿದ್ದಿತ್ತು. ಹಲವರಿಗೆ ನಿರಾಶೆ ಉಂಟಾಗಿತ್ತು. ಆಗ್ಯೆ ಈ ಬ್ಯಾಂಕಿಗೆ ಸರ್ಕಾರದಿಂದ ಹಣದ ಸಹಾಯವೇನೂ ದೊರೆಯಲಿಲ್ಲವಾದರೂ ಇದು ತನ್ನ ಕಾರ್ಯಕಲಾಪಗಳನ್ನು ನಿರ್ವಿಘ್ನವಾಗಿ ನಡಿಸಿಕೊಂಡು ಬಂತು. ಇದನ್ನು ನೋಡಿ ಕೆಲವು ಮಹನೀಯರು ಮತ್ತು ಬ್ಯಾಂಕಿನ ಮಾಜಿ ಡೈರೆಕ್ಟರುಗಳಲ್ಲಿ ಕೆಲವರು ಬ್ಯಾಂಕಿನ ಕಳೆದ ಚುನಾವಣೆಯಲ್ಲಿ ಅಪಜಯ ಹೊಂದು ಕಾರಣದಿಂದಲೋ ಏನೋ ಈ ಬ್ಯಾಂಕು ಭದ್ರವಾಗಿಲ್ಲವೆಂದು ಮುಂತಾಗಿ ಅಪಪ್ರಚಾರ ಮಾಡತೊಡಗಿದರು. ಕೆಲವರು ತಮ್ಮ ಠೇವಣಾತಿಯನ್ನೂ ಕೂಡ ವಾಪಸು ತೆಗೆದುಕೊಂಡರು. ಆದರೂ ಕೂಡ ಇದು ದೇಶದ ಸಾವಿರಗಟ್ಲೆ ಸಹಕಾರಿಗಳ ಬೆಂಬಲದಿಂದಲೂ, ಸಹಕಾರಿ ಇಲಾಖೆಯವರ ಸಹಾಯದಿಂದಲೂ ತನ್ನ ಕಾರುಬಾರುಗಳನ್ನು ಎಂದಿನಂತೆ ನಡಿಸುತ್ತಾ ಬರುತ್ತಿರುವುದು ಸ್ತೋತ್ರಾರ್ಹವಾಗಿದೆ.

ಬ್ಯಾಂಕಿನ ನಿಜಸ್ಥಿತಿಯನ್ನು ಅಧಿಕಾರಿಗಳಿಗೆ ಮುಂದಟ್ಟು ಮಾಡಿ, ಗ್ರಾಮವಾಸಿಗಳಾದ ವ್ಯವಸಾಯಗಾರರ ಸಾಲ ನಿವಾರಣೆ ಬಗ್ಗೆ ಹಣ ಒದಗಿಸಿಕೊಡಲು ಸರ್ಕಾರದಿಂದ ದ್ರವ್ಯ ಸಹಾಯ ಪಡೆಯಲಿಕ್ಕಾಗಿಯೂ, ಸಹಕಾರಿ ಚಳವಳಕ್ಕೆ ಸರ್ಕಾರದವರು ಸಾಕಷ್ಟು ಉತ್ತೇಜನ ಕೊಡುತ್ತಿಲ್ಲವೆಂಬದನ್ನು ಅವರಿಗೆ ತಿಳಿಸಿ ಕೊಡಲಿಕ್ಕಾಗಿಯೂ, ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಡೆಪ್ಯುಟೇಶನೊಂದು ಈ ತಾ. 17ರಲ್ಲಿ ಚೀಫ್ ಕಮಿಶನರವನ್ನು ಮಡಿಕೇರಿಯಲ್ಲಿ ಭೇಟಿ ಮಾಡಿತೆಂದು ತಿಳಿಯಬರುತ್ತದೆ. ಇವರು ಮಾಡಿದ ಕೆಲವು ಮುಖ್ಯ ಕೋರಿಕೆಗಳನ್ನು ಮಾತ್ರ ಕುರಿತು ಇಲ್ಲಿ ಬರೆಯಬೇಕಾಗಿದೆ.

ರೈತರ ಸಾಲವು ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ. ಇದನ್ನು ನಿವಾರಣೆ ಮಾಡುವ ಏರ್ಪಾಡನ್ನು ಸರ್ಕಾರದವರು ಇನ್ನೂ ಮಾಡದಿರುವದು ಶೋಚನೀಯ. ಈ ವರ್ಷ ಅವರು ವ್ಯವಸಾಯಗಾರರಿಗೆ ಸಾಲ ತೀರಿಸಲು ಕೊಟ್ಟ ಅರ್ಧ ಲಕ್ಷ ರೂಪಾಯಿ ಸಾಲವು ಎಲ್ಲಿಗೂ ಸಾಲದ್ದಾಗಿದೆ. ಸೆಂಟ್ರಲ್ ಬ್ಯಾಂಕಿನವರು ಜಮ್ಮದ ಭೂಮಿಗೆ ಧಕ್ಕೆ ತಗಲದಂತೆ ರೈತರ ಸಾಲ ತೀರಿಸುವ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ. ಆದರೆ ಅದಕ್ಕೆ ಸಾಕಷ್ಟು ಹಣವು ಬ್ಯಾಂಕಿನಲ್ಲಿಲ್ಲ. ಆದಕಾರಣ ಇಂಡಿಯಾ ಸರ್ಕಾರದಿಂದ ವರ್ಷ ಒಂದರ ಒಂದು ಲಕ್ಷ ರೂಪಾಯಿಯು ದೀರ್ಘ ಕಂತಿನ ಸಾಲವನ್ನು $3\frac{1}{2}\%$ ಬಡ್ಡಿಯಲ್ಲಿ ಈ ಬ್ಯಾಂಕಿಗೆ ಕೊಡಿಸಿಕೊಡಬೇಕೆಂದು ಸ್ಥಳೀಕ ಸರ್ಕಾರವನ್ನು ಕೇಳಿಕೊಂಡದ್ದು ನ್ಯಾಯವಾಗಿದೆ. ಕೊಡಗಿನ ಸರ್ಕಾರವು ಇಲ್ಲಿಯ ಸಹಕಾರಿ ಚಳವಳಕ್ಕೆ ಕೊಟ್ಟಂಥಾ ದ್ರವ್ಯ ಸಹಾಯವು ಬಹು ಅಲ್ಪವಾಗಿದೆ. ಕೊಡಗಿನ ಸಹಕಾರಿ ಸಂಘಗಳ ಮತ್ತು ಸೆಂಟ್ರಲ್ ಬ್ಯಾಂಕಿನ ಭಂಡವಾಳವು ಸುಮಾರು ರೂ. 20 ಲಕ್ಷದಷ್ಟಿದೆ. ಆದರೆ ಸರ್ಕಾರದವರು ಇಷ್ಟರ ವರೆಗೆ ಸಹಕಾರಿ ಸಂಸ್ಥೆಗಳಿಗೆ ಸಾಧಾರಣವ ಸಾಲವಾಗಿ ಸುಮಾರು 40 ಸಾವಿರ ಮತ್ತು ಛತ್ರದ ಸ್ಟೋರು ಕಟ್ಟಡಗಳಿಗಾಗಿ ಸುಮಾರು 30 ಸಾವಿರ, ಅಂತು ಒಟ್ಟು ಸುಮಾರು ರೂ. 70 ಸಾವಿರ ಸಾಲ ಕೊಟ್ಟಿರುವರು. ಸ್ಟೋರು ಕಟ್ಟಡಗಳಿಗಾಗಿ ಕೊಟ್ಟ ಸಾಲಗಳಿಗೆ ಆ ಕಟ್ಟಡಗಳ ಭದ್ರವಾದ ಈಡು ಇದೆ. ಇದನ್ನು ಬಿಟ್ಟರೆ ಸರ್ಕಾರದವರು ಕೊಟ್ಟಿರುವ ಸಾಲವು ದೇಶದ ಬಡ ಸಹಕಾರಿಗಳು ಹಾಕಿರುವ ಭಂಡವಾಳವ ಶೇಕಡ 2ರಷ್ಟು ಕೂಡ ಆಗುವದಿಲ್ಲ. ಅಂದ ಮೇಲೆ ಇಲ್ಲಿಯ ಸರ್ಕಾರದ ಸಹಾಯವು ಎಷ್ಟು ಅಲ್ಪವಾಗಿದೆಯೆಂಬುವುದು ವಿಶದವಾಗುತ್ತದೆ. ಬಂಗಾಳದ ಪ್ರಾಂತೀಕ ಸಹಕಾರಿ ಬ್ಯಾಂಕು ಕಿತ್ತನಾರು (ಜ್ಯೂಟ್) ಸಂಘಗಳಿಗೆ ಕೊಟ್ಟಿದ್ದ 24 ಲಕ್ಷ ರೂಪಾಯಿ, ಆ ಸಂಘಗಳ ಅಪಜಯದಿಂದ ನಷ್ಟವಾದ ಕಾರಣ, ಸರ್ಕಾರದವರು ಆ ನಷ್ಟವನ್ನು ಭರ್ತಿ ಮಾಡಲಿಕ್ಕಾಗಿ ವರ್ಷಂಪ್ರತಿ 2 ಲಕ್ಷದಂತೆ 12 ವರ್ಷಗಳ ವರೆಗೆ ಆ ಬ್ಯಾಂಕಿಗೆ ಉಚಿತಾರ್ಥ ದ್ರವ್ಯ ಸಹಾಯ ಮಾಡಲು ನಿಶ್ಚಯಿಸಿದೆ. ವಾಡಿಕೆಯಾಗಿ ಸಹಕಾರ ಚಳವಳದಲ್ಲಿ ಜನರು ಶೇಖರಿಸುವ ಬಂಡವಾಳದಷ್ಟೇ ಸರ್ಕಾರದವರೂ ಹಣ ಸಹಾಯ ಮಾಡಬೇಕಾಗಿದೆ. ಬೇರೆ ಪ್ರಾಂತ್ಯಗಳಲ್ಲಿ ಸರ್ಕಾರದವರು ಭೂಮಿ ಗಿರ್ವಿ ಬ್ಯಾಂಕುಗಳನ್ನು ಸ್ಥಾಪಿಸಿ, ಅವುಗಳಿಗೆ ತುಂಬಾ ಹಣ ಸಹಾಯ ಮಾಡುತ್ತಿರುವರು. ನಮ್ಮ ಇಲ್ಲಿ ಅಂಥಾ ಸಹಾಯವೇನೂ ಕೊಡುತ್ತಿಲ್ಲ. ಅಲ್ಲದೆ ಅಂಥಾ ಬ್ಯಾಂಕಿನ ಕೆಲಸವನ್ನು ಸೆಂಟ್ರಲ್ ಬ್ಯಾಂಕೇ ಮಾಡಬಹುದಾದ ಕಾರಣ ಸೆಂಟ್ರಲ್ ಬ್ಯಾಂಕಿಗೆ ದ್ರವ್ಯ ಸಹಾಯ ಕೊಡಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ. ಸೆಂಟ್ರಲ್ ಬ್ಯಾಂಕಿನವರು ಗ್ರಾಮ ಸಹಕಾರಿ ಸಂಘಗಳ ಮೂಲಕ ಅವುಗಳ ಮೆಂಬರುಗಳಿಗೆ ಕೊಡುವ ಸಾಲವು ಭೂಮಿ ಅಡಮಾನದ ಮೇಲೆ ಕೊಡಲ್ಪಡುವ ಕಾರಣ, ಸರ್ಕಾರವು ಬ್ಯಾಂಕಿಗೆ ಕೊಡುವ ಸಾಲದ ಭದ್ರತೆಯ ವಿಷಯ ಸ್ವಲ್ಪವೂ ಸಂಶಯಪಡಬೇಕಾಗಿಲ್ಲ.

ಸೆಂಟ್ರಲ್ ಬ್ಯಾಂಕಿನವರು ಸಂಘಗಳ ಮೇಲುಸ್ತುವಾರಿಯನ್ನು ನಡಿಸಲು ಸುಪರ್‌ವಿಜನ್ ಶಾಖೆಯೊಂದನ್ನು ಸ್ಥಾಪಿಸಿರುವರು. ಇದರ ಖರ್ಚಿಗಾಗಿ ಎಲ್ಲಾ ಸಂಘಗಳಿಂದಲೂ ಅವುಗಳ ಭಂಡವಾಳದ ಮೇಲೆ ಶೇಕಡ 12 ಆಣೆಯಂತೆ ಸುಪರ್‌ವಿಜನ್ ಫೀಸು ವಸೂಲ್ಮಾಡಲ್ಪಡುತ್ತಿದೆ. ಇದನ್ನು ಕೆಲವು ದೊಡ್ಡ ಸಂಘಗಳು ಸರಿಯಾಗಿ ಕೊಡುತ್ತಿಲ್ಲ. ಈಗ ಸರ್ಕಾರದವರು ಪಟ್ಣ ಸಂಘಗಳ ಮೇಲೆ ಆಡಿಟ್ ಫೀಸಿನ ಹೊರೆಯನ್ನೂ ಹಾಕಿರುವರು. ಈ ಎರಡು ತರದ ತೆರಿಗೆಯನ್ನು ಕೊಡಲು ಕೆಲವು ಸಂಘಗಳಿಗೆ ಕಷ್ಟಕರವಾಗಿ ಸುಪರ್‌ವಿಜನ್ ಫಂಡಿನ ವಸೂಲಾತಿಗೆ ಬಹು ತೊಂದರೆಯಾಗುತ್ತಿದೆ. ಆದಕಾರಣ ಸರ್ಕಾರದವರು ಆಡಿಟ್ ಫೀಸನ್ನು ವಜ ಮಾಡಬೇಕು; ಇದು ಸಾಧ್ಯವಿಲ್ಲವಾದರೆ ಅದರ ದರವನ್ನು ಬಹು ಮಟ್ಟಿಗೆ ಇಳಿಸಬೇಕು; ಮಾತ್ರವಲ್ಲ, ಮದ್ರಾಸಿನಲ್ಲಿ ಜಾರಿಯಲ್ಲಿರುವಂತೆ ಆಡಿಟ್ ಮಾಡಲು ಹಿಡಿಯುವ ದಿನಸಗಳ ಮೇಲೆ ಚಾರ್ಜು ಮಾಡಬೇಕೇ ಹೊರತು ಭಂಡವಾಳದ ಮೇಲಲ್ಲ. ಇದೂ ಅಲ್ಲದೆ ಬ್ಯಾಂಕಿನವರಿಗೆ ಸುಪರ್‌ವಿಜನ್ ಫೀಸನ್ನು ಸಂಘಗಳಿಂದ ವಸೂಲು ಮಾಡಲು ಅಧಿಕಾರ ಕೊಡುವಂಥ ನಿಬಂಧನೆ ಮಾಡಬೇಕಾಗಿದೆ.

ಸುಪರ್‌ವಿಜನ್ ಬೋರ್ಡಿಗೆ ಸರ್ಕಾರದವರು ಕೆಲವು ವರ್ಷಗಳ ಹಿಂದೆ ರೂ. 3,400 ವಾರ್ಷಿಕ ವಂತಿಗೆ ಕೊಡಲು ಒಪ್ಪಿದ್ದರು. ನಂತರ ಅದನ್ನು ರೂ. 1000 ಕ್ಕೆ ಇಳಿಸಿದರು. ಇನ್ನು ಮುಂದಕ್ಕೆ ಇದನ್ನೂ ಕೂಡ ನಿಲ್ಲಿಸಿಬಿಡುವಂತೆ ತೀರ್ಮಾನಿಸಿರುವರು. ಇದು ದೊಡ್ಡ ಅನ್ಯಾಯ. ಸರ್ಕಾರದವರ ಈ ಸಹಾಯವಿದ್ದೂ ಕೂಡ, ಕೆಲವು ವರ್ಷಗಳ ಹಿಂದೆ ಕೊಡಗಿನ ಸಹಕಾರಿ ಚಳವಳವನ್ನು ವಿಚಾರಿಸಿ, ವಿಮರ್ಶಿಸಿದ ಮೆ. ಗಿರಿಯಪ್ಪನವರ ಶಿಫಾರಸ್ಸಿನಂತೆ, ಜಿಲ್ಲಾ ಸುಪರ್‌ವೈಸರು, ಸಿಲೆಕ್ಷನ್ ಗ್ರೇಡ್ ಸುಪರ್‌ವೈಸರು, ಬ್ಯಾಂಕಿಗೆ ವೇತನದ ಅಸಿಸ್ಟೆಂಟ್ ಸಕ್ರೆಟರಿಯವರು-ಯೂನಿಯನಿಗೆ ಒಬ್ಬರಂತೆ ಸುಪರ್‌ವೈಸರು-ಇವರುಗಳ ನೇಮಕ ಮತ್ತು ಯೂನಿಯನ್‌ಗಳಿಗೆ ಸಾಕಷ್ಟು ವಂತಿಗೆ ಮುಂತಾದವುಗಳಿಗೆ ಹಣವಿಲ್ಲದೆ ಬಾಕಿ ಮಾಡಲಾಗಿದೆ. ಅಂದ ಮೇಲೆ ಸರ್ಕಾರದವರು ಸುಪರ್‌ವಿಜನ್ ಬೋರ್ಡಿಗೆ ಕೊಡುತ್ತಿದ್ದ ವಂತಿಗೆಯನ್ನು ಹೆಚ್ಚಿಸಬೇಕಿತ್ತೇ ಹೊರತು ನಿಲ್ಲಿಸಲು ಕಾರಣವೇ ಇಲ್ಲ. ಅಧಿಕಾರಿಗಳು ಇನ್ನಾದರೂ ಈ ವಿಚಾರದಲ್ಲಿ ತಮ್ಮ ತೀರ್ಮಾನವನ್ನು ಬದಲಾಯಿಸಿ, ಸುಪರ್‌ವಿಜನ್ ಬೋರ್ಡಿಗೆ ಸಾಕಷ್ಟು ಸಹಾಯ ಕೊಡುವದು ಅಗತ್ಯವಾಗಿದೆ.

ಸರ್ಕಾರಿ ಉದ್ಯೋಗಸ್ಥರು ತಮ್ಮ ಸ್ವಂತ ಸಂಘದಲ್ಲಿ ಅಲ್ಲದೆ ಇತರ ಯಾವ ಸಹಕಾರಿ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಭಾಗವಹಿಸಕೂಡದೆಂದು ಇತ್ತೀಚೆಗೆ ಸರ್ಕಾರದ ಹುಕುಂ ಆಗಿದೆ. ಕೊಡಗಿನ ಈಗಿನ ಸ್ಥಿತಿಯಲ್ಲಿ ಗ್ರಾಮ ಸಂಘಗಳು ಮತ್ತು ಸೆಂಟ್ರಲ್ ಬ್ಯಾಂಕು-ಇವುಗಳನ್ನು ನಡಿಸಲು ಸಾಕಷ್ಟು ಖಾಸಗಿ ಜನರು ದೊರೆಯುತ್ತಿದ್ದಾರೆ. ಆದರೆ ಪಟ್ಣ ಸಂಘಗಳನ್ನು ಸರಿಯಾಗಿ ನಡಿಸಲು ಉದ್ಯೋಗಸ್ಥರಲ್ಲದ ಜನರು ಸಿಕ್ಕುವುದು ಕಷ್ಟವಾಗಿದೆ. ಯಾಕೆಂದರೆ-ಸಾಧಾರಣವಾಗಿ ಪಟ್ಣ-ಪೇಟೆಗಳಲ್ಲಿ ವಾಸಮಾಡುವುದು ವ್ಯಾಪಾರಸ್ಥರು ಮತ್ತು ಸರ್ಕಾರಿ ಉದ್ಯೋಗಸ್ಥರು. ವಾಡಿಕೆಯಾಗಿ ವ್ಯಾಪಾರಿಗಳು ಪಟ್ಣಗಳಲ್ಲಿರುವ ಛತ್ರದ ಸ್ಟೋರು, ಜಿನಸು ಸ್ಟೋರು, ಜೇನು ಮತ್ತು ಮೇಣ ಸಂಘ ಮೊದಲಾದ ಸಹಕಾರಿ ಸಂಸ್ಥೆಗಳಲ್ಲಿ ಭಾಗವಹಿಸುವುದಾಗಲೀ, ಅವುಗಳಿಗೆ ಉತ್ತೇಜನ ಕೊಡುವುದಾಗಲೀ ಕಡಿಮೆ. ಆದುದರಿಂದ ಇಷ್ಟರ ವರೆಗೆ ಉದ್ಯೋಗಸ್ಥರೇ ಇಂಥಾವುಗಳಲ್ಲಿ ಹೆಚ್ಚಿನ ಭಾಗವಹಿಸುತ್ತಿದ್ದದ್ದಾಗಿದೆ. ಫಕ್ಕನೆ ಅವರನ್ನು ಈ ಸಂಘಗಳಿಂದ ದೂರ ಮಾಡಿದರೆ ಅವುಗಳ ಕಾರ್ಯಕಲಾಪಗಳನ್ನು ಜಯಪ್ರದವಾಗಿ ನಡಿಸಲು ತೊಂದರೆಯಾಗಬಹುದು. ಆದ ಕಾರಣ ಕೆಲವು ವರ್ಷಗಳ ವರೆಗೆ ಇಂಥಾ ಪಟ್ಣ ಸಂಘಗಳ ಕಾರುಬಾರುಗಳಲ್ಲಿ ಉದ್ಯೋಗಸ್ಥರು ಭಾಗವಹಿಸಬಾರದೆಂಬ ಅಡಚಣೆಯನ್ನು ತೆಗೆದು ಹಾಕುವುದು ಉಚಿತವಾಗಿದೆ.

ಸಿಬ್ಬಂದಿ ಖೋತೆಯ ದೆಸೆಯಿಂದ ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಹುದ್ದೆಯನ್ನು ತೆಗೆದು ಹಾಕಿ, ಕಮಿಷನರವರನ್ನೇ ರಿಜಿಸ್ಟ್ರಾರಾಗಿ ಮಾಡಿ, ಅವರ ಕೈಕೆಳಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರವರನ್ನು ನೇಮಿಸುವರೆಂದೂ, ಇವರೇ ಎಗ್ರಿಕಲ್ಚರಲ್ ಇನ್ಸ್‌ಪೆಕ್ಟರಾಗಿರುವರೆಂದೂ ವರ್ತಮಾನವಿದೆ. ಈ ಏರ್ಪಾಡಿನಿಂದ ಇವೆರಡು ಇಲಾಖೆಯ ಕೆಲಸಗಳೂ ಸಮರ್ಪಕವಾಗಿ ನಡೆಯಲಾರವು. ಸಹಕಾರಿ ಇಲಾಖೆಯು ದಿನೇ ದಿನೇ ವಿಸ್ತರಿಸುತ್ತಾ ಇರುವುದರಿಂದಲೂ, ಕಮಿಷನರವರಿಗೆ ತಮ್ಮ ಇತರ ಹಲವು ಕೆಲಸಗಳೊಂದಿಗೆ ಸಹಕಾರಿ ಇಲಾಖೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಿಲ್ಲದ್ದರಿಂದಲೂ ಈ ಇಲಾಖೆಗಾಗಿಯೇ ಒಬ್ಬ ಪ್ರತ್ಯೇಕ ಅಸಿಸ್ಟೆಂಟ್ ರಿಜಿ-

ವರ್ತಮಾನ ಸಂಗ್ರಹ.

ಒಳದೇಶ.

ಮೆ. ಗಳಾದ ಮೂರಿಸ್ ಮತ್ತು ಬ್ರನೂಲ್ಡ್‌ರವರ ರಾಜಿನಾಮೆಯಿಂದ ಖಾಲಿಯಾಗಿದ್ದ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುತನಗಳಿಗೆ ಬಾಳೆಕಾಡು ತೋಟದ ಮೆ. ಯಂಗ್‌ಮನ್‌ರವರೂ, ಜಂಬೂರು ತೋಟದ ಮೆ. ಎಜೆರ್ಟನ್‌ರವರೂ ಎದುರಾಳುಗಳಿಲ್ಲದೆ ಆರಿಸಲ್ಪಟ್ಟಿರುವರೆಂದು ವರ್ತಮಾನ.

ಈಸ್ಟ್ ಆಫ್ರಿಕದಲ್ಲಿ ಸರಕಾರಿ ಉದ್ಯೋಗದಲ್ಲಿರುವ ಶ್ರೀ ಮುರುವಂಡ ಐಯ್ಯಪ್ಪನವರು ರಜೆಯಲ್ಲಿ ಕೊಡಗಿಗೆ ಬಂದು ಕಳೆದ ತಿಂಗಳು 27 ರಲ್ಲು ಯೂರೋಪಿನ ಪ್ರಯಾಣ ಬೆಳೆಸಿರುವರಾಗಿಯೂ, ಅವರು ಫ್ರಾನ್ಸು ಮತ್ತು ಇಂಗ್ಲೆಂಡಿನಲ್ಲಿ ಪ್ರವಾಸ ಮಾಡುವರಾಗಿಯೂ ವರ್ತಮಾನ.

ಮಡಿಕೇರಿ.

ಇಲ್ಲಿಯ ಯುನಾನಿ ವೈದ್ಯ ಶಾಲೆಯ ಮಾಲೀಕರಾದ ಶ್ರೀ ಯಂ. ಯಂ. ಸಿದ್ದೀಕರವರು ತಮ್ಮ ಔಷಧಾಲಯದ ವಾರ್ಷಿಕ ಉತ್ಸವದ ಸಲುವಾಗಿ ತಾರೀಕು 22 ರಿಂದ 26 ರ ವರೆಗೆ ಅಲ್ಲಿಗೆ ಹೋಗುವ ರೋಗಿಗಳಿಗೆಲ್ಲಾ ಬೆಳಿಗೆ 8 ಗಂಟೆಯಿಂದ 10 ರ ವರೆಗೆ ಧರ್ಮಾರ್ಥ ಔಷಧಗಳನ್ನು ಕೊಡುವರಾಗಿ ತಿಳಿಯುತ್ತೇವೆ.

ಸಿಬ್ಬಂದಿಯೋಜನೆಯ ಪರಿಣಾಮವಾಗಿ ಸಹಕಾರಿ ಸಂಘಗಳ ರಿಜಿಸ್ಟ್ರಾರ ಮತ್ತು ಲ್ಯಾಂಡ್ ರಿಕಾರ್ಡ್ಸಿನ ಡಿಸ್ಟ್ರಿ ಡೈರೆಕ್ಟರ ಹುದ್ದೆಯು ವಜ ಮಾಡಲ್ಪಟ್ಟಿರುವ ಕಾರಣ ಈಗ ಆ ಹುದ್ದೆಯಲ್ಲಿರುವ ಮ. ರಾ. ಕರವಂಡ ಚಂಗಪ್ಪನವರು ಇನ್ನು ಮೂರು ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗಬೇಕೆಂದು ಹುಕುಂ ಆಗಿದೆಯಾಗಿ ತಿಳಿಯಬರುತ್ತದೆ.

ಲ್ಯಾಂಡ್ ರೆವೆನ್ಯೂ ರೆಗ್ಯುಲೇಶನಿಗೆ ಸಂಬಂಧಪಟ್ಟ ನಿಬಂಧನೆಗಳ ಕರಡು ತಿದ್ದುಪಡಿಗಳ ವಿಚಾರವಾಗಿ ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಲು ಕೊಡಗು ಜಮೀನ್ದಾರರ ಸಂಘದ ಕಮಿಟಿಯವರು ತಮ್ಮ ಈ ತಾ. 11 ರ ಮೀಟಿಂಗಿನಲ್ಲಿ ನಿಶ್ಚಯಿಸಿದ್ದ ಮಹನೀಯರುಗಳ ಪೈಕಿ ಸಂಘದ ಸೆಕ್ರೆಟರಿಯವರಾದ ಮೆ. ಸಿ. ಜಿ. ಐಯ್ಯಪ್ಪನವರು ಮತ್ತು ಮೆ. ಸಿ. ಐ. ಬೆಳ್ಯಪ್ಪನವರು ಚೀಫ್ ಕಮಿಷನರವರ ಸೆಕ್ರೆಟರಿಯವರ ಕೋರಿಕೆ ಮೇರೆ ಈ ತಾ. 20 ರಲ್ಲಿ ಅವರನ್ನು ಭೇಟಿಯಾಗಿ, ಕಮಿಟಿಯವರು ತಯಾರಿಸಿದ್ದ ತಿದ್ದುಪಡಿಗಳನ್ನು ಅವರೊಂದಿಗೆ ಚರ್ಚಿಸಿದಲ್ಲು, ಅವುಗಳಲ್ಲಿ ಹಲವನ್ನು ಸರ್ಕಾರದವರು ಒಪ್ಪಿಕೊಳ್ಳಲು ಆಕ್ಷೇಪಣೆ ಇರಲಾರದೆಂದು ಸೆಕ್ರೆಟರಿಯವರು ತಿಳಿಸಿದರಾಗಿ ವರ್ತಮಾನ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಕಳೆದ ಮೀಟಿಂಗಿನ ತೀರ್ಮಾನದಂತೆ ಬ್ಯಾಂಕಿನ ಅಧ್ಯಕ್ಷರಾದ ಮೆ. ಪಿ. ಐ. ಬೆಳ್ಯಪ್ಪನವರು, ಸೆಕ್ರೆಟರಿಯಾದ ಮೆ. ಯನ್. ಯನ್. ರಾಮಶೆಟ್ಟಿಯವರು, ಖಜಾನ್ಚಿಯಾದ ರಾ. ಬಾ. ಪಟ್ಟಮಾಡ ದೇವಯ್ಯನವರು, ಡೈರೆಕ್ಟರುಗಳಾದ ಮೆ. ಕೆ. ಸಿ. ಕರುಂಬಯ್ಯನವರು ಮತ್ತು ಮೆ. ಪಿ. ಜಿ. ಐಯ್ಯಪ್ಪನವರು ಈ ತಾ. 17 ರಲ್ಲಿ ಚೀಫ್ ಕಮಿಷನರವರಲ್ಲಿಗೆ ಮಡಿಕೇರಿಯಲ್ಲಿ ಡೆಪ್ಯುಟೇಶನ್ ಹೋಗಿ, ಬ್ಯಾಂಕಿನ ಹಾಗೂ ಸಹಕಾರಿ ಚಳವಳದ ಈಗಿನ ಸ್ಥಿತಿಯನ್ನು ಅವರ ಮುಂದಿಟ್ಟು, ಅವುಗಳಿಗೆ ಸರ್ಕಾರದಿಂದ ದೊರೆಯಬೇಕಾದ ಸಹಾಯಗಳನ್ನು ಕುರಿತು ದೀರ್ಘ ಚರ್ಚೆ ನಡಿಸಿದರಾಗಿ ತಿಳಿಯಬರುತ್ತದೆ.

ಕಳೆದ ಫೆಬ್ರವರಿಯಲ್ಲಿ ಇಲ್ಲಿ ನಡೆದ ಹಿಂದೀ ಪ್ರಾಥಮಿಕ ಪರೀಕ್ಷೆಯಲ್ಲಿ ಶ್ರೀಮತಿ ಯಂ. ಯಂ. ಸುಬ್ಬಮ್ಮ, ಶ್ರೀಮತಿ ಕೆ. ಎನ್. ನೀಲಮ್ಮ ಮತ್ತು ಶ್ರೀಯುತ ಎ. ರಹಮಾನ್‌ರವರು 1ನೇ ತರಗತಿಯಲ್ಲಿಯೂ, ಶ್ರೀಮತಿಯರಾದ ಕೆ. ಟಿ. ಸುಭದ್ರಮ್ಮ, ಎಸ್. ಸಿ. ಬೋಜಮ್ಮ, ಎ. ಎಸ್. ಸರಳತೆ, ಕೃಷ್ಣಾಬಾಯಿ ಸೂಪರ್, ಎನ್. ಯು. ಮುದ್ದವ್ವ, ಎನ್. ಯಂ. ಪೂವಮ್ಮ ಮತ್ತು ಅಬುಬಕರ್ ಇವರುಗಳು ಎರಡನೇ ತರಗತಿಯಲ್ಲಿಯೂ ಪಾಸಾಗಿರುವರಲ್ಲದೆ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಶ್ರೀಮತಿ ಹೆಚ್. ಟಿ. ಶಾಕುಂತಳಾರವರೂ ಪಾಸಾಗಿರುವರು. ಇವರಿಗೆಲ್ಲಾ ನಮ್ಮ ಅಭಿನಂದನೆಗಳಿವೆ.

ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಈ ತಾ. 17 ರಲ್ಲಿ ಮಡಿಕೇರಿಯಲ್ಲಿ ಚೀಫ್ ಕಮಿಷನರನ್ನು ಭೇಟಿ ಮಾಡಿ, ಜಿಲ್ಲಾ ಬೋರ್ಡಿನ ಬಡ್ಜೆಟನ್ನು ಕುರಿತು ಚರ್ಚಿಸಿದರು. ಆಗ್ಗೆ ಕಮಿಷನರು, ಚೀಫ್ ಕಮಿಷನರ ಸೆಕ್ರೆಟರಿಯವರು, ಜಿಲ್ಲಾ ಎಜ್ಯುಕೇಶನ್ ಆಫೀಸರು ಮತ್ತು ಅಸಿಸ್ಟೆಂಟ್ ಕಮಿಷನರೂ ಹಾಜರಿದ್ದರು. ಬಾಲಕಿಯರ ಶಾಲೆಗಳ ಮುಚ್ಚುವಿಕೆಯಿಂದ ಡಿ. ಬೋರ್ಡು ಶಾಲೆಗಳಿಗೆ ಮಕ್ಕಳ ತುಮುಕು ಹೆಚ್ಚಾಗುತ್ತಿರುವುದರಿಂದ ಸರ್ಕಾರದವರು ಡಿ. ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯನ್ನು ಸ್ವಲ್ಪವೂ ಕಡಿಮೆ ಮಾಡಕೂಡದೆಂದು ಚೀಫ್ ಕಮಿಷನರಿಗೆ ಮಂದಟ್ಟಾಗುವಂತೆ ಹೇಳಲಾಯಿತೆಂದೂ, ಈ ವಿಷಯ ಸರ್ಕಾರದವರು ಪುನಹ ಆಲೋಚಿಸುವರೆಂದು ಚೀಫ್ ಕಮಿಷನರು ಜವಾಬಿತ್ತರೆಂದೂ ತಿಳಿಯುತ್ತೇವೆ.

ವೀರಾಜಪೇಟೆ.

ಸ್ಕೂಲು ಫೀಸು ಏರಿಸಿದ್ದರ ಮತ್ತು ಹುಡುಗಿಯರ ಶಾಲೆ ಮುಚ್ಚಿದರ ವಿಷಯವಾಗಿ ಅತೃಪ್ತಿ ಸೂಚಿಸಲಿಕ್ಕಾಗಿ ಎಡೆನಾಲ್ಕುನಾಡಿನವರ ಡೆಪ್ಯುಟೇಶನೊಂದು ಈ ತಾ. 24 ರ ಬೆಳಿಗ್ಗೆ ವೀರಾಜಪೇಟೆಯಲ್ಲಿ ಚೀಫ್ ಕಮಿಷನರವರ ಭೇಟಿ ಮಾಡುವದೆಂದು ಸುದ್ದಿ.

ನಿಧನ ವಾರ್ತೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿನ ಹೆಡ್ ಗುಮಾಸ್ತರಾದ ಶ್ರೀ ಪೊನ್ನಚಂಡ ಮುದ್ದಪ್ಪನವರ ಪತ್ನಿಯವರು ಈ ತಾ. 15 ರಲ್ಲು ಸ್ವರ್ಗಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂದೇಶ.

ಸಿಂಗಪುರದಲ್ಲಿರುವ ಭಾರತೀಯರು ಪಂಡಿತ ಜವಾಹರಲಾಲ್ ನೆಹರೂರವರಿಗೆ ಬಹುಮಾನವಾಗಿ ಕೊಟ್ಟಿದ್ದ ಸುಮಾರು 4,000 ಬೆಲೆಬಾಳುವ ಚಿನ್ನದ ಕರಂಡಕವನ್ನು ಅಲಹಾಬಾದಿನ ವಸ್ತು ಸಂಗ್ರಹಾಲಯದಲ್ಲಿ ಇಟ್ಟಿದ್ದರು. ಯಾರೋ ಅದನ್ನು ಕಳೆದ ವಾರ ಕದ್ದುಕೊಂಡು ಹೋದರೆಂದು ತಿಳಿದುಬಂದಿದೆ.

ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಶ್ರೀ ಗೋವಿಂದಪಂತರ ಠರಾವನ್ನು ಚರ್ಚಿಸಬಾರದೆಂದು ಮಹಾತ್ಮ ಗಾಂಧಿಯವರು ಟೆಲಿಗ್ರಾಂ ಕಳುಹಿಸಿದ್ದರೆಂದೂ, ಶ್ರೀ ಪಟೇಲರ ಕಡೆ ಗುಂಪಿನವರು ಟೆಲಿಗ್ರಾಮನ್ನು ಮುಚ್ಚಿಟ್ಟುಬಿಟ್ಟು ಠರಾವನ್ನು ಚರ್ಚೆಗೆ ಹಾಕಿ ಮಂಜೂರ್ಮಾಡಿಸಿದರೆಂದೂ ಮಹಾತ್ಮ ಗಾಂಧಿಯವರು ಇವನ್ನು ಆಕ್ಷೇಪಿಸಿದರೆಂದೂ ಪ್ರಕಟವಾದ ವಾರ್ತೆಯು ಸುಳ್ಳೆಂದು ಗಾಂಧಿಜೀಯವರ ಸೆಕ್ರೆಟರಿಯವರು ಬಹಿರಂಗಪಡಿಸಿರುವರು.

ಆಗ್ರಾದಲ್ಲಿ ಸಾಧುವೊಬ್ಬನು, ನೆಲದಡಿಯಲ್ಲಿ 9 ತಾಸುಗಳ ತನಕ ಹುಗಿಸಿಕೊಂಡು, ಅಪಾಯವಿಲ್ಲದೆ ಎದ್ದನು. ಇವನ್ನು ಕಂಡು ಹತ್ತಿರವಲ್ಲೇ ಇದ್ದು ಇದನ್ನು ನೋಡುತಿದ್ದವನು, ತಾನೂ ಹೊಂಡದಲ್ಲಿ ಕುಳಿತು, ಮಣ್ಣು ಮುಚ್ಚಲು ಹೇಳಿದ. ಸಾಧುವಿಗಿಂತಲೂ ಹೆಚ್ಚುಕಾಲ ಈತ ನೆಲದಡಿಯಲ್ಲಿದ್ದು, ಅಪಾಯರಹಿತನಾಗಿ ಹೊರಗೆ ಬಂದು ಸಾಧುವನ್ನು ಮೀರಿಸಿದ್ದಾನೆ.

ಶ್ರೀ। ತಗಡೂರು ರಾಮಚಂದ್ರರಾಯರ ಮೇಲೆ ಮೈಸೂರು ಸಬ್ ಡಿವಿಜನ್ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದ ಜಾಮೀನು ಮೊಕದ್ದಮೆಯು ಕಳೆದ ಗುರುವಾರ ಪೂರೈಸಿತು. ನ್ಯಾಯಾಧೀಶರು ತೀರ್ಪಿತ್ತು ರಾಯರು ಒಂದು ವರ್ಷಕಾಲ ಒಳ್ಳೇ ನಡತೆಗೆ ಜಾಮೀನು ಕೊಡಬೇಕೆಂದು ಹೇಳಿದರು. ರಾಯರು ಕೊಡುವುದಿಲ್ಲವೆಂದರು. ಆದ್ದರಿಂದ ಅವರಿಗೆ ಒಂದು ವರ್ಷ ಸಾದಾ ಸಜ ವಿಧಿಸಲಾಯಿತು. ರಾಯರು ಕೋರ್ಟಿನಲ್ಲಿ ಕೊಟ್ಟ ಹೇಳಿಕೆಯಲ್ಲಿ ತೀರ್ಪು ಕೊಟ್ಟ ದಿವಸದಿಂದ 21 ದಿವಸ ಉಪವಾಸ ವ್ರತವನ್ನು ಆಚರಿಸುವುದಾಗಿ ತಿಳಿಸಿದ್ದಂತೆ ಉಪವಾಸವ್ರತದಲ್ಲಿ ತೊಡಗಿರುವರು.

ಕಾಂಗ್ರೆಸ್ ಸಭೆ.

ಪಾಡಿನಾಲ್ಕುನಾಡು ತಾಲೋಕು ಕಾಂಗ್ರೆಸ್ ಸದಸ್ಯರ ಮಹಾಸಭೆಯು ಈ ತಾರೀಕು 14 ರಲ್ಲಿ ಶ್ರೀ ತೋಟಂಬೈಲು ಅಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಪಾರಾಣೆಯಲ್ಲಿ ನಡೆದು, ಮೀಟಿಂಗನ್ನು ಸೇರಿಸಿದ ಶ್ರೀ ಬಿ. ಯಂ. ಕಾರ್ಯಪ್ಪ ಯಂ. ಎಲ್. ಸಿ. ಯವರು ಅದರ ಉದ್ದೇಶವನ್ನು ವಿವರಿಸಿದ ನಂತರ ಕಾರ್ಯಕಾರಿ ಮಂಡಳಿಗೆ ಶ್ರೀ ಗಳಾದ ಬಿದ್ದಂಡ ಸುಬ್ಬಯ್ಯ, ತೋಟಂಬೈಲು ಅಪ್ಪಣ್ಣ, ಕಾದಿರ ಐಯ್ಯಣ್ಣ, ಪಳಂಗಂಡ ಐಯ್ಯಮ್ಮ, ಎಸ್. ಎಸ್. ನಾರಾಯಣಮೂರ್ತಿ, ಬೆಟ್ಟೋಳಂಡ ಮಾಚಯ್ಯ ಮತ್ತು ಬಿದ್ದಂಡ ಕಾರ್ಯಪ್ಪನವರುಗಳನ್ನು ಚುನಾಯಿಸಿದಲ್ಲದೆ ಶ್ರೀ ಬಿದ್ದಂಡ ಸುಬ್ಬಯ್ಯನವರನ್ನು ಅಧ್ಯಕ್ಷರಾಗಿಯೂ, ಶ್ರೀ ಪಳಂಗಂಡ ಐಯ್ಯಮ್ಮನವರನ್ನು ಸೆಕ್ರೆಟರಿಯಾಗಿಯೂ ನೇಮಿಸಲಾಯಿತು. ಅಧ್ಯಕ್ಷರು ತಮ್ಮ ಅಲ್ಪೈರು ಭಾಷಣವನ್ನು ಮಾಡಿದ ನಂತರ ಮೀಟಿಂಗು ಬರಖಾಸ್ತಾಯಿತು.

ತಾಲೋಕು ಕಾ. ಕ. ಮೀಟಿಂಗು.

ಮೇಕ್ಕಂಡ ತಾಲೋಕಿನ ಕಾಂಗ್ರೆಸ್ ಕಮಿಟಿಯ ಮೀಟಿಂಗು ತಾರೀಕು 19 ರಲ್ಲಿ ಪ್ರೆಸಿಡೆಂಟರಾದ ಶ್ರೀ ಬಿ. ಯಂ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಪಾರಾಣೆಯಲ್ಲಿ ನಡೆದು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀ ಗಳಾದ ಬಿದ್ದಂಡ ಕಾರ್ಯಪ್ಪ ಯಂ. ಎಲ್. ಸಿ. ಮತ್ತು ಬೆಟ್ಟೋಳಂಡ ಮಾಚಯ್ಯ ಡಿ. ಬಿ. ಮೆಂಬರು ನವರನ್ನು ಚುನಾಯಿಸಲಾಯಿತು.

ಜಾಹೀರ ವಂದನೆ.

ಮಡಿಕೇರಿ, ತಾ. 10-4-39.

ಕಳೆದ ಮಾರ್ಚ ತಾ. 1 ರಿಂದ ನಾನು ಸರಕಾರಿ ನೌಕರಿಯಿಂದ ನಿವೃತ್ತನಾಗಿರುವೆನು. ನನ್ನ ಸ್ವದೇಶಕ್ಕೆ (ಕಾರವಾರಕ್ಕೆ) ಹೊರಡುವ ಮೊದಲು ಕೊಡಗಿನ ನನ್ನ, ವಿಶೇಷತಃ ಮಡಿಕೇರಿಯ ಮಿತ್ರರೆಲ್ಲರನ್ನೂ ವ್ಯಕ್ತಿಶಃ ಕಂಡು ನನ್ನ ವಂದನೆಗಳನ್ನು ಸಮರ್ಪಿಸಲು, ಮಧ್ಯದಲ್ಲಿ ಒದಗಿದ ಕಾಯಿಲೆಯ ದೆಸೆಯಿಂದ ಅಸಾಧ್ಯವಾಯಿತು. ಆದ್ದರಿಂದ ಈ ಜಾಹೀರ್ ಪತ್ರದಿಂದ ಅವರೆಲ್ಲರಿಗೂ ವಂದನೆಗಳನ್ನು ಕೊಡುವೆನು. ಅವರು ಇನ್ನು ಮುಂದೆಯೂ ಈಗಿನಂತೆ ನನ್ನ ಮೇಲೆ ವಿಶ್ವಾಸ ಮತ್ತು ಅಭಿಮಾನವನ್ನಿಟ್ಟುಕೊಂಡಾರೆಂದು ನಂಬಿದ್ದೇನೆ.

ಆತ್ಮಾರಾಮ ಶಾಸ್ತ್ರಿ ಒಡ್ಲಮನೆ.

ಶ್ರೀ ಆತ್ಮಾರಾಮ ಶಾಸ್ತ್ರಿಯವರನ್ನು ತಿಳಿಯದವರು ವಿರಳ. ಅವರ ಸಂಸ್ಕೃತ ಹಾಗೂ ಕನ್ನಡ ಪಾಂಡಿತ್ಯವು ಅಮೋಘವಾಗಿದೆ. ಅವರು ಮಡಿಕೇರಿಯಲ್ಲಿಯ ವೇದಾಂತ ಸಂಘದಲ್ಲಿ ತಮ್ಮ ಭಾಗವತ ಪ್ರವಚನಾದಿಗಳಿಂದ ಜನರಲ್ಲಿ ಪುರಾತನ ಪುಣ್ಯ ಗ್ರಂಥಗಳಾದ ನಮ್ಮ ಪುರಾಣಗಳಲ್ಲಿ ಒಂದು ತರಹದ ಗೌರವವನ್ನು ಹುಟ್ಟಿಸಿರುವರೆಂದರೆ ಅತಿಶಯೋಕ್ತಿಯಾಗಲಾರದು. ಶ್ರೀಯುತರು ಶಾಲೆಯಲ್ಲೂ ತಮ್ಮ ಬೋಧನಾಕ್ರಮದಲ್ಲಿ ದಕ್ಷತೆಯನ್ನು ತೋರಿಸಿ ಎಲ್ಲರ ಆದರಕ್ಕೂ ಪಾತ್ರರಾದರು. ಇವರು ನಮ್ಮ ಕೊಡಗನ್ನು ಬಿಟ್ಟು ಹೋದದೆಂದರೆ ನಮಗೆ ಒಂದು ವಿಧದಲ್ಲಿ ನಷ್ಟವಾದಂತೆಯೇ. ಇವರು ಇಲ್ಲಿದ್ದಿದ್ದರೆ ವೇದಾಂತ ಸಂಘವು ಪ್ರಗತಿ ಮಾರ್ಗದಲ್ಲಿ ಬಹು ಬೇಗನೆ ಮುಂದರಿಯುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಶ್ರೀಯುತರು ತಮ್ಮ ನಾಡಿನಲ್ಲೂ ಜನಾದರಣೆಯನ್ನು ಪಡೆದು ಶಾಂತಿ ಜೀವನವನ್ನು ನಡೆಸಲೆಂದೇ ನಮ -

---

ಸ್ವಾರವರನ್ನು ನೇಮಿಸುವುದೂ, ಈ ಹುದ್ದೆಗೆ ಸಹಕಾರ ತತ್ವಗಳನ್ನು ಚೆನ್ನಾಗಿ ಅರಿತವರೂ ಮತ್ತು ಅನುಭವವುಳ್ಳವರನ್ನೇ ಆರಿಸುವುದೂ ಅಗತ್ಯವಾಗಿದೆ. ಹಾಗೆಯೇ ದೇಶದ ಅಭಿವೃದ್ಧಿಗೆ ಮುಖ್ಯವಾದ ವ್ಯವಸಾಯ ಇಲಾಖೆಗೆ ಆ ವಿಚಾರದಲ್ಲಿ ಒಳ್ಳೇ ಪರಿಜ್ಞಾನವಿರುವವರೊಬ್ಬರನ್ನು ಪ್ರತ್ಯೇಕವಾಗಿ ನೇಮಿಸುವುದು ಅತ್ಯವಶ್ಯಕ. ಸರ್ಕಾರದ ಆರ್ಥಿಕ ಹೀನಸ್ಥಿತಿಯು ಇದಕ್ಕೆ ಅಡ್ಡಿಯೆನ್ನುವದಾದರೆ, ಈ ಹುದ್ದೆಗಳಿಗೆ ದೊಡ್ಡ ಸಂಬಳ ಕೊಡಬೇಕಾಗಿಲ್ಲ. ಹೇಗೂ ಹಣದ ಅಭಾವವು ಇಂಥಾ ಜನೋಪಕಾರದ ಇಲಾಖೆಗಳ ಬೆಳವಣಿಗೆಗೆ ಅಡಚಣೆಯಾಗಬಾರದು. ಸರ್ಕಾರದವರು ಈ ಮೇಲಿನ ಪ್ರಾಮುಖ್ಯ ವಿಚಾರಗಳಿಗೆ ತಕ್ಕಷ್ಟು ಗಮನಕೊಡುವರಾಗಿ ನಂಬುತ್ತೇವೆ.

ಐರ್ಲೆಂಡವು ತಾಟಸ್ಥ್ಯ ಭಾವನನ್ನು ತಳೆಯಬೇಕು.

(ಐರ್ಲೆಂಡಿನ ಅಧ್ಯಕ್ಷ ಡಿ'ವೇಲರರವರು)

'ಮುಂದೆ ಯುದ್ಧ ಸಂಭವಿಸಿದರೆ ಐರ್ಲೆಂಡವು ಯಾವ ಭಾಗವನ್ನೂ ವಹಿಸಕೂಡದೆಂದೂ, ತಮ್ಮ ಈ ಧೋರಣೆಯನ್ನು ಸಾಧಿಸುವ ಒಂದೇ ಮಾರ್ಗವೆಂದರೆ ತಮ್ಮ ರಕ್ಷಣಾರ್ಥವಾಗಿ ಸೈನ್ಯಸರಂಜಾಮುಗಳನ್ನು ಸಿದ್ಧಪಡಿಸಿಕೊಂಡು ಯಾವುದೊಂದು ಜನಾಂಗವು ನಮ್ಮನ್ನು ಕೇಡುದೃಷ್ಟಿಯಿಂದ ನೋಡದಂತೆ ಮಾಡಿಕೊಳ್ಳುವದೇ ಎಂದೂ ಅಧ್ಯಕ್ಷರಾದ ಡಿ'ವೆಲರಾರವರು ಎನ್ನಿಸ್‌ನಲ್ಲಿ ಮಾಡಿದ ತಮ್ಮದೊಂದು ಭಾಷಣದಲ್ಲಿ ಘೋಷಿಸಿರುವರು. ಮುಂದುವರಿಸುತ್ತಾ, 'ದೇವರೊಬ್ಬರ ಕೃಪೆಯಿಂದ ಮಧ್ಯಯುರೋಪದಲ್ಲಿ ಯುದ್ಧವಾಗದೆ ಮುಂದುವರಿಯಬಹುದೇ ವಿನಹ ಇಂದಿನ ಪರಿಸ್ಥಿತಿಯಲ್ಲಿ ಯುದ್ಧವು ಬಹು ದೂರವಿಲ್ಲ. ಈಗಿನ ಯುದ್ಧವು ಪ್ರಚಂಡವಾದ ಕದನವಾಗಿ ಹಿಂದಿನ ಕದನಗಳನ್ನು ಮೀರಿಸದಿರದು. ಒಮ್ಮೆ ಯುದ್ಧ ಪ್ರಾರಂಭವಾದರೆ ಅದು ಯಾವಾಗ ಅಂತ್ಯವಾದೀತೆಂದು ಯಾರಿಗೂ ಹೇಳಲಸಾಧ್ಯವಾದರೂ ಯುದ್ಧದಲ್ಲಿ ಜಯಿಸುವವನೂ, ಜಯಿಸಲ್ಪಡುವವನೂ ಇಬ್ಬರೂ ನಾಶ ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲ!'

ಚೈನಾ-ಜಪಾನ್ ಯುದ್ಧ.

ಜಪಾನಿನ ಆಕಾಂಕ್ಷೆಗೆ ಪರಾಜಯ—
ರಾಷ್ಟ್ರಾಭಿಮಾನಕ್ಕೆ ಅಮೋಘ ಜಯ—
ಚೈನೀಯರಿಗೆ ಜಯ ನಿಶ್ಚಯ—

ಪೂರ್ವಪ್ರಾಂತ್ಯದಲ್ಲಿ ನಡೆಯುತ್ತಿರುವ ಈ ಕದನವು ಮುಂದುವರಿಯುತ್ತಾ ಇರುವುದು. ಜಪಾನರು ದಕ್ಷಿಣ ದಿಕ್ಕಿಗೆ ಮುಂದರಿಯುತ್ತಿರುವರು. ಚೀನಿಯರು ಅವರು ಹಿಡಿದ ಪ್ರಾಂತ್ಯಗಳನ್ನು ಪುನಃ ವಶ ಮಾಡಿಕೊಳ್ಳುತ್ತಿರುವರು. ಈ ದೀರ್ಘ ಯುದ್ಧದಿಂದ ಅನೇಕ ಜಪಾನಿಯರು ಬೇಸರಗೊಂಡು ಈಗ ಯುದ್ಧವನ್ನು ನಿರೋಧಿಸುತ್ತಿದ್ದಾರೆ. ಕೊನೋಯಿಸ್ ಆಧಿಪತ್ಯದಲ್ಲಿ ಚೀನೀಯರು ನುಗ್ಗಿ ಜಪಾನರ ಮದ್ದುಗುಂಡು ಮುಂತಾದ ಯುದ್ಧ ಸಾಮಗ್ರಿಗಳೂ, ಆಹಾರ ಸಾಮಗ್ರಿಗಳೂ ಇದ್ದ ಉಗ್ರಾಣಗಳಿಗೆ ಬೆಂಕಿಯನ್ನಿಟ್ಟರು. ಚೀನೀಯರಿಗೆ ಈಗ ರಷ್ಯಾದವರಿಂದಲೂ, ಅಮೇರಿಕನರಿಂದಲೂ ಸಹಾಯ ಬರುತ್ತಿದೆ. ಸಂಗ್‌ಚೆನ್ ಎಂಬ ಪ್ರಾಂತವನ್ನು ಚೀನೀಯರು ಮೂರು ದಿನಗಳ ವರೆಗೆ ಪ್ರಖರವಾದ ಕದನ ನಡಿಸಿ ಆಕ್ರಮಿಸಿಕೊಂಡಿರುವರು. ಜಪಾನರನ್ನು ದಕ್ಷಿಣ ದಿಕ್ಕಿಗೆ ಹಿಮ್ಮೆಟ್ಟಿಸಿರುವರು. ಸಂಗ್‌ಚನ್ ಹುಸೇನ್ ಎಂಬಲ್ಲಿ ಚೀನೀಯರಿಗೂ, ಜಪಾನರಿಗೂ ನಡೆದ ಘೋರ ಯುದ್ಧದಲ್ಲಿ ಒಂದು ಸಾವಿರ ಜಪಾನಿ ಸೈನಿಕರು ಮೃತರಾದರೆಂದು ತಿಳಿಯಬರುತ್ತದೆ.

ರಷ್ಯಾದವರು ಚೀನೀಯರಿಗೆ ಸಹಾಯ ಮಾಡುತ್ತಿರುವರೆಂದೂ, ರಷ್ಯಾದ ಜನರೇ ಚೀನೀಯರ ಪರ ರಣಾಂಗಣಕ್ಕೆ ಇಳಿದಿರುವರೆಂದೂ, ರಷ್ಯಾದ ಈ ವರ್ತನೆಯು ಖಂಡನೀಯವೆಂದೂ ಜಪಾನರು ಘೋಷಿಸಿರುವರು. ಚೈನಾದ ಅನೇಕ ಭಾಗಗಳಲ್ಲಿ ಇಕ್ಕಡೆಯವರಿಗೂ ಯುದ್ಧಗಳು ನಡೆಯುತ್ತಿವೆ. ದಕ್ಷಿಣ ಶಾನ್ಸಿಯಲ್ಲಿ ಐದು ಸ್ಥಳಗಳಲ್ಲಿಯೂ, ಫೋಟಿಂಗ್ ಫೂ ಎಂಬಲ್ಲಿ ಎರಡು ಸ್ಥಳಗಳಲ್ಲಿಯೂ, ದಕ್ಷಿಣ ಶಿಫಾಂಗ್ ಮತ್ತು ಪೂರ್ವೋತ್ತರ ಸೈಪಿಂಗಿನಲ್ಲೂ ಯುದ್ಧಗಳು ನಡೆಯುತ್ತಿವೆ.

ಜಪಾನಿಯರ ಸುದ್ದಿ ಮೇರೆ ಫುಟ್‌ಸಿನ್ಸ್ ಎಂಬ ಪ್ರಾಂತವು ಜಪಾನರ ವಶವಾಗಿರುವದೆಂದೂ ಜಪಾನರು ತೃಪ್ತಿಕರವಾಗಿ ಮುಂದುವರಿಯುತ್ತಿರುವರೆಂದೂ, ಅಲ್ಲದೆ ಏಪ್ರಿಲ್ ೭ರಿಂದ 13ರ ವರೆಗಿನ ಈ 8 ದಿನಗಳಲ್ಲಿ 3500 ಚೈನೀಯರು ಮೃತರಾಗಿರುವರೆಂದೂ, 150 ಸೆರೆಯಾಳಾಗಿರುವರೆಂದೂ ತಿಳಿದು ಬರುತ್ತದೆ.

ಚೈನಾದ ಸೇನಾನಾಯಕನಾದ ಮಾರ್ಷಲ್ ಚಿಯಾಂಗ್ ಕೈಶೆಕರು ಒಂದು ಪ್ರಚಂಡ ಘೋಷಣೆಯನ್ನು ಹೊರಡಿಸಿ ಜಗತ್ತಿನ ರಾಷ್ಟ್ರಗಳು ಎಷ್ಟೇ ಶ್ರಮಿಸಿದರೂ ಪೂರ್ವಪ್ರಾಂತ್ಯದಲ್ಲಿ ಶಾಂತಿಯು ನೆಲಸದೆಂದೂ, ಚೈನೀಯರ ಈ ದೀರ್ಘ ವಿರೋಧದಿಂದ ಕ್ರಮೇಣ ಜಪಾನವು ತನ್ನ ಅಂತಿಮ ಕಾಲವನ್ನು ಕಾಣಬೇಕಾಗುವದೆಂದೂ ಜಪಾನು ಈಗಾಲೇ ಯುದ್ಧದ ನಷ್ಟವನ್ನು ಹೊರಲಾರದೆ ತತ್ತರಿಸುತ್ತಿರುವುದೆಂದೂ, ಈ ಚೈನಾ ಜಪಾನ್ ಯುದ್ಧವು ಚೈನಾವು ತನ್ನ ರಾಷ್ಟ್ರದ ಪ್ರತಿಷ್ಠೆ, ಸ್ವಾತಂತ್ರ್ಯ ಮತ್ತು ಪ್ರಗತಿಯನ್ನು ಸಾಧಿಸದ ವಿನಹ ಕೊನೆಗೊಳ್ಳಲಾರದೆಂದೂ, ದಿನೇ ದಿನೇ ಜಪಾನರು ಆಳವಾದ ನೀರಿಗೆ ತಳ್ಳಲ್ಪಡುವರೆಂದೂ, ಕ್ರಮೇಣ ಅವರು ಮುಳುಗಿ ನಾಶಹೊಂದುವ ಕಾಲ ದೂರದಲ್ಲಿಲ್ಲವೆಂದೂ ಅಂದಿರುವರು.

ಚೈನಾವು ಮುಂದರಿಯುತ್ತಿದೆಯೆಂಬುದು ಅವರ ಈಗಿನ ಜಯಗಳಿಂದ ವಿಶದವಾಗುತ್ತಿದೆ. ಜಪಾನರು ಯುದ್ಧದಿಂದ ಬೇಸರವು ಹುಟ್ಟಿ ನಿರುತ್ಸಾಹಿಗಳಾಗಿರುವರು. ಜೊತೆಗೆ ಇತರ ರಾಷ್ಟ್ರಗಳು ಚೈನೀಯರಿಗೆ ಕೊಡುತ್ತಿರುವ ಸಹಾಯದಿಂದ ಅವರ ಕೈಕಾಲುಗಳೇ ಬರದಾಗಿವೆ. ಬರೇ ನಾಲ್ಕೈದು ತಿಂಗಳಲ್ಲಿ ಚೈನೀಯರನ್ನು ಬಗ್ಗುಬಡಿದು ತನ್ನ ವಿಜಯ ಪತಾಕೆಯನ್ನು ಚೈನಾದ ವಿಶಾಲ ಗಗನದಲ್ಲಿ ಹಾರಿಸಬಹುದೆಂಬ ಮಹತ್ವಾಕಾಂಕ್ಷೆಯಿಂದ ಯುದ್ಧಕ್ಕೆ ಧುಮುಕಿದ ಜಪಾನು ಇಂದು ಬಳಲಿ ಬೆಂಡಾಗಿದೆ. ಅದು ನಿರೀಕ್ಷಿಸಿದ್ದ ಗಾಳಿಗೋಪುರಗಳೆಲ್ಲಾ ಚೈನೀಯರ ಆ ರಾಷ್ಟ್ರಾಭಿಮಾನದ ಬಿರುಗಾಳಿಗೆ ಸಿಕ್ಕಿ ತೇಲಿ ಹೋಗುತ್ತಿವೆ. ಚೈನಾವು ವಿಪರೀತ ಕಷ್ಟ ನಷ್ಟಗಳನ್ನು ಪಟ್ಟರೂ ತನ್ನ ದೇಶಭಕ್ತಿ ಹಾಗೂ ಸ್ವಾತಂತ್ರ್ಯಪ್ರಿಯತೆಯಿಂದ ಜಯಸಿರಿಯನ್ನು ವಹಿಸದಿರದೆಂದು ನಂಬಬಹುದು.

ಬಾತ್ಮಿ.

ಒಕ್ಕಲಿಗರ ವಿದ್ಯಾಭಿವೃದ್ಧಿ ಸಭೆ.

'ಕೊಡಗು' ಪತ್ರಿಕೆಯ ತಾ. 14 ಮತ್ತು 'ಜನ್ಮಭೂಮಿ' ಪತ್ರಿಕೆಯ ತಾ. 12ರ ಸಂಚಿಕೆಗಳಲ್ಲಿ ಒಕ್ಕಲಿಗರ ವಿದ್ಯಾಭಿವೃದ್ಧಿ ಸಭೆಯ ವಿಷಯವಾಗಿ ಪ್ರಕಟಿಸಿದ ಬಾತ್ಮಿಯನ್ನು ನೋಡಿ ನಾನು ಬಹಳ ಹರುಷಗೊಂಡೆನು.

ಮೇಲ್ಕಂಡ ಬಾತ್ಮಿಗಳಿಂದ ನಮ್ಮ ಒಕ್ಕಲಿಗ ಜನಾಂಗವು ಕೊಡಗಿನಲ್ಲಿ ಸುಮಾರು 10 ಸಾವಿರ ಮಂದಿ ಜನರಿರುವರೆಂದು ತಿಳಿಯುವದು. ಅವರ ಪೈಕಿ 391 ಮಂದಿ ವಿದ್ಯಾವಂತರಿರುವರೆಂದು ತಿಳಿದರೂ ಕೂಡ ಈ ನಮ್ಮ ಜನಾಂಗದ ಹೆಚ್ಚಿನ ಜನರ್‍ಯಾರೂ ಉದ್ಯೋಗಗಳಲ್ಲಿ ಮುಂದೆ ಬಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಸಂಘ ಶಕ್ತಿ ಇಲ್ಲದಿರುವಿಕೆಯೇ ಈ ಅಧೋಗತಿಗೆ ಕಾರಣವೆಂದು ನಾನು ಹೇಳಬಲ್ಲೆನು. ಕೊಡಗಿನ ಮಟ್ಟಿಗೆ ಹೇಳುವುದಾದರೆ ಪ್ರತಿ ಒಂದು ಜಾತಿಯವರಲ್ಲಿ ಇಂಥಾ ಸಂಘ ಶಕ್ತಿಯು ಹೆಚ್ಚಿ ಬಹುಮಟ್ಟಿಗೆ ಮುಂದೆ ಬಂದಿರುವರು. ಮುಸಲ್ಮಾನರು ಅವರ ಸಂಘಶಕ್ತಿಯನ್ನು ಹೆಚ್ಚಿಸಿಕೊಂಡು ವೀರಾಜಪೇಟೆ, ಮಡಿಕೇರಿ ಮತ್ತು ಇನ್ನಿತರ ಸ್ಥಳಗಳಲ್ಲಿ ಅವರದೇ ಆಗಿರುವ ಶಾಲೆಗಳನ್ನು ಕೂಡ ಸ್ಥಾಪಿಸಿರುವರು. ನಾವಾದರೋ ಈ ನವನಾಗರೀಕತೆಯ ಕಾಲದಲ್ಲಿಯೂ ಕೂಡ ಮುಂದು ಬಾರದೆ ಹಿಂದೆ ಬಿದ್ದಿರುತ್ತೇವೆ ಎಂಬುವುದು ಶೋಚನೀಯ ವಿಚಾರ. ಪೂಜ್ಯ ಮಹಾತ್ಮಗಾಂಧಿಯವರ ಸಲಹೆಗಳನ್ನು ಅನುಸರಿಸಿ ಕೃತಿಯಲ್ಲಿ ತಂದುಕೊಂಡ ಹರಿಜನರು ಮುಂದೆ ಹೆಜ್ಜೆಯನ್ನು ಇಡುವಂಥಾ ಈ ಕಾಲದಲ್ಲಿಯೂ ಕೂಡ ನಮ್ಮ ಒಕ್ಕಲಿಗ ಜನಾಂಗದವರು ಹಿಂದೆ ಬೀಳುತ್ತಿರುವದು ನೋಡಿದರೆ ನಾಚಿಕೆಗೇಡೇ ಸರಿ.

ಗೋಣಿಕೊಪ್ಪಲಲ್ಲಿ ನಡೆದ ಮೇಲಿನ ಮೀಟಿಂಗಿಗೆ ಮೈಸೂರು ಪ್ರಾಂತದ ಕೃಷ್ಣರಾಜ ನಗರದ ಪ್ರಸಿದ್ಧಕ್ಷೇತ್ರವಾದ ಚುಂಚನಕಟ್ಟೆಯಲ್ಲಿ ನಡೆಯುಬರುವ ಗುರುಕುಲ ಮತ್ತು ಅನಾಥಾಶ್ರಮ ಸಂಸ್ಥೆಗಳ ಸ್ಥಾಪಕರಾದ ಶ್ರೀ ಹೊ. ಕೆ. ಪುಟ್ಟಣ್ಣನವರು ಹಾಜರಿದ್ದು ನಮ್ಮ ಜನಾಂಗದವರ ಅಭಿವೃದ್ಧಿಗೆ ಬೇಕಾಗುವ ಒಳ್ಳೆಯ ಸಲಹೆಗಳನ್ನು ಇತ್ತರೆಂದು ತಿಳಿಯುತ್ತೇನೆ. ಇಂಥಾ ಮಹಾ ಪುರುಷರ ಸಹಾಯದಿಂದ ನಮ್ಮ ಕೊಡಗಿನಲ್ಲಿರುವ ಒಕ್ಕಲಿಗ ಜನಾಂಗದ ಕೆಲವು ಧನವಂತರುಗಳು ಸೇರಿ ಈ ತರುಣ ಉತ್ಸಾಹಿಗಳು ಕೈಕೊಂಡ ಕಾರ್ಯವನ್ನು ಜಯಪ್ರದವಾಗಿ ನೆರವೇರಿಸುವುದಲ್ಲದೆ, ಇದರ ಮುಂದಿನ ಶ್ರೇಯಸ್ಸಿನ ಜವಾಬ್ದಾರಿಯೂ ಕೂಡ ಜನಾಂಗದ ಪ್ರತಿಯೊಬ್ಬ ವ್ಯಕ್ತಿಗೂ ಕೂಡಿದೆ. ಈಗಿನ ಸ್ಪರ್ಧೆಯ ಕಾಲದಲ್ಲಿ ಇತರ ಜನಾಂಗದವರು ಸಾಧಿಸುತ್ತಿರುವ ಪ್ರಗತಿ ಮಾರ್ಗವನ್ನು ಕೈಕೊಳ್ಳದಿದ್ದರೆ ಈ ನಮ್ಮ ಪುಟ್ಟ ಜನಾಂಗದ ಏಳಿಗೆಯು ಅಧೋಮುಖವಾಗುವುದು ಖಂಡಿತ.

ಕೊಡಗಿನಲ್ಲಿ ಸಣ್ಣ ಸಣ್ಣ ಜನಾಂಗದವರೂ ಕೂಡ ಪ್ರತ್ಯೇಕ ಪ್ರತ್ಯೇಕವಾಗಿ ವಿದ್ಯಾಭಿವೃದ್ಧಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಇದರ ಇಂದಿನ ಉತ್ಸಾಹಯುಸ್ಥಿತಿಯು ಅವರ ಒಗ್ಗಟ್ಟು ಮತ್ತು ಪರಸ್ಪರ ಸಹಾಯದ ಪ್ರಭಾವದಿಂದಲೇ ಹೊರತು ಬೇರೆ ಅಲ್ಲ. ಆದ್ದರಿಂದ ನಮ್ಮ ಈ ಒಕ್ಕಲಿಗ ಜನಾಂಗದ ಮಹನೀಯರೆಲ್ಲರೂ ತಮ್ಮ ವ್ಯಕ್ತಿ ವೈಮನಸ್ಯಗಳನ್ನು ತೊರೆದು ಸಮಾಜೋದ್ಧಾರಕ್ಕಾಗಿ ಈ ಸಂಘಕ್ಕೆ ನೆರವಾಗಬೇಕೆಂಬುವದು ನನ್ನ ಕರ್ತವ್ಯವಾಗಿದೆ.

ಅಲ್ಲದೆ ನಮ್ಮ ಜನಾಂಗವು ಬಹು ಪ್ರಾಮುಖ್ಯವಾಗಿ ಕೃಷಿಯನ್ನೇ ಮುಂದಿಟ್ಟುಕೊಂಡು ಜೀವನನಡೆಸುವದಾಗಿದೆ. ಇದರಿಂದ ಬಹು ಮಂದಿ ಬಡತನದ ಬಾಧೆಯಿಂದಲೂ, ಆರ್ಥಿಕ ದೃಷ್ಟಿಯಿಂದ ಸಿಲುಕಿ ನರಳುವವರಾಗಿರುವ ಈ ಕಾಲದಲ್ಲಿ ಇಂಥಾ ವಿದ್ಯಾಸಂಸ್ಥೆಗಳ ಸಹಾಯದಿಂದಲ್ಲದೆ ಬೇರೆಯಾವ ವಿಧದಿಂದಲೂ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಮಾರ್ಗ ದೊರೆಯಲಾರದು. ಇಂಥಾ ಸಂಘ ಶಕ್ತಿಯಿಂದಲೇ ದೇಶೋದ್ಧಾರವಾಗಬೇಕು. ಆದ್ದರಿಂದ ಈ ತರುಣರು ಮುಂದೆ ಬಂದು ಮೇ ತಾ. 25ರಲ್ಲಿ ಪುನಃ ಗೋಣಿಕೊಪ್ಪಲಿನಲ್ಲಿ ಮೈಸೂರು ಪ್ರಾಂತದ ಕಾಂತರಾಜಪುರದ ಶ್ರೀಮಾನ್ ದೀನಬಂಧು ಯಂ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಸುವ ಈ ಮೀಟಿಂಗಿಗೆ ನಮ್ಮ ಒಕ್ಕಲಿಗ ಜನಾಂಗದ ಆಬಾಲವೃದ್ಧರೂ, ಬಡವ ಬಲ್ಲಿದರೂ, ನಮ್ಮ ಮುಂದಿನ ಜನಾಂಗದ ಏಳಿಗೆಗಾಗಿ ತಮ್ಮ ತಮ್ಮ ಶಕ್ತ್ಯಾನುಸಾರ ಈ ಸಂಘಕ್ಕೆ ಸಹಾಯವನ್ನು ಮಾಡಿ ನಮ್ಮ ಜನಾಂಗದವರನ್ನು ಪ್ರೋತ್ಸಾಹಿಸಬೇಕಿದೆ.

'ಹಿತಚಿಂತಕ.'

ಗಾಂಧಿಜೀಯವರ ಪ್ರಾರ್ಥನೆಗೆ ಭಂಗ.

ರಾಜಕೋಟೆಯಲ್ಲಿ ನಡೆದ ಪ್ರಸಂಗ— —ಮುಸ್ಲಿಂ- ಗಿರಿಸಿಯಾನರ ಕೋಲಾಹಲರಂಗ.

ಮುಖಂಡರಲ್ಲಿ ಯೋಚನಾತರಂಗ.

ಎಲ್ಲಾ ಪಂಗಡಗಳಿಗೆ ಪ್ರಾತಿನಿಧ್ಯ ಕೊಡದ ವಿಚಾರದಲ್ಲಿ ಮುಸ್ಲಿಮರ ಖಂಡನೆ–ವೈಸರಾಯರಿಗೆ ಪ್ರಾರ್ಥನೆ–ಠಾಕೂರ ಸಾಹೇಬರ ವರ್ತನೆ–ಗಾಂಧಿ ಗಿರಸ್ಯಾ ಪತ್ರವ್ಯವಹಾರದ ಪ್ರಕಟಣೆ– ಗಿರಸ್ಯಾನರ ಸತ್ಯಾಗ್ರಹ ಘೋಷಣೆ–ಸಮಸ್ಯೆಯನ್ನು ನ್ಯಾಯಾಧೀಶರಿಗೆ ಒಪ್ಪಿಸಬೇಕೆಂಬ ಯೋಜನೆ–ಸೂಚಿಸಿದ ಹೆಸರುಗಳ ಪರಿಶೋಧನೆ–ರಾಜಕೋಟೆ ಸಮಸ್ಯೆಯ ಪೂರ್ಣ ಪರಿವರ್ತನೆ.

ಕೋಲಾಹಲ.

ರಾಜಕೋಟೆ ಸುಧಾರಣಾ ಕಮಿಟಿಯಲ್ಲಿ ತಮ್ಮ ಪ್ರತಿನಿಧಿಗಳನ್ನು ಸೇರಿಸಲಿಲ್ಲವೆಂಬ ಆ ಮನಃಕಷಾಯದಿಂದ 500 ಜನ ಮುಸ್ಲಿಂ ಮತ್ತು ಗಿರಸಿಯಾನರು ಒಟ್ಟುಗೂಡಿ ರಾಷ್ಟ್ರೀಯ ಶಾಲೆಯಲ್ಲಿ ಗಾಂಧಿಜೀಯವರು ಪ್ರಾರ್ಥನೆ ಮಾಡುತ್ತಿರುವ ಸಂದರ್ಭದಲ್ಲಿ ನಾನಾರೀತಿಯ ಘೋಷಣೆ ಮಾಡುತ್ತಾ ಬಂದು ಅವರ ಪ್ರಾರ್ಥನೆಗೆ ಭಂಗ ತಂದರು. ಕರಿ ಬಾವುಟಗಳನ್ನು ಹಿಡಿದು ತಂಡ ತಂಡವಾಗಿ ರಾಷ್ಟ್ರೀಯ ಶಾಲೆಗೆ ಬಂದು ಕಿವಿ ಬಿರಿಯುವಂತೆ ಕೂಗಿಕೊಂಡರೂ ಪ್ರಾರ್ಥನೆಯು ನಡೆದೇ ನಡೆಯಿತು.

ಪ್ರಾರ್ಥನೆಯು ಮುಗಿದ ನಂತರ ಗಾಂಧಿಜೀಯವರು ಕೋಲಾಹಲವನ್ನೆಬ್ಬಿಸಿದ ಜನರಿರುವಲ್ಲಿಗೆ ಬಂದರು. ಪ್ರಜಾಪರಿಷತ್ತಿನ ಕೆಲಸಗಾರರು ಅವರ ಸುತ್ತು ನಿಂತು ಜನರು ಧುಮುಕದಂತೆ ನೋಡಿಕೊಳ್ಳುತ್ತಿದ್ದರು. ಆದರೆ ಇದರಿಂದ ಪ್ರಯೋಜನವಾಗಲಿಲ್ಲ. ಜನರು ಗಾಂಧಿಯವರೆಡೆಗೆ ನುಗ್ಗಿದರು. ಕೆಲವರು ಸಿಟ್ಟಿನಿಂದ ಮುಂದರಿಯುತ್ತಿದ್ದರು. ಈ ನುಗ್ಗಾಟದಲ್ಲಾದ ಆಘಾತದ ಉಪಟಳದಿಂದ ಗಾಂಧಿಯವರು ಬಹಳ ತೊಂದರೆಗೀಡಾದರು. ಗಾಂಧಿಜೀಯವರು ರಸ್ತೆಯ ವರೆಗೆ ಒರುವವರೊಳಗಾಗಿ ಜನರು ಅವರನ್ನು ಸುತ್ತುವರಿದ್ದರು. ಗಾಂಧಿಜೀಯವರು ಕಣ್ಣು ಮುಚ್ಚಿ ಕೆಲವು ನಿಮಿಷವಿದ್ದರು. ಜನರು ಚದರತೊಡಗಿದರು. ಕೆಲವು ನಿಮಿಷದಲ್ಲಿ ಗಾಂಧಿಜೀಯವರು ಅವರಿಗಾಗಿ ಕಾದಿದ್ದ ಕಾರಿನೆಡೆಗೆ ಬಂದು ತಲಪಿದರು. ಅತೃಪ್ತಿಗೊಂಡ ಆ ಜನರು ಕೂಗಾಡುತ್ತಾ ಕಾರಿನ ಹತ್ತಿರ ನೆರೆದರು. ಈ ಜನರ ನುಗ್ಗಾಟದಿಂದ ಮಹಾತ್ಮರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದವರನ್ನು ಪೂಜ್ಯ ಗಾಂಧಿಜೀಯವರು ನೋಡಿ, 'ನಾನು ಜೀವಾವಧಿ ಶತ್ರುಗಳ ಆಶ್ರಯಕ್ಕೆ ಹೋಗಲು ಅಪೇಕ್ಷಿಸುತ್ತೇನೆ' ಎಂದರು. ನಗುಮುಖದಿಂದ ಮಹಾತ್ಮರು ಕಾರನ್ನು ಹತ್ತಿದರು. ಕಾರು ಮುಂದರಿಯಿತು ಜತೆಯು ಹಿಂದುಳಿಯಿತು

ಗಾಂಧಿಜೀಯವರ ಹೇಳಿಕೆ.

'ಕೆಲವೊಂದು ಜನರ ಈ ವರ್ತನೆಯಿಂ ನನಗೆ ಬೇಸರವಾಯಿತು. ಅವರಲ್ಲೂ ವರು ನನ್ನ ದಿನ ನಿತ್ಯದ ಕರ್ಮದಲ್ಲಿ ಪವಿತ್ರ ಸಮಯವೆನಿಸಿದ ಆ ಪ್ರಾರ್ಥನಾ ಸಮಯದಲ್ಲಿ ತೊಂದರೆ ಕೊಟ್ಟದ್ದು ಮತ್ತೂ ವಿಷಾದಕರ. ಇಡೀ ಭಾರತದೇಶವೇ ತಿಳಿದಿರುವಂತೆ ಅನೇಕ ವರ್ಷಗಳಿಂದ ನಾನು ಯಾವ ಕೆಡುಕೂ ಇಲ್ಲದೆ ಬಹಿರಂಗ ಪ್ರಾರ್ಥನೆ ಮಾಡುತ್ತಿರುವೆನು.

(ಜಗದ್ವಂದ್ಯ ಮಹಾತ್ಮ ಗಾಂಧಿ)

ಅವರು ಯಾಕೆ ನನ್ನ ಪವಿತ್ರ ಸಮಯವನ್ನೇ ಆರಿಸಿ ನನಗೆ ಉಪದ್ರವ ಕೊಡಲು ಬಂದರು? ದಿನವಿಡೀ ಶ್ರಮಿಸಿ ಬಳಲಿ ಆ ಬಹಿರಂಗ ಪ್ರದೇಶದಲ್ಲಿ ಏಕರೂಪನಾದ ಆ ಜಗನ್ಮಯನ ಪ್ರಾರ್ಥನೆ ಮಾಡಲು ಬಂದ ಆ ಅಬಾಲ ವೃದ್ಧ ಸ್ತ್ರೀ ಪುರುಷರುಗಳಿಗೇಕೆ ತೊಂದರೆ ಕೊಟ್ಟರು? ನಾನು ನನ್ನ ಪ್ರಾರ್ಥನೆಯನ್ನು ಬಿಟ್ಟು ಹೊರಡೆನೆಂದು ತಿಳಿದಿದ್ದರೂ ಯಾಕೆ ಅವರು ಕಪ್ಪು ಬಾವುಟಗಳನ್ನು ಹಿಡಿದು ನಾನು ಪ್ರಾರ್ಥನಾ ಸ್ಥಳಕ್ಕೆ ಬಂದಾಗ ಕೂಗಿ ಕೋಲಾಹಲವೆಬ್ಬಿಸಿದರು? ಅಷ್ಟೇ ಸಾಕಾಗಿತ್ತು. ಆದರಲ್ಲೂ ಅವರು ಪ್ರಾರ್ಥನೆ ನಡೆಯುತ್ತಿದ್ದಂತೆ ಕೂಗಿ ಯಾಕೆ ತೊಂದರೆ ಮಾಡಿದರು? ಇವರೆಲ್ಲರೂ ನನ್ನ ದೇಶೀಯರು. ನಾನು ಪಠಿಸುತ್ತಿದ್ದ ಮಂತ್ರದ ಶಬ್ದಗಳಲ್ಲಿ ನನ್ನ ಮನಸನ್ನು ಸ್ಥಿರವಾಗಿ ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಇವರ ಕೂಗು ಬಾಣ ತಗಲಿದಂತೆ ಬಂದು ನನ್ನ ಹೃದಯಕ್ಕೆ ನಾಟುತ್ತಿತ್ತು. ಬಾಹ್ಯ ಪ್ರಪಂಚದಲ್ಲಿ ಯಾವ ಗಲಭೆ ಇದ್ದರೂ ತೊಂದರೆ ಪಟ್ಟುಕೊಳ್ಳದೆ ಸುಗಮವಾಗಿ ಮನಸನ್ನು ದೃಢೀಕರಿಸಿ ಪ್ರಾರ್ಥಿಸುವ ಯೋಗ ಶಕ್ತಿಯನ್ನು ನಾನು ಇನ್ನೂ ಪಡೆದಿಲ್ಲ. ಆವರು ನನ್ನನ್ನು ಅವರ ಮೀಟಿಂಗಿಗೆ ಆಹ್ವಾನಿಸಿ ಅಮ್ಮ ಪ್ರಕೋಪವನ್ನು ಹೊರಪಡಿಸಿದ್ದರೆ ನಾನು ಅಶಕ್ತನಿದ್ದರೂ ಅವರನ್ನು ಸಕಾರಣವಾಗಿ ಸಂತೈಸಲು ಪ್ರಯತ್ನಿಸುತ್ತಿದ್ದೆ.

ನಾನು ಯಾವ ವಿಧದಿಂದಲೂ ಭರವಸೆಯನ್ನು ಮುರಿದಿಲ್ಲವೆಂಬುದನ್ನು ಕಂಠೋಕ್ತವಾಗಿ ಹೇಳಬಲ್ಲೆ. ನನಗೆ ತಿಳಿದಿರುವ ಮಟ್ಟಿಗೆ ನನ್ನ ರಾಜಕೀಯ ಹಾಗೂ ಅಂತರೀಯ ಅನುಭವದಲ್ಲಿ ನನ್ನ ಯಾವುದೊಂದು ಅಭಿವಚನವನ್ನು ಮುರಿದದ್ದು ಗೊತ್ತಿಲ್ಲ ಈ ಸಂದರ್ಭದಲ್ಲಿ ಆ ವಾಗ್ದಾನದ ಪ್ರಶ್ನೆಯೇ ಬರುವುದಿಲ್ಲ. ಆತುರದಲ್ಲಿ ನಾನು ಬರೆದ ಪತ್ರದಲ್ಲಿ ಸ್ಪಷ್ಟವಾಗಿಲ್ಲದ ಒಂದು ಗರಲ್ಲಿ ಭಿನ್ನಾಭಿಪ್ರಾಯ ಬಂದಿರಬಹುದು. ಆದರೆ ನನ್ನ ಮಾರ್ಚ್ 11ರ ಪತ್ರದೊಡನೆ ಇದನ್ನು ಓದಿದರೆ ಯಾರಿಗೂ ಯಾವ ಅಸಮಾಧಾನವಾಗಲೂ ಕಾರಣವಿಲ್ಲ. ರಾಜಕೋಟೆಯ ನನ್ನ ವಕೀಲ ಮಿತ್ರರಿಂದ ಆ ಕಾಗದಗಳನ್ನು ನಿಷ್ಪಕ್ಷಪಾತೀಯ ದೃಷ್ಟಿಯಿಂದ ಓದಿಸಿ ಅವರ ಅಭಿಪ್ರಾಯ ತೆಗೆದೇ ನಾನು ಪತ್ರವನ್ನು ಕಳುಹಿಸಿದ್ದಾಗಿದೆ.

ನಿರಪರಾಧಿಯರಾದ ಹೆಂಗಸರು ಮಕ್ಕಳ ಪ್ರಾರ್ಥನಾ ಸಮಯದಲ್ಲಿ ಅನಾವಶ್ಯದ ತೊಂದರೆಯನ್ನು ಹಾಕಿದ್ದರಿಂದ ಅವರು ತಮ್ಮ ಕಾರ್ಯ ಸಾಧಿಸಲಿಲ್ಲ. ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಮಾನವನ್ನು ಜಾರಿಗೆ ತರುವಲ್ಲಿ ತುಂಬಾ ಅಡಚಣೆಗಳಿವೆ. ಈಗಿನ ನನ್ನ ಪರಿಸ್ಥಿತಿಯಲ್ಲಿ ಈ ವಿಚಾರ ನಾನು ತರ್ಕಿಸೆನು. ಸರ್ದಾರರ ಸೂಚನಾ ಪತ್ರದಲ್ಲಿ ಕೆಲವೊಂದು ಪಂಗಡದ ಪ್ರತಿನಿಧಿಗಳ ಹೆಸರನ್ನು ನಾನು ಸೇರಿಸಿಲ್ಲವೆಂಬ ಕಾರಣದಿಂದ ನನ್ನ ಮೇಲೆ ರೇಗಿ ಬೇಸರವಿದ್ದರೆ ಅವರೂ ಆ ವ್ಯಸನದಲ್ಲಿ ನನ್ನೊಡನೆ ಭಾಗಿಗಳಾಗಲಿ. ಅವರ ವ್ಯಸನವನ್ನು ಪರಿಹರಿಸಲು ಯಾವ ನ್ಯಾಯ ಮಾರ್ಗವನ್ನೂ ಅವರು ಅನುಸರಿಸಬಹುದು. ಇಂದು ಅವರು ಅನುಸರಿಸಿದ ವಿಧಾನವು ತೀರಾ ಅಸಹನೀಯ, ಹಾಗೂ ಅಸಭ್ಯತೆಯಿಂದಕೂಡಿದ್ದು.'

ಮುಸ್ಲಿಮರ ನಿಶೇಧ.

ರಾಜಕೋಟೆ ಸುಧಾರಣಾ ಕಮಿಟಿ ನೇಮಕದ ವಿಚಾರದಲ್ಲಿ ಸರ್ದಾರ್ ಪಟೇಲರ ಮತ್ತು ಗಾಂಧಿಜೀಯವರ ವರ್ತನೆಯನ್ನು ತಮ್ಮ ಪ್ರತಿನಿಧಿಯನ್ನು ಸೇರಿಸಲಿಲ್ಲವೆಂಬ ಕಾರಣ ಅತೃಪ್ತಿಯನ್ನು ಸೂಚಿಸಲು ಸೇರಿದ ಮುಸ್ಲಿಮರ ಸಭೆಯು ತೀವ್ರವಾಗಿ ಖಂಡಿಸಿತು. ನೆರೆದ ಜನರು ಇದಕ್ಕಾಗಿ ಯಾವ ಚಳವಳವನ್ನು ಕೈಕೊಂಡರೂ ತಾವೆಲ್ಲರೂ ಅದಕ್ಕೆ ಸಹಾಯ ನೀಡುವದಾಗಿ ತೀರ್ಮಾನಿಸಿರುವರು.

ವೈಸರಾಯರಿಗೆ ಪುಕಾರು

ಗಿರಸ್ಯಾ ಸಂಸ್ಥೆಯವರು ತಮ್ಮ ಪ್ರಾತಿನಿಧ್ಯವನ್ನು ಅಂಗೀಕರಿಸಲಿಲ್ಲವೆಂದೂ, ಆದ್ದರಿಂದ ಗಾಂಧಿಜೀಯವರಿಗೆ ಹೇಳಿ ನಮ್ಮ ಪ್ರಾತಿನಿಧ್ಯವನ್ನು ಕಮಿಟಿಯಲ್ಲಿ ಸೇರಿಸಬೇಕೆಂದೂ, ಇಲ್ಲವೇ ನಮ್ಮ ಈ ಕೇಳಿಕೆಯ ತೀರ್ಮಾನದ ಬಗ್ಗೆ ಇದನ್ನು ಮುಖ್ಯ ನ್ಯಾಯಾಧೀಶರಿಗೆ ವಹಿಸಬೇಕೆಂದೂ ಗಾಂಧಿಜೀಯವರ ಇಂದಿನ ವರ್ತನೆಯು ಅವರು ಅವಿಚಲವಾಗಿ ಹೋರಾಡುತ್ತಿರುವ ಪ್ರಜಾಪ್ರಭುತ್ವ ತತ್ವಕ್ಕೆ ಪೂರ್ಣ ವಿರೋಧವಿರುವದೆಂದೂ ಇಲ್ಲವೇ ತಾವು ಅಹಿಂಸಾ ಪೂರಿತ ಸತ್ಯಾಗ್ರಹವನ್ನು ಕೈಕೊಳ್ಳುವೆವೆಂದೂ ತಿಳಿಸಿರುವರು. ಅನೇಕ ಮುಸ್ಲಿಂ ಅಂಗಡಿಗಳು ಇದಕ್ಕೆ ನಿಷೇಧ ಸೂಚಿಸಿ ಮುಚ್ಚಲ್ಪಟ್ಟಿದ್ದವು.

ಗಾಂಧಿಜೀಯವರ ಪತ್ರ

ಸುಧಾರಣಾ ಕಮಿಟಿಗೆ ಹೆಸರುಗಳನ್ನು ಸೂಚಿಸಿದನಂತರ ಗಾಂಧಿಯವರು ಠಾಕೂರು ಸಾಹೇಬರಿಗೆ ಒಂದು ಪತ್ರ ಬರೆದಿರುವರು. ಅದರಲ್ಲಿ ಠಾಕೂರು ಸಾಹೇಬರು ಸೂಚಿಸಿದ ನಾಲ್ಕು ಹೆಸರುಗಳನ್ನು ಸುಧಾರಣಾ ಕಮಿಟಿಯಲ್ಲಿ ಸೇರಿಸುವ ಭಾರವನ್ನು ತನ್ನ ಮೇಲೆ ಇಟ್ಟು ತನ್ನ ಪತ್ರವನ್ನು ಬೇರೆ ವಿಧದಲ್ಲಿ ತಪ್ಪರ್ಥ ಮಾಡಿಕೊಂಡದ್ದು ಪೂರ್ಣ ತಪ್ಪೆಂದೂ, ಸುಧಾರಣಾ ಕಮಿಟಿಯಲ್ಲಿ ಅವರನ್ನು ಸೇರಿಸುವ ಅಧಿಕಾರ ತನಗಿಲ್ಲದಿರುವಾಗ ಅದನ್ನು ನಡೆಸಿಕೊಡಲು ಭರವಸೆ ಕೊಡುವದು ಅಸಾಧ್ಯವಾಗಿತ್ತೆಂದೂ, ಠಾಕೂರ್ ಸಾಹೇಬರ ಜವಾಬ್ದಾರಿಕೆಗಳನ್ನೆಲ್ಲಾ ತನ್ನ ಹೆಗಲಲ್ಲಿರಿಸಿ ಸರ್ದಾರ್ ಪಟೇಲರಿಗೆ ಸಿಕ್ಕಿದ ಸುಸಂದರ್ಭವನ್ನು ತಪ್ಪಿಸಲು ಯತ್ನಿಸಿದ್ದು ವಿಷಾದಕರವೆಂದೂ, ಈಗ ಸುಧಾರಣಾ ಕಮಿಟಿಗೆ ಠಾಕೂರು ಸಾಹೇಬರು ಮೂರು ಹೆಸರುಗಳನ್ನು ಸೂಚಿಸಬೇಕಿರುವುದರಿಂದ ಹಿಂದುಳಿದ ಪಂಗಡದವರ ಯಾ ಮುಸ್ಲಿಮರ ಹಿತಚಿಂತನೆಯಿಂದ ಯಥೋಚಿತ ವರ್ತಿಸುವದು ಸಾಧ್ಯವಿದೆಯೆಂದೂ ಸೂಚಿಸಿರುವರು.

ಗಾಂಧಿ-ಗಿರಸ್ಯಾನರ ಪತ್ರ ವ್ಯವಹಾರ.

ಗಿರಸ್ಯಾನರು ತಮ್ಮ ಅತೃಪ್ತಿಯನ್ನು ಸೂಚಿಸಿ ಸತ್ಯಾಗ್ರಹ ಹೂಡುವದಾಗಿ ಗಾಂಧಿಜೀಯವರಿಗೆ ತಿಳಿಸಿರುವರು. ಅಲ್ಲದೆ ಈ ಸಮಸ್ಯೆಯನ್ನು ಚೀಫ್ ಜಸ್ಟೀಸರವರ ತೀರ್ಮಾನಕ್ಕೆ ಬಿಡಬೇಕೆಂದೂ ಅವರು ಹೇಳಿದ್ದರು. ಇದಕ್ಕೆ ಉತ್ತರವಾಗಿ ಗಾಂಧಿಜೀಯವರು ಇಕ್ಕಡೆಯಲ್ಲಿ ಸಂಶಯಗಳು ತುಂಬಿರುವಾಗ ಪ್ರತಿಯೊಂದು ಶಬ್ದವು ವಿಪರೀತ ಅರ್ಥಕೊಡುವದು ವಾಸ್ತವವೆಂದೂ ತಮ್ಮ ನಿಷ್ಪಕ್ಷಪಾತೀಯ ಕಾಗದವನ್ನು ವಿಪರೀತ ಅರ್ಥಮಾಡಿಕೊಂಡದ್ದು ವಿಷಾದಕರವೆಂದೂ, ಪ್ರಾತಿನಿಧಿತ್ವದ ಈ ಸಮಸ್ಯೆಯನ್ನು ಮುಖ್ಯನ್ಯಾಯಾಧೀಶರಿಗೆ ಒಪ್ಪಿಸಿ ಅವರಿಗೆ ಪುನಹ ತೊಂದರೆ ಕೊಡುವ ಇಷ್ಟ ತನಗಿಲ್ಲವೆಂದೂ, ಬೇರೆ ಯಾವ ನ್ಯಾಯಾಧೀಶರಿಗೂ ಇದನ್ನೊಪ್ಪಿಸಲು ತನ್ನ ಸಮ್ಮತಿ ಇರುವದಾಗಿಯೂ ತಿಳಿಸಿರುವರು.

ಠಾಕೂರ್ ಸಾಹೇಬರ ನಿರ್ಧಾರ.

ಸರ್ದಾರ ಪಟೇಲರ ಪರ ಗಾಂಧೀಯವರು ಸೂಚಿಸಿರುವ ಹೆಸರುಗಳಲ್ಲಿ ಒಂದನ್ನು ಬಿಟ್ಟು ಬಾಕಿ ಹೆಸರುಗಳ ಬಗ್ಗೆ ಸುಧಾರಣಾ ಕಮಿಟಿಯ ಸದಸ್ಯತ್ವಕ್ಕೆ ತನ್ನ ಡಿಸೆಂಬರು 26 ನೇ ಜಾಹೀರಾತಿನ ಮೇರೆ ಇರಬೇಕಾದ ಅರ್ಹತೆಯಿದೆಯೋ ಎಂಬ ವಿಚಾರ ತರ್ಕಿಸುವರೆಂದೂ, ಈ ವಿಚಾರದಲ್ಲಿ ದರ್ಬಾರನ್ನು ಒಪ್ಪಿಸುವ ಬಗ್ಗೆ ಸದಸ್ಯರ ಅವರ ಅರ್ಹತಾ ಪತ್ರಗಳನ್ನು ಕೊಡಬೇಕೆಂದು ಕೇಳುವರೆಂದೂ ನಂಬಲಾಗಿದೆ ಈ ವಿಚಾರ ವಿಮರ್ಶೆಗಳು ನಡೆಯುವವರಿಂದ ಸುಧಾರಣಾ ಕಮಿಟಿಯು ಒಡನೇ ಕಾರ್ಯ ಕೈಗೊಳ್ಳುವ ಸಂಭವವಿಲ್ಲ ಅಂತು ಗಿರಸ್ಯಾನರ ಪ್ರಾತಿನಿಧ್ಯದ ಸಮಸ್ಯೆಯು ಫೆಡರಲ್ ಕೋರ್ಟಿನ ನ್ಯಾಯಾಧೀಶರ ಯಾ ಇತರ ಯಾವದಾದರೂ ನ್ಯಾಯಾಧಿಪತಿಗಳ ತೀರ್ಮಾನಕ್ಕೆ ಒಪ್ಪಿಸಲ್ಪಡುವ ಪ್ರಯುಕ್ತ ಅದು ಒಂದು ಹೊಸ ಅಂಕವನ್ನು ಹೊಂದಿದ ಮುಂದಿನ ಪರಿಸ್ಥಿತಿ ವಿಚಾರಣೀಯವಾಗಿದೆ

ವಿದುರನಗರದ ಪ್ರದರ್ಶನದಲ್ಲಿ ಡಾ. ಪಟ್ಟಾಭಿಯವರ ಭಾಷಣ.

ತಾ. 12ರ ಸಾಯಂಕಾಲ ಡಾ. ಪಟ್ಟಾಭಿ ಸೀತಾರಾಮಯ್ಯನವರು ವಿದುರಾಶ್ವತ್ಥ ಖಾದಿ ಮತ್ತು ಸ್ವದೇಶಿ ಪ್ರದರ್ಶನದ ಉದ್ಘಾಟನ ಸಮಾರಂಭ ಮಾಡುತ್ತ ಯಂತ್ರಗಳ ಪ್ರಾಬಲ್ಯದಿಂದ ಆಗುವ ಹಾನಿಯನ್ನು ವಿವರಿಸಿದರು. ಅವರು ಈ ರೀತಿ ಭಾಷಣ ಮಾಡಿದರು:—'ನಾವು ಕೈಗಾರಿಕೆಗೆ ಪ್ರೋತ್ಸಾಹನ ಕೊಡಿರೆಂದು ಹೇಳುವ ಸಮಯದಲ್ಲೆಲ್ಲ ಯಂತ್ರಗಳಿಂದ ಆಗುವ ಹಾನಿಯ ಬಗ್ಗೆ ಎಚ್ಚರಿಕೆ ಕೊಡುತ್ತ ಬಂದಿದ್ದೇವೆ. ಯಂತ್ರಗಳು ನಮ್ಮ ನಿಯಂತ್ರಣದಲ್ಲಿದ್ದರೆ ಅವು ಒಳ್ಳೆ ಉಪಯುಕ್ತವಾಗಬಹುದು. ಆದರೆ ಅವುಗಳು ಪ್ರಬಲವಾಗಿರೆ ಅಪಾಯವುಂಟು. ಯಂತ್ರಗಳೇ ಸಾಮ್ರಾಜ್ಯತ್ವಕ್ಕೆ ಮೂಲ. ಸಾಮ್ರಾಜ್ಯತ್ವವು ದಂಡಿನಾಳಿಕೆಗೆ ಸಮಾನವು. ಆತ್ಮನಾಶ ಮತ್ತು ಪರರ ನಾಶವೇ ಅದರ ಪರಿಣಾಮ. ಮರಣೋನ್ಮುಖವಾದ ಕೈಗಾರಿಕೆ ಮತ್ತು ಖಾದಿಗೆ ಯೋಗ್ಯ ಪ್ರೋತ್ಸಾಹನೆ ಕೊಡತಕ್ಕದ್ದು ಆಯಾ ಸಂಸ್ಥಾನಗಳು ತಮಗೆ ಅನುಕೂಲವಿದ್ದ ಬೇರೆ ಬೇರೆ ಉದ್ಯೋಗ ಧಂದೆಗಳಿಗೆ ಪ್ರೋತ್ಸಾಹ ಕೊಟ್ಟರೆ ಗ್ರಾಮ ಕೈಗಾರಿಕೆಗಳ ಪುನರುಜ್ಜೀವನಕ್ಕೆ ಅವರೊಳ್ಳೇ ಕೆಲಸ ಮಾಡಿದಂತಾಗುವದು. ಮೈಸೂರ ಸರಕಾರದವರು ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಒಳ್ಳೇ ಪ್ರೋತ್ಸಾಹನೆ ಕೊಟ್ಟದ್ದಕ್ಕಾಗಿ ಅಭಿನಂದನೆಗೆ ಪಾತ್ರರಿರುವರು. ಚೆನ್ನಪಟ್ಟಣದ ಆಟಿಕೆಯ ಸಾಮಾನುಗಳು ರೇಶಿಮೆ ವಸ್ತ್ರಗಳು ಮುಂತಾದ ಎಲ್ಲ ಕೈಗಾರಿಕೆಗಳು ಮೈಸೂರ ಸಂಸ್ಥಾನ ಸರಕಾರದ ಪ್ರೋತ್ಸಾಹನೆಯಿಂದಲೇ ಪ್ರಸಾರ ಹೊಂದಿವೆ ಸಂಸ್ಥಾನಿಕರೊಡನೆ ಉಳಿದ ಅನೇಕ ವಿಷಯಗಳ ಬಗ್ಗೆ ನಾವು ಬಡೆದಾಡಬಹುದಾದರೂ ನಮ್ಮ ಪ್ರಾಚೀನ ಕಲಾ ಕೈಗಾರಿಕೆಗಳನ್ನುಳಿಸಲು ಅವರು ಬ್ರಿಟಿಷರಿಗಿಂತ ಹೆಚ್ಚು ಪ್ರಯತ್ನಿಸಿರುವರೆಂಬುದಕ್ಕೆ ನಾವೆಲ್ಲರೂ ಸಮಾಧಾನಪಡಬೇಕಾಗಿದೆ. ಇದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ'

ಪರಿಷತ್ತು ಯಶಸ್ವಿಯಾಗಲೆಂದು ಪಂಡಿತ ಜವಾಹರಲಾಲರಿಂದ ಬಂದ ಸಂದೇಶವನ್ನೋದಲಾಯಿತು.

ಬಾ ತ್ಮೆ.

ಮಾಯಮುಡಿ ಶ್ರೀರಾಮಮಂದಿರ

ಮಾಯಮುಡಿ ಗ್ರಾಮದಲ್ಲಿ ಶ್ರೀರಾಮಮಂದಿರದ 9ನೇ ವಾರ್ಷಿಕೋತ್ಸವವನ್ನು ಹೊಸ ಕಟ್ಟಡದಲ್ಲಿ ಪಳಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ತಾ. 6 ನೇ ಶನಿವಾರ ದಿನ 2 ಗಂಟೆಗೆ ನಡೆಸಲ್ಪಟ್ಟಿತು. ಇವರು ವೇದಾಂತ ಮತ್ತು ಭಕ್ತಿಯ ವಿಷಯವನ್ನು ಜನರಿಗೆ ಕರ್ಣಾನಂದವಾಗುವ ಹಾಗೆ ಭಾಷಣ ಮಾಡಿದರು. ನೆಲ್ಲಮಕ್ಕಳ ಶ್ರೀಮತಿ ಅಕ್ಕಮ್ಮನವರು ಪತಿಭಕ್ತಿಯ ವಿಷಯ ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ಶ್ರೀ ಗಳಾಡ ಕಡೇಮಾಡ ಪೂವಯ್ಯ, ಜಂಗಮರ ಸೋಮಯ್ಯ, ಮನೆಯಪಂಡ ಪೂಣ್ಣಪ್ಪ ಬಿ ಎ ಬಿ ಎಲ್. ರವರು, ಪುತ್ತಮನೆ ಕಾಳಯ್ಯನವರು, ಮತ್ತು ಜಂಗಮರ ವೀರಭದ್ರಪ್ಪನವರು ಭಕ್ತಿಯ ವಿಷಯವಾಗಿಯೂ, ರಾಮನಾಮದ ಮಹಿಮೆಯ ವಿಷಯವಾಗಿಯೂ ಸ್ವಾರಸ್ಯವಾದ ಭಾಷಣವಿತ್ತರು ಕುಯಿಮಂಡ ಕಾಳಯ್ಯನವರು ಕಬೀರದಾಸರ ಹರಿಕಥೆಯನ್ನು ಬಹು ಭಕ್ತಿರಸವಾಗಿ ಜನರಿಗೆ ಕರ್ಣಾನಂದವಾಗುವ ಹಾಗೆ ನಡೆಸಿದರು. ಅಧ್ಯಕ್ಷರ ಕಡೇ ಭಾಷಣದಿಂದ ಶಾಲೆಯ ಹುಡುಗರಿಗೆ ಇನಾಂ ಹಂಚಿ ಗೋವಿಂದ ನಾಮಸಂಕೀರ್ತನೆಯಿಂದ ಸಭೆಯು ಬರಕಾಸ್ತು ಮಾಡಲಾಯಿತು

ಮಾಯಮುಡಿ,
ಭಕ್ತ ಮಂಡಳಿ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಸಮತಾವಾದಿ ಮುಖಂಡರ ಹೇಳಿಕೆ.

ಗಾಂಧಿ-ಬೋಸರ ಭೇಟಿ
ಒಡನೇ ಆಗಬೇಕು-ವರ್ಕಿಂಗ್ ಕಮಿಟಿಯ ನೇಮಕ ನಡೆಯಬೇಕು-ಅದರಲ್ಲಿ ಎಲ್ಲಾ ಪಂಗಡದ ನುರಿತ ಪ್ರತಿನಿಧಿಗಳಿರಬೇಕು. ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಬೇಕು ನವಚೈತನ್ಯದಿಂದ ಕೂಡಿ ಕಾಂಗ್ರೆಸ್ ಪ್ರಗತಿಪಥದಲ್ಲಿ ನಡೆಯಬೇಕು.

ಸಮತಾವಾದ ಪಂಗಡದ ಮುಖಂಡರಾದ ಶ್ರೀ ಜಯಪ್ರಕಾಶನಾರಾಯಣ ಹಾಗೂ ಪಿ ಸಿ. ಜೋಶಿಯವರು ತಾರೀಕು 17 ರಲ್ಲಿ ರಾಷ್ಟ್ರಪತಿ ಬೋಸರ ಭೇಟಿ ತೆಗೆದುಕೊಂಡ ನಂತರ ವರ್ಕಿಂಗ್ ಕಮಿಟಿಯ ನೇಮಕವಾಗದ್ದರ ವಿಚಾರ ಈ ಹೇಳಿಕೆಯನ್ನು ಕೊಟ್ಟಿರುವರು.

'ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನೇಮಕವಾಗದೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಸೇರಿದ್ದೇ ಆದರೆ ಅಲ್ಲಿ ಸಂಶಯ ಮತ್ತು ಹೆಚ್ಚಿನ ಗೊಂದಲವು ಬರುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಕೂಡುವದಕ್ಕೆ ಮೊದಲು ವರ್ಕಿಂಗ್ ಕಮಿಟಿಯು ನೇಮಕವಾಗುವದರಿಂದ ದೇಶಕ್ಕೆ ಹಿತವಾಗುವದು. ವರ್ಕಿಂಗ್ ಕಮಿಟಿಯ ನೇಮಕವು ಗಾಂಧಿ-ಸುಭಾಷರೊಳಗಿನ ಪತ್ರವ್ಯವಹಾರದಿಂದ ನೇಮಿಸಲ್ಪಡುವದು ದುಸ್ತರವು. ಆದ್ದರಿಂದ ಗಾಂಧಿ-ಸುಭಾಷರು ಭೇಟಿಯಾಗಿ ವಿವೇಚಿಸುವದು ಅವಶ್ಯವಾಗಿದೆ ರಾಜಕೋಟೆ ಸಮಸ್ಯೆಯ ಪರಿಣಾಮದಿಂದಾಗಿ ಈ ಭೇಟಿಯು ತಾರೀಕು 26 ರೊಳಗೆ ಅಸಾಧ್ಯವಾದ ಪಕ್ಷ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗನ್ನು ಸ್ವಲ್ಪ ಮುಂದರಿಸಿಡುವದು ಉತ್ತಮ.

ವರ್ಕಿಂಗ್ ಕಮಿಟಿಯ ನೇಮಕದಲ್ಲಿ ಅನಾಧಾರವಾದ ವಿಚಾರಗಳನ್ನು ತರ್ಕಿಸಕೂಡದು. ಬಿಕ್ಕಟ್ಟಿನ ಸಮಸ್ಯೆಗಳು ಯಾವ ತೊಡಕೂ ಇಲ್ಲದೆ ತೀರ್ಮಾನವಾಗುತ್ತಾ ಬಂದಿರುವವು. ಈ ವರ್ಷದ ಕಾರ್ಯಕ್ರಮವು ವರ್ಕಿಂಗ್ ಕಮಿಟಿಯ ನೇಮಕದ ಮೇಲೆ ನಿಂತಿಲ್ಲವಾದ್ದರಿಂದ ಆ ವಿಚಾರ ನೇಮಕದಲ್ಲಿ ತರ್ಕಿಸಲ್ಪಡಕೂಡದು. ಕಾಂಗ್ರೆಸ್ ನಿಘಂಟುಗಳಿಗನುಸಾರವಾಗಿ, ಕಾಂಗ್ರೆಸ್ ಅಧಿವೇಶನದ ತೀರ್ಮಾನಕ್ಕನುಗುಣವಾಗಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಒಪ್ಪಿಗೆಯಂತೆ, ಗಾಂಧಿಜೀಯವರ ಇಷ್ಟದಂತೆ ವರ್ಕಿಂಗ್ ಕಮಿಟಿಯು ನೇಮಿಸಲ್ಪಡಬೇಕು. ವರ್ಕಿಂಗ್ ಕಮಿಟಿಯು ಜಾಣಾಕ್ಷ, ತ್ಯಾಗವೀರರಿಂದ ಎಲ್ಲಾ ಪಂಗಡಗಳಿಂದ ಆರಿಸಿದ ಮುಖಂಡರಿಂದ ಕೂಡಿರಬೇಕು. ಇಂದಿನ ಅಂತರ ರಾಷ್ಟ್ರೀಯ ಹಾಗೂ ದೇಶೀಯ ಅವ್ಯವಸ್ಥೆಯ ದೃಷ್ಟಿಯಿಂದ ಇದು ಪ್ರಾಮುಖ್ಯ ವಿಚಾರವಾಗಿದೆ. ಆದ್ದರಿಂದ ಗಾಂಧಿಜೀಯವರು ಈ ಬೇಕುಬೇಡಿಕೆಗಳನ್ನು ಮರೆಯಲಾರರೆಂದು ನಂಬುವೆವು. ಇಂಥಾ ಅಮೋಘ ಸಮಸ್ಯೆಯನ್ನು ಯೋಚಿಸುವ ಸಂದರ್ಭದಲ್ಲಿ ಅವರಿಗೆ ಯಾವ ಆತಂಕವೂ ಬರದಿರಲೆಂದು ನಾವು ನಂಬುವೆವು. ತ್ರಿಪುರ ರಣವಿನ್ಯಾಸ ಗಾಂಧಿಜೀಯವರು ವರ್ತಿಸುವದು ಹಿತವಿದೆ. ಈ ಅಪ್ರಾಸಂಗಿಕ ತೊಂದರೆಗಳು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ತುಂಬಾ ಕಳವಳವನ್ನುಂಟುಮಾಡುವದರಿಂದ ಕಾಂಗ್ರೆಸಿನ ಒಕ್ಕಟ್ಟು ಮತ್ತು ಪ್ರತಿಷ್ಠೆಯು ಹಾಳಾಗುವದರಲ್ಲಿ ಸಂಶಯವಿಲ್ಲ ಅಲ್ಲದೆ ಇದರಿಂದ ದೇಶದ ಮುಂದಿರುವ ಪ್ರಧಾನ ಸಮಸ್ಯೆಗಳ ಕಡೆಯಿಂದ ಜನತೆಯ ದೃಷ್ಟಿಯು ಬಹಿರ್ಮುಖವಾಗುವದರಲ್ಲೂ ಸಂದೇಹವಿಲ್ಲ. ಇಂದು ಕಾಂಗ್ರೆಸಿನ ಮುಂದಿರುವ ಜಟಿಲ ಪ್ರಶ್ನೆಗಳೆಂದರೆ ಹೇಗೆ ಕಾಂಗ್ರೆಸ್ ಸಂಸ್ಥೆ ಮತ್ತು ಭಾರತವು ಅಂತರರಾಷ್ಟ್ರೀಯ ಯುದ್ಧದ ಸಂದರ್ಭದಲ್ಲಿ ವರ್ತಿಸಬೇಕು? ತ್ರಿಪುರ ಕಾಂಗ್ರೆಸಿನ ತೀರ್ಮಾನದಂತೆ ಹೇಗೆ ಕಾರ್ಯಕ್ರಮ ಕೈಗೊಳ್ಳಬೇಕು? ಹೇಗೆ ಸಾರ್ವಭೌಮತ್ವದ ಬುಡಕ್ಕೆ ಕೊಡಲಿ ಹಾಕುವ ಚಳವಳವನ್ನು ಹೂಡಲಾದೀತು? ಎಂಬುದೇ ಆಗಿದೆ. ಆದ್ದರಿಂದ ಒಡನೇ ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಭೆಯು ಈ ವಿಚಾರಗಳನ್ನು ವಿಮರ್ಶಿಸಿ ಸುಗಮವಾದ ಹಾದಿಯನ್ನು ತೋರಿಸಬೇಕಿದೆ. ತಮ್ಮ ತೀರ್ಮಾನದಿಂದ ಜನತೆಯಲ್ಲಿ ಒಕ್ಕಟ್ಟು ವಿಶ್ವಾಸ ಬೆಳೆಯುವಂತೆ ಮಾಡಬೇಕಿದೆ. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಭಾರತೀಯರ ಮುಂದಿರುವ ಈ ಸಮಸ್ಯಗಳನ್ನು ನಿವಾರಿಸಿ ಜನತೆಯಲ್ಲಿ ಹೊಸ ಚೈತನ್ಯವನ್ನು ತುಂಬಲೆಂದು ಆಶಿಸುವೆವು.' ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗನ್ನು ಮೊದಲು ನಿಶ್ಚಯಿಸಿದ್ದಂತೆ ಏಪ್ರಿಲ್ 28 ರಿಂದ 29 ಕ್ಕೆ ಮುಂದರಿಸಿಡಲಾಗಿದೆ. ಹೊಸ ವರ್ಕಿಂಗ್ ಕಮಿಟಿಯು ಒಂದು ದಿನಕ್ಕೆ ಮುಂಚೆ ಅಂದರೆ ತಾರೀಕು 28 ರಲ್ಲಿ ಕೂಡಬೇಕೆಂದು ನಿರ್ಧಾರವಾಗಿದೆ.

ಈ ವಾರದ ಕಥೆ.

ಕಮಲೆ.

(ಲೇ–ಗಣೇಶ, ಮಡಿಕೇರಿ.)

ಕಮಲೆಗೆ ಷೋಡಶ ಪ್ರಾಯವಾಗಿತ್ತು. ಯೌವನದಿಂದ ತುಂಬಿತುಳುಕುತ್ತಿರುವ ಕಮಲೆಯ ರೂಪನ್ನು ವರ್ಣಿಸುವದು ನನ್ನ ಬಡ ಲೇಖನಿಗೆ ಅಸಾಧ್ಯವಾದ ಕೆಲಸ. ಕೋಮಲವಾದ ಆ ದೇಹ, ಚಂಚಲ ದೃಷ್ಟಿಯ ಆ ಕಣ್ಣುಗಳು ಕಮಲದಳವನ್ನು ಹೀಯಾಳಿಸುವಂತಿರುವ ಆ ಕಪೋಲಗಳು, ಹೆಚ್ಚೇಕೆ? ಕಮಲೆಯ ಒಂದು ನೋಟವು ಅನೇಕ ವರ್ಷ ತಪಸ್ಸು ಹಾಗೂ ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಿರುವ ವೈರಾಗಿಯನ್ನೂ ಸಹ ಚಂಚಲಚಿತ್ತನನ್ನಾಗಿ ಮಾಡುವಂತಿತ್ತು. ಕಮಲೆಯು ಕಾನ್ವೆಂಟಿನಲ್ಲಿ ಕಲಿತವಳು. ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಳು. ಕಾನ್ವೆಂಟಿನಿಂದ ವಿದ್ಯೆ ಮುಗಿಸಿ ಕಮಲೆಯು ಮನೆಯಲ್ಲಿಯೇ ಇದ್ದಳು. ಬಾಲ್ಯದಿಂದಲೂ ಕಾನ್ವೆಂಟಿನಲ್ಲೇ ತನ್ನ ವ್ಯಾಸಂಗವನ್ನು ಸಾಗಿಸಿದ್ದರಿಂದ ಆಕೆಗೆ ತನ್ನ ನೆರೆಹೊರೆಯವರ ಪರಿಚಯವೇ ಇಂದಿಲ್ಲ. ಕಮಲೆಯ ಮನೆಯ ನೆರೆಯಲ್ಲಿ ಮಾಧವರಾಯರ ಮನೆ. ಅವರು ಸ್ಥಿತಿವಂತರೇನೂ ಅಲ್ಲದಿದ್ದರೂ, ತಮ್ಮ ವ್ಯವಸಾಯೋತ್ಪತ್ತಿಯಿಂದ ಸರಳ ಜೀವನವನ್ನು ನಡೆಸುತ್ತಿದ್ದರು. ಹೀಗೆ ಮನೆಯಲ್ಲಿ ಕಷ್ಟವಿದ್ದರೂ ಮಾಧವರಾಯರು ತಮ್ಮ ಒಬ್ಬನೇ ಮಗನಾದ ಕರುಣಾಕರನ ವಿದ್ಯಾಭ್ಯಾಸಕ್ಕೆ ತೊಂದರೆ ಮಾಡಿರಲಿಲ್ಲ. ಕರುಣಾಕರನು ಈಗ ಬಿ. ಎ. ಯಲ್ಲಿ ವ್ಯಾಸಂಗಮಾಡುತ್ತಿದ್ದನು. ಆತನ ಚಾಣಾಕ್ಷತೆಗೆ ಮೆಚ್ಚಿದ ಎರಡು ಸಿರಿವಂತರಿಂದ ಅವನಿಗೆ ಮಾಸಿಕ 20/-ರೂಪಾಯಿ ವಿದ್ಯಾರ್ಥಿ ವೇತನವೂ ಬರುತಿತ್ತು. ಕರುಣಾಕರನು ಅದೊಂದು ಬೇಸಿಗೆಯ ರಜಾದಲ್ಲಿ ಮನೆಗೆ ಬಂದಿದ್ದನು. ಒಂದು ದಿನ ಆಕಸ್ಮಾತು ಕರುಣಾಕರನು ಅತ್ತಿತ್ತ ತಿರುಗಾಡುತ್ತಿರುವಾಗ ಕಮಲೆಯ ದೃಷ್ಟಿಯು ಆತನ ಮೇಲೆ ಬಿತ್ತು. ಈ ಪ್ರಥಮ ದರ್ಶನದಲ್ಲಿಯೇ ಕಮಲೆಯು ಮುಗ್ಧೆಯಾದಳು. ಹೃದಯಾಂತರಾಳದಿಂದ 'ಆಧುನಿಕ ನವನಾಗರೀಕನಾದ ಈ ತರುಣನಾರಿರಬಹುದು' ಎಂಬ ಪ್ರಶ್ನೆಯು ಕಮಲೆಯನ್ನು ಭಾಧಿಸತೊಡಗಿತು. ಕ್ರಮೇಣ ಆತನ ಪರಿಚಯವು ಇವಳಿಗಾಯಿತು. ಕರುಣಾಕರನು ಕಮಲೆಯ ರೂಪ ಲಾವಣ್ಯಕ್ಕೆ ಮರುಳಾಗಿದ್ದನು. ಇವರ ಈ ಪರಿಚಯವು ಕ್ರಮವಾಗಿ ಬೆಳೆದು ಪ್ರೇಮದ ಅಂತಸ್ತಿಗೆ ತಲುಪಿತು. ಕಮಲೆಯು ಕರುಣಾಕರನಿಗೆ ತನ್ನ ಹೃದಯದಲ್ಲಿ ನೆಲೆಯನಿತ್ತಿದ್ದಳು. ಕರುಣಾಕರನು ಕಮಲೆಯನ್ನಗಲಿ ಹೋಗಲಾರದೆ ತನ್ನ ವ್ಯಾಸಂಗಕ್ಕೆ ತಿಲಾಂಜಲಿಯನ್ನಿತ್ತನು.

ಬಸವನಪುರವು ಚಿಕ್ಕ ಊರು. ಇದು ಪಟ್ಟಣಕ್ಕೆ ತೀರಾ ಹತ್ತಿರದಲ್ಲಿದ್ದುದರಿಂದ ಇಲ್ಲಿಯ ಜನವಸತಿ ಹೆಚ್ಚಾಗಿತ್ತು. ಅಲ್ಲೇ ಬಾಬೂರಾಯರ ಮನೆ. ಬಾಬೂರಾಯರೆಂದರೆ ತುಂಬಾ ಖ್ಯಾತಿವಂತ ವಕೀಲರು. ತಮ್ಮ ಅಮೋಘ ಶ್ರಮದಿಂದ ಅವರು ಅಪರಿಮಿತ ದ್ರವ್ಯವನ್ನು ಗಳಿಸಿದ್ದರು. ಬಾಬೂರಾಯರು ಈ ಚಿಕ್ಕ ಪಟ್ಟಣದಲ್ಲಿ ಉತ್ಪತ್ತಿ ಕಡಿಮೆಯೆಂದು ಬೆಂಗಳೂರಿನಲ್ಲಿ ತಮ್ಮ ಕೆಲಸವನ್ನು ನಡೆಸುತ್ತಿದ್ದರು. ಇವರ ಸಂಸಾರವೆಂದರೆ ಹೆಂಡತಿ ಜಾನಕಮ್ಮ ಮಕ್ಕಳಾದ ಲೀಲಾ ಮತ್ತು ಕಮಲೆ. ಲೀಲೆಯ ಮದುವೆಯು ಈ ಮೊದಲೇ ಚಿಕ್ಕನರಸೀಪುರದ ದಾಮೋದರ ರಾಯರೊಡನೆ ನಡೆದಿತ್ತು. ಚಿಕ್ಕನರಸೀಪುರವು ಬಸವನಪುರಕ್ಕೆ ಹತ್ತಿರವಾದ ಕಾರಣ ಬಾಬೂರಾಯರ ಇಲ್ಲಿಯ ಆಸ್ತಿಪಾಸ್ತಿಗಳ ಮೇಲ್ವಿಚಾರಣೆಯನ್ನು ದಾಮೋದರರಾಯರೇ ನೋಡುತ್ತಿದ್ದರು. ಬಾಬೂರಾಯರು ತಮ್ಮ ಭಾರವನ್ನೆಲ್ಲಾ ದಾಮೋದರರಾಯರ ಮೇಲಿರಿಸಿದ್ದರು. ದಾಮೋದರರಾಯರ ಮಾತೆಂದರೆ ಬಾಬೂರಾಯರಿಗೆ ವೇದವಾಕ್ಯದಂತಿದ್ದಿತು. ಕಮಲೆಯು ತನ್ನ ತಾಯಿಯೊಡನೆ ತನ್ನ ವಿದ್ಯಾವ್ಯಾಸಂಗ ಮುಗಿದ ನಂತರ ಇಲ್ಲೇ (ಬಸವನಪುರ) ಇರುತ್ತಿದ್ದಳು. ಇಲ್ಲೇ ಆಕೆಗೆ ಕರುಣಾಕರನ ಪರಿಚಯವೂ ಆದ್ದು.

ಬಾಬೂರಾಯರ ಕುಟುಂಬಕ್ಕೆ ಸರ್ವಾಧಿಕಾರಿಯಂತಿದ್ದ ದಾಮೋದರರಾಯರು ಕಮಲೆಯನ್ನು ತನ್ನ ಸ್ನೇಹಿತ ಶ್ಯಾಮರಾಯನಿಗೆ ಕೊಟ್ಟು ಲಗ್ನ ಮಾಡಿಸಬೇಕೆಂದು ನಿಶ್ಚಯಿಸಿದ್ದ. ಅಂತೆಯೇ ಅವನಿಗೆ ಮಾತೂ ಕೊಟ್ಟಿದ್ದ. ಈ ಪ್ರಸ್ತಾಪವನ್ನು ಬಾಬೂರಾಯರಿಗೆ ತಿಳಿಸಿದನು. ದಾಮೋದರರಾಯರ ಮೇಲೆ ಪೂರ್ಣ ಭರವಸೆಯಿಟ್ಟು ಬಾಬೂರಾಯರು ತಮ್ಮ ಸಮ್ಮತಿಯನ್ನು ಅದಕ್ಕೆ ಇತ್ತರು.

ಕಮಲೆಗೆ ಈ ವಿಚಾರ ತಿಳಿದೊಡನೆಯೇ ಭ್ರಾಂತಳಾದಳು. 'ಏನಿದು ವೈಪರೀತ್ಯ, ತಂದೆಯವರು ಪ್ರಖ್ಯಾತ ವಕೀಲರಿದ್ದರೂ ಸಹ ಈ ರೀತಿ ತಮ್ಮ ವರ್ತನೆಯನ್ನು ತೋರಿಸಿದ್ದೇಕೆ? ಹಾ ದೈವವೇ, ಪೂರ್ಣಪರಾಧೀನೆಯಾಗಿರುವ ಈ ಸ್ತ್ರೀ ದೇಹಕ್ಕೆ ಧಿಕ್ಕಾರವಿರಲಿ. ತನ್ನ ಮನಕಾಂಕ್ಷೆಯನ್ನು ನೆರವೇರಿಸಲಾಗದೆ ಇತರರ ಇಚ್ಛೆಯಂತೆ ವರ್ತಿಸಬೇಕಿರುವ ಈ ಪಾಪಿ ಜೀವನವು ಸುಡಲಿ' ಎಂದುಕೊಂಡು ದುಃಖಾತಿರೇಕದಿಂದ ಒಂದು ಪತ್ರವನ್ನು ಬರೆದು ತಂದೆಗೆ ಕಳುಹಿಸಿದಳು.

'ಪಿತಾ,

ನಿನ್ನ ಆಶಯವು ತಿಳಿಯಿತು. ನನ್ನನ್ನು ಲಗ್ನಮಾಡಿಕೊಡುವ ಮೊದಲು ನನ್ನದೊಂದು ಕೇಳಿಕೆ. ನಾನು ಈ ಕೆಲವು ದಿನಗಳಿಂದ ನಮ್ಮ ನೆರೆಮನೆಯ ಕರುಣಾಕರನನ್ನು ಪ್ರೀತಿಸುತ್ತಿರುವೆನು. ಆತನೇ ನನ್ನ ಜೀವನಾಧಾರನೆಂದು ನಂಬಿರುವೆನು. ಆತನಿಗೆ ನನ್ನ ಹೃದಯದಲ್ಲಿ ಇಂಬುಕೊಟ್ಟಿರುವೆನು. ಆತನನ್ನಗಲಿ ನನ್ನ ಜೀವವು ಬೇರೆ ಜೀವಿಸಲಾರದು. ಈ ಪವಿತ್ರ ಭಾರತಮಾತೆಯ ಧೀರ ಪುತ್ರರಂತೆ ಪಿತೃವಾಕ್ಯಪರಿಪಾಲನಾರ್ಥವಾಗಿ ಎಂಥಾ ವಸ್ತುವನ್ನಾದರೂ ಪತಿಯಾಗಿ ಸ್ವೀಕರಿಸುವೆನು. ಆದರೆ ಪಿತಾ ಹೃದಯವನ್ನು ಬೇರೆ ಇಟ್ಟು ಬರೆ ಮಾತಿನ ಪಾಲನೆಗಾಗಿ ನಡೆದರೆ ಅದರಿಂದ ಸುಖ ಲಭಿಸಿತೇ? ನನ್ನ ಪ್ರಾಣೇಶನೊಡನೆ ನನ್ನ ವಿವಾಹವನ್ನು ಬೆಳೆಸಿ ನನ್ನ ಕಷ್ಟವನ್ನು ನೀಗಿಸಲಾರೆಯಾ?

ಇತಿ ನಿನ್ನ ಪ್ರೀತಿಯ ಬಾಲಕಿ,
ಕಮಲೆ.'

ವಕೀಲರು ಪತ್ರವನ್ನೋದಿದರು. ದಿಗ್ಭ್ರಾಂತರಾದರು. ಇತ್ತ ಪುತ್ರಿಯ ಮೇಲಿನ ವ್ಯಾಮೋಹ ಒಂದೆಡೆ; ಅತ್ತ ಅಳಿಯನಿಗೆ ಮಾತುಕೊಟ್ಟ ದುಃಖ ಮತ್ತೊಂದೆಡೆ. ಆದ್ದರಿಂದ ತಾವೇ ಬಸವನಪುರಕ್ಕೆ ಬಂದರು. ಅಳಿಯನನ್ನು ಕರೆಸಿದರು, ವಿಚಾರಿಸಿದರು. ಕಡೆಗೆ ಅಳಿಯನ ಅಭಿಪ್ರಾಯದಂತೆಯೇ ಶ್ಯಾಮರಾಯರಿಗೆ ಮದುವೆಮಾಡಿಕೊಡಲು ನಿಷ್ಕರ್ಷೆಯಾಯಿತು. ಕಮಲೆಯು ದುಃಖತಾಪದಿಂದ ದಿನೇ ದಿನೇ ಕೃಶಳಾಗುತ್ತಾ ಬಂದಳು. ಕರುಣಾಕರನೊಡನೆ ಈ ವಿಚಾರ ತಿಳಿಸಿದಳು. ಕರುಣಾಕರನು ಜೀವನ್ಮೃತನಂತಾದನು. 'ಹಾ! ಕಮಲೇ ನಿನ್ನನ್ನಗಲೀ ಜೀವಿಸಲಾಪನೇ? ನಿನ್ನನ್ನಗಲಿ ಹೋಗುವ ಕಷ್ಟದಿಂದ ನನ್ನ ವ್ಯಾಸಂಗವನ್ನು ನಿಲ್ಲಿಸಿ ನಿನ್ನೊಡನೆ ಇದ್ದ ನನಗೆ ಈಗ ಇಂಥಾ ಕಷ್ಟವದಗಿ ತ್ರಿಶಂಕು ಸ್ವರ್ಗದಂತಾಯಿತೇ. ನಿನ್ನನ್ನಗಲೀ ಈ ಪಾಮರ ಜೀವನವನ್ನು ಸಾಗಿಸಲಿಚ್ಛಿಸುವೆನೇ? ಎಂದು ವ್ಯಸನದಲ್ಲಿ ತಲ್ಲೀನನಾಗಿ ಕರುಣಾಕರನು ಹುಚ್ಚನೋಪಾದಿ ವರ್ತಿಸತೊಡಗಿದನು.

ಇಂದು ಬಾಬೂರಾಯರ ಮನೆಯಲ್ಲಿ ಕೋಲಾಹಲ. ಒಂದೆಡೆ ವಾದ್ಯಗಳ ರಭಸ, ಮತ್ತೊಂದೆಡೆ ನೃತ್ಯ, ಇನ್ನೊಂದೆಡೆ ಗಾನ, ಮಗುದೊಂದೆಡೆ ನೆರೆದ ಮಹಾಜನರ ಗುಜುಗುಜು. ಅಂತೂ ಅಲ್ಲಿಯ ವಾತಾವರಣವೇ ಅಲ್ಲೋಲ ಕಲ್ಲೋಲವಾಗಿದೆ. ವಾಚಕ ಮಹಾಶಯರೇ! ಏನಿದು? ನಮ್ಮ ಕಮಲೆಯ ಮದುವೆ. ಬಲಾತ್ಕಾರದಿಂದ ಅಳಿಯನ ಕೃಗೊಂಬೆಯಾಗಿ, ಆತನ ಪ್ರಸನ್ನತೆಗಾಗಿ, ನಾಳೆ ಸುಖಿಸಿ ಬಾಳಬೇಕಿದ್ದ ತನ್ನ ಮಗಳ ಕಾಂಕ್ಷೆಯನ್ನು ನಿರ್ಮೂಲಮಾಡಲಿಕ್ಕಾಗಿ ಈ ರಭಸ! ಕಮಲೆಯ ಬಾಳನ್ನು ಗೋಳನ್ನಾಗಿ ಮಾರ್ಪಡಿಸುವ ಪೂರ್ವಚಿಹ್ನೆಯಿದು. ಅಂತು ಲಗ್ನವು ಸಾಂಗವಾಗಿ ನಡೆಯಿತು. ಕಮಲೆಯು ಈಗ ಶ್ಯಾಮರಾಯರ ಪತ್ನಿ. ಮನೋವ್ಯಾಧಿಯಿಂದ ಪೀಡಿತಳಾದ ಆಕೆಗೆ ಸಂಸಾರದಲ್ಲಿ ಸುಖವಿಲ್ಲ. ಶ್ಯಾಮರಾಯರ ವರ್ತನೆಯು ಆಕೆಗೆ ರುಚಿಸದು. ಅಂತು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ದಿನ ನೂಕುತ್ತಿರುವಳು.

ಒಂದು ದಿನ ಸಾಯಂಕಾಲ ಟಪಾಲಿನವನು ಒಂದು ಲಕೋಟೆಯನ್ನು ತಂದು ಕಮಲೆಗೆ ಕೊಟ್ಟನು. ತನ್ನ ಪ್ರಾಣೇಶ್ವರನ ಪತ್ರವೆಂದು ಆಕೆಗೆ ತಿಳಿಯಿತು. ಆತುರದಿಂದ ಅದನ್ನು ಒಡೆದು ಓದತೊಡಗಿದಳು.

'ಪ್ರಿಯೆ,

ಜೀವನವು ನೀರಸವಾಗಿ ಬೇಸರದಿಂದ ಈ ಪತ್ರವನ್ನು ಬರೆದಿರುವೆನು. ನಿನ್ನನ್ನೇ ನಾನು ನನ್ನ ಮನೋರಾಣಿಯಾಗಿ ಅಂಗೀಕರಿಸಿರುವೆನಾದ್ದರಿಂದ ಭಾರತ ಭೂಮಿಯಲ್ಲಿರುವ ಇತರ ಹೆಂಗಸರು ನನಗೆ ಮಾತೃ ಸಮಾನರು. ನಿನ್ನ ಸುಖಕ್ಕಾಗಿಯೇ ನನ್ನ ವ್ಯಾಸಂಗವನ್ನು ತ್ಯಜಿಸಿದೆ. ನಿನ್ನ ಹಿತವನ್ನೇ ನನ್ನ ಮರಣಾನಂತರದವರೆಗೂ ಚಿಂತಿಸುವೆನು. ಆದರೆ, ಕಮಲಾ - ನಾನು ನಶ್ವರವಾದ ಈ ಜಗತ್ತನ್ನು ತೊರೆದು ಪರಂಧಾಮದ ಐಕ್ಯವಾಗಬೇಕೆಂದು ನಿಶ್ಚಯಿಸಿರುವೆನು. ಆದ್ದರಿಂದ ನೀನು ವ್ಯಸನಕ್ಕೀಡಾಗದ ನಿನ್ನ ಪತಿಯನ್ನು ಸರಿಯಾಗಿ ಆದರಿಸಿ ಅವನೊಡನೆ ಸಕಲ ಸುಖಗಳನ್ನನುಭವಿಸುವವಳಾಗು. ಇದೇ ನನ್ನ ಕಡೇ ಬಯಕೆ.'

ನಿನ್ನ ಪ್ರಿಯ ಕರುಣಾಕರ.

ಪತ್ರವನ್ನು ಓದಿದೊಡನೇ ಆಕೆಗೆ ಸಿಡಿಲು ಬಡಿದಂತಾಯಿತು. 'ಹಾ! ಪ್ರಾಣೇಶ' ಎಂದು ಮೂರ್ಛಿತಳಾದಳು. ಅಂದಿನಿಂದ ಕಮಲೆಯು ಅಸ್ವಸ್ಥತೆಯಿಂದ ನರಳುತ್ತಿರುವಳು. ಶ್ಯಾಮರಾಯರಿಗೂ ಈಕೆಯ ಧೀರ್ಘ ಕಾಯಿಲೆಯಿಂದ ಬೇಸರ ಹಿಡಿದಿದೆ. ಮನೋವ್ಯಾಧಿಯಿಂದ ಪೀಡಿತಳಾದ ಈಕೆಯ ಕೃಷ ಶರೀರವು ತನ್ನ ಮುಂದಿನ ಸೊಬಗನ್ನು ಕಳೆದುಕೊಂಡಿದೆ. ಕಮಲೆಯ ಜೀವನವು ನೀರಸವಾಗಿ ತನ್ನ ಅಂತ್ಯವನ್ನು ಕಾಯುತ್ತಿದೆ.

—o0o—

ಎಂಥಹ ಜಿಪುಣನಪ್ಪಾ.

ಇದು ಹಂಗೇರಿಯ ವಿಚಾರ. ಇಲ್ಲಿ ಅತೀ ಹೆಚ್ಚಿನ ಬಡ್ಡಿಯ ಮೇಲೆ ಸಾಲ ಕೊಟ್ಟ ಅಪವಾದಕ್ಕೆ ಹಣ ಸಾಲ ಕೊಡುವ ಧನಿಕನೊಬ್ಬನು ಗುರಿಪಡಿಸಲ್ಪಟ್ಟ. ಕೋರ್ಟಿಗೆ ಹಾಜರಾಗಬೇಕೆಂಬ ಸಮ್ಮನ್ಸು ಆತನಿಗೆ ಬಂದಿತು. ಆಗ ಆತನು ಹಣದ ಅಡಚಣೆಯಿಂದ ತನ್ನ ಬಟ್ಟೆಗಳನ್ನು ಅಡವಿಟ್ಟು ಸಾಲ ಕೊಟ್ಟಿದ್ದೇನೆ. ಉಡಲು ಬೇರೆ ಒಂದು ತುಂಡೂ ಬಟ್ಟೆಯಿಲ್ಲ! ಇದರಿಂದ ಕೋರ್ಟಿಗೆ ಬರಲು ಸಾಧ್ಯವೇ ಇಲ್ಲ. ಎಂದು ಈ ಮಹಾತ್ಮ ಉಪಾಯ ತಾಳಿ ಸಮನ್ಸು ತಂದ ಪೇದೆಗೆ ಹೇಳಿ ಆತನನ್ನೂ, ಸಮನ್ಸನ್ನೂ ಹಿಂತಿರುಗಿಸಿದ! ನೋಡಿ ಇವನ ಉಪಾಯ. ಅಲ್ಲಾ! ಎಷ್ಟು ಕೊಟ್ಟರೂ ಗಂಟಿನ ಭಾರ ಕಮ್ಮಿಯಾಗದೆ ಇರುವ ಈ ಧನಿಕರ ಸಾಲದ ಬಡ್ಡಿ ಕಮ್ಮಿಯಾದೀತೆಂಬ ಕಾರಣದಿಂದ ಈ ಉಪಾಯವಲ್ಲವೇ? ಇರಲಿ, ಇಂಥಾ ಕುಟಿಲತನದಿಂದ ಬಡ ಜನರನ್ನು ದುಃಖಕ್ಕೀಡುಮಾಡಿ ಜಿಪುಣಾಗ್ರೇಸರರೆಂಬ ಬಿರುದನ್ನು ಗಳಿಸಲಿ.

—o0o—

ರಾಜಕೋಟೆ

ಸುಧಾರಣಾ ಕಮಿಟಿ.

- **ಸುಧಾರಣಾ ಕಮಿಟಿಗೆ ಹೆಸರು ಸೂಚಿಸಿದ್ದಾಯಿತು.**
- **ಠಾಕೂರ ಸಾಹೇಬರು ಸೂಚಿಸಿದ ಹೆಸರುಗಳನ್ನು ಬಿಟ್ಟುಬಿಡಲಾಯಿತು.**
- **ಎಲ್ಲಾ ಪಂಗಡಗಳಿಗೂ ಪ್ರಾತಿನಿಧ್ಯ ಕೊಡಲು ಅಸಾಧ್ಯನಾಯಿತು.**
- **ಸೂಚಿಸಲ್ಪಟ್ಟ ಪ್ರತಿನಿಧಿಗಳು ಎಲ್ಲಾ ಪಂಗಡದ ಹಿತಚಿಂತನೆಯನ್ನು ಸಾಧಿಸುವರೆಂಬ ಭರವಸೆ ಕೊಡಲಾಯಿತು.**
- **ಸರ್ದಾರ್ ವಲ್ಲಭಭಾಯಿ ಪಟೇಲರು ಸೂಚಿಸುವ ಮೆಂಬರುಗಳ ಬಹುಮತವಿರಬೇಕೆಂಬುವುದೇ ತನ್ನ ಅನಾಶನ ವ್ರತದ ಧ್ಯೇಯವೆಂದು ಸಾರಲಾಯಿತು.**
- **ಅಂತೂ ಇದರಿಂದ ವಿವಿಧ ಪಂಗಡಗಳಲ್ಲಿ ಅತೃಪ್ತಿಯೂ ಮೊಳೆಯಿತು.**

ರಾಜಕೋಟೆ ಸುಧಾರಣಾ ಕಮಿಟಿಗೆ ಸದಸ್ಯರನ್ನು ಆರಿಸುವ ಬಗ್ಗೆ ಬಂದ ತೊಡಕಿನಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಲು ಠಾಕೂರ್ ಸಾಹೇಬರು ನಿರಾಕರಿಸಿದ್ದರಿಂದಲೂ, ಆ ಪ್ರಯುಕ್ತ ಪ್ರಜಾ ಮಂಡಲಕ್ಕೆ ಸಮಿತಿಯಲ್ಲಿ ಬಹುಮತವಿಟ್ಟು, ಠಾಕೂರ್ ಸಾಹೇಬರವರು ಹಿಂದುಳಿದ ಪಂಗಡ, ಮುಸ್ಲಿಮರ ಮತ್ತು ಭಾಯತರ ಪರ ಸೂಚಿಸಿದ ಹೆಸರುಗಳನ್ನು ಸೂಚಿಸಲು ಅಸಾಧ್ಯವಾದ್ದರಿಂದಲೂ, ಗಾಂಧಿಜೀಯವರು ಮುಸ್ಲಿಂ ಮತ್ತು ಇತರ ಪಂಗಡದವರಿಗೆ ಅವರ ಪ್ರತಿನಿಧಿಗಳನ್ನು ಸೇರಿಸುವ ಅಸಾಧ್ಯತೆಯನ್ನು ಸೂಚಿಸಿ ಸುಧಾರಣಾ ಕಮಿಟಿಗೆ ಸರ್ದಾರ ವಲ್ಲಭಭಾಯಿ ಪಟೇಲರ ಹೆಸರನ್ನು ಸೂಚಿಸಿರುವರು. ಅದರೊಂದಿಗೆ ಗಾಂಧಿಜೀಯವರು ಈ ಪತ್ರವನ್ನು ಬರೆದಿರುವರು.

'ಕಳೆದ ಡಿಸೆಂಬರು 26ರಲ್ಲಿ ಠಾಕೂರ್ ಸಾಹೇಬರು ಪ್ರಕಟಿಸಿದ ಪ್ರಕಟಣೆ ಮತ್ತು ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಮಾನ ಇವರ ಮೇರೆ ಸುಧಾರಣಾ ಕಮಿಟಿಗೆ ಸದಸ್ಯರನ್ನು ಒಡನೇ ಸೂಚಿಸುವದಕ್ಕೆ ತಡವಾಯಿತು. ಇದರ ಪ್ರಾಮುಖ್ಯ ಕಾರಣವೆಂದರೆ ಠಾಕೂರು ಸಾಹೇಬರು ಮುಸ್ಲಿಮರು ಹಾಗೂ ಹಿಂದುಳಿದವರ ಪಂಗಡ ಪರ ಸೂಚಿಸಿದ ಹೆಸರುಗಳನ್ನು ನಮ್ಮ ಸೂಚನೆಯಲ್ಲಿ ಸೇರಿಸಲು ಮಾಡಿದ ಪ್ರಯತ್ನವಾಗಿದೆ. ನ್ಯಾಯಾಧೀಶರ ತೀರ್ಮಾನದ ಮೇರೆ ಠಾಕೂರು ಸಾಹೇಬರು ಸೂಚಿಸಿದ ಹೆಸರುಗಳು ತಿರಸ್ಕೃತವಾಗಿರುವವು. ಆದರೆ ಸರ್ದಾರ್ ಪಟೇಲರ ಸಹಾಯದಿಂದ ಅವರನ್ನು ಪ್ರಕಹ ಸುಧಾರಣಾ ಕಮಿಟಿಗೆ ತರುವ ಅನುವಿತ್ತು. ಹಾಗೆಯೇ ರಾಜಕೋಟೆಗೆ ಬಂದ ದಿನವೇ (ತಾ. 9) ನಾನು ಠಾಕೂರು ಸಾಹೇಬರಿಗೆ ಪತ್ರ ಬರೆದು ಸುಧಾರಣಾ ಕಮಿಟಯ ನೇಮಕದ ಬಗ್ಗೆ ಇಕ್ಕಡೆಯಲ್ಲಿ ರಬೇಕಾದ ಸಹಕಾರವನ್ನು ಸೂಚಿಸಿದೆನು. ಆದರೆ ಠಾಕೂರ್ ಸಾಹೇಬರ ನಿರಾಕಾರವು ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿತು. ಅವರು ಯಾವ ಕಾರಣದಿಂದ ಅವನ್ನು ನಿರಾಕರಿಸಿದರೆಂಬುವುದು ಈ ಮೊದಲಿನ ಲೇಖನದಲ್ಲಿ ವಿಶದೀಕೃತವಾಗಿತ್ತು. ನ್ಯಾಯಾಧೀಶರ ತೀರ್ಮಾನವು ಸುಧಾರಣಾ ಕಮಿಟಿಯ ಸಂಖ್ಯೆಯನ್ನು ಹೆಚ್ಚಿಸಲು ಅನುಕೊಡದು ಎಂದು ಅವರು ನೆಪ ಹೇಳಿದ್ದರು. ಅದರೆ ವಸ್ತುತಃ ನ್ಯಾಯಾಧೀಶರ ತೀರ್ಮಾನಕ್ಕೂ, ಸುಧಾರಣಾ ಕಮಿಟಿಯ ಸದಸ್ಯರ ಸಂಖ್ಯೆಗೂ ಏನೊಂದೂ ಸಂಬಂಧವಿಲ್ಲ. ನ್ಯಾಯಾಧೀಶರ ತೀರ್ಮಾನದಲ್ಲಿ ಸುಧಾರಣಾ ಕಮಿಟಿಯು ಇಷ್ಟೇ ಜನರಿಂದ ಕೂಡಿರಬೇಕೆಂಬ ನಿಶ್ಚಿತ ಸಲಹೆಯೂ ಇಲ್ಲ.

ಠಾಕೂರ ಸಾಹೇಬರು ಹೀಗೆ ಉಲ್ಲಂಘಿಸಿದ್ದರಿಂದ ನಾನು ಸರ್ದಾರ ಪಟೇಲರೊಡನೆ ಈ ವಿಚಾರ ವಿವೇಚಿಸಿದೆನು. ಕಮ್ಮಿ ಪಕ್ಷ ಇಬ್ಬರು ಮುಸ್ಲಿಂ ಮತ್ತು ಒಬ್ಬ ಭಾಯತ್ ಪ್ರತಿನಿಧಿಗಳನ್ನಾದರೂ ಸೇರಿಸುವದು ಸಾಧ್ಯವೇ ಎಂಬ ಬಗ್ಗೆ ಮನಸ್ಸುಟ್ಟು ತರ್ಕಿಸಿದೆನು. ಸರ್ದಾರ್ ಪಟೇಲರು ಸೂಚಿಸುವ ಏಳು ಹೆಸರುಗಳೊಳಗೆ ಸೇರಿಸಬೇಕಾದ ಪಕ್ಷ, ಅವರು ಪ್ರಜಾಮಂಡಲದ ಹಿತವನ್ನು ಬಯಸಿ ಯಾವ ಭಿನ್ನಭಾವವನ್ನು ಮನಸಿನಲ್ಲಿಡದೆ ಕೆಲಸ ಮಾಡಲು ಸಮರ್ಥರಾಗಬೇಕು. ಹೀಗೆ ಇವರು ಒಗ್ಗಟ್ಟಿನಿಂದ ಸಮುದಾಯಿಕವಾಗಿ ಕೆಲಸಮಾಡಲು ಹಿಂಜರಿದರೆ ಅವರ ಹೆಸರನ್ನು ಸೂಚಿಸುವದರಿಂದ ಸರ್ದಾರರು ಸುಧಾರಣಾ ಕಮಿಟಿಗೆ ಸೂಚಿಸುವ ಮತ್ತು ಅದರ ಬಗ್ಗೆ ಮಾಡುವ ಕಾರ್ಯಗಳೆಲ್ಲವೂ ವ್ಯರ್ಥವಾದಂತೆಯೇ. ಮಾನವನಿಂದ ಮಾಡಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ, ನಾನು ಮತ್ತು ಸರ್ದಾರರು ಮಾಡಿದೆವು. ಆದರೆ ಠಾಕೂರ ಸಾಹೇಬರು ಸೂಚಿಸಿದ ಹೆಸರುಗಳನ್ನು ನಮ್ಮ ಸೂಚನೆಯಲ್ಲಿ ಸೇರಿಸಲಾಗಲಿಲ್ಲ. ಇದರಿಂದ ಕಮಿಟಿಯು ಎಲ್ಲಾ ಪಂಗಡದವರ ಪ್ರತಿನಿಧಿಯಾಗಿ ಕೆಲಸ ಮಾಡದು; ಪ್ರತಿನಿಧಿತ್ವವನ್ನು ಪಡೆದ ಪಂಗಡಗಳ ಹಿತವನ್ನು ಬಯಸಿಯೇ ಕಮಿಟಿಯು ಕಾರ್ಯ ಮಾಡಬಹುದೆಂಬ ಸಂಶಯವು ಬರಬಹುದು. ಆದರೆ ಇದಕ್ಕೆ ಎಡೆ ಇಲ್ಲ. ಯಾಕೆಂದರೆ ಜಗತ್ತಿನಲ್ಲಿ ಎಲ್ಲಾ ಪಂಗಡಗಳ ಪ್ರತಿನಿಧಿಗಳನ್ನೊಳಗೊಂಡ ಯಾವುದೊಂದು ಕಮಿಟಿಯು ಇರುವದಲ್ಲ. ಪ್ರಜಾಪ್ರಭುತ್ವದ ಪ್ರಾಮುಖ್ಯ ತತ್ವವೆಂದರೆ ಪ್ರತಿಯೊಬ್ಬ ಮಾನವನೂ ಜನಾಂಗದ ವಿವಿಧ ಸಂಸ್ಕೃತಿಗಳ ಪ್ರತಿನಿಧಿಯೆಂಬುವುದು. ಬೇರೆ ಪಂಗಡಗಳ ಪಂಗಡವಾರು ಪ್ರತಿನಿಧಿತ್ವದಿಂದ ಒಗ್ಗಟ್ಟು ಸಾಧಿಸದು. ಅದು ಸಹ ಪ್ರತಿನಿಧಿಗಳಲ್ಲಿ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ.

ನಾನು ಸೂಚಿಸಿದಂತೆ ಸರ್ದಾರರು ಮಾಡದೆ ಎಲ್ಲಾ ಪಂಗಡಗಳ ಪ್ರತಿನಿಧಿಗಳನ್ನು ತಮ್ಮ ಶಿಫಾರಸಿನಲ್ಲಿ ಸೇರಿಸಿಬಿಟ್ಟದ್ದಾಗಿದ್ದರೆ, ಇಡೀ ರಾಜಕೋಟೆ ಸುಧಾರಣಾ ಕಮಿಟಿಯು ತನ್ನ ಭದ್ರತೆಯನ್ನಿಟ್ಟುಕೊಂಡು ಜನತೆಯ ಶ್ರೇಯಸ್ಸಿಗಾಗಿ ಹೋರಾಡುವ ಸಂಸ್ಥೆಯಾಗುತ್ತಿರಲಿಲ್ಲ. ಈಗ ಸರ್ದಾರರು ಸೂಚಿಸಿರುವ ಹೆಸರುಗಳಾದರೂ ಇಡೀ ಜನತೆಯ ಶ್ರೇಯಸ್ಸಿಗಾಗಿ ಪಂಗಡಭೇದವಿಲ್ಲದೆ ಕೆಲಸ ಮಾಡಲು ಕಂಕಣಬದ್ಧರಾಗಿರುವವರದ್ದಾಗಿದೆ. ಆದ್ದರಿಂದ ಅವರು ರಾಜಕೋಟೆಯ ಪ್ರತಿ ಪಂಗಡದ ಪ್ರತಿನಿಧಿಗಳಿರುವರು. ಆದ್ದರಿಂದ ರಾಜಕೋಟೆಯ ಮುಸ್ಲಿಂ ಭಾಯತ ಮತ್ತು ಹರಿಜನರ ಶ್ರೇಯಸ್ಸನ್ನು ಬಯಸಿ ಕಾರ್ಯ ಮಾಡುವದು ಸುಧಾರಣಾ ಕಮಿಟಿಯ ಈ ಏಳು ಸದಸ್ಯರ ಆದ್ಯ ಕರ್ತವ್ಯವಾಗಿದೆ.

ಗಿರಸ್ಯಾ ಪಂಗಡದ ಪ್ರಾತಿನಿಧ್ಯ.

ಗಿರಸ್ಯಾ ಪಂಗಡದ ಪ್ರತಿನಿಧಿತ್ವದ ಬಗ್ಗೆ ಅವರ ಸಂಸ್ಥೆಯು ನಾನು ಅವರಿಗೆ ಕೊಟ್ಟ ಭರವಸೆಯನ್ನು ಮುರಿದಿರುವೆನೆಂದು ಕಠಿಣ ತರದಿಂದ ನನ್ನನ್ನು ಆರೋಪಿಸಿದೆ. ಆ ವಿಚಾರದಲ್ಲಿ ನಾನು ಹೇಳುವದೇನೆಂದರೆ, ನನ್ನ ತಾರೀಕು 11–3–39 ರ ಪತ್ರವನ್ನು ಅವರು ಓದಿ ಸರಿಯಾಗಿ ಅರ್ಥ ಮಾಡಿಕೊಂಡಿರುವುದಿಲ್ಲ. ನಾನು ಈ ಮೊದಲಿನ ನನ್ನ ಹೇಳಿಕೆಗಳಲ್ಲಿ ಸರ್ದಾರರು ಸೂಚಿಸುವ ಸದಸ್ಯರಿಗೆ ಬಹುಮತವಿರುವಂತೆ ಇತರ ಪಂಗಡಗಳ ಪ್ರತಿನಿಧಿಗಳನ್ನು ಚುನಾಯಿಸಲಾಗುವದೆಂದೂ ಘೋಷಿಸಿರುವೆನು. ಈ ಹೇಳಿಕೆಯ ಆಧಾರದ ಮೇಲೆ ನನ್ನ ಮಾರ್ಚಿ ತಾರೀಕು 11ರ ಪತ್ರವನ್ನು ಓದಬೇಕಿದೆ. ಸರ್ದಾರ್ ಪಟೇಲರು ಸಮಿತಿಯಲ್ಲಿ ತಾವು ಸೂಚಿಸುವವರಿಗೆ ಬಹುಮತವಿರಬೇಕೆಂದು ಮೊದಲೇ ಸೂಚಿಸಿರುವದರಿಂದಲೂ, ಅದನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರು ಸಮರ್ಥಿಸಿರುವುದರಿಂದಲೂ, ಅದಕ್ಕಾಗಿಯೇ ನಾನು ನಿರಶನ ವ್ರತವನ್ನು ಕೈಗೊಂಡದ್ದರಿಂದಲೂ ಅದನ್ನು ತಿರಸ್ಕರಿಸಿ ಬೇರೆ ಪಂಗಡದ ಪ್ರತಿನಿಧಿಗಳನ್ನು ಸೇರಿಸುವದು ಕಷ್ಟವಾಗಿದೆ. ನಾನು ಮಾರ್ಚಿ ತಾರೀಕು 11ರಲ್ಲಿ ಗಿರಸ್ಯಾ ಪಂಗಡದವರಿಗೆ ಬರೆದ ಪತ್ರಕ್ಕಿಂತ ಹೆಚ್ಚಾಗಿ ಅವರ ಹಿತವನ್ನು ಸಾಧಿಸಿರುವೆನು. ನ್ಯಾಯಾಧೀಶರ ತೀರ್ಮಾನದಂತೆ ಪಟೇಲರು ಸೂಚಿಸಿದ ಮೆಂಬರುಗಳಿಗಿದ್ದ ನಾಲ್ಕು ಜನ ಬಹುಮತವನ್ನು ಒಂದಕ್ಕೆ ಇಳಿಸಿರುವೆನು. ಆದ್ದರಿಂದ ಈ ಸಂಸ್ಥೆಯವರು ನನ್ನನ್ನು ಇನ್ನೂ ಉತ್ತಮ ರೀತಿಯಿಂದ ಕಾಣಬೇಕಿತ್ತು. 1914ರಲ್ಲಿ ನಾನು ನನ್ನ ಗಡೀಪಾರು ಶಿಕ್ಷೆಯನ್ನು ಮುಗಿಸಿ ಭಾರತಕ್ಕೆ ಬಂದಾಗ ನಾನು ನನ್ನಸ್ನೇಹವು ಗಿರಸ್ಯಾ ಪಂಗಡದವರೊಂದಿಗೆಸ್ಸಿದೆಯೆಂಬದನ್ನು ತೋರಿಸಿರುವೆನು. ಆದ್ದರಿಂದ ಮುಂದಕ್ಕಾದರೂ ಸರದಾರರು ಸೂಚಿಸಿದ ಪ್ರತಿನಿಧಿಗಳು ಗಿರಸ್ಯಾನರಪ್ರತಿನಿಧಿಗಳಂತೆಯೇ ಅವರ ಹಿತ ಸಾಧನೆಯನ್ನು ಮಾಡುವರೆಂಬ ನಂಬಿಕೆಯನ್ನ ಪರಿಡಬೇಕೆಂದು ಆಶಿಸುತ್ತೇನೆ.

ಸುಧಾರಣಾ ಕಮಿಟಿ.

ಈ ಕೆಳಗಿನ ಮಹನೀಯರನ್ನು ಸರ್ದಾರ್ ಪಟೇಲರ ಪರ ಗಾಂಧಿಜೀಯವರು ಸುಧಾರಣಾ ಕಮಿಟಿಗೆ ಸೂಚಿಸಿರುವರು– (1) ಶ್ರೀ ಪಾಪಟಲಾಲ್ ಪುರುಷೋತ್ತಮ ಆನಂದ ಬಿ. ಎ. ಎಲ್. ಎಲ್. ಬಿ., (2) ಪಾಪಟಲಾಲ್ ಧಾನೀಭಾಯಿ ಮಾಳವಿಯಾ,(3) ಜಮ್ನಾದಾಸ್ ಕುಶಾಲ್‌ಚಂದ್ ಗಾಂಧಿ, (4) ಶ್ರೀ ಬಾಚೆರ್‌ವಾಲ ಪಟೇಲ್; (5) ಶ್ರೀ ವ್ರಿಚ್‌ಲಾಲ್ ಮಾಯಾಶಂಕರ್ ಶುಕ್ಲ, (6) ಶ್ರೀ ಜಠ್‌ಲಾಲ್ ಹರಿಕೃಷ್ಣ ಜೋಷಿ ಮತ್ತು (7) ಶ್ರೀ ಗಜಾನನ್ ಭವಾನಿ ಶಂಕರ್ ಜೋಷಿ ಎಂ. ಎ. ಎಲ್. ಎಲ್. ಬಿ.

ತ್ರಿಪುರ ಸಂಸ್ಥಾನಕ್ಕೆ ಸುಧಾರಣೆ.

ತ್ರಿಪುರ ಸಂಸ್ಥಾನದ ಮಹಾರಾಜರವರು ತನ್ನ ಪ್ರಜೆಗಳಿಗೆ ಸುಧಾರಣೆಗಳನ್ನು ಕೊಡುವ ಬಗ್ಗೆ ಆಲೋಚಿಸಿ ದರ್ಬಾರಿನಲ್ಲಿ ಒಂದು ಹೇಳಿಕೆ ಕೊಟ್ಟಿರುವರು. ಅದರಂತೆ ಈ ಕೆಳಗಿನ ಸುಧಾರಣೆಗಳಾಗುವವು–ಹದಿನೈದು ಸದಸ್ಯರಿಂದ ಕೂಡಿದ ಒಂದು ಸಲಹೆ ಕೊಡುವ ಸಭೆಯನ್ನು (ಪ್ರಿವಿ ಕೌನ್ಸಿಲ್) ನಿರ್ಮಿಸಲಾಗುವದು. ಈಗ ಇರುವ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರೆಂದು ಒಬ್ಬರನ್ನು ನೇಮಿಸಿ ಅವರಿಗೆ ಸಲಹೆ ಕೊಡಲು ಕೆಲವು ಜಡ್ಜರನ್ನು ಅವರ ಕೈಕೆಳಗೆ ನೇಮಿಸುವ ವಿಶಿಷ್ಟ ಅಧಿಕಾರವು ಕೊಡಲ್ಪಡುವದು. ಎಲ್ಲಾ ಅಧಿಕಾರಗಳಿಂದ ಮತ್ತು 54 ಸದಸ್ಯರಿಂದ ಕೂಡಿದ ಒಂದು ನ್ಯಾಯವಿಧಾಯಕ ಸಭೆಯನ್ನೂ ಅದರಲ್ಲಿ 29 ಜನ ಚುನಾಯಿತ ಸದಸ್ಯರೂ, 18 ಮಂದಿ ಅಧಿಕಾರಿಗಳೂ, 7 ಮಂದಿ ವಿವಿಧ ಪಂಗಡದ ಪ್ರತಿನಿಧಿಗಳೂ ಇರುವರು. ಗ್ರಾಮಾಂತರಗಳಲ್ಲಿ ಗ್ರಾಮ ಸಂಘಟನಾ ಸಂಘ ಯಾ ಮಂಡಳಿಗಳನ್ನು ನೇಮಿಸಿ ಅವರಿಗೆ ಸ್ಥಳೀಕ ಆಡಳಿತದ ಅಧಿಕಾರ ಕೊಡಲ್ಪಡುವದಲ್ಲದೆ, ಕಂದಾಯ ವಸೂಲು ಮಾಡುವ ಹಾಗೂ ಸಣ್ಣ ಸಣ್ಣ ಕ್ರಿಮಿನಲ್ ಮತ್ತು ಸಿವಿಲ್ ಕೇಸುಗಳನ್ನು ವಿಚಾರಿಸುವ ಅಧಿಕಾರವೂ ಕೊಡಲ್ಪಡುವದು. ಆರ್ಥಿಕದ ಆಡಳಿತ ಬಗ್ಗೆ ನಿಪುಣನಾದ ಒಬ್ಬ ಮಂತ್ರಿಯನ್ನು ನೇಮಕ ಮಾಡುವದಲ್ಲದೆ, ಸಂಸ್ಥಾನದ ಬಜೆಟ್ಟಿನಿಂದ ರಾಜರ ಖರ್ಚಿಗಾಗಿ ಬೇಕಾದ ಹಣವನ್ನು ಬೇರ್ಪಡಿಸಲಾಗುವದು. ರಾಜರಿಗೆ ಸಂಸ್ಥಾನದ ಹಣವನ್ನು ಉಪಯೋಗಿಸುವ ಅಧಿಕಾರ ಉಳಿಯದು. ರಾಜರ ಖರ್ಚಿಗಾಗಿ ಸಂಸ್ಥಾನದ ನಿವ್ವಳ ಉತ್ಪತ್ತಿಯಿಂದ ಶೇಕಡ 10ರಂತೆ ತೆಗೆದು ಬೇರ್ಪಡಿಸಲಾಗುವದು. ರಾಜರು ಒಡನೇ ಗ್ರಾಮಾಂತರ ಮಂಡಳಿಗಳನ್ನು ನೇಮಿಸುವದಾಗಿಯೂ, ಪ್ರಿವಿ ಕೌನ್ಸಿಲ್ ಮತ್ತು ನ್ಯಾಯವಿಧಾಯಕ ಸಭೆಯು ವರ್ಷದೊಳಗಾಗಿ ಕಾರ್ಯ ಮಾಡಲು ತೊಡಗುವದೆಂದೂ ಭರವಸೆ ಕೊಟ್ಟಿರುವರು.

...ದ ಪ್ರಮುಖ ಟಾನಿಕ್

...ತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನಶಕ್ತಿ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–43 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ.	2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ...1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್**, ಬೆಂಗಳೂರು.

52–6

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ, ರಾಮಚಂದ್ರ ಕರ್ಕಿ.

ಮತ್ತು ಕಂಪನಿ,

(52–20) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೈಯಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು— ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:— ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

39 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಬೆಪ್ಪುಡಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— **ಮೈಮುಳಿಲದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.**

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ವೃಥಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52-15)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

೨೮—೪—೧೯೩೯.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೮] [ಸಂಚಿಕೆ ೪೭

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 4 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-20

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-9

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ಒಡೆಯದ ಹೆಕೊಲಾಯಿಟ್ ಅಥವಾ ಚಿನ್ನವು: ಪ್ರತಿಯೊಂದು ಕಾಲಂ ಕುಪದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

23

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-51

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್——

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-31) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋವ್‌ಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

12-27

ಈ ವಾರದ ಕಥೆ.

ನನ್ನ ಕನಸು.

(ಲೇಖಕ-ಬಿ. ಆರ್. ಶರ್ಮಾ.)

—o0o—

'ಜೀ; ಕ್ಯಾ, ರಿಸಲ್ಟ್ ಆಗಯಾ'? (ಸರ್, ಏನು ರಿಸಲ್ಟ್ ಬಂದಿದೆಯೋ?)

'ಹಾ, ಜೇಟಾ, ಆಯಾ ಹೈ ಔರ್ ತುಮ್ ಪ್ರಥಮ್ ಶ್ರೇಣಿಮೇ ಉತ್ತೀರ್ಣ ಹುಯೆ ಹೊ'. (ಹೌದು ಮಗುವೇ ಬಂದದೆ ಮತ್ತು ನೀನು Iನೇ ಕ್ಲಾಸಿನಲ್ಲಿ ಪಾಸಾಗಿರುವಿ.)

ಕ್ಯಾ! ಮೈ! ಔರ್ ಪ್ರಥಮ ಶ್ರೇಣಿಮೆ! ಯಹ್ ಹಬ್ ಆಪ್‌ಕೀ ಕೃಪಾಹೈ'. (ಏನು! ನಾನು! Iನೇ ಕ್ಲಾಸಿನಲ್ಲಿ! ಇದೆಲ್ಲಾ ತಮ್ಮ ದಯೆ (ಸ್ವಗತ) 'ಸಂಭವವಿದೆಯಾಕೆಂದರೆ ನಾನು ಪರೀಕ್ಷೆಯಲ್ಲಿ ಚೆನ್ನಾಗಿಯೇ ಬರೆದಿರುವೆನು.'

ಹೀಗೆ ಆಲೋಚಿಸುತ್ತಾ ಮನೆಯ ಕಡೆಗೆ ಸಂತೋಷದಿಂದ ಹಿಂತಿರುಗಿದೆನು. ಹೃದಯವು ಸಂತುಷ್ಟವಾಗಿದ್ದಿತು. ನಾನು ಯಾರಿಗೂ ಕಾಣದಂತೆ ಮನೆಯನ್ನು ಸೇರಬೇಕೆಂದಿದ್ದೆನು. ಆದರೆ ಅಷ್ಟರಲ್ಲಿಯೇ ನನ್ನ ಕೆಲವು ಮಿತ್ರರು ಬಂದು ನನ್ನನ್ನು ಮುತ್ತಿಕೊಂಡರು. ಮತ್ತು ನಾನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದ ಸಂಗತಿಯನ್ನು ಕೇಳುತ್ತಲೇ ಮೆಲ್ಲನೆ ನನ್ನನ್ನು 'ಉಡುಪಿ ವಿಲಾಸ ಭವನ'ದೆಡೆಗೆ ಒಯ್ಯತೊಡಗಿದರು. ಅವರೊಬ್ಬೊಬ್ಬರು ನನ್ನ ಮನಸಿಗೆ ಪಿಶಾಚಿಗಳಂತೆ ಕಾಣತೊಡಗಿದರು. ನಾನು ಭಯದಿಂದ ತಳಮಳಿಸಹತ್ತಿದೆನು ಅವರು ನನ್ನನ್ನು ಮತ್ತೂ ಗಟ್ಟಿಯಾಗಿ ಹಿಡಿದೆಳೆಯತೊಡಗಿದರು. ನಾನು ಚೀರಿಕೊಂಡು ಅವರಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಮುಂದಕ್ಕೆ ಹಾರಿಕೊಂಡೆನು.

ಆ ಕ್ಷಣವು ಎಚ್ಚರವಾಯಿತು. ಕಣ್ಣು ತೆರೆಯುತ್ತಲೇ ಮಂಚದಡಿಯಲ್ಲಿ ಬಿದ್ದಿರುವೆನೆಂದು ತಿಳಿಯಿತು. 'ಈ ಹಾಳಾದ ಕನಸು' ಎಂದುಕೊಂಡು ಮೆಲ್ಲನೆ ಏಳಹತ್ತಿದೆನು. ಮೈಯೆಲ್ಲಾ ಬಹಳ ನೋಯುತ್ತಿತ್ತು. ಆದರೂ ಕನಸಿನ ಸುವಾರ್ತೆಯಿಂದ ಅದನ್ನು ಮರೆತೆನು. ಕನಸು ನಿಜವಾಗಲೆಂದು ಆ ಪರಮೇಶ್ವರನನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸಿಕೊಂಡೆನು. ಅಷ್ಟರಲ್ಲೇ ಮುಂದಿನ ಕೋಣೆಯಲ್ಲಿ ಗಡಿಯಾರವು ಮೂರು ಬಾರಿಸಿದ ಶಬ್ದವು ನನ್ನ ಕಿವಿಯನ್ನು ಸೇರಿತು.

* * * * *

ನಮ್ಮ ಹಿಂದೀ ಪರೀಕ್ಷೆಯು ಆಗ ಮುಗಿದಿತ್ತು. ತಲೆಯಲ್ಲಿ ಹೊತ್ತಿದ್ದ ಒಂದು ದೊಡ್ಡ ಹೊರೆಯು ಇಳಿದಂತಾಗಿದ್ದಿತು. ನಾನು ನನ್ನ ಸಹಪಾಠಿಗಳೆಲ್ಲರನ್ನೂ ಬೀಳ್ಕೊಂಡು ಸಂತೋಷದಿಂದ ಮನೆಯನ್ನು ಸೇರಿದೆನು. ಬಿಡದೆ ಆರು ತಿಂಗಳಿಂದ ಹಗಲು ರಾತ್ರಿಗಳೆನ್ನದೆ ಕಷ್ಟಪಟ್ಟು ಓದುವುದರಿಂದ ತಲೆಯು ಭಾರವಾಗಿತ್ತು. ನಾನು ಮನೆಯನ್ನು ಸೇರಿ ಸ್ವಲ್ಪ ಸುಧಾರಿಸಿಕೊಂಡೆನು. ಮನೆಯಲ್ಲಿ ಪ್ರಶ್ನೆ ಪತ್ರಗಳು ಸುಲಭವಾಗಿದ್ದುದರಿಂದಲೂ, ತೃಪ್ತಿಕರವಾಗಿ ಉತ್ತರ ಬರೆದಿದ್ದುದರಿಂದಲೂ ಮನಸಿನಲ್ಲಿ ಯಾವ ಚಿಂತೆಗೂ ಎಡೆ ಇರಲಿಲ್ಲ. ಆದುದರಿಂದ ಯಾವಾಗಲೂ ಸಂತೋಷವಾಗಿಯೇ ಮನೆಯಲ್ಲಿಯೇ ಇರುತ್ತಿದ್ದೆನು. ಇಷ್ಟರಲ್ಲಿಯೇ ನಾನು ಹಿಂದೀ ರಾಷ್ಟ್ರಭಾಷೆಯ ಪರೀಕ್ಷೆಗೆ ಕೂತಿದ್ದ ಮತ್ತು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ ಸಮಾಚಾರವು ನಮ್ಮ ಹಳ್ಳಿಯಲ್ಲೆಲ್ಲಾ ಪಸರಿಸಿತ್ತು. ಇದರಿಂದ ನನಗೆ ಒಂದು ತರದ ಹೆಮ್ಮೆಯು ಉಂಟಾಗಿದ್ದಿತು.

ಆದರೆ ನಾನು ಎಲ್ಲಾದರೂ ಫೈಲಾದರೆ? ಎಂಬ ವಿಚಾರವು ಮನಸಿನಲ್ಲೇ ಒಮ್ಮೊಮ್ಮೆ ಹಾದು ನನ್ನನ್ನು ಭಯ ವಿಹ್ವಲನನ್ನಾಗಿ ಮಾಡುತ್ತಿದ್ದಿತು. ಆದರೆ ನಾನು ದಯಾಳುವಾದ ಜಗನ್ನಿಯಾಮಕನ ಮೇಲೆ ಭರವಸೆಯಿಟ್ಟು ಸಫಲಪ್ರಾಪ್ತಿಗಾಗಿ ಅವನನ್ನು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದೆನು. ರಾತ್ರಿಗಳಲ್ಲಿ ನನಗೆ ಬೀಳುತ್ತಿದ್ದ ಕನಸುಗಳು ಮತ್ತು ಆಗಾಗ ನನಗೆ ಬಿದ್ದಿದ್ದ ಕನಸು ನನ್ನನ್ನು ಇನ್ನು ಧೈರ್ಯವಂತನನ್ನಾಗಿ ಮಾಡುತಿದ್ದವು. ಯಾಕೆಂದರೆ ನಾನು ಕನಸನ್ನು ಸತ್ಯವೆಂದೇ ನಂಬುತ್ತಿದ್ದೆನು. ಅಲ್ಲದೆ ಹಲವು ಸಾರಿ ನನ್ನ ಕನಸುಗಳು ನನಗೆ ಸರಿಯಾಗಿ ತೋರಿದ್ದವು. ಆದುದರಿಂದ ನಾನು ಮನೋಧೈರ್ಯದಿಂದಲೂ, ಸ್ವಪ್ನದ ನಿರೂಪಣೆಯಿಂದಲೂ ಮನಸಿನಲ್ಲಿ ಯಾವ ಸಂಶಯಗಳಿಗೂ ಸ್ಥಳವನ್ನೀಯದೆ ಮುಂದಿನ ಪರೀಕ್ಷೆಯಲ್ಲಿ ತಯಾರಿಯಲ್ಲಿ ತಲ್ಲೀನನಾದೆನು.

ಇಷ್ಟರಲ್ಲಿ ಪರೀಕ್ಷೆಯ ಫಲಿತಾಂಶವು ಹೊರಬೀಳುವ ಸಮಯವು ಸಮೀಪಿಸಿತು. ನನಗೆ ಫಲಿತಾಂಶವನ್ನು ತಿಳಿಸುವ ಸಮಾಚಾರವನ್ನು ನನ್ನ ಬಂಧು ಬಳಗದವರಿಗೆ ತಿಳಿಸುವ ಆಸೆಯು ಬಲವತ್ತರವಾಗಹತ್ತಿತು. ನಾನು ಅಂದಿನಿಂದಲೇ ಪ್ರತಿ ದಿನವೂ ಮೆಯಿಲು ಬರುವ ಸಮಯಕ್ಕೆ ಸರಿಯಾಗಿ ಅಂಚೆ ಮನೆಯನ್ನು ಸೇರಿ ಹಿಂದೂ ಏಜೆಂಟರಿಂದ ಪತ್ರಿಕೆಯನ್ನು ತೆಗೆದುಕೊಂಡು ನೋಡುತ್ತಿದ್ದೆನು. ಮತ್ತು ಅದರಲ್ಲಿ ಪರೀಕ್ಷೆಯ ಫಲಿತಾಂಶವನ್ನು ಹೊಂದದೆ ನಿರಾಶೆಯಿಂದ ಹಿಂದಿರುಗುತ್ತಿದ್ದೆನು.

ನಿತ್ಯದಂತೆ ಒಂದು ದಿನ ನಾನು ಬೇಗನೆ ಅಂಚೆ ಮನೆಯನ್ನು ಸೇರಿದ್ದೆನು. ಮೆಯಿಲು ಬರಲು ಇನ್ನೂ ಹೊತ್ತಿದ್ದುದರಿಂದ ಅಲ್ಲೇ ಬಿದ್ದಿದ್ದ 'ಕೊಡಗು ಚಂದ್ರಿಕೆ'ಯೊಂದನ್ನು ತೆಗೆದುಕೊಂಡು ಓದಲಾರಂಭಿಸಿದೆನು. ನನ್ನ ಕಣ್ಣುಗಳೇನೋ ಪತ್ರಿಕೆಯನ್ನು ವೀಕ್ಷಿಸುತ್ತಿದ್ದವು. ಆದರೆ ಮನಸು ಪೂರ್ತಿ ಗಹನವಾದ ವಿಚಾರದಲ್ಲಿ ಮಗ್ನವಾಗಿದ್ದಿತು. ನಾನು ಎಲ್ಲಾದರೂ ಫೈಲಾದರೆ? ಎಂಬ ಸ್ಮರಣೆಯು ಮತ್ತೂ ಮತ್ತೂ ನನ್ನ ಮನಸನ್ನು ಆವರಿಸಿ ನನ್ನನ್ನು ಅಧೀರನಾಗಗೊಳಿಸುತ್ತಿತ್ತು. ಆದರೆ ನನ್ನ ಪ್ರಾರ್ಥನೆ ಮತ್ತು ಕನಸು ಎಂದೂ ವ್ಯರ್ಥವಾಗಲಾರದೆಂದು ಧೈರ್ಯಗೊಳ್ಳುತ್ತಿದ್ದೆನು.

ಈಗಾಗಲೇ ನನ್ನ ಹಲವು ಮಿತ್ರರು ಬಂದು ನನ್ನನ್ನು ಮುತ್ತಿಕೊಂಡು 'ಏನಯ್ಯಾ ನಾನಾಗುವೆಯಂತೆ! ನಮ್ಮನ್ನು ಮಾತ್ರ ಮರೆಯಬೇಡ' ಎಂದೆಂದು ನನ್ನನ್ನು ಇನ್ನು ಗೊಂದಲದಲ್ಲಿ ಕೆಡಹುತ್ತಿದ್ದರು. ನಾನು ಧೈರ್ಯವಾಗಿ ಅವರನ್ನೆಲ್ಲಾ ಸಮಾಧಾನಗೊಳಿಸಿ ಕಳುಹಿಸಿದೆನು.

ಅಷ್ಟರಲ್ಲೇ ಮೆಯಿಲು ಬಂದ ಶಬ್ದವು ನನಗೆ ಕೇಳಿಸಿತು. ನನ್ನ ಎದೆಯಲ್ಲಿ ಢಢ್ ಢಢ ಎಂಬ ಶಬ್ದವು ಜೋರಾಯಿತು. ಮೆಯಿಲು ಬಂದು ಅಂಚೆ ಮನೆಯ ಮುಂದುಗಡೆ ನಿಂತಿತು. ಹಿಂದೂ ದೈನಿಕೆಯ ಮೂಟೆಯೂ ಹೊರಬಿದ್ದಿತು. ಏಜೆಂಟರು ಮುಂದೆ ಬಂದು ಮೂಟೆಯನ್ನೊಡೆದರು. ನಾನು ಹೋಗಿ ಅವರಿಂದ ಹಿಂದೂ ಪತ್ರಿಕೆಯೊಂದನ್ನು ಕೇಳಿಕೊಂಡೆನು. ಮೊದಲಿನ ಒಂದೆರಡು ಪುಟಗಳನ್ನು ಮಗುಚಿದೆನು. ಆಗ ದೇಹದಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಸಹಸ್ರಾರು (ಎಲೆಕ್ಟ್ರಿಕ್ ದೀಪಗಳು) ವಿದ್ಯುದ್ದೀಪಗಳು ಒಂದೇ ಸಲನೆ ಹತ್ತಿಕೊಂಡಂತೆ ಎದುರಿಗಿದ್ದ ತೇರ್ಗಡೆಯಾದ ವಿದ್ಯಾರ್ಥಿಗಳ ಅಸಂಖ್ಯಾತ ನಂಬರುಗಳು ನನ್ನ ಕಣ್ಣುಗಳನ್ನು ಕುಕ್ಕಿಕೊಂಡವು. ಕೈಗಳು ನಡುಗಲಾರಂಭಿಸಿದವು. ದೃಷ್ಟಿಯು ಮಾಂದ್ಯವಾಯಿತು. ಪತ್ರಿಕೆಯ ಕಡೆಗೆ ನೋಡುವುದೂ ಕೂಡ ನನ್ನಿಂದಾಗಲಿಲ್ಲ. ಆದರೂ ಪ್ರಯತ್ನಪಟ್ಟು ಎಲ್ಲಾ ನಂಬರುಗಳನ್ನೂ ಬೇಗ ಬೇಗನೇ ನೋಡಿಕೊಂಡೆನು. ಎದೆಯು ಧಸ್ಸೆಂದಿತು. ಮುಖವು ವಿವರ್ಣವಾಯಿತು. ಎಲ್ಲವೂ ಅಂಧಕಾರಮಯವಾಯಿತು. ಎಷ್ಟು ಹುಡುಕಿದರೂ ನನ್ನ ನಂಬರಿನ ಪತ್ತೆ ಹತ್ತಲಿಲ್ಲ. ನನ್ನ ಹಿಂದಿನ 246ನೇ ನಂಬರು ಮಾತ್ರ ತಾನೇ ತಾನಾಗಿ ವಿರಾಜಿಸುತಿದ್ದಿತು. ಅದು ನನ್ನನ್ನು ನೋಡಿ ನಗುವದೋ ಎಂದು ನನಗೆ ಭಾಸವಾಯಿತು. ನನ್ನ ನಂಬರು ಮಾತ್ರ ಶೂನ್ಯವಾಗಿತ್ತು. ದೈನಿಕೆಯು ನನ್ನ ಕೈಯಿಂದ ತನ್ನಷ್ಟಕ್ಕೆ ತಾನೇ ಜಾರಿಬಿದ್ದಿತು. ಏಜೆಂಟರು ನನಗೆ 'ಪುಷ್ಪಾಂಜಲಿ' ಯನ್ನರ್ಪಿಸುತ್ತಾ ಅದನ್ನು ತೆಗೆದುಕೊಂಡರು. ಆದರೆ ಏಜೆಂಟರ ವಿಷಯದಲ್ಲಿ ನಾನು ಸಿಟ್ಟಾಗಲಿಲ್ಲ.

ನಾನು ಕೂಡಲೇ ಅಲ್ಲಿಂದ ತಲೆ ತಗ್ಗಿಸಿಕೊಂಡು ಮನೆ ಕಡೆ ಹೊರಟೆನು. ಆದರೆ ನನ್ನ ಲಕ್ಷ್ಯವು ಮಾತ್ರ ದಾರಿಯ ಕಡೆ ಇಲ್ಲದ್ದರಿಂದ ಕಾಲು ಕೊಂಡು ಹೋದ ಕಡೆ ನಾನು ಹೋಗಬೇಕಾಯಿತು. ಅಂತೂ ಇಂತೂ ಕಾಲುಗಳು ನನ್ನನ್ನು ಒಂದು ಗುಡ್ಡದಡಿಗೆ ಒಯ್ದವು. ನಾನು ಹೇಗೂ ಗುಡ್ಡವನ್ನೇರಿದೆನು. ಸೃಷ್ಟಿಯ ವೈಚಿತ್ರ್ಯವನ್ನು ನೋಡಬೇಕೆಂಬ ಇಚ್ಛೆಯಿಂದಲ್ಲ. ಅಂತೂ ಗುಡ್ಡದ ತುದಿಯಲ್ಲಿ ಕುಳಿತುಕೊಂಡೆನು. ಗುಡ್ಡದ ಸುತ್ತಲಿನ ದೃಶ್ಯಗಳೆಲ್ಲವು ನನಗೆ ಶೂನ್ಯವಾಗಿ ಕಂಡುಬಂದವು.

ಒಮ್ಮೆಲೇ ಮನಸು ಉದ್ವಿಗ್ನವಾಯಿತು. ದುಃಖವು ಮಾಯವಾಗಿ ಆ ಸ್ಥಳವನ್ನು ಕ್ರೋಧವು ಆಕ್ರಮಿಸಿತು. ಮೊದಲು ಭಕ್ತಿಯಿಂದ ಯಾವನನ್ನು ಪ್ರಾರ್ಥಿಸುತಿದ್ದೆನೋ ಆ ಜಗದೀಶನನ್ನು ಮನಸ್ವಿಯಾಗಿ ನಿಂದಿಸಿದೆನು. ಪರೀಕ್ಷಾಕಾರರಂತೂ ರಾಕ್ಷಸರಂತೆ ಕಂಡುಬಂದರು. ಅವರಿಗಂತೂ ನಾನು ಅಷ್ಟೋತ್ತರ ಪೂಜೆಯನ್ನೇ ಸಮರ್ಪಿಸಿದೆ. ಹಾಯ್! ಪತ್ರಿಕಾಕರ್ತರಾದರೂ ತಪ್ಪಿ ತಪ್ಪಿ ನನ್ನ ನಂಬರನ್ನು ಹಾಕದ್ದಕ್ಕಾಗಿ ನನ್ನ ಅದೃಷ್ಟವನ್ನು ಹಳಿದುಕೊಂಡೆ.

ಕೂಡಲೇ ಹೃದಯವು ಪುನಹ ದುಃಖದಿಂದ ತುಂಬಿತು. ಬಂದು ಕಡೆಯಲ್ಲಿ ಮನೆಯವರ ನಿಂದೆಯ ಭಯ, ಇನ್ನೊಂದೆಡೆಯಲ್ಲಿ ಗೆಳೆಯರ ಹಾಸ್ಯದ ಭೀತಿ, ಇವೆರಡೂ ನನ್ನನ್ನು ದಿಕ್ಕು ತೋಚದವನನ್ನಾಗಿ ಮಾಡಿದವು.

ನನ್ನ ದುಃಖವನ್ನು ನೋಡಲಾರದೆಯೋ ಎಂಬಂತೆ ದಿನಮಣಿಯು ಪಶ್ಚಿಮಾಂಬುಧಿಯನ್ನು ಸೇರಿದನು. ಆದರೂ ಅದು ನನಗೆ ಗೋಚರವಾಗಲಿಲ್ಲ. ಅಷ್ಟರಲ್ಲಿ ಸಮೀಪದಲ್ಲಿದ್ದ ದೇಗುಲದ ಗಂಟೆ ಧ್ವನಿಯು ನನ್ನನ್ನು ಹೊಡೆದೆಬ್ಬಿಸಿದಂತೆ ಎಚ್ಚರಿಸಿತು. ನಾನು ಸುತ್ತಲೂ ನೋಡಿದೆನು. ಆಗಿನ ಆ ದೃಶ್ಯವು ಸರಿಯಾಗಿ ನನ್ನ ಹೃದಯವನ್ನು ಹೋಲುವುದೆಂದು ತಿಳಿಯಿತು. ಅಂತೂ ನನ್ನ 'ಕನಸು ನಿಷ್ಫಲವಾಯಿತು' ಎಂಬ ಶಬ್ದವೊಂದು ನನ್ನ ಬಾಯಿಯಿಂದ ಅವ್ಯಕ್ತವಾಗಿ ಹೊರಟು ದಿಗಂತದಲ್ಲಿ ಪ್ರತಿಧ್ವನಿಸಿತು.

—o0o—

ವಿಚಿತ್ರ ಶಿಶು.

ಜೆಕೊಸ್ಲೋವಿಯಾದ ವಿವಿಟ್ಸಕ ಎಂಬ ಊರು. ಅಲ್ಲಿ ಡಯೋಕಿಟ್ಟ ಕಸ್ತುಟೊ ವಿಚ್ ಎಂಬ 18 ತಿಂಗಳ ಮಗುವು ಧೂಮಪಾನ ಮಾಡುವ ವಿಶೇಷ್ಯದಲ್ಲಿ ಅತ್ಯಂತ ಚಿಕ್ಕ ಶಿಶು ಇದೆಂದು ಗೊತ್ತಾಗಿದೆ. ತಿಂಡಿಗಿಂತ ಬೀಡಿ, ಸಿಗರೇಟುಗಳನ್ನೇ ಹೆಚ್ಚಾಗಿ ಅಪೇಕ್ಷಿಸುವ ಈ ವಿಚಿತ್ರ ಮಗುವನ್ನು ನೋಡಲು ಅನೇಕರು ಆ ಹಳ್ಳಿಗೆ ಎಂದು ಹೋಗುತ್ತಿದ್ದಾರೆ.

—o0o—

ಇದೆಂಥಾ ದಾಂಪತ್ಯ!

ಸಿಡ್ನಿಯ ಆಸ್ಟ್ರೇಲಿಯಾ ಬಾರ್ನಿವರ್ತ್ ಎಂಬ ದಂಪತಿಗಳು ಜಗತ್ತಿನಲ್ಲಿರುವ ಗಂಡ ಹೆಂಡಿರಲ್ಲೆಲ್ಲಾ ಬಹಳ ಭಾರವಾದವರೆಂದು ತಿಳಿಸಲಾಗಿದೆ. ಬ್ರಿಟನ್ನಿನ ನಾಟ್ಯಶಾಲೆಯೊಂದಕ್ಕೆ ಭೇಟಿ ಇತ್ತಾಗ ಅವರಿಗೆ ಕೂರಲು ಯೋಗ್ಯವಾದ ಆಸನವು ಸಿಕ್ಕದ್ದೇ ಬಹಳ ಪಜೀತಿಗೆ ಇಟ್ಟುಕೊಂಡಿತಂತೆ. ಅವರ ದೇಹದ ಸುತ್ತಳತೆಯು ಅವರ ಎತ್ತರಕ್ಕಿಂತ ಸ್ವಲ್ಪ ಹೆಚ್ಚೇ ಇದೆ ಎಂದ ಮೇಲೆ ನೀವೇ ಯೋಚಿಸಿ ಅವರ ತೂಕ ಎಷ್ಟಿರಬಹುದೆಂದು.

—o0o—

ಅಭಾಗ್ಯ ತಿರುವಾಂಕೂರು.

ಲೇ:-ಗಾಂಧಿ. (ಹರಿಜನ 22-4-39)

ಸರಕಾರದ ಅತ್ಯಾಚಾರವು ಮುಂದಿನ ನಮ್ಮ ಚಳವಳ ರಂಗಕ್ಕೆ ಸಹಕಾರಿ. ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿದರೆ ನಮ್ಮ ಪ್ರಯತ್ನವು ಫಲಕಾರಿ. ಸಂಸ್ಥಾನದ ಅನಾಯಕತ್ವದ ಬಗ್ಗೆ ನಿಷ್ಪಕ್ಷಪಾತೀಯ ವಿಚಾರಣೆಯಾಗಬೇಕು. ಜನತೆಯ ಮನಸಿನಲ್ಲಿ ಶ್ರೇಯಭಾವವು ಮೂಡುವಾಗಬೇಕು.

ತಿರುವಾಂಕೂರು ಸಂಸ್ಥಾನ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯು ಈ ಕೆಳಗಿನ ಠರಾವುಗಳನ್ನು ತಮ್ಮ ಕಳೆದ ಸಭೆಯಲ್ಲಿ ಅಂಗೀಕರಿಸಿರುವದು.

'ಮಹಾತ್ಮ ಗಾಂಧಿಯವರ ಪ್ರೇರಣೆಯಂತೆ ನಮ್ಮ ಇಂದಿನ ಅಧ್ಯಕ್ಷರು ಕಾಯಿದೆ ಭಂಗ ಚಳವಳವನ್ನು ತತ್ಕಾಲ ನಿಲ್ಲಿಸಿದ್ದನ್ನು ಈ ಕಮಿಟಿಯು ಆದರ ಪೂರ್ವಕ ಮಾನಿಸುತ್ತದೆ. ಈ ಸಂದಿಗ್ಧ ಸಮಯದಲ್ಲಿ ಎಲ್ಲಾ ತಾಲೂಕು ಹಾಗೂ ಆಧೀನ ಕಮಿಟಿಗಳು ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಕಾಂಗ್ರೆಸ್ ಸಂಸ್ಥೆಯ ಬಲವನ್ನು ಹೆಚ್ಚಿಸಬೇಕೆಂದು ಈ ಕಮಿಟಿಯು ಸೂಚಿಸುತ್ತದೆ.

ಗ್ರಾಮಾಭಿವೃದ್ಧಿ.

ಆದ್ದರಿಂದ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಖಾದಿ ಹಾಗೂ ಸ್ವದೇಶಿ ಪ್ರೋತ್ಸಾಹ ಮತ್ತು ಮಾದಕ ವಾನೀಯಗಳ ನಿಷೇಧವನ್ನು ಕೈಕೊಳ್ಳಬೇಕು. ಅಲ್ಲದೆ ಆಯಾಯ ತಾಲೂಕಿಗೆ ಸರಿಹೋಗುವಂಥಾ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳನ್ನು ಯಥೋಚಿತವಾಗಿ ಆಯಾಯ ಕಾಂಗ್ರೆಸ್ ಕಮಿಟಿಗಳು ಕೈಕೊಳ್ಳಬೇಕು.

ಖಾದಿ.

ಸಂಸ್ಥಾನದಲ್ಲಿ ನೂಲುವದು ಮತ್ತು ನೇಯುವುದಕ್ಕೆ ಅನುಕೂಲತೆಗಳನ್ನು ಹುಡುಕಿ ವರದಿ ಮಾಡಲು ಒಂದು ಉಪಸಮಿತಿಯನ್ನು ವರ್ಕಿಂಗ್ ಕಮಿಟಿಯು ಮಾಡುತ್ತದೆ. ಅಲ್ಲದೆ ಎಲ್ಲಿ ಒಡನೆ ಈ ಕೈಗಾರಿಕೆಗಳನ್ನು ಕೈಕೊಳ್ಳಬಹುದೆಂಬುದನ್ನು ಈ ಕಮಿಟಿಯು ಸೂಚಿಸಬೇಕು.

ಅಧಿಕಾರಿಗಳ ಅತ್ಯಾಚಾರ.

ಕಾಂಗ್ರೆಸಿನ ಧ್ಯೇಯಸಮರ್ಥನಾ ಚಳವಳವನ್ನು ಬಗ್ಗು ಬಡಿಯಬೇಕೆಂದು ಹವಣಿಸುತ್ತಿರುವ ಸರಕಾರದ ವರ್ತನೆಯನ್ನು ಈ ಕಮಿಟಿಯು ವಿಷಾದದಿಂದ ಕಾಣುತ್ತದೆ; ಕಳೆದ ವರ್ಷದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಸಂಸ್ಥಾನ ಕಾಂಗ್ರೆಸಿನ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರಗಳನ್ನು ಜ್ಞಾಪಿಸಿಕೊಳ್ಳುತ್ತದೆ ರಾಜಕೀಯ ಬಂಧಿಗಳನ್ನು ಬಿಡುಗಡೆಮಾಡುವ ವರೆಗೆ ಅಂದರೆ ಕಳೆದ ನವಂಬರ್ ಅಂತ್ಯದ ವರೆಗೆ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ಬಹಿಷ್ಕರಿಸಿಯೂ, ಕಾಂಗ್ರೆಸ್ ನಿಯಮ ಬಾಹಿರವಾದ ಸಂಸ್ಥೆಯೆಂದು ಸಾರಿಯೂ ಸರಕಾರವು ನಡೆಸಿದ ಕ್ರೂರಾಚಾರವು ಖಂಡನೀಯವಿದೆ. ರಾಜಕೀಯ ಬಂಧಿಗಳ ಬಿಡುಗಡೆಯಾದ ನಂತರ ಜನವರಿಯ ವರೆಗೆ ಕಾಂಗ್ರೆಸ್ ಕಾರ್ಯಗಳಿಗೆ ಯಾವ ತೊಡಕೂ ಇರಲಿಲ್ಲ. ಪುನಹ ಸರಕಾರವು ಸ್ಪೆಶಿಯಲ್ ಪೋಲೀಸರನ್ನು ಸೇರಿಸಲು ಪ್ರಾರಂಭಿಸಿತು. ಈ ಪೋಲೀಸರಿಗೆ ಶಿಸ್ತಿನ ಉಡಿಗೆ ಇರಲಿಲ್ಲ ಅವರಿಗೆ ತಿಂಗಳಿಗೆ ರೂ. ೯ ವೇತನ ಕೊಡುತ್ತಿದ್ದರು. ಜನವರಿ ಮಧ್ಯದಿಂದ ಈ ಪೋಲೀಸರು ಮೀಟಿಂಗುಗಳಲ್ಲಿ ಹಾಜರಾಗಲು ಪ್ರಾರಂಭಿಸಿದರು. ಕ್ರಮೇಣ ಇವರ ಕೈವಾಡವು ನಡೆಯತೊಡಗಿತ. ಮಾರ್ಚಿ 11 ರಲ್ಲಿ ತೋಡ್‌ಪುಜಾ ಎಂಬಲ್ಲಿ ನಡೆದ ಕಾಂಗ್ರೆಸ್ ಮೀಟಿಂಗಿಗೆ ಕೆಲವು ಮಧ್ಯದಿಂದ ಮತ್ತರಾದ ಕೆಲವು ಪೋಲೀಸರು ಬಂದು ಕೂಗಾಡುತ್ತಾ ಅಲ್ಲಲ್ಲಿ ಜನರನ್ನು ಹೊಡೆಯುತ್ತಾ ಮೀಟಿಂಗನ್ನು ಮುರಿದು ಹಾಕಲು ಪ್ರಯತ್ನಿಸಿದರು. ಇದೇ ರೀತಿಯ ವರ್ತನೆಯನ್ನು ಕೂತಾಟುಕಲಮಿನಲ್ಲಿ ಅವರು ಕೈಕೊಂಡದಲ್ಲದೆ ಅಧ್ಯಕ್ಷರನ್ನು ಭಾಷಣವೇದಿಕೆಯಲ್ಲಿಯೇ ಬೆತ್ತಲೆ ನಿಲ್ಲಿಸಿದರು. ತಾರೀಕು 19 ರಲ್ಲಿ ಕ್ವಿಲಾನಿನಲ್ಲಿ ನಡೆದ ಸಭೆಯನ್ನು ಡೋಲು ಬಡಿಯೋಣದರಿಂದ ಮತ್ತು ಇತರ ಅನಾಚಾರಗಳಿಂದ ನಡೆಯಲು ಬಿಡಲಿಲ್ಲ; ನಾಗರ್‌ಕಾಯಿಲ್ ಎಂಬಲ್ಲಿ ಕೊಚೆಮಣ್ಣನ್ನು ತಂದು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಾಕಿ ತೊಂದರೆಪಡಿಸಿದರು. ತಾರೀಕು 22 ರಲ್ಲಿ ಕುಜಿತುರಾ ಎಂಬಲ್ಲಿ ಅಧ್ಯಕ್ಷರನ್ನೇ ಚೂರಿಯಿಂದ ತಿವಿಯಲು ಹೋಗಿಯೂ, ತಾರೀಕು 25 ರಲ್ಲಿ ಜನರ ಮೇಲೆಲ್ಲಾ ಸೀಮೆಣ್ಣೆಯನ್ನು ಚಿಮುಕಿಸಿಯೂ ತೊಂದರೆಗೊಳಿಸಿದರು.

ತಾರೀಕು 22 ರಿಂದ ಸತ್ಯಾಗ್ರಹವನ್ನು ನಿಲ್ಲಿಸಿದರೂ ಕೂಡ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡ ಸ್ವಯಂಸೇವಕರ ಮೇಲೆ ಅನಾವಶ್ಯದ ತೊಂದರೆಗಳನ್ನು ಹಾಕಿಯೂ, ಕೆಲವು ಸ್ಥಳಗಳಲ್ಲಿ ಅಧ್ಯಕ್ಷರ ಹಾಗೂ ಇತರ ಜನರನ್ನು ಹೊಡೆದೋಡಿಸಿ ಹಣವನ್ನು ದೋಚಿಕೊಂಡೂ, ಅವರ್ಣನೀಯ ವರ್ತನೆಯಿಂದ ಕಾಂಗ್ರೆಸಿನ ಕಾರ್ಯಕ್ಕೆ ಅಡ್ಡಿ ತಂದರು.

ಕೆಲಸಗಾರರಿಗೆ ಎಚ್ಚರಿಕೆ.

ರಾಜಕೀಯ ಬಂಧಿಗಳನ್ನು ಕಳೆದ ನವಂಬರಿನಲ್ಲಿ ಬಿಟ್ಟ ನಂತರ ಸಾರ್ವಜನಿಕ ಸಭೆಗಳನ್ನು ನಡೆಸುವ ಸವಲತ್ತಾದರೂ ದೊರಕಿತೆಂದು ಭಾವಿಸಲಾಗಿತ್ತು. ಆದರ ಈಗಿನ ಸ್ಥಿತಿಯು ಕಾಂಗ್ರೆಸ್ ಕಾನೂನಿಗೆ ವಿರೋಧವಾದ ಸಂಸ್ಥೆಯೆಂದು ಬಹಿಷ್ಕರಿಸಿದ್ದ ಆಗಿನ ಸ್ಥಿತಿಗಿಂಥಾ ಚಿಂತಾಜನಕವಾಗಿದೆ. ಈ ವರ್ಕಿಂಗ್ ಕಮಿಟಿಯು- ಅಹಿಂಸಾತತ್ವದಲ್ಲಿ ತಮಗಿರುವ ಅಚ್ಚಳಿಯದ ನಂಬಿಕೆಯನ್ನು ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಅಭಿನಂದಿಸುತ್ತದೆ. ಸತ್ಯಾಗ್ರಹವನ್ನು ನಿಲ್ಲಿಸಿದ ನಂತರವೂ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸದಿರುವದೇ ಈ ತೊಂದರೆಗಳಿಗೆ ಕಾರಣ. ಸಂಸ್ಥಾನ ಸರಕಾರವು ಪ್ರಜೆಗಳಿಗೆ ಯಾವದೊಂದೂ ಸುಧಾರಣೆಯನ್ನು ಕೊಡಲು ನಿರಾಕರಿಸಿರುವದಲ್ಲದೆ ಕಾಂಗ್ರೆಸ್ ಕಾರ್ಯಕರ್ತರನ್ನು ಒಂದಿಲ್ಲೊಂದು ನೆಪದಿಂದ ಕಾರಾಗ್ರಹಕ್ಕೆ ಕಳುಹಿಸುತ್ತಿದೆ. ಸರಕಾರದ ಏನೇ ಅತ್ಯಾಚಾರವು ನಡೆಯಲಿ; ಅದು ಯಾವದೆ. ಕಾರ್ಯಕ್ರಮವನ್ನು ಕೈಗೊಂಡು ತೊಂದರೆಗೊಳಿಸಲಿ; ಸಂಸ್ಥಾನ ಕಾಂಗ್ರೆಸು ಪೂಜ್ಯ ಗಾಂಧಿಜೀಯವರ ಸೂತ್ರಚಾಲನೆಯಂತೆ ವರ್ತಿಸದೆ ಬಿಡದು. ಈ ಮೇಲ್ಕಂಡ ಸರಕಾರದ ನಾಚಿಕೆಗೇಡಿನ ವರ್ತನೆಗಳನ್ನು ಕಾಂಗ್ರೆಸು ಖಂಡಿಸುವದಲ್ಲದೆ, ಸರಕಾರದ ಈ ಅಸಭ್ಯವರ್ತನೆಯಿಂದ ಹುರುಪುಗೊಂಡು ಜನತೆಯು ಇನ್ನಷ್ಟು ಪ್ರಖರವಾಗಿ ತನ್ನ ಕಾರ್ಯವನ್ನು ನಿರ್ವಹಿಸಬೇಕೆಂದು ಕೇಳಿಕೊಳ್ಳುತ್ತದೆ."

ಕಾಯಿದೆ ಭಂಗ ಚಳವಳವನ್ನು ನಿಲ್ಲಿಸಿದ್ದರಿಂದ ಜನತೆಯು ಆಶ್ಚರ್ಯಪಡಬಾರದು. ಅಧಿಕಾರಿಗಳು ಸತ್ಯಾಗ್ರಹದ ಚಳವಳಕ್ಕೆ ಬೇಕಾದಂತೆ ಸಂಸ್ಥಾನ ಕಾಂಗ್ರೆಸನ್ನು ತಮ್ಮ ಅನಾಚಾರಗಳಿಂದ ತರಬೇತು ಮಾಡುತ್ತಿರುವರೆಂದರೆ ತಪ್ಪಾಗದು. ಕಾರಣವಿಲ್ಲದೆ ಜನರಿಗೆ ತೊಂದರೆಕೊಟ್ಟು ಅವರನ್ನು ಮುಂದಿನ ಕದನದ ಯೋಧರನ್ನಾಗಿ ಮಾಡುತ್ತಿರುವರು. ಆದ್ದರಿಂದ ಕೆಲಸಗಾರರು ಈ ಅನಾಚಾರಗಳಿಗೊಳಗಾಗಿ ತಮ್ಮ ನಂಬಿಕೆಯನ್ನು ಕಳಕೊಳ್ಳದೆ ತಮ್ಮ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿದ್ದೇಯಾದರೆ ಪೂರ್ಣ ಸ್ವರಾಜ್ಯವು ದೂರ ಉಳಿಯದು. ಇದು ಒಂದು ಅಮೋಘ ಹೇಳಿಕೆ. ಕೆಲವರು ಇದನ್ನು ಅಲ್ಲಗಳೆಯಬಹುದು. ಆದರೆ ಇದು ಹೃದಯಾಂತರಾಳದಿಂದ ಬಂದದ್ದಾಗಿದೆ.

ಸಂಸ್ಥಾನ ಕಾಂಗ್ರೆಸಿನ ಮೇಲ್ಕಂಡ ಉದ್ಗಾರದಿಂದ ನನ್ನ ಮನಸ್ಸಿಗೆ ತೊಂದರೆ ಕೊಡುವ ವಿಚಾರವೆಂದರೆ, 'ಸಂಸ್ಥಾನ ಕಾಂಗ್ರೆಸು ಗಾಂಧಿಜೀಯವರ ಸೂತ್ರಚಾಲನೆಯಂತೆ ನಡೆಯುವರು' ಎಂಬ ವಾಕ್ಯವಾಗಿದೆ. ನನ್ನ ಮೇಲಿನ ನಂಬಿಕೆಯನ್ನು ವ್ಯಕ್ತಪಡಿಸುವ ಈ ಹೇಳಿಕೆಯು ನನಗೆ ಸ್ಫೂರ್ತಿ ತೊಂದರೆ ಹಾಗೂ ಅಸಮಾಧಾನವನ್ನು ಮಾಡುತ್ತಿದೆ. ನನ್ನ ಸಲಹೆ ಹಾಗೂ ಸೂತ್ರಚಾಲನೆಯು ಅವರ ಇಚ್ಛೆಯಂತಿದ್ದರೂ ಹೊಸ ಚೈತನ್ಯವು ನನ್ನ ಹೃದಯಾಂತರಾಳದಿಂದ ಹೊರಹೊಮ್ಮದ ಹೊರತು ನಾನು ಸೂಚನೆಗಳನ್ನು ಕೊಡುವಂತಿಲ್ಲ. ನಾನು ಒಂದು ಹೊಸ ವಿಧಾನವನ್ನು ಕಂಡುಕೊಂಡಿರುವೆನು. ಅದ್ದರಿಂದ ಅವನ್ನೇ ಅನುಸರಿಸಿ ವರ್ತಿಸಿರಿ, ಸೋಲು ಎಂದಿಗೂ ಬರದು' ಎಂದು ಹೇಳಬಲ್ಲೆ. ಖಾಯಿದೆ ಭಂಗ ಚಳವಳವನ್ನು ಪುನಃ ಕೈಕೊಳ್ಳಲು ನಾನು ಹೇಳಲಾರೆ. ಅಲ್ಲಿ ಅಸತ್ಯವೂ, ಹಿಂಸಾತತ್ವವೂ ವಿರಾಜಿಸುತ್ತಿರುವದರಿಂದ ಸತ್ಯಾಗ್ರಹವು ಅಹಿತ.

ಸಂಸ್ಥಾನಾಧೀಶರ ಅನಾಯಕತ್ವದ ವಿಚಾರ ನಂಬಿಕೆ ಇಡಬೇಕಾದರೆ ಅಲ್ಲಿಯ ಪೂರ್ಣ ಸಮಸ್ಯೆಯನ್ನು ವಿಚಾರಿಸಿ ವಿವೇಚಿಸಿದ್ದಲ್ಲದೆ ಅಸಾಧ್ಯ. ಸರಕಾರದ ತಿರಸ್ಕಾರ ಭಾವವು ಜನರಲ್ಲಿ ಅತೃಪ್ತಿ ಹುಟ್ಟಿಸಿರಬಹುದು. ಇದನ್ನು ಪರಿಹರಿಸಲು ಅಲ್ಲಿಯ ಒಂದು ಕಮಿಟಿಯನ್ನು ನೇಮಿಸಿ ಸರಕಾರದ ತಪ್ಪು ನಡವಳಿಕೆಗೆ ಸುಣ್ಣ ಬಳಿಯಲೆತ್ನಿಸುವದು ನ್ಯಾಯಸಮ್ಮತವಾದದ್ದಲ್ಲ. ಸರಕಾರದ ವರ್ತನೆಯಲ್ಲಿ ನಂಬಿಕೆ ಬರಬೇಕಾದರೆ ಸಂಸ್ಥಾನದ ಹೊರಗಿನಿಂದ ನಿಷ್ಪಕ್ಷಪಾತೀಯ ಕಮಿಟಿಯೊಂದನ್ನು ನೇಮಿಸಿ ವಿಚಾರಗಳನ್ನು ಪರಿಶೀಲಿಸಬೇಕು.

ಜರ್ಮನಿಯಲ್ಲಿ ನಿಷಾನಿಷೇಧ.

ಮಧ್ಯಪಾನದ ಬದಲು ಇನ್ನೊಂದು ಪಾನ.

ಜರ್ಮನಿಯಲ್ಲಿ ಮಧ್ಯಪಾನ ಪ್ರತಿಬಂಧವನ್ನು ಜಾರಿಗೆ ತರುವ ತಮ್ಮ ಕಾಂಕ್ಷೆಯನ್ನು ಹರ್ ಹಿಟ್ಲರರು ಸಧ್ಯದಲ್ಲೇ ಸಾಧಿಸಬಹುದೆಂದು ಹಲವು ಪತ್ರಿಕೆಗಳು ನುಡಿದವೆ. ಸರಾಯಿಗಳಿಂದ ಜನಾಂಗದ ಅವನತಿಯಾಗುವುದೆಂದು ಇವರು 'ನನ್ನ ಹೋರಾಟ'ವೆಂಬ (Mein Kamyh) ಪುಸ್ತಕದಲ್ಲೂ ಬರದಿರುವರು

ಸರಾಯಿಗಳನ್ನು ವಿಶೇಷವಾಗಿ ತಯಾರಿಸಬಾರದೆಂದು ತಿಳಿಸಲಾಗಿದೆಯಂತೆ! ಈಗಿರುವ 'ಸ್ಟಾಕ್' ಮಾರಲಡ್ಡಿಯಿಲ್ಲ. ಚಾಕ್‌ಲೇಟುಗಳನ್ನು ಮಧ್ಯದಿಂದ ತಯಾರಿಸಕೂಡದೆಂದೂ ಆಜ್ಞೆ ವಿಧಿಸಲಾಗಿದೆ. ಇದಕ್ಕೆ ಜನರ ಬೆಂಬಲವಿದೆಯೋ? ಎಂಬುದನ್ನು ತಿಳಿಯಲು ಅಧಿಕಾರಿಗಳು ಬಹು ಸೂಕ್ಷ್ಮ ನಿರೀಕ್ಷಣೆಯನ್ನು ಕೈಕೊಂಡಿರುವರು. ಜನಬೆಂಬಲವಿದ್ದರೆ ಮೊದಲು ಒಂದೆರಡು ಪ್ರಾಂತಗಳಲ್ಲಿ ಮಧ್ಯಪಾನವನ್ನು ನಿಲ್ಲಿಸಲಾಗುವುದಂತೆ!

ಈ ಪ್ರಯತ್ನವು ಯಶಸ್ವಿಗೊಂಡರೆ ಬೀಯರ್, ವಿಸ್ಕಿ ಮೊದಲಾದ ಮಾದಕ ಪಾನಗಳನ್ನು ನಿಲ್ಲಿಸಲಾಗುವುದು. ಜನರಿಗೆ ಮಾದಕವಲ್ಲದ ಇನ್ನೊಂದು ಪಾನವನ್ನು ಸಿದ್ಧಗೊಳಿಸಲು ಒಂದು ಹೊಸ ಕಾರ್ಖಾನೆಯನ್ನೇ ಬರ್ಲಿನ್ ಮಹಾನಗರದಲ್ಲಿ ಸ್ಥಾಪಿಸಲಾಗಿದೆ.

ಹರ್ ಹಿಟ್ಲರರು ಸಸ್ಯಾಹಾರಿಗಳಾಗಿರುವರಲ್ಲದೆ ಮಧ್ಯಪಾನವನ್ನು ಸಂಪೂರ್ಣ ತ್ಯಜಿಸಿರುವರು. ಸಾರ್ವಜನಿಕ ಕೂಟಗಳಲ್ಲಿ ಇನ್ನಿತರ ಪ್ರಮುಖರೂ ಕುಡಿಯಬಾರದೆಂದು ಅವರನ್ನು ಈಗಾಗಲೇ ಪುಸಲಾಯಿಸುವರೆಂದು ತಿಳಿಯಲಾಗಿದೆ.

ಜರ್ಮನಿಯಲ್ಲಿ ಮಧ್ಯರಾಕ್ಷಸನ ಉಚ್ಚಾಟನೆಯಾದರೆ ಆರ್ಥಿಕ ಮುಗ್ಗಟ್ಟು ಸುಧಾರಿಸಬಹುದೆಂದೂ ತಜ್ಞರು ಅಭಿಪ್ರಾಯಪಟ್ಟಿರುವರು.

ಕೊಡವರ ಸಮಾಜ ಸುಧಾರಣೆ.

ಹಿರಿಯರ ಪ್ರಪಂಚದ "ಪಾಪ"ಗಳು.

ಯುವಕ ಸಮಾಜದ ಉಭಯಸಂಕಟ.

(ಲೇಖಕ—ಬಿ. ಯಂ. ಕಾರ್ಯಪ್ಪ, ಸಂಪಾದಕ—ಸ್ವತಂತ್ರ ಭಾರತ, ಮಂಗಳೂರು.)

ಕೊಡವರ ಸಮಾಜ ಸುಧಾರಣೆಯ ವಿಷಯದಲ್ಲಿ 'ಕೊಡಗು' ಪತ್ರಿಕೆಯಲ್ಲಿ ಬರೆದ ಎರಡು ಲೇಖಗಳನ್ನೋದಿ, ಮುಂದೆ ಬರುವಂಥವುಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತೇನೆ. ಕೊಡವರ ಸಮಾಜಸುಧಾರಣೆಯ ಭಯಂಕರ ಪರಿಣಾಮವನ್ನು ಇವರು ವಿವರಿಸಲು ಈಗ ಪ್ರಯತ್ನಿಸುವುದು ತುಸು ಕಾಲ ಮೀರಿದೆಯಾದರೂ, ಮುಂದಕ್ಕಾದರೂ ಕೊಡವರು ಅವರ ಸಮಾಜದ ಕ್ಷೀಣತೆಯನ್ನು ತಡೆಕಟ್ಟಲು ಶ್ರೀ. ಕಾರ್ಯಪ್ಪನವರು ಎಚ್ಚರಕೊಟ್ಟ ಇವರ ಧೈರ್ಯಕ್ಕೆ ಅಭಿನಂದನೆಗಳು. ಈಗ ಕೆಲಕಾಲದಿಂದ ಕೊಡಗಿನ ಕೊಡವರು ಕಾರಣಾಂತರದಿಂದ ಅವರ ತಲೆಯ ಸಮುಕಟ್ಟನ್ನು ಮರೆತು ಅವರ ಸಾಮಾನ್ಯ ನಡೆನುಡಿಗಳಲ್ಲಿ ಆಚಾರ ವಿಚಾರದ ಬದಲು ಅನಾಚಾರ, ಅತ್ಯಾಚಾರಗಳನ್ನು ಆಚರಿಸುತ್ತಿರುವುದು ನಮ್ಮ ಅನುಭವವಾಗಿದೆ. ಸಮಾಜದ ಹಿಡುಕಟ್ಟಿಗೆ ಯಾವುದಲ್ಲ ಬೇಕೋ ಅವೆಲ್ಲವನ್ನೂ ನಿರಾಕರಿಸಿ ಸಮಾಜ ಧರ್ಮವನ್ನೇ ಕೊಡವರು ಬಿಟ್ಟುಬಿಟ್ಟು, ತಾವು ವಿಲಾಯತಿಯಿಂದಲೋ, ಧೃವ ಪ್ರದೇಶಗಳಿಂದಲೋ ಬಂದವರಂತೆ ನಟಿಸುವುದು ಎಲ್ಲರ ಅನುಭವದಲ್ಲಿಯೂ ಇದೆ. ಇದರ ಫಲಿತಾಂಶವಾಗಿ ಕೊಡವ ಸಮಾಜದ ನೀತಿ ಧರ್ಮ, ಸ್ತ್ರೀ ಪುರುಷರ ಧಾರ್ಮಿಕ ಲಕ್ಷಣಗಳು ಕ್ಷೀಣವಾಗಿ ಮನೆತನ, ಗ್ರಾಮ, ನಾಡು, ದೇವಗಳ ಕ್ಷೀಣತೆ—ಇವುಗಳೆಲ್ಲವೂ ವಿವೇಕಿಯರನ್ನು ವಿಸ್ಮಯಗೊಳಿಸುತ್ತವೆ. ಇವೆಲ್ಲವನ್ನೂ ವಿವರಿಸಿದರೆ ಕೆಲವರಿಗೆ ಮನನೋಯಬಹುದು, ಹಲವರು ಉದ್ರೇಕಗೊಳ್ಳಬಹುದು, ಮತ್ತೆ ಕೆಲವರು ವಿಸ್ಮಯಗೊಳ್ಳಬಹುದು. ಅಂತು, ಕೊಡವ ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರಗಳು ಕೊಡವರ ಗೌರವಕ್ಕೆ ಈಗೀಗ ತಿಲಾಂಜಲಿ ಇತ್ತಿವೆಯೆಂದು ಹೇಳಿದರೆ ಸಾಕಾಗಿದೆ.

ಕಾರಣಭೂತರ್ಯಾರು?

ಶ್ರೀ. ಕಾರ್ಯಪ್ಪನವರು ಈ ಅನಾಚಾರ, ಅತ್ಯಾಚಾರಗಳಿಗೆ ಕೊಡಗಿನ ವಿದ್ಯಾವಂತ ಯುವಕರು ಕಾರಣಭೂತರೆಂದು ಹೇಳುವಂತೆ ಕಾಣುತ್ತದೆ. ಕೊಡವರ ಯುವಕರ ಮೇಲೆ ಇವರಿಗೆ ನಿಷ್ಕಾರಣವಾದ ಅದೊಂದು ವಕ್ರದೃಷ್ಟಿ ಇದೆಯೆಂಬುದು ನನ್ನ ಹೊಸ ಅನುಭವವಲ್ಲ. ಈ ವಕ್ರದೃಷ್ಟಿಯಿಂದ ಇವರ ನೋಟವು ಮುಸುಕಿಹೋಗಿದೆ. ಕೊಡವ ಯುವಕರು 'ಅಪ್ಪನ ಪೋಲೆ ಮಕ್ಕ, ನಾಯಿರ ಪೋಲೆ ಬಾಲ್'—ಎಂಬಂತೆ ಅವರ ಹಿರಿಯರ ಎರಕವಾಗಿದೆ. ಕೊಡವ ಸಮಾಜದಲ್ಲಿ ಇಂದು ಕಂಡು ಬರುತ್ತಿರುವ ಭಯಂಕರವಾದ ಕ್ಷೀಣತೆಯು ಕೊಡವ ಹಿರಿಯರ ಸಮಾಜದವರ ಪಾಪದ ಫಲವೆಂದು ಹೇಳಲು ಯಾವ ಸಂದೇಹವೂ ಇಲ್ಲ. ಹಿರಿಯರು ವಿವೇಕಿಗಳಾದರೆ ಕಿರಿಯರು ಅವಿವೇಕಿಗಳಾಗಲು ಅವಕಾಶವಿಲ್ಲ. ಕೊಡವ ಯುವಕರು ಅತಿಶಯದ ಶಾಂತಿ ಮೂರ್ತಿಗಳಾಗಿರುವುದರಿಂದ ಹಿರಿಯರು ಅವರನ್ನು ದುರುಪಯೋಗಪಡಿಸುವುದಕ್ಕೆ ಇನ್ನೂ ಉದಾಹರಣೆ ಬೇಕಾದರೆ ಶ್ರೀ. ಕಾರ್ಯಪ್ಪನವರ ಲೇಖನವೇ ಸಾಕಾಗಿದೆ.

ಹಿರಿಯರ ಪ್ರಪಂಚದ ಪಾಪಗಳು.

ಕೊಡಗಿನ ಹಿರಿಯರ ಪ್ರಪಂಚದವರ ಪಾಪಗಳೆಂಬಾಗ ಶ್ರೀ. ಕಾರ್ಯಪ್ಪನವರು ಕೊಡವ ಯುವಕರು ಅವರ ಪೋಷಕರಾಗಿದ್ದವರನ್ನು ಮರೆತುಬಿಡುವರೆಂದು ಹೇಳಿದ ಅಪರಾಧವನ್ನು ಪುಷ್ಟೀಕರಿಸಿದೆನೆಂದು ಯಾರಾದರೂ ಭಾವಿಸಿದರೆ ಅವರು ಮೋಸಹೋಗುವರು. ನ್ಯಾಯಕ್ಕೆ ಭಯವಿಲ್ಲ, ದಾಕ್ಷಿಣ್ಯವಿಲ್ಲ; ಮಾತ್ರವಲ್ಲ, ಕೊಡಗಿನಲ್ಲಿರುವ ಹಲವು ಧಾರ್ಮಿಕರು ಯುವಕರ ಕೃತಜ್ಞತೆಗೆ ಪಾತ್ರರಾಗಿರುವರೆಂಬವನ್ನು ಎಂಥಾ ಮೂರ್ಖನೂ ಅಲ್ಲಗಳೆಯಲಾರನು. ಆದರೆ ಧಾರ್ಮಿಕರ ಗುಣಗಳಿಲ್ಲದೆ, ಧಾರ್ಮಿಕರೆನ್ನಿಸಿಕೊಳ್ಳಬಯಸುವವರ ಗುಂಪನ್ನು ಖಂಡಿಸಲೇಬೇಕು.

ಕೊಡಗಿನ ಹಿರಿಯರ ಪಾಪಗಳಿಗೆ ಸ್ಪಷ್ಟವಾದ ಉದಾಹರಣೆಯು ಈಗ ಉತ್ತರ ನೀಯಲು ಸಂದರ್ಭಕೊಟ್ಟ ಲೇಖನ ಮತ್ತು ಅದರ ಲೇಖಕರು. ಕೊಡಗಿನ ಸಮಾಜ ಸುಧಾರಣೆ ಎಂಬ ಗಂಭೀರವಾದ ಲೇಖನದಲ್ಲಿ ಅವರು ಸಮಾಜದ ಕುಂದು ಕೊರತೆಗಳನ್ನು ಒಂದೆರಡು ವ್ಯಕ್ತಿಗಳಿಗೂ, ಒಂದೆರಡು ಕುಟುಂಬಕ್ಕೂ ಮುಡುಪಿಸಿರುವರೆಂಬವಕ್ಕೆ ಸಂದೇಹವಿಲ್ಲ. ಸಮಾಜವೆಂಬಷ್ಟರ ವಿಸ್ತಾರವಾದ ಅರ್ಥವನ್ನು ಇವರು ಪರೀಕ್ಷಿಸಿದರೆ ಕೊಡವ ಯುವಕ ಸಮಾಜವು ಅದರ ಪುನರುದ್ಧಾರಕ್ಕೆ ಪ್ರಯತ್ನಪಡುತ್ತಾರೆ, ಅವರಿಗೆ ಸರಿಯಾದ ಬೆಂಬಲವಿಲ್ಲವೆಂದು ತಿಳಿಯುತ್ತಿತು.

ಸಮಾಜದ್ರೋಹಿಗಳು.

ಕೊಡವ ಸಮಾಜದ ಹಿರಿಯರ ಪ್ರಪಂಚದಲ್ಲಿರುವವರನ್ನು 3 ವಿಭಾಗಗಳನ್ನಾಗಿ ಮಾಡಬಹುದು. 1. ಸಮಾಜದ್ರೋಹಿಗಳು, 2. ತಟಸ್ಥರು, 3. ಸಮಾಜ ಪ್ರೇಮಿಗಳು. ಇವರಲ್ಲಿ ಮೊದಲನೆಯರ ಪಕ್ಷದವರು ಕೇವಲ ವಿದ್ಯಾವಂತರಿದ್ದು, ಕೊಡವರ ಆಚಾರ ವಿಚಾರಗಳಿಗೆ ತಿಲಾಂಜಲಿಯಿತ್ತಿರುವ ಮೂಲ ಪುರುಷರು. ಆಂಗ್ಲ ವಿದ್ಯಾಭ್ಯಾಸದ ಗಿಲಿಟು ವಾತಾವರಣದ ವರ್ಚಸ್ಸಿನಲ್ಲಿ ಜನಿಸಿದ ಇವರು ಇಂದು ಅತ್ತ ಆಂಗ್ಲೇಯರೂ ಅಲ್ಲ, ಇತ್ತ ಕೊಡವರೂ ಆಗಿರದೆ ಇವರ ಮನೆತನವೇ ಗೊತ್ತಿಲ್ಲದವರಾಗಿದ್ದಾರೆ. ಕೊಡವ ಆಟ ಕೂಟಗಳಲ್ಲಿ ಬಂದರೆ ಕೊಡವರ ಆಚಾರ ವಿಚಾರಗಳಿಗೆ ಅಪಹಾಸ್ಯ ಮಾಡುವ ಅಪಶಕುನಗಳಿವರು. ಹಳ್ಳಿಗಳಿಗೆ ಇವರು ಹೋದರೆ ಇವರು ದೊಡ್ಡವರೆಂದು ಅಪೂರ್ವ ಗೌರವ; ಯುರೋಪಿಯನ್ ಡ್ರೆಸ್ಸಿನಲ್ಲಿ ಹಬ್ಬ ಕೂಟಗಳಿಗೆ ಹೋಗುವುದು, ಅಲ್ಲಿ ಕಾಲಿಗೆ ಬೂಟಿಸು ಹಾಕಿ ಭೋಜನಕ್ಕೆ ಕೂತುಕೊಳ್ಳುವುದು, ಕೊಡಗು ಭಾಷೆಯನ್ನು ಆಂಗ್ಲ ಸ್ವರದಿಂದಾಡುವುದು ಇವೆಲ್ಲವೂ ಹಳಬರಿಂದ ಯುವಕರಿಗೆ ದಾಟಿದ ಜನ್ಮ ಆಸ್ತಿಗಳು. ಕೊಡಗಿನ ವಿದ್ಯಾವಂತ ಹಳಬರಲ್ಲಿ ಎಷ್ಟು ಜನರಿಗೆ 'ಮಡಿಕೊಟ್ಟು ಪಾಟು' ತಿಳಿದಿದೆ? ಕೊಡವರ 'ಕೊಟ್ಟ ಪಾಟ್'ಗಳನ್ನು ಇವರೆಷ್ಟು ಅಪಹಾಸ್ಯ ಮಾಡುವವರಿದ್ದಾರೆ? ಕೊಡವರ ನರ್ತನ ತಿಳಿಯುವವರೆಷ್ಟಿದ್ದಾರೆ? ನಮ್ಮ ಸಂಸ್ಕೃತಿಯನ್ನು ಅಪಹಾಸ್ಯಮಾಡಿ ಆಂಗ್ಲೇಯರ ಸ್ತ್ರೀ ನರ್ತನವನ್ನು ಹೊಗಳುವವರೆಷ್ಟಿದ್ದಾರೆ? ಈ ಹಿರಿಯರಲ್ಲಿ ಎಷ್ಟು ಮಂದಿಯರು ಅವರ ಗ್ರಾಮಗಳ ಕಡೆ ದೃಷ್ಟಿ ಇತ್ತಿರುವರು? ಒಮ್ಮೊಮ್ಮೆ ಓಟು ಬೇಕಾದಾಗ ಇದ್ದ ದೊಡ್ಡ ಬಿರುದಾವಳಿಗಳನ್ನೂ, ಮೆಡಲುಗಳನ್ನೂ ಸ್ವಪ್ರತಿಷ್ಠೆಗಾಗಿ ಪ್ರದರ್ಶಿಸುತ್ತಾ ಹಳ್ಳಿಗಳ 'ಬಡ ಜನ ರಕ್ಷಕರಾಗಿ' ಮಿಂಚು ವೇಗದಿಂದ ಗಂಭೀರ ಪ್ರಯಾಣ ಮಾಡುವರಲ್ಲದೆ, ಇತರ ಸಮಯದಲ್ಲಿ ಯುವಕರನ್ನೂ, ಹಳ್ಳಿಗರನ್ನೂ ಧಿಕ್ಕರಿಸುವುದೇ ಇವರ ಕಸಬು. ಅಂದ ಮೇಲೆ ಯುವಕರಿಗೆ ಉತ್ಸಾಹ ಎಲ್ಲಿಂದ?

ಪದ್ಧತಿಗಳು.

ಕೊಡವರ ಪದ್ಧತಿಗಳು, ಮದುವೆಗಳು—ಇವುಗಳ ವಿಷಯ ಕಿರಿಯರ ಮೇಲೆ ಶ್ರೀ. ಕಾರ್ಯಪ್ಪನವರು ಹೊರಿಸಿದ ಆರೋಪಗಳು ನಿಷ್ಕಾರಣವಾಗಿವೆ. ಹಿರಿಯರೇ ಇಲ್ಲಿಯೂ ತಪ್ಪಿತಸ್ಥರು. [illegible]ಗಳಲ್ಲಿ ಮದ್ಯಪಾನ ಮಾಡಲು ಹಿರಿಯರು ಪ್ರಾರಂಭಿಸಿದರೋ? ಒಂದು ಎರಡು ಮದುವೆಗಳನ್ನು ಪ್ರಾರಂಭಿಸಿದವರ್ಯಾರು, ಕುರಿಗಾಡಸಿ ಮದುವೆ ಮಾಡಲು ಕಾರಣಭೂತರ್ಯಾರು? ಮಡಿಕೇರಿಯಲ್ಲಿರುವ ಎಷ್ಟು ಮಹಾಪುರುಷರು ಅಲ್ಲಿ ನಡೆಯುವ ಪುತ್ತರಿಹಬ್ಬದಲ್ಲಿ ಭಾಗವಹಿಸುತ್ತಾರೆ? 'ಸಾಹಿ'ನ ಮನೆಯಲ್ಲಿ ಯೂರೋಪಿಯನರೇ ಕಾಲಿನಿಂದ ಬೂಟೀಸು ಬಿಚ್ಚುವಾಗ, ತಮ್ಮ ಸೊಂಟ ಬಗ್ಗದವರು ಹಿರಿಯರೋ? ಕಿರಿಯರೋ? ಯೂರೋಪಿಯನ್ ಸಂಸ್ಕೃತಿಯಲ್ಲಿ ಮೋಸಗೊಂಡ ಹಿರಿಯರು 'ಕಾಲಬಂದನ್ನಕ್ಕೆ ಕೋಲ ಕೊಟ್ಟನ' ಎಂಬರಲ್ಲದೆ, ಹಿರಿಯರ ಅಧೀನದಲ್ಲಿರುವ ಕಿರಿಯರಲ್ಲ.

ಕಾಣಿತೆ ಬೆಂದು ಪೋಚಾ?

'ಕಾಣಿತೆ ಬೆಂದು ಪೋಚಾ' ಎಂಬಂತ ಪರಿಸ್ಥಿತಿಗೂ ಈ ಹಿರಿಯರೇ ಕಾರಣಭೂತರು. ಹಲವು ಸಂದರ್ಭಗಳಲ್ಲಿ ತಮ್ಮ ಒಡನಾಟಿಗಳಾದ ಹಳ್ಳಿಗರು ಪಟ್ಟಣದವರಲ್ಲಿಗೆ ಬಂದರೆ ಅವರನ್ನು ಕಣ್ಣೆತ್ತಿ ನೋಡುವುದಿಲ್ಲವೆಂದು ಎಷ್ಟೋ ಕೇಳಿದ್ದೇನೆ. ಒಮ್ಮೊಮ್ಮೆ ಇವರು ಹಳ್ಳಿಗೆ ಬಂದರೂ ಕುತ್ತಿಗೆಯು ಟೈ (neck-tie) ಗಳಿಂದ ದಟ್ಟವಾಗಿರುತ್ತದೆ. ಸತ್ಕಾರ ಸ್ವೀಕರಿಸಿ ಹಿಂತಿರುಗುವರು. ಆದ್ದರಿಂದ ಹಳ್ಳಿಗಳಲ್ಲಿಯೂ ಹಿರಿಯರೇ ದ್ರೋಹಿಗಳಲ್ಲದೆ ಕಿರಿಯರಲ್ಲ. ಹಳ್ಳಿಗಳಲ್ಲಿ 'ಕಾಣಿತೆ ಬೆಂದು ಪೋಯಿತಿಲ್ಲ.'

ಯುವಕರ ಧರ್ಮಸಂಕಟ.

ಕೊಡವರ ಸಮಾಜದ ಕ್ಷೀಣತೆಗೆ ಈ ಹಿರಿಯರೇ ಕಾರಣಭೂತರೆಂದು ಹೇಳಲು ಇನ್ನೂ ಕಾರಣಗಳಿವೆ. ಹಿರಿಯರು ವಿವೇಕಿಗಳೆಂಬುದು ಹಳೆಯದೊಂದು ನಾಣ್ಣುಡಿ. ಆದರೆ ನಮ್ಮ ಹಿರಿಯರ ವಿವೇಕ ತಿಳಿಯಿತು ವಿರಾ? ಉದ್ಯೋಗವಿದ್ದರೂ ನಿರುದ್ಯೋಗದ ಮೂರ್ತಿಗಳಾಗಿ ಯುವಕರನ್ನು ಹಳಿಯುವುದು, ಪರನಿಂದೆ, ಇವೇ ಇವರ ಕಸಬು. ಶ್ರೀ. ಕಾರ್ಯಪ್ಪನವರ ಲೇಖನವು ಇದಕ್ಕೆ ಇನ್ನೊಂದು ಉದಾಹರಣೆ. ಒಬ್ಬ ಯುವಕನು, ವ, ಯುವತಿಯು ಇವರ ದೃಷ್ಟಿಗೆ ಗೋಚರವಾದರೆ ಸಾಕು; ಅವನ್ಯಾರು, ಅವಳ್ಯಾರು ಅವರ, ತಾಯಿ, ತಂದೆ, ಅಜ್ಜ, ಮುತ್ತಜ್ಜ ಇವರ ಚರಿತ್ರೆಯನ್ನು ಹೆಕ್ಕಿ ತೆಗೆದು, ಅವರ ಸ್ವಂತ ಚರಿತ್ರೆಯನ್ನು ಕಲ್ಪಿಸಿ, ತಮ್ಮ ಮನದಲ್ಲಿ ಜೇಡರ ಬಲೆಯನ್ನು ನೇಯುವ ಶಕ್ತಿ ಇರುವ ಪಂಡಿತರನ್ನು ಯಾವ ಕಾಲೇಜಿಗೆ ಬೇಕಾದರೂ ಕೊಡಗಿನಲ್ಲಿ ತುಂಬಾ ಸಿಕ್ಕುತ್ತದೆ. ಯುವಕರು ಒಳ್ಳೆಯ ದುಸ್ತು ಹಾಕಿದರೆ ಅವರನ್ನು ಡಂಭಗಾರರೆನ್ನುತ್ತಾರೆ; ಹಾಕದಿದ್ದರೆ, 'ಪೋಕ್ಕಿ'ಗಳೆನ್ನುತ್ತಾರೆ. ಯುವತಿಯರಿಗೂ ಇದೇ ಸಂಕಟ. ಇದರ ಫಲಿತಾಂಶವಾಗಿ, ಯುವಕರು ಕಷ್ಟಪಡುವುದಕ್ಕೆ ಕೊಡಗು ಒಂದು ಫಲಭರಿತವಾದ ರಂಗವಾಗಿದೆ. ಕೊಡಗಿನಿಂದ ಹೊರಹೋಗುವ ಹಲವು ಯುವಕರಿಗೆ ಕಾರಣವೂ ಇದೇ ಇರುತ್ತದೆ. ಅದರೂ ಕೆಲವು ಯುವಕರು ಅವರ ಸ್ವಾಭಾವಿಕ ಪ್ರತಿಭೆಯನ್ನು ತೋರಿಸಲು ಕೊಡಗಿನಲ್ಲಿ ಅವಕಾಶವಿಲ್ಲದ್ದರಿಂದ ವಿಸ್ತಾರವಾದ ಕ್ಷೇತ್ರವನ್ನು ಹುಡುಕಿಕೊಂಡು ಪರದೇಶಕ್ಕೆ ಹೋಗುತ್ತಾರೆ. (ಶ್ರೀ. ಕಾರ್ಯಪ್ಪನವರ ಪುತ್ರರಾದ ಶ್ರೀ. ಪೊನ್ನಪ್ಪನವರ ಉದಾಹರಣೆ ಇದಕ್ಕೆ ಸಾಕಾಗಿದೆ.) ಆ ಮಾತ್ರಕ್ಕೆ ಅವರು 'ನೀರಿನಲ್ಲಿದ್ದು ನೀರು ಕುಡಿಯುತ್ತಾರೆಂ'ದಾಗಲಿಲ್ಲ. ಈ ವಿಷಯ ಶ್ರೀ. ಕಾರ್ಯಪ್ಪನವರು ತಮ್ಮ ಅನುಭವದ ಆಧಾರದಿಂದ ಮಾತನಾಡುವುದಾದರೆ ನನ್ನನ್ನು ಕ್ಷಮಿಸಬೇಕು. ಯಾವ ಅಪವಾದವನ್ನು ಈ ಹಳಬ 'ಹಿತಚಿಂತಕರು' ಹೊರಿಸಿದರೂ, ಧೈರ್ಯಗುಂದದೆ ಇರುವ ಯುವಕರಿದ್ದಾರೆ. ಆ ಮಾತ್ರಕ್ಕೆ ದ್ರೋಹಿಗಳೆಲ್ಲವೆಂದಾಗಲಿಲ್ಲ. ಒಬ್ಬಿಬ್ಬರು ದುರಹಂಕಾರಿಗಳಾಗಿ, ಹೆಂಡಕುಡುಕರಾಗಿ, ವ್ಯಭಿಚಾರಿಗಳಾಗಿ, ಪರನಿಂದೆಯ ಪರಬ್ರಹ್ಮವಾಗಿದ್ದ ಮಾತ್ರಕ್ಕೆ ಕೊಡವ ಯುವಕರೇ ಹಾಗೆಂದಾಗಲಿಲ್ಲ. ಆದ್ದರಿಂದ ಕೊಡವ ಸಮಾಜದ ಕ್ಷೀಣತೆಗೆ ಅಥವಾ ಸಮಾಜ ಸುಧಾರಣೆ ಎಂಬ ಅಪಕೀರ್ತಿಗೆ ಯುವಕರು ಕಾರಣಭೂತರಲ್ಲ; 'ಸುಧಾರಣೆಯು' ಯುವಕರಿಂದಾಗಲಿಲ್ಲ. ಕೊಡವರ ಹಿರಿಯರ ಪ್ರಪಂಚವು ಅವರ ಸಮಾಜವನ್ನೇ ನಿರ್ಮೂಲ ಮಾಡಲು ಸೊಂಟಕಟ್ಟಿದ್ದಾರೆ. ಯುವಕರನ್ನು ಮೂಲೆಗೊತ್ತಲು ಇವರು ಈ ವರೆಗೆ ಜಯಶೀಲರಾಗಿದ್ದಾರೆ. ಕೆಲವು ಮಟ್ಟಿಗೆ ಈಗಿನ ಕಾಲಮಹಿಮೆಗೆ ಸರಿಯಾಗಿ ನಾವು ಮುನ್ನಡೆಯಬೇಕೆಂಬ ಯುವಕರೂ ಇದ್ದಾರೆ. ಅವರ ದಾರಿತಪ್ಪಲು ತಿಳಿಗೇಡಿತನವು ಹಿರಿ

(8ನೇ ಪುಟಕ್ಕೆ ಸಾಗಿದೆ.)

ಅಭಾಗ್ಯ ತಿರುವಾಂಕೂರು.

ಲೇ:-ಗಾಂಧಿ. (ಹರಿಜನ 22-4-39)

ಸರಕಾರದ ಅತ್ಯಾಚಾರವು ಮುಂದಿನ ನಮ್ಮ ಚಳವಳ ರಂಗಕ್ಕೆ ಸಹಕಾರಿ. ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿದರೆ ನಮ್ಮ ಪ್ರಯತ್ನವು ಫಲಕಾರಿ. ಸಂಸ್ಥಾನದ ಅನಾಯುಕ್ತತದ ಬಗ್ಗೆ ನಿಷ್ಪಕ್ಷಪಾತೀಯ ವಿಚಾರಣೆಯಾಗಬೇಕು. ಜನತೆಯ ಮನಸಿನಲ್ಲು ಹೇಯಭಾವವು ನಾಶವಾಗಬೇಕು.

ತಿರುವಾಂಕೂರು ಸಂಸ್ಥಾನ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯು ಈ ಕೆಳಗಿನ ಠರಾವುಗಳನ್ನು ತಮ್ಮ ಕಳೆದ ಸಭೆಯಲ್ಲಿ ಅಂಗೀಕರಿಸಿರುವದು.

'ಮಹಾತ್ಮ ಗಾಂಧಿಯವರ ಪ್ರೇರಣೆಯಂತೆ ನಮ್ಮ ಇಂದಿನ ಅಧ್ಯಕ್ಷರು ಕಾಯಿದೆ ಭಂಗ ಚಳವಳವನ್ನು ತತ್ಕಾಲ ನಿಲ್ಲಿಸಿದ್ದನ್ನು ಈ ಕಮಿಟಿಯು ಆದರ ಪೂರ್ವಕ ಮಾನಿಸುತ್ತದೆ. ಈ ಸಂದಿಗ್ಧ ಸಮಯದಲ್ಲಿ ಎಲ್ಲಾ ತಾಲೂಕು ಹಾಗೂ ಅಧೀನ ಕಮಿಟಿಗಳು ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಕಾಂಗ್ರೆಸ್ ಸಂಸ್ಥೆಯ ಬಲವನ್ನು ಹೆಚ್ಚಿಸಬೇಕೆಂದು ಈ ಕಮಿಟಿಯು ಸೂಚಿಸುತ್ತದೆ.

ಗ್ರಾಮಾಭಿವೃದ್ಧಿ.

ಆದ್ದರಿಂದ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಖಾದಿ ಹಾಗೂ ಸ್ವದೇಶಿ ಪ್ರೋತ್ಸಾಹ ಮತ್ತು ಮಾದಕ ಪಾನೀಯಗಳ ನಿಷೇಧವನ್ನು ಕೈಕೊಳ್ಳಬೇಕು. ಅಲ್ಲದೆ ಆಯಾಯ ತಾಲೂಕಿಗೆ ಸರಿಹೋಗುವಂಥಾ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳನ್ನು ಯಥೋಚಿತವಾಗಿ ಆಯಾಯ ಕಾಂಗ್ರೆಸ್ ಕಮಿಟಿಗಳು ಕೈಕೊಳ್ಳಬೇಕು.

ಖಾದಿ.

ಸಂಸ್ಥಾನದಲ್ಲಿ ನೂಲುವದು ಮತ್ತು ನೇಯುವುದಕ್ಕೆ ಅನುಕೂಲತೆಗಳನ್ನು ಹುಡುಕಿ ವರದಿ ಮಾಡಲು ಒಂದು ಉಪಸಮಿತಿಯನ್ನು ವರ್ಕಿಂಗ್ ಕಮಿಟಿಯು ಮಾಡುತ್ತದೆ. ಅಲ್ಲದೆ ಎಲ್ಲಿ ಒತನೆ ಈ ಕೈಗಾರಿಕೆಗಳನ್ನು ಕೈಕೊಳ್ಳಬಹುದೆಂಬುದನ್ನು ಈ ಕಮಿಟಿಯು ಸೂಚಿಸಬೇಕು.

ಅಧಿಕಾರಿಗಳ ಅತ್ಯಾಚಾರ.

ಕಾಂಗ್ರೆಸಿನ ಧ್ಯೇಯಸಮರ್ಥನಾ ಚಳವಳವನ್ನು ಬಗ್ಗುಬಡಿಯಬೇಕೆಂದು ಹವಣಿಸುತ್ತಿರುವ ಸರಕಾರದ ವರ್ತನೆಯನ್ನು ಈ ಕಮಿಟಿಯು ನಿಷಾಪದಿಂದ ಕಾಣುತ್ತದೆ; ಕಳೆದ ವರ್ಷದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಸಂಸ್ಥಾನ ಕಾಂಗ್ರೆಸಿನ ಮೇಲೆ ಪೊಲೀಸರು ನಡೆಸಿದ ಅತ್ಯಾಚಾರಗಳನ್ನು ಜ್ಞಾಪಿಸಿಕೊಳ್ಳುತ್ತದೆ. ರಾಜಕೀಯ ಬಂಧಿಗಳನ್ನು ಬಿಡುಗಡೆಮಾಡುವ ವರೆಗೆ ಅಂದರೆ ಕಳೆದ ನವಂಬರ್ ಅಂತ್ಯದ ವರೆಗೆ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ಬಹಿಷ್ಕರಿಸಿಯೂ, ಕಾಂಗ್ರೆಸ್ ನಿಯಮ ಬಾಹಿರವಾದ ಸಂಸ್ಥೆಯೆಂದು ಸಾರಿಯೂ ಸರಕಾರವು ನಡೆಸಿದ ಕ್ರೂರಾಚಾರವು ಖಂಡನೀಯವಿದೆ. ರಾಜಕೀಯ ಬಂಧಿಗಳ ಬಿಡುಗಡೆಯಾದ ನಂತರ ಜನವರಿಯ ವರೆಗೆ ಕಾಂಗ್ರೆಸ್ ಕಾರ್ಯಗಳಿಗೆ ಯಾವ ತೊಡಕೂ ಇರಲಿಲ್ಲ. ಪುನಹ ಸರಕಾರವು ಸ್ಪೆಶಿಯಲ್ ಪೊಲೀಸರನ್ನು ಸೇರಿಸಲು ಪ್ರಾರಂಭಿಸಿತು. ಈ ಪೊಲೀಸರಿಗೆ ಶಿಸ್ತಿನ ಉಡಿಗೆ ಇರಲಿಲ್ಲ. ಅವರಿಗೆ ತಿಂಗಳಿಗೆ ರೂ. 5 ವೇತನ ಕೊಡುತ್ತಿದ್ದರು. ಜನವರಿ ಮಧ್ಯದಿಂದ ಈ ಪೊಲೀಸರು ಮೀಟಿಂಗುಗಳಲ್ಲಿ ಹಾಜರಾಗಲು ಪ್ರಾರಂಭಿಸಿದರು. ಕ್ರಮೇಣ ಇವರ ಕೈವಾಡವು ನಡೆಯತೊಡಗಿತು. ಮಾರ್ಚಿ 11 ರಲ್ಲಿ ತೋಡ ಪುಜಾ ಎಂಬಲ್ಲಿ ನಡೆದ ಕಾಂಗ್ರೆಸ್ ಮೀಟಿಂಗಿಗೆ ಕೆಲವು ಮಧ್ಯದಿಂದ ಮತ್ತರಾದ ಕೆಲವು ಪೊಲೀಸರು ಬಂದು ಕೂಗಾಡುತ್ತಾ ಅಲ್ಲಲ್ಲಿ ಜನರನ್ನು ಹೊಡೆಯುತ್ತಾ ಮೀಟಿಂಗನ್ನು ಮುರಿದು ಹಾಕಲು ಪ್ರಯತ್ನಿಸಿದರು. ಇದೇ ರೀತಿಯ ವರ್ತನೆಯನ್ನು ಕೂತಾಟುಕಲಮಿನಲ್ಲಿ ಅವರು ಕೈಕೊಂಡದಲ್ಲದೆ ಅಧ್ಯಕ್ಷರನ್ನು ಭಾಷಣವೇದಿಕೆಯಲ್ಲಿಯೇ ಚಿತ್ತಲೆಸಿಲ್ಲಿಸಿದರು. ತಾರೀಕು 19 ರಲ್ಲಿ ಕ್ವಿಲಾನಿನಲ್ಲಿ ನಡೆದ ಸಭೆಯನ್ನು ಡೋಲು ಬಡೆಯೋಣದರಿಂದ ಮತ್ತು ಇತರ ಅನಾಚಾರಗಳಿಂದ ನಡೆಯಲು ಬಿಡಲಿಲ್ಲ; ನಾಗರ್‌ಕಾಯಿಲ್ ಎಂಬಲ್ಲಿ ಕೊಜೆಮಣ್ಣನ್ನು ತಂದು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಾಕಿ ತೊಂದರೆಪಡಿಸಿದರು. ತಾರೀಕು 22 ರಲ್ಲಿ ಕುಜಿತುರಾ ಎಂಬಲ್ಲಿ ಅಧ್ಯಕ್ಷರನ್ನೇ ಚೂರಿಯಿಂದ ತಿವಿಯಲು ಹೋಗಿಯೂ, ತಾರೀಕು 25 ರಲ್ಲಿ ಜನರ ಮೇಲೆಲ್ಲಾ ಸೀಮೆಣ್ಣೆಯನ್ನು ಚಿಮುಕಿಸಿಯೂ ತೊಂದರೆಗೊಳಿಸಿದರು.

ತಾರೀಕು 22 ರಿಂದ ಸತ್ಯಾಗ್ರಹವನ್ನು ನಿಲ್ಲಿಸಿದರೂ ಕೂಡ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡ ಸ್ವಯಂಸೇವಕರ ಮೇಲೆ ಅನಾವಶ್ಯದ ತೊಂದರೆಗಳನ್ನು ಹಾಕಿಯೂ, ಕೆಲವು ಸ್ಥಳಗಳಲ್ಲಿ ಅಧ್ಯಕ್ಷರ ಹಾಗೂ ಇತರ ಜನರನ್ನು ಹೊಡೆದೋಡಿಸಿ ಹಣವನ್ನು ದೋಚಿಕೊಂಡೂ, ಅವರ್ಣನೀಯ ವರ್ತನೆಯಿಂದ ಕಾಂಗ್ರೆಸಿನ ಕಾರ್ಯಕ್ಕೆ ಅಡ್ಡಿ ತಂದರು.

ಕೆಲಸಗಾರರಿಗೆ ಎಚ್ಚರಿಕೆ.

ರಾಜಕೀಯ ಬಂಧಿಗಳನ್ನು ಕಳೆದ ನವಂಬರಿನಲ್ಲಿ ಬಿಟ್ಟ ನಂತರ ಸಾರ್ವಜನಿಕ ಸಭೆಗಳನ್ನು ನಡೆಸುವ ಸವಲತ್ತಾದರೂ ದೊರಕಿತೆಂದು ಭಾವಿಸಲಾಗಿತ್ತು. ಆದರೆ ಈಗಿನ ಸ್ಥಿತಿಯು ಕಾಂಗ್ರೆಸ್ ಕಾನೂನಿಗೆ ವಿರೋಧವಾದ ಸಂಸ್ಥೆಯೆಂದು ಬಹಿಷ್ಕರಿಸಿದ್ದ ಆಗಿನ ಸ್ಥಿತಿಗಿಂಥಾ ಚಿಂತಾಜನಕವಾಗಿದೆ. ಈ ವರ್ಕಿಂಗ್ ಕಮಿಟಿಯು ಅಹಿಂಸಾತತ್ವದಲ್ಲಿ ತಮಗಿರುವ ಅಚ್ಚಳಿಯದ ನಂಬಿಕೆಯನ್ನು ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಅಭಿನಂದಿಸುತ್ತದೆ. ಸತ್ಯಾಗ್ರಹವನ್ನು ನಿಲ್ಲಿಸಿದ ನಂತರವೂ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸದಿರುವದೇ ಈ ತೊಂದರೆಗಳಿಗೆ ಕಾರಣ. ಸಂಸ್ಥಾನ ಸರಕಾರವು ಪ್ರಜೆಗಳಿಗೆ ಯಾವದೊಂದೂ ಸುಧಾರಣೆಯನ್ನು ಕೊಡಲು ನಿರಾಕರಿಸಿರುವದಲ್ಲದೆ ಕಾಂಗ್ರೆಸ್ ಕಾರ್ಯಕರ್ತರನ್ನು ಒಂದಿಲ್ಲೊಂದು ನೆಪದಿಂದ ಕಾರಾಗ್ರಹಕ್ಕೆ ಕಳುಹಿಸುತ್ತಿದೆ. ಸರಕಾರದ ಏನೇ ಅತ್ಯಾಚಾರವು ನಡೆಯಲಿ; ಅದು ಯಾವದೆ. ಕಾರ್ಯಕ್ರಮವನ್ನು ಕೈಗೊಂಡು ತೊಂದರೆಗೊಳಿಸಲಿ; ಸಂಸ್ಥಾನ ಕಾಂಗ್ರೆಸು ಪೂಜ್ಯ ಗಾಂಧಿಜೀಯವರ ಸೂತ್ರಚಾಲನೆಯಂತೆ ವರ್ತಿಸದೆ ಬಿಡದು. ಈ ಮೇಲ್ಕಂಡ ಸರಕಾರದ ನಾಚಿಕೆಗೇಡಿನ ವರ್ತನೆಗಳನ್ನು ಕಾಂಗ್ರೆಸು ಖಂಡಿಸುವದಲ್ಲದೆ, ಸರಕಾರದ ಈ ಅಸಭ್ಯವರ್ತನೆಯಿಂದ ಹುರುಪುಗೊಂಡು ಜನತೆಯು ಇನ್ನಷ್ಟು ಪ್ರಖರವಾಗಿ ತನ್ನ ಕಾರ್ಯವನ್ನು ನಿರ್ವಹಿಸಬೇಕೆಂದು ಕೇಳಿಕೊಳ್ಳುತ್ತದೆ."

ಕಾಯಿದೆ ಭಂಗ ಚಳವಳವನ್ನು ನಿಲ್ಲಿಸಿದ್ದರಿಂದ ಜನತೆಯು ಆಶ್ಚರ್ಯಪಡಬಾರದು. ಅಧಿಕಾರಿಗಳು ಸತ್ಯಾಗ್ರಹದ ಚಳವಳಕ್ಕೆ ಬೇಕಾದಂತೆ ಸಂಸ್ಥಾನ ಕಾಂಗ್ರೆಸನ್ನು ತಮ್ಮ ಅನಾಚಾರಗಳಿಂದ ತರಬೇತು ಮಾಡುತ್ತಿರುವರೆಂದರೆ ತಪ್ಪಾಗದು. ಕಾರಣವಿಲ್ಲದೆ ಜನರಿಗೆ ತೊಂದರೆಕೊಟ್ಟು ಅವರನ್ನು ಮುಂದಿನ ಕದನದ ಯೋಧರನ್ನಾಗಿ ಮಾಡುತ್ತಿರುವರು. ಆದ್ದರಿಂದ ಕೆಲಸಗಾರರು ಈ ಅನಾಚಾರಗಳಿಗೊಳಗಾಗಿ ತಮ್ಮ ನಂಬಿಕೆಯನ್ನು ಕಳಕೊಳ್ಳದೆ ತಮ್ಮ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿದ್ದೇಯಾದರೆ ಪೂರ್ಣ ಸ್ವರಾಜ್ಯವು ದೂರ ಉಳಿಯದು. ಇದು ಒಂದು ಅಮೋಘ ಹೇಳಿಕೆ. ಕೆಲವರು ಇದನ್ನು ಅಲ್ಲಗಳೆಯಬಹುದು. ಆದರೆ ಇದು ಹೃದಯಾಂತರಾಳದಿಂದ ಬಂದದ್ದಾಗಿದೆ.

ಸಂಸ್ಥಾನ ಕಾಂಗ್ರೆಸಿನ ಮೇಲ್ಕಂಡ ಉದ್ಗಾರದಿಂದ ನನ್ನ ಮನಸ್ಸಿಗೆ ತೊಂದರೆ ಕೊಡುವ ವಿಚಾರವೆಂದರೆ, 'ಸಂಸ್ಥಾನ ಕಾಂಗ್ರೆಸು ಗಾಂಧಿಜೀಯವರ ಸೂತ್ರಚಾಲನೆಯಂತೆ ನಡೆಯುವರು' ಎಂಬ ವಾಕ್ಯವಾಗಿದೆ. ನನ್ನ ಮೇಲಿನ ನಂಬಿಕೆಯನ್ನು ವ್ಯಕ್ತಪಡಿಸುವ ಈ ಹೇಳಿಕೆಯು ನನಗೆ ಪೂರಾ ತೊಂದರೆ ಹಾಗೂ ಅಸಮಾಧಾನವನ್ನು ಮಾಡುತ್ತಿದೆ. ನನ್ನ ಸಲಹೆ ಹಾಗೂ ಸೂತ್ರಚಾಲನೆಯು ಅವರ ಇಚ್ಛೆಯಂತಿದ್ದರೂ ಹೊಸ ಚೈತನ್ಯವು ನನ್ನ ಹೃದಯಾಂತರಾಳದಿಂದ ಹೊರಹೊಮ್ಮದ ಹೊರತು ನಾನು ಸೂಚನೆಗಳನ್ನು ಕೊಡುವಂತಿಲ್ಲ. ನಾನು ಒಂದು ಹೊಸ ವಿಧಾನವನ್ನು ಕಂಡುಕೊಂಡಿರುವೆನು. ಆದ್ದರಿಂದ ಅವನ್ನೇ ಅನುಸರಿಸಿ ವರ್ತಿಸಿರಿ, ಸೋಲು ಎಂದಿಗೂ ಬರದು' ಎಂದು ಹೇಳಬಲ್ಲೆ. ಖಾಯಿದೆ ಭಂಗ ಚಳವಳವನ್ನು ಪುನಃ ಕೈಕೊಳ್ಳಲು ನಾನು ಹೇಳಲಾರೆ. ಅಲ್ಲಿ ಅಸತ್ಯವೂ, ಹಿಂಸಾತತ್ವವೂ ವಿರಾಜಿಸುತ್ತಿರುವದರಿಂದ ಸತ್ಯಾಗ್ರಹವು ಅಹಿತ.

ಸಂಸ್ಥಾನಾಧೀಶರ ಅನಾಯುಕತ್ವದ ವಿಚಾರ ನಂಬಿಕೆ ಇಡಬೇಕಾದರೆ ಅಲ್ಲಿಯ ಪೂರ್ಣ ಸಮಸ್ಯೆಯನ್ನು ವಿಚಾರಿಸಿ ವಿವೇಚಿಸಿದ್ದಲ್ಲದೆ ಅಸಾಧ್ಯ. ಸರಕಾರದ ತಿರಸ್ಕಾರ ಭಾವವು ಜನರಲ್ಲಿ ಅತೃಪ್ತಿ ಹುಟ್ಟಿಸಿರಬಹುದು. ಇದನ್ನು ಪರಿಹರಿಸಲು ಅಲ್ಲಿಯ ಒಂದು ಕಮಿಟಿಯನ್ನು ನೇಮಿಸಿ ಸರಕಾರದ ತಪ್ಪು ನಡವಳಿಕೆಗೆ ಸುಣ್ಣ ಬಳಿಯಲೆತ್ನಿಸುವದು ನ್ಯಾಯಸಮ್ಮತವಾದದ್ದಲ್ಲ. ಸರಕಾರದ ವರ್ತನೆಯಲ್ಲಿ ನಂಬಿಕೆ ಬರಬೇಕಾದರೆ ಸಂಸ್ಥಾನದ ಹೊರಗಿನಿಂದ ನಿಷ್ಪಕ್ಷಪಾತೀಯ ಕಮಿಟಿಯೊಂದನ್ನು ನೇಮಿಸಿ ವಿಚಾರಗಳನ್ನು ಪರಿಶೀಲಿಸಬೇಕು.

ಜರ್ಮನಿಯಲ್ಲಿ ನಿಷಾನಿಷೇಧ.

ಮಧ್ಯಪಾನದ ಬದಲು ಇನ್ನೊಂದು ಪಾನ.

ಜರ್ಮನಿಯಲ್ಲಿ ಮಧ್ಯಪಾನ ಪ್ರತಿಬಂಧವನ್ನು ಜಾರಿಗೆ ತರುವ ತಮ್ಮ ಕಾಂಕ್ಷೆಯನ್ನು ಹರ್ ಹಿಟ್ಲರರು ಸದ್ಯದಲ್ಲೇ ಸಾಧಿಸಬಹುದೆಂದು ಹಲವು ಪತ್ರಿಕೆಗಳು ನುಡಿದವೆ. ಸರಾಯಿಗಳಿಂದ ಜನಾಂಗದ ಅವನತಿಯಾಗುವದೆಂದು ಇವರು 'ನನ್ನ ಹೋರಾಟ'ವೆಂಬ (Mein Kamyh) ಪುಸ್ತಕದಲ್ಲೂ ಬರೆದಿರುವರು.

ಸರಾಯಿಗಳನ್ನು ವಿಶೇಷವಾಗಿ ತಯಾರಿಸಬಾರದೆಂದು ತಿಳಿಸಲಾಗಿದೆಯಂತೆ! ಈಗಿರುವ 'ಸ್ಟಾಕ್' ಮಾರಲಡ್ಡಿಯಿಲ್ಲ. ಚಾಕ್‌ಲೇಟುಗಳನ್ನು ಮದ್ಯದಿಂದ ತಯಾರಿಸಕೂಡದೆಂದೂ ಆಜ್ಞೆ ವಿಧಿಸಲಾಗಿದೆ. ಇದಕ್ಕೆ ಜನರ ಬೆಂಬಲವಿದೆಯೇ? ಎಂಬುದನ್ನು ತಿಳಿಯಲು ಅಧಿಕಾರಿಗಳು ಬಹು ಸೂಕ್ಷ್ಮ ನಿರೀಕ್ಷಣೆಯನ್ನು ಕೈಕೊಂಡಿರುವರು. ಜನಬೆಂಬಲವಿದ್ದರೆ ಮೊದಲು ಒಂದೆರಡು ಪ್ರಾಂತಗಳಲ್ಲಿ ಮದ್ಯಪಾನವನ್ನು ನಿಲ್ಲಿಸಲಾಗುವುದಂತೆ!

ಈ ಪ್ರಯತ್ನವು ಯಶಸ್ವಿಗೊಂಡರೆ ಬೀಯರ್, ವಿಸ್ಕಿ ಮೊದಲಾದ ಮಾದಕ ಪಾನಗಳನ್ನು ನಿಲ್ಲಿಸಲಾಗುವುದು. ಜನರಿಗೆ ಮಾದಕವಲ್ಲದ ಇನ್ನೊಂದು ಪಾನವನ್ನು ಸಿದ್ಧಗೊಳಿಸಲು ಒಂದು ಹೊಸ ಕಾರ್ಖಾನೆಯನ್ನೇ ಬರ್ಲಿನ್ ಮಹಾನಗರದಲ್ಲಿ ಸ್ಥಾಪಿಸಲಾಗಿದೆ.

ಹರ್ ಹಿಟ್ಲರರು ಸಸ್ಯಾಹಾರಿಗಳಾಗಿರುವರಲ್ಲದೆ ಮದ್ಯಪಾನವನ್ನು ಸಂಪೂರ್ಣ ತ್ಯಜಿಸಿರುವರು. ಸಾರ್ವಜನಿಕ ಕೂಟಗಳಲ್ಲಿ ಇನ್ನಿತರ ಪ್ರಮುಖರೂ ಕುಡಿಯಬಾರದೆಂದು ಅವರನ್ನು ಈಗಾಗಲೇ ಪುಃಲಾಯಿಸುವರೆಂದು ತಿಳಿಯಲಾಗಿದೆ.

ಜರ್ಮನಿಯಲ್ಲಿ ಮದ್ಯರಾಕ್ಷಸನ ಉಚ್ಚಾಟನೆಯಾದರೆ ಆರ್ಥಿಕ ಮುಗ್ಗಟ್ಟು ಪರಿಹಾರಿಸಬಹುದೆಂದೂ ತಜ್ಞರು ಅಭಿಪ್ರಾಯಪಟ್ಟಿರುವರು.

ಕೊಡವರ ಸಮಾಜ ಸುಧಾರಣೆ.

ಹಿರಿಯರ ಪ್ರಪಂಚದ "ಪಾಪ"ಗಳು.

ಯುವಕ ಸಮಾಜದ ಉಭಯಸಂಕಟ.

(ಲೇಖಕ—ಬಿ. ಯಂ. ಕಾರ್ಯಪ್ಪ, ಸಂಪಾದಕ–ಸ್ವತಂತ್ರ ಭಾರತ, ಮಂಗಳೂರು.)

ಕೊಡವರ ಸಮಾಜ ಸುಧಾರಣೆಯ ವಿಷಯದಲ್ಲಿ 'ಕೊಡಗು' ಪತ್ರಿಕೆಯಲ್ಲಿ ಬರೆದ ಎರಡು ಲೇಖನಗಳನ್ನೋದಿ, ಮುಂದೆ ಬರುವಂಥವುಗಳನ್ನು "ಕುತೂಹಲದಿಂದ ನಿರೀಕ್ಷಿಸುತ್ತೇನೆ. ಕೊಡವರ ಸಮಾಜಸುಧಾರಣೆಯ ಭಯಂಕರ ಪರಿಣಾಮವನ್ನು ಇವರು ವಿವರಿಸಲು ಈಗ ಪ್ರಯತ್ನಿಸುವುದು ತುಸು ಕಾಲ ಮೀರಿದೆಯಾದರೂ, ಮುಂದಕ್ಕಾದರೂ ಕೊಡವರು ಅವರ ಸಮಾಜದ ಕ್ಷೀಣತೆಯನ್ನು ತಡೆಗಟ್ಟಲು ಶ್ರೀ. ಕಾರ್ಯಪ್ಪನವರು ಎಚ್ಚರಕೊಟ್ಟ ಇವರ ಧೈರ್ಯಕ್ಕೆ ಅಭಿನಂದನೆಗಳು. ಈಗ ಕೆಲಕಾಲದಿಂದ ಕೊಡಗಿನ ಕೊಡವರು ಕಾರಣಾಂತರದಿಂದ ಅವರ ತಲೆಯ ಸಮುಕಟ್ಟನ್ನು ಮರೆತು ಅವರ ಸಾಮಾನ್ಯ ನಡೆನುಡಿಗಳಲ್ಲಿ ಆಚಾರ ವಿಚಾರದ ಬದಲು ಅನಾಚಾರ, ಅತ್ಯಾಚಾರಗಳನ್ನು ಆಚರಿಸುತ್ತಿರುವುದು ನಮ್ಮ ಅನುಭವವಾಗಿದೆ. ಸಮಾಜದ ಹಿಡುಕಟ್ಟಿಗೆ ಯಾವುದಲ್ಲ ಬೇಕೋ ಅವೆಲ್ಲವನ್ನೂ ನಿರಾಕರಿಸಿ ಸಮಾಜ ಧರ್ಮವನ್ನೇ ಕೊಡವರು ಬಿಟ್ಟುಬಿಟ್ಟು, ತಾವು ವಿಲಾಯತಿಯಿಂದಲೋ, ಭಿನ್ನ ಪ್ರದೇಶಗಳಿಂದಲೋ ಬಂದವರಂತೆ ನಟಿಸುವುದು ಎಲ್ಲರ ಅನುಭವದಲ್ಲಿಯೂ ಇದೆ. ಇದರ ಫಲಿತಾಂಶವಾಗಿ ಕೊಡವ ಸಮಾಜದ ನೀತಿ ಧರ್ಮ, ಸ್ತ್ರೀ ಪುರುಷರ ಧಾರ್ಮಿಕ ಲಕ್ಷಣಗಳು ಕ್ಷೀಣವಾಗಿ ಮನೆತನ, ಗ್ರಾಮ, ನಾಡು, ದೇಶಗಳ ಕ್ಷೀಣತೆ–ಇವುಗಳೆಲ್ಲವೂ ವಿವೇಕಿಯರನ್ನು ವಿಸ್ಮಯಗೊಳಿಸುತ್ತವೆ. ಇವೆಲ್ಲವನ್ನೂ ವಿವರಿಸಿದರೆ ಕೆಲವರಿಗೆ ಮನನೋಯಿಸಬಹುದು, ಹಲವರು ಉಪೇಕ್ಷೆಗೊಳ್ಳಬಹುದು, ಮತ್ತೆ ಕೆಲವರು ವಿಸ್ಮಯಗೊಳ್ಳಬಹುದು. ಇಂದು, ಕೊಡವ ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರಗಳು ಕೊಡವರ ಗೌರವಕ್ಕೆ ಈಗೀಗ ತಿಲಾಂಜಲಿ ಇತ್ತಿದೆಯೆಂದು ಹೇಳಿದರೆ ಸಾಕಾಗಿದೆ.

ಕಾರಣಭೂತರ್ಯಾರು?

ಶ್ರೀ. ಕಾರ್ಯಪ್ಪನವರು ಈ ಅನಾಚಾರ, ಅತ್ಯಾಚಾರಗಳಿಗೆ ಕೊಡಗಿನ ವಿದ್ಯಾವಂತ ಯುವಕರು ಕಾರಣಭೂತರೆಂದು ಹೇಳುವಂತೆ ಕಾಣುತ್ತದೆ. ಕೊಡವರ ಯುವಕರ ಮೇಲೆ ಇವರಿಗೆ ನಿಷ್ಕಾರಣವಾದ ಅದೊಂದು ವಕ್ರದೃಷ್ಟಿ ಇದೆಯೆಂಬುದು ನನ್ನ ಹೊಸ ಅನುಭವವಲ್ಲ. ಈ ವಕ್ರದೃಷ್ಟಿಯಿಂದ ಇವರ ನೋಟವು ಮುಸುಕಿಹೋಗಿದೆ. ಕೊಡವ ಯುವಕರು 'ಅಪ್ಪನ ಪೋಲೆ ಮಕ್ಕ, ನಾಯಿರ ಪೋಲೆ ಬಾಲ್'–ಎಂಬಂತೆ ಅವರ ಹಿರಿಯರ ವಶವಾಗಿದೆ. ಕೊಡವ ಸಮಾಜದಲ್ಲಿ ಇಂದು ಕಂಡು ಬರುತ್ತಿರುವ ಭಯಂಕರವಾದ ಕ್ಷೀಣತೆಯು ಕೊಡವ ಹಿರಿಯರ ಸಮಾಜದವರ ಪಾಪದ ಫಲವೆಂದು ಹೇಳಲು ಯಾವ ಸಂದೇಹವೂ ಇಲ್ಲ. ಹಿರಿಯರು ವಿವೇಕಿಗಳಾದರೆ ಕಿರಿಯರು ಅವಿವೇಕಿಗಳಾಗಲು ಅವಕಾಶವಿಲ್ಲ. ಕೊಡವ ಯುವಕರು ಅತಿಶಯದ ಶಾಂತಿ ಮೂರ್ತಿಗಳಾಗಿರುವುದರಿಂದ ಹಿರಿಯರು ಅವರನ್ನು ದುರುಪಯೋಗಪಡಿಸುವುದಕ್ಕೆ ಇನ್ನೂ ಉದಾಹರಣೆ ಬೇಕಾದರೆ ಶ್ರೀ. ಕಾರ್ಯಪ್ಪನವರ ಲೇಖನವೇ ಸಾಕಾಗಿದೆ.

ಹಿರಿಯರ ಪ್ರಪಂಚದ ಪಾಪಗಳು.

ಕೊಡಗಿನ ಹಿರಿಯರ ಪ್ರಪಂಚದವರ ಪಾಪಗಳೆಂಬಾಗ ಶ್ರೀ. ಕಾರ್ಯಪ್ಪನವರು ಕೊಡವ ಯುವಕರು ಅವರ ಪೋಷಕರಾಗಿದ್ದವರನ್ನು ಮರೆತುಬಿಡುವರೆಂದು ಹೇಳಿದ ಅಪರಾಧವನ್ನು ಪುಷ್ಟೀಕರಿಸಿದೆನೆಂದು ಯಾರಾದರೂ ಭಾವಿಸಿದರೆ ಅವರು ಮೋಸಹೋಗುವರು. ನ್ಯಾಯಕ್ಕೆ ಭಯವಿಲ್ಲ, ದಾಕ್ಷಿಣ್ಯವಿಲ್ಲ; ಮಾತ್ರವಲ್ಲ, ಕೊಡಗಿನಲ್ಲಿರುವ ಹಲವು ಧಾರ್ಮಿಕರು ಯುವಕರ ಕೃತಜ್ಞತೆಗೆ ಪಾತ್ರರಾಗಿರುವರೆಂಬುದನ್ನು ಎಂಥಾ ಮೂರ್ಖನೂ ಅಲ್ಲಗಳೆಯಲಾರನು. ಆದರೆ ಧಾರ್ಮಿಕರ ಗುಣಗಳಿಲ್ಲದೆ, ಧಾರ್ಮಿಕರೆನ್ನಿಸಿಕೊಳ್ಳಬಯಸುವವರ ಗುಂಪನ್ನು ಖಂಡಿಸಲೇಬೇಕು.

ಕೊಡಗಿನ ಹಿರಿಯರ ಪಾಪಗಳಿಗೆ ಸ್ಪಷ್ಟವಾದ ಉದಾಹರಣೆಯು ಈಗ ಉತ್ತರ ನೀಯಲು ಸಂದರ್ಭಕೊಟ್ಟ ಲೇಖನ ಮತ್ತು ಅದರ ಲೇಖಕರು. ಕೊಡಗಿನ ಸಮಾಜ ಸುಧಾರಣೆ ಎಂಬ ಗಂಭೀರವಾದ ಲೇಖನದಲ್ಲಿ ಅವರು ಸಮಾಜದ ಕುಂದು ಕೊರತೆಗಳನ್ನು ಒಂದೆರಡು ವ್ಯಕ್ತಿಗಳಿಗೂ, ಒಂದೆರಡು ಕುಟುಂಬಕ್ಕೂ ಮುಡಿಪಿಸಿರುವರೆಂಬುದಕ್ಕೆ ಸಂದೇಹವಿಲ್ಲ. ಸಮಾಜವೆಂಬುದರ ವಿಸ್ತಾರವಾದ ಅರ್ಥವನ್ನು ಇವರು ಪರೀಕ್ಷಿಸಿದರೆ ಕೊಡವ ಯುವಕ ಸಮಾಜವು ಅವರ ಪುನರುದ್ಧಾರಕ್ಕೆ ಪ್ರಯತ್ನಪಡುತ್ತಾರೆ, ಅವರಿಗೆ ಸರಿಯಾದ ಬೆಂಬಲವಿಲ್ಲವೆಂದು ತಿಳಿಯುತ್ತದೆ.

ಸಮಾಜದ್ರೋಹಿಗಳು.

ಕೊಡವ ಸಮಾಜದ ಹಿರಿಯರ ಪ್ರಪಂಚದಲ್ಲಿರುವವರನ್ನು 3 ವಿಭಾಗಗಳನ್ನಾಗಿ ಮಾಡಬಹುದು. 1. ಸಮಾಜದ್ರೋಹಿಗಳು, 2. ತಟಸ್ಥರು, 3. ಸಮಾಜ ಪ್ರೇಮಿಗಳು. ಇವರಲ್ಲಿ ಮೊದಲನೆಯರ ಪಕ್ಷದವರು ಕೇವಲ ವಿದ್ಯಾವಂತರಿದ್ದು, ಕೊಡವರ ಆಚಾರ ವಿಚಾರಗಳಿಗೆ ತಿಲಾಂಜಲಿಯಿತ್ತಿರುವ ಮೂಲ ಪುರುಷರು. ಆಂಗ್ಲ ವಿದ್ಯಾಭ್ಯಾಸದ ಗಿಲಿಟು ವಾತಾವರಣದ ವರ್ಚಸಿನಲ್ಲಿ ಜನಿಸಿದ ಇವರು ಇಂದು ಅತ್ತ ಆಂಗ್ಲೇಯರೂ ಅಲ್ಲ, ಇತ್ತ ಕೊಡವರೂ ಆಗಿರದೆ ಇವರ ಮನೆತನವೇ ಗೊತ್ತಿಲ್ಲದವರಾಗಿದ್ದಾರೆ. ಕೊಡವ ಆಟ ಕೂಟಗಳಲ್ಲಿ ಬಂದರೆ ಕೊಡವರ ಆಚಾರ ವಿಚಾರಗಳಿಗೆ ಅಪಹಾಸ್ಯ ಮಾಡುವ ಅಪಶಕುನಗಳಿವರು. ಹಳ್ಳಿಗಳಿಗೆ ಇವರು ಹೋದರೆ ಇವರು ದೊಡ್ಡವರೆಂದು ಅಪೂರ್ವ ಗೌರವ; ಯುರೋಪಿಯನ್ ಮಸ್ಸಿನಲ್ಲಿ ಹಬ್ಬ ಕೂಟಗಳಿಗೆ ಹೋಗುವುದು, ಅಲ್ಲಿ ಕಾಲಿಗೆ ಬೂಟಿಸು ಹಾಕಿ ಭೋಜನಕ್ಕೆ ಕೂತುಕೊಳ್ಳುವುದು, ಕೊಡಗು ಭಾಷೆಯನ್ನು ಆಂಗ್ಲ ಸ್ವರದಿಂದಾಡುವುದು ಇವೆಲ್ಲವೂ ಹಳಬರಿಂದ ಯುವಕರಿಗೆ ದಾಟಿದ ಜನ್ಮ ಆಸ್ತಿಗಳು. ಕೊಡಗಿನ ವಿದ್ಯಾವಂತ ಹಳಬರಲ್ಲಿ ಎಷ್ಟು ಜನರಿಗೆ 'ದುಡಿಕೊಟ್ಟ ಪಾಟು' ತಿಳಿದಿದೆ? ಕೊಡವರ 'ಕೊಟ್ಟ ಪಾಟ್'ಗಳನ್ನು ಇವರೆಷ್ಟು ಅಪಹಾಸ್ಯ ಮಾಡುವವರಿದ್ದಾರೆ? ಕೊಡವರ ನರ್ತನ ತಿಳಿಯುವವರೆಷ್ಟಿದ್ದಾರೆ? ನಮ್ಮ ಸಂಸ್ಕೃತಿಯನ್ನು ಅಪಹಾಸ್ಯಮಾಡಿ ಆಂಗ್ಲೇಯರ ಸ್ತ್ರೀ ನರ್ತನವನ್ನು ಹೊಗಳುವವರೆಷ್ಟಿದ್ದಾರೆ? ಈ ಹಿರಿಯರಲ್ಲಿ ಎಷ್ಟು ಮಂದಿಯರು ಅವರ ಗ್ರಾಮಗಳ ಕಡೆ ದೃಷ್ಟಿ ಇತ್ತಿರುವರು? ಒಮ್ಮೊಮ್ಮ ಓಟು ಬೇಕಾದಾಗ ಇದ್ದ ದೊಡ್ಡ ಬಿರುದಾವಳಿಗಳನ್ನೂ, ಮೆಡಲುಗಳನ್ನೂ ಸ್ವಪ್ರತಿಷ್ಠೆಗಾಗಿ ಪ್ರದರ್ಶಿಸುತ್ತಾ ಹಳ್ಳಿಗಳ 'ಬಡ ಜನರಕ್ಷಕರಾಗಿ' ಮಿಂಚು ವೇಗದಿಂದ ಗಂಭೀರ ಪ್ರಯಾಣ ಮಾಡುವರಲ್ಲದೆ, ಇತರ ಸಮಯದಲ್ಲಿ ಯುವಕರನ್ನೂ, ಹಳ್ಳಿಗರನ್ನೂ ದೂಷಿಸುವುದೇ ಇವರ ಕಸಬು ಅಂದ ಮೇಲೆ ಯುವಕರಿಗೆ ಉತ್ಸಾಹ ಎಲ್ಲಿಂದ?

ಪದ್ಧತಿಗಳು.

ಕೊಡವರ ಪದ್ಧತಿಗಳು, ಮದುವೆಗಳು–ಇವುಗಳ ವಿಷಯ ಹಿರಿಯರ ಮೇಲೆ ಶ್ರೀ. ಕಾರ್ಯಪ್ಪನವರು ಹೊರಿಸಿದ ಆರೋಪಗಳು ನಿಷ್ಕಾರಣವಾಗಿವೆ. ಹಿರಿಯರೇ ಇಲ್ಲಿಯೂ ತಪ್ಪಿತಸ್ಥರು. ಆದಿತ್ಯವಾರಗಳಲ್ಲಿ ಮದುವೆ ಮಾಡಲು ಹಿರಿಯರು ಪ್ರಾರಂಭಿಸಿದರೋ? ಒಂದು ದಿವಸದ ಮದುವೆಗಳನ್ನು ಪ್ರಾರಂಭಿಸಿದವರ್ಯಾರು, ಕುರಿಗೂದಲೆ ಮದುವೆ ಮಾಡಲು ಕಾರಣಭೂತರ್ಯಾರು? ಮಡಿಕೇರಿಯಲ್ಲಿರುವ ಎಷ್ಟು ಮಹಾಪುರುಷರು ಹಳ್ಳಿ ನಡೆಯುವ ಹುತ್ತರಿಹಬ್ಬದಲ್ಲಿ ಭಾಗವಹಿಸುತ್ತಾರೆ? 'ಸಾವಿ'ನ ಮನೆಯಲ್ಲಿ ಯೂರೋಪಿಯನರೇ ಕಾಲಿನಿಂದ ಬೂಟೀಸು ಬಿಚ್ಚುವಾಗ, ತಮ್ಮ ಸೊಂಟ ಬಗ್ಗದವರು ಹಿರಿಯರೋ? ಕಿರಿಯರೋ? ಯೂರೋಪಿಯನ್ ಸಂಸ್ಕೃತಿಯಲ್ಲಿ ಮೋಸಗೊಂಡ ಹಿರಿಯರು 'ಕಾಲಬಂದನ್ನಕ್ಕೆ ಕೋಲ ಕೆಟ್ಟನ್' ಎಂಬರಲ್ಲದೆ, ಹಿರಿಯರ ಅಧೀನದಲ್ಲಿರುವ ಕಿರಿಯರಲ್ಲ.

ಕಾಣತೆ ಬೆಂದು ಪೋಚಾ?

'ಕಾಣತೆ ಬೆಂದು ಪೋಚಾ' ಎಂಬಂತ ಪರಿಸ್ಥಿತಿಗೂ ಈ ಹಿರಿಯರೇ ಕಾರಣಭೂತರು. ಹಲವು ಸಂದರ್ಭಗಳಲ್ಲಿ ತಮ್ಮ ಒಡನಾಡಿಗಳಾದ ಹಳ್ಳಿಗರು ಪಟ್ಟಣದವರಲ್ಲಿಗೆ ಬಂದರೆ ಅವರನ್ನು ಕಣ್ಣೆತ್ತಿ ನೋಡುವುದಿಲ್ಲವೆಂದು ಎಷ್ಟೋ ಕೇಳಿದ್ದೇನೆ. ಒಮ್ಮೊಮ್ಮ ಇವರು ಹಳ್ಳಿಗೆ ಬಂದರೂ ಕುತ್ತಿಗೆಯು ಟೈ (neck-tie) ಗಳಿಂದ ದಟ್ಟವಾಗಿರುತ್ತವೆ. ಸತ್ಕಾರ ಸ್ವೀಕರಿಸಿ ಹಿಂತಿರುಗುವರು. ಆದ್ದರಿಂದ ಹಳ್ಳಿಗಳಲ್ಲಿಯೂ ಹಿರಿಯರೇ ದ್ರೋಹಿಗಳಲ್ಲದೆ ಕಿರಿಯರಲ್ಲ. ಹಳ್ಳಿಗಳಲ್ಲಿ 'ಕಾಣತೆ ಬೆಂದು ಪೋಯಿತಿಲ್ಲೆ.'

ಯುವಕರ ಧರ್ಮಸಂಕಟ.

ಕೊಡವರ ಸಮಾಜದ ಕ್ಷೀಣತೆಗೆ ಈ ಹಿರಿಯರೇ ಕಾರಣಭೂತರೆಂದು ಹೇಳಲು ಇನ್ನೂ ಕಾರಣಗಳಿವೆ. ಹಿರಿಯರು ವಿವೇಕಿಗಳೆಂಬುದು ಹಳೆಯದೊಂದು ನುಡಿದೆ. ಆದರೆ ನಮ್ಮ ಹಿರಿಯರ ವಿವೇಕ ತಿಳಿಯಿತು ವಿರಾ? ಉದ್ಯೋಗವಿದ್ದರೂ ನಿರುದ್ಯೋಗದ ಮೂರ್ತಿಗಳಾಗಿ ಯುವಕರನ್ನು ಹಳಿಯುವುದು, ಪರನಿಂದೆ, ಇದೇ ಇವರ ಕಸಬು. ಶ್ರೀ. ಕಾರ್ಯಪ್ಪನವರ ಲೇಖನವು ಇದಕ್ಕೆ ಇನ್ನೊಂದು ಉದಾಹರಣೆ. ಒಬ್ಬ ಯುವಕನು, ವ, ಯುವತಿಯು ಇವರ ದೃಷ್ಟಿಗೆ ಗೋಚರವಾದರೆ ಸಾಕು; ಅವನ್ಯಾರು, ಅವಳ್ಯಾರು ಅವರ, ತಾಯಿ, ತಂದೆ, ಅಜ್ಜ, ಮುತ್ತಜ್ಜ ಇವರ ಚರಿತ್ರೆಯನ್ನು ಹೆಕ್ಕಿ ತೆಗೆದು, ಅವರ ಸ್ವಂತ ಚರಿತ್ರೆಯನ್ನು ಕಲ್ಪಿಸಿ, ತಮ್ಮ ಮನದಲ್ಲಿ ಜೇಡರ ಬಲೆಯನ್ನು ನೇಯುವ ಶಕ್ತಿ ಇರುವ ಪಂಡಿತರನ್ನು ಯಾವ ಕಾಲೇಜಿಗೆ ಬೇಕಾದರೂ ಕೊಡಗಿನಲ್ಲಿ ತುಂಬಾ ಸಿಕ್ಕುತ್ತದೆ. ಯುವಕರು ಒಳ್ಳೆಯ ಮನ್ತು ಹಾಕಿದರೆ ಅವರನ್ನು ಡಂಭಗಾರರೆನ್ನುತ್ತಾರೆ; ಹಾಕದಿದ್ದರೆ, 'ಪ್ರೊಕ್ಕಿ'ಗಳೆನ್ನುತ್ತಾರೆ. ಯುವತಿಯರಿಗೂ ಇದೇ ಸಂಕಟ. ಇದರ ಫಲಿತಾಂಶವಾಗಿ, ಯುವಕರು ಕಷ್ಟಪಡುವುದಕ್ಕೆ ಕೊಡಗು ಒಂದು ಫಲಭರಿತವಾದ ರಂಗವಾಗಿದೆ. ಕೊಡಗಿನಿಂದ ಹೊರಹೋಗುವ ಹಲವು ಯುವಕರಿಗೆ ಕಾರಣವೂ ಇದೇ ಇರುತ್ತದೆ. ಆದರೂ ಕೆಲವು ಯುವಕರು ಅವರ ಸ್ವಾಭಾವಿಕ ಪ್ರತಿಭೆಯನ್ನು ತೋರಿಸಲು ಕೊಡಗಿನಲ್ಲಿ ಅವಕಾಶವಿಲ್ಲದ್ದರಿಂದ ವಿಸ್ತಾರವಾದ ಕ್ಷೇತ್ರವನ್ನು ಹುಡುಕಿಕೊಂಡು ಪರದೇಶಕ್ಕೆ ಹೋಗುತ್ತಾರೆ. (ಶ್ರೀ. ಕಾರ್ಯಪ್ಪನವರ ಪುತ್ರರ [illegible] ಉದಾಹರಣೆ ಇದಕ್ಕೆ ಸಾಕಾಗಿದೆ.) ಆ ಮಾತ್ರಕ್ಕೆ ಅವರು 'ನೀರಿನಲ್ಲಿದ್ದು ನೀರು ಕುಡಿಯುತ್ತಾನೆ'ದಾಗಲಿಲ್ಲ. ಈ ವಿಷಯ ಶ್ರೀ. ಕಾರ್ಯಪ್ಪನವರು ಅನುಭವದ ಆಧಾರದಿಂದ ಮಾತಾಡುವುದಾದರೆ ನನ್ನನ್ನು ಕ್ಷಮಿಸಬೇಕು. ಯಾವ ಅನುಭಾವವನ್ನು ಈ ಹಳಬ 'ಪಿಕಬಂತಕರು' ಹೊರಿಸಿದರೂ, ಧೈರ್ಯಗುಂದದೆ ಇರುವ ಯುವಕರಿದ್ದಾರೆ. ಆ ಮಾತ್ರಕ್ಕೆ ದ್ರೋಹಿಗಳೆಲ್ಲವೆಂದಾಗಲಿಲ್ಲ. ಒಬ್ಬಿಬ್ಬರು ಮರಹಾಂಕಾರಿಗಳಾಗಿ, ಹೆಂಡ ಕುಡುಕರಾಗಿ, ವ್ಯಭಿಚಾರಿಗಳಾಗಿ, ಪರನಿಂದೆಯ ಪರಬ್ರಹ್ಮವಾಗಿದ್ದ ಮಾತ್ರಕ್ಕೆ ಕೊಡವ ಯುವಕರೇ ಹಾಗೆಂದಾಗಲಿಲ್ಲ. ಆದ್ದರಿಂದ ಕೊಡವ ಸಮಾಜದ ಕ್ಷೀಣತೆಗೆ ಅಥವಾ ಸಮಾಜ ಸುಧಾರಣೆ ಎಂಬ ಅಪಕೀರ್ತಿಗೆ ಯುವಕರು ಕಾರಣಭೂತರಲ್ಲ; 'ಸುಧಾರಣೆಯು' ಯುವಕರಿಂದಾಗಲಿಲ್ಲ. ಕೊಡವರ ಹಿರಿಯರ ಪ್ರಪಂಚವು ಅವರ ಸಮಾಜವನ್ನೇ ನಿರ್ಮೂಲ ಮಾಡಲು ಸೊಂಟಕಟ್ಟಿದ್ದಾರೆ. ಯುವಕರನ್ನು ಮೂಲೆಗೊತ್ತಲು ಇವರು ಈ ವರೆಗೆ ಜಯಶೀಲರಾಗಿದ್ದಾರೆ. ಕೆಲವು ಮಟ್ಟಿಗೆ ಈಗಿನ ಕಾಲಮಹಿಮೆಗೆ ಸರಿಯಾಗಿ ನಾವು ಮುನ್ನಡೆಯಬೇಕೆಂಬ ಯುವಕರೂ ಇದ್ದಾರೆ. ಅವರ ದಾರಿತಪ್ಪಲು ತಿಳಿಗೇಡಿತನವು ಹಿರಿ

(8ನೇ ಪುಟಕ್ಕೆ ಸಾಗಿದೆ.)

ಕೊಡಗು

ಏಪ್ರಿಲ್ ತಾರೀಕು ೨೮ ನೇ ಶುಕ್ರವಾರ ೧೯೩೯.

ರಾ ಜ ಕೋ ಟೆ ಯ ಸ ಮ ಸ್ಯೆ.

ರಾಜಕೋಟೆ ಸಂಸ್ಥಾನದ ಸುಧಾರಣಾ ಕಮಿಟಿಯ ನೇಮಕದ ವಿಚಾರದಲ್ಲಿ ಅಲ್ಲಿಯ ಅರಸರಾದ ಥಾಕೋರ್ ಸಾಹೇಬರಿಗೂ, ಪ್ರಜಾ ಪರಿಷತ್ತಿನ ಕಡೆ ಸರ್ದಾರ್ ವಲ್ಲಭಭಾಯಿ ಪಟೇಲರಿಗೂ ಭಿನ್ನಾಭಿಪ್ರಾಯ ಉಂಟಾಗಿ, ಪ್ರಜೆಗಳ ಪರವಾಗಿ ನಿಂತು ಮಹಾತ್ಮ ಗಾಂಧಿಯವರು ಉಪವಾಸ ಕೈಕೊಂಡದ್ದರ ಫಲಿತಾಂಶವಾಗಿ, ವೈಸರಾಯರು ಇದಕ್ಕೆ ಕೈ ಹಾಕಿ, ಈ ವಿಚಾರವು ಇಂಡಿಯಾ ಫೆಡರಲ್ ಕೋರ್ಟಿನ ಚೀಫ್ ಜಸ್ಟಿಸರಾದ ಸರ್ ಮಾರಿಸ್ ಗ್ವಯರವರ ತೀರ್ಮಾನಕ್ಕೆ ಬಿಡಲಾಯಿತು. ಇವರ ತೀರ್ಪಿನಿಂದ ಮಹಾತ್ಮರಿಗೆ ದೊರೆತ ಜಯವು ಇಡೀ ಹಿಂದೂಸ್ಥಾನದಲ್ಲಿ ಸಂತೋಷವನ್ನುಂಟು ಮಾಡಿತ್ತು. ಈ ಆನಂದದಿಂದ ಕೆಲವು ದಿನಗಳ ಹಿಂದೆ ರಾಜಕೋಟೆಯನ್ನು ಪ್ರವೇಶಿಸಿದ್ದ ಮಹಾತ್ಮರು ಈಗ ಬರಿಗೈಯಲ್ಲಿ ನಿರಾಶರಾಗಿ ಅಲ್ಲಿಂದ ಹಿಂತಿರುಗಬೇಕಾಗಿ ಬಂದದ್ದು ತುಂಬಾ ಶೋಚನೀಯವಾಗಿದೆ.

ಸರ್ ಗ್ವಯರವರ ತೀರ್ಮಾನದ ನಂತರ ಥಾಕೋರ್ ಸಾಹೇಬರು ಮಹಾತ್ಮರೊಂದಿಗೆ ಧಾರಾಳ ಮನಸ್ಸಿನಿಂದ ಸಹಕರಿಸಿ, ತಮ್ಮ ಪ್ರಜೆಗಳಿಗೆ ಬೇಕಾದ ಸುಧಾರಣೆಗಳನ್ನು ಕೊಡುವರೆಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಅವರ ದುಬುದ್ಧಿಯ ದಿವಾನರಾದ ದರ್ಬಾರ್ ವೀರವಾಲರು ಅವರನ್ನು ಹಾಗೆ ಮಾಡಲು ಬಿಡಲಿಲ್ಲ. ಬದಲು ಅಡ್ಡಿ, ಆತಂಕಗಳನ್ನು ತಂದೊಡ್ಡಲು ಯತ್ನಿಸಿದರು. ಮುಸಲ್ಮಾನರು, ಭಾಯತರು ಮತ್ತು ಹರಿಜನರಿಗೂ ಸುಧಾರಣಾ ಸಮಿತಿಯಲ್ಲಿ ಪ್ರಾತಿನಿಧ್ಯಬೇಕೆಂದು ಆಯಾಯ ಪಂಗಡದವರಿಂದ ತೊಂದರೆಗಳನ್ನು ಎಬ್ಬಿಸಲು ಪ್ರೋತ್ಸಾಹಿಸಿದರು. ಮುಸ್ಲಿಮರ ಪರವಾಗಿ ಮಿ. ಜಿನ್ನಾರವರೂ, ಹರಿಜನರ ಪರವಾಗಿ ಡಾ. ಅಂಬೇಡ್ಕರವರೂ ಬಲವಾಗಿ ಆಕ್ಷೇಪಿಸತೊಡಗಿದರು. ಮಹಾತ್ಮರು ಅವರೆಲ್ಲರನ್ನೂ ಸಮಾಧಾನಗೊಳಿಸಲು ಯತ್ನಿಸಿದರೂ ಸಫಲವಾಗಲಿಲ್ಲ. ಥಾಕೋರ್ ಸಾಹೇಬರ ಮೊದಲಿನ ಒಪ್ಪಂದದಂತೆ ಸುಧಾರಣಾ ಸಮಿತಿಯಲ್ಲಿ ಪ್ರಜಾಪರಿಷತ್ತಿನವರಿಗೆ ಬಹುಮತವಿರಬೇಕೆಂದೇ ಮಹಾತ್ಮರು ಉಪವಾಸವನ್ನು ಕೈಕೊಂಡದ್ದಾಗಿತ್ತು. ಸಮಿತಿಯಲ್ಲಿ ಬರೇ ಹತ್ತು ಮೆಂಬರುಗಳನ್ನಿಟ್ಟುಕೊಂಡು ಮುಸಲ್ಮಾನ ವಗೈರೆಗೆ ಪ್ರಾತಿನಿಧ್ಯ ಕೊಟ್ಟು ಪ್ರಜಾ ಪರಿಷತ್ತಿನವರಿಗೆ ಬಹುಮತ ಕೊಡಲು ಸಾಧ್ಯವಿಲ್ಲವಾದರೆ ಮೆಂಬರುಗಳ ಸಂಖ್ಯೆಯನ್ನು 15ಕ್ಕೆ ಏರಿಸಿ, ಸರ್ಕಾರ ಪಕ್ಷದವರು ಮೂರು ಜನರು, ಮುಸಲ್ಮಾನ ವಗೈರರ ಪರ ನಾಲ್ಕು ಜನರು, ಉಳಿದ ಎಂಟು ಮೆಂಬರುಗಳು ಪ್ರಜಾ ಪರಿಷತ್ತಿನವರು ಆಗಬಹುದೆಂದು ಮಹಾತ್ಮರು ಸೂಚಿಸಿದರು. ಇದು ಸರ್ ಗ್ವಯರ್‌ರವರ ತೀರ್ಪಿಗೆ ವಿರುದ್ಧವಲ್ಲದಿದ್ದರೂ ಥಾಕೂರ್ ಸಾಹೇಬರು ಇದಕ್ಕೆ ಒಪ್ಪಲಿಲ್ಲ.

ಆಷ್ಟೆರಿಗೆ ಮುಸಲ್ಮಾನರು, ಹರಿಜನರೇ ವಗೈರೆಡ ಹಿತವನ್ನು ಕಾಪಾಡುವ ಭರವಸೆಯಿಂದ ಹತ್ತು ಜನರ ಕಮಿಟಿಗೆ ಏಳು ಜನ ಪ್ರಜಾಪರಿಷತ್ತಿನವರ ಹೆಸರುಗಳನ್ನು ಮಹಾತ್ಮರು ಸರ್ದಾರ್ ಪಟೇಲರವರಿಂದ ಸೂಚಿಸಿದರು. ಇಷ್ಟೆಲ್ಲಾ ಅಡಚಣೆಗಳನ್ನು ತಂದೊಡ್ಡಿದ್ದು ಸಾಲದೆಂದು ಥಾಕೂರ್ ಸಾಹೇಬರು—ಈ ಏಳು ಹೆಸರುಗಳ ಪೈಕಿ 6 ಜನರು ರಾಜಕೋಟೆಯ ಪ್ರಜೆಗಳೇ ಅಲ್ಲವೆಂದು ಆಕ್ಷೇಪ ಎತ್ತಿದರು. ಈ ಬಿಕ್ಕಟ್ಟನ್ನು ಪರಿಹರಿಸಲು ಮಹಾತ್ಮರು ಅಲ್ಲಿಯ ಬ್ರಿಟಿಷ್ ರೆಸಿಡೆಂಟರಾದ ಮಿ. ಗಿಬ್‌ಸನ್ನರನ್ನೂ ಕಂಡು ಪ್ರಸ್ತಾಪಿಸಿದರು. ಕಮಿಟಿಯ ಮೆಂಬರುಗಳನ್ನೆಲ್ಲಾ ಥಾಕೂರ್ ಸಾಹೇಬರೇ ನೇಮಿಸಿ, ಈ ಕಮಿಟಿಯವರು ರಾಜಕೋಟೆ ದರ್ಬಾರಿನ ಪ್ರಥಮ ಪ್ರಕಟಣೆಗನುಸಾರವಾಗಿ ಸುಧಾರಣೆಗಳನ್ನು ಸಿಫಾರಸು ಮಾಡುವಂತೆಯೂ, ಈ ವರದಿಯು ಪ್ರಜಾಪರಿಷತ್ತಿನವರಿಗೆ ತೃಪ್ತಿಯನ್ನುಂಟುಮಾಡದೆ ಹೋದರೆ, ಸದರಿ ವರದಿಯನ್ನೂ, ಅದರ ಮೇಲೆ ಪರಿಷತ್ತಿನವರ ಸೂಚನೆಗಳನ್ನೂ ಚೀಫ್ ಜಸ್ಟೀಸರ ವಿಮರ್ಶೆಗೆ ಬಿಡುವಂತೆಯೂ ಮಹಾತ್ಮರು ಸಲಹೆಯನ್ನಿತ್ತರು. ಆದರೆ ಥಾಕೂರ್ ಸಾಹೇಬರವರಿಗೆ ಇದೂ ಒಪ್ಪಿಗೆಯಾಗಲಿಲ್ಲ. ಇಷ್ಟೆಲ್ಲಾ ಕುಯುಕ್ತಿಗಳನ್ನು ನಡಿಸುತ್ತಾ ತೊಂದರೆಗಳನ್ನು ಒಡ್ಡುತ್ತಿರುವವರು ಅಲ್ಲಿಯ ದಿವಾನರಾದ ದರ್ಬಾರ್ ವೀರವಾಲರೆಂದೂ, ಅವರನ್ನು ತೆಗೆದುಹಾಕದ ವಿನಹ ಸರಿಯಾದ ಯಾವ ತೀರ್ಮಾನವೂ ಆಗಲಾರದೆಂದೂ ಪ್ರಜಾಪರಿಷತ್ತಿನವರು ಮಹಾತ್ಮರಿಗೆ ಒತ್ತಿ ಹೇಳಿದರು. ವೀರವಾಲರನ್ನು ಬಿಡುವ ಇಚ್ಛೆಯು ಥಾಕೂರ್ ಸಾಹೇಬರಿಗೆ ಸ್ವಲ್ಪವೂ ಇಲ್ಲ.

ಇದನ್ನೆಲ್ಲಾ ನೋಡಿದ ಮಹಾತ್ಮರಿಗೆ ರಾಜಕೋಟೆಯ ವಾತಾವರಣವು ಜಿಗುಪ್ಸೆಯನ್ನುಂಟು ಮಾಡಿತು. ತನ್ನ ಅಹಿಂಸಾತತ್ವವು ಥಾಕೋರ್ ಸಾಹೇಬರ ಹಾಗೂ ದರ್ಬಾರ್ ವೀರವಾಲರ ಮೇಲೆ ಏನೊಂದೂ ಪರಿಣಾಮವನ್ನುಂಟುಮಾಡಲಿಲ್ಲವೆಂದು ಅವರಿಗೆ ತೋರಿತು. ತನ್ನ ಪ್ರಜೆಗಳಿಗೆ ಬೇಕಾದ ಸುಧಾರಣೆಗಳನ್ನು ಕೊಡಿಸಲು ಥಾಕೂರ್ ಸಾಹೇಬರ ಮೇಲೆ ಬೇರೊಬ್ಬರ ಶಕ್ತಿಪ್ರಯೋಗ ಮಾಡಿಸಬೇಕಾಗುವದೆಂದು ಗಾಂಧಿಜಿಯವರಿಗೆ ಅನಿಸಿತು. ಈ ರೀತಿ ಮಾಡುವುದು ಅಹಿಂಸೆಯಲ್ಲವೆಂದೂ ಅವರಿಗೆ ಮನಗಂಡಿತು. ಆದುದರಿಂದ ಅವರು ತನ್ನ ಸೋಲನ್ನು ಒಪ್ಪಿಕೊಂಡು, ವೀರವಾಲರ ಮನುಷ್ಯತ್ವಕ್ಕೆ ಸೀದಾ ಅಪ್ಪೀಲು ಮಾಡಿ, ಅವರಿಂದ ಎಷ್ಟರ ಮಟ್ಟಿಗೆ ಸುಧಾರಣೆಗಳು ದೊರೆಯುವವೋ ಅವುಗಳನ್ನು ಪಡೆಯಲು ಯತ್ನಿಸುವಂತೆ ಪ್ರಜಾಪರಿಷತ್ತಿನವರಿಗೆ ಸಲಹೆಯನ್ನು ಕೊಟ್ಟು ರಾಜಕೋಟೆಯನ್ನು ಬಿಟ್ಟು ಕಲ್ಕತ್ತಾಕ್ಕೆ ಹೋಗಿರುವರು. ಇದರಿಂದ ಇಡೀ ಹಿಂದೂಸ್ಥಾನ ರಾಜಕೀಯ ವಾತಾವರಣದ ಮೇಲೆ ಮೋಡವು ಕವಿದಂತಾಗಿದೆ. ಮಹಾತ್ಮರ ಅಪ್ಪೀಲಿನಿಂದ ಕರಗದಂಥ ಥಾಕೂರ್ ಸಾಹೇಬರ ಮತ್ತು ದರ್ಬಾರ್ ವೀರವಾಲರ ಕಠಿಣ ಹೃದಯಗಳ ಮೇಲೆ ಅಲ್ಲಿಯ ಪ್ರಜೆಗಳ ಮೊರೆಯು ಏನಾದರೂ ಪರಿಣಾಮಕಾರಿಯಾಗುವದೋ ಎಂಬುದು ಸಂಶಯಾಸ್ಪದವಾಗಿದೆ. ಹೇಗೂ ಈ ವಿಚಾರದಲ್ಲಿ ವೈಸರಾಯರು ತಾವಾಗಿಯೇ ಪುನಹ ಕೈ ಹಾಕಿ ಒಂದು ತೀರ್ಮಾನಕ್ಕೆ ತರಬೇಕಾಗುವುದು. ಇಲ್ಲವೇ ಮಹಾತ್ಮರೇ ತಮ್ಮ ಅಹಿಂಸಾತತ್ವದ ಪ್ರಯೋಗವನ್ನು ಪುನಹ ಮಾಡದೆ ಇರಲಾರರೆಂದು ನಮಗನಿಸುತ್ತದೆ. ಮಹಾತ್ಮರ ರೀತಿಗಳು ವಿಶೇಷವಾದವು. ಅವು ಅನಿರೀಕ್ಷಿತವಾಗಿ ಜನತೆಯ ಮುಂದೆ ಇಡಲ್ಪಡುವವು. ಆದುದರಿಂದ 'ನಾನು ಸೋತೆನು. ನಿಮಗೆ ಜಯವಾಗಲಿ' ಎಂದು ವೀರವಾಲರನ್ನು ಸಂಬೋಧಿಸಿ, ರಾಜಕೋಟೆಯನ್ನು ಬಿಟ್ಟ ಗಾಂಧೀಜಿಯವರು ಮುಂದೇನು ಮಾಡುವರೆಂದು ಇಡೀ ಭಾರತ ಭೂಮಿಯು ಯಾಕೆ, ಪ್ರಪಂಚವೇ ಕುತೂಹಲದಿಂದ ಎದುರು ನೋಡುತ್ತಿದೆ.

ರಾಜಕೋಟೆ ಪ್ರಕರಣ.

ಗಾಂಧಿಜೀಯವರ ಹೇಳಿಕೆ.

'ಕಾಠೇವಾರದ ಈ ಅಲ್ಲೋಲಕಲ್ಲೋಲ ರಾಜಕೀಯ ರಂಗದಲ್ಲಿ ನನ್ನ ಸಹನ ಶೀಲತೆಯು ಚೆನ್ನಾಗಿ ಪರೀಕ್ಷಿಸಲ್ಪಟ್ಟಿತು. ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ನನ್ನನ್ನು ಮರೆತು, ದರ್ಬಾರ್ ಶ್ರೀ ವಿರವಾಲರೊಡನೆ ವ್ಯವಹಾರ ನಡೆಸುವಂತೆ ನಾನು ಪ್ರಜಾಪರಿಷತ್ತಿನವರನ್ನು ಕೇಳಿಕೊಂಡಿರುವೆನು. ಅವರ ಬೇಕು ಬೇಡಿಕೆಗಳ ಅತ್ಯಲ್ಪ ಭಾಗವಾದರೂ ಸಹ ಕರಗತವಾದರೆ ನಮ್ಮಿಬ್ಬರನ್ನು ಕೇಳದೆ ಅದನ್ನು ಅವರು ಅಂಗೀಕರಿಸಬಹುದು' ಎಂದು ಮಹಾತ್ಮ ಗಾಂಧಿಯವರು ರಾಜಕೋಟೆ ಪ್ರಕರಣದ ವಿಚಾರ ತಮ್ಮ ತಾ. 24ರ ಪ್ರಕಟಣೆಯಲ್ಲಿ ಹೇಳಿರುವರು. ಮುಂದುವರಿಸುತ್ತಾ 'ನಾನು ಪರಾಜಯ ಹೊಂದಿರುವೆನು. ನೀವು ಜಯಶೀಲರಾಗಿ ಜನತೆಗೆ ಎಷ್ಟರ ಮಟ್ಟಿನ ಸುಧಾರಣೆ ಕೊಡಲಿಕ್ಕಾಗುತ್ತದೋ ಅಷ್ಟು ಕೊಟ್ಟು ಜನರನ್ನು ತೃಪ್ತಿಪಡಿಸಿ, ನನ್ನ ಮನಸಿನಿಂದ ತತ್ಕಾಲಕ್ಕೆ ಮಾಯವಾಗುತ್ತದೋ ಎಂಬಂತಿರುವ ಆ ಆಶೆಯನ್ನು ಪುನರುತ್ಥಾನಗೊಳಿಸಿ' ಎಂದು ವೀರವಾಲರಿಗೆ ಹೇಳಿರುವೆನು.' ಎಂದು ಹೇಳಿದರು.

ತಾರೀಕು 24ರಲ್ಲಿ ಮೌನವ್ರತವನ್ನಾಚರಿಸುತ್ತಿದ್ದಂತೇ ಗಾಂಧೀಜಿಯವರು ಒಂದು ಹೇಳಿಕೆಯನ್ನು ತಯಾರಿಸಿರುವರು. 'ಅಹಿಂಸೆಯು ಬಲಾಢ್ಯರದ್ದಾಗಬೇಕು, ಧೈರ್ಯಶಾಲಿಗಳದ್ದಾಗಿರಬೇಕು' ಎಂದು ಹೇಳುತ್ತಿರುವ ಗಾಂಧಿಜೀಯವರು ಹೀಗೆ ಹೇಳುತ್ತಾರೆ. 'ರಾಜಕೋಟೆಯು ನನ್ನ ಶಕ್ತಿಯನ್ನು ಕಸಿದುಬಿಟ್ಟಂತೆ ಕಾಣುತ್ತದೆ. ನಾನು ವೃದ್ಧಾಪ್ಯದಲ್ಲಿರುವೆನೆಂಬ ಪರಿವೆಯು ಈ ವರೆಗೆ ನನಗಿರಲಿಲ್ಲ. ಈಗ ನಾನು ಮುಪ್ಪಿನ ಅನುಭವದಿಂದ ಬಗ್ಗಿ ಹೋಗಿರುವೆನು. ಆಶೆಯನ್ನು ಕಳಕೊಳ್ಳುವುದೆಂದರೆ ಏನು ಎಂಬುವುದರ ಅರಿವು ನನಗೆ ತಿಳಿಯದು. ಆದರೆ ಅದು ರಾಜಕೋಟೆಯಲ್ಲಿ ಚಿಂದು ಸಮಾಧಿಗೊಂಡಂತೆ ಕಾಣುತ್ತದೆ. ನನ್ನ ಅಹಿಂಸಾ ತತ್ವವು ಈ ಮೊದಲು ಎಂದೂ ಕಾಣದಂತಹ ಒಂದು ಪರೀಕ್ಷೆಗೆ ಒಳಗಾಗಿದೆ.

ಅನಿರೀಕ್ಷಿತ ತೊಡಕುಗಳು.

ಇಂಡಿಯಾದ ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರ ತೀರ್ಮಾನದಂತೆ ಸುಧಾರಣಾ ಕಮಿಟಿಯನ್ನು ನೇಮಿಸಿ ಕಾರ್ಯಪ್ರವರ್ತರನ್ನಾಗಿ ಮಾಡಲು ಹದಿನೈದು ದಿನಗಳು ಸಾಕೆಂದು ಊಹಿಸಿದ್ದನು. ಆದರೆ ನನ್ನ ಈ ಊಹನೆಯು ಬಹಳ ದೂರವಿರುವಂತೆ ಕಾಣುತ್ತದೆ. ಇದರ ಮಧ್ಯೆ ಅನೇಕ ಅನಿರೀಕ್ಷಿತ ಎಡರು ತೊಡರುಗಳು ನಿಂತಿವೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಮಾನವು ಸರ್ದಾರ ಪಟೇಲರ ಧ್ಯೇಯಕ್ಕೆ ಅಮೋಘ ಜಯವನ್ನುಂಟುಮಾಡಿದೆಯೆಂದು ಘೋಷಿಸಲ್ಪಟ್ಟಿತು. ಆದರೆ ಈಗ ಅದು ನಾನು ಇತರ ಪಂಗಡಗಳ ಪ್ರತಿನಿಧಿಗಳನ್ನು ಸೇರಿಸಿಲ್ಲವೆಂದು ನನಗೆ ವ್ಯತಿರಿಕ್ತ ಉಪಯೋಗಿಸಲ್ಪಡುತ್ತಿದೆ. ಠಾಕೂರು ಸಾಹೇಬರು ಈ ಪಂಗಡಗಳಿಗೆ ಕೊಟ್ಟ ಭರವಸೆಯನ್ನು ನಾನು ಡೆಲ್ಲಿಯಿಂದ ರಾಜಕೋಟೆಗೆ ಹಿಂದಿರುಗಿದ ನಂತರ ನನ್ನ ಈ ನಿರ್ಬಲ ಹೆಗಲಿನ ಮೇಲೆ ಹಾಕಿದರು. ಏನೇ ಕಾರಣವಿದ್ದರೂ ಸಹ ಮುಸ್ಲಿಮರು ಮತ್ತು ಭಾಯತರು ತಮ್ಮ ಪಂಗಡದ ಪ್ರತಿನಿಧಿಗಳನ್ನು ಸೇರಿಸಲಿಲ್ಲವೆಂಬ ಆರೋಪಣೆಯನ್ನು ಠಾಕೂರು ಸಾಹೇಬರ ಹೆಗಲಿನಿಂದ ತಪ್ಪಿಸಿದರು.

ಮುಸ್ಲಿಮರ ಮತ್ತು ಭಾಯತರ ಪ್ರತಿನಿಧಿಗಳನ್ನು ಸೇರಿಸುವದು ಅಸಾಧ್ಯವಾದ್ದರಿಂದ ನಾನು ಪರಿಷತ್ತಿನ ಪರ ಏಳು ಹೆಸರುಗಳನ್ನು ಠಾಕೂರು ಸಾಹೇಬರಿಗೆ ಕಳುಹಿಸಿದೆನು. ಇದಕ್ಕೆ ಉತ್ತರವಾಗಿ ಅವರಲ್ಲಿ ಆರು ಜನರು ರಾಜಕೋಟೆಯ

(8ನೇ ಪುಟಕ್ಕೆ ಸಾಗಿದೆ.)

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಚೀಫ್ ಕಮಿಷನರವರು ತಾರೀಕು 25–4–39ರಲ್ಲಿ ಇಲ್ಲಿಂದ ಬೆಂಗಳೂರಿಗೆ ಹೋದರೆಂದು ತಿಳಿಯುತ್ತೇವೆ.

ಕೊಡಗು ಸರ್ಕಾರದ 1937–38 ನೇ ವರ್ಷದ ಆಡಳಿತ ವರದಿಯನ್ನು ವಂದನಾ ಪೂರ್ವಕ ಸ್ವೀಕರಿಸಿರುವೆವು.

ಜಿಲ್ಲಾ ಬೋರ್ಡಿನಿಂದ ಹಂಗಾಮಿಯಾಗಿ ತೆರೆಯಲ್ಪಟ್ಟಿದ್ದ ಬಾಳಲೆ ಗ್ರಾಮ ಆಸ್ಪತ್ರೆಯು ಖಾಯಂ ಮಾಡಲ್ಪಟ್ಟಿದೆಯಾಗಿ ತಿಳಿಯುತ್ತೇವೆ.

ಶ್ರೀ ಮುಕ್ಕಾಟಿರ ಯಂ ಅಚ್ಚಪ್ಪನವರು ಟೈಪ್‌ರೈಟಿಂಗ್ ಮತ್ತು ಷಾರ್ಟ್‌ಹ್ಯಾಂಡ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಕೆನರಾ ಕಾಮರ್ಸ್ ಹೈಸ್ಕೂಲಿನಿಂದ ಸರ್ಟಿಫಿಕೇಟ್ ಪಡೆದಿರುವರಾಗಿ ತಿಳಿಯುತ್ತೇವೆ.

ಯಂ ಬಿ ಬಿ ಯಸ್ ವ್ಯಾಸಂಗ ಮಾಡುತ್ತಿರುವ ಡಾ: ಕೋದಂಡ ಬಿ ಕಾರ್ಯಪ್ಪನವರು ಒಂದನೇ ಮತ್ತು ಎರಡನೇ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರಾಗಿ ತಿಳಿಸಲು ಸಂತೋಷಿಸುತ್ತೇವೆ.

ಮೂರ್ನಾಡು ಮತ್ತು ಶನಿವಾರಸಂತೆ ಆಸ್ಪತ್ರೆಗಳಲ್ಲಿ ಒಂದೊಂದು ಸೂಲಗಿತ್ತಿಯರನ್ನು ನೇಮಿಸಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನ ಕಳೆದ ಮೀಟಿಂಗಿನಲ್ಲಿ ತೀರ್ಮಾನಿಸಿದಂತೆ ಮೂರ್ನಾಡಿಗೆ ಶ್ರೀಮತಿ ಮಾಚಿಮಂಡ ಮಾಚಮ್ಮನವರೂ, ಶನಿವಾರಸಂತೆಗೆ ಶ್ರೀಮತಿ ಲಲಿತಾಭಾಯಿಯವರು ಬರುವ ಮೇ ತಿಂಗಳು 1ರಿಂದ ನೇಮಿಸಲ್ಪಟ್ಟಿರುವರಾಗಿ ತಿಳಿಯ ಬರುತ್ತದೆ.

ವೀರರಾಜಪೇಟೆ.

ಇಲ್ಲಿಯ ಜ್ಞಾನ ಮತ್ತು ವಿದ್ಯಾ ಸಂಘದ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವನ್ನು ಚೀಫ್ ಕಮಿಷನರವರು ತಾ. 24–4–39ರಲ್ಲಿ ನಡೆಸಿದರು.

ಹುಡುಗಿಯರ ಶಾಲೆಯನ್ನು ಮುಚ್ಚಿದ್ದಕ್ಕಾಗಿಯೂ, ಶಾಲಾ ಫೀಜನ್ನು ಏರಿಸಿದ್ದಕ್ಕಾಗಿಯೂ ಎಡೆನಾಲ್ಕುನಾಡಿನಿಂದ ಒಂದು ನಿಯೋಗ ಕ್ಷೋಭೆಯು ಚೀಫ್ ಕಮಿಷನರನ್ನು ತಾ. 21-4 39ರ ಇಲ್ಲಿ ಭೇಟಿ ಮಾಡಿತು.

ಕಂಡಂಗಾಲ ರುದ್ರಗುಪ್ಪೆ ಭಗವತಿ ದೇವಸ್ಥಾನದ ವಾರ್ಷಿಕ ಉತ್ಸವವು ಆದರ ಭಂಡಾರದ ವಿಚಾರದಲ್ಲಿ ನಾಡವರೊಳಗೆ ಬಂದ ಭಿನ್ನಾಭಿಪ್ರಾಯದಿಂದ ನಿಲ್ಲಿಸಲ್ಪಟ್ಟಿತೆಂದೂ, ಅನೇಕ ಮೀಟಿಂಗುಗಳು ನಡೆದರೂ ತೀರ್ಮಾನವಾಗದ ಇದ್ದದ್ದು, ಈಗ ಕೆಲವು ದಿನಗಳ ಹಿಂದೆ ದೇವರ ಭಂಡಾರ ಇದ್ದ ಮನೆಗೆ ಒಂದು ಕರ್ನಾಡ ಹಾವು ನುಗ್ಗಿದ್ದರ ಪ್ರಮಾಣವಾಗಿ ಭಂಡಾರವನ್ನು ಅವರು ಒಪ್ಪಿಸಿ ಉತ್ಸವವು ಒಡನೇ ನಡೆಯುವ ಯೋಜನೆ ಆಗುತ್ತಿರುವದೆಂದೂ ತಿಳಿಯುತ್ತೇವೆ.

ಪೊನ್ನಂಪೇಟೆ.

ತಾ 25–4–39ರಲ್ಲಿ ಕೊಡಗಿನ ಹರಿಕಥಾಗಾರರಾದ ಶ್ರೀ ಗೋಪಾಲದಾಸರವರು ಬಾಳೆಲೆಯಲ್ಲಿ ಶ್ರೀ ಚೆಕ್ಕೆರ ಅಪ್ಪಯ್ಯನವರ ಹಾರ್ಮೋನಿಯಂ ಬಾಜನದಿಂದ ಕೂಡಿ 'ಸುಗ್ರೀವ ಸಖ್ಯ'ವೆಂಬ ಹರಿಕಥೆಯನ್ನು ಮಾಡಿದರೆಂದೂ, ಸುಮಾರು 500 ಜನರು ನೆರೆದಿದ್ದರಾಗಿಯೂ ತಿಳಿಯುತ್ತೇವೆ.

ನಿಧನ ವಾರ್ತೆ.

ಮಾ ರಾ ಪಟ್ಟಮಾಡ ಚಿಣ್ಣಪ್ಪನವರು ಈ ತಾ 21ರ ರಾತ್ರಿ ಮಡಿಕೇರಿ ಆಸ್ಪತ್ರೆಯಲ್ಲಿ 'ಕರೀ ನೀರಿನ ಜ್ವರ' ದಿಂದಲೂ, ಈ ತಾ 20ರಲ್ಲಿ ಕೊಕ್ಕೇರಿ ಗ್ರಾಮದ ಮ ಚೇನಂಡ ನಂಜುಂಡನವರು ತಮ್ಮ 68 ನೇ ವಯಸ್ಸಿನಲ್ಲೂ ವಿಧಿವಶರಾದರೆಂದೂ ತಿಳಿಸಲು ವ್ಯಸನಪಡುತ್ತೇವೆ. ಅಲ್ಲದೆ ತಾರೀಕು 21–4–39ರಲ್ಲು ಕಡಂಗಮರೂರು ಗ್ರಾಮದ ಮಾ. ಅಮ್ಮಂಡ ಮುದ್ದಪ್ಪನವರ ಶಾಲೆ ಹೋಗುತ್ತಿದ್ದ ಕಿರಿ ಮಗನು ತೂಗ ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಿರುವದಾಗಿಯೂ ತಿಳಿಯುತ್ತೇವೆ.

ಹಿಂದೂದೇಶ.

ಇವರು ಕಲ್ಕತ್ತೆಯಲ್ಲಿ ಜರಗುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿಗೆ ರಾಜಕೋಟೆಯಿಂದ ಹೊರಟು ಹೋಗಿರುವರು.

ಹೈದರಾಬಾದಿನಲ್ಲಿ ಆರ್ಯಸಮಾಜದವರ ಸತ್ಯಾಗ್ರಹವು ನಡೆಯುತ್ತಲೇ ಇದೆ. ದಸ್ತಗಿರಿಗಳೂ ಜೋರಾಗಿದೆ. ಸೋಲಾಪುರಕ್ಕೆ ಬಂದಿರುವ ಬದ್ರಿನಾಥದ ಶ್ರೀ ಶಂಕರಾಚಾರ್ಯ ಸ್ವಾಮಿಗಳು ಅಲ್ಲಿಗೆ ಹೋಗಿ ಸ್ಥಿತಿಯನ್ನು ಪರಿಶೀಲಿಸುವರೆಂದು ತಿಳಿಯಬಂದಿದೆ.

ಕಲ್ಕತ್ತೆಯಲ್ಲಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿಗೆ ಸರ್ದಾರ ಪಟೇಲರು ಹೋಗದಿದ್ದರೆ ದೇಶದ ಹಿತಸಾಧನೆ ಮಾಡಿದಂತಾಗುವದರಿಂದ ಅವರು ಹೋಗುವದಿಲ್ಲವಾಗಿ ಗಾಂಧೀಯವರು ಒಂದು ಹೇಳಿಕೆಯನ್ನು ಕೊಟ್ಟಿರುವರು. ಮದ್ರಾಸಿನ ಪ್ರಧಾನ ಮಂತ್ರಿ ಸಿ ರಾಜಗೋಪಾಲಾಚಾರ್ಯರೂ ತಮ್ಮ ಕಾರ್ಯಬಾಹುಳ್ಯದ ದೆಸೆಯಿಂದ ಹೋಗುವದಿಲ್ಲವಂತೆ.

ಶ್ರೀ ಕೆ ಎಫ್ ನರಿಮನರು ಕಲ್ಕತ್ತಾ ಜಿಲ್ಲಾ ರಾಜಕೀಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರೆಂದೂ, ಆ



ಸಮ್ಮೇಳನಕ್ಕೆ ರಾಷ್ಟ್ರಪತಿಗಳಾದ ಸುಭಾಷ್ ಚಂದ್ರಬೋಸರೂ ಹಾಜರಿರುವರಾಗಿಯೂ ತಿಳಿದುಬರುತ್ತದೆ.

ಬರುವ ಕಾಂಗ್ರೆಸ್ ಅಧಿವೇಶನವು ಪಾಟ್ನದಿಂದ ಆರು ಮೈಲು ದೂರವಿರುವ ಪುಲ್‌ವಾರಿ ಶರೀಫ್ ಎಂಬಲ್ಲಿ ನಡೆಯಬೇಕೆಂದು ಡಾಕ್ಟರ್ ರಾಜೇಂದ್ರ ಪ್ರಸಾದರು ನಿಶ್ಚಯಿಸಿರುವರು. ಇದಕ್ಕೆ ಅಲ್ಲಿಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರೂ ಒಪ್ಪಿರುವರು. ಈಗಾಗಲೇ 17 ಜನರಿಂದ ಕೂಡಿದ ಸ್ವಾಗತ ಕಮಿಟಿಯು ನೇಮಿಸಲ್ಪಟ್ಟು ಕೆಲಸಕ್ಕೆ ಪ್ರಾರಂಭವಾಗಿರುವದು.

ಹಿಮಾಲಯ ಪರ್ವತ ಶಿಖರವನ್ನು ಶೋಧಿಸುವ ಪ್ರಯತ್ನ ಈ ವರೆಗೆ ಎಷ್ಟೋ ನಡೆದರೂ ಅದು ಫಲಿಸಿಲ್ಲ. ಈ ವರ್ಷ ಅಮೆರಿಕಾದ ಒಂದು ಪಡೆಯು ಹಿಮಾಲಯ ರೋಹಣ ಮಾಡಲು ಭಾರತಕ್ಕೆ ಬಂದಿರುವದು. ಇದು ಪ್ರೊಫೆಸರ್ ಸುಪ್ರಸಿದ್ಧ ಪಟ್ಟಿ ಹತ್ತುವವರಾದ ಪ್ರೊ ಹಾರ್ಟ್‌ಸಿನ್‌ಕೀ ಎಂಬವರ ನೇತೃತ್ವದಲ್ಲಿ ಬಂದಿರುವದು. ಮೇ ಹದಿನೈದರ ನಂತರ ಇದು ತನ್ನ ಕಾರ್ಯ ಕೈಗೊಳ್ಳುವದಾಗಿ ತಿಳಿದು ಬಂದಿದೆ.

ಕಾಮ್ರೇಡ್ ಯಂ ಎನ್. ರಾಯರು ತಾವೊಂದು 'ಉಗ್ರ ಕಾಂಗ್ರೆಸ್ ಪಕ್ಷವನ್ನು' ಸ್ಥಾಪಿಸಿರುವದಾಗಿಯೂ ಅದರ ಉದ್ದೇಶಗಳ ಬಗ್ಗೆ ಒಂದು ದೀರ್ಘ ಪ್ರಕಟಣೆ ಹೊರಡಿಸಿದ್ದಾರೆ. ದೇಶೀಯ ಸಂಸ್ಥಾನಗಳ ನಿರ್ಮೂಲನ, ಕಾಂಗ್ರೆಸ್ ಮಂತ್ರಿ ಮಂಡಲಗಳ ರಾಜಿನಾಮೆ ಇತ್ಯಾದಿ ಉಗ್ರ ಕಾರ್ಯಕ್ರಮಗಳು ಬಳಕೆಯಲ್ಲಿ ಬರುವಂತೆ ಪ್ರಯತ್ನಿಸುವದೇ ಈ ಸಂಸ್ಥೆಯ ಉದ್ದೇಶ.

ಈ ತಿಂಗಳ ಅಂತ್ಯದಲ್ಲಿ ಕಲ್ಕತ್ತೆಯಲ್ಲಿ ನಡೆಯುವದಾಗಿರುವ ಅಖಿಲ ಕಾಂಗ್ರೆಸ್ ಸಮಿತಿಯ ಕೂಟದಲ್ಲಿ ಚರ್ಚಿಸಬೇಕೆಂದು ಆರು ಮಂದಿ ಸದಸ್ಯರು ಮಂಡಿಸುವ ನಿರ್ಣಯವು ಅಂದರೆ ಕಾಂಗ್ರೆಸ್ ಅಧ್ಯಕ್ಷರಾಗಿರತಕ್ಕ ಶ್ರೀ ಸುಭಾಸ್ ಚಂದ್ರ ಬೋಸರವರಲ್ಲಿ ತಮಗೆ ನಂಬಿಕೆ ಭರವಸೆಗಳಿಲ್ಲವೆಂಬ ನಿರ್ಣಯವು ಅಲಹಾಬಾದಿನಲ್ಲಿರುವ ಕಾಂಗ್ರೆಸ್ ಕಾರ್ಯವರ್ಗಕ್ಕೆ ಕಳುಹಿಸಲಾಗಿದೆ ಎಂದು ಪ್ರಕಟವಾಗಿದೆ.

ವಿದೇಶ

ಹರ್ ಹಿಟ್ಲರನು ತನ್ನ ಘೋರಣೆಯನ್ನು ಬದಲಾಯಿಸದ ಪಕ್ಷ ಬ್ರಿಟಿಷರು ಸುಮ್ಮನಿರಲಾರರೆಂದೂ, ಆ ಘೋರಣೆಯನ್ನು ಖಂಡಿಸಲು ಮುಂದರಿಯುವದರಲ್ಲಿ ಸಂದೇಹವಿಲ್ಲವೆಂದೂ, ಆದ್ದರಿಂದ ಹಿಟ್ಲರನ್ನು ಯೋಚಿಸಿ ಕಾರ್ಯಪ್ರವರ್ತನಾಗಬೇಕೆಂದೂ ಬ್ರಿಟಿಷರು ಎಚ್ಚರಿಸಿರುವರು.

ಯುದ್ಧವೇನಾದರೂ ಯೂರೋಪಿನಲ್ಲಿ ಪ್ರಾಪ್ತವಾದಲ್ಲಿ ಇಂಡಿಯಾ ದೇಶದಿಂದ ಸೈನ್ಯವನ್ನು ತೆಗೆದುಕೊಂಡು ಹೋಗಿ ಈಜಿಪ್ಟಿನಲ್ಲಿಡುವುದಕ್ಕಾಗಿ ಅಲ್ಲಿ ಸ್ಥಳವಸತಿಗಳ ಅನುಕೂಲವನ್ನು ಕಲ್ಪಿಸುವ ವಿಷಯದಲ್ಲಿ ಹಿಂದೂಸ್ಥಾನದ ಸೈನ್ಯದ ಅನೇಕ ಮಂದಿ ಹುದ್ದೇದಾರರುಗಳು ಅಲ್ಲಿ ಸರ್ಕಾರದವರೊಡನೆ ಚರ್ಚೆ ನಡಿಸುವದಕ್ಕಾಗಿ ಅಲ್ಲಿಗೆ ಹೋಗಿರುತ್ತಾರೆ—ಹಿಂದೂಸ್ಥಾನದ ಸಂರಕ್ಷಣೆಗಾಗಿ ಎಂಟು ಯುದ್ಧದ ವಿಮಾನಗಳು ಕಳೆದ ವಾರ ಕರಾಚಿಯಲ್ಲಿ ಬಂದಿಳಿದವು.—ಆಫ್ಘಾನಿ ಸಂಸ್ಥಾನದ ಸರ್ಕಾರದವರು ತಮ್ಮ ದೇಶಸಂರಕ್ಷಣಾರ್ಥವಾಗಿ ಜರ್ಮನಿಯವರಿಂದ ಇಪ್ಪತ್ತು ಫಿರಂಗಿಗಳನ್ನೂ, ಸಣ್ಣ ಬಂದೂಕುಗಳನ್ನೂ, ವಿಮಾನಗಳನ್ನೂ ವಿಮಾನ ನಿರೋಧಕ ಬಂದೂಕುಗಳನ್ನೂ ಕೊಂಡುಕೊಂಡಿರುವುದಾಗಿ ಪ್ರಕಟವಾಗಿದೆ.

ಬಹುಮಾನ.

ನನ್ನ ಬಾಬ್ತು ಈ ಕೆಳಗಿನ ಚಹರೆಯ ಒಂದು ಎಮ್ಮೆ ಮತ್ತು ಅದರ ಒಂ ವರ್ಷದ ಹೋರಿ ಕರವು ಈ ಕಳೆದ ಎಂಟು ದಿನಗಳಿಂದ (ಮಡಿಕೇರಿಯಿಂದ ಕಡಂಗಮರೂರಿಗೆ ಬಂದದ್ದು), ಪರಾರಿಯಾಗಿದೆ. ಇದನ್ನು ಪತ್ತೆ ಹಚ್ಚಿ ಕೊಟ್ಟವನಿಗೆ 3 – ರೂಪಾಯಿ ಬಹುಮಾನ ಕೊಡಲಾಗುವುದು.

(1) ಸಾಧಾರಣ ನಾಲ್ಕು ಅಡಿ ಎತ್ತರವಿರುವ ಕಪ್ಪು ಬೂದು ಮಿಶ್ರ ಬಣ್ಣದ ಹಿಂದಕ್ಕೆ ಬಾಗಿದ ಉದ್ದ ಕೊಂಬಿನ ಗರ್ಭವಾಗಿರುವ ಎಮ್ಮೆ.

(2) ಬೂದು ಬಣ್ಣದ ಒಂದು ವರ್ಷದ ಹೋರಿಕರ.

ಪಳಂಗಂಡ ಅಪ್ಪಯ್ಯ,
ಕಡಂಗಮರೂರು,
ವೀರಾಜಪೇಟೆ.

ಮಡಿಕೇರಿಯಲ್ಲಿರುವ ಪಟ್ಟಮಾಡ ಡಿ. ಪೊನ್ನಪ್ಪನವರೂ ಮತ್ತು ಕೊಂಗಂಡ ಯಂ. ಸುಬ್ಬಯ್ಯನವರೂ ಮಾಡುವ

ವಿನಂತಿ.

ತಾರೀಕು 30ರಲ್ಲು ನಡೆಯಬೇಕಾಗಿದ್ದ ನಮ್ಮ ಮಕ್ಕಳ ಮದುವೆಯನ್ನು ಕಾರಣಾಂತರದಿಂದ ತಾರೀಕು 6–5–39 ನೇ ಶನಿವಾರಕ್ಕೆ ಮುಂದರಿಸಲಾಗಿದೆ. ಸರ್ವರೂ ಆ ದಿನ ದಯಮಾಡಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳುವ

ಪಿ. ಡಿ ಪೊನ್ನಪ್ಪ,
ಕೆ. ಯಂ ಸುಬ್ಬಯ್ಯ.

ರಾಜಕೋಟೆ ಪ್ರಕರಣ.

(6 ನೇ ಪುಟದಿಂದ ಸಾಗಿದ್ದು.)

ಪ್ರಜೆಗಳೆಂಬ ಬಗ್ಗೆ ರುಜುವಾತು ಕೊಡಬೇಕೆಂಬ ಪತ್ರ ಬಂತು. ಹೀಗೆ ಮಾಡುವರೆಂಬ ಠಾಕೂರರ ವರ್ತನೆಯ ಗಂಧವು ಸಹ ನನಗಿರಲಿಲ್ಲ. ಆದರೂ ನಾನು ಅವರು ಕೇಳಿದಂತೆ ಬೇಕಾದ ರುಜುವಾತು ಕಳುಹಿಸಿರುವೆನು.

ಕಡೇ ಸೂಚನೆ.

ನನ್ನ ತಾಳ್ಮೆ ಹಾಗೂ ಜಾಣಾಕ್ಷತನವು ವಿಫಲವಾಗಿ ಬಂದಿತೆಂದು ನನಗೆ ತಿಳಿದೊಡನೆ ಸಾರ್ವಭೌಮ ಸರಕಾರದ ಪ್ರತಿನಿಧಿಯಾದ ರೆಸಿಡೆಂಟರಿಗೆ ವೈಸರಾಯರು ಈ ಮೊದಲು ಭರವಸೆಯನ್ನಿತ್ತ ಶರತಿನ ಮೇರೆ ಸಹಾಯ ಮಾಡಬೇಕೆಂದು ಕೇಳಿಕೊಂಡೆನು. ಅದರ ಪರಿಣಾಮವಾಗಿ ಅವರು ನನ್ನನ್ನು ಭೇಟಿಗೆ ಕರೆದರು. ಈ ಸಮಸ್ಯೆಯನ್ನು ಬಗೆಹರಿಸುವ ವಿಧಾನದ ಬಗ್ಗೆ ಚರ್ಚಿಸುತ್ತಿರುವಾಗ ಈ ಕಮಿಟಿಗೆ ಸದಸ್ಯರನ್ನು ನೇಮಿಸುವ ಹಕ್ಕನ್ನು 'ಠಾಕೂರು ಸಾಹೇಬರಿಗೆ ಬಿಟ್ಟು ಬಿಡುವದು ಉಚಿತವೆಂದು ನನಗೆ ಹೊಳೆಯಿತು. ಅದರಂತೆ ರೆಸಿಡೆಂಟರಿಗೆ ನಾನು ಹೇಳಿದೆನು. ಅವರು ಅದನ್ನು ಅಂಗೀಕರಿಸಿದರು. ಅದರಂತೆ ಈಗ ಠಾಕೂರು ಸಾಹೇಬರು ಕಮಿಟಿಯನ್ನು ತಮ್ಮ ಡಿಶಂಬರ್ 26ರ ಪ್ರಕಟಣೆ ಮೇರೆ ನೇಮಿಸಬೇಕೆಂದೂ, ಆ ಕಮಿಟಿಯ ವರದಿಯನ್ನು ಪರಿಷತ್ತಿನ ಮುಂದಿಡಬೇಕೆಂದೂ ಪರಿಷತ್ತಿನವರು ಅದರ ಎಲ್ಲಾ ವಿಚಾರಗಳನ್ನು ಒಪ್ಪದ ಪಕ್ಷ ತಮ್ಮ ಅತೃಪ್ತಿಯನ್ನು ಅದರಲ್ಲೇ ಬರೆದು ಫೆಡರಲ್ ಕೋರ್ಟಿನ ನ್ಯಾಯಾಧೀಶರ ತೀರ್ಮಾನಕ್ಕೆ ಕಳುಹಿಸುವದು ಯುಕ್ತವೆಂದು ತೀರ್ಮಾನವಾಯಿತು. ರೆಸಿಡೆಂಟರಾದ ಗಿಬ್ಸನರವರು ಇದನ್ನು ದರ್ಬಾರ್ ವೀರವಲರಿಗೆ ಕಳುಹಿಸಿದರು. ಆದರೆ ಠಾಕೂರು ಸಾಹೇಬರು ಇದನ್ನು ತಿರಸ್ಕರಿಸಿರುವರು.

ಶ್ರೀ ವೀರವಲರ ಸಾಗ್ನಾದ.

ದರ್ಬಾರ್ ವೀರವಲರು ಮತ್ತು ಠಾಕೂರು ಸಾಹೇಬರು ಏನಾದರೊಂದು ಸುಧಾರಣೆಯನ್ನು ಮೇಲಧಿಕಾರಿಗಳ ಒತ್ತಾಯದಿಂದ ಕೊಡುವದಾದರೆ ನನ್ನ ಅಹಿಂಸಾ ತತ್ವವು ಸೋಲಿಸಲ್ಪಟ್ಟಂತೆಯೇ ಎಂಬ ಅನುಭವವು ಈ ಕಳೆದ ಹದಿನೈದು ದಿನಗಳ ವರ್ತನೆಯಿಂದಾಗಿ ನನಗರಿತಿದೆ. ಮೇಲಧಿಕಾರಿಗಳ ಒತ್ತಾಯದಿಂದ ರಾಜರು ಸುಧಾರಣೆ ಕೊಡುವದು ಬೇಡವೆಂದು ಮೊದಲೇ ನಾನು ಸೂಚಿಸಿದ್ದೆನು. ಆದ್ದರಿಂದ ಅಧಿಕಾರಿಗಳಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದಾದ ಸಂದರ್ಭ ಬಂದಿದ್ದಾಗ ಸಾರ್ವಭೌಮ ಸರ್ಕಾರದ ಸಹಾಯ ಪಡೆಯಲು ನಾನು ಸಂತೋಷಿಸುವುದಿಲ್ಲವೆಂದು ದರ್ಬಾರ್ ವೀರವಲರಿಗೆ ಹೇಳಿರುವೆನು. ಇದೂ ಅಲ್ಲದೆ ರಾಜಕೋಟೆಯೊಂದಿಗಿರುವ ನನ್ನ ಸಂಬಂಧವೂ ಮೇಲಿನ ಕಾರ್ಯಕ್ಕೆ ಕೈ ಹಚ್ಚಲು ಹಿಂಜರಿಸುವದು. ನಾನು ರೆಸಿಡೆಂಟ್ ಗಿಬ್ಸನರಿಗೆ ಮಾಡಿದ ಸೂಚನೆಯೂ ಇದೇ ದೃಷ್ಟಿಯಿಂದಾಗಿದೆ ಎಂದೂ ಹೇಳಿರುವೆನು. ಇದಕ್ಕುತ್ತರವಾಗಿ ವೀರವಲರು 'ಕಮಿಟಿಯ ವರದಿಯಿಂದ ನೀವು ತೃಪ್ತರಾಗದಿದ್ದರೆ ಅದನ್ನು ಠಾಕೂರು ಸಾಹೇಬರ ಪ್ರಕಟಣೆ ಮೇರೆ ವಿಮರ್ಶಿಸುವ, ಪರಿಷತ್ತಿನವರು ರಿಪೋರ್ಟಿನ ಕರಡುಗಳನ್ನು ಮೆಚ್ಚದಿದ್ದಕ್ಕೆ ಅದನ್ನು ವಿರೋಧಿಸುವ ಮತ್ತು ಈ ವಿರೋಧವನ್ನು ಇಂಡಿಯಾದ ಫೆಡರಲ್ ನ್ಯಾಯಾಧೀಶರು ವಿಚಾರಿಸುವ ಹಕ್ಕಿರಬೇಕೆಂದು ನೀವನ್ನುವಿರಿ. ನೀವು ಠಾಕೂರು ಸಾಹೇಬರನ್ನು ಅವರ ಹಿತಬೋಧಕರನ್ನು ಯಾಕೆ ನಂಬಬಾರದು? ನಿಮಗೆ ಬೇಕಾದದ್ದೆಲ್ಲಾ ಅವರಿಂದ ಸಿಗಲಿಕ್ಕಿಲ್ಲ. ಆದರೆ ಅವರು ಕೊಡುವಂಥಾದ್ದು ಹೃದಯಪೂರ್ವಕ ಕೊಡುವದಾಗಿದೆ. ಪರಿಷತ್ತಿನವರು ಠಾಕೂರು ಸಾಹೇಬರ ಹಾಗೂ ನನ್ನನ್ನು ನಾನಾ ರೀತಿಯಿಂದ ತೆಗಳಿರುವರು' ಎಂದು ಹೇಳಿರುವರು.

ಹೊಸ ಮಾರ್ಗ.

ಆದ್ದರಿಂದ ನನ್ನ ಸಹೋದ್ಯೋಗಿಗಳಿಗೆ ಈ ಹೊಸ ಮಾರ್ಗವನ್ನು ಸೂಚಿಸುವೆನು. ದರ್ಬಾರ್ ವೀರವಲರೇ ರಾಜಕೋಟೆಯ ಅವ್ಯವಸ್ಥೆಗೂ, ಅವನತಿಗೂ ಕಾರಣರೆಂದೂ ಆದ್ದರಿಂದ ಅವರನ್ನು ತೆಗೆದು ಹಾಕಿದರೆ ಸಂಸ್ಥಾನಕ್ಕೆ ಸ್ವರಾಜ್ಯ ಸಿಕ್ಕುವದೆಂದೂ ಅನೇಕರು ಹೇಳಿರುವರು. ಆದರೆ ನಾನು ಹೇಳುವದೇನೆಂದರೆ ವೀರವಲರನ್ನು ತೆಗೆಯುವ ಅಗತ್ಯವಿಲ್ಲ. ನಮ್ಮ ಅಹಿಂಸಾಚರಣೆಯಿಂದ ಅವರನ್ನು ಮಾರ್ಪಡಿಸಬೇಕು. ವೀರವಲರ ಸತ್ಕಾರ್ಯಗಳನ್ನು ಹಿಂಬಾಲಿಸುವುದರಿಂದ ಅವರಲ್ಲಿ ಮಾರ್ಪಾಡು ಬೇಗನೆ ಉಂಟಾಗದಿರದು. ಕೆಲಸಗಾರರಿಗೆ ಅಹಿಂಸೆಯಲ್ಲಿ ಅವಿಚಲವಾದ ನಂಬಿಕೆ ಇರಬೇಕು. ದರ್ಬಾರ್ ವೀರವಲರಲ್ಲಿರುವ ಭಯವನ್ನು ತೊರೆದು ಅಹಿಂಸೆಯಲ್ಲಿ ನಂಬಿಕೆಯನ್ನಿಟ್ಟು ಕಾರ್ಯಪ್ರವೃತ್ತರಾದರೆ ವೀರವಲರು ತನ್ನ ಧೋರಣೆಯನ್ನು ಬದಲಾಯಿಸದೆ ಗತ್ಯಂತರವಿಲ್ಲ.

ಧೈರ್ಯಯುತರಿಗೇ ಅಹಿಂಸೆ.

ನನ್ನ ವಾಚಕರು ಮೇಲಿನ ನನ್ನ ಉದ್ಗಾರವನ್ನು ಕಂಡು, ನ್ಯಾಯಾಧೀಶರ ತೀರ್ಮಾನವನ್ನು ಕಿತ್ತೊಗೆದು ದರ್ಬಾರ್ ವೀರವಲರಲ್ಲಿ ನಂಬಿಕೆ ಇಡಬೇಕೆನ್ನುವ ಈ ಅಸಾಧ್ಯ ವರ್ತನೆಯ ಬಗ್ಗೆ ಕಸುಗಾರರೂ ನಂಬಿಕೆ ಇದೆಯೋ?" ಎಂದು ಕೇಳಿದರೆ ನನಗೆ ಆಶ್ಚರ್ಯವೇನೂ ಹುಟ್ಟಲಿಲ್ಲವೆಂದು ಹೇಳಬೇಕಾಗುವದು. ಅಹಿಂಸೆಯು ಧೈರ್ಯಯುತರಾದವರಿಗೇ ಫಲಿಸುವದು.

ಕಾತೇವಾರದ ರಾಜಕೀಯ ವಿಚಾರ.

ಆ ಪ್ರಯುಕ್ತ ನಾನು ಈಗ ನಿರಾಧಾರಿಯಾಗಿರುವೆನು. ದೇಹವು ಆಯಾಸಗೊಂಡಿರುವದು. ಜೀವಿಯು ನಿರಾಶೆಯಾಗಿರುವದು. ರಾಜಕೋಟೆಯು ಪ್ರತಿಫಲವಿಲ್ಲದ ಪರೀಕ್ಷಾ ಕ್ಷೇತ್ರವಾಗಿ ಪರಿಣಮಿಸಿತು. ಕಾತೇವಾರದ ಈ ರಾಜಕೀಯ ವಿಚಾರದಿಂದ ನನ್ನ ತಾಳ್ಮೆಗೆಟ್ಟಿದೆ. ನನ್ನನ್ನೂ ಮತ್ತು ಪಟೇರನ್ನ ವಲಂಬಿಸದೆ ದರ್ಬಾರ್ ವೀರವಲರನ್ನೇ ಅವಲಂಬಿಸುವದು ಹಿತವೆಂದು ಪರಿಷತ್ತಿನ ಕೆಲಸಗಾರರಿಗೆ ಹೇಳಿರುವೆನು. ನಾನು ಸೋತೆನೆಂದೂ, ನಿಮಗೆ ಜಯವಾಗಲೆಂದೂ ಜನತೆಯನ್ನು ತೃಪ್ತಿಪಡಿಸುವ ಪಂಚಕೆಯನ್ನು ತೆಗೆದುಕೊಳ್ಳಬೇಕೆಂದೂ ವೀರವಲರಿಗೆ ಹೇಳಿರುವೆನು."

ಕೊಡವರ ಸಮಾಜ ಸುಧಾರಣೆ.

(5ನೇ ಪುಟದಿಂದ ಸಾಗಿದ್ದು.)

ಯರಿಂದ ಕಲಿತದ್ದಾಗಿದೆ. ಕೆಲವು ಮಟ್ಟಿಗೆ ಕೊಡವ ಸುಶಿಕ್ಷಿತ ಸ್ತ್ರೀಯರಿಂದಲೂ ಈ ಸಮಾಜ ಕ್ಷೀಣತೆಯುಂಟಾಗಿದೆ. ಇಲ್ಲಿಯೂ ಹಿರಿಯರದ್ದೇ ಜವಾಬ್ದಾರಿಕೆ.

ಒಂದು ಸೂಚನೆ.

ಇತಿಹಾಸದ ಪ್ರಖ್ಯಾತ ಪುರುಷರೆಲ್ಲರೂ ಅವರ 56ನೇ ವಯಸ್ಸಿನಲ್ಲಿ ಮರಣ ಹೊಂದುವರೆಂದು ಒಂದು ಮಾತು ಕೇಳಿದ್ದೇನೆ. 55 ವರ್ಷದ ಮೇಲೆ ಬದುಕಿದಲ್ಲಿ ಸರಕಾರ ಉದ್ಯೋಗದಲ್ಲಿದ್ದವರು 'ಅಡ್ಲೋ ಮರ್ಲ್ಲೋ' ಎಂಬಂತಾಗುತ್ತಾರಂತೆ. ಕೊಡಗಿನಲ್ಲಿಯೂ ಪ್ರಖ್ಯಾತಿಪಟ್ಟವರು ತುಂಬಾ ಇದ್ದಾರೆ. ಬ್ರಿಟಿಷ ಸರಕಾರವು 55 ವಯಸ್ಸಿನಲ್ಲಿ ಉದ್ಯೋಗದಿಂದ ನಿವೃತ್ತಿ ಮಾಡುವುದಕ್ಕೆ ಇದೇ ಕಾರಣವಿದೆ. 1 ವರ್ಷದಲ್ಲಿ; ತಮ್ಮ ಪಾಪಕರ್ಮಗಳೇನಾದರೂ ಇದ್ದರೆ ತೀರ್ಥಯಾತ್ರೆ ಮಾಡಿ, ಅವನ್ನು ಪರಿಹರಿಸಿ, 56ನೇ ವಯಸ್ಸಿನಲ್ಲಿ ಶಾಂತಿಪಡೆಯಲಿ ಎಂದು. ಆದರೆ, ಕೊಡಗಿನಲ್ಲಿ ಈ ಪಾಪಗಳು ಹೆಚ್ಚುತ್ತಿವೆ. ಒಮ್ಮೊಮ್ಮೆ ಉದ್ಯೋಗದಲ್ಲಿಲ್ಲದವರೂ ಸಹ ಈ ಪಾಪಗಳಲ್ಲಿ ಭಾಗಿಗಳಾಗುತ್ತಾರೆ. ಕೊಡಗಿನಲ್ಲಿರುವ ಸಮಾಜಪ್ರೇಮಿಗಳೂ ತಟಸ್ಥರೂ ವಿಷಯ ಬಾಕಿ ಹಿರಿಯರೆಲ್ಲರೂ ಸೇರಿ, ಈ ವಿಷಯ ಆಲೋಚಿಸಿ ಕೊಡಗಿನಿಂದ ಕಾಶೀಯಾತ್ರೆ ಮಾಡಲು ಹೊರಹೊರಟರೆ ಅವರು ಕೊಡವ ಸಮಾಜಕ್ಕೆ ಅಪಾರ ಸೇವೆ ಮಾಡಿದಂತಾಗುತ್ತದೆ.

ಬಾವಲಿ.

ಬಾವಲಿ ಗ್ರಾಮಕ್ಕೆ
ಚೀಫ್ ಕಮಿಶನರವರ ಆಗಮನ.

ಈ ಐದಾರು ತಿಂಗಳುಗಳಿಂದ ಕಡಿಯತ್ತುನಾಡು ಬಾವಲಿ ಗ್ರಾಮಸ್ಥರು ಶ್ರೀ ಬಿದ್ದಂಡ ಯಂ. ಕಾರ್ಯಪ್ಪ ಎಂ. ಎಲ್. ಸಿ. ಯವರ ಅಭಿಪ್ರಾಯದ ಮೇರೆ ಹೇಗೆ ಒಗ್ಗಟ್ಟಿನ ಕೆಲಸದಿಂದ ರೈತರನ್ನು ಸಾಲದಿಂದ ವಿಮುಕ್ತರನ್ನಾಗಿ ಮಾಡುವದು, ಅವರಲ್ಲಿ ಸರಳ ಜೀವನವನ್ನು ಹೇಗೆ ತರುವದು ಮತ್ತು ಗ್ರಾಮದ ಆರೋಗ್ಯವನ್ನು ಹೆಚ್ಚಿಸುವದು ಇವೇ ಮೊದಲಾದ ವಿಚಾರ ಕಾರ್ಯರೂಪದಲ್ಲಿ ಕೆಲಸ ಮಾಡುತ್ತಲಿರುವರು. ಈ ಕೆಲಸವನ್ನು ಕೈಕೊಳ್ಳಲು ಮುಖ್ಯ ಕಾರಣವೆಂದರೆ ಈಗಿನ ಗ್ರಾಮದ ಜನರಲ್ಲಿ ಇರುವ ಬಡತನ, ಅನಾರೋಗ್ಯ, ತತ್ಪರಿಣಾಮವಾಗಿ ಒದಗುವ ಅಧೀನತೆಯನ್ನು ಹೋಗಲಾಡಿಸಿ, ಪ್ರತಿಯೊಬ್ಬ ವ್ಯಕ್ತಿಯಲ್ಲೂ, ಸಮುದಾಯದ ಮೇಲ್ಮೆಗಾಗಿ ದುಡಿಯಲು ಅವಕಾಶ ದೊರೆಯುವಂಥಾ ವ್ಯಕ್ತಿ ಸ್ವಾತಂತ್ರ್ಯವನ್ನು ಅಭಿವೃದ್ಧಿಪಡಿಸುವದೇ ಆಗಿರುತ್ತೆ. ಈ ದೃಷ್ಟಿಯಿಂದ ಬಾವಲಿ, ಕೋಣಜಗೇರಿ ಇವೆರಡು ಗ್ರಾಮಕ್ಕಾಗಿದ್ದಂಥಾ ಸಹಕಾರಿ ಸಂಘವನ್ನು ಒಡೆದು ಬಾವಲಿ ಗ್ರಾಮಕ್ಕೆ ಪ್ರತ್ಯೇಕವಾಗಿ ಒಂದು ಸಂಘವನ್ನು ಏರ್ಪಡಿಸಿ ಸಂಘವು 'ಬಾವಲಿ ಸಹಕಾರಿ ಸಂಘ'ವೆಂಬ ಹೆಸರಿನಲ್ಲಿ ಕೆಲಸ ಮಾಡುತ್ತಿರುವದು. ಈ ಸಂಘದ ಪ್ರಯತ್ನದ ಫಲಿತಾಂಶವಾಗಿ ಎಲ್ಲರೂ ಸೇರಿ ಒಗ್ಗಟ್ಟಿನ ಕೆಲಸದಿಂದ, ದನಗಳ ಪೋಷಣೆಗಾಗಿ ಲಂತಾನ ನಿರ್ಮೂಲ, ಆರೋಗ್ಯ ದೃಷ್ಟಿಯಿಂದ ಗ್ರಾಮದಲ್ಲಿರುವ ಪ್ರತಿಯೊಂದು ಮನೆಗೂ ಪಾಯಿಖಾನೆ ಗುಂಡಿ,(Bore-hole pits) ಮತ್ತು ಗ್ರಾಮದ ಸಾಲವನ್ನು ತೀರಿಸುವ ದೃಷ್ಟಿಯಿಂದ ಹಾಗೂ ಅವರ ಆವಶ್ಯಕತೆಗಳನ್ನು ಒದಗಿಸಿಕೊಳ್ಳುವ ಪ್ರಯುಕ್ತ ಲಂತಾನ ಕಡಿದು ಒಂದು ಹೊಲ (ಮಾಡ್) ವನ್ನು ಮಾಡಿಕೊಂಡಿರುವದಲ್ಲದೆ ಇನ್ನು ಕೆಲವು ಕೆಲಸಗಳನ್ನು ಮಾಡುತ್ತಲಿರುವರು.

ಈ ಸಂದರ್ಭದಲ್ಲಿ ಚೀಫ್ ಕಮಿಶನರವರು, ಕಮಿಶನರು ಮತ್ತು ಸೆಕ್ರೆಟರಿಯವರೊಂದಿಗೆ ಸ್ವತಃ ಬಂದು ಕೆಲಸಗಳನ್ನು ಖುದ್ದಾಗಿ ನೋಡಿ ಮನವರಿಕೆ ಮಾಡಿಕೊಳ್ಳಲಿಕ್ಕೂ ಮತ್ತು ಗ್ರಾಮದ ಸ್ಥಿತಿಗತಿಗಳನ್ನು ಖುದ್ದಾಗಿ ಅರಿತುಕೊಳ್ಳಲಿಕ್ಕೂ ತಾರೀಕ್ 23-4-39ನೇ ಆದಿತ್ಯವಾರ ದಿವಸ ಬೆಳಿಗ್ಗೆ 11 ಗಂಟೆಗೆ ಬಾವಲಿ ಗ್ರಾಮಕ್ಕೆ ಬಂದಿದ್ದರು. ಈ ವರೆಗೆ ಗ್ರಾಮಸ್ಥರು ಮಾಡಿದ ಮತ್ತು ಮಾಡುತ್ತಲಿರುವ ಕಾರ್ಯಕಲಾಪಗಳನ್ನು ಅವರು ಖುದ್ದಾಗಿ ನೋಡಿಕೊಂಡು, ಗ್ರಾಮಸ್ಥರು ಹಾಕಿದ ಚಪ್ಪರದಡಿಯಲ್ಲಿ ಕುಳಿತನಂತರ ಗ್ರಾಮಸ್ಥರ ಪರವಾಗಿ ಶ್ರೀಯುತ ಬಿ. ಯಂ. ಕಾರ್ಯಪ್ಪ ಯಂ. ಯಲ್. ಸಿ. ಯವರು ಅತಿಥಿಗಳನ್ನು ಮರ್ಯಾದೆ ಪೂರ್ವಕವಾಗಿ ವಂದಿಸಿ, ಸಂಘದ ಗುರಿಯನ್ನು, ಸಾಧಿಸಲು ಅನುಸರಿಸುವ ತತ್ವವನ್ನೂ, ಸರ್ಕಾರದವರು ಮಾಡಿದ ಮತ್ತು ಮಾಡಬೇಕಾದ ಕರ್ತವ್ಯವನ್ನೂ ಸಹ ಸಂಕ್ಷೇಪವಾಗಿ ಸೂಚಿಸಿದ ನಂತರ, ಚೀಫ್ ಕಮಿಷನರ್ ಸಾಹೇಬರವರು, ಇದಕ್ಕೆ ಮೊದಲು ಮತ್ತು ಈಗಲೂ ಸೂಚಿಸಿದ ಕೋರಿಕೆಗಳಿಗೆ ಪ್ರತ್ಯೇಕವಾಗಿ ಉತ್ತರವನ್ನಿತ್ತು; ಗ್ರಾಮಸ್ಥರೆಲ್ಲರೂ ಒಗ್ಗಟ್ಟಿನಲ್ಲಿ ಗ್ರಾಮದ ಸುಖ ಸಾಧನೆಗೆ ಪ್ರಯತ್ನಿಸುವದು ಬಹಳ ಸ್ತೋತ್ರಾರ್ಹವಾಗಿದೆಯೆಂದೂ, ಈ ಕೆಲಸವನ್ನು ಪಟ್ಟಾಗಿ ಸಾಧಿಸಲು ಸರ್ವ ಪ್ರಯತ್ನ ಮಾಡಬೇಕಾದ್ದು ಬಹಳ ಆವಶ್ಯವಿರುತ್ತವೆಂದೂ, ಈ ಕೆಲಸ ಮಾಡುತ್ತಿರುವಾಗ್ಯೆ ಬರಬಹುದಾದ ತೊಂದರೆಗಳಿಗೆ ಮನಗುಂದದೆ ಧೈರ್ಯದಿಂದ ವರ್ತಿಸಿ ದೇಶಕ್ಕೆ ಒಂದು ಮಾದರಿಯನ್ನು ತೋರಿಸಬೇಕೆಂದೂ, ಈ ಪ್ರಯತ್ನದಲ್ಲು, ಸರ್ಕಾರದವರು ಮಾಡಬೇಕಾದ ಕರ್ತವ್ಯವನ್ನು ಸಾಧ್ಯವಾದ ಮಟ್ಟಿಗೆ ಮಾಡಲು ಹಿಂಜರಿಯುವುದಿಲ್ಲವೆಂದೂ ಹೇಳಿ ಭಾಷಣ ಮಾಡಿದರು. ಸಮಾರಂಭ ಮುಗಿದನಂತರ ಹತ್ತಿರವಿರುವ ಬಿದ್ದಂಡ ದೊಡ್ಡ ಮನೆಯಲ್ಲಿ ಸ್ವಲ್ಪ ತಿಂಡಿ ತೀರ್ಥಗಳನ್ನು ಸ್ವೀಕರಿಸಿ ಬಾವಲಿ ಗ್ರಾಮದಿಂದ ಸುಮಾರು 1 ಗಂಟೆಗೆ ವಾಪಸು ತೆರಳಿದರು.

'ಗ್ರಾಮಸ್ಥ.'

ಭಾರತವು ಸ್ವತಂತ್ರವಾಗಬಲ್ಲುದು ಹೇಗೆ?

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ನಮ್ಮನ್ನು ನಾವು ಆಳಬೇಕು ಅದೇ ಸ್ವರಾಜ್ಯ. ನಾವು ಗುಲಾಮಗಿರಿಯಲ್ಲಿದ್ದುಕೊಂಡು ಇತರರನ್ನು ರಕ್ಷಿಸುವದು ಅವಿವೇಕ. ಬ್ರಿಟಿಷರು ಅವರ ನಾಗರೀಕತೆಯೊಂದಿಗೆ ಭಾರತದಲ್ಲಿ ಜೀವಿಸುವದು ಅಸಾಧ್ಯ. ಭಾರತೀಯರ ನಡವಳಿಕೆಯನ್ನು ಅಂಗೀಕರಿಸಿದರೇನೇ ಅವರಿಗೆ ಭಾರತದಲ್ಲಿ ಸ್ಥಾನ. ಭಾರತದ ನಾಗರೀಕತೆಯು ಮುಂದೆ ವಿಶಾಲ ಭಾರತದಲ್ಲಿ ವಿಸ್ತರಿಸಿ ಬೆಳಗಬೇಕು. ಅಂದೇ ಭಾರತೋದ್ಧಾರ. ಪರದಾಸ್ಯ ಶೃಂಖಲೆಯ ಪರಿಹಾರ. ಕಾಂಗ್ರೆಸ್ಸಿಗೆ ಜಯಕಾರ.

ನಾಗರೀಕತೆಯೆಂದರೇನು? ಎಂಬ ವಿಚಾರ ನಮ್ಮ ಕಳೆದ ಲೇಖನದಲ್ಲಿ ವಿವರಿಸಿದೆವು. ಇದರಿಂದ ಭಾರತವು ಯಾವ ಜನಾಂಗದಿಂದಲೂ ನಾಗರೀಕತೆಯನ್ನು ಕಲಿಯಬೇಕಿಲ್ಲ. ತನ್ನ ನಾಗರೀಕತೆಯನ್ನು ಅದು ಇಂದಿನ ಆಧುನಿಕ ನಾಗರೀಕತೆಯೆನಿಸುವ ಆ ಥಳಕಿನ ಸೊಬಗಿಗೆ ಮಾರಿಕೊಳ್ಳಲಿಲ್ಲ. ಆದ್ದರಿಂದ ಇಂದೂ ಸಹ ಭಾರತ ಭೂಮಿಯು ಮಿಕ್ಕ ರಾಷ್ಟ್ರಗಳಿಗೆ ಮಾದರಿಯಂತಿರುವದು ಎಂದು ವಾಚಕರಿಗೆ ಖಚಿತವಾಗಿರಬಹುದು. ಆದರೆ ಅದರೊಂದಿಗೇ ಭಾರತವು ಇಂಥಾ ಉಚ್ಛನಾಗರೀಕತೆಯನ್ನು ಹೊಂದಿದ್ದ ಪಕ್ಷ ಇಂದು ಅದರ ಪರದಾಸ್ಯತೆಗೆ ಕಾರಣವೇನು? ಅದನ್ನು ಕಿತ್ತೊಗೆಯುವ ವಿಧಾನವೆಂತು? ಎಂಬ ಪ್ರಶ್ನೆಗಳು ಮೂಡುವದು ವಾಸ್ತವ. ಆದ್ದರಿಂದ ಆ ಬಗ್ಗೆ ಈ ಲೇಖನದಲ್ಲಿ ತರ್ಕಿಸಿರುವೆವು.

ಭಾರತದ ಪ್ರಾಚೀನ ನಾಗರೀಕತೆಯು ಅತ್ಯುತ್ತಮವಾದದ್ದೆಂಬುದು ನಿರ್ವಿವಾದ. ಆದರೆ ಜಗತ್ತಿನ ಎಲ್ಲಾ ನಾಗರೀಕತೆಗಳು ಪರೀಕ್ಷಿಸಲ್ಪಡುತ್ತಿವೆ. ಈ ಪರೀಕ್ಷೆಯಿಂದಾಗಿ ಅಳಿಯದೆ ಉಳಿಯುವದೇ ನಿಜವಾದ ನಾಗರೀಕತೆ. ಭಾರತಮಾತೆಯ ನಿಜವಾದ ಪುತ್ರರ ಅಭಾವವೇ ನಮ್ಮ ಆರ್ಯ ನಾಗರೀಕತೆಯ ಕಣ್ಮರೆಗೆ ಕಾರಣ. ಆದರೆ ಇಂದಿನ ಆಧುನಿಕ ನಾಗರೀಕತೆಯ ಕರಾಳ ಹಸ್ತದಲ್ಲಿ ವಿವಿಧ ಜನಾಂಗಗಳ ನಾಗರೀಕತೆಯು ಮಾಯವಾಗಿ ಹೋಗುತ್ತಿರುವಾಗ ಭಾರತ ನಾಗರೀಕತೆಯು ತತ್ತರಿಸುತ್ತಾ ತನ್ನ ಜೀವ ಹಿಡಿದು ಉಳಿದಿರುವದು ಹೆಮ್ಮೆಯ ಮಾತು. ಆ ಪಾಶವೀನವನಾಗರೀಕತೆಯನ್ನು ಅದು ಇನ್ನೂ ಎದುರಿಸುತ್ತಿದೆಯೆಂದರೆ ಆ ಭಾರತ ನಾಗರೀಕತೆಯ ಅಡಿಗಲ್ಲು ಎಷ್ಟು ಭದ್ರವಾಗಿದೆಯೆಂಬುದು ವಿಶದವಾಗುವದು. ಪ್ರತಿಯೊಬ್ಬ ಮಾನವನು ಆತನ ಅಂತಸ್ಥಿನಿಂದ ಇನ್ನೊಬ್ಬನನ್ನು ಅಳೆಯುವದು ವಾಡಿಕೆ. ಅದರಂತೆಯೇ ಆಧುನಿಕ ನಾಗರೀಕತೆಯ ಉಪಟಳಕ್ಕೆ ಸಿಕ್ಕಿ ದಿಕ್ಕು ಕಾಣದಿರುವ ನಾವಾದರೂ ಇಡೀ ಭಾರತವೇ ಪರದಾಸ್ಯ ಶೃಂಖಲೆಗಳಿಂದ ಬಂಧಿತವಾಗಿರುವದೆಂಬುದು ಅವಿವೇಕ. ಬದಲು ನಾವು ಸ್ವತಂತ್ರರಾದರೆ ಇಡೀ ಭಾರತವೇ ಸ್ವತಂತ್ರವಾದಂತೆ ಎಂದು ಪ್ರತಿಯೊಬ್ಬನೂ ತಿಳಿಯಬೇಕು. ಇದೇ ಸ್ವರಾಜ್ಯದ ತಳಹದಿ. ನಮ್ಮನ್ನು ನಾವು ಆಳಲಿಕ್ಕೆ ಕಲಿತರೆ ಅದೇ ಸ್ವರಾಜ್ಯ. ಆದ್ದರಿಂದ ಸ್ವರಾಜ್ಯವು ನಮ್ಮ ಅಂಗೈಯಲ್ಲಿರುವದು. ಈ ಸ್ವರಾಜ್ಯವನ್ನು ಕನಸೆಂದು ಯಾರೂ ಕನವರಿಸಬಾರದು. ಆದ್ದರಿಂದ ನಾವು ನಿವರಿಸಲೆತ್ನಿಸುವ ಸ್ವರಾಜ್ಯದ ಗುರಿಯನ್ನು ಒಬ್ಬನು ಮುಟ್ಟಿದ ನಂತರ ಇತರರೂ ಆ ಗುರಿಯನ್ನು ಮುಟ್ಟುವಂತೆ ಸಹಕರಿಸಬೇಕು. ಆದರೆ ಅಂಥಾ ಸ್ವರಾಜ್ಯವನ್ನು ಪ್ರತಿಯೊಬ್ಬನೂ ತಾನಾಗಿಯೇ ಸಂಪಾದಿಸಿಕೊಳ್ಳಬೇಕು. ಮುಳುಗುತ್ತಿರುವ ಒಬ್ಬ ಮನುಷ್ಯನು ಮತ್ತೊಬ್ಬನನ್ನು ರಕ್ಷಿಸಲಾರ. ನಾವು ಗುಲಾಮರಾಗಿಕೊಂಡು ಇತರರನ್ನು ಪರದಾಸ್ಯದಿಂದ ತಪ್ಪಿಸಲೆತ್ನಿಸುವದು ಅವಿವೇಕ. ಬ್ರಿಟಿಷರನ್ನು ಭಾರತದಿಂದ ನಿವೃತ್ತರನ್ನಾಗಿ ಮಾಡಬೇಕೆಂಬ ಧ್ಯೇಯ ಅನಾವಶ್ಯಕ. ಈ ಬ್ರಿಟಿಷರು ನಡವಳಿಕೆಯಲ್ಲಿ ಭಾರತೀಯರಾದರೆ ಭಾರತದಲ್ಲಿ ಅವರಿಗೆ ಸ್ಥಳ ಸಿಗುವದು. ಅವರು ಭಾರತದಲ್ಲಿ ಅವರ ನಾಗರೀಕತೆಯೊಂದಿಗೆ ಬದುಕಿ ಬಾಳಬೇಕೆಂದಿದ್ದರೆ ಅವರಿಗೆ ಖಂಡಿತಾ ಸ್ಥಳಸಿಗದು. ಅವರ ನಾಗರೀಕತೆಯು ಮಾಯವಾಗಬೇಕು. ಇಂಥಾ ಪರಿಸ್ಥಿತಿಯನ್ನು ಉಂಟುಮಾಡುವದು ನಮ್ಮ ಕೈಯಲ್ಲಿದೆ.

ಈ ಸಂದರ್ಭದಲ್ಲಿ ಬ್ರಿಟಿಷರು ಭಾರತೀಯರ ನಡವಳಿಕೆಗಳನ್ನು ಅನುಸರಿಸುವರೇ? ಅದು ಅವರಿಗೆ ಸಾಧ್ಯವೇ? ಎಂಬ ಪ್ರಶ್ನೆಯು ಉದ್ಭವಿತವಾಗುವದು. ಆದರೆ ಇಂಥಾ ಒಂದು ಪ್ರಶ್ನೆ ಕೇಳುವದೆಂದರೆ ಬ್ರಿಟಿಷರಿಗೆ ಮನುಷತ್ವವಿಲ್ಲವೆಂದಂತೆ. ಅದಿರಲಿ, ನಾವು ನಮ್ಮ ಮನೆಯನ್ನು ನಮ್ಮ ಇಚ್ಛೆಯಂತೆ ಇಟ್ಟುಕೊಂಡ ಪಕ್ಷಕ್ಕೆ ನಮ್ಮಂತೆ ಮನವಿರುವವರು ಮಾತ್ರ ಅಲ್ಲಿ ವಾಸಿಸಲು ಒಪ್ಪುವರು. ವಿರೋಧ ಅಭಿಪ್ರಾಯವಿರುವವರು ತಾವಾಗಿಯೇ ಮನೆಯನ್ನು ಬಿಟ್ಟು ಬಿಡುವರು. ಇದು ಎಲ್ಲರ ಅನುಭವಕ್ಕೂ ಬಂದ ವಿಚಾರ. ಯಾವ ಜನಾಂಗದ ಚರಿತ್ರೆಯಲ್ಲೂ ಈ ವರೆಗೆ ಇಂಥಾ ವಿಚಾರಗಳು ನಡೆದಿಲ್ಲ. ಅದು ಭಾರತದಲ್ಲಿ ನಡೆಯಲು ಸಾಧ್ಯವೇ ಎಂಬ ಸಂದೇಹವೂ ಬರಬಹುದು. ಆದರೆ ಆ ಸಂಶಯಕ್ಕೂ ಇಲ್ಲಿ ಎಡೆ ಇಲ್ಲ. ಎಲ್ಲಾ ದೇಶಗಳೂ ಒಂದೇ ಮಾದರಿಯವು ಅಲ್ಲ. ಭಾರತವು ಅಮೋಘ ಚರಿತ್ರೆಯುಳ್ಳ ದೇಶ. ಅದರ ಶಕ್ತಿಯನ್ನು ಊಹಿಸಲಸದಳ; ಆದ್ದರಿಂದ ಬೇರೆ ರಾಷ್ಟ್ರಗಳ ಚರಿತ್ರೆಯನ್ನು ನೋಡುವ ಅಗತ್ಯವೇ ಇಲ್ಲ. ಇದಕ್ಕೆ ಒಂದೇ ನಿದರ್ಶನ. ನಾವು ಮೇಲೆ ವಿವರಿಸಿದಂತೆ ಅಮೋಘ ರಾಷ್ಟ್ರಗಳ ನಾಗರೀಕತೆಯು ಇಂದಿನ ನವನಾಗರೀಕತೆಯ ಅಂಕೆಯೊಳಗೆ ಸೇರಿರುವಾಗ ಭಾರತ ನಾಗರೀಕತೆಯು ಇಂಥಾ ಅನೇಕ ತೊಡರುಗಳನ್ನು ನೀಗಿ ಜೀವಿಸಿಲ್ಲವೇನು? ಬ್ರಿಟಿಷರು ಭಾರತದಿಂದ ಹೋಗಬೇಕು. ಅವರು ದೇಶದಲ್ಲಿರುವ ವರೆಗೆ ಶಾಂತಿ ದೊರಕದು. ನಮ್ಮ ಪುರಾತನ ಕವಿವರ್ಯರು ಹೇಳಿರುವಂತೆ ಗುಲಾಮರು ಸುಖವನ್ನು ಕನಸಿನಲ್ಲಿಯೂ ಕಾಣರು. ನಾವು ದಿನೇ ದಿನೇ ಬ್ರಿಟಿಷರ ಸಂಪರ್ಕದಿಂದ ಅಬಲರಾಗುತ್ತಿರುವೆವು. ನಮ್ಮ ಗೌರವ ಪ್ರತಿಷ್ಠೆಗಳು ಮಾಯವಾದವು. ನಮ್ಮ ಜನತೆಯು ವಿಪನ್ಮಾನಸ್ಥಿಯನ್ನು ಹೊಂದಿರುವದು. ಬ್ರಿಟಿಷರು ಭಾರತದಲ್ಲಿ ಸಾಂಕ್ರಾಮಿಕರೋಗದಂತಿರುವರು. ಅದನ್ನು ನಿವಾರಿಸಲು ಸರ್ವವಿಧದಿಂದಲೂ ನಾವು ಪ್ರಯತ್ನಿಸಬೇಕು.

ನಾವು ಬ್ರಿಟಿಷರನ್ನು ಭಾರತಕ್ಕೆ ಆಹ್ವಾನಿಸಿದವರು. ಅವರ ಚಲನವಲನಗಳನ್ನು ಅನುಸರಿಸಿ, ಅವರ ಇರುವಿಕೆಯನ್ನು ಭಾರತದಲ್ಲಿ ಸ್ಥಿರಪಡಿಸಿದವರು ನಾವು. ಇಂದು ನಾವು ಅವರ ನಾಗರೀಕತೆಯನ್ನು ಅಲ್ಲಗಳೆದರೆ ಅದರಿಂದ ಅವರು ಭಾರತವನ್ನು ಬಿಡುವ ಸಂಭವವಿಲ್ಲವೆ? ಅವರನ್ನು ಭಾರತದಿಂದ ನಿವೃತ್ತಿಗೊಳಿಸಬೇಕಾದರೆ ಯುದ್ಧವನ್ನೇ ಕೈಕೊಳ್ಳಬೇಕಾಗುವದು. ಆದ್ದರಿಂದ ಅಂಥಾ ಸಂದರ್ಭದಲ್ಲಿ ಅದು ಹೇಗೆ ಸಾಧ್ಯ? ಬ್ರಿಟಿಷರನ್ನು ಹೇಗೆ ಯುದ್ಧದ ಮುಖಾಂತರ ಹೊಡೆದೋಡಿಸಲಿಕ್ಕಾಗುತ್ತದೆ? ಎಂಬ ಪ್ರಶ್ನೆ ಬರುವದು. ಅದಕ್ಕೆ ಉತ್ತರವಿಷ್ಟೆ. ಒಂದು ಕಾಲಕ್ಕೆ ಪರದಾಸ್ಯದಲ್ಲಿ ನರಳುತ್ತಿದ್ದ ಇಟೆಲಿಯು ಹೇಗೆ ತನ್ನ ಸ್ವಾತಂತ್ರ್ಯವನ್ನು ಸಾಧಿಸಿತು. ಅದೇ ಮಾರ್ಗವಾಗಿದೆ. ಮುಂದಿನ ವಾರ ಹೇಗೆ ಇಟೆಲಿಯು ತನ್ನ ಸ್ವಾತಂತ್ರ್ಯವನ್ನು ಗಳಿಸಿತು; ಆ ಮಾದರಿಯನ್ನು ಭಾರತವು ಹೇಗೆ ಜಾರಿಗೆ ತರಬಹುದು ಎಂಬ ವಿಚಾರ ಬರೆಯುವೆವು.

ಪುನರ್ಜನ್ಮವಿದೆಯೇ?

ಕೌಂಟೆಸ್ ನೋರಾ ವ್ಯಾಡನ್ ಬ್ರಕ್ ಇವರ ಅಭಿಪ್ರಾಯ.

ಪುನರ್ಜನ್ಮವಿದೆಯೋ ಇಲ್ಲವೋ ಎಂಬ ಪ್ರಶ್ನೆಯನ್ನು ಕುರಿತು ಮತ ವಿಭಾಗವಿದೆ. ಪುನರ್ಜನ್ಮವುಂಟೆಂಬದನ್ನು ಅನೇಕರು ಒಪ್ಪುವರು. ನ್ಯೂಟನನು ತನ್ನ ಮೊದಲನೆಯ ಸೂತ್ರದಲ್ಲಿ ಪ್ರತಿಯೊಂದು ಕ್ರಿಯೆಗೂ ಸಮಾನವಾದ ಪ್ರತಿಕ್ರಿಯೆ ಇದೆಯೆಂಬುದನ್ನು, ಸಾಧಾರಪೂರ್ವಕವಾಗಿ ಸಿದ್ಧ ಮಾಡಿದ್ದಾನೆ. ಅದೇ ರೀತಿ ಜನ್ಮ ಹಾಗೂ ಪುನರ್ಜನ್ಮ ಉಂಟೆಂಬದನ್ನು ನಾವಾದರೂ ಒಪ್ಪಿಕೊಳ್ಳಬೇಕಾಗುವದು. ನನ್ನೊಬ್ಬ ಮಿತ್ರನು ಈ ಬಗ್ಗೆ ಸಂಬಂಧಿಸಿದ ಒಂದು ಕಥೆಯನ್ನು ಹೇಳಿ ಪುನರ್ಜನ್ಮವಿದೆಯೆಂದು ಸ್ಪಷ್ಟ ಮಾಡಿದ್ದಾರೆ. ಅವನ ಹೆಸರು ಫ್ರಾಂಜಿ ಎಂದು. ಅವರು ಮ್ಯೂನಿಕ್ ನಗರದಲ್ಲಿ ಸುಪ್ರಸಿದ್ಧ ಫೋಟೋಗ್ರಾಫರರಾಗಿದ್ದರು. ಅವರಿದ್ದ ಕಟ್ಟಡದಲ್ಲಿಯೇ ಮೇಲಿನ ಅಟ್ಟದಲ್ಲಿ ಇನ್ನೊಬ್ಬ ಮನುಷ್ಯನು ವಾಸ ಮಾಡುತ್ತಿದ್ದನು. ಒಂದು ದಿನ ಫ್ರಾಂಜಿಯು ಮಗಳ ತಕ್ಕ ಸಿದ್ಧತೆಯನ್ನು ಮಾಡುತ್ತಿರುವಾಗ ಬಾಗಿಲನ್ನು ತೆರೆಯುವಂತೆ ಕೂಗಿದಂತೆ ಕೇಳಿಸಿತು. ಫ್ರಾಂಜಿಯು ಬಾಗಿಲನ್ನು ತೆರೆದನು. ಅಷ್ಟರಲ್ಲಿ ಆ ಮನುಷ್ಯನು ಮೇಲಿನ ಅಟ್ಟದಿಂದ ಬಂದ. ತನ್ನ ಮಿತ್ರನೆಂಬುವುದು ಅವರಿಗೆ ಸ್ಪಷ್ಟವಾಯಿತು. ಆ ಮಿತ್ರನು ಮಾತ್ರ ಬಹಳ ಗಾಬರಿಗೊಂಡಿದ್ದನು. ಫ್ರಾಂಜಿಯು ಬಹಳ ಆದರದಿಂದ ನಡಿಸಿದನು. ಅಷ್ಟರಲ್ಲಿ ಆರಳಿ ಎಲೆಯಂತೆ ನಡುಗುತಿದ್ದ ಆ ಮಿತ್ರನು ಹೀಗೆಂದು ನುಡಿದನು ....

'ನಾನು ಹಾಸಿಗೆಯ ಮೇಲೆ ಒರಗಿಕೊಂಡು ಓದುತ್ತಿದ್ದೆನು. ಕೋಣೆಯಲ್ಲಿ ಇನ್ನೊಬ್ಬರು ಯಾರೋ ಇರುವಂತೆ ನನಗೆ ಭಾನವಾಯಿತು. ನನ್ನ ಹಾಸಿಗೆಯ ಬಳಿ ಒಬ್ಬ ಮುಪ್ಪಿನ ಮುದುಕನು ನಿಂತಿದ್ದನು. ನನ್ನನ್ನು ಅವನು ನೋಡಿ ಹೇಳಿದ್ದೇನಂದರೆ:-'ನನಗೆ ಸಾಕಾಯಿತು. ಈ ದೇಹವನ್ನು ವಿಸರ್ಜನೆ ಮಾಡುವೆನು. ನನ್ನ ಆತ್ಮವು ಇನ್ನೊಂದೆಡೆಯಲ್ಲಿ ಜನ್ಮವೆತ್ತಬೇಕು' ನಾನು ಹಾಸಿಗೆಯಿಂದ ಎದ್ದು ಅಂಜಿಕೆಯಿಂದ ಹೊರಗೆ ಓಡಿ ಬಂದೆನು. ಹೀಗೆ ಅವರೊಳಗೆ ಬಹಳ ಹೊತ್ತಿನ ವರೆಗೆ ಸಂಭಾಷಣೆ ನಡೆಯಿತು. ಮರುದಿನ ಸುದ್ದಿ ಬಂತು ನೆರೆಯಲ್ಲಿದ್ದ ಮೋಲ್ಡಿಚಾರರ ಮಗಳು ಅನಿರೀಕ್ಷಿತವಾಗಿ ಅಕಾಲದಲ್ಲಿ ಹಡೆದಳೆಂದು ವರ್ತಮಾನವು ಪಸರಿಸಿತು. ಆ ಮುದುಕನು ಅಂದು ಅದೃಶ್ಯವಾದ ಸಮಯವೂ,ಮಗುವು ಜನ್ಮವೆತ್ತಿದ ಸಮಯವೂ, ಒಂದೆಯಾಯಿತು.

ಹೀಗೆ ಅನೇಕ ಕಥೆಗಳಿವೆ. ಅವೇನೂ ಕಟ್ಟು ಕಥೆಗಳಲ್ಲ. ಪುನರ್ಜನ್ಮವೆಂಬುವುದು ಇದೆಯೆಂಬುವದನ್ನು ಎಲ್ಲರೂ ನಂಬಬಹುದು.

ಈ ವರ್ಷ ಯುದ್ಧವಿಲ್ಲ.

ಕಲ್ಕತ್ತೆಯ ಜ್ಯೋತಿಷ್ಕರೊಬ್ಬರು—1939 ಕಳೆಯುವ ವರೆಗೂ ಪೃಥ್ವಿಯಲ್ಲಿ ಪ್ರತ್ಯಕ್ಷ ಯುದ್ಧವಾಗುವುದಿಲ್ಲ. ಮಾತ್ಸರ್ಯಗಳು ಹೆಚ್ಚಿದರೂ ಯುದ್ಧ ಸಿದ್ಧತೆ ಬಲವಾದರೂ ಶಾಂತಿ ಸನ್ನಾಹಗಳೂ ಹೆಚ್ಚುತ್ತವೆ. ಇಂದಿನ ದಬ್ಬಾಳಿಕೆಗಳಿಗೆಲ್ಲಾ ಆಧಾರ ಸ್ತಂಭವಾಗಿರುವ ಹಿಟ್ಲರ್ ಮುಸಲಿನಿಗಳಿಗೆ ಇನ್ನು ಮುಂದೆ ಘನತೆ ಉಳಿಯುವುದಿಲ್ಲ. ಜರ್ಮನಿ ಮತ್ತು ಇಟೆಲಿಗಳಲ್ಲಿ ಅಂತಃಕಲಹಗಳೇಳುವವು ಎಂದು ಹೇಳಿದ್ದಾರೆ. ಅವರ ಎಣಿಕೆಯಂತೆ 1940 ಯುದ್ಧಕಾಲ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 22-4-39 ರಲ್ಲು ಬ್ಯಾಂಕು ಆಫೀಸಿನಲ್ಲಿ ಬೆಳಿಗ್ಗೆ 11 ಗಂಟೆಗೆ ಶ್ರೀಮಾನ್ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಪಿ. ಜಿ. ಐಯ್ಯಪ್ಪನವರು, 3. ರಾ. ಬ. ಪಿ. ದೇವಯ್ಯನವರು, (ಟ್ರೆಜರರ್) 4. ಯಂ. ಸಿ. ದೇವಯ್ಯನವರು, 5. ಕೆ. ಕೆ. ಗಣಪತಿಯವರು, 6. ಕೆ. ಸಿ. ಕರುಂಬೈಯ್ಯನವರು, 7. ಐ. ಪಿ. ಕಾರ್ಯಪ್ಪನವರು, 8. ಪಿ. ಸಿ. ಕರುಂಬೈಯ್ಯನವರು, 9. ಬಿ. ಪಿ. ಮಾಚೈಯ್ಯನವರು, 10. ಎನ್. ಶಂಕರಯ್ಯನವರು, 11. ಯಂ. ಎನ್. ಸೋಮಯ್ಯನವರು, 12. ಎನ್. ಬಿ. ಸೋಮಯ್ಯನವರು ಮತ್ತು 13. ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರವರೂ, ಸೀನಿಯರ್ ನಾನ್‌ಕ್ರೆಡಿಟ್ ಇನ್ಸ್‌ಪೆಕ್ಟರರೂ ಹಾಜರಿದ್ದರು.

ಮ. ಗಳಾದ ಕೆ. ಯಂ. ಕುಶಾಲಪ್ಪನವರು ಮತ್ತು ಹೆಚ್. ಯಂ. ಪುಪ್ಪಣ್ಣನವರು ಗೈರಾಜರು ಆಗಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸುಪರ್ ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಮಾರ್ಚಿ ತಿಂಗಳ ಜಮಾ ಮತ್ತು ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು.

ಹಿಂದಳ ಶಿಲ್ಕು	18,480	2	1
ಸದರಿ ತಿಂಗಳ ವಸೂಲಿ	32,768	6	0
ಜುಮ್ಲ	51,248	8	1
ಈ ತಿಂಗಳಲ್ಲಿ ಖರ್ಚು	23,862	6	6
ಬಾಕಿ ಶಿಲ್ಕು	27,386	1	1

4. ಈ ಕೆಳಗಿನ ಸೊಸೈಟಿಗಳಿಗೆ ಸಾಲ ಮಂಜೂರು ಮಾಡಲಾಯಿತು.

1. ಫ್ರೇಜರ್‌ಪೇಟೆ ಟೌನ್ ಸೊಸೈಟಿಗೆ ರೂ. 400, 2. ಪೊನ್ನಂಪೇಟೆ ಟೌನ್ ಸೊಸೈಟಿಗೆ ರೂ. 1000, 3. ನಂದಿಗುಂದ ಸೊಸೈಟಿಗೆ ರೂ. 500, 4. ಮೂರ್ನಾಡು ಬಾಡಗ ಸೊಸೈಟಿಗೆ ರೂ. 500, 5. ಕುಯ್ಯಂಗೇರಿ ಸೊಸೈಟಿಗೆ ರೂ. 150, 6. ಕೈಕಾಡು ಸೊಸೈಟಿಗೆ ರೂ. 300, 7. ಬೇಂಗುನಾಡು ಬಾಡಗ ಸೊಸೈಟಿಗೆ ರೂ. 300, 8. ದೇವನೂರು ಸೊಸೈಟಿಗೆ ರೂ. 1500, 9. ವೀರಾಜಪೇಟೆ ಕ್ರಾಫ್‌ಲೋನ್ ಅಂಡ್‌ಸೇಲ್ ಸೊಸೈಟಿಗೆ ರೂ. 1000, 10. ಮೂರ್ನಾಡು ಟೌನ್ ಸೊಸೈಟಿಗೆ ರೂ. 1000, 11. ಬೇಟೋಳಿ ಸೊಸೈಟಿಗೆ ರೂ. 600, 12. ಈಚೂರು ಸೊಸೈಟಿಗೆ ರೂ. 1000, 13. ಬಿ. ಶೆಟ್ಟಿಗೇರಿ ಸೊಸೈಟಿಗೆ ರೂ. 1500, 14. ಕೈಕೇರಿ ಹರಿಜನ ಸೊಸೈಟಿಗೆ ರೂ. 200, 15. ಕುತ್ತುನಾಡು ಸೊಸೈಟಿಗೆ ರೂ. 1500, 16. ಕುಂಬಳದಾಳು ಸೊಸೈಟಿಗೆ ರೂ. 300, 17. ಕಗ್ಗಾಲು ಐಕೊಳ ಸೊಸೈಟಿಗೆ ರೂ. 1000, ಮತ್ತು 18. ಆಜ್ಜಿ ಸೊಸೈಟಿಗೆ ರೂ. 1000.

5. ಕೂಡೂರು ಸೊಸೈಟಿ ವಸೂಲಾತಿಯು ತೃಪ್ತಿಕರವಲ್ಲದ್ದರಿಂದ ಅದರ ಸಾಲದ ಅರ್ಜಿಯನ್ನು ತಿರಸ್ಕರಿಸಲಾಯಿತು.

6. ಈ ಕೆಳಗಿನ ಸೊಸೈಟಿಗಳು ಬ್ಯಾಂಕಿಗೆ ವಾಯಿದೆ ಮೀರಿದ ಸಾಲ ಕೊಡಬೇಕಾಗಿರುವದರಿಂದ ಅವುಗಳ ಸಾಲದ ಅರ್ಜಿಗಳನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

(1) ಕೊಳತ್ತಡಬೈಗೋಡು ಸೊಸೈಟಿ, (2) ಕೈಕೇರಿ ಸೊಸೈಟಿ, (3) ಜೇನು ಮತ್ತು ಮೇಣದ ಸೊಸೈಟಿ ಮತ್ತು (4) ಮೂರ್ನಾಡು ವಿದ್ಯಾರ್ಥಿಯರ ಸೊಸೈಟಿ.

7. ಸರಕಾರದವರು ಸುಪರ್‌ವಿಜನ್ ಬೋರ್ಡಿಗೆ ಕೊಡುತ್ತಿರುವ ವಂತಿಗೆಯನ್ನು ಇನ್ನು ಮುಂದರಿಸಲಿಕ್ಕಾಗುವುದಿಲ್ಲವೆಂದು ಕಮಿಷನರವರಿಂದ ಬಂದ ಪತ್ರವನ್ನು ಓದಿ ರಿಕಾರ್ಡು ಮಾಡಲಾಯಿತು.

8. ಒಬ್ಬ ಮಹಸ್ಸೀಯಳು ತನ್ನ ಡಿಪಾಜಿಟ್ಟು ವಾಯಿದೆ ಗತಿಸುವ ಮೊದಲೇ ರೂಲ್ಸುಗಸುಸಾರವಾಗಿ ಬಡ್ಡಿ ಇಲ್ಲದೆ ವಾಪಸು ಕೊಡಬೇಕೆಂದು ಬರಕೊಂಡ ಅರ್ಜಿಯ ವಿಷಯ ಸ್ವಲ್ಪ ವಿಚಾರಿಸುವ ಬಗ್ಗೆ ಇನ್ನೊಂದು ಮೀಟಿಂಗಿಗೆ ಇಡಲಾಯಿತು.

9. ಬಾಳಾಜಿ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ಸಾಲಗಳಿಗೆ ಸುಲಭ ಕಂತಿನ ರಿಯಾಯಿತಿಯನ್ನು ಕೊಡಿಸಿಕೊಡಬೇಕೆಂದು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

10 ಮದರಾಸಿನಲ್ಲಿ ಚಾರಿಯಲ್ಲಿರುವ ಹಾಗೆ ಕೊಡಗಿನ ಸಹಕಾರಿ ಸಂಸ್ಥೆಗಳಿಗೆ ಆಡಿಟ್ ಫೀಜನ್ನು ಭಂಡವಾಳದ ಮೇರದಲ್ಲಿ ಹಾಕುವುದರ ಬದಲು ಆಡಿಟ್ ದಿನಗಳ ಲೆಕ್ಕದಲ್ಲಿ ಆಡಿಟ್ ಫೀಜು ವಿಧಿಸುವ ವಿಷಯ ಬ್ಯಾಂಕು ಡೈರೆಕ್ಟರುಗಳ ಅಭಿಪ್ರಾಯಕ್ಕೆ ಮದರಾಸು ಸರ್ಕಾರದ ಆರ್ಡರಿಗನುಸಾರವಾಗಿ ಚೀಫ್ ಕಮಿಷನರು ಕಳುಹಿಸಿದ ಪತ್ರವನ್ನು ಓದಲಾಯಿತು.

ಈ ಸಂಬಂಧ ಈ ಕೆಳಗಿನ ಮಹಸ್ಸೀಯರುಗಳಿಂದ ಕೂಡಿದ ಒಂದು ಸಬ್ ಕಮಿಟಿಯು ಆಲೋಚಿಸಿ ಅಭಿಪ್ರಾಯ ಕೊಡುವಂತೆ ಅವರಿಗೆ ಅಧಿಕಾರ ಕೊಡಲಾಯಿತು. ಮ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್), (2) ರಾ. ಬ. ಪಿ. ದೇವಯ್ಯನವರು (ಟ್ರೆಜರರ್) ಮತ್ತು (3) ಪಿ. ಜಿ. ಐಯ್ಯಪ್ಪನವರು.

11. ಬ್ಯಾಂಕಿನ ಎಟೆಂಡರಿಗೆ ಅವನ ಮದುವೆಯ ಉದ್ದೇಶ್ಯ ಪೂರ್ತಿ ಸಂಬಳದ ಒಂದು ತಿಂಗಳ ರಜೆ ಮಂಜೂರು ಮಾಡಲಾಯಿತು.

12. ಕೊಡಗಿನ ಸಹಕಾರಿ ಚಳವಳಿದ ವಿಷಯವಾಗಿಯೂ, ಮುಖ್ಯವಾಗಿ ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಕೆಲಸ ಕಾರ್ಯಗಳ ವಿಷಯವಾಗಿಯೂ ಬ್ಯಾಂಕಿನ ಡೆಪ್ಯುಟೇಶನಿನವರು ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದಾಗ ನಡೆದ ಚರ್ಚೆಯ ವಿಷಯ ತಪಶೀಲಾಗಿ ಚೀಫ್ ಕಮಿಷನರಿಗೆ ಬರೆದು ಕಳುಹಿಸಿದ ರಿಪೋರ್ಟನ್ನು ಓದಲಾಯಿತು. ಸದರಿ ರಿಪೋರ್ಟಿನಲ್ಲಿ ಸಮೂದಿಸಿದಂತೆ ಸುಪರ್‌ವಿಜನ್ ಫಂಡಿಗೆ ಸರಕಾರದವರು ಕೊಡುವ 1,000 ರೂಪಾಯಿ ವಂತಿಗೆ ಸಾಲದ್ದೆಂತಲೂ, ಮ. ಗಿರಿಯಪ್ಪನವರ ಸಲಹೆಗಳಂತೆ ಸುಪರ್‌ವಿಜನ್ ಬೋರ್ಡಿನ ಕೆಲಸ ಕಾರ್ಯಗಳನ್ನು ಸರಿಯಾಗಿ ನಡಿಸಲು ಸರಕಾರದವರು ಸದರಿ ಸುಪರ್‌ವಿಜನ್ ಫಂಡು ವಂತಿಗೆಯನ್ನು 4,000 ರೂಪಾಯಿಗೆ ಹೆಚ್ಚಿಸಿಕೊಡಬೇಕಾಗಿ ಸರಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

13. ತಾ. 21-1-39 ರ ಠರಾವು ನಂಬರು 5832ರ ಪ್ರಕಾರ ಹುದಿಕೇರಿ ಟೌನು ಸೊಸೈಟಿಯವರು ಬ್ಯಾಂಕಿಗೆ ಹಣ ಮರುಪಾವತಿ ಮಾಡಿರುವುದರಿಂದ ಸದರಿ ಸೊಸೈಟಿಯು ಬಾಕಿ ಕೊಡಲಿಕ್ಕಿರುವ ಮೊಬಲಗು 749-13-0 ಗಳಿಗೆ ತಾ. 31-3-40 ರಿಂದ 7 ಕಂತುಗಳನ್ನು ಮಂಜೂರುಮಾಡಲಾಯಿ.

14. ಅಮ್ಮತ್ತಿ ಜನಸು ಸ್ಟೋರನ್ನು ಮುಚ್ಚಬೇಕೆಂದು ಸದರಿ ಸಂಘದ ಜನರಲ್ ಬಾಡಿಯವರು ತೀರ್ಮಾನಿಸಿದ ಸಂಗತಿ ದಕ್ಷಿಣ ಕೊಡಗು ಸ್ಟೋರು ಸುಪರ್‌ವೈಜರು ಬರಕೊಂಡ ರಿಪೋರ್ಟನ್ನು ರಿಜಿಸ್ಟ್ರಾರವರಿಗೆ ತಕ್ಕ ಕ್ರಮ ಜರುಗಿಸಲು ಕಳುಹಿಸುವಂತೆ ತೀರ್ಮಾನವಾಯಿತು.

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಭಾವಿ ಕರ್ನಾಟಕ ಪ್ರಾಂತ್ಯದಲ್ಲಿ ದಕ್ಷಿಣ ಕನ್ನಡದ ಸ್ಥಾನ.

ಭಾವಿ ಕರ್ನಾಟಕ ಪ್ರಾಂತ್ಯದಲ್ಲಿ ದಕ್ಷಿಣ ಕನ್ನಡದ ಸ್ಥಿತಿಯು ಯಾವ ರೀತಿಯಲ್ಲಿರಬಹುದು ಎಂಬುದನ್ನು ಯೋಚಿಸಲು ಕಳೆದ ತಾ. 11 ರಂದು ಸಾಯಂಕಾಲ ಮಂಗಳೂರಿನ ಮೈದಾನಿನಲ್ಲಿ ಅಲ್ಲಿಯ ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರಾದ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು.

ಪ್ರಾರಂಭದಲ್ಲಿ ಶ್ರೀ. ಕೆ. ಕೆ. ಶೆಟ್ಟಿರು ಆಂಧ್ರರು ತಮಗೆ ಪ್ರತ್ಯೇಕವಾದುದೊಂದು ಪ್ರಾಂತ್ಯವಾಗಬೇಕೆಂಬು ,ಹೂಡಿರುವ ಚಳವಳವನ್ನು ವಿವರಿಸಿ, ಕರ್ನಾಟಕದಲ್ಲಿ ಯೋಗ್ಯರಾದ ಮುಖಂಡರ ಅಭಾವದಿಂದ ಕರ್ನಾಟಕ ಪ್ರಾಂತ್ಯರಚನೆಯ ಚಳವಳಕ್ಕೆ ತಕ್ಕಷ್ಟು ಪ್ರೋತ್ಸಾಹವು ದೊರಕಿಲ್ಲವೆಂದೂ ವಿವರಿಸಿದರು. ಶ್ರೀ. ಕೆ. ಕೃಷ್ಣರಾಯರು–ಈ ಪ್ರಾಂತ್ಯವು ಹಲವು ಭಾಷೆಗಳ ಸ್ಥಾನವಾಗಿರುವುದರಿಂದ ಮದ್ರಾಸು ಎಸೆಂಬ್ಲಿಯಲ್ಲಿ ಮೆಂಬರರಿಗೆ ಪ್ರಾಂತ್ಯರಚನೆಯ ವಿಷಯ ಉಂಟಾಗಿರುವ ಕಷ್ಟಗಳನ್ನು ವಿವರಿಸಿ ಕಾಂಗ್ರೆಸು ಈ ಪ್ರಶ್ನೆಯನ್ನು ಬಗೆಹರಿಸಲು ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿದರು.

ಶ್ರೀ. ನಾರಾಯಣ ಕಿಲ್ಲೆಯರು ಮಾತಾಡುತ್ತ–ಭೌಗೋಲಿಕ ದೃಷ್ಟಿಯಿಂದ ನೋಡುವುದಾದರೆ ಮದ್ರಾಸು ಸಂಸ್ಥಾನದ ಒಂದು ಮೂಲೆಯಲ್ಲಿ ನಮ್ಮ ಜಿಲ್ಲೆಯು ಇರುವುದು. ಭಾವಿ ಕರ್ನಾಟಕ ಪ್ರಾಂತ್ಯ ರಚನೆಯ ಸಮಯ ಕೂಡ ಇದರ ಸ್ಥಾನಮಾನವು ಬದಲಾಗದು. ಆದುದರಿಂದ ದಕ್ಷಿಣ ಕನ್ನಡಿಗರು ತಮಗೆ ಮುಂದೆ ದೊರಕುವ ಪ್ರಯೋಜನವು ಯಾವುದೆಂದು ಮೊದಲು ಯೋಚಿಸಬೇಕು. ನಾವೀಗ ಮದ್ರಾಸನ್ನೇ ಹೊಂದಿಕೊಂಡಿರುವದು ಲೇಸೋ ಯಾ ಮುಂಬಯಿ ಕರ್ನಾಟಕವನ್ನು ಸೇರುವುದು ಉತ್ತಮವೋ ಎಂಬುದನ್ನು ಯೋಚಿಸಬೇಕಾಗಿದೆ. ಇಲ್ಲಿಯ ಭಾಷೆಯನ್ನು ತೆಗೆದುಕೊಳ್ಳುವದಿದ್ದರೆ ಜನರ್ಸ್ಸು ಹಲವಾರು ಭಾಷೆ ಮಾತಾಡುವವರಾಗಿರುತ್ತಾರೆ. ಮುಂಬಯಿ ಕರ್ನಾಟಕದವರ ಮತ್ತು ನಮ್ಮ ನಡೆನುಡಿಗಳನ್ನು ಹೋಲಿಸಿದಲ್ಲಿ ತೀರ ಭಿನ್ನವಾಗಿ ಕಂಡುಬರದಿಂದು. ಈ ಭಿನ್ನತೆಯಿಂದ ನಾವು ಅವರೊಡನೆ ಸಹಕರಿಸಬಹುದೇ ಎಂಬುದು ವಿಚಾರಿಸತಕ್ಕ ಪ್ರಶ್ನೆಯಾಗಿರುತ್ತದೆ. ಇದಲ್ಲದೆ, ಧಾರವಾಡ, ಮತ್ತು ಬಿಜಾಪುರದ ಕಾಂಗ್ರೆಸು ಮುಖಂಡರು ಕೂಡ ಕಾಂಗ್ರೆಸಿಗೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮ ತಮ್ಮ ಜಿಲ್ಲೆಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ನಮ್ಮ ಜಿಲ್ಲೆಗೆ ಕೊಟ್ಟಿರುವುದಿಲ್ಲ. ಆದುದರಿಂದ ಒಂದು ಜಿಲ್ಲೆಯು ಹೊಸ ಪ್ರಾಂತ್ಯದೊಡನೆ ಸೇರುವುದಾದರೆ ಮೊದಲು ಆ ಜಿಲ್ಲೆಯವರ ಸ್ಥಿತಿಗತಿಗಳಿಗೆ ಹೊಸ ಸಂಬಂಧದಿಂದ ಯಾವ ತರಹದ ಹಾನಿಯೂ ತಟ್ಟದಂತೆ ನೋಡಿಕೊಳ್ಳಬೇಕು.

ನಂತರ ಶ್ರೀ ಗಳಾದ ಕೆ. ಆರ್. ಆಚಾರ್ಯರೂ, ರಂಗರಾವ್ ತಲಚೇರಿಕಾರರೂ, ಕರ್ನಾಟಕ ಏಕೀಕರಣದ ವಿಷಯವಾಗಿ ಮಾತನಾಡಿ ಶ್ರೀಯುತ ಕಿಲ್ಲೆಯವರು ಹೇಳಿದ ಬೆದರಿಕೆಗಳೆಲ್ಲವೂ ನಿರಾಧಾರವೆಂದು ಭಾಷಣವಿತ್ತರು. ಶ್ರೀ. ಸರ್ವೋತ್ತಮ ಶೆಟ್ಟಿಯವರ ವಂದನಾರ್ಪಣೆಯನಂತರ ಸಭೆಯು ಚದರಿತು.

'ಸ್ವ. ಅ.'

ಓದುಗರೇ, 'ಕೊಡಗು' ಪತ್ರಿಕೆಯ

ಚಂದಾ ಹಣವನ್ನು

ವಹಣೆ ಕಳುಹಿಸಿ ಕೊಡಿರಿ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

1 **Ludhiana.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಹಸಿವು ಉಂಟಾಗುವುದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕ.

ಮತ್ತು ಕಂಪನಿ,

(52–21) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರ [illegible] ಪತ್ರಿಕೆಯ [illegible] ದಾರಿಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳನ್ನಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರು ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಕಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಎಂ. ಸುಬ್ರಾಯನವರು.

ಅಮ್ಮತ್ತಿ–ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮಾಗಪ್ಪನವರು.

ಸಾಪೋಕ್ಲು—ಮೆ. ಬೆಳ್ಯಪಂಡ ಎಂ. [illegible]ನವರು.

(ಸಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52–7

ಧನ್ವಂತರಿ ಸಹಾಯ ಔಷಧಾಲಯ.

ವೀರರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಹಿಂದೆ ಯಿತು ವೈದ್ಯಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈಯಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ. ಬೆನ್ನಿನ [illegible], ಸೊಂಟ, ಬಂಡಿ, ಪಕ್ಕೆಗಳು–ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಬುಡ್ಡಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

40 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ತ್ರಿಫ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್. ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಮ ಎಸ್. ಎನ್ ರಾಮಶೆಟ್ಟಿಯವರು.

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ 35	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60	,, 20.	,, 13.	,, 8.
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಜನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಆಲೋಚನಾವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಆಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರ್ಯಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(82-16)

Printed & Published by P. I. Belliappa, at 'Kodagu' Press Mercara for 'Kodagu' Ltd.